

నాయక
వాఙ్మయ

ವಿನಾಯಕ. . .

ಒರ್ವ ವ್ಯಕ್ತಿಯ ಬಾಳನ್ನು ಬಾಳುವವರು ಬರೀ ಆ ವ್ಯಕ್ತಿಯಲ್ಲ; ಆ ವ್ಯಕ್ತಿಯೊಡನೆ ಅವನ ದೈವವೂ ಅದನ್ನು ಬಾಳುತ್ತದೆ. ವ್ಯಕ್ತಿಯ ಸಾಹಸವೂ ದೈವ ಸಂಕಲ್ಪವೂ ಒಂದಾಗಿ ಹೊಂದಿಕೊಂಡರೆ ಆ ಜೀವನಕ್ಕೆ ಒಂದು ಏಕಸೂತ್ರತೆ ಹಾಗೂ ಪೂರ್ಣತೆ ಸಾಧ್ಯವಾಗುತ್ತದೆ.

* * *

ಅಪೂರ್ವವಾದ ಒಂದು ಆಕರ್ಷಣೆ ಗೋಕಾಕರಿಗೆ ಇರುವುದನ್ನು ನಾ ಬಲ್ಲೆ, ಬಹುಶಃ ಅನೇಕ ಇತರರೂ ಬಲ್ಲರು. ಆಕರ್ಷಿತನ ಹೃದಯಕ್ಕೂ ಮನಸ್ಸಿಗೂ ಆತ್ಮಕ್ಕೂ ಹಿತ ಸೇಚಿಸುವ ಸವಿ ಆಕರ್ಷಣೆ ಅದು . . . ಸಮನ್ವಯವನ್ನು ಅಚ್ಚುಕಟ್ಟಾಗಿ ರೂಢಿಸಿಕೊಂಡಿರುವ ಸಿದ್ಧರಲ್ಲಿ ಗೋಕಾಕರು ಒಬ್ಬರು.

* * *


ಕರ್ತವ್ಯ ನಿಷ್ಠೆ ಮತ್ತು ಶ್ರದ್ಧೆ ಅವರನ್ನು ಮುಂದೆ ನಡೆಸಿದ ಶಕ್ತಿಗಳು . . . ಅತ್ಯುತ್ತಮವೆನಿಸಿದ್ದರ ಕಡೆಗೇ ಸದಾ ಅವರ ದೃಷ್ಟಿ, ಆದರೂ ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊಳ್ಳಲೂ ಹಿಂಜರಿಯುವುದಿಲ್ಲ. ಆಡಳಿತದಲ್ಲಿ ಇಂಥ ವಾಸ್ತವಿಕ ಪ್ರಜ್ಞೆ ತುಂಬಾ ಅಗತ್ಯವಿರುತ್ತದೆ.

* * *

ಗೋಕಾಕರು ಭಾಷಾವಿದರಾಗಿರುವುದರಿಂದ ಮಾತಿನ ನಾಣ್ಯದ ತುಕ್ಕನ್ನು ಸುಲಭವಾಗಿ ಉಜ್ಜುತ್ತಾರೆ; ಸ್ವಯಂ ಕವಿಯಾಗಿರುವುದರಿಂದ ಅಲ್ಲಿ ಕಾವ್ಯವನ್ನು ಮಿಂಚಿಸುತ್ತಾರೆ.

* * *

ನಿಶಿತಮತಿಯ ಸೂಕ್ಷ್ಮಗ್ರಹಣ ಶಕ್ತಿಯ ಪ್ರತಿಭಾಶ್ರೀಮಂತನಾದ ವ್ಯಕ್ತಿ ಎಲ್ಲಿಹೋದರೂ ತನ್ನತನವನ್ನು ಬಿಟ್ಟುಕೊಡದೆ ಮತ್ತೊಂದುತನದ ಆಳಕ್ಕೆ ಮುಳುಗುತ್ತಾನೆ; ಪರಕಾಯ ಪ್ರವೇಶ ಮಾಡಿದರೂ ಅವನು ತನ್ನತನವನ್ನು ಬಲಿಗೊಡುವುದಿಲ್ಲ. ಮತ್ತೊಂದುತನದ ಸಾರದಿಂದ ತನ್ನತನವನ್ನು ಬೆಳಿಸಿಕೊಳ್ಳುತ್ತಾನೆ. ಗೋಕಾಕರು ಇಂಥವರು.



ಡಾ. ವಿನಾಯಕ ಕೃಷ್ಣ ಗೋಕಾ

ವಿನಾಯಕ ವಾಙ್ಮಯ

ಸಂಪಾದಕರು

ಹಾ. ಮಾ. ನಾಯಕ

ಸಿಂಧುವಳ್ಳಿ ಅನಂತಮೂರ್ತಿ

ಸುರುಚಿ ಪ್ರಕಾಶನ

ಸರಸ್ವತೀಪುರಂ : : ಮೈಸೂರು-೫

Vināyaka Vāṅmaya : Essays on the life and works of Dr. V. K. Gokak, published on the occasion of his 60th birthday; Edited by Dr. H. M. Nayak and S. Ananthamurthy; Published by Suruchi Prakashana, Mysore-5. First Edition 1969; pp. 445, Price Rs. 30/-

ಪ್ರಕಾಶಕರು
ಎಚ್. ವಿಜಯಲಕ್ಷ್ಮಿ, ಬಿ.ಎ.

ಹೊದಿಕೆಯ ಚಿತ್ರ : ಬಿ. ಎಸ್. ಆಚಾರ್

ಬೆಲೆ : ಮೂವತ್ತು ರೂಪಾಯಿಗಳು

ಮುದ್ರಕರು
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಮೈಸೂರು

ವಿನಾಯಕ
ಕೃಷ್ಣ ಗೋಕಾಕ
ಅವರಿಗೆ
ಅರುವತ್ತರ ಕಾಣಿಕೆ

ನಿವೇದನೆ

'ವಿನಾಯಕ' ಎಂಬ ಸಂಕ್ಷಿಪ್ತನಾಮದಿಂದ ಖ್ಯಾತರಾಗಿರುವ ಡಾ. ವಿನಾಯಕ ಕೃಷ್ಣ ಗೋಕಾಕರು ನಮ್ಮ ಸಾಂಸ್ಕೃತಿಕ ಕ್ಷೇತ್ರವನ್ನು ರಾಷ್ಟ್ರೀಯ ಮಟ್ಟಕ್ಕೇರಿಸಿದ ಕೀರ್ತಿವಂತರಲ್ಲಿ ಒಬ್ಬರು; ಆಧುನಿಕ ಕನ್ನಡ ಸಾಹಿತ್ಯದ ಶಿಲ್ಪಿಗಳಲ್ಲಿ ಗಣ್ಯರು. ಸಾಹಿತ್ಯ, ಸಂಸ್ಕೃತಿ, ಶಿಕ್ಷಣರಂಗಗಳಲ್ಲಿ ಅವರ ಸಾಧನೆ ಸಿದ್ಧಿಗಳು ಅನ್ಯಾದೃಶವಾಗಿವೆ. ಅವರ ಸಾಹಿತ್ಯದ ವೈವಿಧ್ಯ ವಿಪುಲತೆಗಳಿಂದ ಕನ್ನಡದ ಶ್ರೀಮಂತಿಕೆ ಹೆಚ್ಚಿದೆ. ಅವರು ನವ್ಯಮಾರ್ಗ ಪ್ರವರ್ತಕರೆಂಬ ಖ್ಯಾತಿಗೆ ಭಾಜನರಾದರೂ ಯಾವುದೇ 'ಅತಿ'ಗೆ ಹೋಗದೆ ಸಮನ್ವಯ ಸಿದ್ಧಾಂತವನ್ನು ಪ್ರತಿಪಾದಿಸಿಕೊಂಡು ಬಂದಿದ್ದಾರೆ. ಪೂರ್ವ ಪಶ್ಚಿಮಗಳ ವಿಚಾರಧಾರೆಯ ಒಳಿತೆಲ್ಲವನ್ನೂ ತುಂಬಿಕೊಂಡ ಗೋಕಾಕರು ಪ್ರಾಚೀನ ಅರ್ವಾಚೀನಗಳ ಸಂಗಮವೂ ಹೌದು. ಅವರು ಸೃಷ್ಟಿಸಿದ್ದು ಕನ್ನಡ ಸಾಹಿತ್ಯವನ್ನು; ಬೋಧಿಸಿದ್ದು ಇಂಗ್ಲಿಷ್ ಸಾಹಿತ್ಯವನ್ನು. ಈ ಕಾಯಕಗಳು ಕೊಟ್ಟ ಫಲ ಒಂದೇ—ಕನ್ನಡದ ಅಭ್ಯುದಯ.

ಗೋಕಾಕರು ನಮಗೆ ಪ್ರಿಯರೂ ಹತ್ತಿರದವರೂ ಆಗಿದ್ದಾರೆ. ಅವರ ಸಾಧನೆಯಲ್ಲಿ ನಮಗೆ ಗೌರವವಿದೆ; ಅವರ ವ್ಯಕ್ತಿತ್ವದಲ್ಲಿ ಆದರವಿದೆ. ಅವರಿಗೆ ಅರುವತ್ತು ತುಂಬುವ ಸಂದರ್ಭದಲ್ಲಿ ಅವರ ಜೀವನ ವಾಙ್ಮಯಗಳನ್ನು ಕುರಿತ ಒಂದು ಪರಿಚಯ ಗ್ರಂಥವನ್ನು ಪ್ರಕಟಿಸಬೇಕೆಂದು ನಾವಿಬ್ಬರೂ ಕೆಲವು ತಿಂಗಳುಗಳ ಹಿಂದೆ ಯೋಜಿಸಿದೆವು. ಗೋಕಾಕರಲ್ಲಿ ನಮ್ಮಂತೆಯೇ ಸ್ನೇಹಾದರಗಳನ್ನುಳ್ಳ ಅನೇಕ ಹಿರಿಯರಲ್ಲೂ, ಮಿತ್ರರಲ್ಲೂ ವಿಷಯವನ್ನು ಪ್ರಸ್ತಾಪಿಸಿದೆವು. ಅವರೆಲ್ಲರಿಂದ ಉತ್ತೇಜನ ಬಂತು; ಸಹಕಾರವ ದೊರೆಯಿತು. ಫಲವಾಗಿ ಈ ಪುಸ್ತಕ—'ವಿನಾಯಕ ವಾಙ್ಮಯ'.

ಇದರಲ್ಲಿ ಎರಡು ಭಾಗಗಳಿವೆ: ಮೊದಲನೆಯ ಭಾಗದಲ್ಲಿ ವಿನಾಯಕರ ಜೀವನ ಹಾಗೂ ವ್ಯಕ್ತಿತ್ವಗಳ ಚಿತ್ರಣವಿದೆ. ಅವರ ಕುಟುಂಬದ ಸದಸ್ಯರೂ, ಅವರನ್ನು ಬಹುಕಾಲದಿಂದ ಬಲ್ಲ ಆತ್ಮೀಯ ಸ್ನೇಹಿತರೂ ಈ ಚಿತ್ರಗಳನ್ನು ನೀಡಿದ್ದಾರೆ. ವಿನಾಯಕರೇ ತಮ್ಮ ಜೀವನದ ರೂಪರೇಷೆಗಳನ್ನು ಅರುವತ್ತರ ಹೊಸ್ತಿಲಲ್ಲಿ ನಿಂತು ಅವಲೋಕಿಸಿದ್ದಾರೆ. ಎರಡನೆಯ ಭಾಗದಲ್ಲಿ, ವಿನಾಯಕ ವಾಙ್ಮಯವನ್ನು ವಿವಿಧ ದೃಷ್ಟಿಗಳಿಂದ ಪರಿಚಯಿಸಿಕೊಡುವ ಪ್ರಯತ್ನವಿದೆ. ಅವರ ಕೆಲವು ಮುಖ್ಯ ಕೃತಿಗಳನ್ನು ಕುರಿತು ಪ್ರತ್ಯೇಕವಾದ ಲೇಖನಗಳಲ್ಲದೆ, ಅವರಸಾಹಿತ್ಯದ ಹಲವು ಮುಖಗಳ ಬಗೆಗೂ ಇಲ್ಲಿ ಲೇಖನಗಳಿವೆ. ವಿನಾಯಕರ ಸಾಧನೆ ಸಿದ್ಧಿಗಳನ್ನು ಈ ಸಂಪುಟ ಸಮಗ್ರವಾಗಿ ಪರಿಚಯ ಮಾಡಿಕೊಡುವುದಾದರೆ ನಮ್ಮ ಉದ್ದೇಶ ಸಫಲವಾದಂತೆಯೇ ಸರಿ.

ಈ ಗ್ರಂಥ ಸಿದ್ಧವಾಗಲು ಅನೇಕ ಸ್ನೇಹಹಸ್ತಗಳು ನೆರವಾಗಿವೆ. ಅವರಿಗೆಲ್ಲ ಕೃತಜ್ಞತೆಯ ಮಾತು ಹೇಳುವುದು ಕೇವಲ ಸಂಪ್ರದಾಯವಾದೀತೆಂಬ ಭಯ ನಮ್ಮನ್ನು ಕಾಡುತ್ತಿದೆ. ಆದರೂ ಅವರೆಲ್ಲರ ಸಹಕಾರ ಮಾತ್ರದಿಂದಲೇ ಈ ಪುಸ್ತಕ ರೂಪು ಪಡೆದಿದೆ ಎಂಬುದನ್ನು ನಾವು ಸ್ಪಷ್ಟಪಡಿಸಬೇಕು. ಗ್ರಂಥಕ್ಕೆ ಲೇಖನಗಳನ್ನು ಒದಗಿಸಿಕೊಟ್ಟ ಲೇಖಕರು; ವಿನಾಯಕರ ರೇಖಾಚಿತ್ರವನ್ನು ಬರೆದುಕೊಟ್ಟ ಕಲಾವಿದ ಶ್ರೀ ಎಸ್. ಎನ್. ಸ್ವಾಮಿ; ಛಾಯಾಚಿತ್ರಗಳನ್ನು ಒದಗಿಸಿದ ಶ್ರೀ ಬಿ.ಎಸ್.ಆಚಾರ್; ಗ್ರಂಥದ ಪ್ರಕಟಣೆಗೆ ನಾನಾ ರೀತಿಯಲ್ಲಿ ಪ್ರೇರಣೆ ಪ್ರೋತ್ಸಾಹಗಳನ್ನು ಕೊಟ್ಟ ವಿನಾಯಕ ಸನ್ಮಾನ ಸಮಿತಿಯ ಅಧಿಕಾರ ವರ್ಗದವರು, ಮುಖ್ಯವಾಗಿ ಶ್ರೀ ಪಿ. ಮಲ್ಲಿಕಾರ್ಜುನಪ್ಪ ಮತ್ತು ಶ್ರೀ ನಿರಂಜನ; ಕಾಲದ ಜೊತೆಯಲ್ಲಿ ಸ್ಪರ್ಧೆಹೂಡಿ ಸಕಾಲಕ್ಕೆ ಪುಸ್ತಕದ ಮುದ್ರಣವನ್ನು ಮುಗಿಸಿಕೊಟ್ಟ ಶ್ರೀ ಜಿ. ಎಚ್. ರಾಮರಾವ್-ಕೃಷ್ಣಮೂರ್ತಿ; ಕರಡು ತಿದ್ದುವುದರಲ್ಲಿ ನೆರವಾದ ಶ್ರೀ ಎಚ್. ಜಿ. ಸೂರ್ಯನಾರಾಯಣರಾವ್—ಈ ಕೆಲವರನ್ನಾದರೂ ನಾವು ಹೆಸರಿಸದಿದ್ದರೆ ಕೃತಘ್ನರಾಗಬೇಕಾಗುತ್ತದೆ.

ನಾವು ಕೊಟ್ಟ ಅನೇಕ ತೊಂದರೆಗಳನ್ನು ನಗುಮೊಗದಿಂದಲೇ ಸಹಿಸಿಕೊಂಡ ಸನ್ಮಾನ್ಯ ಗೋಕಾಕರಿಗೆ ಚಿರಕೃತಜ್ಞರಾಗಿದ್ದೇವೆ. ಈ ಪುಸ್ತಕವನ್ನು ಒಪ್ಪಿಸಿಕೊಳ್ಳುವುದು ಅವರ ಹೃದಯವಂತಿಕೆಯ ಹಿರಿಮೆಗೆ ಸಾಕ್ಷಿಯಾಗಿದೆ.

ಮೈಸೂರು
ಆಗಸ್ಟ್ ೧, ೧೯೬೯

ಹಾ. ಮಾ. ನಾಯಕ
ಸಿಂಧುವಳ್ಳಿ ಅನಂತಮೂರ್ತಿ

ವಿಷಯಸೂಚಿಕೆ

ಅನುಬಂಧ

ಚಿತ್ರಗಳು

೧೦ ಚಿತ್ರಗಳು

೧೧. ವಾಗ್ಮಿ
ಭಾಷಣ ಮಾಡುತ್ತಿರುವ ಗೋಕಾಕರು

೧೨. ಅರುವತ್ತರ ಹೊಸ್ತಿಲಲ್ಲಿ
ಪತ್ನಿ ಶಾರದಾದೇವಿಯವರೊಂದಿಗೆ ಇತ್ತೀಚಿನ ಛಾಯಾಚಿತ್ರ

ವಿನಾಯಕ

ವಿನಾಯಕ: ನಾನು ಕಂಡಂತೆ

ಅಂಬಿಕಾತನಯದತ್ತ

ದತ್ತಗುರು ನೀಡಿವರು ಆ 'ವಿನಾಯಕ' ಭಿಕ್ಷೆ
'ಬಾರೊ ಬಾ' ಎಂದು ಹೃದಯದ ಗುಹೆಯು ಕರೆದಾಗ
ಸಹಜೀವನಕೆ ಮೈತ್ರಿಸೂತ್ರ ತೆರೆ ತೆರೆದಾಗ
ತನ್ನ ತಾ ಮೀರುವುದು ವಿಜ್ಞಾನದಾ ದೀಕ್ಷೆ.

ಐದು ಖಂಡಗಳಲ್ಲಿ ಅಲೆದಾಡಿಸಿದ ಕೀರ್ತಿ
ಈ ವ್ಯಕ್ತಿ, ಈ ಭಕ್ತಿ ಇದಕೆ ಇದುವೆ ಸಾಟಿ
ಸಾಹಸಕೆ ಹಿಂಜರಿವುದಲ್ಲ ವೇಗದ ಧಾಟಿ
ಕಂಡರಿಸುತಿದೆ ದೃಷ್ಟ ತನ್ನದೃಷ್ಟದ ಮೂರ್ತಿ.

ನವಖಂಡ ಭಾರತೀಯತ್ವದಾ ಉದಯ ಘನ
ಭಾಷೆ ಹತ್ತಾದರೂ ಐಕ್ಯಲಿಂಗದ ಭಾವ
ವಾದ್ಯಗಳ ಮೇಳದಲಿ ಏಕತಾನದ ಜೀವ
ಕವಿ ವಿಹಂಗಮ ಸಂಘ ಕಂಡಿದೆ ವಿನಾಯಕನ.

ನಾನು ಕಂಡಂತೆ: 'ಕಂಡಿಲ್ಲಾ' ಇನ್ನೂ ಪೂರಾ
ಇವನರಿವು ಇವನ ಗುರು; ಗುರಿಯೊ ಬಲು ದೂರಾ.

ವಿನಾಯಕರಿಗೆ ವಂದನೆ

ಚೆನ್ನವೀರ ಕಣವಿ

ತುಂಬಿದ ತಲೆಯ ಬೆಳ್ಳಿಗೂಪಲಿಗೆ ಬೆರಳಾಡಿ
 ಚಿಂತನೆಯ ಅಷ್ಟಪೈಲಿನ ಹರಳ ಹೊರಳಿಸುತ
 ಅಂತಃಕರಣದಂಗೈಯಲ್ಲಿ ತೂಗಿ, ಬದುಕ
ಬೆಲೆಗೈವ : 'ಅದೇನದಲ್ಲ' ಅದೆಲ್ಲವ ಕೂಡಿ.

ಕನ್ನಡಕ ದಾಟಿ, ನುಣ್ಣಗೆ ಎದೆಯ ಮೀಟಿ, ಹದ
 ಬರುವವರೆಗು ಮಿದಿಯುವ ದೃಷ್ಟಿ, ಸೂಟು ಬೂಟನು
 ಕಳಚಿ, ಲಂಡಂಗಿ ಧೋತರದಿ ಮುಗುಳ್ನಗೆ ಹದನು —
'ಹಲೋ ಬರ್ರಿ' : ತೆರೆಯುವದು ನಡುಮನೆಯ ಕಿಡಕಿ, ಕದ.

ಎಂಟು ದಿಕ್ಕಿನ ಗಾಳಿಗಲ್ಲಿ ಕಡಲಿನ ಹಾಡು,
 ಮೂಡ-ಪಡುವಣ ನೆಳಲು-ಬೆಳಕಿನಲಿ ತೇಲುವರ-
 ಸಂಜೆ, ಬಾಳದೇಗುಲದಿ ಸಮನ್ವಯ-ತೇರ
ಸಿಂಗಾರ. ಅರುವತ್ತರಲು ಭಾರಿ ಕಸರತ್ತು.

 ಎತ್ತರದಲ್ಲು ಬಾಗಿ ಹತ್ತಿರ ಬರುವ ಮಹತಿ :
 ಸಂಕ್ರಾಂತಿ : ಕೈಕುಲುಕಿದಂತೆ ದ್ಯಾವಾಪೃಥಿವಿ.

ವನಮಾಲಿಯ ಒಲವಿನೋಲೆಗಳ ಲೇಖಕನನ್ನು ಕುರಿತು*

ಶಾರದಾದೇವಿ

ನಿನ್ನ ನುಡಿಗಳೇ-
ಕಿವಿಗೋಲೆಗಳು
ನಿತ್ಯಾಲಂಕಾರಗಳು
ನಿನ್ನಾ ನುಡಿಗಡಣದಿಂದ
ನನ್ನಿಂದಿನ ನಡೆನುಡಿಯಲಿ
ಮಾತಾಯಿಯ ಮಹಾಮನೆಯ
ಅರಸುಗುರಿಯೇ ಮೂಡಿದೆ.
ನಿನ್ನ ಬಾಳಿನಶ್ವತ್ಥವ
ಪ್ರದಕ್ಷಿಣಿಸುತಲೆಯೆಲೆಯಲಿ
ಕಂಡೆ ನಿನ್ನ ಜೀವಜ್ಯೋತಿ.
ನಿನ್ನ ಕರತಲದಿ ಮೂಡಿ-
ದಂಥ ದೈವ ರಕ್ಷೆಯಲ್ಲಿ
ಕಂಡ ಬಿದಿಗೆ ಚಂದ್ರಮ.
ನಿನ್ನ ಕೊರಳನಲಂಕರಿಸಿ-
ದಂಥ ಮಲ್ಲಿಗೆಯ ಹಾರ
ಆಯಿತು ಸರ್ಪಭೂಷಣ.
ನಿನ್ನೀ ಕವಿಹೃದಯದಲ್ಲಿ
ಪ್ರವಹಿಸಿದ್ದ ಸ್ವರ್ಗಂಗೆಯ
ಪುಣ್ಯೋದಕದಲ್ಲಿ ಮಿಂದೆ.
ಈ ಸತಿಗೆ ನೀ ಮಹೇಶ
ಹುಟ್ಟಿದ ದಿನವಿಂದು
ನಿನಗೆ ನಮೋ ಎಂದೆ.

* 'ವನಮಾಲಿಯ ಒಲವಿನೋಲೆಗಳು' ಎಂಬ ಪ್ರಸಿದ್ಧವಾದ ಕೃತಿಯಲ್ಲಿಯ ಓಲೆಗಳನ್ನು ನಾಯಕರು ತಾವು ಮದುವೆಯಾಗಲಿದ್ದ ಶಾರದಾದೇವಿಯವರಿಗೆ ಬರೆದಿದ್ದರು.

ಅರ್ಪಣ

ವಿನಾಯಕ

ಬದುಕಿಸಿದೆ ನೀನೆನ್ನ. ಯಾವ ಬದುಕೇನೆನಗೆ ?
ನಿನ್ನಾಣತಿಯೆ ನನ್ನ ಜೀವಿತದ ಗುರಿಯು.
ನೀನಿತ್ತ ಕೀರ್ತಿಯನು ಹೇಗೆ ಬಳಸುವುದೆಂಬ
ಅರಿವನೀವುದು. ಅದುವೆ ಜೀವಿತದ ಝರಿಯು.

ಮರಣಶಯ್ಯೆಯಲಿರಲು ಪ್ರಾಣದಾನವನಿತ್ತೆ.
ಉಳಿಸಿರುವ ಹರಣವನು ಬಳಸಿ ನೋಡು :
ನಿನ್ನಾರತಿಗೆ ದೀಪ, ನಿನ್ನ ಕೊರಳಿಗೆ ಹೂವು,
ನಿನ್ನ ಕಿವಿಗಿಂಪುಸೊಂಪಾದ ಹಾಡು.

ನನ್ನ ನಾಡಿನ ಸೇವೆಗೆನ್ನನುಳಿಸೆಂದೊರೆಯೆ
"ಹೋಗು. ಕನ್ನಡನಾಡ ಸೇವಿಸೆಂ"ದೆ.
"ನನ್ನನೇ ನಂಬಿರುವ ನನ್ನಿಗರ ಕಾಂಬೆನೆನೆ"
"ಹೋಗು. ಬಾಳವರೊಡನೆ. ಭಾವಿಸೆಂ"ದೆ !

ಚೆಲುವ ಕನ್ನಡನಾಡಿಗೊಂದು ಮಲ್ಲಿಗೆ ಹೂವ
ತರಲೆಂದು ತೆರಳಿದ್ದ ತರಳ ನಾನು.
ನಿನ್ನ ವರದಾನಕ್ಕೆ ಸರಿಯಾವುದೈ ದೊರೆಯೆ ?
ಜೀವಸುಮವನೆ ನಿನಗೆ ಸಲ್ಲಿಸುವೆನು.

ತಿಳಿಯೆ ನಿನ್ನಯ ರೂಹ, ಅಳೆಯೆ ನಿನ್ನಯ ಠಾವ ;
ಅರಿಯೆ ನಿನ್ನಯ ಮಾಯೆಯನು ದೇವದೇವ.
ಕೋಟಿ ನಕ್ಷತ್ರಗಳ ಕೋಟಿ ಯೋಜನದಾಚೆ
ನೆಲೆಸಿರುವೆ. ನಿಲುಕದಲ್ಲಿಗೆ ನನ್ನ ಭಾವ.

ನೀ ಕಾಣದಿರಲೇನು ? ಮನಗಂಡಿಹೆನು ನಿನ್ನ.
ದನಿಯಾಲಿಸದೆ ನಿನ್ನ ಮನವ ತಿಳಿದೆ.
ನಿಗಮಗೋಚರ ! ನಿನ್ನ ದಾಸಾನುದಾಸನಿಹೆ.
ನಿನ್ನ ಪದಪದ್ಮದಲಿ ಹುಟ್ಟಿ ಬೆಳೆದೆ.

ಜೀವನ

ವಿ. ಕೃ. ಗೋಕಾಕ್

ನ್ನ ತಾಯಿಯ ತಂದೆ, ಮೆಟ್ರಿಕ್ ಆಗದೆ ಇದ್ದ ಒಬ್ಬ ಶಾಲಾಮಾಸ್ತರರು. ಆದರೆ ಜ್ಜನರು, ಭಗವಂತನಲ್ಲಿ ಶ್ರದ್ಧೆಯಿದ್ದವರು. ಸವಣೂರಿನ ಸತ್ಯಬೋಧ ಮಠದಲ್ಲಿಯ ಾರ್ಷಿಕ ಸಮಾರಾಧನೆಗಳಲ್ಲಿ ಸದ್ದಿಲ್ಲದೆ ತುಪ್ಪ ಬಡಿಸುತ್ತಿರುವ ಕೆಲಸವನ್ನು ವಹಿಸುತ್ತಿ ರು. ಆ ಚಿತ್ರ ಇನ್ನೂ ನನ್ನ ಕಣ್ಣೆದುರಿಗಿದೆ. ನನ್ನ ತಂದೆ ಮೆಟ್ರಿಕ್ ಪಾಸ್ ಆಗದೆ ದ್ದರೂ ಸವಣೂರು ಸಂಸ್ಥಾನದಲ್ಲಿ ದೊರೆಯ ಅನುಮತಿ ಪಡೆದು ವಕೀಲಿ ವೃತ್ತಿಯನ್ನು ವಲಂಬಿಸಿದ್ದರು. ಜ್ಯೋತಿಷಿಗಳಾಗಿ ಹತ್ತು ಹನ್ನೆರಡು ವರ್ಷ ದೇಶಾಟನೆಯಲ್ಲಿ ಕಳೆದು ೂನೆಗೆ ವಕೀಲರಾಗಿ ಸವಣೂರಿನಲ್ಲಿ ತಮ್ಮ ಮಾವಂದಿರ ಜೊತೆಗೆ ಕಾಲೂರಿ ನಿಂತರು. ವರು ಸದ್ಭಕ್ತರು. ತಮ್ಮ ಗುರುಗಳಾದ ಬಾಳಿಕುಂದ್ರಿಯ ಪಂತ ಮಹಾರಾಜರಲ್ಲಿ ಚಲ ಶ್ರದ್ಧೆಯಿದ್ದವರು. ಈ ಬಡ ಮನೆತನದಲ್ಲಿ ನಾನು ಬೆಳೆದು ಬಂದೆ. ಆದರೆ ಾತಂದಿರ ಸಜ್ಜನಿಕೆಯೂ, ತಂದೆಯ ಶ್ರದ್ಧೆಯೂ ನನಗೆ ಸ್ಫೂರ್ತಿದಾಯಕ ಾದವು.

ಮೆಟ್ರಿಕ್ ಆದಮೇಲೆ ಮುಂದಿನ ಶಿಕ್ಷಣಕ್ಕೆಂದು ನಾನು ಧಾರವಾಡದಲ್ಲಿಯ ರ್ನಾಟಕ ಕಾಲೇಜಿಗೆ ಹೋದೆ. ನನ್ನ ದೈವ ಧಾರವಾಡದಲ್ಲಿ ನನಗೆ ಅನೇಕ ಗೆಳೆಯರನ್ನು ದಗಿಸಿಕೊಟ್ಟಿತು. ಬೇಂದ್ರೆಯವರ ಸ್ನೇಹ-ಮಾರ್ಗದರ್ಶನವನ್ನೂ ಕರುಣಿಸಿತು. ಾಲೇಜಿನ ವಾತಾವರಣದಲ್ಲಿ ಹಲವಾರು ಮಿತ್ರರ ಮತ್ತು ಪ್ರಾಧ್ಯಾಪಕರ ಸಂಪರ್ಕ ಂದು, ನನ್ನ ವಿದ್ಯಾರ್ಥಿ ಜೀವನದಲ್ಲಿ ಯಶಸ್ಸನ್ನು ಗಳಿಸಬೇಕೆಂಬ ಬಯಕೆ ಮೊಳೆಯಿತು. ದು ಯಶಸ್ವಿಯಾಗಿಯೂ ಪರಿಣಮಿಸಿತು.

ಅಂದಿನ ಅವಿಭಕ್ತ ಮುಂಬಯಿ ವಿಶ್ವವಿದ್ಯಾನಿಲಯದಲ್ಲಿ ಪ್ರಥಮ ಶ್ರೇಣಿಯಲ್ಲಿ ಾಗೂ ಆಂಗ್ಲ ಸಾಹಿತ್ಯದಲ್ಲಿ ಪ್ರಥಮನಾಗಿ ನಾನು ತೇರ್ಗಡೆಹೊಂದಿದೆ. ಕಾಲೇಜಿನ ಲೋಶಿಪ್ ದೊರೆತದ್ದರಿಂದ ಎಂ.ಎ.ಗೆ ಓದುವುದು ಸಾಧ್ಯವಾಯಿತು. ಜೂನಿಯರ್ ಂ. ಎ. ದಲ್ಲಿದ್ದಾಗ ಅನಾರೋಗ್ಯದಿಂದ ಬಳಲುತ್ತಿರುವ ತಾಯಿಯ ಆಗ್ರಹ ಂದ—ಆದರೆ ನನ್ನ ಜೀವನಕ್ಕೆ ಬೆಂಗಾವಲಾಗಿ ನಿಂತಿರುವ ದೈವಸಂಕಲ್ಪದ ಕಾರ—ಮದುವೆಯಾಯಿತು. ತಾಯಿಯ ಅನಾರೋಗ್ಯ ಹಾಗೂ ಮದುವೆಯ

ಗೊಂದಲಪಲ್ಲಿ ಸಿಕ್ಕಿಬಿದ್ದಿದ್ದರೂ—ಪರೀಕ್ಷೆ ಕಟ್ಟಬಾರದೆಂದು ನಿರ್ಣಯಿಸಿದ್ದರೂ—ದೈವವಶಾತ್, ಎಂ. ಎ. ಪರೀಕ್ಷೆಗೆ ನಾನು ಕುಳಿತೆ. ಅಲ್ಲದೆ ಪ್ರಥಮ ಶ್ರೇಣಿಯಲ್ಲಿ ಪ್ರಥಮನಾಗಿ ತೇರ್ಗಡೆಹೊಂದಿದೆ.

ಇನ್ನು ಆಂಗ್ಲ ಸಾಹಿತ್ಯದ ಪ್ರಾಧ್ಯಾಪಕನಾಗಿ ಕೆಲಸ ಹುಡುಕಬೇಕು. ನನ್ನ ಪ್ರಾಧ್ಯಾಪಕರಾದ ತಾಕಾಖಾವ್‌ರವರು ನನ್ನ ಪರೀಕ್ಷೆಯ ಪರಿಣಾಮ ತಿಳಿಯುವುದಕ್ಕಿಂತ ಮೊದಲೆ ಪೂಣೆಯ ಫರ್‌ಗ್ಯುಸನ್ ಕಾಲೇಜಿನ ಒಬ್ಬಿಬ್ಬ ಆಜೀವ ಸದಸ್ಯರೊಡನೆ ಮಾತನ್ನಾಡಿದ್ದರು. ನನ್ನ ಪ್ರಥಮ ಶ್ರೇಣಿಯ ಯಶಸ್ಸನ್ನು ವೃತ್ತಪತ್ರಿಕೆಯಿಂದ ತಿಳಿದ ಆ ಕಾಲೇಜಿನ ಪ್ರಿನ್‌ಸಿಪಲ್ ಮಹಾಜನಿಯವರು ತಮ್ಮ ಕಾಲೇಜಿನಲ್ಲಿ ನನ್ನನ್ನು ಉಪ ಪ್ರಾಧ್ಯಾಪಕನನ್ನಾಗಿ ನೇಮಿಸಿರುವದಾಗಿ ಒಂದು ತಂತಿ ಕಳುಹಿಸಿದ್ದರು ಕಾರಣಾಂತರದಿಂದ ಪೂಣೆಗೆ ಹೋದ ನಾನು ಫರ್‌ಗ್ಯೂಸನ್ ಕಾಲೇಜನ್ನು ನೋಡುತ್ತ ಅಲ್ಲಿಯ ವಾಚನಾಲಯದಲ್ಲಿ ನಿಂತಿದ್ದೆ. ಅಕಸ್ಮಾತ್ ಅಲ್ಲಿದ್ದ ಪ್ರಿನ್ಸಿಪಲ್ ಮಹಾಜನಿಯ ಸಮ್ಮುಖದಲ್ಲಿಯೇ ಆ ತಂತಿಯನ್ನು ನನ್ನ ಸ್ನೇಹಿತನು ತಂದುಕೊಟ್ಟನು.

ಅಲ್ಲಿಯೇ ಆ ತಂತಿಯನ್ನು ಪ್ರಿನ್‌ಸಿಪಲ್ ಮಹಾಜನಿಯವರಿಗೆ ತೋರಿಸುವುದು ಸಾಧ್ಯವಾಯಿತು. ಸರಿ ಉಪಪ್ರಾಧ್ಯಾಪಕನೆಂದು ೧೨೫ ರೂಪಾಯಿ ಸಂಬಳದ ಮೇಲೆ ನನ್ನ ಜೀವನ ಪೂಣೆಯಲ್ಲಿ ಪ್ರಾರಂಭವಾಯಿತು. ನಾನು ನನ್ನ ಕೆಲಸದಲ್ಲಿ ಯಶಸ್ಸನ್ನು ಸಂಪಾದಿಸಿದೆ. ನಾನು ಆಜೀವ ಸದಸ್ಯನಾಗಿ ಆ ಕಾಲೇಜಿನ ಚಾಲಕ ಸಂಸ್ಥೆಯಾದ ಡೆಕ್ಕನ್ ಎಜ್ಯುಕೇಷನ್ ಸೊಸೈಟಿಯನ್ನು ಪ್ರವೇಶಿಸಬೇಕೆಂದು ಅಲ್ಲಿಯ ಅಧಿಕಾರಿಗಳು ಮೇಲಿಂದ ಮೇಲೆ ಸೂಚಿಸುತ್ತಿದ್ದರು. ಆ ಸಂಸ್ಥೆಯು ಲೋಕಮಾನ್ಯ ಟಿಳಕ್ ಮೊದಲಾದ ನಾಯಕರಿಂದ ಸ್ಥಾಪಿತವಾಗಿತ್ತು. ಅದಕ್ಕೆ ಸ್ವಾರ್ಥತ್ಯಾಗ ಮತ್ತು ದೇಶಸೇವೆಯ ಉಜ್ವಲ ಪರಂಪರೆಯಿತ್ತು. ಪ್ರಿನ್ಸಿಪಲ್ ಮಹಾಜನಿ ಮೊದಲಾದ ಹಲವಾರು ಆಜೀವ ಸದಸ್ಯರ ಬಗ್ಗೆ ನನಗೆ ಗೌರವವಿತ್ತು. ಒಂದೆರಡು ವರ್ಷ ತಡೆದಿದ್ದರೆ, ಹೆಚ್ಚಿನ ಸಂಬಳ ದೊರೆಯುವ ಸರಕಾರಿ ಕೆಲಸವನ್ನು ಭಾರತದಲ್ಲಿ ಎಲ್ಲಿಯಾದರೂ ನಾನು ದೊರಕಿಸಬಹುದಾಗಿತ್ತು. ಆದರೆ ತಂದೆಯವರು ಕೆಲಸವನ್ನು ಬಿಟ್ಟದ್ದರು. ಸವಣೂರಿನ ಸಂಸ್ಥಾನಿಕರೊಡನೆ ಮನಸ್ತಾಪವಾಗಿ ತನ್ನ ವಕೀಲಿವೃತ್ತಿಯನ್ನು ತೊರೆದು ನನ್ನ ತಾಯಿ ತಂಗಿಯರೊಡನೆ ಅವರು ಪೂಣೆಗೆ ಬಂದಿದ್ದರು. ನನ್ನ ತಂದೆ ತಾಯಿಯವರ ಹಾಗೂ ಒಬ್ಬ ತಂಗಿಯ ಯೋಗಕ್ಷೇಮವನ್ನು ನಾನು ನೋಡಿಕೊಳ್ಳಬೇಕಾಗಿತ್ತು. ಹೀಗಾಗಿ ಬೇಗನೆ ಎಲ್ಲಿಯಾದರೂ ನಾನು ಕಾಲೂರಿ ನಿಲ್ಲಬೇಕು. ಸಾಹಸದ ಜೀವನ ಸಾಧ್ಯವಿರಲಿಲ್ಲ. ಸೊಸೈಟಿಯ ಆಜೀವ ಸದಸ್ಯನಾಗಲು ನಾನು ಒಪ್ಪಿದೆ. ತಿಂಗಳಿಗೆ ೧೪೦ ರೂಪಾಯಿ ಸಂಬಳದ ಮೇಲೆ ಹನ್ನೆರಡು ವರ್ಷಗಳವರೆಗೆ ಆ ಸಂಸ್ಥೆಯ ಸೇವೆಯಲ್ಲಿ ನಾನಿದ್ದೆ.

ನಾನು ಇಂಗ್ಲೆಂಡಿಗೆ ಹೋಗಿ ಆಕ್ಸ್‌ಫರ್ಡ್ ಇಲ್ಲವೆ ಕೆಂಬ್ರಿಡ್ಜ್ ವಿಶ್ವವಿದ್ಯಾ

ಲಯದಲ್ಲಿ ಅಭ್ಯಸಿಸಿ ಅಲ್ಲಿಯ ಪದವಿಯನ್ನು ಪಡೆದು ಬರಬೇಕೆಂದು ಆ ಸಂಸ್ಥೆಯ ಧಿಕಾರಿಗಳ ಇಚ್ಛೆಯಾಗಿತ್ತು. ನಾನು ಈಗ ಎರಡು ಮಕ್ಕಳ ತಂದೆಯಾಗಿದ್ದೆ. ಹೂಡಿದ ಸಾರವನ್ನು ಸುರುಳಿ ಸುತ್ತಿ, ದೇಶಾಂತರ ಹೋಗುವ ಮನಸ್ಸಿರಲಿಲ್ಲ. ಅಲ್ಲದೆ ಈ ಶಿಕ್ಷಣ ಗಿ ಸೊಸೈಟಿಯವರು ಆರುಸಾವಿರ ರೂಪಾಯಿ ಮಾತ್ರ ಕೊಡಲು ಒಪ್ಪಿದ್ದರು. ನ್ನು ನಾಲ್ಕು ಸಾವಿರವನ್ನು ನಾನು ಸಾಲ ತೆಗೆದುಹೋಗಬೇಕೆಂದು ಅವರ ಸೂಚನೆ ಾಗಿತ್ತು. ಇದು ನನಗೆ ಅಸಾಧ್ಯವೆನಿಸಿತು. ಅನಪೇಕ್ಷಣೀಯವೂ ಆಗಿತ್ತು. ಕೊನೆಗೆ ೊಸೈಟಿಯವರು ತಾವೇ ಬಡ್ಡಿಯಿಲ್ಲದೆ ನಾಲ್ಕು ಸಾವಿರ ರೂಪಾಯಿ ಕೊಡಲು ್ಪಿದರು. ತಿರುಗಿ ಬಂದವೇಳೆ ಅದನ್ನು ಕಂತದ ಪ್ರಕಾರ ಮುಟ್ಟಿಸಬೇಕೆಂದು ತೀರ್ಮಾನ ಗಿತ್ತು. ಇಂಗ್ಲೆಂಡಿನಲ್ಲಿ ನಾನು ಪ್ರಥಮ ಶ್ರೇಣಿಯಲ್ಲಿ ಪಾಸ್ ಆಗಿದ್ದೇ ಆದರೆ ಆ ಲ್ಕು ಸಾವಿರವನ್ನೂ ನಾನು ತಿರುಗಿ ಮುಟ್ಟಿಸುವ ಕಾರಣವಿಲ್ಲೆಂದು ಒರ್ವ ಅಧಿಕಾರಿ ಿತರು ಅನೌಪಚಾರಿಕವಾಗಿ ಸೂಚಿಸಿದರು. ಆಯಿತು. ನನ್ನ ದೈವಪರೀಕ್ಷೆಗೆಂದು ಸು ಹೊರಡಲು ಸಿದ್ಧನಾದೆ. ನನ್ನ ಸಂಬಳದ ಅರ್ಧದಷ್ಟು (ತಿಂಗಳಿಗೆ ೭೦ ರೂಪಾಯಿ) ಟುಂಬ ವೇತನವೆಂದು ಸೊಸೈಟಿಯ ನಿಯಮಗಳ ಪ್ರಕಾರ ನನಗೆ ದೊರೆಯುವುದಿತ್ತು. ಾರು ಸಾವಿರ ರೂಪಾಯಿಗಳ ಇನ್‌ಶೂರೆನ್ಸ್ ಪಾಲಿಸಿ ಇತ್ತು. ಅದರ ಪ್ರಿಮಿಯಮ್ ುತಲು ತಿಂಗಳಿಗೆ ೩೫ ರೂಪಾಯಿಯಂತೆ ಸೊಸೈಟಿ ಮುರಿದುಕೊಳ್ಳಬಹುದೆಂದು ನು ತಿಳಿಸಿದೆ. ಸಂಸ್ಥಾನಿಕರೊಡನೆ ಆದ ತಪ್ಪು ತಿಳುವಳಿಕೆ ಇಲ್ಲದಾಗಿ ನನ್ನ ತಂದೆ ವರು ಸವಣೂರಿನಲ್ಲಿ ಮತ್ತೆ ತಮ್ಮ ವಕೀಲಿವೃತ್ತಿಯನ್ನು ಪ್ರಾರಂಭಿಸುವವರಿದ್ದರು. ಳಿದ ೩೫ ರೂಪಾಯಿ ಪ್ರತಿ ತಿಂಗಳು ನನ್ನ ತಂದೆಯವರಿಗೆ ಕಳಿಸುವ ವ್ಯವಸ್ಥೆಮಾಡಿದೆ. ್ನ ಪತ್ನಿ ಹಾಗೂ ಇಬ್ಬರು ಮಕ್ಕಳು ಧಾರವಾಡದಲ್ಲಿ ತಮ್ಮ ತವರುಮನೆಯಲ್ಲಿ ದೆ ಇರುವುದಾಯಿತು. ಸರಿ. ಮುಂಬಯಿಯಲ್ಲಿ ಒಂದು ಪಿ. ಅಂಡ್. ಓ. ಹಡಗ ನ್ನು ಹಿಡಿದು ಇಂಗ್ಲೆಂಡಿಗೆ ಪ್ರಯಾಣ ಬೆಳಸಿದೆ. ಅಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾ ಲಯದಲ್ಲಿ ನನಗೆ ಪ್ರವೇಶ ದೊರೆಯಿತು.

ಆದರೆ ಅದನ್ನು ಏಕಾಂತವು ಮೊದಲು ಮೊದಲಿಗೆ ನನಗೆ ಅಸಹನೀಯವಾಯಿತು. ೇಗೆ ಸಂಸಾರವನ್ನೆಲ್ಲಾ ದಿಕ್ಕುಪಾಲಾಗಿ ಮಾಡಿ ಇಂಗ್ಲೆಂಡಿಗೆ ಬಂದುದು ಎಂತಹ ೂರ್ಖತನವೆಂದು ನನ್ನನ್ನೇ ನಾನು ದಿನ ದಿನವೂ ಶಪಿಸಿಕೊಂಡೆ. ಆದರೆ, ನಾನು ಾಡಿದ್ದ ಸಂಕಲ್ಪ ನನ್ನ ಎದುರಿಗೆ "ಥುತ್" ಎಂದು ಬಂದು ನಿಲ್ಲುತ್ತಿತ್ತು; ಇಷ್ಟರಲ್ಲಿಯೇ ್ಯರಚನೆಗಾಗಿ ಆಕ್ಸ್‌ಫರ್ಡ್ ವಿದ್ಯಾರ್ಥಿಗಳಿಗೆಂದು ಇಟ್ಟ ನ್ಯೂಡಿಗೇಟ್ ಪಾರಿ ೋಷಕ ನನ್ನ ಮನಸ್ಸನ್ನು ಸೆಳೆಯಿತು. ಅದರ ಪರಿಣಾಮ ಗೊತ್ತಾಗಲು ಎಂಟು ಗಳ ಅವಧಿ ಮಾತ್ರವಿತ್ತು. ಎಂಟು ತಿಂಗಳನ್ನು ಹೇಗಾದರೂ ಕಳೆಯಬಹುದು. ಪಾರಿತೋಷಕವನ್ನು ಪಡೆದು ಸ್ವದೇಶಕ್ಕೆ ಮರಳಬೇಕೆಂದು ನಿರ್ಧರಿಸಿದೆ. ರಚಿಸ

ಬೇಕಾದ ಕಾವ್ಯದ ವಿಷಯ 'The Man in the Moon' ('ಚಂದ್ರಲೋಕದಲ್ಲಿ
ಮಾನವ') ಆ ವಿಷಯವನ್ನು ಕುರಿತು ಕವಿತೆಯನ್ನು ಬರೆಯಲು ಪ್ರಾರಂಭಿಸಿದೆ. ಬರೆದ
ಅದನ್ನು ವೇಳೆಗೆ ಸರಿಯಾಗಿ ಸಲ್ಲಿಸಿದ್ದೂ ಆಯಿತು. ಮುಂದೊಂದು ದಿನ, ಕಾಲೇಜಿನಿಂ
ನಾನಿದ್ದ ಕೋಣೆಗೆ ನಾನು ಮರಳುತ್ತಿದ್ದಾಗ ವೃತ್ತಪತ್ರಿಕೆಯನ್ನು ಮಾರುವವ
ನ್ಯೂಡಿಗೆಟ್ ಪಾರಿತೋಷಕದ ಪರಿಣಾಮದ ವಿಷಯವನ್ನು ಕುರಿತು, ಒಂದು ಕಾಗದ
ಫಲಕವನ್ನು ಕೈಯಲ್ಲಿ ಹಿಡಿದಿದ್ದ. ಪತ್ರಿಕೆಯ ಒಂದು ಪ್ರತಿಯನ್ನು ಕೊಂಡು ನಾನ
ನೋಡಿದೆ. ಆ ಪಾರಿತೋಷಕ ಇನ್ನೊಬ್ಬರಿಗೆ, ಒರ್ವ ಆಂಗ್ಲ ವಿದ್ಯಾರ್ಥಿಗೆ ದೊರೆತಿತ್ತು
ಆಗ ನಾನು ಕೋಣೆಗೆ ಮರಳಲಿಲ್ಲ. ಹಾಗೇ ಹಿಡಿದ ದಾರಿಯಲ್ಲಿ ಮುಂದೆ ಮುಂದೆ ಸಾಗಿ
ಹಲವಾರು ಮೈಲು ನಡೆದು ಒಂದು ಹಳ್ಳಿಯನ್ನು ಮುಟ್ಟಿದೆ. ಸಮೀಪದಲ್ಲಿ ಹರಿಯುತ್ತಿ
ರುವ ನದಿಯ ದಂಡೆಗೆ ಕುಳಿತು ದುಃಖಿಸಿದೆ. ನನ್ನ ಬಯಕೆ ಈಡೇರಲಿಲ್ಲ. ನನ್ನ ಕವಿತೆ
"B + " ಮಾರ್ಕು ದೊರೆತಿತ್ತು. ಗುರಿಯನ್ನು ನಾನು ಸಮೀಪಿಸಿದ್ದೆ; ಆದರೆ ಮುಟ್ಟ
ಲಿಲ್ಲ. ಮುಂದೆ ಕೆಲವು ದಿನಗಳಲ್ಲಿಯೇ ಮನೆಯಿಂದ ಬಂದ ಕಾಗದದಲ್ಲಿ ತಾಯಿ
ಕಾಲರಾ ಬಂದ ವರ್ತಮಾನವಿತ್ತು. ಇತ್ತ ಪತ್ನಿಗೆ "ಎನಿಮಿಯಾ" ಆಗಿತ್ತು
ಇದೆಲ್ಲದರ ಬಗ್ಗೆ ಯೋಚನೆ ಮಾಡಿದೆ. ಕೊನೆಗೆ ದೊರೆಯುತ್ತಿರುವ ಕನ್‌ಸೆಷನ
ಸೌಲಭ್ಯವನ್ನು ಪಡೆದು ಬೇಸಿಗೆಯನ್ನು ಸ್ವದೇಶದಲ್ಲಿ ಕಳೆಯಬೇಕೆಂದು ಗೊತ್ತ
ಮಾಡಿದೆ. ಇದಕ್ಕೆ ಸೊಸೈಟಿಯ ಅನುಮತಿ ಬೇಕಾಗಿತ್ತು. ಈ ಸಮಯದಲ್ಲಿ ನಾನ
ಮರಳುವುದು ಹಿತವಲ್ಲವೆಂದು ಅವರು ತಿಳಿಸಿದರೂ ಕೊನೆಯ ನಿರ್ಣಯವನ್ನು ನನ
ಬಿಟ್ಟುಕೊಟ್ಟರು. ವಿಲಾಯತಿಯಲ್ಲಿ ಒಂಬತ್ತು ತಿಂಗಳು ಕಳೆದ ಮೇಲೆ, ಮತ್ತೆ ನಾನ
ಭಾರತಕ್ಕೆ ಪಯಣ ಬೆಳೆಸಿದೆ. ತಿರುಗಿ ಅಭ್ಯಾಸಕ್ಕಾಗಿ ಮತ್ತೆ ಆಕ್ಸ್‌ಫರ್ಡ್‌ಗೆ ಹೋಗು
ದಾಗುವದೋ ಇಲ್ಲವೋ ಎಂಬ ಸಂಶಯವಿದ್ದೇ ಇತ್ತು. ಈ ಅಸಹಾಯ ಸ್ಥಿತಿಯ
ನಾನು ಹೊರಟೆ.

ನಾನು ಮರಳುವಷ್ಟರಲ್ಲಿ ತಾಯಿಗೆ ನೆಮ್ಮದಿಯಾಗುತ್ತಾ ಬಂದಿತ್ತು. ಪತ್ನಿಗಾ
ಬೇಕಾದ ಶುಶ್ರೂಷೆಯ ವ್ಯವಸ್ಥೆಯನ್ನೆಲ್ಲ ಮಾಡಿದೆ. ಸಾಧ್ಯವಿದ್ದಷ್ಟು ವ್ಯಾಸಂ
ಪೂರೈಸಿಕೊಂಡು ಮತ್ತೆ ನಾನು ವಿಲಾಯತಿಗೆ ತೆರಳಿದೆ. ಹೋಗುವುದಕ್ಕಿಂತ ಮುಂ
ಒಂದು ದಿನ ಒಂದು ವಿಚಿತ್ರ ಹೊಟ್ಟೆಬೇನೆ ನನ್ನನ್ನು ಹಿಂಸಿಸಿತು. ಅದೊಂದು ಪೂವ
ಸೂಚನೆಯೆಂದು ನಾನು ತಿಳಿದಿರಲಿಲ್ಲ.

ಎರಡನೇ ಸಲ ಇಂಗ್ಲೆಂಡಿಗೆ ಹೋದಾಗ ಅಭ್ಯಾಸ ಚನ್ನಾಗಿ ಸಾಗಿತು. ನಡುನಡು
ನಡೆಯುತ್ತಿದ್ದ ದ್ವಿಮಾಸ ಪರೀಕ್ಷೆಯಲ್ಲಿ ಉಚ್ಚ ತರಗತಿ ನನಗೆ ದೊರೆಯುತ್ತಿದ್ದರ
ಪ್ರಥಮಶ್ರೇಣಿ ಬರಿ ಕನಸೆಂದೇ ತಿಳಿದಿದ್ದೆ. ಅಲ್ಲಿಯವರೆಗೆ ಆಕ್ಸ್‌ಫರ್ಡ್‌ನಲ್ಲಿ ಯಾ
ಭಾರತೀಯನಿಗೂ ಆಂಗ್ಲ ಸಾಹಿತ್ಯದಲ್ಲಿ ಪ್ರಥಮಶ್ರೇಣಿ ದೊರೆತಿರಲಿಲ್ಲ. ನನ್ನ ಟ್ಯೂಟ

ದ ಬ್ರೆಟ್‌ಸ್ಮಿಥ್‌ರಿಂದ ಸಹ ಒಂದೆರಡು ಸಲ ವಿಶಿಷ್ಟ ಉತ್ತೇಜನ ದೊರೆತಿತ್ತು. ರೆ ಅಂತಿಮ ಪರೀಕ್ಷೆ ಎರಡೇ ತಿಂಗಳಿದ್ದಾಗ ಒಂದು ಪ್ರಸಂಗ ನಡೆಯಿತು. ಮಧ್ಯಾಹ್ನದ ಟವನ್ನು ಯಾವ್ಯಾವರೂ ಹೋಟೇಲಿನಲ್ಲಿ ತೆಗೆದುಕೊಳ್ಳುವ ಪರಿಪಾಠವಿತ್ತು. ಆದಿನ ೀದ ಹೋಟೇಲಿನಲ್ಲಿ ತುಂಬಾ ಜನಸಂದಣಿಯಿತ್ತು. ಆಂಗ್ಲ ವಿದ್ಯಾರ್ಥಿಯೋರ್ವನು ಲಿತ ಟೇಬಲ್ ಬಿಟ್ಟರೆ ಇನ್ನೆಲ್ಲಿಯೂ ಜಾಗವಿರಲಿಲ್ಲ. ನನ್ನ ಗೆಳೆಯ ಅವನೆದುರಿಗೆ ೇಗಿ ಕುಳಿತ. ಸಹಜವಾಗಿ ಒಬ್ಬರನ್ನೊಬ್ಬರು ಮಾತಾಡಿಸಿದರು. ನನ್ನ ಹೆಸರು ೋಕ್ಯಾಕ್" ಎಂದು ಮಾತಿನಲ್ಲಿ ಬಂದಾಗ ಆ ವಿದ್ಯಾರ್ಥಿ ಹೇಳಿದ "ಅದೇ ಪ್ರಾಧ್ಯಾಪಕ ಟ್‌ಸ್ಮಿಥರೂ ನನ್ನ ಟ್ಯೂಟರರೂ ಆಗಿದ್ದಾರೆ. ಗೋಕ್ಯಾಕ್‌ರನ್ನು ಒಂದು ಆದರ್ಶ ದು ಅವರು ಆಗೀಗ ನಮ್ಮೆದುರು ಎತ್ತಿ ಹಿಡಿಯುತ್ತಾರೆ. ಅವರು ಬರೆದ ಪ್ರಬಂಧವನ್ನು ಬೇಕೆಂದು ಹೇಳುತ್ತಿರುತ್ತಾರೆ." ಇದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಬ್ರೆಟ್ ಥ್‌ರು ಈ ವಿಷಯದಲ್ಲಿ ಒಂದು ಮಾತನ್ನೂ ಆಡಿರಲಿಲ್ಲ. ನನ್ನ ಬಗ್ಗೆ ಅವರಿಗಿದ್ದ ಭಿಪ್ರಾಯ ನನಗೆ ಸ್ಪಷ್ಟವಾಗಿರಲಿಲ್ಲ. ಈಗ ಪರೀಕ್ಷೆ ಸಮೀಪಿಸಿದಾಗ ಆ ವಿಷಯ ಗೆ ತಿಳಿದು ಒಂದು ಅನುಪಮ ಆನಂದವಾಯಿತು. ಪ್ರಥಮ ಶ್ರೇಣಿಯಲ್ಲಿ ನಾನು ಸಾಗಬಹುದೆಂಬ ಪ್ರತೀಕ್ಷೆ ಮತ್ತೆ ಮೂಡಿತು.

ಇದರ ಮುಂದಿನ ವಿಷಯವನ್ನು "ವೈವ" ಎಂಬ ನನ್ನ ಪ್ರಬಂಧದಲ್ಲಿ ಬರೆದಿದ್ದೇನೆ ಗೆಲುವಿನ ನಿಲುವು'). ಪರೀಕ್ಷೆ ಮುಗಿದು "ವೈವಾ" ಸಂದರ್ಶನ ಒಂದು ತಿಂಗಳ ಲಿತ್ತು. ಸರೋವರ ಪ್ರಾಂತವನ್ನೂ ಸ್ಕಾಟಲಂಡ್ ದೇಶವನ್ನೂ ನೋಡಿಬರುವು ದು ನಾನೊಬ್ಬನೇ ಹೊರಟೆ. ಗೆಳೆಯರೆಲ್ಲ ತಮ್ಮ ತಮ್ಮ ಪರೀಕ್ಷೆಯಲ್ಲಿ ತೊಡ ದ್ದರಿಂದ ಅವರಿಗೆ ಬರುವದಾಗಲಿಲ್ಲ. ಎಡಿನ್‌ಬರೋದಲ್ಲಿ ಭೀಕರವಾದ ಕರಳು ನೆ ಬಂದಿತು. ದೈವವಶಾತ್ ಅದರ ಭೀಕರತೆಯನ್ನು ತಿಳಿದುಕೊಳ್ಳುವ ಯೋಗ್ಯತೆ ಳ್ಳ ಒಬ್ಬ ಭಾರತೀಯ ವೈದ್ಯಶಾಸ್ತ್ರ ವಿದ್ಯಾರ್ಥಿ ನಾನು ಇದ್ದಲ್ಲಿಯೇ ಇಳಿದು ಂಡಿದ್ದ. ರವಿವಾರವಿದ್ದರೂ ಆಸ್ಪತ್ರೆಗೆ ನನ್ನನ್ನು ಸಾಗಿಸುವಂತೆ ಆತ ಮಾಡಿದ. ಮಧ್ಯ ತ್ರಿಯ ಸುಮಾರು ಶಸ್ತ್ರಕ್ರಿಯೆಯಾಗಿ, ಮುಂದೆ ನಾಲ್ಕುದಿನ ಜೀವನ-ಮರಣಗಳ ಷ್ಯೆ ನಾನು ಹೋರಾಡಿದೆ. ಪೂರ್ಣಪ್ರಜ್ಞೆ ಬಂದಾಗ ಪರೀಕ್ಷೆಯ ವಿಷಯವನ್ನೂ ವಾ"ದ ವಿಷಯವನ್ನೂ ಅಲ್ಲಿಯ ಮೇಲ್ವಿಚಾರಕರಿಗೆ ಹೇಳಿದೆ. ಅವರು ಆಕ್ಸ್‌ಫರ್ಡ್ ವಿದ್ಯಾನಿಲಯಕ್ಕೆ ಪತ್ರ ಬರೆದರು. ನನ್ನ ವೈವಾ ಆಸ್ಪತ್ರೆಯಲ್ಲಿಯೇ ಆಗುವುದಿತ್ತು. ರೆ ಒಂಬತ್ತು ಪೇಪರುಗಳ ಪೈಕಿ ಏಳರಲ್ಲಿ ನನ್ನ ಪ್ರಥಮಶ್ರೇಣಿ ನಿರ್ವಿವಾದವಾಗಿದ್ದ ದ ವೈವಾ ಇಲ್ಲದೆ ನನ್ನ ಪರೀಕ್ಷೆಯ ಪರಿಣಾಮವನ್ನು ಪ್ರಸಿದ್ಧಿಗೊಳಿಸಲಾಯಿತು.

ಬದುಕಿನೆದೆ ನೀನೆನ್ನ. ಯಾವ ಬದುಕೇ ನನಗೆ?
ನಿನ್ನಾಣತಿಯೆ ನನ್ನ ಜೀವಿತದ ಗುರಿಯು.

ಎಂದು ವೇನಿಸುತ್ತ ಆ ಆಸ್ಪತ್ರೆಯಿಂದ ನಾನು ಹೊರಬಿದ್ದೆ. ಮುಂದೆ ಮೂರು ವಾರಗಳ
ಹೃದಯದ್ರಾವಕವಾದ ಹಾಗೂ ಸ್ಫೂರ್ತಿದಾಯಕವಾದ ಘಟನೆಗಳೆರಡು ಜರು
ಹೋಗಿದ್ದವು.

ನಾನು ಸ್ವದೇಶಕ್ಕೆ ಮರಳುವಷ್ಟರಲ್ಲಿಯೇ ಸೊಸೈಟಿಯವರು ನನ್ನನ್ನ ಫರ್ಗ್ಯೂಸನ
ಕಾಲೇಜಿನಿಂದ ಸಾಂಗಲಿಯ ವಿಲಿಂಗ್ಡನ್ ಕಾಲೇಜಿಗೆ ವರ್ಗಾಯಿಸಿದ್ದರು.
ಕಾಲೇಜಿಗೆ ನಾನು ಪ್ರಿನ್ಸಿಪಲ್ ಆಗಬೇಕೆಂಬ ಅವರ ವಿಚಾರ ಇದಕ್ಕೆ ನೆಲೆಯಾಗಿತ್ತು
೧೯೪೦ರಲ್ಲಿ ನನಗೆ ಮೂವತ್ತು ವರ್ಷಗಳಾಗಿದ್ದಾಗ ನಾನು ಪ್ರಿನ್ಸಿಪಲ್ ಆದೆ
ಇದರಿಂದ ನನ್ನ ಜೀವನಕ್ಕೆ ತೀರ ಬೇರೆ ವಿಧವಾದ ಚಾಲನೆ ಸಿಕ್ಕಿತು. ಶಿಕ್ಷಣ ಹಾಗು
ವಿದ್ವತ್ತಿನ ವಲಯಗಳಲ್ಲಿ ಇಲ್ಲಿಯವರೆಗೆ ಸಂಚರಿಸಿದ ನಾನು, ಈಗ ಆಡಳಿತದ ಚಕ್ರವ್ಯ
ವನ್ನು ಸೇರಬೇಕಾಯಿತು.

ನಾಲ್ಕು ವರ್ಷದ ನನ್ನ ಆಡಳಿತ, ವಿಜೃಂಭಣೆಯಿಂದ ಸಾಗಿತು. ಆ ನಾಲ್ಕು ವರ್ಷಗಳ
ಸ್ವರ್ಣಪ್ರಹರಗಳ ಕಾಲಾವಧಿಯಾದವೆಂದು, ಆ ಕಾಲೇಜಿನ "ರಜತ ಮಹೋತ್ಸವ"
ಸಂಚಿಕೆಯಲ್ಲಿ ಉಲ್ಲೇಖವೂ ಇದೆ. ಆದರೆ ಸುವರ್ಣದೊಡನೆ ಕಬ್ಬಿಣವೂ ಬೆರತಿತು
ಆಜೀವ ಸದಸ್ಯರ ಪ್ರಜಾಪ್ರಭುತ್ವದಲ್ಲಿ ಪ್ರಿನ್ಸಿಪಲ್‌ರಾಗಿ ಬಾಳುವದು ದುಸ್ತ
ವಾಯಿತು. ಅಸೂಯೆ ಹಾಗೂ ಗುಂಪುಗಾರಿಕೆಗಳು ಸದಸ್ಯರ ಬೋರ್ಡಿನಲ್ಲಿ ತ
ಎತ್ತಿದ್ದವು. ಮೂರು ವರ್ಷಗಳವರೆಗಾದರೂ ನನಗೆ ಅಗ್ನಿಪರೀಕ್ಷೆಯಾಯಿತು. ಕೊ
ಗೊಮ್ಮೆ ಅಖಿಲ ಸದಸ್ಯರ ಸಭೆಯಲ್ಲಿ ಕಾರ್ಯಸೂಚಿ ಕಾಗದದ ಕೊನೆಯ ಭಾಗವನ್ನು
ಹರಿದು ಅದರ ಮೇಲೆ ನನ್ನ ಪ್ರಿನ್ಸಿಪಲ್ ಜಾಗೆಗೂ ಆಜೀವ ಸದಸ್ಯತ್ವಕ್ಕೂ ರಾ
ನಾಮೆ ಪತ್ರ ಬರೆದು ಸಭಾಧ್ಯಕ್ಷರ ಮುಂದಿಟ್ಟು ಆ ಸಭೆಯಿಂದ ನಾನು ಹೊರಬಿದ್ದೆ.

ಯಾವ ಸ್ವಾರ್ಥತ್ಯಾಗಕ್ಕೂ ನಾನು ಸಿದ್ಧನಾಗಬಹುದಾಗಿತ್ತು. ಆದರೆ ನನ್ನ ವ್ಯಕ್ತಿತ್ವಕ
ವಜ್ರಾಘಾತವನ್ನು ತಂದೊದಗಿಸುವ ಪರಿಸ್ಥಿತಿಯಲ್ಲಿ ನಾನಿರುವುದು ಸಾಧ್ಯವಿರಲಿಲ್ಲ.

ಸಾಂಗಲಿಯಿಂದ ಧಾರವಾಡಕ್ಕೆ ಬಂದು ಎಂಟೊಂಬತ್ತು ತಿಂಗಳವರೆಗೂ ನಾನ
ಕೆಲಸವಿಲ್ಲದೆ ಒಂದೆಡೆ ನಿಲ್ಲಬೇಕಾಯಿತು. ಹೀಗೆ ನಿಲ್ಲಲು ಹಣವೂ ಇರಲಿಲ್ಲ. ಆ
ಧಾರವಾಡದ ಶ್ರೀಮಾನ್ ಎನ್. ಕೆ. ದೀಕ್ಷಿತರು ನನಗೆ ತೋರಿಸಿದ ಭ್ರಾತೃವಾತ್ಸ
ಚಿರಸ್ಮರಣೀಯವಾದುದು. ಡೆಕ್ಕನ್ ಎಜ್ಯುಕೇಷನ್ ಸೊಸೈಟಿಗೆ ಅವರು ನನ್ನ ಮೇ
ಖರ್ಚುಮಾಡಿದ ಹಣದಲ್ಲಿ ಆರುಸಾವಿರ ರೂಪಾಯಿಗಳನ್ನು ಅವರಿಗೆ ತಿರುಗಿ ಕೊಡು
ಪ್ರಸಂಗ ಬಂತು. ಸವಣೂರಿನ ಪರಲೋಕವಾಸಿ ನವಾಬಸಾಹೇಬರೂ, ಎನ್.
ದೀಕ್ಷಿತರೂ ಆ ಭಾರವನ್ನು ಸಮನಾಗಿ ಹೊತ್ತರು. ಮುಂದೆ ನಾನು ಉದ್ಯೋಗಸ್ತನಾ
ಮೇಲೆ ಅವರ ಹಣವನ್ನು ಅವರಿಗೆ ಕಂತಿನಂತೆ ಮುಟ್ಟಿಸಿದೆ.

ಮತ್ತೆ ಪ್ರಿನ್ಸಿಪಲ್ ಆಗುವ ಇಚ್ಛೆ ನನಗಿರಲಿಲ್ಲ. ಪ್ರಾಧ್ಯಾಪಕನಾಗಿಯೇ ಬಾ

ಕೆಂಬ ಆಸೆ ಬಲವತ್ತರವಾಗಿತ್ತು. ಕಾರಣ ಭಾರತದಲ್ಲಿಯ ಎಲ್ಲಾ ವಿಶ್ವವಿದ್ಯಾನಿಲಯ
ಗೆ ನಾನು ಪತ್ರ ಬರೆದೆ. ನನಗೆ ಬಂದ ಮೂರು ನಾಲ್ಕು ವಿಶ್ವವಿದ್ಯಾನಿಲಯಗಳ
ಯೋಲೆಗಳಲ್ಲಿ ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಕರೆ ಗಣ್ಯ
ಗಿತ್ತು. ಅಂತೇ ನಾನು ಹೈದರಾಬಾದಿಗೆ ತೆರಳಿದೆ. ಅಲ್ಲಿ ಹದಿನೈದು ತಿಂಗಳು ಮಾತ್ರ
ಸನಾಗಿದ್ದೆ. ಆಗ ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿಯ ಪ್ರಾಧ್ಯಾಪಕನ ಪರತಂತ್ರತೆ
ಗೆ ಮನದಟ್ಟಾಯಿತು. ನೇಲಾಗಿ ಅಲ್ಲಿಯ ವಾತಾವರಣ ಉಸಿರುಕಟ್ಟುವ ಹಾಗಿತ್ತು.
ಧ್ಯಾಪಕನಾಗಿ ಉಳಿದರೂ ಆಡಳಿತದ ಭಾರವಿಲ್ಲದೆ ಬಾಳುವುದು ಸಾಧ್ಯವಿಲ್ಲವೆನ್ನಿಸಿತು.
ಕ್ಷೆ ಬೇಡವೆಂದರೆ ನಡೆಯುವ ಹಾಗಿಲ್ಲ. ಕಡ್ಡಾಯವಾಗಿ ಪೇಪರು ತಪಾಸು ಮಾಡಲೇ
ತು. ಡಿಪಾರ್ಟ್‌ಮೆಂಟಿನ ಲೈಬ್ರರಿಯ ಕೆಲಸ ನನ್ನ ಕಡೆಗಿತ್ತು. ಅದರ ಕಾರಕೂನ
ಗೂ ಮೇಲ್ವಿಚಾರಕನಾಗಬೇಕಾಗುವದೆಂಬುದನ್ನು ಕಂಡುಕೊಂಡೆ. ಹೀಗಿದ್ದಾಗ
ಸುವುದರ ಜೊತೆಗೆ ಪ್ರಿನ್ಸಿಪಲ್ ಆದರೇನು ತಪ್ಪು? 'ಹಿಂದೂ' ಪತ್ರಿಕೆಯಲ್ಲಿಯ
ಹಿರಾತುಗಳನ್ನು ನೋಡಲಾರಂಭಿಸಿದೆ. ಆಗಿನ ಬಡೋದಾ ಸರ್ಕಾರ ವೀಸ್‌ನಗರದ
ಲೇಜನ್ನು ಪ್ರಾರಂಭಿಸುವದರಲ್ಲಿತ್ತು. ಅದನ್ನು ಒಪ್ಪಿಕೊಂಡು ವೀಸ್‌ನಗರವನ್ನು ನೋಡ
ದ್ದರೂ ಅಲ್ಲಿ ಹೊರಡಲಿದ್ದ ಕಾಲೇಜಿನ ಪ್ರಿನ್ಸಿಪಲ್‌ನಾದೆ.

ವೀಸನಗರಕ್ಕೆಂದು ಕೈಯ ಬೀಸುತ ಬಂದೆ
ಬಾ ಎಂದು ಕರೆದಿಹುದು ದೈವವಿಲ್ಲಿ

ದು ಕೈ ಅಲುಗಿಸುತ್ತ ನಾನು ವೀಸನಗರಕ್ಕೆ ನಡೆದೆ. ಆ ಅಧಿಕಾರವನ್ನು ಸ್ವೀಕರಿಸಿದ
ದು ವಾರದಲ್ಲಿ ಜೋಧಪುರದ ಸರ್ಕಾರದಿಂದ ಅದಕ್ಕೂ ಹೆಚ್ಚಿನ ಸಂಬಳದ ಪ್ರಿನ್
ಪಲ್ ಕೆಲಸಕ್ಕೆ ಕರೆಬಂದಿತು. ವೀಸ್‌ನಗರದ ಕಾಲೇಜಿನ ಕಟ್ಟಡವಲ್ಲಿ ಒಂದು ಕ್ಲಾಸ್
ಮು ಸಹ ಕಟ್ಟುವುದಾಗಿರಲಿಲ್ಲ. ಜೋಧಪುರದ ಕಾಲೇಜು ಅನೇಕ ವರ್ಷಗಳಿಂದ
ತಿದು ಬಂದು ಅದಕ್ಕೊಂದು ಪರಂಪರೆಯಿತ್ತು. ಆದರೆ ಕೊಟ್ಟ ವಚನವನ್ನು ತಪ್ಪಿಸ
ರದೆಂದು ನಾನು ವೀಸನಗರದಲ್ಲಿಯೇ ಉಳಿದೆ. ಆಗ ಇದು ಮೂರ್ಖತನವೆನಿಸಿದರೂ
ಂದೆ ಅದೇ ನನಗೆ ಶುಭ ಪಂಥಾನವಾಯಿತು. ಜೋಧಪುರಕ್ಕೆ ಹೋಗಿದ್ದರೆ ಕೊನೆಯ
ಗೆ ನಾನು ರಾಜಸ್ಥಾನದ ಸರ್ವಿಸ್‌ನ ಆವಾರದಲ್ಲಿಯೇ ಉಳಿಯುತ್ತಿದ್ದೆ. ಆದರೆ
೪೯ ರಲ್ಲಿ ಬಡೋದಾ ರಾಜ್ಯವು ವಿಲೀನವಾಗಿ ವೀಸನಗರದ ಕಾಲೇಜು ಮುಂಬಯಿ
ರ್ಕಾರದ ಅಂಕಿತಕ್ಕೆ ಬಂದು ತಿರುಗಿ ನನಗೆ ಕರ್ನಾಟಕದೆಡೆಗೆ ಬರುವದು ಸಾಧ್ಯ
ಯಿತು. ಕನಸು ಮನಸಿನಲ್ಲಿಯೂ ಇದು ನನಗೆ ಸಾಧ್ಯವೆನಿಸಿರಲಿಲ್ಲ. ನನ್ನ ಜೀವನದ
ಮತ್ಕೃತಿಗಳಲ್ಲಿ ಇದೊಂದು. ನಾವು ನಮ್ಮ ಜೀವನವನ್ನು ಬಾಳಿದರೂ, ದೈವವೇ
ದರ ನಕ್ಷೆಯ ರೂಪರೇಷೆಗಳನ್ನು ಬರೆಯುತ್ತಿರುವದೆಂದು ಅನೇಕ ಸಲ ನನಗೆನ್ನಿಸಿದೆ.
ವೀಸನಗರದಲ್ಲಿಯ ಮೂರು ವರ್ಷ (೧೯೪೬–೪೯) ನನ್ನ ಜೀವನದಲ್ಲಿಯ ಒಂದು

ರೀತಿಯ ತಪಃಕಾಲಾವಧಿಯೆನ್ನಬಹುದು. ನಾಗರಿಕತೆಯ ಯಾವ ಸೌಲಭ್ಯವಿಲ್ಲದ ಹಳ್ಳಿ
ಗಾಡಿನಂತಹ ಪ್ರದೇಶದಲ್ಲಿ ನಾವು ಬಾಳಿದೆವು. ಬೇಸಿಗೆಯಲ್ಲಿಯ ಬಿಸಿಲು ೧೧೮° ಸೆಂಟಿ
ಮನೆ ಮಾಳಿಗೆಯ ಮೇಲೆ ಮಲಗಿಕೊಂಡರೂ ರಾತ್ರಿ ಸಹ ಹಗಲಿನ ಝಳ ತಪ್ಪುತ್ತಿರ
ಲಿಲ್ಲ. ಒಂದು ಕ್ಲಾಸ್ ರೂಮು ಹಾಗೂ ಒಂದು ಆಫೀಸ್ ಕೋಣೆಯಲ್ಲಿ ಆ ಕಾಲೇಜನ್ನು
ಪ್ರಾರಂಭಿಸಿದೆ. ಈಗ ಮೀಸನಗರದ ಕಾಲೇಜು ಉತ್ತರ ಗುಜರಾಥಿನ ೧೮ ಕಾಲೇಜುಗಳಿಗೆ
ಮಾತೃಸ್ಥಾನದಲ್ಲಿದೆ.

ಕಾಲೇಜಿನ ಕೆಲಸ ಒಂದನ್ನೇ ನಾನು ಮಾಡಲಿಲ್ಲ. ಶ್ರೀ ಅರವಿಂದರ ತಾತ್ವಿಕ
ಗ್ರಂಥಗಳ ಮನನ ಇಲ್ಲಿ ಸಾಧ್ಯವಾಯಿತು. ಅಲ್ಲಿಯ ಜನತೆಯೊಡನೆ ಸಂಪೂರ್ಣವಾಗಿ
ನಾನು ಬೆರೆತೆ. ನಮ್ಮ ಮನೆ ಮಕ್ಕಳು ಅಲ್ಲಿಯ ಗುಜರಾಥಿ ಶಾಲೆಗೆ ಹೋದರು. ಬಡೋದಾ
ರಾಜ್ಯ ವಿಲಿನವಾಗಿ ಕೊಲ್ಹಾಪುರದ ರಾಜಾರಾಮ್ ಕಾಲೇಜಿಗೆ ನನ್ನ ವರ್ಗವಾದಾಗ
ಊರ ಜನವೆಲ್ಲಾ ನಮ್ಮನ್ನು ಬೀಳ್ಕೊಡಲು ನಿಲ್‌ಮನೆಗೆ ಬಂದಿದ್ದರು. ನಾವು ಕುಳಿತ
ರೇಲ್ವೆ ಕಮ್‌ಪಾರ್ಟ್‌ಮೆಂಟಿಗೆ ನೂರಾರು ಹಾರಗಳ ಅಲಂಕಾರವಿತ್ತು. ಹನಿಗಟ್ಟಿದ
ಕಣ್ಣುಗಳನ್ನು ನೋಡಿ ನಾವು ಕಂಬನಿ ಮಿಡಿದೆವು. ಮೀಸನಗರವನ್ನು ಕುರಿತು ಬರೆದ ಕವಿತೆ
ಗಳಲ್ಲಿ ಇದರ ವಿವರಗಳಿವೆ. ಉತ್ತರ ಗುಜರಾಥದ ಜನತೆಯ ಪ್ರೀತಿ ಸ್ನೇಹವೂ ಅದ್ಭುತ
ವಾದುದು. ಅದರಲ್ಲಿ ಮಿಂದು ನಾವು ಪುನೀತರಾದೆವು. ವಿಲಿಂಗ್‌ಡನ್ ಕಾಲೇಜಿನಿಂದ
ಹೊರಬಿದ್ದಾಗ ನಾನು ಅನುಭವಿಸಿದ ಒಂದು ವಿಧದ ವಿಫಲತೆ ಇಲ್ಲಿಯ ಸಫಲತೆಯಲ್ಲಿ
ಮುಳುಗಿಹೋಯಿತು.

ಕೊಲ್ಹಾಪುರದ ರಾಜಾರಾಮ ಕಾಲೇಜಿಗೂ ಸಾಂಗಲಿಯ ವಿಲಿಂಗ್‌ಡನ್ ಕಾಲೇ
ಜಿಗೂ ಸುಮಾರು ೩೬ ಮೈಲಿ ಅಂತರ ಮಾತ್ರ. ಈ ೩೬ ಮೈಲಿ ದಾರಿಯನ್ನು
ನಡೆಯಲು ನನಗೆ ಐದು ವರ್ಷಗಳು ಹಿಡಿದವೆಂದು ನಾನು ಕೊಲ್ಹಾಪುರಕ್ಕೆ ಹೋದಾಗ
ಅಲ್ಲಿಯ ಸಭೆಯೊಂದರಲ್ಲಿ ಹೇಳಿದೆ.

ಡಾ. ಪಾವಟೆಯವರು ಆಗ ಡಿ. ಪಿ. ಐ. ಆಗಿದ್ದರು. ಅವರಿಂದಲೇ ಈ ವರ್ಗಾವಣೆ
ಸ್ವಯಂ ಸ್ಫೂರ್ತಿಯಿಂದ ಸಾಧ್ಯವಾಯಿತು. ಮುಂಬಯಿ ರಾಜ್ಯದಲ್ಲಿ ಅದೇ ತಾನೆ
ವಿಲೀನವಾದ ಕೊಲ್ಹಾಪುರದ ಗಾಯ ಇನ್ನೂ ಮಾದಿರಲಿಲ್ಲ. ಸೋತ ಶತ್ರುವಿನಂತೆ
ಕೊಲ್ಹಾಪುರ ಮುಂಬಯಿ ಸರ್ಕಾರವನ್ನು ಕಾಣುತ್ತಿತ್ತು. ಆ ಸರಕಾರದ ಸೇವಕನಾಗಿ
ಹೋದ ನನ್ನನ್ನೂ ಕೊಲ್ಹಾಪುರ ಸಂಶಯದಿಂದ ನೋಡಿತು. ಹೊಸದಾಗಿ ಹೂಡಿದ
ವಾರ್ಷಿಕೋತ್ಸವದಲ್ಲಿ ಆ ಸಂಶಯದ ಪ್ರದರ್ಶನವೂ ನಡೆಯಿತು. ಆದರೆ ನನ್ನ ನಿರ್ವ್ಯಾಜ
ನನ್ನನ್ನು ಉಳಿಸಿತಲ್ಲದೆ ಜನಾನುರಾಗಿಯನ್ನಾಗಿಯೂ ಮಾಡಿತು. ಕೊಲ್ಹಾಪುರದಲ್ಲಿ
ನಾನು ಕಳೆದ ಮೂರು ವರ್ಷಗಳು ಪ್ರಭಾವಶಾಲಿಯೆಂದೇ ಹೇಳಬೇಕು.

ಈ ಕಾಲಾವಧಿಯ ಕೊನೆ ಕೊನೆಗೆ ನಾನೊಂದು ಕನಸನ್ನು ಕಂಡೆ. ಧಾರವಾಡದ

ರ್ನಾಟಕ ಕಾಲೇಜಿನ ವಸತಿಗೃಹದಲ್ಲಿ ಕಟ್ಟಿಗೆಯ ಹಲಗೆಯ ಕಾಟುಗಳಿದ್ದವು. ನಾನು ದ್ಯಾರ್ಥಿಯಾಗಿದ್ದಾಗ ಕೋಣೆಯಲ್ಲಿ ಇಂತಹ ಕಾಟಿನ ಮೇಲೆ ಮಲಗಿಕೊಂಡಂತೆ ನಸು ಬಿತ್ತು. ಮುಂದೆ ಸುಮಾರು ೧೫ ದಿವಸಗಳಲ್ಲಿಯೇ ಕರ್ನಾಟಕ ಕಾಲೇಜಿಗೆ ನನ್ನನ್ನು ರ್ಗಾಯಿಸಿದ್ದ ಆರ್ಡರನ್ನು ಡಾ. ಪಾವಟೆಯವರು ಕಳುಹಿಸಿದರು. ೧೯೫೨ ರಿಂದ ೫೮ ನೆಯವರೆಗೆ ನಾನು ನನ್ನ ವಿದ್ಯಾಮಾತೆಯಾದ ಕರ್ನಾಟಕ ಕಾಲೇಜಿನ ಪ್ರಿನ್ಸಿಪಲ್ ದೆ. ೧೯೩೧ರಲ್ಲಿ ಶಿಕ್ಷಣವು ಮುಗಿದನಂತರ, ನಾನು ಧಾರವಾಡದಿಂದ ಹೊರಬಿದ್ದಿದ್ದೆ. ಪ್ಪತ್ತೊಂದು ವರ್ಷಗಳಾದ ಮೇಲೆ—ಭೂಮಿಯು ಒಂದು ಗೋಲಾಕಾರವಾಗಿದ್ದ ರಣ—ಎಲ್ಲಿಂದ ತೆರಳಿದ್ದೆನೋ ಅದೇ ಬಿಂದುವಿಗೆ ನಾನು ಮರಳಿದೆನೆಂದುಕೊಂಡೆ. ಲ್ಲಿಯ ವರ್ಷಗಳು ನನಗೆ ಅತ್ಯಂತ ಸಂಭ್ರಮದ ವರ್ಷಗಳಾಗಿದ್ದವು. ಒರ್ವ ದೇವಿಯ ಡಿಯ ಪೂಜಾರಿಯಂತೆ, ನನ್ನ ವಿದ್ಯಾಮಾತೆಯಾದ ಕರ್ನಾಟಕ ಕಾಲೇಜನ್ನು ನು ನೋಡಿಕೊಂಡೆ. ಕರ್ನಾಟಕ ವಿಶ್ವವಿದ್ಯಾನಿಲಯವು ಅದೇ ಪ್ರಾರಂಭವಾಗಿತ್ತು. ುಂದೆ ಡಾ. ಪಾವಟೆಯವರೇ ಅಲ್ಲಿ ಕುಲಪತಿಗಳಾಗಿ ಬಂದರು. ಅವರ ಜೊತೆಗಾರನಾಗಿ ಂತು ಹುಲಕೋಟಿಯವರ ಕಾಲದಲ್ಲಿಯೂ ಪಾವಟೆಯವರ ಕಾಲಾವಧಿಯಲ್ಲಿಯೂ ೇವೆ ಸಲ್ಲಿಸುವ ಭಾಗ್ಯ ನನ್ನದಾಗಿತ್ತು.

ಧಾರವಾಡದಲ್ಲಿದ್ದಾಗ ಜಪಾನಿನಲ್ಲಿ ಜರುಗಿದ ಪಿ.ಇ.ಎನ್. ಕಾಂಗ್ರೆಸ್ಸಿಗೆ ಹೋಗಿ ಂದೆ. ಮುಂದೆ ಭಾರತದ ಪರೀಕ್ಷಾ ಸಮಿತಿಯ ನಾಯಕನಾಗಿ ನಾಲ್ಕು ತಿಂಗಳು ಮೇರಿಕೆಗೆ ಹೋಗಿ ಬಂದೆ. ಇಷ್ಟರಲ್ಲಿ ದೈವವು ನನ್ನನ್ನು ಇನ್ನೊಂದೆಡೆಗೆ ಕರೆದಿತ್ತು. ್ರದರಾಬಾದಿನಲ್ಲಿ ಪ್ರಾರಂಭವಾಗಲಿರುವ "ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್" Central Institute of English) ಸಂಸ್ಥೆಯ ಡೈರೆಕ್ಟರ್ ಆಗಿ ೧೯೫೯ರ ಆದಿಯಲ್ಲಿ ನು ಇನ್ನೊಂದು ಪ್ರಕರಣದ ಪುಟ ತೆರೆದೆ.

ಇಲ್ಲಿ ಏಳು ವರ್ಷಗಳ ಕಾಲ ಆ ಸಂಸ್ಥೆಯನ್ನು ಕಟ್ಟುವ ಭಾಗ್ಯ ನನ್ನದಾಯಿತು. ಶ್ಮೀರದಿಂದ ಕನ್ಯಾಕುಮಾರಿವರೆಗೆ ಎಲ್ಲ ಪ್ರದೇಶಗಳಲ್ಲಿಯ ಆಂಗ್ಲ ಭಾಷಾ ಸಾಹಿತ್ಯ ಳ ಉಪಪ್ರಾಧ್ಯಾಪಕರು ಇಲ್ಲಿ ವಿದ್ಯಾರ್ಥಿಗಳಾಗಿ ಬಂದರು. ಇಂತಹ ಸಾವಿರ ಜನರ ಹವಾಸ ನನಗೆ ಲಭಿಸಿತು. ಅಲ್ಲದೆ ಆಂಗ್ಲ ಭಾಷಾ ಸಾಹಿತ್ಯಗಳನ್ನು ವಿದ್ಯಾಕ್ರಮದ ವಿಧ ಸ್ತರಗಳಲ್ಲಿ ಕಲಿಸುವ ಹೊಸ ಕ್ರಮಗಳ ಸಂಶೋಧನೆ ಇಲ್ಲಿ ನಡೆಯಿತು. ಈ ಂಶೋಧನದ ಮೂಲಕ ಅನೇಕಸಲ ನನಗೆ ವಿದೇಶಗಳಿಗೆ ಹೋಗುವ ಪ್ರಸಂಗ ಬಂತು. ರಡುಸಲ ಇಂಗ್ಲೆಂಡಿಗೆ ಹಾಗೂ ಒಮ್ಮೆ ಪೂರ್ವದ ಆಫ್ರಿಕಾಕ್ಕೆ ಹೋದೆ. ಬೆಲ್ಜಿಯಂ ೇಶದಲ್ಲಿ ನಡೆದ ಅಂತರ್‌ರಾಷ್ಟ್ರೀಯ ಕವಿ ಸಮ್ಮೇಳನಕ್ಕೂ ಭಾರತದ ಪ್ರತಿನಿಧಿಯಾಗಿ ೋಗಿದ್ದೆ. ಹೀಗೆ ಈ ಸಂಶೋಧನೆಯಲ್ಲಿ ಮುಖ್ಯ ಪಾತ್ರವಹಿಸಿ ಅದನ್ನು ದೇಶದಲ್ಲಿ ಲ್ಲೆಡೆಗೆ ಘೋಷಿಸುವ ಹೊಣೆಗಾರಿಕೆಯೂ ನನ್ನದಾಯಿತು.

ಅಕ್ಟೋಬರ್ ೧೯೬೬ ರಲ್ಲಿ ನಾನು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಬಂದೆ. ಹೀಗಾಗುವುದೆಂದು ನಾನು ಎಂದಿಗೂ ಎಣಿಸಿರಲಿಲ್ಲ. ಒಂದು ಹೊಸ ಕಾಲೇಜನ್ನೂ ಸಂಶೋಧನ ಸಂಸ್ಥೆಯನ್ನೂ ಸ್ಥಾಪಿಸಿದ ಹೆಗಲಮೇಲೆ, ಗುರುತರವಾದ ನೂತನ ವಿಶ್ವ ವಿದ್ಯಾನಿಲಯದ ಭಾರ ಬಿದ್ದಿತು.

ಇದೀಗ ನನ್ನ ಜೀವನದ ಸ್ಥೂಲ ಪರಿಚಯವಾಗಿದೆ. ಇಲ್ಲಿ ಬರಿ ಘಟನೆಗಳನ್ನೇ ನಾನು ವಿವರಿಸಿದ್ದೇನೆ. ಒರ್ವ ವ್ಯಕ್ತಿಯ ಬಾಳನ್ನು ಬಾಳುವವರು ಬರೀ ಆ ವ್ಯಕ್ತಿಯಲ್ಲ: ಆ ವ್ಯಕ್ತಿಯೊಡನೆ ಅವನ ದೈವವೂ ಅದನ್ನು ಬಾಳುತ್ತದೆ.

ವ್ಯಕ್ತಿಯ ಸಾಹಸವೂ ದೈವ ಸಂಕಲ್ಪವೂ ಒಂದಾಗಿ ಹೊಂದಿಕೊಂಡರೆ ಆ ಜೀವನಕ್ಕೆ ಒಂದು ಏಕಸೂತ್ರತೆ ಹಾಗೂ ಪೂರ್ಣತೆ ಸಾಧ್ಯವಾಗುತ್ತವೆ. ಈ ವಿಕಾಸಕ್ರಮದಲ್ಲಿ ವ್ಯಕ್ತಿಯ ಸಾಹಸಕ್ಕೆ ದೈವವು ಹೇಗೆ ನೀರೆರೆಯಬಹುದೆಂಬುದು ವಿದಿತವಾಗುತ್ತದೆ. ಅಂತೆಯೇ ನನ್ನ ಜೀವನದ ಘಟನೆಗಳನ್ನು ಇಲ್ಲಿ ಸ್ಥೂಲವಾಗಿ ವಿವರಿಸಿದ್ದೇನೆ.

ಒಂದು ಪರಿಸ್ಥಿತಿ ಹಾಗು ಘಟನಾವಲಯದಲ್ಲಿ ಬೆಳೆದ ಒರ್ವ ವ್ಯಕ್ತಿ; ಕೌಟುಂಬಿಕ; ಕನ್ನಡಿಗ; ಭಾರತೀಯ; ವಿದ್ಯಾರ್ಥಿ; ಶಿಕ್ಷಕ; ಮಾತುಗಾರ; ಆಡಳಿತಗಾರ; ಕವಿ; ಸಾಹಿತಿ; ಸಾಧಕ—ಹೀಗೆ ಒಂದು ಜೀವನಕ್ಕೆ ಅನೇಕ ವಿಕಾಸಕ್ರಮಗಳಿರಬಹುದು. ಇಲ್ಲಿ ಘಟನಾವಲಿಯನ್ನು ಕುರಿತು ಸ್ಥೂಲವಾಗಿ ಬರೆದಿದ್ದೇನೆ. ಉಳಿದ ವಿಷಯಗಳನ್ನು ಕುರಿತು ಮತ್ತೆ ಬರೆಯಬೇಕಾಗಬಹುದು. ನೋಡೋಣ.

ಮನೆ

ಬಾಲಕೃಷ್ಣ ಕೃಷ್ಣ ಲಕ್ಷ್ಮೇಶ್ವರ್

ನಾಯಕರ ತಂದೆ ಗೋಕಾಕ್ ಕೃಷ್ಣರಾಯರು. ಗೋಕಾಕ್ ಕೃಷ್ಣರಾಯರ ತಂದೆ ನಾಯಕ ರಾಯರವರು ಗೋಕಾಕದಲ್ಲಿ ವಾಸವಾಗಿದ್ದರು. ಅವರಿಗೆ ವಿಶೇಷ ಆಸ್ತಿ ರಲಿಲ್ಲ. ಇಂಗ್ಲೀಷ ಮರಾಠಿ ಭಾಷೆಗಳಲ್ಲಿ ಪಾರಂಗತರಿದ್ದರು. ಗೋಕಾಕ ಪ್ರಾಂತ ಲ್ಲಿ ಬರಬಿದ್ದು ತಮ್ಮ ಕುಟುಂಬ ಪೋಷಣೆಗೆ ತೊಂದರೆಯಾಗಹತ್ತಿತು. ಆಗ ಅವರು ರಜ ಸಂಸ್ಥಾನಿಕರ ಬಳಿ ಹೋಗಿ ಆಶ್ರಯ ಕೇಳಿದರು. ಆಗ ಸಂಸ್ಥಾನಾಧಿಪತಿಗಳು ಮ್ಮ ಸಂಸ್ಥಾನದ ಭಾಗವಾದ ಲಕ್ಷ್ಮೇಶ್ವರದಲ್ಲಿ ವಕೀಲಿ ವೃತ್ತಿಯಿಂದ ಉಪಜೀವಿಸಿರಿ, ಂದು ಹೇಳಿ ವಕೀಲಿ ಸನದು ಕೊಟ್ಟರು. ಬಳಿಕ ಅವರು ಸ್ವಗ್ರಾಮ ತ್ಯಾಗಮಾಡಿ ಂಡತಿ ತಂಗಿಯರನ್ನು ಕರೆದುಕೊಂಡು ಲಕ್ಷ್ಮೇಶ್ವರಕ್ಕೆ ಬಂದು ವಕೀಲಿ ವೃತ್ತಿಯನ್ನು ಪ್ರಾರಂಭಿಸಿದರು. ಇವರು ಗೋಕಾಕದಿಂದ ಬಂದದ್ದರಿಂದ ಲಕ್ಷ್ಮೇಶ್ವರವಾಸಿಗಳು ೋಕಾಕ್ ವಕೀಲರೆಂದು ಇವರನ್ನು ಕರೆಯಹತ್ತಿ ಅದೇ ಅವರ ಅಡ್ಡ ಹೆಸರಾಯಿತು.

ವಿನಾಯಕರಾಯರು ತಂಗಿಯಾದ ಭಾಗೀರಥಿಯನ್ನು ಜಾಲೀಹಾಳದ ಸಾವುಕಾರ ದ ಭೀಮರಾಯರಿಗೆ ಕೊಟ್ಟು ವಿವಾಹ ಮಾಡಿದರು. ಅವಳ ಉದರದಿಂದ ರಾಮ ಂದ್ರನೆಂಬ ಮಗನು ಜನಿಸಿದನು. ರಾಮನು ಚಿಕ್ಕಂದಿನಲ್ಲಿಯೇ ಮಾತಾಪಿತೃವಿಯೋಗ ುಃಖಕ್ಕೆ ತುತ್ತಾದನು. ಆಗ ವಿನಾಯಕರಾಯರು ಸೋದರಳಿಯನನ್ನು ತಮ್ಮಲ್ಲಿಗೆ ರೆದುಕೊಂಡು ಬಂದರು. ತಮಗೆ ಮಕ್ಕಳಿಲ್ಲದ್ದರಿಂದ ರಾಮನನ್ನು ಮಗನಂತೆ ಪೋಷಣೆ ಾಡಿದರು. ಅವನು ವಿವಾಹಕ್ಕೆ ಯೋಗ್ಯನಾಗಲು ಉಂಡಿಹಳ್ಳಿಯ ಪಾಟೀಲ ಸ್ವಾಮಿ ಯರ ಮಗಳಾದ ಸೀತಾಬಾಯಿಯೊಂದಿಗೆ ವಿಜೃಂಭಣೆಯಿಂದ ಲಗ್ನ ಮಾಡಿದರು. ವಳ ಉದರದಿಂದ ಗಂಡು ಮಗನು ಜನಿಸಿದನು. ವಿನಾಯಕರಾಯರು ಆನಂದಭರಿತ ಗಿ ಕೃಷ್ಣನೆಂದು ಹೆಸರಿಟ್ಟು ಹನ್ನೆರಡನೇ ದಿವಸದಲ್ಲಿಯೇ ಅವನನ್ನು ತಮ್ಮ ದತ್ತಕ ತ್ರನನ್ನಾಗಿ ಮಾಡಿಕೊಂಡರು. ಕೃಷ್ಣನು ವಿನಾಯಕರಾಯರ ಪ್ರೇಮದ ಪುತ್ತಳಿ ಾಗಿ ಬೆಳೆದನು.

ವಿನಾಯಕರಾಯರ ಪತ್ನಿಯಾದ ಗುಂಡಾಬಾಯಿಯವರು ತೀರಿಕೊಂಡದ್ದರಿಂದ ೋದರಳಿಯನ ಮನೆತನವೇ ತಮ್ಮ ಮನೆತನವೆಂದು ಭಾವಿಸಿ ಅವನ ಕುಟುಂಬ

ಪೋಷಣೆಯ ಹೊಣೆಯನ್ನು ರಾಯರು ಹೊತ್ತರು. ಜಾಲೀಹಾಳದ ಉತ್ಪನ್ನ ಪೂ ಬಾರದ್ದರಿಂದ ಅಲ್ಲಿಯ ಹೊಲ ಮನೆಗಳನ್ನು ಮಾರಿಸಿ ಬಂದ ಹಣದಿಂದ ಲಕ್ಷ್ಮೇಶ್ವರ ದಲ್ಲಿ ಬಡ್ಡಿಯ ವ್ಯವಹಾರವಿಡಿಸಿದರು. ರಾಮರಾಯನಿಗೆ ಮುಂದೆ ವೆಂಕಣ್ಣ, ಹನುಮಂತ, ಗೋವಿಂದರೆಂಬ ಮೂವರು ಗಂಡು ಮಕ್ಕಳೂ, ಅಂಬಕ್ಕ. ಭಾಗೀರಥಿಯರೆಂಬ ಹೆಣ್ಣು ಮಕ್ಕಳೂ ಜನಿಸಿ ಅವನ ಕುಟುಂಬವು ವಿಸ್ತಾರವಾಯಿತು. ವಿನಾಯಕರಾಯರು ತಮ್ಮ ದತ್ತಕ ಪುತ್ರನಾದ ಕೃಷ್ಣನಿಗೆ ಲಕ್ಷ್ಮೇಶ್ವರದಲ್ಲಿ ಪ್ರಾಥಮಿಕ ಶಾಲಾಭ್ಯಾಸಮಾಡಿಸಿ ಧಾರವಾಡದಲ್ಲಿ ಆಂಗ್ಲ ವಿದ್ಯಾಭ್ಯಾಸ ಮಾಡಿಸ ಹತ್ತಿದರು. ಕೃಷ್ಣನು ಮೇಧಾವಿಯಿದ್ದು ತನ್ನ ಸಂಗಡಿಗರಲ್ಲಿ ಉಚ್ಚಸ್ಥಾನ ಪಡೆದಿದ್ದನು. ಮ್ಯಾಟ್ರಿಕ್ ಪರೀಕ್ಷೆಯ ಫಾರ್ಮ ತುಂಬಿದಾಗ ತನ್ನ ಪ್ರೇಮದ ಜನಕರು ಅಸ್ವಸ್ಥರಾದ ವರ್ತಮಾನ ಬಂದಿತು. ಕೂಡಲೇ ಲಕ್ಷ್ಮೇಶ್ವರಕ್ಕೆ ಬಂದನು. ವಿನಾಯಕರಾಯರಿಗೆ ಅವನು ದಾದಾ ಎಂದು ಕರೆಯುತ್ತಿದ್ದನು. ಅವರು ಆಸನ್ನಮರಣರಾಗಿದ್ದನ್ನು ಕಂಡು ಮರುಗಿದನು. ಮರುದಿವಸವೇ ದಾದಾ ಅವರು ಇಹಲೋಕಯಾತ್ರೆಯನ್ನು ಮುಗಿಸಿದರು.

ಕೃಷ್ಣನ ಜನಕ ತಂದೆಯವರಾದ ರಾಮರಾಯರು ಮೊದಲೇ ಸ್ವರ್ಗವಾಸಿಗಳಾಗಿದ್ದ ರಿಂದಲೂ ತಮ್ಮಂದಿರು ಚಿಕ್ಕವರಿದ್ದದರಿಂದಲೂ ಕುಟುಂಬ ಪೋಷಣೆಯ ಭಾರವೆಲ್ಲ ಕೃಷ್ಣನ ಮೇಲೆಯೇ ಬಿದ್ದಿತು. ಅದರಿಂದ ಪರೀಕ್ಷೆಗೆ ಶರಣು ಹೊಡೆದು ಲಕ್ಷ್ಮೇಶ್ವರದಲ್ಲಿದ್ದು ತನ್ನ ಜನಕ ತಂದೆಯ ಕುಟುಂಬ ಪೋಷಣೆಯ ಭಾರವನ್ನು ಹೊತ್ತರು. ತಮ್ಮಂದಿರಲ್ಲಿ ಹಿರಿಯನಾದ ವೆಂಕಣ್ಣನು ಮ್ಯಾಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಪೋಸ್ಟ್ ಖಾತೆಯಲ್ಲಿ ಕೆಲಸ ಮಾಡಹತ್ತಿದ. ಎರಡನೆಯವನಾದ ಹನುಮಂತನು ಪೋಲಿಸ್ ಖಾತೆಯಲ್ಲಿ ಸೇರಿದ. ಗೋವಿಂದನು ಮೋಜಣಿ ಮಾಡುವದನ್ನು ಅಭ್ಯಾಸಮಾಡಿ ಮೊಗ ಲಾಯಿಯಲ್ಲಿ ಮೋಜಣಿದಾರ ಕೆಲಸವನ್ನು ಮಾಡಹತ್ತಿದ. ಹೀಗೆ ಮೂವರು ತಮ್ಮಂದಿ ರಿಗೂ ಕೃಷ್ಣನು ಉದರಂಭರಣದ ಮಾರ್ಗ ಮಾಡಿಕೊಟ್ಟ. ಹಿರಿಯ ತಂಗಿಯಾದ ಅಂಬಕ್ಕನನ್ನು ನರಸನಗೌಡರು ಪಾಂಸಿಯವರಿಗೆ ವಿವಾಹ ಮಾಡಿಕೊಟ್ಟ. ಚಿಕ್ಕವಳಾದ ಭಾಗೀರಥಿಯನ್ನು ತನ್ನ ಗೆಳೆಯರಾದ ಹಾವೇರಿಯಲ್ಲಿ ಪ್ರಸಿದ್ಧ ವಕೀಲರಾಗಿದ್ದ ಗುರುನಾಥರಾವ್ ಮತ್ತಾರಿ ಇವರಿಗೆ ವಿವಾಹ ಮಾಡಿಕೊಟ್ಟ. ಹೀಗೆ ಜನಕ ಘರಾಣೆಯ ಕುಟುಂಬದ ಭಾರವನ್ನೆಲ್ಲ ಇಳಿಸಿಕೊಂಡು ನಿಶ್ಚಿಂತನಾಗಿದ್ದ.

ವಿನಾಯಕರಾಯರಿಗೆ ತಮ್ಮ ಮಗನ ಲಗ್ನ ಮಾಡಬೇಕೆಂಬ ಉತ್ಕಟ ಇಚ್ಛೆಯಿದ್ದುದ ರಿಂದ ಕೃಷ್ಣನು ಹದಿನಾರು ವರ್ಷದವನಿರುವಾಗಲೇ ಕನ್ಯಾನ್ವೇಷಣೆ ಮಾಡಹತ್ತಿದರು. ಲಕ್ಷ್ಮೇಶ್ವರ ಜೋಯಿಸರ ಮನೆತನದವರಾದ ಪಾಂಡುರಂಗ ಜೊಯ್ಸಿಯವರು ಬ್ಯಾಡಗಿ ಹಾಯಸ್ಕೂಲಿನಲ್ಲಿ ಶಿಕ್ಷಕರಾಗಿದ್ದರು. ಅವರ ಹಿರಿಯ ಮಗಳಾದ ಸುಂದರಿಯನ್ನು ವಿನಾಯಕರಾಯರು ನೋಡಿ ಆನಂದಭರಿತರಾಗಿ ಸಭ್ಯಶಿರೋಮಣಿಗಳಾದ ಪಾಂಡುರಂಗ

ೋಯ್ಯರ ಶಾಂತವೃತ್ತಿಗೆ ಮೆಚ್ಚಿ ಸುಂದರಿಯೊಡನೆ ಕೃಷ್ಣನ ವಿವಾಹವನ್ನು ಾಡಿದರು. ಮುಂದೆ ಸೊಸೆಯನ್ನು ಮನೆಗೆ ಕರೆದುಕೊಂಡು ಬಂದು ಎರಡು ವರ್ಷ ನಂದದಿಂದಿದ್ದು ಬಳಿಕ ವ್ಯತ್ಯಪಿಗೆ ತುತ್ತಾದರು. ಸೀತಾಬಾಯಿಯವರು ಸೊಸೆಯ ೕಲೆ ಅತ್ತೆಯ ಅಧಿಕಾರ ನಡೆಸಿದರು. ಮಗನ ಬಗ್ಗೆ ಸರಿಯಾದ ಧೋರಣೆ ಾಲಿಲ್ಲ. ತಮ್ಮಂದಿರೂ ತಾಯಿಯನ್ನು ಅನುಸರಿಸಿದರು. ಕೊನೆಗೆ ಕೂಳು ನೀರಿಲ್ಲದೆ ಮು ದಿನ ಕೋಣೆಯಲ್ಲಿ ಹಾಕಿದರು. ಎದುರು ಮನೆಯಲ್ಲಿದ್ದ ಅಣ್ಣಾಸಾಹೇಬರವರು ಂದು ಕೋಣೆಯ ಬೀಗವನ್ನು ತೆಗಿಸಿ ಕೃಷ್ಣನನ್ನು ಬಂಧನದಿಂದ ಬಿಡಿಸಿದರು. ಆಗ ಷ್ಣನು ತನ್ನ ಹೆಂಡತಿಯನ್ನು ತವರೂರಿಗೆ ಕಳಿಸಿದ. ತಾನು ಉಟ್ಟ ಧೋತ್ರದ ತೊಟ್ಟ ಂಗಿಗಳ ಮೇಲೆಯೇ ಮನೆಬಿಟ್ಟು ತನ್ನ ಬಾಲ್ಯ ಸ್ನೇಹಿತರಾದ ಬಾಪೂರಾವ ಅಭ್ಯಂಕ ರು ವಕೀಲಿ ಮಾಡುತ್ತಿರುವ ಹುಬ್ಬಳ್ಳಿಗೆ ಹೋಗಿ ತನ್ನ ದುಸ್ಥಿತಿಯನ್ನು ಅವರಿಗೆ ೕಳಿದ. ಬಾಪೂರಾಯರು ಕೃಷ್ಣರಾಯರಿಗೆ ಸಮಾಧಾನ ಹೇಳಿ ಅವರನ್ನು ತಮ್ಮ ಮನೆ ಟ್ಟಿಟ್ಟುಕೊಂಡು ವಕೀಲಿ ಅಭ್ಯಾಸ ಮಾಡಿಸಿದರು.

ಮಿತ್ರನ ಮನೆಯಲ್ಲಿ ಬಹಳ ದಿವಸವಿರುವದು ಸ್ವಾಭಿಮಾನಿಯಾದ ಕೃಷ್ಣನ ಮನಸ್ಸಿಗೆ ಗ್ಗದಾಯಿತು. “ನನಗೆ ಉಪಜೀವನದ ಮಾರ್ಗ ತೋರಿಸೆಂ”ದು ಮಿತ್ರನಿಗೆ ಕೇಳಿ ಂಡರು. ಅಭ್ಯಂಕರರು ಗುರುಭಕ್ತರಿದ್ದು ಅವರು “ನಿನಗೆ ಮಾರ್ಗದರ್ಶನ ಮಾಡಿಸುವ ೋಗ್ಯತೆ ನನಗಿಲ್ಲ. ನನ್ನ ಗುರುಗಳಾದ ಪಂತ ಮಹಾರಾಜರು ಬೆಳಗಾಂವಿಯಲ್ಲಿರುವರು. ರ ಬಳಿಗೆ ನಿನ್ನನ್ನು ಕರೆದುಕೊಂಡು ಹೋಗುವೆ. ಆ ಸದ್ಗುರುಗಳೇ ನಿನಗೆ ಸನ್ಮಾರ್ಗ ನ್ನು ತೋರಿಸಲು ಸಮರ್ಥರು” ಎಂದು ಹೇಳಿ ಕೃಷ್ಣನನ್ನು ಪಂತ ಮಹಾರಾಜ ಡೆಗೆ ಬೆಳಗಾಂವಿಗೆ ಕರೆದುಕೊಂಡು ಹೋಗಿ ಗುರುಗಳ ದರ್ಶನ ಮಾಡಿಸಿದರು. ದ್ಗುರುಗಳ ತೇಜಃಪುಂಜವಾದ ಮೂರ್ತಿಯನ್ನು ನೋಡಿ ಆರ್ತನಾದ ಕೃಷ್ಣನ ತ್ರಗಳು ಪ್ರಫುಲ್ಲಿತವಾಗಿ ಉದಕಪೂರ್ಣವಾದವು. ಕೂಡಲೇ ಅವನು ಸದ್ಗುರುಗಳ ದಗಳ ಮೇಲೆ ಬಿದ್ದು ನೇತ್ರೋದಕದಿಂದ ಗುರುಗಳ ಪಾದಪ್ರಕ್ಷಾಲನ ಮಾಡಿದನು. ರುಗಳು ಅತ್ಯಂತ ಆರ್ತಸ್ಥಿತಿಯಲ್ಲಿ ಅನನ್ಯಾರ್ತಿಕನಾಗಿ ಬಂದ ಶಿಷ್ಯನನ್ನು ಕೃಪಾಕಟಾಕ್ಷ ದ ಅವಲೋಕಿಸಿ ಅವನ ಮಸ್ತಕದ ಮೇಲೆ ತಮ್ಮ ವರದ ಹಸ್ತವನ್ನಿಟ್ಟು ಎಬ್ಬಿಸಿ ಮ್ಮ ಹತ್ತಿರ ಕುಳ್ಳಿರಿಸಿಕೊಂಡರು. ಅಭ್ಯಂಕರರು ತಮ್ಮ ಮಿತ್ರನು ಚಿಕ್ಕಂದಿನಲ್ಲಿಯೇ ಸಾರಭಾರ ಹೊತ್ತು ಜರ್ಜರಿತನಾಗಿ ಗ್ರಾಮ ತ್ಯಾಗ ಮಾಡಿ ಬಂದಿರುವ ವಿಷಯವನ್ನೆಲ್ಲ ರುಗಳಿಗೆ ಅರುಹಿದರು. ಗುರುಸನ್ನಿಧಿಯಲ್ಲಿ ಶಿಷ್ಯಪ್ರೇಮವು ಕಿಕ್ಕಿರಿದು ತುಂಬಿತು. ಗ ಪಂತಮಹಾರಾಜರು ತಮ್ಮ ಶಿಷ್ಯರಿಗೆ “ಅಭ್ಯಂಕರರು ಹೇಳಿದ ವಿಷಯವನ್ನು ವು ಕೇಳಿರುವಿರಿ. ಈ ತರುಣನು ಸಂಸಾರ ಸಾಗರದ ತೆರೆಗಳ ಹೊಡೆತಕ್ಕೆ ತಲ್ಲಣಿಸಿದವ. ನು ಸಂಸಾರದಲ್ಲಿ ಇಂಥ ನೂರಾರು ಬಡತ ತಿಂದವ. ಸದ್ಗುರುಗಳು ಕೊಟ್ಟ ನೌಕೆಯಲ್ಲಿ

ಕುಳಿತದ್ದರಿಂದ ಅವುಗಳ ಬಾಧೆ ನನಗಾಗಲಿಲ್ಲ. ನೌಕೆಯಲ್ಲಿ ಕುಳಿತ ಮಾತ್ರಕ್ಕೆ ತೆರೆಗ
ಅಬ್ಬರ ತಪ್ಪುವದಿಲ್ಲವೆಂದು ಸದ್ಗುರುವು ಹುಟ್ಟನ್ನು ಕೊಡುವ. ಆ ಹುಟ್ಟಿನಿಂದ ತೆ
ಗಳನ್ನು ತನ್ನ ಶಕ್ತಿಯಿಂದ ತಳ್ಳಿಯುತ್ತಾ ಚುಕ್ಕಾಣಿಯನ್ನು ತಿರುಗಿಸುತ್ತ ನೌಕೆಯನ್
ನಡೆಸಬಲ್ಲವನೇ ಧೀರ. ಇಂಥ ಧೈರ್ಯವು ಗುರುಗಳ ಅನುಗ್ರಹದಿಂದಲೇ ದೊರೆಯುವದು
ಸಾಮಾನ್ಯರು ಸುಖದಲ್ಲಿ ಸಂತೋಷಪಡುವರು. ದುಃಖದಲ್ಲಿ ತಲ್ಲಣಿಸುವರು. ತಂಡುಲಾಪೆ
ಕ್ಷಿಗಳು ಭತ್ತವನ್ನು ಕುಟ್ಟಲೇಬೇಕು. ದುಃಖಗಳು ಭಾವಿ ಸುಖಕ್ಕಾಗಿ ಎಂದು ಬಲ್ಲವರ
ಭಾವಿಸುವರು. ಸಾಧಕರಿಗೆ ದುಃಖಗಳು ಬಹಳ. ಸುವರ್ಣಕ್ಕೆ ತಾಪತಾಡನಗಳಿರುವವು
ಇದರಿಂದ ಸುವರ್ಣವು ತೇಜಃಪುಂಜವಾಗುವದಲ್ಲದೇ ಕಾಂತಿಹೀನವಾಗುವದಿಲ್ಲ
ಕಷ್ಟಗಳು ಸಾಧಕರನ್ನು ಮುಂದೂಡಲು ಬರುವ ಪರೀಕ್ಷೆಗಳು. ಇವುಗಳಲ್ಲಿ ತೇರ್ಗಡೆ
ಹೊಂದಿದವನೇ ಮುಂದುವರೆಯುತ್ತ ಗುರುಗಳ ಅನುಗ್ರಹಕ್ಕೆ ಪಾತ್ರನಾಗುವ" ಎಂದ
ಒಂದು ತಾಸಿನವರೆಗೆ ಅಸ್ಖಲಿತವಾಣಿಯಿಂದ ಉಪದೇಶಿಸಿದರು. ಕೃಷ್ಣನು ಏಕಚಿತ್ತದಿಂ
ಸದ್ಗುರುಗಳ ಬೋಧವನ್ನು ಶ್ರವಣಮಾಡಿದ. ತನ್ನ ಮನೋದೌರ್ಬಲ್ಯಕ್ಕೆ ನಾಚಿದ
"ನನಗೆ ಉಪದೇಶಕೊಟ್ಟು ಅನುಗ್ರಹಿಸಬೇಕು" ಎಂದು ಗುರುಗಳ ಚರಣಗಳ ಮೇ
ಬಿದ್ದನು. ಗುರುಗಳು ಅವನ ಪರಿಸ್ಥಿತಿಯನ್ನರಿತು ತಮ್ಮ ಎದುರಿಗೆ ಕುಳ್ಳಿರಿಸಿಕೊಂಡ
ಮಂತ್ರೋಪದೇಶಮಾಡಿ, "ಉತ್ತರೋತ್ತರ ನಿನ್ನ ಕಲ್ಯಾಣವಾಗುವದು. ನಿನ್ನ ಮನೆತನ
ಅತ್ಯಂತ ಊರ್ಜಿತಾವಸ್ಥೆಗೇರುವದು. ಕೊನೆಗೆ ಯೋಗಿಯಾಗಿ ನನ್ನಲ್ಲಿ ಐಕ್ಯನಾಗು
ಎಂದು ಹರಸಿದರು. ಕೃಷ್ಣನು ಗುರುಗಳೆದುರಿಗೆ ಕೈಜೋಡಿಸಿ ನಿಂತು "ನಾನು ಜೀವ
ಸಾಗಿಸಲಿಕ್ಕೆ ಯಾವ ಮಾರ್ಗವನ್ನು ಹಿಡಿಯಲಿ?" ಎಂದು ವಿಜ್ಞಾಪಿಸಿಕೊಂಡ. ಗುರುಗಳ
ಮೌನ ತಾಳಿ ವಿಚಾರಿಸಿ "ನಿನಗೆ ಯಾವ ಶಾಸ್ತ್ರದಲ್ಲಿ ಪ್ರೇಮವಿದೆ? ಯಾವ ವೃತ್ತಿ
ಯಿಂದ ಉಪಜೀವಿಸಬಯಸುವಿ?" ಎಂದು ಕೇಳಿದರು. ಕೃಷ್ಣ "ಜ್ಯೋತಿಷ್ಯಶಾಸ್ತ್ರದ ಬಗ್ಗೆ
ನನಗೆ ಪ್ರೇಮವಿದೆ—ವಕೀಲ ವೃತ್ತಿಯಿಂದ ಉಪಜೀವಿಸಬಯಸುವೆ" ಎಂದು ಗುರು
ಗಳಿಗೆ ವಿಜ್ಞಾಪಿಸಿಕೊಂಡ. ಗುರುಗಳು "ವಕೀಲಿವೃತ್ತಿ ಮಾಡಲಿಕ್ಕೆ ನಿನಗೆ ಈಗ ಕಾಲ
ನುಕೂಲತೆ ಇಲ್ಲ. ಜ್ಯೋತಿಷ್ಯವೃತ್ತಿಯಿಂದ ಕುಟುಂಬ ಪೋಷಣೆಮಾಡು. ಇನ್ನು
ಸ್ವಲ್ಪ ದಿವಸಗಳಲ್ಲಿ ನಿನಗೆ ಆ ಶಾಸ್ತ್ರದಲ್ಲಿ ಪಾರಂಗತನಾದ ಗುರುವು ಸಿಗುವ. ಗುರು
ಬೋಧವಿಲ್ಲದೇ ಯಾವ ವಿದ್ಯೆಯೂ ಸಿದ್ಧಿಸದು" ಎಂದು ಹೇಳಿ ತಮ್ಮ ಮನೆಯಲ್ಲಿಯೇ
ಇರಲು ಹೇಳಿದರು. ಕೃಷ್ಣನು ಅನನ್ಯಭಕ್ತಿಯಿಂದ ಸದ್ಗುರುಗಳ ಸೇವೆಗೈಯುತ್ತಾ ಆನಂ
ದಿಂದ ಇರಹತ್ತಿದ.

ಕೃಷ್ಣನು ಬೆಳಗಿನ ೫ ಘಂಟೆಗೆ ಎದ್ದು ಸ್ನಾನಮಾಡಿ ಗುರುಗಳ ಸ್ನಾನಕ್ಕೆ ಬಿಸಿನೀರ
ಸಿದ್ಧಪಡಿಸುವ. ಮಜ್ಜನಗ್ರಹಕ್ಕೆ ಗುರುಗಳು ಬಂದೊಡನೇ ಅವರಿಗೆ ಅರ್ಘ್ಯಪಾದ್ಯಗಳನ್ನು
ಕೊಟ್ಟು ಸ್ನಾನ ಮಾಡಿಸುವ. ಒಗೆದ ಬಟ್ಟೆಗಳನ್ನು ತಂದು ನೀರಿಗೆ ಹಾಕಿಕೊಡುವ

ರ ದೇವತಾರ್ಚನೆಗೆ ಬೇಕಾಗುವ ಎಲ್ಲ ಸಾಮಗ್ರಿಗಳನ್ನು ಸಿದ್ಧಪಡಿಸಿ ವ್ಯವಸ್ಥಿತವಾಗಿ ುವ. ಗುರುಗಳು ಆಸನವನ್ನು ಅಲಂಕರಿಸಿದ ಬಳಿಕ ಅವರ ಬಟ್ಟೆಗಳನ್ನು ಹಿತ್ತಲಕ್ಕೆ ದುಕೊಂಡು ಹೋಗಿ ಬಾವಿಯಿಂದ ನೀರು ಸೇದಿ ತಂದು ಸ್ವಚ್ಛವಾಗಿ ಒಗೆದು ಒಣ ಕುವ. ಗುರುಗಳ ದೇವತಾರ್ಚನೆ ಮುಗಿದು ಭಜನೆಯು ಪ್ರಾರಂಭವಾದೊಡನೆ ಬಂದು ಡೊಡನೆ ಭಜನೆ ಮಾಡುವ. ಅವರು ಪ್ರತಿ ನಿತ್ಯ ಶಿಷ್ಯರಿಗೆ ಮಾಡುವ ಬೋಧಗಳನ್ನು ಚಿತ್ತದಿಂದ ಕೇಳುವ. ಅವರ ಮನೆಗೆ ಬಂದ ಅತಿಥಿಗಳ ಸೇವೆಯನ್ನು ಉತ್ಸಾಹದಿಂದ ಡುವ. ಗುರುಗಳು ಹೇಳಿದ ಕೆಲಸಗಳನ್ನೆಲ್ಲ ಮುಂದುವರಿದು ಮಾಡುವ. ಹೀಗೆ ದು ತಿಂಗಳು ಸೇವೆಮಾಡಿ ಅವರ ಬಾಂಧವರ ಶಿಷ್ಯರ ಪರಿಚಯ ಮಾಡಿಕೊಂಡು ರ ಪ್ರೇಮಾದರಗಳಿಗೆ ಪಾತ್ರನಾದ. ಒಂದು ದಿನ ಬೆಳಗಿನ ಭಜನೆ ಮುಗಿದ ನಂತರ ುಗಳು ಕೃಷ್ಣನನ್ನು ಕರೆದು "ನೀನು ನಮ್ಮ ಗ್ರಾಮವಾದ ಬಾಳೆಕುಂದ್ರಿಯಲ್ಲಿರುವ ್ಮ ಅಜ್ಜಂದಿರ ಸಮಾಧಿಯ ಪೂಜೆಮಾಡಿ ಮಧ್ಯಾಹ್ನಕ್ಕೆ ಬರಬೇಕು. ಇಂದು ಅವರ ್ರತಿಥಿ ಇದೆ" ಎಂದು ಆಜ್ಞಾಪಿಸಿದರು. ಕೂಡಲೇ ಕೃಷ್ಣನು ಪೂಜಾಸಾಮಗ್ರಿ ನ್ನು ಸಿದ್ಧಪಡಿಸಿಕೊಂಡು ಹೊರಟ. ಆಗಿನ ಕಾಲಕ್ಕೆ ವಾಹನಗಳ ಅನುಕೂಲತೆಯಿಲ್ಲದ ಣದಿಂದ ನಡೆಯುತ್ತ ಒಂಬತ್ತು ಮೈಲು ಮಾರ್ಗಕ್ರಮಣ ಮಾಡಿದ. ಅಲ್ಲಿಗೆ ೀಗಿ ಸ್ನಾನಮಾಡಿ ಸಮಾಧಿ ಸ್ಥಾನಕ್ಕೆ ಬಂದು ಅತ್ಯಂತ ಭಕ್ತಿಯಿಂದ ಸಮಾಧಿ ಜೆಯನ್ನು ಮಾಡಿದ. ಆಮೇಲೆ ರಾಮೇಶ್ವರ ದೇವಾಲಯಕ್ಕೆ ಹೋಗಿ ದೇವತಾದರ್ಶನ ದುಕೊಂಡು ಸಾಷ್ಟಾಂಗ ನಮಸ್ಕಾರಮಾಡಿದ. ಕೂಡಲೇ ಅಲ್ಲಿಂದ ಹೊರಟು ್ರಡು ಘಂಟೆಗೆ ಗುರುಗಳ ಸನ್ನಿಧಿಗೆ ಬಂದು ತೀರ್ಥ ಪ್ರಸಾದಗಳನ್ನಿಟ್ಟು ಸಾಷ್ಟಾಂಗ ಗಿದ. ಪಂತಮಹಾರಾಜರು "ನೀನು ಪರೀಕ್ಷೆಯಲ್ಲಿ ಪಾಸಾದೆ" ಎಂದು ಉದ್ಗಾರ ದರು.

ೃಷ್ಣನು ಒಂದು ದಿವಸ ನಾಲ್ಕು ಘಂಟೆಯ ಸಮಯಕ್ಕೆ ಬೆಳಗಾಂವಿಯಲ್ಲಿ ಅಡ್ಡಾಡು ಾಗ ಒಬ್ಬ ಬೈರಾಗಿಯ ಭೆಟ್ಟಿಯಾಯಿತು. ಅವನೊಡನೆ ಮಾತನಾಡುತ್ತಿರುವಾಗ ನು ಜ್ಯೋತಿಷಿಯೆಂಬುದು ತಿಳಿಯಿತು. ಕೂಡಲೇ ಗುರುವಾಕ್ಯ ಸ್ಮರಣೆಗೆ ಬಂದು ಆ ್ಯೋತಿಷಿಯ ಬೆನ್ನು ಹತ್ತಿದ. ಅವನು ಒಬ್ಬ ಶ್ರೀಮಂತ ಗೃಹಸ್ಥನ ಮನೆಗೆ ಹೋದ. ಆ ಗೃಹಸ್ಥನನ್ನು ತನ್ನ ಎದುರಿಗೆ ಕುಳ್ಳಿರಿಸಿಕೊಂಡು, ಅವನ ಜನ್ಮಕುಂಡಲಿಯನ್ನು ದ. ಅದನ್ನು ನೋಡಿ ಜನ್ಮಫಲವನ್ನು ಹೇಳಿದ. ಶ್ರೀಮಂತನು ಆಶ್ಚರ್ಯಯುಕ್ತ ಿ ಅವನು ಬರೆದ ಜನ್ಮಕುಂಡಲಿಯನ್ನು ತೆಗೆದುಕೊಂಡ. ಹತ್ತು ರೂಪಾಯಿ ಸಂಭಾ ಕೊಟ್ಟ. ಬೈರಾಗಿಯು ಅಲ್ಲಿಂದ ತೆರಳಿದ. ಕೃಷ್ಣನು ಅವನ ಬೆನ್ನು ಹತ್ತಿ ಹೋಗಿ ನ ವಾಸಸ್ಥಳವನ್ನು ಅರಿತ. ಸಾಯಂಕಾಲಕ್ಕೆ ಗುರುಗಳ ಬಳಿಗೆ ಬಂದು ಗುರುಗಳಿಗೆ ್ಯೆರಾಗಿಯು ಜ್ಯೋತಿಷ್ಯಶಾಸ್ತ್ರದ ಅದ್ಭುತ ಶೋಧವನ್ನು ಅರುಹಿದ. "ಆ ಬೈರಾಗಿಯ

ಅನುಗ್ರಹ ಪಡೆದು ಜ್ಯೋತಿಷ್ಯ ಶಾಸ್ತ್ರದ ಅಧ್ಯಯನ ಮಾಡುವೆ. ಅಪ್ಪಣೆ ಕೊ
ಬೇಕೆಂ"ದು ಬೇಡಿಕೊಂಡ. ತ್ರಿಕಾಲಜ್ಞಾನಿಗಳಾದ ಪಂತರು "ನಿನ್ನ ಅಭಿಲಾಷೆ ಕೈಗೂ
ತಲ್ಲವೇ ?" ಎಂದು ಹಸನ್ಮುಖಿಗಳಾಗಿ ಅವನೊಡನೆ ಹೋಗಲು ಅಪ್ಪಣೆ ಕೊಟ್ಟರು. ಅ
ಕೃಷ್ಣನು "ನಿಮ್ಮ ಪಾದದರ್ಶನ ಯೋಗವು ಎಂದು ಲಭಿಸುವದು ?" ಎಂದು ಕೇಳಿ
ಅದಕ್ಕೆ ಗುರುಗಳು "ಇನ್ನು ನಮ್ಮ ದರ್ಶನದ ಅವಶ್ಯಕತೆ ಉಳಿದಿರುವದಿಲ್ಲ. ಶ್ರೀಗಾ
ಗಾಪುರ ಕ್ಷೇತ್ರಕ್ಕೆ ಹೋಗಿ ಗುರುಚರಿತ್ರೆಯ ಸಪ್ತಾಹ ಮಾಡು. ಅಲ್ಲಿ ನಿನಗೆ ಧೃಷ್ಟಾ
ವಾಗುವದು" ಎಂದು ಹೇಳಿದರು. ಜ್ಯೋತಿಷ್ಯ ಶಾಸ್ತ್ರಾಧ್ಯಯನದಲ್ಲಿ ಆತುರನಾ
ಕೃಷ್ಣನು ಗುರುಗಳ ಅಪ್ಪಣೆ ಪಡೆದು ಮರುದಿವಸ ಬೆಳಿಗ್ಗೆ ಬೈರಾಗಿಯು ಇರುವ ಧವ
ಶಾಲೆಗೆ ಬಂದ. ಬೈರಾಗಿಯು "ನಾನು ಧನಾರ್ಜನೆಗೆ ಹೊರಟಿಲ್ಲ. ಉದರಂಭರಣದನುಟ್ಟ
ನಾನು ಜ್ಯೋತಿಷ್ಯಶಾಸ್ತ್ರ ಉಪಯೋಗಿಸುವೆ. ಪಟ್ಟಣದಲ್ಲಿ ಮೂರು ದಿವಸ, ಹಳ್ಳಿಯ
ಒಂದು ದಿವಸ ಇರುವವ. ನನ್ನೊಡನೇ ಸಂಚರಿಸುವದು ನಿನಗೆ ಸಾಧ್ಯವಿಲ್ಲ" ಎಂದ. ಅ
ಕೃಷ್ಣನು "ನನಗೆ ಸುಖಾಭಿಲಾಷೆಯು ಇಚ್ಛೆಯಿಲ್ಲ. ಕಷ್ಟಸಹಿಷ್ಣುತೆ ನನ್ನಲ್ಲಿದೆ. ತ
ಬೆನ್ನು ಹತ್ತಿ ಬರುವೆ" ಎಂದ. ಬೈರಾಗಿಯು "ನಾನು ನಿನಗೆ ಜ್ಯೋತಿಷ್ಯಶಾಸ್ತ್ರ
ಅಧ್ಯಯನ ಮಾಡಿಸುವದಿಲ್ಲ. ನನ್ನ ಕೃತಿಯಿಂದಲೇ ಅದನ್ನು ನೀನು ತಿಳಿದುಕೊ
ತಕ್ಕದ್ದು" ಎಂದು ಹೇಳಿದ. "ಹಾಗೆಯೇ ಆಗಲಿ" ಎಂದು ಕೃಷ್ಣನು ಆ ಬೈರಾಗಿ
ಬೆನ್ನು ಹತ್ತಿ ಆರು ತಿಂಗಳವರೆಗೆ ಸಂಚರಿಸಿದ. ಅವನು ಅಲ್ಲಲ್ಲಿ ಮುಖಲಕ್ಷಣದ ಮೇಲೆ ಜ
ಕುಂಡಲಿಯನ್ನು ಬರೆಯುವದನ್ನು ನೋಡುತ್ತ ತನ್ನ ಬುದ್ಧಿಬಲದಿಂದ ಅವನ ಶಾಸ್ತ್ರ
ಮರ್ಮವನ್ನು ಅರಿತ. ತನಗೆ ಸಂಶಯ ಬಂದಲ್ಲಿ ಬೈರಾಗಿಯ ಮುಖದಿಂದ ಸಂಶ
ಪರಿಹಾರ ಮಾಡಿಕೊಳ್ಳುವ. ತಾನು ನಿರ್ಧರಿಸಿದ ವಿಷಯವನ್ನು ಮಹಾರಾಷ್ಟ್ರ ಭಾ
ಯಲ್ಲಿ ಬರೆದಿಡುವ. ಹೀಗೆ ಆರು ತಿಂಗಳು ಸಂಚರಿಸಿ ಮುಖ ಜ್ಯೋತಿಷ್ಯಶಾಸ್ತ್ರದ ಪೂ
ಅಧ್ಯಯನ ಮುಗಿಸಿದ. ಬಳಿಕ ಬೈರಾಗಿಯ ಅಪ್ಪಣೆ ಪಡೆದು ತನ್ನ ಮಿತ್ರರಾದ ಅಭ್ಯಂ
ವಕೀಲರ ಬಳಿಗ ಬಂದು ತಾನು ಸಂಪಾದಿಸಿರುವ ಎಲ್ಲ ವಿದ್ಯೆಯನ್ನು ಅವರಿಗೆ ಅರುಹಿ
ಅವರು ಆನಂದಭರಿತರಾಗಿ ಆ ಶಾಸ್ತ್ರವನ್ನು ಪ್ರಯೋಗಮಾಡಿ ತೋರಿಸಿ ಪ್ರಸಿದ್ಧಿ ಪ
ಬೇಕೆಂದು ಇಚ್ಛಿಸಿದರು.

ಅಭ್ಯಂಕರ ಬಾಪೂರಾಯರಿಗೆ ಮಿರಜ ಸಂಸ್ಥಾನಾಧಿಪತಿಗಳಾದ ಶ್ರೀಮಂ
ಬಾಳಾಸಾಹೇಬ ಪತಿವರ್ಧನರವರ ವಿಶೇಷ ಪರಿಚಯವಿತ್ತು. ಸಂಸ್ಥಾನಾಧಿಪ
ಮೇಧಾವಿಗಳಿದ್ದು ಅನೇಕ ವಿದ್ವಾಂಸರಿಗೆ ಆಶ್ರಯದಾತೃಗಳಾಗಿದ್ದರು. ಅಭ್ಯಂಕರ
ತಮ್ಮ ಮಿತ್ರರು ಸಂಬೋಧಿಸಿದ ಮುಖ ಜ್ಯೋತಿಷ್ಯ ಶಾಸ್ತ್ರವನ್ನು ಶ್ರೀಮಂತ
ತೋರಿಸಿ ಅವರ ಮುಖಾಂತರ ಆ ಶಾಸ್ತ್ರವನ್ನು ಪ್ರಸಿದ್ಧಿಪಡಿಸಬೇಕೆಂದು ಕೃಷ್ಣರಾ
ರೊಂದಿಗೆ ಮಿರಜಿಗೆ ಹೊರಟರು. ಅಲ್ಲಿ ತಮ್ಮ ಮಿತ್ರರ ಮನೆಯಲ್ಲಿ ಇಳಿದುಕೊಂ

ದಿವಸ ಗೋಕಾಕರೊಂದಿಗೆ ಸಂಸ್ಥಾನಾಧಿಪತಿಗಳ ಬಳಿಗೆ ಬಂದರು. ಅವರು ಂಕರರನ್ನು ಅವರ ಮಿತ್ರರನ್ನು ತಮ್ಮ ಬಳಿಯಲ್ಲಿ ಕುಳ್ಳಿರಿಸಿಕೊಂಡು, ಬಂದಿರುವ ರ್ಯವನ್ನು ವಿಚಾರಿಸಿದರು. ಆಗ ಅಭ್ಯಂಕರರವರು ಹತ್ತಿರ ಕುಳಿತಿರುವ ಕೃಷ್ಣರಾಯ ತೋರಿಸಿ "ಇವನು ನನ್ನ ಮಿತ್ರ. ತಮ್ಮ ಸಂಸ್ಥಾನದ ಭಾಗವಾದ ಲಕ್ಷ್ಮೇಶ್ವರ . ಇವನೊಂದು ಹೊಸ ಸಂಶೋಧನೆ ಮಾಡಿರುವ. ಅದನ್ನು ಸನ್ನಿಧಿಗೆ ರ್ಪಿಸಲು ಬಂದಿರುವ" ಎಂದು ಹೇಳಿದರು. ಕೃಷ್ಣರಾಯರು ತಾವು ಮಹಾರಾಷ್ಟ್ರ ಷೆಯಲ್ಲಿ ಬರೆದ ಮುಖಜ್ಯೋತಿಷ್ಯ ಶಾಸ್ತ್ರವನ್ನು ಶ್ರೀಮಂತರ ಕೈಯಲ್ಲಿಕೊಟ್ಟು ದೊಂದು ಜ್ಯೋತಿಷ್ಯಶಾಸ್ತ್ರದಲ್ಲಿ ಇಂದಿನವರೆಗೆ ಉಪಲಬ್ಧವಿಲ್ಲದ ಗ್ರಂಥ. ಇದರ ಾಯದಿಂದ ಮುಖಲಕ್ಷಣದ ಮೇಲಿಂದ ಶುದ್ಧವಾದ ಜನ್ಮಕುಂಡಲಿಯನ್ನು ಬರೆಯಲು ುವದು" ಎಂದು ಹೇಳಿದರು. ಸಂಸ್ಥಾನಾಧಿಪರು ಆಶ್ಚರ್ಯಚಕಿತರಾಗಿ "ಅಲ್ಲಿದ್ದ ್ರರ ಜನ್ಮಕುಂಡಲಿಯನ್ನು ತೆಗೆಯಲು ಆಜ್ಞಾಪಿಸಿದರು. ಕೃಷ್ಣರಾಯರು ಅವರನ್ನು ರಿಗೆ ಕುಳ್ಳಿರಿಸಿಕೊಂಡು ಹದಿನೈದು ನಿಮಿಷದಲ್ಲಿ ಅವರ ಜನ್ಮಕುಂಡಲಿಯನ್ನು ತೆಗೆದು ಮಂತರ ಕೈಯಲ್ಲಿಟ್ಟರು. ಆಗ ಸಂಸ್ಥಾನಾಧಿಪರು ತಮ್ಮ ಕಾರಭಾರಿಯನ್ನು ಮನೆಗೆ ಿ ಅವರ ಜನ್ಮಕುಂಡಲಿಯನ್ನು ತರಿಸಿದರು. ಅದನ್ನೂ ಕೃಷ್ಣರಾಯರು ತೆಗೆದಿಟ್ಟ ಡಲಿಯನ್ನೂ ಪರೀಕ್ಷಿಸಲು ಎರಡೂ ಕುಂಡಲಿಗಳು ಒಂದೇ ಬಗೆಯಾಗಿದ್ದವು. ಆಗ ್ಯಪಕ್ಷಪಾತಿಗಳಾದ ಸಂಸ್ಥಾನಾಧಿಪರು ಆನಂದಭರಿತರಾಗಿ "ನಾನು ಈ ಗ್ರಂಥವನ್ನು ್ಯಯನ ಮಾಡಬಯಸುವೆ. ನಿನ್ನ ಮಿತ್ರರು ನನ್ನೊಡನೆ ಭೋಜನ ಮಾಡುತ್ತ ಯೇ ಇರಲಿ" ಎಂದು ಅಭ್ಯಂಕರರಿಗೆ ಹೇಳಿದರು. ಆಗ ಅವರು ಸಂತೋಷಯುಕ್ತ ತಮ್ಮ ಮಿತ್ರನಿಗೆ ರಾಜಾಶ್ರಯ ದೊರೆಯಿತೆಂದು ಹಿಗ್ಗಿ ಸಂಸ್ಥಾನಾಧಿಪರ ಅಪ್ಪಣೆ ಮು ಹೊರಟು ಹೋದರು.

ಕೃಷ್ಣರಾಯರು ಒಂದು ತಿಂಗಳವರೆಗೆ ಸಂಸ್ಥಾನಿಕರ ಆಶ್ರಯದಲ್ಲಿದ್ದು ಮುಖ ್ಯೋತಿಷ್ಯದ ವಿಷಯವನ್ನು ಅವರ ಮನವರಿಕೆ ಮಾಡಿದರು. ಶ್ರೀಮಂತ ಬಾಳಾಸಾಹೇ ಅದನ್ನು ತಮ್ಮ ಕೈಯಿಂದಲೇ ಬರೆದುಕೊಂಡರು. ತಮ್ಮ ಸ್ವಂತ ಅಚ್ಚುಕೂಟದಲ್ಲಿ ್ಚು ಮಾಡಿಸಿದರು. ಮುಂದೆ ಸಂಸ್ಥಾನದಲ್ಲಿದ್ದ ಸಂಸ್ಕೃತ ಪಂಡಿತರಿಂದ ಅದನ್ನು ಸಂಸ್ಕೃತ ್ಲೋಕರೂಪದಲ್ಲಿ ಬರೆಯಿಸಿ ಪ್ರಸಿದ್ಧಿಪಡಿಸಿದರು. ಸಂಸ್ಥಾನಿಕರು ಕೃಷ್ಣರಾಯರಿಗೆ "ಮುಖ ್ಯೋತಿಷಿ" ಎಂಬ ಬಿರುದನ್ನು ಕೊಟ್ಟು ಸನ್ಮಾನಿಸಿದರು. ಬಳಿಕ ಕೃಷ್ಣರಾಯರ ಕೈಯಲ್ಲಿ ಮ ಓಲೆ ಬರೆದುಕೊಟ್ಟು ಅವರನ್ನು ಬಡೋದೆಯ ಸಂಸ್ಥಾನಾಧಿಪತಿಗಳಾದ ಶ್ರೀಮಂತ ಯಾಜಿರಾವ್ ಗಾಯಕವಾಡರ ಕಡೆಗೆ ಕಳಿಸಿದರು. ಕೃಷ್ಣರಾಯರು ಅಲ್ಲಿ ತಾವು ಬರೆದ ಸ್ತ್ರದ ಪ್ರತ್ಯಕ್ಷತೆಯನ್ನು ತೋರಿಸಿದರು. ಶ್ರೀಮಂತ ಗಾಯಕವಾಡರೂ ಎರಡುನೂರು ಪಾಯಿ ಸಂಭಾವನೆ ಇತ್ತು ಸನ್ಮಾನಿಸಿ ಕಳಿಸಿದರು. ಹೀಗೆ ಕೃಷ್ಣರಾಯರು ರಾಜ

ಮಾನ್ಯರಾಗಿ ಪ್ರಸಿದ್ಧಿ ಪಡೆದು ಮಹಾರಾಷ್ಟ್ರ ಕರ್ನಾಟಕದಲ್ಲಿ ಸಂಚರಿಸುತ್ತ ಆಯಾ
ವೃತ್ತಿಯಿಂದ ದೊರೆತ ಹಣದಿಂದ ತಮ್ಮ ಕುಟುಂಬಪೋಷಣೆ ಮಾಡುವ ಸಾಮಥ
ಪಡೆದು ತಮ್ಮ ಮಾವಂದಿರ ಬಳಿಗೆ ಬಂದರು. ಬಳಿಕ ಲಕ್ಷ್ಮೇಶ್ವರದಲ್ಲಿದ್ದು ಸಂಸಾರ
ನಡೆಸಬೇಕೆಂದರು. ಆದರೆ ಅವರ ತಾಯಿ ತಮ್ಮಂದಿರು ಎದುರಾಳಿಗಳಾಗಿದ್ದರಿಂದ
ನಿಲ್ಲಲು ಸಾಧ್ಯವಾಗಲಿಲ್ಲ. ಆದ್ದರಿಂದ ತಮ್ಮ ಮಾವಂದಿರಿರುವ ಸವಣೂರಿನಲ್ಲಿ
ಕುಟುಂಬದವರನ್ನು ಇಟ್ಟು ಅವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತ ಜ್ಯೋತಿ
ವೃತ್ತಿಯಿಂದ ಉಪಜೀವಿಸಹತ್ತಿದರು. ಕೃಷ್ಣರಾಯರ ಮಾವ ಪಾಂಡುರಂಗ ಜೋಯಿಸ
ಗಂಡುಮಕ್ಕಳಿರಲಿಲ್ಲ. ಒಬ್ಬಳೇ ಹೆಣ್ಣು ಮಗಳು. ಆದ್ದರಿಂದ ಮೊಮ್ಮಕ್ಕಳನ್ನು ಅತ್ಯ
ಪ್ರೇಮದಿಂದ ಸಲುಹಿದರು.

ಕೃಷ್ಣರಾಯರು ತಮ್ಮ ತಂಗಿಯಾದ ಅಕ್ಕವ್ವನನ್ನು ನೋಡಲು ಸಾಂಸಿಗೆ ಹೋದ
ಆಗ ಅವರ ಬೀಗರಾದ ನರಸನಗೌಡರು ಗಾಣಗಾಪುರಕ್ಕೆ ಹೊರಡಲು ಅಣಿಯಾಗಿದ್ದ
ಬೀಗನು ಬಂದದ್ದನ್ನು ನೋಡಿ "ನೀನು ನಮ್ಮ ಜೊತೆಗೆ ಗಾಣಗಾಪುರಕ್ಕೆ ಬರಬೇಕ
ಎಂದು ಆಗ್ರಹ ಮಾಡಿದರು. ಕೃಷ್ಣರಾಯರಿಗೆ ತಮ್ಮ ಗುರುಗಳಾದ ಪಂತಮಹಾರಾಜ
"ಗಾಣಗಾಪುರಕ್ಕೆ ಹೋಗು. ಅಲ್ಲಿ ನಿನಗೆ ದೃಷ್ಟಾಂತವಾಗುವದು" ಎಂದು ಹೇ
ಮಾತು ಸ್ಮರಣೆಗೆ ಬಂದಿತು. ತಮ್ಮ ತಂಗಿ ಬೀಗರ ಜೊತೆಗೆ ಗಾಣಗಾಪುರಕ್ಕೆ ಹೋದ
ಅಲ್ಲಿ ಮಧುಕರಿ ವೃತ್ತಿಯಿಂದ ಉಪಜೀವಿಸುತ್ತ ಸದ್ಗುರು ಚರಿತ್ರೆಯ ಸಪ್ತಾಹ ಪ್ರಾರ
ಸಿದರು. ಏಳನೆಯ ದಿವಸ ಸಪ್ತಾಹ ಮುಗಿಸಿ ಸದ್ಗುರುಗಳ ಪಾದಪೂಜೆ ಸಂತಪ
ಮಾಡಿಸಿದರು. ಅಂದು ಬೆಳಗಿನ ಸಮಯದಲ್ಲಿ ಒಂದು ಅದ್ಭುತ ಸ್ವಪ್ನವು ಬಿದ್ದಿ
ಸಂಗಮದಲ್ಲಿ ಸ್ನಾನ ಮಾಡುತ್ತಿರುವಾಗ ದಡದಿಂದ ಒಂದು ಹೆಬ್ಬುಲಿಯು ತಿನ್ನ
ಬಾಯಿ ತೆರೆದು ಬಂದಂತಾಯಿತು. ಆಗ ದಿಕ್ಕು ತೋಚದೆ ಆ ವ್ಯಾಘ್ರದ ಪಾದಗ
ಬಿದ್ದ ಕೂಡಲೆ ಹುಲಿಯ ರೂಪ ಮಾಯವಾಗಿ ಒಬ್ಬ ಯತಿಯು ಎದುರಿಗೆ ನಿಂತು "ನಿ
ಮಾವಂದಿರು ಅತ್ಯಂತ ಸಾಧುಗಳು. ಅವರನ್ನು ಅವರ ಮಗಳನ್ನು ಯೋಗ್ಯ ರೀತಿಯಿ
ಕಾಪಾಡಿದರೆ ನಿನ್ನ ಕಲ್ಯಾಣವಾಗುವದು. ನೀನು ಸದ್ಗುರುಗಳ ಉಪದೇಶ ಹೊಂದಿದವನ
ಇನ್ನು ನಿನ್ನ ಕಾಡುವ ಕಾಲ ಮುಗಿದಿದೆ. ಸದ್ವರ್ತನದಿಂದ ಸಂಸಾರ ಸಾಗಿಸಿ ಶಾ
ಪಡೆ" ಎಂದು ಹರಸಿದಂತಾಯಿತು. ಕೂಡಲೇ ಎಚ್ಚತ್ತು ಕಣ್ದೆರೆದು ಗುರುಗಳ ಆಜ್ಞೆಯ
ನಡೆಯಲು ನಿರ್ಧರಿಸಿದರು. ಯಾತ್ರೆಯನ್ನು ಮುಗಿಸಿಕೊಂಡು ಸವಣೂರ ಗ್ರಾಮ
ಬಂದರು.

ಕೃಷ್ಣರಾಯರಿಗೆ ಇರ್ವರು ಹೆಣ್ಣು ಮಕ್ಕಳು, ಬಳಿಕ ಇಬ್ಬರು ಗಂಡು ಮಕ್ಕಳೂ
ಪ್ರಪಂಚ ವಿಸ್ತಾರವಾಗಿತ್ತು. ಅದರಿಂದ ಕುಟುಂಬದವರೊಡನೇ ಲಕ್ಷ್ಮೇಶ್ವರಕ್ಕೆ ಬಂದ
ದತ್ತಕ ತಂದೆ ಬರೆದಿಟ್ಟ ಲೇಖದಂತೆ ಹೊಲಮನೆಗಳ ಹಿಸೆಯನ್ನು ಮಾಡಿಕೊಳ್ಳ

ಮು ತಾಯಿಗೂ ತಮ್ಮಂದಿರಿಗೂ ಹೇಳಿದರು. ಅದಕ್ಕೆ ಅವರು ಒಪ್ಪಲಿಲ್ಲ. ಆಗ ಜನನ್ನು ಕರೆಯಿಸಿ ಹೊಲ ಮನೆಗಳ ಹಿಸೆ ಮಾಡಿಸಿ ತಾಯಿ ತಮ್ಮಂದಿರಿಗೆ ಬೇಡಿದ ಗವನ್ನು ಅವರಿಗೆ ಕೊಟ್ಟರು. ತಮ್ಮ ಪಾಲಿಗೆ ಬಂದ ಮನೆಯಲ್ಲಿ ಗೋಡೆಯನ್ನು ಸಹತ್ತಿದರು. ಆಗ ತಾಯಿಯು ಅಡ್ಡ ಬಂದಳು. ತಮ್ಮನು ಕೆನ್ನೆಗೆ ಬಲವಾಗಿ ಡೆದನು. ಇದನ್ನೆಲ್ಲವನ್ನು ಸಹಿಸಿಕೊಂಡು ಮಿತ್ರರ ಸಹಾಯದಿಂದ ತಮ್ಮ ಭಾಗದ ನೆಯನ್ನು ಪ್ರತ್ಯೇಕಿಸಿ ಹೆಂಡರು ಮಕ್ಕಳೊಂದಿಗೆ ಅಲ್ಲಿ ಇರಹತ್ತಿದರು. ತಾಯಿ ಮ್ಮಂದಿರು ಪ್ರತಿ ನಿತ್ಯ ಕಾಡುತ್ತಲೇ ಇದ್ದರು. ಮಿರಜ ಸಂಸ್ಥಾನಿಕರಿಗೆ ಲಕ್ಷ್ಮೇಶ್ವರ ವಕೀಲಿ ಮಾಡಲಿಕ್ಕೆ ಸನದು ಕೊಡಬೇಕೆಂದು ಹೇಳಿಕೊಂಡರು. ಅದು ದೊರೆಯ . ಸ್ವಜನರು ವಿರೋಧಿಗಳಾಗಿದ್ದರಿಂದ ಮನೆಯನ್ನು ಬಿಟ್ಟು ಪರಗ್ರಾಮಕ್ಕೆ ಹೋಗು ತಿದ್ದರಿಂದ ಜ್ಯೋತಿಷ್ಯವೃತ್ತಿಯು ಸಾಗದಂತಾಯಿತು. ಬರಬಿದ್ದು ಹೊಲದ ತ್ಪನ್ನ ಬರಲಿಲ್ಲ. ಹೆಂಡತಿಯೂ ಚಿಕ್ಕ ಮಗನೂ ಬೇನೆಯಿಂದ ಬಹಳೇ ಬಳಲ ಹತ್ತಿದರು. ಗೆ ಅನೇಕ ತೊಂದರೆಗಳು ಬಂದು ಕುಟುಂಬ ಪೋಷಣೆಗೆ ತ್ರಾಸವಾಗಹತ್ತಿದ್ದರಿಂದಲೂ ರ ಅತ್ತೆ ಮಾವಂದಿರೂ ತಮ್ಮ ಬಳಿಗೆ ಕಳಿಸೆಂದು ದುಂಬಾಲು ಬಿದ್ದದ್ದರಿಂದಲೂ ಶ್ವರದಲ್ಲಿ ಒಂದು ವರ್ಷ ಪ್ರಪಂಚ ಸಾಗಿಸಿ ಹೆಂಡರು ಮಕ್ಕಳನ್ನು ಸವಣೂರಿ ಟ್ಟು ಮತ್ತೆ ಜ್ಯೋತಿಷ್ಯವೃತ್ತಿಯನ್ನು ಸ್ವೀಕರಿಸಿ ಮಾವಂದಿರಿಗೆ ನೆರವಾಗಹತ್ತಿದರು. ಕೃಷ್ಣರಾಯರ ಹಿರಿಯ ಮಗಳು ವಿವಾಹದ ವಯಸ್ಸಿನವಳಾಗಿದ್ದಳು. ಆಗ ಅವರು ಗನನ್ನು ಶೋಧಿಸತೊಡಗಿದರು. ಆಗ ನಾನು ಹಾನಗಲ್ಲ ತಾಲುಕು ಶೇಷಗಿರಿ ಮುದಲ್ಲಿ ಮುಖ್ಯಾಧ್ಯಾಪಕನಾಗಿದ್ದೆ. ನಮ್ಮೂರಿಗೆ ಬಂದ ಕೃಷ್ಣರಾಯರು ಹದಿನೈದು ಷಗಳಲ್ಲಿ ನನ್ನ ಜನ್ಮಕುಂಡಲಿಯನ್ನು ತೆಗೆದರು. ನನ್ನ ಕುಂಡಲಿಗೂ ತಮ್ಮ ಮಗಳ ಡಲಿಗೂ ದಾಂಪತ್ಯಯೋಗವಿರುವದನ್ನರಿತರು. ಮದುವೆ ಗೊತ್ತಾಗಿ ನಾನು ಕೃಷ್ಣ ಯರ ಅಳಿಯನಾದೆ.

೯೧೪ರಲ್ಲಿ ಆದ ಮೊದಲನೆಯ ಮಹಾಯುದ್ಧಕ್ಕೆ ಸವಣೂರ ನವಾಬಸಾಹೇಬರು ಟೀಶ ಸರಕಾರದ ಆಮಂತ್ರಣದ ಮೇರೆಗೆ ಬಸರಾಕ್ಕೆ ತೆರಳಿದರು. ಬೇಗಮ್ ಹೇಬರು ಸಂಸ್ಥಾನದ ಕಾರಭಾರ ಸಾಗಿಸಹತ್ತಿದರು. ಕೃಷ್ಣರಾವ ಕಲಘಟಗಿ ಎಲ್.ಸಿ. ರು ಸಂಸ್ಥಾನದ ದಿವಾಣರಾಗಿದ್ದರು. ಕೃಷ್ಣರಾಯರು ಅವರಿಗೆ ಭೆಟ್ಟಿಯಾಗಿ ವಕೀಲಿ ಡಲಿಕ್ಕೆ ಸನದುಕೊಡಿಸಬೇಕೆಂದು ಹೇಳಿಕೊಂಡರು. ಗೋಕಾಕರವರ ವಿದ್ವತ್ತೆಯು ಣ ಸಾಹೇಬರಿಗೆ ಗೊತ್ತಿತ್ತು. ಅವರು ಬೇಗಮ್ ಸಾಹೇಬರ ಬಳಿಗೆ ಗೋಕಾಕ ರನ್ನು ಕರೆದುಕೊಂಡು ಹೋಗಿ ಅವರ ಪ್ರಾಮಾಣಿಕತೆ ವಿದ್ವತ್ತೆಗಳನ್ನು ತಿಳಿಸಿ ಲಿ ವೃತ್ತಿಯ ಸನದು ಕೊಡಿಸಿದರು. ೧೯೧೪ರ ಅಗಸ್ಟ ತಿಂಗಳಲ್ಲಿ ವಕೀಲಿ ತ್ತಿಯನ್ನು ಪ್ರಾರಂಭಿಸಿ ಆಗ ಅಲ್ಲಿ ವೃದ್ಧ ವಕೀಲರಾಗಿದ್ದ ವೆಂಕಟರಮಣಾಚಾರ್ಯ

ರಿಂದ ಸಹಾಯ ಪಡೆದು ಉತ್ಸಾಹದಿಂದ ಕೆಲಸ ಮಾಡಹತ್ತಿದರು. ಗೋಕಾಕರವ ಕರ್ತವ್ಯನಿಷ್ಠತೆ, ಪ್ರಾಮಾಣಿಕತನ, ಸ್ಪಷ್ಟೋಕ್ತಿ, ಸಭ್ಯವೃತ್ತಿ ಮೊದಲಾದ ಸದ್ಗು ಗಳಿಂದ ಒಂದೇ ವರ್ಷದಲ್ಲಿ ಶ್ರೇಷ್ಠ ವಕೀಲರೆಂದು ಪ್ರಸಿದ್ಧರಾದರು. ಅವರು ಅ ಮಾವಂದಿರನ್ನು ತಾಯಿ ತಂದೆಗಳಂತೆ ಭಾವಿಸಿ ಅವರನ್ನು ತಮ್ಮ ಬಳಿಯಲ್ಲಿಯೇ ಇಟ ಕೊಂಡರು. ಮಿರಜ ಸಂಸ್ಥಾನಾಧಿಪತಿಗಳೂ ಲಕ್ಷ್ಮೇಶ್ವರದಲ್ಲಿ ವಕೀಲಿ ಮಾಡಲಿ ಸನದು ಕೊಟ್ಟರು. ಸವಣೂರ ಕೋರ್ಟು ಸಿಗ್ಗಾಂವಿ ತಾಲ್ಲೂಕ ಕಚೇರಿಗಳಲ್ಲಿ ಹೆಚ ಉತ್ಪನ್ನ ಬರಹತ್ತಿದ್ದರಿಂದ ಲಕ್ಷ್ಮೇಶ್ವರಕ್ಕೆ ಅವರು ಹೋಗಲಿಲ್ಲ. ಇವರು ತಮ್ಮ ಪಕ್ಷಕಾ ರೊಡನೆ ವಿನಯದಿಂದಲೂ ಪ್ರಾಮಾಣಿಕತನದಿಂದಲೂ ನಡೆದುಕೊಳ್ಳುತ್ತಿದ್ದ ಇವರ ಪ್ರತಿಪಕ್ಷಿಗಳಾದ ಎಲ್.ಎಲ್.ಬಿ. ಪರೀಕ್ಷೆ ಪಡೆದ ವಕೀಲರು ಇವರ ಕಾಯ ಪಾಂಡಿತ್ಯಕ್ಕೆ ಬೊಟ್ಟು ಕಚ್ಚಹತ್ತಿದರು. ನಾಲ್ಕು ವರ್ಷ ವಕೀಲಿ ಮಾಡುವಷ್ಟರ ಇವರು ಒಳ್ಳೆ ಸ್ಥಿತಿವಂತರಾದರು.

೧೯೧೭ರಲ್ಲಿ ಇವರ ಅತ್ತೆಯವರೂ ಚಿಕ್ಕಮಗನೂ ಕಾಲವಾದದ್ದರಿಂದ ಅತ್ಯ ದುಃಖ ಹೊಂದಿದರು. ಆಗ ತಾವಿರುವ ಮನೆಯನ್ನು ಬಿಟ್ಟು ೧೪ ವರ್ಷಗಳವರೆಗೆ ಒಂ ಮನೆಯನ್ನು ಬಾಡಿಗೆಯಿಂದ ಹಿಡಿದರು. ಆ ಮನೆಯಲ್ಲಿ ಎಲ್ಲ ಬಗೆಯ ಸುಧಾರಣೆ ಮಾ ವಿದ್ಯುದ್ದೀಪ ಹಾಕಿಸಿ ವಾಸಮಾಡಿದರು. ಒಮ್ಮೆ ಸವಣೂರ ಸಂಸ್ಥಾನದಲ್ಲಿದ್ದ ಒಂ ಹಳ್ಳಿಯ ಶ್ರೀಮಂತನೊಬ್ಬನು ತನ್ನಲ್ಲಿ ದುಡಿಯುತ್ತಿದ್ದ ಆಳಿಗೆ ಉನ್ಮತ್ತನಾಗಿ ಪಾದ ಯಿಂದ ಹೊಡೆದು ಅವಮರ್ಯಾದೆ ಮಾಡಿದ. ಆ ಹಳ್ಳಿಯ ಕೆಲವು ಸಭ್ಯಗೃಹಸ್ಥರು ಬಡವನ ಪಕ್ಷಕಟ್ಟಿ ಗೋಕಾಕರವರ ಬಳಿಗೆ ಬಂದು ೨೫ ರೂಪಾಯಿ ಫೀಕೊಟ ಮಾನಹಾನಿಯ ಫಿರ್ಯಾದಿ ಮಾಡಿಸಿದರು. ಗೋಕಾಕರವರ ಕಾರ್ಯಕುಶಲತೆಯಿ ಆ ಸಾವುಕಾರನು ಮಾಡಿದ ಅಪರಾಧ ಸಿದ್ಧವಾಗುವ ಪ್ರಸಂಗ ಬಂದಿತು. ಆಗ ಅವ ಗಾಬರಿಯಾಗಿ, ಸವಣೂರಲ್ಲಿರುವ ವಕೀಲರ ಪಕ್ಷಕಾರನಾದ ಸಾವುಕಾರನ ಮೊರೆಹೊ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟು ಗೋಕಾಕ ವಕೀಲರನ್ನು ತನ್ನಕಡೆಗೆ ಮಾ ಬೇಕೆಂದು ಹೇಳಿಕೊಂಡ. ಆಗ ಸವಣೂರ ಸಾವುಕಾರರು ವಕೀಲರ ಮನೆಗೆ ಬಂ ಸಾವಿರ ರೂಪಾಯಿಗಳನ್ನು ಮುಂದಿಟ್ಟು ಕೇಸನ್ನು ಕೆಡಿಸಬೇಕೆಂದು ಹೇಳಿಕೊಂಡ ಆಗ ಗೋಕಾಕರವರು ಆ ರೂಪಾಯಿಗಳನ್ನು ಎಡಗೈಯಿಂದ ದೂಡಿ “ನೀವು ಕೊ ಖಟ್ಲೆಯಲ್ಲಿ ನಾನು ಹೀಗೆ ನಡೆದರೆ ನನ್ನ ಅವಸ್ಥೆ ಏನಾದೀತು ವಿಚಾರಿಸಿರಿ” ಎಂ ಮರ್ಮಭೇದಕವಾಗಿ ನುಡಿದರು. ಆ ಸಾವುಕಾರನು ವಕೀಲರ ಸದ್ವರ್ತನಕ್ಕೆ ಮೆ “ನಮ್ಮ ಸ್ನೇಹಿತನು ಸಿಟ್ಟಿನ ಭರದಲ್ಲಿ ಆ ಕಾರ್ಯ ಮಾಡಿರುವ. ದಂಡವಾದರೆ ಅ ಮರ್ಯಾದೆಗೆ ಕುಂದು. ಅವರಿಂದ ಪರಸ್ಪರರಲ್ಲಿ ಒಡಂಬಡಿಕೆ ಮಾಡಿಸಿ ಫಿರ್ಯಾದೆಯನ ಹಿಂತೆಗೆದುಕೊಂಡು, ನನ್ನ ಮಿತ್ರರ ಮರ್ಯಾದೆ ಉಳಿಸಿರಿ” ಎಂದು ಹೇಳಿಕೊಂಡ

ಗೋಕಾಕರು ತಮ್ಮ ಪಕ್ಷಕಾರನನ್ನು ವಿಚಾರಿಸಿ ಅವನು ಒಪ್ಪಿದರೆ ಒಡಂಬಡಿಕೆ
ಡಿಸುವೆನೆಂದು ಹೇಳಿ ಅವನು ತಂದ ರೂಪಾಯಿಗಳೊಂದಿಗೆ ಆ ಸಾವುಕಾರನನ್ನು
ಿಸಿದರು. ಮರುದಿವಸ ತಮ್ಮ ಪಕ್ಷಕಾರನನ್ನು ಅವನ ಸಂಗಡಿಗರನ್ನು ಕರಿಸಿ "ನಿಮ್ಮ
ವುಕಾರನಿಗೆ ನೂರಾರು ರೂಪಾಯಿ ದಂಡವಾಗುವದು. ಆ ಹಣ ನಿಮಗೆ ಬರದು.
ೀದ ಮಾನವೂ ಬರುವದಿಲ್ಲ. ನಿಮ್ಮ ಒಪ್ಪಿಗೆಯಿದ್ದರೆ ಆ ಸಾವುಕಾರನಿಂದ ಒಂದು
ವಿರ ರೂಪಾಯಿ ಕೊಡಿಸುವೆ. ಅದರಲ್ಲಿ ಐದುನೂರು ರೂಪಾಯಿಗಳನ್ನು ಆ ಬಡವನಿಗೆ
ಗು ಐದುನೂರು ರೂಪಾಯಿಗಳನ್ನು ನಿಮ್ಮ ಗ್ರಾಮದ ಬಸವಣ್ಣ ಗುಡಿಯ ಜೀರ್ಣೋ
ರಕ್ಕಾಗಿ ಉಪಯೋಗಿಸಿಕೊಂಡು ಆ ಸಾವುಕಾರರೊಡನೆ ಒಡಂಬಡಿಕೆ ಮಾಡಿ
ಳ್ಳಿರಿ. ಅವನಿಗೆ ಕೋರ್ಟಿನಲ್ಲಾಗತಕ್ಕ ಹಣದ ಹತ್ತು ಪಟ್ಟು ದಂಡವಾದಂತಾಯಿತು.
ವನ ಸಂಸಾರವೂ ಸಾಗುವದು" ಎಂದು ಉಪದೇಶ ಮಾಡಿದರು. ಅದಕ್ಕೆ ಅವರೆಲ್ಲರೂ
ಪ್ಪಿದರು. ಬಳಿಕ ಆ ಸಾವುಕಾರನನ್ನು ಕರೆಯಿಸಿದರು. ಅವನು ತಪ್ಪಿಗೆ ಒಪ್ಪಿ ಕ್ಷಮೆ
ಡಿಕೊಂಡ. ಆಗ ಗೋಕಾಕರವರು ಎರಡೂ ಬಣದವರಲ್ಲಿ ಒಡಂಬಡಿಕೆ ಮಾಡಿಸಿದರು.
ವುಕಾರನು ತಂದ ಸಾವಿರ ರೂಪಾಯಿಗಳನ್ನು ತಮ್ಮ ಪಕ್ಷಕಾರನಿಗೆ ಕೊಟ್ಟರು.
ೀಲರ ನಿಸ್ಪೃಹತೆಗೂ ಕಾರ್ಯಕುಶಲತೆಗೂ ಎಲ್ಲರೂ ತಲೆದೂಗಿದರು.

ಗೋಕಾಕರವರು ತಮ್ಮ ಪುತ್ರನಾದ ವಿನಾಯಕನನ್ನು "ದಾದಾ" ಎಂದು ಕರೆಯುತ್ತಿ
ು. ಅವನ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಲಕ್ಷ ಕೊಡುತ್ತಿದ್ದರು. ಅವನಿಗೆ ಒಳ್ಳೆಯ
ತೆಯ ಹುಡುಗರ ಸಹವಾಸ ಮಾಡಿಸಿದರು. ವಿನಾಯಕನಾದರೂ ಬುದ್ಧಿಶಾಲಿಯಿದ್ದು
ನೆಯೊಡನೆ ಭಯಭಕ್ತಿಯಿಂದ ನಡೆದುಕೊಳ್ಳುತ್ತಲಿದ್ದ. ತನ್ನ ಹತ್ತನೆಯ ವಯಸ್ಸಿ
ಯೇ ಪ್ರಾಥಮಿಕ ಶಾಲೆಯ ನಾಲ್ಕನೆಯ ಇಯತ್ತೆಯಲ್ಲಿ ಮೊದಲನೇ ನಂಬರು
ದು ಉತ್ತೀರ್ಣನಾಗಿ ಮಾಧ್ಯಮಿಕ ಶಾಲೆಯನ್ನು ಪ್ರವೇಶಿಸಿದ. ಅಲ್ಲಿ ಮಹಾನುಭಾ
ರ ಪಾಂಡುರಂಗಜೋಯಿಸರು ಪ್ರಾಧ್ಯಾಪಕರಿದ್ದು ಮೊಮ್ಮಗನ ವಿದ್ಯಾಭ್ಯಾಸದ ಕಡೆಗೆ
ಚ್ಚು ಲಕ್ಷ ಕೊಡುತ್ತಿದ್ದರು. ಮನೆಯಲ್ಲಿ ಅವನಿಗೆ ಇಂಗ್ಲೀಷ ಕನ್ನಡ ಭಾಷೆಯ
ದ್ಯಾಭ್ಯಾಸ ಮಾಡಿಸುತ್ತಿದ್ದರು. ವಿನಾಯಕನು ನಾಲ್ವರು ಗೆಳೆಯರೊಡನೆ ದಕ್ಷತೆಯಿಂದ
ದ್ಯಾಭ್ಯಾಸಮಾಡಿ ಸವಣೂರಲ್ಲಿರುವ ಮುಜೀದ ಹಾಯಸ್ಕೂಲದಲ್ಲಿ ಪ್ರತಿ ವರ್ಷ ಮೊದ
ನಾಗಿ ತೇರ್ಗಡೆಹೊಂದಹತ್ತಿದ. ತಂದೆಯವರಿಂದ ಹಣದ ಸಹಾಯ ಪಡೆದು ಅಲ್ಲಿ
ದು ಚಿಕ್ಕ ವಾಚನಾಲಯ ತೆಗೆದು 'ಸದ್ಬೋಧ ಚಂದ್ರಿಕೆ' ಮೊದಲಾದ ಮಾಸಿಕ
ಕೆಗಳನ್ನು ಮತ್ತು ವರ್ತಮಾನ ಪತ್ರಿಕೆಗಳನ್ನು ತರಿಸಿ ಗೆಳೆಯರೊಡನೆ ಓದುವ.
ಗಸಾಧರವರು ಬರೆದ ಎಲ್ಲ ಕಾದಂಬರಿಗಳನ್ನು ಮನಗೊಟ್ಟು ಓದುವ. ಸಣ್ಣ ಕಥೆ
ನ್ನು ಕವಿತೆಗಳನ್ನು ಬರೆಯುವ. ಬರೆದವುಗಳನ್ನು ಅಜ್ಜಂದಿರಿಗೆ ತೋರಿಸಿ ತಿದ್ದುಪಡಿ
ಡಿಸುವ. ಹೀಗೆ ವಿದ್ಯಾಭ್ಯಾಸದಲ್ಲಿಯೇ ತೊಡಗಿ ಭಾಷಾ ವಿಷಯದಲ್ಲಿ ಪ್ರವೀಣನಾದ.

ಹಾಯಸ್ಕೂಲದಲ್ಲಿ ೪ನೆಯ ವರ್ಗದಿಂದಲೇ ಇವನಿಗೆ ಬಹುಮಾನದ ಬಗ್ಗೆ ಪ್ರತಿ ತಿಂಗ
ಐದು ರೂಪಾಯಿ ದೊರೆಯುತ್ತಿತ್ತು. ತನ್ನ ೧೬ ನೆಯ ವಯಸ್ಸಿನಲ್ಲಿ ಮ್ಯಾಟ್ರಿ
ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ. ಹಾಯಸ್ಕೂಲಿನಿಂದ ಪರೀಕ್ಷೆಗೆ ಕುಳಿತ ೨೯ ವಿದ್ಯಾ
ಗಳಲ್ಲಿ ನಾಲ್ವರೇ ತೇರ್ಗಡೆಹೊಂದಿದರು. ಅವರಲ್ಲಿ ವಿನಾಯಕ ಮೊದಲಿಗ.

ಮಗನ ಬುದ್ಧಿಶಕ್ತಿಯನ್ನು ಸತತೋದ್ಯೋಗವನ್ನು ಕಂಡು ಕೃಷ್ಣರಾಯರಿಗೆ ಅತ
ನಂದವಾಯಿತು. ಅವನನ್ನು ಧಾರವಾಡದ ಕಾಲೇಜಕ್ಕೆ ಉಚ್ಚಶಿಕ್ಷಣಕ್ಕೆ ಹಾಕಿದರು. ತ
ಮಗನು ಸಾತ್ವಿಕ ಸ್ವಭಾವದವನಿದ್ದ ಕಾರಣ ಬೋರ್ಡಿಂಗದಲ್ಲಿಟ್ಟರೆ ತೊಂದರೆಯಾಗಬ
ದೆಂದು ತಮ್ಮ ಮಿತ್ರರಾದ ವಾಸುದೇವರಾವ್ ಅಭ್ಯಂಕರ ವಕೀಲರ ಮನೆಯಲ್ಲಿಟ್ಟ
ಅದಕ್ಕೆ ರಾಯರು ಒಪ್ಪಿದರು. ಮುಂದೆ ಅಭ್ಯಂಕರರು ನಿವೃತ್ತರಾದುದರಿಂದ ಕಾಲೆ
ದಲ್ಲಿಯೇ ಇದ್ದು ದಕ್ಷತೆಯಿಂದ ವಿದ್ಯಾಭ್ಯಾಸ ಮಾಡಹತ್ತಿದ. ಅವನು ಬೇಡಿದಷ್ಟು ಹ
ವನ್ನು ತಂದೆಯವರು ಕಳಿಸುತ್ತಿದ್ದರೂ ಇಂಟರ್ ಪರೀಕ್ಷೆಯಲ್ಲಿ ಅನೇಕ ವಿಷಯಗಳ ಅಭ
ಸಾಗಿಸುವದಿದ್ದರಿಂದ ಇಂಗ್ಲೀಷ ಕನ್ನಡಗಳ ಬಗ್ಗೆ ಹೆಚ್ಚು ಪರಿಶ್ರಮ ಮಾಡಲಿಕ್ಕೆ ಸಾ
ವಾಗಲಿಲ್ಲ. ಮುಂದೆ ಬಿ.ಎ. ಪರೀಕ್ಷೆಗೆ ಇವೆರಡೇ ವಿಷಯಗಳನ್ನು ಆಯ್ದುಕೊಂಡ. ಆಗ
ಇಂಗ್ಲೀಷ ಪ್ರಾಧ್ಯಾಪಕರಾಗಿದ್ದ ಪ್ರೊಫೆಸರ ತಾಕಾಖಾವ್ ಅವರು ಇವನು ತಮ್ಮ ಪ
ಶಿಷ್ಯನೆಂದು ಭಾವಿಸಿದ್ದರು. ಇವನು ಮುಂದುವರಿದರೆ ಇಂಗ್ಲಂಡದಲ್ಲಿಯೂ ಸಹ ಕೀ
ಶಾಲಿಯಾಗುವನೆಂದು ಉದ್ಗಾರ ತೆಗೆದರು. ಮುಂದೆ ಅವರ ಇಚ್ಛೆಯು ಪೂರ್ಣವಾಯಿ
ವಿನಾಯಕನು ಬಿ. ಎ. ಪರೀಕ್ಷೆಯಲ್ಲಿ ಮುಂಬೈ ಇಲಾಖೆಗೆ ಮೊದಲಿಗನಾಗಿ ತೇರ
ಹೊಂದಿದನು. ವಿನಾಯಕನು ಕರ್ನಾಟಕ ಕಾಲೇಜಿನ ಫೆಲೋ ಆಗಿ ಎಂ. ಎ. ಅಭ
ಸಾಗಿಸಹತ್ತಿದ್ದನ್ನು ನೋಡಿ ರಾಯರಿಗೆ ಅತ್ಯಾನಂದವಾಯಿತು. ಅವನು ಎಂ.
ಪರೀಕ್ಷೆಗೆ ಕೂಡುವಾಗ ತಾಯಿಯವರು ಬೇನೆಯಿಂದ ನೆಲಹಿಡಿದರು. ಆದ್ದರಿ
ಅಭ್ಯಾಸ ಚೆನ್ನಾಗಿ ಸಾಗಲಿಲ್ಲ. ಪರೀಕ್ಷೆಗೆ ಕೂಡಲು ಹಿಂಜರಿಯ ಹತ್ತಿದ.
ವಕೀಲರು ಅವನ ಕುಂಡಲಿಯನ್ನು ಪರಿಶೀಲಿಸಿ "ಈ ಸಾರೆ ಪರೀಕ್ಷೆಗೆ ಕೂಡ್ರ
ಬೇಕು. ಇಂಥ ಗ್ರಹಯೋಗ ಬರುವದು ದುರ್ಲಭ" ಎಂದು ಹೇಳಿ ಪರೀಕ್ಷೆಗೆ ಕೂಡ್ರ
ಉತ್ತೇಜನ ಕೊಟ್ಟರು. ಕೃಷ್ಣರಾಯರು ಸಂಪಾದಿಸಿದ ಜ್ಯೋತಿಷ್ಯಶಾಸ್ತ್ರವನ್ನು ಒ
ಹಚ್ಚುವ ಪ್ರಸಂಗ ಬಂದಿತು. ಅವರ ಭವಿಷ್ಯ ಸುಳ್ಳಾಗಲಿಲ್ಲ. ವಿನಾಯಕನು ಎಂ.
ಪರೀಕ್ಷೆಯಲ್ಲಿ ಮುಂಬೈ ಇಲಾಖೆಗೆ ಮೊದಲಿಗನಾಗಿ ತೇರ್ಗಡೆಹೊಂದಿ ಕೀರ್ತಿಶ
ಯಾದ.

ಕೃಷ್ಣರಾಯರು ಸವಣೂರಲ್ಲಿ ಇಪ್ಪತ್ತೈದು ವರ್ಷಗಳವರೆಗೆ ವಕೀಲಿ ವೃತ್ತಿಯನ್ನು
ಸಿದರು. ಅದರ ಉತ್ಪನ್ನ ಪ್ರತಿ ತಿಂಗಳಿಗೆ ನಾಲ್ಕುನೂರು ರೂಪಾಯಿಗಳಿಗೆ ಮಿಕ್ಕಿತ್ತು. ಇ
ಉದಾರರೂ ವಿದ್ಯಾಪಕ್ಷಪಾತಿಗಳೂ ಧರ್ಮಿಷ್ಠರೂ ಇದ್ದದ್ದರಿಂದ ವಿಶೇಷ ಧನಾಜ

ಾಗಲಿಲ್ಲ. ಇವರಿಗೆ ವಿನಾಯಕನ ಬೆನ್ನ ಮೇಲೆ ಕಮಲಾ, ಅನಸೂಯೆ ಎಂಬ ಇಬ್ಬರು
ಣ್ಣು ಮಕ್ಕಳು ಹುಟ್ಟಿದರು. ಮಗ ವಿನಾಯಕನ ಮದುವೆಯ ವಿಚಾರ ಬಂದಿತು. ತಮಗೆ
ಕೀಲಿಯನ್ನು ಕೊಡಿಸಿ ಸಹಾಯ ಮಾಡಿದ ಕೃಷ್ಣರಾವ ಕಲಘಟಗಿ ಎಲ್. ಸಿ. ಇವರ
ಿಸ್ತ್ರಾಯಕ್ಕೆ ಮನ್ನಣೆಕೊಟ್ಟು ಅವರ ಮಿತ್ರರಾದ ಬಳವಂತರಾವ ಬೆಟಗೇರಿ ವಕೀಲ
ವರ ಮಗಳಾದ ಶಾರದಾಂಬೆಯನ್ನು ವರದಕ್ಷಿಣೆಯ ಆಸೆ ಮಾಡದೆ, ಅವರು
ಸಂತೋಷದಿಂದ ಕೊಟ್ಟಷ್ಟು ಸ್ವೀಕರಿಸಿ ಬಿ. ಎ. ಪರೀಕ್ಷೆಯಲ್ಲಿ ಉಚ್ಚಸ್ಥಾನ ಪಡೆದು
ರ್ಗಡೆ ಹೊಂದಿದ ತಮ್ಮ ಮಗನಿಗೆ ವಿವಾಹ ಮಾಡಿದರು. ಎಂ. ಎ. ಪಾಸಾದೊಡನೆಯೇ
ಾಯಕರಾಯನಿಗೆ ಪುಣೆಯಲ್ಲಿರುವ ಫರ್ಗ್ಯುಸನ್ ಕಾಲೇಜದ ಪ್ರೊಫೆಸರ ಸ್ಥಳಕ್ಕೆ
ರಿನಿಂದ ಕರೆ ಬಂದಿತು. ರಾಯರು ಅಲ್ಲಿಗೆ ಹೋಗಲು ಅಪ್ಪಣೆಕೊಟ್ಟರು. ಮುಂದೆ
ಾಯಕರಾಯನು ತಂದೆ ತಾಯಿಗಳನ್ನೂ ತಂಗಿಯನ್ನೂ ಪುಣೆಗೆ ಕರೆಯಿಸಿದ. ಅಲ್ಲಿ
ರರು ಶಾಂತಚಿತ್ತದಿಂದ ಇರಹತ್ತಿದರು.

ಸವಣೂರ ನವಾಬಸಾಹೇಬರು ಮತ್ತೆ ವಕೀಲರಿಗೆ ತಮ್ಮಲ್ಲಿಗೆ ಬರಬೇಕೆಂದು ಹೇಳಿ
ಸಿದರು. ಆ ಸಮಯಕ್ಕೆ ವಿನಾಯಕರಾಯನೂ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಆಕ್ಸ್‌ಫರ್ಡ್
ಲೇಜಕ್ಕೆ ಹೋಗಬೇಕೆಂದು ಇಚ್ಛಿಸಿದ. ಅದರಿಂದ ಕೃಷ್ಣರಾಯರು ನವಾಬಸಾಹೇಬರ
ಾತಿಗೆ ಮಾನ್ಯತೆಕೊಟ್ಟು ಮಗನನ್ನು ಇಂಗ್ಲಂಡಿಗೆ ಕಳುಹಿಸಿ ಸವಣೂರಿಗೆ ಬಂದು
ತ್ತೆ ವಕೀಲಿ ವೃತ್ತಿಯನ್ನು ಪ್ರಾರಂಭಿಸಿದರು. ವಿನಾಯಕರಾಯನು ಆಕ್ಸ್‌ಫರ್ಡ್
ಲೇಜದಲ್ಲಿ ಶ್ರೇಷ್ಠ ವಿದ್ಯಾರ್ಥಿಯೆಂದು ಖ್ಯಾತಿ ಪಡೆದ. ಪ್ರವಾಸಕ್ಕೆಂದು ವಿನಾಯಕ
ೋದಾಗ ಅಲ್ಲಿ ಕರುಳು ಬೇನೆ ಬಂದಿತು. ಈ ವಿಷಯವು ತಾರಿನಿಂದ ಕೃಷ್ಣರಾಯರಿಗೆ
ಿದು ಅವರ ಎದೆಯೊಡೆದು ನೀರಾಯಿತು. ಸದ್ಗುರುಗಳಿಗೆ ಶರಣಾಗತರಾಗಿ "ನಾನು
ನ್ನ ನಿಜ ಶಿಷ್ಯನಿದ್ದರೆ ಈ ವಿಪತ್ತನ್ನು ಪರಿಹರಿಸು" ಎಂದು ಅನನ್ಯಗತಿಕರಾಗಿ ಬೇಡಿ
ಂಡರು. ಬೆಳಗಿನ ಸಮಯದಲ್ಲಿ ಸ್ವಪ್ನದಲ್ಲಿ ಸದ್ಗುರುಗಳು ಬಂದು "ಬೆದರಬೇಡ,
ನು ಅವನನ್ನು ರಕ್ಷಿಸುವೆ" ಎಂದು ಹೇಳಿದಂತಾಯಿತು. ಮರುದಿವಸವೇ "ವಿನಾಯಕ
ಗೆ ಪ್ರಜ್ಞೆ ಬಂದಿದೆ" ಎಂದು ತಾರು ಬಂದಿತು. ರಾಯರು ಸದ್ಗುರುಗಳ ಮಹಿಮೆಯನ್ನು
ಂಡಾಡಿದರು. ಮುಂದೆ ಹದಿನೈದು ದಿನಗಳಲ್ಲಿ ಆಕ್ಸ್‌ಫರ್ಡ್ ವಿದ್ಯಾಲಯದ ಬಿ. ಎ.
ೀಕ್ಷೆಯಲ್ಲಿ ಪ್ರಥಮಶ್ರೇಣಿಯಲ್ಲಿ ಮೊದಲಿಗರಾಗಿ ತೇರ್ಗಡೆ ಹೊಂದಿರುವ ತಾರು
ಂದಿತು. ವಿನಾಯಕರಾಯರು ಇಂಗ್ಲಂಡದಿಂದ ಇಟಲಿಗೆ ಬಂದು ಹಡಗದಲ್ಲಿ ಕುಳಿತು
ುಂಬೈಗೆ ಬಂದರು. ಪುಣೆಯಲ್ಲಿ ಇವರ ಸತ್ಕಾರ ಸಮಾರಂಭವು ಒಳ್ಳೆ ವೈಭವದಿಂದ
ಯಿತು. ಮುಂದೆ ಧಾರವಾಡಕ್ಕೆ ಬಂದು ಹೆಂಡತಿ ಮಕ್ಕಳೊಂದಿಗೆ ಸವಣೂರಿಗೆ ಬಂದರು.
ವಣೂರ ನವಾಬಸಾಹೇಬರು ಸ್ವಂತ ಮೋಟಾರನ್ನು ತೆಗೆದುಕೊಂಡು ಸ್ಟೇಶನ್ನಿಗೆ
ೋಗಿ ವಿನಾಯಕರಾಯರನ್ನು ಎದುರುಗೊಂಡು ಕರೆತಂದು ತಮಗಾದ ಆನಂದವನ್ನು

ವ್ಯಕ್ತಪಡಿಸಿದರು ಅಂದು ಸಾಯಂಕಾಲಕ್ಕೆ ಇವರು ವಿದ್ಯಾಭ್ಯಾಸ ಮಾಡಿದ ಮಜೀ
ಹಾಯಸ್ಕೂಲದಲ್ಲಿ ಇವರ ಸತ್ಕಾರ ಸಮಾರಂಭವಾಯಿತು. ಆಗ ವಿನಾಯಕರಾಯ
ತಂದೆತಾಯಿಗಳೂ ಅಕ್ಕತಂಗಿಯರೂ ಬಂಧುಗಳೂ ಊರ ಪ್ರಮುಖರೂ ಮಿತ್ರರು
ನೆರೆದರು. ನವಾಬಸಾಹೇಬರು ಹಾರ ತುರಾಯಿಗಳನ್ನು ಹಾಕಿ ಬಹುಮಾನ ಕೊಟ್ಟರ
ವಿನಾಯಕರಾಯರು ಇಂಗ್ಲೀಷದಲ್ಲಿ ಅಸ್ಖಲಿತ ವಾಣಿಯಿಂದ ಭಾಷಣಮಾಡಿ ಸಭೆಯನ್
ಮುಗ್ಧಗೊಳಿಸಿದರು. ಸರದಾರ ನವಾಬ ಸಾಹೇಬರವರು "ಇವನೊಬ್ಬ ನನ್ನ ಚಿಕ
ಸಂಸ್ಥಾನಕ್ಕೆ ಭೂಷಣ ತಂದ ಚಿಕ್ಕಮಗ" ಎಂದು ಉದ್ಗಾರ ತೆಗೆದರು.

ಇಂಗ್ಲಂಡದಿಂದ ಬಂದ ಬಳಿಕ ತಮ್ಮ ಮಗನು ಸಾಂಗಲೀ ಕಾಲೇಜದ ಪ್ರಿನ್ಸಿಪಾ
ನಾದುದನ್ನು ಕಂಡು ರಾಯರು ಸಂತೋಷಭರಿತರಾದರು. ವಿನಾಯಕನು ನನ್ನ ಮ
ರಾಮುನ ವಿದ್ಯಾಭ್ಯಾಸ ಮಾಡಿಸಿ ಅವನನ್ನು ಶಿಕ್ಷಕ ವೃತ್ತಿಗೆ ಹಚ್ಚಿದ. ಶಿಕ್ಷಕ ವೃತ್ತಿಯನ
ಸ್ವೀಕರಿಸಲು ಕಳಿಸಿದ. ವಿನಾಯಕರಾಯನು ತನ್ನ ಮನೆತನದವರಿಗೆ ಸಹಾಯ ಮಾಡಿದಂ
ಉತ್ತರ ಕರ್ನಾಟಕದ ಬಹಳ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ನೆರವಾದ.

ವಿನಾಯಕರಾಯನ ಬಗ್ಗೆ ಕೆಲವರಿಗೆ ಮತ್ಸರಭಾವ ಹುಟ್ಟಿತು. ಇದರಿಂದ ಸ್ವಾ
ಮಾನಿಯಾದ ಅವನು ಸಾಂಗಲಿ ಕಾಲೇಜಕ್ಕೆ ಶರಣುಹೊಡೆದು ಹೊರಬಿದ್ದ. ಹೈದರ
ಬಾದದ ಉಸ್ಮಾನಿಯಾ ಕಾಲೇಜದ ಪ್ರಾಧ್ಯಾಪಕನಾದ. ರಾಯರು ಸಿಂಕಂದರಾಬಾದದ
ಮಗನ ಬಳಿಯಲ್ಲಿ ಶಾಂತಚಿತ್ತರಾಗಿ ಇರಹತ್ತಿದರು. ಆಗ ಗುರುಪ್ರೇರಣೆಯಾಗಿ ಮರಾ
ಯಲ್ಲಿದ್ದ ಶ್ರೀ ಪಂತಮಹಾರಾಜರ ಚರಿತ್ರವನ್ನು ತಮ್ಮ ೭೦ ನೆಯ ವಯಸ್ಸಿನ
ಕನ್ನಡಕ್ಕೆ ಪರಿವರ್ತಿಸಿದರು. ಏಳೂನೂರು ಪುಟಗಳುಳ್ಳ ಆ ಗ್ರಂಥವನ್ನು ಪಂತರ ಶಿ
ಮಂಡಳಿಯ ಪ್ರಮುಖರು ಅಚ್ಚು ಹಾಕಿಸಿ ಪ್ರಕಟಪಡಿಸಿದರು. ಪಂತರ ಮುಖದಿಂ
ಭಾವನಾತ್ಮಕವಾಗಿ ಹೊರಬಿದ್ದ ಪಂತ ಪ್ರೇಮಲಹರಿಯಲ್ಲಿಯ ಅನೇಕ ಪದ್ಯಗಳನ
ಕನ್ನಡ ರೂಪದಲ್ಲಿ ಭಾಷಾಂತರಿಸಿದರು. ಹೀಗೆ ಮಗನೊಂದಿಗೆ ಅಲ್ಲಿ ವಾಸವಾಗಿದ್ದರ
ಮುಂದೆ ಪರಿಸ್ಥಿತಿಯ ಪ್ರತಿಕೂಲತೆಯ ಮೂಲಕ ವಿನಾಯಕರಾಯರು ಉಸ್ಮಾನಿಯ
ಕಾಲೇಜನ್ನು ಪರಿತ್ಯಾಗಮಾಡಿ ಬಡೋದಾ ಸಂಸ್ಥಾನದಲ್ಲಿರುವ ವೀಸನಗರ ಕಾಲೇಜ
ಪ್ರಿನ್ಸಿಪಾಲರಾಗಿ ಹೊರಟು ಹೋದರು. ರಾಯರು ಮಗನು ದೂರ ದೇಶಕ್ಕೆ ಹೋದ
ರಿಂದ ಸ್ವಸ್ಥಾನವಾದ ಸವಣೂರಿಗೆ ಬರಬೇಕಾಯಿತು. ಸಂಸ್ಥಾನಗಳ ಏಕೀಕರಣವಾ
ಮೇಲೆ ಪ್ರಿನ್ಸಿಪಾಲ ಗೋಕಾಕ್ ಅವರು ಕೊಲ್ಹಾಪುರದಲ್ಲಿರುವ ರಾಜರಾ
ಕಾಲೇಜಕ್ಕೂ ಬಳಿಕ ಧಾರವಾಡದ ಕರ್ನಾಟಕ ಕಾಲೇಜಕ್ಕೂ ಪ್ರಿನ್ಸಿಪಾಲರಿದ್ದಾ
ತಂದೆ ತಾಯಿಗಳನ್ನು ಕರೆ ತಂದರು. ಅಲ್ಲಿ ರಾಯರು ಶಾಂತತೆಯಿಂದ ಇರಹತ್ತಿದರು.

ಮುಂದೆ ವಿನಾಯಕರಾಯರು ಸೆಂಟ್ರಲ್ ಗೌರ್ನಮೆಂಟಿನ ಆಜ್ಞೆಯಂತೆ ಹೈದ
ಬಾದಿನಲ್ಲಿ ಸ್ಥಾಪಿಸಿದ ಇಂಗ್ಲೀಷ ಇನಸ್ಟಿಟ್ಯೂಟಿಗೆ ಡಾಯರೆಕ್ಟರ ಸ್ಥಾನಕ್ಕೆ ಹೊರ

ತಾಯಿತು. ತಾಯಿತಂದೆಗಳಿಗೆ ತಮ್ಮ ಜೊತೆ ಬರಲು ಕೇಳಿಕೊಂಡರು. ತಾಯಿ
ದೆವು ಅಲ್ಲಿಗೆ ಬರಲು ಒಪ್ಪಲಿಲ್ಲ. ಸವಣೂರಲ್ಲಿ ಚಿಕ್ಕಮಗಳ ಬಳಿಯಲ್ಲಿಯೆ ಇರುತ್ತೇ
ಮ ಹೇಳಿದರು. ಕೃಷ್ಣರಾಯರಿಗೆ ಆಗ ೮೦ ವರ್ಷಗಳಾಗಿದ್ದರಿಂದ ಅಶಕ್ತರಾದ್ದರಿಂದ
ಯನ್ನು ಅನುಸರಿಸಬೇಕಾಯಿತು. ವಿನಾಯಕರಾಯರು ತಾಯಿ ತಂದೆಗಳನ್ನು
ಲುವ ಪ್ರಸಂಗ ಬಂದಿತು. ಅವರನ್ನು ಸವಣೂರಿಗೆ ಕಳುಹಿದರು. ಅಲ್ಲಿ ಅವರ ಉಪ
ರನಕ್ಕೂ ಔಷಧೋಪಚಾರಕ್ಕೂ ಹಣ ಕಳಿಸಹತ್ತಿದರು. ರಾಯರು ಸರ್ವಸಂಗಪರಿತ್ಯಾಗಿ
ಾಗಿ ಗುರುಗಳು ಉಪದೇಶಿಸಿದ ಅಮನಸ್ಕಯೋಗದಿಂದ ಶಾಂತಿಯನ್ನು ಪಡೆಯು
ದರು. ಸಾಮಾನ್ಯರು ಇದೊಂದು ರೋಗವೆಂದೇ ಭಾವಿಸಿದರು. ಎರಡು ವರ್ಷಗಳ
ಗೆ ಇದೇ ಸ್ಥಿತಿಯಲ್ಲಿದ್ದರು. ತಮ್ಮ ಅವಸಾನಕಾಲ ಸಮೀಪಿಸಿದ್ದು ರಾಯರಿಗೆ
ತ್ತಾಯಿತು. ಆಗ ಒಂದೇ ದಿವಸಕ್ಕೆ ಯೋಗವನ್ನು ಇಳಿಸಲಿಲ್ಲ. ಏಳು ದಿವಸಗಳವರೆಗೆ
ೕ ಸ್ಥಿತಿಯಲ್ಲಿದ್ದರು. ಮುಂದೆ ಮಾರ್ಗಶೀರ್ಷಮಾಸವು ಬಂದಿತು. ಪ್ರತಿಪದೆಯ ದಿವಸ
ವಾತ್ಮನನ್ನು ಹೃತ್ಕಮಲಕ್ಕೆ ತಂದರು. ಆಗ ನಾನು ವಿನಾಯಕರಾಯರಿಗೆ ತೀವ್ರ
ಬೇಕೆಂದು ತಾರು ಕೊಡಿಸಿದೆ. ಕಾಲಕರ್ಮಯೋಗದಿಂದ ಅದು ಅವರಿಗೆ ಸರಿಯಾಗಿ
ಟ್ಟಲಿಲ್ಲ. ಮರುದಿವಸ ಹೊರಟು ಬಂದರು. ಶಕೆ ೧೮೮೪ ನೇ ವರ್ಷ ಮಾರ್ಗಶೀರ್ಷ
ದ್ಧ ದ್ವಿತೀಯ ಸೂರ್ಯಾಸ್ತ ಕಾಲಕ್ಕೆ ಅವರ ಜೀವಾತ್ಮ ಮಸ್ತಕದಿಂದ ಹೊರಬಿದ್ದಿತು.
ಣ ಸಮಯಕ್ಕೆ ಮಗನು ತಮ್ಮ ಹತ್ತಿರವಿರುವದಿಲ್ಲವೆಂದು ಹೇಳಿದ ಅವರ ಭವಿಷ್ಯ
ವಾಯಿತು.

ಸಂಗಾತಿ

ಶಾರದಾ ವಿ. ಗೋಕಾಕ

ನಾನು ಮದುವೆಯಾಗಿ ಅತ್ತೆಯ ಮನೆಗೆ ಬಂದಾಗ ಶ್ರೀ ಗೋಕಾಕರು ಎಂ.
ವರ್ಗದಲ್ಲಿ ಅಭ್ಯಾಸಮಾಡುತ್ತಿದ್ದರು. ಮನೆಯಲ್ಲಿ ಧಾರ್ಮಿಕ ವಾತಾವರಣವಿತ್ತು. ನ
ಯಜಮಾನರೂ ಬಾಳೇಕುಂದ್ರಿಯ ಪಂತಮಹಾರಾಜರ ಭಜನೆಯನ್ನು ಭಕ್ತಿಯಿ
ಮಾಡುತ್ತಿದ್ದರು. ದುರ್ಗಾ ದೇವಸ್ಥಾನಕ್ಕೆ ನಿಯಮಿತವಾಗಿ ಹೋಗಿಬರುತ್ತಿದ್ದ
ಅವರಿಗೆ ಸ್ವಂತದ ಬಟ್ಟೆಬರೆಗಳ ಕಡೆಗೆ ಅಷ್ಟು ಲಕ್ಷ್ಯವಿರಲಿಲ್ಲ. ಅವರ ಅಂತಃಕರಣದಲ್ಲಿ
ಶ್ರದ್ಧೆ ಹಾಗೂ ಅಭ್ಯಾಸದಲ್ಲಿಯ ಗಾಢವಾದ ನಿಷ್ಠೆಗಳು ನನ್ನ ಮೇಲೆ ಪ್ರಭ
ಬೀರಿದವು. ನನಗೂ ನನ್ನ ಅಭ್ಯಾಸವನ್ನು ಮುಂದುವರಿಸುವ ಆಶೆಯಿತ್ತು. ಆದರೆ ನ
ಯಜಮಾನರ ಅಭ್ಯಾಸದ ತನ್ಮಯತೆಯನ್ನು ಕಂಡು ಅವರ ಅಭ್ಯಾಸಕ್ಕೆ ನಾ
ಸಂಪೂರ್ಣ ಸಹಕಾರ ನೀಡಬೇಕೆಂದು ನಿರ್ಧರಿಸಿದೆ. ಇದಲ್ಲದೆ ಶ್ರೀ ಗೋಕಾಕರು ತ
ಪರೀಕ್ಷೆಯಲ್ಲಿ ಉತ್ಕೃಷ್ಟವಾಗಿ ಪಾಸಾಗಬೇಕೆಂಬ ಸ್ವಾಭಾವಿಕ ಅಭಿಲಾಷೆಯ ಜೊ
ಇನ್ನೊಂದು ಅಂಶವೂ ಅಡಕವಾಗಿತ್ತು. ಹೊಸದಾಗಿ ಮದುವೆಯಾಗಿ ಬಂದ ನ
ಕಾಲ್ಗುಣದ ಪರೀಕ್ಷೆಯೂ ಆಗುವದಿತ್ತು. ದೇವರ ಕೃಪೆಯಿಂದ ಇವರು ಎಂ.
ಪರೀಕ್ಷೆಯಲ್ಲಿ ಅತ್ಯಂತ ಗೌರವದಿಂದ ಪಾಸಾದರು. ಸಹಜ ಸಂಭ್ರಮದ ಜೊತೆಗೆ ನ
ಕಾಲ್ಗುಣದ ವಿಷಯದ ಭೀತಿಯೂ ಮಾಯವಾಯಿತು.

ಈಗ ನನ್ನ ಯಜಮಾನರ ಷಷ್ಟ್ಯಬ್ದಿ ಪೂರ್ತಿಯ ಸಮಾರಂಭದಲ್ಲಿ ನಮ್ಮ ದಾಂಪ
ಜೀವನದ ಏರಿಳಿತಗಳನ್ನು ಸ್ಮರಿಸಿಕೊಂಡರೆ ನಾವು ಸಂಸಾರದಲ್ಲಿ ಪರಸ್ಪರರಿಗೆ ಭಾರವಾ
ಒಬ್ಬರನ್ನೊಬ್ಬರು ಅರಿತುಕೊಳ್ಳುವದಕ್ಕೆ, ಒಬ್ಬರೊಬ್ಬರಿಗೆ ಬೆಂಬಲವಾಗಿ ನಿಲ್ಲುವದ
ಮಾಡಿದ ಪ್ರಯತ್ನಗಳ ಕತೆಯೇ ನೆನಪಾಗುತ್ತದೆ. ಭಗವಂತನು ಈ ಪ್ರಯತ್ನ
ಕೊಟ್ಟ ಯಶಸ್ಸನ್ನು ಭಕ್ತಿಯಿಂದ ಸ್ಮರಿಸಿಕೊಳ್ಳುತ್ತೇನೆ.

ವೀಸನಗರದ ಕಾಲೇಜನ್ನು ಇವರು ಮಣ್ಣಿನಿಂದ ಮೇಲಕ್ಕೆತ್ತಿ ರೂಪ ಕೊಡಬೇ
ಗಿತ್ತು. ಅಲ್ಲಿಯ ಕೂಲಿಯವರು, ಕೆಲಸಗಾರರು, ಹೊಟ್ಟೆತುಂಬಿದವರು. ಹೊಲಮನೆ
ದ್ದವರು. ಕಾಲೇಜಿನ ಕೆಲಸದಿಂದಲೂ ಒಂದಿಷ್ಟು ಹೆಚ್ಚಿನ ಉತ್ಪಾದನೆಯಾದರೆ ತಪ್ಪೇ
ಎನ್ನುವಂಥ ಮನೋಭಾವದವರು. ಉರಿಬಿಸಿಲಿನ ಬಯಲಲ್ಲಿ, ಅಪರಿಚಿತ ನಾಡಿನ

ೂತದ ಬಂಗ್ಲೋ" ಎಂದು ಹೆಸರಾದ ಮನೆಯಲ್ಲಿ ನನ್ನನ್ನು ಇಟ್ಟು ಇವರು ಒಂದು ನ್ನೆ ಕಟ್ಟುವುದರಲ್ಲಿ ತೊಡಗಿದ್ದರು. ಮನೆಯಲ್ಲಿ ಅವರ ಬೂಟುಪಾಲಿಷ್ ಮಾಡುವ ನ್ನು ಮೊದಲು ಮಾಡಿ ನಾನು ಸೂಕ್ಷ್ಮವಾಗಿ ಅವರ ಯೋಗಕ್ಷೇಮ ನೋಡಿಕೊಳ್ಳ ಾಗುತ್ತಿತ್ತು. ಇದಾವುದೂ ಶ್ರೀ ಗೋಕಾಕರಿಗೆ ಕಾಣುತ್ತಿರಲಿಲ್ಲ.

ಒಂದು ಸಲ ನೌಕರರೆಲ್ಲ ಮುಷ್ಕರ ಹೂಡಿದರು. ಆಗಲೂ ತಮ್ಮ ಬೂಟುಗಳು ಲಿಷ್ ಆಗಿ ಸರಿಯಾದ ಸ್ಥಳದಲ್ಲಿರುತ್ತಿರುವದನ್ನು ಕಂಡು ಅವರಿಗೆ ಅಚ್ಚರಿಯಾಯಿತು. ಅವರಿಗೆ ತಮ್ಮ ಬೂಟುಗಳನ್ನು ಪ್ರಸಂಗ ಬಂದಾಗಲೆಲ್ಲ ನಾನೇ ಪಾಲಿಷ್ ಾಡುತ್ತಿರುವದು ಕಂಡುಬಂದಿತು.

ಇನ್ನೊಂದು ಸಲ ರತಿಭಾಯಿ ಜೋಶಿ ಎಂಬ ಮಿತ್ರರು ಇಪ್ಪತ್ತು ಇಪ್ಪತ್ತೈದು ಜನ ಡನೆ ನಮ್ಮ ಮನೆಗೆ ಬಂದರು. ಅದು ಬೇಸಿಗೆಕಾಲ. ನನ್ನ ಯಜಮಾನರು ಇಪ್ಪತ್ತೈದು ೀಟ ಶರಬತ್ತು ಮಾಡಲು ಹೇಳಿಕಳಿಸಿದರು. ಆ ಪ್ರದೇಶದಲ್ಲಿ ಸುಲಭವಾಗಿ ನಿಂಬೆ ಣ್ಣು ಸಿಕ್ಕುತ್ತಿರಲಿಲ್ಲ. ಒಮ್ಮೆಲೆ ಹೀಗೆ ಹೇಳಿಕಳಿಸಿದರೆ ನನ್ನ ಪರಿಸ್ಥಿತಿ ಹೇಗಾಗಬೇಕು ದು ಬಹುಶಃ ಅವರಿಗೆ ಹೊಳೆಯಲಿಲ್ಲ. ಆಗ ನನಗೇ ಒಂದು ಸ್ಫೂರ್ತಿ ಬಂತು.

ಮನೆಯಲ್ಲಿ ಹೊಸ ಹುಣಿಸೆ ಹಣ್ಣಿತ್ತು. ಅದನ್ನೇ ಸ್ವಚ್ಛವಾಗಿ ತೊಳೆದು ಹುಳಿಹಿಂಡಿ ೀಸಿತ್ತೆಗೆದೆ. ಕೇಶರ, ಏಲಕ್ಕಿ, ಸಕ್ಕರೆ ಹಾಕಿ ಪಾನಕ ಸಿದ್ಧಗೊಳಿಸಿದೆ. ಅದನ್ನು ಕುಡಿದ ಥಿಗಳೆಲ್ಲ ಸಂತೋಷಪಟ್ಟರು. ಅವರು ಸಂತೋಷ ಪಡುವಾಗ ನಾನು ಅದೆಂಥ ಮಾಧಾನದ ಉಸಿರುಬಿಟ್ಟೆನೆಂಬುದು ನನಗೇ ಗೊತ್ತು.

ಇನ್ನು "ಭೂತದ ಬಂಗ್ಲೋ" ಎಂದು ಹೆಸರಾದ ದೊಡ್ಡ ಕಟ್ಟಡದಲ್ಲಿ ನಾನೊಬ್ಬಳೇ ದ್ದದ್ದೂ ಒಂದು ದೊಡ್ಡ ಕತೆ. ಆದರೆ ಅಲ್ಲಿ ನಡೆದ ಒಂದು ಸ್ವಾರಸ್ಯಕರ ಸಂಗತಿಯನ್ನು ಾತ್ರ ಇಲ್ಲಿ ಸ್ಮರಿಸಿಕೊಳ್ಳುತ್ತೇನೆ.

ಇಂದು ಶ್ರೀ ಗೋಕಾಕರು ಪ್ರಖ್ಯಾತರಾಗಿ ಅನೇಕ ಮಿತ್ರರಿಂದ ಮನ್ನಣೆಪಡೆಯುತ್ತಿ ್ದರೆ. ಆದರೆ ಅವರಿಗೆ ದೊರಕುತ್ತಿರುವ ಈ ಮನ್ನಣೆಯ ಹಿಂದೆ ಒಂದು ಸಂತತ ಶ್ರಮ, ಸತ್ಯನಿಷ್ಠೆ, ಧರ್ಮಬುದ್ಧಿ, ಕಠೋರವಾದ ನಿಯಮಪಾಲನೆಯಿದ್ದರೂ ೋಮಲ ಅಂತಃಕರಣ—ಇವು ಗುಪ್ತವಾಗಿ ನಿಂತಿರುವದನ್ನು ನಾನು ಮೂವತ್ತು ರುಷಗಳಿಂದ ಕಾಣುತ್ತಿದ್ದೇನೆ. ಶ್ರೀ ಗೋಕಾಕರ ಕೋಮಲತೆಯನ್ನು ಕಂಡವರಿಗೆ ಅವರ ೋರತೆ ಅರ್ಥವಾಗುವದಿಲ್ಲ. ಅವರ ಕಠೋರತೆಯನ್ನು ಕಂಡವರಿಗೆ ಕೋಮಲತೆಯೂ ರ್ಥವಾಗುವದಿಲ್ಲ. ಆದರೆ ಇವೆರಡೂ ಅವರ ಸತ್ಯನಿಷ್ಠೆಯ ಪರಿಣಾಮಗಳಾಗಿವೆಯೆಂದು ನು ಅಖಂಡವಾಗಿ ಕಂಡಿದ್ದೇನೆ. ಅನೇಕ ವಿದ್ಯಾರ್ಥಿಗಳು ನನ್ನ ಯಜಮಾನರಿಂದ ಾಯ ಪಡೆದು ಮುಂದೆ ಬರುತ್ತಿರುವಾಗ ಕೆಲವೊಂದು ಸಲ ಆ ವಿದ್ಯಾರ್ಥಿಗಳ ಹಿತದ ್ಟಿಯಿಂದ ಅವರು ಕಠೋರವಾಗಿ ನುಡಿದದ್ದುಂಟು. ಅಂಥ ಪ್ರಸಂಗದಲ್ಲಿ ವಿದ್ಯಾರ್ಥಿ

ಗಳಿಗೆ ಸಮಾಧಾನ ಹೇಳುವ ಕೆಲಸ ನನ್ನ ಪಾಲಿಗೆ ಬರುತ್ತಿತ್ತು. ಬಹುಶಃ ನನ್ನ ಯ
ಮಾನರ ಕಠೋರ ಸತ್ಯನಿಷ್ಠೆಯ ಹಿಂದಿನ ಕೋಮಲಾಂತಃಕರಣವೇ ನನ್ನ ಮೂಲ
ವ್ಯಕ್ತವಾಗುತ್ತಿತ್ತು ಎನ್ನಿಸುತ್ತದೆ.

ಇದೇ ರೀತಿ ಶ್ರೀ ಗೋಕಾಕರ ಅಂತಃಕರಣದ ಕೋಮಲತೆಯ ಅತ್ಯಂತ ಸೂಕ್ಷ
ರೂಪವನ್ನೂ ಕಂಡಿದ್ದೇನೆ. ಅವರಿಗೆ ಅನ್ಯಾಯವನ್ನು ಕಂಡರೆ ನೋಡಲಾಗುವದಿ
ಎಲ್ಲಿಯಾದರೂ ತಾವು ಸಹಾಯಮಾಡಲಾಗದ ಅನ್ಯಾಯದ ಪ್ರಸಂಗವನ್ನು ಕಂಡ
ಅವರಿಗೆ ರಾತ್ರಿಯೆಲ್ಲ ನಿದ್ರೆ ಹತ್ತುತ್ತಿರಲಿಲ್ಲ.

ಇಂಥ ವ್ಯಕ್ತಿಯ ಕೈಹಿಡಿದು ಸಂಸಾರ ನಡೆಸುವಾಗ ಜೀವಕ್ಕೆ ಶಿಕ್ಷಣ ಸಂಸ್ಕಾ
ಕೊಡುವಂಥ ಅನೇಕ ಅಪೂರ್ವ ಸಂಗತಿಗಳು ನಡೆದು ಹೋಗುವದು ಸಹಜವಾಗಿದೆ.

ಮುಖ್ಯವಾಗಿ ಶ್ರೀ ಗೋಕಾಕರ ಕಾರ್ಯತನ್ಮಯತೆ ಅನೇಕ ಸಲ ಸಂಸಾರದಲ್ಲಿ
ಅಲಕ್ಷ್ಯ, ಔದಾಸೀನ್ಯವೆಂಬಂತೆ ಕಂಡರೆ ಆಶ್ಚರ್ಯವಲ್ಲ. ವೀಸನಗರದಲ್ಲಿ ಅವರು ಒಂ
ಕಾಲೇಜಿನ ಪ್ರಿನ್ಸಿಪಾಲರಾಗಿ ಕೆಲಸ ಮಾಡುತ್ತಿರುವಾಗ, ಅವರೊಡನೆ ನಾನೊಬ್ಬ
ನಿಂತು ಸಂಸಾರ ನಡೆಸುವಾಗ ಇಂಥ ಕಾರ್ಯತನ್ಮಯತೆಯ ಪರಿಣಾಮ ನನ್ನ ಮೇ
ವಿಶೇಷವಾಗಿ ಆಗುತ್ತಿತ್ತು.

ವೀಸನಗರದಲ್ಲಿ ನಾವಿರುವ ಮನೆಗೆ ಜನರು ಭೂತದ ಬಂಗ್ಲೆ ಎಂದು ಆಡಿಕೊಳ
ತ್ತಿರುವ ಸಂಗತಿಯನ್ನು ನನ್ನ ಯಜಮಾನರು ನನಗೆ ತಿಳಿಸಿರಲಿಲ್ಲ. ಹೀಗಿರುವಾಗ ಒಂದ
ದಿನ ಮಧ್ಯಾಹ್ನ ಆ ದೊಡ್ಡ ಕಟ್ಟಡದ ಮೇಲ್ಭಾಗದಿಂದ ಯಾರೋ ಮರಣಾಸನ್ನರಾ
ನರಳಿಕೆಯಿಂದ ಕೂಡಿ ಶ್ವಾಸೋಚ್ಛ್ವಾಸ ಮಾಡುತ್ತಿರುವಂತೆ ಕೇಳಿಸತೊಡಗಿತ
ಅದೇನೆಂದು ಅರ್ಥವಾಗದೆ ಸ್ವಲ್ಪ ಗಾಬರಿಯಿಂದಲೇ ಮನೆಯಲ್ಲಿದ್ದ ಸಿಪಾಯಿಯನ
ಕೇಳಿದೆ. ಆ ಮನುಷ್ಯ ಅತ್ಯಂತ ಸಹಜವಾಗಿ ಹೇಳಿದ:

“ಏನಿಲ್ಲಮ್ಮ, ಇದಕ್ಕೆ ಭೂತದ ಬಂಗ್ಲೊ ಎನ್ನುತ್ತಾರೆ.” ಆ ಮಾತನ್ನು ಕೇ
ನನ್ನ ಸ್ಥಿತಿಯೇನಾಗಿರಬೇಕು? ಆದರೂ ಧೈರ್ಯ ತಂದುಕೊಂಡು “ಭೂತವೆಲ್ಲಿಂ
ಬಂದೀತು. ಮತ್ತೇನಾದರೂ ಪಕ್ಷಿಯ ಧ್ವನಿಯಿರಬೇಕು ನೋಡು” ಎಂದೆ.

ಕೊನೆಗೆ ಪರೀಕ್ಷೆ ಮಾಡಿದಾಗ ಆ ದೊಡ್ಡ ಕಟ್ಟಡದ ಗೋಪುರ ಭಾಗದಲ್ಲಿ ಪಾರಿವಾ
ಗಳು ಗೂಡು ಕಟ್ಟಿದ್ದವು. ಅವುಗಳ ಗುಟುರುಧ್ವನಿ ನಮ್ಮ ಪಾಲಿಗೆ ಭೂತದ ನರಳಿ
ಯಾಗಿ ಕೇಳಿತ್ತು.

ನಿಜವಾಗಿ ವೀಸನಗರದ ವಾಸ ನಮ್ಮಿಬ್ಬರಿಗೂ ಮರೆಯಲಾಗದ ಅನುಭವ ತಂದ
ಕೊಟ್ಟಿದೆ. ಹುಟ್ಟಿದೂರಿನಿಂದ ಬಹು ದೂರಬಂದು ದೆವ್ವದ ಮನೆಯೆಂದು ಹೆಸರು ಪಡೆ
ಮನೆಯಲ್ಲಿ ಹಾವು ಚೇಳುಗಳ ಬಳಗದ ನಡುವೆ ನಾನು ಸಂಸಾರ ಹೂಡಿದ್ದೆ. ಗು
ರಾತಿ ಭಾಷೆಯನ್ನು ಕಲಿತು ಅಲ್ಲಿಯ ಜನರೊಡನೆ ಹೊಂದಿಕೊಳ್ಳಲು ಪ್ರಯತ್ನಿಸಿದ್ದೆ

ಷವನ್ನು ತಿಳಿದುಕೊಳ್ಳಲು ಪ್ರಯತ್ನಿಸಿದ್ದೆ. ಅಲ್ಲಿಯ ಜನರು ಸ್ನೇಹಪರರು. ಆದರೆ
ರಲ್ಲಿ ಕೆಲವು ನಂಬಿಕೆಗಳಿದ್ದವು. ಹಾವು ಕೊಲ್ಲಬಾರದೆಂಬುದು ಅಂಥವುಗಳಲ್ಲಿ ಒಂದು
ಬಿಗೆಯಾಗಿತ್ತು. ಅಷ್ಟೇ ಅಲ್ಲ, ಮೇಲಿಂದ ಮೇಲೆ ಕಾಣುವ ಹಾವುಗಳನ್ನು ಮಡಕೆ
ಲ್ಲಿ ಹಿಡಿದುತಂದು "ಭೂತದ ಬಂಗ್ಲೋ"ದ ಆವರಣದಲ್ಲಿ ಬಿಡುತ್ತಿದ್ದರು. ನಮ್ಮ
ಯ ಸುತ್ತಲೂ ಸಹಜ ನೋಡಿದರೆ ಒಂದು ಬಿರುಕಿನಲ್ಲಿ ಹಾವು ಹೆಡೆಯೆತ್ತಿ
ತಿರುವದು ಕಾಣುತ್ತಿತ್ತು. ನನಗಂತೂ ಇದು ಅರ್ಥವಾಗದ ಸನ್ನಿವೇಶವಾಗಿ ಕಂಡಿತು.
ಹೀಗಿರುವಾಗ ಒಂದು ದಿನ ಮಧ್ಯಾಹ್ನ ಮನೆಯಲ್ಲಿ ಹಾವು ಬಂತು. ಸಿಪಾಯಿಗಳು
ಹಾವನ್ನು ಕೊಲ್ಲಲು ಸಿದ್ಧರಿಲ್ಲ. ನಾನೇ ಕೊನೆಗೆ ಸಿಪಾಯಿಗೆ ಕೇಳಿದೆ:

"ಅಲ್ಲಪ್ಪ, ನೀವು ಹಾವು ಕೊಲ್ಲಬಾರದೆಂದು ಧರ್ಮ ಹೇಳುತ್ತೀರಿ. ನಾವು ದೂರ
ದಿಂದ ಬಂಧುಬಳಗ ಬಿಟ್ಟು ಬಂದಿದ್ದೇವೆ. ನಾವು ಸುರಕ್ಷಿತವಾಗಿರುವಂತೆ ನೋಡು
ದೂ ನಿಮ್ಮ ಧರ್ಮವಲ್ಲವೆ?"

ಅಷ್ಟೆಲ್ಲ ಮಾತಾದ ಮೇಲೆ ಅವರು ಹಾವನ್ನು ಕೊಂದರು. ನಾನೂ ಅವರ ಧರ್ಮ
ದ್ಧಿಗೆ ತೃಪ್ತಿಯಾಗುವಂತೆ ಕಾಸುಕೊಟ್ಟು ಹಾವನ್ನು ಸುಡಿಸುವ ಧಾರ್ಮಿಕ ಕ್ರಿಯೆ
ಡಲು ಸಹಾಯ ಮಾಡಿದೆ.

ಇದು ನನ್ನ ಸ್ಥಿತಿಯಾದರೆ ಶ್ರೀ ಗೋಕಾಕರ ಸ್ಥಿತಿಯೂ ಒಂದು ರೀತಿಯಿಂದ ಬಹು
ಕರವಾಗಿತ್ತು. ಹೊಸ ಸಂಸ್ಥೆ ಕಟ್ಟುವ ಕಾರ್ಯ ಗುರುತರವಾಗಿತ್ತು. ಆಗಲೇ ಹೇಳಿದಂತೆ
ರರೆಲ್ಲ ಹೊಟ್ಟೆ ತುಂಬಿದವರು. ಮೈಮುರಿದು ದುಡಿಯಲು ಮನಸ್ಸಿಲ್ಲದವರು.
ಬಂದುಸಲ ಸಹಸ್ರಾರು ಕುರ್ಚಿ, ಟೇಬಲ್, ಕಪಾಟುಗಳು ಬಂದಿದ್ದವು. ಅವುಗಳನ್ನು
ಜೋಡಿಸುವ ಕಾರ್ಯವಿತ್ತು. ಆದರೆ ಒಬ್ಬನೂ ಮುಂದೆ ಬರಲಿಲ್ಲ. ಪ್ರಿನ್ಸಿಪಾಲ ಸಾಹೇಬ
ದ ನನ್ನ ಯಜಮಾನರು ಸ್ವತಃ ಕೋಟು ಬಿಚ್ಚಿ ಕುರ್ಚಿ, ಕಪಾಟು ಜೋಡಿಸಿಡಲು
ರಂಭಿಸಿದರು. ಆಗ ಉಳಿದವರಿಗೆ ನಾಚಿಕೆಯಾಗಿ ಸಹಾಯಕ್ಕೆ ಮುಂದೆ ಬಂದರು.

ಇದೆಲ್ಲ ಸಂಗತಿಗಳನ್ನು ನೆನೆಯುವಾಗ ನನಗೆ ಒಂದು ಸಂಗತಿ ಸ್ಪಷ್ಟವಾಗಿ
ಣುತ್ತಿದೆ:

ಶ್ರೀ ಗೋಕಾಕರು ಯಾವುದೋ ಒಂದು ಆದರ್ಶ ಬುದ್ಧಿಯಿಂದ ಶ್ರದ್ಧೆಯಿಂದ ದುಡಿ
ತ್ತಿರುತ್ತಾರೆ. ಅವರ ಜೀವನದ ಸಾಧನೆಯಲ್ಲಿ ನಾನು ದೃಢವಾದ ಬೆಂಬಲಿಗಳಾಗಿ
ಬೇಕು. ಇದು ನನ್ನ ಜೀವನದ ತಪಸ್ಸು; ಸಾಧನೆ. ನಮ್ಮ ಸಂಸಾರದಲ್ಲಿ ನಾವಿಬ್ಬರೂ
ಸ್ಪರ ಆಸರೆಯಾಗಿ, ಸ್ನೇಹಿತರಾಗಿ ನಿಂತಿದ್ದೇವೆ. ಈಗ ಷಷ್ಟ್ಯಬ್ದಿ ಸಮಾರಂಭದಲ್ಲಿ
ಗೋಕಾಕರಿಗೆ ತುಲಾಭಾರವಾಗಬೇಕೆಂದರೆ, ಪರಸ್ಪರ ಒಬ್ಬರಿಗೊಬ್ಬರು ಭಾರವಾಗ
ತಿರುವದೇ ನಿಜವಾದ ತುಲಾಭಾರವೆಂದು ನಮ್ಮ ನಂಬಿಗೆಯಾಗಿದೆ. ಪರಸ್ಪರತಿಳಿವಳಿಕೆ
ದ ಸಂಸಾರ ಅರ್ಥಪೂರ್ಣವಾಗಿ ಕಂಡಿದೆ. ದೈವೀ ಸಹಾಯದಲ್ಲಿ ನಂಬಿಕೆ ಬೆಳೆದಿದೆ.

ಅನೇಕರು ಶ್ರೀ ಗೋಕಾಕರನ್ನು ಧಾರ್ಮಿಕರಲ್ಲವೆಂದು ಅಂದಿರುವದನ್ನು ನಾ
ಕೇಳಿದ್ದೇನೆ. ಆದರೆ ಇವರ ದೈವೀಶ್ರದ್ಧೆ, ಧರ್ಮದೃಷ್ಟಿ ಎಂಥವೆಂದು ನನ್ನ ದಾಂಪ
ಜೀವನದಲ್ಲಿ ಕಂಡುಕೊಂಡಿರುವೆ. ಸತ್ಯನಿಷ್ಠೆ, ಪ್ರಾಮಾಣಿಕ ಕಾರ್ಯತತ್ಪರತೆ, ವಿವೇ
ಬುದ್ಧಿ—ಇವು ಶ್ರೀ ಗೋಕಾಕರ ಆಂತರಿಕ ಜೀವನದ ಧಾರ್ಮಿಕ ಲಕ್ಷಣಗಳಾಗಿ
ಇವರ ಷಷ್ಟ್ಯಬ್ದಿ ಪೂರ್ತಿಯ ಸಮಾರಂಭದಲ್ಲಿ ಇವನ್ನೆಲ್ಲ ಶ್ರದ್ಧೆಭಕ್ತಿಯಿಂದ ಸ್ಮ
ಕೊಂಡು ಪರಮಾತ್ಮನಲ್ಲಿ ಅವರ ಮಂಗಲವನ್ನು ಪ್ರಾರ್ಥಿಸುತ್ತೇನೆ.

'ದಾದಾ'

ಯಶೋದಾ ಭಟ್ಟ

ಊರಿಗೆ ಅರಸನಾದರೆ ತಾಯಿಗೆ ಮಗ'—ಇದು ಕನ್ನಡದಲ್ಲಿಯ ಗಾದೆ. ತಾಯಿಗೆ
ಗೆ ಮಗನೋ, ಹಾಗೆಯೇ ಮಗಳಿಗೆ ತಂದೆಯೂ ಅಹುದೇನೋ! ಸತ್ಯವೂ ಗುಡ್ಡದ
ಯಲ್ಲಿ ವಾಸಿಸುವವರಿಗೆ ಎತ್ತರವೆಂದರೆ ಏನೆಂದು ತಿಳಿಯದೇನೋ! ಹೊರಗಿನವರಿಗೆಲ್ಲ
ಧ್ಯಾಪಕ—ಪ್ರಾಚಾರ್ಯ ಗೋಕಾಕರಾದರೆ, ಸಾಹಿತಿ ವಿನಾಯಕರಾದರೆ, ನನ್ನ
ಳಿಗೆ ನನ್ನ ತಂದೆ ನನ್ನ "ದಾದಾ"—ಅಂದಿನಿಂದ ಇಲ್ಲಿಯವರೆಗೂ! ಆ ನನ್ನ
ದಾದಾ"ರ ಕತೆಯನ್ನೇ ಇಲ್ಲಿ ಪ್ರಸ್ತಾಪಿಸಲೆ?

ಸುಮಾರು ಮೂವತ್ತು ವರ್ಷಗಳ ಹಿಂದಿನ ನೆನಹು: ಪ್ರಾಯಶಃ ಅದು ಸಂಜೆಯ
ತ್ತು. ಕಂದೀಲಿನ ಮಿಣಿಮಿಣಿ ಪ್ರಕಾಶದಲ್ಲಿ, ನಮ್ಮ ಮನೆಯ ಹಜಾರದಲ್ಲಿ ಕೆಲವು
ಕುಳಿತು ಹರಟುತ್ತಿದ್ದಾರೆ. ಆಗ ನನ್ನ ದಾದಾ ನನ್ನನ್ನು ಎತ್ತಿಕೊಂಡು ಗಟ್ಟಿಯಾಗಿ
ತನಾಡುತ್ತ—ಹರಟುತ್ತ ಅತ್ತಿತ್ತ ಓಡಾಡುತ್ತಿದ್ದಾರೆ. ದಾದಾ ಮಾತನಾಡಿದಾಗ
ರವೆಲ್ಲ ಸ್ತಬ್ಧ! ಆಗೊಮ್ಮೆ ಈಗೊಮ್ಮೆ ಒಂದೊಂದು ಪ್ರಶ್ನೆ—ನಗೆ. ಮತ್ತೆ ಮಾತಿನ
ನಲು! ಇದನ್ನೆಲ್ಲ ನನ್ನ ಪುಟ್ಟ ಕಣ್ಣುಗಳಿಂದ ಕಾಣುತ್ತ, ಪುಟ್ಟ ಕಿವಿಗಳಿಂದ
ುತ್ತ, ನಾನು ದಾದಾರ ಬಗಲಲ್ಲಿ ಕುಳಿತಿದ್ದೇನೆ—ನನಗೆ ಇದು ನನ್ನ ತಂದೆಯ
ತ್ತ ಮೊದಲನೆಯ ನೆನಹು.

ಮತ್ತೊಂದು ನೆನಹಿನ ಘಟ್ಟ: ಸಾಂಗಲಿಯ ವಿಲಿಂಗ್ಡನ್ ಕಾಲೇಜಿನ ಪಟಾಂಗಣ
ದೊಡ್ಡದೊಂದು ಸಭೆ. ಡಾ. ರಾಧಾಕೃಷ್ಣನ್ನರವರು ಮುಖ್ಯ ಅತಿಥಿಯಾಗಿ
ದಿಕೆಯ ಮೇಲೆ ಮಂಡಿಸಿದ್ದಾರೆ. ಆಗ ದಾದಾ—ವಿಲಿಂಗ್ಡನ್ ಕಾಲೇಜಿನ
ಚಾರ್ಯ—ವೇದಿಕೆಯ ಮೇಲೆ ನಿಂತು ಜೋರಾಗಿ, ಭಾವಾವೇಶಯುಕ್ತವಾಗಿ
ತಾಡುತ್ತಿದ್ದಾರೆ. ಆಗ ಸುಮಾರು ಎಂಟುವರುಷದವಳಾದ ನಾನು ನನ್ನ ಗೆಳತಿಯ
ಡನೆ ಕಾಲೇಜಿನ ಮಹಡಿಯ ಕೋಣೆಯ ಗವಾಕ್ಷದಿಂದ ಇಣಿಕಿ ಕೆಳಗೆ ಜರಗುತ್ತಿದ್ದ
ಯನ್ನು ಪಿಳಿಪಿಳಿ ಕಾಣುತ್ತಿದ್ದೇನೆ. "ಅದೋ ನಿನ್ನ ದಾದಾ ಮಾತನಾಡುತ್ತಿ
ರೆ—" ಎಂದು ನನ್ನ ಓರಿಗೆಯ ಗೆಳತಿ ದೊಡ್ಡದನಿಯಲ್ಲಿ ಚೀರುತ್ತಾಳೆ. ಆಗ ಕೆಳಗೆ
ತ ಸಭಿಕರಲ್ಲಿ ಹಲವರು ತಲೆಯೆತ್ತಿ ನಮ್ಮನ್ನು ದಿಟ್ಟಿಸುತ್ತಾರೆ. ಆಗ ನಗುತ್ತ ನಾವು

ಅಲ್ಲಿಂದ ಪಲಾಯನ ಕೀಳುತ್ತೇವೆ. "ದಾದಾ"ರನ್ನು ನೆನೆದಾಗಲೆಲ್ಲ ನನಗಾಗುವ ಮೊದ
ನೆನಹುಚಿತ್ರಗಳಲ್ಲಿ ಇದೊಂದು!

ನನ್ನ ತಂದೆಯನ್ನು ಕುರಿತು ಎಣಿಸಿದಾಗಲೆಲ್ಲ ನನಗೆ ಈ ಎರಡು ಚಿತ್ರಗಳು ಕಣ್ಣ
ಕಟ್ಟುತ್ತವೆ. ಪ್ರಾಯಶಃ ಈ ಎರಡು ಚಿತ್ರಗಳು ನನ್ನ ತಂದೆಯ ವ್ಯಕ್ತಿತ್ವದ ಎರ
ಮುಖಗಳೇನೊ!—ಮುಗ್ಧಹೃದಯದ ತುಂಬಿದೆದೆಯ ತಂದೆಯ ಚಿತ್ರ ಮೊದಲ
ದಾದರೆ, ಉಜ್ವಲ ಕೀರ್ತಿಯ ಖ್ಯಾತನಾಮ ಸಾಹಿತಿಯ, ಪ್ರಾಚಾರ್ಯರ ಚಿತ್ರ ಎರ
ನೆಯದು. ನಾನು ಕಾಣುವ ನನ್ನ 'ದಾದಾ'ರ ಚಿತ್ರದಲ್ಲಿ ಈ ಎರಡೂ ಮುಖಗ
ಹಾಸುಹೊಕ್ಕಾಗಿ ಬೆರೆತುಕೊಂಡಿವೆ.

ದಾದಾ ಇಲ್ಲದ ನಮ್ಮ ಮನೆ—ಮನಸ್ಸು ಯಾವಾಗಲೂ ಭಣಭಣವಾಗಿರುತ್ತಿತ್ತ
ನನ್ನ ತಂದೆಯವರು ಮನೆಯ ವಾತಾವರಣವನ್ನು ತುಂಬಿರುವದರ ಜೊತೆಗೆ ಅದನ
ಬೆಳಗುತ್ತಿದ್ದರು. ಮಧುರ ಹೂವಿನ ಇಡಿಗಂಪು ತೋಟವನ್ನೆಲ್ಲ ಧನ್ಯವಾಗಿಸಿದಂ
ಊದಬತ್ತಿಯ ಪರಿಮಳವೆಲ್ಲ ಕೋಣೆಯನ್ನು ತುಂಬಿದಂತೆ, ನನ್ನ ತಂದೆಯ ವರ್ಚಸ
ತುಂಬಿದ, ಮಮತೆ ತುಂಬಿದ ವ್ಯಕ್ತಿತ್ವ ಮನೆಗೆ ಸಾಕಾರವನ್ನೀಯುತ್ತಿತ್ತು. ಮನೆಯ
ನಾವೆಲ್ಲರೂ ಕೂಡಿ ಬಾಯಿ ಬತ್ತುವ ತನಕ ಹರಟುತ್ತಿದ್ದುದು ನಿತ್ಯ ಊಟದಮೆ
ಯಲ್ಲಿ! ಅದು ನಮ್ಮ ಮನೆಯ 'ಪಾರ್ಲಿಮೆಂಟು' ಕೂಡುವ ವೇಳೆ. ಗಂಟೆ ಎರಡು ಗಂ
ಯಾದರೂ, ಉಂಡ ಕೈ ಒಣಗಿಹೋದರೂ, ನಮ್ಮ ಮನೆಯ 'ಪಾರ್ಲಿಮೆಂಟ
ಮುಗಿದಿರುತ್ತಿರಲಿಲ್ಲ. ಮಾತು—ಮಾತು—ಮುಗಿಯದ ಮಾತು! ನಮ್ಮ ಪಾ
ಮೆಂಟಿಗೆ ದಾದಾರೇ ಸ್ಪೀಕರ ಹಾಗೂ ಸಭೆಯ ನಾಯಕ! ದಾದಾ ಮಾತನಾಡಿದಾ
ಕಾಲವೂ ಸ್ತಬ್ಧವಾಗಿ ನಿಂತು ಆಲಿಸುತ್ತಿತ್ತೇನೊ! ಇದೆಲ್ಲವೂ ನಿಜ. ಆದರೂ ದಾ
ಊಟದಮೇಜಿನ ಸರ್ವಾಧಿಕಾರಿಯಾಗಿರಲಿಲ್ಲ! ಕುಟುಂಬದ ನಾವೆಲ್ಲರೂ ದಿನದ ಪಾ
ಮೆಂಟನಲ್ಲಿ ಭಾಗವಹಿಸುತ್ತಿದ್ದೆವು, ಕಿರಿಯರು ಹಿರಿಯರು ಎಂಬ ಭೇದವಿಲ್ಲದೆಯೆ!
ನಮ್ಮ ಹಗುರ ಹರಟೆಗೆ ವಿಷಯ ವೈವಿಧ್ಯವಿದ್ದಂತೆಯೇ, ಗ್ರೀಕರ ಪುರಾ
ಕಾವ್ಯದಂತೆ, ಯಾವ ವಿಷಯವೂ ಬಾಹಿರವಾಗಿರಲಿಲ್ಲ! ಮಕ್ಕಳಾದ ನಮ್ಮ ದೈನಂ
ಜೀವನದ ಸಿಹಿ-ಕಹಿ ಅನುಭವಗಳು, ಮನೆಯ ನಿತ್ಯದ ತಿಂಡಿ-ಅಡುಗೆ, ಪರಿಚಿ
ಮನೆಯ ಸ್ವಾರಸ್ಯ ಪ್ರಸಂಗಗಳು, ದಾದಾರ ಹಳೆಯ ಅನುಭವಗಳು, ಇತ್ತೀಚಿನ ಬ
ಗಳು, ಸಾಹಿತ್ಯ, ರಾಜಕಾರಣ—ನಮ್ಮ 'ಪಾರ್ಲಿಮೆಂಟ'ನಲ್ಲಿ ಚರ್ಚಿಸದ ವಿಷ
ಗಳಿಲ್ಲ! ನಾವೆಲ್ಲರೂ ಚರ್ಚೆಯಲ್ಲಿ ಭಾಗವಹಿಸುವವರೇ ಮುಕ್ತ ಮನಸ್ಕರಾಗಿ—ಮು
ಕಂಠರಾಗಿ! ನಮ್ಮ ಮನೆಯ 'ಪಾರ್ಲಿಮೆಂಟ'ನ ಒಂದೆರಡು ಸ್ವಾರಸ್ಯ ಪ್ರಸಂಗಗಳನ
ನೆನೆಯಲೆ? ಒಮ್ಮೆ ಏನೊ ಹರಟುತ್ತ ಹರಟುತ್ತ ದಾದಾ ಹೇಳಿದರು: "ನಾನೊ
ಸ್ಟೇಟ್ಸಮನ್—ಯಾಕಂದರೆ ನಾನು ಹುಟ್ಟಿದ್ದು ಸವಣೂರು ಸಂಸ್ಥಾನದಲ್ಲಿ—ಕೇ

ತಿದ್ದು ಸಾಂಗಲಿ, ಹೈದರಾಬಾದು, ಬಡೋದಾ ಸಂಸ್ಥಾನಗಳಲ್ಲಿ! ಸಂಸ್ಥಾನಗಳಿಗೂ ಗೂ ನಿಕಟ ಸಂಬಂಧ! ಅಂತೆಯೇ ನಾನೊಬ್ಬ ಸ್ಟೇಟ್ಸಮನ್!" ಆಗ ನಾವೆಲ್ಲ ಷ್ಟೇ ನಕ್ಕಿದ್ದು! ಮತ್ತೊಂದು ಪ್ರಸಂಗ: ಯಾವುದೋ ಸ್ನೇಹಿತರ ವಿಷಯ ಸ್ತಾಪಿಸುತ್ತ, ದಾದಾ ಅಂದಿದ್ದರು, "ಅವರ ಮನೆಯಲ್ಲಿ ಅಡುಗೆ ಮಾಡುವಾಗಲೂ ಸ್ಕೃತ ಶ್ಲೋಕಗಳನ್ನು ಹೇಳುತ್ತಾರೆ". ಈಗಲೂ ನಾನು ಅಡುಗೆ ಮಾಡುವಾಗ ದಾರ ಮಾತು ನೆನಪಾಗಿ ತಡೆಯದೆ ನಗುತ್ತೇನೆ! ದಾದಾ ಬೇರೆ ಬೇರೆ ಊರುಗಳಿಗೆ ಚಾರಹೋಗಿ ಮರಳಿದಾಗ—ಕೆಲಸದ ನಿಮಿತ್ತ ಅವರು ಬಾರಿಬಾರಿ ಬೇರೆ ಬೇರೆ ರುಗಳಿಗೆ ಹೋಗಿಬರಬೇಕಾಗುತ್ತಿತ್ತು—ಬೇರೆ ಬೇರೆ ಊರಿನ ಜನರ ಬಗೆಗೆ ರಸ್ಯ ಘಟನೆಗಳ ವರದಿ ವಿವರ ನಮಗಾಗುತ್ತಿತ್ತು.

ದಾದಾ ತಮ್ಮ ವೃತ್ತಿಗಾಗಿ ಮಹಾರಾಷ್ಟ್ರ, ಗುಜರಾತ, ಆಂಧ್ರಪ್ರದೇಶ ಎಂದೆಲ್ಲ ದಾಡಿದರೂ ನಮ್ಮ ಮನೆಯ ವಾತಾವರಣ ಸದಾಸರ್ವದಾ ಕನ್ನಡಮಯವೇ ಆಗಿ ದಿದೆಯೆಂದರೆ ಸೋಜಿಗವೇ! ಕನ್ನಡವೇ ನಮ್ಮ ಮನೆಯ ಉಸಿರು! ಗುಜರಾತದಲ್ಲಿ ಜರಾತಿಯನ್ನೂ, ಮಹಾರಾಷ್ಟ್ರದಲ್ಲಿ ಮರಾಠಿಯನ್ನೂ, ಹೈದರಾಬಾದಿನಲ್ಲಿ ತೆಲುಗನ್ನೂ ಯಬೇಕಾದ ನಮಗೆ ಶುದ್ಧವಾಗಿ ಸರಳವಾಗಿ ಕನ್ನಡದಲ್ಲಿ ಮಾತನಾಡುವದೂ ಯಾಸದ ವಿಷಯವಾಗಿದ್ದರೆ ಆಶ್ಚರ್ಯವೇನು? ಓದುವದಂತೂ—ಬರೆಯುವದಂತೂ ಷ್ಟು ಪ್ರಯಾಸದ ಮಾತು! ಇಷ್ಟೇ ಅಲ್ಲ; ಹೊರಗಿನ ವಾತಾವರಣದಿಂದಾಗಿ ಡಿಗರಾಗಿ ನಾವು ಉಳಿಯುವದೂ, ಕನ್ನಡ ಭಾಷೆಯ ಬಗ್ಗೆ ಪ್ರೇಮಾದರಗಳನ್ನು ಸುವದೂ ಕಷ್ಟದ ವಿಷಯ ಆಗಿತ್ತು; ನನ್ನ ಶಿಕ್ಷಣ ನಾನು ಪ್ರಾರಂಭಿಸಿದ್ದು ಮರಾಠಿ ಲ್ಲಿ! ನನ್ನ ತಂಗಿ—ತಮ್ಮ ಗುಜರಾತಿಯಲ್ಲಿ! ಇಷ್ಟಿದ್ದೂ, ಇಂದು ನಮಗೆ ಕನ್ನಡದ ಅಭಿಮಾನ-ಆದರ ಉಳಿದುದು ದಾದಾರ ಪ್ರೇರಣೆ ಹಾಗೂ ಸತತ ಪ್ರೋತ್ಸಾಹ ವಾಗಿಯೇ!

ಕನ್ನಡವನ್ನು ನಮಗೆ ಕಲಿಸಲು, ಕನ್ನಡದ ಬಗ್ಗೆ ನಮಗೆ ಆದರಾಭಿಮಾನ ಉಳಿಯಲು ದಾ ಪಟ್ಟ ಪ್ರಯತ್ನ, ತೋರಿದ ಸಹನೆ ಅಷ್ಟಿಷ್ಟಲ್ಲ! ಅನೇಕ ಸಲ ರಜೆಯಲ್ಲಿ ಅವರೇ ಕುಳಿತುಕೊಂಡು ನಮಗೆ ಕನ್ನಡ ಅಕ್ಷರಗಳ ಪರಿಚಯ ಮಾಡಿಕೊಡುತ್ತಿದ್ದರು. ಡದಲ್ಲಿಯ ತಮ್ಮ ಬರೆಹಗಳನ್ನು—ಕವನಗಳನ್ನು ಓದಿ ಹೇಳಿ, ಕನ್ನಡಸಾಹಿತ್ಯದ ಕ್ಷಿಯನ್ನು ನಮಗೆ ಮಾಡುತ್ತಿದ್ದರು. ಸಂದರ್ಭವಿದ್ದಲ್ಲೆಲ್ಲಾ ನಮ್ಮನ್ನು ಕನ್ನಡ ರ್ಯಕ್ರಮಗಳಿಗೆ ಕರೆದುಕೊಂಡು ಹೋಗಿ ಕನ್ನಡದ ಬಗ್ಗೆ ಪ್ರೇಮಾದರಗಳನ್ನು ಮ್ಮಲ್ಲಿ ಉಂಟುಮಾಡುತ್ತಿದ್ದರು. ಅವರನ್ನು ಕಾಣಲು ಬರುತ್ತಿದ್ದ ಕನ್ನಡಮಿತ್ರರ ರ್ಕ ಸಾನಿಧ್ಯದಿಂದಾಗಿ ಕನ್ನಡತನ ನಮ್ಮಲ್ಲಿ ಉಳಿಯಿತು—ಚಿಗುರಿತು! ಹೊರ ಡಿನಲ್ಲಿ ಇದ್ದೂ ಬೆಳೆದೂ, ಅಲ್ಲಿಯ ಜನರೊಡನೆ ಬೆರೆತೂ, ಹೊರನಾಡಿನ ಭಾಷೆಗಳನ್ನು

ಕನ್ನಡಿಗರಾಗಿಯೇ ಕಲಿತೆವು. ದಾದಾರವರ ಅಲೆದಾಟದಿಂದ ಉದ್ಭವಿಸುತ್ತಿದ್ದ
ಭಾಷೆಯ ಸಮಸ್ಯೆ ನಮ್ಮೆಲ್ಲರ ಶೈಕ್ಷಣಿಕ ಸಮಸ್ಯೆಯೂ ಆಗಿತ್ತು. ಅದನ್ನು ಸರಿಯ
ತಿಳಿದು, ಅದನ್ನು ಪರಿಹರಿಸುವ ಬಗೆಯನ್ನು ಕಂಡುಹಿಡಿದು ಅದಕ್ಕಾಗಿ ತಾಳ್ಮೆಯಿ
ಪ್ರಯತ್ನವನ್ನು ಮಾಡುತ್ತಿದ್ದರು. ಅವರು ಹಾಗೆ ಮಾಡದಿದ್ದರೆ ಮಕ್ಕಳಾದ ನ
ಶಿಕ್ಷಣವೇ ಮುಂದೆ ಸಾಗುತ್ತಿರಲಿಲ್ಲ. "ವೀಸನಗರಕ್ಕೆಂದು ಕೈಯ ಬೀಸುತ ಬಂದೆ"
ಎಂದು ದಾದಾ ಹಾಡಿದ್ದರೂ ಅಲ್ಲಿ ಅನೇಕ ಜಟಿಲ ಸಮಸ್ಯೆಗಳು ತಲೆದೋರಿದ್ದ
ನಮ್ಮೆಲ್ಲರ ಶಿಕ್ಷಣದ ಸಮಸ್ಯೆ ಬಲು ದೊಡ್ಡ ಸಮಸ್ಯೆಯಾಗಿತ್ತು. ವೀಸನಗರದಲ್ಲಿ ಕೇ
ಗುಜರಾತಿ ಪ್ರಾಥಮಿಕ ಶಾಲೆಗಳು ಹಾಗೂ ಗುಜರಾತಿ ಮಾಧ್ಯಮವುಳ್ಳ ಹಾಯಸ್ಕೂ
ಗಳು! ನನ್ನ ತಮ್ಮ-ತಂಗಿ ಗುಜರಾತಿಯಲ್ಲೇ ಶ್ರೀ ಗಣೇಶಾಯ ನಮಃ ಪ್ರಾರಂಭಿಸಿದ
ಆದರೆ, ವೀಸನಗರಕ್ಕೆ ಬಂದಾಗ ಹಾಯಸ್ಕೂಲಿನಲ್ಲಿ ಓದುತ್ತಿದ್ದ ನನ್ನ ಶಿಕ್ಷಣ "ಮುಂದೆ
ಸಖಿ? ಮುಂದೇನೆ ಸಖಿ?" ಎಂದು ಗೊಣಗುತ್ತಿತ್ತು. ಗುಜರಾತಿಯ ಗಂಧವೂ ಬಾ
ನಾನು ಗುಜರಾತಿಯೇ ಮಾಧ್ಯಮವಾಗಿರುವ ಅಲ್ಲಿಯ ಹಾಯಸ್ಕೂಲಿನಲ್ಲಿ ಮುಂ
ವರೆಯುವದು ಹೇಗೆ? ಮನೆಯ ಮಕ್ಕಳನ್ನು ದೂರದ ಊರಿನ ಹಾಸ್ಟೆಲ್ಲಿನಲ್ಲಿ ಇಡ
ನನ್ನ ತಂದೆ-ತಾಯಿ ಇಬ್ಬರಿಗೂ ಮನಸ್ಸಿರಲಿಲ್ಲ, ಮನೆಯಲ್ಲಿಯ ವಾತಾವರಣ ಹಾ
ಸಂಸ್ಕಾರ ನಮಗೆ ಇರಲಿ ಎಂದು. ಇಂತಹ ಬಿಕ್ಕಟ್ಟಿನ ಪ್ರಸಂಗದಲ್ಲಿ ನನ್ನ ತಂದೆ ಹಾ
ತಾಯಿಯವರು ಧೈರ್ಯ-ಸಹನೆ ತೋರಿರದಿದ್ದರೆ, ಕಷ್ಟವನ್ನು ಸಹಿಸಿರದಿದ್ದರೆ ನ
ಶಿಕ್ಷಣ ಕನ್ನಡಿಯೊಳಗಿನ ಗಂಟಾಗುತ್ತಿತ್ತೇನೊ! ಅಷ್ಟೇ ಅಲ್ಲ, ಬೇರೆಯೇ ಪ್ರಾಂತದಿ
ಬಡೋದಾ ಸಂಸ್ಥಾನದಲ್ಲಿದ್ದ ವೀಸನಗರಕ್ಕೆ ಬಂದ ನನಗೆ ಸರಿಯಾದ ವರ್ಗದಲ್ಲಿ ಪ್ರವೆ
ದೊರೆಯುವದೂ ದುಸ್ತರವಾಗಿತ್ತು. ಈ ಬಗ್ಗಾಗಿಯೇ ನನ್ನ ತಂದೆಯವರು ಅಲ್ಲಿ
ಶಿಕ್ಷಣಮಂತ್ರಿಗಳನ್ನು ಕಂಡು ಶತಪ್ರಯತ್ನ ಮಾಡಬೇಕಾಯಿತು. ಇದು ಸಾಲದೆ
ಎಂಬಂತೆ, ನನ್ನ ತಮ್ಮ-ತಂಗಿ ಗುಜರಾತೀ ಪ್ರಾಥಮಿಕ ಶಾಲೆಗೆ ಹೋಗಲಾರಂಭ
ದಾಗ, ಅವರಿಗೆ ಗುಜರಾತೀ ಭಾಷೆ ಚೆನ್ನಾಗಿ ಬರುವವರೆಗೆ, ನನ್ನ ತಂದೆಯವರು ಸ್ವ
ನನ್ನ ತಂಗಿ-ತಮ್ಮಂದಿರ ಜೊತೆಯಲ್ಲಿ ಕುಳಿತು ಅವರ ಗುಜರಾತೀ ಶಿಕ್ಷಕರು ಕಲಿಸಿದ್ದ
ಕನ್ನಡದಲ್ಲಿ ಭಾಷಾಂತರಿಸಿ ಹೇಳಿಕೊಟ್ಟು, ನನ್ನ ತಮ್ಮ-ತಂಗಿಯರನ್ನು ಪ್ರೋತ್ಸಾ
ಸುತ್ತಿದ್ದರು. ಆಧುನಿಕ ಭಾರತದಲ್ಲಿ ಇದೂ ಸಹ ಒಂದು ಬಗೆಯ ಶೈಕ್ಷಣಿಕ ಪ್ರಯೋಗ
ಅಲ್ಲವೇ?

ದಾದಾರನ್ನು ನೆನೆದಾಗಲೆಲ್ಲ ನನಗೊಮ್ಮೆ ಬಿದ್ದ ವಿಚಿತ್ರ ಕನಸಿನ ನೆನಪಾಗುತ್ತ
ದಾದಾ ತಮ್ಮ ಕೋಣೆಯ ಕುರ್ಚಿಯ ಮೇಲೆ ಕುಳಿತು ಓದುತ್ತಿದ್ದಾರೆ. ಸುತ್ತಲ
ಪುಸ್ತಕಗಳ ಕಪಾಟುಗಳಿವೆ. ಆದರೆ ಆ ಕಪಾಟುಗಳಿಗೆಲ್ಲ ಉರಿ ಹತ್ತಿಬಿಟ್ಟದೆ. ಅವೇ
ಅವರು ಕುಳಿತ ಕುರ್ಚಿಗೂ ಕೆಳಗಿನಿಂದ ಉರಿ ಹತ್ತಿಬಿಟ್ಟಿತು. ಸುತ್ತಲೆಲ್ಲ ಹೊಗೆಯ

ಗೆ! ಆದರೆ ದಾದಾರಿಗೆ ಇದಾವುದೂ ಗೊತ್ತೇ ಆಗಿಲ್ಲ. ಅವರೋ ತಮ್ಮ ಸಾಧನೆ ಲ್ಲಿಯೇ ಮಗ್ನ! ಬಹುಶಃ ಇದು ಅವರ ವೈಯಕ್ತಿಕ ಜೀವನದ ಪ್ರತೀಕವೆನಿಸಬಹು ದ ಕನಸೇನೊ! ಅವರ ಜೀವನದಲ್ಲಿ ಇಂತಹ ಜಿಂಕಿ ಅದೆಷ್ಟು ಬಾರಿ ಹಬ್ಬಿ ಹರಡಿ ಯವಾಗಿದೆಯೊ! ಸಾಂಸಾರಿಕ ತಾಪತ್ರಯ, ಆರ್ಥಿಕ ಮುಗ್ಗಟ್ಟು, ಜೀವನವನ್ನು ಣ್ಣಾಗಿಸಿದ ಅನೇಕಾನೇಕ ನೋವು ನಿರಾಶೆಯ ಕಾಳ್ಗಿಚ್ಚು—ಒಂದಲ್ಲ, ಹಲವಾರು ತಡೆಗಳ ಅಲೆ ಅವರಿಗೆದುರಾಗಿವೆ. ಆದರೆ, ನಮ್ಮ ಸುದೈವ, ಕನ್ನಡದ ಸುದೈವ, ದಾ ಅದಾವುದಕ್ಕೂ ಬಗ್ಗದೆಯೆ ಬಳುಕದೆಯೆ ತಾವು ಕಂಡುಕೊಂಡ ಆದರ್ಶದ ದಲ್ಲಿ ಅಚಲರಾಗವೆ ಹೆಜ್ಜೆಯಿಟ್ಟ ಧೀಮಂತರಾಗಿ, ಭೀಮಬಲರಾಗಿ ಮುಂದುವರೆದಿ ರೆ. ತಮ್ಮ ಜೀವನದಲ್ಲಿ ಬಂದೊದಗಿದ ಎಲ್ಲ ಅಗ್ನಿಪರೀಕ್ಷೆಗಳಿಂದಾಗಿ ದಾದಾರ ತಃಸತ್ವ ಪುಟಿದು ಚಿಲ್ಲವರಿದಿದೆ; ಕಳೆಯೇರಿದೆ ಎಂದೇ ನನ್ನ ಅಭಿಪ್ರಾಯ. ದಾದಾರ ವನದಲ್ಲಿ ಎದ್ದ ನಡೆದ ಸಮುದ್ರಮಂಥನಗಳು ಅದೆಷ್ಟೋ; ಆದರೆ ಮಕ್ಕಳಾದ ಗೆ ಅದಾವುದರ ಝಳವೂ ಹತ್ತದಂತೆ ದಾದಾ ನಮ್ಮನ್ನು ಸಾಕಿದರು, ಸಲಹಿದರು. ಮ್ಮ ಜೀವನದಲ್ಲಿ ಯಾವ ಅಪಸ್ವರವನ್ನೂ ಕೇಳದೆಯೆ ನಾವು ಬಲಿತೆವು. ಇಂತಹ ಾನುಕೂಲ ಅಡಚಣೆ ಮನೆಯಲ್ಲಿ ಎದ್ದಿದೆ ಎಂಬುದು ಸಹ ತಿಳಿಯದೆಯೆ ಸುಖವಾಗಿ ಷ್ಟು ದಿನ ಜಾರಿದ್ದವು.

ಬಿಡುವಿಲ್ಲದ ತಮ್ಮ ದಿನಚರಿಯಲ್ಲಿ ಮಗ್ನರಾಗಿದ್ದ ನನ್ನ ತಂದೆಯವರಿಗೆ ಅದೆಷ್ಟೋ ಅವರಿಗೆ ಮಕ್ಕಳೊಡನೆ ಮಾತಾಡಲು ಸಹ ಬಿಡುವಿರುತ್ತಿರಲಿಲ್ಲ. ಆಗ ವಿಶೇಷ ಾತಾಡದೆಯೆ, ತಮ್ಮ ಸಣ್ಣಪುಟ್ಟ ಕೃತಿಯಿಂದಲೇ ತಮ್ಮ ತುಂಬಿದೆದೆಯನ್ನು ನಮಗೆ ದು ತೋರಿಸುತ್ತಿದ್ದರು; ಯಾವುದೋ ಸಭೆಗೋ, ಊರಿಗೋ ಹೋದವರು ಮನೆಗೆ ರಳಿದಾಗ ಅದೆಷ್ಟೋ ಸಲ ರಾತ್ರೆ ಹತ್ತು—ಹನ್ನೊಂದು ಘಂಟೆಯಾಗಿರುತ್ತಿದ್ದುದು ಗೆ ಸಾಮಾನ್ಯ ಅನುಭವ. ಹಾಗೆ ಅವರು ಮರಳಿದಾಗ ಒಂದೇ ನಾವು ಓದುತ್ತಿರು ದ್ದೆವು—ಅಥವಾ ಮಲಗಿರುತ್ತಿದ್ದೆವು. ದಣಿದು ಸಾಕಾಗಿ ಮನೆಗೆ ಬಂದ ತಂದೆಯವರು ವು ಓದುವ ಕೋಣೆಗೆ ಬಂದು ನಮ್ಮ ಓದು ಮೇಜಿನ ಮೇಲಿರುವ ಟೇಬಲ್ ಂಪನ್ನು ಅದೆಷ್ಟೋ ಬಾರಿ ಸರಿಸಿ ಸರಿಯಾಗಿ ಇಟ್ಟು ಹೋದ ಪ್ರಸಂಗಗಳನ್ನು ಇದೀಗ ಿಂದ ನೆನೆಯುತ್ತಿದ್ದೇನೆ. ಅದಲ್ಲ, ನಾವು ಮಲಗಿದ ಮಂಚದ ಸೊಳ್ಳೆ ಪರದೆಯನ್ನು ಮಾಡಿ ಕಟ್ಟಿ ಹೋದ ಪ್ರಸಂಗಗಳೂ ಬಹಳ. ಮಕ್ಕಳಾದ ನಾವು ಮಾಡಿದ—ಬರೇ ತ್ಸಾಹದಿಂದ ಆದರೆ ಏನೂ ಅನುಭವ ಇಲ್ಲದೆಯೆ—ಹೊಸ ತಿಂಡಿ, ಅಡುಗೆ ಏನಿದ್ದರೂ, ವಾ ನಾವು ಹೊಲಿದ ಬಟ್ಟೆ ಏನಿದ್ದರೂ ಹೇಗಿದ್ದರೂ, ಬಾಯಿತುಂಬ ಹೊಗಳು ದ್ದರು. ಆಗ ನಮ್ಮ ತಾಯಿ ನಗುತ್ತ ಹೇಳಿದ್ದುಂಟು: "ನಿಮ್ಮ ಮಗಳು ಮಾಡಿದ್ದು ಗೆ ಲೇಸೇ!"

ಸಾಮಾನ್ಯವಾಗಿ ಮಕ್ಕಳಿಗೆ ಸಣ್ಣಪುಟ್ಟ ಕೆಲಸ ಹಚ್ಚುವದು ವಾಡಿಕೆ. ನಮ್ಮ ಮನೆಯಲ್ಲಿ ಮಾತ್ರ ನಾವು ಇದಕ್ಕೆ ಅಪವಾದವಾಗಿಯೇ ಬೆಳೆದವು. ನಮ್ಮ ತಂದೆ ತಾಯಂದಿರು ಮನೆಯಲ್ಲಿ ಮಕ್ಕಳಾದ ನಮ್ಮನ್ನು ಎಂದೂ ದುಡಿಸಿದವರಲ್ಲ, ದಣಿಸಿದವರಲ್ಲ. ವೈಯಕ್ತಿಕವಾಗಿ ಅವರಿಗೆ ತೊಂದರೆ ಅಡಚಣೆ ಇದ್ದರೂ ಸಹ ತಾವಾಗಿ ಅವರು ನಮ್ಮಿಂದ ಸೇವೆ ಸಹಾಯವನ್ನು ಅಪೇಕ್ಷಿಸಿದವರಲ್ಲ. ಎಷ್ಟೋ ಸಲ, ನನ್ನ ತಂದೆಯವರಿಗೆ ಮನೆಯಲ್ಲಿ ಅನಾನುಕೂಲ ಅಡಚಣೆ ಆಗಿರಲೇಬೇಕು. ಆದರೂ ಅವರು ಮಕ್ಕಳಾದ ನಮ್ಮಿಂದ ಯಾವ ಬಗೆಯ ಸೇವೆಯನ್ನು ಬಯಸಿದವರಲ್ಲ. "ಆಲ್ಬಂ" ಎಂಬ ಅವರ ಕವನ ಇಂತಹ ಯಾವುದೋ ಅನಾನುಕೂಲ ಗಳಿಗೆಯಲ್ಲಿ ಹುಟ್ಟಿಬಂದಂತಿದೆ! ಛಾಯಾ ಚಿತ್ರಗಳ ಆಲ್ಬಂನಲ್ಲಿ ಅಂಟಿಸಬೇಕಾದ ಭಾವಚಿತ್ರಗಳು ಅದೆಷ್ಟೋ ಹರಡಿರುತ್ತಿದ್ದವು—ನಮ್ಮ ತಾಯಿಗೊ ಕೈತುಂಬ ಕೆಲಸ; ಮಕ್ಕಳಾದ ನಮಗೂ ತಲೆಯಲ್ಲಿ ನೂರಾರು ವಿಚಾರಗಳು; ಮಾಡಬೇಕೆಂಬ ಕೆಲಸಗಳಲ್ಲಿಯೇ ನಾವು ಮಗ್ನ! ಹಾಗಾದಾಗ ಆಲ್ಬಂ ವಿಚಾರ ಯಾರಿಗೆ? ಒಂಟಿಯಾಗಿ ಕೋಣೆಯಲ್ಲಿ ಕುಳಿತ ದಾದಾರಿಗೆ 'ಆಲ್ಬಂ' ನಮ್ಮ ಮನೆಯ ಜೀವನದ—ವಾತಾವರಣದ ದ್ಯೋತಕವಾಗಿ ಕಂಡಿದ್ದರೆ ಆಶ್ಚರ್ಯವೇನು?

ಈ ಸಂದರ್ಭದಲ್ಲಿ ನನ್ನ ತಾಯಿ—ಪೂಜ್ಯ "ವೈನಿ"ಯ ನೆನಪನ್ನು ಮಾಡಲೇಬೇಕೇನೊ! ನಮ್ಮ ಮನೆಯ ವಾತಾವರಣ, ಸಂಸ್ಕೃತಿ, ನಮಗೆ ಬಂದ ಸಂಸ್ಕಾರ ಇವುಗಳಿಗೆಲ್ಲ ನಮ್ಮ ತಾಯಿಯೇ ನಮಗೆ ಮಹದಾಧಾರ! ತನಗೆ ದೊರೆಯದ ಶಿಕ್ಷಣ ಸುಖ ತನ್ನ ಮಕ್ಕಳಿಗೆ ದೊರೆಯವೆಂದು ಅವಳು ತನ್ನೆಲ್ಲ ಆಸೆ ಆಕಾಂಕ್ಷೆಗಳನ್ನು ಹತ್ತಿಕ್ಕಿ ಹಗಲಿರುಳೆನ್ನದೆ ದುಡಿದು ದಣಿದವಳು. ಬಹುಮುಖ ಚಟುವಟಿಕೆಗಳಲ್ಲಿ ನಿಮಗ್ನರಾದ ತನ್ನ ಪತಿಯನ್ನು ನೋಡಿಕೊಂಡು, ಮಕ್ಕಳಾದ ನಮಗೆ ಯಾವ ಬಗೆಯ ಕೊರತೆ ತೊಂದರೆಯಾಗದಂತೆ ನಮ್ಮನ್ನು ಸಾಕಿಸಲಹಿದ ಮಾತಾಯಿ ನನ್ನ ವೈನಿ! ಬರಬರುತ್ತ ವ್ಯಕ್ತಿನಿಷ್ಠವಾಗುತ್ತಿದ್ದ ನಮ್ಮ ಸಮಾಜದಲ್ಲಿ ಭಾರತೀಯ ಪರಂಪರೆಯ ಪ್ರತೀಕವಾದ ವೈನಿಯಂತಹ ವ್ಯಕ್ತಿಗಳು ಮನನೀಯರಾಗಿದ್ದಾರೆ. ದಾದಾರ ಸಾಧನೆ ಸಿದ್ಧಿಗಳ ಭದ್ರ ಅಡಿಗಲ್ಲು ವೈನಿ! ನಾಲ್ಕು ಜನ ಊಟಕ್ಕೆ ಬರುತ್ತಾರೆ ಎಂದು ಮುಂಚಿತವಾಗಿ ಸೂಚನೆಕೊಟ್ಟ ದಾದಾ ಮನೆಗೆ ಬರುವಾಗ ಹತ್ತಾರು ಜನರನ್ನು ಕರೆದು ತಂದ ಪ್ರಸಂಗಗಳೂ ಅದೆಷ್ಟೋ! ವೈನಿ ಇಂತಹ ಎಲ್ಲ ಪ್ರಸಂಗಗಳನ್ನೂ ನಗುಮೊಗದಿಂದಲೇ ಎದುರಿಸಿದ ಸಾಧ್ವಿ. ಒಂದು ಸಲ ದಿವಂಗತ ಟಿ. ಪಿ. ಕೈಲಾಸಂರವರು ನಮ್ಮ ಮನೆಗೆ ಬಂದಿದ್ದಾಗ ನಡೆದ ವಿಷಯ ತುಂಬ ಸ್ವಾರಸ್ಯವೇ. ರಾತ್ರಿ ಊಟಕ್ಕೆಂದು ಎಲ್ಲವನ್ನೂ ಸಿದ್ಧಪಡಿಸಿಟ್ಟುಕೊಂಡು ಒಂದೆರಡುಸಲ ನನ್ನ ತಾಯಿ ಅವರನ್ನು ಊಟಕ್ಕೆ ಏಳಿ ಎಂದು ಎಚ್ಚರಿಸಿದರೂ ಸ್ನೇಹಿತರಿಬ್ಬರೂ ಮಾತಿನ ರಭಸದಲ್ಲಿ ಮಗ್ನರಾಗಿಬಿಟ್ಟಿದ್ದರು. ಮಾತಂತೂ ಮುಗಿಯಲಿಲ್ಲ (ಹೇಗೆ ಮುಗಿದೀತು!).

ನ್ನ ತಾಯಿಯವರ ಕೆಲಸದ ಗತಿ ಮುಂದೆ ಸಾಗಲಿಲ್ಲ; ಊಟಕ್ಕೆ ಬರುವವರ ದಾರಿ
ಯ್ದು ಕಾಯ್ದು ಅಡಿಗೆ ಮನೆಯಲ್ಲಿ ಕುಳಿತಲ್ಲಿಯೇ ನನ್ನ ತಾಯಿ ನಿದ್ದೆ ಹಚ್ಚಿದ್ದರು.
ನ್ನ ತಾಯಿಯವರ ಜೀವನದುದ್ದಕ್ಕೂ ಇಂತಹ ಪ್ರಸಂಗಗಳು ಅವೆಷ್ಟೊ! ಬೆಟ್ಟದೆತ್ತರದ
ಣ ಸಮಸ್ಯೆಗಳು ದಾದಾರನ್ನು ಮುತ್ತಿಕೊಂಡಾಗಲೂ ನನ್ನ ತಾಯಿ ಎದೆಗುಂದದೆ
ವರನ್ನು ಹಿಂಬಾಲಿಸಿದ ಅವರ ನೆಳಲಾಗಿ ಕೃತಕೃತ್ಯತೆಯನ್ನು ಪಡೆದಿದ್ದಾರೆ. ನನ್ನ
ದೆಯವರ ಮಹತ್ವಾಕಾಂಕ್ಷೆ ಸ್ಫೂರ್ತಿ ಸಾಧನೆ ಸಿದ್ಧಿ ಎಲ್ಲದರಲ್ಲಿಯೂ ನನ್ನ ತಾಯಿ
ಕ್ಷರಶಃ ಅವರ ಅರ್ಧಾಂಗಿಯೇ! ಅಂತೆಯೇ, ದಾದಾರವರನ್ನು ನೆನೆಸಿದಾಗಲೆಲ್ಲ, ನನ್ನ
ಸಿಯವರನ್ನು ನಾನು ಮರೆಯುವದು ಹೇಗೆ?

ಹೆಣ್ಣುಮಕ್ಕಳಿಗೆ ತಂದೆತಾಯಿಯರು ತಂಪಾದ ನೆರಳಿದ್ದಂತೆ. ಆದರೆ ನನಗೆ ನನ್ನ
ವರುಮನೆ ತಂಪಿನ ಆಗರವಾದಂತೆ, ಸ್ಫೂರ್ತಿಯ ತವರೂ ಆಗಿದ್ದರೆ ಆಶ್ಚರ್ಯವೇನು?

ಗೆಳೆಯ

ರಂ. ಶ್ರೀ. ಮುಗಳಿ

ಡಾ. ವಿ. ಕೃ. ಗೋಕಾಕರ ಜೀವನದಲ್ಲಿ ಗೆಳೆತನಕ್ಕೆ ಉನ್ನತವಾದ ಸ್ಥಾನ ದೊರೆತಿದೆ.
ಬಾಲ್ಯದಿಂದಲೂ ಅವರು ಆಯ್ದುಕೊಂಡ ಗೆಳೆಯರೊಡನೆ ಆತ್ಮೀಯತೆಯಿಂದ ನಡೆದು
ಕೊಂಡಿದ್ದಾರೆ. ಈ ಆತ್ಮೀಯತೆಯಿಂದಲೇ ವಿದ್ಯಾರ್ಥಿದಶೆಯಲ್ಲಿ ಅವರ ಆತ್ಮಪ್ರಜ್ಞೆ ಅಂಕುರಿ
ಸಿತು, ಸಹಜಸ್ಫೂರ್ತವಾದ ಕಾವ್ಯನಿರ್ಮಾಣಕ್ಕೆ ಪ್ರೇರಕವಾಯಿತು. ಅವರ ಮನೆತನದಲ್ಲಿ
ಬೆಳೆದು ಬಂದಿರುವ ಧಾರ್ಮಿಕ—ಅನುಭಾವಿಕ ವಾತಾವರಣದಿಂದ ಅವರ ಅಂತರಂಗದಲ್ಲಿ
ತೆರೆದ ಈ ಕೇಂದ್ರವು ಯಾವುದೇ ಸಂದೇಹಗಳಿಗೆ ಎಡೆಗೊಡದೆ ಶ್ರದ್ಧೆಯ ಬಲಿಷ್ಠವಾದ
ಕೋಟೆಯನ್ನು ತನ್ನ ಸುತ್ತು ಕಟ್ಟಿಕೊಂಡಿತು. ಪ್ರೇಮ, ಭಕ್ತಿ, ಸೌಂದರ್ಯ, ಸಖ್ಯ ಈ
ಉದಾತ್ತ ತತ್ವಗಳು ತಮ್ಮ ಉನ್ನತ ಸ್ವರೂಪದಲ್ಲಿ ಶ್ರೀ ಗೋಕಾಕರ ಜೀವನದ ಆದರ್ಶ
ಗಳಾದುವು. ನಿತ್ಯಜೀವನದಲ್ಲಿ ಅವನ್ನು ತರಲು ಅವರು ತಮ್ಮ ಆಯುಷ್ಯವನ್ನೇ ಧಾರೆ
ಎರೆದಿದ್ದಾರೆ.

ಸವಣೂರಲ್ಲಿ ಶಾಲೆಯ ಶಿಕ್ಷಣ ಮುಗಿಸಿಕೊಂಡು ಕಾಲೇಜಿನ ಶಿಕ್ಷಣಕ್ಕಾಗಿ ಅವರು
ಧಾರವಾಡಕ್ಕೆ ಬಂದರು. ಆಗ ಅವರು ಹೆಚ್ಚಾಗಿ ಅಂತರ್ಮುಖಿಗಳೂ ಭಾವಜೀವಿಗಳೂ
ಆಗಿ ತಮ್ಮಷ್ಟಕ್ಕೆ ಇರುತ್ತಿದ್ದರು. ಒಬ್ಬಿಬ್ಬ ಗೆಳೆಯರ ಹೊರತಾಗಿ ಅವರನ್ನು ತಿಳಿದವರು
ಬಹುಶಃ ಯಾರೂ ಇರಲಿಲ್ಲ. ಅವರಿಗೂ ಈ ಬಗ್ಗೆ ಆಸಕ್ತಿಯಿರಲಿಲ್ಲ. ಆದರೆ ಅವರಿಗೆ
ಯೋಗಾಯೋಗದಿಂದ ಶ್ರೀ ಬೇಂದ್ರೆಯವರ ಪರಿಚಯವಾಯಿತು. ಅದು ಅನೇಕ ದೃಷ್ಟಿ
ಯಿಂದ ಅವರಿಗೆ ವರದಾನವಾಯಿತು. ಅಂತರ್ಮುಖಿಯಾದ ಅವರು ಬರಬರುತ್ತ ಬಹಿ
ರ್ಮುಖಿಯಾದರು, ಹಲವಾರು ಗೆಳೆಯರನ್ನು ಸಂಪಾದಿಸಿಕೊಂಡರು. ಭಾವಜೀವಿಗಳಾದ
ಅವರು ತಮ್ಮ ವ್ಯಕ್ತಿತ್ವದ ಸರ್ವಾಂಗೀಣ ವಿಕಾಸಮಾಡಿಕೊಂಡು ಪರಿಪಕ್ವರಾದರು.
ಅವರಲ್ಲಿ ಗೆಳೆತನದ ಆದರ್ಶವು ಬರೀ ಭಾವನಾವೇಗವಾಗಿ ಉಳಿಯದೆ ಒಂದು ಬೌದ್ಧಿಕ
ಅಧಿಷ್ಠಾನವನ್ನು ಪಡೆಯಿತು. ಶ್ರೀ ಬೇಂದ್ರೆಯವರು ಎಲ್ಲ ಗೆಳೆಯರಿಗೆ ಹಿರಿಯರಾಗಿ ತಮ್ಮ
ನಡೆನುಡಿಯಿಂದ ಗೆಳೆತನದ ಅನುಭವಕ್ಕೆ ತಾತ್ವಿಕ ಪೀಠಿಕೆಯನ್ನು ಹಾಕಿಕೊಟ್ಟರು. ಅದನ್ನು
ಸರಿಯಾಗಿ ಅರ್ಥಮಾಡಿಕೊಂಡು ಆಚರಿಸಿ ತೋರಿಸಿದವರಲ್ಲಿ ಶ್ರೀ ಗೋಕಾಕರು ಪ್ರಮುಖ
ರೆಂದು ಹೇಳಬಹುದು. ಗೆಳೆತನದಲ್ಲಿ ಸ್ನೇಹದ ಉತ್ಕಟತೆಯಿದೆ, ಆತ್ಮೀಯತೆಯಿದೆ, ಆದರೆ

ಕ್ತಿತ್ವದ ಹಾನಿಯಿಲ್ಲ. ಗೆಳೆಯರು ತಂತಮ್ಮ ಸ್ವಭಾವ ಮತ್ತು ಮನೋಧರ್ಮಗಳಿಗೆ
ಸರಿಸಿ ಬೆಳೆಯುತ್ತಾರೆ, ಬಾಳಿ ಬದುಕುತ್ತಾರೆ. ಅವರ ವ್ಯಕ್ತಿತ್ವಕ್ಕೆ ಒಂದು ವಿಶಿಷ್ಟ
ತಿ ಬರುತ್ತದೆ. ಅದರಲ್ಲಿ ಅವರ ಪೌರುಷವಿದೆ, ದೈವವಿದೆ. ಗೆಳೆತನವು ಎಷ್ಟೇ ಉತ್ಕಟ
ದರೂ ಇದನ್ನು ತಡೆಯಲಾರದು, ತಡೆಯಬಾರದು. ವ್ಯಕ್ತಿತ್ವದ ವೈವಿಧ್ಯದಲ್ಲಿಯೂ
ದಯವಂತಿಕೆಯ ಏಕತೆಯಿಂದ ಗೆಳೆತನವು ಜೀವನವನ್ನು ಸುಖದಲ್ಲಿ ಸುಂದರಗೊಳಿಸು
ದೆ, ದುಃಖದಲ್ಲಿ ಸಹ್ಯಗೊಳಿಸುತ್ತದೆ. ಶ್ರೀ ಗೋಕಾಕರು ತಮ್ಮ ಗೆಳತನದ ಸಾಧನೆಯಲ್ಲಿ
ತಾತ್ವಿಕ ಭೂಮಿಕೆಯನ್ನು ಬೆಳೆಸಿಕೊಂಡು ಬಂದಿದ್ದಾರೆ. ತಮ್ಮ ಗೆಳೆಯರಿಂದ ಈ
ರೆಯ ಗೆಳೆತನವನ್ನು ಅವರು ಬಯಸಿದ್ದಾರೆ, ತಾವು ಅವರಿಗೆ ನೀಡಿದ್ದಾರೆ. ಗೆಳೆಯರ
ಂಪಿನ ಧ್ಯೇಯವಾದಕ್ಕೆ ಮತ್ತು ವೈಚಾರಿಕ ಭೂಮಿಕೆಗೆ ರೂಪಕೊಟ್ಟಿದ್ದಾರೆ.
ಶ್ರೀ ಗೋಕಾಕರು ತಮ್ಮ ಅನೇಕ ಕವನಗಳಲ್ಲಿ ಆಳವಾದ ಸ್ವಾನುಭವದ ಸಂಸ್ಪರ್ಶದಿಂದ
ಕಿತರಾಗಿ ಪ್ರೀತಿ ತತ್ವದ ಹಲವಾರು ಮುಖಗಳನ್ನು ಚಿತ್ರಿಸಿದ್ದಾರೆ, ರಸನಿಮಿಷಗಳನ್ನು
ಣ್ಣಿಸಿದ್ದಾರೆ. 'ಪಯಣ' ಎಂಬ ಅವರ ಮೊದಲನೆಯ ಭಾವಗೀತೆಗಳ ಸಂಕಲನದಲ್ಲಿ
ಂದರ್ಯ, ಪ್ರೇಮ, ಸಖ್ಯ ಈ ವಿಷಯಗಳೇ ಪ್ರಮುಖವಾಗಿ ಬಂದಿರುತ್ತವೆ.
ದಾಹರಣೆಗೆ, 'ಪ್ರೀತಿ' ಎಂಬ ಕವನದಲ್ಲಿ ಅವರು ಅದರ ಅನನ್ಯತೆಯನ್ನು ವರ್ಣಿಸಿ ಭಾವ
ವಶರಾಗಿದ್ದಾರೆ: 'ಪ್ರೀತಿಯೆಂಬ ಒಂದು ಕಮಲ; ಅದರ ಸರಿಯು ಹೂವ ಕಾಣೆ.'
ೀತಿಯೆಂಬುದು ಕಮಲದಂತೆ ಸುಂದರವಾದ ನಿರ್ಮಲವಾದ ಹೃದಯಗುಣ. ಅದಕ್ಕೆ
ಯಾದುದು ಭೂಮಿಯ ಮೇಲೆ ಬೇರಾವುದೂ ಇಲ್ಲ. 'ಅಮರರೆಲ್ಲ ಬೇಡಿ ತಂದು ಅದರ
ಪನೆಲ್ಲ ಸವಿದು ಕೈಯಲದರ ಎಸಳು ಹಿಡಿದು ಅಮರರಾಗಿ ಸಾಗಿ ಹೋದರು; ಇಂದ್ರ
ಂದ್ರರಾದರು.' ಈ ಪ್ರೀತಿಯ ಕನಸನ್ನು ಕಂಡು ಅದರ ಶೋಧಮಾಡುತ್ತ ಚೆಲುವಿನ
ಮುದ್ರದಲ್ಲಿ ಅದನ್ನು ಕಂಡೆನೆಂದು ಅವರು ಹೇಳುತ್ತಾರೆ. ಆದರೆ 'ಅದರ ರೀತಿ ಮಾನವರಿಗೆ
ದು.' ಯಾಕೆಂದರೆ ಈ ಕಮಲವು ವಿಮಲವಾಗಿ 'ಹಾವ ಹೆಡೆಯಲ್ಲಿರುವ ರತ್ನದಂತೆ
ಂತಿಯನ್ನು ತೋರುತಿರುತ ಕಾಂತಿಯನ್ನು ಬೀರ್ವುದು' ಆದರೂ ಕವಿಯ ಸ್ನೇಹಮಮತೆ
ಕ್ಕಿ ಬಂದು ಕಮಲದೆಡೆಗೆ ಈಸಿ ಹೋಯಿತು. 'ಗಾಸಿಯಾದ ಮನವು ತುಂಬಿ ತುಳು
ಆನಂದದಿಂದ'. 'ಕಮಲವೆನ್ನ ಜೀವದಾಸೆ, ಕಮಲವನ್ನು ಮೆಲ್ಲನೆತ್ತಿ ತಂದೆ ವಿಜಯಿ
ಂದದಿ.' ಈ ಪ್ರತೀಕವನ್ನು ಬಿಡಿಸಿ ನೋಡಿದರೆ ಪ್ರೀತಿಯ ಸಾಧನೆ ಎಷ್ಟೇ ಕಠಿಣ
ದರೂ ಅದರಲ್ಲಿ ದೃಢವಾದ ನಂಬಿಕೆಯನ್ನು ಇಟ್ಟುಕೊಂಡು ಎಡರು ತೊಡರುಗಳನ್ನು
ದುರಿಸುವವರಿಗೆ ಪ್ರೀತಿ ಬರೀ ಕನಸಾಗಿ ಉಳಿಯದೆ ಸತ್ಯ ಸೃಷ್ಟಿಯಲ್ಲಿ ಇಳಿದು ಬರುತ್ತದೆ.
'ಗೆಳೆಯನಿಗೆ' ಎಂಬ ಇನ್ನೊಂದು ಕವಿತೆ ಒಬ್ಬ ಗೆಳೆಯನನ್ನು ಕುರಿತು ಬರೆದುದಾದರೂ
ಪು ಗೆಳೆತನದ ಗಾಥೆಯೂ ಆಗಿದೆ. ಗೆಳೆಯನು 'ಮನೆಮುಟ್ಟಿ ಸ್ನೇಹದದ್ಭುತ ಸಿರಿಯ'
ಲು 'ಹೊನ್ನಾಯ್ತು ಎನ್ನ ಬಾಳಮುಳಲು', 'ನಿನ್ನ ಬಳಿಯಲಿ ಜೊನ್ನವಾಗಿತ್ತು ಹೃದಯ

ದಳಲು' ಎಂದು ಕವಿ ಗೆಳೆತನದ ಮಹಿಮೆಯನ್ನು ಬಣ್ಣಿಸಿದ್ದಾನೆ. ಗೆಳೆಯನ ಸನ್ನಿಧಿಯ
ಮನದ ಕುಟ್ಮಲವು ಬಿರಿದದ್ದನ್ನೂ ಜ್ಯೋತಿದ್ವಾರವು ತೆರೆದದ್ದನ್ನೂ ಮುಂದೆ ಕವಿ ಮುಚ್ಚು
ಮರೆಯಿಲ್ಲದೆ ನಿವೇದಿಸಿದ್ದಾನೆ. 'ತನ್ನ ಜೀವದ ಭಾವನಿರ್ಭರತೆಯಿಂತು ಬೆಳಗಿ ಗೆಳೆಯ
ಚಿರಯೌವನದ ಕಾಂತಿಯಲದಿಂತಃ ಮುಳುಗಿ ಈ ಭಾವದ್ವಯದಿಂದ ಹೊಸದೊಂದ
ರೂಹು ಜನಿಸಿ ಇರದೇನೊ' ಎಂದು ಊಹಿಸಿದ್ದಾನೆ. ಪ್ರೀತಿಯೆಷ್ಟೇ ಪ್ರಾಚೀನವಾದರ
ಅದು ನಿತ್ಯ ನೂತನವಾಗಿರುವುದೆಂದೂ ಜೀವನವೆಷ್ಟೇ ಕ್ಷಣಿಕವಾದರೂ ಪ್ರೀತಿ ಒಂದ
ಪ್ರಭುಶಕ್ತಿಯಾಗಿ ಹೊಳೆಯುವುದೆಂದೂ ಕೆಳಗಿನ ಸಾಲುಗಳು ಸೊಗಸಾಗಿ ಸೂಚಿಸುತ್ತವೆ

> ಕೋಟಿ ವರುಷಗಳಿಂದ ಪ್ರೇಮ ಬಾಳಿದ್ದರೇನು ?
> ಕೋಟಗಿನ್ನೊಂದೆಮ್ಮ ಪ್ರೀತಿ ಫಲವಲ್ಲವೇನು ?
> ಅರಗಳಿಗೆಯರಗಿಳಿಗಳಾಗಿ ನಾವಳಿಯಬಹುದು
> ವಿಶ್ವಗಳಿಗರಸಾಗಿ ಜೀವವದು ಹೊಳೆಯಬಹುದು !

ನನ್ನ ಮತ್ತು ಶ್ರೀ ಗೋಕಾಕರ ಗೆಳೆತನವು ಸುಮಾರು ನಲ್ವತ್ತೆರಡು ವರ್ಷಗಳವರೆ
ಬೆಳೆದು ಬಂದಿದೆ. ಕಾಲೇಜು ಜೀವನದ ಪ್ರಥಮ ವರ್ಷಗಳಲ್ಲಿ ನಾವು ಸಂಧಿಸಿದೆವ
ಸ್ನೇಹಬಂಧನದಲ್ಲಿ ಸಿಲುಕಿದೆವು. ಶ್ರೀ ಬೇಂದ್ರೆಯವರೇ ಕೇಂದ್ರಬಿಂದುವಾಗಿ ನಮ್ಮನ
ಆಕರ್ಷಿಸಿದರು, ನಮ್ಮ ಧ್ಯೇಯವಾದವನ್ನು ರೂಪಿಸಿದರು. ನಮ್ಮ ವ್ಯಕ್ತಿತ್ವ ವಿಕಾಸಕ
ನೆರವಾದರು, ನಮ್ಮ ಸಾಹಿತ್ಯಸೃಷ್ಟಿಗೆ ಪುಟಕೊಟ್ಟರು. ರೂಪಕದಲ್ಲಿ ಹೇಳುವುದಾದ
ಅಂಬಿಕಾತನಯರೆಂಬ ಲೋಹಚುಂಬಕದ ಸೆಳೆತಕ್ಕೊಳಗಾದ ಎರಡು ಲೋಹದ ತುಂಡ
ಗಳು ಹತ್ತಿರ ಬಂದು ಅನ್ಯೋನ್ಯವಾಗಿ ಲೋಹಚುಂಬಕವಾದುವು ! ಈ ನಮ್ಮ ಗೆಳೆತನ
ಕಥೆ ರೋಮಾಂಚನೀಯವಾಗಿದೆ, ಅನಿರ್ವಚನೀಯವೂ ಆಗಿದೆ. ಆತ್ಮೀಯ ಅನುಭ
ಗಳಿಂದ ಕೂಡಿರುವ ಅದನ್ನು ಬರೆಯುವಂತಿಲ್ಲ, ಬರೆದು ಮುಗಿಸುವಂತಿಲ್ಲ. ಎಷ್ಟೇ ಬರೆದರ
ಬರೆಯದುದು ಹಾಗೇ ಉಳಿಯುತ್ತದೆ. ಆದರೆ ಈ ಸಂದರ್ಭದಲ್ಲಿ ಗೆಳೆತನದಿಂದ ನಮ
ಲಭಿಸಿದ ಕೆಲವು ರಸನಿಮಿಷಗಳನ್ನು ನೆನೆಯಬಹುದು. ಒಂದು ಸ್ವಚ್ಛವಾದ ಬೆಳುದಿಂಗ
ಇರುಳಲ್ಲಿ ಸಂಚಾರಕ್ಕೆ ಹೊರಟು ನಾವಿಬ್ಬರೂ ಒಂದು ಸ್ಥಳದಲ್ಲಿ ಕುಳಿತಿರುವಾಗ ತಂಗಾ
ಮೆಲ್ಲನೆ ತೀಡಿತು, ಮೈಮನಗಳನ್ನು ಮುತ್ತಿ ಕಾವ್ಯಲೋಕಕ್ಕೆ ಎತ್ತಿತು. ತತ್ಕ್ಷಣ 'ಮೆಲ್ಲ
ಸುಳಿಯುವ ತಣ್ಣನ ಗಾಳಿ' ಎಂಬ ಮೊದಲ ಸಾಲು ಒಬ್ಬರ ಬಾಯಿಂದ ಹೊರಬಂದಿತ
'ಎಲ್ಲೆಡೆ ಇದ್ದರು ರೂಪವ ತಾಳಿ' ಎಂಬ ಎರಡನೆಯ ಸಾಲು ಇನ್ನೊಬ್ಬರ ಬಾಯಿಂ
ಹೊರಹೊಮ್ಮಿತು. ಇದೇ ರೀತಿಯಲ್ಲಿ 'ಒಮ್ಮೆಯೆ ಬರುವುದು ಮೊಗವನು ತೋ
ಎಲ್ಲಿಗೊ ಕರೆವುದು ಬಳಿಯಲಿ ಸಾರಿ' ಎಂಬ ಮುಂದಿನ ಸಾಲುಗಳು ತೆರೆತೆರೆಯಾ
ಬಂದುವು. ಸಂಯುಕ್ತ ನಿರ್ಮಿತಿಯ ಫಲವಾಗಿ ಪೂರ್ತಿಗೊಂಡ ಈ ಚಿಕ್ಕ ಕವನವು ನ
'ಬಾಸಿಗ' ಸಂಗ್ರಹದಲ್ಲಿ ಪ್ರಕಟವಾಗಿದೆ. ಇದರಂತೆ 'ಗಿರಿಮಲ್ಲ ಬೀರಿ' ಎಂಬ ಸಂವಾ

ಸ ಕವನವು 'Philida's love Call' ಎಂಬ ಜನಪದ ಗೀತೆಯ ರೂಪಾಂತರವಾಗಿ ಬ್ಬರಿಂದ ರಚಿತವಾಯಿತು. ಅದರಲ್ಲಿ ಬೀರಿಯ ಪಾತ್ರವನ್ನು ಒಬ್ಬರು ಗಿರಿಮಲ್ಲನ ತ್ರವನ್ನು ಇನ್ನೊಬ್ಬರು ವಹಿಸಿಕೊಂಡು ಅನುವಾದವನ್ನು ನಾವು ಪೂರ್ತಿಗೊಳಿ ೕನೆ, ಕೆಲವು ಸಭೆಗಳಲ್ಲಿ ಪಾತ್ರಾನುಸಾರವಾಗಿ ಹೇಳಿ ತೋರಿಸಿದ್ದೇವೆ. 'ರಂಗ ಾಯಕ' ಎಂಬ ಸಂಯುಕ್ತ ಕಾವ್ಯನಾಮದಲ್ಲಿ ಈ ಕವನವು 'ಬಾಸಿಗ'ದಲ್ಲಿ ಅಚ್ಚಾಗಿದೆ. ಶಃ ಅನುವಾದವೆಂದು ತಿಳಿಸದೆ ಇದ್ದರೆ ಸ್ವತಂತ್ರ ಕೃತಿಯನ್ನುವಷ್ಟರಮಟ್ಟಿಗೆ ಜನಪದಗೀತೆಯು ರೂಪಾಂತರವಾಗಿದೆಯೆಂದು ನಾನು ಭಾವಿಸಿದ್ದೇನೆ. ಇದನ್ನು ವಿಬ್ಬರೂ ಹಾಡಿತೋರಿಸಿದ್ದೇವೆ, ಒಬ್ಬರೇ ಎರಡೂ ಪಾತ್ರಗಳನ್ನು ವಹಿಸಿ ಬೇರೆ ರೆ ಧನಿ—ಘಾಟಗಳಲ್ಲಿ ಹೇಳಿ ತೋರಿಸಿದ್ದೇವೆ. ನಮ್ಮ ಸ್ನೇಹ ಸಾಮರಸ್ಯದ ಸಹಜಫಲ ಗಿ ಮೂಡಿ ಬಂದ ಈ ಎರಡೂ ಕವನಗಳಿಂದ ನಮಗೆ ಆದ ಆನಂದವನ್ನು ಕೇಳುಗರಿಗೆ ಟಿಕೊಟ್ಟಿದ್ದೇವೆ. ಮೂಲದಲ್ಲಿಯ ಇಂಗ್ಲಿಷ್ ಕವಿತೆ ಅನಾಮಿಕವಾಗಿದ್ದರೆ ಕನ್ನಡದಲ್ಲಿ ರ ರೂಪಾಂತರವು ದ್ವಿನಾಮಿಕವಾಗಿ ಮೆರೆದಿದೆ ಮಾತ್ರವಲ್ಲ, ಗೆಳೆತನದ ಸಾಧನೆಯಿಂದ ಡು ಹೃದಯಗಳು ಒಂದಾಗಿ ಹೇಗೆ ನಿರ್ಮಿತಿಯನ್ನು ಮಾಡಬಲ್ಲುವು ಎಂಬುದಕ್ಕೆ ಂತನ ನಿದರ್ಶನವಾಗಿದೆ.

ನಮ್ಮ ನಮ್ಮ ಸ್ವಭಾವಕ್ಕನುಸರಿಸಿ ನಾವು ಬೆಳೆದಿದ್ದೇವೆ, ನಮ್ಮ ನಮ್ಮ ನಿಯತಿಗನು ಸಿ ಬಾಳಿದ್ದೇವೆ, ಒಬ್ಬರೊಬ್ಬರ ವಿಷಯದಲ್ಲಿ ಸ್ನೇಹವನ್ನು ಸುರಿಸಿದ್ದೇವೆ, ಬಿಚ್ಚುಬಗೆ ಂದ ವಿಮರ್ಶಿಸಿದ್ದೇವೆ. ತಮ್ಮ 'ಬಾಳದೇಗುಲದಲ್ಲಿ' ಎಂಬ ಕಾವ್ಯದಲ್ಲಿ ಕೆತ್ತಿರುವ ನ್ನ ಭಿನ್ನ ವ್ಯಕ್ತಿಮೂರ್ತಿಗಳಲ್ಲಿ ತಾವು ಕಂಡಂತೆ ನನ್ನ ಮೂರ್ತಿಯನ್ನು ಶ್ರೀ ಗೋಕಾಕರು ಡರಿಸಿದ್ದಾರೆ. ಅದಕ್ಕೆ ಪ್ರತಿಸಾದವಾಗಿ ನಾನು ಬರೆದ 'ವಿನಾಯಕನಿಗೆ' ಎಂಬ ದೀರ್ಘ ನವು ನನ್ನ 'ಓಂ ಅಶಾಂತಿಃ' ಎಂಬ ಸಂಗ್ರಹದಲ್ಲಿ ಬಂದಿದೆ. ಅದರಲ್ಲಿ ನಾನು ಕಂಡಂತೆ ಗೋಕಾಕರ ಜೀವನ ಮತ್ತು ವ್ಯಕ್ತಿತ್ವಗಳ ಚಿತ್ರಣವಿದೆ. ಹೀಗೆ ಸ್ನೇಹಭಾವದೊಡನೆ ಕ್ಷಿಭಾವವನ್ನು ಬೆರಸಿ ಗೆಳೆತನದ ಸಾಧನೆಯನ್ನು ಮಾಡಿದ್ದೇವೆ, ಪಡೆದ ಸಿದ್ಧಿಗಳಿಂದ ತಿವು ಪಡೆದಿದ್ದೇವೆ. ಆದರೆ ಸಾಧನೆಗೆ ಕೊನೆಯೆಂಬುದಿದೆಯೆ, ಸಿದ್ಧಿಗೆ ಕೊನೆಯೆಂಬು ದೆಯೆ? ತಮ್ಮ 'ಭಾವಗೀತೆ'ಯೆಂಬ ಕವನದಲ್ಲಿ ಶ್ರೀ ಗೋಕಾಕರು ಹೇಳಿರುವಂತೆ

> ಹೋದ ಮೇಲೆ ಸುತ್ತಬೇಕು ಎಳುಕೋಟಿ ದ್ವಾರವು!
> ಹಾದಿಯಲ್ಲಿ ತೀರದಂಥ ದುಃಖವಿಹುದಪಾರವು!
> ಸಾಧಿಸುತ್ತ ಜಯಿಸುವುದೇ ಬಾಳುವದರ ಸಾರವು!

ಕೊನೆಗೆ, ನಾನು ಮೇಲೆ ಹೇಳಿದ ನನ್ನ ಕವನದಲ್ಲಿ 'ನಾನು–ನೀನು' ಎಂಬ ಮೂರನೆಯ ಗದಲ್ಲಿ ಬಂದಿರುವ ಕೆಲವು ನುಡಿಗಳನ್ನು ಇಲ್ಲಿ ಎತ್ತಿ ತೋರಿಸುವುದು ಸಂದರ್ಭೋಚಿತ ದು ತೋರುತ್ತದೆ. ಅವು ಹೀಗಿವೆ:

ನೋಡೆ ನಮ್ಮ ಪ್ರಕೃತಿ ಭಿನ್ನ,
ನೋಟ ಬೇರೆ, ಬೇರೆ ಬೆಳೆವ ತಿಳಿವ ಮಾಟವು
ದೈವದಾನ ಬೇರೆ ಬೇರೆ,
ಬೇರಿನೊಳದ ರಸವೆ ಬೆರಸೆ, ಬೇರೆ ನಾಟವು.
ಮೂಡುಪಡುವಲೆಂತೊ ಅಂತೆ
ಕೂಡಿರುವೆವು ಜೋಡಿಯಾಗಿ ನೋಡಿಮಾಟದಿ
ಬೇಡಲೇನು ? ಬೇಡ ಏನು !
ನೇಹದೀ ಪವಾಡ ಮೆರೆಯಲಾಟದಿ.
ವೃತ್ತಿಭೇದ ಕೋಪತಾಪ
ವಿರಸ—ಹುರುಡುಗಳನು ಒಡ್ಡಿ ಕೆಳೆಯ ಕೆಣಕಿದೆ
ಸತ್ವಸಾಮ್ಯ, ಪ್ರೀತಿರಮ್ಯ
ರಸವು ಬೆರಸುತೆಮ್ಮ ರಕ್ಷೆಯಾಗಿ ಹೆಣಗಿದೆ.
ಬೇರೆ ನಿಜವು, ನಿಜವು ಒಂದೆ
ಬೇರಿನೊಳದ ರಸವು ಒಂದೆ ಒಂದೆ ಎನ್ನುತ
ಬೇರೆ ಬೇರೆಯಾಗಿ ಸಾಗಿ
ನಾವು ಇರುವ, ಇರವ ದಿವ್ಯತರವ ಗೆಯ್ಯುತ.

ಸುಸಂಸ್ಕೃತ ಜೀವಿ

ಸಿಂಧುವಳ್ಳಿ ಅನಂತಮೂರ್ತಿ

'Yes, What brought you here ?"

'ನಾನು ಮೈಸೂರಿಂದ ಬಂದಿದೀನಿ ; ಪ್ರೊ. ರಂಗಣ್ಣನವರು ತಮಗೊಂದು ಲೆಟರ್ ಟ್ಟಿದಾರೆ."

'That's alright : meet me in the College."

—ಹೀಗೆಂದು ಹೇಳಿದ್ದು ಶ್ರೀ ಗೋಕಾಕರು, ನಾನು ಅವರನ್ನು ಹದಿನಾಲ್ಕು ವರ್ಷ ಹಿಂದೆ ಅವರ ಮನೆಯಲ್ಲಿ ಭೆಟ್ಟಿಯಾದಾಗ.

ನಾನು ಹದಿನಾಲ್ಕು ವರ್ಷಗಳ ಹಿಂದೆ ಧಾರವಾಡಕ್ಕೆ ಹೋಗಿದ್ದು ಎಂ. ಎ. ಓದುವು ಕ್ಕ. ನಿಜಕ್ಕೂ ನನಗೆ ಆಗ ಗೋಕಾಕರಲ್ಲಿ ಏನೂ ಕೆಲಸವಿರಲಿಲ್ಲ. ಮೈಸೂರಿನಿಂದ ರಟವನಿಗೆ ಗೋಕಾಕರನ್ನು ಭೇಟಿ ಮಾಡುವಂತೆ ಹೇಳಿ ರಂಗಣ್ಣನವರು ನನಗೊಂದು ಚಯಪತ್ರ ಕೊಟ್ಟಿದ್ದರು ಅಷ್ಟೆ.

ಕಾಲೇಜಿನಲ್ಲಿ ಭೇಟಿ ಮಾಡುವಂತೆ ಹೇಳಿ ಗೋಕಾಕರು ಮನೆಯ ಒಳಕ್ಕೆ ಹೋದರು ; ನು ಹಾಸ್ಟೆಲಿಗೆ ಹಿಂದಿರುಗಿದೆ. ಅಲ್ಲಿಂದ ಒಂದು ತಿಂಗಳಾಗುವವರೆಗೂ ಕರ್ನಾಟಕ ಲೇಜಿಗೆ ಹೋಗಿ ನಾನು ಗೋಕಾಕರನ್ನು ಭೇಟಿ ಮಾಡಲಿಲ್ಲ. ಮೈಸೂರಿಗೆ ಕೆಲವು ಗಳ ಮಟ್ಟಿಗೆ ಹೋಗಿಬರುವ ಸಮಯ ಬಂದಿತು. ಮೈಸೂರಿಗೆ ಹೋದಾಗ ಗೋಕಾಕ ನ್ನು ಭೇಟಿ ಮಾಡಿದ್ದೆಯಾ ಎಂದು ರಂಗಣ್ಣನವರು ನನ್ನನ್ನು ಕೇಳಿದರೆ ಏನು ಹೇಳುವುದು ದುಕೊಂಡು ಕಾಲೇಜಿಗೆ ಹೋಗಿ ಗೋಕಾಕರನ್ನು ಭೇಟಿಮಾಡಿ, ರಂಗಣ್ಣನವರು ಟ್ಟಿದ್ದ ಪತ್ರವನ್ನು ಅವರಿಗೆ ಕೊಟ್ಟೆ. ಗೋಕಾಕರು ನನ್ನನ್ನು ಬಹಳ ವಿಶ್ವಾಸದಿಂದ ತಾಡಿಸಿದರು. ಅದೇ ಪತ್ರದ ಮೇಲೆ 'Here is a prize for you' ಎಂದು ಬರೆದು ಪತ್ರವನ್ನು ಎಸ್. ಆರ್. ಮಳಗಿಯವರಿಗೆ ಕೊಡುವಂತೆ ಹೇಳಿದರು. ಆ ಭೇಟಿಯಲ್ಲಿ ಗೆ ಗೋಕಾಕರ ಬಗ್ಗೆ ಅಪಾರವಾದ ಗೌರವ ಉಂಟಾಯಿತು. ಮೈಸೂರಿಗೆ ಹೋದಾಗ ಗಣ್ಣನವರಿಗೂ ಈ ವಿಷಯ ತಿಳಿಸಿದೆ; ಅವರೂ ಸಂತೋಷಪಟ್ಟರು. ಮೈಸೂರಿನಿಂದ ದಿರುಗಿದ ಮೇಲೆ ನಾನು ಗೋಕಾಕರನ್ನು ಆಗಾಗ್ಗೆ ಭೇಟಿಯಾಗುತ್ತಿದ್ದೆ. ಇದರಿಂದ, ರ್ನಾಟಕ ಕಾಲೇಜಿನ ವಿದ್ಯಾರ್ಥಿಯಾಗದಿದ್ದರೂ, ಅಲ್ಲಿನ ವಿದ್ಯಾರ್ಥಿಗಳ ನಡುವೆ ದಿದ್ದೀ ಅಲ್ಲದೆ ಅಧ್ಯಾಪಕರ ನಡುವೆಯೂ ಬೆಳೆದೆ.

* * *

ಸ್ವತಂತ್ರವಾದ ಒಂದು ಉದ್ಯಮವನ್ನು ಕೈಗೊಳ್ಳಬೇಕೆಂದು ತೀರ್ಮಾನಿಸಿ
ಹೊತ್ತಿಗಾಗಲೇ ಪುಸ್ತಕ ಪ್ರಕಟಣೆಯ ಕಾರ್ಯವನ್ನು ಪ್ರಾರಂಭಿಸಿದ್ದೆ. ಈ ಮಾಲೆಯ
ಗೋಕಾಕರ ಒಂದು ಗ್ರಂಥವನ್ನು ಪ್ರಕಟಿಸುವ ಇಚ್ಛೆಯನ್ನು ವ್ಯಕ್ತಪಡಿಸಿದೆ. ಆ ಹೊ
ಗಾಗಲೇ ಕನ್ನಡದಲ್ಲಿ ಸಾಕಷ್ಟು ಕೆಲಸಮಾಡಿ ಪ್ರಸಿದ್ಧರಾಗಿದ್ದ ಗೋಕಾಕರು, ಕೇ
ಕೂಡಲೇ ತಮ್ಮದೊಂದು ಗ್ರಂಥ ಕೊಡದೆ 'Why do you lose your money
my Book' ಎಂದು ಹೇಳಿದರು. ನಾನು ಒತ್ತಾಯ ಮಾಡಿದ್ದರಿಂದ ಅವರು ಗ್ರ
ಒಂದನ್ನು ಪ್ರಕಟಿಸಲು ಕೊಡಲೇಬೇಕಾಯಿತು. ಆ ಮುದ್ರಣಕ್ಕೆ ಅವರು ನನ್ನಿಂದ ಯ
ಪ್ರತಿಫಲವನ್ನೂ ನಿರೀಕ್ಷಿಸಲಿಲ್ಲ. ಅವರ ಆ ಒಂದು ಗ್ರಂಥದಿಂದ ಪ್ರಕಾಶನಕ್ಕೆ ದೊ
ಪ್ರೋತ್ಸಾಹದ ಫಲವಾಗಿ, ಪ್ರಕಾಶನವು ಇಂದಿಗೂ ನಡೆದುಕೊಂಡು ಬಂದಿದೆ. ಸ್ವತ
ವಾದ ಉದ್ಯೋಗವನ್ನು ಕೈಗೊಳ್ಳಬೇಕೆಂದು ಆರಂಭಿಸಿದ ನಾನು ಪ್ರಕಾಶನದ ಒಡೆ
ವನ್ನು ಬಿಟ್ಟುಕೊಡಬೇಕಾಯಿತು, ಅಧ್ಯಾಪಕ ವೃತ್ತಿಯನ್ನು ಅವಲಂಬಿಸಿದ್ದರಿಂದ.

* * *

ಈ ಹದಿನಾಲ್ಕು ವರ್ಷಗಳಲ್ಲಿ ವಯಸ್ಸಿನ, ಅಧಿಕಾರದ ಅಂತರವಿಲ್ಲದೆ ನಾನು ಗೋಕ
ರೊಡನೆ ಬೆರೆತಿದ್ದೇನೆ. ಧಾರವಾಡದಲ್ಲಿದ್ದಾಗ, ಹಲವು ದಿನಗಳು ಸಂಜೆಯ ವೇಳೆ
ರೊಡನೆ ಅಡ್ಡಾಡಿದ್ದೇನೆ. ಅವರು ಕನ್ನಡ ದೇಶದ ಹೊರಗೆ ಬಹಳ ಕಾಲವಿದ್ದರೂ, ಕನ್ನ
ಬಗ್ಗೆ ಚಿಂತನೆ ಮಾಡಿದ್ದನ್ನು ಕೇಳಿ ಮೆಚ್ಚಿಕೊಂಡಿದ್ದೇನೆ. ಮಹಾರಾಷ್ಟ್ರ, ಆಂ
ಗುಜರಾತ್ ಈ ಪ್ರದೇಶಗಳಲ್ಲಿದ್ದಾಗ, ಮಕ್ಕಳಿಗೆ ಕನ್ನಡ ದೂರವಾಗಬಾರದೆಂ
ಮನೆಯಲ್ಲೇ ಕನ್ನಡ ಸಂಘ ಮಾಡಿಕೊಂಡು, ಕನ್ನಡ ಭಾಷೆ ಹಾಗು ಗ್ರಂಥಗಳ ಬ
ಚರ್ಚಿಸಿದ್ದನ್ನು ಕೇಳಿ ಅವರ ಸ್ವಭಾಷಾಭಿಮಾನಕ್ಕೆ ಮಾರುಹೋಗಿದ್ದೇನೆ.

ಓಲೆಗೆ ಮಾರೋಲೆ ಬರೆಯುವ ಅವರ ಗುಣ ಗ್ರಾಹ್ಯವಾದದ್ದು. ಒಂದೆರಡು ದಿನ
ವಾದರೂ ನಾನು ಬರೆದ ಪತ್ರಗಳಿಗೆಲ್ಲ ಅವರು ಉತ್ತರ ಕೊಟ್ಟಿರುತ್ತಾರೆ. ಅವರ ಕೆ
ಪತ್ರಗಳು ನನ್ನಲ್ಲಿ ಧೈರ್ಯ ಮತ್ತು ಉತ್ಸಾಹವನ್ನು ಮೂಡಿಸಿವೆ.

ಗೋಕಾಕರು ಬೆಂಗಳೂರಿಗೆ ಬಂದ ಮೇಲೆ, ನನ್ನ ಅವರ ಸಂಪರ್ಕ ಮತ್ತಷ್ಟೂ ಹೆ
ಯಿತು. ಮೈಸೂರಿಗೆ ಬಂದಾಗ ಅವರೊಡನೆ ಸುತ್ತಮುತ್ತಲಿನ ಪ್ರದೇಶಗಳ
ಸೋಮನಾಥಪುರ, ಶಿವನಸಮುದ್ರ, ಮಡಕೇರಿ, ತಲಕಾವೇರಿ ಮೊದಲಾದ ಸ್ಥಳಗ
ಹೋಗಿಬಂದಿದ್ದೇನೆ. ಅಲ್ಲದೆ ಬೆಂಗಳೂರಿಗೆ ಹೋದಾಗಲೆಲ್ಲಾ ಅವರನ್ನು ಭೇಟಿಮಾ
ಸಂದರ್ಭ ನನಗೆ ಒದಗಿಬಂದಿದೆ. ಹೀಗಾಗಿ ಅವರು ನನ್ನ ಬದುಕಿನಲ್ಲಿ ಹೆಚ್ಚು ಪ್ರಭ
ಶಾಲಿಯಾಗಿದ್ದಾರೆ. ಅವರ ವಿವಿಧ ಮುಖಗಳ ಪರಿಚಯ ನನಗಾಗಿದೆ. ಅ
ಸ್ನೇಹಪರರು; ಉದಾರಿಗಳು; ಕಾರ್ಯತತ್ಪರರು; ದಯಾಮಯಿ; ಸೌಂದಯ

ಕರು ; ಎಲ್ಲಕ್ಕಿಂತಲೂ ಮಿಗಿಲಾಗಿ ಅವರೊಬ್ಬ ಸುಸಂಸ್ಕೃತ ಜೀವಿ.
ನಾನು ಅವರನ್ನು ಮೆಚ್ಚಿಕೊಂಡಿದ್ದು ಏಕೆ? ನನ್ನ ಅನುಭವಗಳೇ ಆ ಮೆಚ್ಚುಗೆಗೆ ರಗಳಾಗಿವೆ.

ಂಗಳೂರಿನಲ್ಲಿ, ಒಂದು ಶನಿವಾರ ಸಂಜೆ ನಾನು ಗೋಕಾಕರೊಡನೆ ಮಾತನಾಡುತ್ತ ಆ ಸಮಯದಲ್ಲಿ ವಿಶ್ವವಿದ್ಯಾನಿಲಯದ ಅಧಿಕಾರಿಯೊಬ್ಬರು ಗೋಕಾಕರ ಭೇಟಿಗಾಗಿ ರು. ಭಾನುವಾರದ ದಿವಸ ಮುಖ್ಯವಾದ ಕೆಲಸವಿದ್ದುದರಿಂದ, ತಾವು ವಿಶ್ವವಿದ್ಯಾ ಯದ ಆಫೀಸಿಗೆ ಬರುವುದಾಗಿ ಗೋಕಾಕರು ಆ ಅಧಿಕಾರಿಗೆ ಹೇಳಿದರು. ರಜೆಯ ದ್ದರಿಂದ ಗೋಕಾಕರು ಆಫೀಸಿಗೆ ಹೋಗುವುದು ಬೇಡ, ತಾವು ಗೋಕಾಕರ ಪರ ಆ ಕೆಲಸ ಮಾಡುತ್ತೇನೆ ಎಂದು ಆ ಅಧಿಕಾರಿ ಹೇಳಿದ್ದಕ್ಕೆ, ಗೋಕಾಕರು ಕೆಲಸ ಗ ರಜೆ ಇದ್ದರೂ ತಮ್ಮ ಕೆಲಸವನ್ನು ತಾವೇ ನಿರ್ವಹಿಸುತ್ತೇವೆ ಎಂದು ಹೇಳಿ ಕಾರ್ಯತತ್ಪರತೆಯನ್ನು ವ್ಯಕ್ತಪಡಿಸಿದರು.

ೇರೆ ಬೇರೆ ಊರುಗಳಿಗೆ ಹೋದಾಗ ಅಲ್ಲಿರುವ ಸ್ನೇಹಿತರುಗಳನ್ನು ನೋಡುವ ್ಯಾಸವನ್ನು ಗೋಕಾಕರು ಇಟ್ಟುಕೊಂಡಿರುತ್ತಾರೆ. ಕೆಲವು ಸಂದರ್ಭಗಳಲ್ಲಿ ನಾನೂ ೊಡನೆ ಹೋಗಿದ್ದುಂಟು. ಪದವಿ, ಅಧಿಕಾರ, ಅಂತಸ್ತು ಅವರ ಭೇಟಿಗಳಲ್ಲಿ ಅಡ್ಡ ತ್ತಿರಲಿಲ್ಲ; ಸ್ನೇಹವೇ ಪ್ರಧಾನವಾಗಿರುತ್ತಿದ್ದಿತು. ಒಂದು ಕಡೆ ಕೇವಲ ಯೋಗಕ್ಷೇಮ ರಿಸಿ ಹರಟೆ ಹೊಡೆದು ಬರುವುದು; ಇನ್ನೊಂದು ಕಡೆ ಬಹಳ ಲಘುವಾಗಿ ಮಾತಾಡಿ ಟ್ಟೆ ಬಿರಿಯುವಷ್ಟು ನಕ್ಕು ಬರುವುದು; ಮತ್ತೊಂದು ಕಡೆ ಅರವಿಂದರ Devine ನಂತಹ ಗ್ರಂಥಗಳ ಬಗ್ಗೆ ಮಾತನಾಡಿ ಬರುವುದು—ಹೀಗಾಗಿ ಎಲ್ಲರೊಡನೆಯೂ ಡುವುದು ಇವರ ಭೇಟಿಯ ಉದ್ದೇಶವಾಗಿರುತ್ತಿತ್ತು, ಅಲ್ಲಿ ಅವರ ಔಚಿತ್ಯಗುಣ ಕಾಣುತ್ತಿತ್ತು.

ೋಕಾಕರು ಒಮ್ಮೆ ಪ್ರವಾಸದಲ್ಲಿದ್ದಾಗ, ವಿಶ್ವವಿದ್ಯಾನಿಲಯಕ್ಕೆ ಸೇರಿದ ಒಬ್ಬ ಾನ್ಯ ನೌಕರ ಬೇಜವಾಬ್ದಾರಿಯಿಂದ ನಡೆದುಕೊಂಡು ಅವರಿಗೆ ಸ್ವಲ್ಪ ತೊಂದರೆ ನ್ನು ಉಂಟುಮಾಡಿದ. ಹೀಗೆ ನಡೆದುಕೊಂಡ ಆ ವ್ಯಕ್ತಿಗೆ ಶಿಕ್ಷೆ ಆಗುವುದು ಖಚಿತ ು ನಾನು ತೀರ್ಮಾನಿಸಿದೆ. ಒಮ್ಮೆ ನಾನು ಬೆಂಗಳೂರಿಗೆ ಹೋಗಿದ್ದಾಗ, ಆ ವ್ಯಕ್ತಿ ೇ ಕಂಡು ಈ ಬಗ್ಗೆ ವಿಚಾರಿಸಿದಾಗ, ಆತನಿಗೆ ಯಾವ ರೀತಿಯ ಶಿಕ್ಷೆಯೂ ಆಗಲಿಲ್ಲ ು ಕೇಳಿ, ಗೋಕಾಕರಲ್ಲಿದ್ದ ಕ್ಷಮಾಶೀಲತೆಯನ್ನ ನಾನು ಮೆಚ್ಚಿಕೊಂಡೆ. ತ್ತೊಮ್ಮೆ, ಗೋಕಾಕರು ಪ್ರವಾಸದಲ್ಲಿದ್ದಾಗ, ಅದೇ ನೌಕರನಿಗೆ, ಅನಾರೋಗ್ಯ ದಾಗ, ಆತ ಔಷಧ ತೆಗೆದುಕೊಳ್ಳಲು ನಿರಾಕರಿಸಿದರೂ, ಗೋಕಾಕರು ಅವನಿಗಾಗಿ ಧವನ್ನು ಹುಡುಕಿಸಿ ಕೊಡಿಸಿದಾಗ, ಗೋಕಾಕರಲ್ಲಿ ನನಗಿದ್ದ ಗೌರವ ಇಮ್ಮಡಿ ಯಿತು.

ಗೋಕಾಕರು ಕಛೇರಿಯ ಕೆಲಸದಲ್ಲಿ ಎಷ್ಟು ಮಗ್ನರಾಗಿರುತ್ತಾರೋ ಅಷ್ಟೇ
ರಾಗಿರುತ್ತಾರೆ, ಪ್ರಕೃತಿಯ ಸೌಂದರ್ಯವನ್ನು ಸವಿಯುವುದರಲ್ಲಿ. ಅವರು ತಲಕಾ
ಯಲ್ಲಿದ್ದಾಗ, ಶಿವನಸಮುದ್ರಕ್ಕೆ ಹೋಗಿದ್ದಾಗ ಆ ತನ್ಮಯತೆಯನ್ನ ನಾನು ಕ
ವಿಸ್ಮಯಗೊಂಡಿದ್ದೇನೆ.

ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ಆಡಳಿತ ನಿರ್ವಾಹಕರಾಗಿ ಸಂಸ್ಥೆಗಳನ್ನು
ಗೋಕಾಕರು ಬೆಳೆದು ಬಂದಿದ್ದಾರೆ. ಬಹುಮುಖ ವ್ಯಕ್ತಿತ್ವವುಳ್ಳ ಅವರ ಪರಿಚಯ
ಸನಿಯದಿಂದ ಆಗಿದೆ. ಜೀವನದಲ್ಲಿ ಕಹಿ–ಸಿಹಿಗಳನ್ನು ಉಂಡಿದ್ದಾರೆ. ಎಂತಹ ಪರಿ
ಯಲ್ಲೂ ವ್ಯಕ್ತಿಯೊಬ್ಬನು, ತಾನು ನಂಬಿದ ಕೆಲಸವನ್ನು ಶ್ರದ್ಧೆಯಿಂದ, ಪ್ರಾಮಾಣಿ
ಯಿಂದ ಮಾಡಿಕೊಂಡು ಬಂದಲ್ಲಿ, ಅಂತಹ ವ್ಯಕ್ತಿಗೆ ಜೀವನದಲ್ಲಿ ಸಮಾಧಾನ ವ
ತೃಪ್ತಿ ದೊರಕುತ್ತವೆ ಎಂಬುದನ್ನು ಅವರ ಜೀವನದಿಂದ ನಾನು ಕಂಡುಕೊಂಡಿದ್ದೇ

ಅಧ್ಯಾಪಕ

ಶೇ. ಶಂ. ಕುಲಕರಣಿ

ವೆಡೆ "ವಿನಾಯಕ"ರಾಗಿ ಕನ್ನಡ ಕಾವ್ಯಪ್ರಭೆಯನ್ನು ಬೆಳಗಿಸಿದರು, ನಿಜ;
ನ್ನೊಂದೆಡೆ "ವಿ. ಕೃ. ಗೋಕಾಕ"ರಾಗಿ 'ಸಮರಸವೇ ಜೀವನ'ದ ಸವಿಯೂಟವನ್ನು
ಂಬರಿಯ ರೂಪದಲ್ಲಿ ಓದುಗರಿಗೆ ಉಣಬಡಿಸಿದ್ದೂ ಉಂಟು; ಮತ್ತೊಂದೆಡೆ,
ವನ' ಮಾಸಪತ್ರಿಕೆಯಿಂದಲೂ 'ಚೆಲುವಿನ ನಿಲುವಿ'ನಿಂದಲೂ, 'ವಿಮರ್ಶಕವೈದ್ಯ'
ದಲೂ 'ಕನ್ನಡ ಕಾವ್ಯದ ಗೊತ್ತು-ಗುರಿ'ಗಳಿಂದಲೂ 'ನವ್ಯತೆ ಹಾಗೂ ಕಾವ್ಯಜೀವನ'
ದಲಾದವುಗಳಲ್ಲಿಯೂ, ಕೊನೆಗೆ 'ಸಮನ್ವಯ'ದ ಇತ್ತೀಚಿನ ಸಂಪುಟದಲ್ಲಿಯೂ
ಂತ್ಯವಿಮರ್ಶಾಶಾಸ್ತ್ರದ ತುದಿ-ಮೊದಲನ್ನು ಎತ್ತಿ ತೋರಿದ ಧೀರೋದಾತ್ತ ವಿಮರ್ಶಕ
ವಿರಾಜಿಸಿದ್ದು ಹೌದು; ಮಗದೊಂದೆಡೆ, ತಿವಿಕ್ರಮರಾಗಿ 'ಆಕಾಶಗಂಗೆ'ಯನ್ನೋ,
ದಲ್ಲ ನಾಳೆ'ಯ ನೂತನ ವಿಶ್ವಪ್ರಜ್ಞೆಯನ್ನೋ ಕೆಳಗೆಳೆದು ತಂದ, ಚಂಪೂಶೈಲಿಯ
ೀರಥರಾಗಿ ಮೆರೆದಿರುವುದೂ ಸರಿ; ಅದೇ ಬಗೆಯಾಗಿ, 'ಜನನಾಯಕ'ನಿಂದ
ುಗಾಂತರ'ವನ್ನು ಮಾಡಿ, ಕನ್ನಡ ಲಲಿತನಾಟಕ ಸಾಹಿತ್ಯವನ್ನು ಹೆಚ್ಚಿಸಿದ ನಾಟಕ
ರಾಗಿರುವುದೂ ಸುಳ್ಳಲ್ಲ; 'ಜೀವನ ಪಾಠ'ಗಳನ್ನು ಕಲಿಸುತ್ತ, ಮನೆ-ಮನೆಯಲ್ಲಿ
-ಮನದಲ್ಲಿ, ವಸತಿಯನ್ನು ಮಾಡಿರುವ "ವನಮಾಲಿ"ಯ ಹೆಸರಿನಲ್ಲಿ ಪತ್ರಲೇಖಕ
ುನಿಬಂಧಕಾರ ಗೋಕಾಕರಾಗಿರುವುದೂ ಸರಿಯೇ; ಗಣ್ಯ ಶಿಕ್ಷಣತಜ್ಞರಾಗಿ ದೇಶ
ೇಶಗಳಲ್ಲಿ, ಸ್ವದೇಶದ ವಿವಿಧರಾಜ್ಯಗಳಲ್ಲಿ, ವಿದ್ಯಾಲಯಪತಿಯೂ ಉಪಕುಲಪತಿಯೂ
ರುವುದಂತೂ ಕಂಡರಿತ ಮಾತೇ. ಆದರೆ ಪೂಜ್ಯ ಗೋಕಾಕ ಅವರ ಈ ಬಹುಮುಖ
ತ್ವದಲ್ಲೆಲ್ಲ ಅತ್ಯಂತ ಉಜ್ವಲವಾಗಿ ಪ್ರಕಾಶಿಸುವ ವೈಶಿಷ್ಟ್ಯವೆಂದರೆ ಅವರ ಅಧ್ಯಾಪಕ
ಕವಿ, ವಿಮರ್ಶಕ, ಕಾದಂಬರಿಕಾರ, ನಾಟಕಕಾರ, ನಿಬಂಧಕಾರ, ಶಿಕ್ಷಣತಜ್ಞ
ದಲಾದ ಹಲವಾರು ರೂಪಗಳನ್ನು ಅಳವಡಿಸಿಕೊಂಡು, ಅವೆಲ್ಲವುಗಳನ್ನೂ ಮೀರಿ
ತಿಷ್ಠದ್ದಶಾಂಗುಲಮ್" ಆಗಿ, ಅವರ ವ್ಯಕ್ತಿತ್ವ ಸಮಗ್ರದಲ್ಲಿಯೇ ಮೇಲೆದ್ದು
ವ ಹಿರಿರೂಪವೆಂದರೆ "ಅಧ್ಯಾಪಕ ಗೋಕಾಕ" ಎಂಬುದು ಮಾತ್ರ. ನಲ್ಮೆಯವರಾದ
ಸರನ್ನು "ಇಲ್ಲಿ" ಇರಿಸಿ, ಆಕ್ಸ್‌ಫರ್ಡಿನ ಆ "ಅಲ್ಲಿ"ಗೆ ಹೋಗಿ, ಲೀಲಾಜಾಲವಾಗಿ
ರುವ "ಮಲ್ಲಿಗೆ"ಯ ಸೌಂದರ್ಯವನ್ನೂ ಸವಿಗಂಪನ್ನೂ ತಾಯ್ನಾಡಿನ ಬೇರೆಬೇರೆ

ಭಾಗಗಳಲ್ಲಿ ಚಲ್ಲವರಿಸುವ ಮಂಗಲಕಾರ್ಯವನ್ನು ಕಾಲು ಶತಮಾನಕ್ಕೂ ಮಿಕ್ಕಿ
ದೀರ್ಘಾವಧಿಯವರೆಗೆ ಎಡೆಬಿಡದೆ ಮಾಡುತ್ತ ಬಂದಿರುವುದು ಗೋಕಾಕ ಅವರ ವ್ಯ
ಮತ್ತೆಯಲ್ಲಿಯ ಈ "ಅಧ್ಯಾಪಕ" ರೂಪ ಮಾತ್ರ. ಅಂತೆಯೇ ಅವರಿಂದು ಅತಿ ಹೆಚ್ಚಾ
ಪ್ರಸಿದ್ಧರಾಗಿರುವುದು "ಪ್ರಾಧ್ಯಾಪಕ ಗೋಕಾಕ" ಎಂದೇ. ಭಾರತದಾದ್ಯಂತವಿಷ್ಟೇ ಅ
ವಿವಿಧ ದೇಶಗಳಲ್ಲಿಯೂ, ಲಖದೀವದಂಥ ಮೂಲೆಯಲ್ಲಿಯೂ ಇಂದು ತುಂಬಿ ನಿಂತಿರು
ಅವರ ಪರಿಚಯದವರೆಲ್ಲ ಹೆಚ್ಚಾಗಿ ಗುರುತಿಸುವದು ಗೋಕಾಕ ಅವರ ಅಧ್ಯಾಪ
ವ್ಯಕ್ತಿತ್ವವನ್ನೇ. ಅಲ್ಲದೆ, ಅವರಿಂದ ಉಚ್ಚ ಶಿಕ್ಷಣವನ್ನು ಪಡೆದ ನಂತರ ಎಲ್ಲೆಡೆಗೆ ಪಸ
ಸಿರುವ ಶಿಷ್ಯಂದಿರ ದೊಡ್ಡದೊಂದು ಸಮೂಹವೇ ಇದೆ. ಅಧ್ಯಾಪಕ ಗೋಕಾಕರ ಕಮ್ಮ
ದಿಂದ ಹೊರಬಿದ್ದ ಈ ಶಿಷ್ಯಸ್ತೋಮ ಅದೆಷ್ಟು ಹಿರಿದೋ ಅಷ್ಟೇ ವೈವಿಧ್ಯಪೂ
ವಾದದ್ದು, ವರ್ಣರಂಜಿತವಾದದ್ದು, ಸರ್ವವ್ಯಾಪಿಯಾದದ್ದು. ರಾಷ್ಟ್ರ ಜೀವನದ ಎ
ಮುಖ್ಯ ಹಾಗೂ ಉಚ್ಚ ಕ್ಷೇತ್ರಗಳಲ್ಲೂ ಗೋಕಾಕ ಅವರ ಶಿಷ್ಯರು ಪಸರಿಸಿದ್ದಾರೆ. ಅವರ
ಮುಖ್ಯ ಮಂತ್ರಿಗಳುಂಟು, ಮಂತ್ರಿಗಳುಂಟು, ಐ.ಎ.ಎಸ್. ಆಡಳಿತಗಾರರುಂಟ
ಅಧಿಕಾರಿಗಳುಂಟು; ಉದ್ಯೋಗಪತಿಗಳುಂಟು; ಕಾರಖಾನೆಯ ಒಡೆಯರುಂಟು; ಕರ
ಕರು, ಗುಮಾಸ್ತೆಗಳುಂಟು; ಎಲ್ಲಕ್ಕೂ ಮಿಗಿಲಾಗಿ, ಅವರ ಅಧ್ಯಾಪಕ ರೂಪದ ಹಿರಿದಾ
ಕಳಸದಂತಿರುವ, ಭಾರತದ ಮೂಲೆಮೂಲೆಗಳಲ್ಲಿ ಹರಡಿನಿಂತಿರುವ, ವಿಶಾಲ ಶಿಕ್ಷ
ವೃಂದವುಂಟು. ಸ್ವತಃ ಪ್ರಾಧ್ಯಾಪಕರಾಗಿದ್ದುಕೊಂಡು, ಅಗಣಿತ ಶಿಕ್ಷಕರನ್ನು ನಿರ್ಮಾ
ಮಾಡಿದ ಪುಣ್ಯಪುರುಷರಲ್ಲಿಯೇ ಹೆಚ್ಚಿನ ಸ್ಥಾನವನ್ನು ಪಡೆಯುವ ಕೆಲವೇ ಭಾರತೀ
ರಲ್ಲಿ ಗೋಕಾಕ ಅವರು ಒಬ್ಬರು. ಅಂತೆಯೇ ಅವರಿಂದು ಸುಪ್ರಸಿದ್ಧರಾಗಿರುವು
"ಅಧ್ಯಾಪಕರ ಅಧ್ಯಾಪಕ"—The teacher's teacher—ಎಂದು.

ಗುರುವರ ಗೋಕಾಕ ಅವರು ಪ್ರಾಧ್ಯಾಪಕವೃತ್ತಿಯನ್ನು ಕೈಕೊಂಡದ್ದು ಈ ಶ
ಬ್ದಿಯ ನಾಲ್ಕನೆಯ ದಶಕದಲ್ಲಿ; ಬೆಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಯಾ
ಲೆಂದು ಆ ವೃತ್ತಿಯನ್ನು ಬಿಟ್ಟದ್ದು ಏಳನೆಯ ದಶಕದಲ್ಲಿ. ಕಾಲಾವಧಿಯ ದೃಷ್ಟಿಯಿಂ
ಇಂತು "ಅಧ್ಯಾಪಕ" ಗೋಕಾಕ ಅವರು ಆವರಿಸಿದ್ದು ಮೂವತ್ತಾರು ವರ್ಷಗಳ ಅವ್ಯಾಹ
ಸಮಯವನ್ನು. ಅದೇ ರೀತಿ, ಅಧ್ಯಾಪನಕಾರ್ಯಕ್ಕೆಂದು ಅವರು ಸುತ್ತಾಡಿದ ಸ್ಥಳಗ
ಕ್ಷೇತ್ರವಿಸ್ತಾರವೂ ದೊಡ್ಡದು: ಪುಣೆಯ ಫರ್ಗ್ಯೂಸನ್ ಕಾಲೇಜು, ಸಾಂಗಲಿಯ ವಿಲಿಂ
ಡನ್ ಕಾಲೇಜು, ಅಂದಿನ ಹೈದರಾಬಾದ ಸಂಸ್ಥಾನದ ಉಸ್ಮಾನಿಯಾ ವಿಶ್ವವಿದ್ಯಾಲಯ
ವಿಸನಗರದ ಮಾ. ನಾ. ಕಾಲೇಜು, ಕೊಲ್ಹಾಪುರದ ರಾಜಾರಾಮಕಾಲೇಜು, ಧಾರವಾಡ
ಕರ್ನಾಟಕ ಕಾಲೇಜು, ಇಂದಿನ ಹೈದರಾಬಾದದಲ್ಲಿರುವ ಕೇಂದ್ರ ಸರ್ಕಾರದ ಆಂಗ್ಲಭಾ
ಸಂಸ್ಥೆ, ಇವೆಲ್ಲ ಅವರ ವಿಶಾಲ ಕರ್ಮಭೂಮಿಯ ಕೇಂದ್ರಗಳು. ಇಂತು, ಸಮಯ ಹಾ
ಸ್ಥಾನದ ಪರಿಮಾಣದಲ್ಲಿ ಅಧ್ಯಾಪಕ ಗೋಕಾಕರ ಹಿರಿಮೆ ದೊಡ್ಡದು. ಅಂತಹದೇ ಅ

ಷ್ಟಪೂರ್ಣ ಘನತೆ, ಅವರು ಬೇರೆಬೇರೆ ಕಾಲದಲ್ಲಿ ಬೇರೆಬೇರೆ ವಿದ್ಯಾಲಯಗಳಲ್ಲಿ ್ಯಾಪನ ಮಾಡುವಾಗ ಇದ್ದ ರಾಷ್ಟ್ರೀಯ, ರಾಜಕೀಯ ಹಾಗೂ ಸಾಂಸ್ಕೃತಿಕ ಾವರಣಕ್ಕೂ ಉಂಟು. ಅವರು ಪ್ರಾಧ್ಯಾಪಕರಾದ ತರುಣದಲ್ಲಿ ಪುಣೆಯಲ್ಲಿದ್ದ ದೇಶ ಪೂರ್ಣ ಆಂದೋಲನದ ವಾತಾವರಣ; ಸಾಂಗಲಿಯಲ್ಲಿದ್ದಾಗಿನ ದ್ವಿತೀಯ ಮಹಾ ದ್ಧದ ವರ್ಷಗಳು; ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿದ್ದಾಗಿನ ಆ ಹೈದರಾ ದ ಸಂಸ್ಥಾನದ ಸಂಪ್ರದಾಯಶೀಲ ವಾತಾವರಣ; ಉತ್ತರ ಗುಜರಾತದ ಮರು ಮಿಯ ನೆರೆಯಲ್ಲಿದ್ದ, ಹಿಂದಿನ ಬಡೋದಾ ಸಂಸ್ಥಾನಕ್ಕೆ ಸೇರಿದ, ವೀಸನಗರದಲ್ಲಿಯ ಪೂರ್ಣ ಗ್ರಾಮೀಣ, ಮುಗ್ಧ ವಾತಾವರಣ; ವಿಲೀನ ಹೊಂದಿದ ಕೊಲ್ಹಾಪುರ ಸ್ಥಾನದ ಆ ವಿಶಿಷ್ಟ ಪರಿಸ್ಥಿತಿ; ಎರಡಲ್ಲ ಮೂರು ರಾಜ್ಯಗಳ ನಡುವೆ ನಿಂತಿದ್ದ ವಾದದ ಅವಸ್ಥೆ; ವಿಶ್ವವಿದ್ಯಾಲಯದಲ್ಲಿಯ ಉಚ್ಚಶಿಕ್ಷಣದಲ್ಲಿ ಕೇವಲ ಆಂಗ್ಲ ್ಷೆಯಕ್ಕೆ ಮಾತ್ರ ಸ್ಥಾನವುಂಟೆಂಬ ಅರೆಸತ್ಯದ ದೃಷ್ಟಿಯನ್ನು ಆಮೂಲಾಗ್ರವಾಗಿ ವರ್ತಿಸಲೆಂದು ಸ್ಥಾಪಿತವಾದ ಕೇಂದ್ರೀಯ ಆಂಗ್ಲಭಾಷಾಸಂಸ್ಥೆಯಲ್ಲಿಯ ಕ್ರಾಂತಿ ಕ ವಾತಾವರಣ—ಇವೆಲ್ಲವುಗಳ ಅಗ್ನಿದಿವ್ಯವನ್ನು ಒಂದಿನಿತೂ ತಲ್ಲಣಗೊಳ್ಳದೆ ೀಕಾಕ ಅವರು ದಿಟ್ಟತನದಿಂದ ಎದುರಿಸಿದ್ದಾರೆ. ಅಂತೆಯೇ ಅವರ ಅಧ್ಯಾಪಕ ೃಯ ಇತಿಹಾಸದಲ್ಲಿ ವಿವಿಧ ವಾತಾವರಣಕ್ಕೂ ಒಂದು ವಿಶಿಷ್ಟ ಸ್ಥಾನವುಂಟು. ್ಯಾಪಕರಾಗಿ ಅವರು ತೆರಳಿದ ಕೆಲವೆಡೆ "ನವಗ್ರಹಗಳ ನಾಡ ದಾಟ ಮುಗಿಲ ಗಡಿಯ ಿ"ದಂಥ ಸುರಸಸುರಮ್ಯ ವಾತಾವರಣವಿದ್ದರೆ, ಬೇರೆಡೆಗೆ "ದಿಕ್ಕುತಪ್ಪುತಲಿವ ತಾರೆ " ತಾಕಲಾಟವಿದ್ದದ್ದುಂಟು; ಇನ್ನೊಂದೆಡೆಯು, ನಲಿವಿನೆದೆಯೊಂದರ ಬೆಳಕಿಗಾಗಿ ುಷ-ವರುಷಗಳಿಂದ ಪರಿತಪಿಸುತ್ತಿದ್ದ "ಕತ್ತಲಿನ ತಾಣ"ವಾಗಿದ್ದದ್ದುಂಟು. ಆದರೂ ಗೋಕಾಕ ಅವರು "ಸಾಧಿಸುತ್ತ ಜಯಿಸುವ" ತಮ್ಮ ಅಜೇಯ ವ್ಯಕ್ತಿತ್ವ ಶಕ್ತಿ ಂದ ಎಲ್ಲಿ ಹೋದಲ್ಲೆಲ್ಲ "ಎದೆಯ ಬೆಳಕ"ನ್ನು ಬೀರಿದರು; ತಮ್ಮ "ಜೀವಚೇತನೆ"ಯ ್ಲುಲಿಯ "ಮಾತನ್ನು ಮೊಳಗಿಸಿದರು"; "ಎದೆಯಲಿರುವ" ಹಿರಿಯ "ಭಾವನಾತರಂಗ" ್ನು ಪುಣ್ಯಸಲಿಲದಂತೆ ಹರಿಯಿಸಿದರು. ತೆರಳಿದ ತಾಣವೇ ಅವರಿಗೆ "ಬಾಳದೇಗುಲ" ಯಿತು; ಕಂಡರಿತ ಜನರೆಲ್ಲ "ಬಾಳದೇಗುಲದಲ್ಲಿ ಬಂದು ನಿಂದವರಾ"ದರು; "ಹಡೆದ ಾತಾಯಿಯನು ಕಾಂಬೆನೆಂದವರಾ"ದರು. ಊರು ಬೇರೆ, ವ್ಯಕ್ತಿಗಳು ಬೇರೆ; ಆದರೆ ದಯದೊಲುಮೆ ಒಂದೇ. ಬದಲಿಸುತ್ತಲಿರುವ ಸ್ಥಾನ-ಸಮಯ-ವಾತಾವರಣದಲ್ಲೆಲ್ಲ ಗೆ ಉಚ್ಚ ಶಿಕ್ಷಣವನ್ನು ಪರಿಣಾಮಕಾರಿಯಾಗಿ, ಯಶಸ್ವಿಯಾಗಿ ಸಾಗಿಸುತ್ತ ಬಂದ ಯಸಂದಿದೆ, ಅಧ್ಯಾಪಕ ಗೋಕಾಕ ಅವರಿಗೆ.

ಪ್ರಾಧ್ಯಾಪಕ ಗೋಕಾಕ ಅವರು ಕಲಿಸುವ ವಿಷಯ ಆಂಗ್ಲ ಭಾಷೆ ಹಾಗೂ ವಾಙ್ಮಯ. ೆ ಕಳೆದ ಮೂವತ್ತು ವರ್ಷಗಳಲ್ಲಿ ನಮ್ಮ ನಾಡಿನೊಳಗೆ ಆಂಗ್ಲ ಭಾಷೆಗೂ

ವಾಙ್ಮಯಕ್ಕೂ ತಗಲುತ್ತಲಿರುವ ಆಘಾತ-ಪ್ರತ್ಯಾಘಾತಗಳು ಎಲ್ಲರಿಗೂ ಗೊತ್ತಿ
ಎಣೆಯಿಲ್ಲದ ಅನಿಶ್ಚಿತತೆಯಲ್ಲಿ ನಡೆಯುತ್ತಲಿರುವ ಆಂಗ್ಲ ಭಾಷೆಯ ಅಧ್ಯಾಪನವೆಂ
ಅಧ್ಯಾಪಕರಿಗೆ ದಿನನಿತ್ಯ ಚಿಂತೆ, ವ್ಯಾಕುಲತೆ, ಯಾತನೆಯನ್ನುಂಟುಮಾಡುವ ಸಮ
ಯಾಗತೊಡಗಿದೆ. ಸ್ವಾತಂತ್ರ್ಯದ ಮೊದಲಿನ ತಲೆಮಾರಿನ ಪದವೀಧರರಿಗೆ ಇಂಗ್ಲಿ
ಅಭ್ಯಾಸವನ್ನು ಮಾಡಿಸುವದು ಇಂಥ ಸಮಸ್ಯೆಯಾಗಿರಲಿಲ್ಲ. ಪದವಿಗಾಗಿ ಓದುವ
ಅತೀವ ಆಸ್ಥೆಯಿಂದ, ಪರಿಶ್ರಮದಿಂದ ಅಭ್ಯಸಿಸುತ್ತಿದ್ದರು; ಆಂಗ್ಲ ವಾಙ್ಮಯವನ
ಕರಗತ ಮಾಡಿಕೊಳ್ಳಲು ಅತ್ಯಗತ್ಯವಾಗಿ ಬೇಕಾಗಿದ್ದ ಆಂಗ್ಲ ಭಾಷಾಜ್ಞಾನ ಅವರ
ಸಾಕಷ್ಟು ಇದ್ದೇ ಇರುತ್ತಿತ್ತು. ಪ್ರಾಧ್ಯಾಪಕ ಗೋಕಾಕ ಅವರು ತಮ್ಮ ಅಧ್ಯಾಪಕ ವೃ
ಯನ್ನು ಆರಂಭಿಸಿದ ತರುಣದಲ್ಲಿಮಾತ್ರ ಈ ಸಮಸ್ಯಾರಹಿತವಾತಾವರಣವಿತ್ತು. ಆದರೆ
ಬರುತ್ತ ಪರಿಸ್ಥಿತಿ ಬದಲಾಗುತ್ತ ಸಾಗಿತು. ವಿಶ್ವವಿದ್ಯಾಲಯಗಳಲ್ಲಿ ಕಲಿಸುತ್ತಲಿದ್ದ ಹಳೆ
ತಲೆಮಾರಿನ ಅಧ್ಯಾಪಕರು, ಹಾಗೂ ಪದವಿಗಾಗಿ ವಿದ್ಯಾಲಯಕ್ಕೆ ಬರತೊಡಗಿದ ಹೊ
ತಲೆಮಾರಿನ ವಿದ್ಯಾರ್ಥಿಗಳು, ಇವರ ನಡುವೆ ಭಾಷೀಯ ವಿಷಮತೆ ಬೆಳೆಯತೊಡಗಿತ
ನಾಮಾಂಕಿತ ಆಂಗ್ಲಭಾಷಾ ಪ್ರಾಧ್ಯಾಪಕರೂ ಸಹ ಹೇಳತೀರದ ತೊಂದರೆಯಲ್ಲಿ ಸಿ
ಬೀಳುವಷ್ಟರ ಮಟ್ಟಿಗೆ ಸ್ಥಿತಿ ಹದಗೆಟ್ಟಿತು. ಫಲವಾಗಿ, ಒಂದು ಕಾಲದಲ್ಲಿ ತೀರ ಸರಳವ
ಸನ್ಮಾನನೀಯವೂ ಆಗಿದ್ದ ಇಂಗ್ಲಿಷ್ ವಾಙ್ಮಯಾಭ್ಯಾಸ ದುಸ್ಥಿತಿಗೀಡಾಗತೊಡಗಿತ
ಆದರೆ ಪ್ರಾಧ್ಯಾಪಕ ಗೋಕಾಕ ಅವರ ಮೇಲೆ ಇಂಥ ಯಾವ ದುಸ್ಥಿತಿಯೂ ತ
ಪ್ರಭಾವವನ್ನು ಬೀರಲಿಲ್ಲವೆಂಬುದು ಗಮನಿಸಬೇಕಾದ ಮಾತು. ಹೊಸ ಜನ, ಹೊಸ ನೇ
ಹೊಸ ಕಾಲ, ಹೊಸ ವಾತಾವರಣ, ಹೊಸ ಆತಂಕ ಅದೇನೇ ಇದ್ದರೂ ಅದೆಲ್ಲವನ್ನೂ
ಮೀರಿ, ಎಲ್ಲವನ್ನೂ ಮಣಿಸಿ, ಮೇಲೆ ನಿಂತಿತು ಅವರ ಅಧ್ಯಾಪನ ಕೌಶಲ. ಸಗ್ಗಲಿ
ಕುಗ್ಗಲಿಲ್ಲ; ನೋಯಲಿಲ್ಲ ಸೋಲಲಿಲ್ಲ; ಪ್ರತಿಕೂಲ ಪರಿಸ್ಥಿತಿಯನ್ನು ಲೆಕ್ಕಿಸಲಿಲ್ಲ
"ಕವಲೊಡೆದ ನಮ್ಮ ಹಾದಿ"ಯಲ್ಲಿ "ನವ್ಯವನ್ನೂ ಬುನಾದಿ"ಯನ್ನೂ ಸಮನ್ವಯದ
ಒಂದಾಗಿಸಿದರು ಗೋಕಾಕ ಅವರು. ಎಲ್ಲಿಯೇ ಕಲಿಸಲಿ, ಏನನ್ನೇ ಕಲಿಸಲಿ; ಅವ
ತಿಳಿಸಿ ಹೇಳಿದ್ದೆಲ್ಲ ಪರಿಣಾಮಕಾರಿಯಾಗುತ್ತಿತ್ತು, ಯಶಸ್ವಿಯಾಗುತ್ತಿತ್ತು. ನಿಜಕ
ಗೋಕಾಕ ಅವರ ಅಧ್ಯಾಪನ ಪದ್ಧತಿ ಅಮೋಘ, ಅದ್ವಿತೀಯ.

ಅಧ್ಯಾಪಕ ಗೋಕಾಕರ ಈ ಸೋಲರಿಯದ ಅಸಾಮಾನ್ಯ ಯಶಸ್ಸಿಗೆ ಮು
ಕಾರಣವಾಗಿ ನಿಲ್ಲುವ ಮಾತೆಂದರೆ, ಅವರು ತೀರ ಮೇಲ್ತರಗತಿಯವರಾದ, ಪರಿಪೂರ್ಣ
ಯಿಂದ ಕೂಡಿದವರಾದ, ಆದರ್ಶ ಶಿಕ್ಷಕರಿರುವರೆಂಬುದು. ಮೂವತ್ತೈದು ವರ್ಷಗಳಿಗ
ಹೆಚ್ಚು ಹಿಂದೆ ಮುಂಬಯಿ ವಿಶ್ವವಿದ್ಯಾಲಯದ ಬಿ. ಎ. ಹಾಗೂ ಎಂ. ಎ. ಪರೀಕ್ಷೆಗಳ
ಮೊದಲ ಶ್ರೇಣಿಯಲ್ಲಿಯೇ ಮೊದಲಿಗರಾಗಿ ಉತ್ತೀರ್ಣರಾದದ್ದಲ್ಲದೆ, ಆಕ್ಸ್‌ಫರ್ಡ್‌ನಂ
ಆದರ್ಶ ವಿಶ್ವವಿದ್ಯಾಲಯದ ಬಿ. ಎ. ಪರೀಕ್ಷೆಯಲ್ಲಿಯೂ ಪ್ರಥಮ ಶ್ರೇಣಿಯ

ಗಡೆ ಹೋಂದಿದ ಪ್ರಪ್ರಥಮ ಭಾರತೀಯರು ಅವರು. ಆಂಗ್ಲರ ನಾಡಿನ ಅತಿದೊಡ್ಡ ವಿದ್ಯಾಲಯದಲ್ಲಿಯೇ, ಆಂಗ್ಲರ ಭಾಷೆ—ವಾಙ್ಮಯವನ್ನೇ ತೆಗೆದುಕೊಂಡು, ಆಂಗ್ಲ ೯ ಹಿಂದೂಡಿ ಆ ವಿಷಯದಲ್ಲಿ ಅವರು ಅಸಾಧಾರಣ ಪರಿಣತಿಯನ್ನು ಪಡೆದಿರುವ ರು ನೆನೆದಾಗ, ಅವರಲ್ಲಿ ಅದೆಂಥ ಪ್ರಚಂಡ ಮೇಧಾವಿತನವಿದೆಯೆಂಬುದರ ಅರಿವಾಗ ದು. ವಿದ್ಯಾರ್ಥಿದೆಸೆಯಲ್ಲಿಯೇ ಗಳಿಸಿದ ಈ ಪ್ರಗಲ್ಭ ಪಾಂಡಿತ್ಯವೇ ಮುಂದೆ ಅವರನ್ನು ್ಯಂತ ಉತ್ತಮ ತರಗತಿಯ ಅಧ್ಯಾಪಕರನ್ನಾಗಿ ಮಾಡುವಲ್ಲಿ ಪ್ರಮುಖ ಪಾತ್ರವನ್ನು ಸಿತು.

ಆದರೆ ಆದರ್ಶ ಶಿಕ್ಷಕನಾದವನಿಗೆ ಪರಿಪೂರ್ಣ ಪಾಂಡಿತ್ಯವಷ್ಟೇ ಸಾಲದು; ಅಳವಡಿಸಿ ಂಡ ಜ್ಞಾನವನ್ನು ಇತರರಿಗೆ ಯಥಾವತ್ತಾಗಿ ವಿವರಿಸಿ ಹೇಳುವ ವಿಶಿಷ್ಟ ಕಲ್ಪಕತೆಯೂ ಲವೂ ಬೇಕು. ಅಧ್ಯಾಪಕ ಗೋಕಾಕ ಅವರಲ್ಲಿ ಅಪರಿಮಿತ ಪಾಂಡಿತ್ಯದೊಡನೆ, ಥ ಕಲ್ಪಕತೆ-ಕೌಶಲ ಹೇರಳವಾಗಿರುವುದು ಮುಖ್ಯ ವಿಷಯ. ಆದರೆ ಅದಕ್ಕೂ ಲಾದ ಮಾತೊಂದು ಅವರ ಪಾಂಡಿತ್ಯದ ಪ್ರಖರತೆಯೊಡನೆ ಎರಕಗೊಂಡು ತು ನಿಂತಿದೆ: ಜ್ಞಾನಾರ್ಜನೆಯ ಅವಿಶ್ರಾಂತ ಯಜ್ಞದಲ್ಲಿ ತಮಗೆ ದೊರೆಯುವ ರ್ಣನೀಯ ಆನಂದವನ್ನೂ, ಧನ್ಯತೆ-ಪುರುಷಾರ್ಥವನ್ನೂ, ಅನ್ಯರೆಲ್ಲರಿಗೆ ಇಮ್ಮಡಿ-ಮ್ಮಡಿಯಾಗಿ ಬೀರಬೇಕೆಂಬ ಅವರ ಅತ್ಯಂತ ಉತ್ಕಟ ಹಂಬಲ, ಛಲ. ಜೀವನ ಗ್ರವನ್ನು ಪಾವನಗೊಳಿಸುವ, ನಿರ್ಮಲಗೊಳಿಸುವ ಪ್ರತಿಯೊಂದು ಜ್ಞಾನಕಣ ್ನು ಕೂಲಂಕಷವಾಗಿ, ಆಳವಾಗಿ, ನಿಷ್ಪಕ್ಷಪಾತವಾಗಿ ಅಳವಡಿಸಿಕೊಂಡು, ಕ್ಕೆ ತಮ್ಮ ವ್ಯಕ್ತಿತ್ವದ ಅನನ್ಯ ಘನತೆಯ ಪರಿಮಳವನ್ನು ಬೆರೆಯಿಸಿ, ಕಸ್ತೂರಿ ಂತೆ ಅದನ್ನು ಸುತ್ತಲೆಲ್ಲ ಪಸರಿಸಬೇಕೆಂಬ ಅವರ ಆ ಸಾತ್ವಿಕ, ಸತ್ವಯುತ, ್ರಂಜಲ ಕಾತರವೇ ಅವರನ್ನು ಅತ್ಯುನ್ನತ ಮಟ್ಟದ, ಅದ್ವಿತೀಯ ಶಕ್ತಿಯ ಅಧ್ಯಾಪಕ ನ್ನಾಗಿ ಮಾಡಿದೆ. ಜ್ಞಾನಪಿಪಾಸೆಯೆದುರು ಯಾರೂ ಮೇಲಲ್ಲ ಕೀಳಲ್ಲ; ಬಾಳನ್ನು ನು ಮಾಡಿಕೊಳ್ಳುವ ಹಂಬಲ, ಹಕ್ಕು, ಬಾಧ್ಯತೆ ಯಾರೆಲ್ಲರಿಗೂ ಉಂಟು; ಥ ಎಲ್ಲರನ್ನೂ ಹಿರಿದಾದ ಹೃದಯವಂತಿಕೆಯಿಂದಲೂ, ಆಳವಾದ ಪಾಂಡಿತ್ಯದಿಂದಲೂ ್ರರ್ತಗೊಳಿಸಬೇಕು; ಅಂತು ಅವರಿಗೆ ನೀಡುವ ಈ ಅಪೂರ್ವ ಸ್ಫೂರ್ತಿಯಲ್ಲಿಯೇ ಸಂತೃಪ್ತಿಯನ್ನು ಪಡೆಯಬೇಕು; ಇದೇ ಪ್ರಾಧ್ಯಾಪಕ ಗೋಕಾಕ ಅವರ ಮುಖ್ಯ ಯ. ಆ ಧ್ಯೇಯಸಾಧನೆಯಲ್ಲಿ ಅವರು ಎಂದಿಗೂ ಯಾವ ಎಡರು-ತೊಡರನ್ನೂ ಡಿಲ್ಲ; ಯಾವ ಸಮಸ್ಯೆಗೂ ಸೊಪ್ಪು ಹಾಕಿಲ್ಲ. ಆಂಗ್ಲ ಸಾಹಿತ್ಯವು ಒಳಗೊಂಡಿರುವ ಪಮ ಸೌಂದರ್ಯವನ್ನು, ಅದು ನೀಡುವ ಆನಂದವನ್ನು, ಆಳವಾಗಿ ಮನಸೋಕ್ತ ಗಿ ಅನುಭವಿಸುವುದು ಅವರ ವ್ಯಕ್ತಿತ್ವದ ಒಂದು ಲೀಲೆಯಾಗಿದೆ; ಓದಿದುದನ್ನೆಲ್ಲ, ತಿಳಿದುಕೊಂಡದ್ದನ್ನೆಲ್ಲ, ಅರಿತು—ಅರಗಿಸಿಕೊಂಡದ್ದನ್ನೆಲ್ಲ, ಎಲ್ಲ ಬಗೆಯ ವಿದ್ಯಾರ್ಥಿ

ಗಳಿಗೆ, ಎಲ್ಲ ಮಟ್ಟದಲ್ಲಿ, ಎಲ್ಲರ ಮನಂಬುಗುವಂತೆ, ನಿತ್ಯನೂತನವಾದ, ನಿರಂತ
ವೈವಿಧ್ಯಪೂರ್ಣವಾದ ಶೈಲಿಯಲ್ಲಿ ವಿವರಿಸುತ್ತ ಸಾಗುವದು ಇನ್ನೊಂದು ಲೀಲೆ.ಅಂತೆಯೆ
ಗುರುವರ್ಯರಾದ ಅವರಡಿಗಳಲ್ಲಿ ಕುಳಿತು, ಅವರು ಅನನ್ಯ ಸಮತೆಯಿಂದ, ನಿಸ್ಸೀ
ಔದಾರ್ಯದಿಂದ ಸುರಿಸುವ ಜ್ಞಾನಾನಂದದ-ಸಾಹಿತ್ಯಾನಂದದ ಸುರಿಮಳೆಯ
ಮಿಂದೇಳುವುದರೊಳಗೆ ಪ್ರತಿಯೊರ್ವ ವಿದ್ಯಾರ್ಥಿಯೂ ಧನ್ಯತೆಯನ್ನು ಪಡೆಯುತ್ತಾ
ಈ ಕ್ರಿಯೆಯಲ್ಲಿ ಅಧ್ಯಾಪಕ ಗೋಕಾಕ ಅವರ ವ್ಯಕ್ತಿತ್ವವು ವರ್ಷ ಋತುವಿನ ಘನ
ಪೂರ್ಣ ಹಿರಿಮೋಡವೊಂದರಂತೆಯೇ ಕಾರ್ಯವೆಸಗುತ್ತದೆ. ಗಗನಾಧಿಪತಿಯಾ
ವಿನಾಯಕನಂತೆ ಜ್ಞಾನಾಕಾಶವನ್ನೆಲ್ಲ ವಿಹರಿಸಿ, ಹುಡುಕಾಡಿ-ತಡುಕಾಡಿ ಎಲ್ಲೆಡೆಯಿಂ
ಜ್ಞಾನಾರ್ಥತೆಯನ್ನು ಸೈಗೂಡಿಸಿಕೊಂಡು, ನೆರೆದಿರುವ ವಿದ್ಯಾರ್ಥಿ ಸಮೂಹದ ಮೇ
ಒಂದೇ ಸಮನಾಗಿ, ಒಂದೇ ಮಮತೆಯಿಂದ ಸಾಹಿತ್ಯದ ಆನಂದಾನುಭವವನ್ನು ಮಳೆಗ
ಯುವುದೇ ಅವರ ವಾಡಿಕೆಯ ಅಧ್ಯಾಪನ ಪದ್ಧತಿ. ಮುಕ್ಕಾಲು ಗಂಟೆಯವರೆಗಿನ ಅವ
ವರ್ಗದ ಪ್ರತಿನಿಮಿಷವೂ ಈ ಜ್ಞಾನಪರ್ಜನ್ಯದ ಸಂತತ ಧಾರೆಯಿಂದ ವಿದ್ಯಾರ್ಥಿಗ
ಮನವನ್ನು ಹಸನುಮಾಡಿ ಹದಗೊಳಿಸುತ್ತದೆ. ಜ್ಞಾನದಾನ ಮಾಡಬೇಕೆಂಬ ಅವರ
ಹಂಬಲ, ಆನಂದಾನುಭವವನ್ನು ಬಿತ್ತರಿಸಬೇಕೆಂಬ ಈ ಕಾತರ, ಅವರ ಪ್ರತಿಯೊಂ
ಪ್ರವಚನವನ್ನೂ ಅಪೂರ್ವವಾದೊಂದು ಅನುಭವದಿಂದ ಸಂಪನ್ನವಾಗಿಸುವುದ
ಮುಕ್ಕಾಲು ಗಂಟೆ (ಸ್ನಾತಕೋತ್ತರ ವರ್ಗಗಳಲ್ಲಿ ಪೂರ್ತಿ ಒಂದು ಗಂಟೆ)ಯ ಆ ಅವ
ಮುಗಿಯುವುದರ, ಮುಗಿದ, ಭಾಸವೇ ವಿದ್ಯಾರ್ಥಿಗಳಿಗೆ ಇರುವುದಿಲ್ಲ. ತಲ್ಲೀನಗೊಳಿಸು
ಆಂಗ್ಲ ಸಾಹಿತ್ಯದ ಮೋಡಿಯಲ್ಲಿ ಪೂರ್ಣ ತನ್ಮಯರಾದ ಈ ಗುರುವರ್ಯ, ತಾ
ವಿವರಿಸುವಂಥ ಆಕರ್ಷಕ ವಿಷಯಕ್ಕೆ ತಮ್ಮ ಆತ್ಮಾನುಭವದ ಸಮ್ಮೋಹಕತೆಯನ್ನ
ಧಾರೆಯೆರೆಯುತ್ತಾರೆ; ಹಾಗೆ ಮಾಡಿ, ತಮ್ಮ ಪ್ರವಚನವನ್ನು ಕೇಳುವ ವಿದ್ಯಾರ್ಥಿ
ಮೇಲೆ ಒಂದು ಬಗೆಯ ಸಮ್ಮೋಹನಾಸ್ತ್ರವನ್ನೇ ಎಸೆಯುತ್ತಾರೆ. ಹೀಗೆ ತಮ್ಮ ಅಧ್ಯಾ
ಕಲೆಯಲ್ಲಿ ಮೈಮರೆತ ಗೋಕಾಕ ಅವರು ಆಗ "ಗಾನದುನ್ಮಾದವೇರಿ ನಡೆದ ರಾಜಭೃಂ
ದಂತೆ ತೋರಿದರೆ ಆಶ್ಚರ್ಯವೇನಲ್ಲ. ಅಂಥ ಸ್ಥಿತಿಯಲ್ಲಿ ಅವರು ತಿಳಿಸಿ ಹೇಳಿದುದ
ಅದಾವುದೋ ಒಂದು ಇಂದ್ರಜಾಲದ ನೆರವಿನಿಂದೆಂಬಂತೆ ಎಲ್ಲ ವಿದ್ಯಾರ್ಥಿಗಳ ಮನವನ
ಸೂರೆಗೊಳ್ಳುವದು; "ದೇವಕನ್ನಿಕೆಯರು ನುಡಿಸುವಂಥ ಮೃದು ಮೃದಂಗ"ದಂತೆ ರ
ನೆನ್ನಿಸುವದು. ಅವರ ಆ ವಿವರಣೆ ಕೊನೆಗೊಂಡಾಗ, ಅವರಿಂದ ಕೇಳಿದುದನ್ನೆಲ್ಲ ಸರಿಯಾ
ಅರಿತುಕೊಂಡಿರುವ ಪರಿಪೂರ್ಣ ತೃಪ್ತಿ ವಿದ್ಯಾರ್ಥಿಗಳೆಲ್ಲರ ಮೊಗದ ಮೇಲೆ ಮೂಡುವ
ಅವರು ತಿಳಿಸಿ ಹೇಳಿದ ಪರಿಯನ್ನು ನೆನೆನೆನೆದು ಪ್ರತಿ ವಿದ್ಯಾರ್ಥಿಯ ಮನ ಆನಂದದಿ
ನಲಿದಾಡುವದು, ತೂಗಿ ಬೀಗುವದು. ಅಧ್ಯಾಪಕ ಗೋಕಾಕ ಅವರ ಕಲಿಸುವಿಕೆಯ
ರುವ ಈ ಸಮ್ಮೋಹಕತೆಯಿಂದಾಗಿ ಅವರು ಕಲಿಸಬರುವ ವರ್ಗವೆಂದರೆ ವಿದ್ಯಾರ್ಥಿಗಳಿ

...ಮು ಸುಡಿಗೆ ಸಿಲುಕದ ಹಿಗ್ಗಿನ ಬುಗ್ಗೆ. ಅವರು ಕಲಿಸಿದ ಬಳಿಕ ದೊರೆಯುವ ...ಂದದ ನೆನಪು ಕೊನೆವರೆಗೆ ಅಚ್ಚಳಿಯದೇ ಉಳಿಯುವದು ಕಲಿತವರ ಹೃದಯದಲ್ಲಿ. ...ತೆಯೇ, ಒಮ್ಮೆ ಅವರ ವಿದ್ಯಾರ್ಥಿಗಳಾಗಿದ್ದವರು ಈಗ ಎಲ್ಲಿಯೇ ಇದ್ದರೂ ಅಂದಿನ ಅನುಪಮ ಆನಂದಾನುಭವವನ್ನು ನೆನೆದು ಇಂದಿಗೂ ಮೈಮರೆಯುವುದುಂಟು; ...ದಿನ ಆ ರಮ್ಯ ಸ್ಪಂದನ ಅವರ ರೋಮ-ರೋಮದಲ್ಲಿ ಅಲೆಗಳಿಗೆ ಮತ್ತೆ ಸುಳಿಯುವು...ಂಟು. ಅವರ ಅಧ್ಯಾಪನದಿಂದ ದೊರೆತ ಹರ್ಷೋನ್ಮಾದದ ನೆನಪೆಂದರೆ ಒಂದು ರಹಸ್ಯ...ಯ ಆನಂದಲೋಕ! ಅವರು ಕಲಿಸುವುದಾದಲ್ಲಿ, ಅತ್ಯಂತ ಗಹನ ವಿಚಾರಗಳ ...ಮ್ಯತೆ ಕೂಡ ಸುಗಮವಾಗಿ, ಮನೋಹರವಾಗಿ, ಹೃದಯಸ್ಪರ್ಶಿಯಾಗಿಬಿಡುವುದು; ...ದಿಗೂ ಮರೆಯದಂತೆ ನೆನಪಿನಲ್ಲಿ ನೆಲೆಯೂರುವದು. ಹೀಗೆ, ಕಲಿಸುವವರಾದ ಅವರ, ...ಗೂ ಕಲಿಯುವವರಾದ ವಿದ್ಯಾರ್ಥಿಗಳ, ಸುಂದರವೂ ಸುಭದ್ರವೂ ಆದ ಮಾನಸಿಕ ...ಕ್ಯವೇ ಗೋಕಾಕ ಅವರ ಅಧ್ಯಾಪನ ಕಲೆಯ ರಸಸಿದ್ಧಿ. ವಿವರಿಸುವ ವಿಷಯದಲ್ಲಿ ...ರು ಲೀನರು; ಅವರ ವಿವರಣೆಯ ರಮ್ಯತೆಯಲ್ಲಿ ವಿದ್ಯಾರ್ಥಿಗಳು ಲೀನರು. ಜ್ಞಾನ ...ಮಯದ ಇಂಥ ಭಾವೈಕ್ಯವೇ ಗುರುದೇವ ಗೋಕಾಕರ ವ್ಯಕ್ತಿತ್ವದ ನಿಜವಾದ ...ಪಕ. ತುಳುಕಿ ತಡಕಾಡದಂಥ ತುಂಬಿದ ಕೊಡದಂತೆ ಅವರ ವ್ಯಕ್ತಿತ್ವ ಪೂರ್ಣ ...ಂಡಿತ್ಯದಿಂದ ಸಂಪನ್ನವಾಗಿದೆ. ಅದರ ಬಲದಿಂದ ಸಾಹಿತ್ಯಕಲಾದೇವತೆಯನ್ನು ...ರು ಪರಿಪೂರ್ಣವಾಗಿ ಸಾಕ್ಷಾತ್ಕರಿಸಿಕೊಂಡಿದ್ದಾರೆ. ತಾವು ಮನವಾರೆ ಅನುಭವಿಸಿದ ...ವೈಭವದ ಸೊಗಸನ್ನು ಇತರರಿಗೂ ಯಥಾವತ್ತಾಗಿ ಮನವರಿಕೆ ಮಾಡಿಕೊಡಬೇಕೆಂಬ ...ತ್ತ್ವಿಕ-ಸತ್ವಯುತ ಛಲವೊಂದರಿಂದ ಅವರು ಸದಾ ಪ್ರೇರಿತರಾಗಿದ್ದಾರಷ್ಟೆ? ಆ ಛಲದ ...ರ್ಯತತ್ಪರತೆಯಿಂದ ಅವರ ವಿದ್ಯಾದಾನವು ಒಂದು ಸುಂದರ ಸಜೀವವಾದ ಜ್ಞಾನ...ವಾಗಿದೆ. ಎಲ್ಲಿ ಹೋದಲ್ಲೆಲ್ಲ ಈ ಕಾರಣದಿಂದಲೇ ಅವರು ವಿದ್ಯಾರ್ಥಿಗಳ ಮನವನ್ನು ...ರೆಗೊಂಡಿದ್ದಾರೆ; ತಮ್ಮ ಅಧ್ಯಾಪನ ಶಕ್ತಿಯ ಅದ್ಭುತ ಮೋಡಿಯಿಂದ ವಿದ್ಯಾರ್ಥಿಗಳ ...ದಯಗಳಲ್ಲಿ "ಕೋಟಿವರುಷದಾಚೆ ಜನಸಿದಂಥ ಜೀವದಾಶೆ"ಯನ್ನು ಹೊಮ್ಮಿಸಿ...ರೆ; ವಿದ್ಯಾರ್ಥಿಗಳ "ಅಂದಿನಾ ಪಿಪಾಸೆ"ಯನ್ನು ತೀರಿಸಿದ್ದಾರೆ, ಹಿಂಗಿಸಿದ್ದಾರೆ; ...ರ "ಡೈವರೇಷೆ"ಯನ್ನು "ರುಚಿರವಾಗಿ"ಸಿದ್ದಾರೆ. ಇದಕ್ಕೂ ಮಿಗಿಲಾದ ಸಾಮಾಜಿಕ, ...ಸ್ಕೃತಿಕ, ರಾಷ್ಟ್ರೀಯ ಸೇವೆಯನ್ನು ಉಪಕಾರವನ್ನು ಯಾವ ಅಧ್ಯಾಪಕ ಮಾಡ...? ಇಂಥ ಅತ್ಯುಪಯುಕ್ತ, ಅತ್ಯಾವಶ್ಯಕ ಸೇವೆಯನ್ನು ಪ್ರಾಮಾಣಿಕತನದಿಂದ, ...ಷ್ಮನದಿಂದ ಸಲ್ಲಿಸಿದ ಶ್ರೇಯ ಅಧ್ಯಾಪಕ ಗೋಕಾಕ ಅವರಿಗೆ ತಂತಾನೇ ಸಲ್ಲುತ್ತದೆ.

ಈ ಪಾವನ ಕಾರ್ಯದಲ್ಲಿ ಅವಿರತವಾಗಿ ತೊಡಗಿರುವ ಗುರುದೇವ ಗೋಕಾಕ ಅವರ ...ನ್ನೊಂದು ಉನ್ನತ ಗುಣವೆಂದರೆ, ಅವರು ವಿದ್ಯಾದಾನದ ಬಗೆಗೂ ಜೀವನದ ಬಗೆಗೂ ...ದಲಿನಿಂದ ಮೈಗೂಡಿಸಿಕೊಂಡು ಬಂದಿರುವ ಸತ್ವಯುತ ಹಾಗೂ ವಿಕಸನಶೀಲ

ದೃಷ್ಟಿ. ಆದರ್ಶ ಶಿಕ್ಷಕನೆನ್ನಿಸಿಕೊಳ್ಳುವವನಲ್ಲಿ ಕಣ್ಣು ಕುಕ್ಕಿಸುವಂಥ ವಿದ್ಯಾಪ್ರೌಢಿಮೆ
ಮಾತ್ರ ಇದ್ದರೆ ಸಾಲದು; ದಿಗ್ದಿಗಂತದವರೆಗೆ ಹಬ್ಬಿರುವ ಇಂಥ ಪಾಂಡಿತ್ಯದ ಖ್ಯಾ
ಕೇವಲ ವ್ಯಕ್ತಿಗತ ಸಂಪತ್ತಾಗಿಯೋ, ಉದ್ಗ್ರಂಥಗಳ ಗಟ್ಟಿ ಕವಚದಲ್ಲಡಗಿಯೋ
ಮಾತ್ರ ಉಳಿಯುವ ವಾಡಿಕೆ ಹೆಚ್ಚು. ಇಂಥ ಪಾಂಡಿತ್ಯದ ಸದ್ವಿನಿಯೋಗವಾಗಬೇಕ
ದರೆ ಪಂಡಿತರಲ್ಲಿ ಒಂದು ವಿಶಿಷ್ಟ ಜೀವನದೃಷ್ಟಿ ಬೇಕು. ಹೊಟ್ಟೆ ಹೊರೆಯಲೆಂದ
ಮಾತ್ರ ಮನುಷ್ಯ ಉದ್ಯಮವೊಂದನ್ನು ಕೈಕೊಳ್ಳುವುದುಂಟು. ಹೊಟ್ಟೆ ಹೊರೆಯಲ
ಬೇಕೇನೋ ನಿಜ. ಆದರೆ ಜೀವನೋಪಾಯದ ಯೋಜನೆಯನ್ನು ಮಾಡಿದ ಮಾತ್ರಕ
ಸಂತೃಪ್ತಿಗೊಂಡಲ್ಲಿ ಶಿಕ್ಷಕನೆನ್ನುವ ವ್ಯಕ್ತಿಗೆ ಜೀವನಸಾರ್ಥಕತೆ ದೊರೆಯುವುದಿಲ್ಲ. ಅವ
ಮೂಲಭೂತ ಕರ್ತವ್ಯವೆಂದರೆ ಬೌದ್ಧಿಕ ಮತ್ತು ಆಧ್ಯಾತ್ಮಿಕ ಪರೋಪಕಾರ. ಅವನ ಕಾ
ಕ್ಷೇತ್ರ ದಾನದ್ದು, ಜ್ಞಾನಪ್ರಸಾರದ್ದು; ಅಂತೆಯೇ ಅವನ ವ್ಯವಸಾಯದಲ್ಲಿ "ತಾನು
ಎಂಬುದು ಮುಖ್ಯವಾದರೂ, ವ್ಯವಸಾಯದ ಸಫಲತೆಯ ದೃಷ್ಟಿಯಿಂದ ತನಗಿಂತ ಮಿ
ಲಾಗಿ "ಅನ್ಯರು" (ವಿದ್ಯಾರ್ಥಿಗಳು) ಹೆಚ್ಚು ಎಂಬ ಒಂದು ನಂಬಿಗೆ ಅವನಲ್ಲಿ ಬೆಳೆದುಬ
ಬೇಕು. ಆಗ ಮಾತ್ರ ಅವನ ಸಾಮಾಜಿಕ ಸೇವೆಗೊಂದು ಮೇಲ್ತರಗತಿಯ ಮೆರುಗು ಬ
ತ್ತದೆ. ಅಂಥ ನಂಬಿಕೆಯೇ ಅವನ ಜೀವನ ದೃಷ್ಟಿಯ ಪ್ರತಿಬಿಂಬ. ಅಂತಾಗಿ, ಪ್ರತಿಯೋ
ಆದರ್ಶ ಶಿಕ್ಷಕನಲ್ಲಿ ಜೀವನಶ್ರದ್ಧೆಯಿಂದ ಕೂಡಿದ ಸಮ್ಯಗ್ ದೃಷ್ಟಿಯೊಂದು ಇರಲ
ಬೇಕು. ಈ ಮಾತಿನ ಸತ್ಯದ ಉಜ್ವಲ ಉದಾಹರಣೆ ನಮಗೆ ಗುರುದೇವ ಗೋಕಾ
ಅವರೊಳಗೆ ಪೂರ್ತಿಯಾಗಿ ವಿಕಾಸಗೊಂಡಿರುವ ಜೀವನದೃಷ್ಟಿಯಲ್ಲಿ ದೊರೆಯುತ್ತ
ಪ್ರಾಧ್ಯಾಪಕರಾದ ಆರಂಭದಲ್ಲಿ ಅವರು ಆಂಗ್ಲ ಸಾಹಿತ್ಯದೊಳಗಿನ ರಮ್ಯತಾಪೂ
(Romantic) ಭಾಗದಿಂದ ಪ್ರಭಾವಿತರಾಗಿದ್ದ ಕಾರಣದಿಂದಲೂ, ಅಂದಿನ ಭಾರತ
ಸಾಂಸ್ಕೃತಿಕ ಶೈಕ್ಷಣಿಕ ವಾತಾವರಣದ ಪರಿಣಾಮದಿಂದಲೂ ಅವರು ಅತ್ಯುದಾ
ಮಾನವತಾವಾದಿಗಳಾದರು. ಮಾನವ, ಅವನ ಮೂಲಭೂತ ಒಳ್ಳೆಯತನ, ಅವ
ಭವಿತವ್ಯ, ಇವುಗಳಲ್ಲಿ ಅಚಲ ಶ್ರದ್ಧೆಯನ್ನಿರಿಸಿಕೊಂಡ ಅವರು ಪ್ರತಿಯೋರ್ವ ವಿದ್ಯಾ
ಯನ್ನು ಆಂತರಿಕ ಗೌರವದಿಂದ, ಆತ್ಮೀಯತೆಯಿಂದ, ವಾತ್ಸಲ್ಯದಿಂದ ಕಾಣುವ ವಿಶಿ
ಗುಣವನ್ನು ಮೈಗೂಡಿಸಿಕೊಂಡರು. ಏಕೆಂದರೆ ಸಕಲ ಮಾನವರಲ್ಲಿಯ ಘನತೆಯನ
ನಿರ್ವಿಕಾರ, ನಿಷ್ಪಕ್ಷಪಾತ, ನಿರ್ದುಷ್ಟ ಬುದ್ಧಿಯಿಂದ ಪರಿಶೀಲಿಸಿ ಅರಿತುಕೊಂಡು ಅ
ಕಂಪವನ್ನು ತೋರುವುದೇ ರಮ್ಯತಾವಾದದಲ್ಲಿಯ ಮಾನವೀಯತೆಯ ಸಾರ. ಇದು
ಗೋಕಾಕ ಅವರ ಜೀವನ ದೃಷ್ಟಿಯ ಭದ್ರ ಅಸ್ತಿವಾರ. ಆದರೆ ಆ ಜೀವನ ದೃಷ್ಟಿ
ಉತ್ತುಂಗ ಗೋಪುರ ಗೋಚರಿಸುವದು ಗೋಕಾಕ ಅವರ ಆನಂತರಿನ ಮೂವ
ವರ್ಷಗಳ ದೃಷ್ಟಿವಿಕಾಸ ಕ್ರಮದಲ್ಲಿ ಮಾತ್ರ. ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಪಡುವಣ
ವರು ತೆರಳಿದ ಸಮಯದಲ್ಲಿ ಅಂದಿನ ಪಾಶ್ಚಾತ್ಯಲೋಕದಲ್ಲಿ ನಡೆಯುತ್ತಲಿದ್ದ ಅನೇ

ಕಾರದ ವಿಚಾರಮಂಥನ ಗೋಕಾಕ ಅವರ ಜೀವನ ದೃಷ್ಟಿಯನ್ನು ಅರಳಿಸುವಲ್ಲಿ ೀಗ್ಯ ಪಾತ್ರವನ್ನು ವಹಿಸಿತು. ಅಂದು ಅತ್ಯಂತ ಜನಪ್ರಿಯವಾಗಿದ್ದ ಸಾಮ್ಯವಾದವೂ ಡ ಗೋಕಾಕ ಅವರ ವ್ಯಕ್ತಿತ್ವದ ಮೇಲೆ ತನ್ನದೇ ಆದ ಗುರುತನ್ನಿರಿಸಿಹೋಯಿತು. ನಾಡಿಗೆ ಮರಳಿದ ನಂತರದ ಬಾಳಿನಲ್ಲಿ "ಕಳ್ಳಿಯ ಹಾಲಿನ ಘನರಸ"ವನ್ನು ಕುಡಿಯ ಾಗಿ ಬಂದ ಘೋರ ಪ್ರಸಂಗಗಳಲ್ಲಿಯೂ, ವ್ಯವಸಾಯದಲ್ಲಿ ಘಟಿಸುತ್ತ ಬಂದ ಇತರ ರುಣ ವಿಷಯಗಳಿಂದಲೂ, ಅವರ ದೃಷ್ಟಿ ಗಾಸಿಗೊಂಡು ರೂಪು ಬದಲಿಸಿದ್ದುಂಟು. ಾಧಿಸುತ್ತ ಜಯಿಸ"ಲೆಂದು ಬಾಳುತ್ತಿದ್ದ ಅವರಿಗೆ ವಿಷದ ಸಾರವನ್ನೇ ಸವಿಯಬೇಕಾದ ರ್ಧರ ಸಂದರ್ಭ ಬಂದರೂ ಆ ನಂಜಿನ ನಂತರ ಮೂಡಿ ಬಂದ ಅಮೃತವನ್ನವರು ಮುಗಡೆ ಪಡೆದರು. ವ್ಯಗ್ರತೆಯ ಗಡಣದಿಂದ ನಮ್ಮನ್ನು ಸಂಭ್ರಾಂತಗೊಳಿಸುವ ವನದಲ್ಲಿಯೇ ಹುದುಗಿರುವ ಸಮಗ್ರತೆಯನ್ನು ಗೋಕಾಕ ಅವರು ಪೂರ್ಣವಾಗಿ ಯತೊಡಗಿದರು. ಜೀವನವೆಂದರೆ ಸಮರಸ, ಸಮನ್ವಯ; ಸಕಲವನ್ನು ಒಳಗೊಂಡು ಡ ಸಕಲದಿಂದ ಭಿನ್ನವಾಗಿರುವಂಥ ಸುಂದರ ದೈವಿಕರಹಸ್ಯ; ಎಂಬ ಮಹತ್ತರ ್ಯವನ್ನು ಎಳೆ ಎಳೆಯಾಗಿ ಅವರ ಜೀವನದೃಷ್ಟಿ ಅರಿಯತೊಡಗಿತು. ಈ ವಿಕಾಸಶೀಲ ಷ್ಟಿಯನ್ನು ಅವರಲ್ಲಿರುವ "ಕವಿ"ಯೂ "ಕಾದಂಬರಿ"ಕಾರನೂ ಅವರ ಸಾಹಿತ್ಯದಲ್ಲಿ ಕ್ತಪಡಿಸಿರುವುದು ಸರ್ವವಿದಿತ. ಆದರೆ ಗೋಕಾಕ ಅವರ ಸಮ್ಯಗ್‌ದೃಷ್ಟಿಯ ನಿರಾಯಾಸ ದ, ಗಹನತ್ವಾದ, ಶಕ್ತಿಶಾಲಿಯಾದ ಅಭಿವ್ಯಕ್ತಿ ಅತೀವ ನಿಸ್ಸಂದಿಗ್ಧವಾಗಿ ಕಂಡು ುವುದು ಅವರ ಅಧ್ಯಾಪನದಲ್ಲಿ ಮಾತ್ರ. ತಾವು ಕಲಿಸುವ ಪ್ರತಿ ವಿಷಯವನ್ನೂ, ಪ್ರತಿ ಹಿತಿಯನ್ನೂ ಇಂಥ ಪೂರ್ಣದೃಷ್ಟಿಯಿಂದ ಪರಾಮರ್ಶಿಸಿ, ವಿಷಯದ ಯಾವ ಮುಖ ್ನೂ ಅಲಕ್ಷಿಸದೆ, ನಿಂದಿಸದೆ, ವಿವರಿಸುತ್ತ ಸಾಗುವ ಅಸಾಧಾರಣ ಶಕ್ತಿ ಅವರದು. ರು ಕಲಿಸುವಾಗಿನ ಪ್ರತಿಯೊಂದು ಪ್ರವಚನದಲ್ಲಿಯೂ ಅದು ಕಂಡುಬರುತ್ತದೆ. ವನದಲ್ಲಿ ಪ್ರತಿಯೊಂದು ವಸ್ತುವಿಗೂ, ವಿಷಯಕ್ಕೂ ಒಂದು ವಿಶಿಷ್ಟ ಸ್ಥಾನ ಟು; ಅದನ್ನು ಹುಡುಕಿ ತೆಗೆಯಬೇಕು, ವಿವರಿಸಿ ವಿಂಗಡಿಸಬೇಕು; ಆಗ ಮಾತ್ರ ್ಯಾಪನಕ್ಕೆ ಒಂದು ಸಫಲತೆ ಬರಬಲ್ಲದು. ಈ ಮಾತಿನ ಸತ್ಯ ಗೋಕಾಕ ಅವರ ಸುವಿಕೆಯಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಮೇಲ್ಮಟ್ಟದ ಪಂಡಿತರಾದವರು ತಮ್ಮ ಾವದಿಂದಲೇ ಒಳಿತು ಕೆಡುಕೆಂಬುದನ್ನು ಗುರುತಿಸುವದು ಸಹಜ. ಉಪಯುಕ್ತವಾದು ್ನು ಮಾತ್ರ ಮೆಚ್ಚಿ ಹೊಗಳಿ, ನಿರುಪಯುಕ್ತವಾದುದನ್ನು ತೆಗಳಿ ಬಿಸಾಕುವದು ರ ವಾಡಿಕೆಯಾಗಿರುವುದುಂಟು. ಆದರೆ ಸಮಗ್ರವಿದ್ಯಾದಾನದಲ್ಲಿ ಕರಿಕೆಯ ಬೇರಿನಂಥ ಮಾನ್ಯ ವಿಷಯಕ್ಕೂ ಒಂದು ವಿಶಿಷ್ಟ ಸ್ಥಾನವುಂಟು. ವೈದಿಕಸತ್ಯದ ಸಾಕ್ಷಾತ್ಕಾರದ ಯನ್ನು ವಿವರಿಸುವ ಯಾಜ್ಞವಲ್ಕ್ಯ ಮಹರ್ಷಿಯ ಸುಂದರ ಶೈಲಿಯಲ್ಲಿ, ನ್ಯಗ್ರೋಧ ಜವೂ ಒಂದು ಅದ್ವಿತೀಯ ಸ್ಥಾನವನ್ನು ಪಡೆಯುವಂತೆ, ಆದರ್ಶ ಅಧ್ಯಾಪಕನ

ವಿದ್ಯಾದಾನದಲ್ಲಿ ಎಂಥ ಕ್ಷುಲ್ಲಕ ವಿಷಯವೂ ಮಹತ್ತರವಾಗಿ ನೆರವಾಗಬಲ್ಲದು. ಗೋಕಾಕ ಅವರು ವಿದ್ಯೆಯ ವಿಷಯದಲ್ಲಿ ತಳೆದಿರುವ ಸಮ್ಯಗ್‌ದೃಷ್ಟಿಯು ಇದೇ. ಹಾಗಾಗಿ, ಯಾವ ಲೇಖಕನನ್ನೂ ಯಾವ ವಿಷಯವನ್ನೂ ಅವರು ನಿರುಪಯೋಗಿಯೆಂದು ಒಮ್ಮೆಲೆ ಬಿಸಾಕುವುದೇ ಇಲ್ಲ. ಮಹತ್ವವನ್ನರಿಯದೆ, ತಿರುಳನ್ನು ತಿಳಿಯದೆ, ಒಂದು ವಿಷಯದ ಬಗೆಗೆ ನಿರ್ಣಯವನ್ನು ಕೈಕೊಳ್ಳುವುದಾದರೂ ಹೇಗೆ? ಆದುದರಿಂದ ಪೂರ್ವಗ್ರಹಿಕ ಯಾವುದನ್ನೂ ಇರಿಸಿಕೊಳ್ಳದೆ ಅಭ್ಯಾಸದ ವಿಷಯವನ್ನು ಮನನ ಮಾಡಿಕೊಳ್ಳುವದು ಅನಿವಾರ್ಯವಲ್ಲವೆ? ವಿಷಯದ ನೈಜ ಸ್ಥಿತಿಯನ್ನು, ಮೌಲಿಕತೆಯನ್ನು ಅರಿತ ಬಳಿಕ ಬೇರೊಂದು ವಸ್ತುವಿಗಿಂತ ಅದು ಮೇಲೋ ಕೀಳೋ ಎಂಬುದನ್ನು ನಿಷ್ಕರ್ಷಿಸಲು ಸಾಧ್ಯವೇ ಹೊರತು, ಆರಂಭದಲ್ಲಿಯೇ ವಿಷಯವನ್ನು ಹೀಗಳೆದು ತಾತ್ಸಾರಮಾಡುವುದ ರಿಂದಲ್ಲ. ಹೀಗೆ ನಿರ್ವಿಕಾರತೆಯಿಂದ ಪ್ರತಿಯೊಂದು ವಿಷಯವನ್ನೂ ಪರೀಕ್ಷಿಸುವ ಒಂದ ಶಾಸ್ತ್ರೀಯ ದೃಷ್ಟಿಕೋನ ಅಥವಾ ದೇವದೃಷ್ಟಿ ಗೋಕಾಕ ಅವರ ಅಧ್ಯಾಪನದಲ್ಲಿ ಕಂಡುಬರುತ್ತದೆ.

ಶಿಕ್ಷಣದ ಬಗೆಗೆ ತಳೆಯುವ ದೃಷ್ಟಿಯ ಜೊತೆಗೆ ಅಧ್ಯಾಪಕನ ಅಧ್ಯಾಪನ ವಿಧಾನವು ಅವನಿಗೆ ವೈಶಿಷ್ಟ್ಯವನ್ನು ತಂದು ಕೊಡುತ್ತದೆ. ಕಲಿಸುವವರ ಕಲಿಸುವ ಕ್ರಮವು ಅವರನ್ನು ಆದರ್ಶ ಶಿಕ್ಷಕರನ್ನಾಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಗೋಕಾ ಅವರ ವಿಷಯವಿವರಣಾ ಪದ್ಧತಿಯಿಂದ ಈ ಮಾತೂ ಸಿದ್ಧವಾಗುತ್ತದೆ. ತಮ್ಮ ಜೀವ ದೃಷ್ಟಿಯನ್ನು ರಮ್ಯತಾವಾದದಿಂದ ವಿಕಸನಗೊಳಿಸಿಕೊಂಡಿರುವರಾದರೂ ಅವರು ವಿಷಯ ವನ್ನು ವಿಶ್ಲೇಷಣ ಮಾಡುವ ಕ್ರಮದಲ್ಲಿ ಬಂಧುರವಾದ ಅಭಿಜಾತ ಶೈಲಿಯನ್ ಅಳವಡಿಸಿಕೊಂಡಿರುವರು. ಅವರ ಅಧ್ಯಾಪನದಲ್ಲಿ ಇಂತು ಪ್ಲೇಟೋವಿನಲ್ಲಿ ಕಂಡು ಬರ ವಂಥ ರಮ್ಯತೆಯೂ ಇಳಿದು ಬಂದಿದೆ; ಅರಿಸ್ಟಾಟಲ್‌ನಲ್ಲಿರುವಂಥ ಶಾಸ್ತ್ರೀಯವಾ ವಿಂಗಡಣಾ ವಿಧಾನವೂ ಹರಿದು ಬಂದಿದೆ. ಅವರ ಕಲಿಸುವಿಕೆಯಲ್ಲಿಯ ಈ ವಿಶ್ಲೇಷಣ ತ್ಮಕ ಪದ್ಧತಿ ಅವರಲ್ಲಿರುವ ಅತಿ ಮಹತ್ವದ ವೈಶಿಷ್ಟ್ಯ. ಈ ಪದ್ಧತಿಯೇ ವಿಶ್ವವಿದ್ಯಾಲಯ ಅಧ್ಯಾಪನದಲ್ಲಿ ಮುಖ್ಯವಾಗಿ ಉಪಯುಕ್ತವಾಗುವದು. ಉಚ್ಚ ಶಿಕ್ಷಣದ ಗಹನತೆಯನ್ನು ಗಡುಚನ್ನು, ವಿದ್ಯಾರ್ಥಿಗಳಿಗೆ ಮನದಟ್ಟಾಗಿಸುವಾಗ ಪ್ರತಿಯೊಂದು ಅಂಶವನು ನೆನಪಿಟ್ಟುಕೊಳ್ಳಲು ಸಾಧ್ಯವಾಗುವಂತೆ ಮಂಡಿಸಬೇಕಾಗುವದು. ಹಾಗೆ ಮಾಡುವುದ ಆದರ್ಶ ಶಿಕ್ಷಕನ ನಿಜವಾದ ರಹಸ್ಯ. ವಿಷಯದ ಗಂಭೀರತೆಯನ್ನೂ, ಅವ್ಯವಸ್ಥೆಯನ್ನೂ ಜಟಿಲತೆಯನ್ನೂ ಎಳೆ ಎಳೆಯಾಗಿ ಹಿಂಜಿ, ಬಳಿಕ ಅದರ ಸಾರಸರ್ವಸ್ವವನ್ನು ಕೆಲ ಸೂತ್ರಗಳ ರೂಪದಲ್ಲಿ ವಿದ್ಯಾರ್ಥಿಗಳೆದುರು ಶಿಕ್ಷಕನು ಇರಿಸಬೇಕಾಗುವದು. ಇಂ ಒಂದು ಸುಸಂಬದ್ಧ ಅಧ್ಯಾಪನ ಪದ್ಧತಿಯಿಲ್ಲದೇ ಸುಸಮರ್ಥ ಶಿಕ್ಷಣ ಸಾಗುವದ ಅಸಾಧ್ಯ. ಗೋಕಾಕ ಅವರು ಅನುಸರಿಸುವ ವಿಷಯವಿವೇಚನೆಯಲ್ಲಿ ಇಂಥ ಒಂ

ಷವಾದ ಸೂತ್ರಪೂರ್ಣತೆಯು ಅತ್ಯಂತ ಸಹಾಯಕಾರಿಯಾಗಿ ಬರುವ ಅಂಶ ವಿಶೇಷ. ಥ ಅಭಿಜಾತ, ಶಾಸ್ತ್ರೀಯ ವಿಂಗಡಣಾಪದ್ಧತಿಯಲ್ಲಿ ಅಧ್ಯಯನವನ್ನು ಮಾಡಿಸುವವ ದ, ಅಧ್ಯಾಪಕನಿಗೆ ಮಾತ್ರವಲ್ಲ, ವಿದ್ಯಾರ್ಥಿಗೂ ಕೂಡ ಎಂಥ ಜಟಿಲ ವಿಷಯವೂ ವಾಗಿ, ವ್ಯವಸ್ಥಾಪೂರ್ಣವಾಗಿ ಅರ್ಥವಾಗುವದು. ಆದರೆ ಇದಕ್ಕೆ ಮೂಲಭೂತ ಗಿ ಅವಶ್ಯವಿರುವ ಮಾತೆಂದರೆ ಅಧ್ಯಾಪಕನು ಸ್ವತಃ ತಾನು ಕಲಿಸಲಿರುವ ವಿಷಯ ನ್ನು ಚಾಚೂ ತಪ್ಪದಂತೆ ಮನನಮಾಡಿಕೊಳ್ಳಬೇಕೆಂಬುದು. ಆ ನಂತರ ಅದನ್ನು ಸರಳ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ವಿವರಿಸಬೇಕಾದದ್ದು ಮುಂದಿನ ಹೆಜ್ಜೆ. ಈ ಕ್ರಿಯೆಯಲ್ಲಿ ತ್ತಿ ಅಧ್ಯಾಪಕನಿಗೆ ನೆರವಾಗಬಲ್ಲ ಗುಣವೆಂದರೆ ಅವನ ಕಲ್ಪನಾಶೀಲತೆಯೇ. ತನ್ನ ಕ್ತಿತ್ವದ ಬೇರೆಬೇರೆ ಪ್ರೈಲುಗಳ ಸಾರವನ್ನೆಲ್ಲ ಬಳಸಿಕೊಂಡು ಆದರ್ಶ ಶಿಕ್ಷಕ ವಿಷಯ ನ್ನು ವಿವರಿಸುತ್ತಾನೆ. ಹೀಗೆ ಮಾಡಿದಲ್ಲಿ ಅದೆಂಥ ಹರ್ಷೋನ್ಮಾದ ಅಧ್ಯಯನದಲ್ಲಿ ಟಾಗುವುದೆಂಬುದು ಗೋಕಾಕ ಅವರ ಪ್ರವಚನಗಳಲ್ಲಿ ಮಾತ್ರ ಕಂಡರಿಯಬೇಕು. ರ ಈ ಆದರ್ಶ ಅಧ್ಯಾಪನ ವಿಧಾನದಿಂದ ಒಂದು ವಿಶಿಷ್ಟ ಪ್ರಭಾವಶಾಲಿಯಾದ ಅವರ ಶಿಷ್ಯರಲ್ಲೂ ಬೆಳೆದು ಬರುತ್ತದೆ. ಅದನ್ನೇ ಬಳಸಿಕೊಂಡು ಮೊದಲು ಆದರ್ಶ ದ್ಯಾರ್ಥಿಗಳಾಗುವ ಅವರ ಶಿಷ್ಯರು ನಂತರ ಅದೇ ಶಕ್ತಿಯ ಬಲದಿಂದ ಒಳ್ಳೆಯ, ರ್ಥ ಹಾಗೂ ಸಫಲ ಶಿಕ್ಷಕರಾಗಿ ಮಾರ್ಪಟ್ಟು, ನಿಜಕ್ಕೂ ಗೋಕಾಕ ಅವರು ಅಧ್ಯಾಪಕರ ಪ್ರಾಧ್ಯಾಪಕ" ಎನ್ನುವುದನ್ನು ಎತ್ತಿ ತೋರಿಸುತ್ತಾರೆ. ಅಂತೆಯೇ ೀಕಾಕ ಅವರಿಂದ ಜ್ಞಾನದಾನವನ್ನು ಪಡೆದು ಅಧ್ಯಾಪಕರಾದವರಲ್ಲಿ ಅಸಮರ್ಥ, ನು, ಅದಕ್ಷ ಶಿಕ್ಷಕರೆನ್ನಿಸುವವರೇ ವಿರಳ. ಏಕೆಂದರೆ ಗೋಕಾಕ ಅವರಿಂದ ಅವರಿಗೆ ದು ಮೌಲಿಕ ಅಧ್ಯಾಪನ ತಂತ್ರವೇ ದೊರೆತುಬಿಟ್ಟು, ತಾವೇ ಜ್ಞಾನಪಿಪಾಸೆಯನ್ನು ಗಿಸಿಕೊಳ್ಳಲಿಕ್ಕೂ, ತಮ್ಮ ಬಳಿ ಕಲಿಯಬರುವ ವಿದ್ಯಾರ್ಥಿಗಳಿಗೆ ಅದನ್ನು ಕಲಿಸುವು ಕ್ಕೂ ತುಂಬ ಸಹಾಯವಾಗುವದು. ಇಂಥ ಸಾಮರ್ಥ್ಯವನ್ನು ಶಿಷ್ಯರಿಗೆ ಒದಗಿಸಿ ಡುವುದೇ ಗೋಕಾಕ ಅವರ ಶಿಕ್ಷಕ ವ್ಯಕ್ತಿತ್ವವನ್ನು ಆದರ್ಶ ಮಾದರಿಯದನ್ನಾಗಿ ಡಿದೆ.

ಅವರ ಶೈಲಿಯೋ, ತಂತ್ರದಂತೆಯೇ ವಿಶಿಷ್ಟ ಪ್ರಕಾರದ್ದು. ಅನೇಕ ವರ್ಷಗಳಿಂದ ಜೀ ಸಾಹಿತ್ಯದ ಬೇರೆ ಬೇರೆ ಅಂಗಗಳನ್ನು ಕಲಿಸುತ್ತ ಬಂದಿರುವುದರ ಫಲವಾಗಿ, ೀಕಾಕ ಅವರಿಗೆ ಆ ವಿಷಯದ ಸೂಕ್ಷ್ಮಾತಿಶಯವೆಲ್ಲ ಮನದಟ್ಟಾಗಿದ್ದರೂ ಕೂಡ ರು ಅಂಥ ಸುಸೂತ್ರ ಸಂತೃಪ್ತಿಯಿಂದ ಎಂದಿಗೂ ವರ್ಗದಲ್ಲಿ ಕಾಲಿರಿಸುವುದಿಲ್ಲ. ತಿನಿತ್ಯ ಕಲಿಸಲಿರುವ ಬೇರೆ ಬೇರೆ ವರ್ಗಗಳ ಬೇರೆ ಬೇರೆ ವಿಷಯಗಳನ್ನು ಅವರು ತ್ತಿ ಅಮೂಲಾಗ್ರವಾಗಿ ನೋಡಿಕೊಳ್ಳುವರು. ವರುಷ-ವರುಷಕ್ಕೂ ಬದಲುತ್ತಿರುವ ದ್ಯಾರ್ಥಿ ಸಮುದಾಯದ ಗ್ರಹಣ ಶಕ್ತಿಗೆ ಅನುರೂಪವಾಗುವಂತೆ ತಮ್ಮ ಪ್ರವಚನ

ಶೈಲಿಯನ್ನವರು ನಿಶ್ಚಿತಪಡಿಸಿಕೊಳ್ಳುವರು. ದೀರ್ಘಕಾಲದ ಅಧ್ಯಾಪನಾನುಭವ
ಅದಕ್ಕೂ ಮಿಗಿಲಾದ ಪರಿಶೀಲನಾಸಾಮರ್ಥ್ಯ, ಎರಡನ್ನೂ ಬಳಸಿಕೊಂಡು ಅವರ
ಆಯಾ ವರ್ಗದ ವಿದ್ಯಾರ್ಥಿಗಳ ಬೌದ್ಧಿಕ ಸರಾಸರಿಯನ್ನು ಗ್ರಹಿಸಿಬಿಡುವರು.
ಮೇರೆಗೆ ಆಯಾ ವರ್ಗದ ಪ್ರವಚನಕ್ಕೆ ಅಗತ್ಯ ಬೀಳುವ ಶೈಲಿಯನ್ನು ಮನದಲ್ಲಿ ಕಲ್ಪಿ
ಕೊಂಡು ವರ್ಗವನ್ನು ಪ್ರವೇಶಿಸುವರು. ಗಹನ ಚಿಂತನೆಯಲ್ಲಿ ಮಗ್ನವಾಗಿ ಮೈಮರೆತಂ
ರುವ ಮುಖಮುದ್ರೆಯೊಂದಿಗೆ ಅವರು ಗಂಭೀರ ಗತಿಯಲ್ಲಿ ನಡೆದು ಬಂದು ವಿದ್ಯಾರ್ಥಿ
ಗಳೆದುರು ಬಂದು ನಿಂತರೆ ಸಾಕು, ವರ್ಗದಲ್ಲಿ ಒಂದು ವಿಶಿಷ್ಟ ವಾತಾವರಣ ನಿರ್ಮಿ
ವಾಗುವದು. ಅವರ ಆ ಆಜಾನುಬಾಹು ರೂಪ ವೇದಿಕೆಯ ಮೇಲಿಂದಲೇ ವಿದ್ಯಾರ್ಥಿ
ಗಳ ಮನಕ್ಕೆ ಒಂದು ಬಗೆಯ ವಿಶ್ವಾಸ ಸಾಂತ್ವನವನ್ನು ಕೊಡುವಂತೆ ತೋರುವದ
ಇಂತು ನಿಶ್ಶಬ್ದ ನೀರವತೆಯಿಂದ ತುಂಬಿದ ವರ್ಗದೊಳಗೆ ಗೋಕಾಕ ಅವರು ತವ
ಪ್ರವಚನವನ್ನು ಆರಂಭಿಸುವುದೇ ತಡ, ವಿದ್ಯಾರ್ಥಿಗಳ ಗಮನವೆಲ್ಲ ಅವರು ವಿವರಿಸು
ವಿಷಯದಲ್ಲಿ ಲೀನಗೊಳ್ಳುವದು. ಕಲಿಸಬೇಕಾದ ವಿಷಯದ ಕಠಿಣತೆಯಂತೂ ಇದ್ದೆ
ಇರುತ್ತದೆ. ಅದನ್ನು ಸುಲಭವಾಗಿಸಬೇಕಾದದ್ದು ಅವರ ಪ್ರವಚನದ ಒಂದು ಉದ್ದೇಶ
ಆ ನಂತರ ವಿದ್ಯಾರ್ಥಿಗಳ ಗ್ರಹಣಶಕ್ತಿಯ ಮಟ್ಟವನ್ನು ಮೇಲೆತ್ತರಕ್ಕೆ ಎಳೆದೊಯ
ಬೇಕಾದದ್ದು ಇನ್ನೊಂದು ಭಾಗ. ಆ ಮೇರೆಗೆ, ವಿಷಯವನ್ನು ಸರಳವಾಗಿಸುವುದಕ
ಗೋಕಾಕ ಅವರು ಮೊದಲು ಸರ್ವಸಾಮಾನ್ಯ ವಿದ್ಯಾರ್ಥಿಯ ಪಾತಳಿಗೆ ತಕ್ಕಂ
ವಿವರಣೆಯನ್ನು ಕೊಡುತ್ತಾರೆ; ಅದಕ್ಕಾಗಿ ತಮ್ಮ ಆರಂಭದ ಶೈಲಿಯನ್ನು ಉದ್ದೇಶಕ
ಅನುರೂಪವಾಗಿ ಬದಲಿಸುತ್ತಾರೆ; ಸುಲಭ ಹಾಗೂ ಸಾಮಾನ್ಯ ಶಬ್ದ, ಸುಲಭ ವಿವರಣ
ಸುಲಭ ಮತ್ತು ಸಹಾಯಕಾರಿಯಾದ ವಿಶ್ಲೇಷಣೆ, ಇವುಗಳಿಂದ ವಿಷಯದ ಸಾರವನ
ವಿದ್ಯಾರ್ಥಿಗಳ ಮನದ ಮೇಲೆ ಅಚ್ಚಳಿಯದಂತೆ ಮೂಡಿಸುತ್ತಾರೆ. ಆ ಬಳಿಕ ಮಾತ್
ಶೀಘ್ರವೇ ಅವರು ವಿದ್ಯಾರ್ಥಿಗಳನ್ನು ತಮ್ಮ ಎತ್ತರಿನ ಪಾತಳಿಯತ್ತ ಎಳೆಯತೊಡಗ
ವರು, ಯಾರಿಗೂ ಅರಿವಾಗದಂತೆ, ಆಯಾಸವಾಗದಂತೆ. ಶಾಂತಿನಿಕೇತನದ ಕಿರಿಮಕ್ಕ
ಪ್ರಾಥಮಿಕ ಶಾಲೆಯಲ್ಲಿ ಕೂಡ ಓರ್ವ ತರುಣ ಉತ್ಸಾಹಿ ಶಿಕ್ಷಕ ಷೇಕ್ಸ್‌ಪಿಯರ್
ನಾಟಕಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಕಲಿಸಿದ ಅದ್ಭುತ ಉದಾಹರಣೆಯನ
ರವೀಂದ್ರರು ಉಲ್ಲೇಖಿಸಿರುವರು. ಸಾಮಾನ್ಯ ಬುದ್ಧಿಶಕ್ತಿಯುಳ್ಳ ವಿದ್ಯಾರ್ಥಿಗಳ ವರ
ದಲ್ಲಿಯೂ ಗಹನ ವಿಷಯವನ್ನು ಸಫಲತೆಯಿಂದ ಕಲಿಸಿ ತೀವ್ರ ಪರಿಣಾಮವನ್ನು ಅದೆಂ
ಉಂಟುಮಾಡಲು ಸಾಧ್ಯ ಎಂಬುದರ ಜೀವಂತ ಉದಾಹರಣೆಯನ್ನು ಗುರುವರ
ಗೋಕಾಕ ಅವರ ಅಧ್ಯಾಪನ ಶೈಲಿಯಲ್ಲಿಯೂ ನಾವು ಕಾಣುತ್ತೇವೆ. ನಿಜಕ್ಕೂ ಅವ
"ವರಗುರು." ಅಂತೆಯೇ ಅವರ ವಿವರಣೆ ಸುಗಮ, ಹೃದಯಗಮ್ಯ; ಶಬ್ದಗಳು ಸರಳ
ಸಾಮಾನ್ಯ; ವಾಕ್ಯಗಳು ಸಂದರ್ಭಕ್ಕೆ ತಕ್ಕಂತೆ ವಿಕಸನ ಶೀಲ; ಅಲ್ಲಲ್ಲಿ ಮೈದಾ

ವನ್ನು ಹರುಷಗೊಳಿಸುವ ತಿಳಿಹಾಸ್ಯ; ಅಂತರಂಗವನ್ನೇ ಹುರಿದುಂಬಿಸಿ ಎಚ್ಚರಿಸುವ ಘನಗಂಭೀರ ಸ್ವರ; ಪ್ರವಚನದುದ್ದಕ್ಕೂ ನಿರಾಯಾಸವಾಗಿ, ನಿರರ್ಗಳವಾಗಿ, ಲಿತವಾಗಿ ಹೊಮ್ಮಿ ಬರುವ ವಿಭಿನ್ನ ಸಾಹಿತಿಗಳ ಉದ್ಧೃತ ವಾಕ್ಯಗಳು; ಇವೆಲ್ಲ ಈ ಹುಟ್ಟು ಅಧ್ಯಾಪಕರ ಶೈಲಿಯ ಒಟ್ಟಂದವನ್ನು ತುಂಬ ಪ್ರಭಾವಿತವಾಗಿಸುತ್ತವೆ. ಗೋಕಾಕ ಅವರ ಅಧ್ಯಾಪನ ಶಕ್ತಿ ಅವರ ಅಧ್ಯಾಪನದ ಬೇರೆ ಬೇರೆ ಕಾಲಗಳಲ್ಲಿ ಬೇರೆಯಾದ ಪ್ರಭಾವವನ್ನು ಬೀರಿದೆ. ಮೊಟ್ಟಮೊದಲ ಸಲ ಅಧ್ಯಾಪಕರಾಗಿ ಅವರು ರ್ಗ್ಯುಸನ್ ವಿದ್ಯಾಲಯವನ್ನು ಸೇರಿದಾಗ ಅವರು ಗಳಿಸಿದ್ದು ಪವಾಡದಂಥ ಸಿದ್ಧಿ; ರ ನೆನಪು ಈಗ ಒಂದು ಸುರಸ, ಸುರಮ್ಯ ದಂತಕಥೆಯಾಗಿದೆ. ಅವರ ಅತ್ಯಂತ ತಿಯವಾದ "ಪುಣ್ಯ ನಗರವು" ಆಗ ಸಮಗ್ರ ಭಾರತದಲ್ಲಿಯ ದೇಶಭಕ್ತರ, ರಾಜ ಣಿಗಳ ಕರ್ಮಭೂಮಿಯಾಗಿತ್ತು. ಜೊತೆಗೆ, ಇತಿಹಾಸವನ್ನೇ ನಿರ್ಮಿಸಿದಂಥ ತ ಮಾದರಿಯ, ಆದರ್ಶ ಶಿಕ್ಷಕರ ಧರ್ಮಭೂಮಿಯೂ ಆಗಿತ್ತು. ಅಂಥ ಪುಣೆಯಲ್ಲಿ ಕಾಕ ಅವರು ಅದೇ ತಾನೇ ಪದವೀಧರರಾಗಿ ಬಂದರು. ಆದರೆ ಅಧ್ಯಾಪಕರಾಗಿ ರು ಅಲ್ಲಿ ಸ್ಥಾಪಿಸಿದ ವಿಕ್ರಮ ಅತ್ಯದ್ಭುತವಾದದ್ದು. ಅಂದಿನ ಅವರ ನಿರರ್ಗಳ ಗ್ಮಿತೆಯನ್ನು, ಅಸ್ಖಲಿತ ಭಾಷಣವನ್ನು, ಪ್ರಖರ ಪಾಂಡಿತ್ಯವನ್ನು, ಮೋಹಕವಾದ ಸ್ಯಮಯತೆಯನ್ನು, ಒಟ್ಟಾರೆಯ ಅವರ ಅಗ್ಗಳಿಕೆಯನ್ನು ಕುರಿತು ಅನೇಕರು ಅನೇಕ ದಲ್ಲಿ ಕೊಂಡಾಡಿದ್ದಾರೆ, ಕೊಂಡಾಡುತ್ತಲಿದ್ದಾರೆ. ಕೆಲವರು ಆ ಮಧುರ ಸ್ಮೃತಿ ನ್ನು ಬರೆದಿರಿಸಿ ವೃತ್ತಪತ್ರಗಳಲ್ಲಿ ಪ್ರಸಿದ್ಧಪಡಿಸಿದ್ದೂ ಉಂಟು. ಪುಣೆಯಲ್ಲಿಯ ಅವರ ಚನಗಳನ್ನು ಕೇಳಲು ಒಂದೇ ವಿದ್ಯಾಲಯದವರಷ್ಟೇ ಅಲ್ಲ, ಅನೇಕ ವಿದ್ಯಾಲಯ ವಿದ್ಯಾರ್ಥಿಗಳು ನೆರೆಯುತ್ತಿದ್ದರು. ದೇಶದ ಮುಂದಾಳುಗಳ ದೇಶಭಕ್ತಿಪರ ಭಾಷಣ ನ್ನು ಕೇಳಲು ಕಿಕ್ಕಿರಿದು ನೆರೆಯುತ್ತಿದ್ದಂತೆ, ಅಂದಿನ ತರುಣರು ಗೋಕಾಕ ಅವರ ಹಿತ್ಯಿಕ ಪ್ರವಚನಗಳನ್ನು ಕೇಳಲು ನೆರೆಯುತ್ತಿದ್ದರು. ಫಲವಾಗಿ, ಅವರ ಪ್ರವಚನ ವಿದ್ಯಾಲಯದ ಕೊಠಡಿಯಲ್ಲಿ ಸಾಗುವುದರ ಬದಲು, ಹೊರಗಿನ ವಿಶಾಲ ಪ್ರಾಂಗಣ ಸಾಗಬೇಕಾಗುತ್ತಿತ್ತು. ತರುಣ ಪ್ರಾಧ್ಯಾಪಕ ಗೋಕಾಕ ಅವರ ಅಂದಿನ ಪ್ರವಚನ ನ್ನು ಕೇಳಿದ ಹಲವರಿಂದು ತೀರ ಹೆಮ್ಮೆ ಜಂಭದಿಂದ ಹೇಳುವುದುಂಟು — ಗೋಕಾಕ ರ ಅಂದಿನ ಅನನುಕರಣೀಯ ಶೈಲಿ ಮುಂದೆ ಅದೇ ಅನುಪಮ ರೀತಿಯಲ್ಲಿ ಮುಂದು ಯಲಿಲ್ಲ ಎಂದು. ಅಂದು ಅವರು ಸುರಿಸುತ್ತಿದ್ದ ಮಾತಿನ ಸುರಿಮಳೆಯ ರಭಸ ಂದೆ ಕಡಮೆ ಆಯಿತೆಂದು. ಈ ಮಾತು ವಾದಗ್ರಸ್ತವಿರಬಹುದಾದರೂ ಇದರಿಂದ ರಬರುವ ನಿರ್ಣಯವೆಂದರೆ ಪುಣೆಯಲ್ಲಿ ಗೋಕಾಕ ಅವರ ಅಧ್ಯಾಪನವು ನುಡಿಗೆ ಕದ ಒಂದು ಸವಿ ಅನುಭವವಾಗಿತ್ತು ಎಂಬುದು ಮಾತ್ರ. ಮುಂದೆ ಅವರು ಆಕ್ಸ್ ರ್ಗೆ ಹೋಗಿಬಂದರು; ಕೂಡಲೇ ಸಾಂಗಲಿಯ ವಿಲಿಂಗ್ಡನ್ ವಿದ್ಯಾಲಯದ

ಪ್ರಾಚಾರ್ಯರಾಗಿ ತೆರಳಿದರು. ಅಲ್ಲಿಯೂ ಅವರ ಪ್ರವಚನ ವೈಖರಿಯ ಜನಪ್ರಿಯತೆ
ಪುಣೆಯಲ್ಲಿಯಂತೆಯೇ ಬೆಳೆಯಿತು. ಕೊಲ್ಹಾಪುರದಿಂದ ಸಹ ವಿದ್ಯಾರ್ಥಿಗಳು ಬಂದು
ಅವರ ಅಧ್ಯಾಪನವನ್ನು ಕೇಳಲು ಅಲ್ಲಿ ಕಿಕ್ಕಿರಿಯುತ್ತಿದ್ದರು. ಅದರಿಂದ ಕೆಲವು ಸಲ
ವಿಲಿಂಗ್‌ಡನ್‌ನಲ್ಲಿ ಅವ್ಯವಸ್ಥೆ ಕೂಡ ಉಂಟಾಗುತ್ತಿತ್ತು. ಅಂಥ ಒಂದು ಪ್ರಸಂಗದಲ್ಲಿ
ಕೊಲ್ಹಾಪುರದ ವಿದ್ಯಾರ್ಥಿಗಳನ್ನು ಪ್ರಾಚಾರ್ಯ ಗೋಕಾಕ ಅವರು ತರಾಟೆಗೆ ತೆಗೆದು
ಕೊಳ್ಳಬೇಕಾಗಿ ಬಂತು. ಅದರ ಪರಿಣಾಮವಾಗಿ ರಾಜಾರಾಮ ವಿದ್ಯಾಲಯದ ಆಗಿನ
ಪ್ರಾಚಾರ್ಯರ ಮನದಲ್ಲಿ ಕೊಲ್ಹಾಪುರದ ವಿದ್ಯಾರ್ಥಿಗಳು ಗೋಕಾಕ ಅವರ ವಿರುದ್ಧ
ತಪ್ಪುಕಲ್ಪನೆಯನ್ನು ಹುಟ್ಟಿಸಿಯೂ ಆಯಿತು. ಆ ಘಟನೆ ಕೂಡ ಪ್ರಾಧ್ಯಾಪಕ ಗೋಕಾಕ
ಅವರ ಜನಪ್ರಿಯತೆ, ಖ್ಯಾತಿ, ಕೀರ್ತಿಯನ್ನು ಎತ್ತಿ ತೋರುತ್ತದೆ. ಆ ನಂತರ, ಅದೇ
ಬಗೆಯ ಇಂದ್ರಜಾಲವನ್ನು ಅವರು ಹಿಂದಿನ ಹೈದರಾಬಾದಿನ ವಿದ್ಯಾಲಯದಲ್ಲೂ
ಪಸರಿಸಿದರು. ಮುಂದೆ ಬಡೋದಾ ಸಂಸ್ಥಾನದ ಸೇವೆಯಲ್ಲಿ "ವೀಸನಗರಕ್ಕೆಂದು ಕೈಯ
ಬೀಸುತ ಹೊರಟ" ಗೋಕಾಕ ಅವರು ಅಲ್ಲಿಯೂ ತಮ್ಮ ವ್ಯಕ್ತಿತ್ವದ ಮಾಜದ ಹಿರಿಮೆಯ
ಗುರುತನ್ನು ಗುಜರಾತದ ತರುಣ ಪೀಳಿಗೆಯ ಮನದ ಮೇಲೆ ಇರಿಸಿದರು. ತೆರಳಿದಲ್ಲೆಲ್ಲ
ಅವರು ಮರೆಯದೇ ಮಾಡಿದ ಕೆಲಸವೆಂದರೆ, ಅಲ್ಲಿಯ ಜನರೊಂದಿಗೆ ಒಂದಾಗಿ ಬೆರೆತು
ತಮ್ಮ ಹೃದಯವನ್ನು ಅವರಿಗಿತ್ತು, ಅವರ ಹೃದಯವನ್ನು ಸೂರೆಗೊಂಡದ್ದು. ಅಂತಾಗಿ
ಅವರು ವೀಸನಗರದಿಂದ ಕೊಲ್ಹಾಪುರಕ್ಕೆ ತೆರಳುವಾಗ ಅನೇಕ ವಿದ್ಯಾರ್ಥಿಗಳು ಅಕ್ಷರಶ
ಕಂಬನಿಗರೆದದ್ದುಂಟು. ಹೀಗೆ ಗೋಕಾಕ ಅವರು ತಮ್ಮ ಶಿಷ್ಯರೊಟ್ಟಿಗೆ ಹೊಂದಿಸು
ನಂಟು ತೀರ ಅದ್ಭುತವಾದದ್ದು. ಅದರದ್ದೇ ಇನ್ನೊಂದು ಪರಿ ಕೊಲ್ಹಾಪುರದಲ್ಲಿ ಕಾ
ಸಿಕ್ಕುತ್ತದೆ. ಹಿಂದೆ ಸಾಂಗಲಿಯಲ್ಲಿದ್ದಾಗ ಅವರನ್ನು ಅಕಾರಣವಾಗಿ ತಪ್ಪು ತಿಳಿದ
ಕೊಂಡಿದ್ದ ಕೊಲ್ಹಾಪುರದ ವಿದ್ಯಾರ್ಥಿಗಳು ಅದೆಂತೋ ಪ್ರತೀಕಾರ ಬುದ್ಧಿಯಿಂ
ಪ್ರೇರಿತರಾದರು. ಅವರ ಪ್ರತೀಕಾರಭಾವ ಗೋಕಾಕ ಅವರ ಮೊದಲ ವರ್ಷದ ವಾಸ್ತವ
ದಲ್ಲಿಯೇ, ವಿದ್ಯಾಲಯದ ಸ್ನೇಹಸಮ್ಮೇಲನದ ಸಮಯದಲ್ಲಿ ವ್ಯಕ್ತವಾಯಿತು. ಸಂಸ್ಥಾ
ಗಳ ವಿಲೀನೀಕರಣದ ಹೊಸತರಲ್ಲಿಯೇ ಗೋಕಾಕ ಅವರು ಕೊಲ್ಹಾಪುರಕ್ಕೆ ಹೋಗಿದ್ದರು
ಸ್ವತಂತ್ರ ಭಾರತದ ಪರಿವರ್ತಿತ ಪರಿಸ್ಥಿತಿಗನುಸರಿಸಿ ರಾಜಾರಾಮ ವಿದ್ಯಾಲಯದ ಆಡಳಿ
ಯಲ್ಲಿ ಪ್ರಾಚಾರ್ಯರಾಗಿ ಅವರು ಸೂಕ್ತ ಬದಲಾವಣೆಗಳನ್ನೂ, ಸುಧಾರಣೆಗಳನ್ನೂ
ಮಾಡಿದರು. ಪ್ರಜಾಸತ್ತಾತ್ಮಕ ವಿಧಾನವನ್ನೂ, ಕೇಂದ್ರೀಕೃತ ಸ್ನೇಹಸಮಾರಂಭವನ್ನೂ
ಆರಂಭಿಸಿದರು. ಆ ಸಮಯದಲ್ಲಿ ವಿದ್ಯಾರ್ಥಿಗಳು ಹಲವರು ಸೇರಿ ಸ್ನೇಹಸಮ್ಮೇಲನವನ್ನು
ವಿರೋಧಿಸುವುದಾಗಿ ನಿರ್ಣಯಿಸಿದರು.ಆದರೆ ಆ ಬಗೆಗೆ ಇತರ ವಿದ್ಯಾರ್ಥಿಗಳು ಮತಭೇ
ವನ್ನು ತೋರಿಸಿ, ಕೊನೆಗೆ ಗೋಕಾಕ ಅವರನ್ನೇ ಸಮರ್ಥಿಸಿ ವಿಜಯಿಗಳಾದರು. ಸ್ನೇ
ಸಮ್ಮೇಲನ ಯಶಸ್ವಿಯಾಯಿತು. ಅದಕ್ಕೆ ಕಾರಣ, ಪ್ರಾಮುಖ್ಯವಾಗಿ ಗೋಕಾಕ ಅವ

ದರ್ಶ ಗುಣಗಳು. ಯಾವಾಗಲೂ ಅವರು "ಪ್ರಾಚಾರ್ಯ" ಹಾಗೂ "ಪ್ರಾಧ್ಯಾಪಕ"
ಗಳಲ್ಲಿರುವ ಭೇದವನ್ನೂ ಹೊಣೆಯನ್ನೂ ಸರಿಯಾಗಿ ಅರಿತವರು. ಅಂತಾಗಿ ಅಂದಿನ
ವಿಸ್ಫೋಟಕ ಸಂದರ್ಭದಲ್ಲಿ ಅವರು ಸಮತೂಕದಿಂದ, ನಿರ್ವಿಕಾರತೆಯಿಂದ, ಎಲ್ಲಕ್ಕೂ
ತ್ತ ವಿದ್ಯಾರ್ಥಿ ವಾತ್ಸಲ್ಯದಿಂದ, ವರ್ತಿಸಿದರು. ದೊಂಬಿಯನ್ನೆಬ್ಬಿಸಿದ ವಿದ್ಯಾರ್ಥಿಗಳ
ನ್ನ, ಅಂಥವರ ಮುಂದಾಳುಗಳ ವಿರುದ್ಧ, ಕ್ರಮವಾವುದನ್ನೂ ತೆಗೆದುಕೊಳ್ಳಲಿಲ್ಲ.
ಷ್ಟೇ ಏಕೆ? ಮುಂದೆ ಆ ವಿಷಯವನ್ನು ಯಾವ ಪ್ರವಚನದ ಸಮಯದಲ್ಲೂ ಉಲ್ಲೇಖಿಸ
ಲ್ಲ ಕೂಡ. ಎಲ್ಲ ವಿದ್ಯಾರ್ಥಿಗಳನ್ನು ತಮ್ಮ ವಾಡಿಕೆಯ ಪ್ರೇಮಲ ಸ್ವಭಾವದಿಂದಲೇ
ಡು ಮಾತಾಡಿದರು. ತಪ್ಪಿಸಹ ಅವರ ದೋಷದ ಬಗೆಗೆ ಮಾತೆತ್ತಲಿಲ್ಲ. ಪರಿಣಾಮ
ನಾಯ್ತು ಗೊತ್ತೆ? ದೊಂಬಿಯಲ್ಲಿ ಮುಂದಾಳಾಗಿದ್ದ ಓರ್ವ ವಿದ್ಯಾರ್ಥಿ ಹಠಾತ್ತಾಗಿ
ಾಚಾರ್ಯರ ಬಳಿ ಹೋಗಿ ಉದ್ದಂಡ ನಮಸ್ಕಾರವೆರಗಿ ಕ್ಷಮಾಪಣೆ ಬೇಡಿದ, ತಂತಾನೇ!
ನು ದೊಡ್ಡ ಪ್ರಮಾದ ಮಾಡಿದ್ದು; ಆದರೂ ಅವರು ತನ್ನ ಬಗೆಗೆ ಯಾವ ದುರ್ಭಾವನೆ
ನ್ನೂ ತೋರದಿದ್ದುದು; ಎಲ್ಲವನ್ನೂ ಹೇಳಿಕೊಂಡು, ತಾನು ಪೂರ್ತಿಯಾಗಿ
ಶ್ಚಾತ್ತಾಪಗೊಂಡದ್ದನ್ನೂ ಪರಿವರ್ತಿಸಿದ್ದನ್ನೂ ವಿವರಿಸಿ ಕಣ್ಣೀರು ಸುರಿಸಿದ! ಇದೆಲ್ಲಕ್ಕೆ
ರಣವೆಂದರೆ, ಗೋಕಾಕ ಅವರು ವಿದ್ಯಾಲಯದ ಪ್ರತಿಯೊಂದು ವಿಷಯದಲ್ಲಿ ಮೊದಲು
್ಯಾಪಕ, ಬಳಿಕ ಆಡಳಿತಗಾರರಾಗಿದ್ದದ್ದು. ಅಧ್ಯಾಪಕರಾದ ಅವರಿಗೆ ನಿಸ್ಸೀಮ
ತ್ಸಲ್ಯ ಮೈಗೂಡಿ ಬಂದಿರುವ ಸಹಜ ಶಾಶ್ವತ ಗುಣ. ಅದೇ ಮಹತಿಯೇ ಮುಂದೆ
ರನ್ನು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಕೀರ್ತಿಶಿಖರಕ್ಕೆ ಏರಿಸಿತು.
್ವತಂತ್ರ್ಯ ಪೂರ್ವದ, ಫರ್ಗ್ಯೂಸನ್ ವಿದ್ಯಾಲಯದಲ್ಲಿಯ, ಅವರ ಸಿದ್ಧಿ ಚಿರಸ್ಮರಣೀಯ
ವಂತೆ, ಸ್ವಾತಂತ್ರ್ಯದ ನಂತರ ಕರ್ನಾಟಕ ಕಾಲೇಜಿನಲ್ಲಿಯ ಅವರ ಶೈಕ್ಷಣಿಕ ಕಾರ್ಯ
ಸ್ಮರಣೀಯ. ಧಾರವಾಡಕ್ಕವರು ಪ್ರಾಚಾರ್ಯರಾಗಿ ಬಂದದ್ದು ಕೇವಲ ಮನೆನಾಡಿ
ಷ್ಟೇ ಅಲ್ಲ, ಮನೆಯೂರಿಗೂ ಹೌದು; ತಾವು ಒಮ್ಮೆ ಅಧ್ಯಯನ ಮಾಡಿದ ಸಂಸ್ಥೆಗೇನೇ.
ದಿನ ಗೋಕಾಕ ಅವರು ಫರ್ಗ್ಯೂಸನ್‌ದಲ್ಲಿಯ ತರುಣರಾಗಿರಲಿಲ್ಲ, ಪರಿಪಕ್ವ ಪ್ರೌಢ
ಗಿದ್ದರು. ಬಾಳಿನ ಗುಟ್ಟನ್ನರಿತು, ಪೂರ್ಣತೆಯ ತಿರುಳನ್ನು ತೆರೆದು ನೋಡಿ, ಬದುಕಿನ
-ಹೋಗುಗಳಿಗೆಲ್ಲ ಆಧ್ಯಾತ್ಮಿಕ ಅರ್ಥವನ್ನು ತಂದುಕೊಡಬಲ್ಲ ರಸಋಷಿಯಾಗಿದ್ದರು.
ತಾಗಿ, ಧಾರವಾಡದಲ್ಲಿ ಕೂಡ ಅವರ ಕರ್ಮಕ್ಷೇತ್ರ ಅವರ ವಾಡಿಕೆಯ ಆದರ್ಶಗಳೆಲ್ಲ
ಪರಿಪಾಕವೇ ಆಯಿತು. ಅವರಲ್ಲಿ ಸದಾ ವಾಸಿಸಿರುವ ಸಮರ್ಥ ಹಾಗೂ ಸ್ಫೂರ್ತಿ
ಯಕ ಶಿಕ್ಷಕ, ಸ್ವಾತಂತ್ರ್ಯದ ನಂತರಿನ ಕನ್ನಡ ನವತರುಣರನ್ನು ಪ್ರಭಾವಿತಗೊಳಿಸಿ
ರೇಪಿಸಿದ್ದು ಧಾರವಾಡದಲ್ಲಿಯೆ. ಹೀಗೆ ಅನೇಕ ದೃಷ್ಟಿಯಿಂದ ಅವರ ಧಾರವಾಡದ
ಲ ಕರ್ನಾಟಕ ಕಾಲೇಜಿನ ಸುವರ್ಣಯುಗ. ಧಾರವಾಡದಲ್ಲಿಯೇ ಅವರಲ್ಲಿಯ
ಯೂ, ಕಾದಂಬರಿಕಾರನೂ, ವಿಮರ್ಶಕ—ನಾಟಕಕಾರ ಎಲ್ಲರೂ ಉನ್ನತ ಮಟ್ಟದ

ಪರಿಪಕ್ವತೆಯನ್ನು ಪಡೆದದ್ದು. ಅಂತೆಯೇ ಅವರಲ್ಲಿಯ ಅಧ್ಯಾಪಕನೂ ಪರಿಪೂರ್ಣ
ಯನ್ನೂ ಸಾಫಲ್ಯವನ್ನೂ ಪಡೆದದ್ದು ಅಲ್ಲಿಯೇ. ಆ ಪೂರ್ಣತೆಯೊಂದಿಗೇನೆ ಧಾರವಾಡ
ಪುಣ್ಯ, ಕನ್ನಡನಾಡಿನ ಪುಣ್ಯ, ಗೋಕಾಕ ಅವರ ರೂಪದಲ್ಲಿ ಹೈದರಾಬಾದಿನ ಕೇಂದ್ರೀಯ
ಆಂಗ್ಲಭಾಷಾ ಸಂಸ್ಥೆಗೆ ತೆರಳಿತು, ಮತ್ತೆ ಹೊಸ ವಿಕ್ರಮವನ್ನು ಸ್ಥಾಪಿಸಲು. ಈ ಸ
ಹೈದರಾಬಾದಿನಲ್ಲಿ ಅಧ್ಯಾಪಕ ಗೋಕಾಕ ಅವರಿಗೆ ಅಪಾರ ವಿಸ್ತೀರ್ಣತೆ ದೊರೆಯಿತು
ಏಕೆಂದರೆ ಕೇಂದ್ರೀಯ ಸಂಸ್ಥೆಗೆ ಸಮಗ್ರ ಭಾರತದಿಂದ ಅಭ್ಯಾಸುಗಳು ಬಂದರು. ಆ
ಜನ ಸಾಮಾನ್ಯ ವಿದ್ಯಾರ್ಥಿಗಳಾಗಿರಲಿಲ್ಲ, ಅಧ್ಯಾಪಕ ವಿದ್ಯಾರ್ಥಿಗಳಾಗಿದ್ದರು. ತಮ್ಮ
ಆದ, ದೃಷ್ಟಿ, ಅಭಿಪ್ರಾಯ ಬೇಕು-ಬೇಡಗಳನ್ನು ಹೊತ್ತು ತಂದವರಾಗಿದ್ದರು. ಅಂಥವರಿ
ಗೋಕಾಕ ಅವರು ಆಂಗ್ಲಭಾಷಾ ಮಹತ್ವದ ಬಗೆಗಿನ ತೀರ ವಾದಗ್ರಸ್ತ, ಸ್ಫೋಟ
ವಿಷಯವನ್ನು ಬಿಂಬಿಸಿಕೊಡಬೇಕಾಗಿತ್ತು. ಕೇವಲ ಆಂಗ್ಲ ವಾಙ್ಮಯದ ತುರೀಯ
ವಸ್ಥೆಯ ನೆರವಿನಿಂದ ಕೀರ್ತಿಕಲಶಕ್ಕೇರಿದ ಅವರು, ವಾಙ್ಮಯದಿಂದ ಭಾಷೆಯ ಮಹತ್ವ
ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಬೇಕಿತ್ತು. ಅಲ್ಲದೇ ಅತ್ಯಂತ ಪ್ರಾಂಜಲ
ಯಿಂದ, ನ್ಯಾಯಬುದ್ಧಿಯಿಂದ, ಭಾಷೆ ಹಾಗೂ ವಾಙ್ಮಯಕ್ಕಿರುವ ತದನುಸಾರ ಮಹತ್
ವನ್ನು ತೋರಿಸಬೇಕಾಗಿತ್ತು. ಹೊಗಳುವವರನ್ನೂ ತೆಗಳುವವರನ್ನೂ, ತಿಳಿದವರನ್ನೂ
ತಿಳಿಯಲಾರದವರನ್ನೂ, ಅರೆತಿಳಿದವರನ್ನೂ, ಎಲ್ಲರನ್ನೂ ತಮ್ಮವರನ್ನಾಗಿಸಿಕೊಂಡ
"ಸರ್ವಂ ಖಲ್ವಿದಮ್ ಬ್ರಹ್ಮ" ಎಂದು ಸಾಗಬೇಕಾಗಿತ್ತು! ಆಗ ಕೂಡ ಗೋಕಾ
ಅವರು ತಮ್ಮ ಆದರ್ಶ ಗುಣಗಳನ್ನು ಬಹು ದಕ್ಷತೆಯಿಂದ, ವಾತ್ಸಲ್ಯದಿಂದ ಎಲ್ಲರ ಬಗೆ
ವ್ಯಕ್ತಗೊಳಿಸಿದರು. ಅಂತೆಯೇ ಅಲ್ಲಿ ಘೋರವಾಗಿದ್ದದ್ದೆಲ್ಲ ಸುಲಭವಾಯಿತು; ವಕ್ರ
ವಾಗಿದ್ದುದೆಲ್ಲ ಸರಳವಾಯಿತು; ಅವ್ಯವಸ್ಥೆಯೆಲ್ಲ ಸುವ್ಯವಸ್ಥೆಯಾಯಿತು. ಆಂಗ್ಲ ಭಾಷ
ವಿಷಯದ ಪ್ರೌಢಿಮೆಯಲ್ಲಿ ಅತಿ ಪಂಡಿತರಾದ ವಿದ್ವಾಂಸರು ಆಂಗ್ಲಭಾಷೀಯ ದೇ
ಗಳಿಂದಲೇ ಕಲಿಸಬಂದವರಿದ್ದರು ಕೇಂದ್ರೀಯ ಸಂಸ್ಥೆಯಲ್ಲಿ. ಆದರೆ ತರಬೇತಿಗೆ ಬಂ
ಉಮೇದುವಾರ—ಶಿಕ್ಷಕರೆಲ್ಲ ಅಪಾರ ಪ್ರೀತಿ ವಿಶ್ವಾಸವಿರಿಸಿದ್ದು ಪ್ರಾಧ್ಯಾಪಕ ಗೋಕಾ
ಅವರ ಮೇಲೆ ಮಾತ್ರ. ಇದಕ್ಕೆಲ್ಲ ಕಾರಣವೆಂದರೆ ಅವರ ಮೂಲಭೂತ ವಾತ್ಸಲ್ಯ; ಭಾ
ವಾಙ್ಮಯಗಳ ನೈಜ ಅನ್ಯೋನ್ಯವನ್ನು ಸಾದ್ಯಂತವಾಗಿ ತಿಳಿದುಕೊಂಡು ವಿದ್ಯಾರ್ಥಿಗಳಿ
ಅದನ್ನು ಸಮರ್ಪಕವಾಗಿ, ಮನವೊಲಿಯುವಂತೆ ವಿವರಿಸುವ ಅವರ ಅಸಾಧಾರಣ ಶಕ್ತಿ
ತೆರಳಿದಲ್ಲೆಲ್ಲ ಹೀಗೆ ಅವರು ಜನಪ್ರಿಯರಾಗಿದ್ದುದು, ಆದರಣೀಯರಾಗಿದ್ದುದು, ಅ
ಸ್ಮರಣೀಯರಾಗಿದ್ದುದು, ತಮ್ಮ ಪ್ರಾಧ್ಯಾಪಕತನದ ಅತ್ಯಮೂಲ್ಯ ಗುಣಗಳಿಂದಲ
ಅಂತೆಯೇ "ಅಧ್ಯಾಪಕ ಗೋಕಾಕ" ಇಂದು ಒಂದು ಅದ್ಭುತ ರಮ್ಯ ಹಾಗೂ ಜೀವಂ
ದಂತಕಥೆಯಾಗಿಬಿಟ್ಟಿದ್ದಾರೆ. ಅವರ ಕೀರ್ತಿಯಿಂದು ಸ್ವದೇಶದ ಮೂಲೆ ಮೂಲೆಗೆ ಹಾಗ
ವಿದೇಶದಲ್ಲಿ ಹಬ್ಬಿದುದು; ಎಲ್ಲಿ ನೋಡಿದಲ್ಲಿ ಅವರನ್ನು ಆದರಿಸಿ ಪೂಜಿಸುವವರ ಬಳ

ಯುತ್ತಿರುವುದು; ಅವರು ಬರಲಿರುವರೆಂದು ತಿಳಿದರೆ ಸಾಕು ರೈಲ್ವೆ ನಿಲ್ದಾಣ ವಿಮಾನ
ಣಗಳ ಮೇಲೆ ಅನೇಕ ಗತವಿದ್ಯಾರ್ಥಿಗಳು ಅವರಿಗಾಗಿ ಕಾಯ್ದು ನಿಲ್ಲುವುದು;
ಖ್ಯ ಭಾರತೀಯರು ಅತ್ಯಂತ ಅಭಿಮಾನದಿಂದ ಗೋಕಾಕ ಅವರ ಶಿಷ್ಯರು ತಾವೆಂದ
ಕೊಳ್ಳುವುದು; ನಾಡಿನ ಎಲ್ಲ ವಿಶ್ವವಿದ್ಯಾಲಯಗಳ ಕಕ್ಷೆಯಲ್ಲಿಯೂ ಪಸರಿಸಿ, ಅವರ
ಯಿಂದ ಸಂಪಾದಿಸಿದ ವಿದ್ಯಾಪದ್ಧತಿಯನ್ನೇ ಅವರ ಅಸಂಖ್ಯ ಶಿಷ್ಯರು ಅನುಸರಿಸಿ
ಸುತ್ತಲಿರುವುದು—ಇವೆಲ್ಲ ಸುಲಭ ಸಾಧ್ಯವಾಗಿರುವುದರ ಒಂದೇ ಗುಟ್ಟೆಂದರೆ ಈ
ರುಗುರು ಅತ್ಯಂತ ಆದರ್ಶ ಶಿಕ್ಷಕರಾಗಿರುವುದು. ಹಾಗೆಂದೇ, "ಅಧ್ಯಾಪಕ ಗೋಕಾಕ"
ುವರು ಇಷ್ಟು ರಮ್ಯ ಹಾಗೂ ಕಾವ್ಯಮಯ ವ್ಯಕ್ತಿಯಾಗಿರುವದು.

ಅಧ್ಯಾಪನದ ವ್ಯವಸಾಯದಲ್ಲಿ ಶಿಕ್ಷಕರು ಕೇವಲ ಯಾಂತ್ರಿಕವಾಗಿ, ಕಲ್ಪನಾರಹಿತ
, ನೀರಸರಾಗಿ ಕೆಲಸಮಾಡಿದರೆ ಅವರು ಅದೆಂಥ ಭಗೀರಥ ಪ್ರಯತ್ನ ಮಾಡಿದರೂ
ರಸಗಂಗೆಯ ಒಂದು ಹನಿಯೂ ಅವರ ಪ್ರವಚನದಲ್ಲಿ ಇಳಿದು ಬರಲಾರದು. ವಿಶ್ವ
ಲಯದ ಸ್ನಾತಕೀಯ ಅಭ್ಯಾಸವು ನಾಲ್ಕು ವರ್ಷಗಳಲ್ಲಿ ವಿಭಾಜಿತವಾಗಿದೆಯಷ್ಟೆ.
ಪ್ರಥಮ ವರ್ಷದಿಂದ ಚತುರ್ಥ ವರ್ಷದವರೆಗೆ ಒಂದು ನಿರ್ದಿಷ್ಟ ರೀತಿಯಲ್ಲಿ ಸಾಗ
ೆಂದು ವಿಶ್ವವಿದ್ಯಾಲಯವು ವಿಧಿಸಿರುತ್ತದೆ. ವಿದ್ಯಾರ್ಥಿಗಳು ಉಚ್ಚ ವಿದ್ಯಾಲಯಕ್ಕೆ
ೇಶಪಡೆದೊಡನೆ ಇಂಥ ಕಟ್ಟುನಿಟ್ಟಿನ ಪೇಚಾಟದಲ್ಲಿ ಸಿಕ್ಕಿಬೀಳುವರು, ಸಂಭ್ರಾಂತ
ಭ್ರಾಂತರಾಗುವರು. ಸ್ವಾತಂತ್ರ್ಯನಂತರಿನ ಶಿಕ್ಷಣದಲ್ಲಿ ಇಂಥ ದಿಗ್ಭ್ರಾಂತಿ ವರ್ಷ
ರ್ಕ್ಕೆ ಬೆಳೆಯುತ್ತಲಿದೆ. ಅವರ ಈ ಅಸಹಾಯ ಸ್ಥಿತಿಯನ್ನು ಗಮನಿಸದೆ ಅಧ್ಯಾಪಕರು
ವಾಡಿಕೆಯ ಯಾಂತ್ರಿಕ ಪದ್ಧತಿಯಲ್ಲಿಯೇ ಪ್ರವಚನಗಳನ್ನು ಕೊಡಲಾರಂಭಿ
ರೆ ಅಂಥವರಿಗೆ ತಮ್ಮ ದೈನಂದಿನ ಕರ್ತವ್ಯವನ್ನು ಮಾಡಿಮುಗಿಸಿದ ಕೀರ್ತಿ ಮಾತ್ರ
ಲ್ಲದೇ ಹೊರತು ಜ್ಞಾನವನ್ನು ಪಡೆಯ ಬಂದ ವಿದ್ಯಾರ್ಥಿಗಳಿಗೆ ಜ್ಞಾನದಾನವನ್ನು
ಡಿದ ಶ್ರೇಯ ಸರ್ವಥಾ ಬರಲಾರದು. ಹಾಗೆಂದು ವಿಶ್ವವಿದ್ಯಾಲಯದ ಶಿಕ್ಷಣ ಕ್ರಮ
ಪ್ರಥಮ ವರ್ಷದ ವಿದ್ಯಾರ್ಥಿಗಳನ್ನು ಸ್ವಲ್ಪ ಹೆಚ್ಚು ಜೋಪಾನವಾಗಿ ನೋಡಿ
ಳ್ಳಬೇಕಾಗುತ್ತದೆ. ಕಲಿಸುವವರು ಆದರ್ಶ ಶಿಕ್ಷಕರೆನ್ನಿಸಿಕೊಳ್ಳುವವರು ಈ ಪರಿಸ್ಥಿತಿ
ನ್ನು ಚನ್ನಾಗಿ ಅರಿತವರಿರುತ್ತಾರೆ. ಅಂತೆಯೇ ಸ್ಥಿತಿಗೆ ತಕ್ಕಂತೆ ತಮ್ಮ ಶಿಕ್ಷಣ
ತಿಯನ್ನು ಪರಿವರ್ತಿಸಿ ಪರಿಣಾಮಕಾರಿಯಾಗಿಸುತ್ತಾರೆ. ಗೋಕಾಕ ಅವರು ಈ
ಸ್ಯೆಯನ್ನೂ ಅದರ ಪರಿಹಾರವನ್ನೂ ಸಮಗ್ರವಾಗಿ ಅರಿತವರು. ಕೆಲ ಪಂಡಿತ
ಧ್ಯಾಪಕರಂತೆ ಅವರು ತಪ್ಪಿ ಸಹ ಪ್ರಥಮ ಹಾಗೂ ದ್ವಿತೀಯ ವರ್ಷಗಳ ಪ್ರವಚನ
ನ್ನು ಕೀಳೆಂದು ಭಾವಿಸಿ ನಿರಾಕರಿಸುವುದಿಲ್ಲ. ಪ್ರತಿಯಾಗಿ, ಈ ತಥಾಕಥಿತ "ಕೆಳ
"ಗಳಿಗೆ ಹೋಗುವುದು ಅವರ ಒಂದು ಬದಲಾಗದಂಥ ನಿಯಮವಾಗಿದೆ. ಅವರಿಗೆ
ತ್ತು—ಉಚ್ಚ ಶಿಕ್ಷಣಕ್ಕಾಗಿ ವಿದ್ಯಾಲಯವನ್ನು ಸೇರುವ ಅನೇಕ ವಿದ್ಯಾರ್ಥಿಗಳಲ್ಲಿ

ಜಿಜ್ಞಾಸೆಯ ಒಂದು ಆವೇಶವಿರುತ್ತದೆ ಎಂದು. ಯೌವನಕ್ಕೆ ಸಹಜವಾದ ಕಲ್ಪನಾಶ
ಯಿಂದ ಅವರು ಉಚ್ಚ ಶಿಕ್ಷಣದ ಬಗೆಗೆ ಒಂದು ಮಧುರ ಸ್ವಪ್ನವನ್ನು ಹೆಣೆದುಕೊಂಡ
ಅದರ ರಮ್ಯತೆಯನ್ನರಸಲೆಂದು ಉಚ್ಚ ವಿದ್ಯಾಲಯಕ್ಕೆ ಬಂದಿರುತ್ತಾರೆ. ಅಂತಾಗಿ ಅ
ಮನ ಸಾಕಷ್ಟು ನಮನಶೀಲವಾಗಿರುತ್ತದೆ. ಆ ಮನವನ್ನು ಅಧ್ಯಾಪಕನು ಸರಿಯಾ
ಸ್ಫೂರ್ತಗೊಳಿಸಬೇಕು, ಹಸನುಗೊಳಿಸಿ ಹದಮಾಡಬೇಕು. ಆಗ ಮಾತ್ರ ವಿದ್ಯಾರ್ಥಿ
ಸ್ನಾತಕಪೂರ್ವ ಶಿಕ್ಷಣದ ಅಸ್ತಿವಾರ ಭದ್ರವಾಗುತ್ತದೆ, ತಕ್ಕದಾಗುತ್ತದೆ. ಅದು ತಪ್ಪಿದ
ಉಚ್ಚ ಶಿಕ್ಷಣದ ಮೂಲ ಉದ್ದೇಶವೇ ಬುಡಮೇಲಾಗುತ್ತದೆ ಎನ್ನಲಡ್ಡಿಯಿಲ್ಲ. ಉ
ಶಿಕ್ಷಣದ ಸಫಲತೆಯಲ್ಲಿ ಅಚಲ ಶ್ರದ್ಧೆಯನ್ನಿರಿಸಿದ ಗೋಕಾಕ ಅವರಂಥ ಪ್ರಾಧ್ಯಾಪಕ
ಇಂಥ ಪ್ರಮಾದಕ್ಕೆ ಆಸ್ಪದ ಕೊಡುವುದಿಲ್ಲ. ಆದುದರಿಂದ ಅವರು ಪ್ರಥಮ—ದ್ವಿತೀ
ವರ್ಷಗಳ ಪ್ರವಚನಗಳನ್ನು ಸ್ವಸಂತೋಷದಿಂದ ಕೈಕೊಳ್ಳುವರು. ಗೋಕಾಕ ಅವ
ತಮ್ಮ ವೃತ್ತಿಯ ಬಹುಕಾಲದಲ್ಲಿ ಅಧ್ಯಾಪಕರಷ್ಟೇ ಅಲ್ಲದೆ ಪ್ರಾಚಾರ್ಯರಾಗಿ ಕ
ಕೆಲಸ ಮಾಡಿದವರು. ಹೀಗೆ ಆಡಳಿತಗಾರರಾದ ಅವರಿಗೆ ವಾರದಲ್ಲಿ ಕೆಲವೇ ಪ್ರವಚ
ಗಳನ್ನು ಮಾತ್ರ ಕೊಡಬೇಕೆಂದು ವಿಶ್ವವಿದ್ಯಾಲಯದ ನಿಯಮ. ಆದರೆ ಅಂಥ ನಿಯ
ವನ್ನೂ ಮೀರಿ ಹೆಚ್ಚು ಪ್ರವಚನಗಳನ್ನು ತೆಗೆದುಕೊಳ್ಳುವದು ಗೋಕಾಕ ಅ
ವಾಡಿಕೆಯ ಅಭ್ಯಾಸ. ಏಕೆಂದರೆ ಸ್ನಾತಕೀಯ ಹಾಗೂ ಸ್ನಾತಕೋತ್ತರ ಪ್ರವಚ
ಗಳನ್ನಂತೂ ಅವರು ತೆಗೆದುಕೊಳ್ಳಲೇಬೇಕು; ಜೊತೆಗೆ ಸ್ನಾತಕ ಪೂರ್ವದ (ಆರಂಭ
ವರ್ಗಗಳಿಗೂ ಪ್ರವಚನಗಳನ್ನು ಕೊಡಬೇಕೆಂಬುದೂ ಅವರ ಪರಿಪಾಠ. ಹೀಗಾಗಿ ಅ
ಒಟ್ಟು ಪ್ರವಚನಗಳ ಸಂಖ್ಯೆ ನಿಯಮಕ್ಕಿಂತ ಇಮ್ಮಡಿಯಾಗುವದು ವಾಡಿಕೆ! ಅಲ್ಲ
ತಮ್ಮ ಯಾವ ಪ್ರವಚನವೂ ಸಹ ವ್ಯರ್ಥವಾಗಬಾರದೆಂದು ಅವರು ಬಾರಿ ಬಾರಿಗೆ
ಯನ್ನೂ ತೆಗೆದುಕೊಳ್ಳುವವರಲ್ಲ; ತಮಗಾಗುವ ದಣಿವು—ಅನಾರೋಗ್ಯವನ್ನು ಕ
ಲೆಕ್ಕಿಸುವುದಿಲ್ಲ. ಅಷ್ಟೇ ಏಕೆ? ಕವಿ, ಸಾಹಿತಿ, ವಾಗ್ಮಿ ಎಂದು ಹೆಸರಾಗಿರುವ ಅವರನ
ಸಾರ್ವಜನಿಕ ಕಾರ್ಯಕ್ರಮಗಳಿಗೆ ಭಾಷಣಕ್ಕಾಗಿ ಕರೆದಾಗ ಸಹ ಅವರು ತಮ್ಮ ಪ್ರ
ಚನಗಳು ತಪ್ಪದಂತೆ ತಮ್ಮ ಸಾರ್ವಜನಿಕ ಕಾರ್ಯಕ್ರಮವನ್ನು ಏರ್ಪಡಿಸುವ
ವಿದ್ಯಾರ್ಥಿಗಳಿಗೆ ಪೂರ್ತಿಯಾಗಿ ನೆರವೀಯಬೇಕೆಂಬ ಇಂಥ ಬಲವಾದ ಗೀಳು ಅವರ
ಹಾಗೆಂದೇ ಅವರು ಕೆಲಸ ಮಾಡುವ ವಿದ್ಯಾಲಯದ ವಿದ್ಯಾರ್ಥಿಗಳೆಲ್ಲರ ಸಾಂಸ್ಕೃ
ಕಲ್ಯಾಣ ಸಾಧಿಸುವದು. ಈ ಸಿದ್ಧಿಗಾಗಿ ಗೋಕಾಕ ಅವರು ಮೊದಲಿನ ಎರಡು ವ
ಗಳ ವಿದ್ಯಾರ್ಥಿಗಳ ವರ್ಗಗಳಲ್ಲಿ ಹೆಚ್ಚು ಜಾಗ್ರತೆಯಿಂದ ಕಲಿಸುವರೆಂಬಂತೆ ಕಂ
ಬರುತ್ತಾರೆ. ಏಕೆಂದರೆ ಆ ವಿದ್ಯಾರ್ಥಿಗಳ ತರುಣ ಮನದ ಕಲ್ಪನೆಯ ರಮ್ಯತೆಯನ್
ಪ್ರೇರಿತಗೊಳಿಸಿ ಅವರಿಗೆ ಗೋಕಾಕ ಅವರು ವಿಶಿಷ್ಟ ರೀತಿಯಿಂದ ಕಾವ್ಯಾಭ್ಯಾ
ಮಾಡಿಸುವರು; ಕಾವ್ಯಾಭ್ಯಾಸವೊಂದೇ ಮಾತ್ರ ಉಳಿದೆಲ್ಲ ವಿಷಯಗಳಿಗಿಂತ ಹೆಚ್

ನ್ಯಾನಂದವನ್ನು ಕೊಡುವ ಬೌದ್ಧಿಕ ಚಟುವಟಿಕೆ ಎಂಬ ನಂಬುಗೆಯನ್ನು ವಿದ್ಯಾರ್ಥಿ
ಲ್ಲಿ ನಿರ್ಮಿಸುತ್ತಾರೆ. ಫಲವಾಗಿ, ವಿದ್ಯಾರ್ಥಿಗಳು ನೈಜ ಅರ್ಥದಲ್ಲಿ ಉಚ್ಚ ಶಿಕ್ಷಣವನ್ನು
ಡೆಯಲು ಬೇಕಾಗುವ ಬಲವಾದ, ಭದ್ರವಾದ ಸ್ಫೂರ್ತಿಯನ್ನು ಗೋಕಾಕ ಅವರಿಂದ
ಡೆಯುತ್ತಾರೆ. ಉಚ್ಚ ವಿದ್ಯಾಭ್ಯಾಸದಲ್ಲಿ ಇಂಥ ಸ್ಫೂರ್ತಿಯು ಅತ್ಯವಶ್ಯವಾದದ್ದೆಂಬು
ನ್ನು ನಾವು ಗಮನಿಸಲೇಬೇಕು. ಏಕೆಂದರೆ ಅದೊಂದೇ ಮಾತ್ರ ಜಿಜ್ಞಾಸು ತರುಣನ
ರಿದೀಪವಾಗಿ, ಪಾಂಥೇಯವಾಗಿ ಬರಬಲ್ಲದು; ಅವನ ಜ್ಞಾನ ಪಂಥಾನವನ್ನು
ಗಮವಾಗಿಸಬಲ್ಲದು. ಸ್ಫೂರ್ತಿ ದೊರೆತಾಗ ಮಾತ್ರ ವಿದ್ಯಾರ್ಥಿಗೆ ಭವಿಷ್ಯದಲ್ಲಿ ಶ್ರದ್ಧೆ
ಟಾಗುವದು. ಹಾಗೆಂದು, ಪ್ರಾಧ್ಯಾಪಕ ಗೋಕಾಕ ಅವರು ಸ್ನಾತಕಪೂರ್ವದ
ಗೂ ಸ್ನಾತಕೀಯ ವಿದ್ಯಾರ್ಥಿಗಳನ್ನು ಮನವಾರೆ ಸ್ಫುರಿಸುತ್ತಾರೆ, ತಮ್ಮ ವಿದ್ಯಾ
ಚಿಯ ಸಮ್ಮೋಹಕತೆಯಿಂದ. ಮೊದಲೆರಡು ವರ್ಷಗಳಲ್ಲಿ ಅವರಿತ್ತ ಈ ಸ್ಫೂರ್ತಿಯಿಂದ
ರಿತರಾಗಿ ಅನೇಕ ವಿದ್ಯಾರ್ಥಿಗಳು ಶಿಕ್ಷಣದ ಮೂರನೆಯ ವರ್ಷದಲ್ಲಿ ಆಂಗ್ಲ ವಾಙ್ಮಯ
ನ್ನು ಮುಖ್ಯ ವಿಷಯವನ್ನಾಗಿ ಆಯ್ದುಕೊಳ್ಳಲು ಮುಂದೆ ಬರುತ್ತಾರೆ. ಆಂಗ್ಲ ಸಾಹಿತ್ಯ
ನ್ನು ಹೆಚ್ಚು ಹೆಚ್ಚಾಗಿ ಅಭ್ಯಸಿಸಬೇಕೆಂಬ ತೀವ್ರ ಹಂಬಲ ಅವರಿಗೆ. ಯಾಕೆ ಎಂಬುವರ
ವು ಅವರಿಗೇನೇ ಇರುವುದಿಲ್ಲ! ಅತ್ಯಂತ ವಿಶಾಲವಾದ ಆ ಸಾಹಿತ್ಯವನ್ನು ಅಭ್ಯಸಿಸುವ
ಮರ್ಥ್ಯವಾಗಲೀ, ತಂತ್ರ ವಿಧಾನಗಳಾಗಲೀ, ಪೂರ್ವ ಸಿದ್ಧತೆಯಾಗಲೀ ತಮ್ಮ ಬಳಿ
ಟೋ ಇಲ್ಲವೋ ಎಂಬುದನ್ನು ಈ ಉತ್ಸಾಹಿಗಳು ಗಮನಿಸರು. ಮೊದಲೆರಡು
ರ್ಷಗಳಲ್ಲಿ ಪಡೆದ ಸ್ಫೂರ್ತಿಯಿಂದ ಅವರು ಮಂತ್ರಮುಗ್ಧರಾಗಿರುತ್ತಾರೆ. ಗರ ಹೊಡೆ
ದರಂತೆ ಆಗಿರುತ್ತಾರೆ! ಅವರು ಪಡೆದಿರುವ ಆ ಬೌದ್ಧಿಕ ಆಧ್ಯಾತ್ಮಿಕ ಸ್ಫೂರ್ತಿ ಅಷ್ಟು
ಕ್ಷಣವಾದದ್ದು. ಇಂಥವರನ್ನು ಸಹ ಒಂದಿನಿತೂ ಹೀಯಾಳಿಸದೇ ಗೋಕಾಕ ಅವರು
ಮ್ಮ ಆಂಗ್ಲ ಸಾಹಿತ್ಯದ ಕಕ್ಷೆಗೆ ಬರಮಾಡಿಕೊಳ್ಳುತ್ತಾರೆ. ಮೊದಲು ಪರೋಕ್ಷವಾಗಿಯೂ
ಕ ನೇರವಾಗಿಯೂ ಆ ವಿದ್ಯಾರ್ಥಿಗಳಿಗೆ ತಮ್ಮ ಹಿರಿದಾದ ಹೊಣೆಯನ್ನು ತಿಳಿಸು
ರೆ; ಶ್ರಮಪಟ್ಟು ಅಭ್ಯಸಿಸಬೇಕಾದ ಅಗತ್ಯವನ್ನು ಗಮನಕ್ಕೆ ತರುತ್ತಾರೆ. ಆದರೆ
ದ್ಯಾರ್ಥಿಗಳ ಅತ್ಯಾತುರ ಇಚ್ಛೆಯನ್ನು ಮಾತ್ರ ಭಂಗಗೊಳಿಸುವುದಿಲ್ಲ. ಹೀಗೆ ಬರ
ಮಾಡಿಕೊಂಡ ನಂತರ ವಿದ್ಯಾರ್ಥಿಗಳಿಗೆ ಅವರು ತೀರ ದಕ್ಷತೆಯಿಂದ, ಪರಿಶ್ರಮದಿಂದ
ಭ್ಯಾಸಪದ್ಧತಿಯನ್ನೂ ತಮ್ಮವೇ ಆದ ತಂತ್ರ—ವಿಧಾನಗಳನ್ನೂ ಕಲಿಸತೊಡಗುತ್ತಾರೆ;
ತ್ತಲೆಯಲ್ಲಿ ಕೂಡ ಹಾದಿಯನ್ನರಸುವ ಬಗೆ ಎಂತಹದೆಂಬುದರ ಪರಿಯನ್ನು ಎಳೆ ಎಳೆ
ಯಾಗಿ ತಿಳಿಸುತ್ತಾರೆ. ಸ್ಫೂರ್ತಗೊಳಿಸುವ ಕ್ರಿಯೆಯಂತೂ ಇದೆಲ್ಲದರೊಡನೆ ಸಾಗಿಯೇ
ರುತ್ತದೆ. ವಾಙ್ಮಯದ ವಿಶೇಷಾಭ್ಯಾಸಕ್ಕಾಗಿ ಓದಬೇಕಾದ ಪುಸ್ತಕಗಳ ಹೆಸರುಗಳನ್ನು
ಸಿ ಯಾವ ಪುಸ್ತಕದ ಯಾವ ಭಾಗದಲ್ಲಿ ಏನಿದೆಯೆಂಬುದನ್ನು ಸಹ ಗಮನಕ್ಕೆ ತರು
ರೆ. ಅಂಥ ಪುಸ್ತಕಗಳನ್ನು ಕೆಲ ಸಲ ತಾವೇ ಗ್ರಂಥಾಲಯದಿಂದ ತೆಗೆದುಕೊಡುವುದೂ

ಉಂಟು. ವಿಶೇಷಾಧ್ಯಯನದ ಮಟ್ಟದಲ್ಲಿಯ ಆಗಿನ ಅವರ ಪ್ರವಚನಗಳೆಂದರೆ ಎಷ
ಮನೋರಂಜಕವೋ, ಬೆರಗುಬಡಿಸುವಂಥವೋ, ವಿದ್ವತ್ಪೂರ್ಣವೋ, ಅಷ್ಟೇ ಉ
ಯುಕ್ತವಾದಂಥವು. ಸ್ನಾತಕೀಯ ಮಟ್ಟದಲ್ಲಿ ವಾಡಿಕೆಯ ಅಧ್ಯಾಪಕರು ಹೆಚ್ಚಾ
ಟಿಪ್ಪಣಿಗಳನ್ನು ಮಾತ್ರ ಬರೆಯಿಸುವುದೇ ಹೆಚ್ಚು. ಆದರೆ ಗೋಕಾಕ ಅವರು ಹಾಗಲ್ಲ
ಅವರ ಅಧ್ಯಾಪನೆಯಿರುವುದು ಜ್ಞಾನೋದ್ದೀಪನಕ್ಕಾಗಿ ; ಕೇವಲ ಟಿಪ್ಪಣಿಗಳ ರುಕ್ಷ
ಶುಷ್ಕತೆಗೆ ಅಲ್ಲಿ ಪ್ರವೇಶವಿಲ್ಲ. ಹಾಗೆಂದು, ಅವರ ನೇತೃತ್ವದಲ್ಲಿ ಅಧ್ಯಯನ ಮಾಡು
ದೆಂದರೆ ಜ್ಞಾನಸರಸ್ವತಿಯ ಸಮಗ್ರ ಭಾಂಡಾರವನ್ನೇ ಸೂರೆಗೊಂಡು ಸವಿದಂತೆ. ಅ
ರಿಂದಲೂ ಟಿಪ್ಪಣಿಗಳು ದೊರೆಯುವುದುಂಟು (ಅವರ ಟಿಪ್ಪಣಿಗಳೆಂದರೆ ತುಂಬ ಅಸ
ಧಾರಣವಾದವು !). ಆದರೆ ಅವರಿಂದ ಮುಖ್ಯವಾಗಿ ದೊರೆಯುವುದು ವಿಶ್ಲೇಷಣಾಪೂಣ
ವಾದ, ಉದಾಹರಣೆ ಹಾಗೂ ಉದ್ಧೃತವಾಕ್ಯಗಳಿಂದ ಕೂಡಿದ, ಹೇರಳವಾದ, ಧಾರಾ
ವಾದ ವಿವರಣೆ; ಚಿಕ್ಕ ಮಗುವೂ ಅರ್ಥಮಾಡಿಕೊಂಡು ಆನಂದಿಸುವಂಥ ವಿವರಣ
ಕಲಿಸಬಂದ ವಿಷಯದ ಗಹನತೆಯ ವಿಶ್ಲೇಷಣೆ ಹಾಗೂ ಸಮಸ್ಯಾಪರಿಹಾರ ; ವಿಷಯ
ವಿವಿಧ ಮುಖಗಳು, ಗುಣದೋಷಗಳು ; ಅದರ ಬಗೆಗೆ ಆದಿ—ಬುನಾದಿಯಿಂದ ಇಂದಿ
ವರೆಗೆ ವಿಮರ್ಶಕರು ತಳೆದ ಅಭಿಪ್ರಾಯಗಳು, ಹೇಳಿದ ಮಾತುಗಳು ; ಅವೆಲ್ಲವುಗ
ಗುಣದೋಷ ; ಹೀಗೆ ಆಮೂಲಾಗ್ರವಾಗಿ ಎಲ್ಲವನ್ನೂ ಗೋಕಾಕ ಅವರು ತಿಳಿಸತೊ
ಗುವರು. ಪರಿಣಾಮವಾಗಿ, ವಿಶೇಷಾಧ್ಯಯನದ ಅವರ ಸ್ನಾತಕೀಯ ಕಕ್ಷೆಯೆಂದ
ಒಂದು ರಮ್ಯಕತೆಯನ್ನು ಮನವಾರೆ, ಪೂರ್ಣ ಪದ್ಧತಿಯಿಂದ ಕೇಳಿ ಆನಂದಿಸಲೆಂದ
ಮೀಸಲಾಗಿರಿಸಿದಂಥ ಅವಧಿಯೋ ಎಂದು ವಿದ್ಯಾರ್ಥಿಗಳಿಗೆ ತೋರುವುದು. ಸ್ನಾತಕೀಯ
ಸಿದ್ಧತೆಯನ್ನು ಈ ರೀತಿ ಮಾಡಿಸುವ ಈ ಗುರುಗಳು, ಸ್ನಾತಕೋತ್ತರದ ತಮ್ಮ ಶಿಕ್ಷ
ಪದ್ಧತಿಯನ್ನು ಮತ್ತೆ ಅದರ ಗಾಂಭೀರ್ಯಕ್ಕೆ, ಅವಶ್ಯಕತೆಗೆ ಅನುಗುಣವಾಗಿ ಮುಂ
ವರೆಯಿಸುತ್ತಾರೆ. ಮತ್ತೆ, ಅವರ ಆಗಿನ ಅಧ್ಯಾಪನ ಶಕ್ತಿಯ ಪರಿಯೇ ಬೇರೆ. ಸೊಬ
ಬೇರೆ. ಸ್ನಾತಕಪೂರ್ವ, ಸ್ನಾತಕೀಯ, ಸ್ನಾತಕೋತ್ತರ ಕಾಲದಲ್ಲಿ ಮಾಡಿಸು
ಅಭ್ಯಾಸದ ವಿಷಯವೇನೋ ಒಂದೇ ಒಂದು. ಆದರೆ ಅದರ ಹಂತ, ಆಳ, ಅಗಲ, ಎತ್ತ
ಗಳು, ಒಂದು ಮಟ್ಟದಿಂದ ಇನ್ನೊಂದಕ್ಕೆ ಅದೆಂತು ಸುವ್ಯವಸ್ಥಿತವಾಗಿ ಬೆಳೆಯುವ
ಬೆಳೆಯಬೇಕು ಎಂಬುದರ ನಿಚ್ಚಳ ಅರಿವುಂಟಾಗಬೇಕಾದರೆ ಗೋಕಾಕ ಅವರ ಪೂ
ಅಧ್ಯಾಪನ ಪದ್ಧತಿಯನ್ನು ಅವಲೋಕಿಸಬೇಕು. ಈ ಎಲ್ಲ ಅವಸ್ಥೆಗಳಲ್ಲೂ ಅವರು ವೈ
ಕ್ತಿಕ ಚರ್ಚೆ, ಪರಿಸಂವಾದ, ಸೆಮಿನಾರ್ಸ್, ಟ್ಯುಟೋರಿಯಲ್ಸ್—ಈ ಎಲ್ಲ ಪದ್ಧತಿಗ
ಪೂರ್ತಿ ಉಪಯೋಗವನ್ನು ಮಾಡುವರು. ಇವೂ ಸಹ ಅವರ ಪ್ರವಚನಗಳಂತೆಯೆ
ತುಂಬ ಮನೋರಂಜಕವೂ ಉಪಯುಕ್ತವೂ ಆಗುವುವು. ಈ ಎಲ್ಲ ವಿಶಿಷ್ಟ ವಾತಾವರ
ದಿಂದಾಗಿ, ಅವರಡಿಯ ಹುಡಿಯಲ್ಲಿ ಒರಗಿ, ಸುತ್ತಮುತ್ತ ಚೆಲ್ಲುವರಿಯುವ, ಮೇಲಿನಿಂ

ಯುವ ಆನಂದ-ಜ್ಞಾನ-ಸೌಂದರ್ಯದ, ಅಪರಿಮಿತ ತೃಪ್ತಿಯ ಆಣಿಮುತ್ತುಗಳನ್ನು ಹುಸುಳೆಯಂತೆ ಆಯ್ದುಕೊಂಡು ಆಡುವುದೆಂದರೆ ವಿವರಿಸಲಾಗದ ದಿವ್ಯಾನುಭವ! ರ ಸೊಬಗೇ ಸೊಬಗು; ಸೊಗಸೇ ಸೊಗಸು; ಧನ್ಯತೆಯೇ ಧನ್ಯತೆ!

ಅಧ್ಯಾಪಕ ಗೋಕಾಕ ಅವರ ವೈವಿಧ್ಯದ ಇನ್ನೂ ಒಂದು ಭಾಗವೆಂದರೆ ಆಂಗ್ಲ ಷ್ಯಯದ ಬೇರೆ ಬೇರೆ ಪ್ರಕಾರಗಳನ್ನು ಕಲಿಸುವ ಪದ್ಧತಿ. ಕೆಲ ಪ್ರಾಧ್ಯಾಪಕರು ಒಂದು ವಾ ಕೆಲವೇ ಸಾಹಿತ್ಯರೂಪಗಳನ್ನು ಮಾತ್ರ ಅಸಾಧಾರಣ ಶೈಲಿಯಲ್ಲಿ ಕಲಿಸಬಲ್ಲರು. ವೇ ವಿಭಾಗಗಳಲ್ಲಿ ಆಸಕ್ತಿಯನ್ನು ಕೇಂದ್ರೀಕರಿಸುವಲ್ಲಿ ಅವರಿಗೆ ಎಣೆಯಿಲ್ಲದಷ್ಟು ಂವ. ಆದರೆ ಯಾವುದೇ ವಿಷಯವನ್ನು ಕಲಿಸಲಿ, ಯಾವುದೇ ಸಾಹಿತ್ಯಪ್ರಕಾರ ನ್ನು ಕಲಿಸಲಿ, ಎಲ್ಲದರಲ್ಲಿಯೂ ಒಂದೇ ಬಗೆಯ ಸುಭಗತೆಯನ್ನು ತೋರಿ, ಒಂದೇ ದ ಆನಂದವನ್ನುಂಟುಮಾಡುವವರು ವಿರಳ. ಗೋಕಾಕ ಅವರು ಈ ವಿರಳ ವರ್ಗಕ್ಕೆ ದವರು. ಕಲಿಸಬೇಕಾದ ವಿಷಯ ಗದ್ಯವಿರಲಿ, ಪದ್ಯವಿರಲಿ; ಕಾವ್ಯವಿರಲಿ, ನಾಟಕ ಲಿ; ಭಾವಕಾವ್ಯವಿರಲಿ, ಮಹಾಕಾವ್ಯವಿರಲಿ; ಕಾದಂಬರಿಯಿರಲಿ, ಲಘುಕಥೆಯಿರಲಿ; ಖಾಂತನಾಟಕವಿರಲಿ, ದುಃಖಾಂತವಿರಲಿ; ನಿಬಂಧವಿರಲಿ, ಲಲಿತ ಸಾಹಿತ್ಯವಿರಲಿ; ಲಾವಿಮರ್ಶೆಯನ್ನು ಕಲಿಸಬೇಕಾಗಿದ್ದರಂತೂ ಮುಗಿದೇ ಹೋಯ್ತು!)—ಏನೆಲ್ಲ ಯಗಳನ್ನೂ ಒಂದೇ ಬಗೆಯ ಅನನುಕರಣೀಯ ಶೈಲಿಯಲ್ಲಿ ವಿವರಿಸಲು ಸಮರ್ಥ ದ ಹಿರಿಮೆ ಗೋಕಾಕ ಅವರದು. ಹೀಗೆ ಸಾಹಿತ್ಯದ ಭಿನ್ನರೂಪಗಳ ಮೇಲಿರುವಂತೆ ನ್ನ ಸಂಪ್ರದಾಯಗಳ ಮೇಲೂ ಅವರದು ಅದೇ ಪ್ರಭುತ್ವ. ಅಭಿಜಾತವಿರಲಿ, ಆವಿದ್ಧ ಲಿ; ಸುಕುಮಾರವಿರಲಿ, ಪರಂಪರಾಗತವಿರಲಿ; ಪುರಾತನವಿರಲಿ, ಆಧುನಿಕವಿರಲಿ; ದ್ಧಿ ಪ್ರಧಾನವಿರಲಿ, ಭಾವಪ್ರಧಾನವಿರಲಿ; ಕಲ್ಪಕತೆಯ ವೈಖರಿಯಿಂದ ಕೂಡಿದ್ದಿರಲಿ, ರ್ಶನದ ಗಹನತೆಯಿಂದ ತುಂಬಿರಲಿ; ಸವ್ಯಸಾಚಿಯಾಗಿ ಎರಡೂ ಬಗೆಯ ಸಾಫಲ್ಯ ನ್ನು ಸಾಧಿಸುವುದೇ ಈ ಅಧ್ಯಾಪಕರ ಗುಣವಿಶೇಷ. ಅವರ ವ್ಯಕ್ತಿತ್ವದ ಅಷ್ಟಪೈಲುಗಳ ಲ್ಲ ಪ್ರತ್ಯಕ್ಷ ಅನುಭವಿಸಿಯೇ ಅರಿಯಬೇಕು. ಅರಿತಾಗಿನ ಆನಂದದಿಂದ ಅರಿಯುವ ಬಲ ಇನ್ನೂ ಹೆಚ್ಚುತ್ತದೆ. ಅವರಿಂದ ಕಲಿತದ್ದನ್ನೇ ಮರಳಿ ಕಲಿಯಬೇಕೆನ್ನಿಸುತ್ತದೆ; ತ್ರಿ ಎಳೆಯರಾಗಲು, ಅವರ ವಿದ್ಯಾರ್ಥಿಯಾಗಲು ಹಂಬಲಿಸುವಂತಾಗುತ್ತದೆ. ಶಿಷ್ಯರ ಥ ಹಂಬಲವೇ ಗೋಕಾಕ ಅವರ ಅಧ್ಯಾಪನಕಲೆಯ ಅಳತೆಗೋಲು. ಒಟ್ಟಾರೆ, ಧ್ಯಾಪಕ ಗೋಕಾಕ ಅವರ ವ್ಯಕ್ತಿತ್ವವೆಂದರೆ ಪ್ರಖರಸ್ಫೂರ್ತಿಯ ಸೆಲೆ; ಅವಿಸ್ಮರಣೀಯ ನುಭವದ ಕೇಂದ್ರ; ಮರೆಯಲೆತ್ನಿಸಿದರೂ ಮರೆಯಲಾಗದ ಆನಂದದ ಸಾಗರ.

ಆಡಳಿತಗಾರ

ಪಿ. ಮಲ್ಲಿಕಾರ್ಜುನಪ್ಪ

ನನ್ನ ನಾಡಿನ ಸೇವೆಗೆನ್ನನುಳಿಸೆಂದೊರೆಯೆ
"ಹೋಗು, ಕನ್ನಡ ನಾಡ ಸೇವಿಸೆಂ"ದೆ.
ನನ್ನನೇ ನಂಬಿರುವ ನನ್ನಿಗರ ಕಾಂಬೆನೆನೆ
"ಹೋಗು, ಬಾಳವರೊಡನೆ, ಧಾವಿಸೆಂ"ದೆ!

ಚೆಲುವಕನ್ನಡನಾಡಿಗೊಂದು ಮಲ್ಲಿಗೆಹೂವ
ತರಲೆಂದು ತೆರಳಿದ್ದ ತರಳ ನಾನು.
ನಿನ್ನ ವರದಾನಕ್ಕೆ ಸರಿಯಾವುದೈ ದೊರೆಯೆ?
ಜೀವಸುಮವನೆ ನಿನಗೆ ಸಲ್ಲಿಸುವೆನು.

('ಸಮುದ್ರ ಗೀತಗಳು', ಪು. ೧೦೮.)

೧

ಶ್ರೀ ಗೋಕಾಕರದು ಬಹುಮುಖ ಪ್ರತಿಭೆಯುಳ್ಳ ವ್ಯಕ್ತಿತ್ವ; ಅದರಲ್ಲಿ ಎರಡು ಮು
ಗಳು ಮಾತ್ರ ಜಗತ್ತಿಗೆ ಸುಪರಿಚಿತ. ಸಾಹಿತಿಯಾಗಿ ಅವರ ಯಶಸ್ಸಿನ ರಹಸ್ಯವೇನ
ಅದರ ಆಳವೆಷ್ಟು? ಎಂಬುದರ ವೌಲ್ಯ ವಿವೇಚನೆ ಕನ್ನಡನಾಡಿನ ಸಹೃದಯರ ವಿವೆ
ನೆಗೆ ಹಾಗೂ ವಿದ್ವಾಂಸರಿಗೆ ಬಿಟ್ಟ ವಿಷಯ. ಈ ಲೇಖನದ ವ್ಯಾಪ್ತಿಗೆ ಅಥವಾ ಲೇಖ
ಶಕ್ತಿಗೆ ಅಳವಡುವ ವಿಷಯ ಅದಲ್ಲ. ಆದರೆ, ಆಡಳಿತಗಾರರಾಗಿ ಶ್ರೀ ಗೋಕಾ
ಯಶಸ್ಸಿನ ರಹಸ್ಯವನ್ನು ಮತ್ತು ಅವರ ಸನಿಹದ ವ್ಯಕ್ತಿಯಾಗಿ ಪಡೆದ ಅನುಭವಗಳ
ಹಂಚಿಕೊಳ್ಳಲು ಇಲ್ಲಿ ನಾನು ಯತ್ನಿಸಿದ್ದೇನೆ.

ಬದುಕಿನ ಯಾವುದೇ ರಂಗದಲ್ಲಿ ಯಶಸ್ಸು ಕೆಲವರಿಗೆ ಪ್ರತಿಭೆಯಿಂದ ಮತ್ತೆ ಕೆಲವ
ಅದೃಷ್ಟದಿಂದ ದೊರಕುತ್ತದೆ, ಎಂಬುದು ಸಾಮಾನ್ಯವಾದ ಒಂದು ತಿಳುವಳಿಕೆ.
ಗೋಕಾಕರ ಜೀವನವನ್ನು ವಿದ್ಯಾರ್ಥಿದೆಸೆಯಿಂದ ಉಪಕುಲಪತಿ ಸ್ಥಾನದವರೆಗೆ ಪರಿಶಿ
ಸಿದರೆ ಅವರಿಗೆ ಬದುಕಿನಲ್ಲಿ ದೊರೆತಿರುವ ಬಹುಪಾಲು ಯಶಸ್ಸು ಅವರ ಪ್ರತಿಭೆಯಿ
ಮಾತ್ರ ಎಂಬುದು ಸ್ಪಷ್ಟಪಡುತ್ತದೆ. ಪ್ರತಿಭೆ ಇದ್ದೂ ಅದೃಷ್ಟದ ಬಲವಿಲ್ಲದಿದ್ದ ಎಷ್ಟೆ
ಜನ, ಅನಾಮಧೇಯರಾಗಿ ಹೇಳಹೆಸರಿಲ್ಲದೆ ಮುಚ್ಚಿ ಹೋಗಿರುವ ನಿದರ್ಶನಗಳ

ಾನಿಸಿದಾಗ ಶ್ರೀ ಗೋಕಾಕರ ಬದುಕಿನುದ್ದಕ್ಕೂ ಅವರ ಪ್ರತಿಭೆಗೆ ತಕ್ಕ ಪುರಸ್ಕಾರ
ರೆಯುವಲ್ಲಿ ಶ್ರೀಗುರುವಿನ ಕೃಪಾಹಸ್ತ ಅದೃಷ್ಟದ ರೂಪದಲ್ಲಿ ಸದಾ ರಕ್ಷೆಯಾಗಿರು
ದು ಗೋಚರಿಸುತ್ತದೆ.

೨

ಶ್ರೀ ಗೋಕಾಕರು ಸುಸಂಸ್ಕೃತ ದೈವಭಕ್ತ ಕುಟುಂಬವೊಂದರಲ್ಲಿ ಹುಟ್ಟಿ—ಬಾಲ್ಯ,
ದ್ಯಾರ್ಥಿದೆಸೆಯಲ್ಲಿ ಪ್ರತಿ ಹಂತಗಳಲ್ಲೂ ವಿರಳವಾದ ಬುದ್ಧಿಮತ್ತೆ ಹಾಗೂ ಜಾಣ್ಮೆ
ನ್ನು ಪ್ರದರ್ಶಿಸಿದವರು. ಅವರು ಬಿ. ಎ. ಪರೀಕ್ಷೆಗೆ ಕಟ್ಟಿದ್ದಾಗ ಇಂಗ್ಲಿಷ್ ಭಾಷೆಯಲ್ಲಿ
ಥಮ ಸ್ಥಾನ ಪಡೆದು ಮುಂಬೈ ವಿಶ್ವವಿದ್ಯಾಲಯದ ಅತ್ಯಂತ ಗಣ್ಯ ಪಾರಿತೋಷಕ
ಸಿದ 'ಎಲ್ಲಿಸ್ ಬಹುಮಾನ'ವನ್ನು ಪಡೆದರು; ಹಾಗೂ ಎಂ. ಎ. ಪದವಿಯಲ್ಲೂ
ಗ್ಲಿಷ್ ವಿಭಾಗಕ್ಕೆ ಪ್ರಪ್ರಥಮರಾಗಿ ತೇರ್ಗಡೆ ಹೊಂದಿದರು. ಆಗಿನ ಕಾಲದಲ್ಲಿ
ತ್ತರ ಕರ್ನಾಟಕವು ಶೈಕ್ಷಣಿಕ ರಂಗದಲ್ಲಿ ಎಷ್ಟು ಹಿಂದುಳಿದಿತ್ತೆಂಬುದರ ಹಿನ್ನೆಲೆಯಲ್ಲಿ
ಸಂಗತಿಯನ್ನು ಪರಿಶೀಲಿಸಬೇಕು. ಗೋಕಾಕರಂಥ ಪ್ರತಿಭಾವಂತ ವಿದ್ಯಾರ್ಥಿ ತಮ್ಮ
ಗಕ್ಕೆ ಸೇರಿದವರೆಂಬುದನ್ನು ನಂಬಲಾರದಷ್ಟು ಸೋಜಿಗದ ಸಂಗತಿಯಾಗಿ ಅಂದು
ಸುದ್ದಿ ಪರಿಣಮಿಸಿದ್ದಿರಬೇಕು. ಇದರ ಪರಿಣಾಮವಾಗಿ ಗೋಕಾಕರ ಪ್ರಖ್ಯಾತಿ ಹರಡಿ
ಣೆಯ ಫರ್ಗ್ಯುಸನ್ ಕಾಲೇಜಿ[1]ನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ನೇಮಕ ಹೊಂದಿ
. ಪ್ರೊ. ಗೋಕಾಕ್ ಅವರು ಪುಣೆಗೆ ತಮ್ಮ ಪ್ರಾಧ್ಯಾಪಕ ಜೀವನವನ್ನು ಆರಂಭಿಸಲು
ದ ಕಾಲದಲ್ಲಿ ನಡೆದ ಒಂದು ಘಟನೆ ಅವರ ಪ್ರಖರವಾದ ವ್ಯಕ್ತಿತ್ವದ ಮೇಲೆ ಬೆಳಕು
ುತ್ತದೆ. ಪುಣೆಯ ಮತ್ತೊಂದು ಕಾಲೇಜಿನಲ್ಲಿದ್ದ ಇಂಗ್ಲಿಷ್ ಪ್ರಾಧ್ಯಾಪಕರೊಬ್ಬರು
ವಿದ್ಯಾರ್ಥಿಗಳಿಗೆ ತುಂಬಾ ಆಕರ್ಷಕ ವ್ಯಕ್ತಿಯಾಗಿ ಪರಿಣಮಿಸಿದ್ದರು. ವಾಸ್ತವವಾಗಿ
ರು ತಮ್ಮ ಉಪನ್ಯಾಸಗಳನ್ನು ನಾಟಕ ಶಾಲೆಯ ಸಭಾಂಗಣವೊಂದರಲ್ಲಿ ನಡೆಸು
ದ್ದರು; ಆದರೂ ಜನದಟ್ಟಣೆ ಮಾತ್ರ ತಡೆಯಲು ಅಸಾಧ್ಯವೆನಿಸುತ್ತಿತ್ತು. ಅದೇ
ಟ್ಟದ ರಂಜನೀಯ ಆಕರ್ಷಣೆಯನ್ನು ಒದಗಿಸಲಾರದಿದ್ದ ಫರ್ಗ್ಯುಸನ್ ಕಾಲೇಜಿನ
ಳಿತ ವರ್ಗದವರಿಗೆ ಇದೊಂದು ತಲೆನೋವಿನ ಸಮಸ್ಯೆಯಾಗಿತ್ತು. ಪ್ರೊ. ಗೋಕಾಕರು
ತ್ತಮ ವಾಗ್ಮಿಗಳೆಂದು ಆಗಲೇ ಖ್ಯಾತಿ ಹೊಂದಿದ್ದರಿಂದ ಅವರ ಉಪನ್ಯಾಸಗಳನ್ನೂ
ರ್ವಜನಿಕ ಸಭಾಂಗಣದಲ್ಲೇ ನಡೆಸಲು ನಿಶ್ಚಯಿಸಿದರು. ಶ್ರೀ ಗೋಕಾಕರ ಉಪನ್ಯಾಸ
ಜನಮನಸ್ಸನ್ನು ಸೂರೆಗೊಂಡು ಮಂತ್ರಮುಗ್ಧರನ್ನಾಗಿಸಿದವು. ಕ್ರಮೇಣ

[1] ಆಧುನಿಕ ಭಾರತದ ಮಹಾಪುರುಷರ ಸಾಲಿನಲ್ಲಿ ಸೇರಬಹುದಾದ ತಿಲಕ್, ಗೋಖಲೆ ಮತ್ತು
ಂಜಪೆಯವರಂಥವರು ಕಟ್ಟಿ ಬೆಳೆಸಿದ ಸಂಸ್ಥೆ ಪುಣೆಯ ಫರ್ಗ್ಯುಸನ್ ಕಾಲೇಜು. ಭಾರತದ
ನೇ ಪ್ರಸಿದ್ಧ ಪ್ರಥಮ ದರ್ಜೆ ವಿದ್ಯಾಸಂಸ್ಥೆಗಳಲ್ಲಿ ಮುನ್ನಣೆಯ ಸ್ಥಾನ ಈ ಸಂಸ್ಥೆಗಿದೆ.

ಹಿಂದಿನ ನಾಟಕ ಶಾಲೆಯ ಉಪನ್ಯಾಸಮಂದಿರ ಬರಿದಾಯಿತು. ಈ ಬಗೆಯ ಯಶಸ್ಸು
ಅವರ ಆತ್ಮವಿಶ್ವಾಸ ಮತ್ತು ಧೈರ್ಯವನ್ನು ದೃಢಪಡಿಸಿತು. ಕರ್ನಾಟಕದ ತರುಣನೊಬ್ಬ
ನಿಗೆ ಮಹಾರಾಷ್ಟ್ರದ ಪುಣೆಯಲ್ಲಿ ಅಂದು ದೊರೆತ ವಿಜಯ ಇಂದಿಗೂ ಹೆಮ್ಮೆಯಿಂದ
ಸ್ಮರಿಸಲು ಯೋಗ್ಯವಾದುದು.

ಪುಣೆಯಲ್ಲಿ ಕೆಲವು ಕಾಲ ಪ್ರಾಧ್ಯಾಪಕರಾಗಿದ್ದ ಬಳಿಕ, ಉನ್ನತ ವ್ಯಾಸಂಗದ ಸಲ
ವಾಗಿ ಇಂಗ್ಲೆಂಡಿಗೆ ತೆರಳಿದರು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ
ಸಾಹಿತ್ಯದ ಎಂ. ಎ. ಪದವಿಗೆ ಅಭ್ಯಸಿಸಿ ಅಲ್ಲಿಯೂ ಪ್ರಪ್ರಥಮರಾಗಿ ಉತ್ತೀರ್ಣರಾದರು
ಇದೇ ಕಾಲದಲ್ಲಿ 'ಸಮುದ್ರದಾಚೆಯಿಂದ' ಎಂಬ ಅವರ ದಿನಚರಿ ಪ್ರಕಟವಾಯಿತು
ಕನ್ನಡಿಗರಿಗೆ ಆಗಲೇ ತಮ್ಮ ಸಾಹಿತ್ಯದ ಮೂಲಕ ಸುಪರಿಚಿತರಾಗಿಬಿಟ್ಟಿದ್ದರು ; ಒಂದ
ರೀತಿಯ 'ಗೋಕಾಕ್ ಪಂಥ' ಕ್ರಮೇಣ ತಲೆಯೆತ್ತುತ್ತಿತ್ತು. ಆಕ್ಸ್‌ಫರ್ಡಿನಲ್ಲಿ ಪ್ರಥಮ
ನಾಗಿ ಪರಿಗಣಿಸಲ್ಪಟ್ಟಿದ್ದ ಈ ತರುಣನನ್ನು ಕಾಣುವುದಕ್ಕೆ ಮತ್ತು ಆತನ ಮಾತುಗಳನ್ನು
ಕೇಳುವುದಕ್ಕೆ ಜನ ತವಕಿಸುತ್ತಿದ್ದರು. ಶ್ರೀ ಗೋಕಾಕರೂ ಸಹ ಜನಗಳ ಅಭಿಲಾಷೆಗನು
ಗುಣವಾಗಿ ನಾಡಿನಲ್ಲೆಲ್ಲಾ ಹರಿದಾಡಿ ತಮ್ಮ ತೀಕ್ಷ್ಣವಾದ ವಿದ್ವತ್ತು ಹಾಗೂ ಸಾಹಿತ್ಯಿ
ಜ್ಞಾನವನ್ನು ಉಪನ್ಯಾಸಗಳ ಮೂಲಕ ಹಂಚಿಕೊಟ್ಟರು. ಜನರಾದರೋ ತಮ್ಮ ಪ್ರೀತಾ
ದರಗಳಿಂದ ಅವರನ್ನು ಮುಚ್ಚಿಬಿಟ್ಟರು. ತಾಜ್‌ಮಹಲಿನಂತೆ, ಗೋಲಗುಮ್ಮಟದಂತೆ–
ಅವರೊಬ್ಬ ಕೌತುಕಪೂರ್ಣ ವ್ಯಕ್ತಿಯಾದರು. ಅದು 'ಗೋಕಾಕ್ ಪರಂಪರೆ'ಯ
ಆರಂಭಕ್ಕೆ ನಾಂದಿಯಾಯಿತು.

ಈ ಅಂಶವನ್ನು ವಿಸ್ತರಿಸಿದ್ದುದರ ಉದ್ದೇಶವಿಷ್ಟೇ : ನನ್ನ ಅಭಿಪ್ರಾಯದಲ್ಲಿ ಶ್ರೀಪ
ಆಡಳಿತಗಾರರಾಗಿ ಶ್ರೀ ಗೋಕಾಕ್ ಹೆಸರು ಪಡೆದಿರುವುದಕ್ಕೆ ಇರುವ ಅನೇಕ ಕಾರಣಗಳ
ಅವರ ಹೆಸರಿನ ಸುತ್ತ ಹಬ್ಬಿರುವ 'ಪ್ರಭಾವಲಯ'ವೂ ಒಂದು ಪ್ರಮುಖ ಕಾರಣ. ಕಾ
ವನ್ನೂ ಮಿಂಚಿ ಅವರ ಕೀರ್ತಿ ಯಾವಾಗಲೂ ಹಬ್ಬುತ್ತಿದೆಯಾದ ಕಾರಣ ಎಲ್ಲಿಗೆ ಅವರ
ಹೋದರೂ ಅಲ್ಲಿ ಆಗಲೇ ಒಂದು ಆರಾಧಕರ ತಂಡ ಸುತ್ತುವರಿಯುತ್ತದೆ ; ಜನ ಅವರನ್ನು
ಗೌರವಿಸುತ್ತಾರೆ ; ಅದಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಾರೆ.

೩

ಆಕ್ಸ್‌ಫರ್ಡಿನಿಂದ ಹಿಂದಿರುಗಿದ ಬಳಿಕ ಕೆಲವು ಕಾಲದ ಮೇಲೆ ಸಾಂಗ್ಲಿ ವಿಲಿಂಗ್ಡನ
ಕಾಲೇಜಿನ ಉಪ ಪ್ರಿನ್ಸಿಪಾಲರಾಗಿ, ಮುಂದೆ ಸ್ವಲ್ಪ ದಿನಗಳಲ್ಲಿ ಪ್ರಿನ್ಸಿಪಾಲರಾಗಿ ಅಧಿಕಾ
ವಹಿಸಿಕೊಂಡರು.[2] 'ಡೆಕ್ಕನ್ ಎಜುಕೇಶನ್ ಸೊಸೈಟಿ'ಯವರು ನಡೆಸುತ್ತಿದ್ದ ಸಂಸ

[2] ವಾಸ್ತವವಾಗಿ ಶ್ರೀ ಗೋಕಾಕರ ಆಡಳಿತಗಾರ ಜೀವನ ಇಲ್ಲಿಂದ ಅಂದರೆ ೧೯೩೮ರಿಂದ ಆರಂ
ವಾಗುತ್ತದೆ. ಅಂದಿನಿಂದ ಇಂದಿನವರೆಗೆ ಅನೇಕ ಕಾಲೇಜುಗಳ ಪ್ರಿನ್ಸಿಪಾಲರಾಗಿ, ಪ್ರಾಧ್ಯಾಪಕರಾಗಿ

ವಕ್ಕೆ ಕನ್ನಡಿಗರೊಬ್ಬರು ಮುಖ್ಯಾಧಿಕಾರಿಯಾದದ್ದು ಅಂದಿನ ಕಾಲಕ್ಕೆ ವಿಶೇಷ ಘಟನೆಯೇ ಆಗಿತ್ತು. ಸಾಂಗ್ಲಿಯಲ್ಲಿ ತಮ್ಮ ಉಪನ್ಯಾಸಗಳಿಂದ ಹಾಗೂ ಕಾಲೇಜನ್ನು ತ ದಕ್ಷತೆಯಿಂದ ಸುಧಾರಿಸುವ ವಿಚಕ್ಷಣತೆಯಿಂದ ತುಂಬಾ ಒಳ್ಳೆಯ ಹೆಸರನ್ನು ಸಾಧಿಸಿದರು. ಆಡಳಿತ ವರ್ಗದವರೊಂದಿಗೆ ಉಂಟಾದ ವಿರಸವೊಂದರಿಂದಾಗಿ ಮುಂದೆ ವು ದಿವಸಗಳಲ್ಲೇ ಅವರು ಪ್ರಿನ್ಸಿಪಾಲ್ ಹುದ್ದೆಗೆ ರಾಜಿನಾಮೆಯಿತ್ತರು. ಇದು ಅವರ ನದಲ್ಲಿ ಘಟಿಸಿದ ಒಂದು ಪ್ರಮುಖವಾದ ಸಂದಿಗ್ಧ ಪರಿಸ್ಥಿತಿ. ಸುಮಾರು ಆರು ಗಳ ಕಾಲ ನಿರುದ್ಯೋಗಿಯಾಗಿ ಪರಿತಪಿಸಿದರೂ ಸಹ ತಮ್ಮ ಹಠವನ್ನು ಅವರು ಟ್ಟುಕೊಡಲಿಲ್ಲ. 'ಡೆಕ್ಕನ್ ಎಜುಕೇಶನ್ ಸೊಸೈಟಿ'ಯ ಪ್ರಮುಖ ಸದಸ್ಯರಾಗಿದ್ದ ದ್ಧ ಗಣಿತ ಶಾಸ್ತ್ರಜ್ಞ ಡಾ. ಮಹಾಜನ್ ಹಾಗೂ ಮುಂದೆ ರಿಸರ್ವ್ ಬ್ಯಾಂಕಿನ ಟಿ ಗೌರ್ನರ್ ಆದ ಡಾ. ಕರ್ವೆಯವರು ಸೇರಿ ಶ್ರೀ ಗೋಕಾಕರ ಮನವೊಲಿಸಲು ಪ್ರಯತ್ನ ವಿಫಲವಾಯಿತು. ಈ ಪ್ರಸಂಗ ಶ್ರೀ ಗೋಕಾಕರ ನಿರ್ಭಯ ಪ್ರವೃತ್ತಿ ಗೂ ಆತ್ಮಪ್ರತ್ಯಯಕ್ಕೆ ಉದಾಹರಣೆಯಾಗಿದೆ.[3] ಉತ್ತಮ ಆಡಳಿತಗಾರನಾದವನು ಗೆ ಸರಿ ಎನಿಸಿದ ಸುಧಾರಣೆಗಳನ್ನು ಜಾರಿಗೆ ತರುವಲ್ಲಿ ಎಂಥವರನ್ನಾದರೂ ಎದುರಿ ಸಿದ್ಧನಾಗಬೇಕಾಗುತ್ತದೆ. ಒಮ್ಮೊಮ್ಮೆ ವಿರೋಧ ಬಲವಾಗಿದ್ದರೆ ಅಧಿಕಾರ ತ್ಯಾಗ ಡಬಹುದೇ ಹೊರತು ತನ್ನ ಅಭಿಪ್ರಾಯ ಬಿಟ್ಟುಕೊಡುವುದಿಲ್ಲ. ಆದರೆ ಅದಕ್ಕೆ ತಕ್ಕ ತಿಕ ಧೈರ್ಯ' ಪ್ರೊ. ಗೋಕಾಕ್‌ರಂಥವರಿಗೆ ಮಾತ್ರ ಇರುತ್ತದೆ.

ಮುಂದೆ ಕೆಲವೇ ದಿನಗಳಲ್ಲಿ ಹೈದ್ರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯವು ರನ್ನು ಇಂಗ್ಲಿಷ್ ಪ್ರಾಧ್ಯಾಪಕರನ್ನಾಗಿ ನೇಮಿಸಿತು. ಆದರೆ ಅಲ್ಲಿ ಬಹಳ ಕಾಲ ನಿಲ್ಲದೆ ಜರಾತ್ ಪ್ರಾಂತದ ವೀಸನಗರದಲ್ಲಿ ಆರಂಭವಾದ ಹೊಸ ಕಾಲೇಜೊಂದರ ಪ್ರಿನ್ಸಿ ಲರಾಗಿ ಅಧಿಕಾರ ವಹಿಸಿಕೊಂಡರು. ವೀಸನಗರದಲ್ಲಿ ಅವರಿಗೆ ವಹಿಸಿದ್ದ ಜವಾಬ್ದಾರಿ

ಕ್ಷರರಾಗಿ ಮತ್ತು ವಿಶ್ವವಿದ್ಯಾಲಯದ ಉಪಕುಲಪತಿಯಾಗಿ ಆಡಳಿತವನ್ನು ನಿರ್ವಹಿಸುತ್ತಿದ್ದಾರೆ. ಮಾರು ಮುವ್ವತ್ತು ವರ್ಷಗಳ ಈ ಅವಧಿಯಲ್ಲಿ ಅವರ ಆಡಳಿತದ ಸೇವಾವ್ಯಾಪ್ತಿ ಮಹಾರಾಷ್ಟ್ರ, ರಾತ್, ಆಂಧ್ರ ಹಾಗೂ ಕರ್ನಾಟಕ— ಹೀಗೆ ಭಾರತದ ನಾಲ್ಕು ಪ್ರಾಂತಗಳನ್ನು ಆವರಿಸಿದೆ; ರ ಜೊತೆಗೆ ಅನೇಕ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಶೈಕ್ಷಣಿಕ ಮತ್ತು ಸಾಹಿತ್ಯಿಕ ತಿಗಳ ಸದಸ್ಯರಾಗಿ ಮತ್ತು ಸಂಚಾಲಕರಾಗಿ ಕೆಲಸ ಮಾಡುತ್ತಲಿದ್ದಾರೆ.

[3] ಅವರ ನಿರ್ಭಯ ಪ್ರವೃತ್ತಿಗೆ ಇತ್ತೀಚೆಗೆ ನಡೆದ ಒಂದು ಘಟನೆಯನ್ನು ಉದಾಹರಿಸಬಹುದು: ದೀ ವಿರೋಧಿ ಚಳುವಳಿ ಹಿಂಸಾತ್ಮಕ ಸ್ವರೂಪ ತಳೆದ ಮೇಲೆ ಬೆಂಗಳೂರು ವಿಶ್ವವಿದ್ಯಾಲಯದ ರಣವನ್ನು ಪೋಲಿಸರು ಅನಿವಾರ್ಯವಾಗಿ ಪ್ರವೇಶಿಸಬೇಕಾಯಿತು. ಸನ್ನಿವೇಶ ಎಷ್ಟೇ ಪ್ರಚೋದಕ ದ್ದರೂ ವಿದ್ಯಾಕ್ಷೇತ್ರದ ಆವರಣ ಪೋಲಿಸರ ಪ್ರವೇಶದಿಂದ ಅಪವಿತ್ರವಾಯಿತೆಂದು ಶ್ರೀ ಕಾಕರಿಗೆ ಅನ್ನಿಸಿ—ಪ್ರಮುಖ ಕಾಲೇಜೊಂದರ ಪ್ರಿನ್ಸಿಪಾಲರನ್ನು ಥಳಿಸಿದ್ದನ್ನೂ ಸೇರಿಸಿ ದು—ಪೋಲಿಸರನ್ನು ಉಗ್ರವಾಗಿ ಖಂಡಿಸಿದರು; ಆಗ ಅದು ಸ್ವಲ್ಪ ಮಟ್ಟಿನ ಕೋಲಾಹಲಕ್ಕೂ ಕೊಟ್ಟಿತು.

ಯನ್ನು ಅತ್ಯಂತ ದಕ್ಷತೆಯಿಂದ ನಿರ್ವಹಿಸಿದ ಮೇಲೆ ಆ ಕಾಲೇಜನ್ನು ಸರ್ಕಾರವೇ ವಹಿಸಿ ಕೊಂಡಿತು. ಪ್ರೊ. ಗೋಕಾಕ್ ಅಲ್ಲಿಂದ ಕೊಲ್ಲಾಪುರದ ರಾಜಾರಾಮ್ ಕಾಲೇಜಿಗೆ ವರ್ಗಾಯಿಸಲ್ಪಟ್ಟರು. ಅಂತರ ರಾಜ್ಯ ಸಂಬಂಧಗಳು ಅಷ್ಟೇನೂ ಹಿತದಾಯಕವಾಗಿರ ದಿದ್ದ ವಿಷಮ ಕಾಲದಲ್ಲಿ (೧೯೫೧) ಅವರು ಪ್ರಿನ್ಸಿಪಾಲರಾಗಿ ಅಲ್ಲಿ ಅಧಿಕಾರ ನಿರ್ವಹಿ ಸುವ ಅನಿವಾರ್ಯತೆ ಒದಗಿತಾದರೂ ಅವರ ಕರ್ತೃತ್ವ ಶಕ್ತಿ, ಉದಾರತೆ ಹಾಗೂ ಆಕರ್ಷಕ ವ್ಯಕ್ತಿತ್ವ ಕೊಲ್ಲಾಪುರದ ಜನತೆಯ ಹೃನ್ಮನಗಳನ್ನು ಸೂರೆಗೊಂಡಿತು. ಮುಂದೆ ಒಂದು ವರ್ಷದೊಳಗಾಗಿ ಅವರು ಕರ್ನಾಟಕದ ಪ್ರಮುಖ ವಿದ್ಯಾಸಂಸ್ಥೆಗಳಲ್ಲಿ ಒಂದಾದ ಧಾರ ವಾಡದ ಕರ್ನಾಟಕ ಕಾಲೇಜಿಗೆ ಪ್ರಿನ್ಸಿಪಾಲರಾದರು.[4] ಸುಮಾರು ಐದು ವರ್ಷಗಳ ಕಾಲ ಅಲ್ಲಿ ಅವರು ಅಧಿಕಾರ ನಿರ್ವಹಿಸಿದ ಕಾಲದಲ್ಲಿ ಬಹುಶಃ ಹಿಂದಿನ ಯಾವ ಪ್ರಿನ್ಸಿಪಾಲ ರಿಗೂ ದೊರಕದಿದ್ದ ಪ್ರೀತ್ಯಾದರಗಳು ಧಾರವಾಡದ ವಿದ್ಯಾರ್ಥಿಗಳು ಮತ್ತು ಪ್ರೋಫೆ ರಿಂದ ಅವರಿಗೆ ದೊರಕಿದವು. ಆ ಕಾಲದಲ್ಲಿ ಅವರು ಮಾಡಿದ ಅನೇಕ ಆಂತರಿಕ ಸುಧಾರಣೆಗಳ ಜೊತೆಗೆ ಕೇಂದ್ರ ಯೋಜನಾ ಆಯೋಗದ ಶಿಫಾರಸಿನಂತೆ ನಡೆ 'ಸಮಾಜಸೇವಾಶಿಬಿರ'ವು ಗೋಕಾಕರ ನೇತೃತ್ವದಲ್ಲಿ ಕೈಗೊಂಡ ರಸ್ತೆ ನಿರ್ಮಾಣ ಕಾರ್ ಉಲ್ಲೇಖನೀಯ. ಇದರಿಂದಾಗಿ ಕರ್ನಾಟಕ ಕಾಲೇಜ್ ಮತ್ತು ಕರ್ನಾಟಕ ವಿಶ್ವವಿದ್ಯಾ ಲಯಗಳ ದೂರದ ಅಂತರ ಕಡಿಮೆಯಾಯಿತು. ಕರ್ನಾಟಕ ಕಾಲೇಜಿನ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳೊಡನೆ ಸ್ವತಃ ಶ್ರೀ ಗೋಕಾಕರೇ ಸನಿಕೆ ಪಿಕಾಸಿ ಹಿಡಿದು ನಿರ್ಮಿಸಿ ಆ ರಸ್ತೆ ಮುಂದೆ 'ಗೋಕಾಕ್ ರಸ್ತೆ' ಎಂದೇ ಹೆಸರಾಯಿತು.[5] ಇದು ಆಡಳಿತಗಾರರಾ ಶ್ರೀ ಗೋಕಾಕ್ ಯಶಸ್ಸಿಗೆ ಮತ್ತೊಂದು ಪ್ರಮುಖ ಕಾರಣ. ಯಾವ ಯೋಜನೆಗಳು ಅವರ ಪಾಲಿಗೆ ಕೇವಲ ಕಾಗದ ಪತ್ರದ ಯೋಜನೆಗಳಾಗದೆ ಕಾರ್ಯಗತವಾಗುತ್ತಿ ಇದೇ ಕೇಂದ್ರ ಯೋಜನಾ ಆಯೋಗದ 'ಸೇವಾಶಿಬಿರ' ಕೇವಲ ವೈಭವ, ಅಟ್ಟಹಾ ಹಾಗೂ ಪ್ರದರ್ಶನಕ್ಕೆ ಒಂದು ಅವಕಾಶವಾಗಿ ಬೇರೆಯವರಿಗೆ ಪರಿಣಮಿಸುತ್ತಿತ್ತು. ಆದ ಶ್ರೀ ಗೋಕಾಕರ ಪಾಲಿಗೆ ಅದೊಂದು ಪವಿತ್ರ ಕರ್ತವ್ಯವಾಗಿ ಕಂಡು ಬಂದಿತು.

ಕರ್ನಾಟಕ ಕಾಲೇಜಿನ ಪ್ರಿನ್ಸಿಪಾಲ್ ಪದವಿಯನ್ನು ಐದು ವರ್ಷ ನಿರ್ವಹಿಸಿ ಮೇಲೆ ೧೯೫೭ರಲ್ಲಿ ಹೈದ್ರಾಬಾದಿಗೆ ಹಿಂದಿರುಗಿದರು. ಅಲ್ಲಿನ 'ಕೇಂದ್ರೀಯ ಇಂಗ್ಲಿಷ ಅಧ್ಯಯನ ಸಂಸ್ಥೆ'ಯ ಡೈರೆಕ್ಟರರಾಗಿ ನೇಮಕ ಹೊಂದಿ, ಬೆಂಗಳೂರು ವಿಶ್ವವಿದ್ಯಾ

[4] ಕರ್ನಾಟಕ ಕಾಲೇಜಿಗೆ ಪ್ರಿನ್ಸಿಪಾಲರಾದ ಅದೇ ಕಾಲೇಜಿನ ವಿದ್ಯಾರ್ಥಿಗಳಲ್ಲಿ ಶ್ರೀ ಗೋಕಾಕರ ಮೊದಲಿಗರು. ಅಲ್ಲದೆ, ಅಚ್ಚ ಕನ್ನಡಿಗರೊಬ್ಬರು ಆ ಕಾಲೇಜಿಗೆ ಪ್ರಿನ್ಸಿಪಾಲರಾದದ್ದೂ ಅ ಪ್ರಥಮವಾಗಿ.

[5] ಮೊನ್ನೆ ತಾನೆ ತಮ್ಮ ಉಪಕುಲಪತಿಸ್ಥಾನದ ಪರೀಷಹವನ್ನು ಒಂದು ದಿನದ ಮುಟ್ಟ ನಿವಾರಿಸಿಕೊಂಡು ವಿದ್ಯಾರ್ಥಿಗಳೊಡನೆ ಹತ್ತಿರದ 'ಸಕಲವಾರ' ಎಂಬಲ್ಲಿಗೆ ಹೋಗಿ ಮಹಾಜೋ ಸಂಘದವರೊಂದಿಗೆ ಅಲ್ಲಿನ ರಸ್ತೆ ನಿರ್ಮಾಣ ಕಾರ್ಯದಲ್ಲಿ ಭಾಗವಹಿಸಿದ್ದರು.

ುದ ಉಪಕುಲಪತಿಗಳಾಗುವವರೆಗೆ ಸುಮಾರು ಹತ್ತು ವರ್ಷಗಳ ಕಾಲ ಅವರ ನಿರ್ದೇ
ನ ಹೊಣೆ ಹೊತ್ತರು. ಆ ಕಾಲದಲ್ಲಿ ಹೈದ್ರಾಬಾದಿನಲ್ಲಿದ್ದ 'ಸಾಹಿತ್ಯ ಮಂದಿರ'ಕ್ಕೆ
ಕ್ಷರಾಗುವುದರ ಮೂಲಕ ಅಲ್ಲಿನ ಅನೇಕ ಸಾಹಿತ್ಯಿಕ ಸಂಬಂಧಿ ಚಟುವಟಿಕೆ
ಗೆ ಸ್ಫೂರ್ತಿಯ ಕೇಂದ್ರವಾಗಿ ಪರಿಣಮಿಸಿದರು; ಹೈದಾರಾಬಾದಿನಲ್ಲಿದ್ದ ಕನ್ನಡಿಗರು
ತ್ತು ತೆಲುಗರ ನಡುವೆ ಮಧುರವಾದ ಸಂಪರ್ಕ ಕಲ್ಪಿಸುವಲ್ಲಿ ತುಂಬಾ ಶ್ರಮಿಸಿದರು.
ರ ಸತತ ಪರಿಶ್ರಮ ಹಾಗೂ ದುಡಿಮೆಗಳ ಫಲವಾಗಿ 'ಕೇಂದ್ರೀಯ ಇಂಗ್ಲಿಷ್
್ಯಯನ ಸಂಸ್ಥೆ' ಭಾರತದ ಅತ್ಯುತ್ತಮ ಅಧ್ಯಯನ ಸಂಸ್ಥೆಗಳಲ್ಲಿ ಒಂದಾಯಿತು.

್ರೀ ಗೋಕಾಕರು ೧೯೬೬ನೇ ಸೆಪ್ಟೆಂಬರ್ ತಿಂಗಳಲ್ಲಿ 'ಬೆಂಗಳೂರು ವಿಶ್ವ
್ಯಾಲಯದ ಅಂಗರಚನೆ'ಗೆ ಅನುಗುಣವಾಗಿ ಆರಿಸಲ್ಪಟ್ಟ ಪ್ರಥಮ ಉಪ
ಪತಿಗಳಾಗಿ ಅಧಿಕಾರ ವಹಿಸಿಕೊಂಡರು. ಕೇವಲ ಎರಡು ವರ್ಷಗಳ ಅವಧಿ
ಲ್ಲಿ ಅವರು ಸಾಧಿಸಿರುವ ಪ್ರಗತಿ ಅಚ್ಚರಿಯನ್ನುಂಟುಮಾಡುವಂತಿದೆ. ವಿಶ್ವ
್ಯಾಲಯದ ಅಧಿಕಾರ ವಹಿಸಿಕೊಂಡ ಕೂಡಲೆ ಪ್ರೊ. ಗೋಕಾಕರು 'ವಿಶ್ವವಿದ್ಯಾಲಯ
್ಯಾರ್ಥಿ ಸಂಘ'ವನ್ನು ಸ್ಥಾಪಿಸಿದರು. ಚುನಾಯಿತ ವಿದ್ಯಾರ್ಥಿ ಪ್ರತಿನಿಧಿಗಳೇ ತಮ್ಮ
ಪಾಠಿಗಳ ಸಮಸ್ಯೆಗಳನ್ನು ಮತ್ತು ಕಷ್ಟ ಸುಖಗಳನ್ನು ವಿಶ್ವವಿದ್ಯಾಲಯದ ನೆರವಿ
ಡನೆ ಕೆಲಮಟ್ಟಿಗೆ ಬಗೆಹರಿಸಿಕೊಳ್ಳಲು ಅನುಕೂಲವನ್ನು ಕಲ್ಪಿಸಿಕೊಡುವುದೇ ಈ
ಸದ ಉದ್ದೇಶ. ವಿದ್ಯಾರ್ಥಿಗಳ ಯಾವುದೇ ನಿಯೋಗಕ್ಕೆ ಉಪಕುಲಪತಿಗಳ ನಿವಾಸ
ದ 'ಕಾರ್ಲ್‌ಟನ್ ಭವನ'ದ ಬಾಗಿಲು ಸದಾ ತೆರೆದಿರುತ್ತದೆ. ವಿದ್ಯಾರ್ಥಿಗಳ ಕುಂದು
ರತೆಗಳನ್ನು ಗಮನಿಸುವಾಗ ನೇರವಾಗಿ ತಾನೇ ಅವರ ಸ್ಥಾನದಲ್ಲಿ ನಿಂತು ಪರಿಶೀಲಿ
್ರಮ ಅವರ ಪರಿಪಾಠ. ಯಾವುದಾದರೂ ವಿದ್ಯಾರ್ಥಿ ಚಳುವಳಿ ಅಥವಾ ಸಮಸ್ಯೆಯ
ದಿರುವ ಕಾರಣಗಳನ್ನು ಮತ್ತು ವಿಶ್ವವಿದ್ಯಾಲಯ ಅದಕ್ಕೆ ಸಂಬಂಧಿಸಿದಂತೆ ತೆಗೆದು
ಳ್ಳುವ ತೀರ್ಮಾನಗಳ ಪರಿಣಾಮವನ್ನು ಶ್ರೀ ಗೋಕಾಕರು ತಮ್ಮದೇ ಆದ ವಿಶಿಷ್ಟ
ಯಲ್ಲಿ ವಿಶ್ಲೇಷಿಸುತ್ತಾರೆ; ಎಲ್ಲ ಅಂಶಗಳನ್ನೂ ಗಮನಕ್ಕೆ ತೆಗೆದುಕೊಂಡ ಬಳಿಕ
ದು ದೃಢವಾದ ನಿಲುವಿಗೆ ಬರುತ್ತಾರೆ. ಇತ್ತೀಚೆಗೆ ಬೆಂಗಳೂರು ವಿಶ್ವವಿದ್ಯಾಲಯದ
ವು ವರ್ಗದ ವಿದ್ಯಾರ್ಥಿಗಳು ಇನ್ನಿತರ ವಿಶ್ವವಿದ್ಯಾಲಯಗಳ ಉದಾಹರಣೆಯನ್ನು
ುದಿಟ್ಟು ಪರೀಕ್ಷೆಗೆ ಸಂಬಂಧಿಸಿದಂತೆ ಕೆಲವು ಸವಲತ್ತುಗಳನ್ನು ಪಡೆಯಬಯಸಿದಾಗ,
ಗೋಕಾಕರು ತುಂಬಾ ಆಲೋಚಿಸಿ ಸಮಯೋಚಿತರಾಗಿ ದೂರದರ್ಶಿತ್ವದಿಂದ ಆ
ಸ್ಯೆಯನ್ನು ಬಿಡಿಸಿದರು.

ಪರಂಪರಾಗತವಾದ ಕಾನೂನು ಹಾಗೂ ನಿಯಮಗಳಿಗೆ ಬದ್ಧರಾಗದೆ ಸಮಸ್ಯೆಯನ್ನು
ಲಂಕಷವಾಗಿ ವಿಶ್ಲೇಷಿಸಿ 'ಅಕೆಡೆಮಿಕ್ ಕೌನ್ಸಿಲ್'ನಲ್ಲಿ ಅವರು ಮಾಡಿದ ಭಾಷಣ
ದು ಸ್ಮರಣಾರ್ಹ ಘಟನೆ. 'ಪರೀಕ್ಷೆಗಳ ನೀತಿ ಮತ್ತು ಉದ್ದೇಶ' ಎಂದು ಬಳಿಕ ಪ್ರಸಿದ್ಧ

ವಾದ ಅವರ ಭಾಷಣವನ್ನು ಕೇಳಿದ ಸಭೆ ಈ ಸಂಬಂಧದಲ್ಲಿ ಯಾವುದೇ ಕ್ರಮ ತೆಗೆದು ಕೊಳ್ಳಲು ಅವರಿಗೆ ಪೂರ್ಣ ಅಧಿಕಾರವನ್ನು ವಹಿಸಿಕೊಟ್ಟಿತು. ತಮ್ಮ ಕಾಲೇಜ್ ಜೀವನದ ಅವಧಿಯಲ್ಲಿ ಇದ್ದ ವಿದ್ಯಾರ್ಥಿಗಳ ವಿಚಾರಲಹರಿಗೂ ಇಂದಿನವರಿಗೂ ಇರುವ ವ್ಯತ್ಯಾಸ ವನ್ನು ಕುರಿತು ಅವರು ಹೀಗೆ ಹೇಳಿದರು :

> "ನಮ್ಮ ಕಾಲದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಕಾನೂನುಗಳ ಪವಿತ್ರತೆ ಯನ್ನು ಯಾವ ಕಾರಣಕ್ಕೂ ಪ್ರಶ್ನಿಸುವ ಅಥವಾ ಬದಲಾಯಿಸ ಬಯಸುವ ಪ್ರವೃತ್ತಿ ಯವರಾಗಿರಲಿಲ್ಲ; ಸರಿಯೋ ತಪ್ಪೋ ಅವುಗಳಿಗೆ ಅವರು ಬದ್ಧರಾಗಿರುತ್ತಿದ್ದರು. ಆದರೆ, ಇಂದಿನ ವಿದ್ಯಾರ್ಥಿ ಪವಿತ್ರತೆಗಿಂತ ವಿಚಾರಶೀಲತೆಗೆ ತರ್ಕಕ್ಕೆ ಹೆಚ್ಚು ಬೆಲೆ ಕೊಡುತ್ತಾನೆ; ಅವನ ತಾರ್ಕಿಕ ಮನೋಭಾವಕ್ಕೆ ಒಗ್ಗದ ಯಾವುದನ್ನೂ ಅದೆಷ್ಟೇ ಪವಿತ್ರವಾಗಿದ್ದರೂ ವಿರೋಧಿಸುತ್ತಾನೆ."

ಈ ಬಗೆಯ ವಿದ್ಯಾರ್ಥಿ ಮನೋಭಾವಕ್ಕೆ ಕಾರಣ ಅನೇಕ; ಅದರಲ್ಲಿ ಸಮಾಜದ ಹಿರಿಯರ ಹೊಣೆಯೂ ಸಾಕಷ್ಟಿದೆ. ಈ ಅಂಶದ ಬಗ್ಗೆ ಬೆಳಕು ಚೆಲ್ಲಿ ಅಂದಿನ ಸಭೆಯಲ್ಲಿ ಆತ್ಮಶೋಧಕವಾದ ಕೆಲವು ಮಾತುಗಳನ್ನು ಆಡಿದರು :

> "ವಿದ್ಯಾರ್ಥಿಗಳ ಮನಸ್ಸಿನಲ್ಲಿ ಕವಿದಿರುವ ಈ ಅಪನಂಬಿಕೆ ಹಾಗೂ ನಿರಾಶೆಗೆ ಕಾರಣವೇನು ? ಮೊದಲನೆಯದಾಗಿ ಹಿರಿಯರೆನ್ನಿಸಿಕೊಂಡ ನಾವು ಅವರ ಅಭ್ಯಾಸಕ್ಕೆ ತಕ್ಕ ಹಿತವಾದ ವಾತಾವರಣವನ್ನು ಕಲ್ಪಿಸುವಲ್ಲಿ ವಿಫಲರಾಗಿದ್ದೇವೆ. ವಿದ್ಯಾರ್ಥಿ ನಿಲಯಗಳು, ಪುಸ್ತಕ ಭಂಡಾರ, ಪ್ರಯೋಗಶಾಲೆ, ಆಟದ ಮೈದಾನ, ಮನರಂಜನೆಯ ಏರ್ಪಾಟು—ಹೀಗೆ ಅವರ ಅನೇಕ ಅವಶ್ಯಕತೆಗಳ ಕಡೆ ನಾವು ವಿಶೇಷ ಗಮನವನ್ನು ಕೊಟ್ಟಿಲ್ಲ. ದಿನ ನಿತ್ಯದ ಬದುಕಿಗೇ ಹೋರಾಡುತ್ತಾ ಕಾಲ ನೂಕುತ್ತಿರುವ ಅವರಿಗೆ ಅಭ್ಯಾಸ ಮಾಡಲು ಬಿಡುವೇ ದೊರಕದಿರಬಹುದು. ಇನ್ನು ಅಭ್ಯಾಸ ಮುಗಿಸಿದ ಮೇಲೂ ಅವರ ಭವಿಷ್ಯ ಭದ್ರವಿಲ್ಲ; ಅದೃಷ್ಟವಿದ್ದರೆ ನೂರಕ್ಕೆ ಒಬ್ಬನಿಗೆ ಅರ್ಹತೆಗೆ ತಕ್ಕ ಕೆಲಸ ದೊರೆತೀತು. ಹೀಗಿರುವಾಗ ಅವರು ಅವಿಧೇಯರಂತೆ ಭ್ರಮಿಷ್ಟರಂತೆ ವರ್ತಿಸದೆ ಮತ್ತೇನು ತಾನೆ ಮಾಡಲು ಸಾಧ್ಯ— ?"

ವಿದ್ಯಾರ್ಥಿ ಸಮಸ್ಯೆಗಳನ್ನು ಕುರಿತು ಇಷ್ಟೊಂದು ಮಾನವೀಯ ದೃಷ್ಟಿ ಮತ್ತು ಅನು ಕಂಪೆಗಳನ್ನು ಇಟ್ಟುಕೊಂಡಿರುವ ಜನ ಶೈಕ್ಷಣಿಕ ರಂಗದಲ್ಲಿ ಹೆಚ್ಚಾದಷ್ಟೂ ಇಂದಿನ ಸಮಸ್ಯೆಗಳು ಎಷ್ಟು ಹಗುರವಾಗಿ ಬಗೆಹರಿಯುತ್ತವೆಂಬುದನ್ನು ಒತ್ತಿ ಹೇಳಬೇಕಿಲ್ಲ.

ವಿಶ್ವವಿದ್ಯಾಲಯಗಳ ಬೋಧಕ ಮಾಧ್ಯಮವನ್ನು ಕುರಿತು ಪ್ರೊ. ಗೋಕಾಕ್ ತಮ್ಮದೆ ಆದ ವಿಶಿಷ್ಟ ನಿಲುವನ್ನು ಪಡೆದಿದ್ದಾರೆ. 'ಸೆನೆಟ್ ಸಭೆ'ಯಲ್ಲಿ ತಮ್ಮ ನೀತಿಯನ್ನು ಅವರು

ಿಸಿದಾಗ ಸ್ವಲ್ಪವೂ ವಿರೋಧವಿಲ್ಲದೆ ಅನುಮೋದನೆ ದೊರೆಯಿತು. ಕನ್ನಡವನ್ನು ಕ ಮಾಧ್ಯಮವನ್ನಾಗಿ ಪಿ. ಯು. ಸಿ. ಮತ್ತು ಪದವಿ ವರ್ಗದಲ್ಲಿ ಜಾರಿಗೆ ತರಲಾ . ವಿಜ್ಞಾನ ವಿಷಯಗಳನ್ನು ಕುರಿತು ಕನ್ನಡದಲ್ಲಿ ಸುಮಾರು ಇಪ್ಪತ್ತೈದಕ್ಕೂ ಮಿಗಿ ಿ ಪಠ್ಯಪುಸ್ತಕಗಳು ಕೇವಲ ಒಂದೇ ವರ್ಷದ ಅವಧಿಯಲ್ಲಿ ಪ್ರಕಟವಾಗಿವೆ; ಮತ್ತು ೇಕ ಗ್ರಂಥಗಳು ಪ್ರಕಟವಾಗಲಿವೆ. ಇಂಗ್ಲಿಷ್ ಮಾಧ್ಯಮ ತೆಗೆದುಕೊಂಡಿರುವ ್ಯಾರ್ಥಿಗಳು ಅಪೇಕ್ಷೆಪಟ್ಟಲ್ಲಿ ಕನ್ನಡದಲ್ಲಿ ಉತ್ತರಬರೆಯಲು ಅವಕಾಶ ಕಲ್ಪಿಸ ಿದೆ.

ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಕೆಲವು ವರ್ಗಗಳಿಗೆ ಪ್ರವೇಶ ಪಡೆಯಲು ನಿಗದಿ ಡಲಾಗಿದ್ದ ವಯೋಪರಿಮಿತಿಯ ನಿಯಮವನ್ನು ಸಡಿಲಗೊಳಿಸಿ ಆಡಳಿತ ಸುಗಮ ುವಂತೆ ವ್ಯವಸ್ಥೆ ಮಾಡಲಾಗಿದೆ. ವಿಶ್ವವಿದ್ಯಾಲಯದ ಪರೀಕ್ಷೆಗಳ ಸ್ವರೂಪ, ವಿಧಾನ ಹೊಸ ಕ್ರಮಗಳನ್ನು ರೂಪಿಸಿ ರಚನಾತ್ಮಕ ವ್ಯವಸ್ಥೆಗೆ ದಾರಿ ಮಾಡಿಕೊಡುವ ್ದೇಶದಿಂದ ಶಿಕ್ಷಣತಜ್ಞರ ವಿಚಾರಗೋಷ್ಠಿಯೊಂದನ್ನು ನಡೆಸಿ ಅದರ ಅಭಿಪ್ರಾಯ ನ್ನು ಅನುಸರಿಸಿ ಸುಧಾರಣೆಗಳನ್ನು ಮಾಡುವ ಉದ್ದೇಶವಿದೆ.

ಸ್ನಾತಕೋತ್ತರ ವಿಭಾಗದ ಬೆಳವಣಿಗೆ ಸಹ ಕಳೆದ ಎರಡು ವರ್ಷಗಳಲ್ಲಿ ಗಮನಾರ್ಹ ಿ ಪ್ರಗತಿ ಸಾಧಿಸಿದೆ. ಎಂ. ಇಡಿ, ಎಂ. ಟೆಕ್, ಐದು ವರ್ಷದ ಶಿಲ್ಪ ಪದವಿ ್ಯಾಸ, ಸಂಸ್ಕೃತ ಎಂ. ಎ. ಮತ್ತಿತರ ಹೊಸ ವಿಭಾಗಗಳನ್ನು ತೆರೆಯುವುದರ ಜೊತೆಗೆ ಜೆ ತರಗತಿಗಳಲ್ಲಿ ವ್ಯಾವಹಾರಿಕ ಇಂಗ್ಲಿಷ್ ಕಲಿಸುವ ಡಿಪ್ಲೊಮಾವನ್ನು ಆರಂಭಿಸ ಿದೆ. ಖಾಸಗಿ ಕಾಲೇಜುಗಳಿಗೂ ಆನರ್ಸ್ ಕೋರ್ಸುಗಳನ್ನು ನಡೆಸಲು ಅವಕಾಶ ಿಸಿರುವುದಲ್ಲದೆ ಹೊಸದಾಗಿ ಕೆಲವು ಖಾಸಗಿ ಕಾಲೇಜುಗಳ ಆರಂಭಕ್ಕೆ ಮನ್ನಣೆ ಡಲಾಗಿದೆ. ವಿಶ್ವವಿದ್ಯಾಲಯದ ಪುಸ್ತಕ ಭಂಡಾರ ಅತ್ಯಂತ ನವೀನ ಮಾದರಿಯಲ್ಲಿ ಜ್ಜಿತವಾಗಿರಲು ತಕ್ಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಖಾಸಗಿ ಕಾಲೇಜುಗಳ ಾ ನಿಯಮಕ್ಕೆ ಸಂಬಂಧಪಟ್ಟ ಕಾನೂನುಗಳನ್ನು ಕ್ರಮಗೊಳಿಸಿ ಅಧ್ಯಾಪಕರ ಹಿತ ಣೆ ಮಾಡಲು ಅವಕಾಶ ಕಲ್ಪಿಸಿದ್ದು ಪ್ರೊ. ಗೋಕಾಕರ ಮತ್ತೊಂದು ಉತ್ತಮ ಧನೆ.

ನಾಗರಭಾವಿಯಲ್ಲಿ ಹೊಸದಾಗಿ ರೂಪುಗೊಳ್ಳುತ್ತಿರುವ 'ಬೆಂಗಳೂರು ವಿಶ್ವವಿದ್ಯಾ ುದ ಕ್ಯಾಂಪಸ್' ಕಾರ್ಯದಲ್ಲಿ ಶ್ರೀ ಗೋಕಾಕರ ದೂರದೃಷ್ಟಿ ಹಾಗೂ ಆಡಳಿತ ್ತೆಯ ನಿದರ್ಶನವನ್ನು ಕಾಣಬಹುದಾಗಿದೆ. ಅವರು ಅಧಿಕಾರ ವಹಿಸಿಕೊಂಡಕೂಡಲೆ ಂಪಸ್ ಆವರಣದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು, ಮೊದಲನೆ ತದ ಕಟ್ಟಡಗಳ ಕೆಲಸ ಆರಂಭಮಾಡಿಸುವುದು ಮುಂತಾದ ಅನೇಕ ಕಾರ್ಯಗಳು ತಗತಿಯಲ್ಲಿ ನಡೆಯಲು ವ್ಯವಸ್ಥೆ ಮಾಡಿದರು.

ೱ

ಉತ್ತಮ ಆಡಳಿತಗಾರ ಮತ್ತು ಶಿಕ್ಷಣತಜ್ಞರಾಗಿ ಪ್ರೊ. ಗೋಕಾಕರ ಯಶಸ್ಸಿನ ರಹಸ್ಯಕ್ಕೆ ಯಾವ ಒಂದು ಕಾರಣವನ್ನೂ ನಿರ್ದಿಷ್ಟವಾಗಿ ಹೇಳಲು ಬರುವಂತಿಲ್ಲ ಏಕೆಂದರೆ ಅನೇಕ ಉತ್ತಮ ಗುಣಗಳಿಂದ ಕೂಡಿದ ಪರಿಪೂರ್ಣ ವ್ಯಕ್ತಿತ್ವ ಅವರದು

ಪ್ರೊ. ಗೋಕಾಕರಿಗೆ ವಹಿಸಿದ ಹುದ್ದೆ ಅಥವಾ ಜವಾಬ್ದಾರಿ ಯಾವುದೇ ಬಗೆಯ ದಾಗಿದ್ದರೂ ಅದಕ್ಕೆ ತಕ್ಕ ಪೂರ್ಣ ಅರ್ಹತೆಯನ್ನು ತಮ್ಮ ವಿದ್ವತ್ತು ಹಾಗೂ ಪ್ರತಿಭೆಗ ಮೂಲಕ ಅವರು ಪಡೆದವರಾಗಿದ್ದಾರೆ. ಈ ಬಗೆಯ ಅರಿವು ಅವರಲ್ಲಿ ಸಾಕಷ್ಟು ನೈತಿ ಧೈರ್ಯ ಮತ್ತು ಆತ್ಮಪ್ರತ್ಯಯವನ್ನು ಬೆಳೆಸಲು ಸಹಕಾರಿಯಾಗಿದೆ. ತಮ್ಮ ಎ ಕೆಲಸಗಳಲ್ಲೂ ಪ್ರಾಮಾಣಿಕತೆ ಹಾಗೂ ಶ್ರದ್ಧೆಯನ್ನು ಪರಿಪೂರ್ಣ ರೀತಿಯಲ್ಲಿ ವ್ಯಕ್ತ ಮಾಡುವುದು ಪ್ರೊ. ಗೋಕಾಕರಿಗೆ ಮಾತ್ರ ಸಾಧ್ಯ. ಜ್ಞಾನ, ಅವರ ಪಾಲಿಗೆ ಪವಿತ್ರ ವಾದದ್ದು. ತಮ್ಮ ಒಂದು ಉಪನ್ಯಾಸದಲ್ಲಿ "ಒಂದು ಕಾಲೇಜಿನ ಪ್ರಿನ್ಸಿಪಾಲ್ ಹುದ್ದೆ ಒಂದು ರಾಷ್ಟ್ರದ ರಾಯಭಾರಿಯಂಥ ಶ್ರೇಷ್ಠ ಹುದ್ದೆಗೆ ಯಾವ ಅರ್ಥದಲ್ಲೂ ಕಡಿಮೆ ಯಲ್ಲ"—ಎಂದಿದ್ದರು. ಈ ಬಗೆಯ ಕರ್ತವ್ಯನಿಷ್ಠೆ ಮತ್ತು ಶ್ರದ್ಧೆ ಅವರನ್ನು ಮುಂದ ನಡೆಸಿದ ಶಕ್ತಿಗಳು.

ಒಬ್ಬ ಆಡಳಿತಗಾರ ತುಂಬಾ ದಕ್ಷನೂ ಜನಪ್ರಿಯನೂ ಆಗಿ ಏಕ ಕಾಲದಲ್ಲಿ ವಿಜೃಂಭ ಸುವುದು ದುಸ್ತರವೇ. ಆದರೆ, ಪ್ರೊ. ಗೋಕಾಕ್ ಎರಡೂ ಕುದುರೆಗಳನ್ನು ಒಮ್ಮೆ ಸವಾರಿ ಮಾಡುತ್ತಿರುವ ವೀರರು. ಇದು ಅವರ ವಾಸ್ತವ ದೃಷ್ಟಿ, ಚಾಣಾಕ್ಷತೆ ಹಾಗು ಉತ್ತಮ ಮೌಲ್ಯ ಪ್ರಜ್ಞೆಯ ಫಲವಾಗಿದೆ. ಅತ್ಯುತ್ತಮವೆನಿಸಿದ್ದರ ಕಡೆಗೇ ಸದಾ ಅವ ದೃಷ್ಟಿ; ಆದರೂ ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊಳ್ಳಲೂ ಹಿಂಜರಿಯುವುದಿಲ್ಲ. ಆಡಳಿ ದಲ್ಲಿ ಇಂಥ ವಾಸ್ತವಿಕ ಪ್ರಜ್ಞೆ ತುಂಬಾ ಅಗತ್ಯವಿರುತ್ತದೆ.

ತಮ್ಮಲ್ಲಿಗೆ ಯಾವುದಾದರೂ ಕೆಲಸಕ್ಕೆ ಬಂದವರನ್ನು ವೈಯಕ್ತಿಕವಾಗಿ ವಿಚಾರಿ ಗಮನಿಸುವುದು ಪ್ರೊ. ಗೋಕಾಕರ ಮತ್ತೊಂದು ವೈಶಿಷ್ಟ್ಯ. ಕೇವಲ ಕಾಗದ ಪತ್ರಗಳ ಒದಗಿಸುವ ಸಂಗತಿ ಸತ್ಯವನ್ನು ಅವರು ಅಷ್ಟಾಗಿ ಗಮನಿಸುವುದಿಲ್ಲ; ವ್ಯಕ್ತಿನಿಷ ಅನುಭವ ಅವರಿಗೆ ಮುಖ್ಯ. ಟಿಕೆಟ್ ಕೇಳುವ ವ್ಯಕ್ತಿಯ ಕೈಮಾತ್ರ ನೋಡಿ ವ್ಯವಹಾ ಮುಗಿಸುವ 'ರೈಲ್ವೆ ಗುಮಾಸ್ತೆ ಪ್ರವೃತ್ತಿ'ಗೂ ಅವರಿಗೂ ಬಹುದೂರ; ಅವರ ಮಾನವೀಯ ಸ್ವಭಾವವೇ ಅವರ ದೊಡ್ಡತನಕ್ಕೆ ಸಾಕ್ಷಿ. ಅವರಿಂದ ಎಂದೂ ಯಾರಿಗು ಯಾವ ಬಗೆಯ ಕಿರುಕುಳವಾಗಿಲ್ಲ ಮತ್ತು ದಾಕ್ಷಿಣ್ಯವಶವಾದ ಅನುಕೂಲಗಳೂ ದೊರೆತಿಲ್ಲ ನಿಷ್ಪಕ್ಷಪಾತವಾಗಿರಬೇಕೆಂಬ ನಿಷ್ಠೆಯಿಂದಾಗಿ ಎಷ್ಟೋ ಬಾರಿ ಅವರ ಆಪ್ತರಿಗೆ ಅವರಿಂ ಉಪೇಕ್ಷೆಯ ಪ್ರತಿಫಲ ದೊರಕಿರುವ ಉದಾಹರಣೆಗಳೂ ಹೇರಳವಾಗಿ ಸಿಗುತ್ತವೆ.

ಅತ್ಯಂತ ಆತ್ಮೀಯರಾದ ಅನೇಕ ಮಂದಿ ಸಹೋದ್ಯೋಗಿಗಳನ್ನು ಸಹಾಯಕರನ್ನಾಗಿ
ಕ್ಕು ಪಡೆದು ಬಂದಿರುವ ಭಾಗ್ಯಶಾಲಿ ಆಡಳಿತಗಾರರಲ್ಲಿ ಪ್ರೊ. ಗೋಕಾಕ್ ಒಬ್ಬರು.
ರೂ ತನ್ನ ಸಹಾಯಕರ ಮೇಲೆ ಪೂರ್ತಿ ಹೊಣೆ ಹೊರಿಸಿ ನಿಶ್ಚಿಂತವಾಗಿರುವುದು
ರ ಜಾಯಮಾನಕ್ಕೆ ಒಗ್ಗದ ಸಂಗತಿ. ಆಡಳಿತದ ಎಲ್ಲ ಹಂತದಲ್ಲೂ ತಾವೂ ಸಮಭಾಗಿ
ಗಿ ದುಡಿಯುವುದು ಅವರ ಪರಿಪಾಠ.

ಪ್ರೊ. ಗೋಕಾಕರು ಹೀಗೆ ಅತ್ಯಂತ ಸುಸಂಸ್ಕೃತರೂ, ಕರ್ತವ್ಯನಿಷ್ಠರೂ, ಕಷ್ಟಸಹಿಷ್ಣು
ೂ ಮತ್ತು ದೂರದೃಷ್ಟಿಯುಳ್ಳ ಮಹಾವ್ಯಕ್ತಿಯೂ ಆಗಿ ರೂಪುಗೊಳ್ಳಲು ಅವರ
ತ್ಮಿಕ ಹಿನ್ನೆಲೆ ಒಂದು ಪ್ರಮುಖ ಕಾರಣ. ಸ್ವತಃ ಸದಾಚಾರ ಶೀಲಸಂಪನ್ನ ದೈವ
ತಂದೆ ತಾಯಿಗಳ ಆರೈಕೆಯಲ್ಲಿ ಬೆಳೆದು ತಾರುಣ್ಯ ಹಾಗೂ ಪ್ರೌಢ ವಯಸ್ಸಿನಲ್ಲಿ
ವಿಂದರ ತತ್ತ್ವ ದರ್ಶನದಿಂದ ಪ್ರಭಾವಿತರಾಗಿ ಪೌರ್ವಾತ್ಯ ಮತ್ತು ಪಾಶ್ಚಾತ್ಯ ಸಂಸ್ಕೃತಿ
ಹಿತ್ಯಗಳ ಅಭ್ಯಾಸ ನಡೆಸಿ ಇಂಥ ಸದೃಢ ವ್ಯಕ್ತಿತ್ವವನ್ನು ಅವರು ಬೆಳಸಿಕೊಂಡಿದ್ದಾರೆ.
ರ ಬದುಕಿನುದ್ದಕ್ಕೂ ಗುಪ್ತಗಾಮಿನಿಯಾಗಿ ಪ್ರವಹಿಸುತ್ತಿರುವ ಈ ಆಶಯವನ್ನು
ತ್ರ 'ಮುಕ್ತಜೀವಿ' ಎಂಬ ಕವನದಲ್ಲಿ ಹೀಗೆ ತೋಡಿಕೊಂಡಿದ್ದಾರೆ:

> ನನ್ನ ಬಾಳಿರಲಿವರ
> ಅರಿವಿಂದ, ಒಲವಿಂದ,
> ಬಾಳಿಗರ್ಪಿಸುವ ಅರವಿಂದವಾಗಿ.

ಸಮನ್ವಯಸಿದ್ಧ

ಎಸ್. ವಿ. ರಂಗಣ್ಣ

ಸುಮಾರು ಮೂವತ್ತೈದು ಸಂವತ್ಸರಗಳ ಹಿಂದಣ ಮಾತು. 'ಪ್ರಬುದ್ಧ ಕರ್ನಾಟ
ದಲ್ಲಿ "ರಂಗಯ್ಯನ ವಚನಗಳು" ಎಂಬ ಮುಕ್ತಕಗಳು ಪ್ರಕಟಗೊಂಡಿದ್ದವು; ಕಾ
ಕರ್ತನ ಹೆಸರು ನಮೂದಿತವಾಗಿರಲಿಲ್ಲ. ಯಾರಿರಬಹುದು ಎಂದು ಕೆಲವು ಸಾಹಿತಿಗ
ಕುತೂಹಲ, ಮತ್ತೆ ಕೆಲವರಿಗೆ ಅಚ್ಚರಿ, ಉಳಿದವರಿಗೆ ಉದಾಸೀನ. ಇದ್ದಕ್ಕಿದ್ದಂತೆ ನ
ಕೈಯಿಗೆ ಒಂದು ಪತ್ರ ಬಂತು. ಅದರ ಮುಖ್ಯಾಂಶ ಇಷ್ಟೆ : "ರಂಗಯ್ಯನ ವಚನಗಳ
ರಚಿಸಿದವರು ನೀವೇ ಇರಬೇಕು. ರಂಗಣ್ಣ ಎಂಬ ನಾಮಧೇಯದ ಸಾಮ್ಯದಿಂದ ಮಾ
ನಾನು ಹಾಗೆ ತೀರ್ಮಾನಿಸಿಲ್ಲ; ನಿಮ್ಮ ಸ್ವಭಾವ ಮನೋರಥ ಶೈಲಿಗಳ ಆಂತರ
ಪ್ರಮಾಣಗಳಿಂದ ಆ ನಿರ್ಧಾರಕ್ಕೆ ಬಂದಿದ್ದೇನೆ." ಆ ಪತ್ರ ಬರೆದು ಕಳಿಸಿದವರು ವಿನಾಯ
ಕೃಷ್ಣ ಗೋಕಾಕರು. ಅದಕ್ಕೆ ಉತ್ತರವಾಗಿ ನಾನು "ನಾನಲ್ಲ ಎನ್ನಲಾರೆ; ದಯೆಯಿಟ
ನಿಜಾಂಶವನ್ನು ನಿಮ್ಮಲ್ಲೇ ಗೋಪ್ಯವಾಗಿ ಇಟ್ಟುಕೊಂಡಿರಿ" ಎಂದು ಪ್ರಾರ್ಥಿಸಿಕೊಂ
ಆಗ ಆ ವಚನಗಳು ನನ್ನವು ಎಂಬ ಸಂಗತಿ ನನ್ನ ಗುರುಗಳಾದ ಎ. ಆರ್. ಕೃಷ್ಣಶಾ
ಗಳು, ಅವರ ಅವಳಿ ಜವಳಿಯಂತಿದ್ದ ಟಿ. ಎಸ್. ವೆಂಕಣಯ್ಯನವರು ಇಬ್ಬರಿಗೇ ಗೊ
ದ್ದಿತು. ಗುರುವರ್ಯ ಬಿ. ಎಂ. ಶ್ರೀಕಂಠಯ್ಯನವರಿಗೂ ಅದು ಖಚಿತವಾಗಿ ತಿಳಿದಿರಲ
ಎಂದರೆ ಕೌತುಕವೆನಿಸೀತು. ಆದರೂ ಅದು ಸತ್ಯ. ಅಲ್ಲಿಂದ ನನಗೂ ಗೋಕಾಕರಿ
ನಿಕಟ ಸಂಬಂಧ ಏರ್ಪಟ್ಟಿತು. ನಾವಿಬ್ಬರೂ ಆಪ್ತಮಿತ್ರರು ಎಂದು ಹೇಳಿದರೆ ಸಾಲದ
ಹೆಚ್ಚು ಕಡಮೆ ಒಂದೇ ಕುಟುಂಬದವರು ಎನ್ನಬೇಕು. ವಯಸ್ಸೊಂದರಲ್ಲಿ ನಾನು ಹಿರಿಯ
ಮಿಕ್ಕ ಶಕ್ತಿ ಸಾಮರ್ಥ್ಯ ಅನುಭವ ಸಾಧನೆ ಸ್ಥಾನ ಎಲ್ಲದರಲ್ಲೂ ಪ್ರಕಟ ಹಿರಿ
ಗೋಕಾಕರದ್ದು.

ಗೆಳೆಯರಿಬ್ಬರ ಆತ್ಮೀಯ ಸಂಭಾಷಣೆ ಉಂಟೆಂಬುದನ್ನು ಎಲ್ಲರೂ ಒಪ್ಪುತ್ತಾ
ಎರಡು ಆತ್ಮಗಳ ಮಾತಿಲ್ಲದ ಮಾತು ಕೋರದ ಸಂವಾದ ಉಂಟೆಂಬುದನ್ನು ಕೆಲವ
ಅಸಂಭವವೆನ್ನಬಹುದು. ಆದರೂ ನನಗೂ ಗೋಕಾಕರಿಗೂ ಅದು ರೂಢಿಯಾಗಿ
ಅವರ ದೊಡ್ಡ ಹಸ್ತದಲ್ಲಿ ನನ್ನ ಸಾಧಾರಣ ಹಸ್ತವನ್ನಿಟ್ಟು ತುಸು ಹೊತ್ತು ಸುಮ್ಮ

ರೋ ಕುಳಿತರೋ ಸಾಕು ಅನೇಕ ತಿಂಗಳುಗಳ ಯೋಗಕ್ಷೇಮ ವಿಚಾರಣೆ ನಮ್ಮಿಬ್ಬರ
ವೆ ಆಗಿಬಿಡುತ್ತದೆ. ಇಂಥ ಸ್ನೇಹಿತರನ್ನು ಪಡೆವಿರುವುದು ನನ್ನ ಸೌಭಾಗ್ಯ!
ಮ್ಮೆ ಬೇಲೂರಿಗೆ ಹೋಗಿ ಬಂದು ಅಲ್ಲಿನ ಶಿಲ್ಪ ತಮಗೆ ಅಷ್ಟೊಂದಾಗಿ ಹಿಡಿಸಲಿಲ್ಲ
ು ಗೋಕಾಕರು ಹೇಳಿದರು. ನನಗೆ ಬಹಳ ಮುದ್ದಾದ ಜಗನ್ಮೋಹಿನಿಯ ಪುಟ್ಟ
ನ ಕೈ ಕೂಡ ಅವರಿಗೆ ಅಂದವಾಗಿ ತೋರಲಿಲ್ಲ. ಅಂದು ಅವರನ್ನು ನಾನು ಶ್ರೀರಂಗ
ಣಕ್ಕೆ ಕರೆದುಕೊಂಡು ಹೋದೆ. ಸಂಜೆ ಸಮೀಪಿಸುತ್ತಿರುವಾಗ ನಾವಿಬ್ಬರೂ ಗರ್ಭ
ಯಲ್ಲಿ ದೇವರಿದಿರು ನಿಂತುಕೊಂಡೆವು. ಅರ್ಚಕರು ಮಂಗಳ ನೀರಾಜನ ಮುಗಿಸಿ,
ಗಾರತಿಯ ದೀಪವನ್ನು ರಂಗಧಾಮನ ಮುಖ ಸ್ಪಷ್ಟವಾಗಿ ಕಾಣುವಂತೆ ಎತ್ತಿ ಹಿಡಿ
, "ಆಹ!" ಎಂಬ ಸುಪ್ರೀತಿ ಪಡೆದ ಉದ್ಗಾರ ಗೋಕಾಕರಿಂದ ಆಯ್ತು. ಆ ದಿವ್ಯ
ನವಲ್ಲಿ, ಮುಖ್ಯವಾಗಿ ಬಲ ಕಪೋಲದ ಮೇಲೆ, ಮಿಂಚಿ ಹೊಳೆಯುವ ಮಂದಸ್ಮಿತ
ೆ ನಾನು ಮತ್ತೆ ಮತ್ತೆ ಪುಳಕಿತನಾಗಿದ್ದೇನೆ. ಅದರಿಂದ ಗೋಕಾಕರೂ ಆನಂದಾತಿ
ಹೊಂದಿದ್ದು ನನ್ನಲ್ಲಿ ಅತ್ಯುತ್ಸಾಹವನ್ನು ಉಬ್ಬಿಸಿತು. ಆ ಪ್ರಸಂಗವನ್ನು ಕುರಿತು
ು "ವಚನ" ಕಟ್ಟಿ ಅದನ್ನು ಅವರಿಗೆ ಕಳಿಸಿದೆ. ಅವರು "ನಾನು ಆ ವಿಷಯವಾಗಿ
ಪದ್ಯ ಬರೆಯಬೇಕಾಗಿಲ್ಲ; ನೀವೇ ಅದನ್ನು ಮಾಡಿದ್ದೀರಿ" ಎಂಬ ಸಹಾನುಭೂತಿಯ
ುತ್ತರವನ್ನು ದಯಪಾಲಿಸಿದರು. ಪಾರಮಾರ್ಥಿಕವಾಗಿ ಯಾವ ಮೌಲ್ಯಕ್ಕೆ
ನ್ಯವೂ ಅದನ್ನು ಕುರಿತು ಯೋಚನಾಪರರೆಲ್ಲರಿಗೂ ಬಹುತೇಕ ಏಕ ವಿಧದ ಭಕ್ತಿ;
ರ ಧ್ಯಾನ ಆರಾಧನೆ ಇತ್ಯಾದಿ ಕರ್ಮಾವಳಿಯಲ್ಲಿ ಹಲವು ವಿಧಾನಗಳುಂಟು. ಆ
ತಿಯನ್ನು ನಾವಿಬ್ಬರೂ ಮನಗಂಡಿರುವುದರಿಂದ ನಮ್ಮ ಸೌಹಾರ್ದಕ್ಕೆ ಒಂದು
ಷ್ಟ "ಭಿನ್ನಾಭಿನ್ನತೆ"ಯ ಸೊಬಗು.
ಪೂರ್ವವಾದ ಒಂದು ಆಕರ್ಷಣೆ ಗೋಕಾಕರಿಗೆ ಇರುವುದನ್ನು ನಾ ಬಲ್ಲೆ, ಬಹುಶಃ
ೇಕ ಇತರರೂ ಬಲ್ಲರು. ಆಕರ್ಷಿತನ ಹೃದಯಕ್ಕೂ ಮನಸ್ಸಿಗೂ ಆತ್ಮಕ್ಕೂ ಹಿತ
ೆಸುವ ಸವಿ ಆಕರ್ಷಣೆ ಅದು. ಅವರಿಗೆ ವೇಳೆಯಿಲ್ಲ, ನಾವು ಹೋದರೆ ಅವರಿಗೆ
ಕ್ಷಿಣ್ಯದ ತ್ರಾಸವಾಗುತ್ತದೆ, ಎಂಬುದಾವುದನ್ನು ಲೆಕ್ಕಿಸದೆ ಅವರನ್ನು ನೋಡಬೇಕೆಂದೇ
ಲ್ಲಿ ಹೋಗುವವರ ಸಂಖ್ಯೆ ಬಹಳ ದೊಡ್ಡದು. ನನಗೆ ತುಂಬ ಸಂಕೋಚ; ಯಾರಿ
ರೂ ವಿನಾಕಾರಣ ತ್ರಾಸಕೊಡುವುದೆಂದರೆ ನನಗೆ ಪರಿತಾಪ. ಆದರೂ ಕೆಲವು ಬಾರಿ
ಸೂ ಗೋಕಾಕರನ್ನು ಹಾಗೆ ದಣಿಸಿದ್ದೇನೆ. ದೊಡ್ಡ ಸಮಿತಿಯ ಸದಸ್ಯನಾಗಿ ನನ್ನ
ಸ ಅಷ್ಟೇನೂ ಅಗತ್ಯವಿಲ್ಲದಿದ್ದರೂ ಸಭೆ ಸೇರುತ್ತದೆಯೆಂಬ ನೆಪ ಇಟ್ಟುಕೊಂಡು
ು ಧಾರವಾಡಕ್ಕೆ ಒಂದೆರಡು ಬಾರಿ ಹೋದದ್ದುಂಟು; ಅವರಿಗೆ ಅಚ್ಚರಿ ಹುಟ್ಟಿಸಿ
ಂಟು. ಇಂಥ ಸೆಳೆ ಶಕ್ತಿ ಇರುವ ಕೆಲವು ಮಹಾಶಯರಿಗೆ ಎಲ್ಲರೂ ತಮ್ಮಲ್ಲಿಗೆ ಬರುತ್ತಿ
ೇಕೆಂಬ ಏಕಪಕ್ಷೀಯ ಅಪೇಕ್ಷೆ; ತಾವು ಮಾತ್ರ ಸ್ಥಾಣುವಿನ ನಿಶ್ಚಲ ಭಕ್ತರು.

ಗೋಕಾಕರು ಹಾಗಲ್ಲ. ಯಾವ ಊರಿಗೆ ಏನೋ ಕಛೇರಿ ವ್ಯವಹಾರಕ್ಕಾಗಿ ಹೋದ ತಮ್ಮ ಆಪ್ತ ಮಿತ್ರರ ಮನೆಗೆ ಹೋಗಿ ಅವರನ್ನು ಭೇಟಿ ಮಾಡದೆ ಅವರು ಹಿಂದಿರುಗು ದಿಲ್ಲ.

ದಿವಸಕ್ಕೆ ಎಂಟು ಘಂಟೆ ನಿದ್ರೆ ತಮಗೆ ಅತ್ಯಗತ್ಯ ಎಂದು ಅವರೇ ನನಗೆ ಎಷ್ ಹಿಂದೆ ಹೇಳಿದರು; ಕೆಲಸದ ಭರಾಟೆಯಿಂದ ಒಂದೆರಡು ತಾಸಿನ ನಿದ್ರೆ ತಪ್ಪಿ ಹೋ ಮಾರನೆಯ ಹಗಲು ಯಾವಾಗಲೋ ಆ ಕೊನೆಯನ್ನು ಭರ್ತಿಮಾಡಿಕೊಳ್ಳಬೇ ಎಂದು ಅನುಬಂಧವನ್ನೂ ಹೇಳಿಕೆಗೆ ಸೇರಿಸಿದ್ದರು. ಕಾಲೇಜು ಪ್ರಿನ್ಸಿಪಾಲರಾಗಿದ್ದಾ ಇಂಗ್ಲಿಷ್ ಸಂಸ್ಥೆಯ ಮೇಲ್ವಿಚಾರಕರಾಗಿದ್ದಾಗ ಪ್ರಾಯಶಃ ಆ ನೇಮಕ್ಕೆ ಅಡ್ಡಿಯಿ ಲ್ಲಿಲ್ಲ. ಉಪಕುಲಪತಿಗಳಾಗಿರುವಾಗ ವ್ರತಪಾಲನೆ ಸಾಧ್ಯವೆ?

ಹಲವು ಕ್ಷೇತ್ರಗಳಲ್ಲಿ ಕೆಲಸ ಮಾಡಬೇಕಾಗಿರುವ ಪ್ರತಿಯೊಬ್ಬನಿಗೂ ಬಹಿರ ವ್ಯಾಪಾರ ದಿವಸದ ಬಹು ಹೊತ್ತನ್ನು ತೆಗೆದುಕೊಳ್ಳುವ ಅನಿವಾರ್ಯತೆ. ಅದರಿಂದಲೂ ಅ ಕಲ್ಯಾಣ ಆಗುವುದೆಂಬ ಮಾತು ಒಪ್ಪತಕ್ಕ ಮಾತು. ಆದರೂ ಅಂತರಂಗ ಜೀವನ ಅ ಮುಖ್ಯವಾದ ಜವಾಬ್ದಾರಿ. ಗೋಕಾಕರ ದಿನಚರಿಯನ್ನು ನೋಡಿದರೆ "ಇವರಿಗೆ ತಮ್ ದಿಗೇ ಇರುವ ಬಿಡುವು ಉಂಟೇ?" ಎಂಬ ಸಂಶಯ ಏಳುತ್ತದೆ. ಸಂಶಯವನ್ನು ಬೆಳೆ ಗೊಡಬೇಕಾಗಿಲ್ಲ. ಎರಡರ "ಸಮನ್ವಯ"ವನ್ನು ಅಚ್ಚುಕಟ್ಟಾಗಿ ರೂಢಿಸಿಕೊಂಡಿರ "ಸಿದ್ಧ"ರಲ್ಲಿ ಗೋಕಾಕರು ಒಬ್ಬರು.

ಅವರಿಗೆ ದೀರ್ಘಾಯುಷ್ಯವಿರಲಿ, ಅಭಿವೃದ್ಧಿಯಿರಲಿ, ನೆಮ್ಮದಿಯಿರಲಿ!



ಕಲಾವಿದನ ಕೈಯಲ್ಲಿ



ಬಾಯಲ್ಲಿ ಬೆರಳಿಟ್ಟ ಬಾಲಕ



ುವೆಯ ಹೊಸತು



ತರುಣ ಅಧ್ಯಾಪಕ



ಅರಸು ದೇವರಾಜ



ಅಪೂರ್ವ ಪಂಕ್ತಿ



ಸಾಹಿತ್ಯ ಅಕಾಡೆಮಿ ಬಹುಮಾನ



ಪದ್ಮಶ್ರೀ



…ರಿ, ೧೯೫೭



ಯಶಸ್ಸಿನ ಹೆಜ್ಜೆ





ಅರುವತ್ತರ ಹೊಸ್ತಿಲಲ್ಲಿ

ವಾಙ್ಮಯ

‘ದ್ಯಾವಾ-ಪೃಥಿವೀ’

ಸಿ. ಪಿ. ಕೆ.

೧

ನವನ ಬದುಕು ನಿಂತ ನೀರಲ್ಲ; ಅದು ಸದಾ ವಿಕಾಸಶೀಲವಾದದ್ದು. ಬದುಕು
ದಂತೆ, ಬದಲಿಸಿದಂತೆ ಅದರ ಫಲವಾದ ಸಾಹಿತ್ಯವೂ ಅನಿವಾರ್ಯವಾಗಿ ಬೆಳೆಯು
, ಬದಲಾಗುತ್ತದೆ. ಹೀಗಾಗಿ, ಯಾವುದೇ ಸಾಹಿತ್ಯದ ಚರಿತ್ರೆ ನಿರಂತರವಾದ
ಂತಿ ಚಳುವಳಿಗಳ, ಪ್ರಯೋಗಗಳ ಕಥೆಯೇ ಆಗಿರುತ್ತದೆ. ಸೂರ್ಯೋದಯ ಹಿಂದೆ
ಸಂಪ್ರದಾಯ ಪ್ರಬಲಿಸಿದಾಗ, ಕಾವ್ಯದ ಆತ್ಮಕ್ಕೇ ಕುಠಾರಪ್ರಾಯವಾದಾಗ
ತೆ ಮೈದೋರಿ ಸಂಪ್ರದಾಯವನ್ನು ಇಕ್ಕಿ ಮೆಟ್ಟಿ ಕಾವ್ಯದ ಜೀವಂತಿಕೆಯನ್ನು
ಾಡುತ್ತದೆ. ಕನ್ನಡ ಕಾವ್ಯ ಈ ಮಾತಿಗೆ ಅಪವಾದವಲ್ಲ. ಸಂಪ್ರದಾಯ-ನವ್ಯತೆ
ಹೋರಾಟ, ಅಂತಿಮವಾಗಿ ನವ್ಯತೆಯ ವಿಜಯ ಇವು ಕನ್ನಡ ಕಾವ್ಯದ ಇತಿಹಾಸ
ಕಾಲಕಾಲಕ್ಕೆ ಕಂಡುಬರುವಂಥ ಪ್ರಕ್ರಿಯೆಗಳು. ಶಿವಶರಣರ ವಚನಗಳಲ್ಲಿ, ಹರಿ
ರಾಘವಾಂಕ ಕುಮಾರವ್ಯಾಸರ ಕೃತಿಗಳಲ್ಲಿ, ಕೆಂಪುನಾರಾಯಣ ಮುದ್ದಣರ ರಚನೆ
ಲ್ಲಿ, ನವೋದಯಕಾಲದ ರೊಮ್ಯಾಂಟಿಕ್ ಕಾವ್ಯದಲ್ಲಿ ಸಂಪ್ರದಾಯವಿಭಿನ್ನವಾದ
ನತನದ ಕಹಳೆಮೊಳಗನ್ನು ಸ್ಪಷ್ಟವಾಗಿ ಗುರುತಿಸಬಹುದು. ಹನ್ನೆರಡನೆಯ ಶತ
ನದ ಕವಿಗಳಾದ ನೇಮಿಚಂದ್ರ ಹರಿಹರರೆ ತಮ್ಮ ಕಾವ್ಯಗಳನ್ನು ‘ನವ್ಯ’ ಎಂದು
ುಕೊಂಡಿರುವುದು ಗಮನಾರ್ಹ.

ಆದರೆ, ನಿಜವಾದ ನವ್ಯತೆ ಹಿಂದು ಮುಂದುಗಳಿಲ್ಲದ ವಿಶ್ವಾಮಿತ್ರಸೃಜನೆಯಲ್ಲ;
ಪರಂಪರೆಯ ಸಹಜವಾದ ಬೆಳವಣಿಗೆ; ಹಿಂದಿನವರ ಸ್ತನ್ಯಪಾನದಿಂದಲೆ ಪುಷ್ಟಿ
ಕ್ಕುವಂಥದು. ಪರಂಪರೆಯಿಂದ ವಿಚ್ಛೇದನಗೊಂಡ ನವ್ಯತೆ ಬರಿಯ ವಿಕಾರವಾಗ
ಬಹುದಷ್ಟೆ. ಹಿಂದಿನದನ್ನೆಲ್ಲ ವಿರೋಧಿಸಬೇಕೆಂದೆ ಹಟ ತೊಟ್ಟು ಹೊರಡುವ ಕಾವ್ಯ
’ವಾಗಬಹುದು, ಆದರೆ ಕಾವ್ಯವಾಗಲಿಕ್ಕಿಲ್ಲ; ಒಂದು ವೇಳೆ ಆದರೂ, ಶ್ರೇಷ್ಠತೆಗೆ
ವಾಗುತ್ತದೆ.

ಈಗ ಕನ್ನಡದಲ್ಲಿ ‘ನವ್ಯಕಾವ್ಯ’ದ ಮನ್ವಂತರ ನಡೆಯುತ್ತಿದೆ. ಇಂದಿನ ಕಾವ್ಯ ನವ್ಯ
ುದರ ಬಗೆಗೆ ಯಾರೂ ಅಸಮಾಧಾನಪಡಬೇಕಾಗಿಲ್ಲ, ಆಕ್ರೋಶ ತಾಳಬೇಕಾಗಿಲ್ಲ.

ಈ ನವ್ಯತೆ ಅನಿವಾರ್ಯ, ಸ್ವಾಗತಾರ್ಹ. ಏಕೆಂದರೆ, ಈ ಹೊತ್ತಿನ ಕಾವ್ಯ ನವ್ಯವಾಗದೆ ಬ
ಲಾರದು. ಆದರೆ 'ನವ್ಯಕಾವ್ಯ'ದ ಒಳ್ಳೆಯ ಅಂಶಗಳೆಲ್ಲ ಪರಂಪರೆಯ ವಿಕಾಸದಿಂ
ಬಂದವಾಗಿವೆ. ಎಂದಮೇಲೆ 'ನವ್ಯತೆ' ಎಂಬುದು ಅಭೂತಪೂರ್ವವಾದ ಒಂದು ಪ್ರವ
ಎಂದು ಭಾವಿಸುವುದು ಕೇವಲ ಭ್ರಮೆಯಾದೀತು.

ಕನ್ನಡದ 'ನವ್ಯಕಾವ್ಯ'ದ ಮೇಲೆ ಎರಡು ಗಂಭೀರಸ್ವರೂಪದ ಆಪಾದನೆಗಳ
ಹೊರಿಸಲು ಅವಕಾಶವಿದೆ. ಮೊದಲನೆಯದಾಗಿ, ಇಂದಿನ ಕವಿತೆಯೆಲ್ಲ ಸ್ವಾಭಾ
ವಾಗಿ ನವ್ಯತೆಯ ಕಡೆಗೆ ಮುಖ ಮಾಡಿರುವಾಗ, ಯಾವುದೋ ಒಂದು ವಗ
ಕಾವ್ಯವಷ್ಟೆ 'ನವ್ಯ'ವೆಂದು ಹೆಸರುಗೊಂಡಿದೆ. ಇದರಿಂದ 'ನವ್ಯ'ವೊಂದು ಪಂಥವಾ
ಮತವಾಗಿ ಪರಿಣಮಿಸಿರುವುದು ಸುಸ್ಪಷ್ಟ. ಪಂಥ ಯಾವಾಗಲೂ ಕವಿತೆಗೆ ಅ
ಎರಡನೆಯದಾಗಿ, 'ನವ್ಯತೆ'ಯ ಹೆಸರಿನಲ್ಲಿ ಹಲವಾರು ವಿಕೃತಿಗಳು ವಿಜೃಂಭಿಸುತ್ತಿ
ವುದನ್ನು ಯಾರೂ ಕಾಣಬಹುದು. ಇವುಗಳಲ್ಲಿ ಎರಡು ಬಹಳ ಮುಖ್ಯವಾದ
ಎನಿಸುತ್ತದೆ. ಜೀವನ ಬಹುಮುಖವಾದುದು; ಆದ್ದರಿಂದ ಒಬ್ಬ ವ್ಯಕ್ತಿಗೆ ಒದಗಬ
ದಾದ ಅನುಭವಗಳು ನೂರಾರು. ಆದರೆ 'ನವ್ಯಕಾವ್ಯ' ಬರಿಯ ಲೈಂಗಿಕ ವಿಷಯಗಳ
ತನ್ನ ಪ್ರಧಾನವಸ್ತುವನ್ನಾಗಿ ಸ್ವೀಕರಿಸಿ, ಅನುಭವವಲಯವನ್ನು ಸೀಮಿತಗೊ
ಕೊಂಡಿದೆ ಎನ್ನುವುದು ವಿಷಾದಕರ. ಅನುಭವದ ಸಂಕೀರ್ಣತೆಗೆ 'ನವ್ಯ' ಕವಿ
ಪ್ರಾಶಸ್ತ್ಯ ಕೊಡುತ್ತಾರೆ. ನಿಜ, ಮನುಷ್ಯನ ಅನುಭವ ಯಾವಾಗಲೂ ಸಂಕೀ
ವಾದದ್ದೆ. ಅದು ಲೈಂಗಿಕತೆಯಲ್ಲಿ ಸಮಾಪ್ತವಾದರೆ ಸರಳವಾದಂತಾಗಲಿಲ್ಲವೆ? ಅಂ
ಸಂಕೀರ್ಣತೆಯ ಹೆಸರಿನಲ್ಲಿ 'ನವ್ಯ' ಕವಿಗಳು ಲೈಂಗಿಕತೆಯನ್ನು ವಿಶೇಷವಾಗಿ ಮೆ
ತ್ತಿದ್ದಾರೆ. ಕಾಮವನ್ನು ಕಾವ್ಯ ಮಾಡುವುದು ಒಂದು ರೀತಿಯಲ್ಲಿ ಸುಲಭ ಎನ್ನುವು
ಇದಕ್ಕೆ ಕಾರಣವಿದ್ದೀತು. 'ನವ್ಯಕಾವ್ಯ' ಬುದ್ಧಿಯ ಕಸರತ್ತಾಗಿ, ಓದುಗನನ್ನು ಬೆಗ
ಗೊಳಿಸುವ ಬೆಡಗಿನ ಮಾತಾಗಿ ಪರಿಣಮಿಸಿರುವುದು ಮತ್ತೊಂದು ಆತಂಕದ ಸಂಗ
ಹಿಂದಿನ ಕವಿಗಳು ಬದುಕಿಗಾಗಿ ಕಾವ್ಯವೆಂದು ತಿಳಿದಿದ್ದರು; ಇಂದಿನ 'ನವ್ಯ' ಕವಿ
ದೃಷ್ಟಿಯಲ್ಲಿ ಕಾವ್ಯಕ್ಕಾಗಿ ಕಾವ್ಯ. ಸಮಷ್ಟಿ ಜೀವನದ ಮೌಲ್ಯಗಳಿಗೂ ಕಾವ್ಯಮೌ
ಗಳಿಗೂ ಸಂಬಂಧ, ಹೊಂದಾಣಿಕೆ ಇದ್ದೇ ಇರಬೇಕು. 'ನವ್ಯಕಾವ್ಯ' ಜೀವ

---

[1] ನವ್ಯಕಾವ್ಯದ ಆದ್ಯಪ್ರವರ್ತಕನೆನಿಸಿದ ಟಿ. ಎಸ್. ಇಲಿಯಟ್ಟನ ನಾಡಿನವನೆ ಆದ ಆಲ್ಡ
ಹಕ್ಸ್‌ಲಿ ಸಮಕಾಲೀನ ಕವಿಗಳನ್ನು ಕುರಿತು ಆಡಿರುವ ಮಾತುಗಳನ್ನು ಲಕ್ಷಿಸಬಹುದು:

"one would not find among them a single poet of real importance, not o great or outstanding personality. The twentieth century still awaits its Lucreti awaits its own philosophical Dante, its new Goethe, its Donne, even its up- date Laforgue. Will they appear? Or are we to go on producing a poetry which there is no more than the dimmest reflection of that busy and incess intellectual Life which is the characteristic and distinguishing mark of this age —*Collected Essays* ('Subject-matter of Poetry'), p. 96.

ಪರಾಗತ ಮೌಲ್ಯಗಳಿಗೆ ವಿಮುಖವಾಗುತ್ತಿರುವುದು ದುರಂತವೆಂದೆ ತೋರುತ್ತದೆ. ಈ ಕೆಲವು ವಿಚಾರಗಳ ಹಿನ್ನೆಲೆಯಲ್ಲಿ ನೋಡಿದಾಗ ವಿನಾಯಕರ ಕಾವ್ಯದ ಮಹತ್ವ ವಾಗುತ್ತದೆ. ವಿನಾಯಕರು ಕನ್ನಡ ನವ್ಯಕಾವ್ಯದ ಅಧ್ವರ್ಯುಗಳಲ್ಲೊಬ್ಬರು; ' ಎಂಬ ಮಾತನ್ನು ಬಳಕೆಗೆ ತಂದವರು. ಕಾವ್ಯಪ್ರಾಂತದಲ್ಲಿ ಹೊಸ ಗಾಳಿ ತರಿಸುವಂತೆ ಮಾಡುವಲ್ಲಿ ಅವರ 'ಸಮುದ್ರಗೀತಗಳು' ವಹಿಸಿದ ಪಾತ್ರ ವಿಶೇಷ ದ್ದು. "ಕೊಡವಿರು ಶರಧಿಗೆ ಷಟ್ಪದಿಯ ದೀಕ್ಷೆಯನು" ಎಂದು ಅವರು ಹೇಳಿದ್ದರಲ್ಲಿ ಅರ್ಥವಿದೆ. 'ನಿಚ್ಚಂ ಪೊಸತು' ಎನಿಸಿದ ಕಡಲಿನ ರುಂದ್ರ ಘೋಷವೆ ಕನ್ನಡದಲ್ಲಿ ತೆಗೆ ನಾಂದಿಯಾಗಿ, ಪ್ರಚೋದಕ ಶಕ್ತಿಯಾಗಿ ಒದಗಿದ್ದು ಸಹಜವೂ ಹೌದು, ಚಿತವೂ ಹೌದು.

ೀಗೆ ವಿನಾಯಕರು ನವ್ಯದ ಹರಿಕಾರರಾದರೂ, 'ನವ್ಯ'ಪಂಥದ ಅತಿರೇಕಗಳನ್ನೂ ರಗಳನ್ನೂ ಅವರು ಪುರಸ್ಕರಿಸುವವರಲ್ಲ ಎನ್ನುವುದು ಬಹು ಮುಖ್ಯವಾದ ಸಂಗತಿ. ಪರೆ-ನವ್ಯತೆಗಳ ಸಮನ್ವಯವನ್ನು ಪ್ರತಿಪಾದಿಸುವ ವಿವೇಕಪೂರ್ಣವಾದ ನಿಲುವು ದು. ವಿನಾಯಕರ ಸಮನ್ವಯ ದೃಷ್ಟಿಯನ್ನು ತಿಳಿಯಲು ಅವರ ಈ ಕೆಲವು ತುಗಳು ಸಾಕು : "ಕಾವ್ಯವು ನವ್ಯವಾಗುವದು ಸ್ಪರ್ಧೆಗೆಂದಲ್ಲ; ಪೂರಕವೆಂದು....ಬರಿ ್ಯತಾವಾದವೇ ನವ್ಯತೆಯೆಂದಾಗಲಿ ಇಲ್ಲವೆ ಇಂದ್ರಿಯಕ ಜೀವನದ ವಿಕೃತಿಯನ್ನು ರಿಸುವ ಚಿತ್ರಸೃಷ್ಟಿ ನೂತನತರ ಮಾರ್ಗವೆಂದಾಗಲಿ ನಾವು ತಿಳಿಯದಿರೋಣ. ು ಕಾವ್ಯಮಾರ್ಗದ ನವ್ಯತೆಯು ಅದರ ವಿಶಾಲ ದರ್ಶನದಲ್ಲಿದೆ; ವಿಕೃತಿಗಳ ರ್ಶನದಲ್ಲಿಲ್ಲ"[1]; "ಎಲ್ಲ ವೈವಿಧ್ಯವೂ ಅಭಿವ್ಯಕ್ತಿಗಾಗಿ ತೆರೆದಿದೆ. ಮುಖ್ಯವಾದದ್ದು ಭವ, ಕಾವ್ಯಾಭಿವ್ಯಕ್ತಿ. ಮಾರ್ಗ ಇಲ್ಲವೆ ಪಂಥ ಆನುಷಂಗಿಕವಾಗುತ್ತದೆ."[2]

ನ್ನಡ ಕಾವ್ಯಕ್ಕೆ ಹಲವು ನೂತನ ವಸ್ತುಗಳನ್ನು, ನೂತನಾನುಭವಗಳನ್ನು ತಂದು ಟ್ಟ ಸಾಹಸಿ ಕವಿ ವಿನಾಯಕರು. ಅವರ 'ದ್ಯಾವಾ-ಪೃಥಿವೀ' ಇದಕ್ಕೆ ಉತ್ತಮವಾದ . ಗಮನಾರ್ಹವಾದ ಈ ಖಂಡಕಾವ್ಯದಲ್ಲಿ ಭೂಮಿ ಆಕಾಶಗಳೇ ವಸ್ತು. ಕವಿ ್ನು ವಿಸ್ಮಯಗೊಳಿಸಲು, ಸ್ಫೂರ್ತಿ ನೀಡಿ ಅವನ ಕಲ್ಪನೆಯನ್ನು ಎಚ್ಚರಿಸಲು ್ಯಾಕಾಶಗಳಿಗಿಂತ ಒಳ್ಳೆಯ ವಸ್ತು ಮತ್ತಾವುದಿದೆ? ಆದರೆ 'ನವ್ಯಕಾವ್ಯ'ಕ್ಕೆ ವಸ್ತುಗಳ ಕಡೆಗೆ ಅಷ್ಟಾಗಿ ಒಲವಿಲ್ಲ. 'ನವ್ಯ' ಕವಿಗಳು 'ಮಣ್ಣಿನ ವಾಸನೆ' ್ನು ಕುರಿತು ಪದೇ ಪದೇ ಗಿಳಿಯಂತೆ ಮಾತನಾಡುತ್ತಾರಾದರೂ, ಮಣ್ಣಿನ ವಾಸನೆ ಗೆ ಹೆಣ್ಣಿನ ವಾಸನೆಯಲ್ಲದೆ ಮತ್ತೇನೂ ಆಗಿಲ್ಲ. ಹೀಗಿರುವಾಗ ವಿನಾಯಕರು

'ನವ್ಯತೆ ಹಾಗೂ ಕಾವ್ಯಜೀವನ' ಪು. ೪೦

'ಸಮನ್ವಯ' (ಐದನೆಯ ಸಂಚಿಕೆ) ಪು. ೫೧

ನೆಲಬಾನುಗಳನ್ನು ಕುರಿತು ಪರಿಭಾವಿಸಿದ್ದೆ ಮೆಚ್ಚಬೇಕಾದ, ಸ್ವಾಗತಿಸಬೇಕಾದ ವಿಷಯ ವಾಸ್ತವವಾಗಿ, ದ್ಯಾವಾಪೃಥ್ವಿಗಳನ್ನು ಕುರಿತು ಹಾಡಿದವರಲ್ಲಿ ವಿನಾಯಕರು ಮೊದಲಿ ರೇನಲ್ಲ; 'ದ್ಯಾವಾ ಪೃಥಿವೀ' ಎಂಬ ಮಾತು ಋಗ್ವೇದಸೂಕ್ತಗಳಲ್ಲೆ ಬರುತ್ತದೆ ಆದರೆ ಅವುಗಳ ವಿಷಯದಲ್ಲಿ ವಿನಾಯಕರ ದರ್ಶನ ಹೊಸತೆನ್ನಬೇಕು. ಈ ಹೊಸತ ಪರಂಪರೆಯನ್ನು ಆಧರಿಸಿ ನಿಂತದ್ದು. 'ದ್ಯಾವಾ-ಪೃಥಿವೀ' ಎಂದು ತಮ್ಮ ಕೃತಿಗೆ ನಾ ಕರಣ ಮಾಡುವಲ್ಲಿಯೆ ಗೋಕಾಕರು ತಮ್ಮ ಭಾರತೀಯ ಪರಂಪರಾಪ್ರಜ್ಞೆಯನ ವ್ಯಕ್ತಪಡಿಸಿದ್ದಾರೆನ್ನಬಹುದು.

೨

'ದ್ಯಾವಾ-ಪೃಥಿವಿ'ಯಲ್ಲಿ ಎರಡು ಭಾಗಗಳಿವೆ: ಒಂದು 'ನೀರದ', ಮತ್ತೊಂ 'ಇಳಾಗೀತ'. ಎರಡೂ ಪರಸ್ಪರ ಪೂರಕ. ನೆಲದಲ್ಲಿ ನಿಂತು ಆಕಾಶವನ್ನು ಕಂಡ 'ನೀರದ'ದಲ್ಲಿ ಅಭಿವ್ಯಕ್ತವಾಗಿದ್ದರೆ, ಆಕಾಶದಿಂದ ನೆಲದತ್ತ ಹಾಯಿಸಿದ ದೃಷ್ಟಿ 'ಇಳ ಗೀತ'ದಲ್ಲಿ ಕಂಡು ಬರುತ್ತದೆ. 'Poet's eye, in a fine frenzy rolling, do glance from heaven to earth, from earth to heaven' ಎಂದು ಷೇಕ ಪಿಯರ್ ಹೇಳುವಂತೆ ವಿನಾಯಕರ ನೋಟ 'ದ್ಯಾವಾ ಪೃಥಿವಿ'ಯಲ್ಲಿ ಭೂಮ್ಯಾಕಾ ಗಳನ್ನು ತಬ್ಬಿಕೊಂಡಿದೆ.

ಈ ಕಾವ್ಯದಲ್ಲಿ ಆಂಗ್ಲಕವಿ ಷೆಲ್ಲಿಯ ಕಲ್ಪನೆಯೊಂದಿಗೆ ಅರವಿಂದಮಹರ್ಷಿಗಳ ಯೋ ದರ್ಶನ ಸೇರಿಕೊಂಡು ತನ್ನ ಪ್ರಭಾವ ಬೀರಿರುವುದು ಸ್ಪಷ್ಟವಾಗುತ್ತದೆ. ಪೌರ್ವಾ ಪಾಶ್ಚಾತ್ಯಗಳ ಸಾಮರಸ್ಯವನ್ನು ಸಾಧಿಸುವ ಪ್ರಯತ್ನವನ್ನು 'ದ್ಯಾವಾ-ಪೃಥಿವಿ'ಯ ವಿನಾಯಕರು ಮಾಡಿದ್ದಾರೆ. ಈ ಕೃತಿಯ ಉದ್ದಕ್ಕೂ ಕವಿಯ ಕಲ್ಪನಾವಿಲಾ ಚಿಂತನಪರತೆ, ಪುರಾಣ ಪರಿಜ್ಞಾನ, ಆಧ್ಯಾತ್ಮಿಕ ಶ್ರದ್ಧೆ, ವೈಜ್ಞಾನಿಕ ದೃಷ್ಟಿ-ಇವ ವೇದ್ಯವಾಗುತ್ತವೆ.

ಮೊದಲು 'ನೀರದ'ವನ್ನು ನೋಡಬಹುದು; ಇದು ಹತ್ತು ಎಸಳುಗಳ ಶಿಲ್ಪ. ಇ ಮೋಡ ಕಾಮರೂಪಿಯಾಗಿ, ಮರ್ತ್ಯ ಜೀವನಕ್ಕೊಡ್ಡಿದ ಬಹು ಬಗೆಯ ಪ್ರತಿಮೆಯಾ ನಾನಾರ್ಥವ್ಯಂಜಕವಾಗಿ ಕಾಣಿಸಿಕೊಳ್ಳುತ್ತದೆ; ಒಮ್ಮೊಮ್ಮೆ ಒಂದೊಂದು ತತ್ತ್ವ ವನ್ನು ಪ್ರಕಟಿಸುತ್ತದೆ.

ಮೊದಲನೆಯ ಎಸಳಿನಲ್ಲಿ ಕವಿ ಮೋಡಗಳ ನಾಡನ್ನು ಸಾಂಘಿಕವಾಗಿ ಚಿತ್ರಿಸಿದ್ದಾ

---

[1] ನೋಡಿ : 'ತೇನೋ ಗೃಣಾನೇ ಮಹಿನೀ ಮಹಿ ಶ್ರವಃ ಕ್ಷತ್ರಂ ದ್ಯಾವಾಪೃಥಿವೀ ಧಾಸ ಥ ಬೃಹತ್....". ಭಗವದ್ಗೀತೆಯಲ್ಲೂ (೧೧-೨೦) "ದ್ಯಾವಾಪೃಥಿವ್ಯೋರಿದಮಂತರಂ ಹಿ...." ಎಂ ಬರುತ್ತದೆ.

ಣೀತ ಅವರಿಗೆ ನೀಲಿಮವಾಕಾಶದಲ್ಲಿ ತೇಲುವ ಓಡದಂತೆ ತೋರುತ್ತದೆ. ಅವರು ಅಚ್ಚರಿ ಗೊಂಡು ‘ಇವರ ಚೆಲುವ ನೋಡ’ ಎಂದು ಉದ್ಗರಿಸುತ್ತಾರೆ. ಬದುಕು ಯಾವುದೋ ದಿಷ್ಟ ಗುರಿಯತ್ತ ಹೊರಟ ಪಯಣವೆಂದೂ ಅದಕ್ಕೊಬ್ಬ ಚಾಲಕನುಂಟೆಂದೂ ಡ’ ಎಂಬ ಮಾತು ಚೆನ್ನಾಗಿ ಧ್ವನಿಸುತ್ತದೆ. ಮುಂದೆ ಈ ಚಿತ್ರವನ್ನು ಕೊಡು ತ್ತಾರೆ ಕವಿ :

> ಬಾಂಬೊಲದಲ್ಲಿ ಹುಂಬ ಗಾಳಿಗುರುಬ
> ತರುಬಿದುಣ್ಣೆ ಕುರಿಮರಿಗಳ ಕಿರಿಹಿಂಡು :—
> ಇದೂ ಒಂದು ಸೋಂಗು
> ಮಲೆನಾಡಿನ ದಟ್ಟಡವಿಯ ಒಡಲಿನಲಿ
> ಮತ್ತ-ಗಜ-ಸಮೂಹ ;
> ದಾಳಿಯಿಟ್ಟ ದುರ್ಗದ ಬುರುಜಿನ ಮೇಲೆ
> ಕೊತ್ತಳದಳತೆಯ ತೊತ್ತುಳಿಯುವ ಗುಲ-
> ಗಂಜಿಗಣ್ಣಿನಾ ಬೇಡರ ಪಡೆ, ಅಹ !

ಘಸಮೂಹ ಒಮ್ಮೆ ಬಿಳಿಯ ಕುರಿಮರಿಗಳ ಹಿಂಡಿನಂತೆ, ಇನ್ನೊಮ್ಮೆ ಮದಗಜ ಗುಂಪಿನಂತೆ, ಮತ್ತೊಮ್ಮೆ ಗುಲಗಂಜಿಗಣ್ಣಿನ ಬೇಡ ಪಡೆಯಂತೆ ಕಾಣುತ್ತದೆ. ರೆಲ್ಲ ಅನಂತ ನೀಲಾಕಾಶ ತಳೆಯುವ ಒಂದೊಂದು ವೇಷ. ಕುರಿಮರಿಗಳು ಸಾತ್ವಿಕಕ್ಕೆ, ದಗಜಾವಳಿ ಹಾಗೂ ಬೇಡಪಡೆ ರಾಜಸ ತಾಮಸಗಳಿಗೆ ಪ್ರತೀಕವಾಗಿ ನಿಲ್ಲುತ್ತವೆ. ಗಳ ಮೂಲಕ ಬದುಕಿನ ವೈವಿಧ್ಯ ಪ್ರತೀತವಾಗುತ್ತದೆ.

ಒಮ್ಮೊಮ್ಮೆ ಮೇಘಲೋಕ ಪ್ರಯೋಗಶಾಲೆಯಂತೆ ತೋರುತ್ತದೆ ಕವಿಗೆ :

> ಅಣುಸ್ಫೋಟದೊಲು ವ್ಯೂಹರಚನೆಯಲಿ
> ಸಿಡಿಲು ಸಿಡಿಯುವಾ ಸೆಳೆಮಿಂಚೊಗುಮಿಗುವಾ
> ಮೇಘ ಮೋಘದಮೋಘ ಪ್ರಯೋಗಶಾಲೆ

ಲ್ಲಿ ಮೋಡ ಆಧುನಿಕ ವಿಜ್ಞಾನದ ವಿಧ್ವಂಸಕ ಶಕ್ತಿಯನ್ನು ಸಂಕೇತಿಸುತ್ತದೆ.

ಎರಡನೆಯ ಎಸಳಿನಲ್ಲಿ ಮೋಡವನ್ನು ವ್ಯಕ್ತಿಜೀವನದ ಸಂಕೇತವಾಗಿ ಚಿತ್ರಿಸಲಾಗಿದೆ. ದು ‘ಜೀವನವೊಂದೇ ಜೀವಿತದೆದುರಿನ ಗುರಿಯು’ ಎಂಬ ಸಂದೇಶವನ್ನು ಸಾರುವ ಘದೂತ’ನಾಗಿ ಕವಿಗೆ ತೋರುತ್ತದೆ. ‘ನೈಜವು ಪರಿವರ್ತನೆ, ಮರಣವು ಮಾಯೆ’ ಬ ತತ್ತ್ವವನ್ನದು ಮೌನವಾಗಿ ಘೋಷಿಸುತ್ತದೆ. ಬದುಕು ಅವಿನಾಶಿ, ಕೇವಲ ರ್ತನಶೀಲವಾದುದು ಎಂಬುದು ಇದರಿಂದ ವ್ಯಕ್ತವಾಗುವ ಸತ್ಯ. ‘I change, t I cannot die’ ಎಂದು ಷೆಲ್ಲಿಯ ಮೋಡ ಹೇಳುವುದಿಲ್ಲಿ ನೆನಪಾಗುತ್ತದೆ. ದರೆ ‘ಸಾರ್ವ ಶೆಲ್ಲಿಕವಿ, ವಿನೂತ’ ಎಂದು ಕವಿ ಹೆಸರಿಸುವ ಅಗತ್ಯವಿರಲಿಲ್ಲ.) ಬಾಳಿನ ತ್ಯತತ್ತ್ವವನ್ನು ಮೋಡದ ಮೂಲಕ ಅರುಹುವಲ್ಲಿ ಕವಿ ಒಂದು ಪೌರಾಣಿಕ ಪ್ರತಿಮೆ

ಯನ್ನು ತಂದಿದ್ದಾರೆ. ಮೋಡ ಅವರಿಗೆ 'ಸೌಂದರ್ಯದ ನಿರ್ಜರಶಿಶು ಮೇಲೊರಗಿ ತೇ
ದಾಲದೆಲೆ'ಯಂತೆ ಕಂಡು ಬರುತ್ತದೆ. ಬಾಲಕೃಷ್ಣನನ್ನು ಹೊತ್ತ ವಟಪತ್ರ ಲಯ
ನಡುವಣ ಉದಯಕ್ಕೆ, ಜೀವಶಕ್ತಿಗೆ ವ್ಯಂಜಕ. ಮೋಡ ಆ ಆಲದೆಲೆಯಂತಿದೆ. ಮೋ
ವನ್ನು ಎಲೆಯೆಂದು ಭಾವಿಸಿದವನು ಷೆಲ್ಲಿ; ಆದರೆ ಅದು ನಿರ್ಜರ ಶಿಶುಧಾರಿಯಾ
ವಟಪತ್ರವೆಂದು ಕಲ್ಪಿಸಿಕೊಂಡವರು ವಿನಾಯಕರು. ಇಲ್ಲಿ ಆಂಗ್ಲಕವಿಯ ಕಲ್ಪ
ಭಾರತೀಯ ದೃಷ್ಟಿಯ ಉನ್ಮೀಲನಕ್ಕೆ ಪ್ರೇರಕವಾಗಿ ಬಂದಿದೆ. ಕಡೆಗೆ ನೀರದವನ್ನು ಕ
ನಾರದನನ್ನಾಗಿ ಕಾಣುತ್ತಾರೆ. ನಾರದ ತ್ರಿಲೋಕಸಂಚಾರಿ; ಭೂವ್ಯೋಮಗಳನ
ಬೆಸೆಯುವ ಶಕ್ತಿ. ಅಂತೆಯೇ, ನೆಲದ ನೀರಿನಿಂದ ರೂಪುಗೊಂಡು ಆಗಸಕ್ಕೇರಿ ಮ
ನೆಲಕ್ಕಿಳಿಯುವ ಮುಗಿಲು ನಾರದ ತತ್ತ್ವವಾಗಿ ಅನುಭೂತವಾಗುವುದು ಸಹಜ.

ಮುಗಿಲ ಜಗತ್ತು ಮರ್ತ್ಯಜೀವನದ ಸಂಕೀರ್ಣತೆಯ ಪ್ರತಿಬಿಂಬವಾಗಿರುವುದನ
ಸವಿವರವಾಗಿ ನಿರೂಪಿಸುತ್ತದೆ ಮೂರನೆಯ ಎಸಳು. ಗಿರಣಿಯ ಧೂಮ, ಎಂಜಿ
ಹೊಗೆ, ಯಂತ್ರಯೋಗಿಗಳ ಹೋಮ ಹವನ—ಎಲ್ಲವೂ ನೀಲಿಮದೊಡಲಲ್ಲಿ ಮೇ
ರೂಪದಲ್ಲಿ ತಂಗಿವೆ. ಅನಾಥಬಾಲೆಯ ನಿಟ್ಟುಸಿರು, ಸಾಯಲಾರದೆ ಸತ್ತವರುಸಿರ
ದ್ವೇಷ, ಬೇನೆ ಇವೆಲ್ಲವೂ

> ಮನುಕುಲದ ಜೀವನದ ತಪ್ತ ಕ್ಷಾರೋದಧಿಯ
> ಬಾಷ್ಪದೊಲು ಸೇರಿಹವು ಮುಗಿಲ ಗುಮ್ಮಟದಲ್ಲಿ.

ಕೋಮಲಜೀವದ ಕಂಪು, ಎಳೆಯ ಬಾಳಿನ ಸ್ವಪ್ನ ಸೌರಭ, ಸಮರ್ಪಣಭಾವದೀಪ್ತವಾ
ಕರ್ಪೂರ, ಸಾತ್ವಿಕರ ಬಾವನ್ನದಂಪು, ತಪಸಿಗಳ ಅಗ್ನಿಯುಪಾಸನೆ, ಕಾದಲರು ಕಂ
ಹಾಲ್ಗನಸು ಎಲ್ಲವೂ ಸಂಚಯಿಸಿ ಮುಗಿಲ ಗುಮ್ಮಟದಲ್ಲಿ ತೇಲುತ್ತಿವೆ. ಈ ಮೋಡಗಳ
ಸತ್ ಮತ್ತು ಅಸತ್ ಶಕ್ತಿಗಳೆರಡನ್ನೂ ನೋಡಬಹುದು. ದುರ್ಗಾಮಾತೆಯ ವಾಹ
ದಂತೆ, ಸರಸ್ವತಿಯ ನವಿಲಿನಂತೆ ಕಾಣುವ ಮೋಡಗಳು ಶಿವಶಕ್ತಿಯ ಪ್ರತೀಕಗಳು:

> ದುರ್ಗಾಮಾತೆಯ ವಾಹನದೊಲು ಮೆರೆದು
>   ಆಯಾಲನು ಕೊಡವಿ
> ಮುನ್ನಡೆದಿಹುದೀ ಪಂಚಾನನಮೇಘ
>   ಮರಿಗಳ ಮೈದಡವಿ.
> ವೀಣಾಪಾಣಿಯು ಧ್ಯಾನಮಗ್ನಳಿರಲು
>   ಅವಳ ಮೇಘ ಮಯೂರ
> ಸೋಗೆಗರಿಗಳನು ಮುಗಿಲ ತುಂಬ ಹರವಿ
>   ನಡೆದಿದೆ-ದೂರ, ದೂರ!

ಹೀಗೆಯೇ ಹಾಲ್‌ಬಿಳಿ ಕುರಿಮರಿ, ಅವಯವಗಳನ್ನು ಒಳಗೆಳೆಯುವ ಕೂರ್ಮ, ಬೆದ
ಗಂಗಳ ಸಾರಂಗ-ಇವೆಲ್ಲ ಬರುತ್ತವೆ.

ಇವುಗಳ ಜೊತೆಗೆ ಕ್ರೂರದಂಷ್ಟ್ರವರಾಹ, ಎಂಟು ಕಾಲಿನ ಅಷ್ಟಾವಕ್ರ ಏಡಿ, ಘಟ
ಕ, ಶೃಗಾಲ, ಏಳು ಮೆಟ್ಟಿನ ವ್ಯಾಘ್ರ, ಗಗನೋದಧಿಯಲ್ಲಿ ನೌಕೆಗಳಿಗೆ ಸುರಂಗ
ಗುವ ತಿಮಿಂಗಿಲ, ಕೊಳ್ಳಿದೆವ್ವಗಳ ಕುಣಿತ, ಬ್ರಹ್ಮರಾಕ್ಷಸರ ಭಣಿತ—ಇವೆಲ್ಲ ಅಶಿವ
ಗಳ ಪ್ರತೀಕವಾಗಿ ಪ್ರಕಟವಾಗುತ್ತವೆ. ಹೀಗಿದೆ ಸೃಷ್ಟಿಯ ದ್ವಂದ್ವಸ್ವರೂಪ.
ನಾಲ್ಕನೆಯ ಎಸಳಿನಲ್ಲಿ ಕವಿ ಮೋಡವನ್ನು ಕುಂಬಾರನ ತಿಗರಿಯ ಮೇಲೆ ಉದಿಸುವ
ಡಪಾನದ ಕೋಟೆಗೆ ಹೋಲಿಸಿದ್ದಾರೆ. ನೀರದ ನಾರದರ ಸೂತ್ರವನ್ನು—ಊರ್ಧ್ವಗತಿ,
ಲನ, ಧಾರಣ, ಅವತರಣಗಳನ್ನು—ಅವರು ಮೋಡದಲ್ಲಿ ಗುರುತಿಸುತ್ತಾರೆ. ಮೋಡ
ಕ್ಕವತರಿಸುವ ಕರುಣೆಯ ಪ್ರತೀಕವಾಗಿ ಅನುಭವಕ್ಕೆ ಬರುತ್ತದೆ :

ಸೂರ್ಯೋದಯ—ಸೂರ್ಯಾಸ್ತ ವೃಕ್ಷದಲ್ಲಿ
ಮಾಗಿ ಪಯೋಧರ ಫಲವು
ಅವತರಿಸಿದೆ ರಸಗಂಗೆಯಾಗಿ ಮತ್ತೆ—
ನೆಲಸುತ ನೆಲದೊಳಗದರೊಲವು !

ಸು ಹೃದ್ಯವಾದ ಭಾವ. 'ಪಯೋಧರ' ಎಂಬ ನುಡಿಯ ಶ್ಲೇಷೆ ಸಾರ್ಥಕವಾಗಿದೆ.
ೋಡ' ಎಂಬುದು ಅದರ ವಾಚ್ಯಾರ್ಥ; ಆದರೆ ಅದು ಸ್ತನ್ಯವನ್ನು ಹೊತ್ತ ಸಂಜೀವನ
ವೂ ಅಹುದು.
ಮುಂದೆ ಕವಿ ಮೂರನೆಯ ಎಸಳಿನಲ್ಲಿ ಬಂದ ಪ್ರತಿಮೆಗಳಿಗೆ ವ್ಯಾಖ್ಯಾನ ನೀಡು
ರೆ. ಆಕಾಶ ಶುಭ್ರವಾದುದು, ಗುಣವರ್ಣರಹಿತವಾದುದು; ಅದರಲ್ಲಿ ಮೋಡಗಳ
ಅವಿರತವಾಗಿ ನಡೆದಿರುತ್ತದೆ. ಅಂತೆಯೇ ಚಿನ್ನಭ ಗುಣವರ್ಣಗಳಿಲ್ಲದ್ದು;
ಕ್ಕೆ ನಾವು ಸೌಂದರ್ಯ, ಪ್ರೇಮ, ಸತ್ಯ, ಸಾತ್ವಿಕತೆ, ಆನಂದ, ಶಕ್ತಿ, ಸ್ವಾರ್ಥ,
ರ್ಯ, ಅನೃತ, ದ್ವೇಷ ಮುಂತಾದ ಆವರಣಗಳನ್ನು ತೊಡಿಸಿದ್ದೇವೆ. ಇವುಗಳ
ದೆ ನಿರುಪಾಧಿಕವಾದ ಶುದ್ಧ ಚೈತ್ಯ ತತ್ತ್ವ ಬೇರೆಯೇ ಇದೆ. ('Life like a dome
many colours stains the white radiance of eternity' ಎಂಬ ಷೆಲ್ಲಿಯ
ಕ್ತಿಯನ್ನು ನೆನೆಯಬಹುದು.)
ಶುದ್ಧ ಚೈತ್ಯ ತತ್ತ್ವವನ್ನು ಕವಿ ಭಾವನಿರ್ಭರತೆಯಿಂದ ಆಹ್ವಾನಿಸುವ ಪರಿ ಐದ
ು ಎಸಳಿನಲ್ಲಿದೆ :

ಬಣ್ಣದೊಳಗಿಂದ, ಬಯಕೆಯೊಳಗಿಂದ
ಒಳಿತಿನೊಳಗಿಂದ, ಕೆಡಕಿನೊಳಗಿಂದ,
ಚಂದ್ರಿಕಾತಲ್ಪ ನಿದ್ರೆಯೊಳಗಿಂದ,
ಬಿಸಿಲ ಬೇಗೆಯಾ ಮುದ್ರೆಯೊಳಗಿಂದ,
ಬಿಡಿಸಿಕೊಂಡು ಬಾ,
ಬಿಡಿಸಲೆನ್ನ ಬಾ,

ಬಾ, ಬಾ, ಬಾ,
ಓ ನೀರದ ಬಾ !

ಕಡೆಯಲ್ಲಿ ಕವಿ 'ಅರ್ಥನಿರ್ಥ ದರ್ಶನದ ಗುಡಿಯಿಂದ ಬಿಡಿಸಿಕೊಂಡು ಬಾ' ಎಂದ ಪ್ರಾರ್ಥಿಸಿರುವುದು ಅರ್ಥವತ್ತಾಗಿದೆ. ಶುದ್ಧ ಚೈತ್ಯದ ಸಾಕ್ಷಾತ್ಕಾರಕ್ಕಾಗಿ ಹೊರ ದರ್ಶನಗಳೆಲ್ಲ ಅಪೂರ್ಣವಾಗಿ ಪರಿಣಮಿಸಿವೆ ಮಾತ್ರವಲ್ಲ, ಆ ತತ್ತ್ವವನ್ನೆ ಬಂ ಸಿಟ್ಟವೆ. ಇದುವರೆಗೆ ದರ್ಶನಗಳನ್ನೆಲ್ಲ ನಾವು ಗುಡಿಕಟ್ಟಿ ಆರಾಧಿಸಿದ್ದಾಯಿತು. ಇನ ದರೂ ಬೇಕಾದುದು ಯಾವುವೇ ಮತ, ಪಂಥಗಳ ಹಂಗಿಲ್ಲದ ಅನಿಕೇತನವಾದ ಆ ತತ್ತ್ವ. (ಕವಿಯು ಈ ಮೊರೆಯಲ್ಲಿ ಬೇಂದ್ರೆಯವರ 'ಗಂಗಾವತರಣ' ತನ್ನ ನೆರ ಕೆಡವಿದೆ ಎನ್ನಬೇಕು.)

ತನ್ನ ಪ್ರಾರ್ಥನೆಯ ಫಲವಾಗಿ ಶುದ್ಧ ಚೈತ್ಯತತ್ತ್ವದ ಲಾಭವಾಗುತ್ತದೆ ಕವಿಗ ಆದರೆ ಅವರು ಅದರಲ್ಲಿ ಅರಕೆಯನ್ನೆ ಕಾಣುತ್ತಾರೆ;

ಸ್ಫಟಿಕದಂತೆ ಶುಭ್ರವಿರುವಿ : ಬಣ್ಣದಾಟ ಬೇಡವೆ ?
ಬರಿಯ ಮಂಜಿನಾಕೃತಿ : ಸುಭಗಕೃತಿ ನೋಡೆವೆ ?

ಎಂದು ಹಂಬಲಿಸುತ್ತಾರೆ. ದ್ವಂದ್ವಾತೀತವಾದ ಚೈತ್ಯತತ್ತ್ವದಲ್ಲಿ ಸಂಸಾರಿಗೆ ತೃಪ್ತಿ ಯಿಲ್ಲ; ಅವನು ಅದರಲ್ಲಿ ಒಳಿತನ್ನು ಕಾಣಬಯಸುತ್ತಾನೆ; ಇಹವನ್ನು ತೊರೆಯು ಅದನ್ನು ಶುದ್ಧೀಕರಿಸಿಕೊಂಡು ಅದರಲ್ಲೆ ಸುಖಪಡೆಯಲೆಳಸುತ್ತಾನೆ. ಎಂತಲೇ ಅಸತ್ತಿ ವಿನಾಶಕ್ಕೆ, ಸತ್ತಿನ ಏಳಿಗೆಗೆ ಹೃದಯ ತುಂಬಿ ಹಾರೈಸುತ್ತಾನೆ. ಇದೇ ಆರನ ಎಸಳಿನ ತಿರುಳು. ದ್ವೇಷದ ಕಾರ್ಬೊಗೆ ನಿರ್ನಾಮವಾಗಿ ಪ್ರೀತಿಯ ಲೋಭಾನ ಮಾತ್ರ ವಿಶ್ವದಲ್ಲಿ ತೂಗಲಿ, ಕೆಡುಕೆಲ್ಲ ಚಿತೆಯೇರಿ ಒಳಿತು ಮಾತ್ರ ಇಂದ್ರಧನುವಿನಂತೆ ಒಸ ಬೀರಲಿ, ಅನೃತ ಕ್ಷಯಿಸಿ ಸತ್ಯ ಹೊಳೆಯಲಿ ಎಂದೆಲ್ಲ ಹಾರೈಕೆಯ ಮಾಲೆ ಹಬ್ಬುತ್ತದ ಆದರೂ ಕವಿಗೆ ಸಂಶಯ :

ಎಂದಾದರು ಮೂಡಬಹುದೆ ಬೆಳ್ಳಿಯು, ಈ ಶುಕ್ರ ?
ಏನಿದೀ ಪ್ರಪಂಚವಹುದೊ ಎಂದೆಂದಿಗು ವಕ್ರ ?

ಈ ಪ್ರಶ್ನೆಗೆ ಉತ್ತರ ಏಳನೆಯ ಎಸಳಿನಲ್ಲಿದೆ. ದೇವಕರುಣೆಯಿಂದ ಮತ್ತು ಚೈತ್ಯಪು ಷನ ಧೀರೋದಾತ್ತ ಸಂಕಲ್ಪದಿಂದ ಶುಕ್ರೋದಯ ಸಾಧ್ಯವೆಂಬ ಭರವಸೆಯನ ಕವಿ ಇಲ್ಲಿ ತಾಳುತ್ತಾರೆ. ಇಂತಹ ಕರುಣೆ ಸಂಕಲ್ಪಗಳ ಪ್ರತೀಕವಾಗಿ ಇಂದ್ರನ ಚಿತ್ರ ಪರಿಣಾಮಕಾರಿಯಾಗಿ ಮೂಡಿದೆ:

ಒಮ್ಮೆ ಗಿರಿಗಳ ತನೂರುಹಗಳನು ತರಿದೊಟ್ಟಿ
ವಜ್ರಾಯುಧದ ಕೀರ್ತಿ ಮೊಳಗಿಸಿದನು ;

ಸಂಹಾರದಲಿ ಕೈಯ್ಯ ಪಳಗಿಸಿದನು;
ಧರೆಗೆ ಪರ್ವತಗಳನು ಕೀಲಿಸಿದನು.
ಈಗ ಜಲಧರ ಸೃಷ್ಟಿಶಾಸನಕೆ ಕೈ ನೀಡಿ
ನವಿರುನವಿರಲಿ ಕಣ್ಣು ತೆರೆದು ನೋಡಿ
ಇಂದ್ರ ಬಂದಿಹನಿಲ್ಲಿ ಸೆಳೆಮಿಂಚನಾಡಿಸುತ,
ವಜ್ರಾಯುಧದ ಪ್ರಭೆಯ ದಿಗ್ದೆಸೆಗೆ ಮೂಡಿಸುತ.

ಇಂದ್ರನ ರಣಗರ್ಜನೆಗೆ ಶೃಗಾಲ ಸಾಯುತ್ತದೆ; ಅನೃತವನ್ನು ಕೀಳುವ ನೇಗಿಲಂತೆ, ಕಿನ ಬಾಗಿಲಂತೆ ಇರುವ ಇಂದ್ರಾಯುಧದ ಆಘಾತಕ್ಕೆ ವರಾಹ, ವ್ಯಾಘ್ರ, ಘಟ ್, ತಿಮಿಂಗಿಲಗಳು ಕೆಳಗುರುಳುತ್ತವೆ. ಸತ್ತ್ವ ತುಂಬಿದ ಮುಗಿಲ ಹಿಂಡು ಅವನ ಮನಕ್ಕೆ ಪುಳಕಗೊಳ್ಳುತ್ತದೆ. ಅವನು ಸಂಹರಿಸಿದ ಕಾರ್ಮೋಡ ಕೆನ್ನೀರು ಸುರಿಸಿ ುವಾಗುತ್ತವೆ. ಪರಿಣಾಮವಾಗಿ, ದುಷ್ಟ ಶಕ್ತಿಗಳು ನಾಶಗೊಂಡು ನವನೀರದ ಂದು ಆವಿರ್ಭವಿಸುತ್ತದೆ, ನವಮಾನವನ ಪ್ರತಿನಿಧಿಯಾಗಿ.

ಮುಂದೆ ಇಕ್ಷ್ವಾಯಣವೊಂದು ಎಂಟನೆಯ ಎಸಳಿನಲ್ಲಿ ತಲೆದೋರುತ್ತದೆ. ಇದಕ್ಕೆ ರ ಗ್ರೀಕ್ ಪುರಾಣ. ಇಕ್ಸಾಯನ್ ಎಂಬ ತರುಣನೊಬ್ಬ ತನ್ನ ಮಾವನನ್ನು ಂದು, ದೇವಪ್ರಮುಖನಾದ ಜ್ಯೂಸನಿಂದ ಪಾಪವಿಮುಕ್ತನಾಗುತ್ತಾನೆ. ಆದರೆ ಆ ನನಿಗೆ ಕೃತಜ್ಞನಾಗಿರದೆ ಅವನ ಪತ್ನಿಯಾದ ಹೀರಾಳನ್ನು ಕಾಮಿಸುತ್ತಾನೆ. ಇದ ದ ಕೆರಳಿದ ಜ್ಯೂಸ್ ಒಂದು ಮೋಡಕ್ಕೆ ಹೀರಾಳ ರೂಪ ಕೊಟ್ಟು ಇಕ್ಸಾಯನನ ಂದೆ ನಿಲ್ಲಿಸುತ್ತಾನೆ. ಅದು ಮಾಯೆಯೆಂದರಿಯದ ಇಕ್ಸಾಯನ್ ಆ ಮೋಡದೊಡನೆ ಯುತ್ತಾನೆ. ಈ ಕೂಟದಿಂದ, ಮನುಷ್ಯದೇಹ-ಅಶ್ವಮುಖವುಳ್ಳ ವಿಚಿತ್ರಸಂತಾನ ಸುತ್ತದೆ. ಇಕ್ಸಾಯನ್ ಮಾಡಿದ ಪಾಪಕ್ಕಾಗಿ ಅವನನ್ನು ಅಧೋಲೋಕಕ್ಕೆ ತಳ್ಳಿ ಸದಾ ತಿರುಗುವ ಚಕ್ರವೊಂದಕ್ಕೆ ಕಟ್ಟಲಾಗುತ್ತದೆ.

ಈ ಗ್ರೀಕ್ ಪುರಾಣಕಥೆಯನ್ನು ವಿನಾಯಕರ ಪ್ರತಿಭೆ ಭಾರತೀಯ ಪುರಾಣಗಳ ರಣಕ್ಕೆ ಅಳವಡಿಸಿದೆ. ಮೂಲಕಥೆಯಲ್ಲಿ ಬರುವ ಇಕ್ಸಾಯನ್ ಇಲ್ಲಿ ಇಕ್ಷುವಾಗಿ ನೆ. ಜ್ಯೂಸ್ ದೇವ ಮತ್ತು ಹೀರಾ ಇಂದ್ರ-ಶಚಿಯರಾಗಿದ್ದಾರೆ. ಈ ಇಕ್ಷು ಕಥೆ ಾಯಕರಲ್ಲಿ ಹೀಗೆ ಬರುತ್ತದೆ:—ನವನೀರದ ಆಗಸದಲ್ಲಿ ಅಲೆಯುವಂತೆ ಇಕ್ಷು ಭೂಮಿ ಲ್ಲಿ ಅಲೆಯುತ್ತಿರುತ್ತಾನೆ. ಒಂದು ದಿನ ಅವನು ಮಹೇಂದ್ರನನ್ನು ಕೇಳುತ್ತಾನೆ, ಿಶಕ್ತಿ ಯಾರು, ನನಗವಳನು ತೋರು' ಎಂದು. ಅದಕ್ಕೆ ಇಂದ್ರ ಉತ್ತರಿಸುತ್ತಾನೆ:

ಓ ಇಕ್ಷು! ಸಾವಧಾನ
ಆದಿಶಕ್ತಿಯನು ಕಾಂಬ ಕಣ್ಣ ಪರಿಯು
ತೀರ ಬೇರೆಯಿದೆ. ನಿನ್ನ ಕಣ್ಣ ಗೊಂಬೆ
ಎಳಕದ ಮಾದರಿ. ಕಾಣದು ಐಸಿರಿಯು.

('ಎಳಕ' ಎಂಬ ಮಾತು ಸಾರ್ಥಕವಾಗಿದೆ.) ಆದರೂ ಹಂಬಲ ಹಿರಿದಾಗಿದೆ. ಆ
ಶಕ್ತಿಯನ್ನು ನಾ ತಣಿಯುವೆ ನೋಡಿ' ಎಂದು ಇಕ್ಷು ಹಟ ಹಿಡಿಯುತ್ತಾನೆ. ಆಗ ಇಂದ್ರ
'ಸನಿಯದ ಲೋಕದ ಮಾತೆಯ ತಿಳಿ ಮೊದಲು. ಶಚೀದೇವಿ, ಮನು ಮಡದಿಯ
ತೋರ್ವೆ. ನೋಡು ಕಣ್ತುಂಬ. ಅವಳಡಿಯಲಿ ತೊದಲು' ಎಂದು ಹೇಳುತ್ತಾನೆ.

ಮುಂದೆ ಶಚಿಯ ರೂಪವೈಭವ ಮತ್ತು ಅವಳನ್ನು ನೋಡಿ ಇಕ್ಷುವಿನಲ್ಲುಂಟಾ
ವಿಹ್ವಲತೆ ಶಕ್ತವಾಗಿ ಚಿತ್ರಣಗೊಂಡಿವೆ:

ಶಚೀದೇವಿ ಸುಳಿದಳು ಇಕ್ಷುವಿನೆದುರು
ರುಚಿರ ರೂಪ, ಶುಚಿ ರೂಪ, ಮಧುರರೂಪ!
ತಾರೆಗಳೆಸೆದವು ಕುಂದದ ಮಂದಾರಗಳು,
ತಾಯ ಹೆರಳಿನಲಿ; ಚೆಲುವಿಗೆಲ್ಲಿ ಲೋಪ?
ಇಕ್ಷು ನೋಡಿದನು. ತಲ್ಲಣಿಸಿತು ಹರಣ
ತಿಲ್ಲಾಣಿಸಿತವನೆದೆಯಂತಃಕರಣ
ಅನಿಮಿಷನೇತ್ರನನಾವರಿಸಿತು ಮಾಯೆ.
ಗೆದ್ದಿತು ಮೋಹನ ಮಂತ್ರವಶೀಕರಣ.

ಇಕ್ಷು ಶಚಿಯನ್ನು ಶೃಂಗಾರಾನ್ವಿತ ದೃಷ್ಟಿಯಿಂದ ನೋಡಿ, 'ನಾ ಪುರುಷ, ನೀನೆ ಶಕ್ತಿ
ಓ ಚೆಲುವೆಯೆ' ಎಂದು ಮುಂದುವರಿಯುತ್ತಾನೆ. ಈ ಔದ್ಧತ್ಯದಿಂದ ಕುಪಿತನಾ
ಇಂದ್ರ ಇಕ್ಷುವನ್ನು ದಂಡಿಸುವುದಕ್ಕಾಗಿ, ಶಚಿಯಂತೆ ನೋಡವೊಂದಕ್ಕೆ ರೂಪವಣ
ವನ್ನಿತ್ತು ಅವನೆದುರು ಮಂಡಿಸುತ್ತಾನೆ. ಇಕ್ಷು ಆ ಮುಗಿಲ ಮಾಯೆಯನ್ನು ತಬ
ತ್ತಾನೆ. ಈ ನೆಳಲ ಸಂಭೋಗದಿಂದ ಅನಪೇಕ್ಷಿತ ವಿಚಿತ್ರಸಂತಾನ ಪ್ರಾಪ್ತವಾಗುತ್ತದೆ
ಅರ್ಧ ಕುದುರೆಮೈಯ್ಯ ಅರ್ಧ ಮಾನಿಸರು ಹುಟ್ಟುತ್ತಾರೆ. ಇವರು ಮತ್ತಾರೂ ಅಲ್ಲ
ಶಾಕ್ತರು, ವಿಶಿಷ್ಟಾದ್ವೈತಿಗಳು, ಅದ್ವೈತಿಗಳು, ದ್ವೈತಿಗಳು, ಬೌದ್ಧರು, ಜೈನರ
ಭೌತವಾದಿಗಳು, ಚಾರ್ವಾಕರು ಮುಂತಾದ ಅಸಂಖ್ಯಾತ ದಾರ್ಶನಿಕರು. ಇವರ
ಕನಸು-ನನಸುಗಳನ್ನು ಬೆರಸುತ್ತ ಛಾಯಾದೇಶದಲ್ಲಿ ಉರುಳಾಡುತ್ತಿದ್ದಾರೆ; ಧರ
ಚಕ್ರವೆಂದು ಭ್ರಮಿಸಿ ಕರ್ಮಚಕ್ರವನ್ನೇರಿ, ತಾವು ಕಂಡುದೇ ಸತ್ಯವೆಂದು ಉಗ್ಗ
ಸುತ್ತಿದ್ದಾರೆ; ಯಂತ್ರಾರೂಢರಾಗಿ ಕಸರತ್ತು ಮಾಡುತ್ತಿದ್ದಾರೆ.[1]

ತನ್ನ ದುರಿತದಿಂದೊಗೆದ ವಿಕಾರ ಸಂತತಿಯನ್ನೀಕ್ಷಿಸಿದ ಇಕ್ಷು ವ್ಯಥಿತನಾಗಿ ಪಶ್ಚಾ
ತ್ತಾಪ ಪಡುತ್ತಾನೆ. ಓಡಿ ಹೋಗಿ ಇಂದ್ರನ ಮುಂದೆ ಕೈಜೋಡಿಸಿ,

ನನಸಿನ ನಾಡಿನೊಳಿರಿಸುತೆನ್ನನುಳಿಸು
ಮಾತೆಯೆ ವಧುವೆಂದೆನು. ರವರರ ನರಕ

[1] 'ಯಂತ್ರಾರೂಢ' ಎಂಬ ಮಾತು ಗೀತೆಯಲ್ಲಿ ಬರುತ್ತದೆ:
ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ (೧೮-೬೧)

ನನ್ನದಾಯ್ತು. ತೆರೆದಿಹುದು ಮೂರ್ಧ್ನನೇತ್ರ.
ತೋರಿಸು. ಪಡೆದಿಹೆ ಋತವ ಕಾಂಬುವೆಸಕ!

ಯು ಬೇಡುತ್ತಾನೆ.

ಈ ಇಕ್ಷ್ವಾಯನವೊಂದು ಪ್ರತಿಮೆ. ಇವರಿಂದ ಧ್ವನಿತವಾಗುವ ಸಂಗತಿಗಳು ಎರಡು: ುಷ್ಯ ತನ್ನ ಪಾಪದಿಂದ, ಸ್ವಯಂಕೃತಾಪರಾಧದಿಂದ ಅಧಃಪತನಗೊಂಡಿದ್ದಾನೆ; ರ್ಮಚಕ್ರದಲ್ಲಿ ತೊಳಲುತ್ತಿದ್ದಾನೆ ಎಂಬುದೊಂದು. ಮಾನವಕುಲದ ದರ್ಶನಗಳೆಲ್ಲ ವಿಲ್ಲೊಂದು ನ್ಯೂನತೆಯಿಂದ ಕೂಡಿವೆ, ಪರಿಪೂರ್ಣ ದರ್ಶನ ಇನ್ನೂ ಉದಿಸಿಲ್ಲ ುದು ಮತ್ತೊಂದು (ಇದು ಐದನೆಯ ಎಸಳಿನಲ್ಲೆ ಸೂಚಿತವಾಗಿದೆ.)

್ರೀಕ್ ಪುರಾಣ ಕಥೆಗೆ ಭಾರತೀಯ ರೂಪ ಕೊಡುವಲ್ಲಿ ವಿನಾಯಕರು ಯಶಸ್ವಿ ದಂತೆ ತೋರುವುದಿಲ್ಲ. ಕಾರಣವಿಷ್ಟೆ: ಪುರಾಣಕಥೆಗಳು ಸಮಷ್ಟಿಪ್ರಜ್ಞೆಯಲ್ಲಿ ವಾಗಿ ಬೇರು ಬಿಟ್ಟುಕೊಂಡಿರುವುದರಿಂದ, ಅವುಗಳನ್ನು ಕಸಿ ಮಾಡುವುದಾಗಲಿ ಲಿಸುವುದಾಗಲಿ ಸುಲಭವಲ್ಲ, ಸಾಧ್ಯವೂ ಅಲ್ಲ. ಮೂಲಕಥೆ ತನಗೆ ತಾನೆ ಚೆನ್ನಾಗಿದೆ; ನವನ ನೈತಿಕ ಪತನಕ್ಕೆ ದ್ಯೋತಕವಾಗಿದೆ. ಆದರೆ ಕನ್ನಡಕ್ಕೆ ಬಂದಾಗ ವಿಲಕ್ಷಣ ಾ ಕಾಣುತ್ತಿದೆ. 'ಇಕ್ಷು'ವಿಗೆ ಸಂವಾದಿಯಾಗಿ ಭಾರತೀಯ ಪುರಾಣಗಳಲ್ಲಿ ಯಾರಿ ರೆ? ಈ ಪಾತ್ರ ಬರಿಯ ಕಲ್ಪನೆಯಾಯಿತು. ಇನ್ನು ಶಚಿ ಲೋಕಮಾತೆ ಹೇಗಾ ? ಮನುಷ್ಯ ದೇಹ, ಕುದುರೆ ಮುಖವುಳ್ಳ ಪ್ರಾಣಿಗಳಿಗೆ ನಮ್ಮ ಪುರಾಣಗಳಲ್ಲಿ ಾರವುಂಟೆ? ನೈತಿಕ ಪತನಕ್ಕೂ ದರ್ಶನಗಳ ಕೊರತೆಗೂ ಏನು ಸಂಬಂಧ? ಹೀಗೆ ವು ಸಂಶಯಗಳು ಹುಟ್ಟಿಕೊಂಡು, ಇಕ್ಷ್ವಾಖ್ಯಾನ ಭಾರತೀಯತೆಗೆ ವಿಸಂಗತ ಾಯೆ ನಿಲ್ಲುತ್ತದೆ. ಗ್ರೀಕ್ ಕಥೆಯಲ್ಲಿ ಇಕ್ಸಾಯನನನ್ನು ಚಕ್ರಕ್ಕೆ ಕಟ್ಟಿ ಹಾಕಿ ್ದೂ ನಮ್ಮಲ್ಲಿರುವ ಕರ್ಮಚಕ್ರ, ಯಂತ್ರಾರೂಢ ಎಂಬ ಮಾತುಗಳಿಗೂ ತಳಕು ಕಿದ್ದು ಹೊಂದಿಕೊಳ್ಳುತ್ತದೆ.

ಇಲ್ಲಿ ಇನ್ನೊಂದು ಅಂಶವನ್ನು ಲೆಕ್ಕಿಸಬೇಕು. ಮೂಲಕತೆಯಲ್ಲಿ ಇಕ್ಸಾಯನನನ್ನು ೋಲೋಕಕ್ಕೆ ನೂಕಲಾಗುತ್ತದೆ; ಅವನ ಉದ್ಧಾರದ ಮಾತೇ ಇಲ್ಲ. ಆದರೆ ರತೀಯ ದೃಷ್ಟಿ ಪತನದಲ್ಲೆ ಪರ್ಯವಸಾನಗೊಳ್ಳುವುದಿಲ್ಲ; ಅದು ಉದ್ಧಾರನಿಷ್ಠ ುದು. ಎಂತಲೇ ವಿನಾಯಕರು ಇಕ್ಷುವಿನ ಬೀಳನ್ನು ಮಾತ್ರವಲ್ಲದೆ ಅವನ ಏಳಿನ ಯನ್ನೂ ಬಣ್ಣಿಸುತ್ತಾರೆ.

ಂಬತ್ತನೆಯ ಎಸಳಿನಲ್ಲಿ, ಇಂದ್ರ ಇಕ್ಷುವಿಗೆ ಅನುಗ್ರಹಿಸಿದ ವಿರಾಡ್ದರ್ಶನದ ರ್ನೆ ಬರುತ್ತದೆ. "ಅರ್ಜುನನಿಗೆ ಕುರುಕ್ಷೇತ್ರದಲ್ಲಿ ಕಾಲದ ಅನಂತತೆಯ ದರ್ಶನ ದರೆ ಇಲ್ಲಿ ಇಕ್ಷುವಿಗೆ ಸ್ಥಾನದ ಅನಂತತೆಯ ದರ್ಶನವಾಗುತ್ತದೆ."

ಂದ್ರ 'ಕಣ್ಣು ಬಿರಿಬಿರಿ ಬಿಡುವ' ಇಕ್ಷುವನ್ನು ತನ್ನ ಬದಿಗೆ ಕುಳ್ಳಿರಿಸಿಕೊಂಡು

ವೈನತೇಯನ ಬೆನ್ನೇರಿ ಕೈಲಾಸ ಗಿರಿಯ ಮೇಲಕ್ಕೆ ಬಂದಿಳಿಯುತ್ತಾನೆ. ಅಲ್ಲಿ ನಿಂತ
ಇಕ್ಷುವಿಗೆ ಅನಂತಾಕಾಶವನ್ನು ತೋರಿಸುತ್ತಾನೆ. ಆದಿಶಕ್ತಿಯ ತೇರಿನಂತಿರುವ ಶೃಂ
ಗಳು, ಅವಳಣುಗರ ಆಟಕ್ಕಿರುವ ವಿಸ್ತೀರ್ಣರಂಗಗಳು, ಹರಿಯುವ ಹೊಳೆಗಳ
ಬೆಳೆದ ಬೆಳಸು, ನ್ಯತ್ತಿಕೆಯ ಕೃತ್ತಿಕೆಗಳಾದ ಗ್ರಾಮಗಳು, ತವಸಿಗಳ ನೆಲೆವೀಡುಗಳು-
ಇವು ಇಂದ್ರ ಮೊದಲು ಕಾಣಿಸುವ ದೃಶ್ಯಾವಳಿ.

ಇನ್ನು, ಕ್ಷಿತಿಜದ ಅದೃಶ್ಯರೇಖೆಯನ್ನು ದಾಟಿ ನೋಡಿದರೆ ಕಾಣುವುದು ನಿರ್ವಯ
ನಿಸ್ಸೀಮ. ಅಲ್ಲಿ ಶೂನ್ಯವೇ ಬೆಸಲಾಗಿ ಕೋಟಿ ನಕ್ಷತ್ರಗಳನ್ನು ಬಯಲ ಮಂಟಪದ
ಬರೆದಿದೆ. ಅವುಗಳ ಒಂದೊಂದು ಕಿರಣವೂ ತಾಯ ಮೆರವಣಿಗೆಯಲ್ಲಿ ಹಿಡಿದ ದೀ
ಟಿಗೆ; ಸ್ವಯಂ ಭೂಜ್ಯೋತಿಲತೆಯ ಮಂದಾರ! ಒಂದೊಂದು ಗ್ರಹಮಾಲೆಯು
ಒಂದೊಂದು ಹೂಕರಂಡದಂತೆ ತೋರುತ್ತಿದೆ. ಮುರಲೀಧರನ ಸುತ್ತ ಗೋಪಿಯ
ತಿರುಗುವಂತೆ ಚಿರಂತನ ವಿಶ್ವಗಳ ಗುಂಪು ತಮ್ಮ ಸೂರ್ಯನನ್ನು ಬಳಸಿ ತಿರುಗುತ್ತಿ
ಒಂದು ಉಲ್ಕೆ ಉರುಳುವಷ್ಟರಲ್ಲಿ ಮತ್ತೊಂದು ತಾರೆ ಏಳುತ್ತದೆ; ಒಬ್ಬ ರವಿ ತಂಪಾಗ
ತ್ತಿರಲು ಬೇರೆ ರವಿಯಿಂದ ಬಾನಂಗಳ ಕೆಂಪಾಗುತ್ತದೆ! ಎಲ್ಲವೂ ಪೂರ್ಣದೊಳಗಿಂ
ಬಂದು ಪೂರ್ಣದ ಕಡೆಗೆ ಸಾಗುತ್ತಿದೆ. ಇದನ್ನು ತಿಳಿದವನೆ ಪ್ರಾಜ್ಞ.

ನಭದ ಮಧ್ಯದಲ್ಲಿ ಮಂದಾಕಿನಿ ಸಮ್ಮೋಹಿನಿಯಾಗಿ ಪವಡಿಸಿದ್ದಾಳೆ. 'ವ್ಯಕ್ತದಿಂ
ವ್ಯಕ್ತವನು ಧ್ವನಿಸುತಿಹ ರೂಪ-ಮೂಡಲಿಹ ವಿಶ್ವಗಳ ಮಧುರವಾಣಿ' ಅವಳದು. ಇ
ಮರ್ತ್ಯಪ್ರಜ್ಞೆಯ ಸೀಮೆ ಗೆರೆಯೆಳೆಯುತ್ತದೆ. ಒಳಗಣ್ಣು-ಹೊರಗಣ್ಣು ಬೆರೆತು ನೋಡಿ
ನೋಟ ಇಲ್ಲಿಗೆ ಮುಗಿಯುತ್ತದೆ. ಆಕಾಶಗಂಗೆಯ ಬೆಳಕು ಮೋಡವಾಗಿ ನಮ್ಮ ಕಣ
ಗಳನ್ನು ಕವಿಯುತ್ತಾಳೆ; 'ಹಿರಣ್ಮಯೇನ ಪಾತ್ರೇನ ಸತ್ಯಸ್ಯಾಪಿಹಿತಂ ಮುಖಂ, ತತ
ತ್ವಂ ಪೂಷನ್ ಅಪಾವೃಣು ಸತ್ಯಧರ್ಮಾಯ ದೃಷ್ಟಯೇ' ಎಂದು ಪ್ರಾರ್ಥಿಸಬೇಕಾ
ತ್ತದೆ. ಗಂಗೆಯಾಚೆಗಿನ ವಿರಾಟತೆ ಮೂರ್ಧ್ನನೇತ್ರಕ್ಕೆ ಮಾತ್ರ ಗೋಚರ. ಅದನ
ಕಂಡಾಗ 'ಜಗವೆ ಜ್ಯೋತಿರ್ಲಿಂಗ'ವಾಗುತ್ತದೆ.

ಏಳು ಆರಾಧಿಸು
ಏಳು, ಸಂಶೋಧಿಸು
ಇಲ್ಲದಿರೆ, ರೋದಿಸು

ಎಂದು ಕೊನೆಯಲ್ಲಿ ಸುರೇಂದ್ರ ನುಡಿಯುತ್ತಾನೆ. ಗರುಡಪಕ್ಷಿ ಮೆಲ್ಲಮೆಲ್ಲನೆ ತೇಲಿ ಮ
ಯಾಗುತ್ತದೆ. ಇಕ್ಷು ಕೈ ಮುಗಿಯುತ್ತಾನೆ. ಮಾನವನಿಗೆ ದೇವ ಹಾಕಿದ ಸವಾಲಿನಲ್ಲಿ
ನೀಡಿದ ಆಹ್ವಾನದಲ್ಲಿ ಈ ಎಸಳು ಮುಕ್ತಾಯಗೊಳ್ಳುತ್ತದೆ.

"ಚೈತ್ಯದೃಷ್ಟಿಯ ಶುದ್ಧಿಯನ್ನು ಪಡೆದ ನವನೀರದ ಘನಮನದ ಪ್ರಜ್ಞೆಯನ

ಮು ಪ್ರಪಂಚದ ಪೂರ್ಣವಿಕಾಸಕ್ಕಾಗಿ ಕ್ರಿಯಾಪರವಾಗುವ ಬಗೆ" ಹತ್ತನೆಯ ಳಿನಲ್ಲಿ ಧ್ವನಿತವಾಗುತ್ತದೆ.

೩

ನ್ನು 'ಇಳಾಗೀತ'. ಕವಿ ಬೆಳಗಾವಿಯಿಂದ ದಿಲ್ಲಿಯವರೆಗೆ ವಿಮಾನಯಾನ ಮಾಡಿ ಗ ಕಂಡ ಭೌಗೋಳಿಕ ದೃಶ್ಯಗಳು ಇಲ್ಲಿ ಪ್ರತಿಮೆಗಳಾಗಿ ಬರುತ್ತವೆ. ಈ ನೋಟ ವಾಗಿ ಕನ್ನಡಕ್ಕೆ ಹೊಸದು. ಇದು ಕವಿ ವಿಮಾನದಿಂದ ಕಂಡದ್ದೂ ಹೌದು, ರದ'ದಲ್ಲಿ ಇಷ್ಟು ಕೈಲಾಸಗಿರಿಯಿಂದ ಕಂಡದ್ದೂ ಹೌದು. 'ನೀರದ'ದಲ್ಲಿ ಕವಿಯ ಅಂತರ್ನೋಟ ಮುಖವಾಗಿದ್ದರೆ, 'ಇಳಾಗೀತ'ದಲ್ಲಿ ವಾಸ್ತವಿಕ ಪ್ರಜ್ಞೆಗೆ, ವೈಜ್ಞಾನಿಕ ಟಿಗೆ ಪ್ರಾಧಾನ್ಯವಿದೆ. ಇಳೆಯ ಹಿಂದು ಇಂದು ಮುಂದುಗಳು ಇದರ ವಸ್ತು. ನ್ನೊಂದು ಎಸಳುಗಳಿವೆ ಇದರಲ್ಲಿ.

ಮಾನದಲ್ಲಿ ಯಾನ ಮಾಡುವಾಗ ಪೃಥ್ವಿಯ ಸೌಂದರ್ಯ ಒಂದು ಭಾವಗೀತದಂತೆ ರ್ಷಕವಾಗಿ ಕಾಣುತ್ತದೆ. ಇಷ್ಟೇ ಮೊದಲನೆಯ ಎಸಳಿನ ತಿರುಳು. ಎರಡನೆಯ ಳಿನಲ್ಲಿ ವಿಮಾನಯಾನದ ವರ್ಣನೆ ಬರುತ್ತದೆ. ಕವಿ ವಾಯುವೀಥಿಯಿಂದ ನೋಡಿ ಗ ಭೂಮಿ ಅಸ್ಪಷ್ಟವಾಗಿ ಗೋಚರವಾಗುತ್ತದೆ:

ಭೂಗೋಲ ಹಾಯಾಗಿ ತುಸು ಗೋಚರ:
ಅಲ್ಲಲ್ಲಿ ಕಾಡಿಗೆಯ
ರೇಖೆಗಳ ಶಾಖೆಗಳ
ಮುಸುಕು ಎಸಕ
ಅಂದ ಚೆಂದ
ಶೃಂಗಗಳ ಚೀತರಿಸಿ ತಲೆಯೆತ್ತಿದೆ
ಆ ಚಿರಂತನ ರಜನಿಜಲಧಿಯೊಳಗಿಂದ !

ಮನುಷ್ಯ ಹುಟ್ಟುವುದಕ್ಕೆ ಪೂರ್ವದಲ್ಲಿ ಭೂಮಿ ಹೇಗೆ ವಿಕಸನಗೊಂಡಿತೆಂಬುದನ್ನು ರನೆಯ ಎಸಳಿನಲ್ಲಿ ಮತ್ಸ್ಯ, ಕೂರ್ಮ, ವರಾಹಾವತಾರಗಳ ಪ್ರತಿಮೆಗಳ ಮೂಲಕ ಸಿದ್ದಾರೆ. ಇಲ್ಲಿ ಪೌರಾಣಿಕ-ವೈಜ್ಞಾನಿಕ ದೃಷ್ಟಿಗಳೆರಡನ್ನೂ ಒಟ್ಟಿಗೆ ಕಾಣುತ್ತೇವೆ—

ಮತ್ಸ್ಯಾವತಾರಸಮಯದಲಿ ಆಳಿದಳಿವಳು
ಹೆಮ್ಮೀನ—ಹೆಮ್ಮೊಸಳೆಯೊಲು ಬೆಳೆದುಕೊಂಡು.
ಕೂರ್ಮಾವತಾರ ಕಾಲದಲಿ ಬಾಳಿದಳಿವಳು
ಆಮೆಯೊಲು ಮೆಯ್ಯನೊಳಗೆಳೆದುಕೊಂಡು.
ವರಾಹಾವತಾರಕಾಲದಲಿ ತಾಳಿದಳಿವಳು
ಮೃಗದ ಕೋರೆಯ ಮೇಲಕುಳಿದುಕೊಂಡು.

ಮರಳುದಿಣ್ಣೆಗಳೆಲ್ಲ ರ್ಹೀನೋ ಗುಂಪಿನಂತೆ, ದಿಗ್ಗಜ ಸಮೂಹದಂತೆ, ನಕ್ರಸಂದೊ
ದಂತೆ ಕಾಣುತ್ತವೆ; ಮಂಜುಗಡಲಲ್ಲಿ ಬೆಟ್ಟ ಸ್ವಲ್ಪವೆ ತಲೆಯೆತ್ತಿ ಅವಿತು ರಾ
ಗಪ್ಪೆಯಂತೆ ಘೂರ್ಣಿಸುತ್ತಿವೆ; ಪೊಳ್ಳುಗಳು ಘಟಸರ್ಪಗಳ ವ್ಯೂಹದಂತಿವೆ. 'ನೀರದ
ಮೂರನೆಯ ಎಸಳಿನಲ್ಲಿ ಚಿತ್ರಣಗೊಂಡಿರುವಂತೆ ಇಲ್ಲಿಯೂ ದೈವೀ ಮತ್ತು ಆಸ
ಶಕ್ತಿಗಳಿಗೆ ಪ್ರತಿಮೆಗಳಾಗಿ ಬೇರೆ ಬೇರೆ ಪ್ರಾಣಿಗಳು ಬಳಕೆಗೊಂಡಿವೆ.

ಭೂಮಿ ರೂಪುಗೊಳ್ಳುವಲ್ಲಿ ವರುಣ ವಹಿಸಿದ ಪಾತ್ರವನ್ನು ನಾಲ್ಕನೆಯ ಎಸಳಿ
ಅವಲೋಕಿಸಲಾಗಿದೆ:

ಕಡಲಿನೊಳಗಿಂದ ಸಿಡಿದೆದ್ದ ಭೂಗೋಲವನು
ನೀರು ಹರಿಸುತ ವರುಣ ತಾನು ತಣಿಸಿದನು
ವಿವಿಧ ನದಿ-ನದಗಳನು, ಬುಗ್ಗೆ ಕಾಳ್ಪುರಗಳನು
ನಾಗಮಣಿತದ ಮೋಡಿಯಲ್ಲಿ ಮಣಿಸಿದನು!

ವರುಣರಾದ ಮೇಲೆ ಮರುತರು ಬಂದು ಭೂಮಿಯನ್ನು ರೂಪಿಸಿದ ರೀತಿ ಐದನ
ಎಸಳಿನಲ್ಲಿ ವ್ಯಕ್ತವಾಗಿದೆ:

ವರುಣರೆಲ್ಲರು ನಡೆದರತ್ತ ತಪತಪನೆ ತೋಯ್ದು ;
ನೀರುಗೆರೆಯಂತೆ ನೆಲದಂತಸ್ತುಗಳನು ಹಾಯ್ದು.
ಬಂದರೀಗ ಮರುತರು
ನಿತ್ಯಕಾರ್ಯ ನಿರತರು
ಊದುತಿರುವ ಗಾಳಿಗಳು,
ನಂದನಗಳ ಮಾಳೀಗಳು!
ಬಂದರಿದೋ ಬೀಸುತಿಹರು ಸೌಗಂಧವಾರಣರು:
ನವನಿರ್ಮಿತಿ ನವಭೂಮಿತಿಗಿರುವ ಮೂಲಕಾರಣರು!

ಅದ್ವಿತೀಯ ರೂವಾರಿಗಳಾದ ಮರುತರ ಕೆಲಸದಿಂದ ಸಾವಿರ ಕಂಬಗಳೇಳುತ್ತವೆ;
ಭವನ ಸಿದ್ಧವಾಗುತ್ತದೆ.

ವಿಮಾನದಿಂದ ನೋಡಿದಾಗ ಮಾನವ ಕಾಣುವುದೇ ಇಲ್ಲ. ಎಲ್ಲವೂ ಸೃಷ್ಟಿ
ದಯದ ಆದಿಯಂತೆ ತೋರುತ್ತದೆ. ಪ್ರಾಣಿ, ಪಕ್ಷಿ, ಕ್ರಿಮಿಕೀಟಗಳಿಲ್ಲ. ಮೇದಿನಿ ಶ
ಸುಂದರಳಾಗಿ ಧ್ಯಾನಮಗ್ನಳಾಗಿದ್ದಾಳೆ. ಆದರೆ ಈ ಮೌನವನ್ನು ಮನುಜನ ಹ
ಕಲಕುತ್ತದೆ; ಅವನು ಬಂದಮೇಲೆ ಧರಾಂಗನೆಗೆ ರಕ್ತಸ್ನಾನವಾಗುತ್ತದೆ. ವಾ
ರಾಮ ಕೃಷ್ಣರು ಅವತರಿಸಿದರೂ ಬಹುಬೇಗ ಕಣ್ಮರೆಯಾಗುತ್ತಾರೆ. ಉಳಿಯು
ಬರಿಯ ಡಾಕಿನಿಯರ ನರ್ತನ, ಭಯಗ್ರಸ್ತರ ಆರ್ತನ. ಕೆಂಜಿಗಗಳು ಕಟ್ಟಿರು
ಹುತ್ತಕ್ಕೆ ದಾಳಿಯಿಟ್ಟು ಲಗ್ಗೆ ಹಾಕಿದಂತೆ, ಮಾನವ ಯುದ್ಧಗಳನ್ನು ಹೂಡಿ
ಗಳನ್ನು ಧ್ವಂಸಮಾಡಿ ಸೆಗಣಿಯಲ್ಲಿ ಸೆಗಣಿ ಹುಳುಗಳಂತೆ ಕದನವೆಸಗಿ ತನ್ನ ಕ

ಃಗಳನ್ನೆ ಹಿಸುಕಿ ಹಾಕಿದ್ದಾನೆ. ಇವನನ್ನು ನೋಡಿ ರವಿ ಶಶಿ ತಾರೆಗಳೆಲ್ಲ ಬಿದ್ದು
ನಗುತ್ತವೆ; 'ಮಹಿಮೆಯೊ ಅಪಾರವಂತೆ!' ಎಂದು ಗೇಲಿ ಮಾಡುತ್ತವೆ. ಈ
ಯ ಎಸಳಿನಲ್ಲಿ ಮಾನವಕುಲದ ಕಟುವಿಡಂಬನೆಯಿದೆ. ಆದರೆ 'ಭೂಮಿತಾಯ
ಪವಕ' ಮಾನವ ಅವತರಿಸುತ್ತಾನೆಂಬ ಆಶಾವಾದವಿದೆ.
ದರ ಸಮರ್ಥನೆ ಮುಂದಿನ ಎಸಳಿನಲ್ಲಿ ಸಿಗುತ್ತದೆ. ವಾಮನ, ರಾಮ, ಕೃಷ್ಣ,
ರು ಮರ್ತ್ಯರ ನಡುವೆ ಹುಟ್ಟಲಿಲ್ಲವೆ? ಅವರಿಂದಾದ ಉಪಕಾರ ಅಲ್ಪವೆ? ಮರು
ಯ ನಡುವಣ ನಂದನದ್ವೀಪದಂತೆ ಅಂಥವರು ಮತ್ತೆ ಬಂದಾರು. ಆದರೆ ಈಗ
ಲ್ಲವೆಂಬುದು ದಿಟ. ಬೃಂದಾವನದ ನೋಟ ಕವಿಗೆ ವಿಷಾದವನ್ನು ತರುತ್ತದೆ:

> ಸುವರ್ಣಭೂಮಿ ವಿಸ್ತಾರ ಮಧ್ಯದಲ್ಲಿ
> ಯಮುನೆಯಲ್ಲೊಗೆದು ತಂದ
> ಗಿಳಿಹಸುರು ಬಣ್ಣದಾ ಸೀರೆಗಳನೊಣಗಲೆಂದು
> ಗೋಪಿಯರು ಹಾಸಿದಂದ!
>
> ಇಲ್ಲ ಗೋಪಿಯರಿಲ್ಲಿ, ಇಲ್ಲ ಶ್ರೀಕೃಷ್ಣನಿಲ್ಲಿ!
> ಓಡಿದರೊ ಎಲ್ಲಿಗೋಟ!
> ದುಕೂಲಗಳು ಮಾತ್ರ ಬಿಸಿಲಿನಲ್ಲಿ ಕಂಗೊಳಿಸಿವೆ
> ಬೃಂದಾವನದೀ ನೋಟ!

ಪಿಯರಿಲ್ಲ, ಅವರ ಹಸುರು ದುಕೂಲಗಳಷ್ಟೆ ಈಗ ಉಳಿದಿವೆ ಎಂಬ ಭಾವ ಬಹು
ೋಜ್ಞವಾದುದು.
ೂಮಿಯ ಆಧುನಿಕಪರಿಸ್ಥಿತಿಯ ಚಿತ್ರ ಎಂಟನೆಯ ಎಸಳಿನಲ್ಲಿ ಸಮರ್ಥವಾಗಿ
ಡಿದೆ. ಇದೇ ಶ್ರೇಷ್ಠತಮ ಭಾಗವೆನ್ನಬಹುದು. ಯಂತ್ರನಾಗರಿಕತೆಯಿಂದುಂಟಾದ
ರಾವಸ್ಥೆಯನ್ನು ಕವಿ ಮುಂಬಯಿ ನಗರದ ಪ್ರತಿಮೆಯ ಮೂಲಕ ಪರಿಣಾಮ
ಯಾಗಿ, ವಿಡಂಬನಾತ್ಮಕವಾಗಿ ಅಭಿವ್ಯಕ್ತಿಗೊಳಿಸಿದ್ದಾರೆ:

> ರಿಬ್ಬನ್ನಿನ ರಸ್ತೆಯ ಸುಳಿವನು ಹಿಡಿದು
> ಬಸ್ಸು-ಟ್ರಾಮುಗಳು.
> ಎಡಬಲ ಗೊಂಬೆಯ ಮಹಡಿಮನೆ; ನಡುವೆ
> ರಿಮಾಂಡು ಹೋಮುಗಳು.
> ಕೋಣೆಗೊಂದು ಕಾಮಾರ್ಥದ ದಾಂಪತ್ಯ:
> ಕಲಿಯ ಪಾರುಪತ್ಯ!
> ಕಲಿ ತಾ ಹೂಡಿದ ಮೂರೆಲೆಯಾಟವಿದು;
> ಗೊಂಬೆಯ ಬೇಟವಿದು!

'ಇಂದಿನ ನಾಗರಿಕತೆಯುಬ್ಬರ, ಹೊಯ್ದಾಟ, ಬರಿ ರಬ್ಬರಿನಾಟ!' ಎಂದಿರು
ಬಹಳ ಅರ್ಥಪೂರ್ಣವಾಗಿದೆ. ಕೃತಕತೆ, ಥಳುಕುಗಳನ್ನು ಸೊಗಸಾಗಿ ಧ್ವನಿಸು
ರಬ್ಬರಿನ ಪ್ರತಿಮೆ; ವಾಚ್ಯಾರ್ಥವೂ ಇಲ್ಲಿ ಅಷ್ಟೇ ಸತ್ಯ. ಪ್ರಕೃತ ವಿಜ್ಞಾನಯು
ಪೂಜಾಸಾಮಗ್ರಿಗಳೇ ಬೇರೆ:

> ಪೆಟ್ರೋಲಿನದೇ ಪ್ರಸಾದತೀರ್ಥ ;
> ಕಲ್ಲಿದ್ದಲಿ ಲೋಭಾನ ;
> ಮಿಂಚಿನ ಪಂಚಾರತಿ ; ಅಣುವಾಯುಧ ;
> ಗ್ರಾಮಫೋನಿನ ಗಾನ.

ಇದು ನಿಜವಾಗಿಯೂ ಕಲಿಯುಗ.

ಆದರೆ ಇದೇ ಕಡೆಯ ಹಂತವಲ್ಲ; ಕಲ್ಕಿಯ ಬರವಿಗಿದು ನಾಂದಿ. ವಿಜ್ಞಾನ ವ
ಕರವೂ ಅಹುದು. ಯಂತ್ರರ್ಷಿಯ ಸಂಕಲ್ಪದಿಂದ ಧರಣಿಯಲ್ಲಿ ವ್ಯೋಮಗಂಗೆ
ದ್ದಾಳೆ. ಭಿನ್ನ ಭಿನ್ನವಾದ ಭೂಮಂಡಲ ಇಂದು ವಿಜ್ಞಾನದಿಂದ ಒಂದಾಗಿದೆ; ಮಾ
ಮನ ಒಂದಾಗುವ ಕಾಲ ಇನ್ನು ಬರಲಿದೆ. ವಿಜ್ಞಾನದಿಂದಾಗಿ ಮಾನವ ಕಾಲ
ಗಳ ವಿಸ್ತಾರವನ್ನು ಗೆದ್ದಿದ್ದಾನೆ. ಇವೆಲ್ಲ ಒಳಿತೆಂದೇ ಕವಿಯ ಆಶ್ವಾಸನೆ.

ಮಣ್ಣಿನ ಮಹತಿಯನ್ನು ಕೀರ್ತಿಸಲಾಗಿದೆ ಹತ್ತನೆಯ ಎಸಳಿನಲ್ಲಿ. ಮಣ್ಣನ್ನು
ಮುಕ್ತಿಯಿಲ್ಲ ; ಈ ನೆಲದಲ್ಲೆ ನಾಕ ಅಡಗಿದೆ. ಆದ್ದರಿಂದಲೇ ಕವಿ 'ಮಣ್ಣೆ ಮು
ಗಣ್ಣು. ಸಪ್ತಲೋಕದಡಿಮುಡಿಯಿದು ಹಿಡಿದಿಹ ಹಿಡಿಮಣ್ಣು' ಎಂದು ಹಾಡುತ
ಈ ಎಸಳಿನಲ್ಲಿ ಸಹಸ್ರಬಾಹುವಾದ ವಿರಾಟಪುರುಷನ ಭವ್ಯಚಿತ್ರವೊಂದು ಬರುತ್ತ
ಅವನ ಸಾವಿರ ಕರಗಳಲ್ಲೊಂದು ನಮ್ಮ ಧರೆ; ಆ ಅಮೃತಹಸ್ತದಲ್ಲಿ ನದಿನದ
ಆಯುಷ್ಯರೇಖೆಗಳು!

ಕಡೆಯ ಎಸಳಿನಲ್ಲಿ ಕವಿ ಮತ್ತೆ ಮತ್ತೆ ಉದ್ಘೋಷಿಸುತ್ತಾರೆ, 'ನೆಲವೇ ಆ
ವೆಂದು:

> ಮರ್ತ್ಯದಲ್ಲಿ ನಿಂತು ಗೆಲ್ಲು
> ಮರ್ತ್ಯವೆ ಒರೆಗಲ್ಲು ;
> ನೆಲವೆ ಆಧಾರಾ,
> ನೆಲವೆ ಆ-ಧಾರ !

ಇಲ್ಲಿನ ಸಂದೇಶ ಪಲಾಯನವಾದವಲ್ಲ; ಮರ್ತ್ಯದಲ್ಲಿ ಗಟ್ಟಿಯಾಗಿ ಕಾಲೂರಿ ನಿ
ಅಮರ್ತ್ಯವನ್ನು ತುಡುಕುವ ಮಹಾಸಾಹಸ. ಮಾನವ ಇದನ್ನು ಕೈಗೊಳ್ಳಬೇಕು;
ವನು ದೇವನಾಗುತ್ತಾನೆ.

೪

ಸನ್ನು ವಿಮರ್ಶೆ ಅತಿರೇಕಗಳಲ್ಲಿ ನರಳುತ್ತಿದೆ. ವಿನಾಯಕರು ಕವಿಯೇ ಅಲ್ಲ ಎನ್ನು ತೆ ಒಬ್ಬ ವಿಮರ್ಶಕರು ಬರೆದರೆ[1] 'ದ್ಯಾವಾ-ಪೃಥಿವಿ'ಯಂತಹ ಕಾವ್ಯ ಮತ್ತೊಂದಿಲ್ಲ ಬಂತೆ ಇನ್ನೊಬ್ಬರು ಕೈವಾರಿಸಿದ್ದಾರೆ.[2] ಸತ್ಯ ನಡುವೆ ಎಲ್ಲೋ ಇರುವಂತೆ ತೋರು ದೆ. 'ದ್ಯಾವಾ-ಪೃಥಿವೀ' ಖಂಡಿತವಾಗಿಯೂ ಲಕ್ಷಿಸಬೇಕಾದ ಒಂದು ಕಾವ್ಯ ಸಾಧನೆ; ರೆ ಸಿದ್ಧಿಶಿಖರವನ್ನೇನೂ ಅದು ಮುಟ್ಟಿಲ್ಲ. ಇದಕ್ಕೆ ಕೆಲವು ಕಾರಣಗಳನ್ನಿಲ್ಲಿ ಚಿಸಬಹುದು.

ಸೃಷ್ಟಿಯ ಭೌತಿಕ, ಆಧ್ಯಾತ್ಮಿಕ ವಿಕಾಸವನ್ನು ಕುರಿತ ವಿನಾಯಕರ ದರ್ಶನ ಷ್ಟವಾಗಿದ್ದರೂ, ಇದು ತೃಪ್ತಿಕರವಾಗಿ ನಿರ್ವಹಣೆಗೊಂಡಿಲ್ಲ ಎನಿಸುತ್ತದೆ. ಐಕ್ಯ, ಂಬದ್ಧತೆಗಳನ್ನುಳ್ಳ ಸಾವಯವ ಶಿಲ್ಪವಾಗಿಲ್ಲ 'ದ್ಯಾವಾ-ಪೃಥಿವೀ'. ಭಾಷೆಯ ಬಳಕೆ ಲ್ಲಿ, ಲಯದಲ್ಲಿ ಶೈಥಿಲ್ಯ ಎದ್ದು ಕಾಣುತ್ತದೆ; ಎಷ್ಟೋ ಕಡೆ ಗದ್ಯತ್ವ ಸುಳಿಯುತ್ತದೆ. ತರವಾದ ಪ್ರಾಸವ್ಯಾಮೋಹವೊಂದು ದೊಡ್ಡ ತೊಡಕು. ಅಲ್ಲಲ್ಲಿ ಅಸ್ಪಷ್ಟತೆಗೆ ದ ಸಿಕ್ಕಿದೆ; ಪುನರುಕ್ತಿ ಇಣುಕಿದೆ. ಎಲ್ಲಕ್ಕಿಂತ ಮಿಗಿಲಾದ ದೋಷವೆಂದರೆ, ವ್ಯದಿಂದ ಹೊರಗೆ ನಿಲ್ಲುವ 'ಸಾಂಘಿಕ ಜೀವನವೊಂದೇ ಮಾರ್ಗವಲ್ಲ, ನೋಡ ದು ವ್ಯಕ್ತಿ' ಮುಂತಾದ ಹೇಳಿಕೆಗಳು. ಧ್ವನಿಗೆ ಅವಕಾಶವೀಯದೆ ಎಲ್ಲವನ್ನೂ ಕ್ಯ ಮಾಡುವ ಪ್ರವೃತ್ತಿ ವಿನಾಯಕರಲ್ಲಿರುವುದರಿಂದ, ಅವರ ಪ್ರತಿಮೆಗಳು ಅತಿ ಖ್ಯಾನಗೊಂಡು ದುರ್ಬಲವಾಗಿಬಿಡುತ್ತವೆ. ಧ್ವನಿತವಾಗಬೇಕಾದ ವಿಚಾರಗಳನ್ನೆಲ್ಲ ಮಿಬಿಟ್ಟು ಹೇಳಿದಾಗ, ಕವಿತೆ ರಸಭಾವಲಯೋಪೇತವಾಗದೆ ನೀರಸತತ್ತ್ವಗಳ ಪಾಲಿಕೆಯಾಗಿ ಪರಿಣಮಿಸಬಹುದು. ಈ ಅಪಾಯದಿಂದ 'ದ್ಯಾವಾ-ಪೃಥಿವೀ' ಾಗಿಲ್ಲ. ಹಾಗೆ ನೋಡಿದರೆ, 'ನೀರದ'ಕ್ಕಿಂತ 'ಇಳಾಗೀತ' ಹೆಚ್ಚು ಯಶಸ್ಸಿ ದಿದೆ.

ದ್ಯಾವಾ ಪೃಥಿವಿಯಲ್ಲಿ 'ನೀರದ', 'ಇಳಾಗೀತ' ಎಂಬ ಎರಡು ಕವನಗಳಿದ್ದು, ಒಂದ ನೆಲದಿಂದ ಮೋಡದತ್ತ ಇನ್ನೊಂದರಲ್ಲಿ ವಿಮಾನದಿಂದ ನೆಲದತ್ತ ಹೊರಳಿದ ಕವಿ ಸಫಲವಾಗಿದೆ. 'ನೀರದ'ವು ಭವ್ಯಕಲ್ಪನೆಯಿಂದ ದೀಪ್ತವಾಗಿದ್ದರೂ ತತ್ತ್ವ ಷಣೆಯಿಂದ ಗಹನವಾಗಿದೆ....'ಇಳಾಗೀತ'ವು ಸಮಗ್ರ ಭವ್ಯಕೃತಿ" ಎಂದು ಡಾ.

'ಸುವರ್ಣ ಸಂಚಯ' (ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು), ಪು. ೧೪೦.

'ದ್ಯಾವಾ-ಪೃಥಿವೀ : ಒಂದು ವಿವೇಚನೆ'—ಡಾ. ಎಲ್. ಬಿ. ಕುಲಕರ್ಣಿ ('ಸಮೀಕ್ಷಕ', ದ ಸಂಚಿಕೆ). ಉತ್ಪ್ರೇಕ್ಷೆಗಳನ್ನು ಬಿಟ್ಟರೆ ಇದೊಂದು ಒಳ್ಳೆಯ ಅಧ್ಯಯನ. ಇಂಥ ಮಿಕ ವಿಮರ್ಶೆ ನಮ್ಮಲ್ಲಿ ಬೆಳೆದಿಲ್ಲ.

ರಂ. ಶ್ರೀ. ಮುಗಳಿಯವರು ಅಭಿಪ್ರಾಯಿಸಿದ್ದಾರೆ.[1] ಇಲ್ಲಿ ಸೂಚಿತನಾಗಿರುವ ಸಾ
ಸಮಗ್ರಭವ್ಯತೆಗಳಿಗೆ ಇರುವ ಪರಿಮಿತಿಗಳನ್ನು ಮರೆಯಬಾರದು. ತತ್ತ್ವರೊ
'ಇಳಾಗೀತ'ದ ಕಡೆಯ ಮೂರು ಎಸಳುಗಳಲ್ಲೂ ಬಂದಿದೆ.

'ದ್ಯಾವಾ-ಪೃಥಿವಿ'ಯ ಗುಣದೋಷಗಳನ್ನು ಕುರಿತು ಈಗಾಗಲೆ ಚರ್ಚೆ ನಡೆ
ಈ ಬಗ್ಗೆ ಇಷ್ಟು ಮಾತ್ರ ಹೇಳಬಹುದು: ವಾದವಿವಾದಗಳಿಗೆ ಎಡೆಗೊಡುವ ಪ
ನಲ್ಲಿ ಏನೋ ಸತ್ತ್ವ ಇರಲೇಬೇಕು. ಕ್ಷುಲ್ಲಕವಾದುದನ್ನು ಕುರಿತು ಯಾರು
ಮಾಡುತ್ತಾರೆ?

---

1 'ಕನ್ನಡ ಸಾಹಿತ್ಯದ ಇತಿಹಾಸ', ಪು. ೨೩೦.

'ಸಮುದ್ರಗೀತಗಳು'

ಜಿ. ಎಸ್. ಶಿವರುದ್ರಪ್ಪ

೧

'ಸಮುದ್ರವ ಸೆರೆ ಹಿಡಿದವರುಂಟೆ?'—

ಸಮುದ್ರ ವರ್ಣನೆಯಿಂದಲೆ ಕಾವ್ಯ ಆರಂಭವಾಗಬೇಕೆಂಬ ಪರಂಪರೆಯನ್ನು ಒಪ್ಪಿ ಂತ ನಮ್ಮ ಹಳೆಯ ಕವಿಗಳಲ್ಲಿ ರತ್ನಾಕರವರ್ಣಿಯೊಬ್ಬನ ಹೊರತು, ಉಳಿದ ರೂ ಈ ಮೇಲಿನ ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನು ಕೊಡಲಿಲ್ಲವೆಂದೇ ಹೇಳ ಕಾಗಿದೆ. ಪಂಪನಿಂದ ಹಿಡಿದು ಮುದ್ದಣನ ತನಕ ಬರೆದ ಕವಿಗಳಲ್ಲಿ, ಬಹುಮಟ್ಟಿಗೆ ರು ತಮ್ಮ ಕೃತಿಗಳಲ್ಲಿ ಅಷ್ಟಾದಶವರ್ಣನೆಯ ಪ್ರಧಾನಾಂಶವಾದ 'ಸಮುದ್ರ ವರ್ಣನೆ' ನ್ನು ಮಾಡುವ ನಿರ್ಬಂಧವನ್ನು ಒಪ್ಪಿಕೊಂಡರೂ, ಅವರವರ ಆ ವರ್ಣನೆಯ ಷ್ಟ ಶಬ್ದಗಳ ಪ್ರಾರಬ್ಧ'ದಲ್ಲಿ, ಅವರಿಗೆ ಆ 'ಮಹಾಬ್ಧಿಯ ಕಣ'ವೊಂದೂ ಸೆರೆಸಿಕ್ಕ ಯಿತು. ಆದರೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ 'ಸಮುದ್ರವ ಸೆರೆ ಹಿಡಿದವರುಂಟೆ ?' ಬ ಪ್ರಶ್ನೆಗೆ, ಉತ್ತರ, 'ಉಂಟು' ಎಂದು. ಹಾಗೆ ಸಮುದ್ರವನ್ನು ಸೆರೆ ಹಿಡಿದವರಲ್ಲಿ ರು ಕಾರಂತರು; ಮತ್ತೊಬ್ಬರು ವಿನಾಯಕರು. ಒಬ್ಬರು ಗದ್ಯರೂಪದಲ್ಲಿ, ತ್ತೊಬ್ಬರು ಪದ್ಯರೂಪದಲ್ಲಿ ಸಮುದ್ರವನ್ನು ಮೊತ್ತಮೊದಲಿಗೆ ನೈಜವಾಗಿ, ಪ್ರಾಮಾ ಕವಾಗಿ ಸೆರೆಹಿಡಿದು ತೋರಿಸಿದ್ದಾರೆ.

ವಿನಾಯಕರು ಮೂಲತಹ ಪ್ರವಾಸಸ್ಫೂರ್ತ ಕವಿ. ನೆಲದಮೇಲೆ, ನೀರಮೇಲೆ, ದಮೇಲೆ ಹೊರಟ 'ಪಯಣ'ದ ಹಾದಿಯಲ್ಲಿ ಈ 'ಕಲೋಪಾಸಕ' ಕಂಡ, ಉಂಡ ಭವಗಳೇ ಅವರ ಕಾವ್ಯದ ಮುಖ್ಯ ವಸ್ತುಗಳಾಗಿವೆ. ಈ ಬಗೆಯ 'ದ್ಯಾವಾ ಥಿವಿ'ಯ ದೃಶ್ಯಗಳು ಅವರ ಕಾವ್ಯದಲ್ಲಿ ಲೆಕ್ಕವಿಲ್ಲದಷ್ಟಿವೆ. ಅವರ 'ಸಮುದ್ರಗೀತಗಳು' ಥದೊಂದು ಪಯಣದ ಸಂದರ್ಭದಲ್ಲಿ ಹೊಮ್ಮಿದವು. ಕವಿಗೆ ಚಿರಪರಿಚಿತವಾದ ನೆಲದ ಟು ಹರಿದು, ಸಮುದ್ರದ ಗಂಟು ಅನಿವಾರ್ಯವಾದಾಗ, ಅನೇಕ ದಿನಗಳ ಕಾಲ ಮಯ ಜಗತ್ತಿನಲ್ಲಿ ಬದುಕಬೇಕಾಗಿ ಬಂದಾಗ, ಸಮುದ್ರದ ನವನವ ಉನ್ಮೇಷ ಲಿಸುವ ರೂಪಗಳನ್ನು ಕಂಡು-ಉಂಡಾಗ, ಕವಿಗೆ ಈ ತನ್ನ ಅನುಭವಕ್ಕೆ ಯಾವ ಪವನ್ನು ಕೊಡಲಿ ಎಂಬ ಪ್ರಶ್ನೆ ಕಾಡಿದಾಗ 'ಸಮುದ್ರವ ಸೆರೆ ಹಿಡಿದವರುಂಟೆ ?' ಬ ಪ್ರಶ್ನೆಯ ರೂಪದ ಸವಾಲು ಮುಂದೆ ನಿಲ್ಲುತ್ತದೆ. ಹಾಗೆಯೆ ಈ ಸಮುದ್ರವನ್ನು

ಸೆರೆ ಹಿಡಿಯಲು ಹೊರಟ ತನ್ನ ಹಿಂದಿನ ಕವಿಗಳ ಸಾಹಸ ಹಾಗೂ ಅದರಲ್ಲಿ ಕಂ
ಸೋಲು ನೆನಪಿಗೆ ಬಂದು ತನ್ನ ಈ ಮಹದನುಭವಕ್ಕೆ ಬೇರೊಂದು ನವೀನ ಅಭಿವ್ಯ
ಯನ್ನು ಕೊಡಬೇಕೆಂಬ ಸಂಕಲ್ಪ 'ಕೊಡದಿರು ಶರಧಿಗೆ ಷಟ್ಪದಿಯ ದೀಕ್ಷೆಯನು' ಎಂ
ಪ್ರತಿಜ್ಞೆಯಾಗಿ ನಿಲ್ಲುತ್ತದೆ. 'ಸಮುದ್ರಗೀತ'ಗಳ ಮೊದಲ ಪದ್ಯವಾದ 'ಪ್ರತಿಜ್ಞೆ
ಎನ್ನುವುದು ಕವಿ ವಿನಾಯಕರಿಗೆ ಒದಗಿದ ಈ ಹೊಸ ಸಂವೇದನೆಗಳಿಗೆ, ಹೊ
ಅಭಿವ್ಯಕ್ತಿಯನ್ನು ಕೊಡುವ ಕಾವ್ಯಪ್ರಜ್ಞೆಯ ಉದ್‌ಘೋಷವಾಗಿದೆ. ಈ ಮನಃಸ್ಥಿ
ಯಲ್ಲಿ—

ಅಬ್ಜ ಶಬ್ದಗಳ ಪ್ರಾರಬ್ಧದಲ್ಲಿ ಸಹ
ಮಹಾಬ್ಧಿಯ ಕಣವೊಂದು ಸೆರೆಸಿಕ್ಕದಯ್ಯ !
ಕೊಡದಿರು ಶರಧಿಗೆ ಷಟ್ಪದಿಯ ದೀಕ್ಷೆಯನು

. . . .

ಉಕ್ಕಲಿ ಚಿಮ್ಮಲಿ ಸಮುದ್ರ ಸ್ವಾತಂತ್ರ್ಯ
ಮಿಕ್ಕಲಿ ಮೀರಲಿ ಮುನ್ನೀರ ನಿರ್ವಯಲು
ಜರ್ಜರವಾದುದೆಲ್ಲ ಮುಳುಗಿ ಹೋಗಲಿ ಜಲಸಮಾಧಿಯಲ್ಲಿ
ಹೊಸದೆಲ್ಲ ಹುಟ್ಟಿಬರಲಿ—ಹೃದಯದಾಳದಲ್ಲಿ
ಬೇಡಯ್ಯ ! ಬಂಧಗಳ ಬಂದಿವಾಸ ;
ಬರೆದದ್ದೇ ಬಂಧುರವಾಗಬಹುದು
ಸಾಕಯ್ಯ : ವೃತ್ತಗಳಾವರ್ತ :
ನಿನ್ನ ಮಣಿತವಿರಲಿ ಸಮುದ್ರದ ಕುಣಿತದಂತೆ! (ಪು. ೩)

ಎಂಬ ಮೊದಲ ಪದ್ಯವೆ ಹೊಸ ಕಾವ್ಯಪ್ರಜ್ಞೆಯ ಉದ್‌ಘೋಷವಾಗಿದೆ. ಸಮು
ವರ್ಣನೆಗೆ ಅದುವರೆಗೂ ಒಪ್ಪಿಕೊಂಡು ಬಂದ 'ರೀತಿ' ಈ ಹೊಸ ಅನುಭವಕ್ಕೆ ಒ
ತಕ್ಕದ್ದಲ್ಲವೆಂಬ ಎಚ್ಚರದ ಉತ್ಸಾಹವೆ ಈ ಪ್ರತಿಜ್ಞೆಯ ಸ್ಥಾಯಿಯಾಗಿದೆ. ಕಡಲಿನ
ಸ್ವಾತಂತ್ರ್ಯ ನೆಲದ ನಿಯತಿಯಿಂದ ಭಿನ್ನವಾದ ಕಾರಣ, ಈ ಸಮುದ್ರ ಸ್ವಾತಂತ್ರ್ಯ
ಅಭಿವ್ಯಕ್ತಿಯನ್ನು ನೀಡಬೇಕಾದರೆ, ತನ್ನ ಕಾವ್ಯದಲ್ಲಿ ಹಾಗೂ ತನ್ನ ಪರಿಸರದ
ಇದುವರೆಗೂ ಪರಿಚಿತವಾದ 'ರೀತಿ'ಗಳು ಇನ್ನು ಸಲ್ಲವು ಎಂಬ ಎಚ್ಚರವನ್ನು ಪಡ
ಕವಿ, ತನ್ನ ನೂತನಾಭಿವ್ಯಕ್ತಿಯ ಬಗೆಗೆ ಓದುಗರನ್ನು ಕುರಿತು—

ಸ್ವಚ್ಛಂದ ಛಂದದಲ್ಲಿ
ಜಲಕ್ರೀಡಾ ವೃತ್ತದಲ್ಲಿ
ಅನುದಿನವು ತೆರೆಗಳು ಹಿಡಿವ ತಾಳಲಯದಲ್ಲಿ
ಗೀತವನೊರೆದೆನೆಂದುಗೀಚ್ ಮಾಡಬೇಡ. (ಪು. ೩)

ಎಂದು ಬಿನ್ನವಿಸಿಕೊಳ್ಳುತ್ತಾನೆ. ಇಲ್ಲಿ ಆಗಲೇ ಕವಿ ವಿನಾಯಕರ ಕವಿತೆ 'ಸ್ವಚ್ಛ
ಛಂದದ' ಕಡೆಗೆ ತಿರುಗುತ್ತಿರುವುದರ ಸೂಚನೆ ಇದೆ. ಈ ಕವಿತೆಗಳನ್ನು ಬರೆದ ಕಾಲಕ್ಕೆ

ವೆ ಇವು ೧೯೪೦ ರಂದು ಮೊದಲ ಸಲ ಪ್ರಕಟವಾದರೂ, ಇವುಗಳನ್ನು ಬರೆದದ್ದು ಯಕರೆ ಮುನ್ನುಡಿಯಲ್ಲಿ ಹೇಳಿಕೊಂಡಿರುವಂತೆ ಸೆಪ್ಟಂಬರ್ ೧೯೩೬ ೩೮ ರಂದು— ಸಗನ್ನಡ ಕಾವ್ಯ ಪರಿಸರದಲ್ಲಿ 'ಸ್ವಚ್ಛಂದ ಛಂದಸ್ಸು' ಇದ್ದಿಲ್ಲವೆಂದೇ ಹೇಳಬಹುದು. ಳೆಯ ಬಂಧಗಳ ಬಂದಿವಾಸದಿಂದ ಹೊಸಗನ್ನಡ ಕವಿತೆ ಮುಕ್ತವಾಗಿರಲಿಲ್ಲ. ಕಾಲದಲ್ಲಿ, 'ಸ್ವಚ್ಛಂದ ಛಂದ'ವನ್ನು ಮೊದಲು ಪ್ರಯೋಗಿಸಿ ತೋರಿಸಿದ್ದು, , ಈ ಸಮುದ್ರಗೀತಗಳಲ್ಲಿ ಎಂದು ತೋರುತ್ತದೆ. ಸಮುದ್ರ ಸ್ವಾತಂತ್ರ್ಯವನ್ನು -ಉಂಡು, ಆ ಅನುಭವವನ್ನು ಸೆರೆಹಿಡಿಯುವ ಪ್ರಯತ್ನದಲ್ಲಿ 'ಅನುದಿನವು ತೆರೆ ಡಿನ ತಾಳಲಯ'ವೆ ಈ ಸ್ವಚ್ಛಂದ ಛಂದಸ್ಸಿಗೆ ಪ್ರೇರಣೆಯಾದವು. ಹೀಗೆ ದ್ರಗೀತಗಳ ಮೊದಲ ಪದ್ಯವಾದ 'ಪ್ರತಿಜ್ಞೆ' ಎನ್ನುವುದರಲ್ಲಿ ವಿನಾಯಕರ ಹೊಸ ಪ್ರಜ್ಞೆಯ ಘೋಷಣೆಯಿದೆ; ಹೊಸ ಅನ್ವೇಷಣೆಯ ಅಭಿವ್ಯಕ್ತಿಗೆ ಕೊಟ್ಟ ದೆ; ಇದರ ಬಗ್ಗೆ ಓದುಗರ ಗಮನವನ್ನು ಸೆಳೆಯುವ ಕೋರಿಕೆ ಇದೆ.

೨

ಈ ಸಮುದ್ರಗೀತಗಳಲ್ಲಿ ಕಡೆಯ ಭಾಗವಾದ 'ಆತ್ಮವೃತ್ತ'ವನ್ನು ಬಿಟ್ಟರೆ, ನಾಲ್ಕು ಗಳಿವೆ: ಕಡಲು; ಕಡಲತೀರ; ಹಡಗ; ಮತ್ತು ಬ್ರಿಟನ್ನಿನ ದ್ವೀಪದಲ್ಲಿ. ಈ ನಾಲ್ಕೂ ೇ ಪಯಣದ ನಾಲ್ಕು ಮುಖ. ಈ ನಾಲ್ಕು ವಿಭಾಗದಲ್ಲಿಯೂ ಕಂಡ ನೋಟ, ವ ಚಿಂತನೆ ಒಂದಕ್ಕಿಂತ ಒಂದು ಭಿನ್ನವೆಂಬಂತೆ ತೋರಿದರೂ, ಅವು ಒಂದ ದು ಪೂರಕ. ವಿಸ್ಮಯ; ಪುರಾಣ; ಇತಿಹಾಸ ಮತ್ತು ಚಿಂತನ—ಈ ನಾಲ್ಕು ಾಲ್ಕೊಗದ ಹಿಂದಿನ ಹುರುಳು.

ೊದಲ ಭಾಗವಾದ ಕಡಲು ವಿಸ್ಮಯವನ್ನು ಸ್ಥಾಯಿಯಾಗಿ ಉಳ್ಳದ್ದು. ಸಮುದ್ರ ಗಳ ಮೊದಲ ಕವಿತೆಯಾದ 'ಪ್ರತಿಜ್ಞೆ'ಯ ನಂತರ ಎರಡನೆಯ ಪದ್ಯವಾದ, ೆ' ಎಂಬುದು ಈ ವಿಸ್ಮಯದ ನಾಂದಿಯಾಗಿದೆ—

ಕಂಡೆ! ನಿನ್ನನ್ನು ಮೊದಲಿಗೊಮ್ಮೆ ಕಂಡೆ
ಓ ಸನಾತನ ಸಮುದ್ರರಾಜ!
ಸಂಕ್ರಾಂತಿ ಪುರುಷ ಓ!
ಹಳೆಯದನೆಲ್ಲ ಒಳಗೊಳಗೆ ಕಾಯ್ದು
ಹೊಸದನೆಲ್ಲ ಹೊರಗೆ ಸೂರೆಗೆಯ್ದು
ಚಿರಸನಾತನವಾಗಿ
ಪುನರ್ನವವಾಗಿ
ಸಲಿಲಲೀಲೆಯಲ್ಲಿರುವ ಚೈತನ್ಯನೆ
ಸುಮನೋಹರ ಮೂರ್ತಿ!

ಕಂಡೆ!
ನಿನ್ನನು ಮೊದಲಿಗೊಮ್ಮೆ ಕಂಡೆ! (ಪು. ೫)

ಎಂಬ ಈ ಪದ್ಯದಲ್ಲಿ ಹೊಸತೇನೂ ಇರದಿದ್ದರೂ ಸಮುದ್ರವನ್ನು ಮೊಟ್ಟಮೊದಲ ಕಂಡು ಪಟ್ಟ ಸಂಭ್ರಮಾನುಭವದ ವಿಸ್ಮಯದ ಉದ್ಗಾರವಿದೆ. ಈ ಸಮುದ್ರಗೀತಗಳ ಈ ಬಗೆಯ ವಿಸ್ಮಯವೆ ಬೇರೆ ಬೇರೆಯ ರೀತಿಯಲ್ಲಿ ವ್ಯಾಖ್ಯಾನಿತವಾಗಿದೆ. ವ್ಯಾಖ್ಯಾನಕ್ಕೆ ಸಾಮಗ್ರಿಯಾಗಿ ಸಮುದ್ರ ಸಂಬಂಧಿಯಾದ ಭಾರತೀಯ ಪುರಾಣ ವಿನಾಯಕರಿಗೆ ಅಭಿವ್ಯಕ್ತಿಯ ಮಾಧ್ಯಮವಾಗುತ್ತದೆ. ಕಡಲು ಒಮ್ಮೆ 'ಗೋಪುರ ಕಟ್ಟಿ ಗೋಪುರಗಳನಳಿಸುವ ರುದ್ರ ಪುರುಷ'ನಾಗಿ, 'ಮಾರುತಿ ಬಲಭೀಮ'ನಾ 'ತ್ರಿಪುರಾಂತಕನಾಗಿ', 'ನಟಸಾಮ್ರಾಟನಾಗಿ' ಕಾಣುತ್ತದೆ. ತೆರೆ ತೆರೆಗಳ ಏರಿ 'ಅರುಣನ ಕುದುರೆಗಳಂತೆ' 'ಕಿನ್ನರ ಕಿಂಪುರುಷರ ನೌಕೆಗಳಂತೆ' 'ಕಾಳರಕ್ಕಸರ ಕೊ ಹಲ್ಲುಗಳಂತೆ' 'ಹೆಡೆಯಲ್ಲಿ ಪುಷ್ಪರಾಗವಿಹ ಕಾಳಸರ್ಪಗಳಂತೆ' 'ಮತ್ತಗಜದಂ ಕಾಣುತ್ತದೆ. ಈ ಕಡಲು ಮತ್ಸ್ಯಕೂರ್ಮವರಾಹಾದಿ ಅವತಾರಗಳ ನೆಲೆವನೆಯಾ ದೇವದಾನವರು ಮೇರುಪರ್ವತವನ್ನಿರಿಸಿ ಮಥಿಸಿ ಕಾಮಧೇನು ಕಲ್ಪವೃಕ್ಷ, ಅಮೃತ ಗಳನ್ನು ಪಡೆದ ಸ್ಥಳವಾಗಿ ತೋರುತ್ತದೆ. ಈ ಎಲ್ಲಾ ಪುರಾಣ ಸ್ಮರಣೆಯ ಉಪಮ ಪರಂಪರೆಗಳಲ್ಲಿ ವಿನಾಯಕರು ಯಾವ ಹೊಸ ಸಂಕೇತಗಳನ್ನಾಗಲೀ ಪ್ರತಿಮೆ ನ್ನಾಗಲೀ ನಿರ್ಮಿಸುವುದಿಲ್ಲ. ಇದು ಸಮುದ್ರವನ್ನು ಕುರಿತು ವರ್ಣನಾತ್ಮಕ ವಿಧಾನದ ಹೊನಲುವರಿದ ಭಾವಗೀತಾತ್ಮಕವಾದ ವ್ಯಕ್ತಿತ್ವದ ವಿಸ್ಮಯದ ವಿವರಣೆ ಮಾತ್ರವಾಗಿ ಕವಿ ವಿನಾಯಕರು ಮುಂದೆ ೧೯೫೦ ರಲ್ಲಿ ಇದೇ ಸ್ವಚ್ಛಂದ ಛಂದಸ್ಸಿನಲ್ಲಿ ಬರೆದ 'ನ ಕವಿತೆ'ಗಳಿಗೂ, ೧೯೩೬-೩೮ ರಲ್ಲಿ ಬರೆದ ಈ ಸಮುದ್ರಗೀತೆಗಳಿಗೂ ಇರುವ ಪ್ರಧಾ ವಾದ ವ್ಯತ್ಯಾಸವೇ ಇದು. ಸಮುದ್ರಗೀತೆಗಳಲ್ಲಿ ನವ್ಯಕಾವ್ಯಕ್ಕೆ ಉಚಿತವಾದ 'ರೀ ಯನ್ನು ಕಂಡುಕೊಂಡರು; 'ನವ್ಯಕವಿತೆ'ಗಳಲ್ಲಿ ನವ್ಯಕಾವ್ಯದ 'ದೃಷ್ಟಿ'ಯನ್ನು ಪಡೆ ಕೊಂಡರು. ಆದಕಾರಣ ಈ ಸಮುದ್ರಗೀತಗಳಲ್ಲಿ 'ರೀತಿ'ಯೊಂದೇ ಹೊಸದು; ಒಳ ತಿರುಳು ಮಾತ್ರ ನವೋದಯ ಕಾಲದ ವಿಸ್ಮಯ ಮೂಲವಾದ ಭಾವನಾನಿರೂಪಣೆ ವೈಯಕ್ತಿಕವಾದ ಅಭಿವ್ಯಕ್ತಿಯಾಗಿದೆ. ಇಲ್ಲಿ ಕಡಲಿನ ಅನುಭವಗಳನ್ನು ಸಂಕೇ ಪ್ರತಿಮೆಗಳಲ್ಲಿ ಹರಳುಗೊಳಿಸುವ ಬದಲು, ಅದರ ವಿಸ್ಮಯವನ್ನು, ಚಿಂತನೆಯ ಮೂ ವ್ಯಾಖ್ಯಾನಿಸುವ, ವಿವರಿಸುವ ಪ್ರಯತ್ನದ ಕಡೆಗೆ ಗಮನವನ್ನು ಕೊಡಲಾಗಿದೆ. 'ಒಂ ಒಂದು ಮಾತನು ನೂರೊಂದು ಸಲ ಸಾರುವೆನು' (ಪು. ೧೮) ಎಂದು ವಿನಾಯಕ ಹೇಳಿಕೊಂಡಿರುವ ಮಾತು ಇಲ್ಲಿ ಸರಿಯಾಗಿದೆ. ಆದರೂ—

ಸೆರೆಸಿಕ್ಕ ನಾಯಕನ ಬಿಡಿಸಿಕೊಳಲೆಳಸುವ ಸೈನ್ಯದಂತೆ,
ಶತ್ರುಗಳ ಚದರಿಸಿ ಚಕ್ರವರ್ತಿಯ ಪಡೆವ ಸಾಮ್ರಾಜ್ಯದಂತೆ,

ಬಂಧನವಳಿದ್ದ ಲೋಕನಾಯಕನ ಜಿಸುಗತೆಗೆದ್ದ ನಾಡವರಂತೆ:
ರೇಗುತಿದೆ, ಕಾಡುತಿದೆ, ಗದ್ದರಿಸಿ ಬೇಡುತಿದೆ, ನೋಡು ಸಾಗರವು!
. . . .
ಪೆನಂಭೂತಗಳು ಕುಣಿಯುವುವು—ತೆರೆಗಳ ಹೆಡೆಗಳ ಮೇಲೆ
ಕೊಳ್ಳಿದೆವ್ವಗಳು ಬಳ್ಳಿಗಟ್ಟುವವು—ಕರಿನೀರ ಕಂದರದಲ್ಲಿ.
ಪ್ರಳಯ ಕೌತಣನೀಯುವುದು ಬ್ರಹ್ಮರಾಕ್ಷಸರ ಶಂಖನಾದ (ಪು. ೨೨)

ಷ್ಣುವ ಈ ತೆರೆ ತೆರೆಯಾದ ಮಾಲೋಪಮೆಗಳಲ್ಲಿ; ಮತ್ತು

ಅಪರಂಪಾರವಾದ ಆಕಾರವೆ
ಇಂತೇಕೆ ಅಬ್ಬರಿಸಿ ನಿಂತೆ? (ಪು. ೨೪)

ಷ್ಣುವ ಪ್ರಶ್ನೆಯಲ್ಲಿ; ಮತ್ತು

ಚೌಕೆಂದರೆ ಚೌಕು
ದುಂಡೆಂದರೆ ದುಂಡಗೆ
ಇಹುದೆಂದರೆ ಇಹುದು
ಇಲ್ಲವೆಂದರೆ ಇಲ್ಲ
ಇದೆಂತಹ ಮಾಟ ಸಮುದ್ರನಾಥ! (ಪು. ೧೧)

ಬ ಸ್ವಭಾವೋಕ್ತಿಗಳಲ್ಲಿ, ಮತ್ತು ಈ ಕಡಲು ಬೆಳಗಿನಲ್ಲಿ, ಬೈಗಿನಲ್ಲಿ; ನಡುಹಗಲಲ್ಲಿ, ರಾತ್ರಿಯಲ್ಲಿ; ಕಗ್ಗತ್ತಲಲ್ಲಿ, ಬೆಳುದಿಂಗಳಲ್ಲಿ ಕಾಣಿಸಿದ ರೀತಿಗಳನ್ನು ವರ್ಣಿಸುವ ಭವ ಇಷ್ಟೊಂದು ವೈವಿಧ್ಯಮಯವಾಗಿ, ವಾಸ್ತವವಾಗಿ, ಜೀವಂತವಾಗಿ ಕನ್ನಡ ವ್ಯದಲ್ಲಿ ಅಭಿವ್ಯಕ್ತವಾದದ್ದು ಇದೇ ಮೊದಲು ಎಂಬ ಸಂಗತಿ ಗಮನಿಸಬೇಕಾದ ಗಿದೆ.

ಎರಡನೆಯ ಭಾಗವಾದ ‘ಕಡಲ ತೀರ’ದಲ್ಲಿ ಪ್ರಧಾನವಾದದ್ದು ಇತಿಹಾಸದ ಸ್ಮರಣೆ. ದಲ ಭಾಗವಾದ ‘ಕಡಲು’, ಪ್ರಧಾನವಾಗಿ ಕವಿಗೂ ಕಡಲಿಗೂ ಆದ ಆತ್ಮೀಯ ಬಂಧದ ವಿಸ್ಮಯೋದ್ಗಾರಗಳಿಗೂ, ಅದರೊಂದಿಗೆ ಎದ್ದು ಬಂದ ಪುರಾಣಸ್ಮರಣೆ ಗೂ ನಿದರ್ಶನವಾದರೆ, ಎರಡನೆಯ ಭಾಗವಾದ ‘ಕಡಲ ತೀರ’ ಈ ಪಯಣವ ದೊಂದು ಪರಿಸರವನ್ನು ತೆರೆಯುತ್ತದೆ. ಹಡಗು, ಏಡನ್, ಆಫ್ರಿಕಾ, ಸುಯೆಜ್, ಟ, ಸ್ಟ್ರಾಂಬೋಲಿ, ಕೋರ್ಸಿಕಾ, ನೇಪಲ್ಸ್, ಇತ್ಯಾದಿ ತೀರಗಳ ಬದಿಯಲ್ಲಿ ಸರಿಯು ಗ, ಆ ಭೂನಿಸರ್ಗದ ವೈಶಿಷ್ಟ್ಯದ ಜತೆಗೆ ಆಯಾ ಪ್ರದೇಶಗಳ ಇತಿಹಾಸದ ನೆನಪೂ ಾಯಕರ ಕಾವ್ಯಪ್ರಜ್ಞೆಯಲ್ಲಿ ಹಾಯ್ದು ಹೋಗುತ್ತದೆ. ಇಲ್ಲಿ ಆಗಲೇ ಕವನದ ದಸ್ಸು ಹಿಂದಿನ ಸಮುದ್ರ ಸ್ವಾತಂತ್ರ್ಯದ ಸಂಕೇತವಾದ ಸ್ವಚ್ಛಂದ ಗತಿಯಿಂದ, ದೊಂದು ಕಟ್ಟುಪಾಡಿನೊಳಗೆ ಬಂದಿರುವುದನ್ನು ಗುರುತಿಸಬಹುದು. ಆಯಾ ದೇಶ , ಪ್ರದೇಶಗಳ ಹತ್ತಿರ ಹಡಗು ಸರಿಯುವಾಗ ಅಲ್ಲಿ ನಿಸರ್ಗದ ವಿಲಕ್ಷಣತೆ; ಆ

ನಾಡಿನ ಐತಿಹಾಸಿಕ ಹಿನ್ನೆಲೆ; ಮತ್ತು ಅದನ್ನು ಕುರಿತ ವಯ್ಯಕ್ತಿಕವಾದ ಚಿಂತ
ಇಲ್ಲಿ ಕಾವ್ಯದ ಮುಖ್ಯ ವಿಷಯವಾಗಿಸೆ. ಏಡನ್ನಿನ ಹಾಳು-ಬೀಳಿನ ರೂಕ್ಷತೆಯಲ್ಲಿ
ಜನಕ್ಕೆ ತಂಪನ್ನು ತಂದ ಪೈಗಂಬರನ ಸ್ಮರಣೆ; ಆಫ್ರಿಕಾವನ್ನು ಕಂಡಾಗ ಅದು ಬಿ
ಯುಗ ದಬ್ಬಾಳಿಕೆಗೆ ತುತ್ತಾಗಿ ಪಟ್ಟ ಪರಿಭವ ಮತ್ತು 'ಹೆದರಬೇಡ ಆಫ್ರಿಕವೆ, ಬ
ಬಹುದು ನಿನ್ನ ಹುಣ್ಣಿಮೆ ನಾಳೆ' (ಪು. ೩೩) ಎಂಬ ಆಶ್ವಾಸನೆ; ಸುಯೆಜ್ ಕಾಲು
ಯನ್ನು ಕಂಡಾಗ ಅದು ಆಫ್ರಿಕಾ ಮತ್ತು ಏಷ್ಯವನ್ನು ಬೇರ್ಪಡಿಸಿ ನೂರು ಕಲಹಗಳಿ
ನಾಂದಿಯಾದ ಸಂಗತಿ; ಕ್ರೀಟ್ ಅನ್ನು ಕಂಡಾಗ ಹೋಮರನ ನೆನಪು; ಸ್ಟ್ರಾಂಬೋ
ಯನ್ನು ಕಂಡಾಗ ವಿಸೂವಿಯಸ್ ಅಗ್ನಿಪರ್ವತದಿಂದ ಮತ್ತೆ ಮತ್ತೆ ಒದಗಿದ ಅನ
ಹುತಗಳನ್ನು ಲೆಕ್ಕಿಸದೆ ಅಲ್ಲೇ ಬದುಕುವ ಜನದ ಧೈರ್ಯದ ಪ್ರಶಂಸೆ; ಕೋರ್ಸಿಕ
ಕಂಡಾಗ ನೆಪೋಲಿಯನ್ನನ ವೀರ ಜೀವನದ ಸ್ಮರಣೆ ಮತ್ತು ಅವನ ಬದುಕನ್ನು ಕುರಿ
ವ್ಯಾಖ್ಯಾನ; ಇತ್ಯಾದಿಗಳನ್ನು ನೋಡಿದರೆ ವಿನಾಯಕರು ಆ ವೊದಲೆ ತಮ್ಮ ನಿಶ್ಚಿ
ವಾದ ಪಯಣದ ಹಾದಿಯ ಇತಿಹಾಸವನ್ನೋದಿಕೊಂಡು, ಅಥವಾ ತಮ್ಮ ಅಭ್ಯಾ
ದಿಂದ ಆಗಲೇ ತಮ್ಮೊಳಗೆ ಕೂಡಿಸಿಕೊಂಡ ಯೂರೋಪಿನ ಇತಿಹಾಸಾನುಭವಕ್ಕೆ
ಈ ಪಯಣದ ಹಾದಿಯಲ್ಲಿ ಅಲ್ಲಲ್ಲಿ ಅಂದಂದು, ಆಯಾ ನಾಡುಗಳನ್ನು ಕಂಡಾ
ಮಾಡಿದ ವ್ಯಾಖ್ಯಾನದಂತಿದೆ. ಈ ಸಮುದ್ರಗೀತಗಳ ಮೊದಲ ಭಾಗದಲ್ಲಿ ಪ್ರಧಾನವಾ
ವಿಸ್ಮಯ, ಪುರಾಣದ ನೆರವಿನಿಂದ ಅಭಿವ್ಯಕ್ತವಾದರೆ, ಎರಡನೆಯ ಭಾಗದಲ್ಲಿ ಚಿಂತ
ಇತಿಹಾಸದ ನೆರವಿನಿಂದ ಅಭಿವ್ಯಕ್ತವಾಗಿದೆ.

ಮೂರನೆಯ ಭಾಗವಾದ 'ಹಡಗ' ಈ ಹಿಂದಿನ ಎರಡು ಭಾಗಗಳಿಂದ ಭಿನ್ನವಾದದ್ದು
ಇಲ್ಲಿ ಹಿಂದಿದ್ದ ವಿಸ್ಮಯವಾಗಲಿ, ಇತಿಹಾಸವಾಗಲಿ ಪ್ರಧಾನವಾಗಿಲ್ಲ. ಇಲ್ಲಿನ ಕಾವ
ಶಕ್ತಿ ಹಿಂದಿನೆರಡು ಭಾಗಗಳಲ್ಲಿಯಂತೆ ಕೇವಲ ವಿವರಣಾತ್ಮಕವಾದ ವ್ಯಾಖ್ಯಾನ ವಿಧಾ
ದಲ್ಲಿ ಮಾತ್ರ ನಿಲ್ಲದೆ, ಕ್ವಚಿತ್ತಾಗಿ ಸಂಕೇತ-ಪ್ರತಿಮಾ ನಿರ್ಮಾಣಗಳ ಮೂಲಕ ಬದ
ಕಿನ ದಾರುಣವಾದ ಜೀವನಾನುಭವಗಳನ್ನು ಕಾಣಿಸುವ ಕಡೆಗೆ ಮುಂದುವರಿದಿ
ಹಡಗಿನ ಮೇಲೆ ನಿಂತು ವಿವಿಧ ಕಾಲಮಾನಗಳಲ್ಲಿ, ಅಪಾರವಾದ ಜಲರಾಶಿಯನ
ಕಂಡಾಗಿನ ವಿಸ್ಮಯವಾಗಲಿ, ಕಡಲತೀರದ ನಾಡುಗಳನ್ನು ಕಂಡಾಗ ಅವುಗಳ ಐ
ಹಾಸಿಕ ನೆಲೆಯಲ್ಲಿ ನಡೆಸಿದ ಚಿಂತನೆಯ ಪ್ರತಿಕ್ರಿಯೆಯಾಗಲಿ ಇಲ್ಲಿ ಇಲ್ಲ. ತಾ
ನಿಂತ ಹಡಗವನ್ನೆ ಒಮ್ಮೆ ನೋಡಿಕೊಂಡಾಗ,— ನಿಂತ ನೆಲೆಯಿಂದಾಚೆಯ ದೃಶ್ಯದ
ತಲ್ಲೀನವಾಗದೆ—ದೃಷ್ಟಿಯನ್ನು ತಾನು ನಿಂತ ಕೇಂದ್ರದ ಕಡೆ ತಿರುಗಿಸಿದಾಗ ತಾ
ನಿಂತ ಹಡಗು ಒಂದು ವಿಲಕ್ಷಣ ಪ್ರಾಣಿಯಂತೆ ತೋರಿದೆ. ಹಡಗನ್ನು ಕುರಿತು ಮೊದ
ಪದ್ಯ 'ಉಂಟು' ಎನ್ನುವುದರಲ್ಲಿ, ಮೊದಮೊದಲು ರಮ್ಯತೆಯೇ ಕಾಣಿಸಿದೆ. ತೇಲು
ಹಡಗು 'ಅಂಚೆಯಂತೆ ಕತ್ತರಿಸಿ ತೆರೆಗಳನ್ನು ಚಂಚುವಿನಿಂದ' 'ಪಾರ್ಥನ ರಥದಂತ

ಷೆ ಶ್ಯಾಮನ ಮೈಬಣ್ಣದ ಸಲಿಲದಿಂದ ತನಿವೆಣ್ಣೆಯ ತೆಗೆವ ಗೋಪಿಯಂತೆ'
ತಮೊ, ಕ್ರಮೇಣ ಆ ಹಡಗದ ಆಕಾರ ವಿಕಾರಗಳ ವಿಲಕ್ಷಣತೆಯು ಅನುಭವವಾಗ
ಡಗಿದಂತೆ. ಈ ರಮ್ಯಭಾವನೆಗಳು ಉದುರಿಹೋಗಿ—

ಅಟ್ಟಂಬಟ್ಟಂ ಅರಣ್ಯದೊಳಗಿಂದ
ಸಪ್ತ ಸಮುದ್ರಗಳ ವ್ಯಾಪ್ತಿಯೊಳಗಿಂದ
ವಿಂಧ್ಯಾಚಲದಂತೆ ಗಂಭೀರವಾಗಿ (ಪು. ೪೮)

ಯ ಪ್ರತಿಮಾನಿರ್ಮಿತಿ ಪರ್ವತಾರಣ್ಯಗಳ ನೆನಪಿಗೆ ನುಗ್ಗುತ್ತದೆ. ಆದರೆ ಒಡನೆಯೆ—

ಹಡಗವಲ್ಲವಯ್ಯಾ ಇದು
ಹಡಗಡಕ ನಿಶಾಚರ
ಅಹಿರಾವಣ ಮಹಿರಾವಣ
ಶೂರ್ಪನಖಿಯ ಆಪ್ತಬಂಧು (ಪು. ೪೯)

ುವ ರಾಕ್ಷಸ ಸ್ಮರಣೆಗಳಿಂದ ಉಚಿತವಾದ ಅಭಿವ್ಯಕ್ತಿಯನ್ನು ತಾಳಿದೆ. ಹಡಗು
ು ರಾಕ್ಷಸ ಪ್ರವೃತ್ತಿಯ ಪ್ರತೀಕವಾಗಿ ಚಿತ್ರಿತವಾಗಿದೆ. ಅಷ್ಟೇ ಅಲ್ಲ ಈ ಹಡಗ—

ಹೇಗೆ ಕಣ್ಣು ಬಿಡುತಿದೆ ನೋಡು
ಒಕ್ಕಣ್ಣ ರಾಕ್ಷಸನಂತೆ,
ಹೇಗೆ ಒದ್ದಾಡುತಿದೆ ನೋಡು,
ಚಿಗರೆಯ ಮೆದ್ದ ಹೆಬ್ಬಾವಿನಂತೆ
. . . .
ಮಿಕಿ ಮಿಕಿ ನೋಡುತಿದೆ ನೋಡು
ಇಲಿಯ ಗುದ್ದುಗಳಂಥ ದಿಟ್ಟಿಗಳಿಂದ
ಮೈತುಂಬ ದೀಪ ಹಚ್ಚಿಕೊಂಡು
ಹೊಟ್ಟೆತುಂಬ ಇದ್ದಲಿಯಿರಿಸಿ
ತನ್ನ ಸ್ನಾಯುವಿನ ಮೇಲೆ
ಧಮನಿಯ ಕೆಳಗೆ
ಓಡಾಡಿಸುತ್ತಿದೆ ನಮ್ಮನ್ನು (ಪು. ೫೦)

ು ವರ್ಣನೆಯಿಂದ ಹಡಗು ಈ ಬಗೆಯ ವಿಕೃತಿಗೆ, ವಕ್ರತೆಗೆ, ರೂಕ್ಷತೆಗೆ ಸಂಕೇತ
ುತ್ತದೆ. "ಹಡಗದ ಯಂತ್ರಗಳ ವಿಕಾರವಾದ ಅಂಗಾಂಗಗಳು; ನೃತ್ಯಶಾಲೆಯ
ಕ್ಷಂದ ಜೀವನ; ಹಡಗಕ್ಕೆ ಕಲ್ಲಿದ್ದಲಿಯನ್ನು ಉಣಿಸುವ, ಬಿಳಿಯರ ದಾಸ್ಯದಲ್ಲಿ
ು ಮುರಿಯುವಂತೆ ದುಡಿಯುವ ಕರಿಯರ ಕೀಳು ಬಾಳುವೆ; ಯಂತ್ರಯುಗದ
ಣಾಮವಾಗಿ ಬೆಳೆದ ಅನ್ಯಾಯ, ಅನೀತಿಗಳೆಲ್ಲ ಬಂದು ಸೇರಿದ ಹಾಗೆ"[1] ಕಂಡು,

ಹೇಮಂತ ಕುಲಕರ್ಣಿ, 'ಸಮುದ್ರಗೀತ'ಗಳ ಮೊದಲಲ್ಲಿ ಬರುವ 'ಕಾವ್ಯ ಪರಿಚಯ'ದಲ್ಲಿ,
viii.

ಈ ಹಡಗು 'ಚಿಗರೆಯ ಮೆದ್ದ ಹೆಬ್ಬಾವಿನಂತೆ' ಮಾನವತೆಯ ಮೌಲ್ಯಗಳನ್ನೆಲ್ಲಾ
ನುಂಗಿದ ಆಘಾತವನ್ನು ಕವಿ ಅನುಭವಿಸುತ್ತಾನೆ. ಹಡಗಿನ ಒಳಭಾಗದ ನೌಕ
ಯಂತ್ರಕ್ಕೆ ಪ್ರವೇಶಿಸಿದ ಕೂಡಲೆ 'ರವರವನರಕ' 'ಯಮಲೋಕ'ಗಳ ನೋಟವ
ಬಂದಂತಾಗಿ—

ನಿಲ್ಲಲು ನೆಲವಿಲ್ಲದಾಯ್ತು, ಮರೆಹೊಗಲು ಮರುಕವಿಲ್ಲದಾಯ್ತು, ಕಣ್ಗೆ ಕತ್ತಲೆಯಾಯ್ತು—
ಅಯ್ಯೋ! ಸತ್ತೆ! ಸತ್ತೆ! ಸತ್ತೆ!! (ಪು. ೬೧)

ಎಂದು ಕವಿ ಜೀವ ಬೆಬ್ಬಳಿಸುತ್ತದೆ. ಈ ಹಡಗ ಆಧುನಿಕ ಯಂತ್ರ ನಾಗರಿಕತೆಯ
ಪ್ರತೀಕವಾಗಿ, ಕ್ರೌರ್ಯ, ದಾಸ್ಯ, ಅನ್ಯಾಯ, ಕೃತಕತೆಗಳ ಭಯಂಕರ ಲೋಕವಾಗಿ
ಕವಿಚೇತನವನ್ನು ಒಂದು ನಿರಾಸೆಯ ಅಂಚಿಗೆ, ನೆಲೆಯಿಲ್ಲದ ಕಂದರದ ಕಡೆಗೆ ಒಯ
ತ್ತದೆ. ಆದರೆ ವಿನಾಯಕರ ಮೂಲ ಕಾವ್ಯಪ್ರಜ್ಞೆ ಈ ನೈರಾಶ್ಯದ ನೆಲೆಗೆ ನಿಲ್ಲತಕ್ಕದ್ದಲ್ಲ
ಅದನ್ನು ಹಾದು ಮುಂದೆ ಹೋಗತಕ್ಕದ್ದು. ಬದುಕಿನ ಕ್ರೌರ್ಯ, ಅನ್ಯಾಯ, ಯಾಂ
ಕತೆ, ಕೃತಕತೆಗಳ ವಿಕೃತಿಯಿಂದ ಒದಗುವ ಆಘಾತ ಕವಿಯನ್ನು ತತ್ತರಿಸುವಂ
ಮಾಡಿದರೂ, ನೆಲೆಗೆಡಿಸುವುದಿಲ್ಲ. ಹುಟ್ಟಿನೊಡನೆ ಕೂಡಿ ಬಂದ ಶ್ರದ್ಧೆಯನ್ನಾಗಲಿ
ಆದರ್ಶಪರತೆಯನ್ನಾಗಲೀ ಕವಿ ಕೈಬಿಟ್ಟು, ತತ್ಕಾಲಕ್ಕೆ ತಾನು ಕಂಡ ನೈರಾಶ್ಯವನ
ದೊಡ್ಡದು ಮಾಡಿ ಹುಯ್ಯಲಿಡುವುದಿಲ್ಲ. "ಹಡಗದ ವಾಸ್ತವಿಕ ಜೀವನ ಕಾವ್ಯ
ವಿಶೇಷ ಸಾಮಗ್ರಿಯಾಗಿ ಕವಿಯನ್ನು ಕೆರಳಿಸುತ್ತದೆ. ಆದರೆ ಕವಿಯ ಆದರ್ಶಪ್ರಿಯ
ಮಾತ್ರ ಇವರ ಆಘಾತದಿಂದ ಕಡಮೆಯಾಗುವುದಿಲ್ಲ. ಆದರೆ ಅದೊಂದು ಜೀವನವನ್ನ
ಯುವ ಮಾನದಂಡವಾಗಿ ನಿಲ್ಲುತ್ತದೆ."[1] ಆದುದರಿಂದಲೆ ಕವಿ—

ಅಲ್ಲ! ನರಕವಲ್ಲವಿದು ಮಾನವನು ನಿರ್ಮಿಸಿದ ಯಂತ್ರಶಾಲೆ—
. . . .
ನೋಡು ಸಮುದ್ರವ ಕೊರೆದು ನಡೆದೀ ಮಹಾಯಂತ್ರವನು!
ಅನುಭವಿಸದರ ರುದ್ರಭಯಂಕರ ಸೌಂದರ್ಯವನು
ಭವ್ಯ ವಿಭವವನು, ಕ್ರಮವನು, ಸಿಸ್ತನು!
ಯಂತ್ರಾಗಾರವಹುದಿದು ಕಬ್ಬಿಣದಿ ವಿಜ್ಞಾನ-ಕವಿಯೊರೆದ ಮಹಾಕಾವ್ಯ!
(ಪು. ೬೧.೬

ಒಂದು ಮಾಟವಿದೆ ಮೋಟು ಮರದಂಥ ಈ ಹಡಗದಲ್ಲಿ
ಒಂದು ಕ್ರಮವಿದೆ—ಯಂತ್ರ ಯುಗದ ಈ ಭ್ರಮೆಯಲ್ಲಿ!
ಅಂದವಿದೆ—ಚಂದವಿದೆ ಸಹ! ತಿಳಿದು ನೋಡಲಿದೀಗ! (ಪು. ೫೧)

ಎನ್ನುವ ನಿಲುವಿಗೆ ನಿಲ್ಲುತ್ತಾನೆ. ಬದುಕಿನ ಅಸ್ತವ್ಯಸ್ತತೆಯಲ್ಲಿಯೂ, ಅಲ್ಲೋ
ಕಲ್ಲೋಲಗಳಲ್ಲಿಯೂ, ಅನ್ಯಾಯ, ವಕ್ರತೆ, ವಿಕೃತಿಗಳಲ್ಲಿಯೂ, ತತ್ಕಾಲಕ್ಕೆ ಮೂಡು

[1] ಅಲ್ಲೇ. ಪು. ix

ವುದೋ ನೈರಾಶ್ಯವಷ್ಟೇ ಅಲ್ಲದೆ, ಅದರ ಹಿಂದೆ ಯಾವುದೋ ಒಂದು ಕ್ರಮ, ದು ಶಿಸ್ತು, ಒಂದು ಅಂದವೂ ಇದೆ ಎನ್ನುವ ಪ್ರಜ್ಞೆ ಕವಿಯಲ್ಲಿ ಎಚ್ಚರವಾಗುತ್ತದೆ. ಒಂದು ದೃಷ್ಟಿ ಮತ್ತು ಎಲ್ಲದರ ಹಿಂದಿರುವ ಯಾವುದೋ ಅಗೋಚರವಾದ ವನ್ನು ನಂಬುವ ಶ್ರದ್ಧೆ ಕವಿ ವಿನಾಯಕರ ತಲೆಮಾರಿನ ಎಲ್ಲ ದೊಡ್ಡ ಕವಿಗಳ ವನ ಶ್ರದ್ಧೆಯೂ ಹೌದು.

ನಾಲ್ಕನೆಯ ಭಾಗವಾದ 'ಬ್ರಿಟನ್ನಿನ ದ್ವೀಪದಲ್ಲಿ' ಬ್ರಿಟನ್ನಿನ ಜೀವನದ ವಿಲಾಸ ವನಗಳಿಗೆ, ಅಲ್ಲಿನ ನಿಸರ್ಗದ ರಮ್ಯತೆಗೆ ಕವಿ ಮೆಚ್ಚಿಗೆಯನ್ನು, ಒಲವನ್ನು ತೋರಿಸಿ ೂ, ಈ ವಿಲಾಸ-ಚೆಲುವುಗಳ ಹಿನ್ನೆಲೆಯಲ್ಲಿ ಭಾರತೀಯನಾದ ಕವಿ, ತನ್ನ ನಾಡಿನ ಸ್ಥಿತಿಯನ್ನು ನೆನೆದು ಪಟ್ಟ ವಿಷಾದವೆ ಸ್ಥಾಯಿಯಾಗಿದೆ. ಪಾಶ್ಚಾತ್ಯದೇಶಗಳಿಗೆ ಭ್ಯಾಸಕ್ಕೆಂದು ಹೋದ ಎಷ್ಟೋ ಭಾರತೀಯರು, ಅಲ್ಲಿನ ವಿಲಾಸ-ವೈಭವಗಳಿಗೆ, ವಿಗೆ ಮಾರುಹೋಗಿ ತಮ್ಮ ನಾಡನ್ನೇ ಮರೆಯುವುದುಂಟು. ಆದರೆ ಸ್ವಾತಂತ್ರ್ಯ ರ್ವದಲ್ಲಿ, ಭಾರತವಿನ್ನೂ ಬ್ರಿಟನ್ನಿನ ದಾಸ್ಯದಲ್ಲಿ ಬದುಕುತ್ತಿದ್ದ ಕಾಲದಲ್ಲಿ ಇಂಗ್ಲೆಂಡಿಗೆ ವ ವಿನಾಯಕರೊಳಗಿನ ರಾಷ್ಟ್ರಪ್ರಜ್ಞೆಯುಳ್ಳ ದೇಶಭಕ್ತ, ಇಂಗ್ಲೆಂಡನ್ನು ನೋಡಿ, ಳಿ—

> ನಿನ್ನ ನಾಡಿದು ನಂದನವನವೆನ್ನುತಿದ್ದೆನು : ಆಂಗ್ಲದೇವಿ !
> ಆದರೆ ನಿನ್ನ ಸೌಂದರ್ಯವು ಭಯಾನಕವಾಗಿಹುದೆನಗೆ !
> . . . .
> ನೀನು ಆಂಗ್ಲ, ನಾನು ಭಾರತೀಯ—
> ಬಾರದಿಲ್ಲಿ ಹೃದಯದ ಸಂಪತ್ತು !
> ನೀನು ಸುಂದರಳಹುದು : ಆದರೆ ನಿನ್ನ ಸೌಂದರ್ಯವ
> ಗಮನಿಸಲಾರೆ : ಕ್ಷಮಿಸೆನ್ನನು, ಆಂಗ್ಲದೇವಿ ! (ಪು. ೬೬)

ದು ಧೈರ್ಯವಾಗಿ, ಆದರೆ ನಯವಾಗಿ, ಪ್ರತಿಕ್ರಿಯೆಯನ್ನು ತೋರಿಸುತ್ತಾನೆ. ಅಷ್ಟೇ ್ಲ, ಈ ಸೌಂದರ್ಯ ವಿಲಾಸಗಳ ತವರು ಮನೆಯಾದ ಇಂಗ್ಲೆಂಡ್ ತನ್ನ, ತನ್ನಂಥವರ ಡನ್ನು ಶೋಷಿಸಿ ಮುಂದುವರಿದಿದ್ದೆಂಬ ಕಹಿಯನ್ನು ಬಲ್ಲ ಕವಿ—

> ನಿನ್ನ ಮಕ್ಕಳು ಹಿಂಡಿ ಹಿಪ್ಪೆ ಮಾಡಿದ ಸಿಪ್ಪೆ ನಾನು—
> ನನ್ನ ಬಣ್ಣನೆ ನಿನಗೇಕೆ ಬೇಕು ?
> . . . .
> ನನ್ನ ನಾಡಿನ ಹಾಡಿಗೆಂದು ಮುಡಿಪಿರಲಿ ನನ್ನ ಜೀವ (ಪು. ೬೬)

ಂದು ಕಟುವಾಗಿ ನಿವೇದಿಸಿಕೊಳ್ಳಲೂ ಹಿಂಜರಿಯುವುದಿಲ್ಲ. ಈ ಆಂಗ್ಲ ಭೂಮಿಯ ಹುದೆ, ಈ ಕವಿ ತಾನು ವಿದೇಶೀಯನೆಂಬ ಈ ದೇಶದ ಗುಲಾಮನೆಂಬ ನೋವನ್ನು ನುಭವಿಸಿ—

ಆಂಗ್ಲ ಭೂಮಿಯಲಿಂದು ವನವಾಸವಿದ್ದು
ನೇಹಿಗರ ತೊರೆದೊಲವಿನುಪವಾಸಬಿದ್ದು
ಎಲ್ಲೆಡೆಗೆ ಸಾರ್ವಭೌಮರ ನೆಲದ ಮೇಲೆ
ಆಳೆಂಬ ತಿಳಿವಿನಂಕುಶತಿವಿವ ವೇಳೆ
ಬೀದಿ ಹೋಗುವ ನಾಯಿ ಕೂಡ ಬೊಗಳುವದು
ಎಲ್ಲಿಂದಲೋ ಹಕ್ಕಿ ಕೂಡ ತೆಗಳುವುದು (ಪು. ೬೩)

ಎಂಬ ಪರಾಭವ ಭಾವವನ್ನನುಭವಿಸಿದ್ದು, ಸ್ವಾತಂತ್ರ್ಯ ಪೂರ್ವ ಭಾರತದ ಸಂವೇದ
ಯನ್ನು ಕವಿ ವಿನಾಯಕರು ಪಟ್ಟ ತೀವ್ರತೆಯನ್ನು ಸೂಚಿಸುತ್ತದೆ. ಸ್ವಾತಂತ್ರ
ಪೂರ್ವದ ಸಮಕಾಲೀನ ಪ್ರಜ್ಞೆಯ ಅತ್ಯುತ್ತಮ ಅಭಿವ್ಯಕ್ತಿಯಾಗಿಯೂ ಇದು ಗ
ನಾರ್ಹವಾಗಿದೆ. ಇಷ್ಟೆ ಅಲ್ಲದೆ, ಕವಿ, ತಾನು ಕಲಿಯಲೆಂದು ಹೋದ ರೀತಿಯನ
ಕೂಡ ವಿಮರ್ಶೆಯ ಒರೆಗಲ್ಲಿಗೆ ಹಚ್ಚಿನೋಡಿ—

ಇಲ್ಲಿ ಸಾಮ್ರಾಜ್ಯವಿತ್ತು, ಸಕಲಸಂಪತ್ತಿತ್ತು
ಕುಬೇರನ ಖಜಾನೆಯಿತ್ತು !
ಇಂದಿಗೆ ಭಾರತೀಯರಿಗೆ ತಿನ್ನಲು ಕೂಳಿಲ್ಲ
ಕುಡಿಯಲು ನೀರಿಲ್ಲ !
ಇದೊಂದು ಪರಮ ವಿಚಿತ್ರ !
. . . .
ಇಂದು ಬ್ರಿಟನ್ನಿಗೆ ನಡೆದಿಹರು ಜೊತೆಗಾರರು
ಹಿಡಿ ಹೊನ್ನಾಸೆಗೆ
ನಡೆದಿಹೆನು ನಾನು—ವಿದ್ಯೆಯ ಪಡೆಯಲೆಂದು
ಇದೊಂದು ಪರಮ ವಿಚಿತ್ರ (ಪು. ೮೫)

ಎಂದು ತಾನು ಆಳರಸರ ನೆಲಕ್ಕೆ ಹಿಡಿಹೊನ್ನಿನಾಸೆಗೆ, ಹೊಟ್ಟೆಯ ಪಾಡಿಗೆ ವಿದ್ಯೆ ಕ
ಯಲು ಬಂದ ವಿಚಿತ್ರಕ್ಕೆ ವಿಷಾದಪಡುತ್ತಾನೆ. ಪರತಂತ್ರದ ವಿಷಾದ; ಸ್ವಾತಂತ್ರ್
ಹಂಬಲ; ಆತ್ಮಗೌರವದ ದೃಢತೆ ಮತ್ತು ಸ್ವಾತ್ಮ ವಿಮರ್ಶೆ – ಇವು ೧೯೩೬–೩
ಕಾಲದ ಕವಿತೆಯಲ್ಲಿ ನಿಜವಾಗಿಯೂ ಸತ್ವಪೂರ್ಣ ಸಂಗತಿಗಳಾಗಿವೆ ಮಾತ್ರವಲ್ಲ, ಕ
ವಿನಾಯಕರ ವ್ಯಕ್ತಿತ್ವದ ಲಕ್ಷಣವನ್ನು ಸ್ಫುಟಪಡಿಸುತ್ತವೆ.

೩

ಮೂರು ದಶಕಗಳಷ್ಟು ಹಿಂದೆ, ಕನ್ನಡದ ನವೋದಯ ಕಾವ್ಯವಿನ್ನೂ ಹಳೆಯ ಬಂ
ಗಳ ಬಂದಿವಾಸದಿಂದ ಮುಕ್ತವಾಗಲು ಹೋರಾಡುತಿದ್ದ ಆ ಕಾಲದಲ್ಲಿ ರಚಿತವಾದ
'ಸಮುದ್ರಗೀತಗಳು' ಕಾವ್ಯ ವಸ್ತುವಿನ ಹೊಸತನದಿಂದ ಮಾತ್ರವಲ್ಲದೆ, ಅವುಗಳ ರ
ಯಿಂದಲೂ ಮಹತ್ವದವುಗಳಾಗಿವೆ. ಸಮುದ್ರಯಾನದಂಥ ಅನುಭವವೆ ಕನ್ನಡ ಕವಿ

ತ್ತವಾದ ಕಾರಣದಿಂದ, ಈ ಕಾವ್ಯದ ವಿಷಯ ವೈವಿಧ್ಯ ಮತ್ತು ವಿಸ್ತಾರ ಬಂದದ್ದು ಡ ಕಾವ್ಯಕ್ಕೆ ಹೊಸತು. ಈ ಹೊಸ ಅನುಭವದ ಒತ್ತಡದಿಂದ ಹೊಸ ತಂತ್ರ-ರೀತಿ ಆವಿಷ್ಕಾರವಾಗಿ, ಕವಿಯ ಕಾವ್ಯಪ್ರಜ್ಞೆಗೆ ‘ಕ್ರಾಂತಿಯ ತೀವ್ರತೆ’ ಸಹಜವಾಗಿಯೇ ದಿದೆ. ಈ ಕವನಸಂಗ್ರಹದ ಮೊದಲ ಪದ್ಯವಾದ ‘ಪ್ರತಿಜ್ಞೆ’ ಎಂಬುದರಲ್ಲಿ ಈ ಅಂಶ ಗೆ ಬಂದಿದೆ ಎಂಬುದನ್ನಾಗಲೆ ಹಿಂದೆ ಪ್ರಸ್ತಾಪಿಸಲಾಗಿದೆ. ಶ್ರೀ ಕುರ್ತಕೋಟಿ ವರು ವಿನಾಯಕರ ಪ್ರಯೋಗಗಳನ್ನು ಕುರಿತು “ವಿನಾಯಕರ ಕಾವ್ಯ ಪ್ರಯೋಗ ಮುಂದಿನ ತಲೆಮಾರಿನವರಿಗೆ ಮಹತ್ವದವೆನಿಸಲಿಕ್ಕಿಲ್ಲ. ಇದಕ್ಕೆ ಕಾರಣವೆಂದರೆ ನಾಯಕರು ಸಂಪ್ರದಾಯ ನಿರ್ಮಾಣದಲ್ಲಿ ಶ್ರದ್ಧೆಯನ್ನು ಕಳೆದುಕೊಳ್ಳಲಿಲ್ಲ. ಅವರ ಯೋಗಗಳು ಸಂಪ್ರದಾಯದ ವಿರುದ್ಧವಾಗಿ ನಡೆದ ಪ್ರತಿಕ್ರಿಯೆಗಳಲ್ಲ”[1] ಎಂದು ಭಿಪ್ರಾಯಪಡುತ್ತಾರೆ. ಈ ಅಭಿಪ್ರಾಯದ ಮೊದಲ ವಾಕ್ಯವನ್ನು ಬಿಟ್ಟರೆ, ಉಳಿದದ್ದು ನಾಯಕರ ಕಾವ್ಯಪ್ರಯೋಗದ ಮುಖ್ಯ ಲಕ್ಷಣವನ್ನು ಹೇಳುತ್ತದೆ ಎಂದು ಒಪ್ಪಿ ೨, ಯಾವ ಒಂದು ಪ್ರಯೋಗವೆ ಆಗಲಿ ಮಹತ್ವದವುಗಳೆನಿಸಬೇಕಾದರೆ, ಸಂಪ್ರ ಯ ನಿರ್ಮಾಣದಲ್ಲಿ ಶ್ರದ್ಧೆಯನ್ನು ಕಳೆದುಕೊಂಡು, ಸಂಪ್ರದಾಯದ ವಿರುದ್ಧವಾಗಿ ದ ಪ್ರತಿಕ್ರಿಯೆಗಳಾಗಿರಬೇಕು ಎನ್ನುವ ಅಪಾರ್ಥವನ್ನು ಒಪ್ಪಲಾಗುವುದಿಲ್ಲ. ಯೋಗ ಎಂದರೆ ಪರಂಪರೆಯ ವಿರುದ್ಧ ಬಂಡೆದ್ದು ನಿಂತುದರ ಪರಿಣಾಮವೆ ಆಗ ಕಾಗಿಲ್ಲ; ಪ್ರಯೋಗಕ್ಕೆ ನಿಂತವರು ಕೆಲವು ವೇಳೆ ಹಿಂದಿನ ಪರಂಪರೆಯ ನಿಸ್ಸತ್ವಗಳ ಘೋಷಿಸುವ ಅಂಶದಲ್ಲಿ ಈ ಒಂದು ಮನೋಧರ್ಮ ವ್ಯಕ್ತವಾಗುವಂತೆ ತೋರುವು ದೋ ನಿಜ; ಆದರೆ ಸಂಪ್ರದಾಯದ ವಿರೋಧವಾಗಿ ಪ್ರತಿಕ್ರಿಯೆಯನ್ನು ತೋರು ದರ ಮೂಲಕ ಹೊಸತನವನ್ನು ಸಾಧಿಸಿದವರು ಕೂಡಾ, ಮತ್ತೆ ಸಂಪ್ರದಾಯದ ಗಳ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸುವ, ಮತ್ತು ಅದರಲ್ಲಿ ತಾವು ಬೇರೂರದೆ ಯಲಾರೆವೆಂಬ, ಎಚ್ಚರವನ್ನು ಪ್ರಕಟಿಸುತ್ತಾರೆಂಬುದನ್ನೂ ಮರೆಯಬಾರದು. ದೆ ಕಾವ್ಯಪ್ರಯೋಗದಲ್ಲಿ ಈ ಒಂದು ಪ್ರತಿಕ್ರಿಯಾ ರೂಪದ ರಭಸ-ಆವೇಶಗಳಿಲ್ಲ ಟೂ ಸಂಪ್ರದಾಯದೊಳಗಿನಿಂದಲೇ ದಾರಿ ಮಾಡಿಕೊಂಡು ಹೊಸತು ಆವಿರ್ಭವಿಸಲು ಸ್ಯ ಎಂಬುದೂ ಗಮನಿಸಬೇಕಾದ ವಿಚಾರ. ಸುತ್ತಣ ಪ್ರಕೃತಿಯಲ್ಲಿ ಆಗುವ ಎಲ್ಲ ಲಾವಣೆಗಳೂ ಹೀಗೇ ಆಗುತ್ತವೆ ಎಂಬುದು ತಿಳಿದ ವಿಷಯ. ಈ ಪ್ರಕೃತಿ ಸಹಜ ದ ನಾವೀನ್ಯತೆ ಈ ಸಮುದ್ರಗೀತೆಗಳಲ್ಲಿವೆ. ಯಾವ ಒಂದು ಕಾವ್ಯಪ್ರಯೋಗ ಗಲಿ ಮಹತ್ವದ್ದೆನಿಸಬೇಕಾದರೆ ಕೇವಲ “ಸಂಪ್ರದಾಯದ ವಿರುದ್ಧವಾಗಿ ನಡೆದ ಪ್ರತಿ ದೆ.”ಯಿಂದಲ್ಲ; ಅವುಗಳೊಳಗಣ ಸಾರ್ವಕಾಲಿಕ ಸತ್ವದಿಂದ ಅಲ್ಲದೆ ಎಲ್ಲ ಕಾವ್ಯ ಯೋಗಗಳಿಗೂ ಅವುಗಳ ಕಾವ್ಯಮೌಲ್ಯದಿಂದ ಬೇರೆಯಾಗಿಯೇ ನೋಡಬಹುದಾದ

[1] ಕೆ. ಡಿ. ಕುರ್ತಕೋಟಿ, ‘ಯುಗಧರ್ಮ ಹಾಗೂ ಸಾಹಿತ್ಯದರ್ಶನ,’ ಪು. ೬೦.

ಐತಿಹಾಸಿಕ ಮಹತ್ವವೂ ಒಂದುಂಟು. ಈ ಎರಡು ದೃಷ್ಟಿಗಳಿಂದ ನೋಡಿದರ
ಮೂವತ್ತು ವರ್ಷಕ್ಕೂ ಹಿಂದೆ ರಚಿತವಾದ ಈ 'ಸಮುದ್ರಗೀತಗಳು' ಅವರ ಮುಂ
ತಲೆಮಾರಿನವರಾದ ನಮ್ಮ ಪಾಲಿಗೆ ಮಹತ್ವದವುಗಳೇ ಆಗಿವೆ.

ವಿನಾಯಕರ ಈ ಪ್ರಯೋಗಗಳು ಸಂಪ್ರದಾಯದ ಸತ್ವವನ್ನು ಸಮನ್ವಯಿಸಿಕೊಂ
ಆವಿರ್ಭವಿಸಿದವು ಎನ್ನುವ ಮಾತು ಅವರ ವ್ಯಕ್ತಿತ್ವದ ಪ್ರಧಾನ ಲಕ್ಷಣವನ್ನು ವ್ಯಾಖ್
ಸುತ್ತದೆ. ಕಾವ್ಯವೆಂಬುದು ಮೂಲತಃ ಒಂದು ವಿಶಿಷ್ಟ ವ್ಯಕ್ತಿತ್ವದ ಅಭಿವ್ಯಕ್ತಿಯೆಂಬು
ನಿರ್ವಿವಾದವಾದ ಸಂಗತಿ. ಪ್ರಯೋಗ ಪ್ರಿಯತೆ; ಪುರಾಣೇತಿಹಾಸಗಳ ಪ್ರಜ್ಞೆ
ಚಿಂತನ ಪರತೆ; ಮಾನವೀಯ ಮೌಲ್ಯಗಳಲ್ಲಿ ಶ್ರದ್ಧೆ; ಸ್ವಾತಂತ್ರ್ಯ ಮತ್ತು ಅ
ಪ್ರತ್ಯಯಗಳ ಬಗ್ಗೆ ತೀವ್ರವಾದ ಹಂಬಲ; ಮತ್ತು ವಿಮರ್ಶನ ಬುದ್ಧಿ—ಇವುಗಳ
ವ್ಯಕ್ತಿತ್ವದಲ್ಲಿ ಮೈಗೂಡಿಸಿಕೊಂಡು ಅಭಿವ್ಯಕ್ತವಾದ ಈ 'ಸಮುದ್ರಗೀತಗಳು', ಹನ್ನೆ
ನೆಯ ಶತಮಾನದಯ ಮೊದಲಾದ ವಚನಕಾರರ ಮುಕ್ತ ಛಂದೋವಿಧಾನದ ಸ
ವನ್ನು ಒಳಗೊಂಡು, ಇವತ್ತಿನ ಆಡುಮಾತಿನ ಸೊಗಸನ್ನು ಕೂಡಿಸಿಕೊಂಡು, ವಿರೋ
ಭಾಸಗಳನ್ನು ರಚನೆಯ ಮೂಲವನ್ನಾಗಿಸಿಕೊಂಡು, ಇಂದಿನ ನವ್ಯಕಾವ್ಯದ ರೂಪ
ರೇಷೆಗಳನ್ನು ಬಹು ಹಿಂದೆಯೇ ಪ್ರಕಟಪಡಿಸಿದ್ದು ಮಹತ್ವದ ಸಂಗತಿಯಾಗಿದೆ. "ಹಿ
ಕವಿ ವಿನಾಯಕರು ನವ್ಯಕಾವ್ಯದ ಅನಿಶ್ಚಿತ ಮಾರ್ಗದಲ್ಲಿ ಇಟ್ಟ ಮೊದಲ ಅಡಿ ಹ
ಕಾವ್ಯವನ್ನಷ್ಟೇ ಅಲ್ಲ, ಹೊಸ ಕವಿಯನ್ನೂ ನಿರ್ಮಾಣಮಾಡಿತೆಂಬುದು ನೆನಪಿ
ಬೇಕಾದ ವಿಷಯ. ಅಂತೆಯೇ ನಾನು 'ಸಮುದ್ರಗೀತ'ಗಳನ್ನು ನವ್ಯಕಾವ್ಯದ ನಾ
ಯೆಂದು ಕರೆಯಬೇಕೆನ್ನುತ್ತೇನೆ"[1] ಎಂದು ಶ್ರೀ ಹೇಮಂತ ಕುಲಕರ್ಣಿಯವರು ಹ
ರುವ ಮಾತು ಗಮನಿಸಬೇಕಾದದ್ದಾಗಿದೆ.

[1] ಹೇಮಂತ ಕುಲಕರ್ಣಿ, ಕಾವ್ಯಪರಿಚಯ, ಪು. ix.

'ಬಾಳ ದೇಗುಲದಲ್ಲಿ'

ಎಸ್. ವಿ. ಪರಮೇಶ್ವರ ಭಟ್ಟ

ಾಳ ದೇಗುಲದಲ್ಲಿ' ಎಂಬ ಶೀರ್ಷಿಕೆಯನ್ನು ಹೊತ್ತು ಪ್ರಕಟಗೊಂಡಿರುವ
ಾಯಕ ಕಾವ್ಯ' ಕನ್ನಡದ ಸಮಕಾಲೀನ ಸಾಹಿತ್ಯದ ಒಂದು ಅಪೂರ್ವ ಅದ್ವಿತೀಯ
ಯಕ ಕಾವ್ಯ'. ಶ್ರೀ ವಿನಾಯಕ ಕೃಷ್ಣ ಗೋಕಾಕರು ಕವಿಯಾಗಿ ಕಂಡುಂಡ
ಭವ ವಿಶೇಷಗಳ ರಸರಸಾಯನದ ಸಮ್ಯಕ್ ಪಾಕ ವಿಶೇಷವಾಗಿ 'ಬಾಳ ದೇಗುಲ'
ರಗೊಂಡಿದೆ. ಸ್ವದೇಶ ಸ್ವಧರ್ಮ ಸ್ವಭಾಷೆಗಳ 'ಸ್ವತ್ತ್ವ'ದ ಅರಿವಿನ ಬೆಳಕು
ಗಿ ಉರಿಯಹತ್ತಿದಾಗ ಹೊರಗೆ ಕವಿಗೆ 'ದರ್ಶನ ಗೋಚರ'ವಾದ 'ಬಾಳ ದೇಗುಲ'
ಡದ ನುಡಿಯಲ್ಲಿ ಕನ್ನಡದ ಛಂದದಲ್ಲಿ ಹೀಗೆ ರೂಪುಗೊಂಡಿರುವುದು ಕನ್ನಡಿಗರ
ಗ್ಯವಿಶೇಷ. ಭೂತವನ್ನು ವರ್ತಮಾನದ ಒರೆಗಲ್ಲಿಗೆ ಉಜ್ಜಿ ಅದರ ಸಹಜ ನೆಲೆ
ಯ ಸುಳುಹು ಹೊಳಹುಗಳ ಹುಡಿಮಿಂಚನ್ನು ಭವಿಷ್ಯಕ್ಕೆ ಬೆಳಕಾಗಿ ಬಳಸಿಕೊಳ್ಳಿ
ಪ್ರವಾದಿಯ ವಾಗ್ದೀವಿಗೆ ಹೀಗೆ ಹೊತ್ತಿ ಉರಿಯುತ್ತಿದೆ ಬಾಳದೇಗುಲದಲ್ಲಿ
ದೇವಿಯ ಕೃಪೆಯ ಸತತತೈಲಧಾರೆಯ ಸ್ರೋತದಿಂದಾಗಿ! ಐತಿಹಾಸಿಕ ಸತ್ಯ,
ಜ್ಞಾನಿಕ ಸತ್ಯ, ಲೌಕಿಕಸತ್ಯ, ಕಾವ್ಯಸತ್ಯ, ಅನುಭಾವಸತ್ಯ—ಹೀಗೆ ಪಂಚಮುಖಿ
ದ ಸತ್ಯ ಪರಮೇಶ್ವರನ ಉಪಾಸಕರಾಗಿ ಈ ಕವಿ ಮಂತ್ರದ್ರಷ್ಟಾರರಾಗಿ ಹಾಡಿದ
ಡುದ್ಗಾರಗಳ ಧೀರಗಂಭೀರ ಶೈಲಿಯ ಕಾವ್ಯ ಈ 'ಬಾಳದೇಗುಲದಲ್ಲಿ!' ಬುದ್ಧಿ
ಮೇಲಿನ ಅರ್ಧ ಶತಮಾನದ ಸಾರ್ಥಕವಾದ ಬಾಳಿನ ಕನಸು ನನಸುಗಳ ಚಿಂತನ
ಥನಗಳ, ಕಾಣ್ಕೆ ಪೂಣ್ಕೆಗಳ ಕಾವ್ಯ ಕೈಪಿಡಿ ಈ ಬಾಳದೇಗುಲ. ಒಂದು ನಿಟ್ಟಿನಲ್ಲಿ
ಮುಗಿಸುವ ಕೃತಿಯಲ್ಲ ಇದು. ಒಮ್ಮೆ ಓದಿ ಎತ್ತಿಡುವ ಕೃತಿಯಲ್ಲ ಇದು. ಮತ್ತೆ
ತ್ತೆ ಓದಿ ಓದಿದಷ್ಟಷ್ಟನ್ನು ರೋಮಂಥನ ಕ್ರಿಯೆಯಿಂದ ರೋಚಕಗೊಂಡು ತನ್ನ
ಶಸಕ್ಕೆ ಸಂಸ್ಕಾರವನ್ನು ತಂದುಕೊಳ್ಳುವಂತಹ ಜೀವಾತು ತುಂಬಿದ ಕಾವ್ಯದ
ಗೊಡ ಇದು. ಇಂತಹ ಕೃತಿಗೆ ಪರಿಚಯಾತ್ಮಕವಾಗಿ ನಾಲ್ಕು ಮಾತು ಹೇಳುವುದು
ತ ಕಷ್ಟಸಾಧ್ಯದ ಮಾತೇ ಸರಿ. ವಿಶ್ವಮಾನವನಾಗಿ ಬಾಳುವ ರಸೇಪ್ಸುವಾದ
ಡಿಗನೊಬ್ಬನ ಆಕಾಂಕ್ಷೆಗಳನ್ನು ಬಿಡಿಸಿ ತೋರಿಸಿದ ಈ ನಕಾಶೆಯಲ್ಲಿ ನಾನು ಯಾವ

ನದಿಯನ್ನು ಹೆಸರಿಸಲಿ, ಯಾವ ಬೆಟ್ಟದ ಮೇಲೆ ಬೆಟ್ಟಡಲಿ, ಯಾವ ರಸಸ್ಥಾನದಲ್ಲಿ ತಂಗಲಿ, ಯಾವ ಪುಣ್ಯತೀರ್ಥದಲ್ಲಿ ಮೀಯಲಿ ಎಂಬುದೇ ಸಮಸ್ಯೆಯಾಗಿದೆ. ಬಿಚ್ಚಿದ ಭೂಪಟದತ್ತ ಬಿಲ್ಲುಂಬೆರಗಾಗಿ ನೋಡುವುದಷ್ಟೇ ಒಂದು ಸಂಸ್ಕಾರ ಎಂದಮೇಲೆ ಚಿತ್ತಕ್ಕೆ ಒದಗುವ ಮತ್ತಿನ ಸಂಸ್ಕಾರದ ಬೆಲೆ ಎಷ್ಟೆಂಬುದನ್ನು ಹೇಗೆ ಹೇಳಲಿ. ಅದು ಅವರವರ ಚೇತನದ ಮೇಲ್ಮೆಯನ್ನು ಅವಲಂಬಿಸಿರುತ್ತದೆ.

ರಸಭಾವಗಳ ಅತಿಶಯವಷ್ಟೇ ಕಾವ್ಯದ ಹೆಚ್ಚುಗಾರಿಕೆಯಾದರೆ ಅದು ಪುಣ್ಯವನಿತೆಯಂತಾದೀತು. ರಸವೂ ಭಾವವೂ ಇದ್ದು ಧಾರ್ಮಿಕವಾದ ಗಂಭೀರವಾದ ತಾತ್ತ್ವಿಕವಾದ ವಿಚಾರ ಪ್ರಚೋದನೆಯ ವಿವೇಕ ಪ್ರಬೋಧನೆಯ ತಾರಕಾಂಶಗಳಿಂದ ನಿಬಿಡವಾಗಿರುವ ಕಾವ್ಯವಾದರೆ ಆಗ ಅದು ಪುಣ್ಯವನಿತೆಯಂತೆ ಮೋಕ್ಷಪ್ರದಾಯಿನಿಯ ಸ್ಥಾನದಲ್ಲಿ ನಿಲ್ಲುತ್ತದೆ. ಅಂತಹ ಸತ್ಪ್ರೇರಣೆಯ ಸತ್ಕಾವ್ಯಮಾಲಿಕೆಯಲ್ಲಿ ನಿಲ್ಲಬಲ್ಲ ಬೆರಳೆಣಿಕೆಯ ಆಧುನಿಕ ಕಾವ್ಯಗಳಲ್ಲಿ 'ಬಾಳದೇಗುಲದಲ್ಲಿ' ಎಂಬುದು ಮುಮ್ಮೊದಲಿನ ಸ್ಥಾನಕ್ಕೆ ಅರ್ಹವಾದದ್ದಾಗಿದೆ.

ಇದು ಖಂಡಕಾವ್ಯಗಳ ಕಾಲ, ಇದು ಸಣ್ಣ ಕತೆಗಳ ಕಾಲ, ಇದು ಪುಟ್ಟ ಪ್ರಬಂಧಗಳ ಕಾಲ, ಇದು ಏಕಾಂಕಗಳ ಕಾಲ ಎಂದೆಲ್ಲ ಹೇಳುವುದುಂಟು. ಈ ಮತಿನ ಯಥಾರ್ಥ್ಯವೇನೆ ಇರಲಿ, ನನ್ನ ಅರಿವಿಗೆ ಬಲ್ಲಂತೆ ನಾನು ಹೇಳುವುದಾದರೆ ಈ ಕಾಲ ಮಹಾಕಾವ್ಯ, ಮಹಾಕಾದಂಬರಿ, ಮಹಾನಾಟಕ, ಮಹಾಪ್ರಬಂಧಗಳ ಸೃಷ್ಟಿಗೆ ಪ್ರೇರಣೆ ನೀಡಬಲ್ಲ ಕಾಲವೆಂದರೆ ತಪ್ಪೇನೂ ಆಗದು. ಈ ಕಾಲದಲ್ಲಿಯೇ ಮಹಾಕಾವ್ಯ ಮಹಾಕಾದಂಬರಿಗಳು ಕನ್ನಡದಲ್ಲಿ ಸೃಷ್ಟಿಯಾಗಿವೆಯೆಂಬುದು ಈಗ ಹಳೆಯ ಮಾತು. ಇತ್ತೀಚಿನ ಹೊಸ ಮಾತು ಎಂದರೆ ಕಥಕನೇ ನಾಯಕನಾಗಿ ಅವನ ಬಾಳಿನ ಪ್ರಮುಖ ಘಟನೆಗಳೇ ಘಟಕಗಳಾಗಿ ಖಂಡದಲ್ಲಿ ಅಖಂಡವನ್ನು ಕಾಣುವ ಸಮ್ಯಗ್‌ದೃಷ್ಟಿಯ, ಮರ್ತ್ಯದ ಕೂಡಲದಲ್ಲಿ ಅಮರ್ತ್ಯದ ಸಂಗಮನನ್ನು ಅರಸಿ ಇರಿಸುವ ಆ ನಾಯಕನ ಮನಃಪ್ರಪಂಚದ ಏಳುಬೀಳಿನ ಚಿತ್ರಣ ಹೊಸ ರೀತಿಯಲ್ಲಿ ಮೂಡಿದಂತಹ ಹೊಸ ಮಹಾಕಾವ್ಯಗಳ ಸೃಷ್ಟಿ. ಇದಕ್ಕೆ ಪ್ರಕೃತದಲ್ಲಿ ಒಂದು ಉದಾಹರಣೆ ಎಂದರೆ 'ಬಾಳದೇಗುಲದಲ್ಲಿ!'. ಮಹಾತ್ಮನ ಸತ್ಯಾಗ್ರಹದ ಸಮರದ ದಿಗ್ವಿಜಯ, ಅಮೇರಿಕನ್ನರ ಚಂದ್ರಲೋಕದ ಉಡ್ಡಯಣದ ಸಾಹಸ, ಪಶ್ಚಿಮದ ಭಿಷಗಾಚಾರ್ಯರ ಬದಲಿ ಹೃದಯದ ಅಳವಡಿಕೆಯ ಪವಾಡ; ಇಂಥವು ಈ ಶತಮಾನದ ಅದ್ಭುತಗಳಾಗಿರುವಾಗ ಈ ವಸ್ತುಗಳು ಮಹಾಕಾವ್ಯ ಸೃಷ್ಟಿಗೆ ಪ್ರೇರಕಗಳಾಗಬಾರದೇಕೆ? ಶಲಾಕಾಪುರುಷರ ಕಥೆಗಳು ಹೇಗೆ, ನೂತನ ಪುರಾತನ ಶರಣಶರಣೆಯರ ಕಥೆಗಳು ಹೇಗೆ, ಹಾಗೆ ನಮ್ಮ ಕಣ್ಣೆದುರಿನ ನಮ್ಮ ಜತೆಜತೆಯ ಚೇತನಗಳ ಕಥೆಯೂ ದಿವ್ಯವೇ ಭವ್ಯವೇ. ವಿಜ್ಞಾನಿ, ಕವಿ, ತತ್ತ್ವಜ್ಞಾನಿ, ರಾಜಕಾರಣಿ, ಕಲಾವಿದ, ಸಮಾಜಸುಧಾರಕ, ಧರ್ಮ ಪ್ರಚಾರಕ, ಸನಾತನಿ,

ನೂತನಿ-ಇವರೆಲ್ಲ ಬಾಳದೇಗುಲದ ಪೂಜಾಯೋಗ್ಯರಾದ ಪ್ರತಿಮಾರೂಪಕ ಚೇತನರೇ. ತ್ಯಾಗವೋ, ದಾನವೋ, ಸತ್ಯಾಗ್ರಹವೋ, ಉದಾರಚರಿತವೋ ಎಲ್ಲ ತಾರಕ ಕಲ್ಯಾಣ ಗುಣಗಳೂ ಉಪಾಸನಾಯೋಗ್ಯವಾದವುಗಳೇ. ಮುಗ್ಧ ಮಗುವಿನಿಂದ ಪ್ರಕಾಂಡ ಪಂಡಿತನಾದ ಮುಮುಕ್ಷುಚೇತನದವರೆಗೆ ಒಂದು ಜೀವದ ಎಲ್ಲ ಮಜಲೂ ವಿಚಾರ ಯೋಗ್ಯವೇ. ಈ ದೃಷ್ಟಿಯಿಂದ ಬಾಳನ್ನು ನೋಡಿ ಅದರ ಕರ್ಮ ಧರ್ಮಗಳ ಮರ್ಮ ಗಳನ್ನು ಬಿಡಿಸಿ ಬಿಡಿಸಿ ಹಾಡಿದ ಕವಿ ಕರ್ಮಮಾಲಿಕೆಯಾಗಿ 'ಬಾಳದೇಗುಲದಲ್ಲಿ' ರೂಪು ಗೊಂಡಿದೆ.

ಪರೀಕ್ಷೆ, ಪ್ರಯೋಗ, ಚಿಕಿತ್ಸೆ, ವಿಮರ್ಶೆ—ಇವುಗಳ ಎದುರಿನಲ್ಲಿ ಚಿನ್ನ ಚಿನ್ನವೇ ಬೇಗಡೆ ಬೇಗಡೆಯೇ ಎಂಬ ನೈಜಭಾವ, ಬುರುಗು ಬುರುಗೇ ಮುತ್ತು ಮುತ್ತೇ ಎಂಬ ತಥ್ಯಭಾವ ಹೊಳೆದಾಗ ಇಂತಹ ಕವನಗಳು ಮೂಡುತ್ತವೆ. ಬದುಕಿನ ಜಂಜಡದ ಕಸ ಮುಸುರೆಗಳ ಗೊಂದಲದಲ್ಲಿ ಉಂಟಾದ ಉಪ್ರೇಕ ಅವರ ಕಾವಿನ ಪರಿಣಾಮ ಅದರಾಚೆಗಿನ ಶಾಂತಿಯು ಕಾಣಿಕೆ ಹೀಗೆ ಜೀವದ ಒಂದು ಘಟ್ಟ, ಒಂದು ಘಟನೆ. ಕಾವ್ಯವನ್ನು ಪ್ರೇರಿಸಿ ಒಂದರಿಂದ ಒಂದಕ್ಕೆ ಕಾವ್ಯ ಕುಣಿಕೆಗೊಂಡು ತೂಗುಜೊಡರ ಸರಪಳಿಯಾಗಿ ನಿಂತಾಗ ಅವರಲ್ಲಿ ಚಿಜ್ಜ್ಯೋತಿಯ ದೀಪ ಹೊತ್ತಿ ಪರಿಸರಕ್ಕೆ ಪರಿಸರವೇ ಪ್ರದೀಪ್ತವಾಗಿ ಒಳಗು-ಹೊರಗೆಲ್ಲ ಹೊಳೆದಾಗ ಇಂತಹ ಕಾವ್ಯ ಹುಟ್ಟುತ್ತದೆ.

ಅಜ್ಞಾತವಾಸಕ್ಕೆ ಹೊರಟ ಪಾಂಡವರು ತಮ್ಮ ಶಸ್ತ್ರಗಳನ್ನು ಬಗನಿಯ ಮರಕ್ಕೆ ಶವದ ಆಕಾರದ ಚರ್ಮದ ಚೀಲದಲ್ಲಿ ಬಿಗಿದಿಟ್ಟದ್ದರಷ್ಟೆ. ಎಷ್ಟೋ ವೇಳೆ ನಮ್ಮ ಬದುಕು ಆ ಚೀಲವನ್ನು ಹೋಲುವಂತೆ ಇರುತ್ತದೆ. ಒಳಗಣ ಶಸ್ತ್ರಾಸ್ತ್ರಗಳ ಕುರುಹು ಹೊರಗಣ ಶವಾಕಾರದ ಚರ್ಮ ಚೀಲದಲ್ಲಿ ಮುಚ್ಚಿ ಹೋಗಿರುತ್ತದೆ. ಸನ್ನಿವೇಶವೊಂದು ಹಠಾತ್ತಾಗಿ ಒದಗಿದಾಗ ಆ ಚೀಲಕ್ಕೆ ಕೊಂಡೊಯ್ಯುವ ದಕ್ಷ ನೇತಾರನೊಬ್ಬ ನೆರವಾಗುತ್ತಾನೆ, ಉತ್ತರನಿಗೆ ಒದಗಿದ ಪಾರ್ಥನಂತೆ. ಒಮ್ಮೆ ಶಸ್ತ್ರಾಸ್ತ್ರಗಳ ಕುರುಹು ಹೊಳೆದ ಮೇಲೆ ನಮ್ಮ ಕಾಮಧೇನುವನ್ನು ಹಿಡಿದ ಕೈಯನ್ನು ಕಡಿವ ಸಾಹಸ ನಮಗೆ ಬರುತ್ತದೆ. ಇಂತಹ ಸಾಹಸಕ್ಕೆ ತೊಡಗಿದವರ ಚರಿತ್ರೆ ಇಲ್ಲಿದೆ. ಇಂತಹ ಸಾಹಸದ ಬಾಳಿನ ಚೆಲುವಿನ ಚೆಲುವಿನ ಮುನ್ನಡೆಯ ಚಿತ್ತ ಚರಿತ್ರೆಯ ಚಿತ್ರಣವೇ ಇಲ್ಲಿ 'ರೂಪಾರಾಧಕ'ನಲ್ಲಿದೆ, 'ಕಾವ್ಯಗುರು'ವಿನಲ್ಲಿದೆ, 'ಕಲೋಪಾಸಕನಾದ ಸುಧಾರಕ'ನಲ್ಲಿದೆ. ಇಂತಹ ಇನ್ನಿತರ ಕೆಲವು ಬಾಳು ಬಾಳಿದ, ಬಾಳುವ, ವರನರ ಮೂರ್ತಿಗಳಲ್ಲಿ ಇದೇ ಮನುಕುಲದ ಇತಿಹಾಸದ ಪ್ರಗತಿಯ ಚಿತ್ರ ಇದೆ.

ಕವಿ, ಅನುಭಾವಿ, ಕನಸಿಗ, ಧಾರ್ಮಿಕ ಕಲೋಪಾಸಕ, ಕಾವ್ಯಗುರು, ಕರ್ಮ ಯೋಗಿ—ಇವು ಕವಿಯ ಜೀವನದಲ್ಲಿ ಒದಗಿದ 'ಅಗ್ನಿದಿವ್ಯ'ದ ಒಂದು ಕಾಲದಲ್ಲಿ, ಶಾಂತಿಯನ್ನು ಅರಸಿ ಹೊರಟ ವೇಳೆಯಲ್ಲಿ ನಿರ್ಮಾಣಗೊಂಡವು, ಇಡಿಯಾಗಿ, ಬಿಡಿ

ಯಾಗಿ! ನಿರಾಶ್ರಿತಳು, ಮಮವಣಿಗ, ವಿವಾಹಿತ, ಪತಿ, ಅನ್ಯಾನುರಕ್ತಪತಿ, ತಾಯಿ, ತ್ಯಾಗಿ, ಕನ್ನಡಿಗ, ಹಿಂದೂಭಾರತೀಯ, ಸಮತಾವಾದಿ, ಕ್ರಾಂತಿಕಾರ, ಸಾಹಿತ್ಯಾಚಾರ್ಯ—ಇವೆಲ್ಲ ಈ ಕೃತಿಮಾಲೆಯಲ್ಲಿ ಯಥಾಸ್ಥಾನದಲ್ಲಿ ಸೇರ್ಪಡೆಯಾಗಿ ಆ ಮಾಲೆ ಅಸುರ ದುಃಖಿ ಭಕ್ತ ಕನಸಿಗ, ನಿರ್ಲಿಪ್ತ ಈ ಭಾಗಗಳೂ ಕೂಡಿ ಬಾಳದೇಗುಲದಲ್ಲಿ ಕೃತಿಯ ವಾಸ್ತುಶಿಲ್ಪ ಅದ್ಭುತವಾಯಿತು, ಲೋಕಾಶ್ಚರ್ಯಕರವಾಯಿತು.

ಒಟ್ಟಿನಲ್ಲಿ ಈ ಕೃತಿ ಸಮುಚ್ಚಯದಲ್ಲಿ ಕಾಣುವ ದೃಷ್ಟಿ ಬಾಳನ್ನು ನೋಡುವ ದೃಷ್ಟಿ. ಮಗುವಾಗಿ ಹುಟ್ಟಿ ಬೆಳೆಯುವ ಚೇತನ ಅರಳಿ ಅರಳಿ ಮುಕ್ತ ಜೀವದ ಹೃತ್ಪದ್ಮವಾಗುವ ವೇಳೆಗೆ ಅದರ ಅರಳಿಕೆ ಹೇಗೆ ಹೇಗೆ ನಡೆಯುತ್ತದೆ? ಯಾವ ಯಾವ ನರಳಿಕೆ, ಹೊರಳಿಕೆ, ತೆರಳಿಕೆ ಕೆರಳಿಕೆಗಳಿಂದ ಈ ಅರಳಿಕೆ ಪರಿಪೂರ್ಣಗೊಳ್ಳುತ್ತದೆ? ಎಂಬುದರ ಜಿಜ್ಞಾಸಿಕೆ ಇಲ್ಲಿಯ ವಸ್ತು. ಒಂದೊಂದು ವ್ಯಕ್ತಿಯ ಒಂದೊಂದು ವಿಶಿಷ್ಟವಾದ ವಿಕಾಸಕ್ರಮದ ಚರಿತ್ರೆ ಕಟ್ಟಕಡೆಯಲ್ಲಿ ಒಂದೇ ದೃಷ್ಟಿಯ ನಿಲುವಿಗೆ ಬಂದು ನಿಲ್ಲುವ ಚರಿತ್ರೆಯನ್ನೇ ಇಲ್ಲಿ ನಾವು ಕಾಣುತ್ತೇವೆ.

ಏಕತೆಯಲ್ಲಿ ಅನೇಕತೆ, ಅವಿಭಕ್ತದಲ್ಲಿ ವಿಭಕ್ತತೆ, ಸಾಂತದಲ್ಲಿ ಅನಂತತೆ ಇದೇ ಇಲ್ಲಿ ತತ್ವ. ಎಷ್ಟು ವ್ಯಕ್ತಿಗಳೋ ಅಷ್ಟು ದೃಷ್ಟಿಗಳಿವೆ. ಎಷ್ಟು ದೃಷ್ಟಿಗಳೋ ಅಷ್ಟು ದರ್ಶನಗಳಿವೆ. ಆದರೆ ಒಳಹೊಕ್ಕು ನೋಡಿದಾಗ ಪ್ರತಿಯೊಬ್ಬ ವ್ಯಕ್ತಿಯ ವಿಕಾಸದಲ್ಲಿಯೂ ಒಂದು ಏಕಸೂತ್ರವು ಕಾಣುತ್ತದೆ. ಆದು ಪ್ರಾಗಿತಿಹಾಸಕಾಲದಿಂದ ನಮ್ಮ ಸಮಕಾಲೀನ ಶತಮಾನದವರೆಗಿನ ವಿಶ್ವದ ವಿಕಾಸದ ಕಥೆಯಲ್ಲಿ ನಮಗೆ ಸ್ಪಷ್ಟವಾಗಿ ಗೋಚರವಾಗುತ್ತದೆ. ಮಗು, ತಂದೆ, ಕುಮಾರಿ, ಪತಿ, ಕ್ರಾಂತಿಕಾರ, ಜ್ಞಾನಿ, ದಾನಿ, ಸಾತ್ವಿಕ, ಕಾವ್ಯಗುರು, ದುಃಖಿ, ಆಳ್ವಾರ ಹೀಗೆ ಬೇರೆ ಬೇರೆ ವ್ಯಕ್ತಿಗಳ ಬೆಳವಣಿಗೆಯ ಬೇರೆ ಬೇರೆ ಅವಸ್ಥೆಗಳಲ್ಲಿ ಸಹ ವಿಕಾಸದ ಒಂದು ನಿರ್ದಿಷ್ಟವಾದ ವಿಧಾನವಿದೆ ಎಂಬುದು ಗೋಚರವಾಗುತ್ತದೆ. ಈ ವಿಕಾಸದಲ್ಲಿ ಮಗುವಿನ ದೇಹ ಬುದ್ಧಿಗಳ ವಿಕಾಸ ಆ ಮಗುವಿನ ತಾಯಿ, ತಂದೆ, ಒಡಹುಟ್ಟು ಮುಂತಾದ ಬೇರೆ ಬೇರೆ ಪರಿಸರದ ವ್ಯಕ್ತಿ ಶಕ್ತಿಗಳ ಸಮಾವೇಶದಿಂದ ಪ್ರಭಾವಿತವಾಗಿರುತ್ತದೆ. ಆದರ್ಶಪಿತ, ಆದರ್ಶಮಾತೆ, ಆದರ್ಶಪತಿ ಹೀಗೆ ಬಾಳ್ವದೇ ಬಹು ಪಾಲಿನ ಜೀವನದ ಧ್ಯೇಯ. ಇಂತಹ ಬಹು ಜನರನ್ನು ಪ್ರತಿನಿಧಿಸುವ ಪ್ರತಿಮೆಗಳ ಒಂದು ಗುಂಪು ಈ 'ಬಾಳದೇಗುಲದಲ್ಲಿ' ಕಾಣಬರುತ್ತದೆ. ಹಾಗೆಯೇ ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳ ಚಲನವಲನಗಳ ಘಾತಪ್ರತ್ಯಾಘಾತಗಳಿಂದ ಸಂಸ್ಕಾರಗೊಂಡು ಪುರುಷಕಾರವನ್ನು ಮೆರೆವ ಪ್ರತಿಮೆಗಳ ಮತ್ತೊಂದು ಗುಂಪಿನ ಚಿತ್ರಣಗಳು ಇಲ್ಲಿವೆ. ಸತ್ಯಾಗ್ರಹ, ಕರ್ಮಯೋಗಗಳ ದಾರಿಯಲ್ಲಿ ಸಾಗಿದ ಧೀರರ ಚಿತ್ರ ಬೇರೊಂದಿದೆ. ಜ್ಞಾನೋಪಾಸನೆ, ಸೌಂದರ್ಯೋಪಾಸನೆ, ಭಗವದನುರಕ್ತಿ ಇಂತಹ ವಿವಿಧ ಪಥಗಳಲ್ಲಿ ಅನುಭವದ ಪಾಥೇಯಗಳನ್ನು ಕಟ್ಟಿಕೊಂಡು ರಸಯಾತ್ರೆಗೆ

ತೊಡಗಿರುವ ವಿವಿಧ ಜೀವಗಳ ಪ್ರತಿಮೆಗಳ ಕಂಡರಣೆಯೂ ಇಲ್ಲಿವೆ. ಕಟ್ಟಕಡೆಗೆ ಮುಕ್ತ ಜೀವಿಗಳಾಗಿ ಲೋಕಕಲ್ಯಾಣ ಸಾಧಕರಾಗಿ ಬೆಳಗುವ ಪುಣ್ಯಾತ್ಮರ, ಪೂರ್ಣದೃಷ್ಟಿಯ ದಿವ್ಯಾತ್ಮರ ಶಿಲ್ಪಗಳೂ ಇಲ್ಲಿವೆ. ಈ ರೀತಿಯಲ್ಲಿ ಬದುಕಿನ ಹಾಲ್ಗಡಲನ್ನು ತತ್ವದ ಅಮೃತಕ್ಕಾಗಿ ಮಥಿಸಲೆಂದು ತೊಡಗಿದಾಗ ಹಗ್ಗವಾಗಿ ಒಬ್ಬರು, ಕಡಗೋಲಾಗಿ ಒಬ್ಬರು, ಕಮಠರಾಗಿ ಒಬ್ಬರು, ಮಂದರವಾಗಿ ಒಬ್ಬರು ನಿಂತ ನಿಲುಮೆಗಳ ಧೀರಚಿತ್ರ ಈ 'ಬಾಳದೇಗುಲದಲ್ಲಿ' ಕಂಡು ಬರುತ್ತದೆ. ಆದಿಯಿಲ್ಲದ ಆ ಅನಾದಿಕಾಲದಾಚೆಯಿಂದ ನಮ್ಮ ಕಣ್ಣೆದುರಿನ ಕಾಲದ ಈಚೆಯವರೆಗಿನ ವಿಶ್ವದ ಚರಿತ್ರೆಯಲ್ಲಿ ಇಂತಹ ಅಮೃತ ಮಂಥನದ ಸಾವಿರ ಸಂದರ್ಭಗಳಲ್ಲಿ ಅದಕ್ಕೆ ನೆರವು ನಿಂತ ಮಾದರಿಗಳ ಮಾಲಿಕೆಗಳಲ್ಲಿ ಕೆಲವು ಕನ್ನಡಿಗರ ಸುದೈವದಿಂದ ಕನ್ನಡ ನಾಡಿನಲ್ಲಿ, ಕನ್ನಡ ನುಡಿಯಲ್ಲಿ ಕನ್ನಡ ಕವಿಯ ಈ 'ಬಾಳದೇಗುಲದಲ್ಲಿ' ನಮಗೆ ಲಭ್ಯವಾಗಿದೆ. ಆದರ್ಶವೊಂದುಂಟು, ವಾಸ್ತವಿಕತೆಯೊಂದುಂಟು. ವಾಸ್ತವಿಕವಾಗಿ ಪರಿಸರ ವಿಕಸನಗೊಂಡಲ್ಲದೆ ವ್ಯಕ್ತಿ ವಿಕಾಸ ಸಾಧ್ಯವಿಲ್ಲ, ಆದರ್ಶದ ಚಿತ್ರಣ ಸಾಧ್ಯವಿಲ್ಲ. ಆದರ್ಶದ ನಿರ್ಮಾಣವಿಲ್ಲದೆ ಪರಿಸರ ಪ್ರದೀಪ್ತವಾಗುವುದಿಲ್ಲ. ಈ ದೃಷ್ಟಿಯಿಂದ ನೋಡಿದಾಗ ಕವಿ ಇಲ್ಲಿ ತಾವು ಊಹಿಸಿ ಕಂಡ ಉಂಡ ವ್ಯಕ್ತಿತ್ವವನ್ನೇ ಮಾದರಿ ಮಾಡಿಕೊಟ್ಟಿದ್ದಾರೆ. ವಾಸ್ತವದಲ್ಲಿ ಪ್ರತ್ಯಕ್ಷವಾಗಿ ಅನುಭವಕ್ಕೆ ಬಂದ ಮಾದರಿಗೆ ಮನಸೋತು ಅದಕ್ಕನುರೂಪವಾದ ವ್ಯಕ್ತಿತ್ವವನ್ನು ಚಿತ್ರಿಸಿಕೊಟ್ಟಿದ್ದಾರೆ. ಹೀಗಾಗಿ ಸಮಕಾಲೀನ ಸಾಮಾಜಿಕ ಪ್ರಜ್ಞೆ, ಯುಗಪ್ರಭಾವ ಇವುಗಳ ಆಕರ್ಷಣಕ್ಕೊಳಗಾದ ವ್ಯಕ್ತಿಗಳ ಆದರ್ಶವೂ ಆದರ್ಶದ ವ್ಯಕ್ತಿತ್ವವೂ ಇಲ್ಲಿ ರೂಪುಗೊಂಡಿದೆ.

ಈ ಯುಗದ ತತ್ವಾಂಶ, ಈ ಯುಗದ ಆವರಣ ಇವು ಇಲ್ಲಿಯ ಕಾವ್ಯಗುಚ್ಛದ ಕೆಲವು ಕವನಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಪ್ರಕಟವಾಗಿವೆ. ಭಾರತದ ಪುನರುಜ್ಜೀವನದ ದಿನಗಳಲ್ಲಿ ಕನ್ನಡ ನಾಡಿನಲ್ಲಿ ವಿಕಾಸಗೊಂಡ ಆ ಋತಚಿನ್ಮಯೀ ಜಗನ್ಮಾತೆಯ ಲೀಲಾವಿಭೂತಿಯ ಚಿದಂಶ ಪ್ರಕಾರಗಳಲ್ಲಿ ಕೆಲವನ್ನು ಕವಿ ಇಲ್ಲಿ ಕಾಣಿಸಿದ್ದಾರೆ. ಕನ್ನಡ ನಾಡಿನ ಸಮಕಾಲೀನ ಕಾರಣಪುರುಷರ ಪುರುಷಾಕಾರದ ಲೀಲಾ ಚಿತ್ರ ಇಲ್ಲಿ ಚೆನ್ನಾಗಿ ಮೂಡಿಬಂದಿದೆ. ಜೊತೆಗೆ ಭಾರತದ, ಏಷ್ಯದ, ಸಮಸ್ತ ವಿಶ್ವದ, ಕಡೆಗೆ ಇಡಿಯ ಸೃಷ್ಟಿಯ ಮಹದ್ಘಟನೆಗಳ, ಮಹಾನ್ ವ್ಯಕ್ತಿಗಳ ಸುಳುಹು ಹೊಳಹುಗಳೂ ಇಲ್ಲಿವೆ. ಒಮ್ಮೆ ಮುನ್ನೆಲೆಯಲ್ಲಿ ಒಮ್ಮೆ ಹಿನ್ನೆಲೆಯಲ್ಲಿ ಒಮ್ಮೆ ಮುನ್ನೆಳಲಾಗಿ ಒಮ್ಮೆ ಹಿನ್ನೆಳಲಾಗಿ ಈ ಅಂಶಗಳೆಲ್ಲ ಇಲ್ಲಿ ಛಾಯೆಗಾಣಿಸಿವೆ. ಒಟ್ಟಿನಲ್ಲಿ ಈ ಯುಗದ ವಿಶೇಷದ ಆವರಣದಲ್ಲಿ ಪರಂಪರಾನುಗತವಾಗಿ ಬಂದ ಪ್ರಾಚೀನದ ದಾರ್ಶನಿಕ ಬೆಳವಣಿಗೆಯಿಂದ ದೀಪ್ತಗೊಂಡ ಕಾಂತಿಪುಂಜಗಳಂತಿರುವ ತೇಜೋಮೂರ್ತಿಗಳ ದಿವ್ಯ ಚಿತ್ರ ಇಲ್ಲಿದೆ. ಒಮ್ಮೆ ನಿರೂಪಣೆಯಾಗಿ, ಒಮ್ಮೆ ಸಂಭಾಷಣೆಯಾಗಿ, ಒಮ್ಮೆ ಕಾಲ್ಪನಿಕ ಸನ್ನಿವೇಶದ ರಚನೆಯಾಗಿ

ಮತ್ತೊಮ್ಮೆ ಸ್ವಗತ ಪರವೃತ್ತವಾಗಿ ಈ ಆದರ್ಶಗಳ, ಈ ವ್ಯಕ್ತಿಗಳ, ಈ ಶಕ್ತಿಗಳ ತತ್ವ ವಿವೇಚನೆ ಸಾಗಿದೆ. ಸುಸಂಸ್ಕೃತ ಕನ್ನಡಿಗರು ಆಡುತ್ತಿರುವ ಕನ್ನಡದಲ್ಲಿ ವಸ್ತುವಿಗನು ಗುಣವಾದ ಒಂದು ಶೈಲಿ ರೂಪುಗೊಂಡು ಭಾವಕ್ಕೆ ತಕ್ಕ ಛಂದದಲ್ಲಿ ಈ ಕೃತಿ ಅರಳಿದೆ.

ಈ ಕವಿ ತಮ್ಮ ಪೀಠಿಕೆಯಲ್ಲಿ ಹೇಳಿರುವ ಒಂದು ಮಾತು ಸದಾ ನೆನಪಿಡತಕ್ಕದ್ದು : "ಓರ್ವ ವ್ಯಕ್ತಿಯು ತಿಳಿಯಬೇಕಾಗಿದ್ದು ಬಾಳನ್ನು. ಬಾಳದೇಗುಲದಲ್ಲಿ ಆಡಿ ಮಾತ್ರ ಅವನು ಬಾಳನ್ನು ತಿಳಿಯಬಲ್ಲನು. ಆದರೆ ಅವನು ತಿದ್ದಬೇಕಾಗಿದ್ದು ತನ್ನ ಬಾಳನ್ನು ಓರ್ವ ವ್ಯಕ್ತಿಯ ಬಾಳಿನಲ್ಲಿ ಬಾಳಿನ ಅನಂತತೆಯೆಲ್ಲಾ ಮೂಡುವುದೇ ಅದರ ಪೂರ್ಣತೆ ಯಾಗಿದೆ."

ಈ ಹೊತ್ತಗೆಯ ಆರಂಭದ ಕವಿತೆಗಳನ್ನು ಕುರಿತು ಎರಡು ಮಾತು ಹೇಳಬಹುದು. ಇಲ್ಲಿ 'ಬಾಳದೇಗುಲದಲ್ಲಿ ಅಡಿಯಿಡುವ ಎಳೆಯನಿಗೆ' ಎಂಬುದು ಮೊದಲ ಕವನ. ಇದರಲ್ಲಿ ಬರುವ

ನಂಬದಿರು ಒಂದೆ ಧರ್ಮವ ಒಂದೆ ಮಾರ್ಗವನು !
ಇಂಬುಗೊಡದಿರು ಯಾವುದೊಂದೆ ಶ್ರುತಿಗೆ !
* * *
ತೆಕ್ಕೆ ಬೀಳಾಗಸಕೆ ಎಲ್ಲ ದರ್ಶನಗಳಿಗೆ
ನೆಲವೆ ಒರೆಗಲ್ಲೆಂಬ ಶ್ರದ್ಧೆ ಬರಲಿ !

ಎಂಬ ಮಾತು ಕವಿಯ ಉದಾರ ಬುದ್ಧಿಯನ್ನು ಸಮನ್ವಯ ವಿವೇಕವನ್ನು—ಸುಂದರವಾಗಿ ಪ್ರತಿಪಾದಿಸುತ್ತದೆ. ಈಗ ಇದು ಸಕಾಲಿಕವಾದ ಉಪದೇಶ.

'ಸಮರ್ಪಣೆ' ಎಂಬ ಆ ಮುಂದಿನ ಕವನ ಈ ಹೊತ್ತಗೆಗೆ ಬರೆದ ಪದ್ಯರೂಪದ ಪೀಠಿಕೆಯಾಗಿದೆ. ಮಗುವಿನಿಂದ ಮುನಿಯವರೆಗೆ ಚೇತನದ ವಿಕಾಸವುಂಟೆಂಬ ಮಾತಿ ಹೇಗೆ ನಿಜದ ನಿದರ್ಶನವಾಗಿದೆ ಈ 'ಬಾಳದೇಗುಲದಲ್ಲಿ' ಎಂಬುದರ ವಿವರ ಇಲ್ಲಿದೆ.

ಬಾಳದೇಗುಲದಲ್ಲಿ ಕೈಮುಗಿದು ನಿಂತಿದ್ದೆ ಇರವಿಗರಿವಾಗಲೆಂದು ;
* * *
ದೇಗುಲದ ಪ್ರಾಕಾರವೆಮಗೆ ಹೊರತಾಗಿರಲು ದೈವತವ ಕಾಣ್ಬುದೆಂತು ?
* * *
ನಾವು ಶುಚಿಯಾದಂತೆ ಮಾಯೆ ಮರೆಯಾಗುತ್ತ ತಾಯ ಮೊಗ ತೋರುತಿಹುದು
* * *
ಎಲ್ಲ ದರ್ಶನಗಳಾ ಸಾರಸಂಗ್ರಹವೆ ನಾನರ್ಚಿಸುವ ಸತ್ಯವೆಂದೆ
ಈ ಯುಗದ ಈ ಜಗದ ಕಾಣ್ಕೆಗಳ ಮೊಗಸಾಲೆ ಕವನ ಮಂದಿರವಿದೆಂದೆ

ಈ ಮೇಲಣ ಮಾತುಗಳು ಕವಿಯ ಕವನಗಳಿಗೆ ಬರೆದ ಪೀಠಿಕಾರೂಪದ ಮಾತುಗಳ ಮುಂದೆ ಇಲ್ಲಿ ವಾತ್ಸಲ್ಯದ ಪ್ರಕೃತಿಯ ಐಸಿರಿಯಲ್ಲಿ ಮುಕ್ತಿಯನ್ನು ಕಾಣುವ ಮಗ

ತ್ರ ಸಮಾಜಗಳಲ್ಲಿ ಮಿತ್ರನಂತೆ ಆತ್ಮ ಉದಯಿಸಬೇಕು ಎಂಬ ನರನ ಆಧಿಪತ್ಯವನ್ನು ಲ್ಲಗಳೆಯುವ ಕುಮಾರಿ, ತನ್ನ ಬುದ್ಧಿ, ಶ್ರದ್ಧೆ ಉತ್ಸಾಹಗಳನ್ನೆಲ್ಲ ಬದಿಗಿಟ್ಟ ಕನ್ಯೆ ಬ್ಬಳ ಪಾಣಿಗ್ರಹಣವೇ ಸರ್ವಸ್ವವೆಂದು ಹೊರಟ ಮದುವಣಿಗ, ಸತಿಯೇ ದೈವವೆಂದು ಂಬಿ ನಡೆವ ಪತಿ, ತನ್ನ ತಾಯ್ತನದ ಹಿರಿಮೆ ಸಾರುವ ತಾಯಿ, ಮಗನ ಏಳಿಗೆಗಾಗಿ ುಡಿದು ಸಣ್ಣಗಾದ ತಂದೆ, ತನ್ನ ಪ್ರಿಯತಮೆ ಮಡಿದ ಮೇಲೆಯೂ ಅವಳಿಗಾಗಿ ಂಬಲಿಸಿ ಒಳಗಣ್ಣಿಗೆ ಕಂಡ ಅವಳ ಜ್ಯೋತಿರ್ದೇಹ ದರ್ಶನದಿಂದ ಅಮರ ಪ್ರೇಮಕ್ಕೆ ಾತ್ರನಾದ ಪ್ರಿಯತಮ ಇವರೆಲ್ಲರನ್ನು ಕವಿ ಕಂಡು ಹಾಡಿದ್ದಾರೆ ಮುಂದಿನ ುಟಗಳಲ್ಲಿ.

ಕನ್ನಡದ ಜನಮನದಲ್ಲಿ ಜಗವೆ ಪಡಿ ಮೂಡಬೇಕು ಎಂಬ ಕನ್ನಡಿಗ, ಭಾರತಕ್ಕಾಗಿ ಸುಮೀಸಲೆಂದ ಆರ್ಯಪುತ್ರ, ಶಾಂತಿಗಾಗಿ ರಕ್ತದ ಹೊಳೆ ಹರಿಸುವ ಕ್ರಾಂತಿವೀರ, ನಂತತೆಯ ಅನುಭವಕ್ಕಾಗಿ ಸರ್ವವನ್ನು ತ್ಯಜಿಸಿದ ತ್ಯಾಗಿ, ಜ್ಞಾನದ ದಾರಿಯೇ ದಾನ ಂಬ ದಾನಿ, ಬನಶಂಕರಿಯ ಯುಗದಲ್ಲಿ ನಾವು ನೀಲಕಂಠರಾಗಿ ವಿಷನುಂಗಬೇಕೆಂಬ ದಸ್ಯ, ವಿಷಮತೆಯನ್ನು ಕಿತ್ತು ಸಮಾನತೆಯ ಬಾವುಟ ಹಾರಲೆಂಬ ಸಮತಾವಾದಿ, ಳೆಯನ್ನು ಪಾದಾಕ್ರಾಂತವಾಗಿಸಹೊರಟ ಅಸುರ, ಋತದ ದಾರಿಯಲ್ಲಿ ಕಹಿಯೇ ಹಿಯೆಂಬ ಸತ್ಯಾಗ್ರಹಿ, ಕಣ್ಣೆದುರು ಬಂದದ್ದಕ್ಕೆ ಸಜ್ಜಾಗಬೇಕೆಂಬ ಕರ್ಮಯೋಗಿ— ವರೆಲ್ಲ ಬಾಳದೇಗುಲದಲ್ಲಿ ದೇವಿಯ ದರ್ಶನಕ್ಕೆ ಕಾದವರೇ.

ಕರ್ಮಕಾಂಡದ ಸನಾತನಿ, ಆದಿಶೇಷನ ಮಯ್ಯೆ ಜಗ, ಹೆಡೆಗಳೇ ವ್ಯಕ್ತಿ, ಹೆಡೆಗಳಲಿಹ ್ಷ ಬುದ್ಧಿ ಎಂಬ ವಿನೂತನಿ, ಬುದ್ಧಿ ವೈಭವವೇ ಸಿದ್ಧಿ ಎಂಬ ಸುಧಾರಕ, ಪಂಚಭೂತ ಳ ಗೆಲುವೇ ಸುಖದ ಹಾದಿ ಎಂಬ ವಿಜ್ಞಾನಿ ಈ ಜನರೂ ಬಾಳದೇಗುಲದಲ್ಲಿ ಬಾಳ ೇವಿಯ ದರ್ಶನಕ್ಕೆ ಬಂದವರೇ.

ಪ್ರೀತಿಯೇ ದೇವರೆಂಬ ರಸಿಕ, ಚೆಲುವೇ ದೇವರೆಂಬ ಕಲಾವಿದ, ರಾಗಭೋಗಗಳ ಣ್ಣದ ಆಟವಾಡಬೇಕೆಂಬ ಕವಿ, ಬಾಳೆಂದರೇ ಲೀಲೆ ಎಂಬ ಆಟಗಾರ, ಬರುವ ುಗದ ನಾಯಕನಾಗಿ ಬಾಳನ್ನು ಆಹ್ವಾನಿಸುವ ಪ್ರವಾದಿ ಹೀಗೆಯೇ ಸಾಕ್ಷಿಯಾಗಿ ೋಕವನ್ನು ಕಂಡ ಸಾಕ್ಷಿತತ್ಪರ, ಸ್ಫೂರ್ತಿಯಿಂದ ಭೂವೈಕುಂಠವನ್ನು ಹಾಡಿದ ಕಾವ್ಯ ುರು, ಯೋಗಜೀವಿಯಾದ ಉದಾರಚರಿತ, ಇವರೂ ದೇವಮಂದಿರದ ಭಕ್ತರೇ. ೋಕದೀ ಬಣ್ಣಗಳು ಬರಿಮೇಲು ಸುತ್ತು ಕುಂಡಲಿನೀ ಶಕ್ತಿ ಜಾಗೃತಗೊಂಡ ನೋಟವೇ ೕಸೆಂಬ ಅನುಭಾವಿ, ಇಂದ್ರದೀವಿಗೆ ಕಳೆದುಕೊಂಡು ಬೇರೆ ಲೋಕದ ಔತಣಕ್ಕೆ ಭೆಯು ಕರೆಬರುವುದೆಂಬ ಕನಸಿಗ, ದುಃಖ ಸುಖಗಳ ಮೀರಿನಿಂತ ದುಃಖಿ, ಸೃಷ್ಟಿಯೇ ಮಾಣವೆಂಬ ನಿರ್ಲಿಪ್ತ, ಭೂಮದ ಪೂಜೆಯೇ ಸರಿಯೆಂಬ ಭಕ್ತ,—ಇವರೂ ಈ ಡಿಯ ಅಡಿಯವರೇ.

ಪಾಂಡಿತ್ಯದ ಉಸುಬಿನಲ್ಲಿ ಬಿನ್ನಣದ ನಂದನವನ್ನು ಶೋಧಿಸುವ ಜ್ಞಾನಿ, ಪಾವ ನಾಗಿ ಜನಿಸಿ ಪಂಡಿತನಾಗಿ ಬೆಳೆದು ಬಾಳಿಲ್ಲ ಹಾಳೆಂದು ವಿಹ್ವಲಗೊಂಡು ಗುರುಚರ ದರ್ಶನದಿಂದ ಪ್ರಶಾಂತನಾದ ಆಳ್ವಾರ, ಇವರೂ ಇಲ್ಲಿ ಹಿರಿಯರೇ. ಈ ಮುಕ್ತಜೀವ ಲೋಕಕಲ್ಯಾಣಕ್ಕಾಗಿ ಬಾಳಿದವರು ಆತ್ಮ ಕಲ್ಯಾಣವನ್ನು ಸಾಧಿಸಿದವರು—ಇವ ಕೃಪೆಯಿಂದ ಕವಿ 'ಶಿರವು ಸಾಸಿರಪಳದ ಕಮಲವಾಗರಳುತ್ತ ಜ್ಞಾನರವಿ ಮೂಡಬಹುದ ಎಂಬ ನಂಬಿಕೆ ತಳೆದಿದ್ದಾರೆ. ಇಂತಹ ದಿವ್ಯ ವಸ್ತುವಿನ ಭವ್ಯಕಥನದ ನವ್ಯ ಮಹಾಕಾ ಪ್ರಕಾರದ ಪುಷ್ಪವನ್ನು ತನ್ನ ಗುರು ಸ್ವೀಕರಿಸಿದರೆಂಬ ಭವ್ಯತೆಯ ಭಾವದಲ್ಲಿ ಈ ಕವ ಮುಗಿಯುತ್ತದೆ.

ಮುಂದಿನ ಮೂರು ಪದ್ಯಗಳು: 'ದೇಗುಲದ ದಾರಿಯಲ್ಲಿ!' 'ಬಾಳದೇಗುಲದ 'ಯಾತ್ರಿಕರು'. ಇವು ಮೂರೂ 'ಪ್ರಾರ್ಥನೆ' ಎಂಬ ಶೀರ್ಷಿಕೆಯಡಿಯಲ್ಲಿ ಬರತಕ್ಕ ದೇವಿಯ ದರ್ಶನಕ್ಕಾಗಿ ಸಾಶ್ರಯರೂ ನಿರಾಶ್ರಯರೂ ವಿಜ್ಞಾನಿಗಳೂ ಅಜ್ಞಾನಿಗಳ ಶಾಂತರೂ ಅಶಾಂತರೂ ಬುದ್ಧರೂ ಬದ್ಧರೂ ಕೂಡಿಯೇ ಬಂದಿರುವರು ಬಾ ದೇಗುಲದಲ್ಲಿ ಬಾಳದೇವಿಯ ದರ್ಶನಕ್ಕಾಗಿ.

ಓ ದೇವಿ ಮಾದೇವಿ ಕಣ್ದೆರೆದು ನೋಡು
ಬಂದ ಭಕ್ತರನಿನ್ನು ಹರಸು ಕಾಪಾಡು

ಎಂಬ ಮೊರೆಯಲ್ಲಿ ಈ ಗುಂಪಿನ ಈ ಕವನಗಳು ಮುಗಿಯುತ್ತವೆ. ಮುಂದೆ ಗುಂಪು ಎಂಬ ವಿಭಾಗದಲ್ಲಿ ಬರುವ ಮೊದಲ ಕವನ 'ಮಗು'. ಇಲ್ಲಿ ಮುಂದೆ ಪ್ರಬುದ್ಧನಾಗಿ ಬಾಳ ಚೇತನ ಶೈಶವಾವಸ್ಥೆಯಲ್ಲಿ ಹೇಗಿರುತ್ತದೆ ಎಂಬುದರ ಚಿತ್ರವಿದೆ. ಮಗುವಿನ ಮನ ಧರ್ಮದ ಸಹಜ ಸುಂದರ ನಿರೂಪಣೆ ಇಲ್ಲಿದೆ. ಮಗುವಿನ ಜನನೀಜನಕರ ವಾತ್ಸ ಪೂರ್ಣವಾದ ಚಿತ್ತವೃತ್ತಿಯ ಲಹರಿಗಳೂ ಇಲ್ಲಿವೆ. 'ದೊಡ್ಡವ ನೀನಾಗಲೆಂದು ನ ಜೀವ ಸಣ್ಣಗಾಯ್ತು' ಎಂಬ ಮಾತಿನಲ್ಲಿ ತಾಯಿತಂದೆಗಳು ಮಗುವಿನ ಲಾಲನೆ ಪಾ ಗಳಲ್ಲಿ ವಹಿಸಿದ ಶ್ರದ್ಧೆ ಹಣೆಯಿಕ್ಕಿದೆ. ತಿಳಿಯದವನಿಗೆ ಸಂಸಾರ ನೀರಿಲ್ಲದ ಕಾಸಾ ಭೂಮಿ ದುಃಸ್ವಪ್ನದ ಉಂಡೆ, ಸೂರ್ಯ ಸಿಡಿಲಗುಂಡು. ತಿಳಿದು ಬಾಳಿದವನ ಕಥೆ ಬೇರೆ. ಆ ಕಥೆಯೇ ಈ ಮಗುವಿನ ಕಥೆ ಅವರ ತಾಯಿ ತಂದೆಗಳ ಕಥೆ.

'ಕುಮಾರಿ' ಈ ಗುಂಪಿನ ಎರಡನೆಯ ಕವನ. ಇಲ್ಲಿ ಹೆಣ್ಣಿನ ಬಾಳಿನ ಕಣ್ಣೀರಿನ ಕ ಹೊನಲಾಗಿ ಹರಿದಿದೆ. ಹೆಣ್ಣನ್ನು ನಮ್ಮ ಜನ ನಡೆಸಿಕೊಂಡ ರೀತಿಯ ದಾರುಣ ಚಿ ವಿದೆ.

ಪಂಚಮರಂತೆಯೆ ನಮ್ಮನು
ಚತುರ್ವೇದ ಷಟ್ಛಾಸ್ತ್ರಗ-
ಳಿಂದ ದೂರವಾಗಿಸಿತ್ತು ದ್ವಿಜವೃಂದವು

ಅಸುಮನೆಯಲಿ ದುಡಿಯುವಾಳು
ಪಸುಮನೆಯಲಿ ಬರಲು ಗೋಳು :
ಸೆಜ್ಜೆವನೆಯ ಬಿಜ್ಜೆಯೊಂದೆ ಬಾಳಿನಂದವು

ಅಶ್ವಶಾಲೆ ಗಜಶಾಲೆಯ
ಕಟ್ಟೆದೊಲಂತಃಪುರಗಳ
ಕಟ್ಟಿಸಿತ ರಾಜಾಧಿರಾಜರೆಲ್ಲರುರಿದರು ;
ಪಕ್ಷಿ ಶಾಲೆಯಲ್ಲಿ ಗಿಳಿಗ-
ಳಂತೆ ರಾಣಿವಾಸದಲ್ಲಿ
ನಮ್ಮನಿಟ್ಟು ಪಂಜರದಲಿ, ಹಲ್ಲು ಕಿರಿದರು.

ಂಬಂತಹ ಮಾತುಗಳಲ್ಲಿ ಶತಶತಮಾನಗಳಿಂದ ಹೆಣ್ಣಿಗೆ ಒದಗಿದ ಘೋರಾವಸ್ಥೆಯ ಥೆಯನ್ನು ಕಥಿಯಿಸಲಾಗಿದೆ. ಹೆಣ್ಣೇನು ಗಂಡೇನು ? ಕವಿ ಹೇಳುತ್ತಾರೆ. 'ಭಾವರೂಪ ೀವಗಳನು ಮೀರಿದಾತ್ಮವೊಂದೆಯೆಂದು ಮಣ್ಣಿನಂತೆ ಹೆಣ್ಣದೆಂಬ ಭಾವ ಕಳೆಯ ೀಕು' ಎನ್ನುತ್ತಾರೆ. ಹೆಣ್ಣು ಹೇಳುತ್ತಾಳೆ:

ನನ್ನ ಸ್ತ್ರೀತ್ವವನ್ನರಳಿಸಿ
ಪೂರ್ಣಗೊಳಿಸುವಂಥ ಪುರುಷ
ಬಂದು ತನ್ನ ಪೌರುಷವನು ಬಳಿಗೆ ಮಾಗಿಸಿ
ಮುಂದಪೌರುಷೇಯದೆಡೆಗೆ
ನನ್ನ ಜೊತೆಗೆ ಸಾಗಿಬರಲಿ
ಕಾಲದಾಚೆ ಬಾಳ ನೌಕೆಯನ್ನು ನೂಗಿಸಿ.

ಲ್ಲಿಗೆ ಕವನ ಮುಗಿಯುತ್ತದೆ. ಆದರೆ ಆ ಕುರಿತ ಚಿಂತನಕ್ಕೆ ಮುಗಿವೆಲ್ಲಿ!

'ಮದುವಣಿಗ' ಎಂಬುದು ಇಲ್ಲಿ ಮೂರನೆಯ ಕವನ. ಕವಿ ತಮ್ಮ ಗೆಳೆಯರೊಬ್ಬರ ನೋಧರ್ಮಕ್ಕೆ ಇಲ್ಲಿ ಕವಿತೆಯ ಕನ್ನಡಿ ಹಿಡಿದಿದ್ದಾರೆ. ಈ ಗೆಳೆಯ ಧ್ಯೇಯಜೀವಿ, ಸುಣಿ, ಉತ್ಸಾಹಿ, ಕಾರ್ಯಶೀಲ; ಆರಂಭದಲ್ಲಿ ಜೀವನದ ಕೆಲಕೆಲವು ರಂಗಗಳಲ್ಲಿ ವೇಶಿಸಿ ಕೊನೆಗೆ ಮದುವೆಯೇ ಶಾಂತಿ ಸಾಧನೆಯ ಹಾದಿಯೆಂದು ಮದುವಣಿಗನಾಗಿ ಂತ ಗೆಳೆಯ ಈತ.

ಸಖ ನಿನ್ನ ನಿರ್ಧಾರದಲಿ ಜಾಣ್ಮೆಯುಂಟು
ಸತಿಯೆದುರು ಬಿಚ್ಚಿನ್ನು ಕನಸುಗಳ ಗಂಟು
ನಿನ್ನಾಸೆ ಹಂಬಲವನವಳಿಗೊರೆಯಿನ್ನು
ಮನವೆರಡು ಕೂಡಿರಲು ಬಾಳಿರಲಿ ಚೆನ್ನು
ಕನಸುನನೆಕೊನೆಗೊಳಲಿ ದಿನದ ಬಾಳಿನಲಿ.

ಂದು ಕವಿ ಹಾರೈಸುತ್ತಾರೆ.

ಈ ಗುಂಪಿನ ನಾಲ್ಕನೆಯ ಕವನ 'ವಿವಾಹಿತ'. ತಾವರೆಗೊಳ ಈಸುಗಾರ ಈ ದೃಷ್ಟಾಂ
ವನ್ನು ಇಟ್ಟುಕೊಂಡು ವಿವಾಹಿತನ ಮೊದಲ ಸಂದೇಹ ಆ ಮೇಲಣ ಸಂತೃಪ್ತಿಗಳನ್
ಇಲ್ಲಿ ಚಿತ್ರಿಸಲಾಗಿದೆ. ಮುತ್ತಿಗಾಗಿ ಈ ಈಸು-ಮುಳುಗುಗಳು ಬೇಕೇಬೇಕು, ಜೀವಕ್ಕೆ
ಕೊಳದಲ್ಲಿ ಮೊದಲು, ಕಡಲಲ್ಲಿ ಆಮೇಲೆ. ಇದು ಇಲ್ಲಿ ತತ್ತ್ವ.

'ಪತಿ' ಇಲ್ಲಿಯ ಐದನೆಯ ಕವನ. ಪ್ರೀತಿ ಎಂದರೆ ಏನೆಂಬುದರ ಮೀಮಾಂಸೆ ಇಲ್ಲಿದೆ
ಆತ್ಮಾನುರಾಗದ ಅಮರ ಪ್ರಭುವೇ ಪ್ರೀತಿ. ಅದು ದೈಹಿಕವಾದದ್ದಲ್ಲ ದೈವಿಕವಾದದ್ದು
ಎಂಬುದು ಇಲ್ಲಿಯ ತತ್ತ್ವ.

ನಿದ್ರೆಗೆಯ್ಯುವಾತ್ಮ ಪುರುಷ—
ನೆಚ್ಚರಿಸುವ ಮಂತ್ರ, ಪ್ರೀತಿ

ಎಂಬ ಮಾತು ಮನನಯೋಗ್ಯ. ಮರಣದಾಚೆಗೂ ಪ್ರೀತಿಪಕ್ಷಿ ಆಕ್ಷಿ ತೆರೆದು ಹಾ
ಬಲ್ಲುದು ಎಂಬ ಪ್ರೇಮದ ಮೃತ್ಯುಂಜಯತ್ವ ಇಲ್ಲಿದೆ. ಈ ಗುಂಪಿನ 'ಅನ್ಯಾನುರಕ್ತಪತಿ
ಎಂಬ ಆರನೆಯ ಕವನ ಕೌಟುಂಬಿಕ ಜೀವನದ ಆರನೆಯ ಮಾದರಿಯೇ ಸರಿ. 'ಚಿ
ನವೀನತೆಯಲ್ಲಿ ಮನದ ಸಮರಸದಲ್ಲಿ' 'ಒಲಿದ ಹೆಣ್ಣೊಡನಿದ್ದು ಬಾಳನಾಗಿಸೆ ಮುದ್ದು ಅದ
ಯೋಗ' ಎಂಬ ಮಾತುಗಳಿಲ್ಲಿ ಮನನೀಯವಿವೆ. 'ಅರ್ಥ ಧರ್ಮ ಕಾಮ ಪ್ರೇಮಗಳಲ್ಲಿ
ಇನ್ನೊಂದಕ್ಕೆ ನಾನು ಜೊತೆಯಾಗಿದ್ದೇನೆ, ನೀನು ನಿನ್ನವನನ್ನು ಅರಸಿಕೋ ನಿನ್ನ ಬಾಳ
ಚೆಲುವಾಗಲಿ' ಎಂಬ ಶುಭಾಶಯ ಅನ್ಯಾನುರಕ್ತಪತಿಯ ಅಂತರಂಗವನ್ನು ಬಹಿರಂ
ಗೊಳಿಸಿದೆ ಕಲಾಮಯವಾಗಿ.

'ತಾಯಿ' ಈ ಮಾದರಿಯಲ್ಲಿ ಏಳನೆಯ ಕವನ. ತಾಯಿತನದ ಹಿರಿಮೆಗರಿಮೆಗಳ ಚಿತ್ರ
ಇಲ್ಲಿದೆ.

ಪ್ರೇಮವೆನಗಾರಾಧ್ಯವಿರಲದಕೆ ನೈವೇದ್ಯ—
ವಲ್ಲವೇ ನನ್ನಣುಗರೆಳೆಯ ನಗೆಯು?

ಎಂಬ ತಾಯಿಯ ಕೇಳಿಕೆ ಅರ್ಥಪೂರ್ಣವಾಗಿದೆ.

ಸತಿಯಾದ ಮಾನಿಸಳು ಮಾತೆಯಾಗದೆ ನಿಲಲು
ಬಾಳುವೆಗೆ ಮುಕುಟವನು ತೊಡಿಸದಂತೆ;

ಎಂಬಲ್ಲಿ ತಾಯ್ತನದ ಹಂಬಲದ ಹಿರಿಮೆ ಸೂಸುತ್ತಿದೆ.

ಬಾಳ್ವಿಕೆಯ ಒಗಟಕ್ಕೆ ಬಾಳುವೆಯೆ ಉತ್ತರವು.
'ಎಂತಿರಲಿ?' 'ನಿನ್ನಿರವು ಎಂತೊ ಅಂತೆ!'

* * *

ಕ್ರಿಸ್ತನ ಪುರಾಣದರ್ಥವ ಮಥಿಸುವುದಕಿಂತ
ಕ್ರಿಸ್ತಮಾತೆಯು ನೋದವಲ್ಲೆ ಮೇಲು?

ಮಾತುಗಳು ಮತ್ತೆ ಮತ್ತೆ ವಿಚಾರ ಮಾಡತಕ್ಕವು.

'ತಂದೆ' ಈ ಗುಂಪಿನ ಎಂಟನೆಯ ಕವನ. ತಂದೆ ಜೀವ ಹುಟ್ಟಿದ ಮಗುವನ್ನು ಸ್ವಾಗ ಅದರ ಲಾಲನೆಪಾಲನೆಗಳಲ್ಲಿ ತನ್ನ ಮನಗಮನಗಳನ್ನು ಹರಿಯಬಿಟ್ಟಾಗ ಹೊಳೆ ಸ್ಟ ಸೂಕ್ಷ್ಮ ಭಾವಗಳನ್ನು ಗುರುತಿಸಲಾಗಿದೆ ಇಲ್ಲಿ. ಇಲ್ಲಿ ಈ ಕವನದ ಕೊನೆಯ ಲ್ಕು ಸಾಲುಗಳನ್ನು ಮಾತ್ರ ಉದ್ಧರಿಸಿ ಈ ಭಾಗವನ್ನು ಮುಗಿಸುತ್ತೇನೆ.

ನಿನ್ನ ದೈವ್ಯದ ಗಂಟು ನಿನ್ನೊಡನೆ ತಂದಿರುವೆ.
ನಮ್ಮ ಮನೆಯಲ್ಲಿದನು ಬಿಚ್ಚಿ ನೋಡು.
ಆಟಕೆಂದಿಳಿದಿಂದು ಧಾರುಣಿಗೆ ಬಂದಿರುವೆ
ನಮ್ಮಂಗಳದಿ ಮೊದಲಿನಾಟವಾಡು

* * *

ಗುಂಪು ೨ ಎಂಬ ವಿಭಾಗದಲ್ಲಿರುವ ಕವನಗಳಲ್ಲಿ 'ಕನ್ನಡಿಗ' ಎನ್ನುವುದು ಮೊದಲ ಯ ಕವನ. ಈ ಕವನ ಪುಟ್ಟದು. ಆದರೆ ಇಲ್ಲಿ ಇರುವ ಅರ್ಥ ದೊಡ್ಡದು. 'ಹಿಮಶ್ವೇತ-ಶ್ಯಾಮ, ಚಕ್ರವರ್ತಿ-ಗುಲಾಮರೆಂಬ ಪಿಂಗಡಕೆ ಹುಟ್ಟಿ, ಮಾನವರು ಮರೆತಿರುವ ಂದೆ ಕುಲವೆಂಬುದನು ಪಂಗಡಕೆ ಪಟ್ಟಕಟ್ಟಿ.' 'ದೊಡ್ಡವರ ಹೆಸರಿನಲಿ ಸಣ್ಣವರು ತಕಟ್ಟಿ ಬಾಳುವರು ಸ್ವಾಮಿಯಾಗಿ; ಮಾತಿನಲಿ ಸ್ವರ್ಗವನು ಕೃತಿಯಲ್ಲಿ ನರಕವನು, ಮುಗಿಸುವ ಕಾಮಿಯಾಗಿ'—ಇಂತಹ ಮಾತುಗಳಲ್ಲಿ ಕಣ್ಣೆದುರಿನ ಸಮಾಜದ ಷಮ-ವಿಕಟ ಪರಿಸ್ಥಿತಿಯ ಚಿತ್ರವನ್ನು ಮೂಡಿಸಿದ್ದಾರೆ ಕವಿ. ಇಂತಹ ಪರಿಸ್ಥಿತಿಯಲ್ಲಿ ್ನಡಿಗನು ಹೇಗಿರಬೇಕು? ಕವಿ ಹೇಳುತ್ತಾರೆ:

ಬಾಳುವೆನು ನಾ ಸತ್ಯದಾಳುಹೋಳಾಗಿ,
ಸತ್ಯಕ್ಕೆ ಗೆಲುವಿರಲಿ, ಇಲ್ಲದಿರಲಿ:—
ದೇವ ಕೈಯ್ಯಲಿ ಕೊಟ್ಟ ಬಿದಿರನಿದನು
ಹೆಜ್ಜೆ ಹಾಕುತ ಮಾಡುಕೊಂಡು ಮುರಲಿ.

'ಹಿಂದೂ ಭಾರತೀಯ' ಎಂಬುದು ಈ ಗುಂಪಿನ ಎರಡನೆಯ ಕವನ. ಇಲ್ಲಿ ಚರಿತ್ರೆಯ ಸುಹೋಗುಗಳ ಒಂದು ದೊಡ್ಡ ಅಧ್ಯಾಯವೇ ಕವನರೂಪವಾಗಿ ಮೈತಳೆದಿದೆ. ್ರಚೀನ ಭಾರತದ ವೈಭವವನ್ನು ಕುರಿತು ಕವಿ ಹಾಡಿದ್ದಾರೆ. ವೇದ ಉಪನಿಷತ್ತುಗಳ ಮೆಗರಿಮೆಗಳಿಂದ ಪ್ರಾಚೀನ ಭಾರತ ಬೆಳೆದು ಬೆಳಗಿ ಬಾಳಿದ ಚಿತ್ರಗಳನ್ನು ಕವಿ ಿಸಿಕೊಳ್ಳುತ್ತಾರೆ. ಭೂತದ ಮಾತು ಅದಾದರೆ ವರ್ತಮಾನದ ಕಥೆಯೇ ಬೇರೆ.

ಆದರೀ ಮನ್ವಂತರದ ರೋಗ ಬೇರೆಯಿದೆ.
ಯಾವ ಧನ್ವಂತರಿಯು ಬರುವ, ಕಾಣೆ!
ಹಳತೆಲ್ಲ ಹಳಸಿಹುದು; ಹೊಸತೆಲ್ಲ ಕಸುಕಿಹುದು
ಯುಗಾಂತರವು ಬರುವನಕ ತಪ್ಪದಿದು ಬವಣೆ!

ಎಂದು ಕವಿ ಪ್ರಾರಂಭಿಸುತ್ತಾರೆ ವರ್ತಮಾನದ ಸ್ಥಿತಿಗತಿಗಳ ಕುರಿತು.

ನಕ್ಷತ್ರಗಳ ರಾಜ್ಯದಲ್ಲಿ ನೆಲೆಸಿಹ ತಾಯಿ
ಭಿಕ್ಷುಕಿಯ ವೇಷವನ್ನಿಂದು ತಳೆದಿಹಳು.

ಎಂಬ ಮಾತು ನಮ್ಮ ದೇಶಮಾತೆಗೆ ಒದಗಿದ ಅಧೋಗತಿಯನ್ನು ಚೆನ್ನಾಗಿ ಹೇಳುತ್ತ

ಕಡೆಗೆ ಕವಿ ಆಶಾವಾದಿಯಾಗಿ ಹೀಗೆ ಹೇಳುತ್ತಾರೆ:

ಹಿಂದಿದ್ದೆ; ಇಂದಿರುವೆ; ಇನ್ನು ಮುಂದುಳಿದಿರುವೆ;
ಅಹುದಹುದು! ಎಂದಿಗೂ ಆರ್ಯಮಾತೆ.

ಕಳೆದ ಸಂಗತಿಗಳ ಬಗ್ಗೆ ಗೌರವ ಮತ್ತು ಉಜ್ವಲ ಭವಿಷ್ಯದಲ್ಲಿ ನಂಬಿಕೆ ಇವು
ಕವನದ ಮೂಲವಸ್ತು.

'ಕ್ರಾಂತಿಕಾರ'ವೆಂಬ ಕವನವೇ ಇಲ್ಲಿ ಮೂರನೆಯದು. ಇದೊಂದು ಕವನಕಹ
ದಿವ್ಯಭುವನೇಶ್ವರಿಯೆ ಉಗ್ರ ದುರ್ಗೇಶ್ವರಿಯಾಗಿ ದೇಶಕ್ಕೆ ಸ್ವಾತಂತ್ರ್ಯವನ್ನು ಸಾಧಿ
ಕೊಡಬೇಕೆಂಬ ಮನವಿ ಇಲ್ಲಿದೆ.

'ತ್ಯಾಗಿ' ನಾಲ್ಕನೆಯ ಕವನ. ರಾಣಿವಾಸ, ನಿಧಿನಿವಾಸಾದಿಗಳನ್ನು ಬಿಟ್ಟು ಸ
ಸಂಗಪರಿತ್ಯಾಗಿ ಗಿರಿಗಹ್ವರವಾಸಿಯಾಗಿ ತಪೋನಿರತನಾದ ಧೀರನೊಬ್ಬನ ಚಿತ್ರ ಇಲ್ಲಿ
'ದೇಹವಳಿದಿರಲಲ್ಲೆ ಕುಳಿತಲ್ಲೆ ಹುಳಿತು; ಮನವು ಮುಗಿದಿರಲಲ್ಲೆ ಚಿದ್ಘನದಿ ಬೆರೆತ
ಮೆಯ್ಯ ಕೀಳಾಸೆಗಳ ಮೂಲವನೆ ಮರೆತು. ಆತ್ಮವೇಳಲಿ ಚಕ್ರವರ್ತಿಯಾಗಿ; ಶೂ
ಸಿಂಹಾಸನದ ಮೂರ್ತಿಯಾಗಿ' ಎಂಬ ನಿಲುವಿಗೆ ಏರಿ ನಿಲ್ಲುವ ಮುಮುಕ್ಷು ಜೀವಿ
ಕುರಿತಾದ ಕಲ್ಪನೆ ಈ 'ತ್ಯಾಗಿ'ಯಲ್ಲಿ ಅರಳಿದೆ.

'ದಾನಿ' ಐದನೆಯ ಕವನ. ಬಂದ ಐಶ್ವರ್ಯವೇ ಒಂದು ಪ್ರವಾಹ. ಅದಕ್ಕೆ ದಾ
ಮಾಡಿಕೊಡುವ ನೆಲವೇ ತಾನು ಎಂಬ ನಂಬಿಕೆಯಲ್ಲಿ ಸುಖಜೀವನದ ಪರಿಕರ ಸರ್ವ
ವನ್ನೂ ಪರರಿಗಾಗಿ ಸೂರೆಗೈದ ಮಹಾದಾನಿ ಇಲ್ಲಿ ಬರುವ ಈ ವ್ಯಕ್ತಿ! ಧರ್ಮಶಾ
ರುಗ್ಣಾಲಯ, ವಿದ್ಯಾಲಯಾದಿಗಳನ್ನು ಕಟ್ಟಿಸಿದವನು ಈ ವ್ಯಕ್ತಿ. ಬಡಬಗ್ಗರಿಗೆ ಉಚ
ವಾದ ಅಶನವಸನ ವಸತಿ ಸೌಕರ್ಯಗಳನ್ನು ಒದಗಿಸಿದವನು ಈತ. ತನ್ನನ್ನು ಸನ್ಮಾ
ಲೆಂದು ಬಯಸಿ ಬಂದ ಇಷ್ಟರಿಗೆ ಈ ದಾನಿಗಳರಸ ರಾಜ ದಾನಿ ಹೇಳಿದ್ದೇನು?

ದ್ರಾಕ್ಷಿ ಹಣ್ಣುಗಳನೀವುದು
ಬಳ್ಳಿಯೆಂದು ಮಂತ್ರಾಕ್ಷತೆ-
ಗಳನೆರಚುತ ಪೂಜಿಸುವರೆ ದ್ರಾಕ್ಷಲತೆಯನು?
ಅದನು ಹಚ್ಚಿ ಬೆಳೆಸಿದವರು
ನೀವು ಸವಿಯದಿರಲು ಹಣ್ಣು,
ಮಣ್ಣಾಗದೆ ಕೊಳೆತು? ತಿಳಿವುದಿದರ ಕತೆಯನು

ಕೊನೆಗೆ ಈ ಸಾಮಂತ ದೊರೆಯ ದಾನಗುಣವನ್ನೇ ಅವಗುಣವನ್ನಾಗಿ ಚಕ್ರವರ್ತಿಗೆ ನಗಾಣಿಸಿ ಒಬ್ಬ ಮಂತ್ರಿ ಕೃತಾರ್ಥನಾದ! ಈ ಮಂತ್ರ ಫಲಿಸಿ ಚಕ್ರವರ್ತಿಯ ಾಪ ಹೊರಟು ಈ ರಾಜ ಪದಚ್ಯುತನಾದ. ಆದರೇನು ಅಚ್ಯುತಪದ ಅವನಿಗಾಗಿ ದಿತ್ತು. ಈ ದಾನಿಯ ಸಹನೆ, ಕಷ್ಟಸಹಿಷ್ಣುತೆ ಪರೋಪಕಾರ ದೃಷ್ಟಿ, ಪರಾರ್ಥ ದ್ಧಿ ಇವು ಅಪೂರ್ವವಾದ ರೀತಿಯಲ್ಲಿ ಇಲ್ಲಿ ಚಿತ್ರಿತವಾಗಿವೆ.

ಈ ಗುಂಪಿನ ಆರನೆಯ ಕವನ 'ಸದಸ್ಯ'. ಹೆಸರೇ ಹೇಳುವ ಹಾಗೆ ಒಂದು ಸಂಸ್ಥೆಯ ಸ್ಯಸೊಬ್ಬನ ಚಿತ್ರ ಇದು. 'ಓಂ ಸಹನಾವವತು ಸಹನೌಭುನಕ್ತು' ಎಂಬ ಮಂತ್ರವೇ ಲ್ಲಿ ಧ್ಯೇಯವಾಕ್ಯ. ಆದರೆ ಈ ಧ್ಯೇಯ ಆದರ್ಶಗಳ ಕಥೆಯೇ ಬೇರೆ, ಸಂಘದ ಸ್ಯರ ವರ್ತನೆಯಿಂದ ಸಂಸ್ಥೆಗೆ ಒದಗಿದ ವಿಷಮಸ್ಥಿತಿಯ ವಾಸ್ತವವ್ಯಥೆಯೇ ಬೇರೆ. ಸಂಬಂಧದಲ್ಲಿ ಈಗ ಕಣ್ಣಮುಂದೆ ನಡೆಯುತ್ತಿರುವ ಸಾವಿರ ಅನ್ಯಾಯಗಳಿಗೆ ಇಲ್ಲಿ ಕನ್ನಡಿ ಹಿಡಿದಿದ್ದಾರೆ. 'ವೋಟು ಬಭ್ರುವಾಹನನಂತೆ ಪಿತಗೆ ಮುಳುವು' ಖ್ಯೆಯೇ ಸತ್ಯವೆನುವಂಥ ಹೊತ್ತು ಬಂದಿತಿಂದಿಗೆ' 'ಬಹುಮತದ ರಾಜ್ಯದಲಿ ಸ್ಕೃತವು ದುಃಸಾಧ್ಯ' 'ವೋಟಿ ನರಕವು ಮೂರ್ಖನದರ ಮಾಲಕನಿರಲು; ಅದೆ ರ್ಗ, ಹೊಂದಿದವನಿರಲು ಜ್ಞಾನಿ-ಗುಣಿ' ಎಂಬಂತಹ ಮಾತುಗಳನ್ನು ನೋಡಬೇಕು. ನೆಗೆ ಇಷ್ಟಾದರೂ ಕವಿ ಇಲ್ಲಿಯೂ ಆಶಾವಾದಿಯೇ: 'ವಿದ್ಯೆ—ಸಂಸ್ಕೃತಿ ಬೆಳೆದು ೀಳುತಿರೆ ನಾಡು, ತನ್ನನ್ನೆ ತಾ ತಿದ್ದಿಕೊಳಬಹುದು ಡೊಂಕು.'

'ಸಮತಾವಾದಿ' ಈ ಗುಂಪಿನ ಏಳನೆಯ ಕವನ. ಜನಶಂಕರಿಯೇ ನಮ್ಮನ್ನು ಇನ್ನು ಪಾಡಬೇಕು ಎಂಬ ಮಾತು ಇಲ್ಲಿದೆ. "ಪಂಡಿತರ ಮೆಚ್ಚಲ್ಲ, ಪೀಡಿತರ ಕಾಳ್ಗಿಚ್ಚು ಂದೆ ಬಹ ಕಾವ್ಯದಾ ಸೆಲೆಯು, ನೆಲೆಯು. ಇಲ್ಲದರ ಕನಸಲ್ಲಪಿಪ್ದ ಬಾಳಿನ ಕೆಚ್ಚು ರ್ಗವೆಂಬುದು ಲೋಕ ಸುಖದ ಬೆಳೆಯು." ಎಂಬ ಮಾತಿನ ಧ್ವನಿಯನ್ನು ಪರಿಭಾವಿಸ ಕು. ಇಲ್ಲಿಯೂ ಆಶಾವಾದವೇ ಕೊನೆಗೆ ಕಾಣ ಬರುತ್ತದೆ.

ಯುಗಯುಗದೊಳನ್ಯಾಯಕೋಟೆಯಲಿ ಮುಳುಗಿರುವ
ಧಾರುಣಿಗೆ ಬರಬಹುದು ಧನ್ಯತೆಯ ಬೆಳೆಯು.
ಹಗೆತನದ ಹಾವು ಕಾಲ್ತೊಡಕಿರುವ ಮನುಕುಲಕೆ
ಇಂದಿಲ್ಲ ನಾಳಿರುವುದೊಗೆತನದ ಕಳೆಯು!

ಕಾವ್ಯ ಖಂಡ ಮುಗಿಯುವುದು ಹೀಗೆ:

ಆ ಸ್ವರ್ಣಯುಗಕಾಗಿ ತಾಳೋಣವಿಂದು
ಕ್ರಾಂತಿಗೆದುರಾಗುತಿಹ ಶಿಲುಬೆಗಳನು;
ನಾಳೆ ಲೋಕವೆ ಸತ್ಯಲೋಕವೆಂದು
ಇಂದಿನೀ ಬಾಳಿನುದ್ವೇಗಗಳನು.

ಇದೇ ಗುಂಪಿನ ಕವನವಿನ್ನೊಂದು 'ಅಸುರ'. ಇದು ಹಿಟ್ಲರನನ್ನು ಕುರಿತದ್ದು. ಒ
ಕವಿಗೂ ಹಿಟ್ಲರನಿಗೂ ನಡೆದ ಸಂವಾದ ರೂಪದಲ್ಲಿ ಕವಿತೆ ಸೆಯ್ಗೊಂಡಿದೆ. ಇಲ್ಲಿ ಕ
ಹಿಟ್ಲರನಿಗೆ ಹೇಳಿದ ಒಂದು ಮಾತನ್ನು ಮಾತ್ರ ಉದ್ಧರಿಸುತ್ತೇನೆ:

"ಒಬ್ಬಿಬ್ಬರನ್ಯಾಯಕಿಡಿ ಯಹೂದಿ ಜನಾಂಗವನ್ನು ಬಲಿಕೊಡಲು ನಡೆದ
ನೀವು ಕೇಳಬಲ್ಲಿರ, ಎಲ್ಲ ಮಾನವರೊಂದೆ ಕುಲದವರೆಂಬ ಮಾತನ್ನು ? ಸಾವು ನೋ
ಎಲ್ಲರನು ಮುಟ್ಟುವಾರೀತಿಯೊಂದೇ ಇಹುದು." 'ಗುರಿಯು ಹೇಯವಿರೆ ಸಾಧನಗಳ
ಹೇಯವಾಗಿಸಿತು' ಎಂಬ ಕವಿವಾಕ್ಯ ಮನನೀಯ. ಓದುಗರ ಮನಸ್ಸಿಗೆ ಒಪ್ಪಿಗೆಯಾಗು
ರೀತಿಯಲ್ಲಿ ಹಿಟ್ಲರನ ಆಸುರೀಪ್ರವೃತ್ತಿಯ ಪರಿಣಾಮದ ರುದ್ರ ಕಥಾನಕವೊಂದನ್ನು ಇ
ನಿರೂಪಿಸಲಾಗಿದೆ.

ಮೂರನೆಯ ಗುಂಪಿನಲ್ಲಿ 'ಸತ್ಯಾಗ್ರಹಿ' ಮೊದಲನೆಯ ಕವನ. ಸುಖವೋ ದುಃಖವೋ
ಪಾಲಿಗೆ ಬಂದದ್ದನ್ನು ಸಮಭಾವನೆಯಿಂದ ಅನುಭವಿಸಿ ಮುಂದು ಮುಂದಕ್ಕೆ ಹೋ
ಬೇಕೆಂಬುದೇ ಸತ್ಯಾಗ್ರಹಿಯ ನಿಲವು. 'ಒಳಿತು–ಕೆಡಕು, ದುಃಖ-ಸುಖ, ಗಂಡಭೇರುಂ
ಮುಖ' 'ಬೇಕು ಸುಖವು ತರುವ ಶಾಂತಿ ಬೇಕು. ದುಃಖ ಪಡೆವ ಕಾಂತಿ' 'ಇಹದೈ
ಯ:ಲ್ಲ ತೃಣವು ನಿಸ್ಪೃಹನಿಗೆ, ತ್ಯಾಗಿಗೆ'—ಈ ಮಾತುಗಳು ಜಪಯೋಗ್ಯವಾಗಿವೆ.

ಈ ಗುಂಪಿನ ಎರಡನೆಯ ಕವನ 'ಕರ್ಮಯೋಗಿ.' 'ಬಾಳ ಸಾರ್ಥಕತೆಯ ತರು
ಭಾರತದ ವಿಮೋಚನ'ವೇ ಈ ಕರ್ಮಯೋಗಿಯ ಕನಸು-ನನಸು. 'ಮರಣಕೆಂ
ಹರಣ ಸಿದ್ಧ; ಸ್ವಾತಂತ್ರ್ಯಗಳಪಹರಣವು ಮರಣವಿರಲು ಮತ್ತೆ ಬೇರೆ ಮರಣವಾ
ದೆಂದಿಹೆ' 'ಗೆಲುವು ಬರಲಿ; ಬಾರದಿರಲಿ; ನಿತ್ಯ ನಲಿವುದೆನ್ನ ಜೀವ; ಅಚಲಚಿ
ನಾಗಿ ಕರ್ಮನಿರತನಾಗಿಹೆ'—ಇಂತಹ ಮಾತುಗಳಲ್ಲಿ ಕರ್ಮಯೋಗಿಯ ಕಂಡರ
ನಡೆದಿದೆ.

ನಾಲ್ಕನೆಯ ಗುಂಪಿನ ಕವನಗಳಲ್ಲಿ 'ಸನಾತನಿ–ವಿನೂತನಿ' ಮೊದಲನೆಯದು. 'ಮನ
ದೇಗುಲ ಮತ್ತೆ ಇಳೆಯೆ ಗುಡಿಯೆಂದೆ. ಬಾಳನುಳಿದಿನ್ನಾವ ದೇವನಿಲ್ಲೆಂದೆ'—ಇ
ವಿನೂತನಿಯ ನಿಲವು. 'ಹೋಮಹವನಗಳಿಲ್ಲ ನನಗೆ. ಹೋಮರನು ಬರೆದ ಕಾವ್ಯ
ನೋದಿ ನಲಿವ ಪಾಮರನು ನಾನಹುದು'—ಇತ್ಯಾದಿ ಮಾತುಗಳಲ್ಲಿ ಕವಿ ವಿನೂತನಿ
ಮನೋಧರ್ಮವನ್ನು ಸಾರಿದ್ದಾರೆ. ವೈಶ್ವಾನರ, ನೈವೇದ್ಯ, ಅನ್ನಸಂತರ್ಪಣೆ, ಅ
ಹೋತ್ರ, ವೇದಶಾಸ್ತ್ರ ಪಠಣ, ವಾಯುಸ್ತುತಿ—ಇತ್ಯಾದಿಗಳಲ್ಲಿ ತೊಡಗಿರುವ ಸನಾ
ನಿಯ ಚಿತ್ರ ಈ ಕವಿತೆಯಲ್ಲಿ ಕಾಣುವ ಇನ್ನೊಂದು ಮುಖ. ಸನಾತನಿಗೆ ವಿನೂತ
ಹೀಗೆ ಹೇಳುತ್ತಾನೆ: 'ನೀ ಗುಡಿಯಲಿಹ ಹಣತೆ. ನಾನು ಕೋಲ್ಮಿಂಚು. ಬಿತ್ತಿದೊ
ಬೆಳೆ ನೀನು. ನಾನು ಹೊಸ ಹೊಂಚು' ಇವರಿಬ್ಬರಿಗೂ ಕವಿ ಹೇಳುವ ವಿನಾಯಕ ವಾ
ಇದು:

ಓ! ಸನಾತನಿ! ಹೋಗು. ಪಡುವಣದಿ ಹುಟ್ಟು
ಆಗ ತಿಳಿವುದು ನಿನಗೆ ತಿಳಿವಿನಾ ಗುಟ್ಟು
ಓ! ವಿನೂತನಿ! ಮತ್ತೆ ಮೂಡಣಕೆ ತೆರಳು.
ಆಗ ಹೊಳೆವುದು ಕರ್ಮಕಾಂಡದಾ ತಿರುಳು.

ಜ್ಞಾನಿ' ಈ ಗುಂಪಿನ ಎರಡನೆಯ ಕವನ. ಇದು ವಿಶ್ವದ ವಿಕಾಸವ ಕಥೆ. ನೆಲ, ಲ್ಲು, ಪಶು, ಪಕ್ಷಿ, ದಾನವ, ಮಾನವ— ಹೀಗೆ ಶಕ್ತಿಯ ವಿಕಾಸ ನಡೆದ ಕಥೆ ಇದು. ವೇ ಆದಿಶಕ್ತಿ ಎಲ್ಲ ಚರಾಚರಗಳಲ್ಲಿಯ ವಿಕಾಸಕ್ಕೂ ಮೂಲಕಾರಣವಾಗಿದೆ ಎಂಬುದೇ ಮೂಲಸೂತ್ರ.

ಭೂಗರ್ಭದಿಂದತ್ತ
ನಿಃಸೀಮ ಪರ್ಯಂತ,
ಬೆಂಕಿಬೆಟ್ಟವ ಹಿಡಿದು ಬಗೆಯ ವರೆಗೆ
ಹೊತ್ತಿದಗ್ನಿಯದೊಂದೆ:
ನಿಯಮಾನುಸಾರಿಣಿಯು
ಅವಕಾಶವಿಲ್ಲಿಲ್ಲ ಮುಚ್ಚುಮರೆಗೆ

ಬುದು ವಿಕಾಸವ ಬೃಹತ್ಕಥೆಯ ಒಂದು ಗಾಥೆ ಮಾತ್ರ. ವಿಜ್ಞಾನ ಒಂಟಿಯ ಕತ್ತಿನ ಗೆ—ಉಳಿದ ವಿಷಯಗಳ ಬೆಳೆವಣಿಗೆಯೊಡನೆ ಸಾಮರಸ್ಯವನ್ನು ತಾಳದೆ–ಬೆಳೆದಾಗ ರ್ಥವೇ ಆಗುತ್ತದೆ.

ವಿಜ್ಞಾನ,–ಸಾಧನವು;
ಶಕ್ತಿಸಂಚಯವಹುದು.
ಅದನಪವ್ಯಯಗೊಳಿಸೆ ರಾಜಕಾರಣಿಯು
ಲಕ್ಷ್ಮಿಯನು ಕಾಲ್ಮುರಿದು
ಸೆರೆಯಿಟ್ಟ ಧನಿಕನೊಲು
ಹೊಸ ಜಗಕದೆಲ್ಲಿ ಸಾರಣಿಯು—ಕಾರಣಿಯು?

* * *

ಜ್ಞಾನವಿಲ್ಲದಲೆ ವಿ
ಜ್ಞಾನ ಬೆಂತರ-ಭೂತ
ಹೃದಯವಿಲ್ಲದ ಬುದ್ಧಿ ಬರಿಯ ಹೊಯಿಲು.

ತ್ಯಾದಿ ಮಾತುಗಳಲ್ಲಿ ವಿಜ್ಞಾನವೂ ವಿವೇಕವೂ ಸಮಸಮನಾಗಿ ಬೆಳೆಯಬೇಕೆಂಬ ಪ್ಪ ಬೆಳಕಿಂಡಿ ತೆರೆದಿದ್ದಾರೆ ಕವಿ. ಇಲ್ಲಿಯೂ ಕವನದ ಕೊನೆ ಆಶಾವಾದವೇ. ದಿಲ್ಲ ನಾಳೆ ಕನಸಿನ ಇಂದ್ರಪುರಿ ನನಸಾಗುವುದು' ಎಂಬ ಮಾತು ಅನುರಣನಗೊಳ್ಳು ಲೇ ಇರುತ್ತದೆ.

ರಡನೆಯ ಗುಂಪಿನ ಕವನಗಳಲ್ಲಿ ಮೊದಲನೆಯ ಕವನ 'ಕನಸಿಗ' ಇದೊಂದು ಮೂರು

ನವಪದಿಗಳ ಕವನ. ನವಪದಿ ಎಂಬ ಮಾತು ಛಂದದ ಬಂಧವನ್ನೂ ಸೂಚಿಸುತ್ತ
ಅರ್ಥದ ಬಂಧುರತೆಯನ್ನೂ ಸೂಚಿಸುತ್ತದೆ. ಪದ್ಯದ ಶೀರ್ಷಿಕೆ 'ಇಂದು ಕಂಡಿಹಕ
ಅಹುದು ನಾಳಿನ ನನಸು. ವ್ಯಕ್ತಿಯಾ ಸವಿ ನೆನಸೆ ಜನಜೀವನದ ಸೊಗಸು' ಎ
ಧ್ಯೇಯ ವಾಕ್ಯದಿಂದ ಪೂರಣಗೊಂಡ ಕನಸಿಗನ ನಿಲುವನ್ನು ಸರಿಯಾಗಿ ಸೂಚಿಸುತ್ತ

ಜಡಜೀವನವನೆಲ್ಲವಾಗಿಸುತ ಹೂಗನಸು,
ಹಗುರಾಗಿಸುತ ಮುಗಿಲೊಳಲೆವ ಮೋಡಗಳಂತೆ
ಚಿನ್ಮಯಾಕಾಶದಲಿ ತೇಲುಬಿಡುವುದೆ ಬಾಳ
ಹಿರಿಯ ಹವಣಿಕೆಯ ಹದವು.

ಎಂಬ ಚಿದ್ವಿವೇಕವನ್ನು ಸೂಚಿಸಿ ಕವನ ಮುಗಿದಿದೆ.

'ಧಾರ್ಮಿಕ ಕಲೋಪಾಸಕ' ಇಲ್ಲಿಯ ಎರಡನೆಯ ಕವನ. ಹೃದಯ ಪರಿಸರದ ಚೆ
ವಿಗೆ ಸೋತರೆ ಬುದ್ಧಿ ಅದರಾಚೆಗಿನ ಬೇರೆ ಬೆಳಕಿಗೆ ಸೋತಿತು. ಒಮ್ಮೆ ಹೀಗೆ ಒ
ಹಾಗೆ ಸೋಲುವ ಈ ಚೇತನದ ದ್ವಿಧಾವೃತ್ತಿಯನ್ನು ಕವಿ ಹೃದಯಂಗಮವಾಗಿ
ಚಿತ್ರಿಸಿದ್ದಾರೆ.

'ಬಾಳವ್ರಣಕೆ ಪರಮೌಷಧಿ ಬಾಳಬೇರ ಕಾಣ್ಬ ಕಣ್ಣು ಇಲ್ಲ, ದೇವದತ್ತ ಕರುಣೆ'
ಇವು ದೊರಕಲೆಂದು ಹಗಲಿರುಳೂ ಈ ಚೇತನ ಧ್ಯಾನಕ್ಕೆ ಚಿಂತೆಗೆ ಸಂದಿದೆ. ಕಟ್ಟಕ
'ದುಃಖವಿತ್ತ ಜಗವೆ ಸುಖವನೀವುದೆಂಬ ಶ್ರದ್ಧೆ ಜನಿಸಿ ದ್ವಂದ್ವಗಳಾಚೆಗಿನ ಬೆ
ಕಂಡು ತಣಿಯುತ' ಈ ಚೇತನ ಒಂದು ಮರಾಳವಾಗಿ ಈ ಭವದ ಕಡಲಿನಲ್ಲಿ ಈಸುತಿ
ಎಂದು ಕವಿ ಹಾರೈಸಿದ್ದಾರೆ.

ಇಲ್ಲಿಯ ಮೂರನೆಯ ಕವನ 'ಕಲೋಪಾಸಕನಾದ ಸುಧಾರಕ.' ಈ ಚೇತನ ಸುತ್ತ
ಜನದ ದಾಸ್ಯ ದಾರಿದ್ರ್ಯ ಅಜ್ಞಾನಕ್ಕೆ ರೋಸಿಹೋಗಿದೆ. ಅಂಧಶ್ರದ್ಧೆಗೆ ಅಸೀತಿಗೆ
ಚಾರಕ್ಕೆ ಹೇಸಿಹೋಗಿದೆ. ವಿಚಾರ, ವಿಮರ್ಶೆ, ಪರೀಕ್ಷೆ, ಪ್ರಯೋಗ, ಚಿಕಿತ್ಸೆ ಇವು
ಮೂಲಕ ಹಳೆಯದರ ಗ್ರಾಹ್ಯಾಗ್ರಾಹ್ಯ ವಿಚಾರ ಸಾರಾಸಾರವಿಚಾರ ನಡೆಯಬೇಕು ಎ
ವಾದ ಇಲ್ಲಿದೆ. 'ಯಥಾರ್ಥತೆಯ ಜ್ಞಾನ ಮೊದಲು ಜನಕ್ಕೆ ಆಗಬೇಕು' ಎನ್ನುತ್ತಾನೆ
ಕಲೋಪಾಸಕನಾದ ಸುಧಾರಕ. 'ಗತಧರ್ಮಕೆ ಜೋತು ಬೀಳುತಾತ್ಮಹತ್ಯಕಣಿಗೊಳು
'ದೇಹಕಲ್ಲ ಮನಸಿಗಿಹುದು ಮಡಿಮೈಲಿಗೆ ತಿಳಿದು ನೋಡೆ' ಇಂತಹ ಮಾತುಗಳಲ್ಲಿ
ಸುಧಾರಕನ ದೃಷ್ಟಿ ನಮಗೆ ಗೊತ್ತಾಗುತ್ತದೆ. ಇಲ್ಲಿಯೂ ಕವನದ ಕೊನೆ ಆಶಾವಾದ

ಮಧುಮಾಸದ ಮಂದಾನಿಲ
ಬೇಕು; ಗ್ರೀಷ್ಮ ಚಂಡಕಿರಣ
ಬೇಕು, ವರ್ಷಾಕಾಲದ ವರುಣ-ಮಾರುತ
ಬೇಕೇ ಬೇಕು; ಬರಲಿವರೆ—

ಲ್ಲರು ದೂರಿಹುದೆಂತು ಮಾಗಿ
ಹೊಂಬೆಳೆಯಿರೆ ಸ್ವರ್ಣಯುಗದ ಬರುವ ಸಾರುತ.

ಕತೋಪಾಸಕನಾದ ಉಪದೇಶಕ' ಈ ಗುಂಪಿನ ನಾಲ್ಕನೆಯ ಕವನ. ಬ್ರಹ್ಮಚಾರಿ
ಗಿ ದೇವದೂತನಂತೆ ಭಾರತ ಸಂಚಾರಿಯಾಗಿ ದೇಶದ ಜನರ ದಾರುಣ ನಿರ್ವೀರ್ಯತೆ,
ಸಕಳೆಗಳನ್ನು ಕಂಡು ಪರಶುರಾಮನಂತೆ ಕೌಶಿಕನಂತೆ ಕ್ರುದ್ಧನಾಗಿ ಪುನರುಜ್ಜೀವನ
ರ್ಯದಲ್ಲಿ ತೊಡಗಿದ ಒಬ್ಬ ವ್ಯಕ್ತಿಯ ಕಂಡರಣೆ ಇದು. ಗ್ರಂಥರಚನೆ, ವಿಚಾರ
ಾರ, ಬಾಲವನ ಸಂಸ್ಥೆ, ನಾಟಕ ಪ್ರಯೋಗ, ಪತ್ರಿಕಾವ್ಯವಸಾಯ—ಇತ್ಯಾದಿಗಳ
ಲಕ ಕರ್ತವ್ಯದ ಕಣಕ್ಕಿಳಿದ ವ್ಯಕ್ತಿ ಈತ. ಈತನ ಉಪದೇಶದ ಸಾರ ಇದು :

ನಿಷ್ಕಾಮದ ಜೀವಿತವದು
ಧರ್ಮಸಮನ್ವಯದ ಸಾರ;
ಮಾನವಧರ್ಮದ ಗುರಿಯದು ; ಬೇರೆ ಧರ್ಮವಿಲ್ಲವು
ದೇವತ್ವವದೇನೆ ಇರಲಿ ;
ಮಾನವತ್ವವನ್ನೆ ಪೂರ್ಣ
ಗೊಳಿಪ ಗೆಯ್ಮೆಯುಳಿದು ನನಗೆ ಬೇರೆ ಕರ್ಮವಿಲ್ಲವು.

ರೂಪಾರಾಧಕ' ಈ ಗುಂಪಿನ ಐದನೆಯ ಕವನ. ಚೆಲುವಿನ ಆರಾಧನೆಯೇ ಒಂದು
ೀಗ, ಒಂದು ಭೋಗ ಈ ರೂಪಾರಾಧಕನಿಗೆ. ಸಾಹಿತ್ಯ, ಸಂಗೀತ, ಚಿತ್ರ, ನರ್ತನ,
ಲ್ಪ, ಪ್ರತಿಮಾ— ಈ ಲಲಿತ ಕಲೆಗಳಲ್ಲಿ ಸೌಂದರ್ಯದ ಸವಿಯನ್ನುಂಡ ರೂಪಪ್ರೀತಿ
ದ ಪ್ರೀತನಾದ ಈ ವ್ಯಕ್ತಿ ತನ್ನ ಹೆರರ ಶುಚಿ ಜೀವನಕ್ಕೆ ಈ ಸೌಂದರ್ಯದ ಉಪಾ
ಯೇ ಸಾಧನವೆಂದು ನಂಬಿದ್ದು ಇಲ್ಲಿ ಕಾಣಬರುತ್ತದೆ.
ಸಾಹಿತ್ಯಾಚಾರ್ಯ' ಎಂಬ ಪುಟ್ಟ ಕವನದಲ್ಲಿ ಕಾವ್ಯ ಮತ್ತು ರಾಷ್ಟ್ರ ಕಾರ್ಯಗಳೆರಡನ್ನೂ
ಕಾಲದಲ್ಲಿ ಸಾಧಿಸಿ ಜನತೆಗೆ ಶ್ರೇಯವನ್ನೂ ಪ್ರೇಯವನ್ನೂ ಕೂಡಿಸಿಕೊಡಲು
ಕಣಬದ್ಧನಾದ ಪ್ರಬುದ್ಧನೊಬ್ಬನ ಚಿತ್ರ ಇದೆ.
ಸಾಕ್ಷಿಕ' ಈ ಮಾಲಿಕೆಯ ಏಳನೆಯ ಕವನ. ಮೆಟ್ಟಿ ಬಂದ ವಿಧಿಯ ಅಣಕವನ್ನು
ಿಯೂ ಮೇಲಕ್ಕೆ ಜಿಗಿದು ನಿಂತ ದಿವ್ಯ ಚೇತನ ಇದು. ಹುಟ್ಟುರಸಿಕನಾಗಿ ಜನ್ಮ
ಕಲಾವಿದನಾಗಿ ಮೆರೆದ ಈತ ಸಂಸಾರದ ವಿರಸದಿಂದ ಜಗದ ಹಿಡಿತದುಡಿತಗಳ
ರದಿಂದ ರಂಗಭೂಮಿಯನ್ನು ಹೊಕ್ಕು ಜೀವಕ್ಷುಧೆಗೆ ಅಲ್ಲಿ ಸುಧೆಯುಣಿಸನ್ನು
ರಕಿಸಿಕೊಂಡು ಅಮರನಾಗಿ ನಿಂತ ಮಹಾವೀರ ಈತ. 'ಧರೆಯ ನ್ಯಾಯಸ್ಥಾನದಲ್ಲಿ
ಯಾಗಿ ಕಂಡುದನ್ನು ಸಾಕ್ಷಿಗಾರನಾಗುತಂಜದೆಳುಕದೊರೆಯುವೆ' ಎಂದು ಈತನ
ಧರ್ಮವನ್ನು ಇಲ್ಲಿ ಗುರುತಿಸಲಾಗಿದೆ. ಮೃದುಕೋಮಲವೂ ವಜ್ರಕಠಿಣವೂ ಆದ
ಯಿಂದ ಜನರನ್ನು ಚುಚ್ಚಿ ಚುಚ್ಚಿ ಕರ್ತವ್ಯವನ್ನು ಎಚ್ಚರಿಸಿದ ಧೀರ ಚೇತನ ಇದು.

ಬಾಳಿನ ಬಯಲಾಟದಲ್ಲಿ ಪಾತ್ರಧಾರಿಯಾಗಲಿಲ್ಲ. ಆದರೇನು ಈ ಚೇತನ ತನ್ನ ಸೃಷ್ಟಿ
ರೂಪಕಗಳನ್ನೇ ಅಭಿನಯಿಸಿ ತೋರಿತು. ಈ ನಿರ್ಲಿಪ್ತಸಿದ್ಧಿ ಈ ಸಾಕ್ಷೀಪ್ರ
ಅದ್ಭುತವೋ ಅದ್ಭುತ!

ಇಲ್ಲಿಯ ಎಂಟನೆಯ ಕವನ 'ಕಾವ್ಯಗುರು'. ಗಂಧರ್ವರ ಗಾನವನ್ನು ಸುಂದರ ಭ
ಗೀತಗಳಲ್ಲಿ ಹಾಡಲೆಂದು ಅವತರಿಸಿದ ಅವಧೂತ ಚೇತನ ಈತನದು. 'ಮಿತ್ರಸ್ನೆ
'ಕಾವ್ಯಕರ್ಮ' 'ನಾಡಹಬ್ಬ' 'ಪೂರ್ಣಯೋಗ' ಈ ಮುಂತಾದುವು ಈ ಚೇ
ಕ್ರಿಯೆಯ ಮುಖಗಳಲ್ಲಿ ಕೆಲವು.

> ಬಾಳ ಘನತೆಗಿಲ್ಲ ಸಾಟಿ ;
> ಬಾಳನುಳಿದ ಸ್ವರ್ಗವು ಸಹ
> ಪತನ ಹೊಂದಲಿರುವ ದುರ್ಗವೆಂದು ಸಾರಿದೆ.

ಈ ಚೇತನಕ್ಕೆ ಸಿಕ್ಕವರೆಲ್ಲ ಸಿದ್ಧರಾಮನ ಲಾಕುಳ ದಂಡಕ್ಕೆ ಸಿಕ್ಕವರಂತೆ ಉದ್ಧಾ
ಮಾರ್ಗಕ್ಕೆ ಎದ್ದವರೇ ಆದರು. ಋಷಿ ದರ್ಶನದಲ್ಲಿ ಜೀವನದ ಸತ್ಯ ಸೌಂದರ್ಯ ಆನ
ಗಳನ್ನು ಕವಿ ಸೃಷ್ಟಿಯಲ್ಲಿ ಹಾಡಿನಲಿದ ಈ ಗಂಧರ್ವನಿಂದ ನಮ್ಮ ಕಾವ್ಯ ಸಾಮ್ರಾ
ಸನಾಥವಾಯಿತು. ದೇಸಿ-ಮಾರ್ಗ, ಹಳತು-ಹೊಸತು, ಹಳ್ಳಿ-ಪಟ್ಟಣ, ಸ್ವದೇಶ-ವಿ
ಮೂಡು-ಪಡು- ಈ ದ್ವೃಶ್ಯಗಳಲ್ಲಿ ಸಾಮರಸ್ಯವನ್ನು ರೂಢಿಸಿ ಹಾಡಿದ ನಚ್ಚುಗಾರ ಈ

> ಚೆಲುವಿನ ಗುಡಿಯಿಂದ ದೀಪ—
> ದಡಿಗೆ ಬಾಳೆ ಬರಿ ಪತಂಗ ;
> ಒಳಗುಡಿಯಲ್ಲೆನಗೆ ತೋರ್ದೆ ಚೆಲ್ವನೆಲೆಯನು.
> ಚೆಲ್ವ ಸೀರೆಯಂಚೆ ಚೆಲುವ
> ದೆಂದೆ ನಾನು. ನನ್ನನೆತ್ತಿ
> ಚೆಲ್ವ ಕೈಯಲಿತ್ತು ತೋರ್ದೆ ತಾಯ ಮೊಲೆಯನು.

ಎಂಬಲ್ಲಿ ಈ ಕಾವ್ಯ ಗುರುಚೇತನದಿಂದ ವಿನಾಯಕಚೇತನ ಉದ್ಧಾರಗೊಂಡ ಬಗೆ
ಬಣ್ಣನೆಯಿದೆ. ಹೀಗೆ ಉದ್ಧಾರಗೊಂಡವರು ನಾಡಿನ ತುಂಬ ನಂದಾದೀಪವಾಗಿ ಬೆ
ತ್ತಿದ್ದಾರೆ. ಈ ಗುರು ಚೇತನ ಕೌಟುಂಬಿಕವಾದ ಸಾವಿನ ಕಪಟಕಾರ್ಪಣ್ಯಗಳ ಕಸವು
ಗಳ ಜಂಜಡಗಳನ್ನು ದೂರ ಅಟ್ಟಿ ದಾಟನಿಂತ ಧೀರ ಚೇತನ. ಅಳು-ನಗು, ನೆ
ನಲುಮೆ, ಕನಸು-ನನಸು, ಬುದ್ಧಿ-ಪ್ರಾಣ— ಇವುಗಳ ಮೂಲವನ್ನು ತಿಳಿದು ಬೆ
ವಿವೇಕಿ ಈತ. ಇಂತಹ ಸಾನುಭೂತಿಯ ಸತ್ಯನಿಷ್ಠೆಯ ಉತ್ಸಾಹ ಶಕ್ತಿಯ ಮೂ
ಚಿರಸ್ಫೂರ್ತಿಯಾಗಿ ನಿಲ್ಲಲಿ, ಈತನ ಹಾಡು ಅಮರವಾಗಿ ಅನಂತವಾಗಿ ಬೆಳೆಯಲಿ ಎ
ಆಶಯದಲ್ಲಿ ಕವಿತೆ ಮುಗಿಯುತ್ತದೆ.

'ಉದಾರಚರಿತ' ಈ ಗುಂಪಿನ ಒಂಬತ್ತನೆಯ ಕವನ. 'ಭೋಗದ ಸೀಮೆಯ

ತು ಯೋಗ ಮರೆಸ ಪಾಪ ಬೇಡ; ದುಃಖಕಿಂತ ಸುಖವು ಕಠಿಣವೆಂದು ಹಾಡಿ
ಕ್ಕುವೆ' 'ಬಂದ ದುಃಖ—ಅಚಲಶ್ರದ್ಧೆಯನ್ನು ಚಲಿಸದಿರಲಿ; ದಿನದ ತಪ್ಪು ತಡೆ
ಲ್ಲ ಹಿಂಗಲಿಸುತ ನೀನು ಬಾಳುವೆ'—ಇಂತಹ ನುಡಿಗಳಲ್ಲಿ ಈ ಚೇತನವನ್ನು ನಮಗೆ
ಚಯು ಮಾಡಿಕೊಡುತ್ತಾರೆ ಕವಿ. ಆತ್ಮದ ಖಡ್ಗಕ್ಕೆ ಬದುಕು ಒರೆ ಎಂಬ ಮಾತಿಗೆ
ಒರೆಗಳಚಿ ಅಸಿ ಹಿರಿದು ಹೋರಾಡಬೇಕು ಎಂಬ ಮಾತಿಗೆ ಈ ಚೇತನ ನಿದರ್ಶನ.
ಸೃಷ್ಟಿಯ ಎಲ್ಲ ಚೆಲುವಿಗೆ ಭೂಮಿಯೇ ಅಡಿಗಲ್ಲು. ಕೃಷ್ಣನ ಕೊಳಲಿಗೆ ಲೋಕವೇ
. ಅವನ ಗೀತೆಗೆ ನರನಿಗೂ ಸಂದೇಹ ಪರಂಪರೆ. ಹೀಗಾಗಿ ಸಾಹಿತ್ಯ ಸಂಗೀತಾದಿ
ಲಿತಕಲೆಗಳೇ ಸಾಧನಗಳಾಗಿ ಸಮಸ್ತ ಜನವೂ ನಲಿಯಬೇಕು ಎಂದು ಬೋಧಿಸಿ
ನು ಈ ಉದಾರಚರಿತ. ಸಾಹಿತ್ಯಜ್ಞನಾಗಿ ರಸಋಷಿಯಾಗಿ ಈ ಚರಿತ ನರನನ್ನು
ರಾಯಣನನ್ನಾಗಿ ಮಾಡುವ ಹಾಡು ಹಾಡಿತು. 'ಹೆಜ್ಜೆ ಹೆಜ್ಜೆಗಿರಲಿ ಜೀವ ವೃದ್ಧಿಂ
' ಎಂಬ ಧ್ಯೇಯ ಮುಂದೆ ಮುಂದೆ ಈ ಚೇತನವನ್ನು ಒಯ್ಯಲಿಕೆ ಈ ಚೇತನ
ುಂದಾದರೆ ನಾಡೂ ನುಡಿಯೂ ಅದರ ಹಿಂದೆ ನಡೆದು ತಾನೂ ಆ ಮುಂದಣ ದಿಸೆ
ತ್ತಲೇ ಧಾವಿಸುವುದಲ್ಲವೆ? ಈ ಭಾವದಲ್ಲಿ ಈ ಕವನ ಮುಗಿಯುತ್ತದೆ.

ಆರನೆಯ ಗುಂಪಿನ ಮೊದಲ ಕವನ 'ಕಣಸಿಗ'. ಒಮ್ಮೆ ಮೂಡಿದ ಹೊಂಗನಸು
ಬಗೆಯ ಕಾಣ್ಕೆಗಳನ್ನು ಕಾಣಿಸಿ ಆ ಮೇಲೆ ಕಣ್ಮರೆಯಾದಾಗ ಕಣ್ಣೆದುರಿನ ಸುಖ
ಃಖಗಳ ಸ್ವಾನುಭವವನ್ನೇ ಹಾಡುತ್ತ, ಮಣ್ಣಿನಲ್ಲಿಯೂ ಮಣ್ಣಾಗದೆ ಹುಡಿ
ಲ್ಲಿಯೂ ಹೆಡೆಯೆತ್ತುವ ನಾಗನಂತೆ ಊರ್ಧ್ವಮುಖಿಯಾದ ಚೇತನರ ಚಿತ್ರ ಈ
ಸಿಗ.

'ಕವಿ-ಅನುಭಾವಿ' ಈ ಗುಂಪಿನ ಎರಡನೆಯ ಕವನ. ಊರೂರು ಸುತ್ತಿದವನು ಕವಿ.
ಟ್ಟಿದೂರಿನಲ್ಲಿಯೇ ಇದ್ದವನು ಅನುಭಾವಿ. ಮೊದಲು ಕಾವ್ಯರಚನೆ ಆಮೇಲೆ ತಿಳಿವು
ದು ಕವಿ, ಮೊದಲು ತಿಳಿವು ಆಮೇಲೆ ಕಾವ್ಯ ಎಂಬ ಅನುಭಾವಿ ಹೀಗೆ ಇವರಿಬ್ಬರ
ದೃಕ ಸ್ವಭಾವಗಳನ್ನು ಹೇಳುತ್ತ ನನ್ನ ನಿನ್ನ ದೃಷ್ಟಿಯೊಂದೆ ಆದರೆನ್ನ ಅದೃಷ್ಟ
ರೆ ಎಂಬ ಅನುಭಾವಿಯ ಮಾತನ್ನು ಕುರಿಯುವುದರಲ್ಲಿ ಕವನ ಮುಗಿಯುತ್ತದೆ.

ಈ ಗುಂಪಿನ ಮೂರನೆಯ ಕವನ 'ದುಃಖಿ'. ದುಃಖ ಎಲ್ಲರಿಗೂ ಸಮಾನವಾದ ಅನು
. ಅದು ಎಲ್ಲರ ಕನಸನ್ನೂ ಕೀಳುತ್ತದೆ ಎಲ್ಲರ ಸನಸನ್ನೂ ಮಣ್ಣು ಮಾಡುತ್ತದೆ. ಈ
ಃಖ ಏಕೆ, ಇದರ ಗೂಢ ಏನು, ಪರಿಹಾರ ಹೇಗೆ ಎಂಬುದು ಯಾರಿಗೂ ಬಗೆ ಹರಿಯದ
ಸ್ಯೆಯಾಗಿದೆ. ಪರಿಹಾರ ಬೇಕೆ ಪರಿತಾಪಕ್ಕೆ? ಹಾಗಾದರೆ ಆತ್ಮಹತ್ಯೆಯೇ ದಾರಿ.
ನೇ ಇನ್ನೊಂದಿದೆ ದಾರಿ: ಮಾರ್ಕಸ್ ಅರೇಲಿಯಸ್, ಎಪಿಕ್ಯೂರಿಸ್, ಅಲ್ಲನು,
ಕ ಇವರ ದಾರಿ. 'ಇದ್ದರೂ ಸತ್ತವನಂತಿರಬೇಕು. ದುಃಖಕು ಸುಖಕೂ ಸಮವೆನ
ಕು. ನಿರ್ಲಿಪ್ತತೆಯೊಡಮೂಡಿಸಬೇಕು' ಎಂಬುದು ಇತರ ಮತ. ಅಸಹಾಯತೆಯ

ಎದೆತಿದಿಯಲ್ಲಿ ಹುಟ್ಟದ ಸಂಕಲ್ಪದ ಬದಿಯಲ್ಲಿ ಬೆಳೆಯುವ ಪೌರುಷವನ್ನು ಬಿದಿ
ಅರ್ಪಿಸಿ ಬಾಳೋಣ ಎಂಬ ಧೀರ ನಿಲವು ಬಂದಾಗಲೇ ಸುಖ ದುಃಖಿಗೆ. 'ಮ
ಮೂಡುತಿರೆ ಬೆಳಕಲ್ಲೆಲ್ಲೂ ನೀ ಮಾಗುವಿಯಂತೆ' ಎಂಬ ಆಶಾವಾದದಲ್ಲಿ ಕವನ ಕ
ಗೊಳ್ಳುತ್ತದೆ.

'ನಿರ್ಲಿಪ್ತ,' ಇಲ್ಲಿಯ ನಾಲ್ಕನೆಯ ಕವನ. ನಿರ್ಲಿಪ್ತತೆಯ ಅಂಜನ ಬಳಿದ ಕ
ನೋಟವೇ ಬೇರೆ. ಈ ನೋಟ ಸಾವನ್ನೇ ಗೆಲ್ಲುತ್ತದೆ. ಜೀವ ಹೂವಿಲ್ಲದೆಯು
ಗಾಗುತ್ತದೆ. ಮಾಯೆ ಮೋಹಗಳು ಅಳಿಯುತ್ತವೆ.

ಈ ನಿರ್ಲಿಪ್ತತೆ ನಿಲಿಂಪರ ಆನಂದವನ್ನೇ ಕೊಡುತ್ತದೆ. ಮಾನವರ ನಡುವೆ
ಶ್ರವಣಬೆಳಗೊಳದ ಗೊಮ್ಮಟ.

'ಭಕ್ತ' ಈ ಗುಂಪಿನ ಐದನೆಯ ಕವನ. 'ನನ್ನ ಹೃತ್ಕಮಲವಿದು ನಿನ್ನ ಕೋ
ಸದನ ನಿನ್ನ ಪದಪದ್ಮವೇ ಮುಕ್ತಿವಾಸ' ಎಂಬ ಅಚಲಶ್ರದ್ಧೆಯೇ ಭಕ್ತನ ಹಾಯಿಕ

ಏಳನೆಯ ಗುಂಪಿನ ಒಂದನೆಯ ಕವನ 'ಜ್ಞಾನಿ'. ಇವನೊಬ್ಬ ಜ್ಞಾನೋಪಾ
ಎಂತಹ ಕಷ್ಟನಷ್ಟಗಳ ಎದುರಿನಲ್ಲಿಯೂ ಜ್ಞಾನಾರ್ಜನೆಯೇ ಏಕಮೇವ ಧ್ಯೇಯ
ತನ್ನ ಅಸುವನ್ನೇ ಅದಕ್ಕಾಗಿ ಹೋಮಿಸುವ ಪಂಡಿತ ಸಂಶೋಧಕ ಈತ. ತಾಳ
ದುರ್ಬೀನು, ಹೊತ್ತಗೆಗಳ ರಾಶಿ, ಕಾಗದಗಳ ಕಟ್ಟು ಇವುಗಳ ನಡುವೆ ನಾಡುನುಡಿ
ಪ್ರಾಚೀನತೆ, ಧರ್ಮೇತಿಹಾಸಗಳ ಪರಾಮರ್ಶೆ ಇವು ನಡೆದೇ ಇರುತ್ತವೆ ಇವನಲ್ಲಿ.

ಮನೆಯಲ್ಲಿ ಹೆಂಡತಿಯು
ಹಡೆದು ಹಾಸಿಗೆ ಹಿಡಿದು
ಹಾಲು ಕಾಣದ ಕೂಸು ನರಳುತಿರಲು
'ನಲ್' ಎಂಬ ನಲ್ನುಡಿಯ
ಮೂಲ ಹೊಳೆದಿತ್ತೆಂದು
ನೀನು ಕುಣಿದಿದ್ದೆ ಮನವರಳುತಿರಲು.

ಎಂಬಂತಹ ಪದ್ಯಗಳಲ್ಲಿ ಈ ಜ್ಞಾನ ಪಿಪಾಸುವಿನ ವೀರಚಿತ್ರ ಮೂಡಿನಿಲ್ಲುತ್ತ
ಇಂತಹ ಮೂರ್ತಿ ಒಮ್ಮೆ ಕಡಲು ಕಂಡು ಅದರ ತೆರೆಗಳ ನಡುವೆ ತನ್ಮಯಾವಸ್ಥೆಯ
ನಿಂತ ಚಿತ್ರದೊಂದಿಗೆ ಕವನ ಮುಗಿಯುತ್ತದೆ. ಜ್ಞಾನಿಯ ಚಿತ್ರಕ್ಕೆ ತಕ್ಕ ಪ್ರ
ಚಿತ್ರ ಇದು.

'ಆಳ್ವಾರ' ಈ ಗುಂಪಿನ ಎರಡನೆಯ ಕವನ. ಬಾಲಾವಧೂತನ ಮಂಗಳ ಚಿತ್ರ
ರಮ್ಯಾದ್ಭುತವಾಗಿ ಪಡಿಮೂಡಿದೆ. ಶರಣರ ಎದೆಯರಳಿಸು ಪಾಪದ ಹೊರೆಯಿರು
ಎಂದು ಗುರು ಆದೇಶವಿತ್ತು, ನಡೆದ ಮೇಲೆ ಗುರುವಿನ ಗರಡಿಯಲ್ಲಿ ಬೆಳೆದ
ಬಾಲಾವಧೂತ ಭವಗಾರುಡಿಯಾಗಿ ನಿಂತನು. 'ಆತ್ಮವೃದ್ಧಿಯೊಂದೆ ಎಂದೆ ಮ

ುಕೆ' ಎಂಬ ಮಾತಿನಲ್ಲಿ ಕವಿ ಈ ಅವಧೂತನ ಉಪದೇಶದ ಹಿರಿಮೆಯ ಕಡೆಗೆ ಳು ಮಾಡಿದ್ದಾರೆ.

ಚಾರಿತ್ರದ ಮಹತಿಯನ್ನು
ನಿನ್ನ ಚರಿತದಲ್ಲಿ ಕಂಡೆ
ನಾನು ನಿನ್ನ ನಿನ್ನಂತಹ ಘನರ ಚಾರಣ.

ುಲ್ಲಿ ಕವಿ ಈ ಅವಧೂತನ ಬೃಹಚ್ಚೇತನಕ್ಕೆ ದಿವ್ಯಾತ್ಮಕ್ಕೆ ನಮೋ ನಮೋ ಎಂದು ುತ್ತಾ ಕೈಮುಗಿಯುತ್ತ ಧನ್ಯತೆಪಡೆದಲ್ಲಿ ಕವನ ಮುಗಿಯುತ್ತದೆ.

ಮುಕ್ತಜೀವಿಗಳು' ಈ ಗುಂಪಿನ ಮೂರನೆಯ ಕವನ. ಈ ಹಿಂದೆ ಹೇಳಿದವರೆಲ್ಲ ರನ ವೃಕ್ಷದಲ್ಲಿ ಮಾಗಿ ಫಲವಾಗಿ ರಸವಾಗಿ ಸಫಲವಾಗಿ ಸುಫಲವಾಗಿ ಲೋಕಕ್ಕೆ ು ಹಣ್ಣಾಗುವುವಕ್ಕೆ ನೆರವಾದವರು. ಬಾಳದೇಗುಲದಲ್ಲಿ ಇಂತಹ ಚೇತನರು ತನರೂ ಹೌದು ಸನಾತನರೂ ಹೌದು. ಈ ಕವಿತೆಯ ಕಡೆಯ ಎರಡು ಪದ್ಯಗಳನ್ನು ್ರರಿಸುತ್ತೇನೆ:

ನನ್ನ ಬಾಳಿರಲಿವರ
ಅರಿವಿಂದ, ಒಲವಿಂದ,
ಬಾಳಿಗರ್ಪಿಸುವ ಅರವಿಂದವಾಗಿ;
ನನ್ನ ಕಾವ್ಯವು ಗುಡಿಯ
ಭಕ್ತ ಮಧುಪರಿಗೆಂದು
ಸಂತರ್ಪಿಸಿರುವ ಮಕರಂದವಾಗಿ.

ಧಾರುಣಿಯದಿರಲಿವರ,
ತಿಳಿವಿಂದ ಹೊಳವಿಂದ,
ಗುಡಿಯ ದಾರಿಯ ಧರ್ಮಶಾಲೆಯಾಗಿ;
ನಾಳೆ ಮನುಕುಲವನ್ನೆ
ಮುನಿಕುಲವನಾಗಿಸುವ
ಅತಿಮಾನವರ ಕರ್ಮಶಾಲೆಯಾಗಿ.

ಾಳದೇಗುಲದ ಬಾಳಿನ ಅಧಿದೈವಕ್ಕೆ ಹಾಡಿದ ಒಂದು ಮಂಗಳಾಷ್ಟಕದ ನಮನ ಈ ಹೊತ್ತಗೆಯ ಕದಮುಚ್ಚುತ್ತದೆ ಮತ್ತೆ ತೆರೆಯುವ ಸಲುವಾಗಿ! ಕೆಲವೆಡೆ ಗೀತೆಯಾಗಿ ಕೆಲವೆಡೆ ಕಥನ ಕವನವಾಗಿ ಕೆಲವೆಡೆ ಗೀತರೂಪಕವಾಗಿ ಕೆಲವೆಡೆ ಜನೆಯಂತೆ ಧ್ವನಿರಮ್ಯವಾಗಿ ಕೆಲವೆಡೆ ವ್ಯಕ್ತಿಚರಿತೆಯಾಗಿ ಕೆಲವೆಡೆ ಲೋಕ ಯಾಗಿ ಈ ಹೊಸ ಸಾಹಿತ್ಯ ಪ್ರಕಾರ ಒಂದು ಮಹಾಕಾವ್ಯದ ಮಟ್ಟಕ್ಕೆ ಏರಿದೆ, ಧರ್ಮವನ್ನು ಸೂತ್ರೀಕರಿಸಿಕೊಂಡಿರುವುದರಿಂದಾಗಿ, ವಿಭೂತಿಪುರುಷರ ಪುಣ್ಯ ಗಗಳನ್ನು ಗರ್ಭೀಕರಿಸಿಕೊಂಡಿರುವುದರಿಂದಾಗಿ. ಹೀಗಾಗಿ ಈ ಬಾಳದೇಗುಲ

ನವೀನ ಮಹಾಕಾವ್ಯದ ಒಂದು ವಿಶಿಷ್ಟ ಪ್ರಕಾರವಾಗಿದೆ. ಶಿಷ್ಟ ಕವಿಯ ಸಿದ್
ಸೃಷ್ಟಿಯಾಗಿದೆ. ಈ ಎಲ್ಲ ಕಾರಣಗಳಿಂದ ವಿನೂತನವಾಗಿದೆ ಈ ವಿನಾಯಕ ಕಾ
ಸೃಷ್ಟಿ 'ಬಾಳದೇಗುಲದಲ್ಲಿ !'

ಮಂಗಳೂರಿಗೆ ಹೋಗಿ ಕದರಿಯ ಗುಡ್ಡದ ಮೇಲೆ ನಿಂತು ನೋಡಿದರೆ ಗುಡ್
ಕೆಳಗಿನ ಊರು ಎತ್ತರಕ್ಕೆ ಬೆಳೆದ ಸಾವಿರ ಸಾವಿರ ತೆಂಗಿನ ಮರಗಳ ಗರಿಗೊಡೆ
ಮರೆಯಲ್ಲಿ ಹುದುಗಿದಂತೆ ಕಾಣುತ್ತದೆ. ಮೇಲಿನಿಂದ ನೋಡುವವರಿಗೆ ಆ ಸುರಲೋ
ಅಮರರಿಗೆ ಅನಿಮಿಷರಿಗೆ ಕಾಣುವುದೇನು ! ತಮ್ಮ ಸುರತರು ಸಂತಾನವೇ ಇಲ್ಲಿಯ
ಬೆಳೆದು ಅಮೃತವನ್ನು ತುಂಬಿಕೊಂಡ ನಾರಿಕೇಳ ಫಲಗಳ ಪೂರ್ಣಕುಂಭಗಳ
ಹಿಡಿದು ತಮ್ಮನ್ನು ಸ್ವಾಗತಿಸುವ ಒಂದು ಭವ್ಯವಾದ ನೋಟವಲ್ಲದೆ ಮತ್ತೇನ
ಹಚ್ಚ ಹಸುರಿನ ನಿಚ್ಚ ಹಸುರಿನ ಉಚ್ಚ ಹಸುರಿನ ಅಲಗುಗರಿಗಳ ಮಡಿಲುಗಳ ನಡ
ಎಳಸೀರಿನ ಗೊಂಚಲುಕಾಯ್ಗಳ ಆ ನೋಟ ಎಷ್ಟು ಹಿತ ಮೇಲಿನ ಜನ
ಊರೊಳಗೆ ಇರಬಹುದಾದ ಕಷ್ಟಕಾರ್ಪಣ್ಯಗಳ ಕಸಮುಸುರೆಗಳ ಅರೆಕೊರ
ಚಿತ್ರವನ್ನೆಲ್ಲ ಮರೆಗೈದು ಈ ತೆಂಗು ಅಂಗಳಕ್ಕೆ ಮಂಗಳವಾಗಿ ನೋಟಕ್ಕೆ ಸಿಂ
ವಾಗಿ ಉಪ್ಪು ನೀರು ಹೀರಿಯೂ ಅದರಿಂದಲೇ ಅಮೃತದ ಫಲವನ್ನು ಮೇಲೆ ಹೊ
ತೋರುತ್ತಿದ್ದೇನೆ ಎಂದು ತಲೆಯೆತ್ತಿ ತೂಗಿ ಸಾರುವ ಆ ನೋಟ ಎಷ್ಟು ಭ
ಅದನ್ನು ಕಂಡ ನನಗೆ ಬಾಳದೇಗುಲದಲ್ಲಿ ಬರುವ ಚಿತ್ರಗಳನ್ನು ಓದಿದಾಗ ಇ
ಆ ತೆಂಗುಗಳೇ ಸರಿ ಎನ್ನಿಸಿತು. ಓರೆಯೋ ನೇರವೋ ತೆಂಗುತೆಂಗೇ. ನಮ್ಮ ರೂ
ರಾಧಕ, ನಮ್ಮ ಕವಿಗುರು, ನಮ್ಮ ದಾನಿ, ನಮ್ಮ ತ್ಯಾಗಿ, ನಮ್ಮ ಸತ್ಯಾಗ್ರಹಿ, ನ
ಸನಾತನಿ-ವಿನೂತನಿ, ನಮ್ಮ ಧಾರ್ಮಿಕಕಲೋಪಾಸಕ, ಕಲೋಪಾಸಕನಾದ ಸುಧ
ಇತ್ಯಾದಿ ವ್ಯಕ್ತಿಗಳೆಲ್ಲ ಆದರ್ಶಗಳೆಲ್ಲ ಆ ಕಲ್ಪವೃಕ್ಷಗಳ ಮಾದರಿಗಳೇ; ಇವರೆಲ್ಲ
ಲೋಕದವರೇ. ನರಲೋಕದಲ್ಲಿ ಬೆಳೆದು ಸುರಲೋಕಕ್ಕೆ ಎದ್ದು ನಿಂತ ನಮ್ಮ ಬಾ
ವರೇ. ನಮ್ಮ ಅರೆಕೊರೆಗಳನ್ನು ಮುಚ್ಚಿ ನಮ್ಮ ಮೃತಪ್ರಾಯವಾದ ಚೇತನಕ್ಕೆ ತ
ಅಮೃತ ಸೇಚನದಿಂದ ಅಮರತೆಯನ್ನೊದಗಿಸುವ ಶಕ್ತಿಗಳೇ. ಹಳ್ಳದಲ್ಲಿ ಇದ್ದೂ ಕೆ
ವನ್ನು ಮುಚ್ಚಿ ಗುಡ್ಡದವರಿಗೆ ಗುಡ್ಡದಲ್ಲಿ ಮೇಲಣ ಸುರಲೋಕದ ಸೊಡೆಯುಣಿಸ
ನೀಡುತ್ತಿರುವ ನೋಡುತ್ತಿರುವ ಸುರಲೋಕದವರಿಗೆ ಇಲ್ಲಿ ಬನ್ನಿರೆಂದು ಸ್ವಾಗತ ನೀ
ರುವ ದಿವ್ಯಭವ್ಯ ಜೀವಾತ್ಮರ ಮುಕ್ತ ಜೀವರ ಇಂತಹ ಪ್ರತಿಮೆಗಳನ್ನು ಕನ
ಕಂಡ ನನಸಾಗಿ ಉಂಡ ಕವಿ ಧನ್ಯ; ಈ ಕವಿಯ ಇಂತಹ ಕೃತಿಯಿಂದ ನಾವೂ

ಚಂಪೂ ಪ್ರಯೋಗ

ಜಿ. ವರದರಾಜರಾವ್

ಂಪೂ ಎಂಬ ಹೆಸರನ್ನು ಹೇಳಿದ ಕೂಡಲೆ, ಕನ್ನಡ ಸಾಹಿತ್ಯದ ಮಹಾಕವಿಗಳು ಬರೆದ
ತ್ತಮೋತ್ತಮ ಉದ್ಗ್ರಂಥಗಳ ನೆನಪಾಗುವುದು ಸ್ವಾಭಾವಿಕ. ಆ ಪ್ರಾಚೀನ ಕಾಲದ
ಗಳ ಜಾಡನ್ನು ಇಂದಿನ ಕವಿಗಳಾದ ಶ್ರೀ ವಿನಾಯಕರೂ ಅನುಸರಿಸಿದ್ದಾರೆಯೆ
ದು ಬೆರಗಾಗುವವರೂ ಇರಬಹುದು. ಆದರೆ ವಿನಾಯಕರು ರಚಿಸಿರುವ ಚಂಪೂಕೃತಿ
ು ಕಂದ ವೃತ್ತಾದಿಗಳ ಛಂದದಲ್ಲಿಲ್ಲ; ಆರಿಸಿಕೊಂಡಿರುವ ವಿಷಯವೂ ಸಹ ಪುರಾಣೇತಿ
ಸಗಳನ್ನು ಕುರಿತಿದ್ದಲ್ಲ. ಕವಿರಾಜಮಾರ್ಗಕಾರನ ವಿವರಣೆಯನ್ನು ಭಾಗಶಃ ಅನ್ವಯಿಸು
ಾದರೆ ಇವು ಕೇವಲ "ಗದ್ಯಪದ್ಯಸಮ್ಮಿಶ್ರಿತ"ವಾದುವು. ಆಧುನಿಕ ಪದ್ಯಧಾಟಿಯೊಂದಿಗೆ
ವ್ಯವಾದ ಗದ್ಯವೂ ಕೂಡಿಕೊಂಡಿದೆ. ವಿಷಯವಾದರೋ ಆತ್ಮಾನುಭವದೊಂದಿಗೆ
ೀಕಾನುಭವವೂ ಹಾಸುಹೊಕ್ಕಾಗಿ ಹೆಣೆದುಕೊಂಡಿದೆ. ವಿನಾಯಕರ ನವ್ಯಪ್ರಯೋಗ
ಲ್ಲಿ ಈ ಪ್ರಯತ್ನವೂ ಸಹ ವಿಶಿಷ್ಟವಾಗಿರುವುದಲ್ಲದೆ, ಅದು ಯಶಸ್ವಿಯಾಗಿರುವುದು
ಷ್ಟಪಡತಕ್ಕ ಸಂಗತಿ. ಈ ರೀತಿಯಾದ ಎರಡು ಕೃತಿಗಳಲ್ಲಿ ಒಂದನೆಯದಾದ
ವಿಕ್ರಮರ ಆಕಾಶಗಂಗೆ' ಎಂಬುದು ೧೯೪೫ ರಲ್ಲಿ ಪ್ರಕಟವಾಗಿದ್ದರೆ, 'ಇಂದಿಲ್ಲ ನಾಳೆ'
ು ಇನ್ನೊಂದು ೧೯೬೫ ರಲ್ಲಿ ಪ್ರಕಟವಾಗಿದೆ. ಈ ಇಪ್ಪತ್ತು ವರ್ಷಗಳ ಅಂತರದಲ್ಲಿ
ತವಾಗುವ ಕವಿಯ ವ್ಯಕ್ತಿತ್ವದ ಬೆಳವಣಿಗೆಯೂ ಸಹ ಅಷ್ಟೇ ಗಮನಾರ್ಹವಾದುದು.

೧

ತ್ರಿವಿಕ್ರಮರ ಆಕಾಶಗಂಗೆ' ಎಂಬ ಕೃತಿಯನ್ನು ಪರಿಚಯಮಾಡಿ ಕೊಡುತ್ತ,
ರಂ. ಶ್ರೀ. ಮುಗಳಿಯವರು "ಸೌಂದರ್ಯ, ಗೆಳೆತನ ಇವುಗಳ ಆಳವಾದ ಅನು
ವೇ ಮುಖ್ಯವಾಗಿ 'ಆಕಾಶಗಂಗೆ'ಯ ಪ್ರೇರಣೆಯಾಗಿದೆ. ಆಯಾ ಸನ್ನಿವೇಶಗಳನ್ನು
ವಾಗಿ ಚಿತ್ರಿಸಿ, ಅಲ್ಲಲ್ಲಿಯ ಗದ್ಯ-ಪದ್ಯದಲ್ಲಿ ಅವನ್ನು ವಿವರಿಸಿ 'ತ್ರಿವಿಕ್ರಮ'ರು
ಪ್ರ ಕಂಡ ಪ್ರೀತಿ ಸೌಂದರ್ಯದರ್ಶನದ 'ಆಕಾಶಗಂಗೆ'ಯನ್ನು ಎಲ್ಲರೂ ಕಾಣು
ತೆ ಕೆಳನೆಲೆಗೆ ತರಲು ಹವಣಿಸಿದ್ದಾರೆ. ಪ್ರೀತಿಯ ದೈವಿಕತೆ, ಅಮರತೆ ಅವರ ಜೀವನ

ವನ್ನು ಪಾವನಗೊಳಿಸಿದ್ದರೂ ಅನುಭವದ ಸೂಕ್ಷ್ಮತೆಯನ್ನೂ ಅಲೌಕಿಕತೆಯನ್ನೂ ಅ
ಕಳೆಯಲಾರದು" ಎಂದು ಅರ್ಥವತ್ತಾಗಿ ಹೇಳಿರುತ್ತಾರೆ.

ವ್ಯಕ್ತಿಯ ಜೀವನದಲ್ಲಿ ಬಾಲ್ಯ ಯೌವನಗಳೆರಡೂ ವಿಕಾಸದ ಕಾಲಗಳು. ಮು
ವಾಗಿದ್ದ ಮನಸ್ಸು ಪ್ರಬುದ್ಧವಾಗುವ ಮಾರ್ಗದಲ್ಲಿ ಹಲವಾರು ಪರಿಸರಣಗಳು ತ
ಪ್ರಭಾವವನ್ನು ಬೀರುತ್ತವೆ. ಸಾಮಾನ್ಯ ಮಾನವನು ಈ ಪರಿವರ್ತನೆಗಳಾವುದನ
ಲಕ್ಷಿಸದೆ ಅವುಗಳನ್ನು ಕೇವಲ ವಯೋಧರ್ಮವೆಂದು ಎಣಿಸಿ ತೆಪ್ಪನಾಗುತ್ತಾನೆ. ಭಾ
ಜೀವಿಯಾದರೋ ಈ ಬೆಳವಣಿಗೆಯ ಒಂದೊಂದು ಸ್ಪಂದನವನ್ನೂ ಗುರುತಿಸಿ ಅ
ನೈಸರ್ಗಿಕ ಮಹತ್ವವನ್ನರಿತು, ವಿಚಾರಶಕ್ತಿಯಿಂದ ವಿಶ್ಲೇಷಿಸಿ ನೋಡಿ, ತನ್ನನ್ನು ತಾ
ಕಂಡು ವಿಸ್ಮಯಗೊಳ್ಳುತ್ತಾನೆ. ಒಂದು ರೀತಿಯಲ್ಲಿ ಇದು ಆತ್ಮಶೋಧನೆಯೇ ಸ
ಪ್ರತಿಯೊಬ್ಬರ ಜೀವನದಲ್ಲಿಯೂ ಸಂಭವಿಸುವ ಇಂತಹ ಘಟನೆಗಳನ್ನು ಅಲಿಪ್ತವ
ಪರಿಶೀಲಿಸಿದರೆ, ಅದರ ಏರಿಳಿತಗಳು ಬೆರಗನ್ನುಂಟುಮಾಡದೆ ಇರುವುದಿಲ್ಲ. ಒಬ್ಬೊಬ
ಜೀವನವೂ ಒಂದೊಂದು ಆತ್ಮಚರಿತ್ರೆಯಾಗಬಹುದೆಂಬುದು ಇದೇ ಅರ್ಥದಲ್ಲಿ.
ಅಲಿಪ್ತ ದೃಷ್ಟಿ ಹಾಗೂ ತಮ್ಮ ತಮ್ಮ ಚಲನವಲನಗಳನ್ನು ವಿಶ್ಲೇಷಿಸುವ ಕ್ರಮ ಸು
ಸಾಧ್ಯವಾದುದಲ್ಲ. ಇದರಲ್ಲಿ ಮುಚ್ಚುಮರೆಯಿಲ್ಲದೆ ಮನದ ಆಳವನ್ನು ಹೊಕ್ಕಿ ನೋ
ಬೇಕು. ಕಳೆದ ಕಾಲದ ಪದರ ಪದರಗಳಲ್ಲಿ ಸುಳಿದಾಡಿ, ಸ್ವಾನುಭವದ ಮುತ್ತು ಹ
ಗಳನ್ನು ಆಯ್ದು ತಂದು ಇತರರ ಮುಂದೆ ಹರವಿ ಸಂತೋಷಪಡುವ ಮನೋಧ
ಎಲ್ಲರಿಗೂ ಸಾಧ್ಯವಾಗದು. ಇಂಥ ಒಂದು ವಿನೂತನ ಪ್ರಯತ್ನವನ್ನು ವಿನಾಯ
ಇಲ್ಲಿ ಮಾಡಿರುತ್ತಾರೆ. ತಮ್ಮ ಶೋಧನೆಗೆ ತಾವು ಅಡ್ಡಬರಬಾರದೆಂದೋ ಏನೊ
ಸ್ವಾನುಭವವನ್ನೇ ತ್ರಿವಿಕ್ರಮರ ಪರಾನುಭವದ ಮೂಲಕ ಪರಿಶೀಲಿಸಿ, ತಮ್ಮ ಅ
ಭಾವವನ್ನು ತೆರೆಮರೆಗೆ ಸರಿಸಿದ್ದಾರೆ. ನಮ್ಮ ಕಣ್ಣೆದುರು ಕಾಣುವುದು ತ್ರಿವಿಕ್ರ
ಅನುಭವ ಪರಂಪರೆ. ಈ ತಂತ್ರವೇ ಇಲ್ಲಿ ಮೊಟ್ಟಮೊದಲನೆಯ ವಿಸ್ಮಯ.

ಇನ್ನು 'ಆಕಾಶಗಂಗೆ' ಎನ್ನುವ ಹೆಸರಾದರೂ ಎಷ್ಟು ಸಾಂಕೇತಿಕವಾಗಿದೆ! ತ್ರಿ
ಕ್ರಮರ ಆಸೆ ಆಕಾಂಕ್ಷೆಗಳು ಹೇಗೆ ಆವರ್ತಿಸುವಕನೊಬ್ಬನ ವಿಚಾರಪರತೆಯನ್ನು ವ
ಪಡಿಸುತ್ತವೆ ಎಂಬುದನ್ನು ಸನ್ನಿವೇಶಗಳ ಸೂಕ್ಷ್ಮಾವಲೋಕನದಿಂದ ಗ್ರಹಿಸಬಹುದ

ಬಾಲ್ಯವನ್ನು ಚಿತ್ರಿಸುವ ಪದ್ಯದಿಂದಲೇ ಮೊದಲಾಗುವ ಈ ಕೃತಿ ಒಡನೆಯೇ ನ
ಮನಸ್ಸನ್ನು ಹಿಡಿದು ನಿಲ್ಲಿಸುತ್ತದೆ. "ಕಂಡುದನ್ನೊರೆವೆ ನೀವ್ ಕೇಳಿರೈ ಜಗದೊ
ಸದ್ಭಾವಿಗಳು ಲೋಕದನುಭಾವಿಗಳು. ಒರ್ವ ಜೀವಿಯು ಕಂಡ ಸತ್ಯದಲಿ ತುಂಬಿಹ
ಸಕಲ ವಿಶ್ವದ ಸತ್ಯ" ಎಂದು ವ್ಯಕ್ತಿಯ ಅನುಭವವನ್ನು ಸಮಷ್ಟಿಯ ಅನುಭವದೊಂ
ಸಮನ್ವಯಮಾಡಿ ಹೇಳುವ ಸಂಕಲ್ಪವೇ ಈ ಕೃತಿಯ ಮೂಲಸೂತ್ರವೆಂದರೆ ತ
ಗದು. ಬಾಲ್ಯದ ಆಟಪಾಟಗಳ ಮುಗ್ಧತೆಯ ಸವಿಯನ್ನು ರುಚಿ ನೋಡಿ ಪ್ರ

ಸಾರದ ಬೆಡಗು ಬೆರಗುಗಳನ್ನು ಮನವಾರೆ ಅನುಭವಿಸಿ, ಒಡನಾಡಿಗಳ ಒಳಿತು
ಕುಗಳನ್ನು ಕಣ್ಣಾರೆ ಕಂಡು, ಅವುಗಳ ಸಾರವನ್ನು ಸಾರಿ ಹೇಳಬೇಕೆಂಬ ಸಂಕಲ್ಪದಿಂದ
ಲ್ಲರನು ಸಮನಿಸುವ ಸಾವು ಬಂದೆನ್ನ ಕಣ್ಮನಗಳನು ಮುಚ್ಚುವನಿತರೊಳೆ ನನ್ನಯ
ಭದ್ರ-ರುದ್ರತೆಗಳನು ಒಲಿದ ಭೂಮಿಗೆ ನೀಡಿ, ಹಾಡುತ್ತ ಮನದಾಸೆಗಳ ಮನವು
ಲ್ವನಕ ಇಂತು ಮುಗಿಸುವೆ ನನ್ನ ಗಾನಲೀಲೆಯನು!" ಎಂದು ಪೀಠಿಕೆ ಹಾಕಿರು
. ತ್ರಿವಿಕ್ರಮರ ಜೀವನ ಪರಿಚಯಕ್ಕೂ, ಜೀವನ ವಿಕಾಸಕ್ಕೂ ಇದು ತಕ್ಕ
ವೇಶವೇ ಸರಿ.

ಆಪ್ತೇಷ್ಟರ ಮರಣ ಎಷ್ಟು ದಾರುಣವಾದುದೋ ಅಷ್ಟೇ ವಿಚಾರಕಾರಣವಾದುದೂ
ದು. ಅಕ್ಕ, ತಮ್ಮ, ಅಜ್ಜ, ಅಜ್ಜಿ, ಒಬ್ಬೊಬ್ಬರ ಸಾವೂ ತ್ರಿವಿಕ್ರಮರಿಗೆ ತ್ರಿಶೂಲ
ತೆ ಇರಿಯಲು, ಆ ಬಂಧುಗಳಿಗಾಗಿ ಕೊರಗಿ ಕರಗಿದ ಮನಸ್ಸು, ಆಯುಸ್ಸು ಮುಗಿವು
ಳಗಾಗಿ ತನ್ನ ಹಾಡನ್ನು ಮುಗಿಸಿ ಕೈಮುಗಿಯಬೇಕೆಂದು ಹಂಬಲಿಸುತ್ತದೆ.
ವರ ವಿಯೋಗದಿಂದ ಇದ್ದವರ ಚಿತ್ತ ವಿಹ್ವಲವಾಗುವುದಾದರೂ, ಅದನ್ನು ಮೆಟ್ಟಿ
ತರೆ ಎಂತಹ ತಿಳಿವು ಹೊಳೆಯುವುದೆನ್ನುವುದಕ್ಕೆ ಲೇಖಕರು 'ಮರಣವಿತ್ತ ಬೆಳಕು'
ದು ಹೇಳಿರುವ ಮಾತೇ ಸಾಕ್ಷಿ.

ಅನಂತ ವಿಶ್ವವನ್ನೇ ವಿಹರಿಸಬೇಕೆಂಬ ಬಾಲ್ಯದಾಕಾಂಕ್ಷೆಯ ಬೆನ್ನನ್ನು ಸವರುವ
ಗುರುವಿನ ಕರುಣೆಯಿಂದ ಲೇಖಕರ ಹೃದಯ ಹಿಗ್ಗುತ್ತದೆ. ಅವರ ಕಾವ್ಯ ಚೇತನ
ರೆಯುತ್ತದೆ. ವಯೋಧರ್ಮಕ್ಕೆ ತಕ್ಕಂತೆ ದೈವಭಕ್ತಿಯ ಮೊದಲ ಪಾಠ ಮನ
ಲಿಯುತ್ತದೆ.

ಜೀವನವನ್ನು ಹದಗೊಳಿಸುವ ನಾನಾ ಶಕ್ತಿಗಳಲ್ಲಿ ದೈವಭಕ್ತಿಯೂ ಒಂದು. ಇದು
ಗೆ ಹೃದಯವನ್ನು ಪ್ರವೇಶಿಸಿ ಬಾಳಿಗೆ ಬೆಳಕಾದೀತೆಂಬುವನ್ನು ಸೂಕ್ಷ್ಮವಾಗಿ ಪರಿ
ಲಿಸಿದರೆ ಅದರ ಮಹತ್ವವನ್ನು ತಿಳಿಯಬಹುದು. ತ್ರಿವಿಕ್ರಮರ ಜೀವನದಲ್ಲಿ ಈ ಲಹರಿ
ಗೆ ಪ್ರವಹಿಸಿತೆಂಬುದನ್ನು ಹಂತಹಂತವಾಗಿ ಬಿಡಿಸಿ ತೋರಿದ್ದಾರೆ. ಸಣ್ಣತಮ್ಮಪ್ಪ
ಬ ಒಬ್ಬ ಕೂಲಿಗೆ ಪ್ರಾಣಾಪಾಯದಿಂದ ಪಾರಾಗಲು ದುರಗಮ್ಮನೇ ಕಾರಣಳೆಂದು
ವಾಗಲು, ಅವನು ಆ ದೇವಿಯ ಗುಡಿಯ ಪೂಜಾರಿಯಾಗುತ್ತಾನೆ. ಆ ಪೂಜಾರಿಯ
ಜೆಯಲ್ಲಿ ಆಸಕ್ತಿ ಬೆಳೆಸಿದ ತ್ರಿವಿಕ್ರಮರು ಆ ದೇವಿಯ ಭಕ್ತರಾಗುತ್ತಾರೆ. ಎಲ್ಲಿಯ
ಕ ಸಣ್ಣತಮ್ಮಪ್ಪನ ಪೂಜೆ ಆಶಾಗ್ರಸ್ತವಾಗುವುದಿಲ್ಲವೋ ಅಲ್ಲಿಯತನಕ ಅವರು ಆ
ಗೆ ತಮ್ಮ ಕೈಯಲ್ಲಾದ ಕಾಣಿಕೆಯನ್ನು ಸಮರ್ಪಿಸುತ್ತಾರೆ. ಗುಡಿಯ ಪ್ರಶಸ್ತಿ
ದಂತೆಲ್ಲಾ ಪೂಜಾರಿಯ ಆಸೆ ಮಿಗಿಲಾಯಿತು. ಅವನ ನೈಜವಾದ ವೇದಾಂತ ಹಿಂದೆ
ದು ಅವನ ಪೂಜೆಪುರಸ್ಕಾರಗಳೆಲ್ಲ ಕೇವಲ ವ್ಯವಹಾರವಾಗಿ ಪರಿಣಮಿಸಿದುವು.
ಖಕರ ಕಣ್ಣಿಗೆ ಇದು ಅಸಹನೀಯವೆನ್ನಿಸಿತು. ಭಕ್ತಿಯ ನೆಲೆಯನ್ನು ಕಂಡ ಎಡೆಯೇ

ಈಗ ಅವರಿಗೆ ಬೇಡವಾಗುತ್ತದೆ. ಸಣ್ಣತಮ್ಮಪ್ಪನ ಮೇಲಿನ ಅಭಿಮಾನವಂತ
ಎಂದೋ ಅಡಗಿ ಹೋಗುತ್ತದೆ. ಇಂಥ ಸ್ಥಿತಿಯಲ್ಲಿ ಲೇಖಕರ ಮನಸ್ಸು ಹೊಯ್ದಾಟ
ಸಿಕ್ಕಿ ತನ್ನನ್ನು ತಾನೇ ಪ್ರಶ್ನಿಸಿಕೊಳ್ಳುತ್ತದೆ. ಅವರ ಉತ್ತರ ಇಲ್ಲಿದೆ:

"ಆದರೂ ಊರಿನಿಂದ ತಿರುಗುವ ದಿನ ನಾನು ಗುಡಿಗೆ ಹೋಗಿ ಸಣ್ಣತಮ್ಮ
ನನ್ನು ಮಾತಾಡಿಸಿ ದಕ್ಷಿಣೆಯಿಟ್ಟು ಬಂದೆ. ದೇವಿಯು ನನ್ನ ಬಾಲ್ಯದ ದೇವಿಯಾ
ದ್ದಳು. ಗುಡಿಯು ನನ್ನ ಹುಡುಗತನದ ನಡತೆಗೆ ಜೀವಚುಂಬಕವಾಗಿ ಒಳ್ಳೆಯದ
ಕಡೆಗೆ ನನ್ನ ಒಲವುಗಳನ್ನೆಳೆಯಿತು. ಸಣ್ಣತಮ್ಮಪ್ಪನ ಸಹವಾಸದಲ್ಲಿ ನನ್ನ ಪ್ರತಿಜ್ಞೆಯ
ತಿಳಿವಳಿಕೆಯೂ ಜಾಗೃತವಾದವು. ಅಂದಮೇಲೆ ಇವರನ್ನು ಮರೆತು ನಾನು ಹೇ
ಕೃತಘ್ನನಾಗಲಿ." (ಪು. ೩೪)

ದೈವಭಕ್ತಿಯಿಂದ ಪ್ರೇರಿತವಾದ ಈ ಔದಾರ್ಯವೇ ವ್ಯಕ್ತಿತ್ವದ ವಿಕಾಸದ ಚಿಹ್
ಪೂಜಾರಿಯ ಬಗ್ಗೆ ಅನಾದರ ಮೂಡಿದರೂ ಅವನು ತಮ್ಮ ಜೀವನದಲ್ಲಿ ವಹಿಸಿದ ಪಾ
ವನ್ನು ಸ್ಮರಿಸಿ ಕೃತಜ್ಞತೆಯನ್ನು ಸಮರ್ಪಿಸುವುದು ಸೌಜನ್ಯದ ಲಕ್ಷಣ. ದೈವಭಕ್ತಿ
ಈ ಆಗುಹೋಗುಗಳ ಚಿತ್ರಣ ಎಷ್ಟು ಸಹಜವೋ ಅಷ್ಟೇ ಪ್ರಭಾವಶಾಲಿಯಾಗಿದೆ.

ಯಾರ ಜೀವನದಲ್ಲಿಯೇ ಆಗಲಿ ಹೆಣ್ಣಿನ ಹಂಬಲವುಂಟಾಗುವ ಮೊದಲ ಕ್ಷಣಗ
ಅತ್ಯಂತ ವಿಸ್ಮಯಕರವಾದುವು. ಅದನ್ನು ನೈಸರ್ಗಿಕ ಧರ್ಮವೆಂದು ಸಾಮಾನ್ಯರು
ಸದೆ ಹೋಗಬಹುದು. ಭಾವುಕನಾದವನೋ ಅದರ ಒಂದೊಂದು ರಶ್ಮಿಯನ್ನೂ ಗುರು
ನೋಡುವನು. ಪ್ರಕೃತದಲ್ಲಿ ತ್ರಿವಿಕ್ರಮರಾದರೂ ಈ ಮನೋವ್ಯಾಪಾರವನ್ನು ಬ
ಮನೋಹರವಾಗಿಯೇ ಚಿತ್ರಿಸಿರುತ್ತಾರೆ. ದೇವರ ನೃತ್ಯಸೇವೆಗಾಗಿ ಪಟ್ಟಣದಿಂದ ಬಂದ
ನರ್ತಕಿಯೊಬ್ಬಳ ನಿಲುವು ಭಂಗಿಗಳು ಅವರ ಮೇಲೆ ಎಂತಹ ಮೋಹದ ಬಲೆಯನ
ಬೀಸಿತೆಂಬುದನ್ನು ಬಹಳ ಮನೋಜ್ಞವಾಗಿ ವಿಶ್ಲೇಷಿಸಿದ್ದಾರೆ.

"ಮಾತು ಮಾತಿಗೆ ನೃತ್ಯಾಂಗನೆಯು ಮುಗುಳು ನಗೆಯ ಮುತ್ತು ಸುರಿಸು
ದ್ದಳು. ತೆಳ್ಳನ್ನ ದೇಹ, ಗೌರಕಾಂತಿಯಿದ್ದ ಕೇದಗೆಯ ಬಣ್ಣ, ಕವಳಿಗಣ
ಮೋಹಕವಾದ ತುಟಿ, ಒಪ್ಪುವಂತಹ ಉಡಿಗೆ-ತೊಡಿಗೆ: ಇವೆಲ್ಲ ಕೂಡಿ ಲತಾಂಗಿಯ
ಕಾಮಲತೆಯಾಗಿ ಪರಿಣಮಿಸಿದಳು. ಮುದುಕನು ಅವಳ ಕಣ್ಣ ಗೊಂಬೆಯಾ
ಸರಿದಾಡುತ್ತಿದ್ದ. ಹರೆಯ ಮದವನ್ನರಿತ ಮುದುಕನು ಮೋಹಿಸಿದ್ದರೆ ಏನಾಶ್ಚರ್ಯ
ತಾರುಣ್ಯದ ಅರುಣೋದಯವು ಸಹ ಗೊತ್ತಿರದ ನನ್ನಂಥ ಹಸುಳರು ನೃತ್ಯಾಂ
ಯನ್ನು ಮುತ್ತಿದ್ದರು. ನಾನಂತೂ ದೀಪದ ಹುಳದಂತೆ ಅವಳ ನಗೆಯ ಹಾ
ಕಣ್ಣಿನ ಬೆಳಕಿಗೆ ಸೋತುಕೊಂಡು ನಿಂತಿದ್ದೆ. ಹೆಣ್ಣು ಗಂಡಿನ ನಡುವಿನ ಭೇದವ
ಅಂದು ನಾನು ಕಂಡುಕೊಂಡೆ. (ಪು. ೩೪-೩೫)"

ಈ ಮೊಟ್ಟಮೊದಲನೆಯ ಪುನಃಪರಿವರ್ತನೆ ಮೆಟ್ಟಿಲು ಮೆಟ್ಟಿಲಾಗಿ ಹೇಗೆ ಮುಂದು
ಯಿತೆನ್ನುವುದನ್ನು ಲೇಖಕರು ಬಹಳ ಭಾವಗರ್ಭಿತವಾಗಿ ನಿರೂಪಿಸಿರುತ್ತಾರೆ. ಆ
ತ್ತಿಚಾಂಚಲ್ಯದೊಂದಿಗೇ ಅವರ ಹರೆಯ ಹೇಗೆ ಕುಡಿಯೊಡೆಯಿತೆನ್ನುವುದನ್ನೂ
ಡಿರುತ್ತಾರೆ. ಸೌಂದರ್ಯದ ಈ ಪ್ರಥಮ ಸಂದರ್ಶನಾನುಭವ ಇಂತು ಚಿತ್ರಿತವಾಗಿದೆ:

ಪಸುಳತನ ಹೋಗಿ ಹರೆಯಿದೆಯಲಡಿಯಿಕ್ಕುತಿರೆ
ಚೆಲುವಿಕೆಯ ಪಡೆಯುಳೆಳಸುತ ಮನದ ಹಕ್ಕಿಯದು
ಮನಸಿಜನ ರಾಜ್ಯದಲಿ ವಿಭ್ರಮಿಸಿ ಪರಿಭ್ರಮಿಸಿ
ಕುಸುಮೆಯರ ಕುಸುಮಶರಗಳಿಗೆಲ್ಲ ಕಡುನೊಂದು
ಕಡೆಗೊಂದನಂಗಲಾವಣ್ಯವಿಹ ತಾಣದಲಿ
ಅನುಪಮಾತ್ಮಿಕ ಪ್ರೇಮವಂಕುರಿಸುವೆಡೆಯಲ್ಲಿ
ಸೌಂದರ್ಯಲತೆಯೊಂದು ಬೆಳೆದು ಬಳಕುವ ಪರಿಯ
ನನುಭವಿಸಿತೀ ವಿಧದಲಿ: (ಪು. ೩೬-೩೭)

ಮ್ಮ ದೀಪಾವಳಿಯ ರಂಗಣಗುಣಿತದ ಕನ್ಯೆಯರಲ್ಲಿ ಒಬ್ಬಳ ರೂಪದ ಆಕರ್ಷಣೆಗೆ
ಗಾಗಿ ಸೌಂದರ್ಯದ ತತ್ತ್ವವನ್ನರಿತ ತ್ರಿವಿಕ್ರಮರ ಮನಸ್ಸಿನ ಚಿತ್ರಣ ಅವರ ಮಾತು
ಲ್ಲಿ ಇಂತು ಪಡಿಮೂಡಿದೆ:

. . . . ಒರ್ವ ನವಯೌವನದ
ಬಾಲೆ, ಲೀಲಾಲೋಲೆ, ಗುಲ್ಮವರ್ಣದುಕೂಲೆ,
ಲತಾಂಗಿಯರ ಲತೆಯಲ್ಲಿ ಸ್ಮಿತವದನೆ, ಮಲ್ಲಿಗೆಯ
ಹೂವಂತೆ ನನ್ನ ಮನವನ್ನು ಸೆರೆಗೊಂಡಳೈ!
ತಿಳಿಗೊಳದ ತಾವರೆಯು, ತಾರಕೆಗಳಲಿ ತಾರೆ,
ನೀರೆಯರ ನೀರೆ, ಅವಳಾ ಮೋಹಿಸುವ ರೂಪ
ದಿವ್ಯತರ ದೃಷ್ಟಿಯನು ನನ್ನ ಕಂಗಳಿಗಿತ್ತು
ಸತ್ಯ-ಸೌಂದರ್ಯದನ್ವೇಷಣೆಯಲಿರುವ ಸೊದೆ
ಯನ್ನೆದೆಗೆ ಬೀರಿ ಜನ್ಮಾಂತರದ ಗುರುವಾಗಿ
ಸೌಂದರ್ಯಸಾರದೊಳು ನೆಲೆಸಿರುವ ತತ್ತ್ವವನು
ನಾಳ ನಾಳವೊಳರುಹಿತು (ಪು. ೩೮)

ಅಪರಿಚಿತ ಹೆಣ್ಣೊಬ್ಬಳು ಹೃದಯವನ್ನು ಹೀಗೆ ಸೂರೆಗೊಳ್ಳಬೇಕಾದರೆ ಇದರ ಮರ್ಮ
ಇರಬಹುದು ಎಂದು ಲೇಖಕರು ಚಿಂತನೆ ಮಾಡತೊಡಗುವರು. ಆಕೆಯ ಆಲೋಚ
ರೇ ಅವರಿಗೆ ಸೌಂದರ್ಯದ ಪ್ರಥಮದರ್ಶನವನ್ನು ಉಂಟುಮಾಡಿತ್ತು. ಈ ವಿಚಾರ
ಮಗ್ನರಾದ ಅವರು "ನನ್ನನ್ನು ಮೋಹಿಸಿದ ಬಾಲೆಯು ಯಾವುದರ ಅರಿವಿಲ್ಲದೆ
ಂದೆ ಸಾಗಿದಳು. ನನ್ನ ನೆನಹಿನಲ್ಲಿ ಚಿರಂತನ ಸೌಂದರ್ಯದ ಪ್ರತಿಮೆಯೊಂದನ್ನು
ತಿಷ್ಠಾಪಿಸಿದಳು (ಪು. ೩೯)" ಎಂದು ವ್ಯಕ್ತಪಡಿಸುವರು.

ಇಂಥ ವ್ಯಾಮೋಹದ ಸುಳಿಯಲ್ಲಿ ಸಿಕ್ಕಿದ ತ್ರಿವಿಕ್ರಮರಿಗೆ ಆ ಹೆಣ್ಣಿನ ಕುಲಗೋ ಗಳನ್ನು ವಿಚಾರಿಸುವ ಹಂಬಲವುಂಟಾಯಿತಲ್ಲದೆ, ಮನಸ್ಸನ್ನು ಬಿಗಿ ಹಿಡಿಯುವು ಕಷ್ಟವೆನ್ನಿಸಿತ್ತು. ಮತ್ತೊಮ್ಮೆ ಆಕೆಯನ್ನು ಅತಿ ಸಮೀಪದಲ್ಲಿಯೇ ಕಾಣಲು ಅವಕ ಪ್ರಾಪ್ತವಾದಾಗ ತರುಣನ ಹೃದಯದ ಹೊಯ್ದಾಟ ಹೇಳತೀರದು. ಪರಸ್ಪರ ನೋಟದ ಇಬ್ಬರೂ ಯಾವುದೋ ಪ್ರಪಂಚದಲ್ಲಿದ್ದಂತೆ ಭಾಸವಾಯಿತು. ಸಂಯಮವೇ ಸಡಿ ವಾಗುವಂತೆ ಅವರ ಚಿತ್ತ ತತ್ತರಿಸಿತು. ಆದರೆ ವ್ಯಾಮೋಹಕ್ಕೆ ರಕ್ಷೆಯಾಗಿ ವಿವೇಕ ಹಿಂದೆ ಇದ್ದುದರಿಂದ ಲೇಖಕರು ಚಾಪಲ್ಯದಿಂದ ವಿಮುಕ್ತರಾದರು. ಈ ಮನಃಸ್ಥಿ ಯನ್ನು ತ್ರಿವಿಕ್ರಮರು ಬಹಳ ಮಾರ್ಮಿಕವಾಗಿ ನಿರೂಪಿಸಿರುತ್ತಾರೆ.

"ಅವಳನ್ನು ಮಾತಾಡಿಸಬೇಕೆಂದು ನಾಲಗೆಯು ಚಪಲವಾಯಿತು. ಆದರೆ ಬಾಯ ಗಳದಲ್ಲಿ ನಾದವೇ ಇಲ್ಲ. ಅವಳನ್ನು ಆಲಿಂಗಿಸಿ ಮುದ್ದಿಸಬೇಕೆಂದು ದೇಹವು ಬಲವ ಮಾಡಿತು. ಆದರೆ ಕೈಗಳೇ ಎತ್ತದಾದವು. ಜೀವವಿಹಂಗಮವು ಮಾತ್ರ ಸೂರ್ಯೋ ದಯದಂತೆ ತನ್ನೆದುರು ನಿಂತ ಆ ಅನುಪಮ ಸೌಂದರ್ಯವನ್ನು ಕಂಡು ತ ಜೋಗುಳವನ್ನೇ ತಾನು ಮೌನವಾಗಿ ಹಾಡಿಕೊಂಡಿತು. ಹಾಡಿ ತಣಿಯಿತ ಮರುಚಣದಲ್ಲಿ ಕೆಳಗಿಳಿಯಲೆಂದು ಕಾದಲಳು ಮುಂದುವರಿದಳು. ಅವಳಿಗೆ ಹಾ ಮಾಡಿಕೊಡಲೆಂದು ನನ್ನ ದೇಹವು ಗೋಡೆಗೆ ಒರಗಿಕೊಂಡಿತು. ಸುಂದರಿಯಿಳಿ ಮಹಿಳೆಯರ ಪಂಙ್ತಿಯನ್ನು ಕೂಡಿಕೊಂಡಳು. ನಾನು ಮಹಡಿಯನ್ನೇರಿ ಹೊ ಬಾಳಿನುದಯವನ್ನು ಹಾಡಿಕೊಂಡೆನು" (ಪು. ೪೧).

ವಿವೇಕ-ವ್ಯಾಮೋಹಗಳ ಈ ಪರಸ್ಪರ ಪ್ರಕಾಶದಲ್ಲಿ ಹಲವಾರು ವಿಚಾರಗ ಸುಳಿಯುವುವು. ರೂಪ, ಗುಣ, ಸೌಂದರ್ಯ, ಕಾಮ, ಪ್ರೇಮ ಮೊದಲಾದ ಹಲವಾ ಭಾವನೆಗಳು ಅವರ ಮನಸ್ಸನ್ನು ಕೆಣಕುವುವು. ಕಡೆಗೆ "ರೂಪದ ನರಕದಲ್ಲಿ ಸಿ ತೊಳಲಾಡುವ ಮಾನವನಿಗೆ ಕಾಮವೇ ಪ್ರೇಮವಾಗುವುದು. ಗುಣವಂತಿಕೆಯ ಗುರು ಅವನಿಗಾಗುವನಕ—ಸೌಂದರ್ಯದ ಕನಸು ಅವನಿಗೆ ಬೀಳುವನಕ—ಇಂಥವನ ಬಾ ವೆಯು ಹಳವಂಡ, ದುಃಸ್ವಪ್ನ" ಎಂಬ ಅರಿವಾಗುವುದು. ಈ ಜ್ಞಾನೋದಯದಿ ಮನುಷ್ಯ ಮೃಗವಾಗದೆ ಸಂಸ್ಕಾರಗೊಂಡ ವ್ಯಕ್ತಿಯಾಗುವನು. ತ್ರಿವಿಕ್ರಮರ ಈ ಜಿ ನಾನುಭವ ತುಂಬ ಹೃದಯ ಸ್ಪರ್ಶಿಯಾಗಿದೆ. ತಾನು ಕಂಡ ಆ ನಳಿನಾಕ್ಷಿ ಮತ್ತೊಬ ಮಡದಿಯಾದ ಮೇಲೆ, ಅವರ ಮನಸ್ಸು ಎಷ್ಟೇ ನಿರ್ಲಿಪ್ತವಾಗಿದ್ದರೂ ಆಕೆಯನ್ನು ಮ ಸಂಧಿಸಿದಾಗ ಮೊಟ್ಟಮೊದಲಿನ ಚಾಂಚಲ್ಯವೆಲ್ಲ ಮತ್ತೊಮ್ಮೆ ಮಿಂಚಿ ಮಾಯವಾ ವುದು. ಆದರೆ ಆಕೆಯಿಂದ ತಾವು ಕಲಿತ ಪಾಠ ಮಾತ್ರ ಎಂದೆಂದಿಗೂ ಮರೆಯುವುದಿ ಅದರ ಸವಿನೆನಪು ಹಾಡಾಗಿ ನಿಲ್ಲುವುದು.

—ಈಗದರ ಸೋಂಕಿಲ್ಲ
ಅನ್ಯಸತ್ಯಗಳೆನ್ನ ಮನದಿ ಬೀಡಾಗಿರಲು
ಅನ್ಯಳೊರ್ವಳು ನನ್ನ ಮನದನ್ನೆಯಾಗಿರಲು
ಇನ್ನುಳಿದ ಒಲವುಗಳಿಗೆಡೆಯು ತೆರೆತೆರೆಯಿಹುದು.
ಅದರಾ ದಿವ್ಯತಮ ದರ್ಶನವ–ಚೆಲುವಿಕೆಯು
ತೆರೆಮರೆಯನೋರೆಯಾಗಿಸುತ ತೋರಿದ ಬಿದಿಯು—
ಮರೆತಿರಲು ನನ್ನ ಬಾಳುವೆಯೆಂತು ಪಾವನವು?
ಗೆಳೆಯನೋರ್ವಳ ಬಾಳ ಗಂಧವೃಕ್ಷವನವಳ
ಜೀವಲತೆ ಸುತ್ತಿಹುದು. ಅವಳ ದೈವಿಕರೂಪ
ಕುಲವಧುವಿನಾ ಸಹಜ ಗಾಂಭೀರ್ಯವೆತ್ತಿಹುದು.
(ಅಂದವಳ ಕಣ್ಣುಗಳಲರಳಿದ್ದ ಮೋಹಕತೆ
ಯಿಂದೆನ್ನ ಸತಿಯ ಮುಗುಳ್ನಗೆಯ ಬೇಟದಿ ನಿಂತು
ನಾಟ್ಯವಾಡುತಲಿಹುದು.) ಅದರಂದಿನ ಪ್ರತಿಮೆ,
ಅಂದೆನ್ನ ಪಂಚಪ್ರಾಣಗಳ ಪಸೆದಿಹ ಕಾಣ್ಕೆ
ಯಿಂದವಳ ರೂಪದೊಳು ಕಂಗೊಳಿಸವಿದ್ದರೂ
ಪುಣ್ಯದೇಳ್ಗೆಯ ತೆರದಿ ನನ್ನ ಸ್ಮೃತಿಪಥದಲ್ಲಿ
ಇಂಬುವಡೆದಿರಲವಳ ಮರೆವೆನೆನೆ ನಂಬುವದೆ?
ವಿಶ್ವದೃಶ್ಯವನೆಲ್ಲ ಸಮನಾಗಿಸುವ ಜ್ಯೋತಿ
ಯಾತ್ಮ ಪ್ರಭೆಯನ್ನವಳ ಸರಲ ಹೃದಯಂಗಮತೆ
ಮೊದಲು ನನ್ನೆಳೆಯ ನೋಟಕೆ ತೋರಿ ಬಿಂಬಿಸಿತು.
ಕೂಡಿ ಬಾಳಿಪರೇನು–ಇಲ್ಲದಿರಲೇನು? (ಪು. ೫೩–೫೪)

ಮನುಷ್ಯನ ವ್ಯಕ್ತಿತ್ವದ ನಿರ್ಮಾಣದಲ್ಲಿ ಪ್ರೇಮದ ಪಾತ್ರ ದೊಡ್ಡದು. ವ್ಯಾಮೋಹಕ್ಕೆ ಸುಟ್ಟು ಬೂದಿಯಾಗುವುದಕ್ಕಿಂತಲೂ, ಆ ಚಂಚಲತೆಯನ್ನು ನಿವಾರಿಸಿಕೊಂಡು ಯುತವಾದ ಪ್ರೇಮವನ್ನು ಕಂಡುಕೊಳ್ಳುವ ಚೇತನವೇ ಆದರ್ಶಪ್ರಾಯವಾದುದು. ಸ್ತುತ್ಯವಾದ ಸನ್ನಿವೇಶವೊಂದನ್ನು ಚಿತ್ರಿಸಿರುವ ತ್ರಿವಿಕ್ರಮರ ಜೀವನದ ಈ ಪ್ರಸಂಗ ಆಸ್ವಾದನೆಯ ದೃಷ್ಟಿಯಿಂದಲೂ ಮನೋಹರವಾಗಿದೆ; ಅದು ತಾನು ಕೊಂಡ ದರ್ಶನದಿಂದ ಉನ್ನತವಾಗಿದೆ.

ಪ್ರತಿಯೊಬ್ಬರ ಜೀವಮಾನದಲ್ಲಿಯೂ ಮೈತ್ರಿಯ ಪಾಲೂ ಸಹ ಗಮನಾರ್ಹ ದುದು. ಬಾಲ್ಯ ಸ್ನೇಹಿತರ ಸಲಿಗೆ ಸಂತೋಷಗಳು ಒಂದು ತೆರನಾದರೆ, ಯೌವನ ದ ಮಿತ್ರರ ಮನೋಧರ್ಮ ಮತ್ತೊಂದು ತೆರನಾದುದು. ಬಾಲ್ಯದ ಆಟಪಾಟಗಳು ದು ಪರಿಮಿತಿಯಲ್ಲಿ ಸಾಗಿದರೆ, ಪ್ರಾಪ್ತವಯಸ್ಸಿನ ಆಶೆಆಕಾಂಕ್ಷೆಗಳು ಒಟ್ಟು ಜೀವನ ರೂಪಿಸುವಂತಹವು. ವಿನಾಯಕರು ಈ ಎರಡರ ಅಂತರವನ್ನೂ ಸ್ಥೂಲವಾಗಿ , ಅನಂತರ ಕಾಲೇಜಿನ ವ್ಯಾಸಂಗ ಕಾಲದಲ್ಲಿ ತಮ್ಮ ಸ್ನೇಹ ಹೇಗೆ ಹಿರಿಮೆಯನ್ನು ತೆಂಬುದನ್ನು ಬಹು ದೀರ್ಘವಾಗಿ ಪ್ರಸ್ತಾಪಿಸಿದ್ದಾರೆ. ಮಿತ್ರನ ಸಾನ್ನಿಧ್ಯದಲ್ಲಿ

ಸಮಸ್ತ ಪ್ರಪಂಚವೇ ಒಂದು ಅಪೂರ್ವವಾದ ಭಾಗ್ಯವೆನ್ನಿಸಿತ್ತು. ಆತನೊಂದಿಗೆ ಕಳೆ
ಒಂದೊಂದು ಕ್ಷಣವೂ ಅಮೂಲ್ಯವೆನ್ನಿಸಿತ್ತು. ಈ ವಿವರಗಳನ್ನು ತನ್ಮಯತೆಯಿಂ
ವರ್ಣಿಸಿದ ವಿನಾಯಕರು ಕಡೆಗೆ ಹೇಳುತ್ತಾರೆ:

ಹೊಸ ಹುಟ್ಟಗಿಂತು ಗುರುವಾದ ನನ್ನಯ ಗೆಳೆಯ
ಹೊಸ ಬಾಳ ಬೆಳಕ ನೀಡಿದನೆನ್ನ ಕಂಗಳಿಗೆ.
ಇನ್ನೆನಿತೊ ಸುಖಸಮಯಗಳನವನೊಡನೆ ಕಳೆದು
ಪ್ರೇಮದಮರತ್ವವನು ಕಣ್ಣಾರೆ ಕಂಡಿಹೆನು.
ಬಾಯಾರೆ ಉಂಡಿಹೆನು. ನನ್ನ ಜೀವನವವನ
ಜೀವನದಿ ಹಾಲು ಸಕ್ಕರೆಯಂತೆ ಬೆರೆಯುತ್ತ
ಇಂಗಡಲ ಮಾಧುರ್ಯವನು ನಿರಂತರವಾಗಿ
ತೋರುವದು. ಅವನ ಪ್ರಭೆ ನನ್ನಲ್ಲಿ ಮೂಡುವದು.
ಅವನ ಬುದ್ಧಿಗೆ ಸಿಲುಕಿದಂಥ ಮಾತುಗಳೆಲ್ಲ
ನನ್ನ ಬುದ್ಧಿಗೆ ಸಿಲುಕಿ ತಿಳಿಯುವವು. ಅವನನ್ನು
ದಿನದಿನಕೆ ಪ್ರೇರಿಸುವ ದಿವ್ಯಾಂತರ ಸ್ಫೂರ್ತಿ
ನನ್ನಲ್ಲಿ ಮೆರೆಯುವುದು. ನನ್ನ ಭಾವಗಳೆಲ್ಲ
ಅವನ ಭಾವಗಳೊಡನೆಯೊಂದಾಗಿ ಸೇರಿಹವು.
ನಮ್ಮ ವಾಂಛಿತವೊಂದೆ, ಬಗೆಯೊಂದೆ ಗುರಿಯೊಂದೆ!
ಸೌಂದರ್ಯಯೋಗದಲ್ಲಿ ನಾನು ಮುಂದಡಿಯಿಡಲು
ಪ್ರೇಮಯೋಗದ ಪಥದೊಳವನು ಮುಂಬರಿಯುವನು.
ಭಿನ್ನವಿರುವವೆ ಹೇಳು ಸೌಂದರ್ಯ–ಪ್ರೇಮಗಳು? (ಪು. ೮೦–೮೧)

ಮೈತ್ರಿಯಿಂದ ಇಂಥ ಸಂತೋಷವನ್ನು ಅನುಭವಿಸಿ, ಬದುಕನ್ನು ಹಸನುಗೊಳಿ
ಲೇಖಕರಿಗೆ ಸ್ನೇಹಿತನ ಅಗಲಿಕೆಯೆಂದರೆ ಅವರ್ಣನೀಯವಾದ ಯಾತನೆ. ಅದರ ಕ
ಯನ್ನೂ ಸಹ ಸಾಕಷ್ಟು ತೀಕ್ಷ್ಣವಾಗಿಯೇ ಹೇಳಿರುತ್ತಾರೆ. ಸ್ನೇಹಿತನು ಸಂಕಟದಲ್ಲಿ ಸಿ
ಬಿದ್ದಾಗ ಆತನ ವೇದನೆಯನ್ನು ತಮ್ಮದೆಂದೇ ಭಾವಿಸಿ ಅವನಿಗೆ ಒಳ್ಳೆಯದಾಗಲೆಂ
ದೂರದಿಂದಲೇ ಹಾರೈಸುವ 'ಸಖ್ಯಗೀತ'ವಂತೂ ಈ ವಿಭಾಗದ ಶ್ರೇಷ್ಠ ರಚನೆಯಾಗಿ
ತ್ರಿವಿಕ್ರಮರ ಈ ಸ್ನೇಹಸೂಕ್ತ ಓದಿ ಆನಂದಿಸುವಂತಹುದು.

ಗೆಳೆತನವೇ! ನೀನು ಬರಿ ಜಳ್ಳಿರಲು— ಒಕ್ಕುವೆನು! ಗಾಳಿ ಸೆಳೆದತ್ತ ಸಾಗು!
ತಿರುಳಿರಲು ನನ್ನ ತರಳನು ಕೊರಗುತಿಹನವನ ಬಾಳ ಬಲವಾಗು ಹೋಗು!
ನೀನು ಬರಿ ಕನಸಿರಲು–ಇದೊ! ನಿನ್ನ ಬಿಸುಟೆವೆನು: ಹೋಗು ಗಂಧರ್ವ ಸಭೆಗೆ.
ಸಖನ ಕಾಯಲು ಮಿಾಸಲಾಗಿಡುವೆ ಪ್ರಾಣವನದಿಂದೆ ಬೇರೊಂದು ಪ್ರಭೆಗೆ!
ಹನ್ನೆರಡು ವರುಷದಾ ಸಖ್ಯವಿದು ಬರುಡೆನಲು ಅಹುದೆನ್ನ ಕಣ್ಣ ಕುರುಡು!
ಕಾಮಧೇನುವೆ ಆಗಿ ಹಾಲುಣಿಸು ಗೆಳೆಯನಿಗೆ; ಇಲ್ಲದಿರಲೆದ್ದು ಹೊರಡು!
'ಕೆಳೆ'ಯೆಂಬ ಶಬ್ದವಿದು ಮೂಲಮಂತ್ರದ ಮಹತಿಯೆಂದು ಕುಣಿದಾಡಲಿಲ್ಲೆ!
ಮಂತ್ರವಿರೆ—ಮಂಗಳವು ಗೆಳೆಯನಂಗಳಕಿಳಿದು ನೆರೆಯಾಗಿ ಬರಲಿ ಲಲ್ಲೆ! (ಪು. ೮೬–

ರೀತಿ ಮೊದಲಾಗುವ ಈ ಕವನ ಸಖ್ಯಯೋಗಕ್ಕೆ ವ್ಯಾಖ್ಯಾನವನ್ನು ಬರೆಯುವಂತೆ ದು ಮುಂದೆ ಸಾಗಿ, ಮಿತ್ರರಿಬ್ಬರ ಹೃದಯಾನುರಾಗವನ್ನೇ ತೆರೆದು ತೋರಿ, ಕಡೆಗೆ,

> ನನ್ನ ಕವನದೊಳೊಂದು ಬಿಂದುವಷ್ಟಾದರೂ ಬಂದಿರಲು ದಿವ್ಯಸ್ಫೂರ್ತಿ:
> ಆಗಿ ನಿಲ್ಲಲಿ ಅದುವೆ ನನ್ನ ಗೆಳೆಯನ ಬಗೆಯ ಶಾಂತಿಕಾಂತಿಗಳ ಮೂರ್ತಿ! (ಪು. ೮೯)

ದು ಮುಖ್ಯವಾಗುತ್ತದೆ. ಗೆಳೆತನದ ಈ ಮಹತ್ವವನ್ನು ಲೇಖಕರು ಬಹಳ ಣಾವಶಾಲಿಯಾಗಿಯೇ ಚಿತ್ರಿಸಿರುತ್ತಾರೆ. ಅದು ಜೀವನದ ಉದ್ದಕ್ಕೂ ಹೇಗೆ ನೆರ ಗಬಲ್ಲುದೆಂಬುದನ್ನು ಬಹಳ ವಿಶದವಾಗಿಯೇ ಸ್ಪಷ್ಟಪಡಿಸಿರುತ್ತಾರೆ.

“ಜೀವನದ ಪರಿಪೂರ್ಣ ದೃಷ್ಟಿಯು ಕೊನರುತ್ತ ಹೋದಂತೆ ಗೆಳೆತನದ ಪ್ರಭೆಯು ಅವಕೌಶಲ್ಯವಾದುದು ಬಾಳುವೆಯೆಂದರೆ ಒಂದು ಪ್ರಯೋಗ. ಗೆಳೆಯರೆಂದರೆ ಸಪ್ರ ಯೋಗಿಕವಾಗಿ ಜೀವನದಲ್ಲಿ ತತ್ವವನ್ನು ಕಂಡುಹಿಡಿಯಲು ಯತ್ನಿಸುವ ಸಾಧಕರು. ಅಂಥವರ ಭೆಟ್ಟಿಯಲ್ಲಿ ಒಬ್ಬರ ಬೆಳಕು ಇನ್ನೊಬ್ಬರ ಕತ್ತಲೆಯನ್ನು ಚದರಿಸುವುದು. ಗೆಳೆಯನ ದೀಪ ನಂದಿದಾಗ ನನ್ನ ಜ್ಯೋತಿಯಿಂದ ನಾನದನ್ನು ಮತ್ತೆ ಹೊತ್ತಿಸ ಬಹುದು. ನಾನು ದಾರಿದೊರೆಯದೆ ಬಳಲುವಾಗ ಗೆಳೆಯನು ನನಗೆ ದಾರಿ ತೋರಿಸ ಬಹುದು. ಪ್ರಪಂಚದ ಭಯಾನಕ ಅರಣ್ಯದಲ್ಲಿ ನಮ್ಮ ಸತ್ವದ ಸ್ಯಮಂತಕವನ್ನು ಕಾಯುವ ಕೈದೀವಟಿಗೆಯೇ ಗೆಳೆತನವಹುದು.

“ಗೆಳೆತನವು ಇನ್ನೊಂದು ಅಪೂರ್ವ ಯಶಸ್ಸನ್ನು ಸಂಪಾದಿಸುತ್ತದೆ. ನನಗೆ ಒಬ್ಬ ಜೀವದ ಗೆಳೆಯನಿದ್ದರೆ ಸಾಕು — ಹೋದಲ್ಲೆಲ್ಲ ಆತ್ಮಿಕ ಸ್ನೇಹಿತರನ್ನು ಕಂಡುಹಿಡಿ ಯುವ ಕಣ್ಣನ್ನು ಆತನು ಕೊಡುತ್ತಾನೆ! ನೇಹದ ಬಾಳುವೆಯ ಸವಿಯುನ್ನುಂಡವನು ಸಹರಾ ಅರಣ್ಯದ ಮಧ್ಯದಲ್ಲಿ ಬಿಟ್ಟು ಬಂದರೂ ಸಹ ತನಗೆ ಬೇಕಾದ ನೇಹಿಗರನ್ನು ದೊರಕಿಸುತ್ತಾನೆ. ತನಗೆ ಗೊತ್ತಿಲ್ಲದ ಜನತೆಯೊಡನೆ ವೇಳೆಗಳೆಯಬೇಕಾಗಿ ಬಂದರೂ ಆತನ ಅಂತಃಕರಣದಲ್ಲಿ ಬೆರೆತುಕೊಂಡು ತನ್ನವರನ್ನು ಆ ಜನತೆಯೊಳಗಿಂದ ಆಯ್ದು ಕೊಳ್ಳುತ್ತಾನೆ. ಒಮ್ಮೆ ಗೆಳೆತನವನ್ನು ಅನುಭವಿಸಿದ ಜೀವಕ್ಕೆ ದೇಶ-ಕಾಲ-ರೂಢಿ ಗಳು ಅಡ್ಡಿ ಬರವು. ಪ್ರೇಮಕ್ಕೆ ಕುಲವೇ ಇಲ್ಲ. ಮುಗಿಲ ಮಲ್ಲಿಗೆಯಂತೆ ಅದು ಎಲ್ಲಿ ಹೋಗಿ ನೋಡಿದರೂ ಒಂದೇ ರೀತಿಯಾಗಿ ಅರಳಿರುತ್ತದೆ. ವಿಶ್ವದೊಡನೆ ಸಮರಸ ವಾಗುವ ಸಾಧನೆಯನ್ನು ಸಖ್ಯಯೋಗದಿಂದ ನಾವು ಸುಲಭವಾಗಿ ದೊರಕಿಸ ಬಹುದು” (ಪು. ೯೦-೯೧).

ಕ್ರಮದ ಈ ಪೃಥಕ್ಕರಣೆ ಅತ್ಯಂತ ಪ್ರಶಸ್ತವಾದುದು. ಗೆಳೆತನದ ಹಿರಿತನವನ್ನೆಲ್ಲ ಈ — ಪದ್ಯಗಳಲ್ಲಿ ಸೂತ್ರಪ್ರಾಯವಾಗಿ ಹೇಳಿರುತ್ತಾರೆ. ಜೀವನದ ಹಲವಾರು ವಿಶ್ವಾಸ

ಗಳಲ್ಲಿ ಸ್ನೇಹದ ಆಳ-ವ್ಯಾಪ್ತಿಯೇನೆಂಬುದನ್ನು ಸ್ವಾನುಭವಪೂರ್ವಕವಾಗಿ ಸ ಹೇಳಿರುತ್ತಾರೆ.

ಮಾನವನ ಬದುಕು ಪೂರ್ಣವಾಗಲು ಅವರಿವರ ಸಖ್ಯ ಹೇಗೆ ಅಗತ್ಯವೋ ಹಾಗೆ ಪ್ರಕೃತಿಯ ಲಾಲನೆ ಪಾಲನೆಗಳೂ ಅಗತ್ಯ. ಪ್ರಕೃತಿಯ ಪ್ರೇರಣೆ-ಪೋಷಣೆಗ ಭಾವುಕನನ್ನು ಎಚ್ಚರಿಸಿ, ಆಶ್ಚರ್ಯಗೊಳಿಸಿ, ಅದ್ವಿತೀಯವಾದ ಆನಂದವನ್ನು ಉ ಬಲ್ಲುವು. ಇಂಥ ಒಂದು ಸುಂದರ ಸನ್ನಿವೇಶವನ್ನು ತ್ರಿವಿಕ್ರಮರು ತಮ್ಮ ಜೀವನ ಅನುಭವಿಸಿದ್ದಾರೆ. ಅದರ ಸವಿಯನ್ನು ಇತರರಿಗೂ ತಿಳಿಯಹೇಳಿದ್ದಾರೆ.

ಬಯಲು ಭ್ರಾಂತಿಯ ಬಿಟ್ಟು ಮುಂದೆ ಬಾ ಓ ! ಮನವೆ !
ನಿನ್ನ ಗುರಿ ಸ್ವಾನಂದ. ಆಗು ನೀ ಚಿದ್ಘನವೆ !
ನಿನ್ನ ನನ್ನಿಯಿದೆಲ್ಲ. ನಿನ್ನ ರಾಜ್ಯವಿದು.
ನಿನ್ನ ಕರೆಯಲು ಬಂದ ಪ್ರೇಮಮೂರ್ತಿಯಿದು.
ನಿನ್ನ ನಾಡದು ಮುಗಿಲು. ನೀರಮಿಸಬಹುದಲ್ಲಿ.
ಅರರೆ ! ನೋಡಿಕೊ ! ಮುಗಿಲೆ ಕೆಳಗಿಳಿದು ಬಂತಿಲ್ಲಿ !
ಜಗ ಹಾರಿ ಖಗವಾಯ್ತು. ಮುಗಿಲಿಳಿದು ಮಿಗಿಲಾಯ್ತು.
ಪೃಥಿವಿ ಹಿರಿ ಚೆಲುವಿಂಗೆ ಬಾಗಿಲಾಯ್ತು.
ಇಲ್ಲಿ ನೆಲವಾಸರಕೆ ಬೆಳೆದ ಮರ ! ಭೂರುಹವೆ !
ಮನದ ಹಸಿವೆಯನ್ನೆಲ್ಲ ನೀನಿಂದು ಕಳೆದಿರುವೆ.
ನಿನ್ನ ನುಡಿ ಕೇಳಿದೊಡೆ ಸಂಶಯವು ದೂರಾಯ್ತು.
ನೀನಿತ್ತ ನಲುಮೆಗೀ ಮನಹಿಗ್ಗಿ ಹಿರಿದಾಯ್ತು.
ನಿನ್ನೊಡೆಯಗೆನ್ನಾರತಿಯ ಬೆಳಗು, ಭೂರುಹವೆ !
ಮನದ ವನದಲಿ ಸುಳಿವ ಪರವ ಇಹವೆ ! (ಪು. ೬೨–೬

ಇಂಥ ಅಮೃತಕ್ಷಣ ಜೀವನದಲ್ಲಿ ಒಮ್ಮೊಮ್ಮೆ ಲಭಿಸಬಹುದೇ ವಿನಾ ಅದು ಬಯ ದಾಗಲೆಲ್ಲ ಕೈಗೂಡುವುದಿಲ್ಲ. ಪ್ರಕೃತಿಯ ಈ ಕೃಪೆ ದೈವಾನುಗ್ರಹವೇ ಸರಿ.

ಜೀವನದ ಈ ಹಲಕೆಲವು ನಲವುಗಳನ್ನು ಸವಿಮ ದಿನದಿನಕ್ಕೂ ವಿಕಾಸಗೊ ವಿನಾಯಕರ ಆಶೆಆಕಾಂಕ್ಷೆಗಳು ಆತ್ಮಶೋಧನೆಯಿಂದ ಆಧ್ಯಾತ್ಮಿಕದತ್ತ ಸಾಗಲೆ ತ್ತವೆ. ಹೃತ್ಕಮಲದ ಸಂಕೋಚ ವಿಕಾಸಗಳನ್ನು ಅರಿತ ಮನಸ್ಸಿಗೆ ಆ ವ್ಯಾಪಾ ರಹಸ್ಯವೇನು ಎಂದು ಜಿಜ್ಞಾಸೆ ಮೊಳೆಯುವುದು.

“ನನ್ನಾತ್ಮವೊಂದು ಕಮಲದಂತೆ. ಮತ್ತರಳುವುದು ಮತ್ತೆ ಮುರುಟುವ ನನ್ನಾತ್ಮ ನೀರಲರಂತೆ! ಅದು ಮುರುಟದಾಗ ಬಾಡಿದೆಯೆಂದು ದೇವನ ಕಾಡಿದೆ; ಕಂದಿಹೋಯಿತೆಂದು ಮನದಿ ನೊಂದೆ. ಆದರೆ ನೀರಲರಂತೆ ಮತ್ತ ಮತ್ತೆ ಮುರುಟಿ ಸದಾ ಸರ್ವದಾ ಸುಖಿಸುತ್ತಿಹುದು ನನ್ನಾತ್ಮ” (ಪು. ೬೩)

ಲೇಖಕರ ಈ ಆತ್ಮಪ್ರಜ್ಞೆ, ಆತ್ಮೋನ್ನತಿಯತ್ತ ಸಾಗಲೆಳಸಿ ಸುತ್ತಮುತ್ತಲಿನ ಅಡ್ಡಿ ಆತಂಕಗಳಿಂದ ಬಿಡುಗಡೆಗಾಗಿ ಹಂಬಲಿಸುವುದು. ಶ್ರೇಯಸ್ಸಾಧನೆಗಾಗಿ ಯಾವ ಮಾರ್ಗ ಅನುಸರಿಸಬೇಕೆಂಬ ತೊಯ್ದಾಟ ಹೃದಯದಲ್ಲಿದ್ದು ಬಡಿಯುವುದು. ಸಂಸಾರ ಬಾಗ, ಪರಿವಾರ ವಿಯೋಜನೆಗಳಿಂದ ಇದು ಸಾಧ್ಯವಾದೀತೆ ಎಂಬ ಪ್ರಶ್ನೆ ಕಾಡುವುದು. ಅಂತವಿಂದ ಈ ಸಮಸ್ಯೆ ಪರಿಹಾರವಾಗಬಲ್ಲುದೆ ಎಂದು ಪ್ರಕೃತಿಯ ಮಡಿಲಲ್ಲಿ ನಿರತರಾದಾಗ ಅವರಿಗೆ ಆದ ಅರಿವು ಪ್ರಶಂಸನೀಯವಾದದ್ದು. ಈ ಅನುಭವವೇ ಒಂದು ಸ್ವಾರಸ್ಯವತ್ತಾದ ಕವನವಾಗಿ ಕುಡಿಯೊಡೆದಿದೆ.

ಹೂವರಳುವುದು ತಾಳು. ನೀ ದಾರಿ ಕಾಯುತಿರು.
ಜೀವ ಗುರಿಯನು ಸಾಧಿಸುವುದು ದಿಟವು.
ಒಂದು ದಿನ ಚಿತ್ತಾಕಾಶನು ಬೆಳಕುಮಳೆಗರೆಯೆ
ಬೆಳಗಿರುವದಂದೆಲ್ಲ ಮೆಯ್ಯು ಮನೆ ಮಟವು.
ಅಂದೊಲಿಯುತೊಂದಾಗಿ ನಿನ್ನೊಡನೆ ಬಾಳುವಳು
ಪ್ರಕೃತಿ ಸಮರಸವಾಗಿ ಅರಿತು–ಬೆರೆತು;
ಅಂದು ಪಡಿನುಡಿಯುವರು ಸೂರ್ಯ ಚಂದ್ರರು ಪೃಥಿವಿ :—
ನಮಗಿಲ್ಲ ತಾಯ್ತಂದೆ ನಿನ್ನ ಹೊರತು!

ಈ ಸಿದ್ಧಾಂತವೇ ಅವರ ಬದುಕಿನ ಬೆಳಕಾಯಿತು; ಜೀವನಕ್ಕೆ ನೂತನ ದರ್ಶನ ಯಿತು. 'ನನ್ನ ಕರ್ಮದ ಮಹತ್ವವು ನನ್ನ ಕೃತಿಗಳ ಕೀರ್ತಿ—ಅಕೀರ್ತಿಗಳಲ್ಲಿಲ್ಲ; ದೊಡ್ಡತನ—ಹಿರಿಮೆಗಳಲ್ಲಿಲ್ಲ; ಸ್ವಯಂಪ್ರಜ್ಞೆಯ ಪ್ರಾದುರ್ಭಾವದಲ್ಲಿದೆ' ಎಂಬ ನಿಷ್ಠೆಯಿಂದ ಸೌಂದರ್ಯವನ್ನು ಆರಾಧಿಸಿ, ಆಕಾಶಗಂಗೆಯನ್ನು ಆಹ್ವಾನಿಸುವರು.

ಪಾವನ ಗಂಗೆ
ಅಮೃತ ತರಂಗೆ
ವ್ಯೋಮಾಂತರಂಗೆ
    ನೆಲಕಿಳಿಯೆ!
ನೀರಡಸಿದಂಗೆ
ನೀರಾಸೆ ಹಿಂಗೆ
ಧವಲೋತ್ತುಂಗೆ!
    ಹೊಳೆ ಹೊಳೆಯೆ! (ಪು. ೧೮೮)

ಈ ಗೀತ ಪೂರ್ತಿಯಾಗಿ ವ್ಯೋಮಗಂಗೆಯನ್ನು ಕುರಿತುದಾದರೂ ಅದರಲ್ಲಿ ಅಡಕ ವಾಗಿರುವ ತತ್ವವನ್ನು ಗ್ರಹಿಸಿದರೆ, ಲೇಖಕರ ಜೀವನ ಹೇಗೆ ಹಿರಿಯ ಗುರಿಯತ್ತ ಹಂಬಲಿಸಿದೆಯೆನ್ನುವುದನ್ನು ಕಾಣಬಹುದು. ಆ ಗಂಗಾಸ್ನಾನದಲ್ಲಿ ಮಿಂದು ಮಡಿ

ಯಾದ ಮನಸ್ಸಿಗೆ ಬೇರೇನೂ ಬೇಕಾಗುವುದಿಲ್ಲ. ಆಕೆಯ ಕೃಪೆಯಿಂದ ಇಳೆಯು ಬ
ಬೆಳಗಲೆಂದು ಕೋರುವರು.

ನೀನಿಂದು ಇಳೆಗೆ
ಇಳಿದೆಮ್ಮ ಬಳಿಗೆ
ಬಂದಂದು ಬೆಳಗೇ
ಧಾರಿಣಿಗೆ!
ಅಮರ್ದುರ್ವಿಣ್ಣೋಪ!
ಜೀವ ಪ್ರದೀಪ—
ವಿದು ಚಿತ್ತಾಪ—
ಹಾರಿಣಿಗೆ!

ನಿನ ಮೈಯ ತೆರೆಯ
ಜವಸಿಕೆಯ ಮರೆಯ
ಹಿಂದಣೆಂದೆರೆಯ
ನೋಡುವನು
ಸುಖದುಃಖವರಿತು
ತತ್ವದಿ ಬೆರೆತು
ನಿತ್ಯ ಮೈಮರೆತು
ಹಾಡುವನು (ಪು. ೧೧೮)

ಇಂತು ಲೋಕಹಿತದಲ್ಲಿ ಈ ಗೀತೆ ಮುಕ್ತಾಯವಾಗುವುದು.

ಆತ್ಮಚರಿತ್ರೆಯಲ್ಲಿ ಆತ್ಮವಿಕಾಸವನ್ನೇ ದೃಷ್ಟಿಯಲ್ಲಿಟ್ಟುಕೊಂಡು ರಚಿಸಿರುವ ಗದ್ಯ ಪದ್ಯ ಮಿಶ್ರಿತ ಕೃತಿ ಕನ್ನಡಕ್ಕೆ ವಿನೂತನವಾದದ್ದು. ಆತ್ಮಶೋಧನೆ ಆಲೋಚನೆಯ ಅಂತರಂಗವೆಂದು ಬಲ್ಲವರಿಗೆ ತ್ರಿವಿಕ್ರಮರ ಈ ವಿಶಿಷ್ಟ ಪ್ರಯೋ ಹಿರಿಮೆ ಸ್ವವಿದಿತವಾಗುವುದರಲ್ಲಿ ಸಂದೇಹವಿಲ್ಲ.

೨

ವಿನಾಯಕರು ಹಲವಾರು ಬಾರಿ ವಿದೇಶವನ್ನು ಸುತ್ತಾಡಿ ಬಂದವರು. ಅಲ್ಲಿನ ಅನುಭವಗಳನ್ನು ಈಗಾಗಲೇ 'ಸಮುದ್ರದಾಚೆಯಿಂದ' ಮತ್ತು 'ಸಮುದ್ರಗೀತ ಎಂಬ ರಚನೆಗಳಲ್ಲಿ ಓದಿ ಮೆಚ್ಚಿಕೊಂಡವರಿಗೆ ಇತ್ತೀಚಿಗೆ ಪ್ರಕಟವಾಗಿರುವ 'ಇ ನಾಳೆ' ಎಂಬ ಈ ಪದ್ಯಗದ್ಯ ಮಿಶ್ರಿತ ನೂತನ ಚಂಪೂ ಕೃತಿ, ಅದೇ ಆನಂದ ನೀಡುತ್ತದೆ. ಲೇಖಕರು ಪಾಶ್ಚಾತ್ಯ ದೇಶದ ಸಂಸ್ಕೃತಿಯ ಗುಣದೋಷಗಳನ್ನು ಬಿಚ್ಚು ಮನಸ್ಸಿನಿಂದ ಇಲ್ಲಿ ಪೃಥಕ್ಕರಿಸಿ ತೋರಿಸಿರುತ್ತಾರೆ. ವಿದೇಶೀಯರ ಆದರ್ಶ ಚಾಚೂ ತಪ್ಪದೆ ಅನುಕರಿಸತೊಡಗುವ ಭಾರತೀಯರಿಗೆ ಎಚ್ಚರಿಕೆಯನ್ನು ನೀ

ವಾಗಿ 'ಇಂದಿಲ್ಲ ನಾಳೆ' ಎಂಬ ಅರ್ಥವತ್ತಾದ ಹೆಸರನ್ನು ಈ ಕೃತಿಗೆ ಇಟ್ಟಿರುತ್ತಾರೆ. ಸ್ತಕವನ್ನು ಓದಲು ಪ್ರಾರಂಭಿಸಿದಂತೆಲ್ಲ ವಿನಾಯಕರೊಂದಿಗೆ ನಮಗೂ ಪ್ರಪಂಚ ರ್ಯಟನ ಮೊದಲಾಗುತ್ತದೆ. ವಿದೇಶ ಪ್ರವಾಸವೆಂದರೆ ಸಾಮಾನ್ಯವೆ? ಸಡಗರ ್ರಮವಿಲ್ಲದಿದ್ದರೆ ಅದು ಸೊಗಸುವುದಿಲ್ಲ. ಆದ್ದರಿಂದಲೇ ಲೇಖಕರ ಈ ಪ್ರವಾಸ ಆತುರ ಕಾತರಗಳಲ್ಲಿಯೇ ಮೊದಲಾಗುತ್ತದೆ. ಅಡ್ಡಿ ಅಡಚಣೆಗಳು ತಲೆಯಿಕ್ಕಿ ಅವರ ಸಂಕಲ್ಪ ಈಡೇರುವ ರೀತಿ ಬಹಳ ಆಕರ್ಷಕವಾಗಿದೆ. ಲೆಬನಾನ್ ಕಂಡ ಲೇ ಅವರಿಗೆ ದಾರ್ಶನಿಕ ಕವಿಯಾದ ಖಲೀಲ್‌ಗಿಬ್ರಾನನ ನೆನಪಾಗುತ್ತದೆ. ಅಲ್ಲಿನ ತಃಕಾಲದ ಸವಿಯೊಂದಿಗೆ ಆತನ ವಾಣಿಯ ಅನುರಣನವೂ ಕೇಳಿಬರುತ್ತದೆ. ನಾಃಸಿನ ಉಷಃಕಾಲದಲ್ಲಿ ಹೊಳೆದ ಬೆಳ್ಳಿಯ ಕಂಡು ಬಲ್ಲೆಯಾ? ಅದು ಕಹ ್‌ಜೀಬ್ರಾನನ ವಾಣಿ! ಕಲ್ಲು ಬೆಟ್ಟಗಳ ವಜ್ರಗರ್ಭದೊಳಗಿಂದ ಹೊಮ್ಮಿದಮೃತದ ರ್ಝರವದು" ಎಂದು ಕೃತಜ್ಞತೆಯನ್ನು ಸೂಚಿಸಿ ತಣಿಯುವರು. ರೋಮ್ ನಗರಕ್ಕೆ ಪಿದ ಮೇಲೆ ಅಲ್ಲಿನ ಇತಿಹಾಸವೆಲ್ಲ ಅವರ ಕಣ್ಣಿನ ಮುಂದೆ ಸುಳಿಯುತ್ತದೆ. ಆ ಟನೆಗಳನ್ನೆಲ್ಲ ಹೃದ್ಯವಾದ ಗದ್ಯದಲ್ಲಿ ಹೇಳಿ, ಅದರ ಭಗ್ನಾವಶೇಷಗಳನ್ನು ಕುರಿತು ವಾದ ಸ್ಫೂರ್ತಿಯಿಂದ ಕವನ ರಚಿಸಿರುತ್ತಾರೆ. ರೋಮ್ ದೇಶದ ಆ ಹಾಳು ಗಳನ್ನು ಕಂಡರೆ ಯಾರ ಹೃದಯ ತಾನೆ ಕರಗುವುದಿಲ್ಲ?

ಹಾಳು ಬೀಳಾಗುತ್ತ ರಾಜಧಾನಿಯ ನಡುವೆ
ತಲೆಯೆತ್ತಿ ನಿಂತಿಹವು ಕಲ್ಲುಗಂಬ,
ಕೋಟೆಯಾವಾರಗಳು, ಹಿರಿಯ ದ್ವಾರಗಳು:
ನೋಡಿದೆನು ಕಣ್ತುಂಬ.
ಅಳಿಗಾಲಕಿಲ್ಲವೇನಂತಪಾರಗಳು?
ಮೆರೆದ ಸಾಮ್ರಾಜ್ಯಕಿಂದಿಂಥ ಪಾಡೆ? (ಪು. ೧೧)

ಉದ್ಗಾರದೊಂದಿಗೆ ಮೊದಲಾಗುವ ಈ ಕವಿತೆ, ರೋಮ್ ದೇಶದ ಸಮಸ್ತ ವವನ್ನೂ ವಿನಾಶವನ್ನೂ ಜೊತೆ ಜೊತೆಯಾಗಿ ನಿರೂಪಿಸುತ್ತ ಸಾಗುತ್ತದೆ. "ರೋಮು ತ್ತಿಂತು ಕಾಲ ಗೆಯ್ದಿರುವ ಹೋಮು" ಎಂಬ ಒಂದು ಪಂಕ್ತಿಯಲ್ಲಿಯೇ ಅದರ ತಿ ಅವನತಿಗಳ ದರ್ಶನವಾಗುತ್ತದೆ. 'ಮೈಕಲ್ ಏಂಜಲೋ'ವಿನ ಸೃಷ್ಟಿಗೆ ಮಾರು ಗಿ ಅಲ್ಲಿ ಕಂಡುಬಂದ ಒಂದು ದೃಶ್ಯವನ್ನು ವರ್ಣಿಸುತ್ತ "ಸತ್ತ ಮಗುವನಿದೊ ಕೊಂಡಿಹಳು ಇಟಲಿಯು ತಿರುಕೊಳವಿನಾಚಿ" ಎಂದು ಹೇಳಿರುವ ಕವಿಯ ಮಾತು ವ್ನೊಲಿಸುತ್ತದೆ. ಆ ದೂರದ ಪಾಶ್ಚಾತ್ಯ ಸನ್ನಿವೇಶದಲ್ಲಿ ಈ ತೀರದ ಪೌರಸ್ತ್ಯ ಘಟನೆ ವನ್ನು ನೆನೆದಿರುವುದು ಇದಕ್ಕೆ ಅಪೂರ್ವವಾದ ಮೆರುಗನ್ನು ತಂದುಕೊಡುತ್ತದೆ. ಯಲ್ಲಿ

ಯುಗಯುಗದಿತಿಹಾಸವೆಲ್ಲ
ಪದರು ತಾವೆ ತೆರೆದಿವೆ.
ರೋಮದೇಳುಬೀಳುಗಳೇ
ಕಲ್ಲಿನಲ್ಲಿ ಕೊರೆದಿವೆ.
ಅವರ ಪುಣ್ಯ ಪ್ರತಿಭೆಗಳಿವು—
ಮುಗಿಲ ತುದಿಯ ಮುಟ್ಟಿವೆ;
ಪಾಪ, ಭವ್ಯವಾದರೂನು
ನರಕದಡಿಯಲೊಟ್ಟಿವೆ. (ಪು. ೧೭)

ಎಂದು ಹೇಳಿರುವ ಕವಿಯ ನುಡಿಗಳಲ್ಲಿ ರೋಮಿನ ಕಥೆಗೆ ಒಪ್ಪತಕ್ಕ ‘ಚ
ಶ್ಲೋಕ’ವಿದೆ.

ಪವಮಾನದ ವೇಗವನ್ನೂ ಮೀರಿಸುವಂತೆ ಹಾರಾಡುವ ವಿಮಾನದ ಜೀವ
ಒಂದು ಅದ್ಭುತ. ಮಾನವನ ಈ ನಾಗಾಲೋಟವನ್ನು ನೆನೆದಾಗ ಕವಿಗೆ ವೈಪುಳ
ವಾಗುತ್ತದೆ. ಗ್ರಹವರ್ಗಗಳ ಪರ್ಯಟನೆಯ ಚಿತ್ರ ಕಣ್ಣೆದುರು ಸುಳಿಯುತ್ತ
ಪವಾಡ ಸದೃಶವಾದ ಈ ಉಡ್ಡಯಣವನ್ನು ಇಂತು ಕೊಂಡಾಡುತ್ತಾರೆ.

ರಾಷ್ಟ್ರವೊಂದೊಂದೀಗ ಪ್ರಾಂತವಾಗಿ
ಭೂಗೋಲವಹುದು ಗಡಿಯಿರದ ನಾಡು
ದಿಲ್ಲಿಯಲ್ಲಿ ಮಲಗಿದ್ದೆ–ರೋಮದೊಳಗೆಚ್ಚತ್ತೆ.
ನಾಳೆ ನ್ಯೂಯಾರ್ಕಿನಲ್ಲಿ ನ್ಯಾರಿ ನೋಡು! (ಪು. ೧೮)

ಆದರೆ ಈ ಶೀಘ್ರಜೀವನದ ಗುಣದೋಷಗಳನ್ನು ಅವರು ಗಮನಿಸದೆ ಇಲ್ಲ. ಭೂ
ದಕ್ಷಿಣೆಯ ಸ್ಪರ್ಧೆಗಳಾದ ಕಾರ್ತಿಕೇಯ ಮತ್ತು ಗಣಪತಿಗಳ ಕಥೆಯನ್ನು ಉದಾಹ

ಕಾರ್ತಿಕೇಯನಪೂರ್ಣ ದಾಹದೋಷವು ಬೇಡ.
ಬೇಡ ಗಣಪತಿಯ ರಂಜನರಹಿತ ತೃಪ್ತಿ.
ನಾರದನ ಶಕ್ತಿ ದೃಷ್ಟಿಗಳೆನಗೆ ಕೊಡು ದೇವ?
ಬರಲೆನ್ನ ಬಾಳ್ಗೆ ಆ ಆಳ, ವ್ಯಾಪ್ತಿ (ಪು. ೧೯)

ಪಾಶ್ಚಾತ್ಯರ ಪ್ರಗತಿಯನ್ನು ಈ ವಿವೇಚನಾದೃಷ್ಟಿಯಿಂದ ಪರಿಶೀಲಿಸುವ ಲೇಖ
ಮನೋಧರ್ಮ ಪ್ರಶಂಸನೀಯವಾದುದು.

ವಾಷಿಂಗಟನ್ನಿನ ವೈಭವ ಮತ್ತು ವಿಜೃಂಭಣೆಗಳನ್ನು ಕಂಡ ಕವಿಗೆ ಅನೇಕ ವಿಚ
ತರಂಗಗಳೇಳುವುದು ಸ್ವಾಭಾವಿಕ. ಆ ಅತುಲ ಸಂಪತ್ತನ್ನು ನವನವೀನವಾಗಿ
ವರ್ಣಿಸಿರುತ್ತಾರೆ.

ಇದೊಂದು ಟೆನಿಸ್ ಕೋರ್ಟು.
ಒಂದೊಂದು ರಸ್ತೆಯೊಂದೊಂದು ಗೆರೆ.

ಸಮವಾಗಿ ನೀಟಾಗಿ, ಸಜ್ಜುಗೊಳಿಸಿದ ಟೆನಿಸ್ ಕೋರ್ಟಿನಂತೆ
ದೇಶಕ್ಕೆ ದೇಶವೆ ಸುವ್ಯವಸ್ಥಿತವಾಗಿದೆಯಿಲ್ಲಿ!
ಪ್ರಕೃತಿಗಿಷ್ಟ ಪೂರ್ಣಪ್ರಭುವಾಗಿದ್ದಾನೆ ಮಾನವ.
ತನ್ನಕ್ಕರೆಯ ಮಕ್ಕಳೊಡನೆ
ಟೆನಿಸ್ ಆಡುವಳಿಲ್ಲಿ ಲಕ್ಷ್ಮೀದೇವಿ!

* * *

ಬಡತನದ ಭೂತವನ್ನೊಯ್ದು
ಅಟ್ಲಾಂಟಿಕ್ ಸಾಗರದಲ್ಲಿ ಮುಳುಗಿಸಿದ್ದಾರೆ.
ಗೃಹಕೃತ್ಯಗಳಿಗೆಲ್ಲ ಯಂತ್ರ ಭೃತ್ಯರನ್ನು ಹೂಡಿ
ಗೃಹಿಣಿ ದೇಶಕ್ಕಾಗಿ ದುಡಿಯುತ್ತಿದ್ದಾಳೆ.

* * *

ರತಿಕಾಮರಂತೆ ಕ್ರೀಡಿಸಿಯೂ
ಯಾಜ್ಞವಲ್ಕ್ಯ–ಕಾತ್ಯಾಯನಿಯರಂತೆ
ಸತ್ಯಾನ್ವೇಷಿಗಳು.
ಪ್ರಯೋಗ ಮಂದಿರಗಳಲ್ಲಿ
ಇತಿಹಾಸದ ಕರಡು ಮನೆಗಳಲ್ಲಿ
ವಿದ್ಯಾಗೋಷ್ಠಿಗಳಲ್ಲಿ, ವಿದ್ಯಾನಿಲಯಗಳಲ್ಲಿ.
ಮನೆ ಮನೆಯಲ್ಲಿ ನಡೆದಿದೆ ಜ್ಞಾನಸತ್ರ.
ಬೇರೆ ವಿಶ್ವಗಳ ಬ್ರಹ್ಮರಾಗಬಯಸಿ
ಉಪಾಸನೆಯಲ್ಲಿದಾರೆ ಪ್ರಕೃತಿಯ ಔರಸವರಿರು! (ಪು. ೨೧–೨೩)

ಬದಾಗಿ ಇಲ್ಲಿನ ಜನರ ಶಕ್ತಿಸಾಮರ್ಥ್ಯಗಳನ್ನು ಬಾಯಿತುಂಬ ಕೊಂಡಾಡಿರು
ರೆ. ಆದರೆ ಈ ಬೆಡಗಿಗೇ ಬೆರಗಾಗದಂತೆ ಕಡೆಯಲ್ಲಿ ಎಚ್ಚರಿಕೆಯ ನುಡಿಯೂ ಇದೆ:

ಇದೇ ಭೂವೈಕುಂಠವೆಂದು
ಮೂಡಣಿಗರು ಗೊಂದಲಗೆಡಬಹುದು.
ಇದನುಳಿದ ರಾಮರಾಜ್ಯವೆಲ್ಲಿದೆಯೆಂದು
ಬಿಲ್ಲಂ ಬೆರಗಾಗಬಹುದು
ನಾಣ್ಯದೊಂದು ಮುಖವಿದು.
ಇನ್ನೊಂದು ಮುಖವನ್ನು
ಮತ್ತೊಮ್ಮೆ ಪರಾಂಬರಿಸು! (ಪು. ೨೩)

ಗ್ರೋ ಜನರ ದಾರುಣ ಜೀವನವನ್ನು ಕಂಡಾಗ ಕವಿಯ ಕಣ್ಣು ತೇವವಾಗುತ್ತದೆ.
ಟುಸಿರು ಹೊರಹೊಮ್ಮುತ್ತದೆ.

ದೀಪದ ಬುಡಕ್ಕೆ ಕತ್ತಲೆ.
ಮಹಾನಗರದ ಉತ್ತುಂಗ ಚಿಹ್ನವಾದ
ವಾಶಿಂಗ್‌ಟನ್ ವಿಜಯಸ್ತಂಭದಡಿಗೆ

ಶ್ಯಾಮುಕಾಯರ ನೀರಸ ಜೀವನ, ನಿಸ್ತೇಜ ನೇತ್ರ
ಹೊಲಸು ಮನೆಗಳು
ಗಟಾರವಿಲ್ಲದೋಣಿಗಳು
ಹುಟ್ಟಿದ್ದು ಬೆಳೆದ ಹುಲ್ಲು
ಅಪರಾಧಗೈಯುವ ನಿರಪರಾಧಿ ಬಾಲಕರು,
ಭವಿತವ್ಯವಿರದ ಯುವಕರು,
ಬೇಸತ್ತ ತಂದೆ ತಾಯಂದಿರು !

ಇದು ಕತ್ತಲೆಯೆಂದು ಅದು ದೀಪವಾಯ್ತು.
ಇವರು ಕಾರ್ಮಿಕರೆಂದು ಅವರು ಸ್ವತಂತ್ರರಾದರು.
ಹುಣಸಿಕಾಯಿಯಂತೆ ಮನುಷ್ಯರನ್ನು ಮಾರುವುದುಂಟೆ ?
ಗಾಣದೆತ್ತಿನಂತೆ ಬವಣೆಬಡಿಸುವುದುಂಟೆ ?
ಉಂಟು, ಉಂಟು ! (ಪು. ೨೪–೨೫)

ಈ ನಗ್ನಸತ್ಯದ ಒಂದೊಂದು ಪಂಕ್ತಿಯಲ್ಲಿಯೂ ದೀನದಲಿತರ ಯಾತನೆಯ ಊಹಿಸಿಕೊಳ್ಳಬಹುದು. 'ಲಿನ್‌ಕನ್ ಅರ್ಚಿಸಿದ ಸತ್ಯಕ್ಕೆ ಶರಣುಹೋಗು. ಅದಿ ಫಲಿಸದು ನಿನ್ನ ಬಾಳು' ಎಂದು ಶ್ವೇತಕುಮಾರನನ್ನು ಎಚ್ಚರಿಸುವ ವೈಖರಿಯ ಕವಿಯ ಕೆಚ್ಚಿಗೆ ತಕ್ಕ ಸಂಕೇತದಂತಿದೆ. ವಾಶಿಂಗ್‌ಟನ್ ನಗರದ ಪ್ರೇಕ್ಷಣೀಯ ಗಳ ವರ್ಣನೆಗಳಲ್ಲಿ ವಿದಿತವಾಗುವ ಕವಿಯ ಕುತೂಹಲ ವಿಚಾರಸರಣಿಗಳು ನ ಅನುಭವವನ್ನು ಹಿರಿದಾಗಿಸಬಲ್ಲುವು. 'ಲಿಂಕನ್ ಮೆಮೋರಿಯಲ್ಲ'ನ್ನು ಕುರಿತು ಬ ರುವ ಕವಿತೆಯಲ್ಲಿ ಆತನಿಗೆ ಕೃತಜ್ಞತೆಯನ್ನು ಸಮರ್ಪಿಸಿರುವುದನ್ನು ಕಾಣಬಹ ಚಿತ್ರಸಂಗ್ರಹಾಲಯವನ್ನು ಸಂದರ್ಶಿಸಿದಾಗ ಉಂಟಾಗುವ ಭಾವನಾತರಂಗಗಳ ಉಜ್ವಲವೆನ್ನಿಸುತ್ತವೆ. ಅಲ್ಲಿನ ಬಣ್ಣಗಳ ಓಕುಳಿಯಾಟವನ್ನು ಕಂಡು ತಣಿದ ಕ 'ಒಂದು ಬಣ್ಣದೊಳಗೆ ನೂರು ಬಣ್ಣದ ಬಿದ್ದಣವಾಗುತ ಚಿತ್ರಕೂಟದಾರೋಹಣವ ಈ ಅವಲೋಕನ' ಎಂದು ಸಂತೋಷಗೊಳ್ಳುತ್ತದೆ. ರೇಖಾ ವಿನ್ಯಾಸಗಳ ವಿಲಾ ವಿಸ್ಮಯಗೊಂಡು 'ರೇಖೆ ತಾನನಂತವಾಗಿ ಮನುವಂಶಕೆ ರುಚಿಸುವಂತೆ ಒಡಮೂ ನಿಂತಿತಿಲ್ಲಿ ದಿವ್ಯ ವೃಷ್ಟಿಯ ತೆರೆದು ಮರ್ತ್ಯದೆದೆಯೊಳಿರುವ ಇಂದ್ರ ಸೃಷ್ಟಿಯ' ತತ್ವ ಸ್ಫುರಿಸುತ್ತದೆ. ಒಂದೊಂದು ಚಿತ್ರವನ್ನೂ ನೋಡಿದಂತೆಲ್ಲ ಒಂದೊಂದು ತೆರ ಸ್ಪಂದನವಾಗುವಂತಿತ್ತು. ಎಲ್ಲ ಕಲಾಸೃಷ್ಟಿಗೂ ತಲೆದೂಗಿದ ಕವಿಯ ಹೃ ಕಡೆಯಲ್ಲಿ ಕಂಡುಕೊಂಡ ಅರಿವಾದರೂ ಏನು ?

ನಾನೆಂಬುವ ಬದುಕು ಸುಟ್ಟಿತು
ನಾನಾದೆನು ತೆರೆದ ನಯನ–
ಎವೆಯಿಕ್ಕದೆ ನಿರಾಮಯನ
ನೋಡುವ ಬರ್ಗಿಲರ ಕಣ್ಣು.
ಉಳಿದುದೆಲ್ಲ ಬರಿ ಮಣ್ಣು. (ಪು. ೩೧)

ಽಕಾರವುದುಗಿದ ಈ ಸ್ಥಿತಿಯೇ ತನ್ಮಯತೆ! ಈ ಕವನವನ್ನು ಓದಿದ ಯಾವ ಹೃದಯನಿಗಾದರೂ ಅದೇ ಆನಂದವಾದೀತೆನ್ನುವುದರಲ್ಲಿ ಸಂಶಯವಿಲ್ಲ. ಲೇಖಕರೇ ದಪಡಿಸಿರುವಂತೆ "ಒಂದು ರೀತಿಯಿಂದ ಈ ಗ್ರಂಥದಲ್ಲೆಲ್ಲ ಪೌರುಷೇಯ—ಅಪೌರು ಯಗಳ ಸಂಘರ್ಷವಿದೆ. ಪೌರ್ವಾತ್ಯ ಸಂಸ್ಕಾರವನ್ನು ಹೊಂದಿದ ಒಂದು ವ್ಯಕ್ತಿತ್ವ ಶ್ಚಿಮಾತ್ಯ ಸಂಸ್ಕೃತಿಯೊಡನೆ ತೆಕ್ಕೆಬಿದ್ದು ಕಲಿತ ಪಾಠ ಹಾಗೂ ಕಲಿಸಬೇಕಾದ ಠಗಳ ಮನನವಿದೆ." ಇದರ ಫಲವಾಗಿಯೋ ಎಂಬಂತೆ 'ಮೂಡಣ-ಪಡುವಣ' ಎಂಬ ವನದಲ್ಲಿ ಈ ಎರಡು ಸಂಸ್ಕೃತಿಗಳ ತೌಲನಿಕ ವಿಚಾರ ನಡೆದಿದೆ.

ಬಾಹ್ಯ ವ್ಯಾಪಾರಗಳ ಆಘಾತ ಅಧಿಕವಾದಷ್ಟೂ ಕವಿಯ ಪ್ರಜ್ಞೆ ಅಂತರ್ಮುಖ ಗಲೆಳಸುತ್ತದೆ. ಆತ್ಮಶೋಧನೆಯಿಂದ ಹೊಸ ಹೊಸ ಆಲೋಚನೆಗಳು ತಲೆದೋರು ದೆ. ಅಂಥವುಗಳಲ್ಲಿ ತೋರಿಬರುವ ವಿಚಾರದೃಷ್ಟಿ ಯಾರಿಗಾದರೂ ದಾರಿದೀಪವಾಗ ಲ್ಲದು. ಶ್ರದ್ಧಾಬಲದಿಂದ ನಡೆಯುವ ಕವಿಗೆ ಸರ್ವದಾ ದೈವದಲ್ಲಿ ಒಂದೇ ಒಂದು ರ್ಥನೆ :

ನನ್ನ ಬಾಳಿನೊಳಿರುವ
ನಿನ್ನ ಸಂಕಲ್ಪವನು
ತಿಳಿವ ಪ್ರಜ್ಞೆಯ ನೀಡು ನನ್ನ ತಂದೆ!
ದೈವದಾಕಸ್ಮಿಕತೆ
ಅಂದು ನಿಚ್ಚಳ ಬೆಳಕು.
ಉದ್ಯಾಪನೆಯ ಬಲವು ಬಹುದು ಮುಂದೆ.

(ಪು. ೩೯)

ನ್ನ ಕಾವ್ಯದೃಷ್ಟಿಯನ್ನು ಲೇಖಕರು ಇಂತು ಹೇಳಿಕೊಳ್ಳುತ್ತಾರೆ :

ಮನುಕುಲದ ಕವಿಯಾಗು, ಕುಲಕೋಟೆಗಳನು ತಿಳಿ ;
ಯಾವ ನುಡಿಯನೆ ಇರಲಿ ವಾಣಿ ನುಡಿದು.
ಕಾಣ್ಕೆ ಜೀವದ ಸೊತ್ತು. ಕೀರ್ತಿ ಕಾಲನ ತುತ್ತು.
ಬಾಳು ನಿಚ್ಚಳ ಕಾಣ್ಕೆಯನ್ನು ಪಡೆದು.

* * *

ಓ ಮಂಗಲ ರೂಪ! ಮೂಡೆನ್ನ ಕಾವ್ಯದಲಿ.
ಸಂಕೋಚದಿಂದ ಗಲ್ಲವು ನಸುವೆ ಕೆಂಪೇರಿ.
ಎಲ್ಲದರ ಚಕ್ರವರ್ತಿನಿಯಾಗಿ ಮೂಲೆಯಲಿ
ಮುದುಡಿಕೊಂಡಿರುವಿ ; ಓ ಜಗದ ಸೌಭಾಗ್ಯವೆ!
ಓ ಮಂಗಳರೂಪ! ಮೂಡೆನ್ನ ಕಾವ್ಯದಲಿ!

(ಪು. ೩೯–೪೦)

ಈ ಸಾತ್ವಿಕೆಯ ಪ್ರೊತ್ಯೆಕೆಗಾಗಿಯೇ ಕವಿಯ ಪ್ರಯತ್ನ ನಿರಂತರವೂ ಸಾಗುತ್ತದೆ.

ಪ್ರಿನ್ಸ್‌ಟನ್ ವಿಶ್ವವಿದ್ಯಾನಿಲಯದ ವಾಚನಾಲಯದ ಬೃಹತ್ತನ್ನೂ ಪುಸ
ಪಂಕ್ತಿಗಳ ವೈವಿಧ್ಯವನ್ನೂ ಕಂಡಾಗ ಲೇಖಕರಿಗೆ ಸಹಜವಾಗಿಯೇ ಒಂದು ಪ್ರ
ಮೂಡುತ್ತದೆ. "ವ್ಯಕ್ತಿಗಾಗಿ ವಿದ್ಯೆ ಇಲ್ಲವೆ ವಾಙ್ಮಯವಿರುತ್ತದೆ. ಆದರೆ ಇಂ
ವಾಚನಾಲಯಗಳನ್ನು ನೋಡಿದಾಗ ವಿದ್ಯೆ ಇಲ್ಲವೆ ವಾಙ್ಮಯಕ್ಕಾಗಿಯೇ ವ್ಯ
ಹುಟ್ಟಿರುವನೇನೆಂಬ ಸಂದೇಹ ಬರುತ್ತದೆ." ಆ ಪ್ರಶ್ನೆಗೆ ಪರಿಹಾರವನ್ನೂ ಸೂಕ್ಷ್ಮವ
ಅವರೇ ಸೂಚಿಸಿರುತ್ತಾರೆ. "ಆತ್ಮದೃಷ್ಟಿಯಿಲ್ಲದ ವ್ಯಕ್ತಿಗೆ ಇದು ಗ್ರಂಥಾಲಯವ
ಚೈತ್ಯಾಲಯ!" ಎಲ್ಲ ವಿದ್ಯೆಗಳೂ ಎಲ್ಲರಿಗೂ ಸಲ್ಲುವುದಿಲ್ಲ. ಹಾಗಾಗಲು "ನೂರು
ಗಳಾದರೂ ನಿಲುಕಬಲ್ಲುದೆ?" ಎನ್ನಿಸುತ್ತದೆ.

ಯಂತ್ರದ ಮೇಲುಗೆಯ್ಯಾದ ಅಮೆರಿಕದ ಜೀವನವನ್ನು ಕಂಡಾಗ ಬೆರಗಾಗು
ರೊಂದಿಗೆ ಮನುಷ್ಯನ ವ್ಯಕ್ತಿತ್ವದ ಅಸ್ತಿತ್ವಕ್ಕೇ ಭಂಗವುಂಟಾಗುತ್ತಿರುವ ಬೆದರಿಕೆ
ಲೇಖಕರಿಗೆ ಅರಿವಾಗುತ್ತದೆ.

> ಕಸಬರಿಗೆ ಆಟೋಮ್ಯಾಟಿಕ್ಕು, ಒಗೆಯುವ ಯಂತ್ರ,
> ಮುಸುರೆ ತೊಳೆಯುವ ಯಂತ್ರ ಆಟೊಮ್ಯಾಟಿಕ್ಕು
> ಒಲೆ ಹೊತ್ತಿಸಲು ಸ್ವಿಚ್ಚು, ಹಿಮಬಾಷ್ಪಸ್ಥಿತಿಫ್ರಿಜ್ಜು.
> ಒಂದು ಕೆಲಸಕ್ಕೊಂದು ಟಿಕ್ಕು ಟಿಕ್ಕು!
>
> (ಪು. ೪೫)

ಯಂತ್ರಕೌಶಲ ಸ್ತುತ್ಯರ್ಹವಾದರೂ

> ವ್ಯಕ್ತಿಯೂ ವ್ಯಕ್ತಿತ್ವ ಯಂತ್ರಗಳಿಗಳವಲ್ಲ!
> ಯಂತ್ರ ಗ್ರಹಿಸಿದ ಪ್ರಾಂತಗಳನು ಮೀರಿ
> ಮೆರೆಯುವುದು ವ್ಯಕ್ತಿತ್ವ ತಾ ಗೂಢತಮವಾಗಿ—
> ಸಮಷ್ಟಿಯಾಚೆಗೆ ವ್ಯಕ್ತಿಯೆಂದು ಸಾರಿ!
>
> (ಪು. ೪೭)

ಎಂಬ ಕವಿಯ ಹೇಳಿಕೆ ಗಮನಿಸತಕ್ಕುದು.

ವಿಶ್ವಶಾಂತಿಯನ್ನೇ ಧ್ಯೇಯವಾಗುಳ್ಳ ನ್ಯೂಯಾರ್ಕಿನ 'ಯು. ಎನ್. ಓ.' ಭ
ವನ್ನು ನೋಡಿದ ಒಡನೆಯೇ ವಿನಾಯಕರ ದೃಷ್ಟಿ ವಿಶ್ವವಿಸ್ತಾರವಾಗುತ್ತದೆ. ಅ
ಎತ್ತರ ಬಿತ್ತರಗಳಿಗೆ ಅರೆಗಳಿಗೆ ಅಚ್ಚರಿಯಾದರೆ, ಅಲ್ಲಿನ ಗ್ರಂಥಾಲಯ, ಚಿತ್ರ ಸ
ದಾಯಗಳನ್ನು ಕಂಡು ಮನಸ್ಸು ಪುಳಕಿತವಾಗುತ್ತದೆ. ಸಭಾಭವನದ ಸಂದೇಶವಾದ
ಏನು?

> .... ಈ ಶಾಸನ ಸಭೆ
> ಕೇಂದ್ರಿಸಿತು ಲೋಕದ ಪ್ರಭೆ!
> ನ್ಯಾಯಾಂಗ, ಕಾರ್ಯಾಂಗ, ಆಲೋಚನಾಂಗ,

ಎಷ್ಟೊಂದೇ ಒಂದು ; ಸುಸಂಕಲಿತ ಉತ್ತಮಾಂಗ !
ನೂರು ದೇಶಗಳಿಲ್ಲಿ ನಿಂತಿಹವು ಕನಸಿಂಪುಣಿ :
ಇದು ಸತ್ಯಯುಗದ ಆದಿ
ಒಂದೇ ಗುಮ್ಮಟದಡಿಗೆ ಶತ್ರು ರಾಷ್ಟ್ರಗಳು ಕುಳಿತು
ಎನ್ನುವವು : ಒಳಿತು ; ಒಳಿತು.

(ಪು. ೫೦)

ಈ ಮನೋಹರವಾದ ಭವ್ಯ ಮಂದಿರವನ್ನು ಮೆಚ್ಚಿಕೊಂಡು, ನ್ಯೂಯಾರ್ಕ್ ನಗರದ
 ಎಡೆಗಳತ್ತ ಹೊರಳಿದ ಕವಿಯ ಕಣ್ಣು ಅವುಗಳೊಂದೊಂದನ್ನೂ ಅಷ್ಟೇ
ಕತೆಯಿಂದ ಗ್ರಹಿಸಿ ತುಷ್ಟಿ ಪಡೆಯುತ್ತದೆ. ಆ ನಗರದ ಸ್ವರ್ಗ ಮರ್ತ್ಯ ಪಾತಾಳ
ವಿವಿಧ ವಿಭಾಗಗಳ ಗರ್ಭದೊಳಗಿನ ಜೀವನದ ವಿವಿಧ ಮುಖಗಳ ಚಿತ್ರಣವಿಲ್ಲಿದೆ.
ತದ ನಗರಗಳನ್ನು ನೋಡಿದಾಗ ಚಮತ್ಕಾರ ಎನಿಸುತ್ತದೆ. ಇವೆಲ್ಲ ಮಾನವ
ರ್ಮಿತ ನಗರಗಳು. ಆದರೆ ಮಾನವನ ಕೃತಿಯಲ್ಲಿಯೇ ಯಾವುದೋ ಒಂದು ದೋಷ
 ತನ್ನ ಕರುಳೇ ತನಗೆ ಮುಳುವಾಗುವಂತೆ— ಬಭ್ರುವಾಹನನೇ ಅರ್ಜುನನಿಗೆ
ರಕವಾಗುವಂತೆ—ಮಾನವನ ನಿರ್ಮಿತಿಯೇ ಅವನ ಆತ್ಮವನ್ನು ಬರಿದೋ ಬರಿ
 ಮಾಡುವ ರಾಕ್ಷಸವಾಗುತ್ತದೆ. ಆದರೆ ನ್ಯೂಯಾರ್ಕ್ ನಗರ ಬರಿ ಒಂದು
ಸ ನಗರ ಮಾತ್ರವಲ್ಲ. ಅದರ ಚೆಲುವನ್ನೂ ಸಿರಿಯನ್ನೂ ನೋಡಿ ತಲೆದೂಗ
ದು" ಎಂಬ ಜಿಜ್ಞಾಸೆಯಿಂದ ಕವಿಯ ಜಾಗೃತಚೇತನದ ಪರಿಚಯವಾಗುತ್ತದೆ.
ಯಾರ್ಕಿನ ನಿರ್ಮಾಣವನ್ನು ಕಂಡಾಗ ಅವರು "ತಳದಲ್ಲಿ, ನೆಲದಲ್ಲಿ, ಮುಗಿಲಲ್ಲಿ
ಹುದು ; ಸಾಹಸದ ಸಂಕೇತವೀ ಸಡಗರ !" ಎಂದು ಆಡಿರುವ ಮಾತು ಒಟ್ಟು
ದ ಹಿರಿಮೆಯನ್ನು ನಮಗೆ ಸ್ಪಷ್ಟಪಡಿಸಬಲ್ಲುದು. ಮೋಹಾಕ್ ನದಿಯ ಬಳಿಗೆ
ಾಗ ಅದರ ತೀರದ ಮೇಲೆ ನಡೆದ ಗತಕಾಲದ ಕಹಿಯ ಘಟನೆಗಳೆಲ್ಲ ಲೇಖಕರಿಗೆ
ಾಗುವುವು. ಅದಕ್ಕಾಗಿ ಪಶ್ಚಾತ್ತಾಪಪಡುವರು.

ಅಮೇರಿಕೆಗೆ ಬೆರಳು ಕಚ್ಚಿಸುವ ಸಿರಿಯಿಂದು.
ಆದರದಕಾಗಿಹುದು ರುಧಿರಸ್ನಾನ.
ನಾಲ್ಕು ಮೂಲೆಗಳ ಪಾತಾಳದಿಂದೆದ್ದಿಹುದು
ಆರ್ತಧ್ವನಿ, ನಡೆದಿರಲು ಕುಣಿತ–ಗಾನ.
ಎನಿತು ಚೆನ್ನಾಗಿತ್ತು ಆದಿವಾಸಿಯ ಕೊಂದು
ಅವನ ನೆಲವನು ಹೊರುವ ಬದಲು ಕರೆದು,
ಅವನ ಮೈತ್ರಿಯ ಪಡೆದು, ಅವನ ಜೊತೆಯಲಿ ನಡೆದು
ವಿಕಸನವ ಸಾಧಿಸಿರಲೊಟ್ಟು ಬೆರೆದು !

(ಪು. ೫೩)

ಈ ಹೃದಯವೈಶಾಲ್ಯವಿದ್ದಲ್ಲಿ ರಾಷ್ಟ್ರ ರಾಷ್ಟ್ರಗಳಿಗೆ ತಿಕ್ಕಾಟವಿರುತ್ತಿತ್ತೆ ? ಆಕ್ರಮ
ವಿಕ್ರಮಕ್ಕೆ ಬೆಲೆ ಬರುತ್ತಿತ್ತೆ ?

ಹಾರ್ವರ್ಡ್ ವಿಶ್ವವಿದ್ಯಾನಿಲಯದ ಹೆಸರು ಜಗತ್ಪ್ರಸಿದ್ಧವಾದುದು. ಅ
ಒಂದೊಂದು ನಿಮಿಷವೂ ಲೇಖಕರಿಗೆ ತುಂಬ ಸ್ಫೂರ್ತಿದಾಯಕವೆನ್ನಿಸಿವೆ. ಎಮರ
ಇದ್ದಂತಹ ಕೋಣೆಯನ್ನು ಸಂದರ್ಶಿಸಿದಾಗ ಭಕ್ತಿಭಾವವುಂಟಾಗಿ "ಎಲ್ಲರಂತಿ
ಕೆಲವರಂತೆಯೆ ಕಂಡ. ಇತ್ತ ಹೃದಯವಿ ನೆಲಸಿ ಜ್ಞಾನಪಿಂಡ ಅನುಭಾವಿ
ಅಮೃತದುಣಿಸನುಂಡ" ಎಂದು ಕೃತಜ್ಞತೆಯನ್ನು ಸಮರ್ಪಿಸುವರು. ವಿಶ್ವವಿದ್ಯಾನಿಲ
ಭೂಗರ್ಭಶಾಸ್ತ್ರದ ಸಂಗ್ರಹಾಲಯವನ್ನು ನೋಡಿದಾಗ ಅಲೆಅಲೆಯಾಗಿ ಉಕ್ಕಿಬ
ಭಾವಾವೇಶ ಹೇಳತೀರದು.

ಬಹುರತ್ನಾ ವಸುಂಧರಾ
ಬಹು ಕುಸುಮಾ ವಸುಂಧರಾ
ಅತಿಧವಲಾ ವಸುಂಧರಾ
ಅತಿಶ್ಯಾಮಾ ವಸುಂಧರಾ.

(ಪು. ೬೦)

ಎಂದು ಭೂದೇವಿಗೆ ನಮಸ್ಕರಿಸಿ ಆ ಸಂಗ್ರಹಾಲಯದ ವಸ್ತುವಿಶೇಷವನ್ನೆಲ್ಲ
ಬಿಡಿಯಾಗಿ ಬಣ್ಣಿಸುತ್ತಾರೆ. ಕಲ್ಲಿನಿಂದ ಹಿಡಿದು ಹರಳಿನವರೆಗೆ ವ್ಯಾಪಿಸಿರುವ
ವೈಚಿತ್ರ್ಯವನ್ನು ಕವಿಯ ದೃಷ್ಟಿ ಬಹು ಯಶಸ್ವಿಯಾಗಿ ಗ್ರಹಿಸಿರುತ್ತದೆ. ವೈವ
ಮಹಿಮಾಸಾನ್ನಿಧ್ಯದಲ್ಲಿ ಕವಿಯ ಚಿತ್ತ ಅವುಗಳನ್ನೆಲ್ಲ ಪಡೆದ ಮೇದಿನಿಯನ್ನು ಬ
ತುಂಬ ಕೊಂಡಾಡಿರುತ್ತದೆ.

ಕೋಟಿ ವರುಷಗಳ ಕಲಾತಪಸ್ವಿನಿ
ಕಳೆದಳು ಕಂದನಿಗಾಗಿ
ಕಳೆದಳು ಆ ಮೇದಿನಿ, ತೇಜಸ್ವಿನಿ
ಉಳಿದೆಲ್ಲವ ನೀಗಿ

(ಪು. ೬೩–೬೪)

ಎಂದು ಮಹಾತ್ಯಾಗದಿಂದ, ಮಹಾತಪಸ್ಸಿನಿಂದ ಮಾತ್ರವೇ ಇಂಥ ಅಮೂಲ್ಯ
ಲಭಿಸಬಲ್ಲುದೆಂದು ಭಾವಿಸುವರು. ಎಂಥವರನ್ನೂ ಅರುಳು ಮರುಳು ಮಾಡುವ ಹ
ವರ್ಣವೈವಿಧ್ಯ, ರಚನಾ ವೈಶಿಷ್ಟ್ಯಗಳನ್ನು ಮನಗಂಡು, ಮೆಚ್ಚಿಕೊಂಡು, ತೃಪ್ತವಾ
"ಹರಳಿಹುದು ಭೂದೇವಿಯೊರೆದಿಹ ಪ್ರಗಾಥ" ಎಂಬ ರಸವತ್ತಾದ ಮಾತನ್ನು ಆ
ವರು. ಭೂಗರ್ಭದ ಭವ್ಯ ಸೌಂದರ್ಯವನ್ನು ತೆರೆದು ತೋರುವ ಈ ಸಂಗ್ರಹಾಲ
ಹಿರಿಮೆ ಒಂದು ರೀತಿಯಾದರೆ, ಪ್ರಾಣಿ ಸಂಗ್ರಹಾಲಯದ ಜೀವವೈಭವ ಮತ್ತೊ

ಯ್ಯಾಮುದು. ಕವಿಗೆ ಯಾವ ಪಕ್ಷಪಾತವೂ ಇಲ್ಲವೆಂಬಂತೆ ಅದನ್ನೂ ಅಷ್ಟೇ ವಿಸ್ತಾರ ವರ್ಣಿಸಿರುತ್ತಾರೆ. ಆಯಾ ಮೃಗಪಕ್ಷಿಗಳನ್ನು ಕಂಡಾಗ ಮನಸ್ಸು ಪ್ರಸನ್ನವಾಗು . ಮನದಲ್ಲಿಯೇ ಮಾತುಕತೆ ಮೊದಲಾಗುತ್ತದೆ. ಮೈನಾ ಪಕ್ಷಿಯ ಅಂದಚೆಂದ ಗೆ ಮಾರುಹೋದ ಹೃದಯ ಕಡೆಗೆ ಎಚ್ಚತ್ತು “ಆ ಪ್ರಾಣಿ ಸಂಗ್ರಹಾಲಯವ ರಚಿಸಿದ ರರ ಮನದೊಳಗೆ” ಕೊಂಡಾಡುತ್ತದೆ. ‘ಮಮ್ಮಿ’ಯ ನಿಶ್ಚಲ ಶರೀರವನ್ನು ಕಂಡಾ ೂ, ಮಾಯಾ ಸಂಸ್ಕೃತಿಯ ಶಿಲ್ಪಮೂರ್ತಿಗಳನ್ನು ನೋಡಿದಾಗಲೂ, ಟೋಟೆಮ್ ಗಳನ್ನು ಸಂದರ್ಶಿಸಿದಾಗಲೂ ಲೇಖಕರ ವಿಚಾರಧಾರೆ ನಾನಾ ತೆರನಾಗಿ ಪ್ರವಹಿ ತ್ತದೆ. ವಿಸ್ಮಯ—ವಿಷಾದಗಳೆರಡೂ ಹೃದಯವನ್ನು ಮಿಡಿಯುತ್ತವೆ.

ಮುಂದೆ ಬಾಸ್ಟನ್ ನಗರದ ಪ್ರವೇಶ. ಅಲ್ಲಿನ ವಿಜ್ಞಾನ ಸಂಗ್ರಹಾಲಯದಲ್ಲಿ ಣುವಿನಿಂದ ಹಿಡಿದು ಮಿಂಚುಹುಳುವಿನವರೆಗಿನ ಆಕೃತಿಗಳನ್ನು ಕಂಡು ಅದರ ಹತ್ವಕ್ಕಾಗಿ ಶ್ಲಾಘಿಸುತ್ತಾರೆ.

ಇದೋ ಅಣುವಿನ ಮಹಾಪ್ರಾಣ:
ವಿಶ್ವದ ತಾರಕ, ಮಾರಕತ್ರಾಣ.
ಇದರೊಳಡಗಿದೆ ವಿಶ್ವವಿನಾಶ,
ಭೂ ವೈಕುಂಠದ ಆಶಾಪಾಶ.
ನರನ ಕೈಯೊಳಿದೆ ಕುಲದಿಡಿ ಸಂಹಾರ:
ಬುದ್ಧಿ—ಹೃದಯದಲಿ—ಕುಲಪ್ರಗತಿಯ ಸಾರ!

(ಪು. ೭೭)

ದು ಅಣುವನ್ನು ಒಂದೆಡೆ ಹೊಗಳಿದರೆ,

ನಿಸರ್ಗದದ್ಭುತಕೆ
ನೀನೊಂದು ಸಂಕೇತ
ನೀನಿರುವ ತಾಣವೋ ಅಡವಿ ಹುಲ್ಲು.
ಮಾನವನು ಚಿರಪಥಿಕ
ಅವನ ದಾರಿ ಅನಂತ
ಅಲ್ಲಿ ನೀನೂ ಒಂದು ಮೈಲುಗಲ್ಲು

(ಪು. ೭೯)

ದು ಮಿಂಚುಹುಳುವನ್ನು ಇನ್ನೊಂದೆಡೆ ಅಷ್ಟೇ ನಿಷ್ಠೆಯಿಂದ ಸ್ತುತಿಸಿರುತ್ತಾರೆ. ಸ್ಟನ್ನಿನ ಚಿತ್ರಸಂಗ್ರಹಾಲಯವನ್ನು ಕಂಡಾಗ ಅಲ್ಲಿ ಪ್ರವೇಶಿಸಿದ ಭಾರತೀಯರಾದ ಂದಕುಮಾರ ಸ್ವಾಮಿಯವರ ನೆನಪಾಗುತ್ತದೆ. ಅಲ್ಲಿನ ಚಿತ್ರಸಮುದಾಯದಲ್ಲಿ ವಿವಿಧ ಸ್ಕೃತಿಗಳ ಸಮನ್ವಯವನ್ನು ಕಂಡು ಸಂತೋಷವಾಗುತ್ತದೆ. ಅಲ್ಪಾಯುವಾದ ಚಿತ್ರ

ಕಾರನೊಬ್ಬನ ನೂತನ ಸೃಷ್ಟಿಗಳನ್ನು ಕಂಡು "ಈ ಪರ್ಣಹೋಮಗಳ ಹೋಮರ
ಋತ್ವಿಜನು ಸಾಲೆಮಿಯು" ಎಂದು ಸ್ತುತಿಸುತ್ತಾರೆ.

ಬಾಸ್ಟನ್ನಿನ ಹಲವಾರು ಧಾರ್ಮಿಕ ಸಂಸ್ಥೆಗಳನ್ನು ಸಂದರ್ಶಿಸಿದಾಗ ಲೇಖಕರಿಗ
ಒಂದೊಂದು ಅನುಭವವೂ ಆಪ್ಯಾಯಮಾನವಾದದ್ದು. ಅವುಗಳಲ್ಲಿ ಎಮ್. ಐ.
(ಮೆಸ್‌ಚ್ಯೂಸೆಟ್ಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ) ಧ್ಯಾನಮಂದಿರದಲ್ಲಿ
ಅನುಭವ ವಿಜ್ಞಾನ—ವೇದಾಂತಗಳ ಪರಸ್ಪರ ಮೈತ್ರಿಯನ್ನು ಕುರಿತುದಾಗಿರುವುದ
ಉಲ್ಲೇಖನಾರ್ಹವಾಗಿದೆ.

ವಿದ್ಯೆಯಲಿ ಧರ್ಮಶಿಕ್ಷಣ ಬೆರೆವುದೇಕೆಂದು
ಪಂಡಿತರು ವಾದಗಳ ಹೂಡುತಿರಲು
ವಿಜ್ಞಾನ ಸಂಸ್ಥೆಯೆನುತಿಹುದು "ಧರ್ಮವು ಬೇಕು;
ನರನ ವಾಸನೆ ಕೊಯ್ಯುತಿಹವು ಕೊರಲು."

"ಧರ್ಮ ಚಕ್ರವೇ ಇರಲಿ; ಕ್ರೈಸ್ತ ಶಿಲುಬೆಯೆ ಇರಲಿ.
ಹರನಿರಲಿ, ಹರಿಯಿರಲಿ, ಯಾವುದೇನು?
ನಾಮ ರೂಪಗಳೆಲ್ಲ ದೇಶ-ಕುಲಗಳ ದೃಷ್ಟಿ;
ಅಹುದು ಚಿದ್ಘನ ಸಾರ್ವಭೌಮ ಋತ ತಾನು!"

"ಇಲ್ಲಿದೋ ನಿರ್ಗುಣ—ನಿರಾಮಯನ ಮಂದಿರವು;
ನಿನ್ನ ಪೂಜೆಯ ನಿನ್ನ ರೀತಿಯಲಿ ಸಲ್ಲಿಸು;
ಭಕ್ತಿಯಂಜಲಿಯಿತ್ತು ಪಡೆ ಸ್ಫೂರ್ತಿದಾನವನು.
ಕುಲವದೊಂದೇ ಎಂಬ ಧ್ವಜಸ್ತಂಭ ನಿಲಿಸು!"

(ಪು. ೯೩)

ಈ ಹೇಳಿಕೆಯಲ್ಲಿ ವಿದಿತವಾಗುವ ದೃಷ್ಟಿವೈಶಾಲ್ಯಕಾಲೋಚಿತವಾಗಿದೆ.

ಬಾಸ್ಟನ್ನಿನ ಜೀವನ ವಿಧಾನವನ್ನು ಲೇಖಕರು ಹಲವಾರು ರೀತಿಗಳಲ್ಲಿ ಕ
ವಿಮರ್ಶಿಸಿದ್ದಾರೆ. ವಿದ್ಯಾರ್ಥಿಗಳ ಸಂಯಮರಹಿತವಾದ ಜೀವನವನ್ನು ನೋಡಿ
ಅವರ ಮನಸ್ಸು ತುಂಬ ಪಶ್ಚಾತ್ತಾಪಪಡುತ್ತದೆ. "ಗೃಹಸ್ಥಾಶ್ರಮಿಯುವನು ವಿದ್ಯಾ
ದೆಸೆಯಲ್ಲಿ, ಬ್ರಹ್ಮಚಾರಿಯು ಮದುವೆಯಾದ ಮೇಲೆ" ಎಂಬ ವಿಡಂಬನೆಯು ಮ
ಇಲ್ಲಿನವರ ವರ್ತನೆಯನ್ನು ತಾನಾಗಿಯೇ ಮನದಟ್ಟು ಮಾಡಿಕೊಡುತ್ತದೆ. ಬಾಸ್ಟ
ಹಲವಾರು ಪ್ರಸಂಗಗಳಲ್ಲಿ, ಹೋಟೆಲೊಂದರಲ್ಲಿ, "ಓರ್ವ ಕುಷ್ಟ ಕುಷ್ಟ ಮು
ಹುಟ್ಟುಗುರುಡಿಯಾದ ತನ್ನ ತರುಣ ಕುವರಿಯನ್ನು ಅಲ್ಲಿಗೆ ಊಟಕ್ಕೆಂದು" ಕರೆತ
ಅಲ್ಲಿದ್ದವರು ಅವರನ್ನು ಕಂಡ ಬಗೆ, ಆ ತಂದೆ-ಮಗಳ ದಾರುಣ ಜೀವನದ ಪರಿಯ
ಕುರಿತ ಒಂದು ಕವನ ಮನಕರಗಿಸುವಂತಿದೆ.

ಸಿಂಗರಿಸಿದ ತಾಣದಿ ಮಸಣದ ಸುಳಿವೆ?
ಬಹುದಯ್ಯಾ ಬಹುದು.
ಭಾಗ್ಯಶಾಲಿಗೂ ದುರ್ಭಾಗ್ಯವದುಂಟೆ?
ಉಂಟಯ್ಯಾ ಉಂಟು.
ಭಾಗ್ಯ-ದುರ್ಭಾಗ್ಯ ಹಾಸು-ಹೊಕ್ಕು, ತಮ್ಮ
ಬಿಡಿಸದ ಕಗ್ಗಂಟು.

. . . .

ಕುಷ್ಟ ಕುಷ್ಟ ಮುದುಕ
ನಿರಾಶೆಗವನಾ ಮೋರೆ ಸ್ವರ್ಣಪದಕ;
ಸುಕ್ಕಿದ ಮೈ ನಡುಗುವ ಕೈ
ಅರ್ಧಮರ್ಧ ಕಾಣುವ ಕಣ್ಣು:
ಅವನ ಕೈಯಲಿದೊ ಅಂಗೈ ಹುಣ್ಣು–
ಅವನ ಬಾಳನೇ ಹೋಮಿಸಿದ ಒಗಟ
ದೈವ ತೊಡಿಸಿರುವ ಮುಳ್ಳಿನ ಮುಕುಟ:
ಒಬ್ಬಳೊಬ್ಬಳೇ ಮಗಳು ಹುಟ್ಟುಗುರುಡಿ;
ಬಾಳಾಗಿದೆ ದುರ್ದೈವದೊಡನೆ ಗರಡಿ.
ಹುಟ್ಟುಗುರುಡಿ ಮಗಳನು ಕರೆತಂದ
ಮುದುಕ, ಬಂದ-ಬಂದ.

(ಪು. ೧೦೦)

ಹೃದಯ ಹಿಂಡುವ ದೃಶ್ಯವನ್ನು ಕಣ್ಣಿಗೆ ಕಟ್ಟುವಂತೆ ನಿರೂಪಿಸಿರುವ ಈ ಕವನ
ಕಣ್ಣೀರಿಡದೆ ಓದಿ ಮುಗಿಸುವುದು ಅಸಾಧ್ಯವೆನ್ನಿಸುತ್ತದೆ.
ಇಂಗ್ಲೆಂಡಿನ ಶರದೃತುವಿನ ವರ್ಣವೈಭವವನ್ನು ಹೇಳತೀರದು.

ಎಲೆಯ ಪಡಿಯಚ್ಚಿನಲಿ ಬೈಗಿನೋಕುಳಿ ನೋಡು!
ವೃಕ್ಷವೆಸೆಯುವುದಿಂದು ಮಾಗಿಯ ದಿನ.
ರಕ್ತವರ್ಣದ ಪಾರಿಜವು ಪರ್ಣವಾಯಿತೆ?
ಇಲ್ಲ ಗಲ್ಲಕೆ ಉಷೆಯು ಬಳಿದರಿಶಿನ?

* * *

ಚಿಟ್ಟವೇ ಆಗಿಹುದು ಬೆಂಕಿಚಿಟ್ಟ!
ಭೂಮಾತೆಗೆ ಮರ ಚಾಮರ ಬೀಸಿವೆ–
ಬಣ್ಣ, ಬಣ್ಣ, ಬಣ್ಣ,
ಸಾಲವೆರಡು ಕಣ್, ಅಮರೇಂದ್ರನೆ! ಕೊಡು
ನನಗೆ ನಿನ್ನ ಕಣ್ಣ!
ನೋಡಿದ ತಣಿಯುವೆನಣ್ಣ!

(ಪು. ೧೦೭)

ಆ ವರ್ಣಮಯ ಕಾನನದ ವಿಸ್ತಾರವಾದ ವರ್ಣನೆ ಕವಿಯ ಹೃದಯವನ್ನು ಸೆ
ಗೊಳ್ಳುತ್ತದೆ. 'ದಶಾವತಾರದಾಟವನಾಡಿತೋ ಪರ್ಣ!' ಎಂಬ ಉಕ್ತಿ ಈ ವೈ
ಕಲ್ಪನೆಗೆ ಸೂಕ್ತವಾಗಿದೆ.

ಬಾಹ್ಯ ಪ್ರಪಂಚದ ಆಡಂಬರದಲ್ಲಿಯೇ ಲೇಖಕರ ಮನಸ್ಸು ಮುಕ್ತವಾಗದೆ, ಅ
ದಾಗ್ಗೆ ಅಂತರ್ಮುಖಿಯಾಗುವುದೂ ಒಂಟು. ಏಕಾಂತಕ್ಕೆ ಬಯಸಿ ಚಿಂತನ
ವಾಗುವುದುಂಟು. ಅವರೇ ಹೇಳಿಕೊಂಡಿರುವಂತೆ "ಏಕಾಂತವು ವ್ಯಕ್ತಿಗೊಂದು ಒರೆ
ದ್ದಂತೆ. ಏಕಾಂತಕ್ಕೆ ಭೀತನಾದವನು ಪಶುವಾಗುತ್ತಾನೆ. ಏಕಾಂತಕ್ಕೆ ಸೋತವ
ಭ್ರಮಿಷ್ಟನಾಗುತ್ತಾನೆ. ಏಕಾಂತ ಲೋಕಾಂತಗಳೆರಡನ್ನೂ ಸಮತೂಕವಾಗಿ ನಡೆ
ಕೊಂಡವನು ನಾಯಕನಾಗುತ್ತಾನೆ, ನವ ಮಾನವನಾಗುತ್ತಾನೆ. ವಿದೇಶಕ್ಕೆ ಹೋ
ಗೆಲ್ಲ ಏಕಾಂತದ ಒರೆಗಲ್ಲು ಬೇಡವೆಂದರೂ ಮಾನವನನ್ನು ಬಿಡುವುದಿಲ್ಲ." (ಪು. ೧೧
ಇಂಥ ಮನಃಸ್ಥಿತಿಯಲ್ಲಿ ಹೊರಹೊಮ್ಮಿದ ಇಲ್ಲಿನ ಕೆಲವು ಕವಿತೆಗಳು ಸಹಜವಾಗಿ
ಚಿಂತನಪರವಾಗಿವೆ.

ಶ್ರೀ ವಿನಾಯಕರು ತಮ್ಮ ಪ್ರವಾಸಕಾಲದಲ್ಲಿ ಸಂದರ್ಶಿಸಿದ ಅನೇಕ ವಿದ್ವಾಂಸರ
ಬಹಳ ಆತ್ಮೀಯವಾಗಿ ಪರಿಚಯಮಾಡಿಕೊಟ್ಟಿರುತ್ತಾರೆ. ಒಬ್ಬೊಬ್ಬರ ಘನತೆಯ
ವ್ಯಕ್ತವಾಗುವ ರೀತಿಯಲ್ಲಿ ಅವರನ್ನು ಕೊಂಡಾಡಿರುತ್ತಾರೆ. ಐ. ಎ. ರಿಚರ್ಡ್ಸ್
ರನ್ನು ಕುರಿತ ಅಷ್ಟಷಟ್ಪದಿಯಲ್ಲಿ "ಇವನು ರಸಿಕೋತ್ತಮನು; ವಿಮರ್ಶೆಯಲಿ ಜ್ಯೇ
ಪ್ರತಿಪಾದಿಸಿದ ರಸದಿ ನವ್ಯಸಿದ್ಧಾಂತಗಳ. ಮಲ್ಲಿನಾಥಿಕೆಯಲ್ಲಿ ಬಲ್ಲಿದನು, ಬಲು ಶ್ರೀ
ತೆರೆದ ಮೀಮಾಂಸೆಯಲಿ ನವ್ಯ ರೋದೋಂತಗಳ" ಎಂದು ಆತನ ವ್ಯಕ್ತಿತ್ವವೇ
ಮೂಡುವಂತೆ ನಿರೂಪಿಸಿದ್ದರೆ, ಭಾರತ ಪ್ರಿಯರಾದ ಬಕ್ನರ್ ದಂಪತಿಗಳನ್ನು ಕಂಡ
"ನಿಮ್ಮೊಡನೆ ಮಾತಾಡಿ ನಕ್ಕು ಕೆಲೆದು ಬೆರದಾಗ ಮನವಿತ್ತು ಭಾರತದಿ ನಲಿ
ವರ್ಣಭೇದವು ಕಾಯ; ಕಾಯಕದಲಿಲ್ಲ. ನೆಲವಿರಲಿ, ಕಡಲಿರಲಿ, ಸೀಮೆ ಎದೆಗ
ಎಂದು ಕೃತಜ್ಞತೆಯನ್ನು ಸಮರ್ಪಿಸುವರು. ಮತ್ತೆ ಕೆಲವರನ್ನು ಭೇಟಿಮಾಡಿದ
ನಡೆದ ಸಂಭಾಷಣೆಯನ್ನು ಗದ್ಯದಲ್ಲಿಯೇ ಹೃದಯಂಗಮವಾಗಿ ಚಿತ್ರಿಸಿರುವ
ಲೇಖಕರೇ "ಪದ್ಯದ ವಿಮಾನದಲ್ಲಿ ಇಷ್ಟು ದಿನ ಹಾರಾಡುತ್ತಿರುವ ನನಗೆ ಗದ್ಯದ ರೈ
ಗಾಡಿ ಅಗತ್ಯವೆನಿಸಿರಲಿಲ್ಲ. ಆದರೆ ಈಗ ಅದು ಬೇಕಾಗಿದೆ" ಎಂದು ಪೀಠಿಕೆ ಹಾಕಿ ತ
ಪ್ರಸಂಗಗಳನ್ನು ಪ್ರಾರಂಭಿಸುವರು. ಆದರೆ ರೈಲುಗಾಡಿಯ ಪ್ರಯಾಣ ಸಾವಧ
ವಾಗಿ ಸಾಗಿದರೂ ಸ್ವಾರಸ್ಯವಾಗಿರುವುದನ್ನು ಮರೆಯುವಂತಿಲ್ಲ. ಚಂಪೂ ಕಾವ್ಯದಲ್ಲಿ
ಪದ್ಯಗಳೆರಡೂ ಅಕ್ಕತಂಗಿಯರಂತೆ ಅಚ್ಚುಮೆಚ್ಚು. ನಯಾಗರ ಜಲಪಾತದ ಮು
ನಿಂತಾಗ ಜೋಗದ ಜಲಪಾತದ ನೆನಪು ಆಗುವುದು ಅಭಿಮಾನಿಯಾದ ಭಾರತೀ
ನಿಗೆ ಸ್ವಾಭಾವಿಕವಷ್ಟೆ. ಆ ಎರಡರ ಅಂತರ ಅವರನ್ನು ಮನಸೆಳೆಯುವುದು.

ಅಕ್ಕ ನೀನು ಶರಾವತಿಗೆ.
ತಂಗಿಗಿಲ್ಲವೀ ಬಿತ್ತರ.
ಆದರೂ ನಯಾಗರ! ಇಲ್ಲ ತಂಗಿಗಿದ್ದೆತ್ತರ!
ಶರಾವತಿಯ ಉದಕ ದಿವ್ಯ.
ಅಲ್ಲವು ನಿನಗಿಂತ ಭವ್ಯ:
ಆದರುಗ್ರತರ ಪ್ರಶ್ನೆಗೆ ಕೊಡುವಳಾಳದುತ್ತರ.

(ಪು. ೧೩೩)

ದೇಶ ವಿದೇಶಗಳ ಜಲಪಾತಗಳನ್ನು ಅಕ್ಕತಂಗಿಯರೆಂದು ಕರೆಯುವುದರಲ್ಲಿ ಕವಿಯ
ಯ ವೈಶಾಲ್ಯವನ್ನೂ, ವಿಶ್ವವಿಸ್ತಾರವಾದ ದೃಷ್ಟಿಯನ್ನೂ ಕಾಣಬಹುದು. ಎರಡರ
ಕ್ಕೂ ಮಾರುಹೋಗುವ ಮನೋಧರ್ಮ ಮೆಚ್ಚುವಂತಹುದು.
ಮೇರಿಕ ದೇಶದ ಔದ್ಯೋಗಿಕ ಜೀವನದ ಸ್ವರೂಪವನ್ನೂ ಯಂತ್ರಗಳ ಮೇಲುಗೈ
ನ್ನೂ ಮೇಲಿಂದ ಮೇಲೆ ವಿವರಿಸಿರುತ್ತಾರೆ. ಎಲ್ಲ ಅನುಕೂಲಗಳನ್ನೂ ಒಳಗೊಂಡಿ
ರೈಲ್ವೇ ಗಾಡಿಯ ರೂಮೆಟ್ಟಿನ ಅಚ್ಚುಕಟ್ಟನ್ನು ಮೆಚ್ಚಿಕೊಂಡು

ಅನಂತವನಂಗೈಯೊಳೆತ್ತಿ ಹಿಡಿವನು ಕವಿಯು.
ಕಿರುಗೋಣೆ—ಇವರಲ್ಲಿ ರಾಜಮಹಲು!
ಇದುವೆ ಭೂಕೈಲಾಸದೊಂದು ಭೌತಿಕ ಭಾಗ.
ಮನೆಯೆನಿಸುತಿದೆ. ಆದರಿಹುದು ರೈಲು.

(ಪು. ೧೪೪)

ು ಬೆರಗಾಗುವರು. ಆದರೆ ಕವಿಯ ಚೇತನ ಬೆರಗಿನಲ್ಲಿಯೇ ವಿಶ್ರಾಂತವಾಗುವು
ಮರುಗಳಿಗೆಯಲ್ಲಿಯೇ ವಿವೇಕವೂ ಅರಳಿ

ನನ್ನದೊಂದರಿಕೆಯಿದೆ ನಿನಗಿಲ್ಲಿ, ರೂಮೆಟ್ಟೆ!
ಕೆಡದಿರು—ಪ್ರವಾಸ ನಡೆದಿರುವ ಸಮಯ.
ನೀ ಕೆಡಲು ನಿನ್ನೊಳಿರುವಂಥ ನಾನೂ ಕೆಟ್ಟೆ.
ನಿನ್ನ ಮೈತ್ರಿಯಲಿಹುದು—ಏಕಮಾತ್ರ ಭಯ!

(ಪು. ೧೪೫)

ಂಬ ಎಚ್ಚರಿಕೆಯ ಸೊಲ್ಲನ್ನೂ ಆಡುತ್ತವೆ.
ಮೇರಿಕಾ ದೇಶದ ಶ್ರೀಮಂತ ವೈಭವವನ್ನು ನೋಡಿದಾಗ ಅದರ ಸಾಧಕ ಬಾಧಕ
ಅವರನ್ನು ಪ್ರಶ್ನೆಗೀಡುಮಾಡುವುವು.

"ಶ್ರೀಮಂತಿಕೆಯ ಈ ದೇಶದಲ್ಲಿ ವ್ಯಕ್ತಿಯ ಏಕಾಂತವೇ ಮಾಯವಾಗುವ
ತಿ ಬಂದಿತ್ತು. ಮನೆಯಲ್ಲಿ, ಮಲಗುವ ಕೋಣೆಯಲ್ಲಿ, ಕೂತಲ್ಲಿ, ನಿಂತಲ್ಲಿ

ಇಂತಹ ಯಾಂತ್ರಿಕ ಪಾತ್ರ ಸಂಸಾರಕ್ಕಿಂತ ನಿಕಟವಾಗಿ ನಮಗೆ ಗಂಟುಬಿದ್ದ ಮುಂದೇನು ಗತಿ? ವ್ಯಕ್ತಿಯ ಮನೆಯೇ ಅವನ ಏಕಾಂತದ ರಮ್ಯಸ್ಥಾನ. ಪ್ರ ಯೊಂದು ಮನೆ ಈಗ ಸಾರ್ವಜನಿಕ ವ್ಯವಹಾರದ ಕಟ್ಟೆಯಾಗಿತ್ತು. ನಾಗರಿಕತೆಯ ಸಂಸ್ಕೃತಿಯನ್ನು ಹೊಡೆದೋಡಿಸುವುದರಲ್ಲಿತ್ತು. ಬಡತನದ ಭೂತ ನಮ್ಮ ಜನ ಯನ್ನು ತೊಳಲಾಡಿಸುತ್ತಿದ್ದರೆ ಶ್ರೀಮಂತ ಯಾಂತ್ರಿಕ ಪಿಶಾಚಿ ಈ ದೇಶಕ್ಕೆ ಗಂಟ ಬಿದ್ದಿತ್ತು" (ಪು. ೧೪೬).

ಶ್ರೀಮಂತಿಕೆಗೆ ಹೊಂದಿಕೊಂಡ ಯಾಂತ್ರಿಕ ಜೀವನದ ಗುಣ ದೋಷಗಳ ಪೃಥಕ್ಕರ ಮನವೊಲಿಸುವಂತಿದೆ. "ಅಷ್ಟ ದಿಕ್ಪಾಲಕರ ದೃಷ್ಟಿ ತಪ್ಪಿಸಿ ತಂದ ಇಂದ್ರಗನ್ನಡಿ ತುಂಡು ಎಂದು ಟಿ. ವಿ. ಸೆಟ್ಟನ್ನು ಬಣ್ಣಿಸಿ, ಅದರ ಪ್ರಚಾರವೃಷ್ಟಿಯನ್ನು ವ್ಯಾಪಾರ ಮನೋ ಧರ್ಮವೆಂದು ಟೀಕಿಸುವರು. ಫೋರ್ಡ್ ಕಂಪೆನಿಯಲ್ಲಿನ ಕಾರು ತಯಾರಿಕೆಯನ್ನು ವಿವ ವಾಗಿ ವರ್ಣಿಸಿ "ಇದುವೆ ವಿಶ್ವಾಮಿತ್ರ ಸೃಷ್ಟಿ. ಯಂತ್ರದ ಲೋಕ....ಪೈಶಾಚ್ಯಯೋ ಯಲಿ ಜನಿಸಿರುವ ಮಾಂತ್ರಿಕನು ನಾಡಗೆಯ್ಮೆಕ್ಕೆಂದು ಸಾಧಿಸಿದ ವಿಜ್ಞಾನ. ಯಂತ್ರಗಳ ವಿದರ ಕಣದೊಳು ದುಡಿವ ಕಾರ್ಮಿಕನು ಪಿಶಾಚಿಗೋತ್ರದಾ ನರಪ್ರಾಣಿಯಾಗಿರು ಕೊಳಿಯಲಚ್ಚರಿಯೇನು? ವಿಶ್ರಾಂತಿ-ವಿದ್ಯೆಗಳು ಸಮೃದ್ಧಿಯನು ತಂದುದಿಲ್ಲ ಜೀವ ನಲ್ಲಿ. ವರುಷಕೊಂದು ನಮೂನೆಯನ್ನಿತ್ತ ಸ್ಪರ್ಧೆಯಿದು-ವೈಶ್ಯನುತ್ಪಾದನೆಯ ಉನ್ಮಾದ....ವ್ಯಾಪಾರಕಲ್ಲ, ಜನದಾನಂದ-ಶಾಂತಿಗಳ ಚೊಕ್ಕ ಸಾಧನವಾಗಿ ಹುಟ್ಟಿ ಬಂದಿರೆ ಕಾರು, ಕಾರ್ಮಿಕನ ದುಡಿಮೆಯದು ಕ್ಷಮ್ಯ; ಉತ್ಪಾದನೆಯ ಶ್ರಮ ರಮ್ಯ: ಇಲ್ಲದಿರೆ ಅಕ್ಷಮ್ಯ ಅಪರಾಧ ಕಾರು ಸೃಷ್ಟಿಯಿದೆಲ್ಲ-ವಿಷಮತೆಯ ಬೇರು! (ಪು. ೧೫೦-೧೫೧) ಎಂದು ಬಿಡಿಸಿ ಹೇಳುವರು. ಅಧಿಕಸಂಖ್ಯೆಯ ಕಾರುಗಳಿಂ ಅಮೇರಿಕಾದವರಿಗೆ ಆಗಿರುವ ಸಮಸ್ಯೆಯನ್ನೂ ಇಷ್ಟೇ ಅರ್ಥವತ್ತಾಗಿ ನಿರೂಪಿಸಿರುವರ "ಕಾರಿದ್ದರೇನಾಯ್ತು? ಪಾರ್ಕಿಸಲು ಸ್ಥಳವೆಲ್ಲಿ? ತೃಪ್ತಿಗಂಟದೆ ಅವರ ಮುಂದಿನ ದೂರು" ಎಂಬ ಹೇಳಿಕೆ ವಿಚಾರಾರ್ಹವಾದದ್ದು.

ಭಾರತದಲಿ ಜನಸಂಖ್ಯೆ ಬೆಳೆವುದೆಂದು
ಚಿಂತಿಸುವೆವು ನಾವು.
ಅಮೇರಿಕೆಯಲಿ ಯಂತ್ರಸಂಖ್ಯೆ ಮಿಕ್ಕಿ
ಹೊಸದಾದರಿ ನೋವು!

ಉತ್ಪಾದನೆಯಾಗಿದೆ ಉತ್ಪಾತ,
ವ್ಯುತ್ಪತ್ತಿಯೆ ಆಪತ್ತು.
ಯಾವ ಪ್ರಳಯದೆಡೆ ಯಂತ್ರಾಸುರನೆಳೆವ?
ಓ! ಯಾರಿಗೆ ಗೊತ್ತು?

(ಪು. ೧೬೧)

ಯಂತ್ರಮಯವಾದ ಜಗತ್ತಿನಲ್ಲಿ ಗ್ರಾಮ ಜೀವನವನ್ನು ಪ್ರತಿಬಿಂಬಿಸುವ ಒಂದು ತಕಗ್ರಾಮವನ್ನು ರೂಪಿಸಲಾಗಿದೆಯಂತೆ. ಅದನ್ನು ವಿವರಿಸಿರುವ ವಿನಾಯಕರ ಖು ವಿಶಿಷ್ಟವಾಗಿದೆ.

ಇದುವೆ ಮಾದರಿ ಗ್ರಾಮ : ವರ್ತಮಾನದಲಿದು
ಭೂತಕಾಲದ ಬಗೆಯ ತೆರೆಯುತಿಹುದು ;
ಹಿಂದೊಮ್ಮೆ ಜೀವನವ ಶ್ರೀಮಂತವಾಗಿಸಿದ
ಕೀರ್ತಿಶೇಷರ ಬಾಳನೊರೆಯುತಿಹುದು

ನಾಡ ಹಿರಿಮೆಯ ಸಾರ, ಅದರ ಮುತ್ತಿನ ಹಾರ
ಈ ತಾಣದಲ್ಲಮರವಿಹುದು ಪೂರ ;
ರಾಜ್ಯ ಮುನ್ನಡೆದಂತೆ ಮರೆತಿಲ್ಲವಾಸ್ತಿಯನು ;
ನೆನಹು ಮಲರುವ ಹಸಿರು ; ನೋಡ ಬಾರ !

ಅಂತೇ ಕರೆದಿಹರಿದನು "ಹಚ್ಚಹಸಿರಿನ ಹೊಲದ
ಹಳ್ಳಿ !" ಬರದೆಂದಿಗೂ ಕುಳಿರಕಂದು
ಅಂದಿನಾ ಬಾಳು ಮುಗಿದಿಲ್ಲವಂದಿಗೆ ನೋಡು :
ಸ್ಫೂರ್ತಿಯಾಗರವಾಗುತೆಸೆವುದಿಂದು !

(ಪು. ೧೬೩)

ಈ ಗ್ರಾಮಜೀವನ ಪ್ರೇಮವನ್ನು ಎಷ್ಟು ಕೊಂಡಾಡಿದರೂ, ಅಮೇರಿಕದವರ ಯಂತ್ರ ಸ್ಯಕ್ಕೆ ಲೇಖಕರು ಪಶ್ಚಾತ್ತಾಪವನ್ನು ವ್ಯಕ್ತಪಡಿಸುವರು.

ಅಮೇರಿಕಾ ದೇಶದ ಮಹಿಳೆಯ ಜೀವನದ ಯಾಂತ್ರಿಕತೆಯನ್ನು ಕಂಡಾಗಲೂ ಕವಿಗೆ ಂಬ ಯಾತನೆಯಾಗುತ್ತದೆ.

ನಸುಕಿನಲಿ ತೆರಳಿ ಸಂಜೆಗೆ ಮನೆಗೆ ಬರುವನಕ
ಮನೆಬಾಗಿಲಕ್ಕೆ ಕೀಲಿ.
ಬಾಲಕರು ಶಾಲೆಯಲಿ ; ಗಂಡನು ಕಚೇರಿಯಲಿ,
ಮನೆ ಕಾಯುತಿಹುದು ಬೇಲಿ ;
ಅವರವರ ಊಟ ಅವರಿದ್ದಲ್ಲಿ, ನಿನ್ನೂಟ
ಆಫೀಸಿನೊಂದು ಮೂಲಿ,
ಇಲ್ಲ ಕ್ಯಾಫಿಟೇರಿಯ. ಮತ್ತೆ ಬೇಕಿಹುದೇನು ?
ಸರ್ವ ಸ್ವತಂತ್ರಳಾಗಿ
ಬಾಳ ಮೈದಾನದೊಳಗೋಡಾಡಿ ಪತಿಯಂತೆ
ನೀ ನಿಂತೆ ತಲೆಯ ತೂಗಿ
ಈಕ್ಷಕರ ಕಣ್ಣಿನಲಿ ದೀಪ ಹಚ್ಚಿದ ಹಾಗೆ
ಮೆರೆದಿಹೆ ವಿಲಾಸಿ, ಭೋಗಿ.

(ಪು. ೧೬೭)

ಗಂಡು-ಹೆಣ್ಣಿನ ವೋಜಿನ ಬದುಕಿನ ಹಲವಾರು ಸಮಸ್ಯೆಗಳನ್ನು ಲೇಖಕರು ಪ್ರಸ್ತಾಪಿ
ಹೆಣ್ಣಿನ ಬಗ್ಗೆ ಅತ್ಯಂತ ಕನಿಕರದಿಂದ

ಬುದ್ಧಿಜೀವನಕೊಣಗದಿರಲಿ ನಿನ್ನೀ ಮೈಯು ;
ಬುದ್ಧಿಜೀವಿಯ ವ್ಯಸನ ನಿನ್ನಲಿ ಬಲಿದು
ಆಗದಿರು ನೀ ವಿವಿಧ ರೋಗಗಳ ತವರು ಮನೆ ;
ಸ್ವರ್ಗವಿಳಿಯದು ನೀನು ಟೈಪಿಸಲು ನಲಿದು ;
ನೆನೆ—ಪೂರ್ಣದೃಷ್ಟಿಯಿರುವಲ್ಲಿ ಸುಖವಿಹುದೆಂದು ;
ಬಾಳು ಬಾಳಿನ ಪೂರ್ಣ ವರ್ಣಕೊಲಿದು.

(ಪು. ೧೬೯)

ಎಂದು ಸಾರಿ ಹೇಳುವರು.

ಮರಳುಗಾಡನ್ನು ಫಲವತ್ತಾದ ಬೀಡನ್ನಾಗಿ ಮಾರ್ಪಡಿಸಿರುವ 'ಸಾಲ್ಟ್ ಲೆ
ಸಿಟಿ'ಯ ಮಾನವರ ಶ್ರದ್ಧೆ, ಸಾಹಸ, ಸಹನೆಗಳನ್ನು ಕಂಡಾಗ ಕವಿಯ ಹೃದ
ಪುಳಕಿತವಾಗುವುದು.

ಅಪಾರ ಸಹನೆ, ಅಪಾರ ಶ್ರದ್ಧೆ,
ಬಟ್ಟದೆದೆಯ ಕೆಚ್ಚು
ಇಷ್ಟಿರೆ, ಇಂದ್ರ-ಮಹೇಂದ್ರರ ಗೆಲುವುದು
ನರನಿಗಲ್ಲ ಹೆಚ್ಚು.

(ಪು. ೧೭೭)

ಈ ಸ್ತುತಿ ಮಾನ್ಯವೇ ಸರಿ.

ಆದಿವಾಸಿಗಳ ಮುಗ್ಧ ಮಕ್ಕಳನ್ನು ಆಕರ್ಷಿಸಿ ತಮ್ಮ ತಮ್ಮ ಮತಕ್ಕೆ ಪರಿವರ್ತಿ
ಕೊಳ್ಳುವ ಪಾದ್ರಿಯ ವರ್ತನೆಯನ್ನು ಲೇಖಕರು ತೀಕ್ಷ್ಣವಾಗಿ ಖಂಡಿಸಿರುವುದಲ್ಲದೆ
ಮಕ್ಕಳ ಏಳಿಗೆಗಾಗಿ ತುಂಬ ಹಂಬಲಿಸಿರುತ್ತಾರೆ. ಈ ವಿದ್ಯಾಸ್ಥಾನದ ವಿವರಣೆ ಇಂ

"ಈ ವಿದ್ಯಾರ್ಥಿಗಳ ಧರ್ಮ, ಮತಗಳ ವಿಚಾರವೇನು ? ಆ ವಿಚಾರ ಹೀಗೆ :
ಬೇರೆ ಮತಗಳ ಪಾದ್ರಿಗಳು ಹೋಗಿ ತಾಯಿತಂದೆಗಳ ಮನವೊಲಿಸಿ ಈ ಹು
ರನ್ನು ಶಾಲೆಗೆ ಕರೆದು ತರುತ್ತಾರೆ. ಯಾವ ಪಾದ್ರಿಯು ಕರೆದು ತಂದನೋ ಅ
ಮತವೇ ಆ ವಿದ್ಯಾರ್ಥಿಯದೆಂದು ಶಾಲೆಯ ರಿಜಿಸ್ಟರದಲ್ಲಿ ಬರೆಯಲಾಗುತ್ತದೆ. ಅ
ನಿಂದ ಅವನ ದಡ್ಡಿಗೆ ಒಂದು ಕುರಿ ಹೆಚ್ಚಾದಂತೆ. ಹೀಗಾಗಿ ಕೆಥೊಲಿಕ್, ಮೆಥಡಿ
ಮೊದಲಾದ ಕ್ರಿಸ್ತೀಯ ಪಂಗಡಗಳ ನಡುವೆ ಒಂದು ಜನಗಣತಿಯ ಸ್ಪರ್ಧೆ ಬಿ
ಯೆಂದೇ ಹೇಳಬೇಕು. ಒಂದು ಕುಟುಂಬದಲ್ಲಿ ಜನಿಸಿದಮಾತ್ರಕ್ಕೆ ಮಗುವನ್ನು
ಕುಟುಂಬದ ಮತ-ಧರ್ಮಗಳು ಬಂದು ಆವರಿಸುವವು. ಧರ್ಮದ ಹೆಸರಿನಲ್ಲಿ ಆ

ಅಧರ್ಮಗಳಲ್ಲಿ ಇದು ಪ್ರಪ್ರಥಮವಾದುದು. ಅವರೆ ಶಾಲೆಗೆ ಕರೆದುಕೊಂಡು ಹೋದವರೇ ಧರ್ಮಗುರುಗಳಾಗುವುದು ಇಂತಹ ಅಧರ್ಮಕ್ಕೆ ಕಳಸ ಇಟ್ಟಂತೆಯೇ ಸರಿ." (ಪು. ೧೭೮)

ಅಜ್ಞಾನಿಗಳಿಗೆ ಆಸೆ ಆಮಿಷಗಳನ್ನು ತೋರಿ ಹೀಗೆ ಬಲಿಗೆ ಹಾಕಿಕೊಳ್ಳುವುದು ಂತಹ ಮಾನವಧರ್ಮ? ಆ ಮಕ್ಕಳ ಮುಖವನ್ನು ಕಂಡಾಗ ಮೂಡಿಬರುವ ಮಾತು ಳು ಬಹಳ ಮೊನಚಾಗಿವೆ.

ನಿಮ್ಮ ಹೊಲಗಳಲಿ ಬೇರೆ ಹಲಗಳುತ್ತಿ
ಬಾಳ ಝರಿ ಬತ್ತಿ
ಆಯಿತು ಮೇಡಿದು ಕಾಡು,
ಅನ್ಯರ ಸಿರಿವೀಡು.
ನಿಮ್ಮಳಲಿನ ಹಾಡು!
ಚಿಗರೆಗಂಗಳಿವು ತೆರೆದಿಹ ಕವಡೆ!
ಯಾವ ದಿಕ್ಕಿಗೋಡಿದರು ಯಮನ ದವಡೆ!!
ನಿಮ್ಮ ಶೋಕಜಲ ಹರಿದಿತು ನದಿಯಾಗಿ
ವಿಜ್ಞಾನದ ಯುಗ ಬಂದಿತು ವಿಧಿಯಾಗಿ.
ಕಾಡುಮೇಡುಗಳನಲೆದವರು,
ಸಂತರ ಹರುಷಿಸಿ ನಲಿದವರು,
ನಿಸರ್ಗಮಾತೆಯ ಪದತಲಕೊಲಿದವರು,
ಬಂದ ಶತ್ರುವನು ಸೆಣಸುತ ಮಾರ್ಮಲೆದವರು!
ನೀವಾದಿರಿ ದಿಗ್ಗೇಡಿ
ನಿಂತಿರಿ ದುರ್ಮರಣದ ಹಾಡನು ಹಾಡಿ.
ಓ ಮಕ್ಕಳಿರ!
ಓ ಎಳೆಮಕ್ಕಳಿರ!!

(ಪು. ೧೭೯)

ಪರರ ಆಕ್ರಮಣಕ್ಕೆ ಗುರಿಯಾದ ಜನತೆಯ ಬಗ್ಗೆ ಕವಿಹೃದಯ ಹೀಗೆ ಕರಗುವುದು ್ವಾಭಾವಿಕ. ಆ ಮಕ್ಕಳ ಭವಿಷ್ಯವನ್ನು ಚಿಂತಿಸಿ ಶುಭವಾಗಲೆಂದು ಹಾರೈಸುವರು.

ಆಗಿರಿ ಯಂತ್ರರ್ಷಿ, ರಸರ್ಷಿ, ಮಂತ್ರರ್ಷಿ!
ಕವಿ, ವೈಣಿಕ, ಗಮಕಿ!
ಕೀರ್ತಿಪತಾಕೆಯ ಮುಗಿಲಿಗೇರಿಸಿರಿ
ಬಾಳ್ಗಡಲೊಳು ಧುಮುಕಿ!
ಪಾದ್ರಿ ಹೊರಿಸಿದೀ ಮತ ತಲೆಭಾರ.
ಉರುಳಿಸಿರಿ ತಲೆ ಕೊಡವಿ!
ಅಂತರಂಗದಾಳದಿ ಮಿಂದರಿಯಿರಿ

ನಿಧಾನವನ್ನೆಡವಿ.
ದೃಗ್ಗೋಚರವಿಹುದೆಂದು ಬಾಳ ತಿರುಳು.
ಅದುವೆ ನೈಜಧರ್ಮ.
ಕೃತಿಯೊಳೆಸೆಯುವದು—ಖೇಚರ ಭೂಚರವಿದ್ಯೆ,
ಸಪ್ತಕಲೆಯ ಮರ್ಮ.
ಓ ಎಳೆಮಕ್ಕಳಿರ!
ಮುನ್ನಡೆಯಿರಿ! ದಾರಿಯಿದೋ ಅತಿದೂರ
ಬನ್ನಿ ಮುಂದೆ ಮುಂದೆ!

(ಪು. ೧೮೧)

ವಿದೇಶೀಯ ವಿದ್ವಾಂಸರ ಮಧ್ಯೆ ತಾವು ಕಳೆದ ರಸನಿಮಿಷಗಳನ್ನು ಚಿತ್ರಿಸುವುದ
ವಿನಾಯಕರದು ಅನನ್ಯವಾದ ಶೈಲಿಯಷ್ಟೆ. ಅದು ಗದ್ಯವೇ ಆಗಲಿ, ಪದ್ಯವೇ ಆಗಲಿ, ಹೃ
ವಾಗಿರುತ್ತದೆ ಎನ್ನುವುದರಲ್ಲಿ ಸಂದೇಹವಿಲ್ಲ. ಫಿಸ್‌ಲಿನ್ ಮತ್ತು ಮೋಲ್ಡರ್ ದಂ
ಗಳ ಜೊತೆಯಲ್ಲಿ ಅವರು ಆನಂದಿಸಿದ ಸಂದರ್ಭವನ್ನು ಬಹಳ ಜೀವಂತವಾಗಿ ಚಿತ್ರಿಸಿ
ತ್ತಾರೆ. ಇಲ್ಲಿನ ಗದ್ಯಭಾಗ, ಸರಳವೂ, ಸ್ವಾರಸ್ಯವೂ ಆಗಿರುವುದಲ್ಲದೆ ವಿಚಾರಪ್ರದ
ಆಗಿದೆ. ಸಾಹಿತ್ಯ ಸಂಬಂಧವಾದ ಅನೇಕ ಸಂಗತಿಗಳು ಹಾಸುಹೊಕ್ಕಾಗಿ ಹೆಣೆ
ಕೊಂಡಿವೆ. ಪರಸ್ಪರ ಅಭಿಪ್ರಾಯ ವಿನಿಮಯವಿದೆ; ಸಾಹಿತ್ಯ ಸಲ್ಲಾಪವಿದೆ. ಸಮ
ಧರ್ಮವುಳ್ಳ ಸಾಹಿತಿಯೊಬ್ಬನನ್ನು ಸಂದರ್ಶಿಸಿದಾಗ ಲೇಖಕರ ಹೃದಯ ಉಬ್ಬುತ್ತ
ಆ ಹಿಗ್ಗು ಹಾಡಾಗಿ ಮೂಡಿರುತ್ತದೆ.

ಶ್ರೀ ಬ್ರೂಸ್ಟರ್ ಫಿಸ್ಲಿನ್ ಕವಿಮಿತ್ರರಿಗೆ

ನಾ ನನ್ನ ಪಂಜರದಿ, ನೀ ನಿನ್ನ ಪಂಜರದಿ
ನೋಡಿದೆವು ಗೋಣು ಚಾಚಿ.
ಮನಕೇನೋ ಹೊಳೆದಿತ್ತು, ಒಳಗೊಳಗೆ ಕಳೆದಿತ್ತು,
ಉಕ್ಕಿ ತಾ ಹೃದಯ ವೀಚಿ.

(ಪು. ೧೮೯)

ಪಂಜರದಲ್ಲಿ ಸೆರೆಯಾಗಿದ್ದ ಈರ್ವರ ಮನಸ್ಸೂ ಬಿಡುಗಡೆಯನ್ನು ಪಡೆದು ಪರಸ
ಪ್ರೀತಿಯಿಂದ ವಿಹರಿಸಿ ಬಂದವು. ಆಗ ಅವರಿಗೆ ಆದ ಆನಂದ ಹೇಳತೀರದು. ಪೂ
ಸ್ಥಿತಿಗೆ ಬಂದು ನೆಲದ ಮೇಲೆ ನಿಂತ ಬಳಿಕ, 'ಬದುಕಬೇಕೆಂದವಗೆ ಏಕೆ ಪಂಜರ ಗೂಡು
ಎಂದು ಹೃದಯ ಮಿಡಿಯಿತಂತೆ. ಇದೇ ರೀತಿಯ ಸೌಭಾಗ್ಯವನ್ನು ಒದಗಿಸಿಕೊ
ಮೋಲ್ಡರ್ ದಂಪತಿಗಳನ್ನು ಕುರಿತು

ಜನತೆ-ಜನತೆಯ ನಡುವೆ ಇರಲಿಂಥ ಸ್ನೇಹ
ವಸುಧೆಯಿದು ಮನುಕುಲದ ಅವಿಭಕ್ತ ಗೇಹ!

ಮಲ್ಲಿಗೆಗಳರಳಿರಲಿ ನಿಮ್ಮ ಪಥಕೆ,
ಇರಲೀಶ ಕರುಣೆ ಸಾರಥಿ ನಿಮ್ಮ ರಥಕೆ !

(ಪು. ೧೯೦)

ಂದು ತನ್ನು ಧನ್ಯವಾದವನ್ನು ಸಮರ್ಪಿಸುವರು.

ಸ್ಯಾನ್ ಫ್ರಾನ್ಸಿಸ್‌ಕೋ ಪಟ್ಟಣಕ್ಕೆ ಹಾದುಹೋಗುವ 'ಫೆದರ್ ರಿವರ್ ವ್ಯಾಲಿ' ಯನ್ನು ಕಂಡಾಗ ಮೈಯುಬ್ಬಿ

ಮೈತುಂಬ ಪೈನುವೃಕ್ಷದ ಪುಳಕವೆದ್ದು
ಗಗನಚುಂಬಿ ಪರ್ವತಶಿಖರಗಳ ನಡುವೆ
ಮಂದಧಾರೆಯಾಗಿ ಮಂಜುಳವಾಗಿ
'ಗರಿ' ಹೊಳೆ ಹರಿದು ಹೊಳೆಯುವುದು ನೋಡಾ !
ಪರ್ವತಶ್ರೇಣಿಯನ್ನು
ಯುಗಯುಗಗಳ ಪರ್ಯಂತ
ನೀರಿನ ಕರಗಸದಂತೆ ಕೊರೆದು ಹಾಕಿದೆ ನೋಡಾ !

(ಪು. ೧೯೧)

ಂದು ವರ್ಣಿಸಿ, ಅನಂತರ ಆ ಪಟ್ಟಣದ ಪ್ರಕೃತಿ ಸೌಂದರ್ಯ, ಸಂಸ್ಕೃತಿ ಸಮನ್ವಯ, ಶ್ವೇತಪ್ರಭೆಗಳನ್ನು ಬಹಳ ಅಮೋಘವಾಗಿ ಚಿತ್ರಿಸಿರುವರು.

ಕಟ್ಟಿರುವ ಮನೆಯಲ್ಲ ಕಡಿದಿರುವ ದಾರಿಯಲ್ಲ
ಬೆಟ್ಟದಲ್ಲಿಯೆ ಕೊರೆದ ಗವಿಯಂತೆ ನಿನ್ನರಮನೆ ;
ನೀಳ್ದ ಶಿಲೆಗಳೆ ನಿನ್ನ ಶ್ವೇತ 'ಸ್ಕೈ' ಸ್ಕ್ರೇಪರುಗಳು ;
ಶಿಲಾಖಂಡ ಮನೆ ; ಶಿಲಾವ್ಯೂಹವೇ ಹರ್ಮ್ಯದ ಗೊನೆ !
ಪರ್ವತವೆ ನಿನಗಾಯಿತಿದು ಪದ್ಮಸದನವರಳಿ
ನಗರಲಕ್ಷ್ಮಿಯು ನೀನು ನೆಲೆಸಲೆನೆ ಬರುವಿಯೆಂದು ;
ಉಪಸಾಗರವೆ ನಿನಗೆ ಸ್ವರ್ಣ ಸೇತುವೆಯಾಯಿತು.
ಜಗದೊಳಿಹ ಮುತ್ತು ರತುನವನಿಲ್ಲಿ ತರುವಿಯೆಂದು.

ರೋಮುದಂತೆಯೆ ನೀನು ಹರವಿರುವಿ ಬೆಟ್ಟದಲ್ಲಿ ;
ಪ್ಯಾರೀಸಿನಂತೆ ತುಳುಕುವುದು ಮಾನವ ವಿಲಾಸ ;
ಲಂಡನ್ನಿನಂತಿಲ್ಲಿ ಜನ–ಜನಾಂಗದ ಸಂಗಮ ;
ಟೋಕಿಯೋದೊಲು ನಿನ್ನ ರಾತ್ರಿಗಳ ಇಂದ್ರಹಾಸ.
ಅಲ್ಜೀಯರ್ಸ್‌ದೊಲು ಹೊಳೆವೆ ನೀ ಸೂರ್ಯಕಿರಣದಲ್ಲಿ,
ದಿಲ್ಲಿ–ಇಸ್ತಾಂಬೂಲ ಥಾಳಯಿಸಿ ಹೊಳೆಯುವಂತೆ ;
ಶ್ವೇತಪ್ರಭೆ ಘನವಾಗಿ ಪರ್ವತದಿ ನೆಲೆಸಿದಂತೆ
ಲಕ್ಷಮುಂದಿರವಾಗಿ ; ಚಂದಿರನು ಮೊಳೆಯುವಂತೆ !

(ಪು. ೧೯೪)

ಈ ವರ್ಣನಾ ವೈಭವ ಉಜ್ವಲವೆನ್ನಿಸುತ್ತದೆ. ಲೇಖಕರ ಸ್ವಾನುಭವ ಇಲ್ಲಿ ಅ ವತ್ತಾಗಿ ಹೊಂದಿಕೊಂಡು ಬಂದಿದೆ. ಹೇಳಿರುವ ರೀತಿಯಂತೂ ನೂತನವಾಗಿದೆ. ಕವಿ ಗುರಿ ಓದಿದ ಕೂಡಲೆ ಗ್ರಾಹ್ಯವಾಗುತ್ತದೆ. ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ಅವರು ನಡೆ ಸಂಭಾಷಣೆ, ಸಹೃದಯರ ಭೇಟಿ ಮೊದಲಾದ ಇತರ ಪ್ರಸಂಗಗಳನ್ನು ಕುರಿತ ಭಾಗಗಳೂ ಸಹ ಉದ್ಬೋಧಕವಾಗಿವೆ.

ಅಮೇರಿಕಾದೇಶದ ಮಹಿಳೆಯ ಕೃತಕಸೌಂದರ್ಯವನ್ನು ಲೇಖಕರು ಬಹು ಚ ತ್ಕಾರವಾಗಿ ಚಿತ್ರಿಸಿ, ಕಡೆಯಲ್ಲಿ

ಮೋಹಿನಿಯೆ ! ನಿರ್ಧರಿಸು ಸಮ್ಮೋಹನಾಸ್ತ್ರದೊಲು
ನರನ ಭೋಗಕ್ಕೆಳೆದು ವಾಸನೆಗೆ ಸೋತು
ಪ್ರಳಯಕಾರಿಣಿಯಾಗುವಿಯಾ ? ಇಲ್ಲ—ವಿಷ್ಣುವೊಲು
ದೈತ್ಯರನು ಸಂಹರಿಸಿ ಸುರರನುಳಿಸುವಿಯಾ ಓತು ?

(ಪು. ೨೧೧)

ಎಂದು ಪ್ರಶ್ನೆ ಮಾಡಿರುವುದು ಧ್ವನಿಪೂರ್ಣವಾಗಿದೆ.

ಕಾಲನನ್ನು ಮೂದಲಿಸುವಂತೆ ಮುಗಿಲೆತ್ತರ ಬೆಳೆದು ನಿಂತಿರುವ ಮಹಾವೃಕ್ಷ ಪ ಗಳನ್ನು ಕಂಡಾಗ ಕವಿಯ ಭಾವ ತುಂಬುಮೊನಲಾಗಿ ಪ್ರವಹಿಸುತ್ತದೆ. ಒಂದು ಅವುಗಳನ್ನು ಕುರಿತು

ಓ ಸನಾತನ ವೃಕ್ಷರಾಜ ನೀಹಾರಿಕೆಯೆ !
ಯುಗಯುಗಗಳುರುಳಿದವು ಸಮುದ್ರಾಧಿಪತ್ಯವದು
ನೌಕೆಯಿಂದನ್ಯ ನೌಕಾದಲಕೆ ಸೇರಿಹುದು.
ಹುಡಿಮಣ್ಣು ಮುಕ್ಕಿದರು ಸಾರ್ವಭೌಮರು, ರಾಜ-
ವಂಶಗಳು ತೆರಳಿದವು ಬಿಳಿಹಸಿರು ಕಾಗದದೊಲು !
ನೀವಿಲ್ಲಿ ನಿಂತಿಹಿರಿ.
ಕುಟುಂಬದೊಲು ಹೊಂದಿಕೊಂಡು ನಿಂತಿಹರಿಲ್ಲಿ
ಎರಡು ಸಾವಿರ ವರುಷ ! ಕುಂದಿಲ್ಲ ಬಾಳುವೆಗೆ,
ನಿಂತು ಬೀರಿದಿರಿಲ್ಲಿ ನಿಮ್ಮ ಸೌಗಂಧವನು,
ನಿಂತು ಹರವಿದಿರಿ ಶೀತಲ ಛಾಯೆಯಂದವನು.
ನಿಂತಿಹಿರಿ. ನೀವ್‌ನಿಂತಿರೆಂದು ನಿಂತಿಹೆವಾವು
ನಿಮ್ಮಡಿಯೊಳರ್ಭಕರು ತೊಣಗೊಂಡು !

(ಪು. ೨೧೨)

ಎಂದು ಪ್ರಶಂಸಿಸಿಪರೆ, ಮತ್ತೊಮ್ಮೆ ಅವುಗಳ ಪರಸ್ಪರ ಸಂಭಾಷಣೆಯನ್ನು ಕೇಳಿದವರಂತೆ, ಅವುಗಳ ಮಾತನ್ನೇ ನಮ್ಮ ಮುಂದಿಡುವರು.

'ಇನ್ನೂರಡಿ ಮುನ್ನೂರಡಿ
ನಾವ್ ಬೆಳೆದೆವು ಎತ್ತರಿಸಿ
ಕಾಲನೊಡನೆ ಸ್ಪರ್ಧಿಸಿದೆವು,
ಮೂವತ್ತಡಿ ಬಿತ್ತರಿಸಿ.'

'ಗವಿ ಕಟ್ಟಿದನಾದಿವಾಸಿ
ನಮ್ಮ ದೇಹದಲ್ಲಿ.
ಮೊರೆ ಹೊಕ್ಕಿತು ಬಂದು ಸಿಡಿಲು
ತನ್ನ ದಾಹದಲ್ಲಿ.'

'ಬಂದರೆ ನಮಗೇನಂತೆ
ಎಲ್ಲರಿಗೂ ಸ್ವಾಗತ
ಓ ಕೊಳ್ಳಿರಿ ಆತಿಥ್ಯವ
ಅಭ್ಯಾಗತ ತಥಾಗತ!'

'ಇದಕೆಂದೇ ಜನಿಸಿದೆವು
ಬೆಳೆದೆವು ಇದಕೆಂದೇ!
ಕಾದಲೆಂದು ಕಾಯಲೆಂದು!
ನಮಗೆರಡೂ ಒಂದೇ!'

(ಪು. ೨೧೩)

ಈ 'ಮರಗಳ ನುಡಿ' ಕಿವಿ ತೆರೆದು ಕೇಳಿದಷ್ಟೂ ಮತ್ತಷ್ಟು ಕೇಳಬೇಕೆನ್ನಿಸುತ್ತದೆ. ಷ್ಠ ವೃಕ್ಷರಾಜನೊಬ್ಬನು ತನ್ನ ಸಂತಾನಕ್ಕೆ ನೀಡಿರುವ ಸಂದೇಶವಂತೂ ಮನವೊಲಿಸು ಂತಿದೆ.

"ಮಕ್ಕಳಿರ! ನನ್ನ ಬೆನ್ನೆಲುಬೀಗ
ಯುಗಯುಗದ ಶಯ್ಯಾಸನಕೆ ಕ್ಷೀಣಗೊಂಡಿಹುದು.
ನೀವೇರಿಸಿರಿ ಧ್ವಜವ, ಗೆಲ್ಲಿಸಿರಿ ವಂಶವನು!
ನನ್ನ ಮೈರಕುತವನು ಧಾರೆಯೆರೆಯುತ ನಿಮ್ಮ-
ನಾಗಸಕೆ ಮುಟ್ಟಿಸುತ ಸಂತಸವ ಪಡೆಯುವೆನು!
ಮಲಗಿದಲ್ಲೆನ್ನಯ ಪರಾಕ್ರಮ ತೋರುವೆನು!"

(ಪು. ೨೧೪)

ಯಾವ ಜೀವಿಯಾದರೇನು! ಪ್ರಪಂಚದಲ್ಲಿ ತನ್ನ ಪರಂಪರೆಯನ್ನು ರಕ್ಷಿಸಿಕೊಳ್ಳ ಕೆಂಬ ಹಂಬಲ ತಪ್ಪಿದ್ದಲ್ಲ. ಆ ತತ್ವವೇ ಇಲ್ಲಿನ ಒಂದೊಂದು ನುಡಿಯಲ್ಲಿಯೂ ಪಡಿ ಮೂಡಿದಂತಿದೆ.

ಲಾಸ್ ಎಂಜಲಿಸ್‌ನಲ್ಲಿ ಅವರು ತಮ್ಮ ವಿದೇಶೀಯ ಮಿತ್ರರೊಡನೆ ಕಳೆದ ದಿನ ನ್ನು ಬಹಳ ಆತ್ಮೀಯವಾಗಿ ಚಿತ್ರಿಸಿರುತ್ತಾರೆ. ಭಾರತ ಸಂಸ್ಕೃತಿಯಲ್ಲಿ ಅಭಿಮಾನ

ಮಿಟ್ಟಿದ್ದ ಆ ಮಿತ್ರರೊಂದಿಗೆ ಅನೇಕ ಆಧ್ಯಾತ್ಮಿಕ ವಿಚಾರಗಳ ವಿಶ್ಲೇಷಣೆ ನಡೆಯುತ್ತ ಅಮೇರಿಕಾದೇಶದ ನಿತ್ಯಜೀವನದಲ್ಲಿ ಪಾತ್ರವಹಿಸುವ 'ಲಿಫ್ಟ್' ಯಂತ್ರವನ್ನು ಕಂಡಾ ಕವಿಯ ಕುತೂಹಲ ಮಿಡಿಯುತ್ತದೆ.

ನರನಂತೆ ತಿಳಿವಳಿಕೆಯಿದ್ದ ಸಾತ್ವಿಕ ಪ್ರಾಣಿ.
ಗೋವಿನೊಲು ಸಭ್ಯ, ಕತ್ತೆಯೊಲು ದುಡಿತ.
ಅಹರ್ನಿಶಿ ಎತ್ತು ತಿಳಿಸಿದರು ನೂರಾರು
ಜನಗಳನು, ತಪ್ಪದೀ ಒಂಟೆ ಹಿಡಿತ.

(ಪು. ೨೩೬)

ಹಾಲಿವುಡ್ಡನ್ನು ಸಂದರ್ಶಿಸಿದಾಗ ಅಲ್ಲಿನ ಚಲನವಲನಗಳನ್ನು ಕಂಡು ಚಕಿತರಾ ವರು. ಯಜ್ಞಯಾಗಗಳಿಗೆ ಸದೃಶವಾದ ಆ ಅಣಿಯನ್ನು ಶ್ಲಾಘಿಸುವರು. ವಿಶ್ವವಿಖ್ಯಾ ವಾದ 'ಡಿಜನಿಲ್ಯಾಂಡ್'ಗೆ ಹೋದಾಗ ಆನಂದ ಉಕ್ಕುವುದು. ಆ ಕೃತಕ ಪ್ರಪಂಚ ನೈಜಭ್ರಮೆಗೆ ತಲೆದೂಗಿ, ವಿಸ್ತಾರವಾಗಿ ಹೊಗಳಿ,

ನಮ್ಮ ನಾಡನೊಳಗಿದ್ದರು, ಇಹರು
ಅಕಬರ್, ಮುಹಮ್ಮದ ಘಜನಿ ;
ನಮಗೂ ಎಳೆಯರ ಕರುಳನು ಬಲ್ಲವ
ಬೇಕು—ವಾಲ್ಟರ್ ಡಿಜ್ನಿ !

(ಪು. ೨೪೦)

ಎಂದು ಹಾರೈಸುವರು.

ಈ ಪ್ರವಾಸಿಯ ಹೃದಯ ನವ್ಯಸಂಗೀತದ ಪ್ರಯೋಗದ ಕಡೆಗೂ ಹರಿಯದೆ ಇ ವ್ಯಕ್ತಿಗಿಂತಲೂ ಮಿಗಿಲಾಗಿ ಯಂತ್ರಪ್ರಧಾನವಾದ ಈ ಸಂಗೀತವನ್ನು ಲೇಖ ಹೀಗೆ ಪರಿಚಯಮಾಡಿಕೊಟ್ಟಿರುತ್ತಾರೆ.

ವೈಣಿಕ ಬೇಡ, ಗವಾಯಿ ಬೇಡ, ಬಾಜಿಸುವವನೇ ಬೇಡ!
ಸಮನ್ವಯಿತ ನಾದದ ಸಂಗೀತವು
ಇಲೆಕ್ಟ್ರಾನಿಕ್ ಕೊಳವೆಗಳಲ್ಲಿದ್ದು
ಟೇಪಿನ ಮಾಪಿನ ಮೇಲ್‌ಗೆದ್ದು
ಮೈಕ್ರೋಫೋನಿನ ಮುಖದಿ ಮುಖೋದ್ಗತವು!
ವಿದ್ಯುನ್ನಾದದ ನಾದಬ್ರಹ್ಮನು ನಾದವ ಭಜಿಸಿದನು.
ವಿವಿಧ ನಾದಗಳ ಅನುಕ್ರಮವೊಂದನು ಯೋಜಕ ಸೃಜಿಸಿದನು.
ಯಂತ್ರಜ್ಞನು ಟೇಪಿನ ಮೇಲದನು ಪುನರ್ ರಚಿಸಿದನು.
ಇದೇ ನವ್ಯಸಂಗೀತ.

(ಪು. ೨೪೩-೨೪೪)

ಪ್ರಯೋಗದ ಆಗುಹೋಗುಗಳನ್ನೆಲ್ಲಾ ಬಹಳ ಚೆನ್ನಾಗಿ ಚರ್ಚಿಸಿ, ಮುಂದೆ ಸ್ಸೆಯುದುವಿಸಿ ಬರಲೆಂದು ಆಶಿಸುವರು.

'ಗ್ರ್ಯಾಂಡ್ ಕ್ಯಾನ್ಯನ್' ಎಂಬ ಎಂಬ ವಿಸ್ತಾರವಾದ ಕೊಳ್ಳದ ಭವ್ಯ ಸೌಂದರ್ಯ ನ್ನು ಕಂಡಾಗ ಅಲ್ಲಿನ ಉದ್ದ ಅಗಲಗಳಿಗೂ, ಸೃಷ್ಟಿ ಸೌಂದರ್ಯಕ್ಕೂ ಮನ ಮಾರು ೋಗುತ್ತದೆ. ಆ ಸಂದರ್ಭಕ್ಕೆ ತಕ್ಕಂತೆ ಕವಿತೆ ಕಟ್ಟೆಯೊಡೆದ ವಾಹಿನಿಯಂತೆ ಮೊರೆದು ಯತೊಡಗುತ್ತದೆ.

ಕಾಲಸಂಕಿತದಲ್ಲಿ ನೀನನಂತನ ಪ್ರತಿನಿಧಿ.
ವಿಶ್ವಕರ್ಮನು ಕಂಡ ಭೌಮತೆಯ ದಿವ್ಯಕನಸು ;
ಶಾಸ್ತ್ರ-ಕಲೆ-ವಿಜ್ಞಾನ-ದರ್ಶನದುಗಮ, ಸನ್ನಿಧಿ ;
ಆತ್ಮ ಜ್ಞಾ ಪಿಸಿಕೊಂಡ ಭೌತಜೀವಸದ ನೆನಸು !
ಮೌನಾರ್ಣವವು ನೀನು. ನಿನ್ನ ಗರ್ಭದಿ ಬೆಳೆದಿವೆ
ನಲಿನಲಿದಿರುವ ಹಕ್ಕಿ, ನೆಗೆದಾಡುತಿರುವ ಚಿಗರೆ,
ಆದಿವಾಸಿಯ ಗ್ರಾಮ. ಅದರ ಸುತ್ತಲು ಮೊಳೆದಿವೆ—
ವಿಧವಿಧದ ವೃಕ್ಷ, ಗೋವಿನ ಜೋಳ, ಹುರುಳಿ, ತೊಗರೆ ;
ನೀನವರಪರಂಪಾರ, ಕೊನ್ನಾರ, ಮೈಲಿನಾಳ,
ಹತ್ತು ಮೈಲುಗಳಗಲ, ಇನ್ನೂರು ಮೈಲಿಯುದ್ದ !
ಬರುವಿ ಮೈದಪವುತ್ತ ಮಾತೆಯೊಲು ತೆರೆದು ತೋಳು
ನಿನ್ನ ವರ್ಣಿಸಲರಿಯೆ ನಾ ಹಸುಳ, ಅಪ್ರಬುದ್ಧ.

(ಪು. ೨೫೦)

ಗೆ ವೈಶಾಲ್ಯಕ್ಕೆ ತಲೆಬಾಗುವ ಚಿತ್ರಕ್ಕೆ, ದಾಸ್ಯಜೀವನವನ್ನನುಭವಿಸುತ್ತಿರುವ ಲ್ಲಿನ ಹೋಪಿ ಪಂಗಡದವರನ್ನು ಕಂಡು ಕರುಳು ಹಿಂಡಿದಂತಾಗುತ್ತದೆ. ದುಡ್ಡಿಗಾಗಿ ಣಿದು ಕುಪ್ಪಳಿಸುವ ಅವರ ಸ್ಥಿತಿಗೆ ಸಂಕಟಪಡುವರು.

ನಿನ್ನವರು ಕಟ್ಟಿರುವ ಕೋಟೆ ಕೊತ್ತಳ ಹಾಳು,
ನಗರ–ಗ್ರಾಮುಗಳು ಹಾಳು.
ಇಂದು ನಿನಗುಳಿದಿರುವದೊಂದು : ಬೆಂಗಾಡು ನೆಲ.
ನೀನೊಡೆಯನಲ್ಲ, ಆಳು.

(ಪು. ೨೫೩)

ಇಂಥ ಪುನುಕುಲಕ್ಕೆ ತಲೆಯೆತ್ತಿ ಮೆರೆಯುವ ಕಾಲ ಪ್ರಾಪ್ತವಾಗಲೆಂದು ಆಶಿಸುವರು. ಹಿಮದ ಮೇಲುಗ್ಗೆ ಆದಾಗ ಸೂರ್ಯನ ಸಪ್ಪೆಮುಖವನ್ನು ಕಂಡಾಗ ಕವಿಯ ವಾಣಿ ಂತು ಹಂಗಿಸುತ್ತದೆ.

ಬೆನ್ನೆಲುಬನು ಕೊರೆದಿದೆ ಹಿಮವಾತ ;
ಹೊನ್ನಿ ಹುಳ ಸೂರ್ಯ :

ಬಿಸಿಲಿವೆ—ಕಿರಣದಿ ಬಿಸಿಯೇ ಇಲ್ಲ
ಬೆಳಕನೀವುದೊಂದೇ ಕಾರ್ಯ.

(ಪು. ೨೫೫)

ಹೀಗೆ ನಾಲ್ಕು ತಿಂಗಳ ಕಾಲ ಅವ್ಯಾಹತವಾಗಿ ನಲವನ್ನೂ ನೇಹವನ್ನೂ, ಅರಿ
ಅನುಭವವನ್ನೂ ನೀಡಿದ ಅಮೇರಿಕಾದೇಶವನ್ನು ಬೀಳ್ಕೊಡುವಾಗ ಕವಿಸಹಜ
ಕೃತಜ್ಞತೆ ಹೊರಸೂಸುತ್ತದೆ. ಸಂಸ್ಕೃತಿ ಸಂಪದ್ಭರಿತವಾದ ನ್ಯೂಯಾರ್ಕನ್ನು
ನಿಟ್ಟಿಸಿದಾಗ ಅದರ ಹಿರಿಮೆಯೆಲ್ಲ ಕಣ್ಣೆದುರು ಎದ್ದು ನಿಲ್ಲುತ್ತದೆ.

ಓ ! ನ್ಯೂಯಾಃರ್ಕ್ ! ಓ ! ಅಮೇರಿಕೆ !
ಇಂದಿನ ಜಗಕ್ಕೆ ಇಂದಿನ ಯುಗಕ್ಕೆ
ಕರ್ತಾರನ ಕಮ್ಮಟವಾದಿರಿ ನೀವು.
ಮಾನವಸಾಹಸದ ಪ್ರತೀಕವಾದಿರಿ ನೀವು
ಅಸಾಧ್ಯವಾದುದನ್ನು ಸಾಧಿಸಿದಿರಿ ;
ಅಜಿಂಕ್ಯವಾದುದರೆಡೆಗೆ ವಿಜಯಶಾಲಿಯಾದಿರಿ.

ಕಮ್ಮಟವಾದ ನೀವು
ನಾದಬ್ರಹ್ಮನ ಗೊಮ್ಮಟದಲ್ಲಿ,
ಕಪಟ ನಾದಗಳಿಗೆ ಎದೆಗೊಡದಿರಿ.
ವ್ಯರ್ಥ ವಾದಗಳನ್ನು ಹೂಡದಿರಿ.
ಅಹಂಕಾರಕ್ಕೆ 'ಹೂಂ'ಗೊಡದೆ ಬಾಳಿರಿ.
ಪ್ರಾಣಮಯಕ್ಕೆ ಬಲಿಬೀಳದಿರಿ.
ಋತಂಭರ ಪ್ರಜ್ಞೆ ಬಂದು
ಅಲ್ಲಿ ಪರಿಮಳ ಬೀರಲಿ.
ಆಗ ನಿಮ್ಮ ಭವ್ಯ ನಾಗರಿಕತೆಯ ದೇಹದಲ್ಲಿ,
ನಿಮ್ಮ ಗೊಮ್ಮಟ ಸಂಸ್ಕೃತಿಯ ಸೂಕ್ಷ್ಮ ಶರೀರದಲ್ಲಿ—
ಭೌಮವಾದ ಆತ್ಮ ಅವತರಿಸೀತು.
ನಿಮ್ಮ ನಾಡು ನೈಜ ನಂದನವಾದೀತು.
ನಮಸ್ತೇ !

(ಪು. ೨೬೧)

ಇಲ್ಲಿ ಅಮೇರಿಕಾದೇಶದ ಸಾಧನೆಯೊಂದಿಗೆ ಕವಿಯ ಬೋಧನೆಯೂ ಬೆ
ವುದು ಸಮಂಜಸವಾಗಿದೆ. ಐಹಿಕವನ್ನೇ ನೆಚ್ಚಿ, ಬೆಡಗನ್ನೇ ಮೆರೆಸಿ ಬಾಳು ಬೀಳ
ನಾಗರಿಕತೆಗೆ ಮಾರುಹೋಗುವ ಸ್ವಭಾವದವರಲ್ಲ ಕವಿ. ಆದ್ದರಿಂದ ಉದ್ದಕ್ಕೂ
ಬರುವಂತೆ ಈ ಕಡೆಯ ನುಡಿಯಲ್ಲಿಯೂ ಆ ಎಚ್ಚರಿಕೆಯ ಶ್ರುತಿ ಸಹಜವಾಗಿಯೇ
ಬರುತ್ತದೆ.

ಹಿಂದಿರುಗುವ ಪ್ರಯಾಣ ಕಾಲದಲ್ಲಿ ಬೇರೆ ಬೇರೆ ಎಡೆಗಳನ್ನು ಕೊಂಡಾಡಿರುವ ಕವಿಗೆ ಥೆನ್ಸ್ ನಗರಕ್ಕೆ ಬಂದಾಗ, ಅಲ್ಲಿನ ಅಧಿದೇವತೆಯನ್ನು ನೋಡಿದಾಗ ಅನೇಕ ಶತಮಾನ ಳ ಇತಿಹಾಸದ ಸುರುಳಿ ಬಿಚ್ಚಿದಂತಾಗುತ್ತದೆ. ಮುಕ್ತಕಂಠದಿಂದ ಸುಖ ದುಃಖಗಳ ಲ್ಲಾ ವಿವರಿಸಿ, ಆಕೆಯ ಘನತೆಗೆ ತಕ್ಕ ಕಾಣಿಕೆಯನ್ನು ಸಲ್ಲಿಸುವರು.

ನಿನ್ನ ಹುಡಿಯಲ್ಲಾಡಿ ಬೆಳೆದು ಬಾಳುವೆಯ ಕಂಡು
ಬೆರಗುಗೊಂಡಾದ ಪ್ಲೇಟೋ ಹಿರಿಯ ತತ್ವಜ್ಞಾನಿ.
ಕುರುಡುಗಣ್ಣಿಂದ ನಿನ್ನಾಕೃತಿಯ ಸೊಬಗನುಂಡು
ಬೆಳೆದ ಹೋಮರಗೆ ಲಭಿಸಿತ್ತು ವರಕವಿಯ ವಾಣಿ.
ನಿನ್ನ ಕೀರ್ತಿಯನು ಅಲೆಗ್ಝಾಂಡರನು ಜಗದ ಕಿವಿಗೆ
ವಜ್ರೋಲಿಯಾಗಿಸಿದ. ವಿಜಯಯಾತ್ರೆಯನು ಗೆಯ್ದು
ಲುಬ್ಧನಾಗುತ ಪೆರಿಕ್ಲೀಜ್ ನಿನ್ನ ವರ್ಣಛವಿಗೆ
ದೇಗುಲವ ಕಟ್ಟಿಸಿದ ಬಾನ್ಗೆ ನಿನ್ನೊಲವನೊಯ್ದು.
ನಾಮಮುಕರಂದವನು ಸವಿದೆಲ್ಲ ಕಂದರಿವರು
ನುಡಿಯಿಂದ, ನಡೆಯಿಂದ ಜಗದಿ ನಿನ್ನೊಲವ ತುಂಬಿ
ಕುಲದ ಕಂಠಾಭರಣರಾದಂಥ ನಂದರಿವರು
ಇಂದಿಗೂ ನಡೆಯುವುದು ಅರ್ಧಜಗವಿವರ ನಂಬಿ

* * *

ಓ ! ಅಥೇನಾದೇವಿ ! ನಿನ್ನ ವರಕರುಣೆಯುಂಡೆ.
ಅಂತೆಯೇ ಎದೆತುಂಬಿ ನಿನ್ನ ಗೀತವ ಹಾಡಿದೆ.

(ಪು. ೨೭೨)

ಪ್ರಪಂಚದ ಪುರಾತನ ಸಂಸ್ಕೃತಿಗಳಲ್ಲೊಂದಾದ ಗ್ರೀಕ್ ಸಂಸ್ಕೃತಿಗೆ ಭಾರತೀಯ ನೊಬ್ಬನು ಹೀಗೆ ತನ್ನ ಧನ್ಯವಾದವನ್ನು ಸಮರ್ಪಿಸುವುದು ಸೂಕ್ತವಾಗಿದೆ.

ಪಾಶ್ಚಾತ್ಯ ದೇಶದ ಪರ್ಯಟನವನ್ನು ಮುಗಿಸಿ, ಭರತಖಂಡಕ್ಕೆ ಹಿಂದಿರುಗಿದ ಕವಿಗೆ ಮಾತೃಭೂಮಿಯ ಪ್ರೇಮ ದ್ವಿಗುಣವಾಗುತ್ತದೆ. ಅಲ್ಲಿನ ವೈಭವ ವಿಲಾಸಗಳು ಇಲ್ಲಿ ಕಾಣದಿದ್ದರೂ ಜನ್ಮಭೂಮಿಯಾದ ಭಾರತ ಕವಿಗೆ ಅಚ್ಚುಮೆಚ್ಚು.

ಇದು ನನ್ನ ಭಾರತ.
ನನ್ನ ನಾಡು,
ನನ್ನ ಸುಖ ದುಃಖದ ಬೀಡು
ನಾನು ಪಟ್ಟ ಪಾಡು
ನಾನು ಹಾಡಿದ ಹಾಡು.
ಇದು ನನ್ನ ಭಾರತ.
ಪಡುವಣದಂತೆ ಬೆಳೆಯದಿದ್ದರೇನಂತೆ?
ಇದು ಬೆಳೆಯುವ ನಾಡು.

ಅಮೇರಿಕೆಯಂತೆ ಬಲಾಢ್ಯವಾಗದಿದ್ದರೇನಂತೆ?
ಇದು ಭವಿಷ್ಯತ್ತಿನ ನಾಡು.
ಅಡುಂಬೊಲವನ್ನು ಕೇಡೆಂದವರುಂಟೆ!
ಅವರ ನಾಲಿಗೆ ಕಳಚಿ ಬಿದ್ದೀತು.
ಇದು ನನ್ನ ಭಾರತ.
ನನ್ನ ನಾಡು.

(ಪು. ೨೭೪)

ಈ ಸ್ವದೇಶಾಭಿಮಾನ ಕವಿಯಿಂದ ಜನತೆಗೆ ಉಂಟಾದಾಗಲೇ ದೇಶದ ಏ
ಸಾಧ್ಯ.

ವಿನಾಯಕರು ನಮಗೆ ನೀಡಿರುವ ಈ ನೂತನ ರೀತಿಯ ಚಂಪೂ ಗ್ರಂಥವಲ್ಲಿ ಅ
ಲೋಕಾನುಭವ ಹೇಗೆ ಕಾವ್ಯಾನುಭವವಾಗಿ ಮಾರ್ಪಟ್ಟು ಹೊಸದೊಂದು ಹೆಬಾ
ಲನ್ನೇ ತೆರೆದಿದೆಯೆಂಬುದನ್ನು ಗ್ರಹಿಸಬಹುದು. ಅವರ ಆಲೋಚನಾತರಂಗ
ಸಪ್ಪುಳ ಸನಿಹದಲ್ಲಿಯೇ ಕೇಳಿ ಬರುವಂತಾಗುತ್ತದೆ. ಹೊಚ್ಚ ಹೊಸತಾದ ವಸ್ತು, ನ
ಮನಸ್ಸನ್ನು ಹಿಡಿದು ನಿಲ್ಲಿಸುತ್ತದೆ. ಶೈಲಿಯಲ್ಲಿ ಅಲ್ಲೊಮ್ಮೆ ಇಲ್ಲೊಮ್ಮೆ ಶೈಥಿಲ್ಯ
ಹಾಕಿದರೂ, ಕವಿಯ ನೂತನಾನುಭವದ ಸವಿಯಲ್ಲಿ ಮುಳುಗಿರುವ ನಮಗೆ ಅ
ಅರಿವಾಗುವುದಿಲ್ಲ. ಈ ಮೊದಲೇ ಹೇಳಿರುವ 'ಸಮುದ್ರದಾಚೆಯಿಂದ' ಎಂಬ ಅಪೂ
ಪತ್ರಸಾಹಿತ್ಯವನ್ನು ನಿರ್ಮಿಸಿದ ವಿನಾಯಕರು 'ಇಂದಿಲ್ಲ ನಾಳೆ' ಎಂಬ ವಾಸ್ತ
ಸಮಕಾಲೀನ ವಿಶ್ವದ ವೈಭವವನ್ನು ಇಲ್ಲಿ ಚಿತ್ರಿಸಿ ನಮ್ಮ ಕನ್ನಡದ ಕ್ಷಿತಿಜವನ್ನೇ ಹೆಚ್ಚಿ
ತ್ತಾರೆ. "ಬಾಳ ದೇಗುಲ"ದಲ್ಲಿಯೇ ಭವ್ಯವ್ಯಕ್ತಿಗಳನ್ನು ಗುರುತಿಸಿದ ಈ ಕವಿಯ
ಗಣ್ಣಿಗೆ ವಿಶ್ವಮಂಟಪವಲ್ಲಿ ವ್ಯಾಪಿಸಿರುವ ಶಕ್ತಿ-ವ್ಯಕ್ತಿಗಳ ವಿರಾಡ್ರೂಪದ ಅರಿವಾ
ವುದು ಸ್ವಾಭಾವಿಕ.

ಲೇಖಕರೇ ಹೇಳಿರುವಂತೆ,—'ಆಕಾಶಗಂಗೆ'ಯಂತೆ ಇದು ಬರಿ ನಭೋಮಂಡಲ
ಕಾಣಿಸಿಕೊಂಡಿಲ್ಲ. ನೆಲದಲ್ಲಿ ಚಿಗಿತು ಮುಗಿಲಿನೆಡೆಗೆ ಹವಣಿಸಿದೆ.

ಅಲ್ಲಿ ವ್ಯಕ್ತಿ ಮಾತ್ರಕ್ಕೆ ಸೀಮಿತವಾಗಿದ್ದ ವಸ್ತು ಇಲ್ಲಿ ಸಮಸ್ತ ವಿಶ್ವದತ್ತ ವ್ಯಾಪಿಸಿ
ಗ್ರಂಥವನ್ನು ಓದಿ ಮುಗಿಸಿದ ಮೇಲೆ ಹೊಸ ಅನುಭವದಿಂದ ವಾಚಕರ ಮನಸ
ಸಂಪದ್ಯುಕ್ತವಾಗುತ್ತದೆ. ಕವಿಯ ಕಾವ್ಯಕ್ಕೆ ಇದಕ್ಕಿಂತ ಹೆಚ್ಚಿನ ಕೃತಾರ್ಥತೆಯಾದ
ಏನುಂಟು?*

---

* 'ಇಂದಿಲ್ಲ ನಾಳೆ' ಎಂಬ ಕೃತಿಯ ಸ್ವಾರಸ್ಯವನ್ನು ಚೆನ್ನಾಗಿ ಗ್ರಹಿಸಲು ಇಲ್ಲಿ ಲೇಖ
ಸಂದರ್ಶಿಸಿದ ಮುಖ್ಯ ನಗರಗಳನ್ನು ಸೂಚಿಸುವ ಒಂದು ನಕ್ಷೆಯೂ, ಹಲಕೆಲವು ಸುಂದರ
ಗಳೂ, ಪ್ರಾಸಂಗಿಕವಾಗಿ ಉದಾಹರಿಸಿರುವ ಪಾಶ್ಚಾತ್ಯ ಮತ್ತು ಪೌರಸ್ತ್ಯ ಉಪಮಾನಗಳ ಪೂ
ಕಥೆಗಳ ವಿವರವೂ ಅತ್ಯಗತ್ಯವೆನ್ನಿಸುತ್ತವೆ.

ಛಂದೋವೈವಿಧ್ಯ

ಡಿ. ಎಸ್. ಕರ್ಕಿ

ಜೀವನದಂತೆ ಕಾವ್ಯವೂ ಕ್ರಮೇಣ ಬದಲಾವಣೆ ಹೊಂದುತ್ತ ಬೆಳೆಯುವ ಗುಣ ವುಳ್ಳದ್ದು. ಕಾವ್ಯನಾದದ ನಾಡಿಯಾದ ಛಂದಸ್ಸು ಅದೇ ರೀತಿ ಬದಲಾವಣೆ ಹೊಂದಿ ದುದು ಸ್ವಾಭಾವಿಕ. ಕನ್ನಡ ಕಾವ್ಯ–ಛಂದಸ್ಸು ಕಾಲಾನುಕ್ರಮದಲ್ಲಿ ಹೀಗೆ ವಿಕಾಸ ಹೊಂದುತ್ತ ಬಂದಿದೆ.

ನಮ್ಮ ಕನ್ನಡ ಛಂದಸ್ಸಿನ ಚರಿತೆಯಲ್ಲಿ ನಾಲ್ಕು ಯುಗಗಳು ಎದ್ದು ಕಾಣುತ್ತವೆ: ೧. ತ್ರಿಪದಿ, ಪಿರಿಯಕ್ಕರ ಮೊದಲಾದ ಅಚ್ಚಗನ್ನಡ ಮಟ್ಟುಗಳ ಯುಗ. ೨. ಕ್ರಮೇಣ ಸಂಸ್ಕೃತ ಹಾಗೂ ಪ್ರಾಕೃತಗಳ ಸಂಪರ್ಕದ ಪರಿಣಾಮವಾಗಿ ಬಳಕೆಗೊಂಡ ಚಂಪೂ ಛಂದಸ್ಸಿನ ಯುಗ. ೩. ದೇಸಿ ಛಂದಸ್ಸಿನ (ನಡುಗನ್ನಡ ರಗಳೆ ಷಟ್ಪದಿಗಳ) ಯುಗ. ೪. ಹೊಸಗನ್ನಡ ಭಾವಗೀತ ಛಂದಸ್ಸಿನ ಯುಗ. ಮೊದಲನೆಯ ಯುಗದ ಅವಧಿ ಕ್ರಿಸ್ತ ಶಕದ ಆರಂಭದಿಂದ ಸುಮಾರು ೮ ನೆಯ ಶತಮಾನದವರೆಗೆ. ಎರಡನೆಯ ಯುಗದ ಕಾಲ ಕ್ರಿ. ಶ. ೯ ನೆಯ ಶತಮಾನದಿಂದ ೧೨ ನೆಯ ಶತಮಾನದ ವರೆಗೆ. ಮೂರನೆಯ ಯುಗ ೧೩ ನೆಯ ಶತಮಾನದಿಂದ ಸುಮಾರು ೧೯ ನೆಯ ಶತಮಾನದ ವರೆಗೆ. ನಾಲ್ಕ ನೆಯ ಯುಗ, ೨೦ ನೆಯ ಶತಮಾನದ ಆಧುನಿಕ ಕಾವ್ಯಯುಗ— ಇಂದಿನವರೆಗೆ.

೨೦ ನೆಯ ಶತಮಾನದೊಡನೆ ಹೊಸ ಭಾವಗೀತ ಯುಗವು ಆರಂಭವಾಯಿತು. ಈ ಯುಗದಲ್ಲಿ ದೇಸಿ (ಮಾತ್ರಾಗಣ) ಲಯಗಳು ಒಂದಕ್ಕೆ ಹತ್ತಾಗಿ, ಹತ್ತಕ್ಕೆ ಹಲವಾಗಿ ಹುಟ್ಟಿಕೊಂಡು ನುಡಿದುವು. ಅವೆಲ್ಲ ಬಹಳ ಮಟ್ಟಿಗೆ ಉತ್ಸಾಹ, ಮಂದಾನಿಲ, ಲಲಿತ, ಷಟ್ಪದಿ ಮೊದಲಾದ ಮಾತ್ರಾಗಣ ಛಂದೋಬಂಧಗಳು. ಆಧುನಿಕ ಛಂದೋಲಯಗಳಲ್ಲಿ ಪ್ರಥಮ ಘಟ್ಟವಿದು. ಇವರ ಪ್ರವರ್ತಕರಲ್ಲಿ ಪಂಜೆ ಮಂಗೇಶರಾಯರು, ಗೋವಿಂದ ಪೈ ಅವರು, ಬಿ. ಎಂ. ಶ್ರೀ ಅವರು ಪ್ರಮುಖರು. ಬಿ. ಎಂ. ಶ್ರೀಕಂಠಯ್ಯ ಅವರ 'ಇಂಗ್ಲಿಷ್ ಗೀತಗಳು' ಪ್ರಕಟವಾದಾಗಂತೂ ಭಾವಗೀತಗಳ ಛಂದೋರಚನೆಗೆ ಹೊಸ ದಾರಿ ತೆರೆಯಿತು. ಅದೇ ಸುಮಾರಿಗೆ ಮೇಲೆ ಹೇಳಿದ ಛಂದೋಬಂಧಗಳ ಜೊತೆಗೆ ಜಾನ ಪದದ ತಾನಗಳಲ್ಲೂ ಭಾವಗೀತಗಳ ರಚನೆಗೆ ತೊಡಗಿ ವೈವಿಧ್ಯದೊಡನೆ ಹೊಸ ರಾಗ ರಚಿಗಳನ್ನು ಒದಗಿಸಿದವರು ಬೇಂದ್ರೆ ಅವರು. ಅದು ಸುಮಾರು ೧೯೨೦–೨೫ ರ ಗಡುವು.

ಈ ಹೊತ್ತಿನಲ್ಲಿಯೇ ಪುಟ್ಟಪ್ಪನವರೂ ಹೊಸ ರಚನೆಯಲ್ಲಿ ಹೊಸ ಹದವನ್ನು ಸಾ
ಭಾವಗೀತದ ಮುನ್ನಡೆಗೆ ಕಾರಣರಾದರು. ಛಂದೋವಿನ್ಯಾಸವನ್ನು ಆ ಬಳಿಕ ಬೆ
ಬೆಳಕಿಗೆ ತಂದ ಕವಿಗಳಲ್ಲಿ ವಿನಾಯಕರೂ ಒಬ್ಬರು.

ವಿನಾಯಕರ ಕೃತಿಗಳಲ್ಲಿ 'ಪಯಣ' (೧೯೩೭), 'ಸಮುದ್ರಗೀತಗಳು' (೧೯
'ತ್ರಿವಿಕ್ರಮರ ಆಕಾಶಗಂಗೆ' (೧೯೪೫), 'ನವ್ಯಕವಿತೆಗಳು' (೧೯೫೦), 'ದ್ಯಾವಾ ಪೃಥಿ
(೧೯೫೭) ಈ ಕವನ ಸಂಗ್ರಹಗಳನ್ನು ಮುಖ್ಯವಾಗಿ ಗಮನಿಸಿ ಈ ಲೇಖನ
ವಿನಾಯಕರ ಛಂದೋವೈವಿಧ್ಯವನ್ನು ವಿವೇಚಿಸಿದೆ. ಸಾಂಪ್ರದಾಯಿಕ ಭಾವಗೀತಗ
ನಯವಡೆದ ಛಂದೋಲಯಗಳನ್ನು ವಿನಾಯಕರು ಬಳಸಿದರಲ್ಲದೆ ಕೆಲವೊಂದು ವಿ
ಪ್ರಯೋಗಗಳನ್ನೂ ಅವರು ಮಾಡಿದುದುಂಟು. ವಿನಾಯಕರ ಪ್ರಯೋಗಶೀಲದ
ಇದಕ್ಕೆ ಕಾರಣವೆನ್ನಬಹುದು. ಅವರ ಮೊದ ಮೊದಲಿನ ಕವಿತೆಗಳಲ್ಲಿ ('ಪಯಣ'ದ
ಕೂಡ ಪ್ರಗತಿಶೀಲತೆಗೆ ಒಂದೆರಡು ನಿದರ್ಶನಗಳು ದೊರೆಯುತ್ತವೆ. ಭಾಮಿನೀಲಯ
ಅವರು ರಚಿಸಿಕೊಂಡ ಸೊಗಸಾದ ಬಂಧವನ್ನು 'ಪಯಣ' ಸಂಕಲನದ 'ಮಲ್ಲಿಕಾ
ಯೆಂಬ ಕವನವಲ್ಲಿ ಗುರುತಿಸಬಹುದು. ಅದೇ ಸಂಗ್ರಹದಲ್ಲಿ 'ನಾನೊಂದು ನವಿಲ ಕ
ಎಂಬ ಕವಿತೆಯಲ್ಲಿ ಉತ್ಸಾಹ ರಗಳೆ ತೆರೆಯೇರಿ ಬಂದಿದೆ. 'ಬಾಡಿಗೆ ಎತ್ತು' ಎ
ಕವಿತೆಯಲ್ಲಿ ಕುಸುಮ ಷಟ್ಪದಿ ಹದುಳವಾದ ಒಂದು ಹೊಸ ಪರಿಯನ್ನು ತೋ
'ಚೆಲುವು' ಎಂಬ ಕವಿತೆಯ ಉತ್ಸಾಹದ ನಾಲ್ಕು ಚರಣಗಳ ಮಟ್ಟು ಐದು ಚರಣ
ಪದ್ಯದ ಕಟ್ಟನಲ್ಲಿ ರೂಪವೆತ್ತಿದೆ.

ಕಾವ್ಯಸೃಷ್ಟಿಯಲ್ಲಿ ವಿನಾಯಕರ ಪ್ರಯೋಗಪ್ರವೃತ್ತಿ ಆಗಾಗ ಸ್ವಚ್ಛಂದದತ್ತ
ಹರಿದಿದೆ. ಪದ್ಯಲಯದಿಂದ ಗದ್ಯಲಯದತ್ತ ಒಲೆದಿದೆ. ಅವರ 'ಸಮುದ್ರಗೀತಗಳ
ಗದ್ಯಲಯದ ಸ್ವಚ್ಛಂದ ಸೌಂದರ್ಯವನ್ನು ಸಾಕಷ್ಟು ಕಾಣಬಹುದು. ಸ್ವಚ್ಛ
ಲಹರಿಯನ್ನು ಅವರು ಪ್ರಜ್ಞಾಪೂರ್ವಕವಾಗಿ ಪ್ರಯೋಗಿಸಿದ್ದರೂ ಅದರ ಸಹಜ
ಕುಂದು ಬಂದಿಲ್ಲ; ಇದು ಅವರ ಸಮುದ್ರಗೀತಗಳ ವೈಶಿಷ್ಟ್ಯ. 'ಕೊಡದಿರು ಶರ
ಷಟ್ಪದಿಯ ದೀಕ್ಷೆ' ಎಂಬ ಚದುರಿನ ನುಡಿ ಅವರ ಅನಿರ್ಬಂಧ ಛಂದಃಪ್ರಜ್ಞೆ
ಸೂತ್ರವಾಗಿದೆ; 'ಪ್ರತಿಜ್ಞೆ' ಎಂಬ ಹೆಸರಿನ ಕವಿತೆ ಈ ದೃಷ್ಟಿಯಿಂದ ಅವರ ಸಮು
ಗೀತಗಳ ಪೀಠಿಕೆಯಾಗಿದೆ.

ನಿನ್ನ ಮಣಿತವಿರಲಿ ಸಮುದ್ರದ ಕುಣಿತದಂತೆ
ತರಂಗತ್ತರಂಗವನೊಳಗೊಂಡ
ನವರಂಗ ವಾರಿಧಿಯಂತೆ

ಎಂದು ತಮ್ಮನ್ನು ತಾವೇ ಉದ್ಬೋಧಿಸಿಕೊಂಡು ಸಾಗಿದ್ದಾರೆ ವಿನಾಯಕರು. 'ಸಮು
ಗೀತ' ಸಂಕಲನದ 'ಪರಿಧಾನ' ಎಂಬ ಗೀತದಲ್ಲಿ ಸ್ವಚ್ಛಂದ ಲಹರಿಯನ್ನು ಪ

ವ್ಯಾಸದಿಂದ ಅಂದಗೊಳಿಸಿದ್ದಾರೆ. ನವ್ಯಛಂದಸ ಮೊದಲ ಸುಳುಹು ಇಲ್ಲಿ ಕಾಣುತ್ತದೆ:

ಇಲ್ಲಿ, ನೋಡಿಲ್ಲಿ
ಮುಗಿಲು ಮುನ್ನೀರ್ ಚುಂಬಿಸಿತಿಲ್ಲಿ
ಮುನ್ನೀರು ಮುಗಿಲ ರಂಬಿಸಿತಿಲ್ಲಿ
ನಂಜಿಸಿತಿಲ್ಲಿ ಬೆಳಗು . . . .
ಕೂಟದಗೆರೆ ಬೆಳ್ಳಿಯ ಕಟ್ಟೆಂದು
ಬಿಂಜಿಸಿತಿಲ್ಲಿ ಸಂಜೆ . . . .

ಚಿತ್ರಣ ಮನಂಬುಗುವಂತಿದೆ. ಲಯಕ್ಕೆ ಇಲ್ಲಿ ಕಟ್ಟಿಲ್ಲವೆಂದರೆ ಇಲ್ಲ; ಇದೆ ಎಂದರೆ ೆ. ಇದೇ ಕಲೆ ಸೂರ್ಯೋದಯದ ಸೌಭಾಗ್ಯವನ್ನು ರೂಪಕವ ರೀತಿಯಲ್ಲಿ ಹೀಗೆ ತೋರಿದೆ:

ಮುಗಿಲ ಗೆರೆಯನ್ನು ಹಿಡಿದು
ವಾರಿಧಿಯ ಹೊಂಬಸಿರನೊಡೆದು
ಏರುವವು ಮುಗಿಲನ್ನೆ ಅರುಣನ ಕುದುರೆಗಳೇಳು
ಮಾಡುವವು ಹಗಲನ್ನು
ಮೋಡಗಳ ಕೊತ್ತಳದ ಕೋಟೆಯೊಂದನು ಕಟ್ಟಿ
ಕಿರಣಗಳ ಬತ್ತಳಿಕೆಯನ್ನು ಬದಿಗಿರಿಸಿ
ಬರುತಿಹನು ದಿವ್ಯಶರೀರ ದಿನಮಣಿ;
ಕತ್ತಲನು ಕಿತ್ತೊಗೆದ ಕಿರೀಟ
ಬರುತಿಹನು ತೆರೆಯ ಮೇಲೆ ತಲೆಯೆತ್ತಿ

ರ್ಣಗಳ ವಿಸ್ತಾರದಿಂದಾಗಿ ಗದ್ಯಲಯದ ಹೃದ್ಯತೆ ಇನ್ನೂ ಹೆಚ್ಚುತ್ತದೆ. 'ಸಮುದ್ರ ತಗಳ' 'ಏಡನ್' ಎಂಬ ಗೀತ ಒಂದು ನಿದರ್ಶನ ಈ ಬಗೆಗೆ:

ಮುಗಿಲುದ್ದ ನಿಗಿ ನಿಗಿ ಕೆಂಪದಂಥ ನೆಲದೊಳಗಿಂದ ನೆಗೆಯುತಿದೆ ನೋಡು
ಗುಡ್ಡ ದಿನ್ನೆಗಳು, ಪರ್ವತಗಳು ಪರ್ವತಾವಳಿಗಳು.
ಭೂಮಿತಿಯ ನೆನೆಪು ದೇವನಿಟ್ಟ ತ್ರಿಕೋನಾಕೃತಿಗಳಂತೆ
ಊಸುಂಜಿಸರಣ್ಯದಿ ಕಾವಲು ನಿಂತ ಹಿರಣ್ಯಾಕಶ್ಯಪನಂತೆ
ಗಿಡವಿಲ್ಲ, ಬಳ್ಳಿಯಿಲ್ಲ; ಹಾಳು ಹಾಳು, ಬೀಳು ಬೀಳು
ವೃಕ್ಷವಿಲ್ಲ, ಋಕ್ಷ ಋಕ್ಷ, ಹೊಗಿ ಹೊಗಿ, ನಿಗಿ ನಿಗಿ
ಹಸಿರ ಹೆಸರಿಲ್ಲ, ತಣ್ಣಿಸಿರು, ತಣ್ಣೆಳಲಿಲ್ಲ; ತೊಯ್ದ ಮಳಲಲ್ಲಿ
ನೀರಡಿಸಿ ಚಾಚಿದ ನಾಲಿಗೆ ಇದು ಏಡನ್

ಾಯಕರ ಇಂಥ ರಚನೆಗಳು ಛಂದೋವೈವಿಧ್ಯಕ್ಕೆ ಉದಾಹರಣೆಗಳು ಮಾತ್ರವಲ್ಲ, ಂದಸ್ಸು ರೂಪಕಗಳನ್ನು ನಿರ್ಮಿಸಿಕೊಂಡು ಹೊರಟ ಇಂಥ ಕಡೆಗಳಲ್ಲಿ ಛಂದೋಲಯ ಬಳಕೆ ಯಥಾರ್ಥವಾಗಿದೆ. ಆದುದರಿಂದ ಕೃತಾರ್ಥವಾಗಿದೆ. ಇದೇ ಹದ 'ಸುಯೇಜ ಲುವೆ' ಎಂಬ ಗೀತದಲ್ಲಿ ಹೊಸ ಉಪಮೆ ಒಡವೆಗಳೊಡನೆ ಮೈದೋರಿದೆ:

ಮುಗಿಲ ನೀಲಿಯ, ಮುನ್ನೀರ ಹಸಿರ, ಮರುನೆಲದ ಸುವರ್ಣ ವರ್ಣವನು
ಒಂದೆಡೆಗೆ ನೋಡುವಾಸೆಯಿರಲು—ನಡೆ ಸುಯೇಜಿಗೆ!
ಉಸುಬಿನುದಧಿಯ ದಾಂಟಲು ನಿರ್ಮಲ ನೀರಸೇತುವೆಗೆ!·
. . . .
ಈ ಹಡಗವಹುದು ಅರಣ್ಯದ ಹಡಗ
ಕಚ್ಚಲು ಬರುವ ಹಾವಿನಂತೆ ರೊಚ್ಚಿನಿಂದ ನಾಲಗೆಯೆತ್ತಿ
ದಂಡೆಗುಂಟ ಕುಸುಸಿಟ್ಟು ನಡೆಯುತಿದೆ ನೋಡು

'ಸಮುದ್ರಗೀತಗಳ'ಲ್ಲಿ ವಿನಾಯಕರ ಬಗೆ ಹೇಗೆ ಆಟವಾಡಿದೆ ಸಮುದ್ರದ ಸಲೀಲ ಸ
ದೊಡನೆ! ನವ್ಯಕಾವ್ಯದ ಸಾಮಗ್ರಿಯೂ ಇಲ್ಲಿ ಸಿದ್ಧಗೊಳ್ಳುತ್ತಿದೆ. ಅಂತೂ 'ಕೊಡ
ಶರಧಿಗೆ ಷಟ್ಪದಿಯ ದೀಕ್ಷೆಯನು' ಎಂಬ ಪ್ರತಿಜ್ಞೆ ಇಲ್ಲಿ ಕೈಗೂಡಿದೆ.

ಸರಳ ರಗಳೆಯಲ್ಲಿಯೂ ಕೃಷಿ ಮಾಡಿದ್ದಾರೆ ವಿನಾಯಕರು. ಅದರ ಒಂದು ವಿ
ವಾದ ಹದಕ್ಕೆ ಅವರ 'ತ್ರಿವಿಕ್ರಮರ ಆಕಾಶಗಂಗೆ' ಉದಾಹರಣೆ. ಇಲ್ಲಿ ಗದ್ಯದ ಮ
ಮಧ್ಯೆ ಪದ್ಯಲಯಬದ್ಧವಾದ ರಗಳೆ ಒಮ್ಮೆಲೆ ನುಗ್ಗಿ ಬರುವ ರೀತಿ ಹೊಸತು.
ಮುಗಳಿ ಅವರು ಹೇಳಿದಂತೆ ವಿನಾಯಕರು 'ಆಕಾಶಗಂಗೆ' ಎಂಬ ಹೊಸ ಬ
ಚಂಪೂ ಗ್ರಂಥವನ್ನು ಕನ್ನಡಿಗರಿಗೆ ಕೊಟ್ಟಿದ್ದಾರೆ. ಆಕಾಶಗಂಗೆಯ ಕೊನೆಯಲ್ಲಾದ
ಪ್ರಾಸವಿನ್ಯಾಸವನ್ನೊಡಗೊಂಡು ಬಂದ ಸೊಗಸಾದ ಗೀತವು ಅದಕ್ಕೆ ವೈವಿಧ್ಯವ
ಸ್ವಾರಸ್ಯವನ್ನೂ ಒದಗಿಸಿವೆ. ಆ ಗೀತದ ಗತಿ ಗತ್ತುಗಳನ್ನರಿಯಲು ಒಂದು ಪದ್ಯ ಸಾ

ಪಾವನ ಗಂಗೆ
ಅಮೃತ ತರಂಗೆ
ವ್ಯೋಮಾಂತರಂಗೆ
ನೆಲಕಿಳಿಯೆ
ನೀರಡಿಸಿದಂಗೆ
ನೀರಾಸೆ ಹಿಂಗೆ
ಧವಲೋತ್ತುಂಗೆ
ಹೊಳೆ ಹೊಳೆಯ

೧೯೫೦ ರಲ್ಲಿ ಪ್ರಕಟವಾದ ಅವರ 'ನವ್ಯಕವಿತೆಗಳು' ಸಂಪ್ರದಾಯವನ್ನು ಮೀ
ಒಂದು ನೂತನ ವಿಧಾನವನ್ನು ಬಳಕೆಗೆ ಮತ್ತು ಬೆಳಕಿಗೆ ತಂದ ಸಂಗತಿ ತು
ಗಮನಾರ್ಹವಾದುದು. ಒಂದು ದೃಷ್ಟಿಯಿಂದ ವಿನಾಯಕರು ನವ್ಯಕಾವ್ಯದ ಪ್ರವರ್ತಕ
ಹೊಸತನಕ್ಕೆ ಹವಣಿಸಿದ ಅವರ ಮನ ಇಲ್ಲಿ ತಿಳಿಯಾಡಿದಂತಿದೆ. ಅವರ 'ನವ್ಯಕ
ಗಳ ಛಂದೋರೀತಿಗೂ ಈ ಮಾತು ಅನ್ವಯಿಸುತ್ತದೆ. ಇಲ್ಲಿಯ ಕೆಲವು ಕವಿತೆಗ
ಪದ್ಯಲಯ ಎದ್ದು ಕೇಳಿದರೆ ಇನ್ನು ಕೆಲವು ಕವಿತೆಗಳಲ್ಲಿ ಗದ್ಯಲಯದ ರೀತಿ
ಕಾಣಿಸಿಕೊಂಡಿದೆ. 'ಹೆಮ್ಮೊಗು' 'ದುಃಸ್ವಪ್ನ' ಇವೇ ಮೊದಲಾದುವುಗಳು ಗದ್ಯ

ಸ್ಕೊಂಡ ಕವಿತೆಗಳಿಗೆ ಉದಾಹರಣೆಗಳು. 'ಶೂನ್ಯ' ಎಂಬ ಕವಿತೆ ಲಲಿತಲಯ
ಲ್ಲಿ ಒಂದಿಷ್ಟು ಹೊಸ ಹೆಜ್ಜೆ ಹಾಕಿದೆ, ಹೀಗೆ :

ಸೀಳುತಿದೆ ಬೀಳುತಿದೆ ಹೂಳುತಿದೆ ನೋಡ
ಕಡಲ ತೀರ
ಬಿದ್ದು ಹೋಳಾಗುತಿದೆ ಹಾಳಾಗುತಿದೆ ಇಲ್ಲಿ
ಅಂತ-ಪಾರ
ಗೊತ್ತಿಲ್ಲ, ಗುರಿಯಿಲ್ಲ, ಸದ್ದಿಲ್ಲದಿಹ ಹೋನು
ಓ ಘನ ಘೋರ

ಇಲ್ಲಿಯು ಸಮಚರಣಗಳು ತೀರ ಕಿರಿ ಕಿರಿಯ ಚರಣಗಳಾಗಿವೆ ಎಂಬುದನ್ನು ಗಮನಿಸ
ಕು.

ಆ ತರುವಾಯ ೧೯೫೭ರಲ್ಲಿ ಪ್ರಕಟವಾದ 'ದ್ಯಾವಾ ಪೃಥಿವೀ' ಕೃತಿಯಲ್ಲಿ
ಾಯಕರು ರಚನೆಯಲ್ಲಿ ಅತ್ತ ಅತಿ ಸಂಪ್ರದಾಯವನ್ನೂ ಇತ್ತ ಅತಿ ಪ್ರಯೋಗ
ಲತೆಯನ್ನೂ ತೊರೆದು ಹಿತವಾದ ಮಧ್ಯ ಮಾರ್ಗವನ್ನು ಅನುಸರಿಸಿದ್ದಾರೆ. 'ದ್ಯಾವಾ
ಥಿವಿ'ಯ 'ಇಳಾಗೀತ'ವು ಶುದ್ಧ ಕುಸುಮ ಷಟ್ಪದಿಯಿಂದ ಪ್ರಾರಂಭವಾಗಿದ್ದರೆ
ೀರದ'ದ ಆರಂಭವು ಪ್ರಯೋಗಶೀಲತೆಯನ್ನು ಕಣ್ಣಿಗೆತ್ತಿದೆ:

ನೋಡ,
ನೀಲಿಮದಾಳದಿ ತೇಲುವ ಓಡ
ಇದರ ಚೆಲುವ ನೋಡ.

ಂಪಾನಿಲ' ಲಯಪ್ರಧಾನವಾದ ಈ ಗತಿ ಇಲ್ಲಿ ಎಷ್ಟೊಂದು ಒಳಭಂಗಿ ಭಣಿತಗಳ
ತಗನ್ನು—ಆದುದರಿಂದ ಬೆರಗನ್ನು—ಬೀರಿದೆ! ಪ್ರಾಸಾಂತಿತ ಛಂದೋಗತಿಯೂ
ಂಬ ಪರಿಣಾಮಕರವಾಗಿದೆ. ಪ್ರಾಸ-ವಿಲಾಸ ಹಾಗೂ ಯತಿಯ ಚದುರು ಇಲ್ಲಿ
ಟ್ಟು ಕಾಣುವ ಲಕ್ಷಣಗಳು. ರಗಳೆಯ ಉದ್ದವಾದ ಓಟದಲ್ಲಿ ನಡುನಡುವೆ ನಿಯತ
ದ ನಾಲ್ಕು ನಾಲ್ಕು ಚರಣಗಳ ಪದ್ಯ-ಬಂಧಗಳೂ, ಸುಂದರವಾದ ದ್ವಿಪದಿಗಳೂ
ಿದು ಬಂದು ಇಡಿಯ ಗೀತಕ್ಕೆ ಕಳೆಕಟ್ಟಿದೆ. 'ದ್ಯಾವಾ ಪೃಥಿವಿ'ಯ 'ಇಳಾಗೀತ'ದಲ್ಲಿ

ಶೈಲಾಗ್ರಗಳ ಶೈಲಿ
ಗಿರಿಕಂದರದ ಛಂದ
ತಿಳಿಯುವಿಯಾ ಇಳೆಯೊರೆದ ಸುಭಗ ಧೃತಿಯ ?
ನದಿ ನಡದ ನವರಸವ
ತರುಲತೆಯಲಂಕಾರ
ಅನುಭವಿಸುವಿಯಾ ಕೃತಿಯ, ಧ್ವನಿಯ, ಪ್ರುತಿಯ ?

ಎಂದು ವಿನಾಯಕರು 'ದನಿ'ಯಲ್ಲಿ ಧ್ವನಿಯಿಟ್ಟು, ಇಳೆಯ ಸಹಜ ಛಂ
ನಂಬಿಗೆಯಿಟ್ಟು ಕೇಳಿದ್ದಾರೆ. ಶೈಲಾಗ್ರಗಳ ಶೈಲಿ ಗಿರಿಕಂದರದ ಛಂದ, ಸ
ಮನೋಹರ ಎಂಬ ಭಾವ ಇಲ್ಲಿ ಒಡಮೂಡಿದೆ. ಇಳಾಗೀತಕ್ಕೆ ಕುಸುಮ ಷಟ್ಪದಿ
ನಾಂದಿ ನುಡಿದಿದೆ. ಶರಧಿಗೆ ಷಟ್ಪದಿಯ ದೀಕ್ಷೆ ಬೇಕಾಗದಿರಬಹುದು. ಇಳಾಗಿ
ಆರಂಭಕ್ಕೆ ಅದರ ಮಧುರವಾದ ನಾದ ಬೇಕೆನಿಸಿತೇನೋ ! ಮುಂದೆ ಪದ್ಯದ ಕಟ್ಟು
ಇಲ್ಲದೆ 'ಇಳಾಗೀತ'ವು ವಿಶಾಲವಾದ ಪಾತ್ರದಲ್ಲಿ ಪ್ರವಹಿಸಿದೆ. ಮೊದಲು ಲಲಿತ
ದಲ್ಲಿ ಸ್ವರವೆತ್ತಿ ಮುಂದೆ ಔಚಿತ್ಯವರಿತು ಉತ್ಸಾಹ ಮಂದಾನಿಲ ಗತಿಗಳ ಶ್ರುತಿಹ
ವೈವಿಧ್ಯಕ್ಕೆ ನೈವೇದ್ಯ ನೀಡಿದೆ, ಹೀಗೆ:

ಮೆಲ್ಲ ಮೆಲ್ಲನೆ ಮೇಲೆ ತೇಲಿತ್ತು ಸೂರ್ಯಬಿಂಬ
ಮಂಜಿನೆಳೆ ಜವನಿಕೆಯದಾಗಿತ್ತು ಕೆಂಪು ತುಂಬ.

ಕೌತುಕದ ಅಭಿವ್ಯಕ್ತಿಗೆ ಈ ಯೋಜನೆ ಸಮುಚಿತವಾಗಿದೆ ಸಮಯೋಚಿತವಾ
ಎಂದು ಬೇರೆ ಹೇಳಬೇಕಿಲ್ಲ. ಈ ಛಂದದ ಎಳೆ ಮುಂದಣ ಹಿರಿ ಕಿರಿ ಚರಣ
ಸುಳುಹಿನ ನೆಯ್ಗೆಯಾಗಿ ಪರಿಣಮಿಸಿದೆ. ಆರನೆಯ ಭಾಗದಲ್ಲಿ 'ಇಳಾಗೀತ'ವು ಉತ
ಲಯವನ್ನು ಸ್ವಾಗತಿಸಿ ಪ್ರಾಸಾನುಪ್ರಾಸವಿಲಾಸದಲ್ಲಿ ಉತ್ಸಾಹ ಪೂರ್ಣವಾಗಿ ಉ
ಸಿದೆ; ಈ ಬಗೆಯನ್ನು ಪರಿಶೀಲಿಸಬೇಕು :

ಪೂರ್ವ ದಿಗ್ವಲಯವನು ಸ್ಪರ್ಶಿಸಿರಲು
ಮಂಜುಗಡಲಿನ ತರಂಗ
ಕೆಂಪದರ ಅಂತರಂಗ
. . . . .
ರೇಖೆಗಳ ಶಾಖೆಗಳ
ಮುಸುಕು ಎಸಕ
ಅಂದ ಚಂದ.

ಮುಂದೆ ಈ ಗೀತದ ೯ನೆಯ ಭಾಗದಲ್ಲಿ ಮಂದಾನಿಲ ಲಯವು ನಿಯತಪ್ರಾ
ಸುಹಾಸವನ್ನು ಸೂಸುತ್ತ ಆರು ಆರು ಚರಣಗಳ ಪದ್ಯ ಬಂಧದ ಹೊಸ ಅಂದ
ಕಾಣಿಸಿದೆ.

ಕಾಮನ ಬಿಲ್ಲಿನ ವಿವಿಧ ಕಮಾನುಗಳು
ರೇಖಾಮಾಲೆಗಳು
ಕೇಸರಿ ದೀಪದ ಅಲ್ಪವಿರಾಮಗಳು
ಮಾಣಿಕದೋಲೆಗಳು
ಭೂಮಂಡಲವೇ ತಾರಾಮಂಡಲವು
ಸುವರ್ಣ ಕುಂಡಲವು

ದಃಪ್ರಜ್ಞೆಯ ಪ್ರಭೆಯಲ್ಲಿ ಡ್ಯಾನಾ ಪೃಥಿವಿಯನ್ನು ಮನಡೆಮರು ಹಿಡಿವ
ನಾಯಕರು ಹೀಗೆ ನುಡಿದಿದ್ದಾರೆ:

ಆರ್ಷ ಛಂದಸ್ಸಿನಾ ತಾಳಲಯದಲ್ಲಿ ಕುಣಿದು
ಭಾಗವತ ಸಂಗೀತದಂತೆ ಮಣಿದು
ಉದಯಾಸ್ತಗಳ ಕ್ಷಿತಿಜದೋಜೆಯಿಂದ
ದಕ್ಷಿಣೋತ್ತರ ದಿಶೆಯ ಮೇರೆಯಿಂದ
ಹೊರಹೊಮ್ಮುತಿಹುದೊಂದಪಾರ ಸೌಂದರ್ಯ
ಬುಗ್ಗೆಯೊಲು ತಾಯ್ತನದ ಹೃದಯದೌದಾರ್ಯ

ಒಟ್ಟಿನಲ್ಲಿ ವಿನಾಯಕರು ಪ್ರಯೋಗಪ್ರಿಯರು. ಆಂಗ್ಲ ಸಾಹಿತ್ಯದ ಆಳವಾದ ...ಭ್ಯಾಸ ಅವರನ್ನು ಈ ದಿಶೆಯಲ್ಲಿ ಪ್ರೇರಿಸಿರಲು ಸಾಕು. ಆದುದರಿಂದ ಸಂಪ್ರದಾಯದ ...ತಿಯಲ್ಲಿ ನಿಚ್ಚಳವಾದ ರೂಪತಳೆದ ಅನೇಕ ಛಂದೋಬಂಧಗಳಲ್ಲಿ ಅವರು ಬಗೆ ...ಯ ಮಾರ್ಪಾಡುಗಳನ್ನು ಮಾಡಿಕೊಂಡುದುಂಟು. ಇಂಥ ಮಾರ್ಪಾಡುಗಳಲ್ಲಿ ...ವನ್ನು ಈ ಮೊದಲೇ ಸಂದರ್ಭೋಚಿತವಾಗಿ ಗಮನಕ್ಕೆ ತರಲಾಗಿದೆ. ಚರಣಗಳನ್ನು ...ಯಾನುಸಾರವಾಗಿ ದೀರ್ಘಿಸಿ, ಪದ್ಯದ ಚರಣಗಳ ಸಂಖ್ಯೆಯನ್ನು ಹಿತಮಿತವಾಗಿ ...ಕ್ಷಿಸಿ ಪದ್ಯದ ಕಟ್ಟುಗಳನ್ನು ಒಮ್ಮೊಮ್ಮೆ ಪೂರ್ಣವಾಗಿ ಕೈಬಿಟ್ಟು ಆದರೆ ಲಯವನ್ನು ...ಟ್ಟು, ಒಮ್ಮೊಮ್ಮೆ ಆ ಸ್ಥೂಲವಾದ ಪದ್ಯಲಯವನ್ನು ಕೂಡ ಬದಿಗಿರಿಸಿ, ಗದ್ಯಲಯ ...ನ್ನು ಪ್ರಜ್ಞಾಪೂರ್ಣವಾಗಿ ಕೃತಿಗಿಳಿಸಿ, ಒಂದೆರಡು ಕಡೆಗಳಲ್ಲಿ ಗದ್ಯದ ನಿರರ್ಗಳ ...ವಾಹದ ಮಧ್ಯೆ ಮಧ್ಯೆ ಲಯಬದ್ಧವಾದ ರಗಳೆಯನ್ನು ಹದವಾಗಿ ಅನುಗೊಳಿಸಿ ...ನಾಯಕರು ತಮ್ಮ ಗೀತಗಳಲ್ಲಿ ಛಂದೋವೈವಿಧ್ಯವನ್ನು ಸಾಧಿಸಿದ್ದಾರೆ. ನವ್ಯ ಛಂದೋ ...ಚನೆಗೆ ಆದೆಷ್ಟೋ ಮಟ್ಟಿಗೆ ಅವರು ಕಾರಣರು ಎಂಬುದು ನೆನಪಿಡಬೇಕಾದ ಮಾತು.

ನವ್ಯಮಾರ್ಗ

ಎಸ್. ಅನಂತನಾರಾಯಣ

೧೯೫೭ರಲ್ಲಿ ಶ್ರೀ ಗೋಕಾಕರು, ಶ್ರೀ ಚನ್ನವೀರ ಕಣವಿಯವರೊಂದಿಗೆ 'ನವ್ಯಧ
ಎಂಬ ಕವನ ಸಂಗ್ರಹವನ್ನು ಸಂಪಾದಿಸಿ ಪ್ರಕಟಿಸಿದರು. ಅವರ ದೃಷ್ಟಿಯಲ್ಲಿ "ನವ್ಯಕಾ
ಸಂಕಲನವೊಂದು ಈಗ ಸಕಾಲಿಕ"ವಾಗಿತ್ತೆನ್ನಿಸಿತು. ಎಂದರೆ ೧೯೩೬ ಸೆಪ್ಟೆಂ
ಸುಮಾರಿಗೆ ಇಂಗ್ಲೆಂಡಿಗೆ ಪ್ರಯಾಣ ಹೊರಟಾಗ ಮತ್ತು ಇಂಗ್ಲೆಂಡಿನಲ್ಲಿ ಬರೆದ 'ಸಮು
ಗೀತಗಳು' (ಪ್ರಕಟನೆ—'ಸಮುದ್ರದಾಚೆಯಿಂದ'ದಲ್ಲಿ ೧೯೩೭ರಲ್ಲಿ ಕೆಲವು, ಅನ
೧೯೪೦ರಲ್ಲಿ ಪುಸ್ತಕರೂಪವಾಗಿ ಬಂದಿತು.) ಸಂಕಲನದಲ್ಲಿ ಬಳಸಿಕೊಂಡ 'ಮುಕ್ತಛ
-ನವ್ಯತೆಯಾಗಿ ಪೂರ್ಣಪ್ರಮಾಣದಲ್ಲಿ ಕನ್ನಡ ಕಾವ್ಯದಲ್ಲಿ ೨೦ ವರ್ಷಗಳನಂತರ ಕಂ
ಎಂದು ಹೇಳಬಹುದು. ಮುಕ್ತಛಂದದಲ್ಲಿ ಛಂದಸ್ಸು ಮತ್ತು ಶೈಲಿಗಳಲ್ಲಿ ಹೊಸತನವ
ತರುವ—ಪ್ರಯೋಗವನ್ನು ನಡೆಸಿದ ಗೋಕಾಕರನ್ನು ಪ್ರಯೋಗಶೀಲಕವಿಯೆ
ಕರೆಯಬಹುದು. ಅವರ 'ಸಮುದ್ರ ಗೀತಗಳು' ಕನ್ನಡಕ್ಕೇ ಹೊಸಪ್ರಯೋಗ. ಅಂತೆ
೧೯೫೦ರಲ್ಲಿ ಅವರು ಪ್ರಕಟಿಸಿದ 'ನವ್ಯ ಕವಿತೆಗಳು' ಎಂಬ ಸಂಕಲನ ಒಬ್ಬನೇ ಕವಿ
ನವ್ಯ ಕವಿತೆಗಳ ಮೊದಲ ಸಂಕಲನವೆಂಬುದನ್ನೂ ನೆನೆಯಬೇಕು. ಕನ್ನಡದಲ್ಲಿ ನವ್ಯಕ
ವನ್ನು ಪ್ರಾರಂಭಿಸಿದವರೇ ಗೋಕಾಕರು ಎಂಬುದು ಒಂದು ದೃಷ್ಟಿಯಿಂದ ಮಾತ್ರ
೧೯೦೯-೧೦ರಲ್ಲಿಯೇ ಅಮೆರಿಕಕ್ಕೆ ಹೋಗಿದ್ದ ಹುಚ್ಚೇಶ್ವರ ಮುದ್ಗಲ್ ಅವರು
ಕಾವ್ಯವನ್ನೇ ಹೋಲುವ ಪ್ರಾಯೋಗಿಕ ಕವಿತೆಗಳನ್ನು ಬರೆದಿದ್ದರೆಂಬುದನ್ನೂ, ಪೇಜಾ
ಸದಾಶಿವರಾಯರು ಇಪ್ಪತ್ತನೆಯ ಶತಮಾನದ ಮೂರನೆಯ ದಶಕದಲ್ಲಿ ಈ ಬಗೆ
ಪ್ರಯೋಗಗಳನ್ನು ನಡೆಸಿದ್ದರೆಂಬುದನ್ನೂ ಇಲ್ಲಿ ಪ್ರಾಸಂಗಿಕವಾಗಿ ನೆನೆಯಬೇಕು. ಅ
ಈ ಇಬ್ಬರು ಕವಿಗಳು ಎಲ್ಲೋ ಅಲ್ಲೊಂದು ಇಲ್ಲೊಂದು ಪ್ರಯೋಗ ನಡೆಸಿದ್ದರು
ಹೊಸ ರೀತಿಯ ಕವಿತೆ ಬರಬೇಕೆನ್ನುವ ಆಂತರಿಕ ಒತ್ತಡವಾಗಲಿ, ಅದನ್ನು ವ್ಯವ
ವಾಗಿ ರೂಪಿಸುವ ಪ್ರತಿಭೆಯಾಗಲಿ ಅವರಲ್ಲಿರಲಿಲ್ಲ. ಜೊತೆಗೆ ಅವರು 'ನವ್ಯಕಾವ್ಯ'
ಮಾತನ್ನೆಲ್ಲೂ ಉಪಯೋಗಿಸಲೂ ಇಲ್ಲ. ಅಂತೆಯೇ ಸಾಮಾಜಿಕ ಬೆಳವಣಿಗೆಯಿ
ಪ್ರೇರಿತರಾಗಿ, ತಮ್ಮ ಕಾವ್ಯ ಜೀವನದ ಆಂತರಿಕ ಪ್ರಜ್ಞೆಯ ವಿಕಸನದಿಂದ ಈ ಹ

ಪ್ರಯೋಗವನ್ನು ಕೈಗೊಂಡ ಮೊದಲಿಗರು ವಿ. ಕೃ. ಗೋಕಾಕರು. ಆಧುನಿಕ ಕಾವ್ಯದಲ್ಲಿ
ವರನ್ನು 'ನವ್ಯಕಾವ್ಯ ಪ್ರವರ್ತಕರು' ಎಂದು ಕರೆಯುವುದು ಸೂಕ್ತ.
'ನವ್ಯಕಾವ್ಯ' ಎನ್ನುವ ಪದವೇನೂ ಹೊಸದಲ್ಲ.

ಏ ಮಾತೋ ನವ್ಯಕಾವ್ಯ ಕ
ಊ ಮಹಿಯೊಳ್ ಬಿಡದೆ ಬೀದಿವರಿವೊಡೆ ಮೊದಲೊಳ್
ನೇಮಿಯ ನೆಮ್ಮುಗೆಯಿಲ್ಲದೊ
ಡೀ ಮತ್ತಿನ ಕವಿಮನೋರಥಂ ನಡೆದಪುದೇ

ಂದು ಮಧುರಕವಿ ಬರೆದುದರಿಂದ 'ನವ್ಯಕಾವ್ಯ' ಎಂಬ ಪದ ಬಂದಿದೆ. ಇದನ್ನು
ಧುನಿಕ ಕನ್ನಡ ಕಾವ್ಯದಲ್ಲಿ ಕನ್ನಡ ವಿಮರ್ಶೆಯಲ್ಲಿ ಮೊತ್ತಮೊದಲಬಾರಿ ಉಪ
ಯೋಗಿಸಿದವರು, ವಿ. ಕೃ. ಗೋಕಾಕರು. ಡಿಸೆಂಬರ್ ೧೯೫೦ರಲ್ಲಿ ಮುಂಬಯಿಯ
ನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷ ಭಾಷಣದಲ್ಲಿ ನವ್ಯಕಾವ್ಯದ
ಉಪಲಕ್ಷಣಗಳನ್ನು ವಿವರಿಸಲು ವಿವೇಚಿಸಲು ಪ್ರಯತ್ನಿಸಿದ ಗೋಕಾಕರ 'ನವ್ಯಕವಿತೆಗಳು'
ದೇ ತಿಂಗಳಲ್ಲಿಯೇ ಪ್ರಕಟವಾಯಿತು. ೫೦ ಪುಟಗಳ ಈ ಕಿರುಹೊತ್ತಿಗೆಯೂ ಗೋಕಾಕ
ರೆ ನವ್ಯಕಾವ್ಯವನ್ನು ಪ್ರಾರಂಭಿಸಿದವರೆಂಬ ಹೆಸರು ಸಲ್ಲುವಂತೆ ಮಾಡಿದೆ. ಈಚೆಗೆ ನವ್ಯ
ಕಾವ್ಯದಲ್ಲಿ ಬರೆಯುವವರೇ ಎಲ್ಲರೂ! ಗೋಪಾಲಕೃಷ್ಣ ಅಡಿಗರ ಹೆಸರಂತೂ ನವ್ಯ
ಕಾವ್ಯದ ಆಚಾರ್ಯರೆಂದೇ ಪ್ರಸಿದ್ಧವಾಗಿದೆ. ಅಡಿಗರು ಈ ತಲೆಮಾರಿನ, ಅದರಲ್ಲಿಯೂ
ಕಳೆದ ದಶಕದ ಅತಿಮುಖ್ಯ ಕನ್ನಡದ ಕವಿಗಳೆಂಬುದು ಕನ್ನಡ ಕಾವ್ಯಾಭ್ಯಾಸಿಗಳೆಲ್ಲ
ಒಪ್ಪುವ ಮಾತು. "ಗೋಕಾಕರ ಕಾವ್ಯ, ವಸ್ತು ಹಾಗೂ ಶೈಲಿ ಈ ಎರಡೂ ದೃಷ್ಟಿ
ಯಿಂದ ಈ ತಲೆಮಾರಿನ ಮಹತ್ವಪೂರ್ಣವಾದ ಪ್ರತಿನಿಧಿಯಾಗಿದೆ" ಎಂಬ ಮಾತು
ಈಗಿನ ವೇಳೆಗೆ ಕೂಡ ಅಷ್ಟಾಗಿ ಒಪ್ಪುವುದು ಕಷ್ಟವೆನ್ನಿಸಬಹುದು. ಆದರೆ ಅವರ
ಪ್ರಯೋಗಶೀಲತೆಯು ಮಹತ್ವಪೂರ್ಣವೆಂಬುದನ್ನು ಯಾರಾದರೂ ಅಲ್ಲಗಳೆಯುವಂತಿಲ್ಲ.
ತಮಾಷೆ ನೋಡಿದರೆ ಇಂದು ಗೋಕಾಕರನ್ನು ನವ್ಯಕವಿಯೇ ಅಲ್ಲವೆಂದು ಅಡಿಗರೂ ಅವರ
ಕೆಲವು ಮಿತ್ರರೂ ಹೇಳಿದಂತೆಯೇ ಕೆಲವು ನವ್ಯಕವಿಗಳು ಅಡಿಗರೇ ನವ್ಯಕಾವ್ಯದಲ್ಲಿ
ಅಷ್ಟು ಸಿದ್ಧಿ ಗಳಿಸಿಲ್ಲ, ಹಿಂದುಳಿದರು ಎಂಬ ಟೀಕೆ ಮಾಡುತ್ತಿದ್ದಾರೆ. ಇದು ಬಹಳ
ಸಹಜವೇ ಹೌದು. ಹಿಂದಿನವರು ಹಾಕಿಕೊಟ್ಟ ಹಾದಿಯಲ್ಲಿ ನಡೆದವರು, ಮುಂದೆ ನಡೆದು
ಹೋದರು, ಹಳಬರು ಹಿಂದೆ ಬಿದ್ದರೆನ್ನುವುದು ಪ್ರಕೃತಿಯ ನಿಯಮ. ಕಾವ್ಯವೂ ಇದಕ್ಕೆ
ಹೊರತಲ್ಲ. ಗೋಕಾಕರು ಕಡಿದು ಮಾಡಿದ ಮುಕ್ತಛಂದದ ಜಾಡನ್ನು ಅವರೇ ಹದ
ಗೊಳಿಸಿ, ನವ್ಯಕಾವ್ಯದ ಹಾದಿಯನ್ನು ಮಾಡಿದರು. ಅದನ್ನು ಇತರ ನವ್ಯಕವಿಗಳು
ವಿಸ್ತರಿಸಿ, ಉದ್ದವಾಗಿಸಿ, ದೊಡ್ಡಬೀದಿಯನ್ನೇ ಮಾಡಿದ್ದಾರೆ. ಇದರ ಮೂಲಕ ಪ್ರಗತಿ
ಸಾಧಿತವಾಗಿದ್ದರೆ, ಅದರ ಯಶಸ್ಸಿನ ಶ್ರೇಯಸ್ಸು ಸ್ವಲ್ಪಮಟ್ಟಿಗಾದರೂ ಆ ಹಾದಿ

ಯನ್ನು ಮೊದಲುಕಲ್ಪಿಸಿ, ಏನೂ ಇಲ್ಲದೆಡೆಯಲ್ಲಿ ಅದನ್ನು ಕಂಡು, ಕಡಿದ ಪ್ರವರ್ತಕ
ಸಲ್ಲಲೇಬೇಕು.

ಸ್ವಚ್ಛಂದ ಛಂದದಲ್ಲಿ
ಜಲಕ್ರೀಡಾವೃತ್ತದಲ್ಲಿ
ಅನುದಿನವು ತೆರೆಗಳು ಹಿಡಿವ ತಾಳಲಯದಲ್ಲಿ

ಗೀತವನ್ನು ಬರೆವನೆಂದು ಹೇಳಿಕೊಂಡು, ಅದನ್ನು ಬೀಳುಗಳೆಯಬಾರದೆಂದು ಕೊ
ದೈನ್ಯವಾಗಿಯೇ ಸಮುದ್ರಗೀತಗಳ ಪ್ರಾರಂಭದಲ್ಲಿ ಅರಿಕೆ ಮಾಡಿಕೊಂಡಿ
ಗೋಕಾಕರು.

"ಕೊಡದಿರು ಶರಧಿಗೆ ಷಟ್ಪದಿಯ ದೀಕ್ಷೆಯನು" ಎಂಬುದನ್ನು ಸರಳರಗಳೆಯ ಹ
ಹತ್ತಿರದ ಛಂದದಲ್ಲಿಯೇ ಹೇಳಿದ್ದಾರೆ. ಇದು ಒಂದು ರೀತಿಯಲ್ಲಿ ಮುಕ್ತಛಂ
ವಿಕಸನದ ರೀತಿ. ಹಳೆಯ ಛಂದಸ್ಸು ಬೇಡೆಂದರೂ ತಾನಾಗಿಯೇ ಮೂಡಿಬಂದು ಹೆ
ಲಯ ಪ್ರಭೇದಗಳಿಗೆ ಅವಕಾಶಕೊಡದೆ ನಿಂತಿದೆ. ಆದರೆ ಅನಂತರ ಬರುವ ಕವಿತೆಗ

ನವರಂಗವಾರಿಧಿಯಂತೆ
ವೃತ್ತಬಂಧಗಳು ಸಂಧಿಸಿ ಬಂದ
ಸಮುದ್ರವಾಗು, ಕವಿಯೆ !

ಎಂಬ ಪ್ರತಿಜ್ಞೆಯ ಮಾತನ್ನು ತಮಗೆ ತಾವೇ ಹೇಳಿಕೊಂಡು ಸಾಧಿಸುವ ಯ
ಮಾಡಿದ್ದಾರೆ.

ಯಾವ ತಾಳಕ್ಕೆ ಕುಣಿಯುವುದು ನನ್ನ ಜೀವ ?
ಯಾವ ಬೆಳಸನು ಕಂಡು ಸಮುದ್ರದಾಚೆ ಹಾರಿತು ಜೀವಹಂಸ?
. . . .
ನಿಬ್ಬಣದ ಮಬ್ಬಿನಲಿ ನೆಗೆದ ಹಂಸ— ಇಬ್ಬಣದಿರುಕಿನಲ್ಲಿ ಗಾಸಿಗೊಂಡಿತ್ತು.
ಜ್ಯೋತಿರ್ಮಯನ ಕಾಣಬೊಪ್ಪಿ ಕಪಲದ ಕತ್ತಲೆಯನಪ್ಪಿತು
ಚಿಕ್ಕೆಯ ಸಹ ಕಾಣದೆ ಕಕ್ಕಾಬಿಕ್ಕಿಯಾಗಿ
ಮಿಕ್ಕಲು ಶೂನ್ಯತೆಯು, ತಿಕ್ಕಲು ಯಾತನೆಯು
ದಿಕ್ಕು ದಿಕ್ಕಿನಲಿ ರೆಕ್ಕೆ ಬಡಿಯಿತಯ್ಯ ! ರೆಕ್ಕೆ ಬಡೆದು ದಣಿಯಿತು
ಬೆಳಕು ಸೀಮೆಯ ಬಿಟ್ಟು ನಿಶೆಯರಾಜ್ಯವ ಹೊಕ್ಕವರುಂಟೆ ?
ಹೊಕ್ಕು ಮತ್ತೆ ಬೆಳಕಿಗಾಗಿ ಬಾಯ್ ಬಿಟ್ಟವರುಂಟೆ ?
ಉಂಟು ! ಉಂಟು !

ಎಂಬುದರ ಛಂದಸ್ಸಿಗೆ ವಚನಗಳ ಛಂದಸ್ಸೇ ಊರೆಗೋಲೆಂಬುದು ಸ್ಪಷ್ಟ. ವ
ಸಾಹಿತ್ಯದ ಸಮತೋಲದ ರಚನೆಯ ಮರ್ಮ ಇಲ್ಲಿಯೂ ಕಾಣುತ್ತದೆ. ಆದರೆ ಇಲ್ಲಿ
'ಸೂಯೆಜ್ ಕಾಲುವೆ', 'ಕ್ರೀಟಪೇವಿ', 'ಉಂಟು', 'ನೌಕಾಯಂತ್ರ' ಮುಂ

ವಿತೆಗಳಲ್ಲಿಯಂತೆ ಹೊಸತನ ಇಣುಕಿದೆ. ಮುಕ್ತಛಂದದ ಮಣಿತ ಚೆನ್ನಾಗಿ
ಬೀರುತ್ತದೆ.

'ಮುಕ್ತಛಂದ' ನವ್ಯತೆಯ ಪ್ರಾರಂಭಿಕ ದೆಸೆ ಮಾತ್ರ. ನವ್ಯತೆಯ ಸಾಧನೆಯು
ರಿಯೇ ಆಯಿತು. ಅದರ ಲಕ್ಷಣಗಳನ್ನು ಗೋಕಾಕರೇ ವರ್ಣಿಸಿದಾರೆ. ಆದರೆ
ವ್ಯತೆಯ ದಿಕ್ಕಿನಲ್ಲಿ ಹೋಗುವಾಗಿನ ತಿಣಿಕಾಟ ಸಮುದ್ರಗೀತೆಗಳಲ್ಲಿಯೇ ಕಾಣಿಸಿ—
ದ್ಧಿಯೇ ಪ್ರಧಾನವಾಗಿ ಭಾವ ತಗ್ಗಿ, ಪ್ರತೀಕಗಳ ಸೃಷ್ಟಿಯಾಗದೆ, ಕೇವಲ ಗದ್ಯ
ನವೇ ಎದ್ದು ಕಾಣುವಂತಾಗಿದೆ. ಈ ಬುದ್ಧಿಪ್ರಧಾನತೆ ಗೋಕಾಕರ ಕಾವ್ಯಗಳೆಲ್ಲದ
ಲ್ಲಿಯೂ ಕಾಣಿಸಿಕೊಳ್ಳುವ ಒಂದು ದೌರ್ಬಲ್ಯವೆನ್ನಬಹುದು; ಕಾವ್ಯಗುಣವನ್ನು
ದು ಮುಸುಕಿಸುತ್ತದೆಂಬ ಆರೋಪವೂ ಉಂಟು.

> ಅಲ್ಲ! ನರಕವಲ್ಲವಿದು : ಮಾನವನು ನಿರ್ಮಿಸಿದ ಯಂತ್ರಶಾಲೆ,—
> ನಿಯಮಗಳನು ಪಾಲಿಸುವದಿದು : ಕಿವಿಯಲುಸುರಿದಂತೆ ಆಲಿಸುವದು.
> ಮುಗಿಲೊಳಗಿಂದ ಕಪ್ತಾನನೆಳೆದ ಗೆರೆಯನು ದಾಟಲಾರದಿದು.
> ಮತ್ತಿಲ್ಲಿ ನೋಡು : ದುಡಿಯುವರು ನಿನ್ನಂಥ ಮಾನವರಿಲ್ಲಿ ಸಂಬಳಕಾಗಿ.
> ಈ ಮಹಾಯಂತ್ರದಿಂದ ಮುನ್ನಡೆಯುವುದು ಹಡಗ—
> ಇದೀ ಪಟ್ಟಣವೊಂದು ತೇಲುತಿದೆ ನೀರ ಮೇಲೆ!
> ಇಮ ನರಕವೆನ್ನುವದು ಕುರುಡುತನ, ಅಜ್ಞಾನ!

ಏಳು ಸಾಲುಗಳೂ ಕೊನೆಯಲ್ಲಿ ಪೂರ್ಣವಿರಾಮ ಪಡೆದು, ಒಂದೊಂದು ಸಾಲಿಗೆ
ಂದೊಂದು ವಾಕ್ಯವಾಗಿ ನಿಲ್ಲುವುದು, ಸಾಲು ಸಾಲಿಗೂ ಉಸಿರುಕಟ್ಟಿದಂತಾಗುತ್ತದೆ.
ಟವಿಲ್ಲ, ಪ್ರತೀಕ ಪ್ರತಿಮೆಗಳ ಸೃಷ್ಟಿಯಿಲ್ಲ. ಆದರೆ ವಿಚಾರಗಳ ಮಜಲು ಸ್ಪಷ್ಟವಾಗಿ
ಣುತ್ತದೆ. ವಿಚಾರದ ವಿಕಸನ ಸ್ಪಷ್ಟವಾಗಿದೆ.

೧೯೫೦ರಲ್ಲಿ ಬಂದ 'ನವ್ಯಕವಿತೆಗಳು' ಹೊಸತನದ ಹೆಜ್ಜೆ ಗುರುತೆನ್ನಬಹುದು. ಈ
ಜ್ಜೆಗಳೂ ಸ್ಪಷ್ಟವಾಗಿ ಶಕ್ತವಾದುವು ಅಲ್ಲ. ನೆಲದಮೇಲೆ ನೆಟ್ಟಗೆ ನಿಂತ ನಿಲುವಿನ
ಟ್ಟ ನೆರಳಲ್ಲ. ಪ್ರತಿ ಕವಿತೆಯಲ್ಲಿಯೂ ಹೊಸ ಹೊಸ ಪ್ರಯೋಗ ನಡೆಸುವ ಪ್ರಜ್ಞೆ
ಷ್ಟವಾಗಿದೆ.

> ಓ ವಜ್ರಸಮುನ್ಮುಕ್ತಿತ್ವವೇ!
> ಗಾಂಧಾರೀ ದೃಷ್ಟಿಯಾಡದ ಚಿತ್ರದ್ರವ್ಯ
> ನಿನ್ನ ಮುಖ್ಯ ಪ್ರಾಣದಲ್ಲಿಯೇ ಸಿಂಹಾಸನಸ್ಥವಾಗಿದೆ

ಂಬಲ್ಲಿ ಪ್ರತಿಮಾಸೃಷ್ಟಿಯ ಪ್ರಯತ್ನವನ್ನು ಕಾಣಬಹುದು. ಅಲ್ಲದೆ 'ಕ್ಲೋರೊ
ಾರ್ಮ' ಕವಿತೆಯ ಆಡುಮಾತಿನ ಲಯ, ನಾಟಕೀಯ ಪ್ರಾರಂಭ ಪ್ರಭಾವಶಾಲಿ
ವಾಗಿದೆ :

ಒಂದು
ಎರಡು
ಮೂರು !
ಆಂ ? ಏನಂದಿರಿ ?
ನನ್ನ ಹೆಸರೆ ?

ಪ್ರತಿ ಕವಿತೆಯಲ್ಲಿಯೂ ಪ್ರಯೋಗದ ಹೊಸತನದ ಆಹ್ವಾನ (challenge)ವಿದ
ಅದನ್ನು ಕವಿ ಒಪ್ಪಿಕೊಂಡು ಎದುರಿಸುವುದು ಸ್ಪಷ್ಟವಾಗಿ ಕಾಣುತ್ತದೆ.

ನವ್ಯತೆಯ ಪ್ರತಿಪಾದನೆಯನ್ನು 'ಸಾಹಿತ್ಯ ಹಾಗೂ ನವ್ಯತೆ' ಮತ್ತು 'ನವ್ಯಕಾವ ರೀತಿ'—ಈ ಭಾಷಣಗಳಲ್ಲಿ ಗೋಕಾಕರು ಪ್ರಬಲವಾಗಿಯೇ ಮಾಡಿದ್ದಾರೆ. ಅವರೇ ಹ ಕೊಂಡಿರುವಂತೆ "ಈ ಪ್ರತಿಪಾದನೆಯ ಹಿಂದೆ ಒಂದು ಬಗೆಯ ಜೀವನದೃಷ್ಟಿಯ ಸ ವಿಕಾಸವಿದೆ." ನವ್ಯಕವಿತೆಯ ತಾತ್ವಿಕಹಿನ್ನೆಲೆಯೇನೆಂಬುದರ ವಿವೇಚನೆ ಇಲ್ಲಿ ಸಿಗುತ್ತ ನವ್ಯಕಾವ್ಯದ ಸ್ಫೂರ್ತಿ ಪಶ್ಚಿಮದ ಕಾವ್ಯದಿಂದ ಬೀಸಿದ ಗಾಳಿಯಿಂದ ಎಂದು ಹೇ ಗೋಕಾಕರು ಕನ್ನಡದ ಕಾವ್ಯದಲ್ಲಿ ಸರ್ವಜ್ಞನಕಾಲದಿಂದಲೂ ನವ್ಯತೆ ಇದೆ ಎಂದು ಸ ಸಲು ಹೊರಟಿದ್ದಾರೆ. ಹೀಗಾಗಿ 'ನವ್ಯತೆ'ಯೆನ್ನುವುದು ಕೇವಲ ಸಹಜ ವಿಕಸನ ಲಕ್ಷಣ ಎಂಬ ಭ್ರಾಂತಿ ಬರುವಂತಾಗುತ್ತದೆ. ತಾತ್ವಿಕ ಚಿಂತನೆಯಲ್ಲಿ ಕಾಣುವ ವಿವೇಚ ಶೀಲತೆ, ಅದನ್ನು ಕಾವ್ಯಕ್ಕೆ ಅನ್ವಯಿಸುವಾಗ ಮರೆತುಹೋದಂತೆ ತೋರುತ್ತದೆ.

ಕವಿಯ ಬಾಳು ಅಪೂರ್ಣ ದೃಷ್ಟಿಯನ್ನು ಹಾನು ಸಮಗ್ರತೆಯನ್ನು ಪಡೆ ಬೇಕೆನ್ನುವುದು, ಭಾವ-ಬುದ್ಧಿಗಳ ದಾಂಪತ್ಯದಿಂದ ಒಳ್ಳೆಯ ಕಾವ್ಯ ಸೃಷ್ಟಿಯ ಬಹುದೆಂದು ಹೇಳುವ ಮಾತು, ಸ್ಪಷ್ಟವಾಗಿ ಗುರಿಯನ್ನು ಗುರುತಿಸುತ್ತವೆ. "ಕನ್ನಡ ಕಾ ದಲ್ಲಿ ಆಧುನಿಕ ಯುಗವು ಮುಗಿಯುವ ಸಮಯವು ಬಂದಿದೆ. ನವ್ಯಯುಗ ಪ್ರಾ ವಾಗಲಿದೆ" ಎಂದು ೧೯೫೦ರಲ್ಲಿಯೇ ಗೋಕಾಕರು ಘೋಷಿಸಿದರು. ಆಧುನಿಕ ಕಾ ಪರಂಪರೆಯನ್ನು ವಿವರಿಸಿ ಅನಂತರ ಅದರ ಸಾಧನೆಗಳನ್ನು ತೋರಿಸಿಕೊಟ್ಟು ಹಿಂ ಕವಿಗಳಲ್ಲಿ ಕಾಣಬರುತ್ತಿರುವ ಕೊರತೆಗಳನ್ನು ಈಚಿನ ಕವಿಗಳು ತುಂಬುತ್ತಿದ್ದಾರೆ ದನ್ನು ನಿಕರವಾಗಿ ಸೂಚಿಸಿದ್ದಾರೆ. "ಆಧುನಿಕ ಕನ್ನಡ ಕಾವ್ಯವೂ ತನ್ನ ಪರಂಪರೆ ಸಿದ್ಧಿಯನ್ನು ಮುಟ್ಟಿದಾಗ—ಮುಂದೇನೆಂಬ ಪ್ರಶ್ನೆ ಏಳುತ್ತದೆ. ಆ ಪ್ರಶ್ನೆಗೆ ಉ ಇದು : ನವ್ಯಕಾವ್ಯ" ಎಂದು ನಿಚ್ಚಳವಾಗಿ ನವ್ಯಕಾವ್ಯದ ಅಗತ್ಯವನ್ನೂ, ಅನಿವಾ ವಾಗಿಯೇ ಅದು ಬರುವುದೆಂಬುದನ್ನೂ ಘೋಷಿಸಿದ್ದಾರೆ. ೧೯೫೦ರಲ್ಲಿಯೇ ಇ ನಿಸ್ಪೃಷ್ಟವಾಗಿ ನವ್ಯಕಾವ್ಯದ ಬರವು ಮತ್ತು ಅನಿವಾರ್ಯತೆಗಳನ್ನು ಗುರುತಿ ಗೋಕಾಕರು ಮುಂದಿನ ನವ್ಯಕಾವ್ಯಕ್ಕೆ ಸ್ಫುರಣ ನೀಡಿದರೆಂಬ ಮಾತಿನಲ್ಲಿ ಉತ್ತ ಯಿಲ್ಲ. ಅನಂತರ ಬಂದ ನವ್ಯಕವಿಗಳು ಗೋಕಾಕರ ನಿಶಿತವಾದ ವಿಚಾರಗಳಿಂದ ಪ್ರ

ರಾಗಿ ನವ್ಯಕಾವ್ಯದ ನಿಲುವನ್ನು ಕಂಡುಕೊಂಡರು. ಗೋಕಾಕರು ಬಿಡಿಸಿ ಬಿಡಿಸಿ ಳಿದ ವಿಚಾರಗಳನ್ನು ಬೆಳೆಸಿಕೊಂಡು ನವ್ಯಕಾವ್ಯದ ಸಿದ್ಧಾಂತವನ್ನು ರೂಪಿಸಿದರೆನ್ನ ಬಹುದು. ಸಂಕೀರ್ಣಭಾವಗಳು, ಬಗೆಬಗೆಯ 'ಮೂಡು'ಗಳು (ಈ ಇಂಗ್ಲಿಷ್ ವನ್ನು —Mood— ಮೊದಲ ಬಾರಿಗೆ ಕನ್ನಡದಲ್ಲಿ ಅದೇ ಅರ್ಥದಲ್ಲಿಯೇ ಬಳಸಿ, ಕೆಗೆ ತಂದವರೂ ಗೋಕಾಕರೇ) ನವ್ಯಕವಿಯಲ್ಲಿ ಅಭಿವ್ಯಕ್ತಿಗೊಳ್ಳುತ್ತವೆ. ಆಳ, ತ್ತರಗಳುಳ್ಳ ಓದು, ಆಂತರಿಕತೆ, ವಸ್ತುನಿಷ್ಠತೆ, ರೂಪಕ ಮಾಲಿಕೆಗಳನ್ನು ಹೆಣೆಯು ದು—ತಾರ್ಕಿಕತೆಯನ್ನು ಮೀರಿ, ಅಂತಃಸ್ಫುರಣದಿಂದ ಕಾವ್ಯಸತ್ವದ ಮೂಡಿಕೆ, ತಿಸೂಕ್ಷ್ಮಸೃಷ್ಟಿಯಿಂದ ಹೆಚ್ಚು ಹೆಚ್ಚಾಗಿ ಧ್ವನಿಯ ರೂಪದಿಂದ ಅರ್ಥವ್ಯಾಪ್ತಿಯನ್ನು ಸ್ತಿಸುವುದು—ಪ್ರಕಾಶವಾದ ಪ್ರಜ್ಞೆಗಿಂತ ಸುಪ್ತಪ್ರಜ್ಞೆಯ, ಸ್ವಪ್ನತಂತ್ರದ ಬಳಕೆ, ತಿಶಬ್ದವೂ ಚಿಂತನಪರವಾಗಿ, ಅರ್ಥಸ್ಫುರಣವುಂಟುಮಾಡುವಂತಿರುವುದು, ಸಾಮಾನ್ಯ ತಿನಲ್ಲಿಯೂ ಹೆಚ್ಚಿನ ವ್ಯಂಜಕ ಸತ್ವವನ್ನು ಕೂಡಿಸುವುದು—ಹೀಗೆ ನವ್ಯತೆಯ ಣಗಳನ್ನು ಗೋಕಾಕರು ವಿವರಿಸಿದ್ದಾರೆ. ಸ್ವಚ್ಛಂದ ಛಂದವನ್ನು ಹೇಗೆ ನಿಸ್ಸಂಕೋಚ ಗಿ ಬಳಸಿಕೊಳ್ಳಬೇಕೆಂಬುದನ್ನು ಒತ್ತಿಹೇಳಿ ವಸ್ತುವಿನ ಆಯ್ಕೆಯಲ್ಲಿ ಕವಿಗೆ ಪೂರ್ಣ ಸ್ವಾತಂತ್ರ್ಯವಿರುತ್ತದೆ, ವ್ಯಕ್ತಿತ್ವವನ್ನು ಮೀರಿದ ವ್ಯಕ್ತ್ಯತೀತದರ್ಶನ ನ್ನು ನವ್ಯಕವಿ ಮೂಡಿಸುತ್ತಾನೆ ಎಂದು ನವ್ಯತೆಯ ಲಕ್ಷಣವನ್ನು ನಿಷ್ಕೃಷ್ಟಗೊಳಿಸಿ ರೆ. ಅವರ ಕಾವ್ಯದಲ್ಲಿ ಇದು ಎಷ್ಟರಮಟ್ಟಿಗೆ ಸಾಧಿತವಾಗಿದೆ ಎಂಬುದು ಅಪ್ರಕೃತ. ರ ಕೃತಿಗಳ ಬಗ್ಗೆ ಬೇರೆ ಬೇರೆ ವಿಮರ್ಶಕರ ಲೇಖನಗಳಿವೆ. ಆದ್ದರಿಂದ ನಾನು ಅವು ಬಗ್ಗೆ ಏನೂ ಹೇಳುವುದಿಲ್ಲ. ವಿ. ಕೃ. ಗೋಕಾಕರು ನವ್ಯಕಾವ್ಯದಲ್ಲಿ ಸಿದ್ಧಿಪಡೆದುದು ಗಾದರೂ ಇರಲಿ, ಅವರು ನವ್ಯಕವಿತೆಯ ಲಕ್ಷಣಗಳನ್ನು ಅಗತ್ಯವನ್ನು, ಅನಿ ರ್ಯತೆಯನ್ನು ಕಂಡುಕೊಂಡು ೩೩ ವರ್ಷಗಳ ಹಿಂದೆಯೇ ಅದಕ್ಕೆ ಹಾದಿ ಹಾಕಿ ಟ್ಟರು, ಹದಿ ಹಾಕಿಕೊಟ್ಟರೆಂಬುದು ಸುಸ್ಪಷ್ಟ. ನವ್ಯಕಾವ್ಯದ ಅಗತ್ಯದ ಬಗ್ಗೆ ಮಾತ ಡುತ್ತಾ ೧೯೫೭ರ ದೆಹಲಿಯ ಸಾಹಿತ್ಯ ಸಮಾರೋಹದಲ್ಲಿ ಅವರು ಹೇಳಿದ ಮಾತು ನ್ನು ನವ್ಯ ಕವಿಗಳು ಗಮನದಲ್ಲಿಡಬೇಕು :

The primary concern of the poet in all these matters is his own psychological need, his creative urge which demands satisfying expression in terms of suitable imagery, theme, rhythm and style.

ಕ್ರಿಯಾತ್ಮಕ ಸ್ಫೂರ್ತಿಗೆ ತಕ್ಕ ಸರಿಯಾದ ಪ್ರತಿಮೆ, ವಸ್ತು, ಲಯ ಮತ್ತು ಶೈಲಿ ಗಳ ಮೂಲಕ ಸೂಕ್ತವಾದ ಅಭಿವ್ಯಕ್ತಿ ಪಡೆದುಕೊಳ್ಳುವುದೇ ಕವಿಯ ಪ್ರಮುಖ

ಮಾನಸಿಕ ಆವಶ್ಯಕತೆ. ಆ ಬಗ್ಗೆ ಅವನು ಕಳಕಳಿಪಡಬೇಕಾದುದೇ ಮುಖ್ಯ. ತ
ಕ್ರಿಯಾತ್ಮಕ ಸ್ಫೂರ್ತಿಗೆ ತಕ್ಕ ರೂಪ ನವ್ಯಕಾವ್ಯವೇ ಎಂಬುದನ್ನು ಅರಿತೇ ಬರೆ
ಬೇಕೆಂಬ ವಿವೇಚನೆ ಈಗಂತೂ ಅತ್ಯಗತ್ಯವೆನ್ನುವುದು ಎಲ್ಲರಿಗೂ ಸ್ಪಷ್ಟ. ಆ
ಯಲ್ಲಿಯೂ ಎಚ್ಚರಿಕೆ ಕೊಟ್ಟಿದಾರೆ ಗೋಕಾಕರು. ಹೀಗೆ ಮುಕ್ತಛಂದದ ಮೊದ
ರಾಗಿ, 'ನವ್ಯಕಾವ್ಯ' ವೆಂಬ ಪದವನ್ನು ಮೊತ್ತಮೊದಲಬಾರಿಗೆ ಬಳಸಿ, ಆಧುನಿಕದ
ನವ್ಯತೆಗೆ ಹಾದಿಯನ್ನು ತೋರಿದ ನವ್ಯಕಾವ್ಯ ಪ್ರವರ್ತಕರಾಗಿದಾರೆ, ಗೋಕಾಕರು.

ಕಾವ್ಯಮೀಮಾಂಸೆ

ಡಾ. ಕೆ. ಕೃಷ್ಣಮೂರ್ತಿ

I

ಧುನಿಕ ಕನ್ನಡ ಸಾಹಿತ್ಯದ ಇತಿಹಾಸವೆಂದರೆ ಅತ್ತ ಬಿ. ಎಂ. ಶ್ರೀ ಇತ್ತ ವಿನಾಯಕರು ವರಿಬ್ಬರ ಬಹುಮುಖ ವ್ಯಕ್ತಿತ್ವ ವಿವೇಚನೆಯೇ ಎಂದರೂ ಸಲ್ಲುತ್ತದೆ. ಕಾವ್ಯವಿಮರ್ಶೆ ಎಂಬ ಸಾಹಿತ್ಯದ ಸ್ವತಂತ್ರಕ್ಷೇತ್ರವೇ ಕನ್ನಡದಲ್ಲಿ ಇಲ್ಲದಿದ್ದಾಗ, ಆಂಗ್ಲ-ಸಾಹಿತ್ಯ ಲ್ಲಿಯ ಕಾವ್ಯಶ್ರೀಯನ್ನು ಅರಿತು ಅರಗಿಸಿಕೊಂಡು ಕನ್ನಡಕ್ಕೆ ಹೊಸ ಕಾವ್ಯದ ಸಿರನ್ನೂ ರಸವಿಮರ್ಶೆಯ ಹಸಿರನ್ನೂ ಕೂಡಿಯೇ ಒದಗಿಸಲು ಆರಂಭಿಸಿ, ತಮ್ಮ ಹುಮುಖ ಪ್ರತಿಭೆಯನ್ನು ಕನ್ನಡ ಸಾಹಿತ್ಯಕ್ಕಾಗಿಯೇ ಮೀಸಲಿಟ್ಟವರಲ್ಲಿ ಬಿ. ಎಂ. ರೀಯವರಿಗಿಂತ ವಿನಾಯಕರು ವಯಸ್ಸಿನಲ್ಲಿ ಕಿರಿಯರು; ಆದರೆ ಯಶಸ್ಸಿನಲ್ಲಿ ಹಿರಿಯರು. ರ್ವದ ಹಳಗನ್ನಡ ಸಾಹಿತ್ಯವನ್ನು ವಿನೂತನ ದೃಷ್ಟಿಯಿಂದ ಪುನರವಲೋಕಿಸಲೆಂದು ೊದಲಿಗೆ ಇಬ್ಬರೂ ಹೊರಟರು. ಗ್ರೀಕರ ದುರಂತದೃಷ್ಟಿಗೆ ಮಾರುಹೋಗಿ ಅದನ್ನು ಮ್ಮ ಚಂಪೂ ಸಾಹಿತ್ಯದಲ್ಲಿ ಅನುಸಂಧಾನ ಮಾಡಲು ಶ್ರೀಯವರು ಮುಂದಾದರು; ಸ್ಕರನ್ನು ತಮ್ಮ ವಾಕ್‌ಪ್ರವಾಹದಿಂದ ಪರವಶಗೊಳಿಸಿದರು. ಆದರೆ ಪರಂಪರಾಗತವಾದ ಮ್ಮ ಕಾವ್ಯಸಂಪ್ರದಾಯದ ಮೂಲತತ್ವಗಳನ್ನು ಕೂಡ ಅವರು ಪುರಸ್ಕರಿಸಲಿಲ್ಲ. ವ್ಯ ರಸಿಕತೆಯಿಂದ ಚಂಪುಗಳಲ್ಲಡಗಿರುವ ನಾಟಕಗಳನ್ನು ತಮ್ಮ ರೀತಿಯಿಂದ ಹೊರ ಗೆಸು ಹಳಗನ್ನಡವನ್ನು ಹೊಸ ದೃಷ್ಟಿಯಿಂದ ಓದಲು ನಾಂದಿ ಹಾಕಿದರು. ಜನಪ್ರಿಯ ಂಗ್ಲ ಕವಿತಾಸಂಗ್ರಹದಿಂದ ಕೆಲವು ಪದ್ಯಗಳನ್ನು ಹೊಸ ಛಂದಸ್ಸುಗಳಲ್ಲಿ ಕನ್ನಡಕ್ಕೆ ಾಷಾಂತರಿಸಿ ಕವಿಗಣಕ್ಕೆ ಮಾರ್ಗದರ್ಶಿಗಳಾದರು. ಸಾಹಿತ್ಯ ಚರಿತ್ರೆಯನ್ನು ಬರೆದು ದರ ಮೈಲಿಗಲ್ಲುಗಳನ್ನು ಗುರುತಿಸುವ ಕಾರ್ಯವನ್ನು ಕೈಗೊಂಡರು. ನಾಡನ್ನೆಲ್ಲ ಸುತ್ತಿ ಖಂಡ ಕರ್ನಾಟಕದ ಕಾರ್ಯವನ್ನು ಕಳಕಳಿಯಿಂದ ಕೈಗೊಂಡರು. ಆದರೆ ಕಾವ್ಯ ಮಾಂಸೆಯನ್ನು ಕುರಿತು ಅವರ ರಚನೆ ಹೆಚ್ಚಾಗಿ ಬರಲಿಲ್ಲ.

ವಿನಾಯಕರು ಕೂಡ ಆಂಗ್ಲಸಾಹಿತ್ಯದ ಆಳವಾದ ತಮ್ಮ ಅಭ್ಯಾಸದ ಫಲವನ್ನು ನ್ನಡದ ವಿಕಾಸಕ್ಕಾಗಿಯೇ ಮೀಸಲಿಟ್ಟು ನಾಲ್ಕು ದಶಕಗಳಾಗಿವೆಯೆನ್ನಬಹುದು. ವರ ಸಂಸ್ಕಾರದಲ್ಲಿ ಹಳಗನ್ನಡದ ಅಧ್ಯಯನವು ಸೇರಿರುವಂತೆ ಡಾ. ದ. ರಾ. ಬೇಂದ್ರೆ,

ಡಾ. ರಂ. ಶ್ರೀ. ಮುಗಳಿ ಮುಂತಾದ ರಸಿಕ ಮಿತ್ರರ ಪ್ರಭಾವವೂ ಕೂಡಿದೆ. ಪ್ರಾಚಿ
ಆಧ್ಯಾತ್ಮಿಕ ಪರಂಪರೆಯನ್ನು ಕುರಿತು ಗೌರವವಿರುವಂತೆಯೇ ನವೋನವ ಸಮಕಾಲಿ
ರಚನಾವಿಧಾನಗಳ ಬಗೆಗೂ ಆಸಕ್ತಿಯಿದೆ. ವಿನಾಯಕರಲ್ಲಿ ಕವಿ-ಗಮಕಿ-ವಾದಿ-ವಾ
ಈ ಚತುರ್ಮುಖಗಳೂ ಪರಸ್ಪರ ವಿರೋಧ ಬಾರದಂತೆ ಸಮನ್ವಯಗೊಂಡಿವೆ. ಅ
ಸಾಹಿತ್ಯದ ಇತಿಹಾಸದ ಸಂಪೂರ್ಣ ಪರಿಚಯದಿಂದ ಕಾಲದಿಂದ ಕಾಲಕ್ಕೆ ಕವಿತಾರಾ
ದಲ್ಲಿ ಉಂಟಾದ ಮಾರ್ಪಾಡುಗಳೂ ಕಾವ್ಯಮೀಮಾಂಸೆಯಲ್ಲಿ ತಲೆದೋರಿದ ಕ್ಲಾ
ಕಲ್, ನಿಯೋಕ್ಲಾಸಿಕಲ್, ರೋಮೆಂಟಿಕ್, ಮಾಡರ್ನಿಸ್ಟ ಮುಂತಾದ ವಿಭಿನ್ನ ವಿಚಾ
ಪ್ರಣಾಲಿಗಳೂ ಅವರಿಗೆ ಕರತಲಾಮಲಕವಾಗಿವೆ. ಕಾವ್ಯಮೀಮಾಂಸೆಯನ್ನು ಒಂ
ಶಾಸ್ತ್ರವೆಂದರೆ ಅದರ ಮೂಲಸೂತ್ರಗಳನ್ನು ನಿಸ್ಸಂದಿಗ್ಧ, ತರ್ಕಶುದ್ಧ ಹಾ
ಸುಸಂಬದ್ಧ ರೀತಿಯಿಂದ ನಿರ್ಣಯಿಸುವ ವಿಚಾರಶಕ್ತಿ ವಿನಾಯಕರಲ್ಲಿರುವಂತೆ ಎರ
ಯವರಲ್ಲಿ ನಾವು ಕಂಡಿಲ್ಲ. ಆದರೆ ಯಾವುದೇ ಪಂಥದ ಕಾವ್ಯವಿರಲಿ, ಯಾವು
ಯುಗದ ಕವಿತೆಯಿರಲಿ, ಅದರ ಗುಣವನ್ನು ಮೆಚ್ಚುವ ರಸಿಕತೆಗೆ ಕೂಡ ಅವ
ಲೋಪವಿಲ್ಲ. ಬುದ್ಧಿ-ಭಾವನೆಗಳ ಸಮತೂಕವನ್ನು ಅವರ ಬರವಣಿಗೆ ಎಂದೂ ಕಳ
ಕೊಂಡಿಲ್ಲ. ಪ್ರಾಚೀನ ಪರಂಪರೆ, ಅರ್ವಾಚೀನ ವಿಚಾರಧಾರೆಗಳೆರಡಕ್ಕೂ ಅಭ
ಪೂರ್ವ ಸಮನ್ವಯವನ್ನು ಸಾಧಿಸಿರುವುದೇ ವಿನಾಯಕರ ಸಿದ್ಧಿ ಮತ್ತು ಬುದ್ಧಿ.

ಬುದ್ಧಿ-ಸಿದ್ಧಿಗಳೆರಡೂ ವರಿಸಿಬಂದಿರುವ ವಿನಾಯಕರ ಶೈಲಿಯಲ್ಲಿ ರುಚಿಶುದ್ಧಿಯ
ಸೇರಿರುವದು ವಿಶೇಷ. ಅವರು ಹತ್ತಾರು ಸ್ವತಂತ್ರ ಕಾವ್ಯ-ನಾಟಕಗಳನ್ನು ರಚಿಸಿ ಕ
ದಿಂದ ಕಾಲಕ್ಕೆ ಪರಿಣಾಮಶೀಲ ಸಾಹಿತ್ಯ ಪ್ರವೃತ್ತಿಗಳನ್ನು ಯಾವದೇ ಸದ್ದುಗದ್ದ
ವಿಲ್ಲದಂತೆ ಕನ್ನಡ ಕ್ಷೇತ್ರದಲ್ಲಿ ಅಂಕುರಾರ್ಪಣ ಮಾಡಿದ್ದಾರೆ. ರೋಮೆಂಟಿಕ್ ಮನೆ
ಧರ್ಮವನ್ನು ಒಸ್ಮೆ ಮನವಾರೆ ಮೆಚ್ಚಿದ ವಿನಾಯಕರೇ ನವ್ಯ ಕವಿತೆಯ ಸೂತ್ರಧಾರ
ಆಗಿದ್ದಾರೆ. ತಮ್ಮ ಪ್ರವಾಸ ಜೀವನದ ಅನೇಕ ಮುಖಗಳನ್ನು ರಸಮಯವಾ
ಚಿತ್ರಿಸುವ ಕೃತಿಗಳನ್ನು ಬರೆದು ಜನಪ್ರಿಯರಾಗಿದ್ದಾರೆ. ಜೀವನದಲ್ಲಿ, ಒಡನಾಡಿ
ಸಲ್ಲಾಪದಲ್ಲಿ, ಪ್ರಕೃತಿಯ ನಿರೀಕ್ಷಣೆಯಲ್ಲಿ, ತತ್ತ್ವದ ಚಿಂತನೆಯಲ್ಲಿ, ತಮ್ಮ ವೈಯಕ್ತಿ
ವಿಚಾರವಿಲಾಸಗಳನ್ನು ಆಕರ್ಷಕ ಪ್ರಬಂಧಗಳಲ್ಲಿ ಲೀಲಾಜಾಲವಾಗಿ ಮೆರೆಯ
ದ್ದಾರೆ. ತಮ್ಮ ವಿದ್ವತ್ತೆಯನ್ನು ಎತ್ತಿ ತೋರಿಸುವ ಮಹಾಗ್ರಂಥಗಳನ್ನು ಕೂಡ ಇಂಗ್ಲಿ
ನಲ್ಲಿ ಬರೆದಿದ್ದಾರೆ. ಈ ಲೇಖನದಲ್ಲಿ ಅವುಗಳ ಪ್ರಸಕ್ತಿಯನ್ನು ಬಿಟ್ಟು, ಕೇವಲ ವಿಮ
ಯೆಂದೇ ರಚಿತವಾಗಿರುವ ಕನ್ನಡ ಪ್ರಬಂಧಗಳಲ್ಲಿ ಕೆಲವನ್ನು ಮಾತ್ರ ಗಣನೆಗೆ ತೆ
ಕೊಳ್ಳಬೇಕಾಗಿದೆ. ಎಷ್ಟೋ ಲೇಖನಗಳನ್ನು ಅವರು ಮಾಸಪತ್ರಿಕೆಗಳಲ್ಲಿ ಈ ವಿಷ
ವಾಗಿ ಬರೆದಿರುವದೂ ದಿಟ. ಆದರೆ ಅವನ್ನೆಲ್ಲ ಇಲ್ಲಿ ಸಂಗ್ರಹಿಸಲು ಸಾಧ್ಯವಾಗದ್ದಕ
ವಿಷಾದಿಸಬೇಕಾಗಿದೆ.

II

ಡಿಸೆಂಬರ ೧೯೩೪ರಲ್ಲಿ ರಾಯಚೂರ ಲೇಖಕರ ಗೋಷ್ಠಿಯ ಅಧ್ಯಕ್ಷ ಭಾಷಣದ ರ್ಷಿಕೆ 'ಕವಿ, ಕಾವ್ಯ, ಮಹೋನ್ನತಿ'. ಅದರಲ್ಲಿ ಮೂಡಿಬಂದಿರುವ ಅವರ ಮೂಲಭೂತ ಚಾರಗಳು ಕಾವ್ಯಮೀಮಾಂಸೆಯ ನಿತ್ಯಸತ್ಯಗಳೆನಿಸುವಂತಿರುವದನ್ನು ನಿರ್ದೇಶಿಸಲು ಲವೊಂದು ಅವತರಣಿಕೆಗಳನ್ನು ಕೆಳಗೆ ಸಂಗ್ರಹಿಸಿದೆ:

೧. ಕಾವ್ಯ ಮತ್ತು ಶಾಸ್ತ್ರ

'ರಸಾನುಭವವನ್ನು ನಿರೂಪಿಸುವ ಲೇಖನವೆಲ್ಲ ಕಾವ್ಯ. ಇದನ್ನೆಸಗುವ ಲೇಖಕರು ಕವಿಗಳು. ಇವನ್ನುಳಿದುದೆಲ್ಲ ಶಾಸ್ತ್ರ; ಇಲ್ಲವೆ ಸಾಹಿತ್ಯಕ್ಕೆ ಸಂಬಂಧಿಸಿದ ಶಾಸ್ತ್ರ' (ಪು. ೬)

'ನಿಜವಾದ ಭೇದವು 'ಕಾವ್ಯ' ಮತ್ತು 'ಗದ್ಯ'ಗಳ ನಡುವಿರುವದಿಲ್ಲ. 'ಕಾವ್ಯ' ಮತ್ತು 'ಶಾಸ್ತ್ರ'ಗಳ ನಡುವಿದೆ. ಗದ್ಯಪದ್ಯಗಳ ಭೇದವು ತಾಳಲಯಗಳ ಅಂತರದಲ್ಲಿದೆ. ಗದ್ಯವು ನಡೆದರೆ ಪದ್ಯವು ಕುಣಿಯುತ್ತದೆ. ಕಾವ್ಯ ಶಾಸ್ತ್ರಗಳಲ್ಲಿ ತಿರುಳಿನದೇ ವ್ಯತ್ಯಾಸವಿದೆ. ಶಾಸ್ತ್ರಕಾರನು **ಇದ್ದ** ಸಂಗತಿಗಳನ್ನು ವಿವರಿಸುತ್ತಾನೆ; ಚರ್ಚಿಸುತ್ತಾನೆ. ಕವಿಯು **ಇರಬಹುದಾದ** ಸಂಗತಿಗಳನ್ನು ಬಣ್ಣಿಸುತ್ತಾನೆ.' (ಪು. ೭)

ಅರಿಸ್ಟೊಟಲ್ಲಿನಿಂದ ಆರಂಭವಾಗಿ ಶತಮಾನಗಳ ಕಾಲ ಪಾಶ್ಚಾತ್ಯರ ತತ್ತ್ವಚಿಂತನೆಯಲ್ಲಿ ಮೂಡಿಬಂದ ಮಹತ್ವದ ಪ್ರಥಮಸೂತ್ರಗಳು ಇಲ್ಲಿ ಯಾವ ಆಡಂಬರವೂ ಇಲ್ಲದೆ ಡಕವಾಗಿರುವಂತೆಯೇ ನಮ್ಮ ಪೂರ್ವದ ಪ್ರಸಿದ್ಧ ಲಕ್ಷಣಕಾರರ ಪರಿಭಾಷೆಗೆ ಕೂಡ ಪ್ಪುವಂತೆ ಜಾಗ್ರತೆ ವಹಿಸಿರುವದು ಇಲ್ಲಿಯ ವೈಶಿಷ್ಟ್ಯ. ಇದರ ಸಮರ್ಥನೆಗೆ:

> ದ್ವೇ ವರ್ತ್ಮನೀ ಗಿರಾಂ ದೇವ್ಯಾಃ
> ಶಾಸ್ತ್ರಂ ಚ ಕವಿಕರ್ಮ ಚ।
> ಪ್ರಜ್ಞೋ ಪ್ರಜ್ಞಂ ತಯೋರಾದ್ಯಂ
> ಪ್ರತಿಭೋದ್ಭವಮಂತಿಮಮ್ ॥' (ಭಟ್ಟತೌತ)

ಮತ್ತು 'ಗದ್ಯಂ ಕವೀನಾಂ ನಿಕಷಂ ವದಂತಿ' (ವಾಮನ) ಎಂದು ಮುಂತಾಗಿ ರತೀಯ ಲಕ್ಷಣಕಾರರ ಸೂತ್ರಗಳನ್ನು ಕೂಡ ಪಂಡಿತರು ಎತ್ತಿ ತೋರಿಸಬಹುದು.

ಇವರಂತೆ ವಿನಾಯಕರು ಅಲ್ಲಿಯೇ ಭಾರತೀಯ ಆದಿಕಾವ್ಯ ರಾಮಾಯಣದ ಆದಿ ಶ್ಲೋಕ—

> ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ।
> ಯತ್ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಮ್ ॥

ಎಂಬುವರ ಸ್ಫೂರ್ತಿಯನ್ನು ವಿವರಿಸುತ್ತ ಕೋಲರಿಜನ ಪ್ರತಿಭಾಸಿದ್ಧಾಂತವನ
ಅನ್ವಯಿಸಿ,

'ರಾಗೋದ್ದೀಪನದಿಂದ ಕ್ರಿಯೆಯಾಗಬಹುದಾಗಿದ್ದು ನಿಗ್ರಹಶಕ್ತಿಯು ಮೂಲ
ಕೃತಿಯಾಗಿ ಪರಿಣಮಿಸಿತು.' (ಪು. ೧೧)

ಎಂದು ವ್ಯಾಖ್ಯೆ ಮಾಡಿರುವದನ್ನು ಅಭಿನವಗುಪ್ತನ 'ಧ್ವನ್ಯಾಲೋಕಲೋಚನ'ದ
ಬರುವ

ನ ತು ಮುನೇಃ ಶೋಕ ಇತಿ ಮಂತವ್ಯಮ್

ಎಂಬ ವಿವರಣೆಯೊಂದಿಗೆ ಸಾರ್ಥಕವಾಗಿ ಹೋಲಿಸಬಹುದಾಗಿದೆ. ಹೀಗೆ ವಿನಾಯ
ಸೂತ್ರಪ್ರಾಯವಾದ ಮಾತಿನಲ್ಲಿ ಪಾಂಡಿತ್ಯ ಪ್ರದರ್ಶನವಿಲ್ಲದಿದ್ದರೂ ನಿಶ್ಚಿತ ತತ್ತ್ವ
ದರ್ಶನವಿದೆ.

೨. ಕಾವ್ಯಕ್ಕೆ ಛಂದಸ್ಸು ಅವಶ್ಯವೇ?

ಅಂದಿನಂತೆ ಇಂದೂ ಈ ಪ್ರಶ್ನೆ ಹೊಸದಾಗಿಯೇ ಇದೆ. ಆಂಗ್ಲ ಸಾಹಿತ್ಯದಲ್ಲಿ
ವಿಷಯವಾಗಿ ಹರ್ಬರ್ಟ ರೀಡ್, ಬೊಸಾಂಕೆ, ಕ್ಯಾಥರಿನ್ ವಿಲ್ಸನ್, ಕ್ವಿಲರ್ ಕೂಚ
ವಿಂಚೆಸ್ಟರ್, ಹಂಬರ್ಟ್ ವೂಲ್ಫ್, ಎಬರ್‌ಕ್ರೊಂಬಿ, ಮಿಡಲ್ಟನ್ ಮರೆ, ಕೊಲರಿಜ
ಸಿಮನ್ಸ್ ಇತ್ಯಾದಿ ಮಹಾಮೇಧಾವಿಗಳೂ ವಿಮರ್ಶಕರೂ ಪ್ರತಿಪಾದಿಸಿದ ಮ
ವಿಚಾರಗಳನ್ನೆಲ್ಲ ಅವರ ಮಾತುಗಳನ್ನೇ ಕನ್ನಡಿಸಿಕೊಟ್ಟು ವಾದಗ್ರಸ್ತವಾದ ಈ ವಿಷ
ದಲ್ಲಿ ಇದಮಿತ್ಥವೆಂದು ವಿನಾಯಕರು ಮಂಡಿಸುವ ವಿಚಾರವನ್ನು ನೋಡಿ :

'ಗದ್ಯವು ವಿಶೇಷತಃ ಎಲ್ಲ ಇಂದ್ರಿಯಗಳ ದ್ವಾರದಲ್ಲಿ ನಿಂತು ಕಿವಿಗೊ
ತ್ತದೆ. ಆದರೆ ಛಂದಸ್ಸು ಆತ್ಮನ ಅಂತರಾಳದಲ್ಲಿಯೇ ಬೇರುಬಿಟ್ಟು ನಿಂತಿ
(ಪು. ೧೭)

ಇದನ್ನು ನಮ್ಮ ಭಗವದ್ಗೀತೆ ಉಪನಿಷತ್ತುಗಳು ಮನೋಹರ ರೂಪಕದಿ
ಚಿತ್ರಿಸುವ 'ಸನಾತನ ಅಶ್ವತ್ಥ'ದೊಡನೆ ಹೋಲಿಸಿದಾಗ 'ಯಸ್ಯ ಛಂದಾಂಸಿ ಪರ್ಣಾ
ಎಂಬ ವಿಶೇಷಣದ ಸಾರ್ಥಕ್ಯ ಪ್ರತಿಧ್ವನಿತವಾಗುತ್ತದೆ. ಸ್ವತ: ಶ್ರೀ ವಿನಾಯಕರೇ
ಸಂದರ್ಭದಲ್ಲಿ ನಮ್ಮ ಚಂಪೂಕವಿಗಳ ಉಕ್ತಿಗಳನ್ನು ಕೂಡ ಪವಣಿಸಿಕೊಂಡಿದ್ದಾ
ಮುಖ್ಯವಾಗಿ ಛಂದಸ್ಸಿಗೆ ಜೀವನಾಡಿಯಾದ ತಾಳಲಯವು ಉತ್ತಮಗದ್ಯದಲ್ಲಿ ಕ
ಗುಪ್ತವಾಗಿ ಇದ್ದೇ ಇರುತ್ತದೆ. ಇಂದ್ರಿಯಾತೀತವಾದ, ಭಾವನಾಮಾತ್ರಗಮ್ಯವಾ
ಅಸಾಮಾನ್ಯ ಪ್ರತಿಭಾಗೋಚರವಾದ ಅಂಶಗಳನ್ನು ಸಹಜವಾಗಿ ಅಬದ್ಧಗದ್ಯಕ್ಕಿ

ಬುದ್ಧ ಪದ್ಯವೇ ಸಮರ್ಥವಾಗಿ ಅರುಹೀತು, ಎಂಬುದನ್ನು ವಿನಾಯಕರು ಹೇಳುವುದು ಮಾತುಗಳಲ್ಲಿ :

'ಕಮಲನಾಭನ ನಾಭಿಯೇ ಛಂದಸ್ಸಿನ ಉಗಮಸ್ಥಾನ' (ಪು. ೨೫)

'ಹೃದಯಂಗಮವಾಗಿರುವ ವಿಹಂಗಮಗತಿಯು ಗದ್ಯಕ್ಕಿಲ್ಲ' (ಪು. ೨೪)

ಂತಹ ಸೂಚ್ಯಾರ್ಥ ಸುಂದರವಾದ, ಕಲ್ಪನಾಬಂಧುರವಾದ, ವಾಕ್ಯರಚನೆ ವಿನಾಯ ರ ಮನೋಧರ್ಮದ ಒಂದು ನಿದರ್ಶನ. ಅದರಲ್ಲಿ ಪ್ರಾಚ್ಯ-ಪಾಶ್ಚಾತ್ಯ ದೃಷ್ಟಿ-ಸೃಷ್ಟಿ ಕೆಲ್ಲ ಬೇರ್ಪಡಿಸಲಾರದಂತೆ ಹದವಾಗಿ ಹೊಂದಿಕೊಂಡು ಒಂದು ಸುರುಚಿರ ಪ್ರಭೆ ುನ್ನು ಬೀರುತ್ತದೆ.

ಈ ವಿಚಾರಗಳನ್ನು ವ್ಯಕ್ತಮಾಡುವಾಗ ಪದ್ಯದ ಸೋಗಿನಲ್ಲಿ ಮೆರೆಯುವ ಗದ್ಯ, ದ್ಯದ ವೇಷದಲ್ಲಿ ಅಡಗಿರುವ ಪದ್ಯ, ಇವುಗಳ ಸ್ವರೂಪದರ್ಶನವನ್ನು ಕೂಡ ಮಾಡಿದ ೀಲೆಯೇ ವಿನಾಯಕರು ತೃಪ್ತರಾಗುತ್ತಾರೆ. ಯಾವುದೇ ವಿಷಯವನ್ನು ಹೀಗೆ ತ್ತಾರು ದಿಕ್ಕುಗಳಿಂದಲೂ ಗಮನಿಸಿ ಎಲ್ಲ ದೃಷ್ಟಿಗಳಲ್ಲೂ ಅಡಗಿರುವ ಕಿಂಚಿದ್ಗುಣ ನ್ನೂ ಕಿಂಚಿದ್ದೋಷವನ್ನೂ ಒಟ್ಟಿಗೆ ವಿವೇಚಿಸಿದ ಮೇಲೆಯೇ ಒಂದು ಗಟ್ಟಿಯಾದ ರ್ಣಯಕ್ಕೆ ಬರುವದು ವಿನಾಯಕರ ಸಹಜಗುಣವಾಗಿದೆ.

೩. ಕಾವ್ಯದ ಮಹೋನ್ನತಿ

ಸಾಮಾನ್ಯವಾಗಿ ಮಹಾಕಾವ್ಯದಲ್ಲೆಲ್ಲ ಮಹೋನ್ನತಿಯಿರುವದೆಂದು ನಾವು ತಿಳಿಯು ೀವೆ. 'ಮಹಾಕಾವ್ಯ'ದ ಜಾತಿಗೆ ಸೇರಿದ್ದರೂ ಮಹೋನ್ನತಿಯಿಲ್ಲದ ಎಷ್ಟೋ ಅನು ಣಗಳುಂಟೆಂಬುದನ್ನು ನಾವು ಮರೆಯುವದುಂಟು ; ವಿನಾಯಕರು ಮರೆಯುವದಿಲ್ಲ. ವರ ವಿವೇಚನೆ ಹೀಗಿದೆ :

'ಮಹೋನ್ನತಿಯೆಂದರೆ ಸ್ಥೂಲವಾದ ಒಂದು ಗುಣವಲ್ಲ. ಅದರಲ್ಲಿ ಅನೇಕ ತರಗತಿ ಗಳಿವೆ. ಪಂಪ, ರನ್ನ, ನಾಗಚಂದ, ರತ್ನಾಕರವರ್ಣಿ, ಕುಮಾರವ್ಯಾಸರ ಕೃತಿಗಳಲ್ಲಿ ಈ ಗುಣವಿದೆ. ಆದರೆ ಅದರ ಅನೇಕ ಪರಿಗಳಲ್ಲಿ ಕೆಲವನ್ನು ಮಾತ್ರ ಒಂದೊಂದು ಕೃತಿಯಲ್ಲಿ ನಾವು ಕಾಣಬಹುದು. ಮಹೋನ್ನತಿಯ ಸರ್ವಸ್ವವು ದೊರೆಯುವದು ಪರಮಾತ್ಮನಲ್ಲಿಯೇ ಸರಿ.' (ಪು. ೪೫)

ವನ್ನು ಆನಂದವರ್ಧನನು ಹೇಳುವ

ಇಹ ಹಿ ವಿಚಿತ್ರಕವಿ ಪರಂಪರಾವಾಹಿನಿ ಸಂಸಾರೇ
ದ್ವಿತ್ರಾಃ ಪಂಚಷಾ ವಾ ಮಹಾಕವಯಃ ಸಂಭವಂತಿ।

ಜ ವಿಮರ್ಶೆಯೊಂದಿಗೆ ತುಲನೆ ಮಾಡಬಹುದು.

ಮಹೋನ್ನತಿಯನ್ನಳೆಯಲು ಆಂಗ್ಲ ವಿಮರ್ಶಕರು ನಿರ್ಮಿಸಿರುವ ಮಾನದ
ಗಳೇನೋ ? ನಮ್ಮ ಅಲಂಕಾರಶಾಸ್ತ್ರಜ್ಞರು ಹೇಳಿರುವುದೇನೋ ? ಎಲ್ಲವನ್ನೂ ಕ್ರೋ
ಕರಿಸಿ ಮಹೋನ್ನತಿಯ ಅಷ್ಟಾಂಗಗಳನ್ನು ಎಂಟೇ ಶಬ್ದಗಳಲ್ಲಿ ಸಂಗ್ರಹಿಸಿರುವ ವಿನಾ
ಕರ ಜಾಣ್ಮೆ ವಿಸ್ಮಯಾವಹವಾಗಿದೆ:

> ೧. ಭಾಷಾಸಂಪತ್ತಿ; ಶೈಲಿ. ೨. ತಾಲಳಯ; ಛಂದಸ್ಸು. ೩. ಕಾವ್ಯ ವಸ
> ೪. ರೀತಿ ಇಲ್ಲವೆ ಕೃತಿಶರೀರ. ೫. ಅರ್ಥಗೌರವ ಇಲ್ಲವೆ ವಿಚಾರಸಂಪತ್ತಿ. ೬. ಭಾವ
> ಸಂಪತ್ತಿ. ೭. ಕಲ್ಪನಾಶಕ್ತಿ. ೮. ಕವಿಯ ವ್ಯಕ್ತಿತ್ವ ಇಲ್ಲವೆ ದೃಷ್ಟಿಕೋ
> (ಪು. ೪೮)
>
> ಅಲ್ಲಿಗೇ ನಿಲ್ಲದೆ, 'ವ್ಯಂಜನವೇ ಕಾವ್ಯಭಾಷೆಯು ತನ್ನ ಕಣ್ಣಿಗೆ ಹಚ್ಚಿಕೊ
> ಅಂಜನವು' (ಪು. ೪೮)

ಎಂಬ ಹೃದಯಂಗಮ ನಿರ್ಣಯದಲ್ಲಿ ಭಾರತೀಯರು ಕಾವ್ಯದ ಪರಮರಹಸ್ಯವೆ
ಮನಗಂಡ ಧ್ವನಿತತ್ತ್ವಕ್ಕೆ ಪೂರ್ಣಪ್ರವೇಶ ದೊರೆತಿದೆ.

ಇನ್ನು ಮುಂದೆ ಹೆಜ್ಜೆಯಿಟ್ಟು ಕಾವ್ಯದ ಅಷ್ಟಾಂಗಗಳಲ್ಲಿ ವ್ಯಕ್ತಿತ್ವದ ವಿಶ್ವರು
ವನ್ನು, ವಿರಾಟ್ಸ್ವರೂಪವನ್ನು ವಿವರಿಸುತ್ತ ವಿನಾಯಕರು ಅದೃಶ್ಯ ಆಂತರಿಕ ಜೀವ
ಸಾಕ್ಷಾತ್ಕಾರ, ಅರ್ಥನಿವೇದನೆ, ವಿಮರ್ಶೆ, ಮಾರ್ಪಾಟು, ಪ್ರತಿಬಿಂಬನೆ ಇತ್ಯಾದಿ ಅ
ರಂಗ ಬಹಿರಂಗದ ಸಕಲ ಪರಿಗಳನ್ನೂ ಸಮಗ್ರವಾಗಿ ಅಂಗೈನೆಲ್ಲಿಯಂತೆ ಎತ್ತಿ ತೋರಿಸ
ಪುರಾಣರೂಪಕಗಳ ಸಹಾಯದಿಂದ ಮಹಾಕವಿಯು ಒಮ್ಮೆ ಶ್ರೀವನಿತೆಯರಸ
ಇನ್ನೊಮ್ಮೆ ನಂಜುಂಡ ನೀಲಕಂಠನೂ ಮತ್ತೊಮ್ಮೆ ಪೀಯೂಷವನ್ನು ಸ
ಅಮರೇಂದ್ರನೂ ಮಗುದೊಮ್ಮೆ ಐಂದ್ರಿಯಕ, ಕಲ್ಪನಾಮಯ, ತಾತ್ತ್ವಿಕ ಮ
ಆತ್ಮಿಕಗಳೆಂಬ ಚತುರ್ವಿಧ ಚಾರುತ್ವದ ಚಮತ್ಕಾರವನ್ನು ಅನುಭವಿಸುವ ಚತುಮು
ನಾಗಿಯೂ ಕಾಣುವನೆಂದು ಸಮುದ್ರಮಂಥನದ ಪ್ರತೀಕದಿಂದ ನೂತನ ಮಹಾರೂ
ಮಾಲೆಯನ್ನು ನಿರ್ಮಿಸುತ್ತಾರೆ. ಕಡೆಗೆ

> 'ಭಾವಸಂಪತ್ತಿ ಬೇಕು; ಭಾವನಾಸಂಪತ್ತಿ ಬೇಕು. ಇವುಗಳಿಗೆ ಮಳೆಬಿ
> ಶತವರ್ಣಗಳನ್ನು ಕೊಡುವ ಕಲ್ಪನಾಶಕ್ತಿ ಬೇಕು. ಮುಖ್ಯವಾಗಿ ಆ ವರದೃ
> ಆ ಆರ್ಷದೃಷ್ಟಿ ಬೇಕು. ಇಂಥ ಮಹಾಕಾವ್ಯಗಳು ಕನ್ನಡದಲ್ಲಿ ಹುಟ್ಟಿದ
> ಕನ್ನಡನಾಡು ಮತ್ತೆ ಹೊನ್ನಕನ್ನಡ ನಾಡಾಗುವದು. ಆಗ ನಮ್ಮ ನಾ
> ಗೋಪುರಗಳೆಲ್ಲ ಸುರಪುರಗಳಾಗುವವು. ಭಾವನಾಪೂರಕ್ಕೆ ಮಹಾಪೂರವು ಬ
> ವದು. ಜನಾಂಗದ ಜೀವನವು ಪಾವನವಾಗುವದು. ಇಂಥ ಕವಿಗಳು ಹು
> ನಮ್ಮ ನಾಡಿನ ಕೀರ್ತಿಯನ್ನು ಬೆಳಗಿಸಲಿ!' (ಪು. ೫೬)

ದು ಭಾವಸಾಮ್ಯಯವಾಗಿ ಹಾರೈಸುತ್ತಾರೆ. ಅವರ ಅಂದಿನ ಹಾರೈಕೆ ಅಥವಾ ಸು ಇಂದು ಕುವೆಂಪುರವರ 'ರಾಮಾಯಣ ದರ್ಶನ'ದವ ಉದಯದಿಂದ ಪೂರೈಕೆ ಾಗಿ ನನಸಾಗಿದ್ದರೆ ವಿನಾಯಕರ ವಾಣಿಯಲ್ಲಿ ಹುದುಗಿರುವ ಪ್ರವಾದಿತ್ವವು ಸ್ಫುಟ ಾಗುವದಲ್ಲವೆ?

III

ಪ್ರಾಚೀನ ಸಾಹಿತ್ಯದ ವಿಮರ್ಶೆಗೆ ಮಹೋನ್ನತಿಯೇ ಮಹಾದ್ವಾರವೆನ್ನಬಹುದು. ನ್ನು ಕೆಲವರು 'ಭವ್ಯತೆ'ಯೆನ್ನಬಹುದು. ಇತರರು 'ದಿವ್ಯತೆ'ಯೆನ್ನಬಹುದು. ನಮ್ಮ ಿನ ಸಾಹಿತ್ಯವನ್ನೆಲ್ಲ ಜನಜೀವನದ ಭವ್ಯತೆ-ದಿವ್ಯತೆಗಳನ್ನು ಭವ್ಯತರವಾಗಿ, ದಿವ್ಯ ವಾಗಿ ತೋರಿಸುವ ನಿಲುಗನ್ನಡಿಯೆಂದು ವಿನಾಯಕರು ೧೯೪೪ ರಲ್ಲಿ ಅಚ್ಚಾಗಿರುವ ಾಹಿತ್ಯದಲ್ಲಿ ಪ್ರಗತಿ' ಎಂಬ ಪ್ರಬಂಧ ಸಂಕಲನದ ನಾಲ್ಕನೆಯ ಪುಟದಲ್ಲಿಯೇ ಸ್ಥಾಪಿಸಿದ್ದಾರೆ. ಅವರೇ ಉದಾಹರಿಸಿರುವ

'Beauty is eternity gazing at itself in a mirror'

ಬ ಖಲೀಲ ಗಿಬ್ರಾನನ ಸೂಕ್ತಿ ಇಲ್ಲಿ ಸಮಯೋಚಿತವಾಗುತ್ತದೆ. 'ಕಾವ್ಯ ಜೀವನದ ಹೋನ್ನತಿ' ಎಂಬ ಪ್ರಬಂಧ ೧೯೫೫ ರಲ್ಲಿ ಅಚ್ಚಾದ ಇವರ 'ನವ್ಯತೆ ಹಾಗೂ ಕಾವ್ಯ ವನ' ಎಂಬ ಪ್ರಬಂಧ ಸಂಗ್ರಹದಲ್ಲಿ ಇದೇ ವಿಷಯವನ್ನು ಮತ್ತಷ್ಟು ಆಳವಾಗಿ ೀಧಿಸಲು ಹವಣಿಸುತ್ತದೆ. ಅಲ್ಲಿ:

'ಒಂದೆರಡು ಅಂಗಗಳ ಲಕ್ಷಣದ ಮೇಲಿಂದ ಕಾವ್ಯವನ್ನು ಪರಿಕಿಸುವವರು ಆನೆಯನ್ನು ನೋಡಲು ಹೋಗಿ ಬಾಲವನ್ನು ಹಿಡಿದಂತಾಗುವದೆಂಬುದನ್ನು ಲಕ್ಷ್ಯದಲ್ಲಿಡಬೇಕು.' (ಪು. ೭೪)

ಬ ಎಚ್ಚರಿಕೆಯ ಮಾತು ಬರುತ್ತದೆ. ಕಾಮಪ್ರಚೋದನೆ, ಮನರಂಜನೆ, ಮ್ಯುನಿಸ್ಟ್ ಪ್ರಚಾರ, ಇತ್ಯಾದಿ ನಾನಾ ಕಾರ್ಯಗಳಿಗೆ ಕಾವ್ಯವು ಮಾಧ್ಯಮವಾಗಿರುವ ನ್ನು ಅವರು ಬಲ್ಲರು.

'ಕಾವ್ಯವು ಆಕಾಶವಿದ್ದಂತೆ: ಎಲ್ಲ ವಿಷಯಗಳು, ಎಲ್ಲ ಲಹರಿಗಳು ಅಲ್ಲಿ ಮೂಡಿ ಮುಳುಗುವವು' (ಪು. ೭೪)

ದು ಅವಕ್ಕೆಲ್ಲ ಕಾವ್ಯರಾಜ್ಯದಲ್ಲಿ ಇರುವ ಅವಕಾಶವನ್ನು ನಿರ್ಧರಿಸಿ, ಭಕ್ತಿ-ಕರ್ಮ- ್ಞಾನಯೋಗಗಳಂತೆಯೇ ಕಾವ್ಯಯೋಗವು ಅಥವಾ ಸೌಂದರ್ಯಾನ್ವೇಷಣವು ಒಂದು ತಂತ್ರ ಯೋಗವಾಗಬಹುದೆಂದು ನಿರ್ಣಯಿಸುತ್ತಾರೆ. ಆ ಯೋಗಕ್ಕೆ ಬೇಕಾದ

ದಿವ್ಯಚಕ್ಷುವಿನ ಸ್ವರೂಪವನ್ನು ಉನ್ಮೀಲನ ಮಾಡುತ್ತಾರೆ. ಸೃಷ್ಟಿ-ದೃಷ್
ಸಾಮರಸ್ಯವೇ ಸೌಂದರ್ಯವೆಂದು ಸೂತ್ರ ಹೇಳಿ, ಕಾವ್ಯೋಪಾಸಕನ ಷಟ್-ಸ್ಥಲಗ
ನಿರ್ದೇಶಿಸಿದ್ದಾರೆ. ರಸಿಕತೆ, ಕಲಾವಂತಿಕೆ, ತಾತ್ತ್ವಿಕತೆ, ಅನುಭಾವ, ಸತ್ಯಾನು
ಐಕ್ಯ ಅಥವಾ ಸಾಮರಸ್ಯ ಇವೇ ವಿನಾಯಕರು ಹೇಳುವ ಸೌಂದರ್ಯದ ಷಟ್‌ಸ್ಥಲ
ವಿಶ್ವತೋಗ್ರಾಸಿಯಾದ ಈ ವಿವರಣೆ ಶಂಕರಾಚಾರ್ಯರು 'ಸೌಂದರ್ಯ ಲಹರಿ'
ಹೇಳುವ ಒಂದು ಶ್ಲೋಕವನ್ನು ನಮ್ಮ ನೆನಪಿಗೆ ತರುತ್ತದೆ:

ತ್ವದೀಯಂ ಸೌಂದರ್ಯಂ ತುಹಿನಗಿರಿಕನ್ಯೇ ತುಲಯಿತುಂ
ಕವೀಂದ್ರಾಃ ಕಲ್ಪಂತೇ ಕಥಮಪಿ ವಿರಿಂಚಿಪ್ರಭೃತಯಃ ।
ಯದಾಲೋಕೌತ್ಸುಕ್ಯಾದಮರಲಲನಾ ಯಾಂತಿ ಮನಸಾ
ತಪೋಭಿರ್ದುಷ್ಪ್ರಾಪಾಮಪಿ ಗಿರಿಶಸಾಯುಜ್ಯ ಪದವೀಮ್ ॥

ತಪಸ್ಸಿಗೆ ದುರ್ಲಭವಾದ ಸೌಂದರ್ಯಾನುಭೂತಿ ಮನಸ್ಸಿಗೆ ಸುಲಭವಾಗುವದಂತೆ,
ನಾತ್ಮನೊಡನೆ ಐಕ್ಯಾರೋಪದಿಂದ.

IV

ಇಂದೇ ಗ್ರಂಥದಲ್ಲಿ ತಾತ್ತ್ವಿಕದೃಷ್ಟಿಯಿಂದ ಅತ್ಯಂತ ಗಮನಾರ್ಹವಾದ ಮತ್ತೊ
ನಿಬಂಧವೆಂದರೆ 'ಕಾವ್ಯ ಮತ್ತು ಸೌಂದರ್ಯ'. (ಪು. ೫೩-೭೧) ಇಲ್ಲಿ ಸೌಂದ
ಶಾಸ್ತ್ರದ ಒಂದು ಸಿಂಹಾವಲೋಕನ, ಸಮಗ್ರವಾಗಿಯೂ ಸಾರವತ್ತಾಯೂ ಬಂ
ಸಂಕುಚಿತವ್ಯಕ್ತಿತ್ವದಿಂದ ಅಥವಾ ಭವದಿಂದ ಮುಕ್ತಗೊಳಿಸುವುದೇ ಕಾವ್ಯಾನಂದವ
ಹಿಡಿದರೆ ಈ ಆನಂದದ ಮೂಲಕಾರಣವೇ ಸೌಂದರ್ಯವೆಂದು ನಿರ್ಣಯಿಸುತ್
ಪೂರ್ಣತೆಯಲ್ಲಿಯೇ ಸೌಂದರ್ಯವಿದೆಯೆನ್ನುವ ಕೊಲರಿಜ್, ಸೌಂದರ್ಯವು ದೇವನಿತ್ತ
ಎನ್ನುವ ರಸ್ಕಿನ್ ಸೌಂದರ್ಯವು ವಸ್ತುಗುಣವಲ್ಲ, ನೋಡುವವನ ಮನೋಗುಣ ಎನ
ಹ್ಯೂಮ್, ಆನಂದವನ್ನು ವಸ್ತುಗುಣವೆಂದು ತಿಳಿಯುವದೇ ಸೌಂದರ್ಯ ಎನ್ನುವ ಸ್
ಯನ, ಅಭಿವ್ಯಕ್ತಿಯೇ ಕಲೆಯೆಂಬ ಕ್ರೋಚೆ, ತನ್ಮಯೀಭವನದಿಂದ ಬರುವ ಆನಂ
ದ್ರೇಕ ಎನ್ನುವ ಕೀಟ್ಸ್, ಸಮರಸಸೌಖ್ಯವನ್ನು ಒಬ್ಬ ವ್ಯಕ್ತಿಯ ವ್ಯಕ್ತಿತ್ವದ ತು
ಪ್ರಚೋದಿಸುವ ಅನುಭವ ಎನ್ನುವ ಒಗ್ಡನ್ ಹಾಗೂ ರಿಚರ್ಡ್ಸ್, ಅರ್ಥಪೂರ್ಣ
ರೂಪವೇ ಸೌಂದರ್ಯವೆನ್ನುವ ಕ್ಲೈವ ಬೆಲ್, ಸೌಂದರ್ಯವೊಂದು ಪರಮಬೆಲೆಯೆನ
ಪ್ಲೇಟೋ—ಇವೇ ಮುಂತಾಗಿ ಸೌಂದರ್ಯಶಾಸ್ತ್ರದ ಇತಿಹಾಸದಲ್ಲಿ ಪಾಶ್ಚಾತ್ಯವರೇಣ
ದವರ ವ್ಯಾಖ್ಯೆಗಳನ್ನೆಲ್ಲ ಕೂಲಂಕಷವಾದ ಪರೀಕ್ಷೆಗೆ ಗುರಿಮಾಡಿ ಯಾವುದೊ
ವಾದಕ್ಕೂ ತಮ್ಮ ಪೂರ್ಣಾನುಮತಿಯನ್ನು ನೀಡದೆ, ಆದರೆ ಎಲ್ಲದರಲ್ಲಿಯೂ ಹ
ಗಿರುವ ತತ್ತ್ವಾಂಶಗಳನ್ನು ಸಂಗ್ರಹಿಸಿ

'ನನ್ನ ದೃಷ್ಟಿಯಲ್ಲಿ ಸಚ್ಚಿದಾನಂದದ ಪ್ರತಿಯೊಂದು ದರ್ಶನವೇ ಸೌಂದರ್ಯ.
(ಪು. ೬೬).... ಇಡಿ ವಿಶ್ವವನ್ನೇ ಅದು ತುಂಬಿದೆ. ಪ್ರತಿಯೊಂದು ವಸ್ತುವಿನ
ಹೃದಯದಲ್ಲಿಯೂ ಅದು ಹುದುಗಿಕೊಂಡಿದೆ. ಆದರೆ ಒಂದು ಭೌತಿಕ ಆವರಣವೂ,
ಅವಿದ್ಯೆಯ ಮಾಯೆಯೂ ಜವನಿಕೆಯಂತೆ ಈ ಸೌಂದರ್ಯವನ್ನು ಆವರಿಸಿದೆ. ಸಾಕ್ಷಿಕನ
ಹೃದಯದಲ್ಲಿಯೂ ಸಾಕ್ಷ್ಯದ ಹೃದಯದಲ್ಲಿಯೂ ಇರುವುದು ಒಂದೇ ಶಕ್ತಿ
(ಪು. ೬೭)....ಸಾಕ್ಷ್ಯ-ಸಾಕ್ಷಿಕರ ತಾದಾತ್ಮ್ಯವಿಲ್ಲದೆ ಸೌಂದರ್ಯಾನುಭವವು ಜನಿಸ
ಲಾರದು.' (ಪು. ೬೮)

ದು ಭಾರತೀಯ ಸೌಂದರ್ಯತತ್ವವನ್ನು ಅರ್ಥಪೂರ್ಣವೆಂದು ಪರಿಗ್ರಹಿಸಿದ್ದಾರೆ.
ಃಖ-ಕುರೂಪತೆಗಳಿಗೂ ಕವಿಯು ತನ್ನ ಕೃತಿಯಲ್ಲಿ ಸುಂದರರೂಪವನ್ನು ಕೊಡ
' (ಪು. ೭೧) ಎಂದು ನಿರ್ಣಯಿಸುತ್ತಾರೆ. ಈ ಮಾತು—

> ರಮ್ಯಂ ಜುಗುಪ್ಸಿತಮುದಾರಮಥಾಪಿ ನೀಚಂ
> ರುದ್ರಂ ಪ್ರಸಾದಿ ಗಹನಂ ವಿಕೃತಂ ಚ ವಸ್ತು ।
> ಯದ್ವಾಪ್ಯವಸ್ತು ಕವಿಭಾವಕಭಾವ್ಯಮಾನಂ
> ನಾಸ್ತ್ಯೇವ ತನ್ನರಸತಾಂ ಯದುಪೈತಿ ಲೋಕೇ ॥

ಬ ಧನಂಜಯನ ಸೂಕ್ತಿಯ ಮಾರ್ದನಿಯಂತಿಲ್ಲವೇ ?

V

ಚಿರಂತನ ಸಾಹಿತ್ಯದ, ಮತ್ತು ಸೌಂದರ್ಯಶಾಸ್ತ್ರದ ಆಳವಾದ ಚಿಂತನೆ ವಿನಾಯಕರ
ಪ್ರಬಂಧಗಳಲ್ಲಿಯೂ ಮೂಡಿಬಂದಿರುವದನ್ನು ನೋಡಿದ್ದೇವೆ. ಆದರೆ ಸಮಕಾಲಿನ
ವಿಮರ್ಶಕರ ವಿಚಾರಧೋರಣೆಗಳ ಬಗ್ಗೆ ಸದಾ ಜಾಗೃತವಾಗಿರುವ ಸಮಕಾಲೀನ
ಜ್ಞೆಯನ್ನು ವಿನಾಯಕರು ಎಂದೂ ಕಳೆದುಕೊಳ್ಳದಿರುವದು ಅವರ ವ್ಯಕ್ತಿತ್ವದ
ಷ್ಟ್ಯವೆನ್ನಬಹುದು. ಪರಿಣಾಮ ಅಥವಾ ಪ್ರಗತಿಯಿಲ್ಲದ ಸಾಹಿತ್ಯ ನಿಂತ ನೀರೇ ಸರಿ.
ದಿನ ಕವಿಗಳಲ್ಲಿ ಮಹೋನ್ನತಿಯನ್ನು ಮೆಚ್ಚಿದ ವಿನಾಯಕರೇ ಇಂದಿನ ಕಾವ್ಯದಲ್ಲಿ
ೂತನಪ್ರಯೋಗಗಳನ್ನು ಕೊಂಡಾಡುವುದಷ್ಟೇ ಅಲ್ಲ; ಕಾಲೋಚಿತವಾದ ಮಾರ್ಗ
ರ್ಶನವನ್ನೂ ಮಾರ್ಮಿಕವಾಗಿ ಮಾಡಿದ್ದಾರೆ, ಮಾಡುತ್ತಿದ್ದಾರೆ. ಸಮಾಜದ ಪುನರ್ಘ
, ಸಾಹಿತ್ಯದಲ್ಲಿ ನವಸಂಘಟನೆಯನ್ನು ನಿಯಮಿಸುತ್ತದೆ. ವಿಚಾರಕ್ರಾಂತಿಗಳು ಕವಿ
ಷ್ಟಿಯನ್ನೂ ಕಲಕುತ್ತವೆ. ಆಂಗ್ಲಭಾಷೆಯಲ್ಲಿ ಜಿ. ಎಂ. ಹಾಪ್‌ಕಿನ್ಸ್‌ನಿಂದ ಆರಂಭ
ದ ನವ್ಯಕಾವ್ಯಮಾರ್ಗವು ಟಿ. ಎಸ್. ಇಲ್ಯಟ್, ಆಡೆನ್, ಸ್ಪೆಂಡರ್, ಮೆಕ್‌ನೀಸ್,
ಡೇ. ಲುಯಿಸ್, ಡಿ ಲಾನ್ ಟಾಮಸ್ ಮೊದಲಾದ ಮಹನೀಯರಿಂದ ಮುನ್ನಡೆ

ಯಿಟ್ಟು ಅಮೇರಿಕೆಯಲ್ಲೂ ಮನ್ನಣೆ ಗಳಿಸಿದ್ದನ್ನು ವಿವರವಾಗಿ ಅಧಿಕಾರಯುತವ
ನಿರೂಪಿಸುವ ಇವರ 'ಸಾಹಿತ್ಯ ಹಾಗೂ ನವ್ಯತೆ' ಎಂಬ ಪ್ರಬಂಧ ಇಂದಿಗೂ ನ
ಕವಿಗಳಿಗೆ ಮನನೀಯವಾಗಿದೆ. ಅಲ್ಲಿಯೇ ಹಾಸ್ಯ, ವಿಡಂಬನ, ಭಾವನಾವೇಶ, ಅ
ಭಾವದೃಷ್ಟಿ, ಆಂತರಿಕತೆ, ವಸ್ತು ನಿಷ್ಠತೆ-ಇವೇ ಮೊದಲಾದ ಜೀವನ ದೃಷ್ಟಿಧೋ
ಗಳು ನವ್ಯಕಾವ್ಯವನ್ನು ಹಿಂದಿನ ಕಾವ್ಯದಿಂದ ಹೇಗೆ ಬೇರ್ಪಡಿಸುವದಿಲ್ಲ, ಆದರೆ ಅ
ವ್ಯಕ್ತಿಯ ಮಾರ್ಗದ ಮೂಲದಲ್ಲಿಯೇ ಹೇಗೆ ಭೇದವಿದೆ, ಹೃದಯದಷ್ಟೇ ಬುದ್ಧಿಯ
ಹೇಗೆ ಸೂಕ್ಷ್ಮವಾಗಿ ಸಂವೇದನೆ ತೋರಬಹುದು, ವ್ಯಕ್ತಿತ್ವದ ಅನಿಯಂತ್ರಿತ ಆ
ಕ್ಕಿಂತ ಸೂಕ್ಷ್ಮ ವಸ್ತು ಸ್ವಭಾವಗ್ರಹಣೆ ಹೇಗೆ ಒಂದುಗೂಡುತ್ತದೆಂಬುದನ್ನು ಉ
ಉದಾಹರಣೆಗಳಿಂದ ಸರಲವಾಗಿ ವಿವೇಚಿಸಿದ್ದಾರೆ. ನವ್ಯಕವಿಯ ಓದಿನ ಆಳವಿಸ್ತಾ
ಗಳನ್ನು ಸೂಚಿಸುವ ಅವತರಣಿಕೆಗಳ ತಂತ್ರ, ಸ್ವಪ್ನತಂತ್ರ, ಚಿತ್ರಪ್ರತಿಮಾಸೃಷ್ಟಿ
ಇತ್ಯಾದಿಗಳನ್ನು ಆಧುನಿಕ ಕನ್ನಡ ಸಾಹಿತ್ಯದ ಇತಿಹಾಸದಲ್ಲಿಯೇ ಪ್ರಪ್ರಥಮವಾ
ಪ್ರತಿಪಾದಿಸಿ ನವ್ಯಕಾವ್ಯದ ಯುಗಾರಂಭಕ್ಕೆ ಜನಕಪ್ರಾಯರೆನಿಸಿದ್ದಾರೆ. ವಿನಾಯ
ವಾಣಿಯಿಂದ ನೇರವಾಗಿ ಪ್ರಚೋದನೆ ಪಡೆದವರಂತೆ, ತಂತಮ್ಮ ಸ್ವತಂತ್ರ ರೀತಿಯಿಂ
ನವ್ಯ ವಿಚಾರಗಳನ್ನು ಪುರಸ್ಕರಿಸಿದ ಕವಿಗಳೂ ಹೊಸಗನ್ನಡ ಸಾಹಿತ್ಯದ ಶ್ರೀಮಂ
ಯನ್ನು ಹೆಚ್ಚಿಸಿದ್ದಾರೆ. ಆದರೆ ಯಾವ ಪಕ್ಷ-ಪ್ರತಿಪಕ್ಷಗಳ ವಾದವಿವಾದಗಳಲ್ಲಿಯೂ ತ
ಪ್ರಶಾಂತತೆಯನ್ನೂ ಸಹನೆಯನ್ನೂ ಕಳೆದುಕೊಳ್ಳದೆ ಸಮನ್ವಯ ದೃಷ್ಟಿಯೊಂದನ
ಅಂದಿನಿಂದ ಇಂದಿನವರೆಗೆ ಒಂದೇ ರೀತಿಯಿಂದ ಜಪಿಸುತ್ತಿರುವ ವಿನಾಯಕರು ಯ
ಪ್ರಶಂಸೆಗೆ ತಾನೆ ಪಾತ್ರರಲ್ಲ? ವಿನಾಯಕರ ನವ್ಯತೆಯಲ್ಲಿ ವಿಕೃತಿಯ ಚಿತ್ರಸೃಷ್ಟಿ
ಎಡೆಯಿಲ್ಲದಿರುವದು ಸಹಜವಾಗಿಯೇ ಇದೆ.

ಹೀಗೆ ವಿನಾಯಕರ ಕಾವ್ಯಮೀಮಾಂಸೆಯಲ್ಲಿ ಭಾರತೀಯರ ಸಮಗ್ರದೃಷ್ಟಿಯಿ
ಪಾಶ್ಚಾತ್ಯರ ವಿಚಾರಪ್ರವೃತ್ತಿಯೂ ಇದೆ. ಎರಡನ್ನೂ ಮೀರಿದ ಸಮನ್ವಯ ಸಂಪ
ಯಿದೆ. ಅನುಭಾವವನ್ನು ಅಲ್ಲಗಳೆಯದೆ ಯಾವುದೇ ದಿಕ್ಕಿನಿಂದಾದರೂ ಹೊಸ ಪ್ರಭಾ
ವನ್ನು ಗುರುತಿಸಿ ಮೆಚ್ಚುವ ಅವರ ಗುಣ ಅಪೂರ್ವವಾದುದು. ಅವರ ವಿಶಾಲಪಾ
ತ್ಯವು ಹೃದಯದ ರಸಿಕತೆಯನ್ನು ಸ್ವಲ್ಪವೂ ಕುಗ್ಗಿಸಿಲ್ಲ. ವಾಙ್ಮಯ ತಪಸ್ಸಿನಿ
ಮಾತ್ರ ಲಭ್ಯವಾದ ಏಕಾಗ್ರತೆ—ಏಕಸೂತ್ರತೆಗಳು ಅವರ ಮನಃಪರಿಪಾಕದ ದ್ಯೋತ
ಗಳು. ಪೂರ್ವಗ್ರಹಗಳಿಗೆ ಆಸ್ಪದವೀಯದೆ, ಆಗ್ರಹ-ನಿಗ್ರಹಗಳಿಗೆ ವಶರಾಗದೆ ಅ
ಗ್ರಹ-ಆವೇಶಕ್ಕೂ ಇಂಬುಗೊಡದೆ ಸಮತೂಕದ ತತ್ತ್ವನಿಷ್ಠವಾದ, ಶಾಸ್ತ್ರಶುದ್ಧವಾ
ವಿಚಾರಸರಣಿಯಿಂದ ಅವರು ಒಂದು ಕಡೆ ಕಾವ್ಯಮೀಮಾಂಸೆಯ ಮೂಲತತ್ತ್ವಗಳನ
ಇನ್ನೊಂದು ಕಡೆ ಸಮಕಾಲೀನ ಸಾಹಿತ್ಯ ವಿಮರ್ಶೆಯ ಉಚಿತ ಮಾದರಿಗಳನ
ಒದಗಿಸಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ವಿಮರ್ಶೆಯೇ ಸರಿಯಾಗಿ ಬಂದಿಲ್ಲವೆಂದು ಅನೇಕರು ಭಾಷಣ ಡುವದುಂಟು. ಇರುವ ವಿನಾಯಕರ ವಿಚಾರಗಳನ್ನಾದರೂ ಅವರು ಓದಿ ನೋಡಿ ರೆಯೆ, ಎಂದು ಮುಂದಿನವರು ನಮ್ಮನ್ನು ಕೇಳಿಯಾರು.

ಪ್ರಯೋಗಶೀಲತೆ

ನಿರಂಜನ

೧

ವಿನಾಯಕರ ಕಾವ್ಯದಲ್ಲಿ ಕಂಡುಬರುವ ವಿನೂತನ ಪ್ರಯೋಗಗಳಿಗೆ ಪ್ರೇರ ಯಾವುದು ? ಪ್ರಯೋಗಪ್ರಿಯತೆಯೊ ? ಅಥವಾ, ಆಂತರಿಕ ಅವಶ್ಯತೆಯೊ ಕನಸುಗಾರ ಕವಿಯು ಮಂಜು ಕಾವ್ಯ ಆಕೃತಿಯೊಂದನ್ನು ತಳೆದದ್ದು ಸಾಗರದ ವಿಶಾ ರಂಗದ ಮೇಲೆ; ಅವರ ಕಾವ್ಯ ಪಕ್ಷಿಗೆ ಪುಕ್ಕ ಹುಟ್ಟಿ ಸುಮಾರು ಹತ್ತು ವರ್ಷಗಳಾ ಬಳಿಕ. ಕಡಲಿನ ಕೊನೆಯಿಲ್ಲದ ಭೋರ್ಗರೆತಕ್ಕೆ ಎದುರಾದಾಗ ಕವಿ ಈ ರೀತಿ ಹಾಡಿದರ

ಸ್ವಚ್ಛಂದ ಛಂದದಲಿ
ಜಲಕ್ರೀಡಾವೃತ್ತದಲಿ
ಅನುದಿನವು ತೆರೆಗಳನು ಹಿಡಿವ ತಾಳ ಲಯದಲ್ಲಿ
ಗೀತವನೊರೆದೆನೆಂದು ಗೀಳ್ ಮಾಡಬೇಡ !
ಸಮುದ್ರವ ಸೆರೆ ಹಿಡಿದವರುಂಟೆ ?
ಬಾವಿಯು ತೋಡಿ ಮುನ್ನೀರ ಬತ್ತಿಸಬಹುದೆ ?
ಅಬ್ಜ ಶಬ್ದಗಳ ಪ್ರಾರಬ್ಧದಲ್ಲಿ ಸಹ
ಮಹಾಬ್ಧಿಯು ಕಣವೊಂದು ಸೆರೆಸಿಕ್ಕದಯ್ಯ !
ಕೊಡದಿರು ಶರಧಿಗೆ ಷಟ್ಪದಿಯ ದೀಕ್ಷೆಯನು !

ಈ ಗೀತೆ ರೂಪು ತಳೆದು ಹತ್ತು ವರ್ಷಗಳಾದ ಮೇಲೆ ಆ ದಿನವನ್ನು ಕವಿ ಹ ನೆನಸಿಗೆ ತಂದುಕೊಂಡರು :

"ಹಡಗದ ಮೇಲಿದ್ದಾಗ ಅದರ ಯಂತ್ರದ ಆರ್ಭಟದಲ್ಲಿ, ಮನಸ್ಸಿನಲ್ಲಿ ಯಾ ತಾನವನ್ನೂ (tune) ಹಿಡಿಯುವದಾಗುತ್ತಿರಲಿಲ್ಲ. ಅದನ್ನು ಆ ಯಂತ್ರವು ಛೇದಿ ಬಿಡುತ್ತಿತ್ತು. ಬರೆಯದೆ ಇರುವುದು ಸಾಧ್ಯವಿರಲಿಲ್ಲ. ಆಗ ತಾನಾಗಿಯೇ ನನ್ನ ಹುಟ್ಟಿ ಬಂತು—ಸ್ವಚ್ಛಂದ ಛಂದ."

ಸ್ವತಃ ಕವಿಯೇ ಈ ವಿವರಣೆಯನ್ನು ನೀಡಿದ್ದರೂ ಅದಾಗಿ ಹತ್ತು ವರ್ಷಗಳ ಬ ವಿಮರ್ಶಕರೊಬ್ಬರಿಗೆ ಈ ರೀತಿ ತೋರಿತು :

"ನವ್ಯತೆ ನಮ್ಮಲ್ಲಿ ಬೇರೊಂದು ಮಾರ್ಗದಿಂದಲೂ ಬಂದಿತು. ಅದು ವಿನಾಯಕರ ಪ್ರಯೋಗಪ್ರಿಯತೆಯ ಮೂಲಕ ಎನ್ನಬಹುದು. ಸಮುದ್ರಗೀತಗಳಿಂದಲೇ ವಿನಾಯಕರ ಪ್ರಯೋಗಗಳಿಗೆ ಆರಂಭವಾಗಿತ್ತು."

ಈ ಬಗೆಯ ತಿಳಿವಳಿಕೆ ವಿಸ್ಮಯಕರವಾದದ್ದು. "ತನ್ನ ಮಲ್ಲಿನಾಥಿಕೆಯಿಂದ ಸತ್ಯಾಭ್ಯಾಸನ್ನು ಹುಟ್ಟಿಸಿ ಅದನ್ನೇ ಸತ್ಯವೆಂದು ಸಾಧಿಸಿ, ಸತ್ಯವೆಂದು ಕಾಣುವ ಆ ಆಭಾಸದ ಮೇಲೆ....ಕವಿಯನ್ನು ಶೂಲಕ್ಕೇರಿಸುವ ಆಭಾಸ ವಿಮರ್ಶೆ"ಗೆ ಇದೊಂದು ಒಳ್ಳೆಯ ದೃಷ್ಟಾಂತವಾಗಬಹುದು.

ಸಹೃದಯ ವಿಮರ್ಶಕರೂ ಅಲ್ಲೊಬ್ಬರು, ಇಲ್ಲೊಬ್ಬರು ಇನ್ನೂ ಇರುವುದರಿಂದ ಕನ್ನಡದ ಸಾಹಿತ್ಯಲೋಕವನ್ನು ಪೂರ್ತಿ ಕತ್ತಲು ಆವರಿಸಿಲ್ಲ. ಮೇಲಿನ ಸಂಬಂಧದಲ್ಲಿಯೇ ಇನ್ನೊಬ್ಬ ವಿಮರ್ಶಕರ ಮಾತನ್ನು ಇಲ್ಲಿ ಉಲ್ಲೇಖಿಸಬಹುದು :

"ನನ್ನ ಮಟ್ಟಿಗೆ ಹೇಳುವುದಾದರೆ ಕನ್ನಡ ನವ್ಯಕಾವ್ಯವು ೧೯೩೦ರಲ್ಲಿ ಪ್ರೊ. ಗೋಕಾಕರನ್ನು ಇಂಗ್ಲೆಂಡಿಗೆ ಕರೆದೊಯ್ದ ಹಡಗಿನಲ್ಲಿ ತನ್ನ ಹುಟ್ಟನ್ನು ಪಡೆಯಿತು. ಅವರ ಆರಂಭದ ಕಾವ್ಯ ಸೌಂದರ್ಯದ ಲಯಬದ್ಧ ರಚನೆಗೆ ಮತ್ತು ಸ್ವಪ್ನಲೋಕದ ಆದರ್ಶ ಪ್ರತಿಪಾದನೆಗೆ ಪ್ರಯತ್ನ ಎನ್ನಬಹುದಾಗಿದೆ. ಕೇವಲ ಪುಸ್ತಕಗಳಲ್ಲೇ ಮಗ್ನರಾಗಿ ಶೈಕ್ಷಣಿಕ ಜಗತ್ತಿನ ಆಚೆ ನೋಡದ ವಿದ್ವಾಂಸರಾಗಿ ತಮ್ಮ ಕಲ್ಪನೆಯಿಂದಲೇ ಬರೆದ ಮೊದಲಿನ ಅವರ ಕಾವ್ಯಕ್ಕೆ ಹೊರಜಗತ್ತಿನ ಸಂಪರ್ಕವಿರಲಿಲ್ಲ. ಲಯಬದ್ಧವಾದ ರೀತಿಗೆ ಅಳವಡಿಸಿ ಅವರ ಕಾಣ್ಕೆ ಮಾಯವಾದಾಗ ಅವರ ಹೃದಯದಲ್ಲುಂಟಾದ ಭಾವನೆಗಳ ತಾಕಲಾಟದ ರುದ್ರ ಸಂಗೀತದ ರೌದ್ರತೆಯನ್ನು ಸಮುದ್ರದ ಭೋರ್ಗರೆತ ಮಾತ್ರ ಸರಿಗಟ್ಟಬಹುದಾಗಿತ್ತು. ಅವರು ಹೊಂದಿ ನಡೆದಿದ್ದ ಹಳೆಯ ಛಂದೋರೂಪಗಳಲ್ಲಿ ಕಾವ್ಯರಚನೆ ಮಾಡುವುದು ಇನ್ನೂ ಸಾಧ್ಯವಿರಲಿಲ್ಲ."

ವಿನಾಯಕರ ಕಾವ್ಯದ ರಸಾಸ್ವಾದನೆ ಮಾಡಿರುವವರು, ಅದರಲ್ಲೂ 'ಸಮುದ್ರಗೀತಗಳು' ಸಂಕಲನವನ್ನು ಮನನಮಾಡಿರುವವರು, ಮೇಲಿನ ಪೃಥಕ್ಕರಣವನ್ನು ನಿಸ್ಸಂಕೋಚವಾಗಿ ಒಪ್ಪಿಕೊಳ್ಳಬಹುದು. ಕವಿಯ ನಿವೇದನೆಯೂ ವಿಮರ್ಶಕನ ಮಾತನ್ನು ಪುಷ್ಟೀಕರಿಸುವಾಗ ತೀರ್ಪುಕೊಡಲು ಕಷ್ಟವಾಗುವುದಿಲ್ಲ.

೨

ಕವಿ ವಿನಾಯಕರು ನಡೆದು ಬಂದಿರುವ ದಾರಿಯನ್ನು ನಾಲ್ಕು ಹೆಜ್ಜೆಗಳಲ್ಲಿ ಗುರುತಿಸಬಹುದು. ೧. ಅಂಜಿಗಾಲು; ೨. ಕುಪ್ಪಳಿಸುವ ನಡಿಗೆ; ೩. ಗದ್ದಲದ ಪದಾಘಾತ ಮತ್ತು ೪. ಸಮತೂಕದ ಚಲನೆ.

ಕವಿ ಅಂಬೆಗಾಲಿಡಲು ಮೊದಲು ಮಾಡಿದುದು ಸವಣೂರಿನಲ್ಲಿ. ಇತರರು ಕಂ ಪುಲಕಗೊಂಡದ್ದು ಧಾರವಾಡದಲ್ಲಿ. ಆ ಗುಂಪಿನ ಗೆಳೆಯರು ಚಪ್ಪಾಳೆ ತಟ್ಟಿ ಮುಗುವಿ ಕೈ ಹಿಡಿದು ನಡೆಸಲು ಮುಂದಾದರು. ಕುಪ್ಪಳಿಸಿದ್ದು, ಕನಸಿನ ಲೋಕದಿಂದ ಹೊರಬಿ ಜಗತ್ತನ್ನು ಅರಿಯತೊಡಗಿದಾಗ. ಅದು ಭಾರತದ ದಂಡೆಯಿಂದ ದೂರ ಸರಿದ ವೇ ಯಲ್ಲಿ. ಬಾಳನ್ನು ತಿಳಿಯಬೇಕೆಂಬ ಜಿಜ್ಞಾಸೆ—ಹಂಬಲ, ಕವಿಗೆ ಮುಖ್ಯವಾ ಪ್ರಚೋದನಶಕ್ತಿಯಾಯಿತು. ಮೂಡಣ-ಪಡುವಣದ ಸಮಾಜಗಳಲ್ಲಿಯ ಅ ಗಜಾಂತರವನ್ನು ನೋಡಿ ಹುಟ್ಟಿದ ಜಿಗುಪ್ಸೆ, ಸಂತಾಪ, ಕರುಣೆ ಅಂತರ್ಮುಖತೆ ಬಹಿರ್ಮುಖತೆಯ ಸರಿತೂಕ ನೀಡಿತು. ಪರಿಣಾಮ 'ಅಭ್ಯುದಯ' ಅವಧಿಯ ಕವಿತೆಗಳ ಆ ಅವಶ್ಯತೆಗೆ ಅನುಗುಣವಾಗಿ ಕಾವ್ಯದ ರಚನಾರೀತಿಯಲ್ಲಿ ಪರಿವರ್ತನೆಯಾಯಿತು 'ನವ್ಯ ಕವಿತೆಗಳು' ವಿನೂತನ ದಾರಿಯ ಕಹಳೆಯೂದಿದುವು. ಆದರೂ "ಆಧುನಿ ಸ್ವಚ್ಛಂದ ಮಾರ್ಗದಿಂದ ಆತ್ಮಾಭಿವ್ಯಕ್ತಿ ತೃಪ್ತಿಯಾಗುವುದು ಸಾಧ್ಯವಿರಲಿಲ್ಲ" ಎನಿಸಿತು ಆವರೆಗಿನ ಎಲ್ಲ ಅನುಭವಗಳಿಗೆ, ಸ್ನೇಹ ಪ್ರೀತಿ ಸೌಂದರ್ಯಗಳ ದರ್ಶನಕ್ಕೆ, ಜ್ಞಾ ಭಕ್ತಿಗಳ ಜೋಡಣೆಯಾಯಿತು. ಆಗ ಮೂಡಿತು ಸಮನ್ವಯದ ಸೂಕ್ಷ್ಮ ಎಳೆಗಳನ್ ಕಂಡು ಹಿಡಿಯುವ ಬಯಕೆ.

ಈ ದಾರಿ ಒಂದು ನೆಲೆಗಟ್ಟಿಗೆ ವಿನಾಯಕರನ್ನು ತಂದು ನಿಲ್ಲಿಸಿದೆ. ಈ ಯುಗ ಪ್ರಶ್ನೆಯಾದ ಮೂಡಣ—ಪಡುವಣಗಳ ಸಂಘರ್ಷದಲ್ಲಿ ನವಮಾನವ ಸಂಸ್ಕೃತಿಯನ ಘೋಷಿಸುವ ಮೌಲ್ಯಗಳನ್ನು ಅನುಭವಜನ್ಯವಾಗಿ ಆಯ್ದು ತೆಗೆಯಲು ಒಂದು ವಿಶಿ ಜೀವನ ದೃಷ್ಟಿ ಬೇಕೆಂದು ವಿನಾಯಕರಿಗೆ ಅನಿಸಿದೆ. ಅವರ ಆ ಅನಿಸಿಕೆ ಈ ಮಾತುಗಳ ಸ್ಫುಟಗೊಂಡಿದೆ :

> "ಸಾಹಿತ್ಯದಲ್ಲಿ ಅನುಭವ ಮುಖ್ಯ. ಆದರೆ, ರೀತಿ ಇಲ್ಲವೆ ತಂತ್ರ ಗೌಣವಲ್ ವ್ಯಕ್ತಿಗೆ ದೃಷ್ಟಿ ಸ್ವಾತಂತ್ರ್ಯವಿದ್ದಂತೆ, ರೀತಿ ಸ್ವಾತಂತ್ರ್ಯವೂ ಉಂಟು."
>
> "ಯಾವುದೇ ಒಂದು ಶೈಲಿ ಎಲ್ಲಾ ಶೈಲಿಗಳ ಅಳತೆಗೋಲಾಗಲಾರದು. ಶೈಲಿಯ ಕವಿ ಸ್ವಭಾವಾನುಸಾರಿಯಾಗಿರುವುದಲ್ಲದೆ ಅನುಭವದ ಒತ್ತಡದಂತೆ ರೂಪುಗೊಳ್ ತ್ತದೆ."
>
> "ಕಾಣ್ಕೆ, ಕಾವ್ಯವಸ್ತು, ಮೂಡು, ರಚನಾಕ್ರಮ ಹಾಗೂ ಶೈಲಿಗೆ ಅನುರೂಪವಾ ಮಾತ್ರ ಛಂದಸ್ಸು ಮೈದೋರುತ್ತದೆ."

೩

ವಿನಾಯಕರು ಆರಂಭದಲ್ಲಿ ಬರೆದ ಭಾವಗೀತೆಗಳು, ಕಥನಾತ್ಮಕ ಕವಿತೆಗಳು ಆಗಿನ ಕಾಲದ ಪ್ರತಿಯೊಬ್ಬ ಕವಿಗೂ ಸಹಜವೆನಿಸಿದ ಕಾವ್ಯಸೃಷ್ಟಿ. ಆಂಗ್ಲ ಸಾಹಿತ್ಯದ ಸ

ನ್ನು ಬಾಲ್ಯದಲ್ಲಿಯೇ ಚಪ್ಪರಿಸಿದ್ದ ಗೋಕಾಕರು, ಲಾಂಗ್‌ಫೆಲೋ, ವರ್ಡ್ಸ್‌ವರ್ತ್, ನಿಸನ್, ಶೆಲ್ಲಿ ಈ ಕವಿಗಳಿಂದ ಸುಲಭವಾಗಿಯೇ ಪ್ರಭಾವಿತರಾದರು. ಎಳೆಯ ದ್ಯಾರ್ಥಿ ವಿನಾಯಕರು ಟೆನಿಸನ್ನನ 'ಗಿನೀವಿಯರ್' ಎಂಬ ದೀರ್ಘ ಕಥನ ಕಾವ್ಯವನ್ನು ದಿ ಅದರಷ್ಟೇ ದೀರ್ಘವಾದ 'ಲೀಲಾ' ಎಂಬ ಕಥನ ಕಾವ್ಯವನ್ನು ಒಂದು ಸನ್ನಿವೇಶ ನ್ನು ಕಲ್ಪಿಸಿ ಬರೆದರು.

ಮುಂದೆ ತಾರುಣ್ಯದ ಅವಧಿಯಲ್ಲಿ ಕಾವ್ಯಲಹರಿ ಆಕೃತಿ ಪಡೆಯತೊಡಗಿತು; ಬೇರು ಳವಾಯಿತು. ಬೇಂದ್ರೆ, ಟಾಗೋರ್, ಯೇಟ್ಸ್, ಎಇ ಇವರೆಲ್ಲರ ಕಾವ್ಯಗಳಿಂದ ನಾಯಕರು ಪ್ರಭಾವಿತರಾದರು. ಇಂಗ್ಲೆಂಡಿನಲ್ಲಿ ಆಡೆನ್, ಇಲಿಯೆಟರ ಕವಿತೆಗಳು ನ್ನಡ ಕವಿಯ ಕಾವ್ಯಶರಧಿಯಲ್ಲಿ ಅನೇಕ ತೆರೆಗಳನ್ನು ಎಬ್ಬಿಸಿದವು.

ಭಾರತಕ್ಕೆ ಮರಳಿಬಂದ ವೇಳೆಗೆ, ಆಗಲೇ ವಿನಾಯಕರಿಗೆ ಬಲವಾಗಿ ಅಂಟಿಕೊಂಡಿದ್ದ ರವಿಂದ ತತ್ವಜ್ಞಾನದ ಜೊತೆಗೆ ಮಾರ್ಕ್ಸ್‌ವಾದವೂ ಭುಜ ಒಲೆಸಲು ಬಂದಿತು. ನಸುಗಾರ, ಸಮಾಜಪ್ರಜ್ಞೆಯುಳ್ಳ ದಾರ್ಶನಿಕನಾದ.

ಅರಿವು, ಅನುಭವಗಳ ತಾಕಲಾಟದಲ್ಲಿ ವಿನಾಯಕರ ಕಾವ್ಯವಸ್ತು ಹೆಚ್ಚು ಹೆಚ್ಚಿನ ಸ್ತಾರವನ್ನು ಗಳಿಸಿಕೊಂಡಿತು. ಆಂತರಿಕ ಅವಶ್ಯತೆಗೆ ಅನುಗುಣವಾಗಿ ಬರೆವಣಿಗೆಯ ತಿ—ಛಂದ—ಬದಲಾಯಿತು; ಅನಿವಾರ್ಯವಾಗಿ ಬದಲಾಯಿತು. ಆಡುಮಾತಿನ ಳಕೆ, ವಿನೂತನ ಪ್ರತಿಮೆಗಳು ಎಲ್ಲವೂ ಆಯ್ದುಕೊಂಡ ವಸ್ತುವಿಗೆ ಅಗತ್ಯವೆನ್ನಿಸಿಯೇ ವರ ಕವಿತೆಗಳಲ್ಲಿ ಮೂಡಿಬಂದವು. 'ಬಾಳದೇಗುಲ'ದಲ್ಲಿ ಎಂಬ ಕವನಸಂದಿರದಲ್ಲಿ ವ್ಯ ಪದ್ಧತಿ ಹೊಸರೂಪ ತಳೆಯುವುದು ಅಗತ್ಯವೆನಿಸಿತು.

ಇಲ್ಲಿ ಗಮನಿಸಬೇಕಾದ ಒಂದು ಅಂಶವಿದೆ. ವಿಚಾರಧಾರೆ ರೂಪುಗೊಳ್ಳುವ ಬಗೆಯನ್ನು ರ್ದಿಷ್ಟ ಅಂಕಣಗಳಾಗಿ ಬಂದಿಸುವುದಕ್ಕಾಗುವುದಿಲ್ಲ. ಒಂದು ಅಂಶ ಪ್ರಧಾನವಾಗಿರು ಗ ಇನ್ನೊಂದು ಆಗಲೇ ಮೊಳೆತಿರುತ್ತದೆ. ಮೊಳೆತುದು ಬಲಗೊಂಡು ಮೂಲ ಅಂಶಕ್ಕೆ ಎದುರಿಯಾಗುತ್ತದೆ. ಅಷ್ಟರಲ್ಲಿ ಮತ್ತೊಂದು ಪ್ರವೃತ್ತಿ ಮುಖತೋರಿ ಹೊಸ ಲುವಿಗೆ ಕಾರಣವಾಗುತ್ತದೆ. ಯಾವುದೇ ಅಂಶ ಪ್ರಧಾನವಾಗಿದ್ದಾಗಲೂ ಇತರ ಕೆಲ ಶಗಳು ತಮ್ಮ ಅಳಿಲಸೇವೆಯನ್ನು ಸಲ್ಲಿಸುತ್ತಲೇ ಇರುತ್ತವೆ. ತಾಕಲಾಟದ ಪರಿಣಾಮ ಗಿ ಈ ಎಲ್ಲ ಅಂಶಗಳು ತಮ್ಮ ಅರೆಕೊರೆಗಳನ್ನು ಕಳೆದುಕೊಂಡಾಗ, ಅವು ಪರಸ್ಪರ ರಿತು, ಸಮಗ್ರರೂಪದ ಒಂದೇ ತೊರೆಯನ್ನು ರೂಪಿಸುವುದು ಕ್ರಮೇಣ ಸಾಧ್ಯವಾಗು ದೆ.

ಪ್ರಗತಿಶೀಲ ಕಾಲಾವಧಿಯ 'ಅಭ್ಯುದಯ'ದಲ್ಲಿ ವಿನಾಯಕರು "ಯೌವನದ ಷ್ಟದೃಷ್ಟಿಗೆ ಬೀಳ್ಕೊಡುಗೆಯನ್ನು ಕೊಡುತ್ತ ಹೊಸ ಶಕ್ತಿಯ ರಣಭೇರಿಯನ್ನು ಮೊಳಗಿಸಿದರು; ಹೊಸ ಪ್ರಯೋಗಗಳು ಇಲ್ಲಿ ಅಗತ್ಯವಾದುವು. ಅವರಲ್ಲಿನ 'ಚಂದ್ರ

ಗ್ರಹಣ' ಕವಿತೆ, ತಂತ್ರ ಹಾಗೂ ಮಾತಿನ ಬಳಕೆಯಲ್ಲಿ ನವ್ಯ; "ಸೈರನ್" ಸಂಪೂರ್ಣ ನವ್ಯ ನಾಲ್ಕು ವರ್ಷಗಳ ಅನಂತರ, ೧೯೫೦ರಲ್ಲಿ, ಕಾವ್ಯೇತಿಹಾಸದ ದೃಷ್ಟಿಯಿಂದ ವಿನಾಯ ರನ್ನು ನವ್ಯಕಾವ್ಯ ಮಾರ್ಗದ ಪ್ರೇರಕರನ್ನಾಗಿ ಮಾಡಿರುವ "ನವ್ಯಕವಿತೆಗಳು" ಪ್ರಕ ವಾಯಿತು. ಅದೇ ವರ್ಷ ಮುಂಬೈಯಲ್ಲಿ ಜರಗಿದ ಕನ್ನಡ ಸಾಹಿತ್ಯ ಸಮ್ಮೇಳನದ ಲೇಖಕರ ಗೋಷ್ಠಿಯ ಅಧ್ಯಕ್ಷರಾಗಿ, ನವ್ಯಮಾರ್ಗದ ಪ್ರತಿಪಾದನೆಯನ್ನು ವಿನಾಯಕ ಮಾಡಿದರು.

ಈ ಎಲ್ಲ ಅವಸ್ಥಾಂತರಗಳು ಪ್ರಾಮಾಣಿಕವಾಗಿ ಬರಲಿಲ್ಲವೆನ್ನುವುದು ಕುಚೋದ್ಯ ಮಾತಾದೀತು.

೪

ಮೂವತ್ತು ನಲ್ವತ್ತು ವರ್ಷಗಳ ಕಾವ್ಯಜೀವನದಲ್ಲಿ 'ಸಮುದ್ರಗೀತಗಳು 'ಅಭ್ಯುದಯ' ಹಾಗೂ 'ಇಂದಿಲ್ಲ ನಾಳೆ' ಈ ಮೂರು ಕಾವ್ಯಸೋಪಾನಗಳನ ವಿನಾಯಕರು ಏರಿ ನಿಂತುದನ್ನು ನಾವು ಕಾಣುತ್ತೇವೆ.

ಆಂತರಿಕ ಪ್ರೇರಣೆ, ವಿಚಾರಶಕ್ತಿ, ಜೀವನದ ಮೌಲ್ಯ ಇವು ಮೂರರ ಸಾಮರಸ ವನ್ನು ಕವಿ ಸಾಧಿಸಿದಾಗ ಪುಷ್ಟಿಯಾಗುವ ಕಾವ್ಯ ಸಹಜವಾಗಿಯೇ ಶ್ರೇಷ್ಠ ಕಾವ ಗುಣಗಳನ್ನು ಹೊಂದಿರುತ್ತವೆ.

"ಇಂದಿಲ್ಲ ನಾಳೆ" ಅಮೆರಿಕಾ ಪ್ರವಾಸದ ವೇಳೆ ಕವಿ ಬರೆದ ಕವಿತೆಗಳ ವಿಶಿಷ್ಟ ಸಂಗ್ರ ವಿಮರ್ಶಕರೊಬ್ಬರ ಅಭಿಪ್ರಾಯದಂತೆ ಇಲ್ಲಿ,

> "ವಿನಾಯಕರು ಅಮೆರಿಕೆಯ ಸಂಸ್ಕೃತಿಯನ್ನು ಸಾಮಾನ್ಯವಾಗಿ ಭಾರತೀಯ ಸಂಸ್ಕೃತಿಯ ಆಧ್ಯಾತ್ಮಿಕ ಮೂಲಗಳಿಂದ ಅಳೆಯುತ್ತಾರೆ. ಕೆಲವು ಸಲ ಭಾರತೀಯ ಸಂಸ್ಕೃತಿಯನ್ನು ಅಮೆರಿಕನ್ ಸಂಸ್ಕೃತಿಯ ಜೊತೆಗಿರಿಸಿ ಎರಡನ್ನೂ ತೂಗಿ ನೋಡ ತ್ತಾರೆ. ಅಂತೆಯೇ ಪರಸ್ಪರ ಭಿನ್ನವಾಗಿರುವ ಎರಡು ಸಂಸ್ಕೃತಿಗಳ ದರ್ಶನ ಏ ಕಾಲಕ್ಕೆ ನಮಗುಂಟಾಗುತ್ತದೆ. ಯಾಂತ್ರಿಕ ವಸ್ತುಗಳನ್ನೂ ವೈಜ್ಞಾನಿಕ ವಿಷಯ ಗಳನ್ನೂ ಅವುಗಳ ವಿಶಿಷ್ಟಕ್ರಿಯೆಗಳನ್ನೂ ಒಂದು ಹೊಸ ಶೈಲಿಯ ಮೂಲಕ ಕಾವ ದಲ್ಲಿ ರೂಪಾಂತರಿಸಿ ಕನ್ನಡ ಕಾವ್ಯದಲ್ಲಿ ವಿನಾಯಕರು ಒಂದು ಹೊಸ ಮಾರ್ಗವನ ತೆರೆದಿದ್ದಾರೆ."

ಬದುಕಿನೊಡನೆ ಹೊಂದಿದ ತನ್ಮಯತೆಯಿಂದ, ಅನುಭವದ ಕುಲುಮೆಯಲ್ಲಿ ಸ್ಫು ಗೊಂಡು, ಪರಿಸರಕ್ಕೆ ಪ್ರತಿಕ್ರಿಯೆಯಾಗಿ, ಅದಕ್ಕೆ ಅನುಗುಣವಾದ ಕಾವ್ಯರೀತಿಯನ್ನು ಪಡೆದು 'ಇಂದಿಲ್ಲ ನಾಳೆ' ಸಂಕಲನದ, ಕವನಗಳು ಸೃಷ್ಟಿಯಾಗಿವೆ.

ವ್ಯಕಾವ್ಯವನ್ನು ಕುರಿತು ವಿನಾಯಕರು ಹೀಗೆಂದಿದ್ದಾರೆ:

"(ಇದು) ಆಧುನಿಕ ಅಥವಾ ರೊಮಾಂಟಿಕ್ ಕಾವ್ಯದ ಧಿಕ್ಕಾರವಲ್ಲ. ಅದರ ಸಹಜವಾದ ಹಾಗೂ ಅನಿವಾರ್ಯವಾದ ಬೆಳವಣಿಗೆ. ಆತ್ಮತೃಪ್ತಿಗೆ ಹೊಸ ಮಾರ್ಗವನ್ನು ಹುಡುಕಿ ಸಾಗುವುದು ಅನಿವಾರ್ಯವಾಯಿತು."

ವಿನಾಯಕರಲ್ಲಿ ಕಂಡುಬರುವ ಪ್ರಯೋಗಶೀಲ ಪ್ರವೃತ್ತಿಯನ್ನು ವಿವರಿಸಲು ಮೇಲಿನ ಾತು ಸಾಕು. ಅವರ ಪಾಲಿಗೆ ಕೈಗೊಳ್ಳುವ ಕಾವ್ಯರೀತಿ ಪ್ರಯೋಗಪ್ರಿಯತೆಯ ಲವಾಗಿ ಉದಿಸುವುದಿಲ್ಲ. ಆಂತರಿಕ ಅವಶ್ಯತೆಯ ಕಾರಣದಿಂದ ವಿನೂತನ ಪ್ರಯೋಗ ಳನ್ನು ಅವರು ಮಾಡುತ್ತಾರೆ.

ಶ್ರೀ ಅರವಿಂದರ ವಿಚಾರಧಾರೆ

ಆರ್. ಜಿ. ಕುಲಕರ್ಣಿ

O beautiful body of the incarnate word,
Thy thoughts are mine, I have spoken with thy voice.
My will is thine, what thou hast chosen I choose
All thou hast asked I give to earth and men
. . . .
Natu e shall live to manifest secret god,
The Spirit shall take up the human play,
This earthly life become the life divine

Sri Aurobindo, *Savitri*, p. 783–798.

. . . ತಮ್ಮ! ನಿನಗೇನು ಗೊತ್ತು ?
ನಾ ಬಿತ್ತಲಿಹ ಬೀಜಗಳನೆ ತೂರಿರುವಿ ಬಂದು—
ನಿನ್ನ ಸಾಹಸಕೆನ್ನ ಕಾರ್ಯವಿದೆ ಸುಗಮುವಿಂದು !
. . . .
ಹೃತ್ಪದ್ಮವರಳಿಸುದು ನಿನ್ನಾತ್ಮಜ್ಯೋತಿ ಬೆಳಗಿ
ಮುಡಿಗಣ್ಣು ತೆರೆದಿಸುದು ಘನಮನದ ನೆಲೆಗೆ ಪಳಗಿ
ಶ್ರೀಮನದ ಸಂಪದಾಗರದಲ್ಲಿ ಮುಗುವಿನಂತೆ
ಅಂಬೆಗಾಲಿಕ್ಕಿ ನೀ ತಿಳಿಯದಲೆ ತೂರಿ ನಿಂತೆ !
. . . .
ಅಧಿಮಾನಸಾಮೃತವೆ ನಿನ್ನುಸಿರೊಳಾಡುತಿರಲಿ
ಅಂದಿಗಾರೋಹಣದ ಪೂರ್ವರಂಗದ ಸಮಾಪ್ತಿ
ಮುಂದೆ ಬಹುದವತಾರ ಕಾರ್ಯಕಿಹ ದಿವ್ಯದೀಪ್ತಿ

—ವಿನಾಯಕ, 'ತ್ರಿಶಂಕುವಿನ
ಪ್ರಜ್ಞಾಪ್ರಭಾತ', ಪು. 79–80

೧

ಶ್ರೀ ವಿನಾಯಕರ ಕಾವ್ಯದಲ್ಲಿ ಶ್ರೀ ಅರವಿಂದರ ವಿಚಾರಧಾರೆಯನ್ನು ಕಾಣುವದೆಂದರ ಶ್ರೀ ಅರವಿಂದರ ಪ್ರತಿಬಿಂಬವನ್ನಾಗಲಿ, ಪ್ರತಿರೂಪವನ್ನಾಗಲಿ ಹುಡುಕುವದೆಂದು ಭಾವಿಸ ಬೇಕಿಲ್ಲ. ಶ್ರೀ ವಿನಾಯಕರು ಅನೇಕ ಮಹಾತ್ಮರಿಂದ, ಮಹಾಕವಿಗಳಿಂದ ಸ್ಫೂರ್ತಿ

ಡೆದಿದ್ದಾರೆ; ಪ್ರದೀಪ್ತರಾಗಿದ್ದಾರೆ. ಆದರೆ ಶ್ರೀ ಅರವಿಂದರಲ್ಲಿ ಅವರಿಗೆ ತಮ್ಮ ವ್ಯಕ್ತಿತ್ವ ಲ್ಲಿಯೇ ಮೂಡುತ್ತಲಿದ್ದ ದರ್ಶನದ ಪರಿಪೂರ್ಣತೆ ಕಂಡಿತು; ಅನುಭಾವದ ಪಥದಲ್ಲಿ ಪ್ರಗತಿಸಾಧಕ ಅನುಗ್ರಹ ತೋರಿತು. ಅದರಿಂದ ವಿನಾಯಕರ ಜೀವನ ದರ್ಶನ, ಕಾವ್ಯ ಪ್ರತಿಭೆ ಸ್ಪಷ್ಟವಾದ ರೂಪರೇಷೆಯನ್ನು ಪಡೆಯಿತು. ವ್ಯಕ್ತಿವಿಕಾಸ, ಸಮಷ್ಟಿ ವಿಕಾಸ; ್ಯಷ್ಟಿ ಸಮಷ್ಟಿಯ ಸಮನ್ವಿತ ವಿಕಾಸ; ದ್ಯಾವಾ-ಪೃಥಿವಿಯ ಸಾಮರಸ್ಯ — ಇವೆಲ್ಲ ರ್ಶನದ ಅನುಭವ-ಅನುಭಾವಸಿದ್ಧಿ ಶ್ರೀ ಅರವಿಂದರಲ್ಲಿರುವದನ್ನು ವಿನಾಯಕರು ಂಡರು. ಆದ್ದರಿಂದಲೇ ಅವರೆಡೆಗೆ "ಶಿಷ್ಯಸ್ತೇಹಂ" ಎಂದು ಹೋದರು. ಬೌದ್ಧಿಕವಾಗಿ ೀಗೆ ಸಾಮ್ಯವನ್ನು ಕಾಣುವದರ ಜೊತೆಗೆ ಶ್ರೀ ಅರವಿಂದರೊಡನೆ ತಮಗಿರುವ ಆಂತ ಕ ಸಂಬಂಧವನ್ನೂ ಕನಸು-ಕಣಸುಗಳ ಮೂಲಕ ಕಂಡು ನಿಷ್ಠಾವಂತ ಸಾಧಕ ಾದರು. ಈ ಸಾಧನ ಪಥದಲ್ಲಿ ಮುನ್ನಡೆದಾಗ ಅವರ ಪ್ರತಿಭೆ ಅರಳಿ ಸೃಷ್ಟಿಸಿದ ಕಾವ್ಯ ಲ್ಲಿ ಶ್ರೀ ಅರವಿಂದರ ದೀಪ್ತಿಯಿದ್ದರೆ ಆಶ್ಚರ್ಯವಲ್ಲ— ತಾಯಿತಂದೆಯರ ಸತ್ತ್ವ ಪಡೆದ ಮಗು ಸ್ವಯಂ ವ್ಯಕ್ತಿತ್ವ ಪಡೆದುಕೊಂಡೇ ಪ್ರವರ್ಧಮಾನನಾಗುತ್ತಾನೆ. ಈ ದೃಷ್ಟಿ ಯಿಂದ ಶ್ರೀ ಅರವಿಂದ ನಂದನದ ವಿಶಿಷ್ಟ ಪುಷ್ಪವಾಗಿದ್ದಾರೆ ವಿನಾಯಕರು.

ಸ್ವಸ್ವರೂಪಸ್ಥಿತಿಯೇ ಪ್ರತಿಭೆ ಹಾಗೂ ವ್ಯಕ್ತಿತ್ವದ ವಿಶೇಷ ಲಕ್ಷಣ. ಅನಂತಾನು ಭವದ ಸಾರ ಹೀರಿದರೂ ನೈಜಪ್ರತಿಭೆಯು ಸ್ವತಂತ್ರ ಸ್ವರೂಪವನ್ನು ಕಳೆದುಕೊಳ್ಳುವ ಲ್ಲ; ಅನಂತಜನ್ಮ ಸಂಚರಿಸಿದರೂ ಜೀವವು ತನ್ನ ಋತುಸ್ವರೂಪದ ವಿನಾಶಮಾಡಿ ೊಳ್ಳುವದಿಲ್ಲ. ತನ್ನ ನಿಜರೂಪದ ಅರಿವು, ಅಭಿವ್ಯಕ್ತಿಯಿಂದಲೇ ವಿಶ್ವಲೀಲೆಯಲ್ಲಿ ೀವಕ್ಕೆ ವೈಶಿಷ್ಟ್ಯ ಸಿದ್ಧಿಸುತ್ತದೆ.

ವಿನಾಯಕರಲ್ಲಿ ಇಂಥ ಸ್ವ-ವ್ಯಕ್ತಿತ್ವದ, ಸ್ವ-ಪ್ರತಿಭೆಯ ಪ್ರಜ್ಞೆಯಿದೆ. ಈ "ಸ್ವಂತಿಕೆ" ಯನ್ನು ಅವರ ಕಾವ್ಯಸೃಷ್ಟಿಯ ಪ್ರತ್ಯಂಗದಲ್ಲಿಯೂ ಕಾಣುತ್ತೇವೆ:

ಸಾರ್ವಭೌಮ ಮರ್ತ್ಯತೆಯ ಮುಡಿಯಿಂದ
ಕೈವಲ್ಯದ ಅಸುರತೆಯ ಅಡಿಯಿಂದ
ಅರ್ಧಮರ್ಧ ದರ್ಶನದ ಗುಡಿಯಿಂದ
    ಬಿಡಿಸಿಕೊಂಡು ಬಾ
    ಬಿಡಿಸಲೆನ್ನ ಬಾ
    ಬಾ ಬಾ ಬಾ
    ಓ ನೀರದ ಬಾ!

ಂಬ 'ದ್ಯಾವಾ-ಪೃಥಿವೀ' ಕಾವ್ಯದಲ್ಲಿ ಕವಿಗಳು ನೀರದವನ್ನು — ಮೋಡವನ್ನು ಕುರಿತು ಪ್ರಾರ್ಥಿಸಿದ್ದಾರೆ. ಬೌದ್ಧಿಕ ತತ್ತ್ವಜ್ಞಾನ, ಕಲ್ಪಕತೆಯ ಇಂದ್ರಜಾಲ, ಭಾವವಿಲಾಸ, ಶಿಷ್ಟೆಭವ — ಇವೆಲ್ಲವುಗಳ ಬಂಧನದಿಂದ ಮುಕ್ತವಾಗಿ ತನ್ನ ನೈಜವ್ಯಕ್ತಿತ್ವವನ್ನು ಾಣುವ, ಕಾಯ್ದುಕೊಳ್ಳುವ, ಬೆಳೆಸುವ ಹಂಬಲ ವಿನಾಯಕರಲ್ಲಿ ಅದ್ಭುತವಾಗಿದೆ.

ಆದ್ದರಿಂದಲೇ ಅವರು ಬೇಂದ್ರೆಯವರ ಗೆಳೆಯರ ಗುಂಪಿನ ಬಹು ಶ್ರೇಷ್ಠ ವ್ಯಕ್ತಿಗಳ ಲ್ಲೊಬ್ಬರಾಗಿದ್ದರೂ ಕಾವ್ಯರಂಗದಲ್ಲಿ ತಮ್ಮದೇ ಆದ 'ನವ್ಯಸಂಪ್ರದಾಯ' ಪ್ರಾರಂಭ ಸಲು ಸಮರ್ಥರಾದರು. ಈ ರೀತಿಯ ಸ್ವತಂತ್ರ ವ್ಯಕ್ತಿತ್ವದ ನೈಜ ಸಾಧನೆಗೆ ಶ್ರೀ ಅರವಿಂದ ದರ್ಶನದಲ್ಲಿ ಪ್ರಥಮಸ್ಥಾನವಿದೆ. ಇದನ್ನು ಶ್ರೀ ಅರವಿಂದರು "ಚೈತ್ಯಪುರುಷನ ಸಾಧನೆ" ಎಂದು ಕರೆದಿದ್ದಾರೆ. "ಚೈತ್ಯಪುರುಷ" ಎಂದರೆ ಶ್ರೀ ಅರವಿಂದರ ಪರಿಭಾಷೆಯಲ್ಲಿ ಜನ್ಮ ಜನ್ಮಾಂತರಗಳಿಂದ ವ್ಯಕ್ತಿಯೊಳಗೆ ಅರಳುತ್ತಿರುವ ಜೀವಸತ್ವ. ಇದು ಪರಮಾತ್ಮನ ಆನಂದದ ಅಂಶ. ಈ ಅಂಶವು ಒಂದು ರೂಪ ಪಡೆದು ಸ್ಥಿರಗೊಳ್ಳುವವರೆಗೆ ಮನುಷ್ಯನು "ವ್ಯಕ್ತಿ" ಎನ್ನಿಸುವದೇ ಇಲ್ಲ. ಆತನು ಕೇವಲ ಆಶೆ ಆಕಾಂಕ್ಷೆ, ಬುದ್ಧಿ, ಭಾವ, ಕಲ್ಪನೆ ಗಳ ಮೊತ್ತವಾಗಿರುತ್ತಾನೆ. ಇವುಗಳ ಮಧ್ಯದಲ್ಲಿ "ನಾನು" ಎಂಬ ಅಹಂಕಾರ ಬಿಂದು ಒಂದು ಉದಯವಾಗಿರುತ್ತದೆ. ಅಹಂಕಾರವು ತಮಸ್ಸಿನ ಜಾಡ್ಯದಲ್ಲಿ ಸಿಕ್ಕಾಗ ನಿತ್ರಾಣ ವಾಗಿ ಬಿದ್ದಿರುತ್ತದೆ; ರಜೋಗುಣದ ಸೆಳೆತಕ್ಕೆ ಸಿಕ್ಕಾಗ ಜೀವನದ ಹೋರಾಟದಲ್ಲಿ ಧುಮುಕಿ ದಣಿಯುತ್ತದೆ. ಸತ್ವದ ಪ್ರಭಾವಕ್ಕೊಳಗಾದಾಗ ಜ್ಞಾನದ ದಾರಿಯಲ್ಲಿ ಮುಂದುವರಿಯುತ್ತದೆ. ಚೈತ್ಯಪುರುಷ, ಸಾಕ್ಷಿಪುರುಷ ಅಥವಾ ವಿಕಾಸಶೀಲ ಜೀವ ಪುರುಷನು ಈ ಮೂರು ಗುಣಗಳನ್ನೂ ಸಮತೂಕದಲ್ಲಿಟ್ಟುಕೊಂಡು ಅವುಗಳಿಂದ ಮೇಲೆ ನಿಲ್ಲಬಲ್ಲವನಾಗಿರುತ್ತಾನೆ. ಅವನನ್ನು ತಿಳಿದುಕೊಂಡು, ಆತನನ್ನೇ ನಮ್ಮ ವ್ಯಕ್ತಿತ್ವದ ಕೇಂದ್ರವನ್ನಾಗಿ ಪ್ರತಿಷ್ಠಾಪಿಸುವದು ಶ್ರೀ ಅರವಿಂದರ ಪೂರ್ಣಯೋಗ ಸಾಧನೆಯಲ್ಲಿ ಪ್ರಥಮ ಕಾರ್ಯ.

ವಿನಾಯಕರು ಈ ಚೈತ್ಯಪುರುಷನ ವರ್ಣನೆಯನ್ನು ಅಂತಃಸ್ವರೂಪವನ್ನು ಒಂದು ಪದ್ಯದಲ್ಲಿ ಸ್ಪಷ್ಟವಾಗಿ ನೀಡಿದ್ದಾರೆ—

ಲಹರಿ ಬಂದಿರಲಷ್ಟೆ ನೀನು ಶಕಪುರುಷ
ಸ್ಫೂರ್ತಿ ಸಂವತ್ಸರದಿ ನೀ ವಿಕ್ರಮ

. . . .

ಉಳಿದ ಸಮಯದಿ ನೀನು ಬಟ್ಟಬಯಲು

. . . .

ಯಾವದನಿಯಲಿ ನಿನ್ನ ಪ್ರಾರ್ಥಿಸಿರಲು
ನಿತ್ಯ ಸಿಂಹಾಸನಸ್ಥನು ನೀನು ಹೇಳು?

. . . .

ಕನಸು-ನನಸುಗಳಿರಲು ಹಾಸು-ಹೊಕ್ಕು,
ಕೇಂದ್ರ ಸತ್ಯದಯ್ಯ ನಿನ್ನ ಸೃಷ್ಟಿ
ಧ್ಯಾನ-ಗೆಯ್ಮೆಗಳೆಲ್ಲಿ ಸಂಧಿಸುವವೊ
ಒಗುಮಿಗುವದಲ್ಲಿ ನಿನ್ನಿಂದ್ರದೃಷ್ಟಿ

ಅಂತರ್ಮುಖ ಧ್ಯಾನ ಹಾಗೂ ಬಹಿರ್ಮುಖ ಕಾರ್ಯಪ್ರವೃತ್ತಿಗಳಲ್ಲಿ ಸಮತೂಕವನ್ನು

ುವ ಈ ಕೇಂದ್ರ ವ್ಯಕ್ತಿತ್ವದ ಸಾಧನೆಗಾಗಿ ವಿನಾಯಕರು ತಮ್ಮ ಜೀವನದಲ್ಲಿ ಬಹು ವಿಸಿದ್ದಾರೆ; ಸಾಹಿತ್ಯದಲ್ಲಿ ಆ ಅನುಭವದ ಸಾರದರ್ಶನ ನೀಡಿದ್ದಾರೆ.

‘ತ್ರಿಶಂಕುವಿನ ಪ್ರಜ್ಞಾ ಪ್ರಭಾತ’ ಎಂಬ ಖಂಡಕಾವ್ಯದಲ್ಲಿ ವಿನಾಯಕರು ತ್ರಿಶಂಕು ಗೆ ಸ್ವಯಂಪ್ರಜ್ಞೆ ಉದಯವಾದ ಸನ್ನಿವೇಶವನ್ನು ಚಿತ್ರವತ್ತಾಗಿ ನಿರೂಪಿಸಿದ್ದಾರೆ. ೃತಿ, ಬುದ್ಧಿ, ಕಲ್ಪನೆಗಳೆಂಬ ಮೂರು ಲೋಕಗಳಲ್ಲಿ ಸಂಚರಿಸಿಯೂ ತೃಪ್ತಿಪಡೆ ದ ತ್ರಿಶಂಕು, ಭೂಮಿಯತ್ತ ಮರಳಲಾಶಿಸಿ ಅದೂ ಸಾಧ್ಯವಾಗದೆ ಕಂಗೆಟ್ಟಾಗ ಸ್ವಂಭರೆಯ ಅನುಗ್ರಹದಿಂದ ಸ್ವಯಂಪ್ರಜ್ಞೆಯ ಸಾಧನೆಗಾಗಿ ಜನ್ಮನಕ್ಷತ್ರದಲ್ಲಿ ತಪ ಲ್ಲುತ್ತಾನೆ. ಈ ರೀತಿ ತಪಸ್ಸುಗೈಯಲು ಹೇಳಿದ ವಿಶ್ವಂಭರೆಯ ನುಡಿಗಳಿವು:

ತನ್ನ ತಾನರಿತವನು ಘನ್ನವನ್ನರಿವ ನಾಳೆ
ಆತ್ಮದರ್ಶಿಯು ಮುಂದೆ ದಿಟವು ವಿಶ್ವಾತ್ಮದರ್ಶಿ
ಎಲ್ಲ ದಿಶೆಗಳ ವ್ಯಾಪಿಸುವದವನ ಕ್ರಾಂತಿ ಕಹಳೆ
ಅವನ ನಡೆಯುವುದು ಧ್ರುವ, ಅವನ ನುಡಿ ಅಮೃತಸ್ಪರ್ಶಿ

೨

ಆದರೆ ತನ್ನ ತಾನರಿಯುವಿಕೆ ಮುಕ್ತಿಸಾಧನೆಗಾಗಿ ಮಾತ್ರ ಮೀಸಲಾಗಿರುವ ಸಂಭವ ಿ. ಲೋಕಕಲ್ಯಾಣವು ಒಂದು ಆನುಷಂಗಿಕ ಕಾರ್ಯವಾಗಿ ಪರಿಣಮಿಸುವದೂ ಉಂಟು. ಅರವಿಂದರ ಪೂರ್ಣಯೋಗದಲ್ಲಿ “ಮೋಕ್ಷ”ವು ಒಂದು ದಿವ್ಯ ಸ್ವಾತಂತ್ರ್ಯ ಸಿದ್ಧಿ. ಗವಂತನು ವಿಶ್ವದಲ್ಲಿ ದೇವಮಾನವತೆಯನ್ನು ಉದ್ಭವಗೊಳಿಸಲಿದ್ದಾನೆ ಎಂದು ಡುಕೊಂಡು ಆ ದಿವ್ಯಸಿದ್ಧಿಗಾಗಿ ಮುಕ್ತಜೀವಿಗಳೇ ನಾಯಕರಾಗಿ ನಿಲ್ಲಬೇಕೆಂದು ಅರವಿಂದರು ಘೋಷಿಸಿದರು. ಈ ಘೋಷಣೆಯೇ ‘ದಿವ್ಯ ಜೀವನ’ (‘The Life vine’) ಗ್ರಂಥದ ತಿರುಳಾಗಿದೆ. ವಿನಾಯಕರು ಈ ಗ್ರಂಥವನ್ನು ಆಳವಾಗಿ ಅಭ್ಯಾಸ ಾಡಿದ್ದು ೧೯೪೬ರಲ್ಲಿ, ಮೀಸನಗರದಲ್ಲಿದ್ದಾಗ. ಇದಕ್ಕಿಂತ ಮೊದಲೇ ಶ್ರೀ ಬೇಂದ್ರೆ ವರ ಮೂಲಕ ಶ್ರೀ ಅರವಿಂದರ ಬಗೆಗೆ ಕೇಳಿದ್ದರೂ ‘ದಿವ್ಯಜೀವನ’ದ ದರ್ಶನವು ಾಯಕರ ಜೀವನ ದರ್ಶನವಾಗಿ ಪರಿವರ್ತನೆಯಾಗಲು ಅವರು ಮೀಸನಗರದ ಮರಳು ಡಿಗೆ ಹೋಗಿ ನಿಲ್ಲಬೇಕಾಯಿತು.

ವಿನಾಯಕರು ಇಂಗ್ಲಂಡಿಗೆ ವಿದ್ಯಾಭ್ಯಾಸಕ್ಕೆ ಹೋಗುವ ಪೂರ್ವದಲ್ಲಿ ‘ಕಲೋ ಸಕ’ ಎಂಬ ನೀಳ್ಗವಿತೆಗಳ ಸಂಕಲನ ಪ್ರಕಟಿಸಿದರು. ಅದರಲ್ಲಿ ವಿಶ್ವಾನುಭವವನ್ನೆಲ್ಲ ್ಮಮುಕ್ತಿಗಾಗಿ ಬಳಸಿಕೊಳ್ಳುವ ಸಾಧನೆಯೇ ಪ್ರಧಾನವಾಗಿರುವ ಜೀವನದೃಷ್ಟಿಯಿದೆ. ಂದರ್ಯೋಪಾಸನೆಯು ಆತ್ಮೋದ್ಧಾರದ ಅನಿವಾರ್ಯ ಸಾಧನೆ ಎಂಬ ಅರಿವನ್ನು ಸ್ನದಲ್ಲಿ ಪಡೆದು ಅದನ್ನೇ ‘ಕಲೋಪಾಸಕ’ ಎಂಬ ನೀಳ್ಗವಿತೆಯಲ್ಲಿ ಚಿತ್ರಿಸಿದ್ದಾರೆ:

Imagination is the body of Thought
Be it for thee to find its harness out

"ಆತ್ಮಭಾವನೆಯ ವಾಹನವೇ ಕಲ್ಪನಾಶಕ್ತಿ; ಈ ಕಲ್ಪನಾಶಕ್ತಿಯೆಂಬ ಕುದ ಯನ್ನೇರಲೆಂದು ಪಲ್ಲಣವನ್ನು-ಶಬ್ದ ಸಾಮಗ್ರಿಯನ್ನು—ದೊರಕಿಸು"

ಎಂಬ ಸಂದೇಶ ಅವರಿಗೆ ಸ್ವಪ್ನದಲ್ಲಿ ಕೇಳಿದೆ. ಈ ಸಂದೇಶದ ಅಂತರಾರ್ಥವನ ಅವರೇ ಹೀಗೆ ವಿವರಿಸಿದ್ದಾರೆ:

"ಕಲ್ಪನೆಯ ಕಾಮನಬಿಲ್ಲು ಸವೆದಾಗ ಮಾತ್ರ ಸತ್ಯಪ್ರಕಾಶವು ದೊರೆತೀತು ಕಲ್ಪನೆಯನ್ನು ಸವೆಸುವದೆಂದರೆ ಅದನ್ನು ಕಲೋಪಾಸನೆಯಲ್ಲಿ ಯೋಜಿಸಲೇಬೇಕ ಹೀಗಾಗಿ ಕಲೋಪಾಸಕನ ಜೀವನಕ್ಕೂ ಆಂತರಿಕ ಪ್ರಗತಿಯಲ್ಲಿ ಒಂದು ಸ್ಥಾನವಿದೆ (‘ಕಲೋಪಾಸಕ'ದ ಮುನ್ನುಡಿಯಿಂದ)

ಇಲ್ಲಿಯೇ ಕವಿ-ಅನುಭಾವಿಯ ಸಮನ್ವಯವನ್ನು ವಿನಾಯಕರು ಸಾಧಿಸಿರುವು ಕಾಣುತ್ತಿದೆ. ಕಲೋಪಾಸನೆಯ ಮುಖಾಂತರ ವಿಶ್ವಸತ್ಯವನ್ನರಿತು ಮುಕ್ತಿಪಡೆವ ಅನ ಭಾವಿಯ ಕತೆಯನ್ನು ಅವರು ನೀಳ್ಗವಿತೆಯನ್ನಾಗಿ ರಚಿಸಿದ್ದಾರೆ.

ಆದರೆ ವಿನಾಯಕರೆದುರು ಸಾಮಾಜಿಕ ಸತ್ಯವು ರುದ್ರರೂಪ ತಾಳಿ ನಿಂತಾಗ ಇಂಗ್ಲಂಡಿಗೆ ವಿದ್ಯಾಭ್ಯಾಸಕ್ಕೆ ಹೋದ ಸಮಯದಲ್ಲಿ ಮಾನವಜೀವನದ ರಾಜಕೀಯ ಹಾಗೂ ಸಾಮಾಜಿಕ ವಿರಾಡ್ ಸ್ವರೂಪವು ಪ್ರತ್ಯಕ್ಷವಾದಾಗ ವಿನಾಯಕರಿಗೆ ದಿಗ ಭ್ರಮೆಯಾಗುತ್ತದೆ. ಅಲ್ಲಿ ಅವರ ವ್ಯಕ್ತಿತ್ವವೇ ತುಂಡು ತುಂಡಾಗಿ ಕತ್ತರಿಸಿ ಹೋ ವಂತೆ ಅನ್ನಿಸುತ್ತದೆ. ಅಪಾರಮಾನವ ಸಮುದ್ರದಲ್ಲಿ ವ್ಯಕ್ತಿಯೊಂದು ಬೆಲೆಯಿಲ್ಲ ಅಣುವಾಗಿ ಹುಡಿಯಾಗಿ ಕಾಣುತ್ತಾನೆ. ಭೀಕರವಾದ ರಾಜಕೀಯ ಸಾಮಾಜಿ ವಿಷಮತೆಯ ಎದುರಿಗೆ ಕವಿಯ ಕನಸು, ಸೌಂದರ್ಯಚಿಂತನ, ಅನುಭಾವ ಸಾಧ ಗಳಿಗೆ ಏನು ಸ್ಥಾನವಿದೆ?

ಒಂದು ಕಡೆಗೆ ವಿಜ್ಞಾನದ ಸಿದ್ಧಿ, ಇನ್ನೊಂದೆಡೆಗೆ ಮಾರ್ಕ್ಸ್‌ನ ಕಮ್ಯುನಿಜಂ— ಸಮತಾವಾದದ ಪ್ರಾಬಲ್ಯ—ಇವು ವಿನಾಯಕರ ಜೀವನ ಮೌಲ್ಯ ಹಾಗೂ ವ್ಯಕ್ತಿತ ಗಳ ಮೇಲೆ ಭಯಂಕರ ಆಘಾತವನ್ನುಂಟುಮಾಡುತ್ತವೆ. ಈ ಸಂದರ್ಭದಲ್ಲಿ ಅವ ಮುಂದೆ ತೆರೆದಿರುವ ದಾರಿಗಳು ಎರಡು:

೧. ಅನುಭಾವ, ಕವಿಯ ಕನಸುಗಾರತನಗಳನ್ನು ತ್ಯಜಿಸಿ ಸಾಮಾಜಿಕ ರಾಜಕೀಯ ಪ್ರಪಂಚದ ವಾಸ್ತವಸತ್ಯವನ್ನು ಸ್ವೀಕರಿಸುವದು.

೨. ಇಲ್ಲವೆ ವಾಸ್ತವ ಪ್ರಪಂಚ, ಕಾವ್ಯದ ಸ್ವಪ್ನ ಪ್ರಪಂಚ ಹಾಗೂ ಅನುಭಾವ ಅನಂತಾನುಭವದ ದೈವೀಪ್ರಪಂಚ—ಇವುಗಳನ್ನು ಸಮನ್ವಯಗೊಳಿಸು ಸೂತ್ರ ಕಂಡು ಹಿಡಿಯುವದು.

ಶ್ರೀ ಅರವಿಂದರಿಂದ ಎರಡನೆಯ ಮಾರ್ಗವನ್ನು ವಿನಾಯಕರು ಕಂಡುಕೊಂಡರು ಈ ಮಧ್ಯಂತರ ಅವಧಿಯಲ್ಲಿಯೇ ‘ಸಮುದ್ರಗೀತಗಳು' ಪ್ರಕಟವಾದವು. ‘ಆಕಾಶಗಂಗ

ರಲ್ಲಿ ಪ್ರಕಟವಾದರೂ 'ಕಲೋಪಾಸಕ'ನಂತೆ ಇಲ್ಲಿಯೂ ಅಂತರ್ಮುಖತೆಯೇ ನವಾಗಿದೆ. ಸತ್ಯದ ಸೌಂದರ್ಯ ಹಾಗೂ ಕಲ್ಯಾಣ ಮುಖಗಳನ್ನು ಕಾಣುವದೇ ಕಾವ್ಯದ ನಾಯಕನ ಸಾಧನೆಯಾಗಿರುತ್ತದೆ. ಗೆಳೆತನದ ತಿರುಳನ್ನರಿಯಲು ಆತನ ವ ಹವಣಿಸುತ್ತದೆ. ಇಲ್ಲೆಲ್ಲ ನಾವು ಕಾಣುವದು ಶೆಲ್ಲಿ, ವರ್ಡ್ಸ್‌ವರ್ಥ್ ಕವಿಗಳ ವನ ದೃಷ್ಟಿಯ ತಿರುಳನ್ನು.

ಆದರೆ ಇಪ್ಪತ್ತನೆಯ ಶತಮಾನ ವ್ಯಕ್ತಿಗೆ ಭೌತಿಕ ಪ್ರಪಂಚವು ವೈಜ್ಞಾನಿಕ ದ ಬಲದಿಂದ ಹೊಸ ಸವಾಲು ಹಾಕಿ ಯಕ್ಷ ಪ್ರಶ್ನೆಯಂತೆ ಉತ್ತರಿಸಲೇಬೇಕೆಂದು ಹಿಡಿಯುತ್ತದೆ. ಈ ಪ್ರಶ್ನೆಗೆ ಕೆಲವು ಸಾಹಿತಿಗಳು ಸುಲಭವಾದ ಉತ್ತರ ನೀಡಿ ದಾಗುತ್ತಾರೆ. ಪ್ರೀತಿ, ಸೌಂದರ್ಯ, ಅಧ್ಯಾತ್ಮ—ಇವೆಲ್ಲ ಭ್ರಾಂತಿಯೆಂದೂ ವಾಸ್ತವ ವೊಂದೇ ಪರಮಸತ್ಯವೆಂದೂ ಸ್ವೀಕರಿಸಿಬಿಡುತ್ತಾರೆ. ಆದರೆ ಒಂದು ಸತ್ಯವು ನ್ನೊಂದು ಸತ್ಯವನ್ನು ನಿರಾಕರಿಸುವದಿಲ್ಲ. ಸಮನ್ವಯವನ್ನು ಬೇಡುತ್ತದೆ. ಜೋಡು' ಎಂದು ಕಾಣಿಸುವಲ್ಲಿ ಸಾಮರಸ್ಯದ ಸೂತ್ರ ಗುಪ್ತವಾಗಿ ಅಡಗುತ್ತಿರು ದೆ.

ವಿನಾಯಕರಿಗೆ ವೈಯಕ್ತಿಕವಾಗಿ ಈ ಸೂತ್ರವು ಮಂದಮಂದವಾಗಿ ಹೊಳೆಯು ರುವಾಗ ಶ್ರೀ ಅರವಿಂದರ ದರ್ಶನವು ದಾರಿದೀಪವಾಗಿ ಕಾಣುತ್ತದೆ. ಆ ದಾರಿದೀಪ ನ್ನು ಸ್ವೀಕರಿಸಲು ಬೇಕಾದ ಎರಡು ಅಗತ್ಯವಾದ ಜೀವನ ದೃಷ್ಟಿ ವಿನಾಯಕರಲ್ಲಿರು ವೆ.

೧. ವ್ಯಕ್ತಿತ್ವವನ್ನು ಕಾಯ್ದು ಬೆಳೆಸುವ ಹಂಬಲು.

೨. ವಾಸ್ತವ ಪ್ರಪಂಚದ ಸ್ವೀಕಾರ ಹಾಗೂ ಪರಿವರ್ತನೆಗೆ ಅಗತ್ಯವಾದ ಧೀರ ಮನೋಭಾವ.

ವಿಜ್ಞಾನ, ಸಮಾಜವಾದ, ಸಮತಾವಾದ, ಪ್ರಜಾಪ್ರಭುತ್ವ— ಇವೆಲ್ಲವುಗಳಲ್ಲಿರುವ ಮುಖ್ಯಾಂಶವೆಂದರೆ ವಾಸ್ತವತೆಯ ಧೀರ ಸ್ವೀಕಾರ ಹಾಗೂ ಪರಿಸ್ಥಿತಿ ಗೆಲ್ಲುವ ವೀರ ವೃತ್ತಿ ಎಂಬುದನ್ನು ಇಲ್ಲಿ ಅರಿಯಬೇಕು.

ಜೀವರು ಧರ್ಮ ಕಲ್ಪನಾವಿಲಾಸ— ಇವೆಲ್ಲವುಗಳನ್ನು ಹೀಯಾಳಿಸಿದರೂ ಹೇಡಿ ಂತೆ ಪರಿಸ್ಥಿತಿಗೆ ತಲೆಬಾಗುವದು ಪಾಶ್ಚಿಮಾತ್ಯರಲ್ಲಿರಲಿಲ್ಲ. ಈ ಅಂಶದಲ್ಲಿಯೇ ಇಪ್ಪತ್ತ ಯ ಶತಮಾನದ ಆಧ್ಯಾತ್ಮಿಕತೆ ಅಡಗಿದೆ.

ಈ ಅಧ್ಯಾತ್ಮವನ್ನೆ ಕೈಬಿಡದಿದ್ದರೂ ಹೊಸ ಯುಗದ ಸಮಸ್ಯೆಗಳನ್ನೆದುರಿಸಿ ಗೆಲ್ಲ ಲ್ಲ ಆಧ್ಯಾತ್ಮಿಕದೃಷ್ಟಿ ಬೇಕಾಗಿತ್ತು. ಅದು ವಿಕಾಸಶೀಲವಾದ ದೈವೀಜೀವನದ ರ್ಶನದ ಮೂಲಕ ಶ್ರೀ ಅರವಿಂದರಿಂದ ಪ್ರತಿಪಾದಿತವಾಗಿತ್ತು. ಭಾರತೀಯರ ಸ್ವಾತಂತ್ರ್ಯ ಹೋರಾಟವೂ ಇಂಥ ದೃಷ್ಟಿಯಿಂದ ಆತ್ಮವಿಶ್ವಾಸವನ್ನೂ, ವೈಶಿಷ್ಟ್ಯವನ್ನೂ

ಪಡೆದುಕೊಂಡಿತು. ಅಂಧವಿಶ್ವಾಸಗಳಿಂದ ಮುಕ್ತವಾದ, ರಾಷ್ಟ್ರೀಯ ಹೋರಾಟ
ಸತ್ವಪ್ರೇರಣೆ ಮಾಡಬಲ್ಲ, ಪಾಶ್ಚಿಮಾತ್ಯದ ನೈಜ ಸಿದ್ಧಿಯನ್ನು ಸ್ವೀಕರಿಸಿ ಸಮನ್ವ
ಗೊಳಿಸಬಲ್ಲ ಶ್ರೀ ಅರವಿಂದ ದರ್ಶನವು ವಿನಾಯಕರಿಗೆ ಸ್ವೀಕೃತವಾದರೆ ಆಶ್ಚರ್ಯವ
ಅವರ ಪ್ರಖರವಾದ ವಿಮರ್ಶಕ ಬುದ್ಧಿಗೆ ಈ ಪೂರ್ಣದೃಷ್ಟಿ ಆಧುನಿಕ ಮಾನ
ಸಹಜ ದರ್ಶನವೆಂದು ಹೊಳೆದರೆ ಅಸ್ವಾಭಾವಿಕವಲ್ಲ. ಆದ್ದರಿಂದಲೇ ಶ್ರೀ ಅರವಿ
ದರ್ಶನವು ವಿನಾಯಕರಿಗೆ ತಮ್ಮದೇ ಅಂತರಾನುಭವದ ಅಂತರಾಕಾಂಕ್ಷೆಯ ಪೂ
ರೂಪದಂತೆ ಕಂಡಿತು.

೩

ನವ್ಯ ಕವಿಯಾಗಿದ್ದೂ ವಿನಾಯಕರು ಸನಾತನ ಜೀವನದೃಷ್ಟಿಯನ್ನು ಕಳೆ
ಕೊಳ್ಳದಿರುವ ರಹಸ್ಯ ಇಲ್ಲಿದೆ. ಆಧುನಿಕ ಜೀವನದ ಯಾವತಂತ್ರ, ಸಮಸ್ಯೆಗಳ
ಸ್ವೀಕರಿಸಿದರೂ ಆದರ್ಶ, ಸ್ವಪ್ನ, ಅನುಭಾವವನ್ನು ಬಿಡಬೇಕಾಗಿಲ್ಲವೆಂದು ಅವರು ಅ
ದ್ದಾರೆ. ಈ ದೃಷ್ಟಿಯಿಂದಲೇ ವಿನಾಯಕರನ್ನು "ನವ್ಯ ಸನಾತನ ಸಮನ್ವಯಕಾರ"ರೆಂ
ಕರೆಯಬಹುದಾಗಿದೆ.

ಹಿಗ್ಗು, ಉಗಮ, ದ್ಯಾವಾ ಪೃಥಿವೀ, ಊರ್ಣನಾಭ, ಕಾಶ್ಮೀರ, ಇಂದಿಲ್ಲ ನಾಳೆ-
ಮೊದಲಾದ ಕವನ ಸಂಕಲನಗಳಲ್ಲಿ ಈ ದರ್ಶನವು ತುಂಬಿಕೊಂಡು ಬಂದಿದೆ. 'ಬ
ದೇಗುಲ'ವು ೧೯೫೩ ರಲ್ಲಿ ಪ್ರಕಟವಾದರೂ ೧೯೪೭ ರ ವೇಳೆಗೇ ಅದು ಸಿದ್ಧವಾಗಿತ್ತ
ವ್ಯಕ್ತಿ ಮಾದರಿಗಳ ದರ್ಶನದ ಮಾಲಿಕೆಯಾಗಿ ಈ ಕಾವ್ಯ ಬಂದಿದ್ದು ಅವರಲ್ಲಿ ವಿನಾಯ
ಸಮಗ್ರದೃಷ್ಟಿ ಒಡಮೂಡಿದೆ. ಅನುಭವದ ತಿರುಳಿನತ್ತ ಸಾಗುವ ಪ್ರತಿಭೆ ಅಲ್ಲಿದೆ. ಆದ
ಶ್ರೀ ಅರವಿಂದರ ದರ್ಶನ-ವಿಚಾರಧಾರೆಯ ಪ್ರಭಾವ-ಫಲ ಕಾಣಲು ಮೇಲೆ ಹೇ
ಕವನ ಸಂಕಲನಗಳನ್ನೆ ನೋಡಬೇಕು; ಇತ್ತೀಚೆಗೆ 'ಸಮನ್ವಯ'ವೆಂಬ ತ್ರೈಮಾಸಿ
ದಲ್ಲಿ ಪ್ರಕಟವಾಗುತ್ತಿರುವ ಕವನಗಳನ್ನು ಗಮನಿಸಬೇಕು:

ಒಂದೇ ತಂತಿಯನು
ಹಿಡಿದವರುಂಟು

. . . . .

ಮೂಳ್ಕೆ ಇಲ್ಲವೆ ತಿಳಿವು,
ಇಲ್ಲವೇ ಎದೆಯ ಶುಚಿ,
ಉಸಿರ ದೊರೆತನ, ಇಲ್ಲ
ಸ್ವಪ್ನಲೋಕ ವಿಹಾರ,
ಸೂಕ್ಷ್ಮ ಶ್ರುತಿ—ದೃಷ್ಟಿಗಳ ನೆರವಿಂದ
ವಿಶ್ವದೊಂದಿಗೆ ಪೂರ್ಣ ಸಮರಸವ
ಪರಾತ್ಪರದೊಡನೆ ಸ್ವಯಂವರವ

ಸಾಧಿಸಿ ಸರಿವವರುಂಟು.
ನನ್ನಿರವು ಬೇರೆ
ನನ್ನಿರವು ಬೇರೆ
ದಶದಿಶೆಗಳನೂ ಅಳೆವೆನು
ನಾ ಭಾಸ್ಕರನಂತೆ;
ಉಕ್ಕಿಸಿ ಎಂಟೆದೆಗಡಲನು
ಪೂರ್ಣೇಂದುವಿನಂತೆ;
ನಿರುಕಿಸುವೆನು ನಾಲ್ದೆಸೆಗಳ
ನಾ ನಾಲ್ಮೊಗನಂತೆ;
ತಾರೆಗಳಕ್ಷೋಹಿಣಿಯನು
ಸವಿದು ನಿಯತಿಯಂತೆ;
ನಾದಬಿಂದು ಸಂಪದವನು
ಚೈತ್ಯಾರುಣನಂತೆ;
ನೂರು ವರ್ಣ ವೈಖರಿಗಳು
ಜೋತಿಯಾಗಿ ಪಲ್ಲವಿಸುವ
ವೃಕ್ಷದೆದುರು ಕೈಜೋಡಿಸಿ
ನಿಲುವೆ ಭಕ್ತನಂತೆ

—'ಏಳು ಕುದುರೆ ಸವಾರ'

ಇಲ್ಲಿ ಕಾಣುವ ಸಮಗ್ರ ಜೀವನದೃಷ್ಟಿಯು ನವ್ಯಕವಿ ವಿನಾಯಕರ ಪ್ರಧಾನ ವೈಶಿಷ್ಟ್ಯ ಲ್ಲಿ ಒಂದು.

ಸಮಗ್ರತೆಯ ಸ್ವೀಕಾರವೆಂದರೆ ಎಲ್ಲದರ ಕಲಸುಮೇಲೋಗರವಲ್ಲ. ವಿಶ್ವದ ಸಮ ತೆಯಲ್ಲೊಂದು ಕೇಂದ್ರಸತ್ವವು ವಿಕಾಸ ಹೊಂದುತ್ತಲಿವೆ. ಕಲ್ಲು ಮಣ್ಣಿನ ಪ್ರಪಂಚ ಪ್ರಾಣವು ಅರಳಿದಂತೆ, ಪ್ರಾಣಿ ಪ್ರಪಂಚದಲ್ಲಿ ಮಾನವತೆ ಅರಳಿದಂತೆ, ಮಾನವ ಪಂಚದಲ್ಲಿ ಅತಿ ಮಾನಸಜ್ಞಾನವು ಅರಳಲಿವೆ. ಆ ಜ್ಞಾನವು ಪರಿಪೂರ್ಣ ಅಭಿವ್ಯಕ್ತಿ ಯುವವೇ ದಿವ್ಯಜೀವನದ ಅಭಿವ್ಯಕ್ತಿ.

ದಿವ್ಯಜೀವನದ ಅಭಿವ್ಯಕ್ತಿಯು ಕವಿಯ ಕನಸು ಮಾತ್ರವಲ್ಲ, ಋಷಿಯ ದರ್ಶನವೂ ದು. ಅದು ನಾಳಿನ ಸತ್ಯ; ಇಂದಿನ ಜೀವನದ ಮೇಲೆ ಪ್ರಭಾವ ಬೀರುತ್ತದೆ. ಸಾಧನೆಯಲ್ಲಿರುವವರಿಗೆ ಧೈರ್ಯ, ಆತ್ಮವಿಶ್ವಾಸ ನೀಡುತ್ತದೆ. 'ಊರ್ಣನಾಭ' ಕವನದಲ್ಲಿ ವಿನಾಯಕರು ನವೀನ ಪುರಾಣಕತೆಯನ್ನು ಸೃಷ್ಟಿಸಿ ಸಾಂಕೇತಿಕವಾಗಿ ನವಭವಿತವ್ಯದ ಅನಿವಾರ್ಯತೆಯನ್ನೂ ಇಂದಿನ ಮಾನವನಿಗೆ ಅದನ್ನು ಸ್ವಾಗತಿಸುವ ೀಕೆಯನ್ನೂ ನೀಡಿದ್ದಾರೆ. "ಮಾನವನ ಜಾಡ್ಯ ಅಜ್ಞಾನ ಹಾಗೂ ಜಗತ್ತಿನಲ್ಲಿಯ ಶಕ್ತಿಯ ಪ್ರತೀಕ"ವಾದ ಊರ್ಣನಾಭನು (ಜೇಡನು) ತನ್ನ ಮೂಲನೆಲೆಗೆ ಳುತ್ತಿರುವನೆಂದೂ ಮತ್ತವನಿಗೆ ಔತಣ ನೀಡಬೇಡವೆಂದೂ ಎಚ್ಚರವಿತ್ತಿದ್ದಾರೆ:

ಜೀವನ್ಮೃತನೇ! ಎದ್ದೇಳು!
ವಾಯುದೇವ ಬಂದ
ಜೇಡದ ಬಲೆಗಳು ಚಲ್ಲಾಪಿಲ್ಲಿ
ವಿಮೋಚನೆಯ ತಂದ
ಇನ್ನೀ ನೂಲೆಳೆ ಕರುಳ್ಗೊಲೆ ಸಾಕು:
ಬಾಳು ಬೆಳೆಯಲೆಂದ
ಎಣ್ದಿಸೆಗಳ ಕಾಂತಿಯೆಸದಿಹುದು
ದೋಷರಹಿತವಾಗಿ;
ಕುರುಡು ನಂಬುಗೆಯ ಕುರುಡು ವಿಚಾರದ
ಜಾಲಕಗಳ ನೀಗಿ
ಪೂರ್ಣ ವಿಕಾಸದ ಅರುಣಾರುಣ ರಥ—
ವೇರಿ ಮುಂದೆ ಸಾಗಿ
. . . . . .
ಆದಿಜೇಡ ನಡೆದಿದೆ ಹಾಲ್ಗಡಲಿಗೆ
ಬಂದ ಹಾದಿ ಹಿಡಿದು
ಕಡಲಿನ ಕೆಳಗಣ ಶಿಲೆಯ ಹೊದರಿನಲಿ
ಆಸರೆಯನು ಪಡೆದು
ಮತ್ತದಕೌತಣವಿತ್ತಿರಬೇಡ
ತಪ್ಪುದಾರಿ ನಡೆದು... —'ಊರ್ಣನಾಭ'

ಇಲ್ಲಿರುವದು ಬರಿಕನಸಲ್ಲ; ಆಶೆಯಲ್ಲ; ಇದು ಭವಿಷತ್ತಿನ ನಿಶ್ಚಿತಹೊಳಹು! ಮಾತುಗಳೊಡನೆ ಶ್ರೀ ಅರವಿಂದರು 'ದಿ ಮದರ್' ಗ್ರಂಥದಲ್ಲಿ ಹೇಳಿದ ಮಾತುಗಳನ ಹೋಲಿಸಿ ನೋಡಬೇಕು:

"The supramental change is a thing decreed and inevitable the evolution of the earth-consciousness." p. 90

ಮಾನವಜೀವನದ ದೈವೀಕರಣಕ್ಕೆ "ಅತಿಮಾನಸ" ಇಲ್ಲವೆ "ವಿಜ್ಞಾನ"ದ ಅವತರಣವಾ ವದು ಅಗತ್ಯವಾಗಿದೆ. "ವಿಜ್ಞಾನ"ದ ದರ್ಶನವು ವೇದೋಪನಿಷತ್ತಿನ ಋಷಿಗ ಆಗಿತ್ತು. ತೈತ್ತರೀಯ ಉಪನಿಷತ್ತಿನಲ್ಲಿ "ವಿಜ್ಞಾನ"ವನ್ನು ಋಷಿಗಳು ಪುರುಷನ ಕಂಡಿದ್ದಾರೆ. ಶ್ರದ್ಧೆಯೇ ಈ ಪುರುಷನ ಶಿರಸ್ಸು; ಋತವು ದಕ್ಷಿಣ ಪಕ್ಷ; ಸತ್ಯ ಉತ್ತರ ಪಕ್ಷ. "ಯೋಗ ಆತ್ಮಾ" ಅಂದರೆ ಯೋಗವೇ ಈ ಪುರುಷನ ಆತ್ಮವಾಗಿ ಮಹತ್‌ತತ್ವವು ಪುಚ್ಛವಾಗಿದೆ.

ವಿಜ್ಞಾನಪುರುಷನಿಗೆ "ಯೋಗವೇ ಆತ್ಮ" ಎಂಬ ಅಂಶವು ಅತ್ಯಂತ ಮಹತ್ವದ್ದಾಗಿ ಭಗವಂತನ ವಿಶ್ವಲೀಲೆಯಲ್ಲಿ ಯೋಗವನ್ನು ಆತ್ಮವನ್ನು ಮಾಡಿಕೊಂಡ ಅತಿಮಾ ವ್ಯಕ್ತಿಗಳೇ ವಿಶ್ವದ ದೈವೀಕರಣ ಸಾಧಿಸಬಲ್ಲರು. ಈ ದೃಷ್ಟಿಯಿಂದಲೇ ಶ್ರೀ ಅರವಿಂ ಪೂರ್ಣಯೋಗದಲ್ಲಿ ವಿಜ್ಞಾನ ಇಲ್ಲವೆ ಅತಿಮಾನಸವು ಕೇಂದ್ರಸಂಗತಿಯಾಗಿದೆ.

ಸತ್-ಚಿತ್-ಆನಂದರೂಪಿಯಾದ ಪರಮಾತ್ಮನಿಗೂ ಅನ್ನ, ಪ್ರಾಣ, ಮನಸ್ಸುಗಳಿಂದ
ಡಿದ ಮಾನವ ಪ್ರಪಂಚಕ್ಕೂ ಸಂಬಂಧವನ್ನುಂಟುಮಾಡುವ ದೈವೀಕೇಂದ್ರವೇ
ಜ್ಞಾನ. ಈ ವಿಜ್ಞಾನದಲ್ಲಿ ಪ್ರತಿಷ್ಠಿತನಾಗುವದು ಉದ್ಧರಣ, ಉದ್ಧೃತವಾದವನು
ಜ್ಞಾನವನ್ನು ದೇಹದ ಕಣಕಣದಲ್ಲಿ ಪ್ರತಿಷ್ಠಿತಗೊಳಿಸುವದು ಅವತರಣ, ಅಥವಾ
ವರ್ತನ.

ವಿನಾಯಕರ ಕಾವ್ಯಸೃಷ್ಟಿಯಲ್ಲಿ ಅನೇಕ ಕಡೆಗೆ ಈ ಉದ್ಧರಣ ಅವತರಣಗಳ ಕಾಣ್ಕೆ
ದೊರೆಯುತ್ತದೆ. ಈ ಲೇಖನದ ಪ್ರಾರಂಭದಲ್ಲಿ ಹೇಳಿದಂತೆ—ವ್ಯಕ್ತಿಯು ತನ್ನ ನೈಜ
ಕ್ತಿತ್ವವನ್ನು—ವಿಕಾಸಶೀಲ ಚೈತ್ಯಪುರುಷನನ್ನು ಕಂಡುಕೊಳ್ಳಬೇಕು; ತದನಂತರ
ತ್ಮಸಾಕ್ಷಾತ್ಕಾರ ಇಲ್ಲವೆ ಆಧ್ಯಾತ್ಮಿಕ ಅನುಭವದ ಸಾಧನೆ ಮಾಡಬೇಕು. ಈ
ಧನೆಯಲ್ಲಿ "ಅನಂತ ಹಾಗೂ ಶಾಶ್ವತ" ತತ್ತ್ವಗಳ ಅನುಭವ ಬರುತ್ತದೆ. ಈ ಅನಂತ
ಲ್ಲಿಯೇ ನಿರ್ವಾಣಹೊಂದಿ ಮುಕ್ತನಾಗಬಹುದು, ಇಲ್ಲವೆ ಶ್ರೀ ಅರವಿಂದರ ಪಥ
ಡಿದು ವಿಜ್ಞಾನದ ಮೂಲಕ ಅನಂತವನ್ನೂ ಶಾಶ್ವತವನ್ನೂ ಸಾಂತವಾದ ಸೃಷ್ಟಿ
ಲ್ಲಿ ಪ್ರತಿಬಿಂಬಗೊಳ್ಳುವಂತೆ ಮಾಡಲು ವಿಜ್ಞಾನದ ಉಪಾಸನೆ ಮಾಡಬೇಕು.

ವಿನಾಯಕರ 'ದ್ಯಾವಾ ಪೃಥಿವಿ'ಯ ಸಮನ್ವಯ, 'ತ್ರಿಶಂಕುವಿನ ಪ್ರಜ್ಞಾ
ಭಾತ'ದಲ್ಲಿಯ ವಿಶ್ವಾಮಿತ್ರನ ಹಂಬಲ—ಇವುಗಳಲ್ಲಿ ಅತಿಮಾನಸದ ಅಭಿವ್ಯಕ್ತಿಯ
ಣ್ಕೆ ಸ್ಪಷ್ಟವಾಗಿದೆ.

'ದ್ಯಾವಾ ಪೃಥಿವಿ'ಯ 'ನೀರದ' ವಿಭಾಗದ ಕೊನೆಗೆ ಬರುವ ಪ್ರಾರ್ಥನೆ ಈ ದೃಷ್ಟಿ
ಂದ ಅರ್ಥಪೂರ್ಣವಾಗಿದೆ:

ಶುದ್ಧ, ವರ್ಣರಹಿತ, ನಿತ್ಯ
ಚೇತನಾ ಪುರುಷನಾಗಿ
ಮುಗ್ಧ ಬಾಲನಂಥ ಬಾಳಿ—
ನಿಂದತೀವ ಹರುಷನಾಗಿ
ಏಕಮೇವ ದರ್ಶನದಾ
ದೃಷ್ಟಿದೋಷ ಸೋಂಕದೆ
ಸ್ವಗತ ತೃಪ್ತ ಲೀಲೆಭುವನ—
ದೈಸಿರಿಯನು ನೂಂಕದೆ,
ವಿಶ್ವದ ದಿವ್ಯತೆಯ ಕಂಡು
ಘನ ಮನ ಪ್ರಜ್ಞೆಯನು ಮುಡಿದು
ನವ ಮನುಕುಲ ವಿಕಾಸನದಾ
ಮೂಲ ಮಂತ್ರಗಳನು ಪಡೆದು
ಭೂಲೋಕವೆ ದೇವಲೋಕ
ವಿಹದಾರಿಯ ಸುಳಿವ ಹಿಡಿದು—

ನೀರದದೊಲು ವರ್ಷಿಸ ಬಾ,
ನಾರದನೊಲು ಹರ್ಷಿಸ ಬಾ,
ಸಕಲರನಾಕರ್ಷಿಸ ಬಾ,
ಬಾ, ಬಾ, ಬಾ !

ಈ ಪದ್ಯಭಾಗದಲ್ಲಿ "ಏಕಮೇವ ದರ್ಶನದ ದೃಷ್ಟಿ ಸೋಂಕದೆ" ಇರಲಿ ಎಂದು ಕ ಗಳು ಹಾರೈಸಿರುವದನ್ನು ಗಮನಿಸಬೇಕು. ಆತ್ಮಾನುಭವದಲ್ಲಿ ಏಕಮೇವದ್ವಿತೀ ವಾದ ಪರಬ್ರಹ್ಮದ ಸಾಕ್ಷಾತ್ಕಾರವಾಗಿ ಆ ಅನುಭೂತಿಯ ಸಂತೃಪ್ತಿಯಲ್ಲಿಯೇ ಮರೆತು ವಿಶ್ವಜೀವನದ ದೈವೀಕರಣ ಕಾರ್ಯವನ್ನು ಮರೆಯದಿರು ಎಂದು ಇಲ್ಲಿ ಕ ಗಳು ಪ್ರಾರ್ಥಿಸಿದ್ದಾರೆ.

ಏಕಮೇವಾದ್ವಿತೀಯದ ದೃಷ್ಟಿ ಸೋಂಕದಂತೆ ತೂಕ ಹಿಡಿದು ವಿಜ್ಞಾನ ಭೂವಿ ಯತ್ತ ಸಾಗುವಾಗ ಶ್ರೀ ಅರವಿಂದರು ಕಂಡುಕೊಂಡಂತೆ Higher Mind (ಉಚ್ಚ ಮನ), Illumined Mind (ಪ್ರಕಾಶಿತ ಮನ) Intuitive Mind (ಸ್ಫುರಣ ಮ ಹಾಗೂ Over Mind (ಉನ್ಮನ)—ಎಂಬ ನಾಲ್ಕು ಪ್ರಕಾರದ ಮನೋವಿಭಾ ಗಳೊಳಗಿಂದ ಹಾಯ್ದುಹೋಗಬೇಕಾಗುತ್ತದೆ. ವಿಜ್ಞಾನವು ಅವತರಣಗೊ ವಾಗಲೂ ಈ ನಾಲ್ಕು ಮನೋವಿಭಾಗಗಳನ್ನು ತನ್ನ ದಿವ್ಯ ಪ್ರಕಾಶ ಶಕ್ತಿಗಳಿ ಪ್ರಜ್ವಲಗೊಳಿಸುತ್ತದೆ.

ಈ ಸಂದರ್ಭವನ್ನು ವಿವರಿಸುವ ವಿನಾಯಕರ ಪದ್ಯಗಳನ್ನು ಉದಹರಿಸುವ ಪೂ ದಲ್ಲಿ ಶ್ರೀ ಅರವಿಂದರ ದೃಷ್ಟಿಯಲ್ಲಿ ಪರಾಪ್ರಕೃತಿ ಹಾಗೂ ಅಪರಾಪ್ರಕೃತಿ ಎ ಪ್ರಕೃತಿದ್ವಯಗಳ ಅರ್ಥ ತಿಳಿದುಕೊಳ್ಳುವದು ಅಗತ್ಯವಿದೆ.

ಶರೀರ, ಪ್ರಾಣ, ಮನಸ್ಸುಗಳವರೆಗೆ ಅಜ್ಞಾನ, ಅಸತ್ಯ, ಮೃತ್ಯುಗಳಿಂದ ಕೂ ಪ್ರಕೃತಿಯ ಪ್ರಭಾವವಿರುತ್ತದೆ. ಮನಸ್ಸನ್ನು ದಾಟಿ ವಿಜ್ಞಾನದ ಲೋಕದಲ್ಲಿ ಕಾ ಟ್ಟಾಗ ಸತ್ಯ, ಜ್ಞಾನ, ಶಕ್ತಿ, ಪ್ರೀತಿ, ಆನಂದಗಳ ಸೌಂದರ್ಯ ಮೂರ್ತಿಯಾದ ಪ ಪ್ರಕೃತಿಯ ರಾಜ್ಯ ಪ್ರಾರಂಭವಾಗುತ್ತದೆ.

ಈ ಪರಾಪ್ರಕೃತಿಯೇ ಪರಮಾತ್ಮನ "ದಿವ್ಯಕರುಣಾ" ತತ್ವ. ಇದನ್ನೆ "ಮಾ ತತ್ವ" ಎಂದು ವರ್ಣಿಸಲಾಗಿದೆ. ಶ್ರೀ ಅರವಿಂದರ ಯೋಗದಲ್ಲಿ ಸಾಧಕನ ಸಮರ್ಪ ಹಾಗೂ ಈ ಸಮರ್ಪಣೆಗೆ ಉತ್ತರ ರೂಪವಾಗಿ ಬರುವ "ಮಾತೃಕರುಣೆ" ಇವೇ ಅತ್ಯ ಮಹತ್ವದ ಅಂಶಗಳು. ವಿಜ್ಞಾನದ ಅವತರಣವು ವ್ಯಕ್ತಿಯ ಸಾಹಸದಿ ಸಾಧಿಸುವದಲ್ಲ, ವ್ಯಕ್ತಿಯ ಸಮರ್ಪಣೆಯಿಂದ ಪರಾಮಾತೆಯು ಪ್ರೀತಳಾಗಿ ತಾ ವಿಜ್ಞಾನವನ್ನು ಅವತರಣಗೊಳಿಸುತ್ತಾಳೆ. ಈ ಸಂಗತಿಯ ಕಾಣ್ಕೆ ಕೆಳಗಿನ ಪದ್ಯ ಕಾಣುತ್ತಿದೆ :

ಓ ಪರಾಪ್ರಕೃತಿ!
ಸಚ್ಚಿದಾನಂದದ ವಧುವೇ!
ಅಕ್ಷಯಮ್ಮ ಋತ ಪ್ರಜ್ಞೆಯೇ!
ಕೃಷ್ಣೆಯಂತೆಯೇ ನೀನು ಗಮಿಸಿದೆ
ಸಚ್ಚಿದಾನಂದದ ಮೇರು ಗಿರಿಯಿಂದ
ಲೀಲಾವತಾರದಲ್ಲಿ ಧುಮ್ಮಿಕ್ಕಿದೆ
ನಿರ್ಗುಣ–ನಿರಾಕಾರದ ಸಂಪತ್ತನ್ನು ತ್ಯಜಿಸಿ
ಸಗುಣ–ಸಾಕಾರಳಾಗಲು ಧಾವಿಸಿದೆ —'ಉಗಮ'

ೀಗೆ ಸಚ್ಚಿದಾನಂದರೂಪಿಯಾದ ಪರಮಾತ್ಮನ ವಧುವಾದ ಪರಾಮಾತೆಯು ತನ್ನ ರಾಕಾರ-ನಿರ್ಗುಣದ ನೆಲೆಯನ್ನು ಬಿಟ್ಟು ಭೂಮಿಯತ್ತ ಧುಮುಕುತ್ತಿರುವದೇ ಒಂದು ್ಯವೀಲೀಲೆಯಾಗಿದೆ. ಈ ಲೀಲಾವತರಣದ ಮೊದಲನೆಯ ನೆಲೆಯೆಂದರೆ "ಉನ್ಮನ" ver Mind. ಸುವರ್ಣ ಪಾತ್ರೆಯಂತೆ ಪರಾಮಾತೆಯ ಶಕ್ತಿಯನ್ನು ಈ ಉನ್ಮನವು ್ರೀಕರಿಸಿ "ಏಕ"ವಾದುದನ್ನು ಅನೇಕ ಮಾಡುತ್ತದೆ. ಅದನ್ನೆ ಕವಿಗಳು:

ನಿನ್ನ ಅಖಂಡ ಧವಲಾಮಲ ಜ್ಯೋತಿ
ಉನ್ಮನ ರಾಜ್ಯದಲ್ಲಿ ಸ್ವರ್ಣ ಪಾತ್ರೆಯಂತೆ ಹೊಳೆಯಿತು;
ಏಕಮೇವಮಿದ್ದುದು ಅನೇಕ ಗರ್ಭಿತವಾಗಿ—
ಒಂದೇ ಸಲಿಲದ ನೂರು ಸೆಳೆತುಗಳಾಗಿ—
ನಾಮ–ರೂಪ–ಗುಣಗಳ ಅಮೃತ ಬಿಂದುಗಳಿಂದ ಕೂಡಿ
ಪ್ರವಹಿಸಿತು. —'ಉಗಮ'

ುನ್ಮನದಿಂದ ಆ ದಿವ್ಯಶಕ್ತಿಯು ಅಂತಸ್ಸ್ಫುರಣದ ರಾಜ್ಯದಲ್ಲಿ ಧುಮುಕುತ್ತದೆ. ಕಾವ್ಯಾ ್ಯಾಸಿಗಳಿಗೆ, ಸ್ಫೂರ್ತಿಯ ಸೂಕ್ಷ್ಮಲೋಕಗಳನ್ನು ಕಾಣಬಯಸುವವರಿಗೆ ಈ ಉನ್ಮನ ಾಗೂ ಅಲ್ಲಿಂದ ಕೆಳಗಿರುವ ಸ್ಫುರಣ ಮನ, ಪ್ರಕಾಶಿತ ಮನ ಹಾಗೂ ಉಚ್ಚತರ ಮನಗಳ ವಿವೇಕವನ್ನು ಅರಿಯುವದು ಅಗತ್ಯವಿದೆ. ವಿನಾಯಕರ ಗದ್ಯ ಹಾಗೂ ಪದ್ಯ ತಿಗಳಲ್ಲಿ ಅನೇಕ ಕಡೆಗೆ ಇವುಗಳ ವಿವರಣೆ ಸಿಕ್ಕುತ್ತದೆ. ಮೇಲೆ ಉದ್ಧರಿಸಿದ ಪದ್ಯದ ುಂದಿನ ಭಾಗದಲ್ಲಿಯೇ ಇವುಗಳ ದರ್ಶನ. ಇದೆ. ಪರಾಮಾತೆಯು ಉನ್ಮನದಿಂದ ್ರಣ ರಾಜ್ಯದಲ್ಲಿ ಧುಮುಕಿದ ದೃಶ್ಯ ಕವಿಗಳಿಗೆ ಹೀಗೆ ಕಂಡಿದೆ:

ಸ್ಫುರಣದ ರಾಜ್ಯದಲ್ಲಿ ಮಿಂಚಿನಂತೆ ಹೊಳಪುಗೊಂಡಿತು,
ಬಣ್ಣ-ಬಣ್ಣ ದಾಟಿವಾಡಿತು; ಚಿತ್ತರವಡೆದಿತು.
ಪ್ರಕಾಶಿತ ಮನದಲ್ಲಿ ಇನ್ನೂ ವಿಸ್ತಾರಗೊಂಡು
ಸ್ಫಟಿಕ ಶುಭ್ರವಾದುದು ಲೋಲಕದಂತೆ ರಂಗುರಂಗಾಗಿ
ತುಂಬಿ ಹರಿಯಿತು
ಉಚ್ಚತರ ಮನದ ನೆಲೆಯಲ್ಲಿ ಬುದ್ಧಿಗಮ್ಯ ಪ್ರಜ್ಞೆಯಾಯಿತು. —'ಉಗಮ'

ಶ್ರೀ ಅರವಿಂದರು ವರ್ಣಿಸಿದ ಪ್ರಜ್ಞಾಪ್ರಾಂತಗಳನ್ನು ವಿನಾಯಕರು ಬಹು ಖಚಿ
ರೀತಿಯಲ್ಲಿ ವಿವರಿಸಿದ್ದಾರೆ. ಈ ಪ್ರಾಂತಗಳಿಗೆ ಅವರು ಇತ್ತ ಹೆಸರುಗಳನ್ನು ಇನ್ನ
ಕೆಲವರು ಸ್ವೀಕರಿಸದೆ ಬೇರೆ ಹೆಸರು ಇಡಬಹುದು. ಆದರೆ ಈ ಪ್ರಜ್ಞಾಲೋಕಗ
ನಿರ್ದಿಷ್ಟಸ್ವರೂಪದ ಬಣ್ಣನೆಯಲ್ಲಿ ವ್ಯತ್ಯಾಸವಾಗುವದಿಲ್ಲ. ಉದಾಹರಣೆಗೆ "ಉನ್ಮನ
ವನ್ನು ಕೆಲವರು "ಅಧಿಕಮನ" (over mind) ಎಂದು ಕರೆಯುತ್ತಾರೆ. ವಿನಾಯಕರ
ಅಧಿಮಾನಸವನ್ನು ಕೆಲವೊಂದು ಸಲ ಅತಿಮಾನಸ ಎಂಬರ್ಥದಲ್ಲಿ ಬಳಸುವದೂ ಕಂಡ
ಬರುತ್ತದೆ:

ಜೀವ ದೇವನಾದಾನು
ಮಾನವ ಅಧಿಮಾನವನಾದಾನು

ಇದಲ್ಲದೆ ವಿನಾಯಕರು ಅತಿಮಾನಸ ಇಲ್ಲವೆ ವಿಜ್ಞಾನವನ್ನು "ಶ್ರೀಮನ"ವೆಂ
ಸಂಬೋಧಿಸುತ್ತಾರೆ. ಪರಾಮಾತೆಯ ನೆಲೆಯೆಂದು ಈ ಸಂಬೋಧನೆಯಲ್ಲಿಯೂ ಧ್ವ
ಯಿದೆ.

ನಮ್ಮ ಪ್ರಾಚೀನ ಪರಿಭಾಷೆಯಲ್ಲಿ "ಉನ್ಮನ"ವನ್ನು "ಸ್ವರ್ಗ"ವೆಂದು ಗುರುತಿ
ಬಹುದು. "ಸ್ಥಿರ ಪ್ರತಿಭೆ" ಎಂದು ವರ್ಣಿಸಲ್ಪಟ್ಟ ನೆಲೆಯನ್ನೆ ಸ್ಫುರಣ ರಾಜ್ಯವೆಂದ
ಕರೆಯಬಹುದು. ಪ್ರಕಾಶಿತಮನವು ಕವಿಗಳ ದರ್ಶನದ ಕ್ಷೇತ್ರ. ಹಾಗೆಯೇ ಉಚ್ಚತ
ಪ್ರಜ್ಞೆಯನ್ನು "ಮನೀಷಿ"ಗಳ ಲೋಕವೆಂದು ಹೇಳುವದು ಉಚಿತವೆನ್ನಿಸುತ್ತದೆ.
ರೀತಿಯ ಪರಿಭಾಷಾಸಮುಚ್ಚಯವು ಕಾವ್ಯಾಭ್ಯಾಸಿಗಳಿಗೆ ಉಪಯುಕ್ತವಾಗಬಹುದ

೪

ಅತಿಮಾನಸಸ್ಥಿತೆಯಾದ ಶ್ರೀಮಾತೆ ಮನಸ್ಸಿನ ಪ್ರಾಂತಗಳಲ್ಲಿಳಿದು ಪ್ರಾಣ ದೇ
ಗಳಲ್ಲಿ ಪ್ರವಹಿಸಿ ಪ್ರತಿಷ್ಠಿತವಾಗುವಾಗ, ವಿಶ್ವದಲ್ಲಿ ದೈವೀಲೀಲೆಯನ್ನು ಅಭಿವ್ಯ
ಗೊಳಿಸುವಾಗ ೧. ಮಾಹೇಶ್ವರಿ ೨. ಮಹಾಕಾಳಿ ೩. ಮಹಾಲಕ್ಷ್ಮಿ ೪. ಮಹಾಸರಸ್ವ
—ಎಂಬ ನಾಲ್ಕು ರೂಪಗಳಲ್ಲಿ ನಾಲ್ಕು ಬಗೆಯ ಶಕ್ತಿವೈಶಿಷ್ಟ್ಯಗಳೊಡನೆ ಪ್ರಕಟವಾ
ತ್ತಾಳೆ. ಈ ಚತುರ್ಮುಖಿ ಮಹಾಮಾತೆಯನ್ನು ವಿನಾಯಕರು "ಪರಾಪ್ರಕೃತಿ" ಎಂ
ಪದ್ಯದಲ್ಲಿ ಭಕ್ತಿ ನಿರ್ಭರತೆಯಿಂದ ಪ್ರಾರ್ಥಿಸಿದ್ದಾರೆ:

ಮಾಹೇಶ್ವರಿಯೆ! ನಿನ್ನ ಶಾಂತಿಯೇ ಶಾಂತಿ
ಮಹಾಂಕಾಳಿ! ನೀತಂದ ಕ್ರಾಂತಿಯೇ ಕ್ರಾಂತಿ
ಓ ಮಹಾಲಕ್ಷ್ಮಿ! ನೀತೋರ್ವ ಚೆಲುವು—
ಅದುವೆ ಪೂರ್ಣವು ಅದಕೆ ಧಾವಿಸುವದೊಲವು
ಓ ಸರಸ್ವತಿ! ನನ್ನ ಬಾಳಿನಾಬರಕೆ

ಚಿಕ್ಕೆಯಿಡು, ಸಿಂಗರಿಸು. ಇದೆ ನನ್ನ ಹರಕೆ
ನನ್ನ ಕಾಣಿಕೆಯುಲ್ಲ,—ಬರಿ ಒಂದು ಹೃದಯ
ನನ್ನ ಹೃತ್ಪದ್ಮದಲಿ ಬರಲಿ ನಿನ್ನುದಯ.

—'ಹಿಗ್ಗು'

ಶ್ರೀ ಅರವಿಂದರ ದರ್ಶನದಲ್ಲಿ ೧. ವ್ಯಕ್ತಿಗತ ೨. ವಿಶ್ವಗತ ೩. ವಿಶ್ವಾತೀತಳಾದ ರಾಮಾತೆಯು ಚತುರ್ಮುಖ ರೂಪದಲ್ಲಿ ಅವತರಿಸುವಾಗ ತನ್ನ ಜ್ಞಾನ ಶಾಂತಿಗಳನ್ನು ಾಹೇಶ್ವರಿ ರೂಪದಲ್ಲಿ ಪ್ರಕಟಿಸುತ್ತಾಳೆ. ಕ್ರಾಂತಿಕಾರಕ ಶಕ್ತಿಯು, ತೀವ್ರತರ ್ರಗತಿಯ ತೇಜಸ್ಸು, ಮಹಾಕಾಳಿಯಲ್ಲಿ ವ್ಯಕ್ತವಾಗುತ್ತದೆ. ಸೌಂದರ್ಯ ಆನಂದಗಳಿಗೆ ಹಾಲಕ್ಷ್ಮಿ ಅಧಿದೇವತೆಯಾಗುತ್ತಾಳೆ. ಮಹಾಸರಸ್ವತಿಯು ಪರಿಪೂರ್ಣತೆಯ, ಸಕಲ ಾವಿತ್ರ್ಯದ ಸಿದ್ಧಿಯನ್ನು ನೀಡುತ್ತಾಳೆ. ಪರಾಮಾತೆಯ ಚತುರ್ಮುಖ ಉಪಾಸನೆ ಾಡುವದೆಂದರೆ ಜೀವನದಲ್ಲಿ, ಸಾಹಿತ್ಯದಲ್ಲಿ ಶಾಂತಿ, ಆನಂದ, ಶಕ್ತಿ, ಸೌಂದರ್ಯ ್ರೇಮ ಮೊದಲಾದ ಮೌಲ್ಯಗಳ ಅಖಂಡತ್ವವನ್ನು ಗುರುತಿಸಬೇಕೆಂದು ಅರ್ಥ. ೋಟಕ್ಕೆ ವಿರೋಧವಾಗಿ ಕಾಣುವ ಮೌಲ್ಯಗಳಲ್ಲಿ ಸಮನ್ವಯ ಸಾಧಿಸಬೇಕೆಂಬುದರ ರ್ಥವೂ ಇದೆ.

ಯಾವುದೇ ಒಂದು ಮೌಲ್ಯವನ್ನು ತೆಗೆದುಕೊಂಡರೂ ಅದರ ಸ್ಪಷ್ಟದರ್ಶನ ಹಾಗೂ ತರ ಮೌಲ್ಯಗಳ ಜೊತೆಗೆ ಅದಕ್ಕಿರುವ ಸಮರಸಸಂಬಂಧ ಕಾಣುವದು—ಇವು ೀ ಅರವಿಂದರ ವಿವೇಚನೆಯಲ್ಲಿ ಎದ್ದು ಕಾಣುತ್ತಿರುವ ಸಂಗತಿಯಾಗಿದೆ.

ಸೌಂದರ್ಯದ ವಿಷಯದಲ್ಲಿಯೂ ಈ ಮಾತು ಅನ್ವಯಿಸುತ್ತದೆ. ಶ್ರೀ ಅರವಿಂದರು ಾಂದರ್ಯದ ನಾಲ್ಕು ನೆಲೆಗಳನ್ನು ಕಂಡರು. ಕರ್ನಾಟಕದಲ್ಲಿ ಶ್ರೀ ಅಂಬಿಕಾತನಯ ತ್ತರು ಸೌಂದರ್ಯದ ಚತುರ್ಮುಖಗಳನ್ನು ಕುರಿತು ಅನೇಕ ನಾಲ್ವರಿಗಳನ್ನೆ ಬರೆದರು. ಳೆಯರ ಗುಂಪಿನವರೆಲ್ಲ ಚತುರ್ಮುಖ ಸೌಂದರ್ಯದ ಉಪಾಸಕರಾಗಿದ್ದಾರೆ. ವಿನಾಯಕ ಲ್ಲಿಯೂ ಈ ಕಾಣ್ಕೆ ಇದ್ದರೆ ಆಶ್ಚರ್ಯವಲ್ಲ.

'ಕಾವ್ಯಜೀವನದ ಮಹೋನ್ನತಿ' ಎಂಬ ಲೇಖನದಲ್ಲಿ ವಿನಾಯಕರು ೧. ಐಂದ್ರಿಕ . ಕಲ್ಪನಾಮಯ ೩. ತಾತ್ವಿಕ ೪. ಆತ್ಮಿಕ ಎಂಬ ಚತುರ್ಮುಖ ಸೌಂದರ್ಯದ ವೇಚನ ಮಾಡಿದ್ದಾರೆ. ಅಷ್ಟೇ ಅಲ್ಲದೆ ಈ ದರ್ಶನವನ್ನು ವೀರಶೈವರ ಷಟ್‌ಸ್ಥಲಗಳ ರಿಭಾಷೆಯಲ್ಲಿ ವಿವರಿಸಲು ಪ್ರಯತ್ನಿಸಿದ್ದಾರೆ. ಗೀತೆ ಹೇಳುವ ಇಂದ್ರಿಯ, ಮನಸ್ಸು, ುದ್ಧಿ, ಸಃ(=ಆತ್ಮ) ಎಂಬ ನಾಲ್ಕು ದೃಷ್ಟಿಗಳೊಡನೆಯೂ ಚತುರ್ಮುಖ ಸೌಂದರ್ಯ ರ್ಶನದ ಸಮನ್ವಯ ಸಾಧಿಸಿದ್ದಾರೆ.

'ದ್ಯಾವಾ ಪೃಥಿವಿ'ಯ 'ನೀರದ' ಕಾವ್ಯದಲ್ಲಿಯ ಮೇಘ ವರ್ಣನೆಯನ್ನು ಸೂಕ್ಷ್ಮವಾಗಿ ರಿಶೀಲಿಸಿದರೆ ಈ ಚತುರ್ಮುಖ ದೃಷ್ಟಿ ಎದ್ದು ಕಾಣುತ್ತದೆ.

೧. ಎಲ್ಲರ ಕಣ್ಣಿಗೂ ಕಾಣುವ ಮೋಡಗಳ ರಾಜ್ಯದ ಬಣ್ಣನೆ.

೨. ಕಲ್ಪನೆಯ ಕಣ್ಣಿಗೆ ಈ ಮೋಡದ ರೂಪಗಳು ತೋರಿಸುವ ಚಿತ್ರಗಳ ವರ್ಣನೆ

(ಪಡುವಣಡವಿಯ ರಾಜಕಾರಣ ಪಟು
ಬಂದಿತಾ ಶೃಗಾಲ)

೩. ಮೇಘದ ದರ್ಶನದಲ್ಲಿ ಕಾಣುವ ತಾತ್ವಿಕ ನಿಲವು (ಇದೇ ನೀರದ-ನಾರದ
ಸೂತ್ರ : ಊರ್ಧ್ವಗತಿ, ಚಲನ, ಧಾರಣ, ಅವತರಣ.)

೪. ಮೇಘವು ವಿಶಿಷ್ಟವ್ಯಕ್ತಿತ್ವ ಪಡೆದಿದ್ದರೂ ಅದು ವಿಶ್ವಾತ್ಮನ ಪ್ರತೀಕವೂ ಆಗಿದ

(ಸೌಂದರ್ಯದ ನಿರ್ಜರಶಿಶು ಮೇಲೊರಗಿ
ತೇಲಿದಾಲದೆಲೆ ಓಡ!)

ಈ ಸೌಂದರ್ಯದರ್ಶನದ ಕ್ರಮವನ್ನು ವಿನಾಯಕರ ಇತ್ತೀಚೆಗಿನ ಎಲ್ಲ ಕವ
ಗಳಲ್ಲಿಯೂ ಕಾಣಬಹುದು.

ಈ ಎಲ್ಲ ವಿವೇಚನೆಯಿಂದಲೂ ಎದ್ದು ಕಾಣುವ ಅಂಶವೆಂದರೆ— ಜೀವನ, ಸಮಗ್ರತೆಂ
ಸ್ವೀಕಾರ, ಸಮನ್ವಯಸಾಧನೆ, ಕೇಂದ್ರ ಸತ್ಯದ ಪ್ರಜ್ಞೆ, ವ್ಯಕ್ತಿವಿಕಾಸ, ಸಮಷ್ಟಿ
ದೈವೀಕರಣ—ಇವು ವಿನಾಯಕರ ಜೀವನದರ್ಶನದ ಸಾರಸತ್ವಗಳಾಗಿವೆ.

ವಿನಾಯಕರ ಸಾಮಾಜಿಕ ರಾಜರಾಜಕೀಯ ದೃಷ್ಟಿಯ ಬಗೆಗೂ ಇದೇ ಮಾತನ
ಹೇಳಬಹುದು. ಇವು ಅವರ ಕನ್ನಡ ಸಾಹಿತ್ಯಸಮ್ಮೇಳನದ ಅಧ್ಯಕ್ಷ ಭಾಷಣಗಳಲ್ಲ
'ಸಮನ್ವಯ'ದ ಸಂಚಿಕೆಗಳ ಸಂಪಾದಕೀಯಗಳಲ್ಲಿ ವಿವರವಾಗಿ ಬಂದಿವೆ. ಅವರ ಕಾ
ದಲ್ಲಿಯ ಸಾಮಾಜಿಕ ಪ್ರಜ್ಞೆಯ ಸಾರರೂಪವಾಗಿವೆ. 'ಸಮರಸವೇ ಜೀವನ
ಕಾದಂಬರಿಯ ಕೊನೆಯ ಭಾಗವಂತೂ ಈ ಪ್ರಜ್ಞೆಯ ಸ್ಪಷ್ಟ ಅಭಿವ್ಯಕ್ತಿಯಾಗಿದೆ.

ಸ್ವಾತಂತ್ರ್ಯ, ಸಾಮರಸ್ಯ, ದೈವಿಕತೆ—ಈ ಮಂತ್ರಗಳ ಆಧಾರದ ಮೇಲೆ ಸಮಾ
ನಿರ್ಮಿಸಬೇಕು. ಜಾಗತಿಕ ಸರಕಾರದ ಸ್ಥಾಪನೆಯಾಗಿ ಮಾನವತೆಯಲ್ಲಿ ಐಕ್ಯ ಸಿ
ಯಾಗಬೇಕು. ಸಮಾಜದಲ್ಲಿ ಸತ್ಯ, ಸೌಂದರ್ಯ, ಶಕ್ತಿ, ಕಲ್ಯಾಣ ಪ್ರೇಮ ಗಳೆಂಬ ಪಂ
ಮುಖ ಮೌಲ್ಯಗಳು ಪ್ರತಿಷ್ಠಿತವಾಗಬೇಕು. ಇದಕ್ಕಾಗಿ ಪ್ರತಿ ರಾಷ್ಟ್ರವೂ ತನ್ನ ಆತ್ಮಸ
ವನ್ನು ಕಂಡು ವಿಶ್ವಾತ್ಮನೊಡನೆ ಸಾಮರಸ್ಯ ಸಾಧಿಸಬೇಕು. ಈ ದರ್ಶನವೇ ವಿನಾಯಕ
'ದಿಲ್ಲಿ' 'ಯು. ಎನ್. ಓ' ಎಂಬ ಕವನಗಳಲ್ಲಿ ಮೂಡಿದೆ.

'ಯು. ಎನ್. ಓ.'ದಲ್ಲಿ ವಿನಾಯಕರಿಗೆ ಕಂಡ ದರ್ಶನ ಹೀಗಿದೆ :

ಜೀವಶಿಲ್ಪದ ಪೂರ್ಣಕ್ರಾಂತಿ ಈ ಶಾಸನ ಸಭೆ
ಕೇಂದ್ರಿಸಿತು ಲೋಕದ ಪ್ರಭೆ
ನ್ಯಾಯಾಂಗ, ಕಾರ್ಯಾಂಗ ಆಲೋಚನಾಂಗ—
ಎಲ್ಲಕೊಂದೇ ಒಂದು, ಮನುಕುಲದ ಉತ್ತಮಾಂಗ!

ನೂರು ದೇಶಗಳಲ್ಲಿ ನಿಂತಿಹವು ಕಹಳೆಯೂದಿ
ಇದು ಸತ್ಯಯುಗದ ಆದಿ.

ವಿಶ್ವವು ಅನಿವಾರ್ಯವಾಗಿ ದೈವೀಸಂಕಲ್ಪದಂತೆ ಸತ್ಯಯುಗದತ್ತಧಾವಿಸುತ್ತಿದೆ. ಶ್ವವಿಕಾಸದ ಈ ಮಹಾಸಾಧನೆಯಲ್ಲಿ ಭಾರತವು ದೈವೀಕ್ಷೇತ್ರವಾಗಿದೆ. ವೇದೋಪ ಸತ್ತುಗಳ ಕಾಲದ ಸಾಂಕೇತಿಕ ದೃಷ್ಟಿಯ ಸಮಾಜ, ಪುರಾಣ ಧರ್ಮಶಾಸ್ತ್ರಗಳ ಾಲದ ಮಾದರಿ ಸಂಸ್ಥೆಗಳ ಕಟ್ಟುಪಾಡಿನ ಸಮಾಜ, ಬೌದ್ಧಯುಗದ ನಂತರದ ಬುದ್ಧಿ, ರ್ಕಪ್ರಧಾನ ಸಮಾಜ, ಆಮೇಲೆ ಬಂದ ವ್ಯಕ್ತಿನಿಷ್ಠ ಸಮಾಜ—ಇವೆಲ್ಲವುಗಳ ಅನುಭವ ಡೆದ ಭಾರತವು ಆಧ್ಯಾತ್ಮಿಕ ಮಾನವ ಸಮಾಜದ ನಿರ್ಮಾಣಕ್ಕೆ ಸಿದ್ಧವಾಗುತ್ತಿದೆ. ೀತೆಯ ಕರ್ಮಯೋಗದ ಬೆಂಬಲ, ಪುರುಷೋತ್ತಮ ದರ್ಶನ, ಆಚಾರ್ಯರ, ಸಾಧು ಂತರ ಸಾಧನ, ಆಧುನಿಕ ಮಹಾನಾಯಕರ, ಮಹಾತ್ಮರ, ಮಹಾಕವಿಗಳ ಪ್ರಕಾಶ— ಲ್ಲವೂ ಭಾರತವನ್ನು ವಿಶ್ವನಾಯಕತ್ವಕ್ಕೆ ಅಣಿಗೊಳಿಸುತ್ತಿದೆ. ಈ ದೃಷ್ಟಿಯಿಂದಲೆ ಾಂಡಿಚೇರಿಯ ಶ್ರೀಮಾತೆಯವರೂ ಶ್ರೀ ಅರವಿಂದರೂ ಭಾರತವನ್ನೆ ತಮ್ಮ ಪೂರ್ಣ ೋಗದ ಸಾಧನಕ್ಷೇತ್ರವನ್ನಾಗಿಸಿದರು. ಹಳೆಯ ಹಠಯೋಗ, ರಾಜಯೋಗ, ಭಕ್ತಿ ೋಗ, ಜ್ಞಾನಯೋಗ, ಕರ್ಮಯೋಗ, ತಂತ್ರಯೋಗ—ಎಲ್ಲವುಗಳ ಅನುಭವದ ಾರವೂ ಅಖಂಡ ಚೈತನ್ಯವಾಗಿ ಭಾರತವನ್ನು ವಿಶ್ವವಿಕಾಸದ ಆಧ್ಯಾತ್ಮಿಕ ಗುರು ್ಥಾನಕ್ಕೇರಿಸಿದೆ:

ನವಮನ್ವಂತರ ಮಂತ್ರವನಾಲಿಸಿದೆ
ಕಂಪಿಸುತಿಹ ಧರಣಿ
ಅಲ್ಲಿದೆ ಭಾರತದಾತ್ಮವು ನುಡಿಸುತಿಹ
ಮಂಗಲ ವೀಣಾಶ್ರುತಿಯು
ಅಲ್ಲಿದೆ ನಾಳಿನ ಭಾರತದಾಕೃತಿಯು,
ಸತ್‌ಕೃತಿ, ಸಂಸ್ಕೃತಿಯು
ರಾಷ್ಟ್ರಪ್ರತಿಭೆಯೇ! ಅನುಪಮೇಯ ಶಕ್ತಿ!
ಮೊರೆಯಿದನವಧರಿಸು!
ಯಾಂತ್ರಿಕ ಮಾನವನನು ವ್ಯಕ್ತಿಯ ಮಾಡಿ
ಜನತೆಯನುದ್ಧರಿಸು!
ದ್ವೈತಾದ್ವೈತದ ಸೆರೆಯಿಂದೀ ಜನವ
ಆದಿಶಕ್ತಿ, ಬಿಡಿಸು!
ಸಮತೆಯ ತಣ್ಣೆಳಲೊಳು ಜನ ಹರ್ಷಿಸಲು
ಮುಗಿಲು ಹೂವ ಮುಡಿಸು!

—'ದಿಲ್ಲಿ'

ಾವ್ಯವನ್ನು ಸಚ್ಚಿದಾನಂದದ ಮಂತ್ರವೆಂದು ಭಾವಿಸಿ ಶ್ರೀ ಅರವಿಂದರು ಹೇಳಿದಂತೆ

ಸತ್ಯಸೂರ್ಯನನ್ನು ರಸಆನಂದಗಳ ಅಧಿದೇವತೆ ಚಂದ್ರನನ್ನು ಜೀವನದುಸಿ
ವಾಯುವನ್ನು ಸ್ಫೂರ್ತಿಯ ಅಗ್ನಿಯನ್ನು ಬಲದಾಯಕ ಆತ್ಮನ್ನು ವಿನಾಯಕ
ಉಪವಾಸ ಮಾಡಿ ವಿಶ್ವದ ದೈವೀಕರಣದಲ್ಲಿ ಸಾಹಿತ್ಯದ ಸೇವೆಗೆ ಸ್ಥಾನವಿದೆ ಎಂ
ಕಂಡುಕೊಂಡಿದ್ದಾರೆ. ಅಂತೆಯೇ ಜೀವನದ ವಿಕೃತಿಯನ್ನೆಲ್ಲ ಸುಕೃತಿಯನ್ನಾ
ಮಾಡುವ ಸಾಹಿತ್ಯ ನಿರ್ಮಿತಿಯಲ್ಲಿ ಅವರಿಗೆ ವಿಶ್ವಾಸವಿದೆ. ನವ್ಯ ಕವಿಗಳಾಗಿ ಬಾಳ
ವಿಕೃತಿ ವಿನಾಶ ನಿರಾಶೆಗಳನ್ನು ಗುರುತಿಸಿದರೂ, ಅವುಗಳ ಗರ್ಭದಲ್ಲಿ ಅರಳುತ್ತಿರು
"ಋತದರ್ಶನ" ಕಾವ್ಯದ ಗುರಿಯಾಗಿರಬೇಕೆಂದು ಹೇಳಲು ಸಮರ್ಥರಾಗಿದ್ದಾರೆ.
ಸಮಗ್ರದೃಷ್ಟಿ, ಸಮನ್ವಯದೃಷ್ಟಿ, ಕೇಂದ್ರದೃಷ್ಟಿ, ಪರಿವರ್ತನಶೀಲ ಪ್ರಗತಿಶ
ವಾಸ್ತವದೃಷ್ಟಿ, ಶ್ರೀ ಅರವಿಂದ ದರ್ಶನದ ದಿವ್ಯ ಫಲವಾಗಿದೆ. ವಿನಾಯಕರ ಕಾ
ದೃಷ್ಟಿಯಲ್ಲಿ ಸತ್ವಸಾರವೂ ಅದೇ, ರಸಪೂರ್ಣ ಫಲವೂ ಅದೇ ಆಗಿದೆ.

ಶ್ರೀ ಅರವಿಂದರ ದರ್ಶನವು ವಿನಾಯಕರ ವ್ಯಕ್ತಿತ್ವದಲ್ಲಿ, ಕಾವ್ಯಪ್ರತಿಭೆಯಲ್ಲಿ ಹ
ಅರಳಿ ಕನ್ನಡ ಸಾರಸ್ವತ ಲೋಕಕ್ಕೊಂದು ವಿಶೇಷ ಕಾಣಿಕೆ ಸಲ್ಲಿಸಿದೆ. ಕರ್ನಾಟಕದ
ಶ್ರೀ ಬೇಂದ್ರೆಯವರು ಕಟ್ಟಿದ ಗೆಳೆಯರ ಗುಂಪಿನಲ್ಲಿ ಶ್ರೀ ಅರವಿಂದ ದರ್ಶನವು ಕೇಂ
ಪ್ರಕಾಶವಾಗಿದೆ. ಅದರಲ್ಲಿ ಶ್ರೀ ವಿನಾಯಕರು ಪ್ರಮುಖಸ್ಥಾನ ಪಡೆದಿದ್ದಾರೆ. ದೈ
ಜೀವನದ ಜ್ಞಾನಜ್ಯೋತಿಯ ಉಪಾಸಕರಾದ ಗೆಳೆಯರ ಗುಂಪನ್ನು ಶ್ರೀ ವಿನಾಯಕ
"The gnostic school of writers" ವಿಜ್ಞಾನಾರಾಧಕರಾದ ಲೇಖಕರು ಎಂ
ಕರೆದಿರುವದು ಔಚಿತ್ಯ ಪೂರ್ಣವಾಗಿದೆ. ಮಧುರ ಚೆನ್ನರು, ಮುಗಳಿಯವರು, ವಿನಾ
ಕರು, ಬೇಂದ್ರೆಯವರು ಉದ್ದೀಪಿಸಿದ ಈ ಸಾಧನಜ್ಯೋತಿ ಕನ್ನಡ ಸಾಹಿತ್ಯರಂಗದ
ಇಂದಿಗೂ ಹೊಸ ತರುಣರನ್ನು ಚೈತನ್ಯಶಾಲಿಗಳನ್ನಾಗಿಸುತ್ತಿದೆ. ಶ್ರೀ ಅರವಿಂ
ಹಾಗೂ ಶ್ರೀ ಮಾತೆಯವರನ್ನು ಕುರಿತು ವಿನಾಯಕರು ಮಾಡಿದ ಒಂದು ಪ್ರಾರ್ಥ
ಯಿಂದ ಈ ಲೇಖನವನ್ನು ಮುಕ್ತಾಯಗೊಳಿಸಬಹುದು :

ಆತ ಸೂರ್ಯ ; ನೀನು ಬೆಳಕು
ನಾನರಳುವ ಕಮಲ
ಬಾಳ್ವೆಯಿರಲಿ ಬೃಹತ್‌ಪೂರ್ಣ
ರಶ್ಮಿಪೂತ ನಿರ್ಮಲ

ಮಾನವತಾವಾದ

ಚಿ. ನ. ಮಂಗಳಾ

umanism' ಎನ್ನುವ ಪದಕ್ಕೆ ನಿಘಂಟಿನಲ್ಲಿ 'ಮಾನವ ಹಿತನಿಷ್ಠೆ ; ಮಾನವಾಸಕ್ತಿ,
ತಿಯೊಂದು ವಿಷಯವನ್ನೂ ಮಾನವ ದೃಷ್ಟಿಯಿಂದಲೇ (ದೈವಿಕ ದೃಷ್ಟಿಯಿಂದಲ್ಲ)
ಚಾರ ಮಾಡುವ ಪದ್ಧತಿ, ಮಾನವ ಪ್ರಧಾನ ದೃಷ್ಟಿ, ಮನುಷ್ಯದರ್ಶನ, ಮಾನವ
ತಿ ವಿಚಾರ (ವ್ಯಕ್ತಿಯೊಬ್ಬನದಲ್ಲ) ಎನ್ನುವ ಅರ್ಥಗಳಿವೆ. ಶ್ರೀ ವಿನಾಯಕ ಕೃಷ್ಣ
ೇಕಾಕರನ್ನೂ, ಅವರ ಸಾಹಿತ್ಯವನ್ನೂ ಸ್ವಲ್ಪಮಟ್ಟಿಗೆ ತಿಳಿದ ಯಾರಿಗೇ ಆದರೂ
'ಮಾನವದರ್ಶನ' ವಿನಾಯಕರ ವ್ಯಕ್ತಿ ಹಾಗೂ ಸಾಹಿತ್ಯ ಧರ್ಮದ ಒಂದು ಮುಖ
ಾತ್ರ ಎನ್ನಿಸದಿರುವುದಿಲ್ಲ. ವಿನಾಯಕರ ವ್ಯಕ್ತಿತ್ವವೇ ಆಗಲಿ, ಸಾಹಿತ್ಯವೇ ಆಗಲಿ,
ವಣಿಗೆಯ ಕ್ಷೇತ್ರವೇ ಆಗಲಿ, ಜೀವನರಂಗವೇ ಆಗಲಿ, ಅದು ಯಾವುದೇ ಒಂದು
ೃಷ್ಟಿಯ ಅಥವಾ ಒಂದು ತತ್ವದ ಪ್ರತಿಪಾದನೆಯಲ್ಲ. ವಿನಾಯಕರ ಸಾಹಿತ್ಯದಲ್ಲಿ
ಗೂ ಅವರ ಜೀವನದಲ್ಲಿ ನಾವು ಕಾಣುವುದು ಹಲವಾರು ದೃಷ್ಟಿಗಳ, ತತ್ವಗಳ
ನ್ವಯದ ಏಕರೂಪ. ಇಲ್ಲಿ ನಾವು ಕಾಣುವುದು ಒಂದೇ ತಂತಿಯ ಏಕನಾದವಲ್ಲ.
ವಾರು ತಂತಿಗಳ ಮೀಟಿನ ಸಾಮರಸ್ಯದ ಸ್ವರ ಮೈತ್ರಿ. ಒಂದು ಇನ್ನೊಂದರ
ಭಾಜ್ಯ ಅಂಗ. ಇಲ್ಲಿ ಮಾನವದರ್ಶನವನ್ನು ದೈವಿಕ ದರ್ಶನದಿಂದ, ಮಾನವತಾ
ದವನ್ನು ಆಧ್ಯಾತ್ಮಿಕ ಸಂವೇದನೆಯಿಂದ ಬೇರ್ಪಡಿಸುವುದು ಕಷ್ಟ. ಒಂದು
್ನೊಂದಕ್ಕೆ ಪೂರಕ. ವಿನಾಯಕರ ಮಾನವತಾವಾದಕ್ಕೆ ಆಧ್ಯಾತ್ಮಿಕ ಹಿನ್ನೆಲೆಯಿದೆ.
ರ ಆಧ್ಯಾತ್ಮಿಕ ದರ್ಶನದಲ್ಲಿ ಮಾನವ ನಿಷ್ಠೆಯಿದೆ. ಆದ್ದರಿಂದ ನಾವು 'ಮಾನವ
ರ್ಶನ'ವನ್ನು ಪಡೆಯಲು ಹೊರಟಾಗ ಉಳಿದ ದೃಷ್ಟಿಗಳ ದರ್ಶನವನ್ನೂ ಪಡೆಯು
ದೆ. ಒಂದಾನೊಂದು ಕಾಲಕ್ಕೆ 'humanitarian' ಎನ್ನುವ ಪದಕ್ಕೆ ಕ್ರಿಸ್ತನನ್ನು
ವನೆಂದು ನಂಬದೆ, ಆತನೂ ಎಲ್ಲರಂತೆ ಮಾನವ ಎಂದು ನಂಬಿದ ಜನರು ಎಂಬ
ರ್ಥವಿತ್ತು. ಒಟ್ಟಿನಲ್ಲಿ ಮಾನವತಾವಾದಿಗಳಿಗೆ 'ದೈವಿಕತೆ'ಯಲ್ಲಿ ಅಷ್ಟು ಶ್ರದ್ಧೆ ಇಲ್ಲ
ೆನ್ನುವುದು ಸ್ಪಷ್ಟ. ಆದರೆ ವಿನಾಯಕರ 'ಮಾನವತಾವಾದ'ವನ್ನು ಪರಿಗಣಿಸುವಾಗ
ದೇವರಲ್ಲಿ ಶ್ರದ್ಧೆ ಇಲ್ಲದವರು ಎನ್ನುವುದನ್ನು ಬಿಟ್ಟು ಮಾನವರ ಬಗ್ಗೆ, ಮಾನವ
ೕವನದ ಬಗ್ಗೆ ಅವರ ದೃಷ್ಟಿಯೇನು ಎನ್ನುವುದನ್ನು ಮಾತ್ರ ಯೋಚಿಸಬೇಕು.

ಶ್ರೀ ಅರವಿಂದರು ತಮ್ಮ 'The Human Cycle' ಎಂಬ ಪುಸ್ತಕದಲ್ಲಿ ಹ
ಬರೆದಿದ್ದಾರೆ:

"Mankind upon earth is one foremost self-expresion the universal Being in His cosmic self unfolding; he express under the conditions of the terresterial world he inhabits, t mental power of the universal existence."[1]

ಅಲ್ಲದೆ

"The true and full spiritual aim in Society will regard ma not as a mind, a life and a body, but as a soul incarnated f a divine fulfilment upon earth, not only in heavens beyon ....Their destiny will be, in its view, to spiritualise then selves so as to grow into visible members of the spirit, luc means of its manifestation, themselves spiritual, illumine more and more conscious and perfect. For, accepting the tru of man's soul as a thing entirely divine in its essence, it w accept also the possibility of his whole being becoming divi in spite of Natures' first patent contradictions of this possibilit her darkened denials of this ultimate certitude, and even wi these as a necessary earthly starting point."[2]

ಮಾನವ ಬರಿ 'of the earth, earthy' ಅಲ್ಲ. ಅವನು ಬರಿಯ ಮಣ್ಣ ಮಗನಲ್ಲ. ಅವನಲ್ಲಿ ದೈವೀಕತೆಯಿದೆ. ಮಾನವನನ್ನು ಪ್ರಾಪಂಚಿಕತೆ ಎಷ್ಟೇ ಪ್ರಪಂಚ ವಿಷಯಗಳ ಕಡೆಗೆ ಎಳೆದರೂ ಹಂತ ಹಂತವಾಗಿ ಮನುಷ್ಯತ್ವದಿಂದ ದೇವತ್ವದೆ ಹೋಗುವುದೇ ಮಾನವನ ಗುರಿ ಎನ್ನುವುದು ಭಾರತೀಯರಿಗೆ ವಿನೂತನವಾ ವಿಷಯಪ್ರತಿಪಾದನೆಯೇನಲ್ಲ. ಪ್ರಾಚೀನ ಕಾಲದಿಂದಲೂ ಮಾನವನಲ್ಲಿನ ದೈವಿ ಅಂಶದ ಬಗ್ಗೆ ಆಧಾರಗಳು ಇದ್ದೇ ಇವೆ. ವೇದಾಂತದ ಮೂಲಭೂತ ಸೂತ್ರಗಳೆನಿಸಿ 'ತತ್ವಮಸಿ', 'ಅಹಂ ಬ್ರಹ್ಮಾಸ್ಮಿ', 'ಅಮೃತಸ್ಯ ಪುತ್ರಾಃ' ಮೊದಲಾದ ಹಲವಾ ವಾಕ್ಯಗಳಲ್ಲಿ ಮಾನವನಲ್ಲಿ ಹೇಗೆ ದೈವಿಕ ಅಂಶವಿದೆ ಎನ್ನುವುದನ್ನು ಪ್ರತಿಪಾದಿಸಿ ದೇವತ್ವದ ಹಿನ್ನೆಲೆಯೂ, ದೈವೀಕತೆಯ ಆಧಾರವೂ, ಪಾರಮಾರ್ಥಿಕ ಗುರಿಯು ಇಲ್ಲದೆ ಮಾನವನನ್ನು ಸಂಪೂರ್ಣವಾಗಿ ಬರಿಯ 'ಮಾನವ'ನನ್ನಾಗಿ ಮಾತ್ರ ನೋಡು

[1] *The Human Cycle:* (chp VII—The ideal law of social development) S Aurobindo, *International Centre of Education Collection*, vol. ix, p. 85

[2] *The Human Cycle*, Sri Aurobindo, chp. xxi, p. 305

ಷ್ಟಿ ಭಾರತೀಯ ಆಧ್ಯಾತ್ಮಿಕ, ಧಾರ್ಮಿಕ, ನೈತಿಕ, ಸಾಮಾಜಿಕ, ವೈಯಕ್ತಿಕ ಪ್ರದಾಯಕ್ಕೆ ಬೆಸವಣಿಗೆಗೆ ಹೇಗೆ ಸಲ್ಲದೋ ಹಾಗೆಯೇ ವಿನಾಯಕರ ಸಾಹಿತ್ಯ ರೇಚನೆಗೂ ಸಲ್ಲದು. ಆದ್ದರಿಂದ ವಿನಾಯಕರ 'ಮಾನವತಾವಾದ'ಕ್ಕೆ ಬಲವಾದ ವೀಕತೆಯು[1] ಹಿನ್ನೆಲೆ, ಮುನ್ನೆಲೆಗಳು ಇವೆಯೆಂಬುದನ್ನು ಮೊದಲು ಒಪ್ಪಿ ಅನಂತರ ಾನವನನ್ನು ಕುರಿತು ವಿನಾಯಕರ ದೃಷ್ಟಿಯೇನು? ಮಾನವನ ಬಗ್ಗೆ ಅವರ ವಾದದ ರ್ಥವೇನು? ಎನ್ನುವುದನ್ನು ವಿಚಾರ ಮಾಡುವುದು ಒಳ್ಳೆಯದು.

ವಿನಾಯಕರ 'ಮಾನವತಾವಾದ' ಎಂದರೆ ಆಧ್ಯಾತ್ಮಿಕತೆಗೆ ಹೊರತಲ್ಲದ ಮಾನವ ನ್ನು, ಮಾನವೀಯತೆಯನ್ನು, ಮಾನವಕುಲವನ್ನು ಕುರಿತು ವಿನಾಯಕರ ದೃಷ್ಟಿ— ರ್ಶನ ಎಂಬುದರ ಮೇಲೆ ಮುಂದಿನ ಕೆಲವು ವಿಷಯಗಳನ್ನು ಪ್ರಸ್ತಾಪಿಸ ದ್ದೇನೆ.

ವಿನಾಯಕರ ಮಾನವತಾವಾದಕ್ಕೆ ಅತ್ಯುತ್ತಮ ನಿದರ್ಶನ ಅವರ ಕಾವ್ಯ 'ಬಾಳದೇಗುಲ ಲ್ಲಿ'. 'ಬಾಳದೇಗುಲ'ಕ್ಕೆ ವಿನಾಯಕರು ಬರೆದಿರುವ ಪೀಠಿಕೆಯಲ್ಲಿ ವಿನಾಯಕರ ಾನವತಾವಾದದ ಸಮಗ್ರ ದರ್ಶನವಿದೆ ಎಂದು ನನಗನಿಸುತ್ತದೆ. ಉಳಿದ ಎಡೆಗಳಲ್ಲಿ ಾಳಿನ ಬಗ್ಗೆ, ಬಾಳನ್ನು ಬಾಳುವವರ ಬಗ್ಗೆ ಅವರು ಏನೇ ಹೇಳಿದರೂ ಅವೆಲ್ಲದರ ಮೂಲಭೂತ ಅಂಶಗಳು ಸ್ಪಷ್ಟವಾಗಿ ಮೂಡಿವೆ.

ವಿನಾಯಕರ ಮಾನವದರ್ಶನ 'ಮಗು'ವಿನಿಂದ 'ಮುಕ್ತಜೀವಿ'ಯವರೆಗೂ ವ್ಯಾಪಿಸಿದೆ. ಕವನಮಾಲೆಯ ಪೀಠಿಕೆಯಲ್ಲಿ ವಿನಾಯಕರು ಹೀಗೆ ಹೇಳಿದ್ದಾರೆ:

"ಇಲ್ಲಿ ಅಳೆಯಲು ಪ್ರಯತ್ನಿಸಿರುವುದು ಬಾಳನ್ನು ನೋಡುವ ದೃಷ್ಟಿಯನ್ನು. ಗುವಿನಲ್ಲಿ ಅಂಕುರಿಸಿದ ಈ ದೃಷ್ಟಿ ಮುಕ್ತಜೀವಿಯ ಪೂರ್ಣದೃಷ್ಟಿಯವರೆಗೆ ಕಾಸವಾಗುವ ಬಗೆ ಯಾವುದು? ಈ ವಿಕಾಸಕ್ಕೆ ಅದನ್ನು ಮುಟ್ಟಿಸುವುದು ಯಾವ ಧಾನ? ಈ ವಿಧಾನ ನಡೆದಿರುವಾಗ ಮಧ್ಯದಲ್ಲಿ ಬರುವ ಬೇರೆ ಬೇರೆ ಅವಸ್ಥೆಗಳು ಾವು? ಬೇರೆ ಬೇರೆ ರಂಗಗಳಲ್ಲಿ ಈ ದೃಷ್ಟಿಯು ಹೇಗೆ ಪ್ರಕಟಗೊಳ್ಳುತ್ತದೆ? ದೊಂದು ವ್ಯಕ್ತಿತ್ವ ವಿಶೇಷದಲ್ಲಿ ಈ ದೃಷ್ಟಿಯೂ ಯಾವ ಮಟ್ಟಕ್ಕೆ ಬಂದು ಟ್ಟಿರುತ್ತದೆ? ಹೀಗೆ ಮುಗ್ಧತೆಯಿಂದ ಪೂರ್ಣತೆಯವರೆಗಿನ ವ್ಯಕ್ತಿತ್ವದ ಪರಿಗಳನ್ನು ಲ್ಲಿ ತೆರೆದು ತೋರಿಸುವ ಪ್ರಯತ್ನವಾಗಿದೆ."[2]

ವಿನಾಯಕರ ಮಾನವದರ್ಶನದಲ್ಲಿ ಮಗು - ಮಾತೆ, ತಂದೆ-ಕುಮಾರಿ-ಪತಿ-

[1] ಇಲ್ಲಿ ದೈವೀಕತೆ ಎಂದರೆ 'divine' ಎಂದಷ್ಟೇ ಅರ್ಥವೇ ಹೊರತು ಇದಕ್ಕೆ ಯಾವ ಧರ್ಮದ ನಾ ಧರ್ಮಗಳ ನಂಬಿಕೆಗಳ, ನಿಷ್ಠೆಗಳ, ಪ್ರತೀಕಗಳ, ಸಂಪ್ರದಾಯಗಳ, ಆಚಾರಗಳ, ಯಮಗಳ ಸೊಂಕೂ ಇಲ್ಲ.

[2] 'ಬಾಳದೇಗುಲದಲ್ಲಿ', ಪೀಠಿಕೆ, ಪುಟ ೫-೬

ಕ್ರಾಂತಿಕಾರ—ದಾನಿ—ಜ್ಞಾನಿ—ಸಾಕ್ಷಿಕ-ಕಾವ್ಯಗುರು-ದುಃಖಿ—ಸತ್ಯಾಗ್ರಹಿ—ಕ
ಯೋಗಿ ಇವರೆಲ್ಲರೂ ನಿರಂತರವಾಗಿ ಬಾಳಿಗೆ ಅರ್ಥಕೊಟ್ಟು ಬಾಳಿನ ವಿಕಾಸಕ್ಕೆ ಕಾ
ವಾಗುತ್ತಿರುವ ಪ್ರಕಾರಗಳಲ್ಲಿ ಮುಖ್ಯವಾದ ಕೆಲವು.

ವಿನಾಯಕರ ಮಾನವದರ್ಶನ ಎಷ್ಟು ವ್ಯಾಪಕವಾಗಿದೆ ಎಂಬುದಕ್ಕೆ ಅ
ಮೊದಲು ಕೌಟುಂಬಿಕ ಜೀವನವನ್ನು, ಅದರ ಆಧಾರಸ್ತಂಭವಾದ ಮಗುವಿ
ಬಾಳನ್ನು ಅರ್ಥಮಾಡಿಕೊಳ್ಳಲು ಬಯಸಿ ಕುಟುಂಬ ಜೀವನದ ವಿವಿಧ ವ್ಯಕ್ತಿ ಪ್ರ
ಗಳನ್ನು ವಿಮರ್ಶಿಸಿ ಅನಂತರ ರಾಜಕೀಯ, ಸಾಮಾಜಿಕ, ಮಾದರಿಗಳನ್ನು ಅವಲೋ
ಅನಂತರ ಕರ್ಮ, ಭಕ್ತಿ, ಜ್ಞಾನಮಾರ್ಗಗಳಲ್ಲಿ ನಿರತರಾದವರನ್ನೂ ಕೊನೆಗೆ ವ
ಜೀವಿಗಳನ್ನೂ ಅವಲೋಕಿಸಿರುವುದು ನಿದರ್ಶನ. ಅಲ್ಲದೆ ಕವಿಯೇ ಹೇಳಿರುವಂತೆ
ಕೃತಿಯಲ್ಲಿ ಚಿತ್ರಿಸಿದ ಎಲ್ಲ ದರ್ಶನಗಳೂ ಮನುಕುಲದ ಆದಿಯಿಂದ ವಿಕಸನ ಹೊ
ಜೀವ ಜಾತಿಗಳಾಗಿ ಕಾಣಿಸಿಕೊಂಡು ಅಸಂಖ್ಯಾತ ವ್ಯಕ್ತಿಗಳಲ್ಲಿ ಅರಳುತ್ತಿ
ಮನುಕುಲದ ಭಾಗ್ಯವು ಇನ್ನೂ ವಿಶೇಷವಾಗಿ ತೆರೆದಂತೆ ಸೂಕ್ಷ್ಮತರವಾದ ಮಾದರಿ
ತಲೆ ಎತ್ತಬಹುದು. ಆದರೆ ಪ್ರತಿಯೊಂದು ಯುಗದಲ್ಲೂ ಈ ಮಾದರಿ
ಸೋದಾಹರಣವಾಗಿ ಕಾಣಿಸಿಕೊಂಡಿವೆ.[1]

ಬಾಳದೇಗುಲದಲ್ಲಿನ ಅಮರ ಪ್ರತೀಕಗಳನ್ನು ಅವುಗಳ ಮೌಲ್ಯ ಹೆಚ್ಚಿ
ಸಾಂಪ್ರದಾಯಕ ಕಾವ್ಯಪ್ರತಿಮೆಗಳ ಮೂಲಕ ಕಾಣದೆ, ಇಂದಿನ ಬಾಳಿನಲ್ಲಿ ಯ
ರೀತಿ ವ್ಯಕ್ತವಾಗಿವೆಯೋ ಅಂತೆಯೇ, ಅಷ್ಟೇ ವಾಸ್ತವಿಕವಾಗಿ, ಮಾನವೀಯ
ಕಾಣಲು ವಿನಾಯಕರು ಪ್ರಯತ್ನಿಸಿದ್ದಾರೆ.

ಹೀಗೆ ವಿನಾಯಕರ ಮಾನವತಾವಾದವನ್ನು ಅರಿವಲ್ಲಿ ಮಗುವಿನಿಂದ ವ
ಜೀವಿಯವರೆಗೆ ಅವರು ಕಂಡಿರುವ ಮಾನವತೆಯ ವಿವಿಧ ಪ್ರಕಾರಗಳೂ, ಅವ
ಸಮಗ್ರತೆಯೂ ವಾಸ್ತವಿಕತೆಯೂ ಆಧಾರಗಳಾಗಿವೆ.

ಮಾನವ ಮೊದಲು ಬಾಳನ್ನು ತಿಳಿಯಬೇಕು. ಹಾಗೆ ತಿಳಿಯಲು ಅವನು ಅ
ಅನುಭವಿಸಬೇಕು. ಬಾಳದೇಗುಲದಲ್ಲಿ ಆಡಿ ತಿಳಿಯಬೇಕು. ಬಾಳನ್ನು ಅರಿತ ಪ
ಮಾನವ ಮೊದಲು ತನ್ನನ್ನು ತಿದ್ದಿಕೊಂಡು, ತನ್ನ ವಿಕಾಸವನ್ನು ಮಾಡಿಕೊ
ಅನಂತರ ಇತರರ ವಿಕಾಸಕ್ಕೆ ಹೊರಡಬೇಕು. ಇದು ವಿನಾಯಕರ ನಂಬಿಕೆ.

ಬಾಳದೇಗುಲದಲ್ಲಿನ ವ್ಯಕ್ತಿ ಪ್ರತೀಕಗಳನ್ನು ನೋಡಿದಾಗ ನಮಗೆ ವಿನಾಯ
ಮಾನವತಾವಾದಕ್ಕೆ ಜೀವನದಲ್ಲಿ ಕಾಣುವ ಸಾಧಾರಣ ದರ್ಶನಗಳು ಕಾರಣ ಎನ್ನು
ಸ್ಪಷ್ಟವಾಗುತ್ತದೆ. ಅವರ ಮಾನವ ದರ್ಶನವಾಗಲಿ ಮಾನವತಾವಾದವಾಗಲಿ ಜ

---

[1] 'ಬಾಳದೇಗುಲದಲ್ಲಿ', ಪೀಠಿಕೆ, ೧೦.

ಸಾಧಾರಣವಾಗಿ ಕಾಣಬರದ ಅಸಾಧಾರಣತೆಯು ಮೇಲಾಗಲಿ, ಜೀವನದ
ರ, ವಿಕೃತಿಗಳ ಮೇಲಾಗಲಿ ನಿಂತಿಲ್ಲ. ಆದ್ದರಿಂದಲೇ ಅವರ ಮಾನವದರ್ಶನ
ತಕವಾಗಿಯೂ, ವಾಸ್ತವಿಕವಾಗಿಯೂ ಇವೆ. ಆಂಗ್ಲ ಸಾಹಿತ್ಯದಿಂದ ಪ್ರಭಾವಿತ
ಕೆಲವೊಂದು ಕವಿಗಳಲ್ಲಿ ಕಂಡುಬರುವ ಅಪರಿಪೂರ್ಣ, ಅತೃಪ್ತ, ಏಕರೂಪ
ನವಿಲ್ಲಿಲ್ಲ. ವಿನಾಯಕರ ಮಾನವ ದರ್ಶನ ಹಾಗೂ ಅದರಿಂದ ಹೊಮ್ಮಿರುವ
ನವತಾವಾದ ಸುಖ, ದುಃಖ, ಸತ್, ಅಸತ್, ಕ್ಷರ, ಅಕ್ಷರ, ಈ ಎಲ್ಲ ದ್ವಂದ್ವ
ನ್ನೂ ವಾಸ್ತವಿಕ ರೀತಿಯಲ್ಲಿ ಒಳಗೊಂಡು ಪೂರ್ಣವಾಗಿದೆ. ಇಲ್ಲಿ 'ಪೂರ್ಣ
ವನದ ಸಮಗ್ರತೆ'ಯ ದರ್ಶನವಾಗುತ್ತದೆ. ಒಟ್ಟಿನಲ್ಲಿ 'ಪೂರ್ಣ ಜೀವನದ ಹಂಬಲ'
ವಿನಾಯಕರ ಮಾನವತಾವಾದದ ತಿರುಳು. ಮಗುವಾಗಿ ಜನಿಸಿದ ಬಳಿಕ
ಲಿನ ವಾತಾವರಣಕ್ಕೆ, ಸ್ಥಿತಿಗತಿಗಳಿಗೆ ತನ್ನ ವ್ಯಕ್ತಿತ್ವಕ್ಕೆ, ಅನುಸಾರವಾಗಿ ಮಗು
ಯುತ್ತ ಹೋಗಿ ಬಾಳಿನ ವಿವಿಧ ಹಂತಗಳಲ್ಲಿ ವಿವಿಧ ಪ್ರಕಾರಗಳಾಗಿ ಬೆಳಗುತ್ತದೆ.
ವಿವಿಧ ಹಂತಗಳನ್ನೆಲ್ಲ ದಾಟಿ ಅಪರಿಪೂರ್ಣತೆಯಿಂದ ಪರಿಪೂರ್ಣದೆಡೆಗೆ ಹೋಗು
ಮಾನವನ ಗುರಿಯಾಗಬೇಕು. ಮಾನವ ಆಸುರೀ ಗುಣಗಳನ್ನು ಕಿತ್ತೊಗೆದು
ದಾನಂದ ಸ್ವರೂಪನಾಗುವುದೇ ಬಾಳಿನ ಗುರಿಯಾಗಬೇಕು.

> . . . ಇನ್ನಿರಲಿ ಮನುಕುಲದ
> ಆ ದಿವ್ಯ ಅನುಭವವೆ ನಿನ್ನ ಸ್ಫೂರ್ತಿ!
> ಅವನಲ್ಲಿ ಅವನ ಜಾತಿಯೆ ಹೂತು ಮಾಗಿರಲು,—
> ಮಾನವನ ಜೀವಮಾನಕೆ ಬಂತು ಪೂರ್ತಿ!
> ನಂಬದಿರು ಒಂದೆ ಧರ್ಮವ, ಒಂದೆ ಮಾರ್ಗವನು!
> ಇಂಬುಗೊಡದಿರು ಯಾವುದೊಂದೆ ಶ್ರುತಿಗೆ!
> ಕಂಬನಿಯ ಮಿಡಿಯದಿರು ನನ್ನದೇನಿಲ್ಲೆಂದು;
> ಇಂಥ ಹಮ್ಮೆಳೆಯುವುದು ನಿನ್ನ ಚ್ಯುತಿಗೆ.
> ತೆಕ್ಕೆ ಬೀಳಾಗಸಕೆ! ಎಲ್ಲ ದರ್ಶನಗಳಿಗೆ
> ನೆಲವೆ ಒರೆಗಲ್ಲೆಂಬ ಶ್ರದ್ಧೆ ಬರಲಿ!
> ಬಯಲಾಗು! ಮೂಲೆ ಗುಂಪಾಗದಿರು!
> ಬಾನ್ನೆಲದ
> ಪರಕೆಗಳು ಅಡಿ-ಮುಡಿಯ ಕಾಯುತಿರಲಿ[1]

ಮನುಕುಲದ ಅನುಭವ ಒಂದು ದಿವ್ಯ ಅನುಭವ. ಮನುಕುಲದ ಅನುಭವದಲ್ಲಿ
ಕಷ್ಟನಷ್ಟಗಳಿರಲಿ ಅದು ಒಂದು 'ದಿವ್ಯ ಅನುಭವ' ಎನ್ನುವುದು ವಿನಾಯಕರ
ನವದರ್ಶನದ ವೈಶಿಷ್ಟ್ಯ. ನಿರಾಶಾವಾದಿತ್ವವನ್ನು, ಜೀವನದಲ್ಲಿನ ಹೊಲಸನ್ನು,

1 'ಬಾಳದೇಗುಲದಲ್ಲಿ', ಬಾಳದೇಗುಲದಲ್ಲಿ ಅಡಿಯಿಡುವ ಎಳೆಯನಿಗೆ.

ವಿಕಾರಗಳನ್ನು ಮಾತ್ರ ಹೆಚ್ಚು ಹೆಚ್ಚಾಗಿ ಎತ್ತಿ ತೋರಿಸುತ್ತಿರುವ ನವ್ಯ ಕವಿ
ದರ್ಶನಕ್ಕೂ, ಕನ್ನಡದಲ್ಲಿ ನವ್ಯಕಾವ್ಯದ ಉಗಮಕ್ಕೆ ಕಾರಣರಾದವರಲ್ಲಿ ಒಬ್ಬ
ವಿನಾಯಕರ ದರ್ಶನಕ್ಕೂ ಇರುವ ವ್ಯತ್ಯಾಸಗಳಲ್ಲಿ ಇದೂ ಒಂದು.

ಅಲ್ಲದೆ ಮಾನವನ ದೃಷ್ಟಿ ಸರ್ವವ್ಯಾಪಕವಾಗಬೇಕು. ಅದು ಸಂಕುಚಿತವಾಗಬಾ
ಕಾವ್ಯಧರ್ಮವೇ ಆಗಲಿ, ಜೀವನಧರ್ಮವೇ ಆಗಲಿ ಅದು ಪಕ್ಷಾತೀತವಾಗಬೆ
ಸಮತೂಕವನ್ನು ಕಳೆದುಕೊಳ್ಳಬಾರದು ಎನ್ನುವುದು ವಿನಾಯಕರ ಮಾನವತಾ
ದಲ್ಲಿ ಕಾಣುವ ಪ್ರಮುಖ ವಿಷಯ. ಏಕಪಕ್ಷೀಯ ವಾದವೇ ಆಗಲಿ, ಅತಿಯ
ಪ್ರಶಂಸೆಯೇ ಆಗಲಿ, ತೆಗಳುವಿಕೆಯೇ ಆಗಲಿ, ಭಾವದ, ಭಾಷೆಯ ಯಾವ ನ
ವಿಧಾನವೇ ಆಗಲಿ ಮೊದಲು ಮೊದಲಿಗೆ, 'ಹೊಸ'ತಿನ ಹೊಳಪನ್ನು ಚೆಲ್ಲಿದರೂ
ಅನಿತ್ಯ.

> ನಂಬಿದಿರು ಒಂದೆ ಧರ್ಮವ, ಒಂದೆ ಮಾರ್ಗವನು !
> ಇಂಬುಗೊಡದಿರು ಯಾವುದೊಂದು ಶ್ರುತಿಗೆ

ಎನ್ನುವುದು ಅಷ್ಟೇನೂ 'exciting proposition' ಅಲ್ಲದೆ ಇರಬಹುದು.
ವಿಮರ್ಶಕರು ಹೇಳಿರುವ ಹಾಗೆ[1] 'ಕ್ರಿಯಾಶೀಲ ಆಂದೋಲನ'ವನ್ನು ಪ್ರೇರಿಸಲಾರದ
ಎಲ್ಲವನ್ನೂ ಒಳಗೊಳ್ಳುವಂಥದಾಗಿದೆ ಎಂದು ಎನ್ನಿಸಬಹುದು. ಆದರೆ ವಿನಾಯ
ಜೀವನದಲ್ಲಿ ನವ್ಯತೆಯನ್ನು, ಹೊಸತನ್ನು, ಬದಲಾದ, ಬದಲಾಗುತ್ತಿರುವ ಜೀ
ನೂರು ವಿಧಗಳನ್ನು ನೂರು ಸ್ವರಗಳನ್ನು ಪ್ರತಿಧ್ವನಿಸುವ ಹೊಸ ಸಂವೇದನೆಗ
ಅವುಗಳಿಗೆ ತಕ್ಕ ಪ್ರತೀಕಗಳನ್ನು ಅಪೇಕ್ಷಿಸಿದರೂ ಈ ಹೊಸತಿಗೆ ಕಾರಣವಾ
'ಕ್ರಿಯಾತ್ಮಕ ಆಂದೋಲನ' ಪಕ್ಷಪಾತೀಯವಾಗಿರಬೇಕೆಂದು ಬಯಸುವುದಿಲ್ಲ.
ಏಕಪಕ್ಷೀಯವಾದ ಹುಟ್ಟಿದಾಕ್ಷಣ ದೊಡ್ಡ 'ಆಂದೋಲನ'ವನ್ನು ಮಾಡು
ಕಂಡರೂ ಅದು ನಿಜವಾಗಿ 'ಕ್ರಿಯಾತ್ಮಕ' ಆಗುವುದಿಲ್ಲ. ಪಕ್ಷಪಾತೀಯತೆ
'ಕ್ರಿಯಾತ್ಮಕ' ಕಾರ್ಯಕ್ರಮವೂ ಎರಡೂ ಒಂದಕ್ಕೊಂದು ವಿರುದ್ಧ. ಅಷ್ಟೇ
ಅದು ಒಂದು ಇನ್ನೊಂದನ್ನು ತೊಡೆದುಹಾಕುತ್ತದೆ. ಧಾರ್ಮಿಕ ಜೀವನ
ಆಗಲಿ, ರಾಜಕೀಯದಲ್ಲೇ ಆಗಲಿ, ಸಾಹಿತ್ಯದಲ್ಲೇ ಆಗಲಿ, ದೈನಂದಿಕ ಜೀವನ
ಆಗಲಿ 'ಪಕ್ಷಪಾತ' 'ಕ್ರಿಯಾತ್ಮಕ'ವಾಗಲು ಸಾಧ್ಯವೇ ಇಲ್ಲ. ಯಾವುದು
ವ್ಯಾಪಕವೊ, ಸರ್ವಾಂಗಪೂರಿತವೋ ಅದು ಕ್ರಿಯಾತ್ಮಕ. ಮಾನವನ
ನಂಬುಗೆಗಳನ್ನು, ವಿಧಿಗಳನ್ನು ರೀತಿನೀತಿಗಳನ್ನು ಅಲ್ಲಗಳೆದು, ಅವುಗಳ ಅ

[1] 'ಸಂಕ್ರಮಣ', ೨೪, ಕನ್ನಡ ವಿಮರ್ಶೆಯ ಹೊಸ ಒಲವುಗಳು : ಶ್ರೀ ಜಿ. ಎಸ್. ಆ
ಪುಟ ೮೨.

ಾಸಿ ಯಾವುದಾವರೂ ಒಂದು ನಂಬಿಕೆ ಕ್ರಿಯಾತ್ಮಕವಾಗಿ ಹೇಗೆ ಬೆಳೆಯಲು ಷ್ಟ್ಯ. ವಿನಾಯಕರ ಮಾನವತಾವಾದ ನಾನು ಆಗಲೇ ಹೇಳಿದಂತೆ ವ್ಯಾಪಕ ಗಿರುವುದರಿಂದಲೇ ಅದು ಕ್ರಿಯಾತ್ಮಕ. ಒಂದು ಕಡೆ ಬಾಂಬೊಂದು ಸ್ಫೋಟವಾಗಿ ಿಯದು ಭುಗಿಲ್ಲನೆ ಮುಗಿಲಿಗೇರಿ ಆಂದೋಲನವೆಬ್ಬಿಸಿ ದಹಿಸಿ ಬೂದಿಯಾಗಿಸ ೆನು. ವಿನಾಯಕರ ವಾದದಲ್ಲಿ ನಾವು ಇಂತಹ ದಳ್ಳುರಿಯ ಆಂದೋಲನವನ್ನು ಣುವುದಿಲ್ಲ. ನಾವು ಇಲ್ಲಿ ಕಾಣುವುದು ಜಗತ್ತನ್ನು ವ್ಯಾಪಿಸಿ ಬೆಳಗಿಸಬಲ್ಲ ಕು.

ವಿನಾಯಕರ ದರ್ಶನದಲ್ಲಿ ನನಗೆ ಮೊದಲಿಗೇ ಸ್ಪಷ್ಟವಾಗುವುದು ಅದರ ವ್ಯಾಪಕತೆ. ಗುವಿನಿಂದ ಮುಕ್ತಜೀವಿಯವರೆಗೆ, ಪೃಥಿವಿಯಿಂದ ಅಂತರಿಕ್ಷದವರೆಗೆ, ಸಮುದ್ರ ಚೆಯಿಂದ ಆಚೆಯವರೆಗೆ ವ್ಯಾಪಿಸಿದೆ ಅವರ ದರ್ಶನ. ಅವರ ದರ್ಶನ ಇಷ್ಟು ವ್ಯಾಪಕ ಗಿರುವುದರಿಂದಲೇ ಅಲ್ಲಿ ಆಳವಿದೆ. ಬಾಳಿನ ಸಾವಿರ ಪದರಗಳನ್ನೂ, ಆಕಾರಗಳನ್ನೂ ದು ಕಂಡಿರುವುದಕ್ಕೆ ನಿದರ್ಶನವಿದೆ. ದರ್ಶನ ಪರಿಪಕ್ವವಾಗುವುದಕ್ಕೆ ಸಾಧ್ಯವಾಗಿದೆ.

ಎಲ್ಲ ದರ್ಶನಗಳ ಸಾರಸಂಗ್ರಹವೆ ನಾನರ್ಚಿಸುವ ಸತ್ಯವೆಂದೆ

ಇದು ವಿನಾಯಕರ ಮಾನವತಾವಾದದ ಬುನಾದಿ.

ಅನಂತದರ್ಶನಗಳ ತವರಾದ 'ಬಾಳು' ಕವಿಗೆ ಬರಿಯ 'ಬಾಳು' ಅಷ್ಟೇ ಅಲ್ಲ. ಅದು ರ್ಚಿಸಲು ಯೋಗ್ಯವಾದದ್ದು. ಕವಿ 'ಎಲುಬಿನ ಹಂದರ'ವನ್ನು ಕಂಡಿದ್ದರೂ ಅದೊಂದನ್ನೆ ದು ಬಾಳು ನಿರರ್ಥಕ ಎಂದು ಸಾರುವುದಿಲ್ಲ.

ನಾವರ್ಚಿಸಹುದೊಂದೆ :
ಬಾಳ್ ನಿನ್ನನೊಂದೇ.[1]

ಅರ್ಚಿಸಲರ್ಹವಾದ ಬಾಳಿನಲ್ಲಿ

ಜೀವವ ಜೀವವದಾತ
ತಾಯ್ತಂದೆಯ ಒಲವಾಂತು,
ಸ್ನೇಹದಿ ಮೋಹದಿ ನೋಂತು,
ಕೊನರಿಸುವುದು ...
ಇದಕಲ್ಲವೆ ಬಾಳುವುದು ?
ಇದಕಲ್ಲವೆ ತಾಳುವುದು ?
ನಲುಮೆಯು ಮೈದಾಳುವುದು....
ಅಂತೆ ತಾಯಿ ತಂದೆ ಮಗು,
ಅಂತೆ ಅಳುವು, ಮುಳುವುನಗು
ಅಂತೆ ರಾಗರಸಿಕರೊಲುಮೆ,

[1] 'ಬಾಳ ದೇಗುಲದಲ್ಲಿ', ಪುಟ ೧೬.

ಅಂತೆ ಸ್ನೇಹ,....
ಅಂತೆ ದುಃಖ, ಅಂತೆ ಹಗೆ,
ಅಂತೆ ಸಲುವ, ಕೊಲುವ ಬಗೆ :
ಅಂತೆ ತಿಳಿವು ಬಾಳಡಲಲಿ
ಲಕುಮಿಯಂತೆ ನಿಂದು
ತಿಳಿವನುಳಿಯೆ ಸಂಸಾರವು
ನೀರಿಲ್ಲದ ಕಾಸಾರವು ;
ದುಃಸಹ ದುಃಸ್ವಪ್ನವು ಸ್ಥಿರೆ ;
ಸೂರ್ಯನು ಸಿಡಿಲುಂಡು
ಆ ತಿಳಿವಿನ ಅರುಣಾಂಕುರ
ಮೊಳೆಯಲು ಬಾಳ್ವೆಯು ಶಂಕರ;
ಇಲ್ಲದಿರಲು ಬರಿ ಸಂಕರ
ಬಿಸಿಲಿನ ಹುಯಿಲ್, ಬಂಡು.[1]

ಬಾಳಿನಲ್ಲಿ ತಿಳಿವು ಅತ್ಯಾವಶ್ಯಕ. 'ತಿಳಿವು' ಇಲ್ಲದೆ ಹೋದರೆ ಬದುಕು ವ್ಯರ್ಥ.
ತಿಳಿವಿಗಾಗಿ ಮಗು ಬೆಳೆಯುತ್ತಹೋಗಬೇಕು. ಮಗುವಿನ ಬೆಳವಣಿಗೆ ಹೇಗೆ ಆಗುತ್ತ
ಎನ್ನುವುದನ್ನು ನಾವು ಬಾಳದೇಗುಲದ ಕವನಮಂದಿರದಲ್ಲಿ ಕಾಣುತ್ತೇವೆ.

'ಯುಗಾಂತರ' ನಾಟಕದಲ್ಲಿ ಮಾನವತಾವಾದ, ಸಮತಾವಾದ ಮತ್ತು ಅಧ್ಯಾ
ವಾದ ಮೂಲಭೂತವಾದ ಕೆಲವು ಅಂಶಗಳಲ್ಲಿ ಸಮರಸದಿಂದ ಹೊಂದಿಕೊಂಡು
ಬಲ್ಲವು ಎಂಬುದರ ಚಿತ್ರಣವಿದೆ. ಈ ನಾಟಕದ ನಾಯಕ ಒಬ್ಬ ಮಾನವತಾವಾದಿ.

ವಿನಾಯಕರ ಮಾನವತಾವಾದವನ್ನು ಕುರಿತು ಯೋಚಿಸುವಾಗ ನಾವು ವಸ್ತು, ಶೈ
ದರ್ಶನ ಎಂದು ಮೂರು ವಿಧವಾಗಿ ಪರಿಶೀಲಿಸಬಹುದು. ವಿನಾಯಕರು ಕನ್ನಡ
ಹದಿನಾರು ಕಾವ್ಯ ಸಂಕಲನಗಳನ್ನೂ, ಮೂರು ನಾಟಕಗಳನ್ನೂ, ನಾಲ್ಕು ವಿಮರ್ಶ
ಗ್ರಂಥಗಳನ್ನೂ, ಎರಡು ಪ್ರಬಂಧ ಸಂಕಲನಗಳನ್ನೂ, ಎರಡು ಪ್ರವಾಸ ಸಾಹಿತ್ಯಕೃ
ಗಳನ್ನೂ, ಒಂದು ಕಾದಂಬರಿಯನ್ನೂ ಬರೆದಿದ್ದಾರೆ. ಈ ಎಲ್ಲ ಬರವಣಿಗೆಯ ವಸ್ತುವ
ನೋಡಿದಾಗ ನಮಗೆ ಕವಿಯ ಬರವಣಿಗೆಯ ಮಧ್ಯಬಿಂದು 'ಮಾನವ' ಎನ್ನಿಸದಿರ

ಜೀವನಧರ್ಮದ ಬುನಾದಿಯಮೇಲೆ 'ಮಗು' ತನ್ನ ವ್ಯಕ್ತಿತ್ವವನ್ನು ಬೆಳೆಸು
ಹೋಗಿ ಅದು ಹೊರಗಿನ ವಿಶ್ವಾತ್ಮನಲ್ಲಿ ಲೀನವಾಗಿ ಮುಕ್ತಜೀವಿಯಾಗುತ್ತದೆ. ಮ
ಬೆಳೆಯುತ್ತ ಹೋದಹಾಗೆಲ್ಲಾ ಅದರ ದೃಷ್ಟಿ ಊರ್ಧ್ವಮುಖವಾಗಿರಬೇಕು. ಪೂ
ಜೀವನವನ್ನು ಅದು ಬಯಸಬೇಕು.

ಬಾಳದೇಗುಲದಲ್ಲಿನ ವಸ್ತುವೈವಿಧ್ಯ ನೋಡಿ: ಮಗು, ಕುಮಾರಿ, ಮದುವಣಿ
ವಿವಾಹಿತ, ಪತಿ, ಅನ್ಯಾನುರಕ್ತಪತಿ, ತಾಯಿ, ತಂದೆ, ಕನ್ನಡಿಗ, ಹಿಂದೂ ಭಾರತೀ

1 'ಬಾಳದೇಗುಲದಲ್ಲಿ', ಮಗು, ಪುಟ ೩೧.

ಪ್ರತಿಕಾರ, ತ್ಯಾಗಿ, ದಾನಿ, ಸದಸ್ಯ, ಸಮತಾವಾದಿ, ಅಸುರ, ಸತ್ಯಾಗ್ರಹಿ, ರ್ಮಯೋಗಿ, ಸನಾತನಿ—ವಿನೂತನಿ, ವಿಜ್ಞಾನಿ, ಕನಸಿಗ, ಕಲೋಪಾಸಕ, ಧಾರ್ಮಿಕ, ಲೋಪಾಸಕ ಸುಧಾರಕ, ಕಲೋಪಾಸಕನಾದ ಉಪದೇಶಕ, ರೂಪಾರಾಧಕ, ಸಾಹಿತ್ಯ ರ್ಯ, ಸಾಕ್ಷಿಕ, ಕಾವ್ಯಗುರು, ಉದಾರಚರಿತ, ಕಣಸಿಗ, ಕವಿ—ಅನುಭಾವಿ, ಖಿ, ನಿರ್ಲಿಪ್ತ, ಭಕ್ತ, ಜ್ಞಾನಿ, ಆಳ್ವಾರ, ಮುಕ್ತಜೀವಿ ... ಈ ಸ್ಥಿರ ಪ್ರತಿಮೆಗಳ ದಯಾಸ್ತದಲ್ಲಿ ಬಾಳಿನ ಪ್ರಗತಿಯನ್ನೂ, ಬಾಳಿನ ವೈವಿಧ್ಯತೆಯನ್ನೂ, ಅದು ಬದಲಾಗು ರುವ ರೀತಿಯನ್ನೂ ಅದರ ಜಟಿಲತೆಯನ್ನು ಗುರುತಿಸಿದ್ದಾರೆ. ಅವರ 'ಚಿಂತನ' ಕವನ ಗ್ರಹದಲ್ಲಿನ 'ದಿಲ್ಲಿ' ಕವನವನ್ನು ಓದಿದಾಗಲೂ, ಚಂಪೂ ಗ್ರಂಥವಾದ 'ಇಂದಿಲ್ಲ ನಾಳೆ' ತಿಯನ್ನು ಓದಿದಾಗ ಅಲ್ಲಿ ಚಿತ್ರಿತವಾಗಿರುವ ಅಮೇರಿಕದ ಜನಜೀವನದ ವಿವಿಧ ರೂಪು ನ್ನು ಅರ್ಥಮಾಡಿಕೊಂಡಾಗ ನಮಗೆ ವಿನಾಯಕರು ಹೇಗೆ ಬದಲಾಗುತ್ತಿರುವ ಜೀವನದ ಧ ದರ್ಶನಗಳನ್ನು ತಮ್ಮ ಕೃತಿಗಳಲ್ಲಿ ಮೂಡಿಸಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ. ರು ವಸ್ತುವಿಗೆ ತಕ್ಕಂತೆ ಶೈಲಿಯನ್ನು ಬಳಸಿ ಯಶಸ್ವಿಯಾಗಿದ್ದಾರೆ. 'ಇಂದಿಲ್ಲ ನಾಳೆ' ಥದಲ್ಲಿ ಅಮೆರಿಕೆಯಲ್ಲಿ ಹೇಗೆ ದೈವವೇ ಮಾನವನ ಕೈಯಲ್ಲಿನ ಪುಟ ಚೆಂಡಾಗಿದೆ ೕನೋ ಎನಿಸುತ್ತದೆ ಎನ್ನುವುದನ್ನೂ ವರ್ಣಿಸಿದ್ದಾರೆ. ವಿನಾಯಕರ ಮಾನವದರ್ಶನ ಅಮೇರಿಕದ ಸಿರಿವಂತಿಕೆಯನ್ನೂ, ರಸವಂತಿಕೆಯನ್ನೂ ಗಮನಿಸುವುದರ ಜೊತೆಗೆ ಲ್ಲಿನ ಜೀವನದ ಕೃತ್ರಿಮತೆಯನ್ನೂ, ಯಾಂತ್ರಿಕತೆಯನ್ನೂ ನೋಡುತ್ತೇವೆ. ನಾಯಕರ ಮಾನವತಾವಾದದಲ್ಲಿ 'ವ್ಯಕ್ತಿ'ಯ ಬೆಳವಣಿಗೆಗೆ, ಅವನ ಸ್ವಾತಂತ್ರ್ಯಕ್ಕೆ ಸ್ಥಾನ. ಆದರೆ ಅಮೇರಿಕದ ಜೀವನದಲ್ಲಿ ವಿನಾಯಕರೇ ಹೇಳಿರುವ ಹಾಗೆ "ಆ ತಾಂತ್ರಿಕ ಗರಿಕತೆಯ ಮೊದಲ ಕೊರತೆಯೆಂದರೆ ವ್ಯಕ್ತಿಯ ಪಾರತಂತ್ರ್ಯ. ಅವನಿಗೆ ಏಕಾಂತವೇ ಶ್ಯವಿದ್ದ ಹಾಗೆ ಕಾಣುವುದಿಲ್ಲ."[1] ಅಲ್ಲದೆ ಅಮೇರಿಕೆಯ ಜೀವನದ ಗತಿ ಎಷ್ಟು ಮಾನಕವಾಗಿದೆ ಎಂಬುದನ್ನೂ ಅವರು ಚಿತ್ರಿಸಿದ್ದಾರೆ. ಜೀವನದಲ್ಲಿ ಸಮತೂಕವನ್ನೂ, ತಿಯನ್ನೂ ಶಿಸ್ತನ್ನೂ ಬಯಸುವ ವಿನಾಯಕರು ಅಮೇರಿಕದ ಜೀವನದ ಗತಿಯ ಸಂಕರತೆಯನ್ನಾಗಲಿ, ಅಲ್ಲಿನ ವಿದ್ಯಾರ್ಥಿಗಳ ಕಾಮುಲೋಲುಪತೆಯನ್ನಾಗಲಿ, ದಿರಾಸಕ್ತಿಯನ್ನಾಗಲಿ, ಜೀವನದ ಯಾಂತ್ರಿಕತೆಯನ್ನಾಗಲಿ ಖಂಡಿಸದೆ ಇಲ್ಲ. ರ್ವತ್ರಿಕವಾಗಿ ಹರಡಿದ ಕಾಮುಲೋಲುಪತೆ, ವಿಲಾಸಪ್ರಿಯತೆ ಹಾಗೂ ತಾಂತ್ರಿಕತಮ ಗರಿಕತೆ ತರುವ ಕೃತ್ರಿಮತೆ ಹಾಗೂ ಒತ್ತಡ"[2] ಇವುಗಳಿಂದ ಮನುಷ್ಯನ ನವೀಯತೆಗೆ ಭಂಗ ಬರುತ್ತದೆನ್ನುವುದು ವಿನಾಯಕರ ನಂಬಿಕೆ. ಮಾನವನ ವೃದ್ಧಿಗೆ ಔದ್ಯೋಗೀಕರಣ, ಸಂಪತ್ತು, ಸಮೃದ್ಧಿ ಬೇಕು. ಅದರ ಜೊತೆಗೆ ಸಂಯಮ

[1] 'ಇಂದಿಲ್ಲ ನಾಳೆ', ಮುನ್ನುಡಿ, ಪುಟ vi.
[2] 'ಇಂದಿಲ್ಲ ನಾಳೆ', ಮುನ್ನುಡಿ, ಪುಟ xii.

ಹಾಗೂ ಧ್ಯಾನಪರತೆಯೂ ಬೇಕು. ಮಾನವ ವಿಶ್ವಮಾನವನಾಗಬೇಕು. ಅವನ ದೃ ವಿಶಾಲವಾಗಬೇಕು. ವ್ಯಕ್ತಿ ಬೆಳೆದು ವಿಕಸಿತನಾಗಬೇಕು. ಬಾಳು ತನ್ನ ಸ್ಥಿ ಯನ್ನೂ, ಸಂಯಮವನ್ನೂ ಸ್ವಾತಂತ್ರ್ಯವನ್ನೂ ವಿಕಸನ ಶಕ್ತಿಯನ್ನೂ ಕಳೆದುಕೊ ಬಾರದು.

'ಬಾಳದೇಗುಲದಲ್ಲಿ' 'ಇಂದಿಲ್ಲ ನಾಳೆ', 'ಸಮರಸವೇ ಜೀವನ'—ಈ ಕೆಲವು ಗಳನ್ನು ಮಾತ್ರ ಆರಿಸಿಕೊಂಡು ಅಭ್ಯಾಸ ಮಾಡಿದರೂ ಸಾಕು. ವಿನಾಯಕರ "ಮಾ ಹಿತನಿಷ್ಠೆ, ಮಾನವಾಸಕ್ತಿ, ಮನುಷ್ಯದರ್ಶನ, ಮಾನವ ಜಾತಿ ವಿಚಾರ."—ಒಂ ಮಾತಿನಲ್ಲಿ ಹೇಳಬೇಕಾದರೆ ಮಾನವವಾದದ ಮೂಲಸೂತ್ರ ಏನು ಎನ್ನುವುದು ಸ್ಪ ವಾಗುತ್ತದೆ.

ವಿನಾಯಕರಿಗೆ ಮಾನವ ಜೀವಿತದ ಎಲ್ಲ ಕಾಲಗಳ, ಎಲ್ಲ ರೂಪಗಳಲ್ಲೂ ಆಸಕ್ತಿಯಿ ಅಭಿಮಾನವಿದೆ. ಮಾನವನ ಹಿತವೇ ಅವರ ಸಾಹಿತ್ಯ ಹಾಗೂ ಜೀವನದ ಗುರಿಯಾಗಿ ಆದ್ದರಿಂದಲೇ ಅವರು ಇಂದಿಲ್ಲ ನಾಳೆ ಅಮೇರಿಕದ ಜಾಡನ್ನು ಹಿಡಿದು ಭಾರತದ ಬಾ ಎಲ್ಲಿ ಭಯಂಕರವಾಗುತ್ತದೋ ಎಂದು ಹೆದರಿ ಭಾರತೀಯರಿಗೆ ಎಚ್ಚರ ನೀಡಿದ್ದಾ ಅನುಕರಣೀಯ ವ್ಯಕ್ತಿಗಳಿರುವಂತೆ ಅಮೇರಿಕದವರನ್ನು ಅನುಸರಿಸಬೇಕಾದ ಸಂದ ಗಳಿರುವಂತೆ, ಅಮೇರಿಕದಲ್ಲಿಯೂ ಅಮೇರಿಕವೂ ಕಲಿಯಬೇಕಾದ ಪಾಠಗಳ ಯಂತ್ರಯುಗದ ಪ್ರಘಾತದಿಂದ ಮನುಕುಲದ ಭವಿತವ್ಯ ಮುಂದೇನಾಗುವದೆಂಬು ಇಂದಿನ ರಾಜಪ್ರಶ್ನೆಯಾಗಿದೆ. ಮಾನವನ ದರ್ಶನ ಹಿಗ್ಗದೆ ಯಂತ್ರಯುಗದಲ್ಲಿ ಅ ರಸವಂತಿಕೆಯಾದರೂ ಉಳಿಯಬಹುದೆ ?

ನವನಾಗರಿಕತೆಯೋ ಯಂತ್ರಯುಗದಾವರಣದ ಹೊದ್ದು ನಿಂತಿದೆ.
ಮುಂದುವರಿವೆವೇ ಇದನು ಗೆದ್ದು ?
ಏನೆಲ್ಲ ಕೀಲ-ಗುಂಡಿಗಳ ಮೋಹ
ತಾನಾಗಿ ಚಲಿಸುತಿಹ ಚಕ್ರವ್ಯೂಹ
ಮೆರೆಯುವದೋ ತನ್ನ ಹುಟ್ಟಿಸಿದ ಮನುಕುಲದ ಮೆದ್ದು ?
ಅಣುಯುಗದ ಮನುಜನಿರಬಹುದು ವಿಶ್ವಗಳ ಸ್ಥಾಣು
ಗ್ರಹದಿಂದ ಗ್ರಹಕೆ ನರ ಚಲಿಸಬಹುದು.
ನಿಗ್ರಹದ ಬಲವಿರದೆ
ಯೋಗಪುಣ್ಯದ ತರದೆ
ಪೂರ್ಣ ವಿಕಸನವೆಂತು ಮಾನವನ ವರಿಸಬಹುದು ?[1]

ವಿನಾಯಕರು ನವನಾಗರಿಕತೆಯ ಹೊದಿಕೆಯ ಕೆಳಗೆ ಅಡಗಿರುವ ಅಗ್ನಿಪರ್ವ

---

[1] 'ಇಂದಿಲ್ಲ ನಾಳೆ', ೨೬. ಯಂತ್ರಯುಗದ ಮಹಿಮೆ, ಪುಟ ೧೫೯.

ದರ್ಶನ ಪಡೆದಿದ್ದಾರೆ. ಮನುಕುಲಕ್ಕೆ ಮುಂದೇನು ಗತಿ ಎಂದು ಚಿಂತಿಸಿದ್ದಾರೆ. ನವನಾಗರಿಕತೆಯ ಜಾಲದಲ್ಲಿ ಸಿಲುಕಿದ ಮಾನವನ ದರ್ಶನ ಭಯಂಕರ ದರ್ಶನ. ಇದಕ್ಕೆ ಪರಿಹಾರವಿದೆಯೆ? ವಿನಾಯಕರು ಕಂಡ ದರ್ಶನ, ಅದರ ಫಲಶ್ರುತಿ ಇದು.

ಯಂತ್ರವಿಲ್ಲದಲೆ ವಿಶ್ವದ ಅರಿವಿಲ್ಲ,
ಗೆಲುವಿಲ್ಲ.
ಯಂತ್ರವ ನಿಯಂತ್ರಿಸದಲೆ ಗತಿಯಿಲ್ಲ ;
ಬಾಳಿಗೆ ದ್ಯುತಿಯಿಲ್ಲ.[1]

'ಬಾಳ ವೇಗುಲದಲ್ಲಿ' ಕಾಣುವ ಮಾನವಜೀವನದರ್ಶನಕ್ಕೂ, ಅಲ್ಲಿನ ನಾಗರಿಕತೆಗೂ 'ಇಂದಿಲ್ಲ ನಾಳೆ'ಯಲ್ಲಿನ ದರ್ಶನಕ್ಕೂ ಅಜಗಜಾಂತರ. ಇವೆರಡನ್ನೂ ಒಟ್ಟಿಗೆ ಓದಿದಾಗ ಕಾಣುವುದು ಮೂಡಣ-ಪಡುವಣಗಳ ಸಂಘರ್ಷಣ. ಇವೆರಡರ ಸಮನ್ವಯವೇ ಕವಿ ಕಾಣಬಯಸುವ ದರ್ಶನ. ವಿನಾಯಕರ ಕವಿ ಪ್ರಜ್ಞೆ ವಿಶ್ವದೊಡನೆ ಒಂದಾಗಿದೆ. ಅವರ ಅಂತಃಕರಣದ ತುಡಿತ ವಿಶ್ವದ ಹೃದಯದೊಡನೆ ಹೊಂದಿದೆ. ವಿನಾಯಕರ ನಿಷ್ಠೆ ವಿಶ್ವ ಕವಿಯ ಕಾವ್ಯ ನಿಷ್ಠೆ.

ಮನುಕಲದ ಕವಿಯಾಗು, ಕುಲಕೋಟಿಗಳನು ತಿಳಿ
ಯಾವ ನುಡಿಯನೆ ಇರಲಿ ವಾಣಿ ನುಡಿದು
. . . .
ವಿವಿಧ, ಕುಲಗಳ ಭಿನ್ನ ಜನದ ಹೃದಯವನರಿತು
ಅಂತಃಕರಣ ಬೆರೆಯಲುದುವೆ ಪೂರ್ತಿ.[2]

ವಿನಾಯಕರು ಮನುಕುಲದ ಕವಿಯಾಗಿದ್ದಾರೆ. ವಿವಿಧ ಕುಲಗಳ ಭಿನ್ನ ಜನದ ಹೃದಯವನ್ನು ಅರಿತಿದ್ದಾರೆ. ಆ ವಿಶ್ವದ ಅಂತಃಕರಣದಲ್ಲಿ ಬೆರೆತಿದ್ದಾರೆ. ಈ ವಿಶ್ವ ಕವಿಯ ಸಂದೇಶವೇನು? ಇದೇ ಅವರ "ಸಮಷ್ಟಿ ಮಾನವನ ವ್ಯಕ್ತಿತ್ವವನ್ನು ಯಂತ್ರವ್ಯೂಹ ನಿರ್ಣಯಿಸಬಹುದು. ಆದರೆ ವ್ಯಕ್ತಿಯ ವ್ಯಕ್ತಿತ್ವದ ಬಗೆಯೇನು? ಯಾವ ಯಂತ್ರಗಳಿಗೂ ಉಪಲಬ್ಧವಲ್ಲ. ಆದರೆ ಭಾರತೀಯ ಯೋಗಶಾಸ್ತ್ರ ವ್ಯಕ್ತಿಯ ವ್ಯಕ್ತಿತ್ವದ ನೆಲೆಯನ್ನು ನಿರ್ಣಯಿಸಬಲ್ಲದು. ಈ ಎರಡು ವಿಧಾನಗಳ ಸಮನ್ವಯದಲ್ಲಿಯೇ ಮನುಕುಲದ ಭವಿಷ್ಯತ್ ಇದೆ. ಮತ್ತು ಮುಕ್ತಿ ಇದೆ."

[1] 'ಇಂದಿಲ್ಲ ನಾಳೆ', ಪುಟ ೧೬೨.
[2] 'ಇಂದಿಲ್ಲ ನಾಳೆ', ಪುಟ ೩೯, ೪೦.

ಇತಿಹಾಸ ಮತ್ತು ಸಂಸ್ಕೃತಿ

ಬಿ. ಎಚ್. ಶ್ರೀಧರ

ಇತಿಹಾಸವೆಂದರೆ "ಮನುಷ್ಯನು ತನ್ನ ಸಹಜೀವಿಗಳಿಗೆ ಮಾಡಿದ ಅಪರಾಧ ಮತ
ಕೊಟ್ಟ ದುಃಖಗಳ ಒಂದು ಅಭಿಲೇಖ. ಅದು ಭವಿಷ್ಯದ ಒಂದು ತೆರೆದ ಚಿತ್ರಪಟ
ಸುರುಳಿ, ಅನುಭವದ ವಿಶದೀಕರಣ, ದೊಡ್ಡಮನುಷ್ಯರ ಜೀವನಚರಿತ್ರೆ, ರಾಷ್ಟ್ರ
ಜೀವನಕಥೆ, ಕಾವ್ಯದ ಪೂರಕ, ಅಸಂಖ್ಯಾತ ಜೀವನ ಚರಿತ್ರೆಗಳ ಸಾರ, ಅಲ್ಪಸಂಖ್ಯಾ
ವಿಜಯದ ದಾಖಲೆ, ಜಗತ್‌ಪಾಲಕನ ಆವಿರ್ಭಾವ, ಸಂಕ್ಷೇಪಗೊಳಿಸಲಾದ ನೈ
ತತ್ವಜ್ಞಾನದ ಉಪದೇಶ" ಎಂಬುದಾಗಿ ವಿವಿಧ ವರ್ಣನೆಗಳಿವೆ. ಸಲಕ್ಷಣವಾ
ಇತಿಹಾಸವು ಒಂದು ರಾಷ್ಟ್ರೀಯ ಅಥವಾ ಉಪರಾಷ್ಟ್ರೀಯ ಸಮಾಜದ ಸಾಂಸ್ಕೃ
ಅಭಿಲೇಖ ಎನ್ನಬಹುದು.

"ಅತ್ಯುತ್ತಮ ಆಲೋಚನೆಗಳ ಮತ್ತು ಹೇಳಿಕೆಗಳ ಪರಿಚಯವೇ ಸಂಸ್ಕೃತಿ; ಕ್ರ
ಬದ್ಧವಾಗಿ ಒಂದು ಉದ್ದೇಶವನ್ನು ಸಾಧಿಸುವುದರಲ್ಲಿ ಮಾರ್ಗದರ್ಶನ ಮಾಡ
ಉದ್ದೇಶದಿಂದ ಗ್ರಂಥಾವಲೋಕನ ಮಾಡುವುದೇ ಸಂಸ್ಕೃತಿ ; ಸುಶಿಕ್ಷಿತತೆಯ ಆಕಾರ
ಸಂಸ್ಕೃತಿ" ಎಂಬಂತಹ ಹಲವಾರು ವಿವರಣೆಗಳು ಸಂಸ್ಕೃತಿಯ ಅರ್ಥವನ್ನು ಹ
ಹೊರಟಿವೆ. ಸಂಸ್ಕೃತಿ ಎಂದರೆ ಹುಟ್ಟುಗುಣಗಳನ್ನು ಸುಧಾರಿಸಲು ಬೆಳೆಸಿಕೊಳ್ಳ
ಪ್ರಬುದ್ಧಮಾನ್ಯವಾದ ಕಟ್ಟುಗುಣಗಳ ಮೊತ್ತ. ಇಚ್ಛಾಗುಣ, ಭಾವನಾಗುಣ, ಬು
ಗುಣಗಳು ಗುಣದ ಮೂಲಭೂತವಾದ ಮೂರು ವರ್ಗಗಳು. ಗುಣವು ಕರ್ಮದ ಅಥ
ವೃತ್ತದ ಸುಪ್ತರೂಪ.

ಇತಿಹಾಸಕ್ಕಿಂತ ಕಾವ್ಯವು ಜೈವಿಕ (ಅನುಭವದ ಪ್ರಾಣಸ್ಥಾನದಲ್ಲಿರುವ ಭಾವನೆ
ಸತ್ಯಕ್ಕೆ ಹೆಚ್ಚು ಹತ್ತಿರವಾದುದು. ಅದು ಜೀವನರಚನಾತ್ಮಕವಾದುದು, ಹೊರಜಗ
ಮುಖ ಸಾಮುದ್ರಿಕದ ಮತ್ತು ಚಲನವಲನಗಳ ಭಾವವನ್ನು ಐಂದ್ರಜಾಲಿಕ ಲಿ
ಯಿಂದ ಅರ್ಥಯಿಸುತ್ತದೆ; ಅದೊಂದು ಜೀವನವಿಮರ್ಶೆ, ಮಾತಾಡುವ ವರ್ಣಚಿ
ಸಜೀವಮಾನವರ ಇಂದ್ರಿಯಗಳನ್ನು ಕದಡುವ ಸಾಕಾರ ಚೇತನ, ಜೀವ
ವೈಯಕ್ತಿಕ ಅರ್ಥವಿವರಣೆ, ಮನುಷ್ಯನ ಭಾವನಾವರ್ಣಿತ ವಿಚಾರಗಳ ಮೊ

ಶಬ್ದ ಸಂಗೀತ, ತ್ಯಾಗಶೀಲದ ಸ್ಫೂರ್ತಿಯನ್ನು ಕೊಡುವ ಉನ್ನತ ವಿಚಾರಗಳ ದೇವತೆ, ಜೊಸ್ವಕ್ಕೆ ಅಸ್ತಿತ್ವ ಕೊಡುವ ಜೀವನದ ನೆರಳು, ಜೀವನಕ್ಕೆ ಸಾಮರಸ್ಯವನ್ನುಂಟು ಮಾಡುವ ಪ್ರಯತ್ನ, ಅತ್ಯುತ್ತಮ ಕ್ರಮದಲ್ಲಿ ವಿನ್ಯಸ್ತವಾದ ಅತ್ಯುತ್ತಮ ಮಾತುಗಳು, ಸರ್ವಜ್ಞಾನದ ಉಸಿರು ಮತ್ತು ನಯವುಳ್ಳ ಚೇತನೆ, ಸೌಂದರ್ಯದ ಉಸಿರು, ದೇವರ ಉಸಿರು, ಅಪೂರ್ವವಾದ ವೈಯಕ್ತಿಕ ಆನಂದದ ಅಪೂರ್ವವೂ ಸ್ಪಷ್ಟವೂ ಆದ ಅರ್ಥ ಸಂಪರ್ಕ, ಶಬ್ದನೃತ್ಯ, ಅಂತಃಸೌಂದರ್ಯ—ಬಹಿಃಸೌಂದರ್ಯಗಳ ಶಬ್ದಾಭಿವ್ಯಕ್ತಿ, ಜೀವನದ ಬೆಳಕು, ಮಹಾಮನಗಳ ಉಷಃಕಾಲದ ಕನಸು, ಆತ್ಮದ ಸಂಗೀತ, ಹೃದಯ ಧರ್ಮದ ಸ್ವಾಭಾವಿಕವಾದ ಮಾತು, ಆತ್ಮ ತುಂಬಿ ತುಳುಕಿದ ರಸ, ಅತ್ಯಂತ ಸೊಗಸಾದ ಶಬ್ದದ ರೇಶಿಮೆ ಕವಚವನ್ನು ತಳೆದ ಅಮರ ಆಲೋಚನಾರೂಪದ ಅಪ್ಪಟ ಚಿನ್ನ, ಶಾಂತವಾದ ಮನಸ್ಸು ನೆನಪು ಮಾಡಿಕೊಂಡ ಸುದೃಢ ಭಾವನೆಗಳ ಸ್ವಯಮುತ್ಪ್ರವಾಹ, ಅಮರ ಸತ್ಯದ ರೂಪದಲ್ಲಿ ಅಭಿವ್ಯಂಜಿಸಲಾದ ಜೀವನದ ಸಾಕ್ಷಾತ್ ಪ್ರತಿಬಿಂಬ, ಸೌಂದರ್ಯಾಂತರ್ಗತವಾದ ಸತ್ಯ, ಜಗತ್ತಿನ ಗುಪ್ತ ಸೌಂದರ್ಯವನ್ನು ಮುಸುಕು ತೆರೆದು ತೋರಿಸಿ ಪರಿಚಿತ ಪದಾರ್ಥಗಳನ್ನು ಅಪರಿಚಿತಗಳೆನ್ನಿಸುವಂತೆ ಮಾಡುವ ಸಾಧನ, ಹಣ್ಣನ್ನು ಹಡೆಯದ ಹೂವಿನ ಪರಿಮಳವನ್ನು ಬೀರುವ ಉಪಕರಣ ಮತ್ತು ಶಾಸ್ತ್ರದ (ವಿಜ್ಞಾನದ) ಇನ್ನೊಂದು ರೂಪ—ಎಂದು ವಿವಿಧವಾಗಿ ವರ್ಣಿತವಾಗಿದೆ. "ವಾಕ್ಯಂ ರಸಾತ್ಮಕಂ ಕಾವ್ಯಂ" ಎಂಬುದು ಈ ವರ್ಣನೆಗಳ ಸಾರಭೂತ ಧ್ವನಿ.

ಶ್ರೀಪದ್ಮಭೂಷಣರಾದ ವಿನಾಯಕರ ಕವಿರಾಜ್ಯದ ವಿಶಿಷ್ಟನಾಯಕತ್ವವಿರುವುದು ಅವರ ಕಾವ್ಯವಾಣಿ ಪ್ರಕಾಶಿಸುವ ಇತಿಹಾಸ ಸಾರಭೂತವಾದ ಸಂಸ್ಕೃತಿ ದ್ರವ್ಯದಲ್ಲಿ. ಅವರ "ಪದ್ಯ"ಗಳೆಲ್ಲವೂ ಸಮುದ್ರಗೀತಗಳು—ಎಂದರೆ ಅವುಗಳ ಸಾಮುದ್ರಿಕವನ್ನು ಹೇಳಿದಂತಾಗುತ್ತದೆ; ಸಮುದ್ರವು ಭಾವತರಂಗಸಮುಚ್ಚಯ, ಭಾವಮುದ್ರಾ ಮಂಜೂಷ: ಸಾಂಸ್ಕೃತಿಕ ಭಾವಗಳು ಕಾಲಮಾನಾನುಸಾರವಾಗಿ ಅವುಗಳಲ್ಲಿ ಪ್ರಕಾಶ ಹೊಂದಿ ತಮ್ಮ ಐತಿಹಾಸಿಕತೆಯಿಂದ ಪ್ರಜ್ವಲಿಸುತ್ತವೆ. ಉಕ್ತಶ್ರೀಯುತರ ಕವನ ಸಂಗ್ರಹಗಳಲ್ಲಿ ಗಣ್ಯವಾದವುಗಳನ್ನು—ಅವುಗಳಲ್ಲಿ ಕೆಲವನ್ನು—ಸ್ಥಾಲೀಪುಲಾಕ ನ್ಯಾಯದಿಂದ ಅವಲೋಕಿಸಿದರೂ ಸಾಕು, ಮೇಲಿನ ಮಾತಿಗೆ ನಿದರ್ಶನಗಳು ವಿಪುಲವಾಗಿ ದೊರಕುತ್ತವೆ.

'ಸಮುದ್ರಗೀತ'ದ "ಪ್ರತಿಜ್ಞೆ"ಯಲ್ಲಿ ಸ್ವಚ್ಛಂದ ಛಂದದಲ್ಲಿ ಬರೆಯುವ ಪ್ರತಿಜ್ಞೆಯನ್ನು ವಿನಾಯಕರು ಮಾಡಿದ್ದಾರೆ. ಅದು ಮುಕ್ತಚ್ಛಂದದ್ದೇ ಮಾದರಿ. ಅದರಲ್ಲಿ ತನ್ನ ಛಂದೋಮುಕ್ತ ಬಂಧದಲ್ಲಿ— ಕವಿಗೆ "ಕವಿಗಳ ಸಮುದ್ರಗುಪ್ತ"ನಾಗೆಂದು ಹರಸಲಾಗಿದೆ. "ಕಂಡೆ"ಯಲ್ಲಿ ಸಮುದ್ರವನ್ನು ಮೊದಲ ಬಾರಿಗೆ ಕಂಡ ಕಾಣ್ಕೆಯಿದೆ.

“ಗುರುತಿ”ನಲ್ಲಿ ಸಮುದ್ರಕ್ಕೆ ಶಾಂತಿಯೂ ಇಲ್ಲ, ಕ್ಷೋಭೆಯೂ ಇಲ್ಲ ಎಂದು ಮುಕ್
ಹೃದಯಸಮುದ್ರವನ್ನು ಸೂಚಿಸಲಾಗಿದೆ. ಅದೇ ಬಾಯಲ್ಲಿ The ultimate Tru
is a bundle of contradictions—ಆತ್ಯಂತಿಕ ಸತ್ಯವು ವ್ಯಾಹತಿಗಳ ಹೊರೆ
ಎಂಬ ಗಾದೆಯಂತೆ “ಶಾಂತಿಯಿದೆ, ಕ್ಷೋಭೆಯಿದೆ ನಿನಗೆ” ಎನ್ನಲಾಗಿದೆ. “ಸ
ಲೀಲೆ”ಯಲ್ಲಿ ಸಮುದ್ರದ ರೌದ್ರವು ವರ್ಣಿತವಾಗಿದೆ. “ಮಿಂಚಿದ ಮಾತಿ”
ಬಾಳನ್ನು ಮಿಂಚಿ ಮಾಯವಾಗುವ ತೆರೆಗೆ ಹೋಲಿಸಲಾಗಿದೆ. “ಏಕ ಮೇವ”ದಲ್ಲಿ ಸ
ಚಿಕ್ಕತನವನ್ನು ಎತ್ತಿ ಹೇಳಲಾಗಿದೆ. “ಪರಿಧಾನ”ದಲ್ಲಿ ಕಡಲು ಮುಗಿಲುಗಳ ಚುಂ
ವನ್ನು ವರ್ಣಿಸಲಾಗಿದೆ. “ಸೂರ್ಯೋದಯ”ದಲ್ಲಿ ಸೂರ್ಯನು ತೆರೆಯೇರಿ ಬರುವುದ
ಹೇಳಿದೆ. “ಮಧ್ಯರಾತ್ರಿ”ಯಲ್ಲಿ ಸಮುದ್ರರಾಜ—ಆಕಾಶಗಂಗೆಯರ ಪ್ರಣಯವ
ಉಲ್ಲೇಖಿಸಲಾಗಿದೆ. “ಅಹಾ ನೀರೆ”ಯಲ್ಲಿ ಸಮುದ್ರವನ್ನು ಸ್ವಯಂಭುವೆನ್ನಲಾಗಿ
ಅಮೃತಶಕ್ತಿಯನ್ನು ಕರುಣಿಸಲು ಪ್ರಾರ್ಥಿಸಲಾಗಿದೆ. “ಮುನ್ನೀರಿನುಪ್ಪಿ”ನಲ್ಲಿ ಸಮು
ವನ್ನು ಜಗದೊಡೆಯನ ಕಣ್ಣೀರೆನ್ನಲಾಗಿದೆ. “ಓಂ ನಮೋ”ವಿನಲ್ಲಿ ಸಮುದ್ರಸ
ವಿಶ್ವರೂಪವುಳ್ಳದ್ದೆಂದು ನುತಿಸಲಾಗಿದೆ. “ವಿಶ್ವಕುಟುಂಬಿ”ಯಲ್ಲಿ ಸಮುದ್ರದ ದ
ಕತೆಯ ಕಾಣ್ಕೆಯಿದೆ. “ಸಮುದ್ರನಾಥ”ನಲ್ಲಿ ಎಂಟೆದೆಯ ಬಂಟತನವನ್ನು ಬ
ಲಾಗಿದೆ. “ಉದಾರ ಸಮುದ್ರ”ದಲ್ಲಿ ಅನಾಸಕ್ತಿಯಿದೆ ಎನ್ನಲಾಗಿದೆ. “ಕಡಲಹುಣ್ಣಿ
ಯಲ್ಲಿ ಸಮುದ್ರದ ಭಯಾನಕತೆ ಬಂದಿದೆ. “ಜಿಬ್ರಾಲ್ಟರದ ಬಳಿ”ಯಲ್ಲಿ ರುದ್ರನಾ
ವನು ಹೊಡದಿರೆಂದು ಪ್ರಾರ್ಥಿಸಲಾಗಿದೆ. “ತದಿಗೆಯ ಚಂದ್ರಮ”ನಲ್ಲಿ ಚಂದ್ರನ ತ
ಕೋಡು ಮೂಡಿತ್ತೆನ್ನಲಾಗಿದೆ. “ಮೆಸಿನಾ ಉಪಸಾಗರದಲ್ಲಿಯ ರಾತ್ರಿ”ಯ
ಮುಸಲೀನಿಯ ಅನ್ಯಾಯವನ್ನು ಹೇಳಲಾಗಿದೆ. “ಓಂ ತತ್‌ಸತ್ತ್ತಿ”ನಲ್ಲಿ ಸಮುದ್ರ
ಆದ್ಯಂತರಹಿತ ಬ್ರಹ್ಮದ ಕಲ್ಪನೆಯನ್ನು ಆರೋಪಿಸಲಾಗಿದೆ.

“ಏಡನ್” ಬ್ರಿಟಿಷರ ಸಾಮ್ರಾಜ್ಯಶಾಹಿಯ ಅಳಿವನ್ನು ಹಾರಯಿಸುತ್ತದೆ. “ಆಫ್ರಿ
ದಲ್ಲಿ ಅವಕ್ಕೆ ಒಳ್ಳೆಯ ದಿನ ಬರುವುದೆಂಬ ಆಶ್ವಾಸನವನ್ನು ಕೊಡಲಾಗಿದೆ. “ಸುಯೇ
ಕಾಲುವೆ”ಯಲ್ಲಿ ಅದರ ಕಲಹಕಂಟ ಕಥೆಯನ್ನು ಎತ್ತಿ ಹೇಳಲಾಗಿದೆ. “ಕ್ರೀಟದೇ
ಯಲ್ಲಿ ಅವಳ ಅಧಃಪತನಕ್ಕೆ ಮರುಗಲಾಗಿದೆ. “ಸ್ಟ್ರಾಂಬೋಲಿ”ಯಲ್ಲಿ ಅದರ ಜ್ವಾ
ಮುಖದ ಚಿರಂತನತೆಯನ್ನು ಎತ್ತಿ ಹೇಳಲಾಗಿದೆ. “ಕೋರ್ಸಿಕಾ”ವಿನಲ್ಲಿ ಅದ
ಪಶ್ಚಿಮದ ಸಮುದ್ರಗುಪ್ತನೆಂದು ವರ್ಣಿಸಲಾಗಿದೆ. “ನೇಪಲ್ಸದಲ್ಲಿಯ ಮೂ
ಸಂಗ್ರಹಾಲಯ”ದಲ್ಲಿ “ಆದಿರಾಜ ಯಶೋಬಿಂಬ ಮಾದರ್ಶಂ ಪ್ರಾಪ್ಯ ಶಿಲಾಮ
ತೇಷಾ ಮಸನ್ನಿಧಾನೇಽಪಿ ನಸ್ವಯಂಪರ್ಯ ನಶ್ಯತಿ” ಎನ್ನಲಾಗಿದೆ. “ಮಾರ್ಸೆಲದಲ್ಲಿ
ನಾತರ್ ದಾಮಿ”ನಲ್ಲಿ ಅದನ್ನು ದಿವ್ಯಧಾಮವೆಂದು ಹೊಗಳಲಾಗಿದೆ. “ನಾಟ್ಯಶಾ
ಯಲ್ಲಿ “ಸಮಾಜವೆಲ್ಲ ನಾಟ್ಯಶಾಲೆಯಾಗಿ ಸಂಸಾರವೆ ವಿರಳವಾಗಿವೆಯೀಗ” ಎಂ

ಉದ್ಗರಿಸಲಾಗಿದೆ. "ಕಪ್ತಾನ"ನನ ಚಿಂತೆ ಸ್ಥೈರ್ಯಗಳನ್ನು ಬಣ್ಣಿಸಲಾಗಿದೆ.

"ಉಂಟು"ವಿನಲ್ಲಿ ಹಡಗು ಸೂರ್ಯನಂತೆ ಹೆಜ್ಜೆ ಇಕ್ಕುವುವೆನ್ನಲಾಗಿದೆ. "ನೌಕಾರಾವಣ" ಹಡಗಿನ ಭಯಂಕರತೆಯನ್ನು ವರ್ಣಿಸಲಾಗಿದೆ. "ಹಡಗದಚಂದ"ದಲ್ಲಿ ಅದನ್ನು ಸಂಕ್ಷಿಪ್ತ ಬ್ರಹ್ಮಾಂಡವೆಂದು ಗುರುತಿಸಲಾಗಿದೆ. "ಇಲ್ಲಿಯ ನ್ಯಾಯ"ದಲ್ಲಿ ಮಾನವರ ತಾರತಮ್ಯ ಅನ್ಯಾಯವೆಂದು ನಿಂದಿಸಲಾಗಿದೆ. "ಸುಯೋಜಿನಲ್ಲಿಯ ಹಡಗ"ದಲ್ಲಿ ನೌಕಾಗತಿಯ ಬೆಡಗಿದೆ. "ನೌಕಾಯಂತ್ರ"ದಲ್ಲಿ ನೌಕೆಯನ್ನು ವಿಜ್ಞಾನ ಕವಿಯೊರೆದ ಮಹಾಕಾವ್ಯವೆಂದು ಕರೆಯಲಾಗಿದೆ.

"ಕನ್ನರ್ ದಿನ್ನೆಯಿಂದ" ಮಂಜಿನ ದರ್ಶನವಿದೆ. "ಹಿಮಾಗಮನ"ದಲ್ಲಿ ಹಿಮವನ್ನು ಘನಮಹಿಮನ ಮಹಿಮೆಯೆಂದು ವರ್ಣಿಸಲಾಗಿದೆ. "ಶಿಲಾಕನ್ಯೆ"ಯಲ್ಲಿ ಅವಳಿಗೆ ಪ್ರತ್ಯಾಶೆಯನ್ನು ಹೇಳಲಾಗಿದೆ. "ಹ್ಯಾಂಪ್‌ಸ್ಟೆಡ್‌ಹೀಥಿ"ನಲ್ಲಿ ವಸಂತಾಗಮನ ನಾದವನ್ನು ವಿವರಿಸಲಾಗಿದೆ. "ಮಾವಿಸ್ಮರ ಕುಸುಮ"ದಲ್ಲಿ ಅದರ ಬಾಳನ್ನು ಚೆಲುವಿನ ಪಡಿನೆಳಲೆನ್ನಲಾಗಿದೆ. "ಟೇಮ್ಸ ನದಿಯ ಮೇಲೆ ರಾಜಹಂಸ"ದಲ್ಲಿ ಶಾಂತಿ ಪಾಠವನ್ನು ಕಲಿತೆನೆನ್ನಲಾಗಿದೆ. "ಡಾರ್ಟ್‌ಮೂರಿನ ಪರ್ವತಾವಳಿಯ ಬಳಿ"ಯಲ್ಲಿ ಚೆಲುವಿನ ನಶ್ವರತೆಯನ್ನು ಹೇಳಲಾಗಿದೆ. "ಪ್ಯಾನ್‌ಸಿ"ಯಲ್ಲಿ ಆ ಹೂವನ್ನು ದೇವ ಚಿತ್ರಿಸಿದ ಕಲೆಯೆಂದು ಹೊಗಳಲಾಗಿದೆ. "ಕನ್ನರ್ ದಿನ್ನೆಯ ಕೊನ್ನಾರ"ದಲ್ಲಿ ಹಿರಿಯ ಮೌನದ ಕಾಣ್ಕೆಯಿದೆ. "ಬಡಗಣದ ಬೆಳಕಿ"ನಲ್ಲಿ ಸನಾತನತೆಯ ದರ್ಶನವಿದೆ. "ಇಡಿಕಂ ಜಾತ್ರೆ"ಯಲ್ಲಿ ಗೊಂದಲಪುರವನ್ನು ಕಾಣಲಾಗಿದೆ. "ವಿಚಿತ್ರ"ದಲ್ಲಿ ಹಳೆಯ ಭಾರತದ ಸ್ಥಾನವನ್ನು ಹೊಸ ಬ್ರಿಟನ್ನು ಗಳಿಸಿದ್ದು ವಿಚಿತ್ರವೆಂದು ಆಶ್ಚರ್ಯಪಡಲಾಗಿದೆ. "ಶರ್ವುಡ್ಡಿ"ನಲ್ಲಿ ಧನಿಕ—ದರಿದ್ರರ ಹೋರಾಟವನ್ನು ಬಿಂಬಿಸಲಾಗಿದೆ. "ಎಡಿನ್‌ಬರೋ ಕೋಟೆಯ ತುದಿಗೆ ನಿಂತು" ಎಂಬುದರಲ್ಲಿ ಇತಿಹಾಸ ರಾಕ್ಷಸನ ವಿಕಟ ಹಾಸದ ದರ್ಶನವಿದೆ. "ಸಿಗದಿಪ್ಪ ನುಡಿಗೇಟನ್ನು ಕುರಿತು" ಎಂಬುದರಲ್ಲಿ ಕನ್ನಡಸೇವಾಕಾಂಕ್ಷೆ ಪುಟಿದೆದ್ದಿದೆ. "ಭೃಂಗಗೀತ"ದಲ್ಲಿ ನಾಡಸೇವೆಯ ಮೂಲಕ ದೇವಯಾನವನ್ನೇರುವ ಹೆಬ್ಬಯಕೆ ವ್ಯಕ್ತವಾಗಿದೆ. "—ಗೆ"ಯಲ್ಲಿ ಪುಷ್ಪವರ್ಣನೆ ಇದೆ. "ಹುಟ್ಟಿದ ದಿನ"ದಲ್ಲಿ "ಬಾಳುವೆಯನ್ನು ಕಣ್ಣೀರಿನ ಮಳೆ ತೋಯಿಸೆ ಕಂಪು ಬೀರುವಿಳೆಯಿದು" ಎಂದು ಬಣ್ಣಿಸಲಾಗಿದೆ. "ಜೀವಹಂಸ"ದಲ್ಲಿ "ಧೈರ್ಯವಿದ್ದಲ್ಲಿ ಧಾವಿಸುವುದು ದೈವಿಕತೆಯ ನಿತ್ಯನಿಯಮ"ವೆಂದು ಜೀವಕ್ಕೆ ಧೈರ್ಯವನ್ನು ಹೇಳಲಾಗಿದೆ. "ಮುಗಿಲ ಮಲ್ಲಿಗೆ"ಯಲ್ಲಿ ಮನ ಚಿಗಿತು ಮುಕ್ತಿಕೇತನರಾಗೋಣವೆಂದು ನಲ್ಲೆಯನ್ನು ಹುರಿದುಂಬಿಸಲಾಗಿದೆ. "ಅರ್ಪಣ"ದಲ್ಲಿ ಅಚಿಂತ್ಯ ಪರಮಾತ್ಮನಿಗೆ ಆತ್ಮಾರ್ಪಣ ಮಾಡಲಾಗಿದೆ.

ಈ ಗ್ರಂಥವು ವಿನಾಯಕರ ಇತರ ಕಾವ್ಯಗಳ ವೈವಿಧ್ಯ ದರ್ಶನಕ್ಕೆ ನಾಂದಿಯನ್ನು ಹಾಡಿದೆ. "ವೈವಿಧ್ಯವು ಜೀವನದ ಮಸಾಲೆ" ಎಂಬ ಆಂಗ್ಲ ಗಾದೆಗೆ ವಿನಾಯಕರ ಕಾವ್ಯ

ಗಳು (ಕಾವ್ಯಸಂಗ್ರಹಗಳು) ತನ್ನ ವಿವಿಧ ವಿಷಯ ಸಂಪತ್ತಿನಿಂದ ನಿದರ್ಶನಗಳಾಗಿ ಭಗವದ್ಗೀತೆಯಲ್ಲಿ ಅರ್ಜುನನು ವಿಶ್ವರೂಪಗಳನ್ನು ಕಂಡ ಹಾಗೆ ವಿನಾಯಕರು ನಾಲ್ಕೈದು ಸಾವಿರ ವರ್ಷಗಳ ಇತಿಹಾಸವುಳ್ಳ ಜಗತ್ತಿನ ಚರಾಚರಗಳ ಸ್ಥಿತ್ಯಂತ ಗತ್ಯಂತರ, ಮತ್ಯಂತರಗಳನ್ನು ಕಂಡು ಧೇನಿಸಿದ್ದನ್ನು ನಾವು ಅವರ ಛಂದೋಮುಕ್ತಿಂ ಲಯಲೀಲೆಯಲ್ಲಿ ಕಾಣಬಹುದು.

> The World is a glass where in we may contemplate th eternal power and majesty of God.

—"ಜಗತ್ತೊಂದು ಗಾಜು; ಅದರಲ್ಲಿ ದೇವರ ನಿತ್ಯಶಕ್ತಿಯನ್ನೂ ನಿತ್ಯರಾಜಗಾಂಭೀ ವನ್ನೂ ನಾವು ಪ್ರಣಿಧಾನಿಸಬಹುದು" ಎಂಬ ಮಾತು ವಿನಾಯಕರ ಮೂಲಮನ ಪ್ರಣಾಲಿಯನ್ನು ಗುರುತಿಸುತ್ತದೆ. ಹಾಗೇ "ಜಗತ್ತೊಂದು ಸಾಗರ; ಅದರಲ್ಲಿ ನಾ ಶಾಂತಿ ಕಾಲಗಳಿಗಿಂತ ಹೆಚ್ಚಾಗಿ ಭೀಕರ ಜಂಝಾವಾತದ ಹೊಡೆತಗಳನ್ನು ಎದುರಿ ಬೇಕಾದ ಕಾಲಗಳೇ ಹೆಚ್ಚು" ಎಂಬ ಧ್ವನಿಯೂ ಅವರ ಮಂಗಳಾಕಾಂಕ್ಷೆಯ ಭೂಿ ಯಲ್ಲಿ ಗುಪ್ತಗಾಮಿನಿಯಾಗಿ ಹರಿಯುತ್ತಿರುವುದು ಸ್ಪಷ್ಟವಾಗುತ್ತದೆ.

'ಬಾಳದೇಗುಲ'ದಲ್ಲಿ ಪೀಠಿಕೆಯು "ಮಹಾಕಾವ್ಯವು ಪದ್ಯಕಾವ್ಯದ ಒಂ ಪ್ರಕಾರವಾಗಿದೆ. ಅದು ಯಾವಾಗಲೂ ಮಹೋನ್ನತ ಕಾವ್ಯವಿರುವದೆಂದು ಹೇ ಲಾಗದು" ಎಂದಿದ್ದಾರೆ ವಿನಾಯಕರು. ಈ ಲಕ್ಷಣದ ಪ್ರಕಾರ ಬಾಳದೇಗುಲವೊಂ ಮಹಾಕಾವ್ಯ. "ಈ ಕೃತಿಯಲ್ಲಿ ಕಾಣಿಸಿದ ದರ್ಶನದ ಚಿರಂತನತೆಯು ಈ ಯುಗ ವಿಶೇಷ ಆವರಣವನ್ನು ತಳೆದು ಪ್ರಕಟವಾಗುತ್ತದೆ....ಹೀಗೆ ನೋಡಿದಾಗ ಕೃತಿಯಲ್ಲಿ ಅಭಿವ್ಯಕ್ತಿಯನ್ನು ಪಡೆದ ತಾತ್ವಿಕ ದೃಷ್ಟಿಯು ವಿವಿಧ ಕೋನಗಳ ವಿವಿಧವಾಗಿ ಕಂಡರೂ ಮೂಲತಃ ಒಂದೇ ಎಂಬುದು ಮನವರಿಕೆಯಾಗದಿರದು. ಎಲ್ಲದರಲ್ಲಿ ಮೂಲ ಆಸ್ತಿಯೆಂದರೆ ಪೂರ್ಣಜೀವನದ ಹಂಬಲ." ಪೂರ್ಣದೃಷ್ಟಿಯಿಂ ಮಾಡುವ ಪುನರ್‌ನಿರ್ಮಾಣಗಳ ಅವಶ್ಯಕತೆಯನ್ನೂ ಸಾಧ್ಯತೆಯನ್ನೂ (೧) ಮಗ ಕುಮಾರಿ, ಪತಿ, ತಾಯಿ, ತಂದೆ; (೨) ತ್ಯಾಗಿ, ದಾನಿ, ಸದಸ್ಯ, ಸಮತಾವಾ ಕ್ರಾಂತಿಕಾರ, ಕನ್ನಡಿಗ; (೩) ಸತ್ಯಾಗ್ರಹಿ, ಕರ್ಮಯೋಗಿ, ವಿಜ್ಞಾನಿ, ಜ್ಞಾ ಧಾರ್ಮಿಕ ಕಲೋಪಾಸಕ, ಕಾವ್ಯಗುರು, ರೂಪಾರಾಧಕ, ಅನುಭಾವಿ, ನಿರ್ಲಿಪ್ತ— ಎಂಬ ಕವನಗಳಲ್ಲಿ ತೋರಿಸಲಾಗಿದೆ—ಎಂದಿದ್ದಾರೆ ವಿನಾಯಕರು. ಬಾಳಿನ ಮಗ್ಗುಲುಗಳ ಸತ್ಯದ ಜ್ಞಾನ—ಪ್ರತ್ಯೇಕವಾಗಿಯೂ ಪ್ರತಿಯೊಂದಕ್ಕೆ ಸರ್ವದೊ ನಿರುವ ಸಂಬಂಧದೊಡನೆಯೂ, ಮತ್ತು ಪರಮಾತ್ಮದೊಡನೆ ಸರ್ವಕ್ಕಿರುವ ಸಂಬಂ ದೊಡನೆಯೂ ಆಗಬೇಕಾದ ಜ್ಞಾನವದು.[1] ಯಾವುದು ? ಪೂರ್ಣದೃಷ್ಟಿಯ ಉದಯ

[1] "An integral knowledge then must be a knowledge of the truth of all sid

ಬೇಕಾದ ಜ್ಞಾನ. ಅದು ಪೂರ್ಣಜ್ಞಾನ, ಸಮಗ್ರಜ್ಞಾನ, ಸಮನ್ವಿತಜ್ಞಾನ. ಪೂರ್ಣ ಜೀವನದ ವಿಕಾಸಕ್ಕೆ ಹೊಂದುವಂತೆ ಲೋಕಜೀವನವನ್ನು ರೂಪಿಸಿಕೊಳ್ಳಲು ಪೂರ್ಣ ದೃಷ್ಟಿ ಅಗತ್ಯ.

ಶಿಶುತ್ವಾದಿಗಳು[3] ಜೀವನದ ವಿವಿಧ ಮಗ್ಗುಲುಗಳು. ಮಗುತನದಿಂದ ನಿರ್ಲಿಪ್ತತೆಯ ವರೆಗಿನದು ಮಾನವನ ಚಿರಂತನವಾದ ಜೀವನೇತಿಹಾಸದ ಉತ್ತರೋತ್ತರವಾದ ಮೆಟ್ಟಿಲುಗಳು—ಎಂದು ಸ್ಥೂಲವಾಗಿ ಹೇಳಬಹುದು.

"ಬಾಳನಾಳವಳೆದು ನೋಡು" ಎಂಬುದು ಸಾಮಾನ್ಯ ಶಿಶುವಿಗೆ ಕವಿಗಳ ತಂದೆತನ ಕೊಟ್ಟ ಸಂದೇಶ. ಪಿತಾಪುತ್ರ ಸಂಬಂಧಜ್ಞಾನವು "ಮಗು"ವಿನಿಂದ ಆಗುತ್ತದೆ. "ಕುಮಾರಿ"ಯಲ್ಲಿ ಸ್ತ್ರೀದಾಸ್ಯವಿಮೋಚನದ ಸಂದೇಶವಿದೆ. "ಮದುವಣಿಗ"ನಿಗೂ ಮದುವಣಗಿತ್ತಿಗೂ "ಪ್ರೀತಿ ಲಕ್ಷ್ಮಿಗೆ ಹಿರಿಯ ದೇಗುಲವ ಕಟ್ಟಿರಿ" ಎಂಬ ಸಂದೇಶವನ್ನು ಕೊಡಲಾಗಿದೆ; "ಬಂಧನದಲುಳಿದು ...ಬಾಳಿನಂತಿಮಧ್ಯೇಯ ಫಲಿಸಬಹುದು" ಎಂಬ ಮಹಾಶಾವಾದವನ್ನು ಸ್ಪಷ್ಟವಾಗಿ ಹೇಳಲಾಗಿದೆ. "ವಿವಾಹಿತ"ನಿಗೆ "ಈಸು-ಮುಳುಗು-ಸುರಂಗದಲಿ ನಿನಗೆ ಲಲ್ಲೆ....ಮುತ್ತು ಸುರಿದಿಹ ಕಡಲಿನಾಳದಲ್ಲಿ" ಎಂಬುದು ಕವಿಗಳ ಸಂದೇಶ. "ಪತಿ"ಯು ಮುಗುದೆಯು ಮೋಕ್ಷಪ್ರದೆ ಎಂದು ನಂಬುತ್ತಾನೆ. ಅದರಿಂದಲೇ "ಮುಗ್ಧತೆಯೆಂಬುದು ದುಗ್ಧಸಾಗರವಹುದು" ಎಂದಿದ್ದಾರೆ ಅಂಬಿಕಾತನಯದತ್ತರು. ಮುಗ್ಧತೆಗೆ ನಿಷ್ಪಾಪತೆಯು ಲಕ್ಷಣ. "ಅನ್ಯಾನುರಕ್ತಪತಿ" ಮದುವೆಯಾದವಳಿಗೆ ಅರ್ಥ, ಕಾಮ, ಧರ್ಮ, ಪ್ರೇಮಗಳಲ್ಲಿ ತಕ್ಕವನನ್ನು ಅರಸಿ ಕೊಡಲು ಸ್ವಾತಂತ್ರ್ಯ ಕೊಡುತ್ತಾನೆ. ಸ್ತ್ರೀಗೆ ಸಮಸ್ವಾತಂತ್ರ್ಯ ಕೊಡಬೇಕೆಂಬ ಹಂಬಲಿನಂತೆ ವಿವಾಹ ವಿಚ್ಛೇದ—ಸ್ವಾತಂತ್ರ್ಯದ ಪಾತ್ರತೆ ಒಲ್ಲದವಳಿಗಿದೆಯೆಂಬುದೂ ಭಾರತದ ಆಧುನಿಕ ಅಭಿಪ್ರಾಯ. "ತಾಯಿ ತನಿಮನೆಯೆ ನೀ ಅಕ್ಕ ಅಕ್ಕರತೆಯೇ ಬಾ ಎನ್ನ ತಂಗಿ ಬಾ ಮುದ್ದು ಬಂಗಾರವೇ" ಎಂಬ ಅಂಬಿಕಾತನಯರ ಸಾಲನ್ನು ನೆನಪಿಗೆ ತಂದುಕೊಡುವ ಸೊಲ್ಲಿನಿಂದ ಕೊನೆಗೊಳ್ಳುವ "ತಾಯಿ"ಯಲ್ಲಿ ಮಾತೃವಾತ್ಸಲ್ಯದ ಮೋದವು ವಿದ್ಯೆ, ಸಂಪದ, ಬುದ್ಧಿ ಮುಂತಾದ ಎಲ್ಲ ಅರ್ಜನೆಗಳಿಂದಾಗುವ ಆನಂದಕ್ಕಿಂತಲೂ ಮೇಲು ಎಂಬ ಜ್ಞಾನಸಂಪಾದನೆ ತಮಗಾಯಿತೆಂದು ವಿನಾಯಕರು ಸಾರಿದ್ದಾರೆ; ಕ್ರಿಸ್ತಮಾತೆ ಕೃಷ್ಣಮಾತೆಯರು ಅಂಥ ಧನ್ಯಾತ್ಮರೆಂದು ಘೋಷಿಸಿದ್ದಾರೆ. "ಬಾಳ್ವಿಕೆಯ ಒಗಟಕ್ಕೆ

---

of existence both separately and in the relation of each to all and the relation of all to the truth of the spirit." *The Life Divine*, p. 583.

[3] ಬಾಲಸ್ತಾವತ್ ಕ್ರೀಡಾಸಕ್ತಃ ತರುಣಸ್ತಾವತ್ ತರುಣೀಸಕ್ತಃ ।
ವೃದ್ಧಸ್ತಾವತ್ ಚಿಂತಾಸಕ್ತಃ ಪರೇ ಬ್ರಹ್ಮಣಿ ಕೋಽಪಿ ನ ಸಕ್ತಃ ॥

—ಶ್ರೀಶಂಕರಾಚಾರ್ಯ

ಬಾಳುವೆಯು ಉತ್ತರವು" ಎಂಬ ಮಹಾವಾಕ್ಯವು ಅದರಲ್ಲಿ ಪ್ರಶ್ನೆಗೆ ಪ್ರಶ್ನೆಯೇ ಉತ್ತ
ಎಂಬಂತಹ ಚಮತ್ಕಾರವನ್ನು ಪಳಚ್ಚಸಿ ಹೊಳೆಯಿಸಿದೆ. ಇದ್ದಂತೆ ಇರುವುದೇ ಬು
ವಂತಿಕೆ ಎಂಬುದು ಜೀವನಸೂತ್ರ; ಅನಾವೃತ ಮನಸ್ಕತೆಯೇ ಶುದ್ಧ ಜೀವನ ಎಂ
ತಾತ್ಪರ್ಯ ಅದರಿಂದ ಹೊರಡುತ್ತದೆ. ಮೋದಕ್ಕೆ ಅಥವಾ ಆನಂದಕ್ಕೆ ಆವರಣ ಕವ
ಕೊಂಡಾಗ ಬಂಧ; ಅದಕ್ಕೆ ಆವರಣಭಂಗವಾದಾಗ ಮುಕ್ತಿ. ಮಾತೃಸಹಜ ಪ್ರೇಮ
ಅಂಥ ಆನಂದಕ್ಕೆ ಜನನಿ. "ತಂದೆ"ಯಲ್ಲಿ ಪುತ್ರವಾತ್ಸಲ್ಯ ಕೋಡಿವರಿದಿದೆ.

'ಕನ್ನಡಿಗ' ಕರುನಾಡಿನ ಜನರಲ್ಲಿ "ಹೇಳುವುದು ಶಾಸ್ತ್ರವನ್ನು, ಹಾಕುವುದು ಗಾ
ವನ್ನು" ಎಂಬ ನಡಾವಳಿಯನ್ನು ಕಂಡ; ಅರಿಷಡ್ವರ್ಗದಿಂದ ಆವೃತರಾದ ಪಂಗಡಿಗರನ
ನೋಡಿದ: "ಇತಿಹಾಸವೆಂದಿತ್ತದೆಂದೆಂದಿಗೂ ಹೀಗೆ" ಎಂಬ ಖಾರವಾದ ನಿಸ್ಸಿಯನ
ಅರಿತರೂ—ಸತ್ಯಕ್ಕೆ ಸಾವಿಲ್ಲವೆಂಬುದು ಸುಳ್ಳಾಗಿ ಹೋದರೂ ತಾನು ಸತ್ಯವಂತನಾ
ಬಾಳುತ್ತೇನೆ ಎಂದು ಶಪಥ ಮಾಡಿದನು. ಇದು ಅಪೂರ್ವ ಆಶಾವಾದ! "ಹಿಂ
ಭಾರತೀಯ " ಭಾರತದ ಅನಿವಾರ್ಯ ಆರ್ಯತೆಯ ಸಾಕ್ಷಾತ್ಕಾರ ಮಾಡಿಕೊಂಡ; ರಾ
ಭಕ್ತಿಯ ಆವೇಶದಿಂದ ಉತ್ಫುಲ್ಲನಾದ. "ಕ್ರಾಂತಿಕಾರ" ಭಾರತಾಂಬೆಗೆ ದುರ್ಗಾವತ
ತಾಳೆಂದು ಪ್ರಾರ್ಥಿಸಿದ. ಏಕೆ? ಇಂದಿನದು India that is Bharat ಆಗಿರುವ
ರಿಂದ; ಬ್ರಿಟಿಷರ ಬಂಧನ-ವಿಧಾನ ದೈಹಿಕವಾಗಿ ತಪ್ಪಿದರೂ ಮಾನಸಿಕವಾಗಿ ಇನ
ತಪ್ಪಿಲ್ಲ! "ತ್ಯಾಗಿ" ಲೌಕಿಕ ವೈಭವವು ಮುಕ್ತಿಯ ಮುಂದೆ ಕ್ಷುಪದಾರ್ಥವೆಂ
"ದಾನಿ"ಯ ಪಾವನಾತ್ಮವು "ಅರಳಲಿರುವ ಸುಹೃದಯಗಳು ತಾವೆ ತೆರೆಯುತಿ
ಕಂಗಳು ಕಂಡ ವಿಮಲಜ್ಯೋತಿಯಾಗಿ ಹಿಗ್ಗನುಗುತಿದೆ"; ಕೊಡುಗೈ ದೊರೆತನ
ಭಾರತದ ಮಹಾದರ್ಶ. "ಸದಸ್ಯ" ಸದ್ಯದ ಪ್ರಜಾಪ್ರಭುತ್ವದ ವಿವಿಧ ಸಂಸ್ಥೆಗಳ
ಬ್ರಹ್ಮರಾಕ್ಷಸಗಣ ರಕ್ತ ಹೀರುತ್ತಿರುವುದನ್ನು ಕಂಡ. "ಸಮತಾವಾದಿ" ಈವರೆಗೆ ಭಾರತ
ಬಹು ಸಂಖ್ಯಾತರು ರಾಮರಾಜ್ಯದಲ್ಲಿಯೂ ರಾಗಿ ಬೀಸುತ್ತಿದ್ದದನ್ನು ನೋಡಿದ; ಅ
ಸ್ಥಿತಿಯನ್ನು ಹೋಗಲಾಡಿಸಲು ಸಂಕಲ್ಪಿಸಿದ. "ಅಸುರ" ಹಿಟ್ಲರನ ವಿಕಟದರ್ಶ
ಮಾಡಿಸುತ್ತದೆ. "ಸತ್ಯಾಗ್ರಹಿ" ಆತ್ಮಯೋಗಸಿಯಮವನ್ನು ಹೇಳುತ್ತಾನೆ. "ಕಮ
ಯೋಗಿ" ಅಚಲಚಿತ್ತನಾಗಿ ಕರ್ಮನಿರತನಾಗಿರುತ್ತೇನೆ ಎನ್ನುತ್ತಾನೆ.

"ಸನಾತನಿ—ವಿನೂತನಿ"ಯಲ್ಲಿ ಪಾಶ್ಚಾತ್ಯನು ಪೌರಸ್ತ್ಯನಾದರೆ ಮತ
ಪೌರಸ್ತ್ಯನು ಪಾಶ್ಚಾತ್ಯನಾದರೆ ಅವರ ಅರಕೆಗಳು ಸಾಂಸ್ಕೃತಿಕವಾಗಿ ಭ
ಯಾಗುವುವು—ಎಂಬ ಅರ್ಥ ಮೂಡಿದೆ. ತಿಳಿವಿನ ಗುಟ್ಟು ಪಡುವಣದಲ್ಲಿದೆ; ಕವ
ಕಾಂಡದ ತಿರುಳು ಮೂಡಣದಲ್ಲಿದೆ—ಎಂಬುದು ವಿನಾಯಕ ಸಿದ್ಧಾಂತ. "ವಿಜ್ಞಾನಿ"
ಪ್ರಕಾರ "ಜನತೆಯಾರಾಧಕರು ರಾಜ್ಯಸೂತ್ರವ ವಹಿಸಿ ಜನಶಂಕರಿಯ ಪೂಜೆಗೆಯ
ವೆಂದು, ವ್ಯಕ್ತಿತ್ವವೇ ಸಮಷ್ಟಿಯ ಹಿರಿಯ ಗುರಿಯೆಂದು ತಿಳಿದದನ್ನು ಶಿಖರ

ಒಯ್ಯುವಂದು ವಿಜ್ಞಾನ ಮೆರೆಯುವುದು ಜ್ಞಾನದಡಿಗಲ್ಲಾಗಿ, ಸಂಸ್ಕೃತಿಯ ಮಂದಿರದ ದ್ವಾರವಾಗಿ."

"ಕನಸಿಗ" ದೈವಿಕ ಕನಸುಗಾರ. "ಧಾರ್ಮಿಕ ಕಲೋಪಾಸಕ"ನ ಕೃತಿ ಸುಂದರ, ಚಿತ್ಸುಂದರ, ಹೃತ್ಸುಂದರವಾಗಿದೆ: ಏಕೆಂದರೆ ಚೆಲುವು ಗೆಯ್ಮೆಗಳ ಭೇದ ಭಾವ ಅವನಲ್ಲಳಿದಿದೆ. "ಕಲೋಪಾಸಕನಾದ ಸುಧಾರಕ" ನವಾಣಿಯು "ಬೆಳುವಲನಾಡೊಳಿಹ ಕೆಚ್ಚು ಕಾಲ್ಮಲಿಗಿಹ ನಿರ್ಭರತೆಯು ಶ್ವೇತದೀಪದಲ್ಲಿಹ ಸ್ವಚ್ಛಂದವೆಲ್ಲವೂ ಮುಪ್ಪುರಿಗೊಸ್ಸೃತ ಹರಿಯುತಿಹವು;" ಏಕೆಂದರದು ಲೋಕರೂಢಿಗಳನ್ನು ನೆಲಕುರುಳಿಸಿ ನಿಲ್ಲುತ್ತದೆ—ಅವು ವ್ಯಕ್ತಿತ್ವವನ್ನು[3] ನುಂಗುತ್ತಿದ್ದುದರಿಂದ. "ಕಲೋಪಾಸಕನಾದ ಉಪದೇಶಕ"ನು "ಹಿರಿ ಹುಮ್ಮುಸದೀ ಗಾನದಿ ನಟರಾಜನ ನಾಟ್ಯದಲ್ಲಿ ಸ್ವಾರ್ಥ ಲೋಲುಪತೆಯು ಬಿಸುಟು ನಾವು ಧುಮುಕುವಾ; ಕಾಮದ್ವೇಷದಿಂದ ಧರೆಗೆ ಬಂದೊದಗಿವ ಗಾಯವ ಮಾಯಿಸಲೊಲುಮೆಯ ಮಂತ್ರೋದಕಗಳನ್ನು ಚಿಮುಕುವಾ" ಎನ್ನುತ್ತಾನೆ. "ರೂಪಾರಾಧಕ"ನಿಗೆ "ಬಾಳಿನ ಕಿಲ್ಮಿಷವೆಲ್ಲವ, ಕುರೂಪವನು ತೊಡೆದು ಹಾಕುತಂಗಾಂಗದ ಸೌಂದರವನ್ನು ಹೊರಸೂಸುವುದೆಂದೋ? ಒಳಹೊರಗನು ಮೈಮನವನು ಮನೆಮಠವನು ಚೇತನವನು ಬೆಳಗಿಸಿ ಬೆಳಕಿನ ಹಾಸಿಗೆಯನು ಹಾಸುವದೆಂದೋ?" ಎಂದು ಸವಾಲು ಹಾಕಲಾಗಿದೆ. "ಸಾಹಿತ್ಯಾಚಾರ್ಯ"ನಿಗೆ ಸ್ನೇಹದ ಭರವಸೆಯನ್ನು ಕೊಡಲಾಗಿದೆ. "ಸಾಕ್ಷಿಕ"ನನ್ನು "ನಿನ್ನ ಬಾಳ ಸುಖದುಃಖವ ಶೋಧಿಸುತ್ತ ನಿರ್ಲಿಪ್ತನ ಸಿದ್ಧಿಯನ್ನು ಪಡೆಯುತಾದೆ ಸಾಕ್ಷಿತತ್ಪರ" ಎಂದು ಕೊಂಡಾಡಲಾಗಿದೆ. "ಕಾವ್ಯಗುರು"ವಿನ ಬಗೆಗೆ "ಇರಲಿ ನಿನ್ನ ದಿವ್ಯಗಾನ ಕರ್ಣಾಟದ ಕರ್ಣದಲ್ಲಿ ನಿನದಿಸುತ್ತ" ಎಂದು ಪ್ರಾರ್ಥಿಸಲಾಗಿದೆ. "ಉದಾರಚರಿತ"ನಿಗೆ "ತೃಷ್ಣೆಯೆಲ್ಲ ಹಿಂಗುತಿರಲು ಶುಕ್ಲಕೃಷ್ಣ ಪಕ್ಷವಿರದ ತಿಂಗಳೀವ ಮಂಗಳದಾ ಬರವನೆದುರು ನೋಡುವೆ; ಉದರಾಗ್ನಿಯ ಕಪ್ಪು ಕಲೆಯನೆಲ್ಲ ಕಳೆದ ಚಂದ್ರಮನಿರೆ ತಪ್ಪಲಿಳಿದು ಜನ್ಮವಿತ್ತ ಕಡಲ ಮಡಿಲ ಕೊಡುವೆ" ಎಂಬ ಭರವಸೆಯನ್ನು ನೀಡಲಾಗಿದೆ.

"ಕಣಸಿಗ"ನಿಗೆ "ಶರಣನ ಶಾರಣ್ಯದ ಪರಮೈಕ್ಯವ ತರಬಹುದು" ಎಂಬ ಆಶ್ವಾಸನವನ್ನು ಕೊಡಲಾಗಿದೆ. "ಕವಿ-ಅನುಭಾವಿ"ಗಳಿಬ್ಬರ ದೃಷ್ಟಿಯೊಂದೆ, ಆದರೆ ಅದೃಷ್ಟ ಬೇರೆ—ಎಂದು ಅವರನ್ನು ಗುರುತಿಸಲಾಗಿದೆ. "ದುಃಖಿಗೆ ಮಾಗುವ ಮಾರ್ಗವನ್ನು ಸೂಚಿಸಲಾಗಿದೆ. "ನಿರ್ಲಿಪ್ತ"ನನ್ನು "ತನಗಿಂತ ಮುಂದಿನ್ನು ಬೆಳಕಿಲ್ಲವೆನಲವನು ತನಿವಾಗಿ ಕವಿಯುವನು ಜಗವ ಭರದಿ" ಎಂದು ಎಚ್ಚರಿಸಲಾಗಿದೆ. "ಭಕ್ತ"ನನ್ನು "ಕಾಯುನ್ನ ನೀ ಭೂಮ, ನಾನು ಅಲ್ಪ" ಎಂದು ಚಿತ್ರಿಸಲಾಗಿದೆ.

[3] "Those that nourish the hope of winning deliverance without losing individuality are doomed to disappointment"—*Maha yoga*, p. 90

"ಜ್ಞಾನಿ"ಯನ್ನು "ಈಸ ಬಲ್ಲವರತ್ತ ಮಾರುಗೆಯ್ಯಿಂದೀಸಿ ಸೀಸು ನಿಂತ್ರೆದ
ಮುನ್ನುಗ್ಗಿ ಸಾಗಿದರು" ಎಂದು ಕೊಂಡಾಡಲಾಗಿದೆ. "ಆಳ್ವಾರ"ನನ್ನು ಕುರಿ
"ಚಾರಿತ್ರ್ಯದ ಮಹತಿಯನ್ನು ನಿನ್ನ ಚರಿತದಲ್ಲಿ ಕಂಡೆ" ಎಂದು ಮೆಚ್ಚಿಗೆಯನ್ನು ವ್ಯ
ಪಡಿಸಲಾಗಿದೆ. "ಮುಕ್ತಜೀವಿಗಳು" "ಮನುಕುಲವನ್ನೆ ಮುನಿಕುಲವನಾಗಿಸುವ ಅ
ಮಾನವರ ಕರ್ಮಶಾಲೆ"ಗಳೆಂದು ವರ್ಣಿಸಲಾಗಿದೆ.

ಬಾಳಿನ ವಿವಿಧ ಮಗ್ಗುಲುಗಳನ್ನು ಮೇಲಿನಂತೆ ಕಂಡ ವಿನಾಯಕರು ಹೇಳಿಕೊ
"ಮನಾಚೇ ಶ್ಲೋಕ" ಇತಿ ಶ್ರೀ ಮಾಡುವುದು ಹೀಗೆ:

ನಂಬದಿರು ಒಂದೆ ಧರ್ಮವ, ಒಂದೆ ಮಾರ್ಗವನು
ಇಂಬುಗೊಡದಿರು ಯಾವುದೊಂದೆ ಶ್ರುತಿಗೆ!
ಕಂಬನಿಯ ಮಿಡಿಯದಿರು ನನ್ನದೇನಿಲ್ಲೆಂದು:
ಇಂಥ ಹಮ್ಮೆಳೆಯುವುದು ನಿನ್ನ ಚ್ಯುತಿಗೆ.
ತಕ್ಕೆ ಬೀಳಾಗಸಕೆ! ಎಲ್ಲ ದರ್ಶನಗಳಿಗೆ
ನೆಲವೆ ಒರೆಗಲ್ಲೆಂಬ ಶ್ರದ್ಧೆ ಬರಲಿ!
ಬಯಲಾಗು ಮೂಲೆ ಗುಂಪಾಗದಿರು! ಬಾನ್ನೆಲದ
ಪರಕೆಗಳು ಅಡಿ—ಮುಡಿಯ ಕಾಯುತಿರಲಿ!

ವಿನಾಯಕರ ಮನಸ್ಸಿನಲ್ಲಿ ತೆರೆದ ಹಾಗೆ ತೆರಪಿದೆ ಎಂಬುದಕ್ಕಿದು ಸಾಕ್ಷಿ.
ಮೇಲಿನ ಕವನಗಳಿಂದ ಜಗದ ವಿವಿಧತೆ[4]ಗಳನ್ನು ಒಳಗೊಂಡ ಪೂರ್ಣದೃಷ್ಟಿ
ಸರ್ವಗ್ರಹ ಅಥವಾ ವಿಶ್ವಕೋಶವು ಕವಿ ಮನದ ಸ್ವರೂಪವೆನ್ನಿಸಿದ್ದು ಗೊತ್ತಾಗುತ್ತ
ಈ ವಿಶ್ವಕೋಶದ ಸಾರಾಂಶವು ಸಾತ್ವಿಕತೆಯೇ ಆಗಿರುವುದು "ಸತ್ವೋದ್ರೇಕ
ಖಂಡಃ ಸ್ವಪ್ರಕಾಶಾನಂದ ಚಿನ್ಮಯಃ" ಎಂಬುದನ್ನು ನೆನಪಿಗೆ ತಂದುಕೊಡುತ್ತ
ವಿನಾಯಕರ ಕವಿವ್ಯಕ್ತಿತ್ವವು[5] "ಅಹಂ ನಿರ್ವಿಕಲ್ಪೋ ನಿರಾಕಾರ ರೂಪೀ ವಿಭುತ್ವಾ
ಸರ್ವತ್ರ ಸರ್ವೇಂದ್ರಿಯಾಣಾಂ" ಎನ್ನುವುದು ಇಲ್ಲಿಯ ವಿಕಲ್ಪಾನುಭವಗಳ ವಿ
ಗಳಿಂದ ಧ್ವನಿತವಾಗುತ್ತದೆ. ಮಿತ್ರಸಂಮಿತಿಯು ವಿನಾಯಕ ಕಾವ್ಯದ ಮ
ಸೂತ್ರ. ಮೈತ್ರಿ, ಕರುಣೆ, ಮುದಿತ, ಉಪೇಕ್ಷೆಗಳು ಯೋಗಿಗುಣಗಳು. ಅವುಗಳ
ಇವರ ಕವನಗಳು ಬೆಟ್ಟನಲ್ಲಿ ಸೂಚಿಸುವುದರಿಂದ ಹೊಸಗನ್ನಡದ ಇತಿಹಾಸ
ಇವರೊಂದು ಸಾಂಸ್ಕೃತಿಕ ಮೈಲುಗಲ್ಲಾಗಿದ್ದಾರೆ ಎಂದು ವಿದಿತವಾಗುತ್ತದೆ. ಇತಿಹ

[4] "It is wrongly said by the ignorant that the sage sees differences,
enjoys non-difference in them. The truth is that he does not see differenc
all"—*Mahā yoga*, p. 174

[5] "The equal vision of the sage is just the recognition that the One S
who is consciousness, in present in all that appears"—*Maha yoga*, p. 173

ಂದ ಮನುಷ್ಯನಾಗುವನೋ? ಮನುಷ್ಯನಿಂದ ಇತಿಹಾಸವಾಗುವುದೋ? ಎಂಬ ನ್ಯೋನ್ಯಾಶ್ರಯದ ಒಡಪು ವಿನಾಯಕಸ್ವರೂಪವುಳ್ಳದ್ದು.

'ದ್ಯಾವಾ ಪೃಥಿವೀ' ಎಂಬ ಕವನ ವಿನಾಯಕರ ನವೀನ ಕೃತಿ. "ನೀರದವು ನೆಲದ ಮೇಲೆ ನಿಂತು ಆಕಾಶದತ್ತ ಎಸೆದ ನೋಟ. ಇಳಾಗೀತವು ಬಾನತ್ತಣಿಂದ ನೆಲವತ್ತ ಬೀರಿದ ನೋಟ...ನೆಲ ಮತ್ತು ನೀರು ಪರಸ್ಪರರಿಗೆ ಪೋಷಕ ಸಾಮಗ್ರಿ ಆಗಿವೆ...ನೀರದವು ನನ್ನ ಉದ್ಧಾರದ ಅಭೀಪ್ಸೆಯನ್ನು ವ್ಯಕ್ತಗೊಳಿಸಿದರೆ, ಇಳಾಗೀತವು ಒಂದು ಅವತಾರದ ಸೂಚನೆಯನ್ನು ಮಾಡುವುದು. ಇಲ್ಲಿಯೂ ನಾವು ಯಾವುದೋ ಐತಿಹಾಸಿಕ ವಾಸ್ತವಿಕತೆಯಿಂದ ತೊಂದರೆಗೀಡಾಗುವುದು ಅನವಶ್ಯಕ. ಕವಿ ಕೌಶಲವು ಅದನ್ನು ಹೇಗೆ ಬಳಸಿಕೊಂಡಿದೆ ಇದೇ ಮುಖ್ಯ....ನೀರದಕ್ಕೂ ಇಳಾಗೀತಕ್ಕೂ ತಾತ್ವಿಕ ನಂಬುಗೆಯು ಬೆನ್ನು ಹುರಿಯಾಗಿ ಶ್ರೀ ಅರವಿಂದರ ಯೋಗ ದರ್ಶನವು ನಿಂತಿದೆ. ಈ ದರ್ಶನವು ಕನ್ನಡ ಕಾವ್ಯದ ಪರಿಣತಿಗೂ ಹೊಸತಲ್ಲ, ಹೊರತಲ್ಲ"—ಎಂದ ಮುನ್ನುಡಿಕಾರರ ಮಾತು ದಿಟ.

"ಜೀವನವೊಂದೇ ಜೀವಿತವೆದುರಿನ ಗುರಿಯು" ಎಂಬ ನೀರದದ ಮಾತು "ಬಾಳ ದೇಗುಲ"ದಲ್ಲಿ ಬಂದಂತೆಯೇ Begging the question ಪ್ರಶ್ನಯಾಚಕ ಅಲಂಕಾರೋಕ್ತಿ. "ನೈಜವು ಪರಿವರ್ತನೆ, ಮರಣವು ಮಾಯೆ" ಎಂದ ಶಿಲ್ಪಿಗಿಲ್ಲಿ ಮತದಾನ ಮಾಡಲಾಗಿದೆ. "ಇಂತಿದೆ ಭೂಮಿ, ಇಂತಿದೆ ವ್ಯೋಮ; ಇಂತಿದೆ ನೀರದ ಸೃಷ್ಟಿ. ಭೂಮಿವ್ಯೋಮಗಳನಾಳಲು ಬೇಕು ನಾರದನುಜ್ವಲ ದೃಷ್ಟಿ" ಎಂಬಲ್ಲಿ ನಾರದನ ಪ್ರತೀಕವು ಮಾನವ—ದೇವರ ಸಂಪರ್ಕವನ್ನು ಸೂಚಿಸುತ್ತದೆ. "ದಾರ್ಶನಿಕರು, ತಾತ್ವಿಕ ಮಾಯಾವಾದಿ—ಅರ್ಥವರ್ಥ ಪ್ರಜ್ಞೆಯಲಿ ಪಳಗಿದವರು, ಅನುಭವದರ್ಥಕೆ ತತ್ತ್ವದರ್ಥವನ್ನು ಕೀಲಿಸಿ ತೇಲಲು ಬಯಸಿ ಮುಳುಗಿದವರು[6]"—ಎಂದು ವಿನಾಯಕರು ಹೇಳಿದಾಗ "ಇದು ನನ್ನ ಶ್ರದ್ಧೆ, ಮತ್ತು ಆದುದರಿಂದ ಇದೊಂದೇ ನಿಜ, ಮತ್ತು

[6] 'The teaching that the world in a māya only states a principle known to and admitted by all, namely that things are not what they seem. Modern science, especially Physics, has gone for towards confirming it as the fundamental principle of matter. where as the Reality is One indivisible unchangeable, untainted, formless, timeless and spaceless; our minds picture It as manifold, broken up into an infinite number of fragments, subject to change, tainted by desire, fear and sorrow, confined in forms, and limited in time and space. This rather long and complicated statement is summarised by the statement that all this is *maya*. The school of Vedanta which accepts this teaching is called Advaita.

"Those that are repelled by this teaching are not asked to accept it. It is offered only to those that have realised that the cause of bondage is ignorance, and earnestly desire to get rid of it.

ಇದನ್ನು ಸ್ವೀಕರಿಸುವುದು ಎಲ್ಲರ ಕರ್ತವ್ಯ—ಈ ಪ್ರಕಾರ ತನ್ನ ಶ್ರದ್ಧೆಗೆ ತ
ಅಂಟಿಕೊಳ್ಳುವುದು ಅಹಂಕಾರ, ಅಸಹನೆ. ಅಹಂಕಾರವೇ ಬಂಧನ ಮತ್ತು ಅದರ
ನರಳುವ ಪದಾರ್ಥ" ಎಂಬ ರಮಣ ಮಹರ್ಷಿಗಳ ಸಾವಧಾನ ನೆನಪಾಗುತ್ತ
"ಇಳಾಗೀತ"ದಲ್ಲಿ ನೆಲವೇ ಆಧಾರವೆಂದು ಸಂದೇಶವನ್ನಿತ್ತಿರುವುದೂ ಲೌಕಿಕ ವ್ಯ
ದೃಷ್ಟಿಯಿಂದ ನೆಲವನ್ನು ಬಿಡಲಾರದ ಅಸಂಖ್ಯಾತ ಜನರ ಆಸಕ್ತಿಯೋಗವ
ನಿರ್ವಚಿಸುತ್ತದೆ. ಆದರೆ ವಿನಾಯಕರ ಭೂಮೋದ್ದೇಶವನ್ನು ಹಿನ್ನೆಲೆಯನ್ನಾಗಿ ತೆಗೆ
ಕೊಂಡರೆ ಈ ಆಸಕ್ತಿಯೋಗವೇ ಅನಾಸಕ್ತಿಯೋಗ ಅಥವಾ ನಿಷ್ಕಾಮಕರ್ಮ ಇ
ಜೀವನ್ಮುಕ್ತನಮಾಡುವಂತೆ ಅಮುಕ್ತರಿಗೆ ತೋರುವ ಕರ್ಮ—ಎಂದಾಗುತ್ತದೆ. ಏಕೆಂ
ವ್ಯಕ್ತ್ಯಹಂಕಾರ—ವ್ಯಕ್ತಿ ಮಮಕಾರಗಳು ಬಂಧಹೇತುಗಳಾದರೆ ಬ್ರಹ್ಮಾಹಂಕಾ
ಬ್ರಹ್ಮಮಮಕಾರಗಳು ಬಂಧಹೇತುಗಳಲ್ಲ. ವೇದಾಂತದ ಶಬ್ದಗತಭಿನ್ನಾಭಿಪ್ರಾ
ಗಳೆಲ್ಲವನ್ನೂ ಸಮರಸಗೊಳಿಸುವ ಒಂದೇ ಒಂದು ಉಕ್ತಿಯೆಂದರೆ :

ಬ್ರಹ್ಮಾರ್ಪಣಂ ಬ್ರಹ್ಮಹವಿರ್ ಬ್ರಹ್ಮಾಗ್ನೌ ಬ್ರಹ್ಮಣಾಹುತಂ
ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮಕರ್ಮ ಸಮಾಧಿ ನಾ !

ಇಲ್ಲಿ ಭಕ್ತಿಯ ಸಮರ್ಪಣಭಾವವಿದೆ, ಯಜ್ಞದಿಂದ ಅಭಿವ್ಯಕ್ತವಾಗುವ ಸ್ವಾ
ತ್ಯಾಗದ ಭಾವವಿದೆ, ಬ್ರಹ್ಮೋಪಾಸನೆ—ಬ್ರಹ್ಮಕರ್ಮಗಳ ಬ್ರಹ್ಮಗತಿಯ ಭಾವವಿ
"ಸರ್ವಂ ಖಲ್ವಿದಂ ಬ್ರಹ್ಮತಜ್ಜಲಾನಿತಿ ಶಾಂತ ಉಪಾಸೀತ" ಎಂಬುದೇ ಉಪನಿಷತ್ತಿ
ಮಹಾಸಂದೇಶವಲ್ಲವೇ ? ಉಳಿದ ಮಾತುಗಳೆಲ್ಲವೂ ಇದರ ವಿವಿಧ ವ್ಯಾಖ್ಯಾನಗ
ವೇದಾಂತ ವಿಜ್ಞಾನ ಸುನಿಶ್ಚಿತಾರ್ಥರಾದ ವಿನಾಯಕರ ಇಂಗಿತವು ಕಾವ್ಯಮಾಧ್ಯಮ
ಮೂಲಕ ತಾತ್ಪರ್ಯತಃ ಹೀಗೆ ಧ್ವನಿತವಾಗಿರುವುದು ಹೆಚ್ಚು ಸಂಭವ. ಈ ಮಹಾಕಲ್ಪ
ಗಿಂತ ಹೆಚ್ಚು ದೊಡ್ಡದಾದ ಕಲ್ಪನೆ (Idea) ಯನ್ನು ಯಾವಾಗಲೂ ಯಾರೂ ಮಾಡಿ
ಬ್ರಹ್ಮಸ್ಥಿತಿಯು ಅತೀಂದ್ರಿಯ, ದೇಶಕಾಲಾತೀತ, ಪೂರ್ಣಸತ್ಯ, ಪೂರ್ಣಜ್ಞಾ
ಬ್ರಹ್ಮವು ಇತಿಹಾಸ–ಸಂಸ್ಕೃತಿಗಳನ್ನು ತನ್ನ ವ್ಯಾಪ್ತಿಯೊಳಗೆ ಇಟ್ಟುಕೊಂಡಿರ
ಅಪ್ರಮೇಯ ಪದಾರ್ಥ. ಪ್ರಪಂಚದ ಭಾಷೆ—ಪರಿಭಾಷೆ—ಕಲ್ಪನೆ—ಸಿದ್ಧಾ
ಗಳೆಲ್ಲವೂ ತದಂತರ್ಗತ.

Brahman is the impersonal pantheistic world—soul, t
Absolute, union with which is the highest goal of t

"If the world be real as such, there would be no unchangeable Reality, w
out which there can be no Deliverance.

"This world, which you prove to be real, is all the time mocking at you
seeking to know it, without your first knowing yourself."

—*Mahā yoga*, pp. 55, 56, 57.

upanishads and vedic thinking in general. It is occasionally identified with Atman or made the exclusive reality, thus laying the foundation for a deep mystic as well as rational insight into the connaturalness of the human and divine and an uncompromising monism which gave its impress to much of Hindu thinking (*The Dictionary of Philosophy*, p. 41).

ಛಾಂದೋಗ್ಯದಲ್ಲಿ ಹೇಳಿದಂತೆ ಇಳೆಯು ಅನ್ನತತ್ವ. ಅದು ಬ್ರಹ್ಮಾಂತರ್ಗತ, ಬ್ರಹ್ಮದ ಹೊರಗಲ್ಲ. ಬ್ರಹ್ಮವೆಂಬುದು ಭೂಮ, ಪೃಥಿವಿಯು ಅಲ್ಪ. ಬ್ರಹ್ಮಾನಂದಕ್ಕಿಂತ ಭಿನ್ನವಾದ ಇಳಾನಂದವಿಲ್ಲ. ಆದುದರಿಂದ ಪ್ರಮೇಯವಾದ ಇಳಾದಿ ಯಾವ ಪದಾರ್ಥವೂ ಬ್ರಹ್ಮ ಪ್ರತಿಸ್ಪಂದ್ಯಿಯಾಗದು. ಆದುದರಿಂದ ಇಳಾಗೀತದ ಕೊನೆಯ ನುಡಿಯಲ್ಲಿ ಹೇಳಿದ ಬ್ರಹ್ಮ supermind ಈಶ್ವರ, ಸಗುಣ; ನಿರ್ಗುಣ ಬ್ರಹ್ಮವಲ್ಲ, ಸತ್ಯ-ಜ್ಞಾನ-ಅನಂತವಲ್ಲ, ಸಚ್ಚಿದಾನಂದವಲ್ಲ—ಎಂದು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಈಶ್ವರತ್ವ ಅಥವಾ ದೇವತ್ವವು ಬ್ರಹ್ಮವ್ಯಾಪ್ತಿಯುಳ್ಳದ್ದಲ್ಲ; ಪರಮಬ್ರಹ್ಮದ "ನೈರ್ಗುಣ್ಯ" (ಶೂನ್ಯ"ಗುಣ"ವತ್ತೆಯಲ್ಲ) ಔಪನಿಷದಿಕ (ಯೋಗದ) ಕಲ್ಪನೆಯ ಪರಾಕಾಷ್ಠೆ.

ಇಳಾಗೀತವನ್ನು ಮಣ್ಣಿನ ಮಗನ (son of the soil) ದೇಶಾಭಿಮಾನಗೀತವೆಂಬ ದೃಷ್ಟಿಯಿಂದ ನೋಡಿದರೆ ಅದರ ಕಾವ್ಯಸೌಂದರ್ಯ ಚೆನ್ನಾಗಿ ಹೊಳೆಯುತ್ತದೆ.

ಆತ್ಮಪಕ್ಷಿ ರೆಕ್ಕೆಯೆತ್ತಿ ಸಪ್ತಲೋಕಗಳನು ಸುತ್ತಿ
ಅಕ್ಷರದಾ ಧ್ಯಾನದಲ್ಲಿ ಬ್ರಹ್ಮದೇಕತಾನದಲ್ಲಿ
ಕಲ್ಪಾಂತದವರೆಗೆ ನಿಂದು ಯುಗ ಯುಗಗಳ ಕಳೆದರೂ
ಕೋಟಿಸೂರ್ಯರ ಸಮಪ್ರಭೆಯೊಳದರ ಜ್ಯೋತಿ ಹೊಳೆದರೂ
ಮರಳಿ ಮತ್ತೆ ನಮ್ಮ ಧರೆಗೆ ಓಗೊಡುವದು ಜಗದ ಕರೆಗೆ.
ಮರ್ತ್ಯದಲ್ಲಿ ನಿಂತು ಗೆಲ್ಲು, ಮರ್ತ್ಯವೆ ಒರೆಗಲ್ಲು ;
ನೆಲವೇ ಆಧಾರ, ನೆಲವೇ ಆಧಾರ !

ಒಂದು ಕಲ್ಪಕ್ಕೆ ೪೩೨ ಕೋಟಿ ವರ್ಷಗಳು. ಆದುದರಿಂದ ಅದು ಕಾಲಾತೀತತೆ ಅಥವಾ ನಿತ್ಯತೆಯಲ್ಲ. ಮುಕ್ತಿಯು ನಿತ್ಯಾವಸ್ಥೆ. ಅದರಲ್ಲಿರುವ ಮಾತ್ರ ಕರ್ಮವಲ್ಲವೆಂದು—ಅಮುಕ್ತರಿಗೆ ಕರ್ಮವೆಂದು ತೋರುವ—ಕರ್ಮವನ್ನು ಮಾಡಬಲ್ಲ. ಈಶ್ವರನು ಅಂಥ ಕರ್ಮಿ: ಅವನದು ಬ್ರಹ್ಮಕರ್ಮ ಅಥವಾ ಜೀವನ್ಮುಕ್ತನ ಕರ್ಮ. ಅದಕ್ಕೆ ನೂರಾರು ಇಳೆಗಳನ್ನೊಳಗೊಂಡ ಸಾವಿರಾರು ಸೂರ್ಯ-ನಕ್ಷತ್ರ-ನೀಹಾರಿಕೆಗಳಿಂದ ಕೂಡಿದ ಬ್ರಹ್ಮಾಂಡವು ಕಾರ್ಯಕ್ಷೇತ್ರ. ದೇವಲೋಕವಾಸ ಮತ್ತು ಪ್ರತ್ಯಾಗಮನಗಳು "ದೇವಯಾನ"ವೆಂದು ಈಶಾವಾಸ್ಯ ವರ್ಣಿಸಿದ ಮಾರ್ಗ. ಅದಿಲ್ಲಿ ನಮೂದಿಸಲ್ಪಟ್ಟಿದೆ.

ದಿವ್ಯಜೀವನವು ದೇವಲೋಕವಾಸ. ದೇವತೆಗಳು ಅನೇಕ. ದಿವ್ಯತೆಯೊಂದು ಅವು
ಸಾಧಾರಣ ಧರ್ಮ. ದೇವಲೋಕವು ಅತಿಮಾನಸ ಪ್ರಜ್ಞೆಯ ಒಂದು ಅಂತಸ್ತು.

'ಉಗಮು'ದ ಮೊದಲನೆಯ ಕವನವಾದ "ಅರ್ಪಣ"ದಲ್ಲಿ ಸಾಹಿತ್ಯಚರಿತ್ರೆ
ದೃಷ್ಟಿಯಿಂದ ಹೊಸದೆನ್ನಿಸುವ ಮುಕ್ತಛಂದದ ಪ್ರತಿಪಾದನೆ ಬಂದಿದೆ. ಮು
ಛಂದವು ಛಂದೋಮುಕ್ತವಾದ ರಚನಾ ವಿಧಾನ. ಅದು poetic prose—ವ
ಸಾಹಿತ್ಯದಂತೆ. ಬಾಣಭಟ್ಟನ ಕಾದಂಬರಿ ರಸವತ್ತಾದ ಗದ್ಯವಾಗಿರುವಾಗ ಈ ಗದ್ಯ
(ಮತ್ತು ಇಂಥ ಇತರ "ಕಾವ್ಯ—ಕವನ"ಗಳಿಗೆ) ಪದ್ಯವೆಂದು ಕರೆಯುವುದರಿಂದ ಯಾ
ಲಾಭವೂ ಇಲ್ಲವಾದರೂ ಹತ್ತು ಜನ ಹಾಗೆ ಕರೆದು ಒಂದು ನವ್ಯತೆಯನ್ನು ತೋ
ದ್ದಾರೆ. "ವಿಹಂಗಮ ನೋಟ"ದಲ್ಲಿ ಸುಂದರವಾದ ಸ್ವಭಾವೋಕ್ತಿಗಳ ಮೂಲಕ
ಯನ್ನು ವರ್ಣಿಸಲಾಗಿದೆ. ಚೆಲುವಿನೊಳಗೆ ಧುಮುಕಿ ಸತ್ಯವನ್ನೂ ಅದರಲ್ಲಿ
ಮಂಗಳವನ್ನೂ ಕಾಣೆಂಬುದು ಕವಿಗಳಿತ್ತ ಸಂದೇಶ. "ನೂತನ ಪುರಾಣ"ದಲ್ಲಿ ಪ್ರ
ಯೊಂದು ನದಿಗಳನ್ನು ಹೆಸರಿಸಿ ಅದನ್ನು ಅಪೌರುಷೇಯವೆಂದು ಕರೆಯಲಾಗಿ
ವೇದದ ಕೀರ್ತಿ ಈಗ ಜಡಪ್ರಕೃತಿಗೆ ಸಂದಂತಾಯಿತು. "ಆರ್ಥರ್ ಆಸನ"ದಲ್ಲಿ "ಬ
ಚೆಲುವಿನಲ್ಲಿ ನಿಸರ್ಗ ತಲೆಯೆತ್ತಿದೆ" ಅದ್ಭುತವನ್ನು ವಿವರಿಸಲಾಗಿದೆ; ಅನ
ಮಾನವ ಚೈತನ್ಯದ ಪೌರುಷಸೃಷ್ಟಿಯನ್ನು ಅಭಿಮಾನದಿಂದ ಹೊಗಳಲಾಗಿದೆ. "
ನಿಲುಕಿದಾಗ" ಎಂಬುದರಲ್ಲಿ ಕೃಷ್ಣೆಯ ಉಗಮದ ಬಗ್ಗೆ ವಿವಿಧ ಪ್ರವೃತ್ತಿ—ವೃತ್ತಿ
ವರಿಗೆ ವಿವಿಧ ಆಲೋಚನೆಗಳುಂಟಾದುದರ ವಿವರಣೆಯಿದೆ. ಜಡಪ್ರಕೃತಿಯ
ಪ್ರಾಣಮಯತೆ ಇದೆ ಎಂಬುದು ಕವಿಯ ಕಾಣ್ಕೆ; ಅವನ ಮನೋಮಯದರ್ಶ
"ಶಿವರಾಯ"ನಲ್ಲಿ ಶಿವಾಜಿಯ ಸಾಹಸ ವರ್ಣಿತವಾಗಿದೆ. "ಯುಗಾಂತರ"ದಲ್ಲಿ ಮದಿ
ಪಾನದ ದಾಸ್ಯಯುಗ ಹೋಗಿ ನೀರಾಪಾನದ ಸ್ವಾತಂತ್ರ್ಯಯುಗ ಬಂದಿದೆಯೆಂ
ಆದರೆ ಆ ಎರಡು ಪಾನಗಳೂ ಕೃಷ್ಣಾನೀರಪಾನದಷ್ಟು ರಸವತ್ತಾಗಿಲ್ಲ ಎಂದೂ ಹ
ಲಾಗಿದೆ. "ವಿಷಮಾವರಣ"ದಲ್ಲಿ ಹಿಂದಿನ ಪದ್ಯದಲ್ಲಿ "ತನ್ನ ಕಣ್ಣು ಕಳೆದುಕೊ
ಭಾರತೀಯನಿಗೆ ಶಸ್ತ್ರಕ್ರಿಯೆ ಗೆಯ್ದು ಆಂಗ್ಲ ಕಣ್ಣನ್ನಿತ್ತ" ಎಂದು ಹೇಳಿದ್ದನ್ನು ಪ್ರತಿಭಟ
ವಂತೆ "ಇದು ಜೀವನವೆ? ಇದು ಸ್ವಾತಂತ್ರ್ಯವೆ? ಇದು ಸ್ವರಾಜ್ಯವೆ?" ಎ
ಸವಾಲುಗಳನ್ನು ಹಾಕಲಾಗಿದೆ. "ವಿಶ್ವಸಮಸ್ಯೆಯಾದ ಮಗು"ವಿನಲ್ಲಿ "ಅಜ್ಞಾ
ಯೊಬ್ಬ ಶಿಶು" ಎಂದ ಮನುವಿನ ಮಾತನ್ನು ಪುಷ್ಟೀಕರಿಸುವ ಭಾವವಿದೆ; ಭಾ
ಯನು ಆತ್ಮಜ್ಞಾನ ವಿಹೀನತೆಯಿಂದ ಮುಕ್ತನಾಗಬೇಕೆಂಬ ಹಂಬಲಿದೆ. "ಮ
ಗೂಸಿನ ತಾಯಿ"ಯಲ್ಲಿ ಭಾರತದ ಬಡತನದ ಬಗ್ಗೆ ಕನಿಕರವನ್ನು ವ್ಯಕ್ತಪಡಿಸಲಾಗಿ
"ಸಾಧಕನಿಲ್ಲದ ಸಮಾಜ"ದಲ್ಲಿ ಸಾಧಕರು ಹುಟ್ಟಲೆಂಬ ಹಾರಯಿಕೆಯಿದೆ. "ಪೂಜಾ
ಯಲ್ಲಿ ಪೂಜಾರಿಯ ಹೊಟ್ಟೆ ಹೊರಕತನವನ್ನು ಟೀಕಿಸಲಾಗಿದೆ. "ಅನ್ಯ

ನಾಲಾಕಲ"ದಲ್ಲಿ "ಹೋಳು ಹೋಳಾಗಿಹುದು, ಆಳು ಬಾಳಗಿಹುದು" ಎಂದ ಅಂಬಿಕಾತನಯದತ್ತರ "ಮೂವತ್ತುಮೂರುಕೋಟಿ"ಯ ದರ್ಶನಸಾರವಿದೆ; ಭಾರತವಿಂದು ವಿವಿಧ ಅಕಟ-ವಿಕಟ ವಾದಗಳ ಹಾಗೂ ಗುಂಪುಗಳ ಪ್ರದರ್ಶನಾಲಯವಾಗಿರುವುದನ್ನು ಉಲ್ಲೇಖಿಸಲಾಗಿದೆ.

"ಭಾರತರಾಷ್ಟ್ರ"ವೂ ಅನ್ಯತಾಂತರ್ಗತ ವಿಷದ ದರ್ಶನವನ್ನೇ ಮಾಡಿಸುತ್ತದೆ; ಭಾರತೀಯ ಬಾಳಿನ ವಿವಿಧ ಅಸಹ್ಯ ನೋಟಗಳನ್ನು ತೋರಿಸುತ್ತದೆ. "ಯುವಕ" ಮುಂಬಯಿಯಲ್ಲಾದ ಕೊಲೆ ಸುಲಿಗೆಗಳಿಂದ ಸಂತ್ರಸ್ತನಾದರೂ ಆಶಾವಾದಿಯಾಗಿ ಉಳಿಯುತ್ತಾನೆ. "ನವೋದಯ"ದಲ್ಲಿ ತರುಣರಿಗೆ ಸ್ಫೂರ್ತಿಯನ್ನು ಕೊಡಲಾಗಿದೆ. "ಉಗಮದ ನಿಗಮಾಗಮ"ದಲ್ಲಿ ಕೃಷ್ಣೆಯನ್ನು ಕುರಿತು ಪರಾಪ್ರಕೃತಿಯ ದರ್ಶನ ಮಾಡಿಸೆಂದು ಪ್ರಾರ್ಥಿಸಲಾಗಿದೆ.

'ಬಾಳವೇಗುಲ'ದಲ್ಲಿ ಹೇಗೋ ಹಾಗೇ ಈ 'ಉಗಮ'ದಲ್ಲಿಯೂ ಕವಿಮನದ ಉಗ್ರಾನುಗ್ರ ಸಮಷ್ಟಿ ಭಾವಗಳೆಲ್ಲವೂ ಆಶಾವಾದದ, ಮಂಗಳಾಂತದ, ಮೃದುಭಾಷೆಯ, ಭಕ್ತಿಸ್ಥಾಯಿಯ ಲಲಿತ ಶೈಲಿಯಲ್ಲಿ ಪ್ರಕಟವಾಗಿವೆ. ವಿನಾಯಕರ ಭಾವಸಮುದ್ರ ಮೂಲತಃ ಮಂದಾಕ್ರಾಂತ ಪ್ರಣಾಲಿಯದೆಂಬುದು ಇವುಗಳಿಂದ ಸ್ಪಷ್ಟವಾಗುತ್ತದೆ; ಅವರ ಶುಭ ದೃಷ್ಟಿಯನ್ನು ಕುರಿತೇ ಅಂಬಿಕಾತನಯದತ್ತರು "ಶುಭ ನುಡಿಯೇ ಶಕುನದ ಹಕ್ಕಿ ಶುಭ ನುಡಿಯೆ" ಎಂಬ ಪಲ್ಲವನ್ನು ಹಾಡಿದರೆಂದು ತೋರುತ್ತದೆ!

'ತ್ರಿಶಂಕುವಿನ ಪ್ರಜ್ಞಾಪ್ರಭಾತ'ದಲ್ಲಿ ತ್ರಿಶಂಕುವು ನವ್ಯ ನಾಗರಿಕತೆಯ ಪ್ರತಿನಿಧಿ. ಆತನು ಸ್ಮೃತಿ, ಮೀಮಾಂಸೆ ಹಾಗೂ ಕಲ್ಪಕತೆ ಎಂಬ ಲೋಕಗಳಲ್ಲಿಯೇ ತಿರುಗಾಡುತ್ತಾನೆ ಎಂಬುದು ವಿನಾಯಕ ಮತವೆಂದು ಮುನ್ನುಡಿ ಹೇಳಿದೆ. "ವಿಶ್ವಾಮಿತ್ರರು ತಪಸ್ಸಿಗೆ ಹೋದಾಗ ಅವರ ಕುಟುಂಬಕ್ಕೆ ತ್ರಿಶಂಕು ಮಾಡಿದ ಸಹಾಯವೇ ಅವನ ಉದ್ಧಾರಕ್ಕೆ ಕಾರಣವಾಯಿತು" ಎಂಬುದು ಸಾರಾಂಶ. "ತ್ರಿಶಂಕು ನಿಲುಕಿದ್ದ ತಾನು ಬಯಸಿದ ಸ್ವರ್ಗವ" ಎಂಬ ಸಾಲಿನಲ್ಲಿ ಈ ಜಗತ್ತಿನ ನವ್ಯ ನಾಗರಿಕ ಇಷ್ಟಾರ್ಥವನ್ನು —ಅಂದರೆ ವಿಶ್ವಾಮಿತ್ರ ನಿರ್ಮಿತವಾದ ವಿಕಟ ಸೃಷ್ಟಿಯ ಕೃತಕ ಸ್ವರ್ಗವನ್ನು ಪಡೆದಿದ್ದಾನೆ ಎಂಬ ಅರ್ಥವಿದೆ; ಅವನು ಕೊನೆಗೆ ಸುಖಿ ಎಂಬ ಭಾವವಿದೆ. ಅವನಿಗೆ ಪ್ರತ್ಯುಪಕಾರ ಮಾಡಿದ ವಿಶ್ವಾಮಿತ್ರನ ಸಾಹಸದ ಅರ್ಥವನ್ನು ವಸಿಷ್ಠರು "ಇಹುದು ಪತನದ ಗರ್ಭದೊಳಗುತ್ತಮಾರೋಹಣ" ಎಂದು ಹೇಳುತ್ತಾರೆ. ಈ ಮಾತು Good cometh out of Evil—"ಕೇಡಿನಿಂದ ಒಳಿತು ಬರುತ್ತದೆ" ಎಂಬ ಗಾದೆಯನ್ನು ನೆನಪು ಮಾಡಿಕೊಡುತ್ತದೆ. ಕೊನೆಯ ಸಾಲುಗಳಾದ—

ಇರಲು ವಿಶ್ವಾಮಿತ್ರರನುಭವಿಸಿದಂಥ ಪಥನ
ನರನಾದಿಶೇಷ ಮಸ್ತಕದಲ್ಲಿ ಹೊಳೆವ ರತನ

ಎಂಬಿವು "To fail greatly may be sometimes greater than to succ
—ಕೆಲವೊಮ್ಮೆ ಗೆಲ್ಲುವುದಕ್ಕಿಂತಲೂ ಅತಿ ದೊಡ್ಡ ಪ್ರಮಾಣದಲ್ಲಿ ಸೋಲುವ
ಮೇಲಾದೀತು" ಎಂಬ ಟೆನಿಸನ್ ಕವಿಯ ಸಾಲನ್ನು ನೆನಪಿಗೆ ತಂದುಕೊಡುತ್ತ
ಸುರನನ್ನು ನರ ಜಯಿಸಲಾರ—ಎಂಬ ಅಭಿಪ್ರಾಯವೂ "ಹರಕೊಲ್ಲಲ್
ಕಾಯ್ವನೇ ?" ಎಂಬುದನ್ನು ಎಚ್ಚರಿಸುತ್ತದೆ.

ಇಲ್ಲಿ ನವನಾಗರಿಕತೆಯ ಪ್ರತಿನಿಧಿಯಾದ ತ್ರಿಶಂಕುವಿಗಿಂತ ವಿಶ್ವಾಮಿತ್ರನೂ ಅ
ಗಿಂತ ಇಂದ್ರನೂ ಇಂದ್ರನಿಗಿಂತ ವಸಿಷ್ಠನೂ ವಸಿಷ್ಠನಿಗಿಂತ ಬ್ರಹ್ಮನೂ ಹೆಚ್ಚು ಹೆ
ಪೂರ್ಣಪ್ರಜ್ಞರಾಗಿ ತೋರುತ್ತಾರೆ. ವಿಶ್ವಾಮಿತ್ರನಿಗೆ ವಸಿಷ್ಠಸಮಸ್ಥಾನ ಮ
ಯಾವರೂ ಬರಲಿದೆ. ಆದರೆ ತ್ರಿಶಂಕುವಿಗೆ ಅವನು ಸಾಧಿಸಿಕೊಂಡ ಕೃತಕ ಸ್ವ
ವಾಸವಷ್ಟೇ ಅನುಭವಗಮ್ಯ ; ಅದರಲ್ಲೇ ಅವನಿಗಾಯ್ತುಂತೆ ದೇವೀದರ್ಶನ ; ಆದರಿಂ
ಅವನ ಹೋಮ ಸಾರ್ಥಕವಾಯ್ತುಂತೆ.

ಸ್ಮೃತಿಯು ಹಳೆಯ ಇತಿಹಾಸ, ಮೀಮಾಂಸೆ ಅದರ ಮುಂದಿನ ಮಜಲು, ಕಲ್ಪ
ಭವಿಷ್ಯ ಪುರಾಣ : ಇವುಗಳನ್ನು ಮೂರು ಪ್ರಜ್ಞಾಸ್ಥಲಗಳೆಂದು ಕವಿಗಳು ತಿಳಿ
ತೋರುತ್ತದೆ. ನವನಾಗರಿಕನ ತಲೆಯಲ್ಲಿ ಹಿಂದಿನ, ಇಂದಿನ ಮತ್ತು ಮುಂದಿನ ಕಲ್ಪನೆ
ಹರಿದಾಡುವುದು ಸಹಜ ; ಆದರೆ ಅವನದು ವಿಜ್ಞಾನದ ವಿಸೃಷ್ಟಿ ಸಂತುಷ್ಟಿ !

ಹಿಂದಿನ ಭಾರತದ ಪ್ರಕಾರ ಇತಿಹಾಸವೆಂದರೆ ಗಮನಾರ್ಹವಾದ ಸಂಪ್ರದಾಯ
ಜ್ಞಾನ. ಅಂದಿನ ಇತಿಹಾಸಕಾರರು ಕವಿಗಳೆನ್ನಿಸಿದ್ದರು. ಅವರು ತಮ್ಮ ಕರ್ತವ್ಯವ
ಜೀವನದ ಶಿಲ್ಪಿಗಳಂತೆಯೂ ಸೃಷ್ಟಿಕಾರಕ ಪ್ರತಿನಿಧಿಗಳಂತೆಯೂ ಜನಪದದ ವಿಚ
ಧರ್ಮ, ನೀತಿ ಮತ್ತು ಸಂಸ್ಕೃತಿಯ ಪ್ರಮುಖ ರೂಪಗಳ ನಿರ್ಮಾಪಕರಂತೆಯ
ಭಾವಿಸಿ ಅವುಗಳನ್ನು ಬರೆದರು. ಇಂದು ಆ ಕೆಲಸವನ್ನು ವಿನಾಯಕರು ಮಾಡಿದ
ಎಂಬುದನ್ನು ಈವರೆಗೆ ಸ್ಥೂಲವಾಗಿ ಮಾಡಲಾದ ವಿನಾಯಕರ ಕಾವ್ಯಗಳ ಅವಲೋ
ದಿಂದ ತಿಳಿದುಕೊಳ್ಳಬಹುದು. ಅಲ್ಲಿರುವಂತೆ ಇಲ್ಲಿಯೂ ಜೀವನವನ್ನು ಕುರಿತ ಗಂಭ
ಚಿಂತನೆ, ಧರ್ಮ ಹಾಗೂ ಸಮಾಜವನ್ನು ಕುರಿತ ವಿಶಾಲವೂ ಸತ್ವಪೂರ್ಣವೂ
ದೃಷ್ಟಿ, ಒಂದು ಬಗೆಯ ತಾತ್ವಿಕ ವಿಚಾರದ ಬಿಗಿತ ಕಂಡು ಬರುತ್ತದೆ.

ಭಾರತವು ತನ್ನ ಅನುಭವದ ಒಂದು ಚಕ್ರನೇಮಿಕ್ರಮವನ್ನು ಸುತ್ತಿ ಮುಗಿಸ
ಶಕ್ಯವಾಗುವ ಮೊದಲೇ ತನ್ನ ಸುದೀರ್ಘ ಮನ್ವಂತರಗಳ ಶೋಧ ಹಾಗೂ ಪ್ರಸವ
ಪ್ರಯಾಸದ ಫಲವನ್ನು ಆಯ್ದು ನೈತಿಕ, ಬೌದ್ಧಿಕ ಹಾಗೂ ಭೌತಿಕ ವಿಕಾಸ—ಪರಿ
ವೆಲ್ಲ ಸಮವಾಗಿ ಸಮನ್ವಯ—ಸಾಮರಸ್ಯವನ್ನೂ ಆಧ್ಯಾತ್ಮಿಕ ರೂಪಾಂತರವ
ತೋರುವಂತೆ ಹೆಚ್ಚಿನ ಪೂರ್ಣತೆಯ ನಾಲ್ಕನೆಯ ಯುಗವನ್ನು ಆರಂಭಿಸುವ ಮೊದ
ಬರ್ಬರ ಜನಾಂಗಗಳು ಒಳನುಗ್ಗಿ ಬಂದು ಈ ದೇಶದ ಏಕಾಂತ ತಪಸ್ಯೆಯ

ಕೊನೆಗೂ ಭಂಗ ಮಾಡಿ ಇಲ್ಲಿಯ ರಾಷ್ಟ್ರೀಯ ಜೀವನವನ್ನು ಒಡೆದು ಚೂರು ಮಾಡಿದವು.

"ಬ್ರಿಟಿಷರು ಭಾರತವನ್ನು ಹೊಗುವಾಗ ಅಸುರರಾಗಿದ್ದರು. ಆದರೆ ತಮ್ಮ ದೇಶಬಾಂಧವರ ಉನ್ನತಿಯಲ್ಲಿ ತಮ್ಮ ಉನ್ನತಿಯಿದೆ ಎಂಬ ವಿಶ್ವಾಸವು ಅವರಲ್ಲಿತ್ತು....ಆ ಕಾಲಕ್ಕೆ ಭಾರತವಾಸಿಗಳು ರಾಷ್ಟ್ರಭಾವ ಶೂನ್ಯರಾಗಿದ್ದರು....ತಾಮಸಿಕ ಅಜ್ಞಾನವೂ ರಾಜಸಿಕ ಪ್ರವೃತ್ತಿಯೂ ಆಕಾಲಕ್ಕೆ ಭಾರತದಲ್ಲಿ ಬಹು ಪ್ರಬಲವಾಗಿದ್ದವು ...ಆರ್ಯಶೀಲವು ಸಾಧಾರಣವಾಗಿ ನಷ್ಟವಾಗಿಬಿಟ್ಟಿತ್ತು....ಪರಮಾತ್ಮನು ಯಾವಾಗ ಭಾರತವನ್ನು ಎಚ್ಚರಿಸಿದನೋ ಆವಾಗ ಆ ಎಚ್ಚರಿಕೆಯ ಪ್ರಥಮ ಆವೇಗದಿಂದ ರಾಷ್ಟ್ರಭಾವೋದ್ದೀಪನದ ಪ್ರಜ್ವಲಿತವಾದ ಶಕ್ತಿಯು ರಾಷ್ಟ್ರದ ಪ್ರತಿಯೊಂದು ನಾಳದಲ್ಲಿ ದ್ರುತತರವೇಗದಿಂದ ಪ್ರವಹಿಸತೊಡಗಿತು....ಸ್ವದೇಶ ಪ್ರೇಮದ ಆಧಾರವೆಂದರೆ ಮಾತೃಪೂಜೆ, ಇದು ವಿನಾಯಕರ ಕವನ ಸಂಗ್ರಹಗಳಲ್ಲಿ ಸಾಕಷ್ಟು ಎದ್ದು ಕಾಣುತ್ತದೆ.

"ಭಾರತದ ಸಂಸ್ಕೃತಿಯು ಪರಮಾರ್ಥ ಶಿಖರವುಳ್ಳ ಪರ್ವತ. ಪಾರಮಾರ್ಥಿಕತೆಯು ಸಾಂತವಸ್ತುಗಳಲ್ಲಿ (ಅಂಶತಃ?) ಅಂತರ್ಗತವಾದ ಅನಂತವನ್ನು ಕಂಡುಹಿಡಿದು, ಅವುಗಳ ದೃಷ್ಟಿಯಿಂದ ಇವುಗಳ ಬೆಲೆ ಕಟ್ಟುವುದು, ಅನಂತವು ಪೂರ್ಣವು. ಈ ಕಾರಣ ದೇಹಗಳು ಅಪೂರ್ಣವನ್ನು ಅಪೂರ್ಣವಾಗಿ ಆವಿಷ್ಕರಿಸಿದರೂ ಯಾವಾಗಲೂ ಅದನ್ನೇ ಹೊರಪಡಿಸಬೇಕೆಂದು ಅದರ ಸತ್ಯಾವಿಷ್ಕಾರಕ್ಕಾಗಿ ಪ್ರಯತ್ನಿಸುತ್ತಿರುವುವು.

"ಭಾರತದ ಬ್ರಿಟಿಷ್ ಯುಗದಲ್ಲಿ ಒಂದು ವಿಧದ ಸಂಕುಚಿತ ಮತಧಾರ್ಮಿಕತೆ ಇಲ್ಲಿ ಅಧಿಕವಾಗಿತ್ತು. ಇದರ ಪರಿಹಾರಕ್ಕೆ ಸರಿಯಾದ ಉಪಾಯವು ಯುಗಾನುಯುಗದಿಂದ ಬಂದ ಭಾರತೀಯ ಆದರ್ಶವನ್ನೇ ತುಚ್ಛೀಕರಿಸುವುದರಲ್ಲಿರದೆ, ಅದರ ಪ್ರಾಚೀನ ವಿಶ್ವಂಭರ ಔದಾರ್ಯವನ್ನು ಅದಕ್ಕೆ ತಿರುಗಿ ತಂದು, ಇನ್ನೂ ವಿಪುಲತರವಾದ ಆಸ್ಪದವನ್ನು ಮಾಡಿಕೊಟ್ಟು, ರಾಷ್ಟ್ರೀಯ ಜೀವನವನ್ನೇ ನಿಜವಾಗಿಯೂ ಈ ಉನ್ನತ ಪಾರಮಾರ್ಥಿಕಾರ್ಥದಲ್ಲಿ ಮತಧರ್ಮವನ್ನಾಗಿ ಮಾಡಿಕೊಳ್ಳುವುದರಲ್ಲಿದೆ....ಈ ಆದರ್ಶವನ್ನು ಪ್ರಯೋಗದಲ್ಲಿ ತರಲು ಮೊದಲು ಬೆಳಕು ಸಾಕಾಗದಿದ್ದಲ್ಲಿ ಈಗಿನ ಹೊಸ ಬೆಳಕನ್ನು ಬೆಳಗಿಸಿ ನೋಡಬಹುದು; ಹಳೆಯ ಪದ್ಧತಿಗಳಲ್ಲಿದ್ದ ತಪ್ಪು ತಡೆಗಳನ್ನು ಈಗ ತಿದ್ದಬಹುದು; ಪಾರಮಾರ್ಥಿಕ ಸಾಧನೆಯ ಬೆಳೆಯನ್ನು ರಕ್ಷಿಸಲು ಹಾಕಿಕೊಂಡ ಕರ್ಮಠತನದ ಬೇಲಿಗಳು ಮುಂದೆ ಅದರ ಬೆಳೆವಣಿಗೆಗೂ ವಿಸ್ತಾರಕ್ಕೂ ಅಡ್ಡಿತರುವ ತೊಡಕುಗಳಾಗಿ ಕುಳಿತಿದ್ದರೆ ಅವುಗಳನ್ನು ಮುರಿದು ಚೆಲ್ಲಿ ಅದರ ಹಾರಿಕೆಗೆ ಬೇಕಾದ ಬೇಸಾದ ವಿಪುಲ ಕ್ಷೇತ್ರವನ್ನು ಕೊಡಬಹುದು.

"ಆಧುನಿಕ ಪ್ರಭಾವಗಳ ಬಗೆಗೂ ಭಾರತ ಶಕ್ತಿಯ ವಿಷಯದಲ್ಲಿಯೂ ಯೂರೋಪಿಯನ್ನರಷ್ಟೇ ಪ್ರಾಮಾಣಿಕತೆ-ಸ್ವಾತಂತ್ರ್ಯಗಳನ್ನು ವಹಿಸಬೇಕು ; ತಪ್ಪಿ ಹೋಗಿದ್ದುದನ್ನು

ತಿದ್ದಿಕೊಳ್ಳಬೇಕು; ಮುಕ್ತಕರವಾದ, ವಿಶಾಲತರವಾದ ಮಾರ್ಗಗಳಿಂದ ನ
ಪಾರಮಾರ್ಥಿಕತೆಯನ್ನು ಸಾಧ್ಯವಿದ್ದರೆ ನಮ್ಮ ಪೂರ್ವಿಕರಿಗಿಂತಲೂ ಒಂದು ತು
ಹೆಚ್ಚಾಗಿಯೇ ಪ್ರಯೋಗಿಸಿ ನೋಡಬೇಕು; ಪಾಶ್ಚಿಮಾತ್ಯ ವಿಜ್ಞಾನ, ತರ್ಕವಾ
ಪ್ರಾಗತಿಕತೆ, ಪ್ರಮುಖವಾದ ಆಧುನಿಕ ತತ್ವಗಳು ಇವೆಲ್ಲವುಗಳ ಸಾರವನ್ನು ಹ
ನಮ್ಮ ಪಾರಮಾರ್ಥಿಕ ಧ್ಯೇಯ ಆದರ್ಶಗಳೊಡನೆ ಸಮರಸ ಮಾಡಿಕೊಳ್ಳಬೇಕ
ಆದರೆ ನಮ್ಮ ಜೀವನ ಧರ್ಮದ ಸುಳಿ ಬಿಡಬಾರದು; ಬಾಳಬೇಕೆಂಬಾಸೆಯ ವಿಡಿ
ಪ್ರಾಯೋಗಿಕ ಚಟುವಟಿಕೆಗಳ ಪ್ರವೃತ್ತಿ ಆಧುನಿಕವಾದ ಮಹಾ ಸಾಹಸಿಕ ಪ್ರಯ
ವಾದಗಳಿಗೆ ಇಂಬುಗೊಟ್ಟು ಜೀವ—ಜಗತ್ತು—ಈಶ್ವರ ಈ ತ್ರಯಗಳ ಬಗ್ಗೆ ಇರ
ನಮ್ಮ ಮೂಲದೃಷ್ಟಿಯನ್ನು ಬಿಡದಿರಬೇಕು. ಈ ದ್ವಂದ್ವಗಳಲ್ಲೇನೂ ದ್ವಂದ್ವ ಯು
ವಾಗಬೇಕೆಂಬ ನಿಯಮವಿಲ್ಲ. ಇವೆರಡೂ ಮಾರ್ಗಗಳು ತಮ್ಮ ತಮ್ಮ ವಿವಕ್ಷಿತಾ
ಪ್ರಪಂಚವನ್ನು ಕಂಡುಕೊಂಡು, ತಮ್ಮ ತಮ್ಮ ಹುರುಳು ತಿರುಳಿನ ಸಾರಸರ್ವಸ್ವವ
ತಿಳಿದು ಪರಸ್ಪರ ಪೋಷಣೆ ಪೂರ್ಣತೆಗಳಿಗೆ ಬೇಕೇ ಆಗಿವೆ"—ಎಂಬ ಶ್ರೀ ಅರವಿ
ದೃಷ್ಟಿಯು ವಿನಾಯಕರ ಸರ್ವಾಧಾರ.

ಭಾರತದ ನವನಾಗರಿಕನ ವಿಸೃಷ್ಟಿ ಸಂತುಷ್ಟಿ ಅಳಿಯಬೇಕಾದರೆ ಅವನಿಗೆ ದೇ
ದರ್ಶನವಾಗಬೇಕೆಂಬುದು ವಿನಾಯಕರು ಹೇಳಿರುವ ಮದ್ದು. ದೇವಿಯು ಮಾ
ದೇವತೆ, ವಾತ್ಸಲ್ಯಮೂರ್ತಿ, ನಿಷ್ಕಾಮ ಪ್ರೇಮ ಕೇಂದ್ರ—ಅರ್ಥಾತ್ ಸ್ನೇಹ ಪದ್ಮ
ಯೆಂಬ ಮಹಾಯೋಗಿ ಗುಣಪ್ರಭೆ.

ಪ್ರೇಮವೊಂದೇ ನಿಜವಾದ ಶಕ್ತಿ. ಅದು ಮಾನವನ ಮನವನ್ನು ಇಡಿ ಮನುಕುಲನ
ಅಪ್ಪುವವರೆಗೆ ವಿಸ್ತಾರಗೊಳಿಸುತ್ತದೆ; ಇನ್ನಾವುದಕ್ಕೂ ಇಲ್ಲದಷ್ಟು ಶಕ್ತಿಯಿಂದ ಅ
ಮಾನವನನ್ನು ನಿತ್ಯಸತ್ಯಕ್ಕೆ ಅಂಟಿಸುತ್ತದೆ. ವಿಚಾರಶಕ್ತಿ ನಿರಾಶೆಗಿಳಿದಾಗ ಅ
ಪ್ರತ್ಯಾಶೆಯನ್ನಿಟ್ಟುಕೊಳ್ಳಬಲ್ಲದು. ದೇವನ ನಿತ್ಯಾವಿರ್ಭಾವವನ್ನು ಪ್ರೇಮವು ಪ್ರೇ
ತ್ತದೆ. ಪ್ರಿಯತಮ ಪದಾರ್ಥದಲ್ಲಿಯೂ ತನ್ನಲ್ಲಿಯೂ ಅದು ಆನಂದೋದ್ರೇಕವ
ಹುಟ್ಟಿಸುತ್ತದೆ. ಕೃತಿಗಳಿಂದ ಮತ್ತು ಮಾತುಗಳಿಂದ ಹಾಗೂ ಕೃತಿ ಮಾತುಗಳಿ
ಕೇವಲ ಸ್ಪರ್ಶ, ನೋಟ, ಕಟಾಕ್ಷ ವಿಕ್ಷೇಪಗಳಿಂದ ಒಳಿತನ್ನದು ಮಾಡುತ್ತ
ಒಳಗಣ್ಣನ್ನು ತೆರೆಯಿಸುತ್ತದೆ. ಪ್ರೇಮವೊಂದು ಆನಂದ ದೇವತೆ, ಶಾಂತಿದೇವ
ಯಾವ ಕಿವಿಗೂ ಕೇಳಿಸದುದು ಪ್ರೇಮದ ಕಿವಿಗೆ ಕೇಳಿಸುತ್ತದೆ. ಅದು ಪ್ರಮೇಯ
ಅಪ್ರಮೇಯದ ಕಣ್ಣು; ಅದೊಂದು ಮಹಾ ಗುರು. ಪ್ರೇಮಜೀವನವು ಸಾವ
ಗೆದ್ದು ಅಮರತ್ವದ ಕಿರೀಟವನ್ನು ಧರಿಸುತ್ತದೆ. ಅದು ಜೀವನಸಮುದ್ರದ
ಬೆಳಗುವ ಮಹಾದೀಪ, ಇರುವಿಕೆಯ ವ್ಯಾಪಕವಾದ ಸಮಶ್ರುತಿಯ ಆಳವಾದ ಭಾ
ಆತ್ಮದ ಪ್ರಕಾಶ; ಎಲ್ಲ ಅಭಿಪ್ರಾಯ, ಸಿದ್ಧಾಂತ, ತತ್ವಜ್ಞಾನಗಳನ್ನದು ಮಿ

ದಕ್ಕೆ ಅಸಾಧ್ಯವೆಂಬುದಿಲ್ಲ. ಪ್ರೇಮವೇ ತ್ಯಾಗ, ಸಮಶ್ರದ್ಧೆ, ಸರ್ವಪ್ರಕಾಶ, ರ್ವಗ್ರಹ, ಸರ್ವಸ್ಪೃಷ್ಟಿ, ನಿತ್ಯಪುಷ್ಪ, ದೇವರ ಪ್ರತಿಬಿಂಬ, ಅಮರಶಿಶು, ಅಂತಃಕರಣದ ವಿಶ್ವವ್ಯಾಪಕಶಕ್ತಿ, ನಿತ್ಯಸ್ಫೂರ್ತಿದಾಯಕ ಕಿರಣ. ಪ್ರೇಮವೇ ಸರ್ವಸ್ವ, ದೇವರು, ಜೀವನ, ಸ್ವರ್ಗ ; ಅದು ಅಭ್ರಂಶನೀಯವೂ ಅವಿಭಾಜ್ಯವೂ ಅಮರವೂ ಆದ ಅಖಂಡ ಸತ್ವ, ಎಲ್ಲ ಪ್ರತಿಭೆಯನ್ನೂ ಮೀರಿದ್ದು. ಅದೊಂದು ಹೃತ್ಕಲೆ, ಸರ್ವಹಿತ—ಸೌಜನ್ಯ ಗಳ ಆಧಾರಸ್ತಂಭ, ಪಾವಿತ್ರ್ಯದ ಸೌಂದರ್ಯ, ಆತ್ಮ-ಇಂದ್ರಿಯಗಳ ಸಾಮರಸ್ಯ !

ಮೂಕ ನಿತ್ಯತೆಯನಂತ ಹುಟ್ಟು ಹೊಟ್ಟೆಯಲಿ ನಿನ್ನ ಮಾತೆ
ಏಕಮೇವ ಸಂಕಲ್ಪದಿಂದ ಬೆಳಗುವುದು ಓ ಪುನೀತೆ!
ಜಗದ ಅಂಗಗಳಿಗೀವ ಅಮರ ಮುದದೊಂದು ಸೋಂಕುದು ನಿನ್ನ
ಅರಿಯಲಾರದತ್ಯಂತಮೋದ ರೋಮಾಂಚಜನಕ ಮುನ್ನ !

"ನಿನ್ನ ಹೃದಯದಲಿ ತಣ್ಣಗಾಗುವುದು ನಮ್ಮ ಖಾಲಿ ಕೂಗು ಅಗ್ನಿಶುದ್ಧಪಥ ಜಾತ ಯೋಗಿಸುತರಾವು ನಮ್ಮ ಬಾಗು ಅಚಲವಿಲ್ಲಿ ಅಂಜಿಸುವ ಇಳೆಯ ಕುರುಡೆಳೆತದವಧಿ ಯಲ್ಲಿ ಇಲ್ಲ ನಾಶಸಂತಾಪ ದೇವಿ ಈ ನಮ್ಮ ಹಗಲಿನಲ್ಲಿ !

ಇರುಳ ದಾರಿಯಲಿ ನಡೆವೆ ಅದರ ಮೊಗವನ್ನು ಭಯ್ಯವನ್ನು
ಬದಲು ಮಾಡಲೆಂದುಜ್ವಲಿಸುವ ಉರಿಬಿಳಿಯ ಕೂರ್ನೆಯನ್ನು
ತಳೆದ ತಾಯೆ ನೀ ಜಗದ ಬೀಜದುಪಮಾನಹೀನ ಹಣ್ಣು
ಬದಲುಸಂಘ ಬಾಗಿಲಿನ ಕೀಲಿಕೈ ನಿನ್ನ ಕೈಯೊಳಿನ್ನು !

ಕಡಲು ಮತ್ತು ಮುಗಿಲು

ಗೌರೀಶ ಕಾಯ್ಕಿಣಿ

ಕಾವ್ಯವೆಂಬುದರ ವಿಚಿಕಿತ್ಸೆಯಲ್ಲಿ ಯಾವಾಗಲೂ ಒಂದು ವೈಗುಣ್ಯವಿರುತ್ತ
ಅದೆಂದರೆ, ನಿಜವಾದ ಕಾವ್ಯದೃಷ್ಟಿ ಕವಿಯ ಕಣ್ಣಿನಿಂದ ಕಂಡುಂಡು ಸವಿಯುವ
ಕಾಂಶ. ಇದಕ್ಕೆ ಕಾರಣ, ಕವಿಯೆಂಬುವನು ವಾಸ್ತವ ಸತ್ಯವನ್ನು ವರ್ಣಿಸಲು ಅಥ
ವಿವರಿಸಲು ಹೊರಟವನಲ್ಲ; ಈ ಸತ್ಯಕ್ಕೆ ತನ್ನದೇ ಆದ ವಿಶಿಷ್ಟ ಭಾವುಕಶೈಲಿಯ
ತನ್ನ ಪ್ರತಿಕ್ರಿಯೆ ಪ್ರಕಟಿಸಲು ಆತ ವಿವಶವಾದವನು.

ಕಾವ್ಯ-ಕವಿತೆ-ಕವನ—ಏನೇ ಅನ್ನಿ, ಅದು ಕಲ್ಪನೆಯ ಅವಗುಂಠನದಲ್ಲಿ ಭಾ
ಯನ್ನು ವ್ಯಕ್ತಮಾಡುವ ವಾಹನ ಅಥವಾ ಮಾಧ್ಯಮ; ಅದು ಅನುಭವವನ್ನು ಅ
ಮಾಡಿಕೊಡುವ ಒಂದು ಅನನ್ಯ ಪರತಂತ್ರವಿಧಾನ. ಆದ್ದರಿಂದ ಸಹಜವಾಗಿ
ಅದು ಐತಿಹಾಸಿಕ ವೈಚಾರಿಕ ಅಥವಾ ಬೌದ್ಧಿಕ ಅರಿಕೆಗೆ ಕೆಳಗೋ ಮೇಲೆ
ವ್ಯವಹರಿಸುತ್ತದೆ.

ಕವಿತ್ವವು ಕೆಲವೊಂದು ಸತ್ಯಗಳನ್ನು ಅಳವಡಿಸಿಕೊಂಡು "ಆಥಳಿಸು"ತ್ತದೆ. "ಕ
ಇವಂಕಾವ್ಯಂ" ಎಂದರೆ ಕವಿಯಾದವನ ಎಲ್ಲ ವ್ಯವಹಾರ-ವ್ಯಾಪಾರ ಚೇಷ್ಟಿತಗಳೂ
ಗಳ ರೋಚಕ ರೇಚಕ ಎಲ್ಲ ಅಂಶಗಳೂ ಕಾವ್ಯವೆನಿಸಿಕೊಂಡಾವು! ಹಾಗಾ
ಅದೊಂದು ಅನವಸ್ಥಾಪ್ರಸಂಗವೇ ಸರಿ! ಆದ್ದರಿಂದ ಕವಿಯ ವಾಙ್ಮಯೀನ ಪ್ರತಿ
ಕೃತಿ ವಿಶೇಷವೆ ಕಾವ್ಯವೆಂದು ಸಂಪ್ರದಾಯ ಸಿದ್ಧವಾಗಿದೆ.

ಮೂಲತಃ ಭಾಷೆಯೇ ಒಂದು ಕಾವ್ಯ. ಭಾಷೆಯ ಮೂಲವೆ ಪ್ರತಿಮೆ. ಅಂ
ಕಾವ್ಯದ ಭಾಷೆ ಪ್ರತಿಮೆಗಳ ಪ್ರತೀಕಗಳ ಭಾಷೆ. ಊಹೆ, ಉತ್ಪ್ರೇಕ್ಷೆಗಳ ಉದ್ಗಾ
ಚಿತ್ರಮಯ ಉದ್ಗಾರ, ಅದಕ್ಕೆ ತಕ್ಕ ಛಂದೋಬಂಧ, ಲಯಕಾರಿಕೆ, ವಿಶಿಷ್ಟಕಾಲ,
ಇರಬೇಕಾದದ್ದು. ಅವೆಲ್ಲವುಗಳ ವ್ಯಾಮಿಶ್ರ ಪರಿಣಾಮವು ಓದುಗರ ಪ್ರತಿಕ್ರಿಯೆ
ಒದಗಬೇಕು. ಈ ಪ್ರತಿಕ್ರಿಯೆಯೂ ವಿಶಿಷ್ಟ ಮಾದರಿಯದೇ ಆಗಬೇಕು.

ಅದ್ಯಾವ ಮಾದರಿ? ಆ ಓದುಗರ ಕಾವ್ಯ ಶೈಲಿಯ ವಾಚನ. ಶ್ರವಣಗಳ ಪರಿಣಾ
ವಾಗಿ ಒಂದು ಚಿಂತನೆಗೆ, ಧ್ಯಾನಾನಷ್ಠೆಗೆ ಅಥವಾ ಸವಿಕಲ್ಪ ಸಮಾಧಿಗೆ ಪ್ರೇರಿತ

ಬೇಕು. ಅಥವಾ ವಸ್ತು ಜಾತದ ರಹಸ್ಯದ ಬಗೆಗೆ ಹೊಸ ಪ್ರಜ್ಞೆಯನ್ನೊ, ಪ್ರಬೋಧನೆಯನ್ನೊ ಪಡೆಯುವಂತೆ ಆಗಬೇಕು.

ನಿಜವಾಗಿಯೂ ಕಾವ್ಯವಿಮರ್ಶೆ, ಮೇಲೆ ಹೇಳಿದ ಸಂದರ್ಭದಲ್ಲಿ, ಕಾವ್ಯದ ರಚನೆ, ಬಂಧ, ಶಿಲ್ಪ ಮತ್ತು ಭಾಷೆಯ ಸೂಕ್ಷ್ಮಮರ್ಮ—ಇವುಗಳ ಕುರಿತೇ ಹೆಚ್ಚು ಪ್ರಸ್ತಾಪಿಸಬೇಕೆ ಹೊರತು ಕಾವ್ಯದಲ್ಲಿಯ ವಿಚಾರ ಆಶಯದ ಕಲ್ಪನೆ ಭಾವನೆಗಳ ಇತ್ಯರ್ಥದ ಕುರಿತು ಅಲ್ಲ. ಇಂಥಾ ವಿಮರ್ಶೆಯಲ್ಲಿ ಕವಿಯು ಅಳವಡಿಸಿದ ವಿವಿಧ ಘಟಕಗಳು ಆ ಕೃತಿಯ ಆಕೃತೀಕರಣದಲ್ಲಿ ಹೇಗೆ ಯಾವ ಸ್ಥಾನವನ್ನು, ಕ್ರಮವನ್ನು, ವಿಶಿಷ್ಟ ವಿಧಾನವನ್ನು ಪಡೆದಿರುವವೆಂಬುದರ ಇತ್ಯರ್ಥವಾಗಬೇಕು.

ಆದರೆ ನಾನು ಇಲ್ಲಿ ಕವಿ ವಿನಾಯಕರೊಡನೆ ಹೊರಟಿರುವ 'ಪಯಣ' ಅಂಥ 'ಕಲೋಪಾಸಕ'ತನದ್ದಲ್ಲ. ಈ ಲೇಖನದಲ್ಲಿ ನನಗೆ ಅಭಿಪ್ರೇತವಾದದ್ದು (ಅದು ಕೊನೆಗೂ ಪ್ರೇತವಾಗದಿರಲಿ ಎಂದು ನನ್ನ ಹಾರೈಕೆ!) ಕವಿಯ ಭಾಷೆಯ ಅಥವಾ ರಚನೆಯ ಶಿಲ್ಪ-ಕಲ್ಪಗಳಲ್ಲ. ನಾನು ಆಯ್ದುಕೊಂಡದ್ದು ಕವಿಯು ಒಟ್ಟು ಕಾವ್ಯ ಸಾಮಗ್ರಿಯ ಒಂದು ಅಂಶವನ್ನು, ಅದು ಆವಿಷ್ಕಾರಗೊಂಡ ಕಲ್ಪನಾ ವಿನ್ಯಾಸದ ಒಂದು ಅಂಗವನ್ನು, ಆವೆರಡರ ಅನ್ಯೋನ್ಯಾಶ್ರಯದ ಅನನ್ಯವಾದ ಒಂದು ರಂಗವನ್ನು.

ಕವಿ ವಿನಾಯಕರ ಕಾವ್ಯವನ್ನು ಸಾರ್ಥಕವಾಗಿ ಓದಲಿಕ್ಕೆ ಇಲ್ಲಿ ಒಂದು "ವಾಗ್ದ್ವಾರ" ವನ್ನು ತೆರೆಯುವ ಚಾಪಲಕ್ಕೆ ಪ್ರಚೋದಿತನಾಗಿದ್ದೇನೆ.

ಕವಿಯ ನಿಲುವು

ಕವಿ ವಿನಾಯಕರ ಕಾವ್ಯದಲ್ಲಿ "ಕಡಲು" ಮತ್ತು "ಮುಗಿಲು" ಇವುಗಳ ಸಾಕ್ಷಾತ್ಕಾರವನ್ನು ನಾವಿಲ್ಲಿ ಮಾಡಿಕೊಳ್ಳಬೇಕಾದದ್ದು. ಇವೆರಡು ವಿಷಯಗಳು ಕಾವ್ಯವಸ್ತುವಾಗಿ ಪ್ರಾಶಸ್ತ್ಯಪಡೆದದ್ದು ಅನುಕ್ರಮವಾಗಿ, ಕವಿಯ "ಸಮುದ್ರ ಗೀತಗಳು" ಮತ್ತು "ದ್ಯಾವಾ ಪೃಥಿವೀ" ಈ ಕವನ ಸಂಕಲನಗಳಲ್ಲಿ. ಅದಕ್ಕೆ ಮೊದಲು ಮತ್ತು ಅನಂತರ ಈ ಕವಿಯು ಈ "ವಿಷಯಾಸಕ್ತಿ"ಯನ್ನು ಕಾಣಿಸಿಲ್ಲವೆ ? ಹಾಗೆಂದರೆ ಅನ್ಯಾಯವಾದೀತು. ನಿಸರ್ಗದ ನಿರಂತರ ಛವಿಛಾಯೆಗಳಿಗೆ ಕನ್ನಡಿ ಹಿಡಿಯುವ ಕವಿ ಪ್ರತಿಭೆ ತನ್ನ ಇತರ ಕವನಗಳಲ್ಲಿಯೂ ಅಲ್ಲೊಂದು ಇಲ್ಲೊಂದು ಸಲ ಕಡಲು-ಮುಗಿಲುಗಳನ್ನು ನೆನೆದು ಹೇಳಿದ್ದು ಉಂಟು. ಆದರೆ 'ಕಡಲಿನ ಹಾಗೂ ಮುಗಿಲಿನ' ವಿವಿಧ ರೂಪ, ಗುಣ, ಭಾವ ಭಂಗಿಗಳ ವಿರಾಡ್ದರ್ಶನವನ್ನು ಪಡೆದು ಆನಂದಾಶ್ಚರ್ಯಗಳಿಂದ ಚಕಿತನಾಗಿ ಅವುಗಳ ವಿಭೂತಿಗೆ ಉದ್ಗಾತೃವಾಗಿ ವಿಜೃಂಭಿಸಿದ್ದು ಈ ಎರಡು ಕವನಗ್ರಂಥಗಳಲ್ಲಿಯೇ.

ಬೆಟ್ಟ, ಬಾನು, ಕಡಲು, ಕಾನು, ಮೋಡ, ಮುಗಿಲುಗಳ ಹಿಗ್ಗು — ದಿಗಿಲುಗಳನ್ನು ವಾಲ್ಮೀಕಿಯಿಂದ ಕುವೆಂಪುವರೆಗೆ ಅನೇಕ ಕವಿಗಳು ವರ್ಣಿಸಿದ್ದುಂಟು. ಆದರೆ ವಿನಾಯಕರು

ಇಲ್ಲಿ ವರ್ಣಿಸಿದ್ದು ಆ ಮಾದರಿಯಲ್ಲ. ಇಲ್ಲಿ ಕಡಲು-ಮುಗಿಲುಗಳಿಗಿಂತ ಅವುಗಳ
ಹಿಗ್ಗಿ ಹೊಮ್ಮಿ ಹೊರಸೂಸಿದ ಹೃದಯದ ಪ್ರತಿಕ್ರಿಯೆಯು ಉಕ್ಕಿಂದ ಉಗ್ಗಡಣೆ
ಭಣಿತ ಭಂಗಿಮೆಯೇ ಇಲ್ಲಿ ಮುಖ್ಯವಾದದ್ದು.

ಕವಿಯ ಈ ಉದ್ಗಾರಗಳ ಪರಿಪರಿಯನ್ನು ಪರಿಕಿಸುವುದಕ್ಕೆ ಮುಂಚೆ, ಇವು
ಹಿಂದಿನ ಈ ಉದ್ಗಾತೃವಿನ ನಿಲುವೆಯನ್ನು, ಇವೆಲ್ಲಾ ಕಲ್ಪನಾ ಚಿತ್ರಗಳನ್ನು ಸ್ವೀಕ
ಸ್ಫುಟಗೊಳಿಸುವ ಕವಿಯ ಚಿತ್ತ ಭಿತ್ತಿಯ ಧಾತುವನ್ನು ನಾವು ಅರಿತುಕೊಳ್ಳುವು
ವಿಹಿತವಷ್ಟೆ! ಹಿಂದೊಮ್ಮೆ ಈ ಕವಿಯು ಅರಿಕೆಮಾಡಿಕೊಂಡಿದ್ದನು—

ಹಾಡಿದರೆ ಆನಂದ! ಇಲ್ಲದಿರೆ ಬಲು ಚಂದ
ನುಡಿದರೇನದು ನುಡಿಯದಿದ್ದರೇನು?

* * *

ದನಿಗೂಡಿಸಿರೆ ಗಾನ! ಇಲ್ಲದಿರೆ ಬರೆಮೌನ!
ದನಿಯ ನೀಡುವ ಸ್ಫುರಣ ಎದೆಯೊಳಿರಲು
ಆ ಶಕ್ತಿಯೊಂದಿರಲು! ಜೀವನವ ಹೊಂದಿರಲು
ನುಡಿಸಬಹುದದು ತನ್ನ ಕಾಲಬರಲು

ಅಂದರೇನು? ಈ ಕವಿಯ ಪ್ರತಿಭೆಗೆ ತಾಟಸ್ಥ್ಯವೆ ಸ್ಥಾಯಿ. ಅನುಭೂತಿಜನ್ಯ
ಭಾವಕಲ್ಪಗಳು ಒಮ್ಮೆಲೆ ಉದ್ರೇಕಕ್ಕೆ ಬಂದು ಉದ್ಗಾರಗೊಳ್ಳುವುದು ವಿರಳ. ನಿಸರ್ಗ
ಜೀವನದ, ಸೌಂದರ್ಯ-ಗಾಂಭೀರ್ಯಗಳ ಚಿತ್ತವೇಧಕ ಮರ್ಮಬೋಧಗಳಿಂದ ವಿನಾ
ಕರು ಪಾರವಶ್ಯವನ್ನಾಗಲಿ ನಿರ್ಭರತೆಯನ್ನಾಗಲಿ ಪಡೆದು, ಉದ್ವೇಗ ಆವೇಗಗಳ
ಅದನ್ನು ಕಾವ್ಯದಲ್ಲಿ ತೋಡಿಕೊಳ್ಳುವುದು ಕಡಿಮೆ. ಅವರದು ಚಿಂತನಪರವಾಗಿದ್ದ
ತಟಸ್ಥ ಸಾಕ್ಷಿಕ ಪ್ರಜ್ಞೆ. ಸಮನ್ವಯ ಅವರ ಸಾಧನೆ; ಆದರೂ ವಿವೇಚನೆ ವಿಶ್ಲೇ
ಗಳತ್ತ ಅವರ ಪ್ರವೃತ್ತಿ. Sicklied over with the pale cast of thou
ಎಂಬ ಮಾತು ಎರಡು ತಿದ್ದುಪಡಿಗಳೊಂದಿಗೆ ವಿನಾಯಕರನ್ನೆ ಬಣ್ಣಿಸುತ್ತದೆ. ಈ ತಿ
ಪಡಿಯೆಂದರೆ, ಇವರ ವೈಚಾರಿಕ ಎರಕ pale ನಿಸ್ತೇಜವಲ್ಲ, ಕಂದಿಲ್ಲ ಕುಂ
ಹಾಗೆಯೇ ಈ ವೈಚಾರಿಕತೆ ಅವರನ್ನು ವ್ಯಾಧಿಯಂತೆ ಬಾಧಿಸಿಲ್ಲ!

ಆದರೂ ಚಿತ್ರ ಚತುರವಾದ ಅವರ ಚಿತ್ತವೃತ್ತಿ ಕಂಡದ್ದನ್ನೆಲ್ಲಾ ಕಣ್ಣು ಸೆಳೆ
ನ್ನೆಲ್ಲಾ ಗುರುತುಹಾಕಿ ಗೆರೆ ಬಣ್ಣಗಳಿಂದ ತುಂಬಿಬಿಡುತ್ತದೆ. ಈ ಚಿತ್ರಣ ಈ ಕ
ಸ್ವಯಂ ಚಾಲಿತವೆಂಬಷ್ಟು ಸಹಜ. ಹೀಗಿದ್ದರೂ ಕವಿಯ ಒಳಗಣ್ಣು ಈ ಚಿತ್ರ
ಸಾಕ್ಷಿಯಾಗಿಯೇ ನಿಲ್ಲುತ್ತದೆ. ಆತುರವಿಲ್ಲದ ಆಶ್ಚರ್ಯ, ಕಾತರದಿಂದ ಕೂಡಿರದ ಕೌ
ದ್ಯಾವಾಪೃಥಿವಿಯನ್ನು ಇಡಿಯಾಗಿ ನಿಡಿದಾಗಿ ನೋಡುವ ನಿರಾಸಕ್ತವಲ್ಲದಿದ್ದ
ನಿಸ್ಸಂಗವೃತ್ತಿ — ಇವು ಈ ವೈನಾಯಕೀ ಪ್ರತಿಭೆಯ ವೈಶಿಷ್ಟ್ಯಗಳು.

ಹಾಡಿನರೂ ಸರಿ, ಹಾಡವಿದ್ದರೂ ಸರಿ. ದನಿಗೂಡಿದರೆ ಹಾಡು, ಇಲ್ಲವಾದರೆ ಬರೆ ಮೌನ. ದನಿಗೂಡಿಸುವ ತವಕವಿಲ್ಲ. ಅವಕ್ಕಿಂತ ದನಿ ನೀಡುವ ಸ್ಫುರಣ, ಅದರ ಅವಕಾಶ ವೇ ಮುಖ್ಯ. ಕಾಲ ಮಾಗಿಬಂದಾಗ ಕಾವ್ಯರಸ ತುಂಬಿಹರಿಯುತ್ತದೆ— ಈ ನಿಲುವೆ ಯಿಂದ ಕಾವ್ಯವಸ್ತುವಿನೊಂದಿಗೆ ತಾದಾತ್ಮ್ಯ ಕಷ್ಟ. ಪ್ರತಿಭೆಯ ಈ ಪೃಥಗಾತ್ಮತೆ ಚಿತ್ರಣದ ಚಾತುರ್ಯ ಚಾರುತ್ವಕ್ಕೆ, ಅವುಗಳ ದನಿ ಅಪೂರ್ವಕ್ಕೆ ಕೂಡಿದಾಗ ಸ್ಫುರಿಸುವ ಚಮತ್ಕಾರಕ್ಕೆ ಸಾಧಕವಾದರೂ ಕಲ್ಪನೆಯ ವಿಲಾಸ ವೈಚಿತ್ರ್ಯದ ಸೀಮೆ ಯನ್ನು ದಾಟಿ ಕಾವ್ಯತ್ವದ ವಿಕಸನದ ವೈಖರಿಯಾಗುವುದಕ್ಕೆ ಅದೇಕೋ ಬಾಧಕ ವಾಗುತ್ತವೆ.

ಮೊನ್ನೆ ತಾನೆ ವಿನಾಯಕರು 'ಸಮನ್ವಯ'ದ ನಾಲ್ಕನೆಯ ಸಂಚಿಕೆಯಲ್ಲಿ ಪ್ರಕಟಿಸಿದ ಸಂಘು—ಸಂಗಮೋತ್ಸುಕ ಪ್ರವಾಹದ "ತರಂಗಾಂತರಂಗ"ದಲ್ಲಿ ಬಂದ ಈ ಮಾತುಗಳು ಮನನೀಯವಾಗಿವೆ.

ಪ್ರಜ್ಞೆಯನು ಪದರು ಪದರಾಗಿ ಬಿಡಿಸಿದರೂನು
ತಿಳಿದಿಲ್ಲ ನಾನಿದರ ಅಂತಪಾರ
ಅಂತೆ ಇದು ಕಡಲು ಅನಂತದ ಒಡಲು

ಇದು ಕವಿಯ ಕಾವ್ಯಪ್ರಕೃತಿಗೂ ಒಪ್ಪುವ ಮಾತು.

ಪ್ರತಿಮಾ ಮೀಮಾಂಸೆ

ಕಡಲು ಮುಗಿಲುಗಳ ಬಗೆಗೆ ಬಂದ ಕಾವ್ಯಾಂಶಗಳ ಹಿಂದೆ ತೀವ್ರವಾದ ಮನೋ ಮಂಥನವಿಲ್ಲ. ಕೆಲನೆಡೆಗೆ ಉತ್ಪ್ರೇಕ್ಷಣೆಯ ಉತ್ಕಟತೆ ಹೃದಯಂಗಮವಾಗಿ ಬಂದಿದ್ದರೂ ಎಲ್ಲ ಹೊರಗಣ್ಣ ಬದುಕು, ಬಾಹ್ಯದರ್ಶನ. "ಜಡತೆಯೊಳಗಭಿವ್ಯಕ್ತವಾಗಿರುವ ಚೆಲುವು" "ಒಳಗಣ್ಣು ಹೊರಗಣ್ಣು ಬೆರೆತು ನೋಡಿದ ನೋಟ"ವಲ್ಲ.

"Good poetry is usually written from a background of conflict." ಇದು ನಿಜವಿದ್ದರೆ ಅಂಥ ಆಂತರಿಕ ತುಮುಲದ ಹಿನ್ನೆಲೆ ಸಮುದ್ರಗೀತದ "ಕಡಲಿ"ಗೂ ಮ್ಯಾಪಾಪೃಥ್ವಿಯ "ನೀರದ"ಕ್ಕೂ ಲಭಿಸಿಲ್ಲ. ಇದಕ್ಕೆ ಕಾರಣ ವಿನಾಯಕರು ಮುಖ್ಯತಃ Cerebral ಕವಿ, natural ಕವಿ ಅಲ್ಲ.

ನಿಜವಾದ ಕವಿಯ ಅಸಂದಿಗ್ಧ ಲಕ್ಷಣವೆಂದರೆ ತಾನೂ ತಿಳಿದಿರದ ಅವನ ಪ್ರವಾದಿತ್ವ. ಸರ್ವಕಾಲದ, ಸರ್ವಮಾನವರ ಕುರಿತು ತನ್ನ ಸಂದೇಶವನ್ನು ಉಸುರುವ ಅಸ್ಪಷ್ಟಗೊಳಿ ಸುವ ಅವನ ಶಕ್ತಿ. ಈ ಶಕ್ತಿಯು ವಿಲಾಸದಲ್ಲಿ ತನ್ನ ವಿಚಿತ್ರ ಅಪೂರ್ವ ಪ್ರಭಾವಿಶಬ್ದ ಳ ಪದ ಪದ್ಯಂಗಳ ಅರ್ಥ-ಮರ್ಮವು ಅವನಿಗೇ ಪೂರ್ತಿ ಆಕಲನವಾಗಬೇಕಾಗಿಲ್ಲ. ಅಂಥಾ ಅನಾಕಲನೀಯ ದುರೂಹತೆ ವಿನಾಯಕರಲ್ಲಿ ದುರ್ಮಿಳ. ಕ್ಲಿಷ್ಟತೆ ಇರಬಹುದು.

ದುರೂಹತೆ, ಗುಂಗು ಹಚ್ಚುವ ಅಭೇದ್ಯ ಮೋಹಕತೆ, ಅಗಮ್ಯ ರಮ್ಯತೆ ಇವರ ಕಾ
ದಲ್ಲಿಯೇ ವಿರಳ.

ಆದ್ದರಿಂದಲೇ ಇವರ ಪ್ರತಿಭಾವ್ಯಾಪಾರ ರೂಪಕದಲ್ಲಿ ಓಲಾಡಿ ಪ್ರತಿಮೆಯು ಮ
ವನ್ನೇರಿದರೂ ಪ್ರತೀಕದ ಸ್ಫಟಿಕತ್ವಕ್ಕೆ "ಕಿಂಚಿದೂನ"ವಾಗಿಯೇ ತಡೆಯುತ್ತ
ಮಾರ್ಸೆಲ ಪ್ರೌಸ್ಟ ಅನ್ನುವಂತೆ "ರೂಪಕಾತ್ಮಕತೆಯೊಂದೇ ಶೈಲಿಗೆ ಅಮರತ
ಸಾರೂಪ್ಯವನ್ನು ತರುವಂತೆ" ಇದ್ದರೆ ವಿನಾಯಕರ ಕಾವ್ಯ ಈ ಮಟ್ಟದಲ್ಲಿ ಇದೆಯೆ
ಬಹುದು.

ಆದರೆ ಕವಿತೆಯ ನಿತ್ಯತೆ ಶಾಶ್ವತತೆ, ಅದರಲ್ಲಿ ಒಡಮೂಡಿದ ಪ್ರತಿಮೆಗಳ ಗ
ಹಾಗೂ ಸಾಂಗತ್ಯವನ್ನೆ ಅವಲಂಬಿಸಿರುತ್ತದೆ. ಈ ಸಾಂಗತ್ಯದ ಸಾಫಲ್ಯವು ಪ್ರತೀಕದ
ಕಲ್ಪನೆಯ ತೀಕ್ಷ್ಣತೆ ಪ್ರತಿಮೆಯನ್ನು ರೇಖಿಸಬಹುದು. ಆದರೆ ಅದಕ್ಕೆ ಭಾವನೆ
ತೀವ್ರತೆ, ಅನುಭವದ ಅಗ್ನಿದೀಕ್ಷೆಯಿಂದ ಕೂಡಿದಾಗಲೆ ಪ್ರತೀಕವು ರೂಪಗೊಳ್ಳುತ್ತ

ಕವಿ ವಿನಾಯಕರಿಗೆ ಎಂದೋ ಅಂತರ್ವಾಣಿಯೊಂದು ಕನಸಿನಲ್ಲಿ ಹೇಳಿತ್ತು.

> Imagination is the body of thought! It is for you to find
> harness out.

ಈ ಸೊಲ್ಲಿನ ಅರೆಪಾಲು ಕವಿಯು ಸಾಧಿಸಿದ್ದಾಗಿದೆ. ಇವರ ವಿಚಾರದ್ರವ್ಯ ಪ್ರತಿ
ರೂಪವಾಗಿ ಆವಿರ್ಭವಿಸುತ್ತದೆ. ಆದರೆ ಈ ರೂಪ ದ್ರವ್ಯಗಳ ಅಖಂಡ ಎರಕಹೊಯು
ಎಲ್ಲ matter ಅನ್ನು form ಆಗಿಸಬಲ್ಲ ಒಂದು ಪಲ್ಲಟದ 'ಪಲ್ಲಣ' ಹೂಟ "ಇಂ
ನಾಳೆ" ಸಾಧಿಸುವತ್ತ ಇವರ ಶೋಧಯಾತ್ರೆ ಇನ್ನೂ ಸಾಗಿದೆ.

ಆದ್ದರಿಂದ ವಿನಾಯಕರ ಕಾವ್ಯದಲ್ಲಿ ನಮಗೆ ಕಡಲ ಕುರಿತು, ಮುಗಿಲ ಕು
ಚಮತ್ಕಾರ ಪೂರ್ಣವಾದ ರೂಪಕಾತ್ಮಕವಾದ ಪ್ರತಿಮೆಗಳ "ರಂಗಸಾಲೆ"ಯೇ ತೆರೆದ
ಕಂಗೊಳಿಸುತ್ತದೆ. ಆದರೆ ಈ ಪ್ರತಿಮೆಗಳಲ್ಲಿ ಐದೂ ಇಂದ್ರಿಯ ಸಂವೇದನೆಗಳ
ಪೂರ್ತಿ ಸೂರೆಗೊಂಡು ಸತ್ವ ತುಂಬಿದಂತಿಲ್ಲ. ಆದರ್ಶ ಪ್ರತಿಮಾನಿರ್ಮಿತಿ ಈ ಐ
ಇಂದ್ರಿಯ ದ್ವಾರಗಳಿಂದ ತೂರಿಬಂದ ಅನುಭವದ ಲೋಲಕದೊಳಗಿಂದಲೆ ಮೂಡಿ
ತ್ತದೆ. ಕವಿಯ ಅಂತರಿಕ ಸತ್ಯವನ್ನು ಹತ್ತಿಕ್ಕಿ, ಈ ಇಂದ್ರಿಯ ಸಂವೇದನೆಗಳ ಸಂ
ಅನುಭವ ಪ್ರತಿಮೆಯಾಗಿ ಅವನ ಕಾವ್ಯದ ಮೇಲೆ ಅಚ್ಚೊತ್ತುತ್ತದೆ. ಯಾವುದ
ರೊಂದು ಇಂದ್ರಿಯ ಸಂವೇದನೆಯಲ್ಲಿ ಲೋಪ-ದೋಷವಿದ್ದರೆ ಕವಿಯ ಪ್ರತಿಮಾಸ
ಅಸಂಗತವಾಗುತ್ತದೆ; ಅಪಸ್ಮಾರವೂ ಆಗಬಹುದು. ಎಲ್ಲ ಪ್ರತಿಮೆಗಳು ದೃಕ್‌ಪ್ರತ್ಯ
ದಿಂದಲೇ ಅರಳುತ್ತಿದ್ದರೂ, ಸ್ಪರ್ಶಮಾತ್ರೆಯಿಂದ ಅವುಗಳಲ್ಲಿ ನಾದದ ಪರಿಸ್ಪಂದ, ದ
ದೋಷದಿಂದ ರೂಪಶಿಲ್ಪ (Plastic)ದ ಲೋಪ ಉಂಟಾದದ್ದು ಕಾಣಬಹುದು.

ಐಂದ್ರಿಯಿಕ ಸಂವೇದನೆಗಳ ಪರಿಘೋಷವಿಲ್ಲದ ಪ್ರತಿಮಾವಿಧಾನ ಗೂಢಗುಂಜನ ದಲ್ಲಿ, ಅನುಭವದ ಸೋಂಕಿಲ್ಲದ ಅನುಭಾವದಲ್ಲಿ ಓಲಾಡುತ್ತದೆ. ಅಲ್ಲಿ ಎಲ್ಲವೂ ರಹಸ್ಯ ಮಯ, ಅತೀಂದ್ರಿಯ, ಮಾಯಾವಿಭ್ರಮೆ, ಒಳಗಣ್ಣಿಗೇ ಗೋಚರವಾಗುವ ಬೆಳಕು, ಅನಾಹತಧ್ವನಿ ಶುದ್ಧ ಜ್ಞಾನದ ಆವಾಹನೆ, ಅಶ್ರುತ ವೀಣಾರವ—ಏನೆಲ್ಲಾ ಲಾಸ್ಯ ವಾಡುತ್ತದೆ—ಶೆಲ್ಲಿಯ 'ಮೋಡ'ದ ಸಮಾಧಿಯಮೇಲೆ ಗಾಳಿ ಬೆಳಕು ವಕ್ರಕಿರಣಗಳಿಂದ ಮೇಲಗೊಮ್ಮಟ ಕಟ್ಟುವಂತೆ!

ಉದಾಹರಣೆಗೆ ವಿನಾಯಕರ ಪ್ರಕೃತಿವರ್ಣನೆಗಳಲ್ಲಿ ಗಂಧವೈಚಿತ್ರ್ಯದ ಉಲ್ಲೇಖ ವಿಸಿ. ('ಕಲೋಪಾಸಕ'ನನ್ನು ಬಣ್ಣಿಸುವಾಗಲೂ ಅವನ ಕಲಾದೃಷ್ಟಿಯಲ್ಲಿ ಪ್ರಪಂಚ ವನ್ನು ವರ್ಣಿಕಾಭಂಗ ರೂಪಾಕೃತಿ, ರೇಖಾಕೃತಿಗಳ ಭಂಗಿಗಿಂತ ಸಾಂಕೇತಿಕವಾಗಿ, ತಾತ್ವಿಕವಾಗಿ, ಊಹಾಮಯವಾಗಿ ಕಾಣುವ ಬಗೆ ಹೆಚ್ಚು!) ಇಲ್ಲಿಯೂ ಕಡಲು ಮುಗಿಲುಗಳ ಯಥಾರ್ಥ ಸ್ವಾಭಾವಿಕ ಚಿತ್ರಣಕ್ಕಿಂತ, ಈ ಮಾತು ಕಡಲಿಗಿಂತ ಮುಗಿಲಿಗೇ ಹೆಚ್ಚು ಒಪ್ಪುತ್ತದೆ. ಅಪ್ರಸ್ತುತ ವಿಧಾನಗಳಲ್ಲಿ ಉತ್ಪ್ರೇಕ್ಷಣೀಯ ಚಾತುರ್ಯದಲ್ಲಿ ಅವುಗಳನ್ನು ರೂಪಿಸುವ ಒಲವು ಹೆಚ್ಚಾಗಿ ಕಂಡುಬರುತ್ತದೆ. ಡಾ. ಶಿವರಾಮಕಾರಂತ, ಡಾ. ಪುಟ್ಟಪ್ಪನವರ ಗದ್ಯದಲ್ಲಿಯೂ ತುಂಬಿತುಳುಕುವ ಪ್ರಕೃತಿ ವರ್ಣನೆಯ ನೈಜತೆ,ಅದ್ಭುತ ಚಿತ್ರಮಯತೆ,ರೂಹುಗಾರಿಕೆಯ ಉತ್ಕಟತೆ,ವಿನಾಯಕರು ಈ ವಿಷಯಕ್ಕಾಗಿಯೇ ಮುಡಿಪಿಟ್ಟ ಕಾವ್ಯದಲ್ಲಿ ಅಷ್ಟೊ ನಿಬಿಡವಾಗಿ ನಿರ್ಭರವಾಗಿ ಕಂಡುಬರುವುದಿಲ್ಲ. ಇದು ಕೃತಿಯ ವಿಕೃತಿಯಲ್ಲ, ಕವಿಯದೇ ಪ್ರಕೃತಿ.

ಇಲ್ಲಿ ಬರುವ ಚಿತ್ರಣ ರೂಪಣಗಳು, ಪ್ರತಿಮಾ ವಿಧಾನವು ಕಲ್ಪಕತೆಯ ಚಾತುರ್ಯ ದಿಂದ ಬೆರಗುಗೊಳಿಸಬಹುದು. ಬೆಡಗು ಬೀರಬಹುದು. ಆದರೆ ಹಾರ್ದಿಕ ತೃಪ್ತಿಯನ್ನು ಮಾನಸ್ಯದ ಆತ್ಮೀಯತೆಯನ್ನು ನೀಡಲಾರವು.

ಇಂದ್ರಧನುಸ್ಸಿನ ಖಂಡವನ್ನು ನೋಡಿಕೊಂಡು ನಿಂತ, ಕಾಲಿದಾಸನ ಮೇಘವು ನವಿಲುಗರಿಯ ಓರೆಯಲ್ಲಿ ಗೋಪ ವೇಷದ ವಿಷ್ಣುವಿನಂತೆ ತೋರುವುದು. ಇದೇ ಮಾದರಿಯ ಚಿತ್ರದೀಪಕ ಪೌರಾಣಿಕ ಪ್ರತಿಮೆಗಳನ್ನು ಕವಿ ವಿನಾಯಕರೂ ನೀಡಿದ್ದಾರೆ. ಆದರೆ ಅದೇ ಮೋಡವನ್ನು "ಪ್ರೀತಿಸ್ನಿಗ್ಧೈಃ ಜನಪದವಧೂಲೋಚನೈಃ ಪೀಯಮಾನಃ" ಎಂಬ ಮಾತಿನಿಂದ ಅದೇ ಕಾಲಿದಾಸನು ಉತ್ಕಟರೀತಿಯ (intimate) ಸಂಬಂಧದಲ್ಲಿ ತಂದು ನಿಲ್ಲಿಸಿದ್ದೂ ಇದೆ. ವಿನಾಯಕರ 'ನೀರದ', ನಾರದ ಸೂತ್ರದ ಜೇಡರ ಬಲೆಯನ್ನು ಹೆಯ್ದು 'ಊರ್ಣನಾಭ'ನಂತೆ ತಾನೇ ಇದರಲ್ಲಿ ಸಿಲುಕಿ ಬಿದ್ದಂತಿದೆ!

ಅಮೆರಿಕನ್ ಸ್ಪಾನಿಶ್ ಕವಿ ಲೋರ್ಕಾನ ಕುರಿತು ಒಬ್ಬ ವಿಮರ್ಶಕ ಆಡಿದ ಅಭಿ ಪ್ರಾಯ ವಿನಾಯಕರಿಗೂ ಕೆಲಮಟ್ಟಿಗೆ ಅನ್ವಯಿಸುವಂತಿದೆ. "ಈ ಕವಿ ತನ್ನ ಪ್ರತಿಮೆ ಗಳನ್ನು ನೇರವಾಗಿ ನಿಸರ್ಗದಿಂದಲೇ ರೂಪಿಸುವುದಿಲ್ಲ. ಅದರ ಬದಲು ಇವನು ತನ್ನ

ವರ್ಣ್ಯವಸ್ತುವನ್ನೋ, ಕೃತಿಯನ್ನೋ ತನ್ನ ಮಿದುಳಿನ ಕತ್ತಲೆ ಕೋಣೆಯಲ್ಲಿ ಒ (ಅಲ್ಲಿ ರಾಸಾಯನಿಕ ಕ್ರಿಯೆಗೊಳಪಡಿಸಿ) ಅಲ್ಲಿಂದ ಹೊರಜಗತ್ತಿನ ಇದುರು ಹ ದೊಂದು ಅಲೌಕಿಕ, ಕೃತಕ, ಕೌತುಕದ ಆವಿರ್ಭಾವಹೊಂದಿ, ಹೊಮ್ಮಿ ಬರು ಮಾಡುತ್ತಾನೆ" ಆ ಸ್ಪಾನಿಶ್ ಕವಿ ಸಮುದ್ರವನ್ನು

ಸಂಗಮರವರಿಯಲ್ಲಿ ಕೆತ್ತಿ ಕೂಡಿಸಿದ ಸದಾ ತೊನೆದಾಡುವ ದೊರಗು ಪಚ್ಚದ ಹಾ

ಎಂದು ಕರೆಯುತ್ತಾನೆ. ಈ ವರ್ಣನೆಗೂ ಪ್ರತ್ಯಕ್ಷ ಕಡಲಿನ ಸ್ವರೂಪಕ್ಕೂ ಅದೆ ಅಂತರ! ಕಡಲಲ್ಲಿ ಪಚ್ಚದ ಹರಳು ಕಾಣುವ ಅಗತ್ಯವೇನು? ಅದೊಂದೇ ಅ ಇದೊಂದೆ ಸಾಕು ತನ್ನ ಚೆಲುವಿಗೆ!

ಉತ್‌ಸ್ಫೂರ್ತಿ ಮತ್ತು ಪರಿಷ್ಕಾರ

ಇದಿಷ್ಟು ಸಾಮಾನ್ಯ ಸಮಾಲೋಚನೆಯಿಂದ ವಿನಾಯಕರ ಕಡಲು-ಮುಗಿಲ ವಿಶೇಷ ಸಮೀಕ್ಷೆಗೆ ಹೊರಳೋಣ. ಡಾ. ಎಚ್. ಬಿ. ಕುಲಕರ್ಣಿ (ಹೇಮಂತ) ಇ ಹೇಳಿದಂತೆ ಆಧುನಿಕ ಕನ್ನಡ ಕಾವ್ಯಕ್ಕೆ ಅಪೂರ್ವ ಕಾಣಿಕೆ 'ಸಮುದ್ರ ಗೀತ ನಮ್ಮ ಮಟ್ಟಿಗೆ ಹೇಳುವುದಾದರೆ 'ಇಂಗ್ಲಿಷ್ ಗೀತೆ'ಗಳಿಂದ ಕನ್ನಡ ಕಾವ್ಯದಲ್ಲಿ ಆ ಕತೆಯ ಅಧಿಕೃತ ಅರುಣೋದಯವಾಗಿದ್ದರೆ, ನವ್ಯಕಾವ್ಯದ ಶುಕ್ರೋದಯವಾ ಸಮುದ್ರಗೀತೆಗಳಿಂದ.

ಇಂಗ್ಲೆಂಡದ ಕಡಲು ಪಯಣದಲ್ಲಿ ಮಹಾಸಾಗರದ ಅವರ್ಣನೀಯ ವೈಭವ ಕಣ್ಣುಕುಕ್ಕುವ ವಾಸ್ತವಿಕ ವೈವಿಧ್ಯವನ್ನೂ ಅನುಭವಿಸಿ, ಉತ್ಸಾಹಿಸಿ ಅದನ್ನು ಕಾವ್ಯದಲ್ಲಿ ಆವಿಷ್ಕರಿಸಿದ್ದೂ ಕನ್ನಡದಲ್ಲಿ ವಿನಾಯಕರೇ ಮೊದಲು. ಇಲ್ಲಿ ಕಡ ಕಂಡು ಕೊಂಡಾಡುವ ಕಣ್ಣಿನಲ್ಲಿ ಕಂದನ ಕುತೂಹಲವಿದೆ; ಕೌತುಕವಿದೆ. ವಿಶ್ವ ವನ್ನು ನೋಡಲಿಕ್ಕೆ ಶ್ರೀಕೃಷ್ಣನು ಅರ್ಜುನನಿಗೆ ದಿವ್ಯ ಚಕ್ಷುವನ್ನು ಕೊಡಬೇಕಾಯಿ ಇಲ್ಲಿ ಈ ವಿರಾಡ್ರೂಪವನ್ನು ನೋಡಿದ ಮಾತ್ರಕ್ಕೆ ಈ ಪಂಡಿತ ಕವಿಗೆ ನವ್ಯ ಮೂಡಿಬಂದಿತು. "ತ್ರಿಪುಟರಹಿತ"ವೆಂಬ ಸಮುದ್ರರಾಜನು ಹೊಸ ತ್ರಿಪುಟಿಯ ಉಂಟುಮಾಡಿದನು!

ಕವಿಯ ದನಿಗೂಡಿಸುವ ಶಕ್ತಿಗೆ ಸ್ಫುರಣ ನೀಡುವ ಕಾಲ ಕೂಡಿಬಂದಿತು. ಕೂ ಅಭ್ಯಾಸ ಬಲದಿಂದ ಕವಿಯು ಹೊಸ ಅನುಭೂತಿಯನ್ನೆಲ್ಲ ನಿಸರ್ಗ ಚಿತ್ರಕಾರನಂತೆ ಭರನೆ ಶಬ್ದ ವರ್ಣವ್ಯಂಜನೆಯಲ್ಲಿ ಅಂಕಿತಗೊಳಿಸತೊಡಗಿದನು. ವಿನಾಯಕರು ಹ ಅನುಭವವನ್ನು ರೂಪಿಸಲು ಬರೆದ ಎಲ್ಲ ಕೃತಿಗಳಲ್ಲಿಯೂ ಇದೆ ತ್ವರೆ, ತವಕ, ಉ ಸ್ಫೂರ್ತಿ ಕಂಡುಬರುತ್ತದೆ. ಹಿರಿಯ ಫ್ರೆಂಚ್ ಕವಿ ಪಾಲವೆಲೆರಿಯ ಮತದಂತೆ;

The state of inspiration is not the most advantageous one for writing of poetry. The inspired state is a state of self withdrawal and not a creative dynamism. Conciptual vision must be calmed before it can be clarified. I cannot believe that any great artist works in a fever. One returns from the inspired state as one returns from foreign country. The poem is the legend of the journey. Inspiration furnishes the image but not the investure. To clothe it, it is necessary to weigh the quality and sonoriety of each word coolly and without dangerous afflatus.

ಪಾಲವೆಲೆರಿಯ ಅಭಿಪ್ರಾಯವನ್ನು ಸಂಗ್ರಹಿಸಿದವನು ಎಂಜೆಲ ಡೆಲ್‌ರಿಂಮೊ. ಈ ದೀರ್ಘ ಅವತರಣಿಕೆಯ ತಾತ್ಪರ್ಯವಿಷ್ಟೆ—ಕವಿತೆಯ ನಿರ್ಮಿತಿಗೆ ಉತ್ಸ್ಫೂರ್ತಿಯ ಮನಃಸ್ಥಿತಿ ವಿಶೇಷ ಪೋಷಕವಲ್ಲ. ಈ ಸ್ಥಿತಿಯಲ್ಲಿ ಮನಸ್ಸು ಬಾಹ್ಯದಿಂದ ಹಿಂದೆ ಸರಿದು ಆತ್ಮ ಮಗ್ನ ವಾಗಿರುತ್ತದೆ. ಆಗ ಸೃಜನಶೀಲ ಚೈತನ್ಯ ಉಕ್ಕುವುದಿಲ್ಲ. ಕಲ್ಪಕತೆಯು ದರ್ಶನಕ್ಕೆ ಹಾಯುವ ಮುಂಚೆ ಶಮನಹೊಂದಿ ತಿಳಿಯಾಗಬೇಕು. ಜ್ವರದಲ್ಲಿ ಯಾವ ಕಲಾವಿದನೂ ಕೆಲಸಮಾಡಲಾರ. ಉತ್ಸ್ಫೂರ್ತ ಸ್ಥಿತಿಯಿಂದ (ಅವರ ಉನ್ಮನಾವಸ್ಥೆಯಿಂದ) ಕವಿಯು ಸ್ವಸ್ಥತೆಗೆ ಮರಳಬೇಕು — ವಿದೇಶಯಾತ್ರೆಯಿಂದ ಮನೆಗೆ ಬಂದಂತೆ. ಅವನ ಕವನವು ಆ ಯಾತ್ರೆಯ ಆಖ್ಯಾಯಿಕೆ. ಉತ್ಸ್ಫೂರ್ತಿಯು ಪ್ರತಿಮೆಯನ್ನು ಒದಗಿಸುತ್ತದೆ. ಆದರೆ ಅದರ ಪರಿವೇಷ ಪರಿಷ್ಕಾರಗಳನ್ನಲ್ಲ. ಅದಕ್ಕೆ ಅವನು ತೊಡಿಸಲು ಒಂದೊಂದು ಶಬ್ದದ ಗುಣವನ್ನೂ, ನಾದವನ್ನೂ ಶಾಂತಚಿತ್ತದಿಂದ ನಿರ್ವಿಕಾರವಾಗಿ ತೂಗಿ ನೋಡುವದು ಅವಶ್ಯ.

ವರ್ಡ್ಸ್‌ವರ್ಥ್ ಕವಿಯೂ ಕವನವೆಂದರೆ ಪ್ರಬಲ ಭಾವೋದ್ರೇಕಗಳನ್ನು ಸಮಾಧಾನ ದಲ್ಲಿ ಪುನಃಸ್ಮರಿಸಿಕೊಳ್ಳುವದೆಂದು ವ್ಯಾಖ್ಯಾನಿಸಿದ್ದಾನೆ. ಅವನ ಈ ವ್ಯಾಖ್ಯೆಯ ಪೂರ್ವಾರ್ಧ ಮಾತ್ರ ಅರ್ಧ ಸತ್ಯದಂತೆ ಜನಪ್ರಿಯವೂ ಘಾತುಕವೂ ಆಗಿ ಆಗಾಗ್ಗೆ ಎತ್ತಿ ಹೇಳಲಾಗುತ್ತದೆ! ವಾಲ್ಮೀಕಿಯು ವ್ಯಾಧವಿದ್ಧ ಕ್ರೌಂಚ ಪಕ್ಷಿಯನ್ನು ಕಂಡು ಮಮ್ಮಲ ಮರುಗಿದ. ಶೋಕ ಶ್ಲೋಕತ್ವವನ್ನು ಹೊಂದಿತಾದರೂ ಆಗ ಹೊಮ್ಮಿದ್ದು ಹೊಸ ಛಂದಸ್ಸು ಮಾತ್ರ. ಆತ ಆಶ್ರಮಕ್ಕೆ ಮರಳಿದ ಮೇಲೆ ಬ್ರಹ್ಮನ ಆದೇಶದಂತೆ ಮುಂದೆ ವಿರಾಮದಲ್ಲಿ ಸಡಾನವಾಗಿ ಆದಿಕಾವ್ಯವನ್ನು ರಚಿಸಿದನು.

ಆದರೆ ಸಾಮಾನ್ಯವಾಗಿ ಈ ಕವಿಯು ವಿದೇಶ ಸಂಚಾರಮಾಡಿ ಬರುವಾಗೆಲ್ಲಾ ತನ್ನ ಪ್ರತಿಭೆಯಲ್ಲಿ ಉದ್ಬೋಧಿತ ಅಪೂರ್ವ ಸಂಗತಿಗಳನ್ನೆಲ್ಲ ಕವನಗಳಲ್ಲಿ ಸಂಗ್ರಹಿಸಿಯೇ ತರುವುದನ್ನು ಕಾಣುತ್ತೇವೆ. ವಿಮಾನದಲ್ಲಿ, ಹಡಗದಲ್ಲಿ, ಕಂಡುಂಡ ಹೊಸ ಅನುಭವ ವನ್ನೆಲ್ಲ ಕವನ ಬದ್ಧಮಾಡಿಡಲು ಈ ಕವಿಗೆ ಕಾಲಹರಣವಿಲ್ಲ. ಅಂದರೆ ಒಂದುರೀತಿ

ವಿನಾಯಕರ ಕವಿತ್ವಕ್ಕೆ ಸಾಕಷ್ಟು incubation ಅವಧಿ—ಪಾಕಕ್ಕೆ ಅವಕಾ
ಸಿಗುವದೇ ಇಲ್ಲವೋ ಎಂದೆನಿಸುತ್ತದೆ. ಆದ್ದರಿಂದ ಅನೇಕ ಸಲ ಗದ್ಯಾತ್ಮಕ ವಸ್ತು
ಕಾವ್ಯವಾಗಿಸುವ ರಭಸದಲ್ಲಿ ಕಾವ್ಯಾತ್ಮಕ ವಸ್ತುವೂ ಗದ್ಯದಂತೆ ಆಗಿಬಿಡುವುದುಂ
ಆದಾಗ್ಯೂ ಉತ್‌ಸ್ಫೂರ್ತಿಗೇ ಕೊರತೆ ಬೀಳುವಂತೆ ಇರುವಲ್ಲಿಯೂ ಈ ಕ
ಶೈಲಿಯ ಉತ್ಸಾಹ ಮತ್ತು ನವನವೋನ್ಮೇಷದ ಉತ್ಸುಕತೆ ಕೃತಿಯಲ್ಲಿ ಯ
ಯಾಗುತ್ತದೆ.

ಕಡಲು

ವಿನಾಯಕರು 'ಮುಗಿಲಿ'ಗಿಂತ 'ಕಡಲ'ನ್ನೇ ಹೆಚ್ಚಾಗಿ ಇದ್ದಕ್ಕಿದ್ದಂತೆ ಕಾ
ಕಾಣಿಸಲು ಹವಣಿಸಿದ್ದಾರೆ. ಆದರೂ ಉಭಯ ಪ್ರಸಕ್ತಿಯಲ್ಲಿಯೂ ಕವಿಗೇ ಪ್ರಸ
ವಸ್ತುವಿನ ಮೇಲೆ ಆಗಾಗ್ಗೆ ಪೌರಾಣಿಕ, ಐತಿಹಾಸಿಕ, ಇಲ್ಲವೇ ಕಾಲ್ಪನಿಕ ಪ್ರತಿಮ
ಗಳನ್ನು ಆರೋಪಿಸಿ ಅವನ್ನೇ ಬಣ್ಣಿಸುವ ಒಲವು ಬಲವಾಗುತ್ತದೆ. ಇಂಥ ಅಧ್ಯಾರೋ
ಗಳನ್ನು "ನೀರದ" ವಿಭಾಗದಲ್ಲಿ ಹೇರಳವಾಗಿ ಕಾಣಬಹುದು.

ಈ ಪ್ರತಿಮೆಗಳ ವರ್ಗೀಕರಣ ಮೂರು ಬಗೆ. ವಿವರಣಾತ್ಮಕ, ಆಭರಣಾತ್ಮಕ ಮ
ದಾರ್ಶನಿಕ (ಅತಿಭೌತಿಕ). ಆದರೆ ಮನಸ್ಸನ್ನು ತಬ್ಬಿಬ್ಬಾಗಿಸುವ, ಬಡಿದೆಬ್ಬಿಸ
ಕಳವಳಗೊಳಿಸಬಲ್ಲ, ಯಾವುದೋ ನರವನ್ನೂ ಮೀಟಿ ಮಿಡುಕಿಸುವ ಆಳವಾದ ಅರಿವ
ಹುಟ್ಟಿಸುವ,ಅಥವಾ ಸ್ವಚ್ಛಂದ ಸ್ವೈರ ಊಹೆಯಿಂದ ನಮ್ಮನ್ನೂ ಉದ್ದೀಪಿಸುವ ಕ
ಕಸುವು ಈ ಪ್ರತಿಮೆಗಳಲ್ಲಿ ಕಡಿಮೆ. ಈ ಕವಿಗೆ ತಾತ್ಕಾಲಿಕ ಆವೇಶವಿದ್ದರೂ ಆಂತ
ಆವೇಗ ಉದ್ವೇಗಗಳ ಉಮ್ಮಳವಿಲ್ಲದಿರುವುದೇ ಇದಕ್ಕೆ ಕಾರಣವೆನ್ನಬಹುದು.

ಆಧುನಿಕ ಕಾವ್ಯದಲ್ಲಿ—ಪಾಶ್ಚಾತ್ಯರಲ್ಲಿ—ಸಮುದ್ರವು ಅಂತರ್ಮನದ, ಮನ
ಅಜಾಗ್ರತ ಸ್ತರದ ಪ್ರತೀಕ. ವಿನಾಯಕರು ಅದನ್ನು ಹಾಗೆ ಮನಗಂಡಿರುವ
ಗೊತ್ತಿಲ್ಲ. ಆದರೆ ಅವರು ಕಡಲಲ್ಲಿ ಕಂಡ ವಿರೋಧಾಭಾಸದ ಈ ವರ್ಣನೆ ಅಂತರ್ಮ
ಅಂತಃಸಮುದ್ರಕ್ಕೂ ಅನ್ವಯಿಸುವಂತಿದೆ—

. . . ಸಂಕ್ರಾಂತಿ ಪುರುಷ
ಹಳೆಯದನೆಲ್ಲ ಒಳಗೊಳಗೆ ಕಾಯ್ದ
ಹೊಸದನೆಲ್ಲ ಹೊರಗೆ ಸೂರೆಗೆಯ್ದು
ಚಿರಸನಾತನವಾಗಿ
ಪುನರ್ನವವಾಗಿ ಸಲಿಲಲೀಲೆಯಲ್ಲಿರುವ ಚೈತನ್ಯವೇ! (ಕಂಡೆ)

* * *

. . . ನೀನು ಶಾಂತ ನೆನ್ನಲೆ
ತೆರೆತೆರೆಯಾಗಿ ಹಾಯ್ದು ಮೇಘನಾದಗೆಯ್ದು
ನೀನು ಕ್ಷುಬ್ಧ ನೆನ್ನಲೆ—

ದೂರ ಮುಗಿಲಗೆರೆಯನ್ನಪ್ಪಿ ನಿದ್ರಿಸುತಿರುವೆ
ಶಾಂತಿಯಿಲ್ಲ ಕ್ಷೋಭೆಯಿಲ್ಲ ನಿನಗೆ
ಶಾಂತಿಯಿದೆ ಕ್ಷೋಭೆಯಿದೆ ನಿನಗೆ
ಮಾನವನಂತೆ ಸಮಾಧಾನರಹಿತ
ದೇವನಂತೆ ಶಾಂತಿಪೂರಿತ
ಭದ್ರ ರುದ್ರನಿರುವೆ . . . (ಗುರುತು)

ಕವಿಗೆ ಕಡಲು ದೇಶ ಕಾಲ ಮೀರುವ ಪ್ರತಿಮಾರಾಜ್ಯ. ಮರಣ-ಹರಣಗಳ ಪ್ರತೀಕ. ಸಮುದ್ರವನ್ನು ರುದ್ರಪುರುಷ, ಸಂಕ್ರಾಂತಿಪುರುಷ, ಮಾರುತಿ, ಬಲಭೀಮ, ತ್ರಿಪು ಾಂತಕ, ಮಾರ್ತಂಡ ಭೈರವ, ಎಂದೆಲ್ಲ ಕವಿ ಸಂಬೋಧಿಸಿದ್ದಾರೆ. ಜತೆಗೆ ಸುಮನೋ ೇರಮೂರ್ತಿ, ನಟಸಮ್ರಾಟ, ಸಕಲ ಸಾರ್ವಭೌಮ, ಸ್ವಯಂಭೂ ಎಂದು ಹೆಸರಿಸಿ ್ದಾರೆ. ಇಲ್ಲಿ ಹಲವು ಹೆಸರು ಹುರುಳುಳ್ಳವು. ಕೆಲವು ಹಾಗಿಲ್ಲ. ಮಾರ್ತಂಡ ೂರ್ಯನ ಹೆಸರು. ಕಡಲು ಮೃತ-ಅಂಡವೇ ? ಅದೇ ರೀತಿ ತರಂಗಗಳನ್ನು ತುರಂಗ ಳಿಗೇ ಹೋಲಿಸಿದ ಮಾತ್ರಕ್ಕೆ ಅವುಗಳ ದೊರೆ "ಹಯವದನ" ಹೇಗೆ ?

ಖಂಡ ಖಂಡಗಳನ್ನು ಹೊಂದಿಸಿ ತನ್ನೆದೆಯ ಮೇಲೆ ಜಾತಿ ಜಾತಿಯ ಮಾನವರನ್ನು ೇಲಿಬಿಟ್ಟ ವಿಶ್ವಕುಟುಂಬಿಯ ಪಾಂಗನ್ನು ಅದರ ದೈವಿಕತೆಯನ್ನು ವಿನಾಯಕರು ಡಲಿನಲ್ಲಿ ಕಂಡಿದ್ದಾರೆ. ಕಡಲ ತೆರೆತೆರೆಗಳಲ್ಲಿ ಹುಟ್ಟು ಸಾವಿನ ಗುಟ್ಟನ್ನು, ಕಾವ್ಯದ ಲಿಯನ್ನು ಕಂಡಿದ್ದಾರೆ. "ಹಿಂದಿನ ಕಾವ್ಯವಲ್ಲಿಯಂತೆ" "ನಿನ್ನನ್ನು ನೋಡದೆ ಬಣ್ಣಿಸಿ ಾನು ಹಕ ಹಳಿಸಿಲ್ಲ."— ಎನ್ನುತ್ತಾರೆ ಕವಿ. (ಓಂ ನಮೋ)

ಕಡಲಿನ ದೈವಿಕತೆಯನ್ನು ಅರಿತ ಕವಿಗೆ ಅದರ ವರ್ಣನೆಗೆ ದಿವ್ಯಉಪಮೆ-ಉತ್ಪ್ರೇಕ್ಷೆ ಳೇ ಸಿಲುಕಿದರೆ ಅದು ಸೋಜಿಗವಲ್ಲ. ಕಡಲ ನೊರೆ ? "ಕಿನ್ನರ ಕಿಂಪುರುಷರ ನೌಕೆಗಳಂತೆ ೇಲುತಿಹವು ಬುರುಗು ಬಳ್ಳಿ." ಕಡಲ ತೆರೆ ? — "ಹೆಡೆಯಲಿಪುಷ್ಯರಾಗವಿಹ ಕಾಳಸರ್ಪ ಳಂತೆ" ಸಮುದ್ರದ ದೈವಿಕತೆಯನ್ನು ಕವಿ ಹೀಗೆ ಧ್ವನಿಸಿದ್ದಾನೆ.—

ಆಹಾ ! ನೀರೆ ! ನಿನ್ನ ಸೌಭಾಗ್ಯವೇ ಸೌಭಾಗ್ಯ
ನಿನ್ನ ಚಿರಜೀವಿ ಪಟ್ಟವೇ ಪಟ್ಟ
ಆಹ ! ನೀರೆ ! ಅಂತಪಾರವಿಲ್ಲದ ನೀರೆ
ದೇವರು ನಿನ್ನಳಿಯ ! ದೇವತೆಗಳು ನಿನ್ನಣುಗರು
ಆಹ ! ನೀರೆ ! ದಿಕ್ಕಿಲ್ಲದ ಮಿಕ್ಕಿಲ್ಲದ ನೀರೆ !
ಯಾರಲ್ಲಿ ನಿಂತಿತು ನಿನ್ನ ನೀರು ?
ಸಾವಿಲ್ಲ ನೋವಿಲ್ಲ ನಿನಗೆ
ಮರಣದಂಥ ಹರಣಗಳು ಚಲಿಸುತಿಹವು
ನಿನ್ನ ತಿಮಿಂಗಲ ತಿಮಿರೋದಕದಲ್ಲಿ
ಲಾಲನೆಪಾಲನೆ ಇಲ್ಲ ನಿನಗೆ

ಹುಟ್ಟಿಲ್ಲ ಮುಪ್ಪಿಲ್ಲ ನಿನಗೆ
ತ್ರಿಪುಟಿರಹಿತನಾಗಿರುವೆ
ಓ ಸ್ವಯಂ ಭೂ!

(ಆಹ! ನೀರೆ!)

* * *

. . . ಕಡಲು ಉದಾರ—
ಬೆಳಗ ಬಂದವನನ್ನು ಮುಳುಗಿಸುವದಿಲ್ಲ
ಮುಳಗ ಬಂದವನಿಗೆ ಬೇಡೆನ್ನುವದಿಲ್ಲ
ದೇವನಂತೆ ಅನಾಸಕ್ತ

* * *

ನಿನ್ನೇಕಾಂತದಲ್ಲಿ ಮೊಳಗುವದಾವಂತದ ಗುಟ್ಟು

(ವಿಶ್ವಕುಟುಂಬಿ)

ಅಲ್ಲ, ಸಾಗರವಲ್ಲವಿದು, ಶೂನ್ಯದ
ತವರಮನೆ ನಶ್ವರತೆಯಾಗರವು
ಪಂಚಭೂತಗಳ ಮೂಲಭೂತ

ಇದನ್ನೇ ಕವಿ ಇನ್ನೊಂದು ವೃತ್ತಿಯಲ್ಲಿ ಹೀಗೂ ಕಾಣುತ್ತಾನೆ—

ರಸವಾಗದ ಕಸ, ಅವಿದ್ಯೆ, ಅಂಧಃ ತಮಸ್ಸು
ತೆರೆಗಳ ಜಾಲವೀಸಿದ ಅವ್ಯಕ್ತ

ಈ ಭಾವದಲ್ಲಿ ಸಮುದ್ರ ರುದ್ರ-ಅಭದ್ರ.

ಮಹಾಭೂತಗಳ ನುಂಗಿ ನೀರ್ಕುಡಿಯುತ್ತ
ಮತ್ತಮದಗಜದಂತೆ ಕ್ರೀಡಿಸುತನಿಂತ

(ಪಂಚಾನನ)

ಕೇವಲ ಶಾಬ್ದಿಕ ವಿರೋಧಾಭಾಸ ಸಾಧಿಸಲು ಹೊರಟ ಕವಿಯ ಮಾತಿನ ವ ಮೋಸಮಾಡಿದೆ! "ಮತ್ತಮದ" ಗಜವೆಂದರೇನು ಮತ್ತೆ? ಗಜದಂತೆನಿಂತ ಯಾವ ರೀತಿಯದು? (ಆದರೆ ಇಲ್ಲಿ "ಶಾರ್ದೂಲ" ವಿಕ್ರೀಡಿತದಂತೆ ಕಾಣುವ "ವ ಭ"ವಿಕ್ರೀಡಿತವನ್ನು ಹಂಬಲಿಸಿಕೊಂಡಿರಬೇಕು.)

ನಿನ್ನೆದುರು ನರನೆಂಬ ಪಿಳ್ಳಿ ಬರಿನೀರ್ಗುಳ್ಳಿ,
ಕೆರಳದಿರು! ಕರುಣಿಸು! ಶರಣು ಶರಣು!

(ಏಕಮೇವ)

ಹಾಗೆಯೇ,

ಮೆರೆಯ ಬಂದ ಮಾನವನು
ಹಸುಗೂಸಾಗಿ ಮರೆಯುವನು.

ಈ ಕೆಳಗಿನ ಕೆಲವು ಪ್ರತಿಮೆಗಳು ಸ್ಪಷ್ಟವಾಗಿವೆ—

ತೆರೆಗಳ ತುಮುಲ ಯುದ್ಧವ ನೋಡಿ
ನೀರು ನಕ್ಕ ನಗೆಯೇ ನೊರೆಯಾಯ್ತು.

(ಮಿಂಚಿದ ಮಾತು)

ನೀರು ನೀಲಗಂಬಳಿಹಾಸಿ
ಹಚ್ಚ ಪಚ್ಚನ್ನ ಹೊದಿಕೆ ಹೊಚ್ಚಿ
ಸೀರ್ಪನಿಗಳ ಸೆಂಡಾಡಿ
ತೆರೆಯ ತೊಟ್ಟಿಲಲಿ ತೂಗುತಿರುವೆ!

(ಸಲಿಲ ಲೀಲೆ)

ಇದು ಬೋರ್ಕರ್‌ರು ಉದಾಹರಿಸಿದ ಪ್ರತಿಮೆಯನ್ನೂ ಮಿಗುವ ಮಾನವೀಮೂರ್ತತೆಯನ್ನು ಚಿತ್ರಮಯವಾಗಿ ಹೊಂದಿದೆ.

ಗಾಳಿಯಲಿ ರೆಕ್ಕೆ ಬೀಸುತಿದೆ ಪಕ್ಷಿಗಳಾವು
ಈಸುತಿವೆ ಗಾಳಿ ನೀರಿನಲಿ ರೆಕ್ಕೆ ಬಡಿದು

(ಸಲಿಲ ಲೀಲೆ)

ಲವೆಡೆಗೆ ಕಡಲ ಬಣ್ಣಬಣ್ಣದ ನೋಟದ ಸಹಜೋಕ್ತಿ ವಿನ್ಯಾಸ (ಸ್ವಭಾವೋಕ್ತಿ ಂಬ ಪರಿಭಾಷೆ ಬೇರೆ ಏಕೆ?) ಸೊಗಸಾಗಿ ಬಂದಿದೆ.

ಬೆಣ್ಣೆ ಕಡೆದ ಮಜ್ಜಿಗೆಯಂತೆ
ಹುಟ್ಟೆ ಕಡೆದ ನೀರು ಅಟ್ಟಿಸುತಿಹುದು.

(ಏಕಮೇವ)

ನೌಕೆಯು ಸಾಗಿರೆ ನೇರವಾಗಿ ತನ್ನೆದೆಯಮೇಲೆ
ಕ್ಷೀರಸಾಗರವಾಗಿ ಸುಗಮವಾಗಿಸಿದ ಪಥವ
ಮಳೆ ಬಿಲ್ಲುಗಳಿಂದ ಮಜ್ಜನಗೊಳಿಸಿದ.

(ಉದಾರ ಸಮುದ್ರ)

* * *

ಇಲ್ಲಿ ನೋಡಿಲ್ಲಿ
ಮುಗಿಲು ಮುನ್ನೀರ ಚುಂಬಿಸಿತಿಲ್ಲಿ
ಮುನ್ನೀರು ಮುಗಿಲ ರಂಬಿಸಿತಿಲ್ಲಿ
ಸಂಬಿಸಿತಿಲ್ಲಿ. ಬೆಳಗು
　　ಕೂಟದ ಗೆರೆ ಬೆಳ್ಳಿಯ ಕಟ್ಟೆಂದು
　　ಬಿಂಬಿಸಿತಿಲ್ಲಿ ಸಂಜೆ
　　ಪರಿಧಾನವಿದು ನೀಲಿಮರೇಖೆಯೆಂದು.

(ಪರಿಧಾನ)

* * *

ಮುಗಿಲಿಗಿಂತ ಮಿಗಿಲು ಸಾಗರದ ನೀಲಿ
ಸಾಗರದ ತುದಿತಟ್ಟಿ ಮುಗಿಲೆಲ್ಲ ನೀಲಿಯಾಗಿಹುದು
ಮುಗಿಲನಂತತೆಯಲ್ಲಿ ಮುನ್ನೀರ ಗರ್ಭಪಿಂಡ.

(ಕಡಲು ಮುಗಿಲುಗಳ ಈ ಅನ್ಯೋನ್ಯಾನ್ವಯವು ಕವಿಯು ಮುಂದೆ ಮುಗಿಲ ಕು
ಆಡಿಸ ಕಲ್ಪನಾ ವಿಲಾಸಕ್ಕೆ ಒಂದು ಸೂಚಿ !)

ಕಡಲ ಬಗೆಗೆ ಕವಿ ಮತ್ತೆ ಮತ್ತೆ ನೆನೆಯುವುದು ನೆಯ್ಯುವುದು ಸಮುದ್ರ ಮಂಥನ ಮತ್ಸ್ಯ ಕೂರ್ಮಗಳ, ಇಂದ್ರ-ವರುಣರ, ಸಪ್ತಾಶ್ವಗಳ, ಇಂದ್ರ ಧನುಸ್ಸುಗಳ ಪ್ರತೀ ಗಳಿಂದ ವಿಧವಿಧವಾದ ಗುಂಫನಗಳು. ಇವುಗಳಿಂದ ಬಿಡುಗಡೆ ಹೊಂದಿದಾಗ ಕಲ್ಪನೆ ಹೊಸ ಕಲ್ಪಕಥೆ (myth) ಕಟ್ಟಲು ಉತ್ಪ್ರೇಕ್ಷಣೆಯಲ್ಲಿ ತಲ್ಲೀನವಾಗುವು ಅಂಥ ಒಂದೆರಡು ಮಾರ್ಮಿಕ ಕಲ್ಪಾಕೃತಿಗಳು 'ಮಧ್ಯರಾತ್ರಿ' 'ಕಡಲ ಹುಣ್ಣಿ ಮತ್ತು 'ಮುನ್ನೀರುಪ್ಪು'.

'ಮಧ್ಯರಾತ್ರಿ' ಸಮುದ್ರರಾಜನ ಪ್ರಣಯ ಮುಹೂರ್ತವನ್ನು ಕಂಡ ರೋಮಾಂ ಕಾರಿ ಅನುಭವ. ಆಕಾಶಗಂಗೆ ಬಿಳಿಯ ಮುಸುಕನ್ನು ಓಸರಿಸಿ ನೋಡುತ್ತಿರುವಾಗ ಅ ಕೇಶಕಲಾಪದಲ್ಲಿ ತೆರೆಯುತ್ತಿದೆ ಕೃತ್ತಿಕೆಯ ಮೊಗ್ಗು ಮಾಲೆ ! ಆಕೆ ಕಡಲ ಕಾವಲನಿಗ ಕಾಯುತ್ತಿರುವಳು ! ಮಿಲನ ಮುಹೂರ್ತದ ಪರಮ ಪವಿತ್ರ ಸೌಂದರ್ಯದ ಇ ನೋಟವಿದು !

ಇಂಥ ಇನ್ನೊಂದು ಕಥಾರೂಪಕ ಕಡಲ ಹುಣ್ಣಿಮೆ. ಸಮುದ್ರಮಂಥನ ನಡೆ ದೇವದಾನವರು ಮಾತ್ರ ಕಾಣುತ್ತಿಲ್ಲ. ಮಂಥನದಿಂದೆದ್ದ 'ರತ್ನೇಂದು'ವನ್ನು ಮು ಕಪ್ಪು ಅಂತರಾಳದಲ್ಲಿ ಬಚ್ಚಿಡುವುದು. ಸೆರೆಸಿಕ್ಕ ತಮ್ಮ ನಾಯಕನನ್ನು ಬಿಡಿಸಿಕೊ ದಾಳಿ ಇಡುವ ನಾಡವರಂತೆ ಕಡಲು ರೇಗಿ ಕಾಡಿ ಗದ್ದರಿಸುತ್ತದೆ. ಆದರೆ ಮುಗಿಲ ಮಂ ದಲ್ಲಿ ಮಂಡಿಸಿದ ಚಂದ್ರನಿಗೆ ನಕ್ಷತ್ರಗಳ ಪಡೆಯ ಕಾವಲು ! ಆಗ ಮುತ್ತಿಗೆ ಹಾ ಎದೆಗಾರಿಕೆ ಇರದೆ ಮುನ್ನೀರು ಮೆತ್ತಗಾಗಿ ಚಂದ್ರನಡಿಗೆ ಎರಗುತ್ತದೆ.

ಬೆಳಕ ಹೊಳೆಯೊಂದು ಹರಿದು ಛೇದಿಸಿದೆ ಸೀತೋದಧಿಯ
ತುದಿಮೊದಲಿಗೆ ಕತ್ತಲೆ, ನಡುವಷ್ಟೆ ಬೆಳಕು !
ತಾನೊಸೆದ ಚಂದ್ರನು ದೊರೆಯದಿರೆ ದೊರೆತ
ಪಡಿನೆಳಲನ್ನು
ಎದೆಗವಚಿ ಕಳೆಯೇರಿ ಸಂತವಿಸಿಕೊಳ್ಳುವದು
ಮುನ್ನೀರು.

ಇನ್ನು "ಮುನ್ನೀರುಪ್ಪು" "ನಿನ್ನ ನೀರು ಉಪ್ಪಾದುದೇಕೆ ?" ಎಂಬ ಪ್ರಶ್ನೆಗೆ ಚಿ ಪರವಾದ ಉತ್ಪ್ರೇಕ್ಷೆಗಳು ಉತ್ತರ ರೂಪವಾಗಿ ಹೆಪ್ಪುಗಟ್ಟಿವೆ ಇಲ್ಲಿ.

ಮಾನಿನ ಕಾಯೊಳು ಮಾನವ ಜಾತಿಯು
. . . ಪೂರ್ವೇತಿಹಾಸವನು . . .
ಕಾಲಪುರುಷನು ಕಲಕಿಡಲು ಬಿಟ್ಟ ರಸವೆ ನಿನ್ನ ನೀರು!

ಅಥವಾ—

ಆಗಸ್ತ್ಯನಲ್ಲ ನೀನು, ತಾನು ನಿರ್ಮಿಸಿದ ಚೆಲುವ
ಮಾನವನು ಹೋಮಿಸುವುದ ಕಂಡು ಜಗದೊಡೆಯ
ಸುರಿಸಿದ ಕಣ್ಣೀರು ನಿನ್ನ ನೀರು!

ಅಥವಾ—

ಇಳೆಯು ಸುತ್ತಿ ಭೋರ್ಗರೆದು
ಅಟ್ಟಹಾಸದಿ ನಗುವ ದುಃಖ ನೀನು!

ಎಂದು ಕವಿ ಉದ್ಗರಿಸುತ್ತಾನೆ. "ನಿನ್ನ ಉಪ್ಪುಂಡು ಬೆಳೆದ ಕವಿ" "ಉಪ್ಪಿಲ್ಲದೆ ಒಪ್ಪಿಲ್ಲ" ಎಂಬ ಚಿರಂತನ ಸತ್ಯದ ಭಾವವನ್ನು ಮನಗಾಣುತ್ತಾನೆ. ಕವಿಯ ಕಾವ್ಯಗುರುವೆ ಅಂದಿದ್ದಿಲ್ಲವೆ "ಸಖೀಗೀತ"ದಲ್ಲಿ "ಸಪ್ಪೆ ಬಾಳಿಗಿಂತ ಉಪ್ಪು ನೀರೂ ಲೇಸು!" ಕಡಲು ವಿನಾಯಕರಿಗೆ ಶೂನ್ಯದ್ವಾದರೆ ಅಂಬಿಕಾತನಯದತ್ತರಿಗೆ ಮುತ್ತಿನ ತವರುಮನೆ!

ಈ ಮಾತು ಮನಸ್ಸಿಗೆ ಮಿಂಚಿದಾಗಲೆ ಕವಿಯು ಕಡಲೊಂದಿಗೆ ತಾದಾತ್ಮ್ಯ ಹೊಂದಿದಂತೆ ಸಾರುತ್ತಾನೆ—

ತೆರೆಯಾಗಿ ಒತ್ತರಿಸುವೆ
ನೊರೆಯಾಗಿ ತತ್ತರಿಸುವೆ
ನೀರಾಗಿ ಬಿತ್ತರಿಸುವೆ

ಆದರೆ ಇಷ್ಟೆಲ್ಲಾ ಹೇಳಿಯೂ ಕವಿಗೆ ತನ್ನ ಶಕ್ತಿಯ ಆಳ-ಅಳವಿನ ಅರಿವು ಮರೆಯಾಗಿಲ್ಲ. "ನಿನ್ನ ಸಾವಿರ ಭಂಗಿಗಳನ್ನು ಕೀರ್ತಿಸಲು, ಸ್ವರವಿಲ್ಲ" ನಿನ್ನ ಬಣ್ಣ ಬಣ್ಣಗಳ ಬಣ್ಣಿಸುವ ಹುಮ್ಮಸ್ಸಿಲ್ಲ ನನ್ನ ಕಲೆಗೆ"—ಎಂದು ಕವಿ ಮರುಗುವನು! ಇದು ವಿನಯದಷ್ಟೇ ವಿನಾಯಕರ ಪ್ರತಿಭೆಯ ಪರಿಮಿತಿಗೂ ದ್ಯೋತಕವೆನಿಸಬಹುದು.

ಕಾವ್ಯದಲ್ಲಿ ವಸ್ತುವಿನ ವ್ಯಂಜನೆಗೆ ಪ್ರತಿಮೆ ಪ್ರತಿಬಿಂಬವಾಗಬೇಕೊ ಪರ್ಯಾಯವಾಗಬೇಕೊ? ಪ್ರತಿಮೆಯ ಲೋಲಕದೊಳಗಿಂದ ವಸ್ತುವನ್ನು ನೋಡುವಾಗ ಯಥಾರ್ಥತೆಗೆ ಕೃತಾರ್ಥತೆ ಕೈಗೂಡಬಹುದೇ ?

ಸ್ಟೀಫನ್ ಸ್ಪೆಂಡರ ಕಡಲ ಬಗೆಗೆ ಕೊಟ್ಟ ಈ ಪ್ರತಿಮೆಯನ್ನು ನೋಡಿರಿ :

. . . The sea lies like a harp
Stretched flat beneath the cliffs. The waves
like wires burn with the sun's copper-glow

* * *

When the heat grows tired, the after-noon
Out of the land may breathe a sigh
Which moves across the wires like a soft hand

ಪ್ರಸ್ತುತ ಅಪ್ರಸ್ತುತಗಳ ಇಂಥ ಸಾಮರಸ್ಯ ವಿನಾಯಕರಲ್ಲಿ ಸಿದ್ಧಿಸಿದೆಯೇ? ವಿಮರ್ಶ
ಇದೊಂದು ಪ್ರಶ್ನೆ.

ಮುಗಿಲು

ಕಡಲಿನಿಂದ ಮುಗಿಲಿಗೆ ಯಾವ ದೂರ? ಆಗಲೇ ಉಲ್ಲೇಖಿಸಿದ ಒಂದು ಪಂ
ಯನ್ನು ನೆನೆದುಕೊಳ್ಳಬಹುದು. "ಮುಗಿಲನಂತತೆಯಲ್ಲಿ ಮುನ್ನೀರ ಗರ್ಭಪಿಂಡ"

I am the daughter of the earth and water and the nursli
of the sky.

ಎಂದಿಲ್ಲವೆ ಶೆಲ್ಲಿಯ ಮೇಘ? ದ್ಯಾವಾ ಪೃಥ್ವಿಯ 'ನೀರದ' ವಿಭಾಗದಲ್ಲಿ ವಿನಾ
ಕರು ವಿಧವಿಧವಾಗಿ ಮುಗಿಲ ಸೊಬಗನ್ನು ಬೆಡಗನ್ನು ಬಣ್ಣಿಸಿದ್ದಾರೆ. ಆದರೆ ಇಲ್ಲಿಯ
ಅದೇ ರೀತಿ. ಪೌರಾಣಿಕ, ಐತಿಹಾಸಿಕ, ಕಾಲ್ಪನಿಕ ಲೋಕದ ಗುಣದ್ರವ್ಯಗಳಿಂದ
ಪ್ರತಿಮೆಗಳನ್ನು ನಿರ್ಮಿಸಿದ್ದಾಗಿದೆ. "ವಿನಾಯಕರ ಕಲ್ಪನೆಯ ವೈಚಿತ್ರ್ಯವು ಶೆಲ್ಲಿ ಕವಿ
ಜಾತಿಯದು"—ಬೇಂದ್ರೆಯವರ ಈ ಅಭಿಪ್ರಾಯ ಈ ಕವಿಯ ಕಾವ್ಯಕ್ಕೆ ಸಾಕಲ್ಯವ
ಅನ್ವಯಿಸಲಿ ಬಿಡಲಿ,—ಏಕೆಂದರೆ ವಿನಾಯಕರ ಮೇಲೆ ಆಡೆನ್ ಕವಿಯ ಪ್ರಭಾವ
ತಕ್ಕಮಟ್ಟಿಗೆ ಆಗಿದೆಯೆಂದು ಡಾ. ಎಚ್. ಬಿ. ಕುಲಕರ್ಣಿಯವರ ಅಂಬೋಣ!
ಇಷ್ಟೊಂದು ನಿಜ, ಮುಗಿಲುಗಳ ರೂಹುಗಾರಿಕೆಯಲ್ಲಿ ಶೆಲ್ಲಿಯ ಸೂತ್ರದ ಮೇಲೆ
ಈ ಕವಿಯ ಪ್ರತಿಮೆಗಳು ಮಣಿಗಳಂತೆ ಪದಣಿಸಲ್ಪಟ್ಟಿವೆ.

I change, but I cannot die.

—ಎನ್ನುತ್ತದೆ ಶೆಲ್ಲಿಯ ಮೇಘ. ವಿನಾಯಕರಿಗೆ 'ನೀರದ' ಬೋಧಿಸಿದ ಭಾವವೂ ಇ
ಆಗಿದೆ.

ಸೃಜವು ಪರಿವರ್ತನೆ; ಮರಣವು ಮಾಯೆ

ಎಂಬ ತತ್ವವನ್ನು ತನ್ನಿರವಿನಲರಿತು—(ಪರಿಚ್ಛೇದ ೬) ಇದನ್ನೇ ಮುಂದೆ ಪಡಿ
ವಿದೆ ಪರಿಚ್ಛೇದ ೭.

ತಾನೊಂದೇ ಒಂದು, ಆದರು ನೂರೊಂದು
ಲೀಲೆಗಾಗಿ ವಿಕಸನವೆಂಬರಿವನಾಂತು ಬಂದು

ತತ್ತ್ವಾರ್ಥದ ನಿಲುವಿನಿಂದ ಕವಿ ನಿಲುಕಿದ ತಥ್ಯವೇನು? "ನೀರದ-ನಾರದಸೂತ್ರ" ನಾರ ನೇರದೂ ನೀರೇ!) "ಊರ್ಧ್ವಗತಿ-ಚಲನ-ಧಾರಣ-ಅವತರಣ! ಇದನ್ನುಳಿದು ಲ್ಲವೂ ಕಾಮು ವಾಮುನಗಾರ್ಗ ಕಾಲಹರಣ."

ಕಡಲಿನಲ್ಲಿ ಹೇಗೋ ಮುಗಿಲಲ್ಲಿಯೂ ಕವಿಗೆ ವಿರೋಧಾಭಾಸ ಕಾಣುತ್ತದೆ, ಕೆಣಕು ತ್ತದೆ.

ಸ್ಫಟಿಕದಂತೆ ಶುಭ್ರವಿರುವಿ
  ಬಣ್ಣದಾಟ ಬೇಡವೆ?
ಬರಿಯ ಮಿಂಚಿನಾಕೃತಿ
  ಸುಭಗಾಕೃತಿ ನೋಡವೆ?
ಎಲ್ಲಬೇಕು ಬಣ್ಣ ಬೇಕು
  ಕಣ್ಣದೊಂದೆ ಸಾಲದು
ಬರಿಗಣ್ಣಿಗಿರುವ ಪ್ರಾಣ
  ಕೃತಿಯನೆಂತು ಬಲ್ಲದು?

ದು ಕವಿಯ ನಿಲುವು. ಈ ನಿಲುವಿನ ನೋಟಕ್ಕೆ ಶುದ್ಧ ಚೈತನ್ಯ ತತ್ವವನ್ನು ದ್ವಂದ್ವ ಳು ಆವರಿಸಿದಂತೆ ಬಣ್ಣ ಕಟ್ಟುವದು. ಗುಣರಹಿತ, ವರ್ಣರಹಿತ, ಚಿನ್ನಭಕ್ಕೆ, ಒಂದು ನೋಟಕ್ಕೆ, ಸೌಂದರ್ಯ, ಪ್ರೇಮ, ಸತ್ಯ, ಸಾತ್ವಿಕತೆ ಆನಂದ ಶಕ್ತಿಗಳನ್ನು ತೊಡಿ ದ್ದು ತೋರಿದರೆ, ಇನ್ನೊಂದು ನೋಟಕ್ಕೆ ಮೋಸ, ಕ್ರೌರ್ಯ, ಅನೃತ, ದ್ವೇಷ, ರಜ, ಮುಗಳ ತೊಡಿಗೆ ತೋರುತ್ತದೆ. ಈಗ 'ನೀರದ' ತತ್ವದರ್ಶನ ಅಲ್ಲಲ್ಲಿ ಮೂರ್ತೀಕರಣ ಹೊಂದಿದೆ. ಈ ಬಗೆಯ ಮೂರ್ತೀಕರಣ ಜಡದಲ್ಲಿ ಚೇತನವನ್ನು ಅಲ್ಲಿಯೂ ಮಾನ ೀಯ ಜೀವಕಳೆಯನ್ನು ಆರೋಪಿಸುವ ಅತಿರೇಕ ಮೋಹವು ಆಡೆನ್ ಕವಿಯಲ್ಲಿ ಂದುಬರುತ್ತದೆ. ವಿನಾಯಕರು ಅದರಿಂದಲೂ ಪ್ರಭಾವಿತರಾಗಿರಬಹುದೇ?

ಇಂಥ ಮೂರ್ತೀಕರಣಕ್ಕೆ "ಇಕ್ಷ್ವಾಯಣ"ವೆಂಬ ಹೊಸದೊಂದು ಕಥಾ ಕಲ್ಪವೇ ೀಸಲಾಗಿದೆ ೮, ೯ ನೆಯ ಪರಿಚ್ಛೇದಗಳಲ್ಲಿ. ಅವನ್ನು ನಾನು ಬೇರೊಂದು ಸಂದರ್ಭ ಲ್ಲಿ ಚರ್ಚಿಸಿದ್ದುಂಟು. ಅದನ್ನೆ ಮತ್ತೆ ಇಲ್ಲಿ ಚರ್ವಿಸುವುದಿಲ್ಲ.

'ನೀರದ' ವಿಭಾಗದಲ್ಲಿ (ದ್ಯಾವಾಪೃಥ್ವಿ) ಮುಗಿಲು (ಮೋಡ)ದಂಥ ನವಿರಾದ ಗುರಾದ ಹಗುರಾದ ವಸ್ತು ಬಗೆಬಗೆಯ ವೈಚಾರಿಕ, ಸೈದ್ಧಾಂತಿಕ, ಪೌರಾಣಿಕ ಆಶಯ ಳ ಭಾರದಡಿಗೆ ತಿಣುಕುವಂತಿದೆ. ಐತಿಹ್ಯ, ಅಧ್ಯಾತ್ಮ, ಪೂರ್ಣಯೋಗ—ಇಂಥ ಬಹು ಮುಖ ಸಂದೇಶಕ್ಕೆ ಈ ಹೊಸ ಮೇಘದೂತನನ್ನು ಕವಿಯು ನಿರ್ಮಿಸಿದಂತಿದೆ. ಡಾ. ಹೀಂದ್ರೆಯವರು ಅನ್ನುವಂತೆ "ಆ ಬಯಲೊಳಗಿನ ಚಿತ್ರಪಟವು ನೆಲದಮೇಲಿನ ಮನುಷ್ಯಗೇ ಕನ್ನಡಿ ಹಿಡಿದಂತೆ" ಕಾಣುತ್ತದೆ. ಈ ಮೋಡಗಳ ನಾಡು ಮರ್ತ್ಯಲೋಕದ್ದೇ ತೀಕ. ಮಾನವೀಯ ಮನದ ಬಂಧ ಮೋಕ್ಷದ ಸಮಸ್ಯೆಯನ್ನೆ ಇದು ಸೂಚಿಸು

ತ್ತದೆ. ಮಾನವನ ಸಾಂಘಿಕ ಜೀವನದಷ್ಟೆ ಅವನ ವ್ಯಕ್ತಿತ್ವಕ್ಕೂ ರೂಪಕವಾಗಿ
ಎಂದು ಕವಿಯೇ ಅಂದಿದ್ದಾರೆ.

ಆದರೆ ಮುಗಿಲನ್ನು ಹೀಗೆ ದಿವ್ಯ ಸಂದೇಶವಾಹಕವಾಗಿ ನಿರೂಪಿಸಿದ ಮಾತ್ರಕ್ಕೆ
ಕಲ್ಪನೆ ಕಾವ್ಯತ್ವವನ್ನೂ, ತತ್ವವು ರಸತ್ವವನ್ನೂ, ಸತ್ಯವು ಸೌಂದರ್ಯವನ್ನೂ ಪಡೆದ
ಆಯಿತೇ ?

ಮೋಡಗಳ ಬಗೆಗೆ ಕೆಲವು ಪ್ರತಿಮೆಗಳು ತುಂಬ ಚಿತ್ರವೇಧಕವಾಗಿವೆ. ಆದರೆ ಇ
ಪ್ರತಿಮೆಗಳು ತಮ್ಮ ವೈವಿಧ್ಯದಿಂದ ಚೆಲ್ಲಾಪಿಲ್ಲಿ ಆದಂತಿವೆ. ಪ್ರತಿಮೆಯಿಂದ ಪ್ರತಿ
ಹಾರುವ "ಭೃಂಗವಾಹನ ಕಲ್ಪನೆ" ಅವುಗಳಲ್ಲಿ ಒಂದು ಆಳವಾದ ಸಾಂಗತ್ಯವನ್ನಾ
ಸಾಮಂಜಸ್ಯವನ್ನಾಗಲಿ ಕಟ್ಟುವ ಪರಿವೆ ಅಷ್ಟೊಂದು ಮಾಡಿಲ್ಲ. ಇಲ್ಲಿ ಈ
ಕಾವ್ಯೋಕ್ತಿ ಅರ್ಧ ಕೆಲಸ ಮಾಡಿದೆ. ಉಳಿದರ್ಧವನ್ನು ರಸಿಕರು ಮಾಡಿಕೊಂಡರೆ ಸ

ಮೋಡವು "ನೀಲಿಮದಾಳದಿ ತೇಲುವ ಓಡ" (ಆಳದಲ್ಲಿ ತೇಲುವದೂ ಒ
ಸೋಜಿಗ!)

ಉದಧಿಯುಕ್ಕಿ ಮರ ಮುಗಿಲುದ್ದಕೆ ಬೆಳೆದು
ಉದುರಿವೆಲೆಯೆ ಮೋಡ?
ಸೌಂದರ್ಯದ ನಿರ್ಜರಶಿಶು ಮೇಲೊರಗಿ
ತೇಲಿದಾಲದೆಲೆ ಮೋಡ!

(ಇಲ್ಲಿ ಪ್ರಳಯ-ಪುನಃ ಸೃಷ್ಟಿಗಳ ನಡುವೆ ವಟಪತ್ರಶಾಯಿಯಾಗಿರುವ ನಾರಾಯ
ಛಾಯೆ ಬಂದಿದೆ. ಆದರೆ ಪ್ರತ್ಯೇಕ "ಆಲದೆಲೆ"ಯನ್ನೇ ಹೆಸರಿಸುವ ಬದಲು "ಉ
ದೆಲೆ"ಯ ಮೇಲೆಯೇ ಈ ನಿರ್ಜರ-ಶಿಶು ಒರಗಿದಂತಿದ್ದರೆ ಎರಡು "ಕಲ್ಪನಾ ಚಿತ್ರ
ಪಿಂಡೀಕರಣ" ಸಾಧಿಸುತಿತ್ತು!)

ಕವಿಗೆ ತೀರ ಅಮೂರ್ತದಲ್ಲಿ ಅಷ್ಟೇ ಮೂರ್ತವನ್ನು ಕಾಣುವ ಹವ್ಯಾಸ ಹೆ
ಕಡಲು-ಮುಗಿಲುಗಳ, ಸೂರ್ಯನ ಉದಯಾಸ್ತಗಳ ನಡುವೆ ವೃಕ್ಷತ್ವದ ಕ
ಮೂಡಿದೆ ಕವಿಗೆ.

ಸೂರ್ಯೋದಯ-ಸೂರ್ಯಾಸ್ತ ವೃಕ್ಷದಲ್ಲಿ
ಮಾಗಿದ ಪಯೋಧರ ಫಲವು ರಸಗಂಗೆಯಾಗಿ

ಅವತರಿಸಿದೆ ಎಂದಿದ್ದಾರೆ ಕವಿ.

Feelings take the form of thematic images, constan
repeated become Leit Motifs.

—ಎಂಜಲ ಡೆಲ್‌ರಿಯೋನ ಈ ಮಾತನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಕೇ

ಲ್ಪನೆಯು ಶಾಬ್ದಿಕ ಚಮತ್ಕೃತಿ ಭಾವಾದ್ರ್ರತೆಯಿಂದ ಪುಷ್ಟವಾಗದಿದ್ದರೆ ಅಷ್ಟೊಂದು ಮಾಧಾನ ನೀಡಲಾರದು.

ಇಂಥ ಚಮತ್ಕೃತಿ ಪೂರ್ಣವಾದ ಕಲ್ಪನಾ ವಿನ್ಯಾಸವನ್ನು ಮುಗಿಲ ಕುರಿತು ವಿಯು ಸಂಪರಿಯಾಗಿ ಮಾಡಿದ್ದಾರೆ. ಕೆಲವು ಪಾರಂಪರಿಕ, ಇನ್ನೂ ಕೆಲವು ಪಾರಂ ರಿಕವಾಗಿದ್ದರೂ ನವ್ಯ ವಿಧಾನದಿಂದ ಪ್ರೇಕ್ಷಣೀಯವಾದ ರಥವು—ಇನ್ನೂ ಕೆಲವು ನಲ ತರಲ—ಉತ್ಪ್ರೇಕ್ಷೆಯ ಸೂತ್ರಕ್ಕೆ ಉತ್ತುಂಗವಾಗಿ ಹಾರಿಸಿದ ರೊಂಯ್ ಟಗಳು.

ಮಲೆನಾಡಿನ ಪಟ್ಟದವಿಯ ಒಡಲಿನಲಿ ಮತ್ತಗಜ ಸಮೂಹ

—ಈ ಮಟ್ಟಿಗೆ ಇಲ್ಲಿ ಪಾರಂಪರಿಕತೆ ಬಂದಿದೆ. ಆದರೆ ಮುಂದೆ—

ದಾಳಿಇಟ್ಟ ದುರ್ಗದ ಬುರುಜಿನ ಮೇಲೆ
ಕೊತ್ತಳವಳತೆಯ ತೊತ್ತುಳಿಯುವ ಗುಲಗುಂಜಿ ಕಣ್ಣಿನಾ ಬೇಡಿರಪಡೆ

ಇಲ್ಲಿ ಹಳೆಯ ಪ್ರತಿಮೆಗೇ ಹೊಸದೊಂದು ನಿಲುಮೆ ಕೊಡಲಾಗಿದೆ. ಹೃದ್ಯವೆನಿಸುವ ಈ ಪ್ರತಿಮೆಗಳನ್ನು ನೋಡಿರಿ—

ಬಾಂಬೊಲದಲ್ಲಿ ಹುಂಬಗಾಳಿಗುರುಬ
ತರುಬಿದುಣ್ಣೆ ಕುರಿಮರಿಗಳ ಕಿರಿರಿಹಿಂಡು

ಈ ಕವಿಯು ಆಡೆನನಂತೆ ವಿಶೇಷಣ ವಿಶೇಷ್ಯಗಳ ಸಂಪೃಕ್ತಿಯಲ್ಲಿ ಮಾರ್ಮಿಕ ಔಚಿತ್ಯದ ಪ್ರತಿ ಪತ್ತಿಯನ್ನು ಸಾಧಿಸುವುದರಲ್ಲಿ ಎಲ್ಲಡೆಯಲ್ಲಿಯೂ ಯಶಸ್ವಿ ಆಗಿಲ್ಲ. "ಗುಲಗುಂಜಿ ಕಣ್ಣು" ಒಂದು ಸಾರ್ಥಕ ವಿಶೇಷಣ. ಅದೇ ಬಗೆಯಾಗಿ ಮೋಡವನ್ನು ದುರ್ಗಾದೇವಿಯ ಸಿಂಹವೆಂದು ಭಾವಿಸಿದಾಗ ಅದು "ಆಯಾಲವ ಕೊಡವಿ" "ಮರಿಗಳ ವೈರಿಪಡವಿ" ಹೋಗುತ್ತಿದೆಯೆಂದು ಸೇರಿಸಿದ ಪದಗಳೂ ಮರ್ಮಜ್ಞತೆಯಿಂದ ತುಂಬಿವೆ. ಆದರೆ "ಉಣ್ಣೆ ಕುರಿ" ಪುನರುಕ್ತಿ. ಹಾಗೆಯೇ ಮುಂದಿನ ಪ್ರತಿಮೆಯಲ್ಲಿಯ "ಹಾಲ್‌ಬಿಳಿಕುರಿ" ಗಾಳಿಗೆ ಹುಂಬವೆಂಬ ಲಕ್ಷಣ ಚೆನ್ನಾಗಿ ಒಪ್ಪುತ್ತದೆ.

ಕುರುಬ ತರುಬಿದ ಕುರಿಮರಿಗಿಂತಲೂ ಹೃದಯಂಗಮವಾಗಿ ಚಿತ್ರಿತವಾದದ್ದು ಯೇಸುಕ್ರಿಸ್ತ ಎದೆಗೊತ್ತಿ ಹಿಡಿದ ಹಾಲ್‌ಬಿಳಿ ಕುರಿಮರಿಯ ಭಾವಸಾಂದ್ರವಾದ ಪ್ರತಿಮೆ!

ಹಾಲ್‌ಬಿಳಿ ಕುರಿಮರಿ ಬೈಗುಗೆಂಪಿನಲ್ಲಿ
ಹೃದಯದ ಮೇಲಿರೆ ಸಂಜೆಯೊಂದು ಬೊಟ್ಟು
ನಡೆದ ಕುಲೋದ್ಧಾರಕ ಏಸುವಿನಂತೆ
ಸಾಗಿದೆ ಮೆಲ್ಲನೆ ಪ್ರಾಣದಾಸೆ ಬಿಟ್ಟು

ಲೋಕಮಂಗಲಕ್ಕಾಗಿ ಮನುಕುಲೋದ್ಧಾರಕ ಯೇಸು ಪ್ರಾಣದಾನ ಬಿಟ್ಟೇ ನಡೆದ
ಅದರ ನೆನವು ಪರೋಪಕಾರಕ್ಕಾಗಿಯೇ ತಾನೇ ಕರಗಿ ಎರಗುವ ಮೋಡಕ್ಕೆ ನೆರಳ
ಬಂದಿದೆ ಈ ಉತ್ಕಟ ಉತ್ಪ್ರೇಕ್ಷಣೆಯಲ್ಲಿ. ಆದರೆ ಈ ಭಾವಸಾಂಪ್ರತೆ ಇತರ ಅನ
ಕೌತುಕದ ಪ್ರತಿಮೆಗಳಲ್ಲಿ ಇಲ್ಲ. ಅಂಥವು ಇಲ್ಲಿ ಕೆಲವು ಇವೆ.

ಬೆದರುಗಂಗಳಿಂದೀಕ್ಷಿಸುವ ಸಾರಂಗ
ಕೋಡಿನ ರೆಂಬೆ ಕೊಂಬೆಗಳಲಂಕಾರ ವೆತ್ತಿ
ನೋಡಿದೆ ಗಗನದ ವಿಸ್ತೃತ ಕಾನನದಿ
ಬಂದನೇವ್ಯಾಧನು ಬೆಂಬತ್ತಿ ?

ಇಲ್ಲಿ ಬಂದ ಮೃಗ-ವ್ಯಾಧ ನಕ್ಷತ್ರ ಪುಂಜದ ವ್ಯಂಜನೆ ಮೋಹಕವಾಗಿದ್ದರೂ ಹೆಚ್ಚ
ಸಾರ್ಥಕತೆಗೆ ನೆರವಾಗುವುದಿಲ್ಲ. ಇವು ಆಭರಣಾತ್ಮಕವಾದ ಚಿತ್ರಮಯ ಪ್ರತಿಮೆಗ
ಆದರೆ ಆ-ಭರಣವು ಅಲಂ-ಕಾರವಾಗುವುದು ಹೇಗೆ?

ಒಮ್ಮೆ ಸಾರಂಗವಾಗಿ ಬೆಡಗಿನ ಬಿಂಕವನ್ನು ಬೀರುವ ಮೋಡವು ಇನ್ನೊ
"ಕ್ರೂರದುಷ್ಟ, ವರಾಹ"ವಾಗಿ "ಕಬ್ಬಿನ ಬಿಲ್ಲನಾ ಮಳೆಬಿಲ್ಲುಗಳನ್ನು ಹರಿದು" ನು
ತ್ತದೆ. ಕಬ್ಬಿನ ಹೊಲದಲ್ಲಿ ಕಾಡುಹಂದಿ ಹೊಕ್ಕಂತೆ, ಕಬ್ಬಿನ ಬಿಲ್ಲಿನ (ಕಾಮದೇವ
ಕಾಮನ ಬಿಲ್ಲುಗಳನ್ನೇ ಮುರಿಯಲಿಕ್ಕೆ ಈ ವರಾಹ ಮುನ್ನುಗ್ಗುತ್ತದೆ!. ಅದೇ ಮುಗಿ
ಮತ್ತೆ ಅಷ್ಟಾವಕ್ರವಾಗಿ ಘಟಸರ್ಪವಾಗಿ "ಪಡುವಣದಡವಿಯ ರಾಜಕಾನಣಪಟ
ಶೃಗಾಲವಾಗಿ (ಶೃಗಾಲಕ್ಕೆ "ಜಪಮಾಲೆ" ಏಕೆ?) "ರಕ್ತರಂಜಿತ ವ್ಯೋಮ
ಕಗ್ಗೊಲೆ ಆಟ ಆಡುವ ವ್ಯಾಘ್ರ"ವಾಗಿ "ಗಗನೋದಧಿಯ ನೌಕೆಗಳಿಗೆ ಸುರಂಗವೆನಿ
ತಿಮಿಂಗಿಲವಾಗಿ" ತೋರುತ್ತದೆ.

ಹೀಗಿದೆ ನಾರದದೃಷ್ಟಿಗೆ ಕಾಣುವ ಮೇಘದ ಕಾಮರೂಪ. ಆದರೆ ಇ
ಚಾತುರ್ಯ ಚಮತ್ಕಾರ, — ದುರ್ಗೆಯ ಸಿಂಹ, ಸರಸ್ವತಿಯ ಮಯೂರ, ಗೋಗ್ರಹಣ
(?) ದುಃಶಾಸನ, ಈಸುಗಾಲಿನ ಕೂರ್ಮ — ಇತ್ಯಾದಿಯಾಗಿ ತೋರುವುದರ ಆ
ಕಾವ್ಯತನ ಆಶ್ಚರ್ಯದ ಹರ್ಷವೇ ಹೊರತು ಆನಂದದ ಸಾಕ್ಷಾತ್ಕಾರವಲ್ಲ.

ಎಝ್ರಾಪೌಂಡ ಹೇಳಿದ್ದಾನೆ:

> An image is that which presents an intellectual and em
> tional complex in an instant of time.

ವಿನಾಯಕರ ಕಡಲು-ಮುಗಿಲುಗಳ ಭಾವಚಿತ್ರಗಳನ್ನು ಸೆರೆಹಿಡಿದ ಸಂಕೀರ್ಣ ವಿಕಿ
ಪ್ರತಿಮೆಗಳಲ್ಲಿ ಬುದ್ಧಿಯ ಉಜ್ಜ್ವಲತೆಗೆಭಾವನೆಯ ಉದ್ದೀಪನೆಯು ಎರಕಗೊಯ್ಯಿ

ಪ್ರತಿಮೆಯೊಂದಿಗೆ ಅರ್ಥಾಂತರವು ಅನಿವಾರ್ಯ. ಆದರೆ ಅರ್ಥಾಂತರವೊಂದರೆ ಮೂ

ಬಿಂಬವನ್ನೇ ಮರೆಯಿಸುವ ಕೌತುಕದ ಮುಖವಾಡವಲ್ಲ. ಪ್ರತಿಮೆಯು ವೇದಾಂತ ಪರಿಭಾಷೆಯಲ್ಲಿ ಹೇಳುವುದಾದರೆ ಒಂದು ಅನಧ್ಯಸ್ತ ವಿವರ್ತ. ಅಲ್ಲಿ ಒಡವೆಯ ರೂಪದಲ್ಲಿ ಬಂಗಾರದ ಬೋಧವೂ ಆಗಬೇಕು. ಪ್ರತಿಮಾನವು ಪ್ರತಿಮೇಯದ ಅನುಭೂತಿಯನ್ನೇ ತಡೆಹಿಡಿಯುವದಲ್ಲ.

“ಹಾಲ್‌ಜೇನು ಸುರಿಯೋಣ!” ಅದಕ್ಕಾಗಿ ‘ಇಲ್‌ದದ್ದು ತೆರೆಯೋಣ’ ಆದರೆ ‘ಇದ್ದದ್ದು ಮರೆಯೋಣ’ವೇಕೆ? ಸ್ವರ್ಣಮೂರ್ತಿ ಸೀತೆಗೆ ಪರ್ಯಾಯ, ಜ್ಞಾಪಕ. ಸೀತೆಯ ಪರಿತ್ಯಾಗದ ಬೆಲೆ ತೆತ್ತು ಸ್ವರ್ಣಮೂರ್ತಿಯನ್ನು ಶ್ರೀರಾಮ ಕೊಂಡಿದ್ದಲ್ಲ. ಶಿಲಾಶಿಲ್ಪವಾಗಿರಲಿ, ಪಿಂಡೀಕೃತವಾಗಿರಲಿ, ಕಡಲ-ಮುಗಿಲುಗಳ ಕುರಿತ ಪ್ರತಿಮೆಗಳು ಯಶಸ್ವಿಯಾದಲ್ಲಿ ವಸ್ತುವಿನ ಸೊಗಸು-ಸೊಬಗನ್ನು ಮರೆಮಾಚಿವೆ. ಈ ಸೊಬಗು-ಸೊಗಸು ಮೆರೆಯುವಂತಿರುವಲ್ಲಿ ಪ್ರತಿಮೆಗಳು ಆ ಮಟ್ಟಿಗೆ ಅಸಮರ್ಥವೆನಿಸಿವೆ. ಆದರೆ ಆ ಯಶಸ್ಸಿಗಿಂತ ಈ ಅಸಾಮರ್ಥ್ಯವೇ ಹಿತಾವಹ. ಉಂಗುರಕ್ಕಾಗಿ ಶಕುಂತಲೆಯನ್ನೇ ಕಳೆದುಕೊಂಡರೆ ದುಷ್ಯಂತನಿಗೆ ದುರಂತವೆ ಸ್ವಾಯತ್ತವಲ್ಲವೆ ?

ಕಾವ್ಯದಲ್ಲಿ 'ವ್ಯಕ್ತಿ'

ಕೆ. ಟಿ. ಪಾಂಡುರಂಗಿ

ಕವಿಗಳನ್ನು 'ಭಾವಪ್ರಧಾನ ಕವಿಗಳು' ಮತ್ತು 'ಚಿಂತನ ಪ್ರಧಾನ ಕವಿಗಳು' ಎ
ವಿಂಗಡಿಸುವದಾದರೆ ಶ್ರೀ ಗೋಕಾಕರು ಚಿಂತನಪ್ರಧಾನ ಕವಿಗಳೆಂದು ಹೇಳಬಹು
ಹೀಗೆ ವಿಂಗಡಿಸಿದ ಮಾತ್ರಕ್ಕೆ ಭಾವಪ್ರಧಾನ ಕವಿಗಳ ಕೃತಿಗಳಲ್ಲಿ ಚಿಂತನವಿರುವ
ವೆಂದೂ ಚಿಂತನಪ್ರಧಾನ ಕವಿಗಳ ಕೃತಿಗಳಲ್ಲಿ ಭಾವಾಭಿವ್ಯಕ್ತಿಯಿರುವದಿಲ್ಲವೆಂ
ಭಾವಿಸಬಾರದು. ಭಾವವಿಲ್ಲದೆ ಕಾವ್ಯವಿಲ್ಲ. ಚಿಂತನವಿಲ್ಲದೆ ಕಾವ್ಯಕ್ಕೆ ಕಸುವಿಲ್ಲ.
ಗೋಕಾಕರ ಕಾವ್ಯಗಳಲ್ಲಿ ಚಿಂತನದ ಕಸುವು ಭಾವಲಹರಿಗಳಲ್ಲಿ ಮೂಡಿಬಂದುದ
ಕಾಣುತ್ತೇವೆ.

ಶ್ರೀ ಗೋಕಾಕರ ಕಾವ್ಯಗಳಿಗೆ 'ಜೀವನ ಜಿಜ್ಞಾಸೆ'ಯೇ ಸ್ಥಾಯಿಭಾವವೆ
ಶ್ರೀ ಬೇಂದ್ರೆಯವರು ಮೂವತ್ತೈದು ವರುಷಗಳ ಹಿಂದೆಯೇ 'ಕಲೋಪಾಸ
ಮುನ್ನುಡಿಯಲ್ಲಿ ಹೇಳಿದುದು ಇಂದಿಗೂ ಸತ್ಯವಾಗಿದೆ. ಅವರ ಎಲ್ಲ ಕಾವ್ಯಗಳಲ್ಲಿಂ
ಜೀವನದ ಜಿಜ್ಞಾಸೆಯೇ ಮುಖ್ಯ ವಿಷಯವಾಗಿದೆ. ಈ ಜೀವನ ಜಿಜ್ಞಾಸೆಯ
ಅವರು ಯಾವದೇ ಒಂದು ಪರಿಮಿತಿಗೆ ಕಟ್ಟುಬಿದ್ದು ಮಾಡುವದಿಲ್ಲ. ಒಂದೊ
ಕವನದಲ್ಲಿ ಒಂದೊಂದು ದೃಷ್ಟಿಯಿಂದ ಜಿಜ್ಞಾಸೆಯನ್ನು ಕೈಕೊಂಡರೂ ಜೀವ
ಪೂರ್ಣಯೋಗ ದರ್ಶನವನ್ನು ಮೂಡಿಸುವದೇ ಅವರ ಜಿಜ್ಞಾಸೆಯ ಗುರಿ. ಇದ
ಅವರು ಕೆಲವು ಕವನಗಳಲ್ಲಿ 'ಕಂಠೋಕ್ತವಾಗಿ' ಇನ್ನು ಕೆಲವು ಕವನಗಳಲ್ಲಿ 'ಪ್ರ
ಅಥವಾ ರೂಪಕಗಳಿಂದ' ಮತ್ತೆ ಕೆಲವು ಕವನಗಳಲ್ಲಿ 'ತಾದಾತ್ಮ್ಯ'ದಿಂದ (ಪ
ತಾದಾತ್ಮ್ಯ, ಭಾವತಾದಾತ್ಮ್ಯ, ವರ್ಣನತಾದಾತ್ಮ್ಯಗಳಿಂದ) ನಿರ್ವಹಿಸಿದ್ದಾರೆ.

ಜೀವನ ಜಿಜ್ಞಾಸೆಗೆ ಕೇಂದ್ರ ಬಿಂದು 'ವ್ಯಕ್ತಿ'. ವ್ಯಕ್ತಿಸಮುದಾಯವೇ ಮಾ
ಸಮಷ್ಟಿ. ವ್ಯಕ್ತಿವಿಕಾಸ ಮತ್ತು ಮಾನವಸಮಷ್ಟಿಯ ವಿಕಾಸಗಳನ್ನು ಚಿಂತಿಸು
ಜೀವನ ಜಿಜ್ಞಾಸೆ. ವ್ಯಕ್ತಿ ಮತ್ತು ಮಾನವಸಮಷ್ಟಿಗಳ ವಿಕಾಸವನ್ನು ಸಮತೂಕ
ತೂಗಿಸುವ ಜೀವನದ ಉಯ್ಯಾಲೆಯೇ ಸರಸ ಜೀವನ, ಸಾರ್ಥಕ ಜೀವನ. ಒ
ಭಾರವು ಹೆಚ್ಚಾಗಿ ಇನ್ನೊಂದು ತತ್ತರಿಸುವಂತಾಗುವದೇ ವಿರಸಜೀವನ. ಆದುದ
ಜೀವನದ ಜಿಜ್ಞಾಸೆಯನ್ನು ಕೈಕೊಂಡ ಕವಿ—ದಾರ್ಶನಿಕರು ಮಾನವಸಮಷ್ಟಿಯ

ನುಗುಣವಾದ 'ವ್ಯಕ್ತಿ' ಚಿತ್ರಗಳನ್ನೂ 'ವ್ಯಕ್ತಿ' ವಿಕಾಸವನ್ನೂ ಹತ್ತಿಕ್ಕದ ಮಾನವ ಮಷ್ಟಿಯ ಚಿತ್ರವನ್ನೂ ನಿರೂಪಿಸುವದು ಅಗತ್ಯ. ಈ ನಿರೂಪಣೆಯನ್ನು ಶ್ರೀ ಗೋಕಾಕರ ಕಾವ್ಯಗಳಲ್ಲಿ ವಿಪುಲವಾಗಿ ಕಾಣುತ್ತೇವೆ. 'ತನ್ನ ಯುಗದ ಜೀವನದ ರಿಮೆಯನ್ನು ರೂಪಿಸುವ ವ್ಯಕ್ತಿಗಳನ್ನು ನಿರ್ಮಿಸಿ ಆ ವ್ಯಕ್ತಿಗಳ ವ್ಯಕ್ತಿತ್ವವನ್ನು ಸ್ಮರಣೀಯವಾಗುವಂತೆ ಚಿತ್ರಿಸಿ ಪೋಷಿಸುವದು ಮಹಾಕಾವ್ಯವು ಸಾಧಿಸಬೇಕಾದ ಂದು ಕಾರ್ಯ' ಎಂದು ಅವರೇ ಒಂದೆಡೆಗೆ ಹೇಳಿದ್ದಾರೆ. ಅವರ ಕಾವ್ಯಗಳಲ್ಲಿ ರೂಪು ಗೊಂಡ ಈ 'ವ್ಯಕ್ತಿ' ಚಿತ್ರಣವನ್ನು ವಿವರಿಸುವದು ಈ ಲೇಖನದ ಉದ್ದೇಶ. ಸಾವಿರ ಪುಟಕ್ಕಿಂತಲೂ ಹೆಚ್ಚಾದ ಅವರ ಕಾವ್ಯಗಳಲ್ಲಿ ಬಂದ ಈ 'ವ್ಯಕ್ತಿ' ಚಿತ್ರಣದ ಎಲ್ಲ ಅಂಶಗಳನ್ನೂ ಒಂದು ಚಿಕ್ಕ ಲೇಖನದಲ್ಲಿ ನಿರ್ದೇಶಿಸುವದು ಕಷ್ಟಸಾಧ್ಯವಾದ ಕೆಲಸ. ಆದುದರಿಂದ 'ವ್ಯಕ್ತಿ' ಚಿತ್ರಣವನ್ನೇ ಪ್ರಧಾನ ಉದ್ದೇಶವನ್ನಾಗಿಟ್ಟುಕೊಂಡು ಬರೆದ 'ಬಾಳದೇಗುಲದಲ್ಲಿ' ಎಂಬ ಅವರ ಮಹಾಕಾವ್ಯದಲ್ಲಿ ಬಂದ 'ವ್ಯಕ್ತಿ' ಚಿತ್ರವನ್ನು (ಚಿತ್ರ ಗಳನ್ನು) ಮಾತ್ರ ಇಲ್ಲಿ ಮುಖ್ಯವಾಗಿ ಪ್ರಸ್ತಾಪಿಸುವೆವು. ಇವಕ್ಕೆ ಪೂರಕವಾಗಿ ಅಲ್ಲಲ್ಲಿ ಅವರ ಇತರ ಕಾವ್ಯಗಳಿಂದಲೂ ಕೆಲವು ಅಂಶಗಳನ್ನು ನಿರ್ದೇಶಿಸುವೆವು.

ಈ ಕಾವ್ಯದ ಮುನ್ನುಡಿಯಲ್ಲಿ 'ಮುಗ್ಧತೆಯಿಂದ ಪೂರ್ಣತೆಯ ವರೆಗಿನ ವ್ಯಕ್ತಿತ್ವದ ಹಂತಗಳನ್ನು ತೆರೆದು ತೋರಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ' ಎಂದು ಶ್ರೀ ಗೋಕಾಕರು ಹೇಳಿರುವದು ನಿಜವೆಂಬುದು ಕಾವ್ಯವನ್ನು ಓದಿ ಮುಗಿಸಿದಾಗ ಮನ ದಟ್ಟಾಗುವದು. ವ್ಯಕ್ತಿಯ ಮುಗ್ಧತೆಯಲ್ಲಿಯೇ ಪೂರ್ಣತೆಯು ಅಡಗಿದೆಯೆಂಬುದೂ ಪೂರ್ಣತೆಯ ಪರಿಪಾಕವು ಒಂದು ವಿಧವಾದ ಮನೋಹರವಾದ ಆಧ್ಯಾತ್ಮಿಕ ಮುಗ್ಧತೆ ಯೆಂಬುದೂ ಸ್ಪಷ್ಟವಾಗುವದು. ವ್ಯಕ್ತಿತ್ವದ ಈ ವಿಕಾಸದ ಚಿತ್ರಣವನ್ನು ಇನ್ನೊಂದು ಸಂದರ್ಭದಲ್ಲಿ ಶ್ರೀ ಗೋಕಾಕರೇ ಹಾಡಿದ ಒಂದು 'ಪ್ರತೀಕ'ವು ಸುಂದರವಾಗಿ ವ್ಯಕ್ತ ಪಡಿಸುವದು. 'ಹೀಚುಗಾಯಿಯೊಂದರಲ್ಲಿ ಇದ್ದಿತಯ್ಯ ರೂಪಿಸಿ. ಬಲ್ಲರಾರು ನಲಿವು ದೆಂದು ದಿಗಂತವನೆ ವ್ಯಾಪಿಸಿ ?' ಎಂದು 'ಅಚ್ಚ'* ನೆಂಬ ಪ್ರತೀಕ ಕವನದಲ್ಲಿ ಹೀಚು ಗಾಯಿಯಲ್ಲಿದ್ದಾಗಿನ ಮುಗ್ಧದಶೆಯಿಂದ ದಿಗಂತವನ್ನೇ ವ್ಯಾಪಿಸುವ ಪೂರ್ಣದಶೆಯ ವರೆಗಿನ 'ವ್ಯಕ್ತಿ' ವಿಕಾಸದ ಚಿತ್ರಣವೇ ಕವಿಯ ಹೃದಯದಲ್ಲಿತ್ತೆಂದು ಊಹಿಸಬಹು ದಾಗಿದೆ.

ವ್ಯಕ್ತಿ ಕಂಗೊಳಿಸುವನು ವಿಶ್ವಮಂದಿರಕಿಟ್ಟ ಹಿರಿಯ ಹೊಂಗಳಸವಾಗಿ

ಎಂದು ಅವರು 'ವ್ಯಕ್ತಿ'ಯ ಮಹತಿಯನ್ನು ಸಾರುವರು.

---

* 'ಅಚ್ಚ' ಅಥವಾ 'ಅಜ್ಜಪ್ಪ' ಎಂದು ಕರೆಯುವ ಮಕ್ಕಳು ಗಾಳಿಯಲ್ಲಿ ಊದಿ ತೂರಾಡುವ ಹೂವಿನ ಬೀಜಗಳು. ಈ ಕವನವು 'ಓಗೈ' ಎಂಬ ಕವನ ಸಂಗ್ರಹದಲ್ಲಿದೆ.

ವ್ಯಕ್ತಿ-ದೇವ; ದೇವ-ವ್ಯಕ್ತಿ : ಇದೇ ಒಗಟದ ಪೂರ್ತಿ

ಎಂದು ಇನ್ನೊಂದೆಡೆಗೆ ವ್ಯಕ್ತಿಯಲ್ಲಿ ಹುದುಗಿವ ದೇವತ್ವವನ್ನು ಸೂಚಿಸಿದ್ದಾರೆ.

ಸೃಷ್ಟಿಯ ವಿಸ್ಮಯಕರವಾದ ಉಗಮವನ್ನು ವಿವರಿಸುತ್ತ ಒಂದೆಡೆ

ಪಂಚಭೂತಗಳು ಸಂಚಯಿಸಿ
ಸಂಭವಿಸಿದ ಸಂಗಮವೇ ಜೀವನ!

ಎಂದು ಜಡಸೃಷ್ಟಿಯನ್ನು ಕಾವ್ಯಮಯವಾಗಿ ವರ್ಣಿಸಿ

ಇನ್ನು ಮಾನವ ಬರಲಿ ನನ್ನ ಮಾನಸಪುತ್ರ,
ಈ ಅದ್ಭುತಕ್ಕೆ ಕಳಸವಿಡಲು ಬರಲಿ!

ಎಂದು ಸಮಾಧಿಯಿಂದ ಕಣ್ತೆರೆದ ಬ್ರಹ್ಮನಿಂದಲೇ 'ವ್ಯಕ್ತಿ'ಯು ಸೃಷ್ಟಿಯ ಕ
ವೆಂಬುದನ್ನು ದೃಢಪಡಿಸಿದ್ದಾರೆ. ಹೀಗೆ ಅನಿತರಸಾಧಾರಣವಾದ ಸತ್ವವನ್ನು ಪ
'ವ್ಯಕ್ತಿ'ಯು ಕಾರ್ಯೋನ್ಮುಖನಾಗಲು ತನ್ನ ಸತ್ವದ ಆವಿಷ್ಕಾರವನ್ನು ಪಡೆಯ
ಮೇಲಿಂದ ಮೇಲೆ ಆಹ್ವಾನಿಸುತ್ತಾರೆ.

೧. ತೆಕ್ಕೆ ಬೀಳು ಆಗಸಕೆ

೨. ಬರುವ ಯುಗದ ನಾಯಕನಾಗಿ ಬಾಳನಾಹ್ವಾನಿಸು

೩. ಹೊಸ ಸೃಷ್ಟಿಯ ಮನುವು ನೀನು,
ಹೊಸತು ಕದ ವಿಕ್ರಮ

೪. ಓ ಮಗು! ಬಾ ಮುಂದೆ!
ವಿಶ್ವವೇ ನಿನಗಾಗಿ ಕಾಯುತಿದೆ?

೫. ಓ ತರುಣ! ಎದ್ದೇಳು!
ನಿನ್ನ ಮೊರೆಯಲ್ಲಿ ಹುಮ್ಮಸ್ಸಿದೆ.
ನಿನ್ನ ಕಣ್ಣಿನಲ್ಲಿ ಅಸಾಧಾರಣ ತೇಜಸ್ಸಿದೆ.
ನಿನ್ನ ಹಣೆಯಲ್ಲಿ ಭವ್ಯತೆಯಿದೆ.
ಗದ್ದದ ಕುಣಿಯಲ್ಲಿ ದಿವ್ಯತೆಯಿದೆ.
ಎತ್ತರದ ನಿಲುವಿನಲ್ಲಿ ಸಂಕಲ್ಪವಿದೆ.
ತುಟಿಯ ತುದಿಯಲ್ಲಿ ಆದೇಶವಿದೆ.
ನಿಡಿದೋಳ್ಗಳಲ್ಲಿ ನವಖಂಡವನ್ನೆ ತೂಗುವ ಬಲವಿದೆ.
ಅಡಿಯಲ್ಲಿ ಬಿಡುಗಡೆಯಿದೆ
ಓ ತರುಣ! ಎದ್ದೇಳು!
ನಿನ್ನ ರಾಜ್ಯವನ್ನಾಳು!

೬. ಮಾನವ ಜಾತಿಗೆ ಬಿಟ್ಟ ದೇವಹೂವೇ!
ನೀನೇ ಯುಗಪುರುಷ.
ಏಳು! ಏಳು! ಏಳು!

ಹೀಗೆ ತಮ್ಮ ಅನೇಕ ಕವನಗಳಲ್ಲಿ 'ವ್ಯಕ್ತಿ'ಗೆ ತನ್ನ ಮೌಲಿಕರೂಪದ ಆವಿಷ್ಕಾರವನ್ನು ಪಡೆಯಲು ವಿನಾಯಕರು ಆಹ್ವಾನಿಸುತ್ತಾರೆ.

ಶ್ರೀ ಗೋಕಾಕರ ಕಾವ್ಯಗಳಲ್ಲಿ ಬರುವ ಈ 'ವ್ಯಕ್ತಿ' ಚಿತ್ರದ ಮೌಲಿಕ ರೂಪವು ಒಂದೇ ಆಗಿದ್ದರೂ ಇವರ ಚಿತ್ರಣವು ಬಂದ ಪರಿಸರದಿಂದ ಕೆಲವು 'ಸ್ತರ'ಗಳನ್ನು ಕಲ್ಪಿಸಬಹುದು. 'ವ್ಯಕ್ತಿ' ಚಿತ್ರಣಗಳು ಬಂದ ಕವನಗಳ ವೈವಿಧ್ಯಗಳನ್ನು ಗಮನಿಸಿದರೆ ಅನೇಕ ಸ್ತರಗಳಾಗಬಹುದಾದರೂ ಅಭ್ಯಾಸದ ಅನುಕೂಲಕ್ಕಾಗಿ ಅವುಗಳನ್ನೆಲ್ಲ ಇಲ್ಲಿ ಮೂರೇ 'ಸ್ತರ'ಗಳಲ್ಲಿ ಅಡಗಿಸಲು ಪ್ರಯತ್ನಿಸಲಾಗಿದೆ. ಸಾಮಾಜಿಕಸ್ತರ, ಕಲಾತ್ಮಕಸ್ತರ, ಮತ್ತು ಆಧ್ಯಾತ್ಮಿಕಸ್ತರ ಎಂಬ ಮೂರು ಸ್ತರಗಳಲ್ಲಿ ಅವರ ಕಾವ್ಯಗಳಲ್ಲಿ ಚಿತ್ರಿಸಲ್ಪಟ್ಟ 'ವ್ಯಕ್ತಿ'ಗಳ ಎಲ್ಲ ಮಾದರಿಗಳನ್ನೂ ಅಳವಡಿಸಬಹುದು. ಕೌಟುಂಬಿಕ, ರಾಜಕೀಯ, ಸಾಮಾಜಿಕ ವ್ಯಕ್ತಿ ಚಿತ್ರಗಳನ್ನೆಲ್ಲ ಮೊದಲನೆಯ ವರ್ಗಕ್ಕೆ ಸೇರಿಸಬಹುದು. ಸಮಾಜ ಜೀವನವು ಕುಟುಂಬ ಜೀವನದಿಂದಲೇ ಆರಂಭವಾಗುವದು. ರಾಜಕೀಯ ಜೀವನವೂ ಸಾಮಾಜಿಕ ಜೀವನದ ಒಂದು ಮುಖವೇ ಆಗಿದೆ. ಸಾಧಕನ 'ವ್ಯಕ್ತಿ' ಚಿತ್ರವು ಅವನು ಆಯ್ದುಕೊಂಡ ಸಾಧನಕ್ಷೇತ್ರವನ್ನವಲಂಬಿಸಿ ಈ ಮೂರರಲ್ಲಿ ಒಂದರಲ್ಲಿ ಸೇರ್ಪಡೆಯಾಗುವದು. ಸೌಂದರ್ಯೋಪಾಸನೆ, ಕಾವ್ಯೋಪಾಸನೆ ಇತ್ಯಾದಿ ಪರಿಸರಗಳಲ್ಲಿ ಮೂಡಿದ 'ವ್ಯಕ್ತಿ' ಚಿತ್ರವು 'ಕಲಾತ್ಮಕಸ್ತರ'ವು. ಆತ್ಮತತ್ವದ ಆವಿಷ್ಕಾರ, ಅನುಭಾವ ಇತ್ಯಾದಿಗಳ ಹಿನ್ನೆಲೆಯಲ್ಲಿ ರೂಪಿಸಿದ ವ್ಯಕ್ತಿ ಚಿತ್ರ 'ಆಧ್ಯಾತ್ಮಿಕಸ್ತರ.' ಈ ಮೂರೂ ಸ್ತರಗಳ 'ವ್ಯಕ್ತಿ' ಚಿತ್ರಗಳು ಶ್ರೀ ಗೋಕಾಕರ ಎಲ್ಲ ಕಾವ್ಯಗಳಲ್ಲಿಯೂ ಒಂದಿಲ್ಲೊಂದು ರೀತಿಯಿಂದ ಮೂಡಿ ಬಂದಿದ್ದರೂ 'ಬಾಳದೇಗುಲದಲ್ಲಿ' ಇವುಗಳ ಒಂದು 'ಗಾಲರಿ'ಯನ್ನೇ ಏರ್ಪಡಿಸಿದ್ದಾರೆ. ಈ 'ಗಾಲರಿ'ಯ ಯೋಜನೆ, ಹಿನ್ನೆಲೆಗಳನ್ನು ಮುನ್ನುಡಿಯಲ್ಲಿ ಸೂಚಿಸಿದ್ದಾರೆ. ವ್ಯಕ್ತಿಯು ಬಾಳದೇಗುಲದಲ್ಲಿ ಆಡಿ, ಬಾಳನ್ನು ತಿಳಿದುಕೊಂಡು, ಅದನ್ನು ತಿದ್ದಿಕೊಂಡು, ಅದರ ಅನಂತತೆಯನ್ನು ತನ್ನ ಬಾಳಿನಲ್ಲಿ ಮೂಡಿಸಿಕೊಂಡು, ಪೂರ್ಣತೆಯನ್ನು ಪಡೆಯಲು ಅನುಗುಣವಾದ ದೃಷ್ಟಿಯನ್ನು ಒದಗಿಸುವದು—ಪೂರ್ಣ ಜೀವನದ ಹಂಬಲವನ್ನು ಹುಟ್ಟಿಸುವದು—ಇಲ್ಲಿಯ ವಿವಿಧ 'ವ್ಯಕ್ತಿ' ದರ್ಶನಗಳ ಉದ್ದೇಶವೆಂದು ಸೂಚಿಸಿದ್ದಾರೆ. ಇದೇ ಅವುಗಳ ಏಕಸೂತ್ರತೆಯ ಮಾನದಂಡವೆಂದಿದ್ದಾರೆ.

'ಬಾಳದೇಗುಲದಲ್ಲಿ' ಬಂದ ವಿವಿಧ 'ವ್ಯಕ್ತಿ' ಚಿತ್ರಗಳನ್ನು ಅದಕ್ಕೆ ಜೋಡಿಸಿದ ಸಮರ್ಪಣೆಯಲ್ಲಿ ಸುಂದರವಾಗಿ ಹೀಗೆ ನಿರ್ದೇಶಿಸಿದ್ದಾರೆ.

> ೧. ಮಗುವು ಬಂದಾಡಿತ್ತು ಗುಡಿಯ ಪ್ರಾಂಗಣದಲ್ಲಿ ಮುಗ್ಧನಯನಗಳ ತೆರೆದು.
> ವಾತ್ಸಲ್ಯ-ಪ್ರಕೃತಿಯೈಸಿರಿಯಲ್ಲಿ ಮುಕ್ತಿಯನು ಕಂಡುಳಿದುದನ್ನು ತೊರೆದು.

೨. ....ಕುಮಾರಿ ತಾ ಕರವ ಮುಗಿದು ನುಡಿದಳೀ ಶತ್ರುಸನು ಜಗದಲ್ಲಿ ಮಿತ್ರನಂ ತಾತ್ಮನುದಯಿಸಲು ಬೇಕು.

೩. ಮದುವಣಿಗ ತನ್ನ ಕಾರ್ಯೋತ್ಸಾಹ, ಬುದ್ಧಿ ವೈಭವದ ಪ್ರೋತ್ಸಾಹಗಳನು ಬದಿಗಿರಿಸುವದ ಕಂಡೆ ಕನ್ನೆಯೋರ್ವಳಿಗಿತ್ತು ಮನ-ಪ್ರಾಣಗಳನು.

೪. ಪತಿಯು ಸತಿಯೇ ದೈವವೆಂದು ನುಡಿದನು ತನ್ನೊಳತಿ ಮೋಹಿಸಿದ್ದ ರತಿಗೆ.

೫. ತಾಯಿ ಕೇಳ್ವಳು: ತನ್ನ ತಾಯ್ತನವ ಕಾಣದಿಹ ಹೆಣ್ಣಿನಳಾವ ಗತಿಗೆ

೬. ತಂದೆಯೆನುವನು: ತಾನು ಸಾಕಿ ಸಲುಹಿದ ಕುವರರೇಳಿಗೆಗೆ ತನ್ನ ಜೀವ ಸವೆದು ಸಣ್ಣಾಗಿರಲು ಹೊಸ ಜಗವು ಬರಲೆಂದು ತಾಳ್ಮೆಂದಿದರ ನೋವ.

೭. ಕನ್ನಡಿಗ ತಾನೆಂದ: ಕನ್ನಡವ ಜನಮನದಿ ಜಗವೆ ಪಡಿಮೂಡಬೇಕು;
ಬೆಳದೊಂದು ಸೀಮೆಯಲಿ ನಿಃಶೀಮದಾಸಸಿಯ ನಡಲಾವು ಹೆಣಗಬೇಕು.

೮. ಆರ್ಯಮಾತೆಯ ಪುತ್ರನೆಂದ: ಭಾರತಕೆಂದು ತನ್ನಸುವು ಮೀಸಲೆಂದು.

೯. ಕ್ರಾಂತಿಕಾರನು: ರಕ್ತ ಹೊಳೆಯಾಗಿ ಹರಿದಿರಲಿ ಶಾಂತಿ ಹೊರಸೂಸಲೆಂದು.

೧೦. ತ್ಯಾಗಿಯೆಂದನು: ನಾವ್ ಅನಂತವನನುಭವಿಸವೆಲ್ಲವನು ತ್ಯಜಿಸಬೇಕು.

೧೧. ದಾನಿಯೆಂದನು: ದಾನವೇ ಜ್ಞಾನಕಿಹ ದಾರಿಯೆಂದದನು ಭಜಿಸಬೇಕು.

೧೨. ನುಡಿದನು ಸದಸ್ಯ: ಜನಶಂಕರಿಯ ಯುಗದಲ್ಲಿ ಜನಿಸಿರುವ ವಿಷವ ನುಂಗಿ
ನಾವ್ ನೀಲಕಂಠರಿರೆ ಹೊರಹೊಮ್ಮುತ್ತೈತರುವದಮೃತಭಯಭೀತಿ ಹಿಂಗಿ.

೧೩. ನುಡಿದ ಸಮತಾವಾದಿ: ವಿಷಮತೆಯ ಕಿತ್ತೊಗೆದು ಸರ್ವರು ಸಮಾನರೆಂದು
ಧ್ವಜವ ನಿಲ್ಲಿಸಿದೊಡನೆ ಗರ್ಭಮಂದಿರದಲ್ಲಿ ದೇವಿ ಮೊಗ ತೋರ್ವಳೆಂದು.

೧೪. ಇಳೆಯ ಪಾದಾಕ್ರಾಂತವಾಗಿಸಲು ಪಣತೊಟ್ಟ ಅಸುರ ಕೈಯೂರಿನಿಂತು ಸೋಲನೊಪ್ಪಿದ.

೧೫. ಸತ್ಯಾಗ್ರಹಿಯು ತಾನು ಋತದ ದಾರಿಯ ತುಳಿದು ಕಹಿಯು ಸಿಹಿಯಿರುವದೆಂದ.

೧೬. ಕರ್ಮಯೋಗಿಯು ನುಡಿದ: ಕಣ್ಣೆದುರು ಬಂದುದಕೆ ಸಜ್ಜುಗೊಳುತಿಹುದೆ ಚೆಂದ.

೧೭. ಹಿರಿಯರೊರೆದಿಹ ಕರ್ಮಕಾಂಡದಂತೆಯೆ—ನಮ್ಮ ಬಾಳನಳವಡಿಸಬೇಕು:
ಇಂತಾ ಸನಾತನಿ

೧೮. ವಿನೂತನಿ ತಾನೆಂದ: ಈ ಹಳೆಯ ರಗಳೆ ಸಾಕು;

೧೯. ವಿಜ್ಞಾನಿಯೆಂದ: ಈ ಪಂಚಭೂತಗಳ ಪಣಿಸಿ ಅಂಕಿತದಲ್ಲಿಟ್ಟು ಸುಖದಿಂಗಿ ತವ ಬೀರುವೆನು ಮನುಕುಲವನೆಲ್ಲ ತಣಿಸಿ.

೨೦. ನುಡಿದನು ಸುಧಾಕರನು: ಬುದ್ಧಿ ವೈಭವವೊಂದೆ ನಾವ್ ಪಡೆಯಲಿರುವ ಸಿದ್ಧಿ.

೨೧. ರಸಿಕನೆಂದನು: ಪ್ರೀತಿ-ನೀತಿ ಸಂಗಮಿಸುತ್ತ ಸೆಳೆಯುನವು ಹಿಗ್ಗಿನೆಡೆಗೆ.

೨೨. ಚೆಲುವಿನಾರಾಧಕನು ನುಡಿದ: ಚೆಲುವೇ ನಮ್ಮ ದೈವತವು ಕಟ್ಟಕಡೆಗೆ.

೨೩. ಕವಿಯೆಂದ: ಬಣ್ಣ ಬಣ್ಣಗಳಾಟವಾಡುತ್ತ ರಾಗ ಘೋಗದಲಿ ಸಿಲುಕಿ
ಧರೆಯ ವಿವಿಧತೆಯನ್ನು ಕಂಡನೇಲಿರಬೇಕು ಶುಭ, ಜ್ಯೋತಿಯನು ಸಿಲುಕಿ.

೨೪. ಆಟಗಾರನು ನುಡಿದ: ಬಾಳೆಂದರೆ ಲೀಲೆ

೨೫. ಪ್ರಮಥನೆಂದನು: ಬರುವ ಯುಗದ ನಾಯಕನಾಗಿ ಬಾಳನಾಹ್ವಾನಿಸುವೆನು

೨೬. ಸಾಕ್ಷಿ ತತ್ಪರ ತನ್ನ ಬಾಳನ್ನೆ ಹೋಮಿಸಿದ
೨೭. ಕಾವ್ಯಗುರು ತಾನಿಲ್ಲಿ ಪಾರ್ಥಿವರ ಮರ್ತ್ಯತೆಗೆ ತೊಳಲಾಡಿ ಗಾಸಿಗೊಂಡು
ಧರೆಯನ್ನೆ ದಿವ್ಯಲೋಕವನಾಗಿಸುವದೆಂದು ಬಗೆದಿದ್ದ ಸ್ಫೂರ್ತಿಗೊಂಡು.
೨೮. ಯೋಗ ಜೀವಿಯುದಾರ ಚರಿತನೊಡ ನುಡಿದಿದ್ದ : ತಪ ಕೊನೆವ ಕಾಲ
ಬರಲು ತಾಯಿ ಕಾಣುವಳೆಮಗೆ
೨೯. ಅನುಭಾವಿಯೆಂದಿದ್ದ : ಲೋಕದೀ ಬಣ್ಣಗಳು ಬರಿ ನೀರು, ಮಂಜಿನಾಟ;
ಕುಂಡಲಿನಿ ಹೆಡೆಯೆತ್ತಲರಳಿ ನಿಲ್ಲುವ ಕಮಲದಾ ನೋಟವೊಂದೆ ನೋಟ.
೩೦. ಕನಸಿಗನು, ತನ್ನಿಂದ್ರದೀವಿಗೆಯು ಕಳೆದಿರಲು, ನಿಂತಿದ್ದ ಮನದಿ ನೊಂದು
೩೧. ದುಃಖಿಯೆಂದನು : ದುಃಖ–ಸುಖವ ಮೀರಿದ ಪಂಥವೇ ಕೊನೆಗೆ ಗೆಲುವ
ಪಂಥ.
೩೨. ನಿರ್ಲಿಪ್ತನೆಂದ : ಹಿಗ್ಗಹುದು ಓದಿನ ತಿರುಳು ; ಸೃಷ್ಟಿಯೆ ಪ್ರಮಾಣ ಗ್ರಂಥ
೩೩. ಭಕ್ತನಾಲಾಪಿಸಿದ : ಭೌಮದಾರಾಧನೆಯೆ ಜೀವಿತದ ಸೂತ್ರವೆಂದು
೩೪. ಉರಿವ ಪಾಂಡಿತ್ಯದುಸುಬಿನ ಬಯಲಿನಲಿ ತಿರುಗಿ ಜಿಜ್ಞಾಸ ನಂದನವನು
ಶೋಧಿಸಿದ ರೀತಿಯನು ವಿವರಿಸಿದನಾ ಜ್ಞಾನಿ ನೆನೆಸುತ್ತ ಚಿದ್ಘನವನು.
೩೫. ಬಾಳೆಲ್ಲ ಹಾಳೆಂದು ಭ್ರಮಿಸಿದಾಳ್ವಾರ ಕೊನೆಗೊಮ್ಮೆ ಶರಣು ಹೋಗಿ,
ಗುರುವಿನಡಿಯನು ಕಂಡು ರಾರಾಜಿಸಿದ ದೇಗುಲದ ದೀವಿಗಿಹ ಮುಕುಟವಾಗಿ.
೩೬. ಮುಕ್ತ ಜೀವಿಗಳಿವರು, ಬಾಳ್ಮೊದಲ ಬಲ್ಲವರು.

ಹೀಗೆ 'ಬಾಳದೇಗುಲದಲ್ಲಿ' ಚಿತ್ರಿಸಿದ ವಿವಿಧ 'ವ್ಯಕ್ತಿ'ಗಳ ವೈಶಿಷ್ಟ್ಯಗಳನ್ನು ಸಮ
ರ್ಣೆಯಲ್ಲಿ ಸಂಗ್ರಹಿಸಿ ಶ್ರೀ ಗೋಕಾಕರು

ಮಾದರಿಯ ಮಾನವರು ತಮ್ಮಾಟಗಳ ಹೂಡಿ ನಿಂತಿಹರು ಗುಡಿಯ ಮುಂದೆ;
ಕಣ್ಣನಳವಿದ್ದಂತೆ ಮೂರುತಿಯ ಸುಳುವಿಹುದು : ಕಂಗಳಿರೆ ಭಿನ್ನ ಭಿನ್ನ
ದರ್ಶನವು ಬಿನ್ನವಿದೆ ; ಭಿನ್ನವಿರಲೇನಂತೆ ? ಅವರವರಿಗದುವೆ ಚಿನ್ನ.
ಎಲ್ಲ ದರ್ಶನಗಳಾಸಾರಸಂಗ್ರಹವೆ ನಾನರ್ಚಿಸುವ ಸತ್ಯವೆಂದೆ

ಎಂದು ಈ ವ್ಯಕ್ತಿಚಿತ್ರಗಳು ಜೀವನದಲ್ಲಿಯ ವಿವಿಧ ವ್ಯಕ್ತಿಗಳ ಮಾದರಿಗಳು. ಇವ
ಲ್ಲರೂ ತಮ್ಮ ತಮ್ಮ ರೀತಿಯಲ್ಲಿ 'ಜೀವನ ವಿಕಾಸ'ವನ್ನು ಪಡೆಯಲು ಪ್ರಯತ್ನಿಸು
ತ್ತಿರುವರು. ಆದರೆ ಒಂದೊಂದು ವಿಧವಾದ ಪರಿಮಿತಿಯಲ್ಲಿ ವ್ಯವಹರಿಸುತ್ತಿರುವದರಿಂದ
ಜೀವನದ ಪೂರ್ಣದರ್ಶನವಿಲ್ಲದೆ ಪೂರ್ಣತೆಯ ಕಡೆಗೆ ಸಾಗುವದಕ್ಕೆ ತಡೆಯನ್ನುಂಟು
ಮಾಡಿಕೊಂಡಿದ್ದಾರೆ. ಇವೆಲ್ಲವುಗಳ ಸಾರಸಂಗ್ರಹವೆ ಸತ್ಯ. ಅದನ್ನರ್ಚಿಸುವ ವ್ಯಕ್ತಿಯೇ
ಮುಗ್ಧತೆಯಿಂದ ಪೂರ್ಣತೆಯ ಕಡೆಗೆ ಸಾಗಬಲ್ಲನು ಎಂದು ಸೂಚಿಸಿದ್ದಾರೆ. ಈ
ಪೂರ್ಣದೃಷ್ಟಿಯುಳ್ಳ 'ವ್ಯಕ್ತಿ'ಯೇ ಅವರ ಕಾವ್ಯಗಳಲ್ಲಿ ಚಿತ್ರಿಸಲ್ಪಟ್ಟ ಮೌಲಿಕ ವ್ಯಕ್ತಿ.
ಇನ್ನಿತರ 'ವ್ಯಕ್ತಿ'ಗಳು ಜೀವನದಲ್ಲಿದ್ದ ವ್ಯಕ್ತಿಗಳ ಮಾದರಿಗಳು.

'ನೆಳಲು' ಎಂಬ ಅವರ ಇನ್ನೊಂದು ಕವಿತೆಯಲ್ಲಿ ಶಕ್ತಿ-ವ್ಯಕ್ತಿಗಳ ಸಂಘರ್ಷವನ್ನು
ಸುಂದರವಾಗಿ ಚಿತ್ರಿಸಿ ಶಕ್ತಿಯ ವಿವಿಧ ಆಮಿಷಗಳಿಗೆ ಜಗ್ಗದೆ 'ವ್ಯಕ್ತಿ'ಯು ತನ್ನ

ಸ್ವಾತಂತ್ರ್ಯಕ್ಕಾಗಿ ಹೇಗೆ ಹೋರಾಡುತ್ತಾನೆ ಎಂಬುದನ್ನು ತೋರಿಸಿದ್ದಾರೆ. 'ವ್ಯಕ್ತಿ' ಅಂತಸ್ಸತ್ವದ ಅರಿವನ್ನು ಮಾಡಿಕೊಟ್ಟಿದ್ದಾರೆ.

'ವ್ಯಕ್ತಿ' ವಿಕಾಸಕ್ಕೆ ಅಡ್ಡಬರುವ ಸಾಮಾಜಿಕ ಆತಂಕ ಮತ್ತು ಆಂತರಿಕದೌಬ ಗಳನ್ನು ಅವರು ಬಲವಾಗಿ ಖಂಡಿಸುತ್ತಾರೆ.

ವ್ಯಕ್ತಿಯನು ಪೋಷಿಸಲು
ಬೆಳೆದ ಸಂಸ್ಥೆಗಳಿಂತು
ಹೊಲವನ್ನೇ ಮೇಯುತಿಹ ಬೇಲಿಯಂತೆ
ವ್ಯಕ್ತಿಯನು ಹಿಮ್ಮೆಟ್ಟಿ
ನಿಂತಿರಲು ನಾಡಿನಲಿ,—
ಕಣ್ಣಿಟ್ಟ ಗುರಿ ಬಂಡಿಗಾಲಿಯಂತೆ!

ಎಂಬ ಸಾಲುಗಳಲ್ಲಿ 'ವ್ಯಕ್ತಿ'ಯ ಸಾಮಾಜಿಕ ಮತ್ತು ಆರ್ಥಿಕ ವಿಕಾಸಕ್ಕೆ ಅಡ್ಡಿಬ ಸಂಸ್ಥೆಗಳನ್ನು ಖಂಡಿಸಿದ್ದಾರೆ.

ಆಧುನಿಕ ನಗರ ಜೀವನದ ಗದ್ದಲದಲ್ಲಿ ಸಿಲುಕಿಬಿದ್ದು ತಮ್ಮ 'ವ್ಯಕ್ತಿತ್ವ'ವ ಕಳೆದುಕೊಂಡ ಅಸಂಖ್ಯಾತ ಬಡವರನ್ನು ಕಂಡು

ವ್ಯಕ್ತಿತ್ವವಿದು ಬರಿ ಅಂಕಿ, ಜೀವನವಿದು ಬೆಂಕಿ :
ವ್ಯರ್ಥ, ವ್ಯರ್ಥ, ವ್ಯರ್ಥ,

ಎಂದು ವ್ಯಥೆಯನ್ನು ವ್ಯಕ್ತಪಡಿಸಿದ್ದಾರೆ.

ಓ ಸಮಾಜ!
ವ್ಯಕ್ತಿ ಬರಿಯ ಕೂಲಿಯಾಳಲ್ಲ.
ನಿನ್ನ ಯಂತ್ರ ವ್ಯೂಹಕ್ಕೆ ಬರಿ ಮೊಳೆಯಲ್ಲ!
ರಾಜಕಾರಣಿಗಳ ಗರಡಿ ಮನೆಯಾಗಿ,
ಒಳ ಸಂಚಿಗರ ಕಾರಸ್ಥಾನದ ಕಮ್ಮಟವಾಗಿ
ಆಳರಸರ ನಾಟ್ಯರಂಗವಾಗಿ
ಅಸಹಾಯಿತರ ಸ್ಮಶಾನವಾಗಿ

ಡಾಂಭಿಕರ ಮಂತ್ರಶಾಲೆಯಾಗಿ
ಸತ್ಯ–ಸೌಂದರ್ಯ–ಕಲ್ಯಾಣಗಳನ್ನು
ಮೂಲೆಗುಂಪಾಗಿಸಿದ ಸಮಾಜವೇ!
ಅಧಿಮಾನವನ ತೂಗುದೊಟ್ಟಿಲಾಗು
ಓ ಸಮಾಜ!

ಎಂದು ಸಮಾಜಕ್ಕೆ 'ವ್ಯಕ್ತಿ'ಯನ್ನು ಹತ್ತಿಕ್ಕದಿರಲು ಎಚ್ಚರಿಕೆ ಕೊಟ್ಟಿದ್ದಾರೆ.

ಹೀಗೆ 'ವ್ಯಕ್ತಿ'ಯ ವಿಕಾಸಕ್ಕೆ ಸಾಮಾಜಿಕ ಆತಂಕಗಳನ್ನು ಖಂಡಿಸಿದಂತೆಯೇ ವ್ಯಕ್ತಿ'ಯು ತನ್ನ ಆಂತರಿಕ ದೌರ್ಬಲ್ಯಗಳನ್ನು ನಿಯಂತ್ರಿಸಿಕೊಳ್ಳಲು ಎಚ್ಚರಿಕೆ ಕೊಡುತ್ತಾರೆ. ಪರಾಶಕ್ತಿಯನ್ನು ಪ್ರಾರ್ಥಿಸುತ್ತಾರೆ.

ಕರುಣಿಸಾ ಶಕ್ತಿಯನು, ಉರುವಣಿಸು ಭಕ್ತಿಯನು.
ದುರ್ಬಲತೆಗಳ ಗೆಲುವ ಬಲವ ನೀಡು.
ತಪ್ಪಡಿಯನಿಡೆ ನಿನ್ನ ಮಗುವು ತಪ್ಪುವದೆಂದು
ತಪ್ಪುಗಳ ತಿದ್ದು—ಜೀವಿತವ ತೀಡು

ಎಂಬುದು ಒಂದು ವಿಶಿಷ್ಟ ಸಂದರ್ಭದಲ್ಲಿ ಮಾಡಿದ ಪ್ರಾರ್ಥನೆಯಾದರೂ 'ವ್ಯಕ್ತಿ'ಯ ಂತರಿಕ ದೌರ್ಬಲ್ಯಗಳ ಪರಿಹಾರದ ಪ್ರಾರ್ಥನೆಯಾಗಿದೆ.

'ಇಂದ್ರನ ಕಣ್ಣು ಬೇನೆ' ಎಂಬ ಒಂದು ಸುಂದರವಾದ ಕವನದಲ್ಲಿ

ಇಂದ್ರನೇನಯ್ಯ, ಆ ಚಂದ್ರನೇನು?
ಆರ್ಯಪಥ ಇಂದ್ರ-ಚಂದ್ರರಿಗು ಹಿರಿದು.
ನಾವು ನೀವುಗಳೆಲ್ಲ ಸತ್ಯದೂಳಿಗದವರು.
ಬಾಳುವರೆ ಸಾರ್ವಭೌಮನನೆ ಮರೆದು?

ುದು ಇಂದ್ರನೇ ಚಂದ್ರನೇ ಆಗಲಿ-ಎಷ್ಟು ದೊಡ್ಡವನೇ ಆಗಲಿ ಯಾವ ವ್ಯಕ್ತಿಯೂ ಆರ್ಯಪಥ'ವನ್ನು ಮೀರಿ ಸತ್-ದೃಷ್ಟಿಯನ್ನು ಉಳಿಸಿಕೊಳ್ಳಲಾರನು ಎಂದು ಸೂಚಿಸಿ ದ್ದಾರೆ.

'ವ್ಯಕ್ತಿ'ಯ ಕಲಾತ್ಮಕಸ್ತರದ ಚಿತ್ರಣಗಳೂ ಅನೇಕ ಕಡೆಗೆ ಬಹಳ ಸುಂದರವಾಗಿ ಂದಿವೆ.

ಹೀಗೆ ಪ್ರಕೃತಿ ಪ್ರಾಣಮಯತೆಯ ಚೆಲುವನ್ನು
ಮಾನವನ ಮನೋಮಯತೆ ಕಂಡು ಹಿಡಿದು
ನಿಸರ್ಗ ರಮಣೀಯತೆಗೆ ಮುಕುಟವಿಟ್ಟಿತು
ಜೀವನ ವಿಕಾಸಕ್ಕೆ ದಾರಿ ಮಾಡಿಕೊಟ್ಟಿತು.

ಂಬ ಒಂದೇ ಒಂದು ಕವನವನ್ನು ಉದಹರಿಸಿ ಇದರ ಮನವರಿಕೆಯನ್ನು ಮಾಡಿಕೊಡ ಹುದು.

'ವ್ಯಕ್ತಿ'ಯ ಆಧ್ಯಾತ್ಮಿಕ ಸ್ತರವನ್ನು ಚಿತ್ರಿಸುವ ಕವನಗಳಂತೂ ವಿಪುಲವಾಗಿವೆ.

ನಿನ್ನನೆಂತು ಬಳಿ ಸಾರ್ವದೆಂಬುದನು ತಿಳಿಸು ಪರಾಶಕ್ತಿ

ಂಬುದನ್ನೇ ಇದಕ್ಕೆ ಒಂದು ಉದಾಹರಣೆಯಾಗಿ ಹೇಳಬಹುದು.

'ಬಾಳದೇಗುಲದಲ್ಲಿ' ಬಂದ ಈ ಎಲ್ಲ ಸ್ತರಗಳ ಮತ್ತು ಇವುಗಳ ಒಳಪದರ 'ವ್ಯಕ್ತಿ' ಚಿತ್ರಗಳನ್ನು ಮೇಲೆ ವಿವರಿಸಿದ್ದೇವೆ.

ಹೀಗೆ ಶ್ರೀ ಗೋಕಾಕರ ಕಾವ್ಯಗಳಲ್ಲಿ 'ಮೌಲಿಕ ವ್ಯಕ್ತಿ'ಯ ಚಿತ್ರ ಮತ್ತು ಜೀ ದಲ್ಲಿಯ ವ್ಯಕ್ತಿಗಳ ವಿವಿಧ ಮಾದರಿಗಳು ಸ್ಫುಟವಾಗಿ ಚಿತ್ರಿಸಲ್ಪಟ್ಟಿವೆ. ವ್ಯಕ್ತಿ ಅಂತಸ್ಸತ್ವ, ಅದರ ಆವಿಷ್ಕಾರ ಹಾಗೂ ಸಾಫಲ್ಯಗಳು ಸುಂದರವಾಗಿ ನಿರ ಸಲ್ಪಟ್ಟಿವೆ.

ವಿಮರ್ಶೆ

ಸ. ಸ ಮಾಳವಾಡ

ಒಂದು ಕವನದಲ್ಲಿ 'ಕನಸುಗಳ ಸಿರಿಯರಸ ನಾನು, ನೀನಲ್ಲ' ಎಂದು 'ಶಕ್ತಿ'ಗೆ ಹೇಳಿದ ವಿನಾಯಕರು ಕನಸುಗಾರರೆಂಬುದು ಸ್ಪಷ್ಟವಿದೆ. ಅವರ ಕೆಲವು ಕವನಗಳಲ್ಲಿ ಕನಸು ಪದದ ಬಳಕೆ ಅನೇಕ ಸಲ ಆಗಿರುವುದೂ ಉಂಟು. ಕನಸು ಅವರಿಗೆ ಬ್ರಹ್ಮ ಹಾಕಿದ ಗಂಟೂ ಆಗಿರುವುದು ನಿಜ. ಕನಸುಗಳ ಕೊಳ್ಳದಲಿ ವಿಹರಿಸುವುದು ಅವರಿಗೆ ಪ್ರೀತಿಯ ವಿಷಯವೇ ಆಗಿದೆ. ಆದರೆ ಸಾಮಾಜಿಕ ಪ್ರಜ್ಞೆ ತೀವ್ರವಾಗಿರುವ ವಿನಾಯಕರು ವಾಸ್ತವವಾದಿಯೂ ಆಗಿದ್ದಾರೆ. 'ಕಲೋಪಾಸಕ' ಬರೆದ ಅವರು 'ತುಲಸಿ'ಯನ್ನೂ ಬರೆದಿದ್ದಾರೆ. ಮಧುರ ಭಾವನೆಗಳ ಭಾವಗೀತೆಗಳಂತೆ 'ಉಗನು' 'ಊರ್ಣನಾಭ'ಗಳಂತಹ ಸಂಕಲನಗಳಲ್ಲಿ ತೀಕ್ಷ್ಣ ಭಾವನೆಯ ಕಟುವಿಡಂಬನೆಯನ್ನೂ ಕೊಟ್ಟಿದ್ದಾರೆ. ಕಲೋಪಾಸಕನ ಕನಸು ಸಾಮಾಜಿಕ ಜೀವಿಯ ವಾಸ್ತವಿಕತೆ ಇವುಗಳ ಸಮನ್ವಯವನ್ನು ವಿನಾಯಕರ ಬಾಳಿನಲ್ಲಿ, ಸಾಹಿತ್ಯ ಸೃಷ್ಟಿಯಲ್ಲಿ ನಾವು ಕಾಣುತ್ತೇವೆ. ವಿನಾಯಕರ ಬಾಳಿನ ತಿರುಳೆಂದರೇ ಸಮನ್ವಯ ಸಾಧನೆ.

> ರತ್ನಪಕ್ಷಿಯ ಪಡೆಯಲೆಂದು ಮನಸಿರಲು
> ಕಾಂತಿಮಯವಾಗಿರಿಸಲು ಒಂದು ಕನಸಿರಲು....

ವಿನಾಯಕರು ಮುಂದೆ ಮುಂದೆ ಸಾಗುತ್ತಾರೆ. ಆದರೆ

> ನನ್ನ ಜೀವನವುಂಡ ಕನಸುಗಳು ಜೀವನದಿ
> ಮೂಡಿ ಬರಬೇಕೆಂದು ನಾನೆಳಸುತಿರುವಾಗ
> ಮಣ್ಣಿನಲಿ ತಲೆಯೆತ್ತಿ ಮಲಿನತೆಯ ಹೊಂದಿದವು

ಎಂಬ ಅನುಭವವೂ ಅವರಿಗೆ ಆಗದೆ ಇಲ್ಲ. ಆಗ ಅವರು

> ಅಲ್ಲ; ನನ್ನ ಪಯಣ ಮುಗಿವ ಕಾಲವಿದಲ್ಲ

ಎಂಬ ಆಶಾವಾದದಿಂದ ತಮ್ಮ ಪಯಣವನ್ನು ಮುಂದುವರಿಸುತ್ತಾರೆ.

> ಸಲುಸೆಯೊಡನೆ ಸಾಮರಸ್ಯವಿಸುದೆ ಜಗದ ಘನರಹಸ್ಯ

ಎಂದು ದೃಢವಾಗಿ ನಂಬಿದ ವಿನಾಯಕರಿಗೆ ನಲುಮೆಯ ಸಾಮರಸ್ಯ ಬಾಳ್ಮೆಯೆ
ಕಥೆಯ ಮೂಲ ಸಾರವೇ ಆಗಿದೆ.

ಕವಿ ಮತ್ತು ವಿಮರ್ಶಕ ಈಯೆರಡು ಪಾತ್ರಗಳ ಸಮನ್ವಯ ವಿನಾಯಕರಲ್ಲಿ
ಕವಿ ನಿರ್ಮಿಸುತ್ತಾನೆ; ವಿಮರ್ಶಕ ನಿರ್ಣಯಿಸುತ್ತಾನೆ. ನಿರ್ಮಿಸುವುದಕ್ಕೆ ಪ್ರತಿಭೆ ಬೇಕು
ನಿರ್ಣಯಿಸುವುದಕ್ಕೆ ವ್ಯಾಸಂಗದ ಬಲ ಬೇಕು. ಇವೆರಡರ ಮೇಳವಿದೆ, ವಿನಾಯಕರ
ಅವರ ಸಾಹಿತ್ಯಸೃಷ್ಟಿ ವಿಪುಲ, ವಿವಿಧ. ಅವರ ವಿಮರ್ಶೆ ಸ್ಪಷ್ಟ ಮತ್ತು ವಿಚಾರಪೂರ್ಣ
ಸಹೃದಯತೆ ಮತ್ತು ನ್ಯಾಯಬುದ್ಧಿಗಳನ್ನು ಆಧರಿಸಿ ವಿಮರ್ಶಾತತ್ವಗಳ ನಿರೂಪ
ಯೊಂದಿಗೆ ವಿಶಿಷ್ಟ ಕೃತಿಗಳ ಪರಿಶೀಲನೆಯನ್ನೂ ಒದಗಿಸುವ ಇವರ ವಿಮರ್ಶೆ ಪ್ರಭಾ
ಶಾಲಿಯಾಗಿದೆ. ಒಮ್ಮೊಮ್ಮೆ ಸಹೃದಯತೆ ಮತ್ತೊಮ್ಮೆ ನ್ಯಾಯಬುದ್ಧಿ ಹೆಚ್ಚಾಗಿ ಕಂ
ಬಂದಂತೆ ತೋರಿದರೆ ಅದು ಸನ್ನಿವೇಶ ಬಲದಿಂದ. ಆದರೆ ಅದನ್ನು ಒಪ್ಪಿಕೊಳ್ಳ
ಪ್ರಾಂಜಲ ಮನಸ್ಸು ಪ್ರಾಮಾಣಿಕತೆಗಳೂ ಅವರಿಗಿವೆ.

ನಲುಮೆಯೊಡನೆ ಸಾಮರಸ್ಯವಿಹುದು ಬಾಳಿನ ಮೂಲಸಾರವೆಂದೇನೋ ವಿನಾ
ಕರು ಸಾರಿದರು. ಆದರೆ ಬಾಳಿನಲ್ಲಿ, ಸಾಹಿತ್ಯದಲ್ಲಿ ಅನಿಷ್ಟ ಪ್ರವೃತ್ತಿಗಳಿವೆಯಲ್ಲ
ಏನು ಮಾಡುವುದು ? ಹೋರಾಡಬೇಕು. ವಿನಾಯಕರು ಹೋರಾಟಗಾರರೂ ಅಹುದ
ಆದರೆ ಹೋರಾಟಕ್ಕೆ ತೊಡಗುವಾಗ ಘನತೆ ಗಾಂಭೀರ್ಯಗಳನ್ನು ಅವರು ಕಾಯ
ಕೊಳ್ಳುತ್ತಾರೆ. ಅಪೇಕ್ಷಣೀಯವಲ್ಲದುದರ ಬಗೆಗೆ ತಮ್ಮ ಅಸಮ್ಮತಿಯನ್ನು ಸೂಚ
ಬೇಕಾದಾಗ ಅವರು ಹಾಸ್ಯದ, ವಿಡಂಬನೆಯ ಯೋಜನೆಯನ್ನು ಕೈಕೊಂಡಿದ್ದಾರೆ. ಭ
ವೈಪರೀತ್ಯ ಅಳಿದು, ಸತ್ಯ ಉಳಿಯಬೇಕೆಂಬ ದೃಷ್ಟಿಯಿಂದ ಅವರು 'ವಿಮರ್ಶಕ ವೈ
ಎಂಬ ಏಕಾಂಕ ನಾಟಕ ರಚಿಸಿದರು. ಅದು ಸಾಕಷ್ಟು ಯಶಸ್ಸನ್ನು, ಜನಪ್ರಿಯ
ಯನ್ನು ಪಡೆಯಿತು.

'ವಿಮರ್ಶಕ ವೈದ್ಯ' ಸಾಹಿತ್ಯದಲ್ಲಿ ಸತ್ಯ, ಔಚಿತ್ಯಗಳನ್ನು ಹಾಸ್ಯವಿಡಂಬನೆಗಳ ಮೂ
ಸಮರ್ಥಿಸುವ ಕೃತಿಯಾಗಿದೆ. ಅದು ಮೊದಲು ೧೯೪೭ ರಲ್ಲಿ ಪ್ರಕಟವಾಯಿತು. ಅಂ
ಸಾಹಿತ್ಯರಂಗದಲ್ಲಿ ಕಂಡು ಬಂದ ರೋಗಗಳಿಗೆ ಒಬ್ಬ ಡಾಕ್ಟರನು ಚಿಕಿತ್ಸೆಯನ
ಒದಗಿಸುವಂತಿರುವ ಸನ್ನಿವೇಶಗಳು ಆ ಏಕಾಂಕದಲ್ಲಿ ಮೂಡಿಬಂದಿವೆ. ಸಾಹಿ
ವಿಮರ್ಶೆಗಳಿಗೆ ಸಂಬಂಧಿಸಿದ ವಿನಾಯಕರ ವಿಚಾರಧಾರೆಯನ್ನು 'ವಿಮರ್ಶಕವೈ
ದಿಂದ ಅರಿತುಕೊಳ್ಳಬಹುದಾಗಿದೆ.

ಪ್ರಾಚೀನ ಪದ್ಧತಿಯ ಪಾಂಡಿತ್ಯದ ಕುರುಹಾದ ಪ್ರಾಸವಿಪುಲತೆಯಿಂದ ಕೂ
ಅರ್ಥರಹಿತ ಪದ್ಯ ರಚಿಸಿ ಕವಿತೆಯ ಕೊರಳು ಕೊಯ್ಯುವ ಶಾಸ್ತ್ರಿ; ಕವಿತೆ ಬರೆಯ
ಉತ್ಸಾಹವಿದ್ದೂ ಹೊಸ ವಾತಾವರಣದ ಪರಿಚಯ ಪಡೆಯದೆ, ಅನುಭವ ಗ
ಕೊಳ್ಳದೇ ಇರುವ ಕನಿಕರದ ಸ್ಥಿತಿಯ ಶಾಲಾಶಿಕ್ಷಕ; ತತ್ವ ತತ್ವಗಳ ಬಡಿದಾಟದ

ಕವಿತೆಯ ಸತ್ವವನ್ನೇ ಹಾಳುಮಾಡುವ ವರ್ಗ, ದೇವರ ಹೆಸರಿಲ್ಲದೆ ನಾಲಗೆ ಎತ್ತ
ಲಾರದೆನ್ನುವ ಹಟದ ಧಾರ್ಮಿಕ, ಸಮಾಜವೇ ಬ್ರಹ್ಮವೆಂದು ಭಾವಿಸಿ ದೇವರನ್ನೇ
ಮರೆತ ಸಾಮಾಜಿಕ; ಹೊಸ ಕಾಲದ ಬೋಳು ಪದ್ಯಗಳನ್ನು ಟೀಕಿಸುವ ದೃಷ್ಟಿಯಿಂದ
ಹಳ್ಳಿಯ ಹಾಡುಗಳ ರಾಗಗಳನ್ನು ಮಾತ್ರ ಮೆಚ್ಚಿಕೊಂಡು ಆ ಹಾಡುಗಳ ಜೀವಾಳ
ವನ್ನು ಅರ್ಥಯಿಸಿಕೊಳ್ಳಲಾರದೆ ಅಪದ್ಧ ಪದ್ಯ ರಚಿಸಲು ಹೊರಟ ಉತ್ಸಾಹಿ;
ಕವಿತೆಯಲ್ಲಿ ಆಧುನಿಕತೆ ತರಲೆಂದು ವಿಲಾಯತಿಯ ಮಣ್ಣು ತಿನ್ನುವ ಭ್ರಾಂತಿಗೊಳ
ಗಾದ ಆಂಗ್ಲ ವಿದ್ಯಾಭ್ಯಾಸಿ; ಮೋಹರಮ್ ಹುಲಿಯನ್ನು ಕುರಿತು ಪದ್ಯ ರಚಿಸಿ
ಅಂತಹ ಹುಲಿಯಂತೆ ಕುಣಿದಾಡುವ ಉನ್ಮಾದ ರೋಗಗ್ರಸ್ತ—ಇಂತಹರ ಪರೇಡು
'ವಿಮರ್ಶಕವೈದ್ಯ'ದಲ್ಲಿದೆ. ಇಂತಹ ರೋಗಿಗಳಿಗಾಗಿ ವಿಮರ್ಶಕವೈದ್ಯ ವಿನಾಯಕರ
ಚಿಕಿತ್ಸೆಯೂ ಇಲ್ಲಿ ಮೂಡಿಬಂದಿದೆ. ಹೊಸಗನ್ನಡ ಕವಿತೆಯ ವಿವಿಧ ಅವತಾರ
ಗಳನ್ನು ಕುರಿತ ಇಲ್ಲಿಯ ವಿಡಂಬನೆಯಿಂದ ವಿನಾಯಕರ ವಿಮರ್ಶಾದೃಷ್ಟಿ ಸೂಚಿತ
ವಾಗಿದೆ. ಆದರೆ ಹೊಸಗನ್ನಡ ವಿಮರ್ಶೆಯ ವಿವಿಧ ಅವತಾರಗಳನ್ನು ವಿನಾಯಕರು
ಬೇರೊಂದು ಕಡೆಗೆ ನೇರವಾಗಿ ಉಲ್ಲೇಖಿಸಿದ್ದಾರೆ. ಅದು ಹೀಗೆ:

"ಗುಣದ ಇಲ್ಲವೆ ದೋಷದ ಒಂದು ಚುಂಗನ್ನು ಹಿಡಿದು ಆನೆಯ ಬಾಲವೇ ಆನೆ ಯೆಂದು ಪ್ರಸ್ಥಾಪಿಸುವ ಗಜರಗಳೆಯ ವಿಮರ್ಶೆ; ತನ್ನ ಮಲ್ಲಿನಾಥಿಕೆಯಿಂದ ಸತ್ಯಾಭಾಸವನ್ನು ಹುಟ್ಟಿಸಿ ಅದನ್ನೇ ಸತ್ಯವೆಂದು ಸಾಧಿಸಿ ಸತ್ಯವೆಂದು ಕಾಣುವ ಆ ಆಭಾಸದ ಮೇಲೆ ಸಾಹಿತಿಯನ್ನು....ಶೂಲಕ್ಕೇರಿಸುವ ಆಭಾಸ ವಿಮರ್ಶೆ; ಕವಿಯ ನಂಬಿಕೆ-ಶ್ರದ್ಧೆಗಳೇನೇ ಇರಲಿ, ಅವು ಎಷ್ಟರಮಟ್ಟಿಗೆ ಕಾವ್ಯವಾಗಿವೆಯೆಂಬುದನ್ನು ನೋಡುವದನ್ನು ಬಿಟ್ಟು....ಕಾವ್ಯವನ್ನೆ, ಶಪಿಸುವ ಕುರುಡುವಿಮರ್ಶೆ; ನೀತಿಗೆ ಪಟ್ಟಗಟ್ಟಿ ಕಾವ್ಯವು ತನ್ನ ಪರಿಣಾಮದಲ್ಲಿ ಹೇಗೆ ಕಲ್ಯಾಣಕಾರವಾಗಬಲ್ಲದೆಂಬುದನ್ನು ಮರೆತು ನೀತಿಪಾಠವನ್ನು ಕಲಿಸಬಯಸುವ 'ಸಂಪನ್ನ' ವಿಮರ್ಶೆ; ಕಾವ್ಯದ ಆತ್ಮವನ್ನು ಮರೆತು ದೇಹರಚನೆಯನ್ನು ಮಾತ್ರ ಅವಲೋಕಿಸುವ ಚಾರ್ವಾಕ ವಿಮರ್ಶೆ; ಕಾವ್ಯದ ಆತ್ಮವನ್ನು ನೆನೆದು ದೇಹವನ್ನೇ ಮರೆಯುವ ಶೂನ್ಯ ವಿಮರ್ಶೆ; ಒಂದು ಪದ್ಯದಿಂದ ಅದನ್ನೊಳಗೊಂಡ ಕೃತಿಯನ್ನೇ ಅಳೆಯಲು ನಡೆದ ಮಾರುಗೈ ವಿಮರ್ಶೆ; ಒಂದು ಕೃತಿಯಿಂದ ಒಬ್ಬ ಸಾಹಿತಿಯನ್ನೇ ತೂಗಲು ನಡೆದ ಒಗ್ಗಾಲಿ ವಿಮರ್ಶೆ; ಅಂಶದಿಂದ 'ಇಡಿ'ಯನ್ನೇ ಅಲ್ಲಗಳೆಯುವ ಧ್ವಂಸವಿಮರ್ಶೆ; ಒಂದು ಕೃತಿಯ ತಿರುಳನ್ನು ತಿಳಿಯದೆ ಅಪಾರ್ಥವನ್ನು ಕಲ್ಪಿಸಿ ಹರಿಹಾಯುವ ಮರುಳು ವಿಮರ್ಶೆ; ಒಬ್ಬ ವ್ಯಕ್ತಿಯನ್ನು ಇಲ್ಲವೆ ಒಂದು ವಿಚಾರವನ್ನು ಪೂರ್ವಗ್ರಹವಿದ್ದು ಕಣ್ಣಿನ ಹಿಮ್ಮುಗ್ಗದಿಂದ ನೋಡುವ ವಿಮರ್ಶೆ...."

ಹೀಗೆ ಸಾಹಿತ್ಯದ, ವಿಮರ್ಶೆಯ ವೈಪರೀತ್ಯಗಳನ್ನು ವಿನಾಯಕರು ಎತ್ತಿ ತೋರಿ ದ್ದಾರೆ. ಸಾಹಿತ್ಯ, ವಿಮರ್ಶಾರಂಗಗಳ ಆರೋಗ್ಯವರ್ಧನೆಯ ಬಗೆಗೆ ವಿನಾಯಕ ತೀವ್ರ ಹಂಬಲ ವ್ಯಕ್ತವಾದ ಬಗೆಯಿದು.

ನಾಲ್ವತ್ತು ವರುಷಗಳ ಹಿಂದೆ ವಿನಾಯಕರು ಕವಿತೆ, ಕಾವ್ಯವಿಮರ್ಶೆಗಳೊಂದಿ ಸಾಹಿತ್ಯ ರಂಗದಲ್ಲಿ ಪದಾರ್ಪಣೆ ಮಾಡಿದರು. ಮೇಧಾವಿ ವಿದ್ಯಾರ್ಥಿಯಾಗಿ, ಚಿಂತ ಶೀಲ ಏಕಾಂತದಲ್ಲಿ ತೊಡಗಿ, ಆಂಗ್ಲ-ಸಂಸ್ಕೃತ ಹಳಗನ್ನಡ ಕಾವ್ಯಗಳನ್ನು, ವಿಮರ್ಶ ಕೃತಿಗಳನ್ನು ನಿಷ್ಠೆಯಿಂದ ವ್ಯಾಸಂಗಮಾಡಿ ಅವರು ವಿಮರ್ಶಾರಂಗಕ್ಕಿಳಿದರು. ಬಗೆಯ ಪೂರ್ವಸಿದ್ಧತೆಯ ಮೂಲಕ ಅವರ ವಿಮರ್ಶನ ಲೇಖನಗಳು ಬೆಲೆ ಬಾಳ ಬಗೆಯಲ್ಲಿ ರೂಪುಗೊಂಡವು. ವಿಮರ್ಶೆಯನ್ನು ಕುರಿತು ಅವರು ಕ್ರಮಬದ್ಧಯೋಜನೆಗ ಕೈಹಾಕಿದ್ದರು. ೧೯೩೪ ರಲ್ಲಿ ಪ್ರಕಟವಾದ 'ಕಲೋಪಾಸಕ'ದ ಸಾವಿರ ಪ್ರತಿಗಳ ಒಂದೊಂದು ಪ್ರತಿಗೂ ಒಂದು ಪುಟವನ್ನು ಓದುಗರ ಅಭಿಪ್ರಾಯ ಸಂಗ್ರಹಕ್ಕೆಂ ಸೇರಿಸಿದ್ದರು. ಓದುಗರಿಂದ, ೧. ಕಾವ್ಯವನ್ನು ಓದುವ ರೀತಿ, ೨. ಕಾವ್ಯಾನುಭವವನ ಪಡೆಯುವ ರೀತಿ, ೩. ಒಂದು ಕೃತಿಯ ಯೋಗ್ಯತೆಯನ್ನು ನಿರ್ಣಯಿಸುವ ರೀತಿ- ಇತ್ಯಾದಿ ಅಭಿಪ್ರಾಯಗಳನ್ನು ಸಂಗ್ರಹಿಸುವ ದಿಸೆಯಲ್ಲಿ ಹಂಚಿಕೆ ಹಾಕಿದ್ದರು. ಅವ ಅಪೇಕ್ಷಿಸಿದಂತೆ ಅಭಿಪ್ರಾಯ ಕಳಿಸಿದ ಓದುಗರ ಸಂಖ್ಯೆ ನಿರಾಶಾದಾಯಕವೂ ಆಗಿ ಬಹುದು. (ನನ್ನ ಸ್ವಂತ ಪ್ರತಿಯಲ್ಲಿಯ ಖಾಲಿ ಪುಟ ಹಾಗೆಯೆ ಉಳಿದಿದೆ!) ವಿಮರ್ಶ ಶಾಸ್ತ್ರವನ್ನು ಕುರಿತು ಅವರು ಬರೆಯಬೇಕೆಂದಿದ್ದ ಸುವ್ಯವಸ್ಥಿತ ಕೃತಿಯೂ ಬರಲಿ ಆದರೂ ವಿನಾಯಕರು ೧೯೩೪ ರ ಹೊತ್ತಿಗೆ ಕನ್ನಡದಲ್ಲಿ ವಿಮರ್ಶೆಯ ಬಗೆಗೆ ತತ್ವ ಯನ್ನು ತಳೆದಿದ್ದರೆಂಬುದು ಇದರಿಂದ ಸ್ಪಷ್ಟವಾಗುತ್ತಿದೆ. ವಿಮರ್ಶಾಶಾಸ್ತ್ರವನ್ನು ಕು ಅವರ ದೊಡ್ಡ ಗಾತ್ರದ ಕೃತಿಯು ರಚಿತವಾಗದಿದ್ದರೂ ಅವರು ಬಿಡಿಯಾಗಿ ಬ ಲೇಖನಗಳು, ಮಾಡಿದ ಉಪನ್ಯಾಸಗಳು ಬೇಕಾದಷ್ಟಿವೆ. ಅವುಗಳ ಕೆಲವು ಸಂಕಲ ಗಳೂ ಪ್ರಕಟವಾಗಿವೆ. ಅಲ್ಲಿ ಬಂದಿರುವ ವಿಚಾರ ಧಾರೆಯಿಂದ ವಿನಾಯಕ ವಿಮರ್ಶೆ ವಿಶೇಷತೆಯು ಕಂಡುಬರುತ್ತಿದೆ.

'ಇಂದಿನ ಕನ್ನಡ ಕಾವ್ಯದ ಗೊತ್ತು ಗುರಿಗಳು' ಎಂಬ ಕೃತಿ ಪ್ರಕಟವಾದು ೧೯೪೬ ರಲ್ಲಿ. ಆದರೆ ೧೯೨೮ ರ ಸುಮಾರಿಗೆ ವಿನಾಯಕರು ಬರೆದ ವಿಮರ್ಶಾತ ಲೇಖನಗಳು ಆ ಸಂಕಲನದಲ್ಲಿವೆ. ಸಾಹಿತ್ಯ, ವಿಮರ್ಶೆಗಳ ಬಗೆಗೆ ಪ್ರಬುದ್ಧ ಆಲೋಚ ಗಳನ್ನು ಆ ಸಂಕಲನವು ಒಳಗೊಂಡಿದೆ. ಸಾಹಿತ್ಯವೆಂದರೇನು ? ಎಂಬ ಪ್ರಶ್ನೆಯು ಕುರಿತ ಆಲೋಚನೆಗಳು ಹೀಗಿವೆ:

> ಸಾಹಿತ್ಯ ಕೇವಲ ಜೀವನದ ವಿಮರ್ಶೆಯಲ್ಲ; ಜೀವನದ ದೃಶ್ಯವೂ ಅಹು ಪ್ರಪಂಚದ ಪಡಿನೆಳಲು ಮಾತ್ರವಲ್ಲ; ಪ್ರತಿಸೃಷ್ಟಿಯೂ ಅಹುದು. ಅನೇಕ ಶತಮಾ

ಗಳಲ್ಲಿ ಆಗಿಹೋದ ಅಸಂಖ್ಯಾತ ಕವಿಗಳು ತಮ್ಮ ಕಾಣ್ಕೆಯ ಬೆಳಕಿನಲ್ಲಿ ಜೀವನದ ಸಮಸ್ಯೆಯನ್ನು ಬಿಡಿಸಲು ಯತ್ನಿಸಿದರು. ಇವರ ಪ್ರಯತ್ನಗಳ ತಿರುಳನ್ನು ಅರಿತು ಅರಗಿಸಿಕೊಂಡಾಗ ನಮ್ಮಲ್ಲಿ ಸಂಸ್ಕೃತಿ ಬೆಳೆಯುತ್ತದೆ. ಒಳ್ಳೆಯ ಸಾಹಿತ್ಯ ನಿರ್ಮಾಣಕ್ಕೆ ಒಳ್ಳೆಯ ಸಂಸ್ಕೃತಿ ಆವಶ್ಯಕ. ಒಳ್ಳೆಯ ಸಾಹಿತ್ಯವಾಚನದಿಂದ ಒಳ್ಳೆಯ ಸಂಸ್ಕೃತಿ ಲಭ್ಯವಾಗುತ್ತದೆ."

ಹೀಗೆ ಸಾಹಿತ್ಯಕ್ಕೆ ಸಂಸ್ಕೃತಿಯೇ ಒರೆಗಲ್ಲೆಂಬ ನಿರ್ಣಯವೊಂದು ಅಲ್ಲಿ ವ್ಯಕ್ತವಾಗಿದೆ. ಬರೆದವರ ಸಂಸ್ಕೃತಿ ಹೇಗೇ ಇರಲಿ, ಬರೆದದ್ದು ಪರಿಣಾಮಕಾರಿಯಾಗಿದ್ದರೆ ಸಾಕು, ಎಂಬ ಧೋರಣೆಯುಳ್ಳವರು ಈ ನಿರ್ಣಯವನ್ನು ಗಮನಿಸಬೇಕು. ಶ್ರೇಷ್ಠ ಸಾಹಿತ್ಯ ನಿರ್ಮಾಣ ಶ್ರೇಷ್ಠಸಂಸ್ಕೃತಿಯಿಂದ ಸಾಧ್ಯವೆಂಬುದನ್ನು ನಾವು ಮರೆಯುವಂತಿಲ್ಲ. ಪಂಪ, ಬಸವೇಶ್ವರ, ದಾಸರು, ರತ್ನಾಕರವರ್ಣಿ, ಸರ್ವಜ್ಞರಂತಹ ಪ್ರಾಚೀನ ಕನ್ನಡ ಕವಿಗಳ ಹಿರಿಮೆಯನ್ನು ಗುರುತಿಸಿ ವಿನಾಯಕರು ಅದನ್ನು ಆಧಾರಯುಕ್ತವಾಗಿ ಪ್ರತಿಪಾದಿಸಿದ್ದಾರೆ. ನವೋದಯ ಕನ್ನಡಸಾಹಿತ್ಯದ ಕೆಲವು ಸಾಹಿತಿಗಳನ್ನು ಅವರ ಕೃತಿಗಳನ್ನು ಎತ್ತಿಕೊಂಡು ಅಲ್ಲಿಯ ವೈಶಿಷ್ಟ್ಯವನ್ನು ಹೇಳಿದ್ದಾರೆ. ಜನಪದಸಾಹಿತ್ಯದ ಹಿರಿಮೆಯನ್ನು ಕೊಂಡಾಡಿದ್ದಾರೆ. ಆಂಗ್ಲಭಾಷೆಯ ಪ್ರಾಧ್ಯಾಪಕರಾಗಿ ದೇಶವಿದೇಶಗಳಲ್ಲಿ ಖ್ಯಾತಿ ಗಳಿಸಿದ ವಿನಾಯಕರು ಆಧುನಿಕ ಕನ್ನಡ ಸಾಹಿತ್ಯಕ್ಕೆ ಸುಭದ್ರತೆಯನ್ನು ತರುವ ದಿಸೆಯಲ್ಲಿ ಪರಿಶ್ರಮಗೆಯ್ದಿದ್ದಾರೆ.

ಕಾವ್ಯದ ಅದ್ವಿತೀಯ ಕಾರ್ಯವೆಂದರೆ ವ್ಯಕ್ತಿತ್ವ ನಿರೂಪಣೆ ಇಲ್ಲವೆ ಸ್ವಯಂ ರೂಪದರ್ಶನ ಎಂಬುದು ವಿಮರ್ಶಕ ವಿನಾಯಕರ ಸ್ಪಷ್ಟವಾದ ನಿಲುವೆಯಾಗಿದೆ. ಕವಿ ವಿನಾಯಕರ ನಿಲುವೆಯೂ ಅದೇ ಎಂಬುದನ್ನು ಅವರ ಕವನಗಳಿಂದ ಕಂಡುಬರುತ್ತಿದೆ. ತನ್ನ ವ್ಯಕ್ತಿತ್ವವನ್ನು ಬೆಳೆಸಿಕೊಂಡ ಕವಿ ಸೃಷ್ಟಿಸಿದ ಕವಿತೆಯಲ್ಲಿ ಮಾತ್ರ ಅಂತಹ ವ್ಯಕ್ತಿತ್ವದ ನಿರೂಪಣೆಯಿರಬಲ್ಲದು. ಕವಿಯ ಅಸಾಮಾನ್ಯ ಅನುಭೂತಿಯ ಪ್ರಭಾವದಿಂದ ಅವನ ಸಾಮಾನ್ಯವಾದ ಜೀವನದ ಕ್ರಮವು ಮಾರ್ಪಡಬೇಕು. ಹಾಗಿಲ್ಲವಾದರೆ ಕವಿಯ ವ್ಯಕ್ತಿತ್ವವು ಬೆಳೆಯಲಾರದು. ಕವಿತೆಯನ್ನು ರಚಿಸುವಾಗಿನ ಅವಧಿಯ ಭಾವನೆಗಳ ಸಂಚಾರ ಇಲ್ಲವೆ ಅನುಭೂತಿಯಿಂದ ಕವಿಯು ತನ್ನ ಜೀವನಕ್ಷೇತ್ರದ ವಿಶಾಲತೆಯನ್ನು ಹೆಚ್ಚಿಸಲು ಯತ್ನಿಸಬೇಕು. ಅಂದರೆ ಈ ಧ್ಯೇಯಗಳ ವರ್ಚಸ್ಸು ಕವಿಯ ನಿತ್ಯದ ಕೃತಿಗಳಲ್ಲಿಯೂ ಕಂಡು ಬರಬೇಕು—ಇಂತಿದು ವಿಮರ್ಶಕ ವಿನಾಯಕರ ವಿಚಾರಧಾರೆ.

ಕಾವ್ಯಜೀವನದ ಅಸಾಮಾನ್ಯತೆಯನ್ನು ಕವಿಯು ತನ್ನ ಜೀವನಕ್ರಮದಲ್ಲಿ ತಂದುಕೊಳ್ಳುವ ಪ್ರಯತ್ನದ ಫಲವೇ ಕವಿಯ ವ್ಯಕ್ತಿತ್ವ. ಇಂತಹ ವ್ಯಕ್ತಿತ್ವ ಕವಿತ್ವದಲ್ಲಿ ಮೂಡಿಬರಬೇಕು. ಈ ಮಾನದಂಡದಿಂದ ಕವಿತೆಯ ಬೆಲೆ ಕಟ್ಟಬೇಕು. ಈ ದೃಷ್ಟಿ

ಯಿಂದ ವಿನಾಯಕರು ಆಧುನಿಕ ಕನ್ನಡ ಕವನ ಸಂಕಲನಗಳಲ್ಲಿ ಕೆಲವನ್ನು ವಿಮರ್ಶಿ
'ಯೆಂಡ್ಕುಡಕ ರತ್ನ'ಕ್ಕೆ ಮಹತ್ವದ ಸ್ಥಾನವಿದೆಯೆಂದು ಹೇಳಿದ್ದಾರೆ.

ಆಧುನಿಕ ಕನ್ನಡ ಕಾವ್ಯದ ಉದಯ, ಬೆಳವಣಿಗೆಗಳಲ್ಲಿಯ ಮಹತ್ವದ ಘಟ್ಟಗ
ಸೂಚನೆಯೊಂದಿಗೆ ಕೆಲವು ಕೃತಿಗಳ ಗುಣದೋಷಗಳನ್ನು ವಿನಾಯಕರು ಉಲ್ಲೇಖಿ
ದ್ದಾರೆ. ಆಧುನಿಕ ಕವಿತೆಯ ಮುಖ್ಯ ದೋಷಗಳೆಂದು

೧. ವ್ಯಾಕರಣ ಸೀಮೋಲ್ಲಂಘನ
೨. ಛಂದಸ್ಸನ್ನು ಕುರಿತ ಅದಾದರ
೩. ಅಸ್ಪಷ್ಟತೆ
೪. ಬಂಧದ ಶಿಥಿಲತೆ
೫. ಪದಬಾಹುಲ್ಯ
೬. ವ್ಯಕ್ತಿತ್ವ ನಿರೂಪಣೆಯ ಅಭಾವ

ಇವುಗಳನ್ನು ಎತ್ತಿ ತೋರಿಸಿ ಸಂಬಂಧಪಟ್ಟ ಕೃತಿಗಳಿಂದ ಉದಾಹರಣೆಗಳನ್ನು ಆರಿ
ಹೇಳಿದ್ದಾರೆ. ವ್ಯಾಕರಣ, ಛಂದಸ್ಸುಗಳನ್ನು ಅಲಕ್ಷಿಸುವವರಿಗೆ ಶಿಥಿಲಬಂಧದ ಪ
ರಚಿಸುವವರಿಗೆ ಇಲ್ಲಿ ಎಚ್ಚರಿಕೆಯ ಮಾತುಗಳಿವೆ. ತರುಣ ಕವಿಗಳಿಗೆ ಮಾರ್ಗದರ್ಶ
ವಾಗುವ ದಿಸೆಯಲ್ಲಿ

೧. ಅನಧಿಕವಾದ ಆತ್ಮವಿಶ್ವಾಸ
೨. ಕಾವ್ಯದ ಬಹಿರಂಗದೊಡನೆ ಅನನ್ಯ ಸ್ನೇಹ
೩. ಕಾವ್ಯದ ಅಂತರಂಗದ ಪೂರ್ಣ ಪ್ರತೀತಿ
೪. ಸ್ಪಷ್ಟವಾದ, ದಿಟವಾದ ಕಾಣ್ಕೆ

ಎಂಬಿವು ನಾಲ್ಕು ಹಾದಿಯ ದೀಪಗಳೆಂದೂ ಹೇಳಿದ್ದಾರೆ. ಈ ದೀಪಗಳ ಪ್ರಯೋಜ
ಪಡೆದುಕೊಳ್ಳದೆ ಕತ್ತಲೆಯಲ್ಲಿ ಸಾಗುತ್ತಿದ್ದವರನ್ನು ಇಲ್ಲಿ ಸೂಚಿಸಲಾಗಿದೆ. ನವೀ
ಪ್ರಯೋಗದ ಉತ್ಸಾಹದಲ್ಲಿ ಕಾವ್ಯದ ಬಹಿರಂಗವನ್ನು ಕಡೆಗಣಿಸುವ ಪ್ರವೃತ್ತಿ ಬೆಳೆಯ
ತ್ತಿರುವ ಈ ಕಾಲದಲ್ಲಿ 'ಕಾವ್ಯದ ಬಹಿರಂಗದೊಡನೆ ಅನನ್ಯ ಸ್ನೇಹ' ಇರಬೇಕೆಂ
ವಿನಾಯಕರ ಮಾರ್ಗದರ್ಶನ ಗಮನಾರ್ಹವಾಗಿದೆ.

ಆಧುನಿಕ ಕಾವ್ಯ ಮಾತ್ರವಲ್ಲ ಗದ್ಯ ಪದ್ಯ ವೈಶಿಷ್ಟ್ಯ ಅವುಗಳ ಪಾತ್ರ, ಸಾಹಿತ್ಯದ
ಹಾಸ್ಯವಿಡಂಬನೆಗಳ ಸ್ಥಾನ, ನಾಟಕಗಳಲ್ಲಿ ಬಳಸಿದ ಸ್ವಚ್ಛಂದ ಛಂದ (Free vers
ಇತ್ಯಾದಿ ವಿಷಯಗಳ ಬಗೆಗೆ ವಿಚಾರ ಪರಿಪ್ಲುತವಾದ ವಿವೇಚನೆಯೂ ನಮಗೆ ದೊರೆಯ
ತ್ತಿದೆ. ಆಂಗ್ಲಸಾಹಿತ್ಯದ ಅಭ್ಯಾಸದ ಪ್ರಯೋಜನದಿಂದ ಕೂಡಿದ ಈ ಬಗೆಯ ಬ
ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ, ವಿಮರ್ಶೆಗಳಿಗೆ ಉಪಯುಕ್ತವಾದ ಸಾಮಗ್ರಿಯನ
ಒದಗಿಸುವಂತಿದೆ.

"ಗುಣ ಕಥನವು ಸಾಕಷ್ಟಿದ್ದ" ಮತ್ತು "ನಿರ್ಮಲ ಬುದ್ಧಿಯಿಂದ ದೋಷಗಳನ್ನು ತುಸು ಒತ್ತಿ ಹೇಳಿದ" ಕೆಲವೊಂದು ಕವಿಗಳ, ಕೃತಿಗಳ ವಿಮರ್ಶೆಯಲ್ಲಿ ವಿನಾಯಕರು ವಿಮರ್ಶೆಯ ತತ್ವಗಳನ್ನು ಸೂಚಿಸಿದ್ದಾರೆ. ಆದರೆ ನೇರವಾಗಿಯೇ ವಿಮರ್ಶೆಯ ತತ್ವಗಳನ್ನು ಪ್ರತಿಪಾದಿಸಿದ ಬರೆಹ ಇನ್ನುಳಿದ ಸಂಕಲನಗಳಲ್ಲಿ ಬಂದಿದೆ.

೧೯೪೪ರಲ್ಲಿ ಪ್ರಕಟವಾದ 'ಸಾಹಿತ್ಯದಲ್ಲಿ ಪ್ರಗತಿ' ಎಂಬ ಸಂಕಲನದಲ್ಲಿ ೧೯೩೧ರ ಸುಮಾರಿಗೆ ಬರೆದ ಬರೆಹವೂ ಇದೆ. 'ನವ್ಯತೆ ಹಾಗು ಕಾವ್ಯಜೀವನ' ಎಂಬ ಸಂಕಲನ ೧೯೫೫ರಲ್ಲಿ ಪ್ರಕಟವಾಗಿದೆ. ಅಂತು ವಿಮರ್ಶಾತ್ಮಕ ಪ್ರಬಂಧಗಳ ಈ ಮೂರು ಸಂಕಲನಗಳಲ್ಲಿ ಈ ಶತಕದ ೨, ೩, ೪, ೫ನೆಯ ದಶಕಗಳ ಕನ್ನಡ ಸಾಹಿತ್ಯರಂಗವನ್ನು ಕುರಿತ ವಿನಾಯಕರ ವಿವೇಚನೆಯು ನಮಗೆ ದೊರೆಯುತ್ತಿದೆ. ೬ನೆಯ ದಶಕದಲ್ಲಿ 'ಸಮನ್ವಯ' ಪತ್ರಿಕೆಯು ವಿನಾಯಕ ವಿಚಾರಧಾರೆಯನ್ನು ಒದಗಿಸುತ್ತಿದೆ.

ಪ್ರಾಚೀನ ಮಹಾಕಾವ್ಯಗಳನ್ನು ಕುರಿತು ೧೯೩೧ರಲ್ಲಿ ವ್ಯಕ್ತವಾದ ವಿನಾಯಕರ ಒಂದು ದೃಷ್ಟಿಕೋನವು ಹೀಗೆ ಮೂಡಿಬಂದಿದೆ:

> ಆ ನವರಸಾಲಂಕಾರಗಳು, ಆ ಭ್ರಾಂತಿಮದ ವಿಲಾಸ, ಆ ಸೂಳೆಕೇರಿಯ ವರ್ಣನೆ ಪರಮಾತ್ಮನಲ್ಲಿಯ ಭಕ್ತಿ, ಆ ಶಬ್ದಗಳ ಕಾದಾಟ, ಅರ್ಥಗಳ ತುಮುಲ, ಯುದ್ಧ, ವರ್ಣನೆಗಳ ವೀರಸಂಗ್ರಾಮ--ಇವೆಲ್ಲ ಆ ಪರಂಪರೆಯ ವಿಧಿ ನಿಧಿಗಳು.

ಕನ್ನಡ ನವೋದಯ ಸಾಹಿತ್ಯವನ್ನು ಸಮರ್ಥಿಸುವ ಪೀಠಿಕೆಯಾಗಿ ಈ ಮಾತುಗಳು ಬಂದಿವೆ.

ವಿಮರ್ಶೆಯನ್ನು ಕುರಿತ ವಿಚಾರಸರಣಿಯಿಂತಿದೆ :

> ವಿಮರ್ಶೆ ಸಾಹಿತ್ಯದ ಧ್ವಜಸ್ತಂಭ....ಸಾಹಿತ್ಯದ ಅಜರಾಮರ ತತ್ವಗಳನ್ನು ರಕ್ಷಿಸಿ ಬೆಳಗಿಸುವುದು ವಿಮರ್ಶೆಯ ಆದ್ಯ ಕರ್ತವ್ಯ....ವಿಮರ್ಶೆಗೂ ನಿರ್ಮಾಣ ಶಕ್ತಿಯಿದೆ (creative power) ಅದಕ್ಕೆ ಒಂದು ಅನನ್ಯವಾದ ವಾಣಿಯಿದೆ....ಅದು ಜೀವನದಲ್ಲಿಯೂ ಸಾಹಿತ್ಯದಲ್ಲಿಯೂ ಶಾಶ್ವತವಾದುದರ ವಿಜಯವನ್ನು ಸಾರುವ ಕಹಳೆ. ವಿಮರ್ಶಕನಿಗೆ ಆತ್ಮ ಪ್ರತೀತಿ ಬೇಕು....ವಿಮರ್ಶಕನು ಸಾಹಿತ್ಯದ ಭೂಮಿಕೆಯಲ್ಲಿಯ ಗುಣದೋಷಗಳ ದ್ವಾರವಾಗಿ ತನ್ನ ಅನುಭವವನ್ನು ಪ್ರಕಟಗೊಳಿಸುವನು ....ಕೆಲವು ಮನೋಭಿಪ್ರಾಯಗಳು (Personal impressions) ವಿಮರ್ಶಕನ ತೀರ್ಪಿಗೆ ಆಧಾರವಾಗಬಾರದು. ಏಕೆಂದರೆ ವ್ಯಕ್ತಿಯ ಒಲವು ಕಾರಣಾಂತರಗಳಿಂದ ಕಲುಷಿತವಾಗಬಹುದು.

ಈ ಪೀಠಿಕೆಯ ನಂತರ ಆಂಗ್ಲ ಕೃತಿಗಳನ್ನು ಅನುಸರಿಸಿ ವಿಮರ್ಶೆಯ ಬಗೆ ಬಗೆಯ (Judicial, Inductive, Deductive, Historical, Philosophical etc).

ಪದ್ಧತಿಗಳನ್ನು ವಿವರಿಸಿ ವಿಮರ್ಶಕನ ಪಾತ್ರವೇನೆಂಬುದನ್ನು ಸ್ಪಷ್ಟಗೊಳಿಸಲಾಗಿದೆ ಅಂತು ವಿಮರ್ಶಕನು 'ಸತ್ಯವಾದಿ' ಎಂಬುದನ್ನು ಸಾರಲಾಗಿದೆ.

ಕವಿಕಾವ್ಯ ವಿಮರ್ಶೆಗೆ ಸಂಬಂಧಿಸಿದ 'ದ್ವಾದಶಸೂತ್ರ'ಗಳ ಉಲ್ಲೇಖವಿಲ್ಲಿದೆ. ಅಲ್ಲ ಕಾವ್ಯದ ಜೀವಾಳವೆಂದು ಅಷ್ಟಾಂಗಗಳನ್ನು ನಿರ್ದೇಶಿಸಲಾಗಿದೆ. ಆ ಅಷ್ಟಾಂಗಗ ಹೀಗಿವೆ:

೧. ಭಾಷಾಸಂಪತ್ತಿ, ಶೈಲಿ ೨. ತಾಳಲಯ, ಛಂದಸ್ಸು, ೩. ಕಾವ್ಯವಸ್ತು, ೪. ರ ಇಲ್ಲವೆ ಕೃತಿಶರೀರ, ೫. ಅರ್ಥಗೌರವ, ಇಲ್ಲವೆ ವಿಚಾರ ಸಂಪತ್ತಿ, ೬. ಭಾವನ ಸಂಪತ್ತಿ, ೭. ಕಲ್ಪನಾ ಸಂಪತ್ತಿ, ೮. ಕವಿಯ ವ್ಯಕ್ತಿತ್ವ ಇಲ್ಲವೆ ದೃಷ್ಟಿಕೋನ

ಈ ಅಷ್ಟಾಂಗಗಳಿಂದ ಕಾವ್ಯಕ್ಕೆ ಮಹೋನ್ನತಿ ಉಂಟಾಗುತ್ತಿದೆ. ತಮ್ಮ ಕೃ ಮಹೋನ್ನತಿಯನ್ನು ಪಡೆಯಬೇಕೆಂಬ ಕವಿಗಳು ಮೇಲ್ಕಂಡ ಅಂಶಗಳನ್ನು ಗಮನಿ ಬೇಕಾಗುತ್ತದೆ. ಪ್ರತಿಭೆ, ವ್ಯಾಸಂಗ, ಸಂಯಮನಗಳಿಲ್ಲದೆ ಪದ್ಯರಚನೆಗೆ ತೊಡಗುವು ಲಘು ದೃಷ್ಟಿಯಾಗುತ್ತದೆ. ಕಾವ್ಯದ ಬಗೆಗೆ ಗೌರವಪೂರ್ಣ ದೃಷ್ಟಿಯಿರಬೇಕು. ಮೇಲ್ಕಂ ಅಷ್ಟಾಂಗಗಳ ನಿರ್ದೇಶನ ಈ ದಿಸೆಯಲ್ಲಿದೆ.

ಹೇಳಬೇಕಾಗಿರುವ ಅಂಶಗಳನ್ನು ನೇರವಾಗಿ, ಸ್ಫುಟವಾಗಿ ಕ್ರಮಾಂಕ ಸೂಚಿ ನಿರೂಪಿಸುವುದು ವಿನಾಯಕರ ಬರೆಹದ (ಭಾಷಣದ) ವೈಶಿಷ್ಟ್ಯವಾಗಿದೆ. ಈ ಮೂಲ ಅವರ ವಿಪುಲ ವ್ಯಾಸಂಗ, ಆಲೋಚನಪರತೆ, ಸುಸ್ಪಷ್ಟ ನಿರೂಪಣೆಗಳು ವ್ಯಕ್ತವಾ ತ್ತಿವೆ.

೨

ಕನ್ನಡ ನವೋದಯ ಸಾಹಿತ್ಯದೇವಿಯ ತೇರನ್ನು ಎಳೆದವರಲ್ಲಿ ವಿನಾಯಕರಿ ಮಹತ್ವದ ಸ್ಥಾನವಿದೆ. ೧೯೫೦ರ ನಂತರ ಅವರು ನವ್ಯಕಾವ್ಯ ಪಂಥೀಯ ಪುರಸ್ಕರ್ತ ಆಗಿದ್ದಾರೆ. ನವೋದಯ ಸಾಹಿತ್ಯವನ್ನು, ಸಾಹಿತಿಗಳನ್ನು ಅಲ್ಲಗಳೆಯುವ ಉತ್ಸಾಹದ ತೃಪ್ತಿಪಡೆಯುವ ನವ್ಯ ಪಂಥೀಯರೂ ಇದ್ದಾರೆ. ಆದರೆ ವಿನಾಯಕರು ನವ್ಯ ಮಾರ್ಗ ವನ್ನು ಪುರಸ್ಕರಿಸುವಂತೆ ನವೋದಯ ಸಾಹಿತ್ಯವನ್ನು ಯುಕ್ತಿಯುಕ್ತವಾಗಿ ಸಮರ್ಥಿ ದ್ದಾರೆ. ಭಿನ್ನ ದೃಷ್ಟಿಕೋನಗಳನ್ನು ಸಮರ್ಥಿಸಿ ಸಮನ್ವಯಿಸುವುದು ವಿನಾಯ ವ್ಯಕ್ತಿತ್ವದ ವೈಶಿಷ್ಟ್ಯವೂ ಅಹುದು.

ಹಿಂದೊಮ್ಮೆ ನಮ್ಮ ಸಾಹಿತ್ಯರಂಗದಲ್ಲಿ 'ಪ್ರಗತಿಶೀಲ'ರ ವಾದವೊಂದು ತಲೆದೋರಿತ್ತು ಆಗ 'ಪ್ರಗತಿಶೀಲ'ರು "ಜೀವನದ ಸಹಜತೆಯಿಂದ ದೂರವಾಗಿ ಇಂದಿನ ಸಾಹಿತ್ಯ ಅಧ್ಯಾತ್ಮವಾದದಲ್ಲಿ ಆದರ್ಶವಾದದಲ್ಲಿ ಆಶ್ರಯ ಪಡೆಯಲು ಯತ್ನಿಸುತ್ತಿದೆ." ಎಂಬುದಾ ನವೋದಯ ಸಾಹಿತ್ಯವನ್ನು ಕುರಿತು ಆಕ್ಷೇಪಿಸಿದರು. ಬಹುಶಃ ಈಗಿನ ನವ್ಯ ಪಂ

ಮರೂ ಅನನ್ನೇ ಮಾಡುವಂತಿದೆ. ಈ ಬಗೆಯ ಆಕ್ಷೇಪಣೆಯನ್ನು ವಿನಾಯಕರು ಸಮರ್ಥ ರೀತಿಯಲ್ಲಿ ಅಲ್ಲಗಳೆದರು. ಅವರ ಆ ಸಮರ್ಥನೆಯ ಕೆಲವು ಅಂಶಗಳನ್ನು ನವ್ಯ ಪಂಥೀಯರ ವಿಚಾರಸರಣಿಯ ಬಗೆಗೂ ಬಳಸಿಕೊಳ್ಳಬಹುದಾಗಿದೆ.

ಜೀವನದಲ್ಲಿಯಾಗಲಿ, ಸಾಹಿತ್ಯದಲ್ಲಿಯಾಗಲಿ ಪ್ರಗತಿಯೆಂದರೇನು ? ಎಂಬ ಮೂಲ ಭೂತ ಪ್ರಶ್ನೆಯನ್ನು ಎತ್ತಿಕೊಂಡು ವಿನಾಯಕರು ಅದನ್ನು ದೀರ್ಘವಾಗಿ ಚರ್ಚಿಸಿದ್ದಾರೆ. ಅದರ ತಿರುಳಿದು :

ಜೀವನವೆಂದರೆ ಪರಮಾಣುಗಳ ಶಾಶ್ವತ ಚಲನವಲನ. ಈ ಚಲನದಲ್ಲಿ ಹಿಂದೆ ಹೋದ ಅಣುವು ಮುಂದೆ ಬರುತ್ತದೆ. ಮುಂದೆ ಬಂದದ್ದು ಹಿಂದೆ ಹೋಗುತ್ತದೆ. ಅಂದಮೇಲೆ ಪ್ರಗತಿಯೆಲ್ಲಿ ?

ಪ್ರಾಚೀನ ಸಾಹಿತ್ಯವು ವ್ಯಕ್ತಿಗಳನ್ನು ಸರ್ವಾಂಗ ಸುಂದರವಾಗಿ ಚಿತ್ರಿಸುತ್ತಿತ್ತು. ಈಗಿನ ಸಾಹಿತ್ಯ ವ್ಯಕ್ತಿಗಳ ಮನೋವಿಭಜನೆ ಇಲ್ಲವೆ ಭಾವನಾಲಹರಿಗಳ ಕಡೆಗೆ ಹೆಚ್ಚು ಗಮನ ಕೊಡುತ್ತದೆ. ಇವನ್ನಾದರೂ ಪ್ರಗತಿಯೆಂದು ಕರೆಯುವುದು ಹೇಗೆ ?

ವಾಹಕವೊಂದು ಬದಲಾದಾಗ ಪ್ರಗತಿಯಾಯಿತೆಂದು ಹೇಳಬಹುದೇ ? ಸಾಹಿತ್ಯದ ಏಕಮೇವ ವಸ್ತುವಾದ ಜೀವನವನ್ನು ನೋಡುವ ದೃಷ್ಟಿಯು ಪ್ರಾಚೀನ, ಅರ್ವಾಚೀನ ಸಾಹಿತ್ಯದಲ್ಲಿ ಬೇರೆ ಬೇರೆಯಾಗಿದೆಯೆಂದು ಮಾತ್ರ ಇದರ ಮೇಲಿಂದ ಹೇಳಬಹುದು. ಈ ದೃಷ್ಟಿಯಿಂದ ವಿಚಾರ ಮಾಡಿದಾಗ ಜೀವನದಲ್ಲಿ, ಸಾಹಿತ್ಯದಲ್ಲಿ ಪ್ರಗತಿ ಇರಲಿ ಅಥವಾ ಇಲ್ಲದೆಯಿರಲಿ ಗತಿ(movement) ಮಾತ್ರ ಇದೆಯೆಂದು ಸಿದ್ಧ ವಾಗುತ್ತಿದೆ....ಜೀವನದ ಸುತ್ತುಮುತ್ತು (environment) ಮಾರ್ಪಟ್ಟಂತೆ ಹಳೆಯ ಸುತ್ತುಮುತ್ತನ್ನು ಬಿಟ್ಟು ಹೊಸದನ್ನು ಸ್ವೀಕರಿಸಿ ಸಾಹಿತ್ಯವು ತನ್ನ ಗುರಿಯನ್ನು ಸಾಧಿಸುತ್ತದೆ. ಸಾಹಿತ್ಯದಲ್ಲಿ 'ಪ್ರಗತಿ'ಯ ಮಾತು ಏನೇ ಇದ್ದರೂ ಮಾರ್ಪಾಟು ಇದ್ದೇ ಇದೆಯೆಂಬುದು ಮಾತ್ರ ನಿಜ.

ಸಾಮಾನ್ಯವಾಗಿ ಹೇಳುವುದಾದರೆ ಇಡಿಯಾದ ನೋಟ, ಬಹಿರ್ಮುಖತೆಗಳು ಹಿಂದಿನ ಸಾಹಿತ್ಯದ ದೃಷ್ಟಿಯಾದರೆ, ಬಿಡಿಬಿಡಿಯಾದ ನೋಟ ಅಂತರ್ಮುಖತೆಗಳು ಕಾಲಾನುಕ್ರಮದಲ್ಲಿ ಮೂಡಿಬಂದ ದೃಷ್ಟಿಯೆನ್ನಬಹುದು. ನವೋದಯ ಸಾಹಿತ್ಯದಲ್ಲಿ ಏಕಮುಖತೆ, ಅಂತರ್ಮುಖತೆಗಳು ಕೆಲಮಟ್ಟಿಗೆ ಇವೆ. ಕಾಲಾನುಕ್ರಮದಲ್ಲಿ ಅವು ಬೆಳೆಯುವುದೂ ಸಹಜ.

ಈ ಬಗೆಯ ಚರ್ಚೆಯನ್ನು ಮುಂದುವರಿಸಿದ ವಿಮರ್ಶಕ ವಿನಾಯಕರು ಕನ್ನಡ ನವೋದಯ ಸಾಹಿತ್ಯವನ್ನು ಕುರಿತ 'ಪ್ರಗತಿಶೀಲ'ರ ಆಕ್ಷೇಪಣೆಗಳಿಗೆ ಸಮರ್ಥ ನ್ಯಾಯ ವಾದಿಯಂತೆ ಸಮಾಧಾನ ಹೇಳಿದ್ದಾರೆ. 'ಪ್ರಗತಿಶೀಲ' ಎಂಬ ಪದಕ್ಕೆ ಪ್ರತಿಯಾಗಿ 'ನವ್ಯ' ಎಂಬ ಪದವನ್ನು ಬಳಸಿಕೊಂಡರೆ ಈ ಮೊದಲು ಹೇಳಿದಂತೆ ನವ್ಯಪಂಥೀಯರ

ಆಕ್ಷೇಪಣೆಗಳಿಗೂ ಇಲ್ಲಿಯ ಸಮಾಧಾನ ಅನ್ವಯವಾಗುವಂತಿದೆ. ಅವನ್ನು ಸಂಗ್ರಹಿಸಬಹುದು :

ನಮಗೆ ಹೊಳೆದದ್ದೇ ಸತ್ಯವೆಂದು ನಂಬುವ ಅಸತ್ಯದ ಹಾದಿ ಬೇಡ. ಅಧ್ಯಾತ್ಮ ಆದರ್ಶವಾದ ಇವುಗಳಿಗೆ ಸಂಬಂಧಿಸಿದ ಸಾಹಿತ್ಯದ ಬಗೆಗೆ ಇದು ಜೀವನದ ಸ ಯಿಂದ ದೂರ ಸರಿಯುವ ಮನೋಭಾವವನ್ನು ವ್ಯಕ್ತಪಡಿಸುತ್ತದೆ ಎಂದು ನಿರ್ಣ ಬೇಕಾಗಿಲ್ಲ. ಯಾರಿಗೆ ಗೊತ್ತು? ಈ ಮೂಲಕ ಜೀವನದ ಸಹಜತೆಯೇ ಹೆಚ್ಚಬಹ ನಾವು ಸಹಜವೆಂದು ಭಾವಿಸಿದುದು ಭ್ರಮಾತ್ಮಕವಾಗಿರಬಹುದು. ಬಹಿಮು ಅಂತರ್ಮುಖತೆಗಳೆರಡೂ ಕೂಡಿಯೆ ಸಾಹಿತ್ಯ ಸಾಗಬೇಕು. ಒಂದನ್ನು ಎತ್ತಿ ಹಿ ವಲ್ಲಿ ಇನ್ನೊಂದನ್ನು ನೆಲಕ್ಕೆ ಬಿಡುವದು ವಿಹಿತವೂ ಅಲ್ಲ, ಸಾಧ್ಯವೂ ಅಲ್ಲ. ಸಾ ದಲ್ಲಿ ಒಂದೇ ರುಚಿಯನ್ನು ಒಂದೇ ಸಿದ್ಧಾಂತವನ್ನು ನಾವು ಪ್ರಸ್ಥಾಪಿಸಲಾರೆವು ಸಮನ್ವಯ ಸಾಧಕ ವಿನಾಯಕರ ಸಮರ್ಪಕ ನಿಲುವೆಯಿದು. ಅಸಹಿಷ್ಣುತೆ

ಸ್ಥಾಯೀಭಾವವಾಗಿ ಬಾಳನ್ನು, ಸಾಹಿತ್ಯವನ್ನು ಹದಗೆಡಿಸುವ ಸಂದರ್ಭಗಳಲ್ಲಿ ಬಗೆಯ ನಿಲುವೆ ಆವಶ್ಯಕವಾಗಿ ಬೇಕು.

‘ಸಾಹಿತ್ಯದಲ್ಲಿ ಪ್ರಗತಿ’ ಎಂಬ ಪ್ರಬಂಧವು ನವೋದಯ ಸಾಹಿತ್ಯದ ಸಮ ಯಾಗಿದ್ದರೆ ‘ಸಾಹಿತ್ಯ ಹಾಗೂ ನವ್ಯತೆ’ ಎಂಬುದು ನವೋದಯ ಸಾಹಿತ್ಯವು ನ ಯತ್ತ ಸಾಗಬೇಕಾಗಿರುವುದರ ಆವಶ್ಯಕತೆಯನ್ನು ಪ್ರತಿಪಾದಿಸುತ್ತಿದೆ. ಆದರೆ ನವೋದಯ ಸಾಹಿತ್ಯವನ್ನು ಅಲ್ಲಗಳೆಯುವ ದೃಷ್ಟಿಯಿಂದಲ್ಲ, ನೂತನಯುಗಕ್ಕೆ ರೂಪವಾಗುವ ದೃಷ್ಟಿಯಿಂದ.

‘ಬುದ್ಧಿನಿಷ್ಠತೆಯಲ್ಲಿ ಸತ್ಯ; ಭಾವನೋಪಾಸನೆಯಲ್ಲಿ ಸೌಂದರ್ಯ; ವ್ಯಕ್ತಿ ಜೀವನದ ಸಾತ್ವಿಕತೆಯಲ್ಲಿ ಕಲ್ಯಾಣ; ಸಮಷ್ಟಿಜೀವನದ ವಿಕಾಸದಲ್ಲಿ ಪ್ರೇಮ; ಜೀವನದ ಪುರುಷಾರ್ಥಗಳ ನಿಯಂತ್ರಣದಲ್ಲಿ ಮಂಗಳ’—ಈ ಐದು ಆದರ್ಶಗ ಸಾಧಿಸಿದಾಗ ವ್ಯಕ್ತಿಜೀವನ ಪಾವನವಾಗುವುದರಿಂದ ಈ ಐದು ಅಮೃತ ತತ್ವ ಸಮೀಕರಣವು ನವ್ಯ ಸಾಹಿತ್ಯದ ಸೂತ್ರವಾಗಬೇಕೆಂದು ವಿನಾಯಕರು ಹಾರೈಸಿದ ‘ನವ್ಯ ಸಾಹಿತ್ಯ’ದಲ್ಲಿ ಈ ಹಾರೈಕೆ ಸಫಲತೆ ಪಡೆದಿದೆಯೇ ಎಂಬುದು ಬೇರೊ ವಿಷಯ. ನವ್ಯ ಮಾನವ, ನವ್ಯ ಸಮಾಜ ರೂಪುಗೊಳ್ಳಬೇಕಾದ ಸನ್ನಿವೇಶವಿದೆಯೆ ಆ ನವ್ಯ ಸಮಾಜದ ಶ್ರುತಿಯಾಗಿ, ಭಾಷ್ಯವಾಗಿ ನವ್ಯ ಸಾಹಿತ್ಯ ಮೂಡಿಬರಬೇಕೆ ವಿನಾಯಕರು ಹೇಳಿದರು.

ಆಂಗ್ಲಸಾಹಿತ್ಯದಲ್ಲಿ ನವ್ಯ ಕಾವ್ಯವು ರೂಪುಗೊಂಡ ಬಗೆಯನ್ನು ಸೂಚಿ ಅಲ್ಲಿಯ ಉದ್ಬೋಧಕ ಅಂಶಗಳನ್ನು ಉದಾಹರಿಸಲಾಗಿದೆ. ನವ್ಯಮಾರ್ಗದ ಕಾವ ಗಳ ವಿಶಿಷ್ಟತೆಯ ಪರಿಚಯವಿಲ್ಲಿದೆ. ಇದಲ್ಲದೆ “ನವ್ಯತೆಯು ವಿಶಾಲ ದರ್ಶನದ

ವಿಕೃತಿಗಳ ಪ್ರದರ್ಶನದಲ್ಲಿ ಅಲ್ಲ" ಎಂಬ ಅಗತ್ಯವೆನಿಸುವ ಎಚ್ಚರಿಕೆಯೂ ಇಲ್ಲಿದೆ. ವಿಕೃತಿಗಳ ಪ್ರದರ್ಶನ ಕಂಡಾಗ ಈ ಮಾತು ನಮಗೆ ನೆನಪಾಗುತ್ತಿದೆ.

ಸಾಹಿತ್ಯದ ಗತಿಯಲ್ಲಿ ಮಾರ್ಪಾಟು ಅನಿವಾರ್ಯ. ಅಂತೆಯೇ ನವ್ಯವೂ ಬರುತ್ತಿದೆ ಯೆಂಬುದನ್ನು ವಿನಾಯಕರು ಹೀಗೆ ಸೂಚಿಸಿದರು :

ಗತಾನುಗತಿಕರ ತುಳಿತ ಹೆಚ್ಚಾಗಿ 'ಮಾರ್ಗ'ವು ತನ್ನ ಸ್ವಾರಸ್ಯವನ್ನು ಕಳೆದುಕೊಂಡಾಗ ಕಾವ್ಯದ ದರ್ಶನಕ್ಕೆ ಕಾಂತಿಯುತ ಅಭಿವ್ಯಕ್ತಿಯನ್ನು ಕೊಡಲು 'ದೇಸಿ' ತಲೆಯೆತ್ತುತ್ತಿದೆ. 'ದೇಸಿ'ಯು ಕ್ರಮೇಣ ಪ್ರಾಶಸ್ತ್ಯ ಪಡೆದು 'ಮಾರ್ಗ'ವಾಗುತ್ತಿದೆ. 'ಮಾರ್ಗ'ವು ಸಾಂಪ್ರದಾಯವಾಗಿ ಆತಂಕವಾದಾಗ ಇನ್ನೊಂದು 'ದೇಸಿ'ಯು ಮುಂದೆ ಬರುತ್ತಿದೆ.

ಹೀಗೆ ಹೇಳಿದ ವಿನಾಯಕರ ದೃಷ್ಟಿಯಲ್ಲಿ ನವ್ಯವೂ ಒಂದು ಬಗೆಯ 'ದೇಸಿ', ಪಂಪ ಮಾರ್ಗದ ವೃತ್ತಛಂದಕ್ಕೆ ಪ್ರತಿಯಾಗಿ ಬಂದ ತ್ರಿಪದಿಯಂತೆ. ಆದರೆ ಪಂಪನ ಕಾವ್ಯ ಸೃಷ್ಟಿಯನ್ನೇ ಅಲ್ಲಗಳೆಯುವುದು ಧಾರ್ಷ್ಟ್ಯವಾಗುವುದು. ವಿನಾಯಕರು ತಮ್ಮ ವಿವೇಚನೆಯಲ್ಲಿ ಡಿ. ವಿ. ಜಿ. ಯವರ 'ಮಂಕುತಿಮ್ಮನ ಕಗ್ಗ' ಬೇಂದ್ರೆಯವರ 'ಕರಿಮರಿನಾಯಿ' ಕುವೆಂಪು ಅವರ 'ಕೋಗಿಲೆ ಮತ್ತು ಸೋವಿಯಟ್ ರಸಿಯಾ' ಇವುಗಳಲ್ಲಿ ನವ್ಯತೆಯಿದೆ ಯೆಂದು ಹೇಳಿದ್ದಾರೆ. ಕಾವ್ಯದ ಆತ್ಮ ಯಾವಾಗಲೂ ಒಂದೇ. ಅದು ಕವಿಯ ದರ್ಶನ. ಕಾಲಮಾನ ಪರಿಸ್ಥಿತಿಗಳಿಂದ ಕಾವ್ಯದ ವಿಧಾನದಲ್ಲಿ, ರೀತಿಯಲ್ಲಿ ತಲೆದೋರುವ ಮಾರ್ಪಾಟು ಮಾತ್ರ 'ನವ್ಯ'ವಾಗಬಹುದೆಂಬುದು ವಿನಾಯಕರ ಅಭಿಪ್ರಾಯ. ಆದುದರಿಂದ ಆತ್ಮವೇ ಇಲ್ಲದ್ದು ಕಾವ್ಯವಾಗಲಾರದು ; ಆತ್ಮವಿದ್ದಾಗ ತಂತ್ರ ನವ್ಯವಲ್ಲವೆಂಬ ಕಾರಣಕ್ಕಾಗಿ ಅಂತಹ ಕಾವ್ಯವನ್ನು ಅಲ್ಲಗಳೆಯುವುದು ಅಪ್ರಬುದ್ಧ ವಿಚಾರವೆಂದು ನಾವು ತಿಳಿಯಲು ಅಡ್ಡಿಯಿಲ್ಲ. ಶ್ರೀ ಅರವಿಂದರ ಅಭಿಪ್ರಾಯವನ್ನು ಆಧರಿಸಿದ ವಿನಾಯಕರ ಉಕ್ತಿಯೊಂದು ಇಂತಿದೆ :

ಆಂತರಿಕ ಸ್ಫೂರ್ತಿಯ ಆಳದಿಂದ ಬರೆಯದೆ ಬರಿಯ (ಸುಸಂಸ್ಕೃತ) ಮನಸ್ಸಿನ ಹವಣಿಕೆಗಳಿಗೆ ಅಭಿವ್ಯಕ್ತಿ ಕೊಟ್ಟಾಗ ಅದು ಕಾವ್ಯವಾಗಲಾರದು.

ಶ್ರೀ ಅರವಿಂದರ ದರ್ಶನ, ಸಾಹಿತ್ಯಗಳಿಂದ ಹೆಚ್ಚಾಗಿ ಪ್ರಭಾವಿತರಾದ ವಿನಾಯಕರು 'ಶ್ರೀ ಅರವಿಂದರ ಕಾವ್ಯಸೃಷ್ಟಿ'ಯನ್ನು ಕುರಿತು ಸುದೀರ್ಘ ಪ್ರಬಂಧ ಬರೆದಿದ್ದಾರೆ. ಈ ಲೇಖನದ ದಾಟಿಯೇ ಬೇರೆ. ವಿಷಯದ ಗಹನತೆಯೊಂದಿಗೆ ಅನುವಾದದ ಕ್ಲಿಷ್ಟ ಶೈಲಿಯೂ ಸೇರಿಕೊಂಡಿದೆ. ಅದೇನಿದ್ದರೂ ಕಾವ್ಯ ಕಲೆಗಳ ಬಗೆಗೆ ಶ್ರೀ ಅರವಿಂದರ ಮೌಲಿಕ ವಿಚಾರಧಾರೆಯನ್ನು ನಾವಿಲ್ಲಿ ಕಾಣುತ್ತೇವೆ. ಅವರ ಮುಖ್ಯ ಆಶಯವಿದು :

"ಕಾವ್ಯವೆಂದರೆ ಸಚ್ಚಿದಾನಂದದ ಮಂತ್ರ, ಆಧ್ಯಾತ್ಮಿಕ ಮಹಾತತ್ವದ ಅವತಾರ ; ಲಯ, ರೀತಿ, ವಿಚಾರಗಳ ಸಾಂದ್ರತೆಯುಳ್ಳ ಶಕ್ತ ಶಬ್ದದಲ್ಲಿ ಸಮನ್ವಿತವಾಗಿ

ಆವಿರ್ಭವಿಸುವ ಆಧ್ಯಾತ್ಮಿಕ ದರ್ಶನ....ಕಾವ್ಯದಲ್ಲಿ ಸ್ಥಾಯೀಭಾವವು (
ಭಾವವು) ಭಾವ ಸಾಂದ್ರತೆಯ ಆಕರ. ಲಯ ಮತ್ತು ಶಬ್ದಾರ್ಥಗಳು ಸ್ಥಾ
(ಆತ್ಮ) ದರ್ಶನದ ತೂಕವನ್ನು ಬಿಂಬಿಸುವವು. ಕಲೆಗಾರನ ಪ್ರತಿಭೆಯು ಉ
ರೋತ್ತರ ವೃದ್ಧಿ ಪ್ರಮಾಣದ ಸತ್ಯತೆಯ ಸವಿತ್ರಿಯಲ್ಲವೆ, ವಾಸ್ತವಿಕತೆಯ ಇ
ಕಾಲ್ಪನಿಕತೆಯ ಜನನಿಯಲ್ಲ; ಅದು ಪದಾರ್ಥಗಳ ಆಧ್ಯಾತ್ಮಿಕ ಸತ್ಯವ
ನೋಡುತ್ತದೆ."

'ಸಚ್ಚಿದಾನಂದ' 'ಆಧ್ಯಾತ್ಮಿಕ ಸತ್ಯ' ಎಂಬ ಪದಗಳನ್ನು ಕೇಳಿ ದೂರ ಸರಿಯ
'ವಾಸ್ತವವಾದಿ ಸಾಹಿತಿ'ಗಳು ಇದ್ದಾರೆ. ನವ್ಯ ಸಾಹಿತ್ಯದ ಪುರಸ್ಕರ್ತ ವಿನಾಯ
ಮಾತ್ರ ಶ್ರೀ ಅರವಿಂದರ ಕಾವ್ಯದೃಷ್ಟಿಯ ಬಗೆಗೆ ಪೂಜ್ಯಭಾವನೆ ತಳೆದಿದ್ದಾರೆ. ಕಾ
ಕತೆ, ವಾಸ್ತವಿಕತೆಗಳ ಸೀಮೆಯ ಆಚೆಗಿರುವ ಆತ್ಮಂತಿಕ ಸತ್ಯದ, ಆನಂದದ ಉಪಾ
ರಾಗಿ ಅದರ ಆವಿರ್ಭಾವಕ್ಕೆ ಕಾರಣವಾಗುವುದು ಕವಿಗಳ ಕಲಾವಿದರ ಮಹೋನ
ಪಾತ್ರವೆಂದು ಅವರು ತಿಳಿದಿದ್ದಾರೆ.

ಕ್ಷಣಿಕ ಅನಿಸಿಕೆಗಳಿಂದ ಪದ್ಯ ರಚಿಸುವ ಉತ್ಸಾಹ, ಸಂಕುಚಿತ ಮನದ ಆವಿರ್ಭಾ
ಅಜ್ಞಾನದ ಆಕ್ರೋಶ, ಉದ್ವೇಗಗಳ ಉಚ್ಚಾರ, ಬಾಳಿನಲ್ಲಿ ಕಂಡುಬರುವ ಸೊಬ
ಸೊಗಸು ಸಮಸ್ಯೆಗಳ ಚಿತ್ರಣ, ಬಾಳಿನ ರಹಸ್ಯವನ್ನು ಅರ್ಥವನ್ನು ಅರಿತುಕೊಳ್ಳ
ಹಂಬಲ, ಗಂಭೀರ ಚಿಂತನ ಆಲೋಚನೆಗಳ ಅಭಿವ್ಯಕ್ತಿ, ಆತ್ಯಂತಿಕ ಸತ್ಯವನ್ನು ಅ
ಅನುಭವಿಸಿ ಅಭಿವ್ಯಕ್ತಗೊಳಿಸುವ ಮಹೋನ್ನತ ದೃಷ್ಟಿ—ಹೀಗೆ ಸಾಹಿತ್ಯರಂಗ
ಹಲವಾರು ತರಗತಿಗಳು ಕಂಡುಬರುತ್ತಿವೆ. ಸಮರ್ಥ ವಿಮರ್ಶಕನು ಅವುಗಳನ್ನು ಗುರು
ಅವವುಗಳ ಸ್ಥಾನವನ್ನು ನಿರ್ಧರಿಸಬಲ್ಲ. ಅವುಗಳಲ್ಲಿ ಸಮಂಜಸವಲ್ಲದವುಗಳನ್ನು ನಿಗ್ರ
ಸುವ, ಸಮಂಜಸವಾದವುಗಳನ್ನು ಎತ್ತಿ ತೋರಿಸಿ ಅವುಗಳ ಸಮನ್ವಯ ಮಾಡ
ಪಾತ್ರವನ್ನು ವಿಮರ್ಶಕ ವಹಿಸಬೇಕು. ವಿನಾಯಕವಿಮರ್ಶೆ ಈ ದಿಸೆಯಲ್ಲಿ ಸಾಗಿ
ಆಂಗ್ಲಕವಿಶ್ರೇಷ್ಠರ ವಿಮರ್ಶಕರ ಕೃತಿಗಳ ಅಭ್ಯಾಸ, ಕಾವ್ಯವನ್ನು ಕುರಿತ ಶ್ರೀ ಅ
ವಿಂದರ ಗುರುತಮ ದೃಷ್ಟಿಯ ಪ್ರಭಾವಗಳಿಂದ ರೂಪುಗೊಂಡ ದೃಷ್ಟಿ ವಿನಾಯ
ದಾಗಿದೆ.

ವಿನಾಯಕರ ಕವಿಕಾವ್ಯಮೀಮಾಂಸೆಯು 'ಕಾವ್ಯ ಮತ್ತು ಸೌಂದರ್ಯ,' 'ಕಾ
ಜೀವನದ ಮಹೋನ್ನತಿ' ಎಂಬ ಪ್ರಬಂಧಗಳಲ್ಲಿ ಲಕ್ಷಣ ರೂಪದಲ್ಲಿ, ರತ್ನಾಕರ ವಣಿ
ಶೆಲ್ಲಿ, ಬೇಂದ್ರೆ ಅವರನ್ನು ಕುರಿತ ಲೇಖನಗಳಲ್ಲಿ ನಿದರ್ಶನ ರೂಪವಾಗಿ ಹೊರಹೊ
ಬಂದಿದೆ. ಈ ಲೇಖನಗಳಿಂದಾಗಿ ವಿನಾಯಕರ ದೃಷ್ಟಿಯೇನೆಂಬುದು ತಿಳಿದು ಬರುತ್ತಿ
ಅಂತೆಯೆ ಲಕ್ಷಣ ರೂಪವಾದ ಪ್ರಬಂಧಗಳಲ್ಲಿಯ ಮುಖ್ಯಾಂಶಗಳನ್ನು ನಾವಿಲ್ಲಿ ಅವಲೋ
ಕಿಸಬಹುದು.

ಆನಂದ ಕಾವ್ಯದ ಗುರಿ. ಸೌಂದರ್ಯದರ್ಶನದ ಮೂಲಕ ಕವಿಯು ತಾನು ಆನಂದವನ್ನು ಅನುಭವಿಸಿ ಅದನ್ನು ನಮಗೆ ಒದಗಿಸುತ್ತಾನೆ. ಅಂತೆಯೆ ಕಾವ್ಯಮೀಮಾಂಸೆಯಲ್ಲಿ ಸೌಂದರ್ಯ ಶಾಸ್ತ್ರಕ್ಕೆ ಮಹತ್ವದ ಸ್ಥಾನವಿದೆ. ಸೌಂದರ್ಯ ಶಾಸ್ತ್ರವನ್ನು ಕುರಿತು ಬಂದಿರುವ ವಿಪುಲ ಸಾಹಿತ್ಯದಿಂದ ವಿನಾಯಕರು ಮಹತ್ವದ ಅವತರಣಿಕೆಗಳನ್ನು ಕೊಟ್ಟು ಕಾವ್ಯಸೌಂದರ್ಯದ ಬಗೆಗೆ ನಿಚ್ಚಳವಾದ ಕಲ್ಪನೆಯನ್ನುಂಟುಮಾಡಲು ಪ್ರಯತ್ನಿಸಿದ್ದಾರೆ. 'ಕಾವ್ಯ ಮತ್ತು ಸೌಂದರ್ಯ' ಎಂಬ ಪ್ರಬಂಧದ ಮುಖ್ಯಾಂಶ ಹೀಗಿದೆ :

> ಕಲೋಪಾಸಕನ ಜೀವನದರ್ಶನದ ಅಂತರಾಳದಲ್ಲಿ ಸೌಂದರ್ಯದ ಪ್ರಜ್ಞೆ ನೆಲಸಿದೆ....ಕಲಾವಿಧಾನವನ್ನನುಸರಿಸಿ ನಿರೂಪಿತವಾದುದು ಸತ್ಯಮಯವೆಂದು ಕಲೋಪಾಸಕನು ನಮಗೆ ಮನವರಿಕೆಮಾಡಿಕೊಟ್ಟಾಗ ನಾವು ಸೌಂದರ್ಯದಿಂದ ಪ್ರಭಾವಿತರಾಗಿ ಆನಂದವನ್ನು ಪಡೆಯುತ್ತೇವೆ...ಕಲೋಪಾಸಕನು ತನ್ನ ಅಂತರಂಗದ ಅನುಭವವನ್ನು ವಿಶ್ವದ ಸತ್ಯಕ್ಕೆ ಒರೆಹಚ್ಚಿ ನೋಡುವಾಗ ತನ್ನ ಆ ಅನುಭವವು ಅರ್ಥಪೂರ್ಣವೆಂಬ ಶ್ರದ್ಧೆ ಆತನಲ್ಲಿ ಮೂಡಿದರೆ ಆಗ ಸೌಂದರ್ಯ ನಿರ್ಮಾಣದ ಕಾರ್ಯ ಆರಂಭವಾಗುತ್ತದೆ.

ಸೌಂದರ್ಯವನ್ನು ಕುರಿತ ಸಿದ್ಧಾಂತಗಳನ್ನು ವಿನಾಯಕರು ಸ್ಥೂಲವಾಗಿ ನಾಲ್ಕು ಬಗೆಯಾಗಿ ವಿಭಾಗಿಸಿ ಚರ್ಚಿಸಿದ್ದಾರೆ. ಮಹತ್ತಮ ಮತ್ತು ವಿಶಾಲತಮ ಉದ್ದೀಪನವನ್ನು ಒದಗಿಸಲು ಸಮರ್ಥವಾದುದೇ ಸುಂದರತಮವೆಂದು ಹೇಳಲಾಗಿದೆ. ವ್ಯಕ್ತಿಯ ಚಿತ್ತವು ಸೌಂದರ್ಯ ದರ್ಶನದಿಂದ ಸಾಮರಸ್ಯ, ಸಮತೂಕ, ಪ್ರಜ್ಞೆಯ ಉದ್ದೀಪನ, ಸಮಾಧಿ ಸ್ಥಿತಿ ಇವುಗಳನ್ನು ಪಡೆಯುವಂತಾಗಬೇಕು. ಕಲಾಕೃತಿಯ ಯೋಗ್ಯತೆಯ ನಿರ್ಣಯವು ಅದು ನಮ್ಮ ಚಿತ್ತವನ್ನು ಯಾವ ಎತ್ತರಕ್ಕೆ ಒಯ್ಯಬಲ್ಲದೆಂಬುದನ್ನು ಅವಲಂಬಿಸಿದೆ. ಸೌಂದರ್ಯದ ಅಭಿವ್ಯಕ್ತಿಗಾಗಿ ಶಿಲ್ಪಿಯು ಶಿಲೆಯನ್ನು ಕಂಡರಿಸುತ್ತಾನೆ. ಅದೇ ರೀತಿಯಾಗಿ ಅನುಕೂಲ ಮನಸ್ಥಿತಿಯನ್ನು ತಂದುಕೊಳ್ಳಲು ಮಾನವನು ತನ್ನ ಮನಸನ್ನು ಕಂಡರಿಸಿಕೊಳ್ಳಬೇಕಾಗುತ್ತದೆ. ಅಂದರೆ ಕಲಾಕೃತಿಯ, ಕಾವ್ಯಕೃತಿಯ ಅಂತಸ್ಸಿನೊಂದಿಗೆ ಓದುಗನ ಮನದ ಅಂತಸ್ಸೂ ಹೆಚ್ಚಾಗಬೇಕು. ಸಾಕ್ಷಿಕನು ತಾನು ಪಡೆದ ಚಿತ್ತಶುದ್ಧಿಯಿಂದ ವಸ್ತುವಿನಲ್ಲಿ ಅಂತರ್ಗತವಾದ ಸೌಂದರ್ಯವನ್ನು ಗ್ರಹಿಸಲು ಸಮರ್ಥನಾಗುತ್ತಾನೆ. ಸಾಕ್ಷ್ಯ—ಸಾಕ್ಷಿಕರ ತಾದಾತ್ಮ್ಯವಿಲ್ಲದೆ ಸೌಂದರ್ಯಾನುಭವ ಜನಿಸಲಾರದು. ಸೌಂದರ್ಯಾನುಭವವು ವಿಶ್ವಾನಂದದ ಒಂದು ರೂಪವಾಗಿದ್ದು ಅದು ಅನಂತ ಮತ್ತು ಸಾರ್ವತ್ರಿಕ ಆನಂದದ ದರ್ಶನವಾಗಿದೆ. ಇದನ್ನು ಕವಿಯು ಮೊದಲು ತಾನು ಪಡೆಯಬೇಕು. ನಂತರ ಅದನ್ನು ರಸಿಕರಿಗೆ ನೀಡಬೇಕು. ರಸಿಕ ಅದನ್ನು ಗ್ರಹಿಸುವ ಸಾಮರ್ಥ್ಯ ಪಡೆದಿರಬೇಕು.

ಕಾವ್ಯದಲ್ಲಿ ಮನರಂಜನೆಯಿರಬಲ್ಲುದು. ಆದರೆ ಮನರಂಜನೆಯ ಅಂಶವೊಂದೇ ಕಾ
ವಲ್ಲ. ತಿನಿಸು, ಪೇಯ, ತಂಬಾಕು—ಇವು ಮನರಂಜನೆಯಿಂದ ಮನಭಂಜನೆಯ
ಸರಿಯಬಹುದು. ಕಾವ್ಯವೂ ಆ ದಿಸೆಯಲ್ಲಿ ಸಾಗಬೇಕೆಂದು ಹೇಳಲಾಗದು. ಕಾ
ಗರಿಮೆಯ ಸಂಬಂಧವಲ್ಲಿ ವಿನಾಯಕರು 'ಕಾವ್ಯದ ಅಷ್ಟಾಂಗ'ಗಳನ್ನು ಉಲ್ಲೇ
ದ್ದಾರೆ. ಅವುಗಳ ಸಮನ್ವಯದಲ್ಲಿ ಕಾವ್ಯಜೀವನದ ಮಹೋನ್ನತಿಯಿದೆಯೆಂದೂ ಅ
ಹೇಳಿದ್ದಾರೆ. ಆದರೆ ಕಾವ್ಯದ ಬಗೆಗೆ ತನುತನುಗೆ ಬೇಕೆನಿಸಿದ ಅಪೇಕ್ಷೆಗಳನ್ನಿ
ಕೊಂಡು ಕಾವ್ಯ ಅವುಗಳನ್ನು ತಣಿಸಬೇಕೆಂದು ಅಪೇಕ್ಷಿಸಿದರೆ ಅದು ಕಾವ್ಯವಾಗಿ
ಉಳಿಯಲಾರದು. ಕಾವ್ಯವೂ ಒಂದು ಯೋಗ. ಪರಮಸತ್ಯವನ್ನು ಅರಸುವಲ್ಲಿ ಕಾವ್ಯದ
ಒಂದು ಹಾದಿ. ಸೃಷ್ಟಿಯ ಚಿರನವೀನ ಸೌಂದರ್ಯದ ಮೇಲೆ ವ್ಯಕ್ತಿಯು ತನ್ನ ದೃ
ಯನ್ನು ಆರೋಪಿಸಿದಾಗ ಸಂಭವಿಸುವ ಸಾಮರಸ್ಯವೇ ಸೌಂದರ್ಯಾನುಭವ. ದೃ
(ತಾನು) ಮತ್ತು ಸೃಷ್ಟಿ (ತನ್ನ ಸುತ್ತಣ ವಿಶ್ವ) ಇವೆರಡರ ಸಮರಸದಲ್ಲಿ ಕಾವ್ಯಯೋ
ವಿದೆ. ಇಂತಹ ಸಾಮರಸ್ಯವು ಕವಿಯ ವ್ಯಕ್ತಿತ್ವದ ಜೀವಾಳವಾಗಬೇಕು.-- ಹೀಗೆ ಹರಿ
ಬಂದಿದೆ ವಿನಾಯಕರ ವಿಚಾರಧಾರೆ.

ಕವಿ ಕೋಲ್‌ರಿಜ್, ಮಹರ್ಷಿ ಅರವಿಂದ, ಸಂತಕವಿ ಕನಕದಾಸ ಇವರ ಉಕ್ತಿ
ಆಧಾರದಿಂದ ಮತ್ತು ಭಗವದ್ಗೀತೆಯ ಮಾತಿನ ಸಮರ್ಥನೆಯೊಂದಿಗೆ ವಿನಾಯ
ಕಾವ್ಯಜೀವನದ ನಾಲ್ಕು ಹಂತಗಳನ್ನು ನಿರೂಪಿಸಿದ್ದಾರೆ. ಇದರಲ್ಲಿಯ ಕೊನೆಯ ಹಂ
ಆತ್ಮಿಕ ಸೌಂದರ್ಯಕ್ಕೆ ಸಂವಾದಿಯಾಗಿದೆ. ಈ ನಾಲ್ಕು ಹಂತಗಳನ್ನು ಕೆಲಮ
ಹಿಗ್ಗಿಸಿ ವೀರಶೈವ ಷಟ್‌ಸ್ಥಲ ಸಿದ್ಧಾಂತದೊಂದಿಗೆ ಮೇಳಗೂಡಿಸಿ ಹೇಳುವ ಪ್ರಯತ್ನ
ಇಲ್ಲಿದೆ.

ಮಹಾಜ್ಯೋತಿಯೊಡನೆ ಆತ್ಮವು ಒಂದಾಗಿ ನಿಲ್ಲುವ ಶಿವಶರಣರ ಐಕ್ಯಸ್ಥಲದ ಗ
ಯತ್ತ ಕಾವ್ಯಜೀವನವು ಸಾಗಬೇಕೆಂಬುದು ವಿಮರ್ಶಕ ವಿನಾಯಕರ ಹಾರೈಕೆ. ಕಾ
ದಲ್ಲಿ ವಾಸ್ತವತೆಯನ್ನು, 'ನವ್ಯ'ತೆಯನ್ನು ಪುರಸ್ಕರಿಸುವ ಅವರು ಷಟ್‌ಸ್ಥಲಸಿದ್ಧಾಂ
ಐಕ್ಯಸ್ಥಲದ ನಿಲವು ಶ್ರೀ ಅರವಿಂದ ಕಾವ್ಯದೃಷ್ಟಿಯ ಭವ್ಯತೆ ಇವುಗಳು ಕಾವ್ಯ ಜೀ
ದಲ್ಲಿ ರೂಢವಾಗಬೇಕೆಂದೂ ಪ್ರತಿಪಾದಿಸಿದ್ದಾರೆ. ಇದರಿಂದಾಗಿ ವಿನಾಯಕರ ವಿಮರ್ಶ
ದೃಷ್ಟಿಯ ಹರವು ಏನೆಂಬುದು ಸ್ಪಷ್ಟವಾಗುವಂತಿದೆ.

ನಾಟಕಗಳು

ಹೆಚ್. ತಿಪ್ಪೇರುದ್ರಸ್ವಾಮಿ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಶ್ರೀ ವಿ. ಕೃ. ಗೋಕಾಕರು ವಿಪುಲವಾದ ಮತ್ತು ವೈವಿಧ್ಯ ಪೂರ್ಣವಾದ ಸಾಹಿತ್ಯ ಸೃಷ್ಟಿಯಿಂದ ಒಂದು ವಿಶಿಷ್ಟ ಸ್ಥಾನ ಪಡೆದಿದ್ದಾರೆ. ಕಾದಂಬರಿ ಕಾವ್ಯ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ಅವರು ಪ್ರಯೋಗಶೀಲತೆಯನ್ನು ಮೆರೆದಿದ್ದಾರೆ; ವೈಚಾರಿಕತೆಯನ್ನು ವ್ಯಕ್ತಪಡಿಸಿದ್ದಾರೆ. ಬಹುಶಃ ಈ ಪ್ರಯೋಗಶೀಲತೆ ವೈಚಾರಿಕತೆಗಳು ಅವರ ಕೃತಿಗಳ ಎರಡು ಕಣ್ಣುಗಳೆನ್ನಬಹುದು. ವಿಮರ್ಶಾಪ್ರಬಂಧ ಗಳಿಂದ ಹಿಡಿದು ನಾಟಕಗಳವರೆಗೆ ಅವರ ಎಲ್ಲ ಕೃತಿಗಳಿಗೂ ಈ ಮಾತು ಅನ್ವಯಿಸುತ್ತದೆ.

ಸಾಹಿತ್ಯಲೋಕದಲ್ಲಿ ಅವರು ವಿಮರ್ಶಕರಾಗಿ ಕವಿಗಳಾಗಿ ಕಾದಂಬರಿಕಾರರಾಗಿ ಪರಿಚಿತರಾದಷ್ಟು ನಾಟಕಕಾರರಾಗಿ ಪ್ರಸಿದ್ಧರಾಗಿಲ್ಲ. ಈವರೆಗೆ ಅವರು ಮೂರು ನಾಟಕ ಗಳನ್ನು ಬರೆದಿದ್ದಾರೆ. 'ಜನನಾಯಕ,' 'ಯುಗಾಂತರ,' 'ವಿಮರ್ಶಕ ವೈದ್ಯ'--ಇವು ಆ ನಾಟಕಗಳು. ಇವಲ್ಲದೆ 'ತುಳಸಿ' ಎಂಬ ಒಂದು ಚಿಕ್ಕ ದೃಶ್ಯವೂ ರಚಿತವಾಗಿದೆ. ಇವೆಲ್ಲಾ ಬಹಳ ಹಿಂದೆಯೇ ರಚಿತವಾದುವುಗಳು. 'ಜನನಾಯಕ' ಮೊದಲು ಪ್ರಕಟ ವಾದುದೇ ೧೯೩೯ರಲ್ಲಿ. ೧೯೪೭ರಲ್ಲಿ ಉಳಿದೆರಡು ನಾಟಕಗಳು ಪ್ರಕಟವಾಗಿವೆ. 'ಜನನಾಯ ಕ'ದ ಪ್ರಸ್ತಾವನೆಯಲ್ಲಿ 'ತುಳಸಿ' ದೃಶ್ಯದ ಪ್ರಸ್ತಾಪ ಬರುವುದರಿಂದ ಅದಕ್ಕಿಂತ ಮೊದಲೇ ರಚಿತವಾಗಿತ್ತೆನ್ನಬಹುದು. ಈಚೆಗೆ ನಾಟಕಗಳ ರಚನೆಯನ್ನು ಅವರು ಮುಂದುವರಿಸಿ ದಂತೆ ಕಾಣುವುದಿಲ್ಲ. ಆದರೂ ಈ ಮೂರು ನಾಟಕಗಳಲ್ಲಿಯೇ ಗೋಕಾಕರ ಸಾಹಿತ್ಯ ಸೃಷ್ಟಿ ಮತ್ತು ಜೀವನದರ್ಶನಗಳು ತಕ್ಕಮಟ್ಟಿಗಾದರೂ ಗೋಚರವಾಗದಿರವು. ಅವುಗಳ ಸಂಕ್ಷಿಪ್ತ ಪರಿಚಯ ಮಾತ್ರ ಈ ಚಿಕ್ಕ ಲೇಖನದ ಉದ್ದೇಶ.

'ಜನನಾಯಕ' ಇವರ ಮೊದಲ ನಾಟಕ. (ಬಹುಶಃ ಅದಕ್ಕಿಂತ ಹಿಂದಿನದಾದ 'ತುಳಸಿ'ಯನ್ನು ಕುರಿತು ಒಂದೆರಡು ಮಾತುಗಳನ್ನು ಮುಂದೆ ಹೇಳಬಹುದು.) ನಾಲ್ಕು ಅಂಕಗಳ ದೊಡ್ಡ ನಾಟಕ 'ಜನನಾಯಕ'. ಸುಮಾರು ಮೂರು ಅಥವಾ ಮೂರುವರೆ ಗಂಟೆಗಳಷ್ಟು ಕಾಲವನ್ನು ಪ್ರದರ್ಶನಕ್ಕೆ ತೆಗೆದುಕೊಳ್ಳುವಷ್ಟು ದೀರ್ಘವಾಗಿದೆ. ಹಿಂದೆ ಇದು ರಚಿತವಾದ ತರುಣದಲ್ಲಿ ಎರಡು ಮೂರು ಕಡೆಗಳಲ್ಲಿ ಪ್ರದರ್ಶಿತವಾದ ವಿವರಗಳನ್ನೂ

ಲೇಖಕರು ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. ಆ ಪ್ರದರ್ಶನದ ಅನುಭವ ನಾಟ
ರಚನೆಯಲ್ಲೂ ಪ್ರಭಾವ ಬೀರಿರುವುದನ್ನು ಸೂಚಿಸಿದ್ದಾರೆ.

ನಾಟಕಕಾರರೇ ಹೇಳುವಂತೆ "ಇಲ್ಲಿಯ ಮುಖ್ಯ ವಸ್ತು ಪ್ರತೀಕಾರ." ಸಮಾಜವ
ಹಿನ್ನೆಲೆಯಾಗಿಟ್ಟುಕೊಂಡು ಶಕ್ತಿ ಮತ್ತು ವ್ಯಕ್ತಿಗಳ ನಡುವೆ ನಡೆಯುವ ಚಿರಂ
ಹೋರಾಟವನ್ನು ಚಿತ್ರಿಸಲು ಇಲ್ಲಿ ಪ್ರಯತ್ನಿಸಿದ್ದಾರೆ. ಇದಕ್ಕಾಗಿ ಒಂದು ಜಾಗೀ
ಕಥಾವಸ್ತುವನ್ನು ಆರಿಸಿಕೊಂಡಿದ್ದಾರೆ. ಜಾಗೀರುದಾರರ ದುಷ್ಟದಬ್ಬಾಳಿಕೆಯ ಪೈಶಾ
ಒಂದುಕಡೆ, ಇದಕ್ಕೆ ಗುರಿಯಾದ ಜನರ ಮೂಕಸಂಕಟ ಇನ್ನೊಂದು ಕಡೆ. ಆ
ಆ ದುಷ್ಟಶಕ್ತಿ ಬಹುಕಾಲ ಬಾಳಲಾರದು. ಜನತೆಯ ಸಮಷ್ಟಿ ಮನಸ್ಸಿನ ಆಕಾ
ಹೆಪ್ಪುಗಟ್ಟುತ್ತದೆ. ಜನನಾಯಕ ರೂಪುಗೊಳ್ಳುತ್ತಾನೆ. ಪಾಶವೀಶಕ್ತಿಯನ್ನು ಪ್ರತಿಭ
ನಿಲ್ಲುತ್ತದೆ ಸಾತ್ವಿಕಶಕ್ತಿ. ಅದು ದುಷ್ಟಶಕ್ತಿಯನ್ನು ಮೆಟ್ಟಿ ಋಜುಮಾರ್ಗದಿಂದಲೇ
ಪ್ರತೀಕಾರವನ್ನು ತೀರಿಸಿಕೊಳ್ಳುತ್ತದೆ. ಆದರೆ ಅಷ್ಟರಲ್ಲಿಯೇ ಪರ್ಯವಸಾನವಾಗುವುದ
ನಿಸ್ಸಹಾಯಕವಾದ ದುಷ್ಟಶಕ್ತಿ ಕುಟಿಲೋಪಾಯವನ್ನು ಅವಲಂಬಿಸಿ ಸತ್‌ಶಕ್ತಿಯ
ಮೆಟ್ಟಿ ನುಚ್ಚುನೂರು ಮಾಡುತ್ತದೆ. ಭೀಕರತರವಾದ ಪ್ರತಿಕಾರದಲ್ಲಿ ಅದು ಕೊನೆಗೊ
ತ್ತದೆ—ಇದು ಈ ನಾಟಕದಲ್ಲಿ ಕಂಡುಬರುವ ಹೋರಾಟದ ರೂಪರೇಷೆ.

ಹಣುಮಪ್ಪ ದೇಸಾಯಿ ಬೇವಿನಹಳ್ಳಿಯ ಜಾಗೀರುದಾರ. ಈತನ ಮಹತ್ವಾಕಾಂ
ದುಷ್ಟತನದ ಲೇಪನವನ್ನು ಕೊಟ್ಟು ಅಡ್ಡಹಾದಿಗೆ ಅವನನ್ನು ತಿರುಗಿಸಿದ ಕಾರಕ
ಸಣತಮ್ಮ. ಜಾಗೀರಿಯ ಕಾರಭಾರಿಗಳಾದ ಇಳಿವಯಸ್ಸಿನ ರಾಮಣ್ಣನವರ ಮಾ
ದೇಸಾಯಿಗೆ ಹಿಡಿಸದು. ವಿಲಾಸದ ಮತ್ತನ್ನು ತಲೆಗೆ ತುಂಬಿದ ತರುಣ ಸಣತಮ
ಮಾತೇ ಅವನಿಗೆ ಪಥ್ಯ. ಜನತೆಯ ಮೇಲೆ ದಬ್ಬಾಳಿಕೆ, ಸುಲಿಗೆ, ನೀತಿಗೆಟ್ಟ ನಡತೆಗಳ
ಬೇವಿನ ಹಳ್ಳಿ ರೋಸಿಹೋಗಿದೆ. ಕಂಗೆಟ್ಟ ಜನ ನಿಸ್ಸಹಾಯಕರಾಗಿ ತಮ್ಮ ನಾಯಕನ
ಭೀಮಣ್ಣನ ಕಡೆಗೆ ನೋಡುತ್ತಿದ್ದಾರೆ.

ಭೀಮಣ್ಣನಾಯಕ ಬೇವಿನಹಳ್ಳಿ ಶ್ರೀಮಂತ ನಾಗರಿಕ. ತನ್ನ ಸದ್ಗುಣಗಳ
ಜನತೆಯ ವಿಶ್ವಾಸಗಳಿಸಿಕೊಂಡವನು.ಆತನ ಪ್ರಭಾವ ದಿನದಿನಕ್ಕೆ ಬೆಳೆಯುತ್ತಿರುವುದ
ಕಂಡು ದೇಸಾಯಿಯ ಅತೃಪ್ತಿ ಹೊಗೆಯಾಡುತ್ತದೆ. ಅದಕ್ಕೆ ಸಣತಮ್ಮ ಸಮಯೋ
ವಾದ ಕುಟಿಲ ಕುಹಕದ ಮಾತುಗಳಿಂದ ಗಾಳಿಹಾಕಿ ಭುಗಿಲೆನಿಸುತ್ತಾನೆ. ನಾಯಕನ
ದೇಸಾಯಿ ಅವಮಾನಗೊಳಿಸುತ್ತಾನೆ, ಅವಹೇಳನಗೊಳಿಸುತ್ತಾನೆ. ಅದನ್ನು ತಿಳಿದ
ಭಾರಿ ರಾಮಣ್ಣ ವ್ಯಸನದಿಂದ ನಾಯಕನ ಮನೆಗೆ ಬಂದು ಪರಿಸ್ಥಿತಿ ವಿಕೋಪಕ್ಕೆ ಹೋ
ವುದನ್ನು ತಡೆಯಲು ಒಂದು ಸಲಹೆ ಕೊಡುತ್ತಾನೆ. ಭೀಮಣ್ಣನಾಯಕ ಬೇವಿನಹಳ್ಳಿಯ
ಬಿಟ್ಟು ಅಲ್ಲಿಗೆ ನಾಲ್ಕು ಮೈಲು ದೂರದ ಇಂಚಲಾಪುರಕ್ಕೆ ಹೋಗುವಂತೆ ಕೇಳಿಕೊ
ತ್ತಾನೆ. ಈ ದೇಸಾಯಿಯ ಅಧಿಕಾರ ಹಸ್ತದಿಂದ ಹೊರಗಿರುವ ಆ ಊರಿನಲ್ಲಿದ್ದು ನಾ

ಅಲ್ಲಿಂದಲೇ ಜನರ ಹಿತಕ್ಕಾಗಿ ಪ್ರಯತ್ನಗಳನ್ನು ಕೈಕೊಳ್ಳಬಹುದೆಂಬುದು ರಾಮಣ್ಣನ ಆಶಯ. ನಾಯಕ ಆ ಕೂಡಲೇ ಒಪ್ಪಿಕೊಳ್ಳದಿದ್ದರೂ ಆ ಸಲಹೆಯನ್ನು ತಳ್ಳಿಹಾಕುವುದಿಲ್ಲ.

ಅತ್ತೆಯೊಡನೆ ದೇವಸ್ಥಾನಕ್ಕೆ ಹೋದ ತನ್ನ ಹೆಂಡತಿ ಸುಭದ್ರಾಬಾಯಿಯ ಮೇಲೆ ದೇಸಾಯಿಯ ಕಾಕದೃಷ್ಟಿ ಬಿದ್ದಿರುವುದರ ಸೂಚನೆ ನಾಯಕನಿಗೆ ತಿಳಿಯುತ್ತದೆ. ಬೇವಿನಹಳ್ಳಿಯನ್ನು ಬಿಡುವ ನಿರ್ಧಾರ ಇದರಿಂದ ಬಲಗೊಳ್ಳುತ್ತದೆ. ಇಂಚಲಾಪುರಕ್ಕೆ ಬಂದು ನೆಲಸುತ್ತಾನೆ. ಇತ್ತ ರಾಮಣ್ಣನನ್ನು ನಿವಾರಿಸಿಕೊಳ್ಳುವ ಉದ್ದೇಶದಿಂದ ಸಣತಮ್ಮ ಅವನಿಗೆ ವಿಷವನ್ನಿಡುತ್ತಾನೆ. ರಾಮಣ್ಣನ ಅಸ್ವಸ್ಥತೆಯನ್ನು ತಿಳಿದ ನಾಯಕ ಅವರನ್ನು ನೋಡಲು ಬೇವಿನಹಳ್ಳಿಗೆ ಬರುತ್ತಾನೆ. ಅದೇ ಅವಕಾಶವನ್ನು ಕಾಯ್ದಿದ್ದ ದೇಸಾಯಿ ಆ ರಾತ್ರಿ ನಾಯಕನ ಹೆಂಡತಿಯನ್ನು ಅಪಹರಿಸಲು ಜನರನ್ನು ಇಂಚಲಾಪುರಕ್ಕೆ ಕಳಿಸುತ್ತಾನೆ. ಆದರೆ ಅವನ ಸೇವಕರ ಸಹಾಯದಿಂದ ಅದು ವಿಫಲವಾಗುತ್ತದೆ.

ರಾಮಣ್ಣ ವಿಷಕ್ಕೆ ಗುರಿಯಾಗಿ ಮರಣಹೊಂದುತ್ತಾನೆ. ಜನ ಜಾಗ್ರತಗೊಳ್ಳುತ್ತಾರೆ. ದೈವಸಮಾನನಾದ ಹಿಂದಿನ ದೇಸಾಯಿ ಲಕ್ಕಣ್ಣೊಡೆಯರ ಸಮಾಧಿಯಬಳಿ ಅಂದು ರಾತ್ರಿ ಭೀಮಣ್ಣನಾಯಕನ ನೇತೃತ್ವದಲ್ಲಿ ಸಭೆ ಸೇರುತ್ತಾರೆ. ಮೇಲಿನ ವರಿಷ್ಠ ಸರ್ಕಾರಕ್ಕೆ ದೇಸಾಯಿಯ ದಬ್ಬಾಳಿಕೆಯನ್ನು ತಿಳಿಸಲು ನಿರ್ಧರಿಸುತ್ತಾರೆ. ಮತ್ತು ಅದಕ್ಕಾಗಿ ಆಗಲೇ ಒಂದು ಅರ್ಜಿಯೂ ತಯಾರಾಗಿದೆ. ದೇಸಾಯಿಯ ದುರ್ನಡತೆಗಳನ್ನೆಲ್ಲಾ ವಿವರಿಸುವ ಆರು ಕಲಮಿನ ಆ ಅರ್ಜಿಯನ್ನು ಮೇಲಿನ ಸರ್ಕಾರದ ಅಧಿಕಾರಿಗೆ ಕಳಿಸಿಕೊಡುತ್ತಾರೆ.

ಆ ಅರ್ಜಿ ದೇಸಾಯಿಯ ಬಣ್ಣವನ್ನು ಬಯಲಿಗೆಳೆಯುತ್ತದೆ. ಬೊಂಬಾಯಿಯಲ್ಲಿ ಓದುತ್ತಿದ್ದ ಚಿಕ್ಕದೇಸಾಯಿಯೂ ಇದನ್ನು ಕೇಳಿ ತನ್ನ ಊರಿಗೆ ಓಡಿಬರುತ್ತಾನೆ. ಮಗನನ್ನು ಬಂಧಿಸುವುದಕ್ಕೆ ಹೇಸುವುದಿಲ್ಲ ಹಣುಮಪ್ಪ ದೇಸಾಯಿ. ಆ ವೇಳೆಗೆ ಕಂಪನಿಯ ಸರ್ಕಾರದ ಕಮೀಷನರ್ ವಿಚಾರಣೆಗೆ ಬರುತ್ತಾರೆ. ನಾಯಕನ ಎದುರಿನಲ್ಲಿಯೇ ವಿಚಾರಣೆ ನಡೆಯುತ್ತದೆ. ದೇಸಾಯಿಯ ನಡತೆ, ಆತನ ಕಾರಕೂನನಾಗಿದ್ದ ನೂತನ ಕಾರಭಾರಿ ಸಣತಮ್ಮನ ದುಷ್ಟತನ ಬಯಲಿಗೆ ಬೀಳುತ್ತದೆ. ಕಮೀಷನರ್ ಅವರಿಬ್ಬರಿಗೂ ಶಿಕ್ಷೆ ವಿಧಿಸುತ್ತಾನೆ. ದೇಸಾಯಿಯ ಜಾಗಿರಿಯನ್ನು ಕಸಿದುಕೊಂಡು ಚಿಕ್ಕದೇಸಾಯರ ಹೆಸರಿನಲ್ಲಿ ನಡೆಸಲು ಆಜ್ಞೆಮಾಡುತ್ತಾನೆ ; ಸಣತಮ್ಮನನ್ನು ಜೈಲಿನಲ್ಲಿ ಬಂಧಿಸುತ್ತಾನೆ.

ಆ ವಿಚಾರಣೆ ಮುಗಿಸಿಕೊಂಡು ನಾಯಕ ಬೇವಿನಹಳ್ಳಿಯಿಂದ ಇಂಚಲಾಪುರಕ್ಕೆ ಹೊರಡುತ್ತಾನೆ. ಇದ್ದಕ್ಕಿದ್ದಂತೆ ಬಿರುಗಾಳಿ ಮಳೆಯ ದುಶ್ಯಕುನದ ಸೂಚನೆ ಕಂಡುಬರುತ್ತದೆ. ಗೆಳೆಯರು ತಡೆಯುತ್ತಿದ್ದರೂ ಲೆಕ್ಕಿಸದೆ ಹೊರಟೇಬಿಡುತ್ತಾನೆ ನಾಯಕ. ಸೆರೆಮನೆಯಿಂದ ಹೇಗೋ ತಪ್ಪಿಸಿಕೊಂಡು ಬಂದ ಸಣತಮ್ಮ ಯಾರೂ ಕಾಣದಂತೆ

ನಾಯಕನನ್ನು ಹಿಂಬಾಲಿಸಿ ಬಂದು ಆತನನ್ನು ಇರಿಯುತ್ತಾನೆ. ಮರುಕ್ಷಣವೇ ಆತನನ್ನು ಹುಡುಕಿಕೊಂಡು ಬಂದ ಗಂಗಜ್ಜನ ಕತ್ತಿ ಸಣತಮ್ಮನನ್ನು ಇರಿಯುತ್ತದೆ. ತನ್ನ ಪ್ರೇಯಸಿಯ ಮೇಲೆ ಸಣತಮ್ಮ ಮಾಡಿದ ಅತ್ಯಾಚಾರಕ್ಕೆ ಆತ ತೀರಿಸಿಕೊಂಡ ಪ್ರತೀಕಾರ ಅದು. ಆದರೇನು ? ಭೀಮಣ್ಣನಾಯಕನನ್ನು ಅದು ಉಳಿಸಬಹುದಿತ್ತು. ಆದರೆ ಉಳಿಸಲಿಲ್ಲ. ನಾಯಕನ ಮರಣದ ದುರಂತದೊಡನೆ ನಾಟಕ ಮುಕ್ತಾಯವಾಗುತ್ತದೆ. — ಇದು ಸಂಕ್ಷೇಪವಾಗಿ ನಾಟಕದ ಕಥೆ.

ಈ ಕಥೆ ನಾಲ್ಕು ಅಂಕಗಳಲ್ಲಿ ಹಲವಾರು ದೃಶ್ಯಗಳಲ್ಲಿ ಬೆಳೆದಿದೆ. ನಾಟಕದ ಸಂವಿಧಾನದಲ್ಲಿ ಹೊಸತನವೇನೂ ಇಲ್ಲದಿದ್ದರೂ ಒಂದು ಕ್ರಮವಿದೆ, ಕುಶಲತೆಯಿಂದೆ ನಾಟಕಕಾರರೇ ಗಮನಿಸಿರುವಂತೆ ಮೊದಲನೆ ಅಂಕದಿಂದ ಮೂರನೇ ಅಂಕದ ಕೊನೆಯ ವರೆಗೂ ನಾಟಕದ ಹೋರಾಟ ಬೆಳೆಯುತ್ತ ಹೋಗುತ್ತದೆ. ದೇಸಾಯರ ಪ್ರಾಬಲ್ಯ ಹಂತಹಂತವಾಗಿ ಅಲ್ಲಿ ಚಿತ್ರಿತವಾಗಿದೆ. ಆದರೆ ಮುಂದಿನ ಅಂಕದಲ್ಲಿ ಒಮ್ಮೆಲೇ ಅದು ಉರುಳಿ ತಲೆಕೆಳಗಾಗುತ್ತದೆ. ಲಕ್ಷಣ್ಣೊಡೆಯರ ಸಮಾಧಿಯ ಬಳಿಯಲ್ಲಾದ ಸಭೆ ಈ ಈ ಘಟನೆಯ ತುತ್ತತುದಿ ಎನ್ನಬಹುದು. ಅನಂತರ ಕಂಪನಿ ಸರ್ಕಾರದ ಕಮೀಷನರನ ಆಗಮನ, ದೇಸಾಯಿಗೆ ಸಣತಮ್ಮನಿಗೆ ವಿಧಿಸುವ ಶಿಕ್ಷೆ ಮಿಂಚಿನ ವೇಗದಲ್ಲಿ ನಡೆಯುತ್ತವೆ ಕೊನೆಯಲ್ಲಿ ಸತ್ಯಕ್ಕೆ ಜಯವಾಯಿತೆನ್ನುತ್ತಿರುವಾಗ ಅದು ದೌಷ್ಟ್ಯದ ಪದಹತಿಯಲ್ಲಿ ಸಿಕ್ಕು ವಿನಾಶಕ್ಕೆ ಗುರಿಯಾಗುತ್ತದೆ. ಅನೀರಿಕ್ಷಿತ ದುರಂತದೊಡನೆ ನಾಟಕ ಮುಕ್ತಾಯ ವಾಗುತ್ತದೆ.

ಈ ದುರಂತದ ಔಚಿತ್ಯವನ್ನು ಕುರಿತು ನಾಟಕಕಾರರೇ ಪ್ರಸ್ತಾವನೆಯಲ್ಲಿ ಸಾಕಷ್ಟು ಚರ್ಚಿಸಿದ್ದಾರೆ. ಭೀಮಣ್ಣನಾಯಕನನ್ನು ಸಣತಮ್ಮನ ಕೈಯಿಂದ ಕೊಲ್ಲಿಸಿರುವುದ ಔಚಿತ್ಯವನ್ನು ಷೇಕ್ಸ್‌ಪಿಯರ್ ಮೊದಲಾದವರ ಉದಾಹರಣೆ ಕೊಟ್ಟು ಸಮರ್ಥಿಸಿ ಕೊಂಡಿದ್ದಾರೆ. "ಕೆಡುಕು ಹಾಕಿದ ಹೊಂಚಿನಲ್ಲಿ ಕೆಡಕಿನ ಕೇಡಾಗುವುದಲ್ಲದೆ ಒಳ್ಳೆಯದೂ ಹಾಳಾಗುವುದು"—"The waste of Virtue and the wreck of vice" ಎಂದು ಬ್ರ್ಯಾಡ್ಲೆ ಹೇಳಿದ ಮಾತು ಎಲ್ಲ ರುದ್ರರೂಪಗಳ ಅಡಿಗಲ್ಲಾಗಿದೆ. ಒಳ್ಳೆಯದೆಲ್ಲ ವಿನಾಕಾರಣ ಹಾಳಾಗುವುದೇಕೆಂಬುದು ಇಡಿ ವಿಶ್ವದಲ್ಲಿ ಒಡೆಯದ ಒಗಟವಾಗಿದೆ ಪ್ರತಿಭಾವಂತರು ಚಿಕ್ಕವಯಸ್ಸಿನಲ್ಲಿ ತೀರುತ್ತಾರೆ. ಹರಿಶ್ಚಂದ್ರನಂಥ ಪುಣ್ಯವಂತರನ್ನು ಶನಿಯು ಮಿತಿಮೀರಿ ಕಾಡುತ್ತಾನೆ. ಪುಣ್ಯವಂತರಿಗೆ ನಿರಂತರ ಯಾತನೆ ಅಪಜಯ ಪಾಪಿಗಳಿಗೆ ಐಶ್ವರ್ಯ ಜಯ. ಜಗತ್ತಿನ ನಿಯಮ ಹೀಗೆ ವಿಚಿತ್ರವಾದುದನ್ನು ಕಂಡ ಮನಸ್ಸು ತಲ್ಲಣಗೊಳ್ಳುತ್ತದೆ—ಎನ್ನುತ್ತಾರೆ ಗೋಕಾಕರು. ನಿಜ. ಜಗತ್ತಿನ ನೋಟದ ಮೇಲುಪದರಿನಲ್ಲಿ ಇದನ್ನು ನಾವು ಕಾಣುತ್ತೇವೆ. ಆದರೆ ಇದರ ಆಂತರ್ಯದಲ್ಲಿರುವ ತಿರುಳಿನ ಕಡೆಗೆ ಗಮನ ಹರಿಸಿದಾಗ 'ಸತ್ಯಮೇವ ಜಯತೇ' ಎಂಬ ಮಾತಿನ ರಹಸ್ಯವೂ ಅರಿವಾಗ

ವಿರಮ. 'ಹರಿಶ್ಚಂದ್ರನಂಥ ಪುಣ್ಯವಂತರನ್ನು ಶನಿಯು ಮಿತಿಮೀರಿ ಕಾಡುತ್ತಾನೆ' ನಿಜ. ಆದರೆ ಆ ಕಾಟಕ್ಕೆ ಗುರಿಯಾಗಿ ಸಿಕ್ಕಿ ಶಕ್ತಿ, ಭಯಂಕರ ದುರಂತಕ್ಕೆ ಗುರಿಯಾದಂತೆ ಚಿತ್ರಿಸಿದರೆ ಆಗುವ ಭೀಕರ ಪರಿಣಾಮವನ್ನು ಊಹಿಸಿಕೊಳ್ಳಬೇಕು.

ಇನ್ನೊಂದು ಮಾತು: "ನಾನೇನೂ ಆದಸಂಗತಿಗಳನ್ನು ಎದುರಿಟ್ಟುಕೊಂಡು ಬರೆದವನಲ್ಲ; ಆಗಬಹುದಾದ ಸಂಗತಿಗಳನ್ನು ಕಲ್ಪಿಸಿದ್ದೆನು." ಎಂದಿದ್ದಾರೆ ನಾಟಕಕಾರರು. ಅದು ಸಹಜವೇ. ಆದರೆ ಆ ಕಲ್ಪನೆಯ ಪ್ರಭಾವ ಅವ್ಯಕ್ತವಾಗಿ ಸುತ್ತಲ ಪರಿಸರದ ಮೇಲೆ ಉಂಟಾಯಿತೆಂದು,ಅದೇ ಕಾಲದಲ್ಲಿಯೇ ಇನ್ನೊಂದು ಜಾಗೀರಿನ ಜನ ಕಂಪನಿಯ ಸರ್ಕಾರಕ್ಕೆ ಇದೇ ರೀತಿಯ ಅರ್ಜಿಯನ್ನು ಕೊಟ್ಟ ವಾರ್ತೆ ಪತ್ರಿಕೆಗಳಲ್ಲಿ ಬಂದಿತೆಂದೂ ಹೇಳಿ "'ಅಂತರಃ ಕೋಪಿ ಹೇತು'"ವು ಒಂದೇ ವೇಳೆಯಲ್ಲಿ ಬೇರೆ ಬೇರೆಕಡೆಗೆ ಒಂದೇ ಮನೋವೃತ್ತಿಯನ್ನು ಬಿಂಬಿಸುವ ಕೃತಿಗಳನ್ನು ಬಳಕೆಗೆ ತರುವುದರಲ್ಲಿ ಉದ್ಯುಕ್ತವಾಗಿರಬಹುದು" ಎನ್ನುತ್ತಾರೆ."ಒಬ್ಬ ಕಾದಂಬರಿಕಾರನು ಕಾದಂಬರಿಯನ್ನು ಬರೆಯುತ್ತಿರುವಾಗ ಆತನು ಆ ಕಾಲ್ಪನಿಕ ವ್ಯಕ್ತಿಗಳ ಜೀವನವನ್ನು ಕಲ್ಪಿಸುತ್ತ ಹೋದಂತೆ ಸಮೀಪದ ಊರಲ್ಲಿದ್ದ ಕೆಲವರ ಜೀವನವೂ ಮಾರ್ಪಡುತ್ತಾ" ಹೋಯಿತಂತೆ! ಅಂದರೆ ಸಾಹಿತ್ಯ ಕಲ್ಪನೆಯ ಶಕ್ತಿ ಒಂದಲ್ಲ ಒಂದು ರೂದಲ್ಲಿ ಸಮಾಜದ ಮೇಲಾಗುತ್ತದೆ. ಆದುದರಿಂದ ಸಾಹಿತಿಯ ಕಲ್ಪನೆ ಸಂಭವನೀಯವಾದ ಮಂಗಳದ ಕಡೆಗೇಕೆ ತಿರುಗಬಾರದು? ಜೀವನದಲ್ಲಿ ಅಮಂಗಳವೊಂದೇ ಸಂಭವವಲ್ಲ, ಮಂಗಳವೂ ಸಂಭವ. ಭೀಮಣ್ಣನಾಯಕ ನಂತಹವರು ಸಾಯುವುದೊಂದೇ ಸಂಭವ, ಬದುಕುವುದು ಅಸಂಭವ ಎಂದು ಹೇಳುವಂತಿಲ್ಲ. ಎರಡೂ ಸಂಭವನೀಯ ಕಲ್ಪನೆಗಳೇ. ಆದರೆ 'ಅಂತರಃ ಕೋಪಿ ಹೇತು'ವಿನ ಪ್ರಭಾವವನ್ನು ಒಪ್ಪಿಕೊಳ್ಳುವುದಾದರೆ ಸಂಭವನೀಯ ಕಲ್ಪನೆ ಮಂಗಳದ ಕಡೆಗೇ ಹರಿಯುವುದು ಒಳಿತೆಂದು ತೋರುತ್ತದೆ. ಕೆಲವುವೇಳೆ ಮಂಗಳದ ಕಡೆಗೆ ಹರಿಯಲಾರದಂತಹ ದೌರ್ಬಲ್ಯ ನಾಯಕನಲ್ಲಿಯೇ ಇರುತ್ತದೆ. ಆಗ ದುರಂತ ಅನಿವಾರ್ಯ. ಪಾತ್ರದ ದೌರ್ಬಲ್ಯದ ಪರಿಣಾಮವಾಗಿ ಮರಣ ಅನಿವಾರ್ಯವೆಂಬಂತೆ ಬಂದರೆ ಮಾತ್ರ ಅದನ್ನು ದುರಂತವೆಂದು ಕರೆಯಬಹುದೇನೋ. ಅಂತಹ ದುರಂತದಲ್ಲಿಯೂ ಮಂಗಳಧ್ವನಿಯಿದೆ. ಇಲ್ಲವಾದರೆ ಕೊನೆಯಲ್ಲಿ ಹೇಗೋ ಮರಣದ ಕಡೆಗೆ ದಬ್ಬುವ ಅಗ್ಗದ ಸಿನಿಮಾತಂತ್ರವನ್ನು ದುರಂತವೆಂದು ಕರೆಯಬೇಕಾದೀತು.

ಈ ನಾಟಕದ ಜೋಡಣೆಗೆಯ ದೃಷ್ಟಿಯಿಂದ ಹೇಳಬಹುದಾದರೆ ನಾಯಕನ ಮರಣ ಅನಿವಾರ್ಯವೆಂಬಂತೆ ಬಂದಿಲ್ಲ. ಅದರಿಂದ ಅಂತಹ ಗಾಢಪ್ರಭಾವವೂ ಆಗದು. ಬಹುಶಃ ಕೊನೆಯಲ್ಲಿ ನಾಟಕೀಯವಾದ ಗಂಭೀರಪರಿಣಾಮದ ದೃಷ್ಟಿಯೇ ಪ್ರಧಾನವಾಗಿದ್ದರೆ ಅವನನ್ನು ಮರಣದ ಅಂಚಿನವರೆಗೂ ಕರೆದೊಯ್ದು ಪ್ರೇಕ್ಷಕರ ಕಾತರತೆ ಕುತೂಹಲಗಳನ್ನು ಪ್ರಚೋದಿಸಿ ಸಂತೋಷದ ಮುಕ್ತಾಯದ ಕಡೆಗೆ ತಿರುವನ್ನು ಕೊಡಬಹುದಿತ್ತು.

ಸಣತಮ್ಮ ಭೀಮಣ್ಣನನ್ನು ಇರಿಯುವುದಕ್ಕೆ ಮುನ್ನವೇ ಗಂಗಜ್ಜ ಬಂದು ಸಣತಮ್ಮ ಇರಿದು ಉರುಳಿಸಬಹುದಾಗಿತ್ತು. ಯಾವುದೂ ಅಸಂಭವವಲ್ಲವೆಂದಮೇಲೆ ಇದೂ ಸಂಭವನೀಯ ಕಲ್ಪನೆಯೇ ಆಗಬಹುದಷ್ಟೆ. ಇಷ್ಟಾದರೂ ಈ ವಿಷಯ ಚರ್ಚಾಸ್ಪದ ವಾಗಿಯೇ, ಅಭಿಪ್ರಾಯದ ಮಾತಾಗಿಯೇ ಉಳಿಯಬಹುದೇನೋ !

ಪಾತ್ರಚಿತ್ರಣದ ದೃಷ್ಟಿಯಿಂದ ನಾಟಕ ಯಶಸ್ವಿಯಾಗಿದೆ. ಧನಮದ, ಅದಕ್ಕೆ ತಕ್ಕ ಅವಿವೇಕ ಅತಿರೇಕಗಳಿಂದ ಕೂಡಿದ ಹಣಮಪ್ಪ ದೇಸಾಯಿ; ಅವನ ದೌರ್ಬಲ್ಯ ಗಳನ್ನು ಸ್ವಾರ್ಥಕ್ಕಾಗಿ ಬಳಸಿಕೊಂಡ ಪಾಪಗ್ರಹ ಸಣತಮ್ಮ; ಅವನ ದುಷ್ಕೃತನಕ್ಕೆ ಗುರಿಯಾಗಿ ತನ್ನ ಬಾಳಗೆಳತಿಯನ್ನು ಕಳೆದುಕೊಂಡ ಗಂಗಜ್ಜ; ಸಾತ್ವಿಕತೆಯೇ ಮೂರ್ತಿವೆತ್ತಂತಹ ರಾಮಣ್ಣ ; ನಾಯಕನ ಗೆಳೆಯ ಸಿದ್ಧರಾಮಶೆಟ್ಟಿ; ಕೊನೆಗೆ ಸೇವಕ ಪಾತ್ರಗಳಾದ ಕರಿಯ, ಡಂಗುರದವ, ಈ ಎಲ್ಲರೂ ಜೀವಂತಮೂರ್ತಿಗಳಾಗಿ ನಿಂತಿದ್ದಾರೆ.

ನಾಟಕದ ಮುಖ್ಯ ಪಾತ್ರ ಭೀಮಣ್ಣನಾಯಕನದು. ಜನನಾಯಕನಾಗುವವನ ಯೋಗ್ಯತೆಗಳನ್ನು ಈ ಪಾತ್ರದ ಮೂಲಕ ಸಾಕಷ್ಟು ಚರ್ಚಿಸಿ ವಿಶ್ಲೇಷಿಸಿ ತೋರಿಸಿದ್ದಾರೆ. ಅವನ ಔದಾರ್ಯ, ಔನ್ನತ್ಯ, ಧೈರ್ಯ, ಸ್ಥೈರ್ಯ ಸಹನೆ ವಿಶಾಲತೆಗಳ ಸುರುಳಿ ಬಿಚ್ಚುತ್ತಾ ಹೋಗುತ್ತವೆ. ಆತನ ದಾಂಪತ್ಯಜೀವನದ ಮಧುರ ಸನ್ನಿವೇಶಗಳನ್ನು ಬಹಳ ಸುಂದರ ವಾಗಿ ತೋರಿಸಿದ್ದಾರೆ. ಬೇವಿನಹಳ್ಳಿಯನ್ನು ಬಿಡಬೇಕೆಂಬ ರಾಮಣ್ಣನ ಸಲಹೆಗೆ ಈತ ಬಹಳ ಸುಲಭವಾಗಿ ಒಪ್ಪಿಕೊಂಡು ಇಂಚಲಾಪುರಕ್ಕೆ ಬಂದುದು ಆತನ ವ್ಯಕ್ತಿತ್ವಕ್ಕೆ ಅಷ್ಟು ಸಹಜವೆಂದು ತೋರುವುದಿಲ್ಲ. ಆದರೆ ಆತ ಇಂಚಲಾಪುರಕ್ಕೆ ಬಂದರೂ ತನ್ನನ್ನು ನಂಬಿದ ಜನರನ್ನು ಕೈಬಿಡದೆ ಅವರ ಹಿತಕ್ಕಾಗಿ ಪ್ರಯತ್ನಿಸುತ್ತಿರುವುದು ಅವನ ಘನತೆ ಯನ್ನು ಎತ್ತಿ ಹಿಡಿಯಲು ಸಹಾಯಕವಾಗಿರುವ ಅಂಶ. ಆತನ ಪ್ರಯತ್ನದಿಂದ ಆ ಜಾಗೀರಿಯ ಜನ ಬಂಧಮುಕ್ತರಾಗುತ್ತಾರೆ. ಅದರಲ್ಲಿಯೇ ಧನ್ಯತೆಯನ್ನು ಕಂಡ ಆತ ಈ ಜೀವನದಿಂದಲೇ ಮುಕ್ತನಾಗಬೇಕಾಗುತ್ತದೆ.

ಇನ್ನು ಅಭಿನಯದ ದೃಷ್ಟಿಯಿಂದ ಅಲ್ಲಿ ಇಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗಬಹುದು. ಕೆಲವು ಭಾಗಗಳನ್ನು ಕೈಬಿಡಬೇಕಾಗಬಹುದು. ಹಾಡುಗಳನ್ನ ಸಂಕ್ಷೇಪಗೊಳಿಸಬೇಕಾಗಬಹುದು. ಇಲ್ಲವಾದರೆ ಪ್ರೇಕ್ಷಕರ ಮನಸ್ಸನ್ನು ಇದು ಏಕಪ್ರಕಾರವಾಗಿ ಸೆರೆಹಿಡಿದೀತೆಂದು ಹೇಳುವುದು ಕಷ್ಟ. ಒಟ್ಟನಲ್ಲಿ ಇದು ರಚಿತ ವಾದ ಕಾಲವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾದರೆ ಇದೊಂದು ಯಶಸ್ವಿ ಯಾದ ಸಾರ್ಥಕ ಪ್ರಯೋಗ ಎನ್ನಬಹುದು.

'ಯುಗಾಂತರ' ಒಂದು ಹೊಸ ರೀತಿಯ ಪ್ರಯೋಗ. 'ಜನನಾಯಕ'ದಲ್ಲಿ ಜಾಗೀ ರಿಯ ಹಳೆಯ ಕಥೆ, ಒಳಿತು ಕೆಡಕುಗಳ ಹೋರಾಟ ಚಿತ್ರಿತವಾಗಿದ್ದರೆ, 'ಯುಗಾಂತರ' ದಲ್ಲಿ ಜನಜೀವನದ ಚಿರಂತನ ಕಥೆ, ಹಳತು ಹೊಸತರ ತಿಕ್ಕಾಟ ಕಾಣುತ್ತದೆ. 'ಹೊಸ

...ಳಿನ ಸುಕುಮಾರ ಪ್ರಯೋಗ' ಎಂದು ಇದನ್ನು ಗೋಕಾಕರು ಕರೆದಿದ್ದಾರೆ; ಮತ್ತು ...ದರ ಅರ್ಥವೇನೆಂಬುದನ್ನು ಮುನ್ನುಡಿಯಲ್ಲಿ ಪ್ರಸ್ತಾಪಿಸಿದ್ದಾರೆ: ಒಂದರ್ಥದಲ್ಲಿ ...ೀವನದ ಮೌಲ್ಯಗಳೆಲ್ಲವೂ ಪರ್ವತದಷ್ಟು ಪುರಾತನ. "ಪ್ರೇಮ, ವಿವಾಹ, ತಾಯ್ತನ-...ವದಲ್ಲಿ ಒಂದು ದೃಷ್ಟಿಯಿಂದ ಹೊಸತೇನೂ ಇಲ್ಲ. ಕವಿ, ಸಮಾಜ ಸೇವಕ, ವಂಚಕ, ...ನಾತನಿ– ಈ ಪ್ರಕಾರಗಳೂ ಮಾನವನ ಜಾತಿಯಲ್ಲಿ ಕಾಣಿಸಿಕೊಂಡಿವೆ....ಆದರೆ ...ೀವನವು ದತ್ತಾತ್ರೇಯನಂತೆ ತ್ರಿಮೂರ್ತಿಯಾಗಿದೆ. ಕ್ಷರಪುರುಷ, ಅಕ್ಷರಪುರುಷ ...ರುಷೋತ್ತಮ—ಈ ತ್ರಿಕೂಟದ ಪವಾಡವು ಕಣಕಣದಲ್ಲಿಯೂ ಕಾಣುತ್ತದೆ. ಚಿರಂತನ ...ೆಯೂ ನೂತನತೆಯೂ ಅಮರತೆಯೂ ಸೃಷ್ಟಿಯ ಒಂದೊಂದು ಕಣದಲ್ಲಿ ಬೆರೆತು ...ೊಂಡಿವೆ. ಪ್ರತಿಯೊಂದು ಯುಗದಲ್ಲಿ ಚಿರಂತನತೆ ನೂತನತೆಗಳು ಬೆರೆಯುವ ...ಪ್ರಮಾಣವು ಬದಲಿಸುತ್ತದೆ. ನಾವು ನೂತನ ಎಂಬ ಶಬ್ದವನ್ನು ಪ್ರಯೋಗಿಸಿದಾಗ ...ಂದು ಯುಗದ ವಿಶೇಷ ಆವರಣವನ್ನು ಅನುಲಕ್ಷಿಸಿ ಮಾತನಾಡುತ್ತೇನೆ."—ಎಂದು ...ೂತನತೆಯ ಮೀಮಾಂಸೆ ಮಾಡಿದ್ದಾರೆ ಮುನ್ನುಡಿಯಲ್ಲಿ.

ಈ ಅರ್ಥದಲ್ಲಿ ಇಂದಿನ ಜಗತ್ತು ಒಂದು ಹೊಸ ಜೀವನವನ್ನು ಪ್ರವೇಶಿಸುತ್ತಿದೆ. ...ಾನವನ ಸಾಮಾಜಿಕ ಜೀವನದಲ್ಲಿ ಇದೊಂದು ಪರ್ವಕಾಲ. ದಿನದಿನಕ್ಕೆ ಅದ್ಭುತ ...ಕ್ತಿಯನ್ನು ಸಾಧಿಸುತ್ತಿರುವ ವೈಜ್ಞಾನಿಕ ಸಂಶೋಧನೆಗಳು ಜಗತ್ತಿನ ರೂಪವನ್ನೇ ...ದಲಿಸುತ್ತಿವೆ. ರಾಜಕೀಯ ಆರ್ಥಿಕ ಸಾಮಾಜಿಕ ವಿಚಾರಗಳಲ್ಲಿ ಅಪೂರ್ವ ಕ್ರಾಂತಿ ...ತಲೆದೋರುತ್ತದೆ. ಬಾಳಿನ ನಂಬಿಕೆ ಶ್ರದ್ಧೆಗಳ ಮೂಲ ಬೇರನ್ನೇ ಅದು ಹಿಡಿದು ಅಲ್ಲಾಡಿ...ಸುತ್ತಿದೆ. ಆಧುನಿಕ ವಿಚಾರಗಳು ವಿಚಾರವಂತ ಮನಸ್ಸಿನ ಆಲೋಚನೆಯ ದಿಕ್ಕನ್ನು ...ಹುಮುಖಗೊಳಿಸಿವೆ. ಇವುಗಳ ಗೊತ್ತುಗುರಿಗಳನ್ನು ಕುರಿತು ಅದು ವಿಚಾರಪರವಾಗು...ತ್ತದೆ. ಈ ಕ್ರಾಂತಿಯ ಮಹಾಪೂರದಲ್ಲಿ ಕೊಚ್ಚಿಹೋಗಬಹುದಾದ ಕಳೆಕಸಗಳನ್ನು ...ಂಡು ಅದು ಚಿಂತಿಸುವುದಿಲ್ಲ. ಆದರೆ ಆ ಭರದಲ್ಲಿ ಸುಂದರ ಪುಷ್ಪಗಳು, ಚಿರಂತನ ...ಮೌಲ್ಯಗಳು, ಜಾರಿಹೋಗುತ್ತಿರುವುದನ್ನು ಕಂಡಾಗ ವಿಚಾರಪರವಾಗುತ್ತದೆ. ಅಂತಹ ...ೈಚಾರಿಕ ದೃಷ್ಟಿಯ ಹಿನ್ನೆಲೆಯಲ್ಲಿ ಮೂಡಿಬಂದ ಕೃತಿ 'ಯುಗಾಂತರ'.

ಮೂರು ಅಂಕಗಳ ಈ ನಾಟಕದಲ್ಲಿ ಕಂಡುಬರುವ ರಚನಾ ಕೌಶಲ ಮೆಚ್ಚತಕ್ಕದ್ದು. ...ನಾಟಕಕಾರರ ಉದ್ದೇಶವನ್ನು ಪರಿಣಾಮಕಾರಿಯಾಗಿ ಪ್ರತಿಬಿಂಬಿಸುವುದರಲ್ಲಿ ಇದು ...ಯಶಸ್ವಿಯಾಗಿದೆ. ದೆಹಲಿಯ ಒಂದು ಶ್ರೀಮಂತ ಸಂಸಾರ, ಅಂತೆಯೇ ಮಧುರೆಯ ...ಕ್ಷ್ಮೀಪುತ್ರ ಅವನ ಹೆಂಡತಿ, ಇವರ ಮಧ್ಯದಲ್ಲಿ ಒಬ್ಬ ಕವಿ, ಇನ್ನೊಬ್ಬಳು ಕಮ್ಯೂನಿಸಂ ...ವರನಾಡಿಗಳ ಕಾಮ್ರೇಡ್ ಮೃಣಾಲಿನಿ, ಇವರಿಗೆ ಹಿನ್ನೆಲೆಯಾಗಿ ಸ್ವಾರ್ಥಪರ ಡಾಂಭಿಕ ...ಕಾರ್ಯಕರ್ತ ಬನ್ಸಿಲಾಲ್—ಇವಿಷ್ಟು ಮುಖ್ಯ ಪಾತ್ರಗಳಿಂದ ಇದನ್ನು ಸಾಧಿಸಿದ್ದಾರೆ. ...ದಲಾಗುತ್ತಿರುವ ಇಂದಿನ ಸಮಾಜದ ಮತ್ತು ವೈಯಕ್ತಿಕ ಸಾಧನೆಯ ಚಿತ್ರವನ್ನು

ನಾಟಕ ಮಾಡಿಕೊಡುತ್ತದೆ. ಅಷ್ಟೇ ಅಲ್ಲದೆ ಅವುಗಳ ಸ್ವಾಸ್ಥ್ಯಕ್ಕೆ ಕಾರಣವಾಗಬಹುದಾದ ಚಿರಂತನ ಮೌಲ್ಯಗಳತ್ತ ಗಮನ ಸೆಳೆಯುತ್ತದೆ. ನಾಟಕದ ಉದ್ದೇಶವೇ ಅದು; ವೈಯಕ್ತಿಕ ಮತ್ತು ಸಾಮಾಜಿಕ ತುಮುಲದಲ್ಲಿ ಆಂತರಂಗಿಕ ಶಾಂತಿಯನ್ನೂ ಸಾಮಾಜಿಕ ವ್ಯಸ್ಥೆಯನ್ನೂ ಕಂಡುಕೊಳ್ಳುವ ಮಾರ್ಗವನ್ನು ಸೂಚಿಸುವುದು. ಅದನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ ಗೋಕಾಕರು.

ನಾಟಕದ ಪ್ರಾರಂಭವೇ ಕುತೂಹಲ ಪೂರ್ಣವಾಗಿದೆ. ದಿಲ್ಲಿಯ ರೈಲ್ವೆ ನಿಲ್ದಾಣದಲ್ಲಿ ನಾಟಕ ಪ್ರಾರಂಭವಾಗುತ್ತದೆ. ದಿಲ್ಲಿಯ ಗರ್ಭಶ್ರೀಮಂತ ಕಿಶನ್‌ಕಿಶೋರ ಅದುವರೆಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸಿ ಬೇಸರಗೊಂಡು ಧಾರ್ಮಿಕ ವೃತ್ತಿಗೆ ಮನಸೋತಿದ್ದಾನೆ; ತನ್ನ ಹೆಂಡತಿ ರುಕ್ಮಿಣಿದೇವಿಯೊಡನೆ ದಿಲ್ಲಿಯನ್ನು ಬಿಟ್ಟು ಶಾಂತ ಜೀವನಕ್ಕಾಗಿ ಹೊರಟದ್ದಾನೆ. ಆದರೆ ಮಥುರೆಯ ಶ್ರೀಮಂತ ಕಾಂತಿಚಂದ್ರ ಅದುವರೆಗೂ ಪಾಲಿಸಿಕೊಂಡು ಬಂದ ಧಾರ್ಮಿಕ ವೃತ್ತಿಗೆ ಬೇಸತ್ತು ಸಮಾಜ ಸೇವೆಗೆ ಧುಮುಕುವ ನಿರ್ಧಾರದಿಂದ ತನ್ನ ಪತ್ನಿ ರೋಹಿಣಿ ದೇವಿಯೊಡನೆ ದಿಲ್ಲಿಗೆ ಬಂದಿದ್ದಾನೆ. ಇಲ್ಲಿರುವ ಅವನ ಆಪ್ತರೊಬ್ಬರ ಮಗಳು ಕಾಮ್ರೇಡ್ ಮೃಣಾಲಿನಿ ಅವರನ್ನು ಕರೆದೊಯ್ಯಲು ರೈಲು ನಿಲ್ದಾಣಕ್ಕೆ ಬರಬೇಕಾಗಿತ್ತು. ರೈಲು ಬಂದರೂ ಆಕೆ ಇನ್ನೂ ಬಾರದುದರಿಂದ ನಿಲ್ದಾಣದ ಒಂದನೇ ತರಗತಿಯ ತಂಗುಮನೆಗೆ ಅವರು ಬರುತ್ತಾರೆ. ಅಲ್ಲಿ ದಿಲ್ಲಿಯನ್ನು ಬಿಟ್ಟು ಹೊರಡಲು ಸಿದ್ಧರಾಗಿ ಬಂದು ತಮ್ಮ ರೈಲಿಗಾಗಿ ಕಾಯುತ್ತಿರುವ ಕಿಶನ್‌ಕಿಶೋರ ದಂಪತಿಗಳ ಪರಿಚಯವಾಗುತ್ತವೆ. ಹೀಗೆ ಒಬ್ಬರು ಕೈಬಿಟ್ಟ ಧರ್ಮವನ್ನು ಇನ್ನೊಬ್ಬರು ಎತ್ತಿಕೊಳ್ಳಲು ಉದ್ದೇಶಿಸಿರುವ ಈ ಎರಡು ಸಂಸಾರಗಳು ದಿಲ್ಲಿಯ ರೈಲುನಿಲ್ದಾಣದಲ್ಲಿ ಆಕಸ್ಮಿಕವಾಗಿ ಸಂಧಿಸುವ ಘಟನೆಯಿಂದ ನಾಟಕ ಪ್ರಾರಂಭವಾಗುತ್ತದೆ.

ಮೊದಲನೆಯ ಅಂಕದ ಮೊದಲನೆ ದೃಶ್ಯ ಮುಗಿಯುವ ವೇಳೆಗೆ ನಾಟಕದ ಪ್ರಮುಖ ಪಾತ್ರಗಳೆಲ್ಲಾ ಪರಿಚಯವಾಗುತ್ತದೆ. ದಿಲ್ಲಿಯಲ್ಲಿ ಸಾಕಷ್ಟು ಕಾಲ ಸಾರ್ವಜನಿಕ ಜೀವನದಲ್ಲಿ ಪಳಗಿದ ಕಿಶನ್‌ಕಿಶೋರ ತನ್ನ ಕಹಿ ಅನುಭವಗಳನ್ನು ಹೇಳುತ್ತಾನೆ. ಕಾಂತಿಚಂದ್ರನಿಗೆ ಸ್ವಾರ್ಥಸಾಧಕ ಸೇಠ ಬನ್ಸಿಲಾಲನ ವಿಚಾರವೂ ಅಲ್ಲಿ ಬರುತ್ತದೆ. ಯಾರ ಪಾತ್ರೆಯೇ ಆಗಲಿ ತನ್ನ ಬೇಳೆಯನ್ನು ಬೇಯಿಸಿಕೊಳ್ಳುವ ಆತನ ವಿಚಾರವಲ್ಲಿ ಎಚ್ಚರಿಕೆಯಿಂದಿರುವಂತೆ ಹೇಳುತ್ತಾನೆ. ಕಾಂತಿಚಂದ್ರನಿಗೆ ದಿಲ್ಲಿಯಲ್ಲಿ ಒಬ್ಬರು ಆಪ್ತರಿದ್ದಾರೆ. ಅವರ ಮಗಳೇ ಮೃಣಾಲಿನಿ. ಇದೊಂದು ವಿಶಿಷ್ಟವಾದ ಪಾತ್ರ ಈ ನಾಟಕದಲ್ಲಿ. ಕಮ್ಯೂನಿಸ್ಟ್ ತತ್ವಗಳಿಗೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡ ದಿಟ್ಟತರುಣಿ ಆಕೆ. ಕಾಂತಿಚಂದ್ರ ಹೇಳುವಂತೆ ಆಕೆ ಅಗ್ನಿಯ ಪುಟಚೆಂಡಿದ್ದಂತೆ. ಬಿಚ್ಚುಮನಸ್ಸು ಆಕೆಯದು; ಆದರೆ ಚುಚ್ಚುಮಾತಿನಲ್ಲಿ ಆಕೆಯ ನಾಲಗೆ ತುಂಬಾ ಹರಿತ. ಪ್ರಥಮ ಪರಿಚಯದಲ್ಲಿಯೇ ಕಿಶನ್‌ಕಿಶೋರನನ್ನು ಕಟುವಾಗಿ ಟೀಕಿಸುತ್ತಾಳೆ. ನಾಟಕದ

ಬದ್ಧಕ್ಕೂ ಈ ದಿಟ್ಟತನ ಕಾಣುತ್ತದೆ. ಇಲ್ಲಿ ಬರುವ ಇನ್ನೊಂದು ಪಾತ್ರ ಕೋಸಲೇಂದ್ರ. ಪರಿಚಿತ ಉದಿತೋದಿತ ಕವಿ. ಕಿಶನ್‌ಕಿಶೋರರಿಗೆ ಆಪ್ತನಾದವನು. ಅವರ ಜೊತೆಯಲ್ಲಿ ಆತನೂ ಈಗ ಮಾಹುವಿಗೆ ಹೊರಟಿದ್ದಾನೆ ನಾಲ್ಕುದಿನ ಇದ್ದು ಬರಲು. ಅದನ್ನು ಕೇಳಿದ ಮೃಣಾಲಿನಿ "ನೀವು ನರ್ಮದಾ ತೀರದಿಂದ ಮರಳಿಬರುವ ಕಾರಣವೇ ಇಲ್ಲ. ವನಶ್ರೀ ಬೆಳದಿಂಗಳು, ಹೂ ಹಸಿರುಹುಲ್ಲು, ಇವು ಅಲ್ಲಿ ಬೇಕಾದಷ್ಟಿರಬಹುದು. ಅಲ್ಲಿಯೇ ನೀವು ಸಮಾಧಿಸ್ಥರಾಗಿ ಕುಳಿತುಬಿಡಿ. ಜೀವಂತಸಮಾಜದಲ್ಲಿ ನಿಮಗೆ ಸ್ಥಾನವಿಲ್ಲ." ಎಂದು ಹೇಳುವ ವ್ಯಂಗ್ಯವಾದ ಮಾತಿಗೆ ಆತ ಕೊಡುವ ಉತ್ತರ: "ಬಂದಮೇಲೆ ನೋಡೋಣ, ನಿಮ್ಮ ಜೀವಂತ ಸಮಾಜ ಹೇಗಿರುವುದೆಂದು? ಅಲ್ಲಿಯವರೆಗೆ ನಮಸ್ತೇ!" —ಈ ಮಾತು ಅರ್ಥವತ್ತಾಗಿ ಕಾಣುತ್ತದೆ. ಮುಂದೆ ಆತನೇ ಆಕೆಗೆ ಜೀವಂತ ಸಮಾಜದ ದರ್ಶನ ಮಾಡಿಕೊಡುವ ಸನ್ನಿವೇಶ ಬರುತ್ತದೆ. ಅದನ್ನು ಧ್ವನಿಪೂರ್ವಕವಾಗಿ ಇಲ್ಲಿ ಸೂಚಿಸಿರುವಂತಿದೆ.

ನಾಟಕದ ಬೆಳವಣಿಗೆಯಲ್ಲಿ ಈ ಪಾತ್ರಗಳು ಅರಳುತ್ತಾ ಹೋಗುತ್ತವೆ. ಕಾಂತಿಚಂದ್ರ ರೋಹಿಣಿದೇವಿ ಬಹುವಾಗಿ ಬಯಸಿಬಂದ ಸಾಮಾಜಿಕ ಜೀವನದ ಚಿತ್ರ ಒಂದು ಕಡೆ; ಪ್ರಶಾಂತ ವಾತಾವರಣದ ಆಧ್ಯಾತ್ಮಿಕ ಜೀವನವನ್ನು ಬಯಸಿಹೋದ ಕಿಶನ್‌ಕಿಶೋರರ ಸಾಧನೆ ಇನ್ನೊಂದು ಕಡೆ;—ಇವು ಜೊತೆ ಜೊತೆಯಲ್ಲಿಯೇ ಚಿತ್ರಿತವಾಗಿವೆ. ಇಬ್ಬರೂ ತಮ್ಮ ತಮ್ಮ ಕಾರ್ಯಗಳಲ್ಲಿ ವಿಫಲರಾಗುತ್ತಾರೆ; ಮನಶ್ಶಾಂತಿಯನ್ನು ಕಳೆದುಕೊಳ್ಳುತ್ತಾರೆ. ಬನ್ಸಿಲಾಲನಂತಹ ಗೋಮುಖವ್ಯಾಘ್ರಗಳಿಂದ ಕಾಂತಿಚಂದ್ರನಿಗೆ ಬಹಳ ಕಟುವಾದ ಅನುಭವ ಉಂಟಾಗುತ್ತದೆ. ಅನಾಥಾಶ್ರಮದ ಅಧ್ಯಕ್ಷನಾಗುವಲ್ಲಿ, ಅಸೆಂಬ್ಲಿ ಸದಸ್ಯನಾಗುವಲ್ಲಿ,—ಹೀಗೆ ಎಲ್ಲೆಲ್ಲಿಯೂ ಸೇಠ್ ಬನ್ಸಿಲಾಲನ ಕುಟಿಲೋಪಾಯವೇ ಗೆಲ್ಲುತ್ತದೆ. ಅದರಿಂದಾಗಿ ಕಾಂತಿಚಂದ್ರ ರೋಹಿಣಿಯರ ಆಶೆಗಳೆಲ್ಲಾ ಅಲ್ಲಲ್ಲೇ ಕಮರುತ್ತವೆ; ಪರಸ್ಪರ ದ್ವೇಷ ಬೆಳೆಯುತ್ತದೆ. ಆ ಯೋಚನೆಯಲ್ಲಿಯೇ ಕಾಂತಿಚಂದ್ರ ಕಾಶಿಗೆ ಓಡಿಹೋಗುತ್ತಾನೆ. ಕೊನೆಯ ಪ್ರಯತ್ನವೆಂಬಂತೆ ಬನ್ಸಿಲಾಲನ ಮನೆಗೆ ಹೋಗಿ ಗಂಡನಿಗೆ ಅವಕಾಶ ಕೊಡುವಂತೆ ರೋಹಿಣಿದೇವಿ ಪ್ರಾರ್ಥಿಸಿಕೊಂಡದ್ದೂ ವ್ಯರ್ಥವಾಗುತ್ತದೆ. ವಾಸ್ತವವಾಗಿ ಇವರಲ್ಲಿ ಯಾರೂ ತತ್ವಕ್ಕಾಗಿ ನಿಂತವರಲ್ಲ. ಮೃಣಾಲಿನಿ ಹೇಳುವಂತೆ "ಇದು ಪ್ರತಿಷ್ಠೆಗಳ ತಾಕಲಾಟ; ದುರಭಿಮಾನಗಳ ಗುದಮುರಿಗೆ." ಬನ್ಸಿಲಾಲ ಸ್ವಾರ್ಥಿಯಾದರೆ, ಇವರು ಅಹಂಕಾರಿಗಳು. ಈ ಅಹಂಕಾರಕ್ಕೆ ಮತ್ತೆಮತ್ತೆ ಪೆಟ್ಟು ಬಿದ್ದಾಗ ಅದರಿಂದ ಪಾಠ ಕಲಿಯದೆ, ದಿಲ್ಲಿಯನ್ನೇ ಬಿಡಲು ನಿರ್ಧರಿಸುತ್ತಾರೆ.

ಅತ್ತ ಕಿಶನ್‌ಕಿಶೋರನ ಕಥೆಯೂ ಹೀಗೆ ಆಗಿದೆ. ಆ ದಂಪತಿಗಳು ಮಾಹುವಿನ ಪವಿತ್ರ ನರ್ಮದೆಯ ತೀರದಲ್ಲಿ ಒಂದು ದೊಡ್ಡ ಬಂಗಲೆಯನ್ನು ಧಾರ್ಮಿಕ ಜೀವನದ ವಾಸಕ್ಕಾಗಿ ಆರಿಸಿಕೊಂಡಿದ್ದಾರೆ. ಪ್ರಾರಂಭದಲ್ಲೇನೋ ಆ ಹೊಸ ವಾತಾವರಣ

ಉತ್ಸಾಹಕರವಾಗಿಯೇ ಇತ್ತು. ಕೋಸಲೇಂದ್ರನನ್ನು ಅಲ್ಲಿಯೇ ಇರುವಂತೆ ಅವರು ಒತ್ತಾಯಿಸುತ್ತಾರೆ. "ಇಲ್ಲಿ ಕೃತ್ರಿಮತೆ ಇಲ್ಲ. ಈ ಘಟ್ಟದ ಹತ್ತಿರ ಬನ್ಸಿಲಾಲರಂತಹ ಘಟಸರ್ಪಗಳಿಲ್ಲ. ನಗರದ ನಾಗರಹಾವುಗಳಿಲ್ಲ." ಎನ್ನುತ್ತಾನೆ ಕಿಶನ್‌ಕಿಶೋರ. ಅದಕ್ಕೆ ಕೋಸಲೇಂದ್ರ ಕೊಡುವ ಉತ್ತರ ಮನೋಜ್ಞವಾಗಿದೆ. "ಅದೆಲ್ಲ ನಿಜ. ಆದರೆ ಇಲ್ಲಿ ಅರಣ್ಯದ ಅಜನರಗಳಿರಬಹುದಲ್ಲವೇ? ಅಲ್ಲದೆ ನಗರದ ಹಾವುಗಳೂ ದೇವರ ಸೃಷ್ಟಿಯಲ್ಲಿ ಒಂದು ಭಾಗ. ಅವುಗಳನ್ನು ತಿಳಿಯದೆ ನಮ್ಮ ಅನುಭವವು ಪೂರ್ಣವಾಗುವುದೆಂತು?"—ಎಂದು ಜೀವನದ ಪರಿಪೂರ್ಣತೆಯನ್ನು ವಿವರಿಸುತ್ತಾನೆ. ಅದಕ್ಕೆ ಅವರು ಆತನನ್ನು ಕುರಿತು "ದಿಲ್ಲಿಯ ಆಸೆ ನಿನಗೆ ಬಿಟ್ಟಿಲ್ಲ; ಇನ್ನು ನಿನ್ನ ಮನಸ್ಸು ಪರಿಪಕ್ವವಾಗಿಲ್ಲ" ಎನ್ನುತ್ತಾರೆ. ಅದಕ್ಕೆ ಆತ ಉತ್ತರ ಕೊಡುತ್ತಾ ಕೊನೆಯಲ್ಲಿ "....ಇನ್ನು ಕೆಲವು ತಿಂಗಳ ಮೇಲೆ ನಾನು ಮತ್ತೆ ಇಲ್ಲಿ ಬರುತ್ತೇನೆ. ಆಗ ಇನ್ನೂ ಇದೇ ವಿಚಾರ ನಿಮ್ಮ ತಲೆಯಲ್ಲಿ ಸುಳಿಯುತ್ತಿದ್ದರೆ ನಾನೂ ನಿಮ್ಮ ಜೊತೆಗೆ ಇಲ್ಲಿ ಇದ್ದುಬಿಡುತ್ತೇನೆ." ಎಂದು ಅವರಿಂದ ಒಪ್ಪಿಗೆ ಪಡೆದು ಹೊರಡುತ್ತಾನೆ, ಕೋಸಲೇಂದ್ರ.

ಆತನ ಮಾತು ನಿಜವಾಗುತ್ತದೆ. ಕೆಲವು ತಿಂಗಳಲ್ಲೇ ಕಿಶನ್‌ಕಿಶೋರನ ಧರ್ಮಸಾಧನೆಯ ಕನಸು ಕುಸಿದುಬೀಳುತ್ತದೆ. ನರ್ಮದೆಯ ತೀರದ ಆ ಏಕಾಂತಗೃಹದಲ್ಲಿ ಅರಣ್ಯದ ಅಜಗರಗಳ ಪರಿಚಯವಾಗುತ್ತದೆ. ಒಂದು ರಾತ್ರಿ ಅರಣ್ಯದ ಹೆಬ್ಬಾವು ಮನೆಯಲ್ಲಿ ನುಗ್ಗುತ್ತದೆ. ದೀಪಗಳೂ ಆರಿಹೋಗಿವೆ. ಸೇವಕರು ನಿಸ್ಸಹಾಯಕವಾಗಿ ಭಯದಿಂದ ಬಡಬಡಿಸುತ್ತಿದ್ದಾರೆ. ಅದು ಒಬ್ಬನನ್ನು ಕಚ್ಚಿಯೂಬಿಟ್ಟಿದೆ. ರುಕ್ಮಿಣೀದೇವಿ ಭಯದಿಂದ ಮೂರ್ಛೆಹೋಗುತ್ತಾಳೆ. ಪ್ರಕೃತಿ ಕೇವಲ ಸೌಂದರ್ಯರೂಪಿಣಿ ಮಾತ್ರನಲ್ಲ, ಭಯಂಕರಮುಖಿಯೂ ಹೌದೆಂಬುದರ ಅನುಭವ ಅವರಿಗೆ ಹೆಜ್ಜೆಹೆಜ್ಜೆಗೂ ಆಗುತ್ತದೆ. ಸೇವಕರೆಲ್ಲಾ ಬಿಟ್ಟು ಹೋಗುತ್ತಾರೆ. ಹೊಸಬರಾರೂ ಅಲ್ಲಿ ಬಂದಿರಲು ಸಿದ್ಧರಿಲ್ಲ. ಕಾಡುಪ್ರಾಣಿಗಳ ಹೆದರಿಕೆಯೂ ಆವರಿಸಿದೆ. ಇದರ ಮಧ್ಯದಲ್ಲಿ ಧ್ಯಾನ ಜಪ ತಪಗಳು ಹಾರಿಹೋಗಿವೆ. ಬಂದ ಕೆಲವು ತಿಂಗಳುಗಳಲ್ಲಿಯೇ ಅಲ್ಲಿಂದ ಹೊರಡಲು ಗಂಟುಮೂಟೆ ಕಟ್ಟಿದ್ದಾರೆ. ಆ ವೇಳೆಗೆ ಮತ್ತೆ ಅಲ್ಲಿಗೆ ಬರುತ್ತಾನೆ ಕೋಸಲೇಂದ್ರ.

ಕೋಸಲೇಂದ್ರ ಒಬ್ಬನೇ ಬಂದಿಲ್ಲ; ಮೃಣಾಲಿನಿಯನ್ನು ಕರೆದು ತಂದಿದ್ದಾನೆ. ಆಕೆ ಮೊದಲಿನ ಮೃಣಾಲಿನಿಯಲ್ಲ. ಪುಟಿಯುವ ಅಗ್ನಿ ಚಂಡಿನಂತಿದ್ದವಳು ಈಗ ನವವಧುವಿನ ಅನುರಾಗದಿಂದ ಆರಕ್ತಳಾಗಿದ್ದಾಳೆ. ಅವಳಲ್ಲಿ ಉಂಟಾಗುವ ಈ ಪರಿವರ್ತನೆ ನಾಟಕದಲ್ಲಿ ಕುತೂಹಲಕರವಾದ ಭಾಗ. ಯಾರ ದಾಕ್ಷಿಣ್ಯಕ್ಕೂ ಒಳಗಾಗದ, ಹರಿತವಾದ ನಾಲಗೆಯ ಕ್ರಾಂತಿಕನ್ಯೆ ಆಕೆ. ತನಗೆ ಅತ್ಯಂತ ಆಪ್ತರಾದ ಕಾಂತಿಚಂದ್ರ ರೋಹಿಣಿದೇವಿಯರನ್ನೂ ಆಕೆ ಖಂಡಿಸದೆ ಬಿಡಳು. ಬನ್ಸಿಲಾಲನ ಸೋದರಳಿಯ ತನ್ನ ಕಾವ್ಯದ ಹುಚ್ಚಿನಲ್ಲಿ ಅವಳ ಬಳಿ ಪ್ರಣಯಭಿಕ್ಷೆ ಬೇಡಿದಾಗ "ಮೊದಲು ನಿನ್ನ ಕೆನ್ನೆಯ ಮೇಲೆ ರಷ್ಯಾದ

ಕೆಂಪು ಬಣ್ಣ ಮೂಡಲಿ" ಎಂದು ಕೆನ್ನೆಗೆ ಹೊಡೆಯುವಂತಹ ದಿಟ್ಟತನ ಆಕೆಯದು. ಪ್ರೇಮ ಮದುವೆ ಮೊದಲಾದ ಭಾವಗಳಿಗೆ ಆಕೆಯಲ್ಲಿ ಸ್ಥಾನವಿಲ್ಲ. ಅವೆಲ್ಲಾ ಬಂಡವಾಳಶಾಹಿಯ ಕುರುಹುಗಳೆಂದು ನಂಬಿದ್ದಾಳೆ ಆಕೆ. ಕಮ್ಯೂನಿಸ್ಟ್ ತತ್ವಪ್ರಚಾರವೊಂದೇ ಆಕೆಯ ಗುರಿ. ಅದಕ್ಕಾಗಿ ಬನ್ಸಿಲಾಲನಿಗೆ ಪಾಠ ಹೇಳುವುದಕ್ಕೂ ಆಕೆ ಸಿದ್ಧ. ಅಂತಹ ಒಂದು ಸನ್ನಿವೇಶದಲ್ಲಿ ಕೋಸಲೇಂದ್ರನಿಗೂ ಕಮ್ಯೂನಿಸ್ಟ್ ಗ್ರಂಥವೊಂದರ ಪರಿಚಯ ಮಾಡಿಕೊಡಲು ಒಪ್ಪಿಕೊಳ್ಳುತ್ತಾಳೆ.

ಕೋಸಲೇಂದ್ರನ ಕಾವ್ಯದ ವಿಚಾರದಲ್ಲಿ. ಆತನ ಭಾವುಕತೆಯ ವಿಚಾರದಲ್ಲಿ ಆಕೆಗೆ ವಿಶ್ವಾಸವಿಲ್ಲದಿದ್ದರೂ ಆತನನ್ನು ಕಂಡರೆ ಆಕೆಗೆ ಆದರವಿದೆ. ಕಮ್ಯೂನಿಸ್ಟ್ ಪಾಠ ಹೇಳಿಕೊಡುವ ನೆಪದಲ್ಲಿ ಅದು ಕ್ರಮೇಣ ಬೆಳೆಯುತ್ತದೆ. ಒಂದು ಅಗೋಚರವಾದ ಪರಿಣಾಮವನ್ನು ಆಕೆಯ ಮೇಲೆ ಬೀರುತ್ತದೆ ಕೋಸಲೇಂದ್ರನ ವ್ಯಕ್ತಿತ್ವ. "ಈಗ ನನ್ನ ಅಂತರಂಗದಲ್ಲಿಯೇ ಏನೋ ಒಂದು ಕ್ರಾಂತಿ ಎದ್ದಿದೆ. ಈ ಕ್ರಾಂತಿಯಲ್ಲಿ ಎಲ್ಲ ಅಭಿಪ್ರಾಯಗಳು ಸಂಜೆಯ ಮುಗಿಲಿನಲ್ಲಿ ವಿವಿಧ ಪಕ್ಷಿಗಳಂತೆ ಹಾರಾಡಹತ್ತಿವೆ. ಅವುಗಳಲ್ಲಿ ಯಾವುದು ನನ್ನದು, ಯಾವುದು ನನ್ನದಲ್ಲ ಎಂಬುದನ್ನು ಗುರುತಿಸಲು ನಾನು ಅಸಮರ್ಥಳಾಗಿದ್ದೇನೆ"—ಎನ್ನುವ ಮಾತಿನಲ್ಲಿ ಅವಳ ಆ ಸ್ಥಿತಿ ವ್ಯಕ್ತವಾಗುತ್ತದೆ. ಆದರೆ ಇನ್ನೂ ಅವಳಲ್ಲಿ "ದೇವರೆಂದರೆ ಬರಿ ಕಲ್ಲು, ಧರ್ಮ ಒಂದು ದೊಡ್ಡ ಒಳಸಂಚು" ಎಂದು ನುಡಿಯುವ ಆವೇಶ ಉಳಿದಿದೆ. ಅದನ್ನು ಹದಕ್ಕೆ ತರಲು ಉದ್ದೇಶಿಸಿ ಕೋಸಲೇಂದ್ರ ಒಂದು ಉಪಾಯವನ್ನು ಕೈಕೊಳ್ಳುತ್ತಾನೆ. "ವಿಜ್ಞಾನಿಯ ಅನುಭವದೊಂದಿಗೆ ಅನುಭಾವಿಯ ವಿಜ್ಞಾನವೂ ಇದೆ" ಎಂಬ ಸತ್ಯವನ್ನು ಅವಳಿಗೆ ಮನವಟ್ಟು ಮಾಡಿಕೊಡುವ ಉದ್ದೇಶ ಆತನದು. ಯಾವ ಮಂತ್ರ ತಂತ್ರವೂ ಇಲ್ಲದೆ ಆಕೆಗೆ ದೇವರನ್ನು ತೋರಿಸಿಕೊಡುವುದಾಗಿ ಹೇಳುತ್ತಾನೆ. ಅದಕ್ಕಾಗಿ ಒಂದು ಪವಿತ್ರ ಸ್ಥಾನಕ್ಕೆ ಪ್ರಯಾಣ ಕೈಕೊಳ್ಳಲು ಒಪ್ಪಿಸುತ್ತಾನೆ. "ಆದರೆ ಪುಸ್ತಕಗಳು ಮಾತ್ರ ಇಲ್ಲಿಯೇ ಇರಲಿ. ಇನ್ನು ಪುಸ್ತಕ ಪಾಂಡಿತ್ಯ ಸಾಕು. ಜಗತ್ತನ್ನಷ್ಟು ಕಣ್ತೆರೆದು ನೋಡೋಣ" ಎಂಬ ಆತನ ಮಾತು ಅರ್ಥವತ್ತಾಗಿದೆ.

ನರ್ಮದೆಯ ತೀರದ ಹಳ್ಳಿಯ ದಾರಿಯಲ್ಲಿ ಮೃಣಾಲಿನಿಯನ್ನು ನಡೆಸಿಕೊಂಡು ಬರುವ ದೃಶ್ಯ ಮತ್ತು ಅವಳಲ್ಲಿ ಆಗುವ ಪರಿರ್ತನೆಯ ಚಿತ್ರಣ, ನಾಟಕದ ಸಂವಿಧಾನ ಕೌಶಲಕ್ಕೆ ಸಾಕ್ಷಿಯಾಗಿದೆ. ದಿಲ್ಲಿಯನ್ನು ಬಿಟ್ಟು ಎಂದೂ ಹೊರಗೆ ಹೊರಟವಳಲ್ಲದ ಆಕೆ, ಹಳ್ಳಿಯ ರೈತನ ಕಷ್ಟ ಜೀವನವನ್ನು ಕಣ್ಣಾರೆ ಕಾಣುತ್ತಾಳೆ. ಆ ಸ್ಥಿತಿಯಲ್ಲಿಯೂ ಆತನ ಔದಾರ್ಯ ಅವಳ ಅಹಂಕಾರವನ್ನು ಅಪ್ಪಳಿಸುತ್ತದೆ; ಮಾನವೀಭಾವನೆಯನ್ನು ಮೂಡಿಸಲು ಕಾರಣವಾಗುತ್ತದೆ. ತಾನು ಹುಟ್ಟಿ ಬೆಳೆದ ಹಳ್ಳಿಯ ಕಡೆಗೇ ಆಕೆಯನ್ನು ಕರೆದೊಯ್ಯುತ್ತಾನೆ ಕೋಸಲೇಂದ್ರ. ತನ್ನ ಬಾಲ್ಯದ ಕಷ್ಟಗಳನ್ನೆಲ್ಲಾ ಹೇಳುತ್ತಾನೆ.

ತಂದೆ ತಾಯಿಗಳ ತ್ಯಾಗವನ್ನು ವರ್ಣಿಸುತ್ತಾನೆ. ಕರುಣೆ ಆನಂದಗಳೇ ಜೀವನದ ಮೂಲ ಸಾಮಗ್ರಿಗಳೆಂಬುದನ್ನು ಆ ಮೂಲಕ ಅವಳಲ್ಲಿ ಉಂಟುಮಾಡಿಕೊಡುತ್ತಾನೆ. ಮನುಷ್ಯನ ಹೃದಯವೇ ದೇವಮಂದಿರ, ವಾಙ್ಮಯವೇ ಅವನ ಪೂಜೆಯ ಮಂತ್ರ; ಆನಂದ ಕರುಣೆಗಳು ಮಾನವನ ಜೀವನ ಭಾವನೆಗಳಲ್ಲಿ ಸದಾ ಜಾಗ್ರತವಿರುವಂತೆ ತ್ರಿಕರಣಪೂರ್ವಕವಾಗಿ ಯತ್ನಿಸುವುದೇ ಅವನನ್ನು ಪೂಜಿಸುವ ವಿಧಾನ—ಎಂಬ ಆತನ ಮಾತುಗಳು ಆಕೆಗೆ ಹೊಸ ದೃಷ್ಟಿಯನ್ನು ತಂದುಕೊಡುತ್ತವೆ. ಸಂಪೂರ್ಣವಾಗಿ ಆತನಿಗೆ ಮಾರುಹೋಗುತ್ತಾಳೆ : "....ನನ್ನ ಉತ್ಸಾಹವನ್ನು ಕೋಸಲೇಂದ್ರನ ಬಾಳಿಗೆ ಜೊತೆಯಾಗಿಸುತ್ತೇನೆ. ಅವನ ದರ್ಶನವು ನನಗೆ ಹಣೆಗಣ್ಣಾಗಲಿ. ಇದೇ ಪಾಣಿಗ್ರಹಣ" ಎಂದು ತನ್ನನ್ನು ಅರ್ಪಿಸಿಕೊಳ್ಳುತ್ತಾಳೆ.

ಹೀಗೆ ಪರಿವರ್ತಿತಳಾದ ಮೃಣಾಲಿನಿಯೊಡನೆ ಕೋಸಲೇಂದ್ರ ಬರುತ್ತಾನೆ ಕಿಶನ್‌ಕಿಶೋರನ ಬಳಿಗೆ. ಈ ವೇಳೆಗೆ ಕಿಶನ್‌ಕಿಶೋರನ ಧಾರ್ಮಿಕ ಸಾಧನೆಗೆ ಇತಿಶ್ರೀಯಾಗಿ ಮಾಹುವಿನಿಂದ ಹೊರಡಲು ಗಂಟುಮೂಟೆ ಕಟ್ಟಿ ಕುಳಿತಿರುತ್ತಾರೆ ಆ ದಂಪತಿಗಳು. ಆ ವೇಳೆಯಲ್ಲಿ ಕೋಸಲೇಂದ್ರನನ್ನು ಕಂಡು ಅವರಿಗೆ ಸಂತೋಷವಾಗುತ್ತದೆ. ಆ ಅರಣ್ಯಕಾಂಡದ ತೊಂದರೆಗಳನ್ನೆಲ್ಲಾ ಹೇಳುತ್ತಾಳೆ ರುಕ್ಮಿಣೀದೇವಿ. ಅದನ್ನು ಕೇಳಿ ಕೋಸಲೇಂದ್ರ ಹೇಳುವ ಮಾತು : "ಅಡವಿಯಲ್ಲಿ ಬಂದು ನಿಂತು ಹಾವು, ಹುಲಿ ಎಂದರೆ ಹೇಗೆ ರುಕ್ಮಿಣಿದೇವಿಯವರೇ. ಸಮಾಜದಲ್ಲಿದ್ದರೆ ಎರಡು ಕಾಲಿನ ಹುಲಿ ತೊಂದರೆ ಕೊಡುತ್ತವೆ" ಎಂಬುದು ಅರ್ಥವತ್ತಾಗಿದೆ. ಅಲ್ಲದೆ ನಿರಾಶೆಗೊಂಡ ಅವರಿಗೆ ಆತ ಮಾರ್ಗದರ್ಶಕವಾದ ಒಂದು ಸೂಚನೆ ಕೊಡುತ್ತಾನೆ : ನಮ್ಮ ಅಪೂರ್ಣತೆಗಳನ್ನು ನಾವೇ ನೀಗಿಕೊಳ್ಳಬೇಕು. ಆದರೆ ಅದಕ್ಕಾಗಿ ನಾವು ಕಾಡಿಗೆ ಹೋಗಬೇಕಾಗಿಲ್ಲ. ನಾವಿದ್ದಲ್ಲಿಯೇ ಆ ಸಾಧನೆಯನ್ನು ಕೈಕೊಳ್ಳಬೇಕು. ಧ್ಯಾನದ ಹಾದಿಯಲ್ಲಿ ಮುಂದುವರಿಯುವುದಕ್ಕೆ ಮಾರ್ಗದರ್ಶಕವಾಗಿ ಅರವಿಂದ ರಮಣ ಮೊದಲಾದ ಮಹರ್ಷಿಗಳ ಆಶ್ರಮಗಳ ನೆರವನ್ನು ಪಡೆಯಬಹುದು. ಇವು ಆಧ್ಯಾತ್ಮ ಸಂಶೋಧನದ ಪ್ರಯೋಗಶಾಲೆಗಳು. ಇವುಗಳ ನೆರವಿನಿಂದ ಆಗಾಗ ಇವುಗಳ ನೆರವನ್ನು ಪಡೆದು ನಾವಿರುವ ಸ್ಥಳದಲ್ಲಿಯೇ ನಮ್ಮ ಆತ್ಮಶಕ್ತಿಯನ್ನು ಬೆಳಸಿಕೊಳ್ಳಬಹುದು—ಈ ಮಾತು ಕಿಶನ್‌ಕಿಶೋರನಿಗೆ ಹಿಡಿಯುತ್ತದೆ. ಮೃಣಾಲಿನಿಯ ಪರಿವರ್ತನೆಯನ್ನು ಕಂಡು ಅವರ ಹಿಗ್ಗು ಇನ್ನು ಹೆಚ್ಚುತ್ತದೆ. ಆ ದಂಪತಿಗಳು, ತಮಗಿಲ್ಲದಿರುವ ಮಗ ಸೊಸೆಯರನ್ನು ಇವರಲ್ಲಿ ಕಂಡುಕೊಳ್ಳುತ್ತಾರೆ.

ಅಂತೆಯೇ ಇವರು ಕಾಂತಿಚಂದ್ರ ದಂಪತಿಗಳಿಗೆ ಮಗಳು ಅಳಿಯ ಆಗಿ ಪರಿಣಮಿಸುತ್ತಾರೆ. ಅವರ ಕಾರ್ಯಸಾಧನೆಗೂ ಮಾರ್ಗವನ್ನು ತೋರಿಸುತ್ತಾನೆ ಕೋಸಲೇಂದ್ರ. "ಸಂಪತ್ತು ಅಧಿಕಾರ ಕೀರ್ತಿಗಳನ್ನು ದಾಟದ ಆನಂದ" ವನ್ನು ಪಡೆಯುವತ್ತ ಅವರನ್ನು ತಿರುಗಿಸುತ್ತಾನೆ. ಅದಕ್ಕಾಗಿ ಅವರು ದಿಲ್ಲಿಯನ್ನು ಬಿಡಬೇಕಿಲ್ಲ. ದಿಲ್ಲಿಯಲ್ಲಿದ್ದೆ ಅವನ್ನು

ಸಾಧಿಸಬಹುದೆಂಬುದನ್ನು ಮನದಟ್ಟು ಮಾಡಿಕೊಡುತ್ತಾನೆ. ಬನ್ಸಿಲಾಲರಂತಹವರ ಮೇಲೆ ಯುದ್ಧ ಸಾರಲೇಬೇಕು. ಅಂತಹವರಿಗಾಗಿ ಅಂಜಿ ಹಿಂಜರಿಯಬೇಕಾಗಿಲ್ಲ. ಸಂಪತ್ತು ಕೀರ್ತಿ ಅಧಿಕಾರಗಳ ಆಮಿಷವನ್ನು ದಾಟಿ ಸಮಾಜಸೇವೆಗೆ ಕಂಕಣ ಕಟ್ಟಬೇಕು. ಕೇವಲ ಮಾರ್ಕ್ಸವಾದದ ತರ್ಕದಿಂದಲೂ ಸಮಾಜದ ಹಿತ ಸಿದ್ಧಿಸದು. ಅವುಗಳ ಜೊತೆಗೆ ಮಾನವೀಯ ಭಾವನೆಗಳು ಒಡಗೂಡಬೇಕು. ಈ ಮೊದಲಾದ ಅಂಶಗಳನ್ನು ಕೋಸಲೇಂದ್ರನ ಪಾತ್ರದ ಮೂಲಕ ಅಭಿವ್ಯಕ್ತಪಡಿಸಿದ್ದಾರೆ ಗೋಕಾಕರು. ಪ್ರಾರಂಭದಲ್ಲಿ ಮದುವೆ ಎಂದರೆ ಉರಿದು ಬೀಳುತ್ತಿದ್ದ ಮೃಣಾಲಿನಿ ನಾಟಕದ ಕೊನೆಯಲ್ಲಿ ಮಗುವಿನ ತಾಯಾಗಲಿರುವ ಸುಮುಹೂರ್ತವನ್ನು ನಿರೀಕ್ಷಿಸುತ್ತಿರುವುದು ಅವಳ ಜೀವನದ ಪೂರ್ಣತೆಗೆ ಸಾಕ್ಷಿಯಾಗಿದೆ. ಆ ಪೂರ್ಣತೆಯ ಸೂಚಕವಾದ ಕವನ ಒಂದನ್ನು ಹೇಳುತ್ತಾ ಮೃಣಾಲಿನಿ ಕೋಸಲೇಂದ್ರನ ಮುಂಗುರುಳು ನೇವರಿಸುತ್ತಿರುವ ಚಿತ್ರದೊಡನೆ ನಾಟಕ ಮುಕ್ತಾಯವಾಗುವುದಂತೂ ಅತ್ಯಂತ ಧ್ವನಿಪೂರ್ಣವಾಗಿದೆ.

ಒಟ್ಟಿನಲ್ಲಿ 'ಯುಗಾಂತರ' ಒಂದು ಒಳ್ಳೆಯ ಪ್ರಯತ್ನ. ಜೀವನದ ಎಲ್ಲ ಸಮಸ್ಯೆಗಳಿಗೂ ಸಮನ್ವಯವೇ ಸರಿಯಾದ ಉತ್ತರ ಎಂಬುದು ಇಲ್ಲಿ ಮುಖ್ಯವಾಗಿ ಕಂಡು ಬರುವ ದೃಷ್ಟಿ. ಆಧ್ಯಾತ್ಮವೂ ಅತಿಯಾಗಿ ಅದಕ್ಕಾಗಿ ಕಾಡಿಗೆ ಹೋಗುವಂತಾಗಬಾರದು. ಸಮಾಜಸೇವೆಯೂ ಭೂತವಾಗಿ ಅಧಿಕಾರ ಅಂತಸ್ತುಗಳ ಭ್ರಾಂತಿಗೆ ಕಾರಣವಾಗಬಾರದು. ಸಮಾನತೆಯ ಕಲ್ಪನೆಯು ಅತಿಯಾಗಿ ಮಾನವೀಯ ಭಾವನೆಗಳನ್ನೇ ನಾಶಮಾಡುವಂತಾಗಬಾರದು. ಈ ಅತಿರೇಕಗಳಿಂದ ಬಳಲುತ್ತಿದ್ದ ಕಿಶನ್‌ಕಿಶೋರ, ಕಾಂತಿಚಂದ್ರ, ಮೃಣಾಲಿನಿ ಇವರಿಗೆ ಸಮನ್ವಯದ ಸಂಜೀವಿಯನ್ನೂಡುತ್ತಾನೆ ಕೋಸಲೇಂದ್ರ. ಪಾತ್ರ ಪರಿಪೋಷಣೆ, ಸಂವಿಧಾನ ಕೌಶಲ್ಯ, ಸಂಭಾಷಣೆಗಳೂ ನಾಟಕವನ್ನು ಕುತೂಹಲಕರವಾಗಿ ಬೆಳಸಿಕೊಂಡು ಹೋಗುವುದಲ್ಲದೆ ಮೂಲ ಉದ್ದೇಶವನ್ನು ಪರಿಣಾಮಕಾರಿಯಾಗಿ ಪೂರ್ಣಗೊಳಿಸುತ್ತವೆ.

ಇನ್ನು 'ವಿಮರ್ಶಕ ವೈದ್ಯ'. "ಹಾಸ್ಯವಿಡಂಬನೆಗಳ ದ್ವಾರವಾಗಿ-ಸತ್ಯ ಹಾಗು ಔಚಿತ್ಯದ ಪಕ್ಷವನ್ನು ಸಮರ್ಥಿಸುವ ಏಕಾಂಕ" ಎಂದು ಇದನ್ನು ಗೋಕಾಕರು ಕರೆದಿದ್ದಾರೆ. ಸಾಹಿತ್ಯದಲ್ಲಿ ಕಂಡುಬರುವ ಭಾವವೈಪರೀತ್ಯ ಇಲ್ಲಿ ನಾಟಕಕಾರರ ವ್ಯಂಗ್ಯ ಟೀಕೆಗೆ ಗುರಿಯಾಗಿದೆ. ಅದನ್ನು ಅವರು ಸಾಧಿಸಿರುವ ರೀತಿಯೂ ವಿನೂತನವಾಗಿದೆ.

ಡಾ. ದಿನಕರರಾವ್ ಡಿ. ಎಲ್. ಸಿ., (ರಸಿಯಾ) ಈತನೇ ವಿಮರ್ಶಕ ವೈದ್ಯ. ಈತ ಐರೋಪ್ಯ ದೇಶಗಳಲ್ಲೆಲ್ಲಾ ತಿರುಗಾಡಿ ಪರಿಣತ ವಿಮರ್ಶಕನಾಗಿ ಈಗತಾನೆ ತಾಯ್ನಾಡಿಗೆ ಮರಳಿದ್ದಾನೆ: ಒಂದು ಸಾಹಿತ್ಯ ಚಿಕಿತ್ಸಾಲಯವನ್ನು ತೆರೆದಿದ್ದಾನೆ. ಅದಕ್ಕೆ ಈತನ ಬಾಲ್ಯಗೆಳೆಯ ಭೀಮಣ್ಣನೇ ಕಾಂಪೌಂಡರ್. ಈ ಚಿಕಿತ್ಸಾಲಯ ಪ್ರಾರಂಭವಾದ ಮೊದಲನೆಯ ದಿನದ ಕೆಲವು ಗಂಟೆಗಳನ್ನು ನಾಟಕ ಚಿತ್ರಿಸುತ್ತದೆ.

ಚಿಕಿತ್ಸಾಲಯದ ಮುಂದಿಡುವುದಕ್ಕಾಗಿ ಭೀಮಣ್ಣ ಒಂದು ಬೋರ್ಡನ್ನು ಬರೆದಿದ್ದಾನೆ. ಅದು ಹೀಗಿದೆ :

ಚಿಕಿತ್ಸೆಗೆ ಫೀ

ಮುಖ್ಯಮಾತು :	ಇಲ್ಲಿ ಮಾಫಿ ಸುತರಾಂ ಇಲ್ಲ.
ಭಾವಗೀತಾ ಚಿಕಿತ್ಸೆ :	೧೦ ರೂಪಾಯಿ.
ಪ್ರಬಂಧ ಚಿಕಿತ್ಸೆ :	೧೦ ರೂಪಾಯಿ.
ಲಘುಕಥಾ ನಿವಾರಣೆ :	೧೦ ರೂಪಾಯಿ.
ಕಾದಂಬರಿ ನಿರೀಕ್ಷಣೆ :	೫೦ ರೂಪಾಯಿ.
ನಾಟಕಾವಲೋಕನ :	೫೦ ರೂಪಾಯಿ.
ಗದ್ಯಗ್ರಂಥಗಳು :	ಒಂದೊಂದಕ್ಕೆ ೬೦ ರೂಪಾಯಿ.
ಕಲೋಪಾಸಕನ ಮಸ್ತಕ ಪರೀಕ್ಷೆ :	೭೫ ರೂಪಾಯಿ.
ಕಲೋಪಾಸಕನ ಸಮಗ್ರ ಪರೀಕ್ಷೆ :	೧೮೦ ರೂಪಾಯಿ

ಇದನ್ನು ಎಲ್ಲರಿಗೂ ಕಾಣುವಂತೆ ಹೊರಗಿಟ್ಟು ಗಿರಾಕಿಗಳಿಗಾಗಿ ಕಾಯ್ದು ಕುಳಿತ ಕೊಳ್ಳುತ್ತಾರೆ. ಅನಂತರ ಒಬ್ಬೊಬ್ಬರಾಗಿ ಕವಿಗಳು ಪ್ರವೇಶಿಸುತ್ತಾರೆ. ಕಾವ್ಯರೋಗದ ವಿವಿಧ ಮುಖಗಳು ಅವುಗಳಿಗೆ ಚಿಕಿತ್ಸೆ, ಈ ಮೊದಲಾದುವುಗಳ ಚಿತ್ರಣದಲ್ಲಿ ವ್ಯಂಗ್ಯ ವಿಡಂಬನೆಯಿದೆ.

ಮೊದಲು ಪ್ರವೇಶಿಸುವವರು ಪರಮಪಂಡಿತರಾದ ಚಂಪೂ ಪ್ರಿಯ ನೀಲಕಂಠಶಾಸ್ತ್ರಿ ಗಳು : "ತಂತೋ ತಂತಮೆ ತಂತುನಾಭ ತರಲಂ ತನ್‌ತಂತು ತಂತ್ರೋತ್ತ್ರಮಾ" ಎಂಬ ವೃತ್ತ ಮೊದಲಾಗಿ ತಾವು ಹೊಸೆದ ಚಂಪೂಕಾವ್ಯವನ್ನು ಮುಂದಿಡುತ್ತಾರೆ. ಅನಂತ ಇನ್ನೊಬ್ಬ ಕವಿ ಪೋಲೆಂಡು ದೇಶದ ರಾಜಕೀಯ ಚರಿತ್ರೆಯನ್ನು 'ಪಲಾಂಡು ಕನ್ಯಾ ಹರಣ' ಎಂಬ ಷಟ್ಪದಿ ಕಾವ್ಯರೂಪಕ್ಕೆ ಇಳಿಸಿರುವವನು. ಅಂತೆಯೇ 'ಎಲ್ಲರಂಥವನ ನನ ಕಲ್ಲಾ ! ಸಾಯುಕಲ್ಲೇರ ಬಲ್ಲಾ ||" ಎಂದು ಮುಂತಾಗಿ ಹಾಡುಗಳನ್ನು ಹಾರಿಸಬ ಪಾಯಪ್ಪ, ಸಾಹಿತ್ಯದ ಎಲ್ಲ ರಂಗಗಳಲ್ಲಿಯೂ ಪ್ರಥಮ ವಿಕ್ರಮ ಸಾಧಿಸಿದ ಅಭಿನ ಚಾಸರ್ ; ಕಾವ್ಯಸಮಾಧಿಯ ಮಬ್ಬಿನಲ್ಲಿ ಬಿದ್ದ ಕಿಶೋರಕವಿ, ಮೊಹರಮ್ ಹು ಯನ್ನು ಹಿಡಿದುಕೊಂಡು ಬಂದ ಕುಂಡಲಿನಿ ಕವಿ — ಮೊದಲಾದವರೆಲ್ಲ ಒಬ್ಬೊಬ್ಬರಾ ಬಂದು ತಮ್ಮ ಕಾವ್ಯವ್ಯಾಧಿಯನ್ನು ಪ್ರದರ್ಶಿಸಿ ಹೋಗುತ್ತಾರೆ. ಕಾವ್ಯರಚನೆಯ ಕಂಡುಬರುವ ಹಲವಾರು ಪ್ರಯೋಗಗಳ ವಿಡಂಬನೆ ಇಲ್ಲಿದೆ. ಆದರೆ ವಿಮರ್ಶಕ ಚಿಕಿತ್ಸಾ ಲಯದ ನಿರ್ಮಾಣವನ್ನು ಅವಲಂಬಿಸಿ ನಿಂತಿರುವ ನಾಟಕದ ನೆಲೆಗಟ್ಟು ಸಹಜತೆಯಿಂ ದೂರವಾಗಿರುವುದರಿಂದ ಇದು ನಮ್ಮನ್ನು ಅಲ್ಲಲ್ಲಿ ನಗಿಸಬಹುದೇ ಹೊರತು, ಕಾ

ವಮರ್ಶೆಯನ್ನು ಕುರಿತ ಗಂಭೀರ ಪರಿಣಾಮವನ್ನೇನೂ ಉಂಟುಮಾಡಲಾರವು. ಸಾಹಿತ್ಯ ರಚನೆಯಲ್ಲಿ ಸಮನ್ವಯ ದೃಷ್ಟಿ ಅಗತ್ಯವೆಂಬುದರ ಸೂಚನೆಯು ಇಲ್ಲಿ ಬಂದಿದೆ. ಆದರೆ ಅದರಿಂದುಂಟಾಗುವ ಸತ್ಯ ಮತ್ತು ಔಚಿತ್ಯದ ಪರಿಣಾಮಕ್ಕಿಂತ ಲಘುವಾದ ವ್ಯಂಗ್ಯವೇ ಮೇಲಾಗಿ ನಾಟಕದ ಉದ್ದೇಶ ವಿಫಲವಾಗುತ್ತದೆ.

ಈ ಮೂರು ನಾಟಕಗಳಲ್ಲದೆ ಇನ್ನೊಂದು ಏಕಾಂಕ ದೃಶ್ಯ 'ತುಳಸಿ' ಯನ್ನು ಗೋಕಾಕರು ಬರೆದಿದ್ದಾರೆ. ಈ ನಾಟಕದ ಮುಖ್ಯ ಪಾತ್ರಗಳು ರಾಮಣ್ಣ ಮತ್ತು ಆತನ ಮಗಳು ತುಳಸಿ; ರಾಮಣ್ಣನ ಹೆಂಡತಿ ದುರುಗವ್ವ, ಅವಳ ಪ್ರಿಯಕರ ಚಿನ್ನಪ್ಪ. ಹೆಂಡತಿಯ ಕೆಟ್ಟ ನಡತೆಯನ್ನು ಕಂಡು ರಾಮಣ್ಣ ಮನೆಯನ್ನು ಬಿಟ್ಟು ಮಗಳು ತುಳಸಿಯೊಡನೆ ನಾರಾಯಣರಾಯನ ಬಳಿಗೆ ಬರುತ್ತಾನೆ. ಕಾಲಿಗೆ ಗಾಯವಾಗಿ ನಡೆಯಲಾರದಂತಾಗಿರುವುದರಿಂದ ಕೆಲವು ದಿನಗಳು ತನಗೆ ತನ್ನ ಮಗಳಿಗೆ ಆಶ್ರಯಕೊಡಬೇಕೆಂದು ನಾರಾಯಣರಾಯನನ್ನು ಕೇಳುತ್ತಾನೆ. ರಾಮಣ್ಣನ ಮನೆಯನ್ನು ಅಡವು ಹಾಕಿಕೊಂಡಿರುವ ನಾರಾಯಣರಾಯ ಆತನಿಗೆ ಆಶ್ರಯ ಕೊಡಲು ಮೊದಲು ಒಪ್ಪದಿದ್ದರೂ, ತುಳಸಿಯ ರೂಪವನ್ನು ಕಂಡು ದೂರದ ದುಷ್ಟ ಆಶೆಯಿಂದ ಒಪ್ಪಿಕೊಳ್ಳುತ್ತಾನೆ. ತನ್ನ ಮನೆಯ ಒಂದು ಕೋಣೆಯನ್ನೇ ಅವರಿಗೆ ಬಿಟ್ಟುಕೊಡುತ್ತಾನೆ. ಆತನ ಆಶೆ ಫಲಿಸುತ್ತದೆ. ತುಳಸಿಯೊಡನೆ ಸ್ನೇಹ ಬೆಳೆಸುತ್ತಾನೆ. ಒಂದು ರಾತ್ರಿ ತನ್ನ ಮಗಳ ನಡತೆಯನ್ನು ಕಣ್ಣಾರೆ ಕಾಣುತ್ತಾನೆ ರಾಮಣ್ಣ. ಯಾವ ಕಾರಣಕ್ಕಾಗಿ ತನ್ನ ಹೆಂಡತಿಯನ್ನು ಬಿಟ್ಟು ಮಗಳೊಡನೆ ಬಂದಿದ್ದನೋ ಅದೇ ಹಾದಿಯನ್ನೇ ಮಗಳೂ ತುಳಿದುದನ್ನೂ ಕಂಡು ಆ ದುಃಖವನ್ನು ಭರಿಸಲಾರದೆ ಎದೆಯೊಡೆದು ಸಾಯುತ್ತಾನೆ—ಈ ಕಥೆ ನಾಲ್ಕು ಪ್ರವೇಶಗಳ ಒಂದು ಚಿಕ್ಕ ನಾಟಕವಾಗಿ ಪರಿಣಮಿಸಿದೆ. ಪಾತ್ರಗಳ ಬೆಳವಣಿಗೆಯಲ್ಲಿ ಪರಿಪುಷ್ಟಿ ಇಲ್ಲ. ಬಹುಶಃ ಅದಕ್ಕೆ ನಾಟಕಕಾರರು ಇಟ್ಟುಕೊಂಡ ಪರಿಮಿತ ಹಿನ್ನೆಲೆಯೇ ಕಾರಣವಾಗಿರಬಹುದು. ಆ ಪರಿಮಿತವ್ಯಾಪ್ತಿಯಲ್ಲಿಯೇ ಮಾನವ ಸ್ವಭಾವದೌರ್ಬಲ್ಯವನ್ನು ವಿಶ್ಲೇಷಿಸುವ ಪ್ರಯತ್ನ ಇಲ್ಲಿದೆ.

ಗೋಕಾಕರು ಈಚೆಗೆ ನಾಟಕಗಳನ್ನು ಬರೆದಂತೆ ತೋರುವುದಿಲ್ಲ. ಆದರೆ ಈಗ ಬರೆದಿರುವ ಈ ನಾಟಕಗಳೇ ಸಾಕು, ನಾಟಕರಂಗದಲ್ಲಿಯೂ ಅವರಿಗೆ ಒಂದು ಸ್ಥಾನವನ್ನು ತಂದುಕೊಡುವುದಕ್ಕೆ. ಅವರ ನಾಟಕಗಳಲ್ಲಿ ಮುಖ್ಯವಾಗಿ ಕಂಡುಬರುವುದು ಜನಜೀವನವನ್ನು ಹಸನುಗೊಳಿಸಬೇಕೆಂಬ ಪ್ರಾಮಾಣಿಕ ದೃಷ್ಟಿಯ ಸಮನ್ವಯಸೂತ್ರ. 'ಜನನಾಯಕ'ದ ಭೀಮಣ್ಣನಾಗಲೀ, 'ಯುಗಾಂತರ'ದ ಕೋಸಲೇಂದ್ರನಾಗಲೀ ಈ ಪೂರ್ಣದೃಷ್ಟಿಯಿಂದಲೇ ರೂಪುಗೊಂಡು ನಿಂತವರು. 'ವಿಮರ್ಶಕವೈದ್ಯ' ವೂ ಸಾಹಿತ್ಯಕ್ಕೆ ಅನ್ವಯಿಸುವಂತೆ ಈ ಸಮನ್ವಯ ದೃಷ್ಟಿಯನ್ನೇ ಪ್ರತಿಪಾದಿಸುತ್ತದೆ. ನಾಟಕದ ಸಂವಿಧಾನ ಸಂಭಾಷಣೆಗಳ ಕುಶಲತೆ ಗೋಕಾಕರಿಗೆ ಸಿದ್ಧಿಸಿದೆ. ಕಾವ್ಯರಂಗದಲ್ಲಿ ಕೈಕೊಂಡಂತೆ

ನಾಟಕರಂಗದಲ್ಲಿಯೂ ಹೊಸ ಪ್ರಯೋಗಗಳನ್ನು ಮಾಡಲು ಅವರು ಸಮರ್ಥರೆಂಬ ದನ್ನು ಅವು ತೋರಿಸುತ್ತವೆ. ಅಂತಹ ಪ್ರಯೋಗಗಳ ಫಲ ಒದಗಿಬಂದು ಕನ್ನಡ ರಂ ಭೂಮಿಯ ಸಂಪತ್ತು ಇನ್ನೂ ಹೆಚ್ಚುವಂತಾಗಲಿ ಎಂದು ಹಾರೈಸುತ್ತಾ ಈ ಪರಿಚಯ ವನ್ನು ಮುಗಿಸಬಹುದು.

‘ಸಮರಸವೇ ಜೀವನ’

ಎಂ. ರಾಮರಾವ್

ಕಳೆದ ನಲವತ್ತು ಐವತ್ತು ವರ್ಷಗಳಲ್ಲಿ ಕನ್ನಡದ ಕಾದಂಬರೀ ಕ್ಷೇತ್ರ ಸುವಿಸ್ತಾರವಾಗಿ ಹಬ್ಬಿರುವುದು ಮಾತ್ರವಲ್ಲದೆ ಸಮೃದ್ಧ ಫಲವನ್ನೂ ನೀಡಿದೆ. ವರುಷವರುಷವೂ ಹಲವಾರು ಕಾದಂಬರಿಗಳು ರಚಿತವಾಗಿ ಬೆಳಕನ್ನು ಕಾಣುತ್ತ ಬಂದಿರುವುದು ಸಹಜವೂ ತೃಪ್ತಿಕರವೂ ಆದ ಸಂಗತಿ. ಪ್ರಕಟವಾಗಿರುವ ಕಾದಂಬರಿಗಳೆಲ್ಲಾ ಮೇಲ್ಮಟ್ಟದ ಕೃತಿಗಳೆಂದೇನೂ ಈ ಮಾತಿನ ಅರ್ಥವಲ್ಲ. ಮುದ್ರಣಸೌಲಭ್ಯವಿರುವ ಈ ಕಾಲದಲ್ಲಿ ಎಲ್ಲ ಭಾಷೆಗಳಲ್ಲೂ ಆಗುವಂತೆಯೇ ಕನ್ನಡದಲ್ಲೂ ಕೆಳದರ್ಜೆಯ ಗ್ರಂಥಗಳು ಹೊರಬೀಳುವುದು ನಿರೀಕ್ಷಿಸಬೇಕಾದುದೆ. ಅಂಥ ಕೆಲವು ಬರಹಗಳು ಜನಪ್ರಿಯವಾಗುವುದೂ ಸಹಜವೇ. ಆದರೆ ಯಾವ ಸಾಹಿತ್ಯವಾದರೂ ಹೆಮ್ಮೆಪಡಬಹುದಾದಂತಹ ಹತ್ತಿಪ್ಪತ್ತು ಕಾದಂಬರಿಗಳು ಇದೇ ಅವಧಿಯಲ್ಲೇ ಕನ್ನಡ ಲೇಖಕರಿಂದ ಸೃಷ್ಟಿಯಾಗಿವೆ. ಗ್ರಂಥ ಪರಿಮಾಣ, ವಸ್ತುಪ್ರತಿಪಾದನೆ, ಪಾತ್ರ ಕಲ್ಪನೆ, ಕಥಾ ನಿರೂಪಣೆ, ಸಂವಿಧಾನ ರಚನೆ, ಭಾಷೆಯ ವಾಸ್ತವಿಕತೆ, ಶೈಲಿಯ ವೈಶಿಷ್ಟ್ಯ, ಸಂಭಾಷಣಾಚಾತುರ್ಯ, ಮೊದಲಾದ ಯಾವ ದೃಷ್ಟಿಕೋನದಿಂದ ಪರಿಶೀಲಿಸಿದರೂ ಉತ್ತಮ ವರ್ಗಕ್ಕೆ ಸೇರಲರ್ಹವಾದ ಕಾದಂಬರಿಗಳು ಕನ್ನಡದಲ್ಲಿ ಬಂದಿವೆ. ಪ್ರೊ. ಗೋಕಾಕರ ‘ಸಮರಸವೇ ಜೀವನ’ ಇಂಥ ಮಹತ್ಕೃತಿಗಳಲ್ಲಿ ಮಹತ್ತರವಾದ ಸ್ಥಾನವನ್ನು ಗಳಿಸಿರುವ ಸಾಧನೆ.

‘ಸಮರಸವೇ ಜೀವನ’ ಬೃಹತ್ಕಾದಂಬರಿ. ಕನ್ನಡದಲ್ಲಿ ಇದುವರೆಗೂ ಬಂದಿರುವ ನಾಲ್ಕೈದು ಬೃಹತ್ಕಾದಂಬರಿಗಳಲ್ಲೆಲ್ಲಾ ಅದು ಅತ್ಯಂತ ಬೃಹತ್ತಾದುದು. ಅದರ ಪುಟ ಸಂಖ್ಯೆ ೧೨೬೮. ಜೊತೆಗೆ ಐವತ್ತು ಪುಟಗಳಷ್ಟು ವಿಶ್ಲೇಷಣಾತ್ಮಕ ವಿಮರ್ಶೆ ಬೇರೆ ಕಾದಂಬರಿಕಾರರಿಂದಲೇ ಬರೆಯಲ್ಪಟ್ಟು ಪುಸ್ತಕಕ್ಕೆ ಪೀಠಿಕೆಯಾಗಿ ಅವಕ್ಕೊಂದು ಮಹಾದ್ವಾರವಾಗಿ ಕಂಗೊಳಿಸುತ್ತಿದೆ. ನನಗೆ ತಿಳಿದಮಟ್ಟಿಗೆ ಇಷ್ಟು ದೊಡ್ಡ ಕಾದಂಬರಿ ಕನ್ನಡದಲ್ಲಿ ಇನ್ನಾವುದೂ ಇಲ್ಲ. ಗಾತ್ರಕ್ಕೆ ತಕ್ಕಂತೆ ಅದರ ರಚನೆಯ ಅವಧಿ ಇಪ್ಪತ್ತೆರಡು ವರ್ಷಗಳಿಗಿಂತಲೂ ಹೆಚ್ಚು, ಅದರ ಕಥೆಯ ರಂಗಭೂಮಿ ದೇಶವಿದೇಶಗಳ ಅನೇಕ ಸ್ಥಳಗಳನ್ನು ಜನಗಳನ್ನು ಅನುಭವಗಳನ್ನು ಒಳಗೊಂಡಿದೆ; ಈ ವೈಶಾಲ್ಯಕ್ಕೆ,

ಕ್ಷೇತ್ರಬಾಹುಳ್ಯಕ್ಕೆ ಪಾತ್ರಬಾಹುಳ್ಯಕ್ಕೆ ಅಗತ್ಯವಾದ ಸಂವಿಧಾನ ಕೌಶಲವನ್ನು ಜೀವ ನಾನುಭವವನ್ನು ದರ್ಶನವನ್ನು ಪ್ರದರ್ಶಿಸುತ್ತದೆ. ಇಷ್ಟು ಬಹುಮುಖಿಯಾದ ಕೃತಿ ಯನ್ನು ರಚಿಸಿ ಗೋಕಾಕರು ಕನ್ನಡ ಕಾದಂಬರಿಯ ಸಾಧ್ಯತೆಗಳನ್ನು ತೋರಿಸಿಕೊಟ್ಟ ದ್ದಾರೆ.

'ಸಮರಸವೇ ಜೀವನ' ಧಾರವಾಡಸೀಮೆಯ ಪ್ರಾದೇಶಿಕ ಸಮಾಜ ಮತ್ತು ಜೀವನಗಳ ತಳಹದಿಯ ಆಧಾರದ ಮೇಲೆ ನಿರ್ಮಿತವಾದ ಸೌಧ. "ಸೌಧ"ವೆಂಬ ಮಾತು ಈ ಕಾದಂಬರಿಗೆ ನಿಜವಾಗಿಯೂ ಸಲ್ಲುತ್ತದೆ. ಹೆಮ್ಮನೆಯೊಂದನ್ನು ಹೊಕ್ಕು ಓಣಿಯಿಂದ ಓಣಿಗೆ ಕೋಣೆಯಿಂದ ಕೋಣೆಗೆ ನಾವು ನಡೆದು ಬೇರೆ ಬೇರೆಯ ನೋಟ ಗಳನ್ನು ಕಂಡು ವ್ಯಕ್ತಿಗಳನ್ನು ಪರಿಚಯ ಮಾಡಿಕೊಂಡು ಅನುಭವಗಳನ್ನು ಪಡೆಯು ವಂತೆ ಈ ಮಹಾಕಾದಂಬರಿಯ ವಿವಿಧ ಪ್ರಕರಣಗಳ ಮತ್ತು ಭಾಗಗಳ ಮೂಲಕ ಮುಂದುವರಿಯುತ್ತೇವೆ. ಭೌಗೋಲಿಕವಾಗಿ ಅದು ಓದುಗನನ್ನು ನಾನಾ ದೇಶಗಳಿಗೆ ಕರೆದೊಯ್ದು ನಾನಾ ಜಾತಿಯ ಜನರ, ನಾನಾ ತೆರನಾದ ನೈಸರ್ಗಿಕ, ಸಾಮಾಜಿಕ ಸಾಂಸ್ಕೃತಿಕ ದೃಶ್ಯಗಳ ಮತ್ತು ಸನ್ನಿವೇಶಗಳ ನಡುವೆ ಅವನನ್ನು ನಿಲ್ಲಿಸುತ್ತದೆ ಧಾರವಾಡ ಪ್ರಾಂತ್ಯದ ಮೊಗ್ಗಾವಿಯಿಂದ ಆರಂಭವಾಗುವ ಕಥೆ ನಮ್ಮನ್ನು ಮೊದಲ ಸಮೀಪದ ಊರು ಕೇರಿಗಳಿಗೂ ಅನಂತರ ಇಂಗ್ಲಂಡಿಗೂ ಕರೆದೊಯ್ದು ಲೋಕ ಪರ್ಯಟನ ಮಾಡಿಸಿ ಮತ್ತೆ ಸ್ವದೇಶಕ್ಕೆ ಮರಳಿಸುತ್ತದೆ; ದಕ್ಷಿಣೋತ್ತರ ಭಾರತಗಳು ಪೂರ್ವಪಶ್ಚಿಮ ಭೂಭಾಗಗಳು, ದೇಶವಿದೇಶಗಳ ಸಮಾಜ, ಸಂಸ್ಕೃತಿ, ಕಟ್ಟಳೆಗಳ ಎಲ್ಲವೂ ನಮ್ಮ ಕಲ್ಪನೆಯ ಕಣ್ಣು ಮುಂದೆ ವಿವರವಿವರವಾಗಿ ಸ್ಪಷ್ಟವಾಗಿ ಹಾದ ಹೋಗುತ್ತವೆ; ನಮ್ಮ ಅನುಭವವನ್ನು ಕ್ರಮಕ್ರಮವಾಗಿ ಬೆಳೆಸುತ್ತವೆ. ಸುವಿಸ್ತಾ ವಾದ ಈ ಭೂಮಿಕೆಯ ಪರಿಚಯ ಕಾದಂಬರಿಕಾರರಿಗೆ ಎಷ್ಟರಮಟ್ಟಿಗಿದೆ ಎಂಬುದನ್ನು ಕಾದಂಬರಿಯ ಪ್ರತಿ ಭಾಗವೂ ಪ್ರತಿ ಪುಟವೂ ಪ್ರದರ್ಶಿಸುತ್ತದೆ.

ಕ್ಷೇತ್ರವೈಶಾಲ್ಯ ಮಾತ್ರವಲ್ಲದೆ ಕಾದಂಬರಿಯ ಕಥೆ ನಡೆಯುವ ಕಾಲದ ಅವಧಿಯು ಹೆಚ್ಚಿನದೇ. ಅವರೇ ಹೇಳಿರುವಂತೆ "ಸುಮಾರು ಕಾಲು ಶತಮಾನದ ಜೀವನವನ್ನು ಇ ಅರಳಿಸಿ ತೋರಿಸಲಾಗಿದೆ." ಇಲ್ಲಿ ಚಿತ್ರಿತವಾಗಿರುವ ಜಗತ್ತು ಸ್ಥಾಯೀ ಜಗತ್ತಲ್ಲ ಜಡವಸ್ತುವಲ್ಲ, ಉದ್ದಕ್ಕೂ ಹೊಸ ಪ್ರಭಾವಗಳಿಗೆ ಸಿಕ್ಕು ಪರಿವರ್ತನ ಹೊಂದು ಜಗತ್ತು. ಕಥೆಯಲ್ಲಿ ಕಂಡುಬರುವ ಬೆಳವಣಿಗೆ ಅದು ನಮ್ಮೆದುರಿಗಿಡುವ ಸಮಾಜವಲ್ಲ ವಾತಾವರಣದಲ್ಲೂ ಕಂಡುಬರುತ್ತದೆ. ಅದು ಚಿತ್ರಿಸುವ ರಾಜಕೀಯ, ಧಾರ್ಮಿ ಸಾಮಾಜಿಕ, ಕೌಟುಂಬಿಕ ವಲಯಗಳಲ್ಲಿ ಆಗುವ ಬದಲಾವಣೆಗಳನ್ನು ಗಮನಿಸಿದ ಈ ಮಾತಿನ ಸತ್ಯ ವಿದಿತವಾಗುತ್ತದೆ. ಒಬ್ಬರಿಬ್ಬರು ವ್ಯಕ್ತಿಗಳ ಆಗುಹೋಗುಗಳನ ನಿರೂಪಿಸುವ ಕಾದಂಬರಿಗಳೂ ಒಬ್ಬನೇ ವ್ಯಕ್ತಿಯ ಮನದಾಳದ ಭಾವಲಹರಿಯನ

ಸವರ ಪದರವಾಗಿ ವಿಶ್ಲೇಷಣ ಮಾಡುವ ಕಾದಂಬರಿಗಳೂ ಈಗೀಗ ಬರುತ್ತಿವೆ. ಅವುಗಳದು ಒಂದು ರೀತಿಯ ವೈಶಿಷ್ಟ್ಯ, ನಿಜ. ಆದರೆ ಬಹುಮುಖಿಯಾದ ಒಂದು ಇಡಿ ತಲೆಮಾರಿನ ಇಡಿ ಸಮಾಜದ ಜೀವಂತ ಚಿತ್ರವನ್ನು ಕಲ್ಪನೆ ತಣಿಯುವಂತೆ, ಮನಸ್ಸಿಗೆ ತಟ್ಟುವಂತೆ, ನಂಬಿಕೆ ಮೂಡುವಂತೆ ತೋರಿಸುವುದು ಅಪರೂಪದ ಸಾಧನೆ. ಈ ದೃಷ್ಟಿಯಿಂದ ಪರಿಶೀಲಿಸಿದರೆ ಗೋಕಾಕರ ಕಾದಂಬರಿ ಕನ್ನಡದ ಅತಿಶ್ರೇಷ್ಠ ಕಾದಂಬರಿಗಳಲ್ಲಿ ಒಂದಾಗಿ ಶೋಭಿಸುತ್ತದೆ; ಅವರ ಅನುಭವ ವೈಶಾಲ್ಯ, ರಚನಾ ಸಾಮರ್ಥ್ಯ ಚಿಂತನಾ ಶಕ್ತಿಗಳಿಗೆ ಸಾಕ್ಷಿಯಾಗಿದೆ.

ಈ ಕಾದಂಬರಿಯ ಪಾತ್ರಬಾಹುಳ್ಯ ಅದರ ಭೂಮಿಕೆ ಮತ್ತು ಕಾಲಾವಧಿಯ ವಿಸ್ತಾರದಷ್ಟೇ ದೊಡ್ಡದು. ಇಷ್ಟು ದೊಡ್ಡ ಕಥೆಯನ್ನು ಬೆಳೆಸಿಕೊಂಡು ಹೋಗಲು ಅದಕ್ಕೆ ತಕ್ಕಷ್ಟು ಸಂಖ್ಯೆಯ ಪಾತ್ರಗಳ ಸೃಷ್ಟಿ ಅಗತ್ಯವಾಗುವುದು ಸಹಜವೇ. ಪುಸ್ತಕದ ಪುಟಗಳನ್ನು ತಿರುವಿಹಾಕಿದಂತೆಲ್ಲಾ ಹೊಸ ದೃಶ್ಯಗಳು ಹೊಸ ಪರಿಸ್ಥಿತಿಗಳು, ಹೊಸ ಸಮಸ್ಯೆಗಳು ನಮ್ಮೆದುರು ಬಂದು ಹೋಗುವಂತೆಯೇ ಹೊಸ ವ್ಯಕ್ತಿಗಳೂ ಬರುತ್ತಾರೆ. ಅವರಲ್ಲಿ ಕಂಡು ಬರುವ ವೈವಿಧ್ಯ ಸನ್ನಿವೇಶಗಳ ವೈವಿಧ್ಯದಷ್ಟೇ ಹಿರಿದಾದುದು, ತೃಪ್ತಿಕರವಾದುದು. ಅನೇಕ ವೃತ್ತಿಗಳ ಜೀವನ ಮಾರ್ಗಗಳ, ಕಾಲಧರ್ಮ ವಯೋಧರ್ಮಗಳ, ದೇಶ ವಿದೇಶಗಳ ಸ್ತ್ರೀಪುರುಷರನ್ನು ನಾವಿಲ್ಲಿ ಕಾಣುತ್ತೇವೆ. ಆದರೆ ಇಷ್ಟು ಮಂದಿಯಲ್ಲಿ ಯಾರೊಬ್ಬರೂ ಇನ್ನೊಬ್ಬರಂತಿಲ್ಲ. ಪ್ರತಿಪಾತ್ರಕ್ಕೂ ತನ್ನದೇ ಆದ ವೈಶಿಷ್ಟ್ಯವಿದೆ, ತನ್ನತನವಿದೆ; ಮೊದಲ ಭಾಗದಲ್ಲೇ ಬರುವ ಹಯಗ್ರೀವಾಚಾರ್ಯರು, ಸುಬ್ಬಣ್ಣಾಚಾರ್ಯರು, ಗೋವಿಂದರಾಯರು, ಗಣಪತಿರಾಯರು, ಸಮಾಬಾಯಿ, ಜಾನಕೀಬಾಯಿಯರು, ನರಹರಿ ಶೀನು ವಿಷ್ಣುರವರು, ತಿಪ್ಪ ಕೇಶವರು, ಲೋಡಕ ದಂಪತಿಗಳು, ಪಂಡಿತ ಕೇಶವರಾಯರು, ಅವರ ಮಗಳು ಪ್ರಮೀಳೆ, ಪೂಜ್ಯರಾದ ಸ್ವಾಮಿದಾಸರು, ವೆಂಕಮ್ಮ ಮಾಂಸಿಯರು, ಗಂಗವ್ವ ರಂಗಾಸಾನಿಯರು, ಫೀಮು ಕುಬೇರ ಕಾಸೀಮ ಮೊದಲಾದ ತಂಡುಲಧ್ವಂಸಸಮಾಜದ ಸದಸ್ಯರು, ಪ್ರೊ. ಪಾರಂಜಪೆ, ಪ್ರೊ. ಕಾಳೆ, ಹಾಗೂ ಪ್ರೊ. ಪಟವರ್ಧನರು, ಅನಂತರ ಕಾದಂಬರಿಯನ್ನು ಪ್ರವೇಶಿಸುವ ಪಾಟೀಲ, ರತನ್‌ಭೈ, ತ್ರಿವೇದಿ, ನಿಯೋಗಿ, ಮೂರ್ತಿ ಮೊದಲಾದವರು, ಇಂಗ್ಲೆಂಡಿನಲ್ಲಿ ಕಾಣಿಸಿಕೊಳ್ಳುವ ಮಿಸ್ ಚಾತರ್ಜಿ, ಮಿಸ್ ಬರ್ವೆ, ಮಿಸ್ ವಾಚಾ ಮೊದಲಾದವರು, ವಿದೇಶೀಯರೇ ಆದ ಜೇಮ್ಸ್ ದಂಪತಿಗಳು, ಪಿಂಕರ್‌ಟನ್, ಲೂಯಿ, ಎಂಡರ್ಸನ್, ಮೆಕ್‌ಫರ್ಡ್, ಡೀನ್, ಮಿಸ್ ಎಲ್ಲಿಸ್, ಏಲಿಸ್, ಮೊದಲಾದವರು—ಒಬ್ಬೊಬ್ಬರೂ ಒಂದೊಂದು ರೀತಿಯಲ್ಲಿ ವೈಶಿಷ್ಟ್ಯವನ್ನು ಪಡೆದಿದ್ದಾರೆ. ಇಷ್ಟು ಬಗೆಯ ವ್ಯಕ್ತಿಗಳನ್ನು ಒಬ್ಬರ ವ್ಯಕ್ತಿತ್ವ ಇನ್ನೊಬ್ಬರಲ್ಲಿ ಬೆರತುಹೋಗದ ಹಾಗೆ ಪ್ರತ್ಯೇಕ ಪ್ರತ್ಯೇಕವಾಗಿ ನಿಲ್ಲುವ ಹಾಗೆ ಬೆಳೆಸಿಕೊಂಡು ನಡೆಸಿಕೊಂಡು ಹೋಗು

ವುದಕ್ಕೆ ಸುವಿಸ್ತಾರವೂ ನಿಕಟವೂ ಆದ ಲೋಕಪರಿಚಯವಿರಬೇಕಾದುದು ಮಾತ್ರವಲ್ಲದೆ ಮಾನವ ಸ್ವಭಾವದ ವಿವಿಧ ಮುಖಗಳ ಸೂಕ್ಷ್ಮಾವಲೋಕನ ಸಾಮರ್ಥ್ಯವೂ ಆವಶ್ಯಕ. ಇವೆರಡಕ್ಕೂ ಮಿಗಿಲಾಗಿ ನೋಡಿ ತಿಳಿದುದನ್ನು, ಅವಲೋಕಿಸಿ ಪರಿಶೀಲಿಸಿರುವ ಗಂಡು ಹೆಣ್ಣುಗಳನ್ನು ವಾಚಕನ ಎದುರಿಗೆ ಜೀವಂತವಾಗಿ ಮಾಡುವಂತೆ ಕಡೆದು ನಿಲ್ಲಿಸಬಲ್ಲ ರಚನಾಶಕ್ತಿಯೂ ನಾಟಕೀಯ ವಿಶ್ಲೇಷಣಾ ಸಾಮರ್ಥ್ಯವೂ ಅಗತ್ಯ. ಭೌಗೋಲಿಕ ದೃಶ್ಯಗಳನ್ನೂ ಸಾಮಾಜಿಕ ಸನ್ನಿವೇಶಗಳನ್ನೂ ಬರಹಗಾರರೇ ನೇರವಾಗಿ ಬಣ್ಣಿಸಬಹುದು, ಚಿತ್ರಿಸಬಹುದು. ಉತ್ತಮ ಪಾತ್ರಸೃಷ್ಟಿ ಇಷ್ಟು ಸುಲಭವಲ್ಲ. ಕಾದಂಬರಿಕಾರ ತಾನೇ ನಿರೂಪಿಸುವುದರ, ವರ್ಣಿಸುವುದರ ಜೊತೆಗೆ ಪಾತ್ರಗಳ ಬಾಯಿಂದ ಮಾತಾಡಿಸಿ ತನ್ಮೂಲಕ ಅವರು ತಮ್ಮ ಗುಣಾವಗುಣಗಳನ್ನೂ ತಮ್ಮೊಡನೆ ವ್ಯವಹರಿಸುವ ತಾವು ಕಾಣುವ ಇತರರ ಗುಣದೋಷಗಳನ್ನೂ ವ್ಯಕ್ತಪಡಿಸುವ ಹಾಗೆ ಮಾಡಬೇಕು. ಇಲ್ಲದಿದ್ದರೆ ಕಾದಂಬರಿ ಸಪ್ಪೆಯಾಗುತ್ತದೆ. ಸಂವಿಧಾನರಚನಾ ಚಾತುರ್ಯ ಎಷ್ಟರಮಟ್ಟಿಗೆ ಕಾದಂಬರಿಕಾರನ ಅಳವಿಗೊಂದು ನಿದರ್ಶನವೋ ಪಾತ್ರ ವೈವಿಧ್ಯ ಮತ್ತು ಸ್ವಭಾವ ವಿಶ್ಲೇಷಣೆಯೂ ಅಷ್ಟೇ ಮಟ್ಟಿಗೆ ಅವನ ಕಲೆಯ ಹಿರಿಮೆಗೆ ಸೂಚಿಗಳಾಗುತ್ತವೆ. ಈ ಎರಡು ವಿಚಾರಗಳಲ್ಲೂ ಗೋಕಾಕರು ಅಚ್ಚರಿಯಾಗುವ ಮಟ್ಟಿಗೆ ಯಶಸ್ವಿಗಳಾಗಿದ್ದಾರೆ. ಇಷ್ಟು ದೊಡ್ಡ ಕಥಾವಸ್ತುವನ್ನು ಯಾವ ರೀತಿ ಎಳೆಎಳೆಯಾಗಿ ಬಿಡಿಸಿ ಸೇರಿಸಿ ಹೊಸೆದು ಸಂವಿಧಾನದ ಹಗ್ಗವಗ್ನು ಹೊಸೆದಿದ್ದಾರೋ ಅದೇ ರೀತಿ ಇಷ್ಟು ಮಂದಿ ಪಾತ್ರಗಳನ್ನೂ ಬೇರೆಬೇರೆಯಾಗಿ ರೇಖಿಸಿ ಬಣ್ಣಿಸಿ ಆಡಿಸಿ ನಡೆಸಿದ್ದಾರೆ. ಇದು ಅವರ ಕಲಾಪ್ರೌಢಿಮೆಗೂ ವ್ಯಾಪಕವಾದ ಮಾನವೀಯ ಆಸಕ್ತಿಗೂ ವಾಸ್ತವಿಕತೆಗೂ ಸಾಕ್ಷಿಯಾಗಿದೆ.

ಈ ವಾಸ್ತವಿಕತೆಯನ್ನು ನಾವು ಕಾಣುವುದು ವಿವಿಧ ಪಾತ್ರಗಳ ಸಹಜ ವರ್ತನೆಯಲ್ಲಿ ಮಾತ್ರವಲ್ಲ; ಅವರ ಬಾಯ್ಗಳಲ್ಲಿ ಕಾದಂಬರಿಕಾರರು ಆಡಿಸಿರುವ ಮಾತುಗಳೂ ಅಷ್ಟೇ ವಾಸ್ತವಿಕವಾಗಿವೆ. ಸಂದರ್ಭಾನುಸಾರ ಬೇರೆಬೇರೆಯ ವ್ಯಕ್ತಿಗಳ ಬಾಯಲ್ಲಿ ಬೇರೆ ಬೇರೆ ರೀತಿಯ ಕನ್ನಡವನ್ನು ಕಾದಂಬರಿಕಾರರು ಆಡಿಸಿದ್ದಾರೆ. ಉತ್ತರ ಕರ್ಣಾಟಕದ ಆಡುಭಾಷೆಯ ಅತ್ಯುತ್ತಮ ಉದಾಹರಣೆಗಳನ್ನು ನಾವು ಇಲ್ಲಿ ಕಾಣುತ್ತೇವೆ. ಮಾಗಾವಿಯ ಭೌಗೋಲಿಕ ಆವರಣ ಮತ್ತು ಜನಜೀವನಗಳಲ್ಲದೆ ಅಲ್ಲಿನ ಜನ ಆಡುವ ಮಾತೂ ಕಾದಂಬರಿಗೊಂದು ಪ್ರಾದೇಶಿಕತೆಯನ್ನು ಕೊಡುತ್ತದೆ. ತಾವು ಈ ಕಾದಂಬರಿಯನ್ನು ಬರೆದುದು ಧಾರವಾಡ, ಕೊಲ್ಹಾಪುರ, ಹೈದರಾಬಾದು, ವೀಸನಗರ, ಹೀಗೆ ದೂರದೂರದ ಊರುಗಳಲ್ಲಿ ಎಂದು ಗೋಕಾಕರು ನುಡಿದಿದ್ದಾರೆ. ಅವರು ಅದನ್ನು ಎಲ್ಲೆಲ್ಲೇ ಬರೆದಿರಲಿ ಅದು "ಅಗ್ದಿ" ಕನ್ನಡ ಕಾದಂಬರಿ; ಕನ್ನಡಿಗರ ಬಾಳುವೆಯ ಒಂದು ಅಂಶದ ಚಿತ್ರಣ ಮಾತ್ರವಲ್ಲದೆ ಕನ್ನಡ ನುಡಿಯ ಒಂದು

ಮುಖವೂ ಇಲ್ಲಿದೆ. ಕನ್ನಡದಲ್ಲಿ ಹೊರಬಿದ್ದಿರುವ ಇನ್ನು ಕೆಲವು ಪ್ರಾದೇಶಿಕ ಕಾದಂಬರಿಗಳ ಜೊತೆಗೆ ಇದೂ ಕೂಡ ನಮ್ಮ ಜನರ ದಿನದಿನದ ಬಳಕೆಯ ನುಡಿಯಲ್ಲಿ ಸಹಜತೆ, ಸರಳತೆ, ಸತ್ವ, ಸೊಬಗು, ಎಲ್ಲವೂ ಸಮರಸವಾಗಿ ಬೆರೆತು ಅದು ಹೇಗೆ ಪೂರ್ಣ ಮನೋಹರವಾಗಿರುವುದಲ್ಲದೆ ಚಿತ್ತಾಕರ್ಷಕವೂ ಹೃದಯಸ್ಪರ್ಶಿಯೂ ಆಗಿದೆ ಎಂಬುದನ್ನೂ ಪರಿಣಾಮಕಾರಿಯಾಗಿ ತೋರುತ್ತದೆ. ಸುಬ್ಬಣ್ಣಾಚಾರ್ಯರ ಮಾತು, ಪಾಠಶಾಲೆಯಲ್ಲಿ ಮಾಸ್ತರಿಗೂ ಹುಡುಗರಿಗೂ ನಡೆಯುವ ಮಾತು, ಮೋಡಕರ ಮರಾಠಿ ಮಿಶ್ರಿತ ಕನ್ನಡ ಮಾತು, ವಿದ್ಯಾವಂತರು ಬಳಸುವ ದೇಶೀ ಇಲ್ಲದ ಕನ್ನಡ ಮಾತು, ಇವೆಲ್ಲಾ ಕಾದಂಬರಿಯ ವಾಸ್ತವಿಕತೆಯನ್ನು ಹೆಚ್ಚಿಸುತ್ತವೆ. ಕಾದಂಬರಿಕಾರರು ನೇರವಾಗಿ ಕಥೆ ಹೇಳುವಾಗ ಉಪಯೋಗಿಸಿರುವ ಪದವಿನ್ಯಾಸ ವಾಕ್ಯವಿನ್ಯಾಸಗಳೂ ಇದೇ ರೀತಿ ಸಂದರ್ಭೋಚಿತವಾಗಿ ಸಹಜ ಸುಂದರವಾಗಿದ್ದು ಮನಸ್ಸನ್ನು ಸೆಳೆಯುತ್ತವೆ. ಅಚ್ಚಗನ್ನಡ ಪದಗಳ ಲಾಲಿತ್ಯ ಪುಸ್ತಕದುದ್ದಕ್ಕೂ ಲಾಸ್ಯವಾಡುತ್ತದೆ. ಇದರ ಫಲವಾಗಿ, ಕಾದಂಬರಿಕಾರರು ತಾವೇ ಮಾತಾಡುತ್ತಿರಲಿ ಯಾರಾದರೂ ಪಾತ್ರದ ಬಾಯಿಂದ ಮಾತಾಡಿಸುತ್ತಿರಲಿ ಅವರವರ ಮಾತನ್ನು ನಾವು ನಿಜವಾಗಿಯೂ ಕಿವಿಯಾರ ಕೇಳುತ್ತಿದ್ದೇವೆಯೋ ಎಂಬ ಭ್ರಮೆ ನಮಗುಂಟಾಗುತ್ತದೆ. ಕಥಾನಿರೂಪಣೆ, ಪಾತ್ರ ಪರಿಪೋಷಣೆ ಮತ್ತು ಸಂವಾದ ಕಲ್ಪನೆಗಳಿಗೆ ಅಷ್ಟು ನಿಕಟವಾದ ಸಂಬಂಧವಿದೆ. ಮಾತು ಆಯಾ ಪಾತ್ರಗಳ ವ್ಯಕ್ತಿತ್ವದ ಮತ್ತು ವೈಕೃತಿಗಳ ಪರಿಚಯವನ್ನು ನಮಗೆ ಉಂಟುಮಾಡಿಕೊಡುತ್ತದೆ; ಏಕೆಂದರೆ, ಅದು ಆ ವ್ಯಕ್ತಿವೈಶಿಷ್ಟ್ಯದಿಂದಲೇ ಉಗಮವಾಗಿ ರೂಪಿತವಾದುದಾಗಿದೆ. ಸುಬ್ಬಣ್ಣಾಚಾರ್ಯರ ಮಾತುಗಳು ಇದಕ್ಕೆ ಒಳ್ಳೆಯ ನಿದರ್ಶನಗಳು. ಕಾದಂಬರಿಕಾರನೇ ಆಗಲಿ ನಾಟಕಕಾರನೇ ಆಗಲಿ ಸಾಧಿಸಬಹುದಾದ ಉತ್ತಮ ಲಕ್ಷಣಗಳಲ್ಲಿ ಇದೂ ಒಂದೆಂದು ಹೇಳಬೇಕಾಗಿಲ್ಲ.

ಇದಿಷ್ಟೇ ಅಲ್ಲದೆ, ಗೋಕಾಕರ ಭಾಷೆ ಉತ್ತರ ಕರ್ನಾಟಕದ ಜನರ ಆಡುನುಡಿಯಲ್ಲಿ ಪ್ರಯೋಗದಲ್ಲಿರುವ ನೂರಾರು ಪದಗಳನ್ನು ನಮಗೆ ನೀಡುತ್ತದೆ. ಸರಳವಾಗಿ, ಸಹಜವಾಗಿ, ಸೊಗಸಾಗಿರುವ ಈ ಪದಗಳು ನಮ್ಮ ಕಿವಿಮನಗಳನ್ನು ನೇರವಾಗಿ ಹೊಗುತ್ತವೆ. ಅವುಗಳ ಬಳಕೆ ವಾಕ್ಯಸರಣಿ ಶೈಲಿಯಂತೆಯೇ ಕಾದಂಬರಿಗೊಂದು ಅಪೂರ್ವವಾದ ವಾಸ್ತವಿಕತೆಯನ್ನು ಕೊಡುವುದಲ್ಲದೆ ಕನ್ನಡದ ಪ್ರಾಂತ ಪ್ರಯೋಗಗಳ ಶಕ್ತಿ ಮತ್ತು ವೈವಿಧ್ಯಗಳು ಎಷ್ಟುಮಟ್ಟಿಗಿವೆ, ಆ ಭಾಷೆ ಎಷ್ಟು ಹೃದಯಂಗಮವಾಗಿದೆ ಎಂಬುದಕ್ಕೆ ಸೂಚಿಯಾಗಿವೆ. ಇಷ್ಟು ದೊಡ್ಡ ಗ್ರಂಥದಿಂದ ಸಹಜವಾಗಿಯೇ ಇಂಥ ಪದಗಳ ಸುದೀರ್ಘವಾದ ಪಟ್ಟಿಯನ್ನೇ ತಯಾರಿಸಬಹುದು. ಅದು ಭಾಷಾಶಾಸ್ತ್ರ ವ್ಯಾಸಂಗಕ್ಕೆ ತುಂಬ ಸಹಾಯಕವಾಗುತ್ತದೆಯೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಬೃಹತ್ಕಾದಂಬರಿಯ ಬರಹಗಾರರು ಎದುರಿಸಬೇಕಾದ ಒಂದು ದೊಡ್ಡ ಸಮಸ್ಯೆ

ಅದರಲ್ಲಿ ಐಕ್ಯತೆಯನ್ನು ತರುವುದು. ಐವತ್ತು ಅರವತ್ತು ಪಾತ್ರಗಳು ಇಲ್ಲಿ ಹೊಕ್ಕು ಅಲ್ಲಿ ಮರೆಯಾಗಿ ಮತ್ತೆ ನಾವು ಎಲ್ಲೋ ನೋಡುತ್ತಿರುವಾಗ ಕಥೆಯನ್ನು ಪ್ರವೇಶಿಸುತ್ತಾರೆ. ಇವರೆಲ್ಲರ ಚಲನವಲನಗಳನ್ನೂ ಆಗುಹೋಗುಗಳನ್ನೂ ಒಂದೇ ಸಮನಾಗಿ ಕಣ್ಣಿಟ್ಟು, ಗಮನಿಸಿ, ನೆನಪಿನಲ್ಲಿಟ್ಟುಕೊಂಡಿದ್ದು, ಅವಕ್ಕೆಲ್ಲಾ ಸರಿಯಾದ, ಸಮಂಜಸವಾದ, ನಂಬಿಕೆಗರ್ಹವಾದ ಮುಕ್ತಾಯವನ್ನು ಕಲ್ಪಿಸಬೇಕಾದುದು ಲೇಖಕರ ಹಿರಿಯ ಹೊಣೆಗಳಲ್ಲೊಂದು. ಇದಕ್ಕಿಂತಲೂ ಹೆಚ್ಚಾಗಿ, ವಿವಿಧ ಪಾತ್ರಗಳಲ್ಲಿ ಪರಸ್ಪರ ಸಂಬಂಧವನ್ನೂ ಪರಸ್ಪರ ಅವಲಂಬನೆಯನ್ನೂ ಕಲ್ಪಿಸಿ ಕಾದಂಬರಿಯನ್ನು ಓದಿದವರ ಮನಸ್ಸಿನ ಮೇಲೆ ಆಗುವ ಪರಿಣಾಮದಲ್ಲಿ ಐಕ್ಯತೆಯಿರುವಂತೆ ನೋಡಿಕೊಳ್ಳಬೇಕಾದುದು ಅಗತ್ಯ. ಇಲ್ಲದಿದ್ದರೆ, ಕಾದಂಬರಿಯ ಬಂಧದಲ್ಲಿ ಶೈಥಿಲ್ಯ ತಲೆದೋರಿ ಕಟ್ಟಡ ಕುಸಿದು ಬೀಳಬಹುದು; ಇಲ್ಲವೆ ಎರಡು ಮೂರು ಕಾದಂಬರಿಗಳನ್ನು ಓದಿದ ಭಾವನೆ ವಾಚಕನಿಗೆ ಬರಬಹುದು. 'ಸಮರಸವೇ ಜೀವನ' ಈ ಪರೀಕ್ಷೆಯನ್ನು ಧೈರ್ಯವಾಗಿ ಎದುರಿಸಬಲ್ಲುದು. ಮುಖ್ಯವಾಗಿ ನಾಲ್ಕಾರು ವ್ಯಕ್ತಿಗಳನ್ನು—"ದಂಪತ್ತು"ಗಳನ್ನು—ಕೇಂದ್ರವಾಗಿ—ಕಾಂಡವಾಗಿ—ಇಟ್ಟುಕೊಂಡು ಕಾದಂಬರಿಕಾರರು ಅವರ ಸುತ್ತಲೂ ಕಥೆಯ ನಾನಾ ಶಾಖೆಗಳನ್ನು ಹಬ್ಬಿಸಿದ್ದಾರೆ. ಕಾದಂಬರಿಯ ಉದ್ದಕ್ಕೂ ಈ ತಂತ್ರದ ಅನುಸರಣೆಯಿರುವುದರಿಂದ ಅದಕ್ಕೊಂದು ಆಂತರಿಕ ಐಕ್ಯತೆ ಬಂದಿದೆ. ಬಹು ವರ್ಷಗಳ ಪರ್ಯಂತರ ಬೇರೆ ಬೇರೆ ಊರುಗಳಲ್ಲಿ ರಚಿತವಾದ ಈ ಬೃಹತ್ಕೃತಿಯ ಸೂತ್ರವನ್ನು ಕಾದಂಬರಿಕಾರರು ಎಲ್ಲೂ ಕೈಬಿಡದೆ ತಮ್ಮ ಹಿಡಿತವನ್ನು ಸಡಿಲಿಸದೆ ನಡೆಸಿಕೊಂಡು ಹೋಗಿದ್ದಾರೆ.

'ಸಮರಸವೇ ಜೀವನ' ಎಂಬ ಹೆಸರೇ ಅದರಲ್ಲಿ ಅಂತರ್ಗತವಾಗಿದ್ದು ಅದಕ್ಕೊಂದು ತೂಕವನ್ನು ಕೊಡುವ ಕಾದಂಬರಿಕಾರರ ಜೀವನದರ್ಶನವನ್ನು ವ್ಯಕ್ತಪಡಿಸುತ್ತದೆ. ಏರುಪೇರುಗಳೂ, ಕಷ್ಟಸುಖಗಳೂ, ಸ್ನೇಹವೈಷಮ್ಯಗಳೂ ಜೊತೆಜೊತೆಯಾಗಿ ಬರುವ ಈ ಜೀವನದಲ್ಲಿ ಸಮರಸವೇ ಸೌಖ್ಯದ ಮೂಲವೆಂಬ ಆಪ್ಯಾಯಮಾನವಾದ ತತ್ವದ ಪ್ರತಿಪಾದನೆ ಇಲ್ಲಿ ಪರೋಕ್ಷವಾಗಿ ನಡೆದಿದೆ. ಈ ಸಾಮರಸ್ಯ ವಿವಿಧ ರೀತಿಯಲ್ಲಿ ವ್ಯಕ್ತವಾಗಬಹುದು. ವ್ಯಕ್ತಿಗೂ ವ್ಯಕ್ತಿಗೂ ನಡುವಣ ಪ್ರೀತಿ, ಪ್ರಾಂತ್ಯಪ್ರಾಂತ್ಯಗಳ, ದೇಶದೇಶಗಳ ಮಧ್ಯೆ ಬೆಳೆಯಬೇಕಾದ ಪ್ರೀತಿ, ತತ್ಫಲವಾಗಿ ಲಭಿಸುವ ಶಾಂತಿ—ಹೀಗೆ ಸಾಮರಸ್ಯವೂ ಅದರ ಫಲವೂ ಅನೇಕ ರೂಪಗಳಲ್ಲಿ ಕಾಣಿಸಿಕೊಳ್ಳಬಹುದು. ಇತರರೊಡನೆ ಹೊಂದಿಕೊಂಡು ಹೋಗುವುದೇ ಮಾನವನ ಲೌಕಿಕ ಜೀವನದಲ್ಲಿ ಸೌಖ್ಯದ ಆಕರ, ಬೀಜಮಂತ್ರ ಎಂಬುದನ್ನು ನಾವಿಲ್ಲಿ ಕಾಣುತ್ತೇವೆ. ಈ ತತ್ವದ ಪ್ರಾಮುಖ್ಯ ಕೇವಲ ವ್ಯಕ್ತಿಜೀವನಕ್ಕೆ, ಪ್ರಾಂತಜೀವನಕ್ಕೆ ರಾಷ್ಟ್ರಜೀವನಕ್ಕೆ ಸಂಬಂಧಿಸಿದುದಲ್ಲ. ಇಡಿ ಜಗತ್ತಿನ ಸುಖಶಾಂತಿಗಳ ರಹಸ್ಯ ಅದರ ಅನುಷ್ಠಾನದಲ್ಲಿ ಅಡಕವಾಗಿದೆ. ಪರಿಣಾಮ

ದಲ್ಲಿ ಇಷ್ಟು ವಿಶ್ವವ್ಯಾಪಕವಾಗಬಲ್ಲ ಈ ಸತ್ಯವನ್ನು ಕಾದಂಬರಿಕಾರರು ತಮ್ಮ ಕೃತಿಯ ಮೂಲಕ ವಾಚಕರ ಗಮನಕ್ಕೆ ತಂದು ಅವರ ಆಲೋಚನೆಗೆ ಆಹಾರವನ್ನು ಒದಗಿಸಿ ಕಾದಂಬರಿಯ ಬೆಲೆಯನ್ನು ಹೆಚ್ಚಿಸಿದ್ದಾರೆ. ಇದಲ್ಲದೆ ಇತರ ಕೆಲವು ವಿಚಾರವಾಹಿನಿಗಳೂ ಅದರಲ್ಲಿ ಹರಿಯುತ್ತವೆ. ಕೌಟುಂಬಿಕ ಜೀವನದಲ್ಲಿ ಸಾಮಾಜಿಕ ಜೀವನದಲ್ಲಿ ಸುಧಾರಣೆಯ ಆವಶ್ಯಕತೆ, ಜೀವನದಲ್ಲಿ ವಿಧಿಯ ಕೈವಾಡ, ಮೊದಲಾದುವನ್ನು ಉದಾಹರಣೆಗಳಾಗಿ ಈ ಸಂದರ್ಭದಲ್ಲಿ ಸೂಚಿಸಬಹುದು. ಇವೆಲ್ಲಾ ಸೇರಿ ಕಾದಂಬರಿಯನ್ನು ಮಾರ್ಗದರ್ಶಿಯ ಸ್ಥಾನಕ್ಕೆ ಏರಿಸುತ್ತವೆ. ಶ್ರೇಷ್ಠ ದರ್ಜೆಯ ಕಲಾಕೃತಿಯಲ್ಲಿ—ಸಾಹಿತ್ಯದಲ್ಲಿ—ಇರಬೇಕಾದ ಹಿರಿತನವೇ ಇದು.

ಅಂತೆಯೇ ಇಂದು ಓದಿ ನಾಳೆ ಮರೆತುಬಿಡುವ ಕೃತಿಯಲ್ಲ ಈ ಕಾದಂಬರಿ. ಬಹುಕಾಲ ಅದರ ಸಹವಾಸದಲ್ಲಿದ್ದು (ಆ ಸಹವಾಸ ಎಷ್ಟು ಸಂತೋಷಕರವೋ ಅಷ್ಟೇ ಪ್ರಯೋಜನಕಾರಿ) ಅದರ ವಿವಿಧ ಮುಖಗಳ ನಿಕಟ ಪರಿಚಯ ಪಡೆದು, ಅದು ತೆರೆದು ತೋರುವ ಜೀವನದ ಆಳಕ್ಕಿಳಿದು ಮನನಮಾಡಬೇಕಾದ ಉದ್ಗ್ರಂಥವಿದು. ಕಲೆ, ತತ್ತ್ವಚಿಂತನೆ, ಹಾಸ್ಯ, ವಿಡಂಬನೆ, ಕರುಣೆ, ಭಾಷಾವೈಖರಿ, ಶೈಲಿಯ ವೈಶಿಷ್ಟ್ಯ, ಪ್ರಾದೇಶಿಕತೆ, ಮಾನವೀಯತೆ—ಇವೆಲ್ಲ ಕಾರಣಗಳಿಗಾಗಿ ಅದಕ್ಕೆ ಗೌರವದ ಸ್ಥಾನ ಖಂಡಿತ ಸಲ್ಲುತ್ತದೆ.

ಪ್ರವಾಸ ಸಾಹಿತ್ಯ

ದೇಜಗೌ

೧

ಜ್ಞಾನಸಾಧನಾಮಾರ್ಗಗಳಲ್ಲಿ ಪ್ರವಾಸ ಬಹುಮುಖ್ಯವಾದದ್ದು, ನೇರವಾದದ್ದು. ವ್ಯಾಸಂಗ ಭಾಷಣಗಳಿಂದ ದೊರೆಯದ ಅನುಭವ ಇದರಿಂದ ದೊರೆಯುತ್ತದೆ. ಪ್ರವಾಸ ಸಾಹಿತ್ಯ ನೂರಾರು ಅನುಭವಗಳ ಗಣಿ; ಅದೊಂದು ಮರಿವಿಶ್ವಕೋಶ; ಅಂಗೈ ಮೇಲಣ ಕಿರುಪ್ರಪಂಚ. ದೂರದ ನಾಡು ಮತ್ತು ನಾಡವರ ಗಾಢ ಪರಿಚಯದಿಂದ ಆತ್ಮೀಯತೆ ಬಲಿದು, ವಿಶ್ವಭಾವನೆ ಉದ್ಬೋಧವಾಗುತ್ತದೆ; ಬುದ್ಧಿಭಾವಗಳು ವಿಕಾಸ ಗೊಳ್ಳುತ್ತವೆ. ಇವೆಲ್ಲ ಲಭ್ಯವಾಗಬೇಕಾದರೆ ಪ್ರವಾಸಿಗನಿಗೆ ನೋಡುವ ಕಣ್ಣಿರಬೇಕು, ಕೇಳುವ ಕಿವಿಯಿರಬೇಕು, ಉಪಾಸಿಸುವ ಮನಸಿರಬೇಕು, ಗ್ರಹಿಸುವ ಶಕ್ತಿಯಿರಬೇಕು; ಮೇಲಾಗಿ ಸಹನೆ ಸಹಾನುಭೂತಿಗಳಿರಬೇಕು. ಈ ಗುಣಗಳ ಅಭಾವ ತಲೆದೋರಿದಾಗ ಪ್ರವಾಸ ನಿಷ್ಫಲವಾಗುತ್ತದೆ. ಗ್ರಹಣ ಸಾಮರ್ಥ್ಯದ ಜೊತೆಗೆ ಅಭಿವ್ಯಕ್ತಿ ಶಕ್ತಿಯೂ ಪ್ರವಾಸಿಗನಲ್ಲಿರುವುದಾದರೆ ಪ್ರವಾಸ ನೂರಕ್ಕೆ ನೂರು ಪಾಲು ಯಶಸ್ವಿಯಾಗುತ್ತದೆ.

ಪ್ರತಿವರ್ಷವೂ ಸಹಸ್ರಾರು ಮಂದಿ ಭಾರತೀಯರು ವಿದ್ಯಾರ್ಜನೆಗೊ ವ್ಯಾಪಾರಕ್ಕೊ ವಿಶೇಷಾನುಭವ ಸಂಪಾದನೆಗೊ ವಿದೇಶಗಳಿಗೆ ಯಾತ್ರೆಮಾಡುತ್ತಾರೆ. ಆದರೆ ಬಹು ಪಾಲು ಜನ ವ್ರತಭ್ರಷ್ಟರಾಗಿ ಹಿಂದಿರುಗುತ್ತಾರೆ. ಏನೊ ಕಲಿತು ಬಂದೆವೆಂದು ಬೀಗುವ ಜನರೂ ಮತಿಶೂನ್ಯರಾಗಿ ಕಾಣುತ್ತಾರೆ. ಬಟ್ಟೆಬರೆ ಮಾತಿನ ಕಾಕುಗಳಲ್ಲಿ ಬದಲಾವಣೆ ಕಾಣುತ್ತದೆ. ಅವರ ಜೀವನದೃಷ್ಟಿಯಲ್ಲಿ ಧ್ರುವಗಳಷ್ಟು ಅಂತರ ವ್ಯಕ್ತವಾಗುತ್ತದೆ. ಬುದ್ಧಿಸಾಮರ್ಥ್ಯದಲ್ಲಿ ಪ್ರಾಗಲ್ಭ್ಯಪಕ್ವತೆಗಳು ಎದ್ದು ಕಾಣುವುದಿಲ್ಲ. ಮುಂಬಯಿ ಬಂದರಿನಲ್ಲಿ ಇಳಿಯುತ್ತಿದ್ದಂತೆಯೆ ಅವರು ಅಪರಿಹಾರ್ಯವಾದ ಅತೃಪ್ತಿಯ ಮನೋರೋಗಕ್ಕೆ ಬಲಿಯಾದಂತೆ ವರ್ತಿಸುತ್ತಾರೆ. ವಿದೇಶಗಳಲ್ಲಿ ತಾವನುಭವಿಸಿದ ಭೋಗ ಸಂಪತ್ತನ್ನು ನೆನೆದು ಭಾರತದ ಬಡತನವನ್ನು ಹಳಿದು ಕಣ್ಣೀರಿಡುತ್ತಾರೆ. ಅಲ್ಲಿಯ ಸುಖ ಸಂಪತ್ತನ್ನು ಇಲ್ಲಿಯೂ ಸೃಷ್ಟಿಸಬೇಕೆನ್ನುವ ಇರಾದೆಯಿಲ್ಲದೆ ಹಿಂದಕ್ಕೆ ಮರಳುವ ಯತ್ನದಲ್ಲಿರುತ್ತಾರೆ. ಇಲ್ಲಿಯ ಊಟತಿಂಡಿಗಳನ್ನು ಕಂಡರೆ ಅವರಿಗೆ ಬವಳಿ ಬರುತ್ತದೆ, ರೀತಿ ನೀತಿಗಳನ್ನು ಕಂಡರೆ ಸಿಟ್ಟು ಮೂಡುತ್ತದೆ; ನೆಂಟರಿಷ್ಟರನ್ನು ಕಂಡರೆ ಓಕರಿಕೆ ಹುಟ್ಟು

ತ್ತದೆ; ಎಲ್ಲಿ ನೋಡಿದರೂ ಅಸಿಷ್ಟದ ಪಿಶಾಚಿ ಜಗದಗಲ ಬಾನೆತ್ತರ ನಿರಾಶೆಯ ಬಾಯಿ ತೆರೆದು ನಿಂತಂತೆ ತೋರುತ್ತದೆ. ದೇಶಾಭಿಮಾನ ಆತ್ಮಾಭಿಮಾನಗಳೆರಡೂ ಅವರಿಗೆ ಪರಕೀಯವಾಗುತ್ತವೆ. ಭಾರತೀಯ ಸಂಸ್ಕೃತಿಯಲ್ಲಿ ಅವರು ಬೇರು ಬಿಡಲಿಲ್ಲ; ಪರಕೀಯ ಸಂಸ್ಕೃತಿಯ ಆಳ ಸಿಗಲಿಲ್ಲ. ಅವರ ತೇಲುನೋಟಕ್ಕೆ ಅಲ್ಲಿ ಸಿಕ್ಕಿದ್ದು ಓಟೆ ಅಥವಾ ತೊಗಟೆ. ಹೀಗಾಗಿ ಅವರದು ತ್ರಿಶಂಕು ಸ್ಥಿತಿ.

ನಿಶಿತಮತಿಯ ಸೂಕ್ಷ್ಮಗ್ರಹಣಶಕ್ತಿಯ ಪ್ರತಿಭಾಶ್ರೀಮಂತನಾದ ವ್ಯಕ್ತಿ ಎಲ್ಲಿ ಹೋದರೂ ತನ್ನ ತನವನ್ನು ಬಿಟ್ಟುಕೊಡದೆ ಮತ್ತೊಂದುತನದ ಆಳಕ್ಕೆ ಮುಳುಗುತ್ತಾನೆ; ಪರಕಾಯಪ್ರವೇಶ ಮಾಡಿದರೂ ಅವನು ತನ್ನತನವನ್ನು ಬಲಿಗೊಡುವುದಿಲ್ಲ. ಮತ್ತೊಂದುತನದ ಸಾರದಿಂದ ತನ್ನತನವನ್ನು ಬೆಳೆಸಿಕೊಳ್ಳುತ್ತಾನೆ. ಶ್ರೀ ವಿ. ಕೃ. ಗೋಕಾಕರು ಇಂಥವರು. ಅವರ ದೃಷ್ಟಿಯಲ್ಲಿ ಪ್ರವಾಸಸಾಹಿತ್ಯ ಮನೋರಂಜಕವೂ ಅಹುದು, ವಿದ್ಯಾರ್ಜನೆಯ ಸಾಧನವೂ ಅಹುದು. ಅವರೇ ಹೇಳುವಂತೆ 'ಪರಕೀಯ ಸಂಸ್ಕೃತಿಯ ಸಂಪರ್ಕದಿಂದ ಉಂಟಾದ ಪರಿಣಾಮಗಳನ್ನು ನಿರೂಪಿಸಲು' ಪ್ರಯತ್ನಿಸಿದ್ದಾರೆ. ತಮ್ಮ ತಂಗಣೆಯ ಕಾಲದಲ್ಲಿ ಕಂಡ ದೃಶ್ಯಗಳನ್ನೂ, ಸುತ್ತಮುತ್ತಣ ಸಮಾಜದ ಬಾಹ್ಯಾಂತರ ಸ್ವರೂಪವನ್ನೂ, ಅವುಗಳ ಬಗೆಗೆ ತಮ್ಮ ಮನಸ್ಸಿನಲ್ಲಿ ಮೂಡಿದ ಭಾವಗಳನ್ನೂ ಕಥನಿಸಿದ್ದಾರೆ, 'ಸಮುದ್ರದಾಚೆಯಿಂದ' ಗ್ರಂಥದಲ್ಲಿ. ಇದು ಪ್ರವಾಸ ಕಥೆಯೆನ್ನುವುದಕ್ಕಿಂತ ದಿನಚರಿಯ ದರ್ಶನವೆನ್ನಬಹುದು.

ಗೋಕಾಕರ ಅನುಭವ ಪ್ರಮುಖವಾಗಿ ವಿಶ್ವವಿದ್ಯಾನಿಲಯದ ಕಾರ್ಯಕ್ಷೇತ್ರಕ್ಕೆ, ಕೆಲವು ಸಾಹಿತ್ಯ ಸಂಘಗಳಿಗೆ, ಅಲ್ಲಿ ಕಾಣಿಸಿಕೊಳ್ಳುವ ಕೆಲವು ವ್ಯಕ್ತಿಗಳಿಗೆ ಮಾತ್ರ ಸೀಮಿತವಾದುದು. ಆಂಗ್ಲ ಸಮಾಜದ ಇತರ ವಲಯಗಳ ಕಡೆಗೆ ಅವರು ಮರೆತೂ ಕಣ್ಣು ಹಾಯಿಸಿದಂತೆ ತೋರುವುದಿಲ್ಲ; ಕಣ್ಣು ಹಾಯಿಸಿದ್ದರೂ ಅವುಗಳ ಪ್ರಭಾವ ಅವರ ಮನಸ್ಸಿನ ಮೇಲೆ ಅಚ್ಚೊತ್ತಿದಂತೆ ಕಾಣುವುದಿಲ್ಲ. ಆದರೆ ಅವರು ಕಂಡದ್ದನ್ನೆಲ್ಲ ಸ್ಪಷ್ಟವಾಗಿ ಕಂಡರಿಸಿ, ವಾಚಕರಮನಸ್ಸಿನಲ್ಲಿ ಸಾಕಾರತೆ ಪಡೆಯುವಂತೆ ಶಬ್ದ ಚಿತ್ರಗಳನ್ನು ಬಿಡಿಸುತ್ತಾರೆ. ಈ ಶಬ್ದ ಚಿತ್ರಗಳು ಆ ಸಮಾಜದ ವಸ್ತುಸ್ಥಿತಿಗೆ ಮಾತ್ರವಲ್ಲ, ಅವರ ವ್ಯಕ್ತಿತ್ವಕ್ಕೂ ಕನ್ನಡಿ ಹಿಡಿಯುತ್ತವೆ. ದೇಶಾಭಿಮಾನ ಭಾಷಾಭಿಮಾನ ಹಾಗೂ ಆತ್ಮಗೌರವಗಳು ಅವರ ವ್ಯಕ್ತಿತ್ವದ ಪ್ರಮುಖಲಕ್ಷಣಗಳೆಂದು ಈ ದಿನಚರಿಯ ಪುಟಗಳಿಂದ ಸ್ಪಷ್ಟವಾಗುತ್ತದೆ. ಆಂಗ್ಲ ಪ್ರಭುತ್ವ ಸುಭಪ್ರವಾಗಿದ್ದಾಗ, ಆಂಗ್ಲ ಸಾಹಿತ್ಯದಲ್ಲಿ ಪರಿಣತಿಯನ್ನು ಸಂಪಾದಿಸಿ, ವಿಶೇಷ ವ್ಯಾಸಂಗಕ್ಕಾಗಿ ಶೇಕ್ಸ್‌ಪಿಯರ್‌ನ ನಾಡಿನಲ್ಲಿ ತಂಗಿದ ತರುಣನ ಲೇಖನಿಯಿಂದ ಆಂಗ್ಲ ಮೋಹವಿರಹಿತವಾದ, ತನ್ನತನದ ಹೆಗ್ಗಳಿಕೆಯ ಬಗೆಗಿನ, ದೇಶಾಭಿಮಾನಪರವಾದ ಲೇಖನಗಳನ್ನು ಕಾಣುವುದೇ ವಿಸ್ಮಯಕಾರಿಯಾದ ಸಂಗತಿ.

"ನಾನು ಏರಿದ ಹಡಗದ ಹೆಸರು ನಿನಗೆ ಗೊತ್ತಿದೆಯಷ್ಟೆ. 'ಪಿ. ಎಂಡ್. ಓ.' ಎಂಬ ಆಂಗ್ಲ ಕಂಪೆನಿಯೊಂದಿದೆ. ಲಂಡನ್ನಿನಲ್ಲಿ ಪಿಕ್ಯಾಡಿಲಿ ಓಣಿಯ ಹತ್ತಿರ ಅದರ ದೊಡ್ಡ ಕಟ್ಟಡವಿದೆ. ಹಿಂದೂಸ್ಥಾನದ ದುಡ್ಡೇ ಈ ಭವ್ಯಮಂದಿರದ ತಳಹದಿಯೆಂಬುವದರಲ್ಲಿ ಸಂದೇಹವಿಲ್ಲ. ನನ್ನ ದಿನದ ಹಜಾಮತಿಯನ್ನು ಹಿಡಿದು 'ಪಿ. ಎಂಡ್. ಓ'ದವರೆಗೆ ತಲೆ ಬೋಳಿಸಿಕೊಳ್ಳುವ ಕೆಲಸವೇ ನಡೆದಿದೆ"— ದಿನಚರಿಯ ಪ್ರಥಮ ಪತ್ರವೇ ಕಥೆಯ ಅಥವಾ ಕಾದಂಬರಿಯ ಧಾಟಿಯಲ್ಲಿ ಪ್ರಾರಂಭವಾಗುತ್ತದೆ; ಮುಂದಿನ ಪತ್ರಗಳಿಗೆ ಹೆಬ್ಬಾಗಿಲಂತಿದೆ. ಆಂಗ್ಲರಿಂದ ನಡೆಯುತ್ತಿದ್ದ ಹಿಂದೂಸ್ಥಾನದ ಶೋಷಣೆಯ ಚಿತ್ರ ಕಣ್ಣಿಗೆ ಕಟ್ಟಿದಂತಿದೆ. ಸ್ವಾಭಿಮಾನವಿಲ್ಲದ ಸಾಮಾನ್ಯರಿಗೆ ಗುಲಾಮಗಿರಿಯೂ ಸಹಜವೆಂಬಂತೆ ತೋರುತ್ತದೆ. ಸ್ವಾಭಿಮಾನಿಗೆ ಪ್ರತಿಯೊಂದು ಸಂಗತಿಯಲ್ಲಿಯೂ ಆಳರಸನ ದಬ್ಬಾಳಿಕೆ ಎದ್ದು ಕಾಣುತ್ತದೆ. "ನಮ್ಮ ಗುಲಾಮಗಿರಿಯು ಇಲ್ಲಿ ಪ್ರತಿ ನಿಮಿಷವೂ ನಮ್ಮ ಕಣ್ಣಲ್ಲಿ ಒತ್ತುತ್ತದೆ. ಒಬ್ಬ ಆಂಗ್ಲನು ಒಂಬತ್ತು ಮಂದಿ ಭಾರತೀಯರನ್ನು ಆಳುವನೆಂಬ ಮಾತು ಇಲ್ಲಿಯ ಕೂಲಿಯಾಳಿಗೂ ಗೊತ್ತಿದೆ" (ಪು ೩೮). ಭರತಖಂಡದ ರಾಜಾಧಿರಾಜರಿಗೂ ವಿಲಾಯಿತಿಯ ಕೂಲಿಯಾಳು 'ದೊರೆ'ಯಾಗಿದ್ದ ಕಾಲವೊಂದಿತ್ತು. ಆಂಗ್ಲ ಇಲ್ಲಿದ್ದಷ್ಟು ದಿನವೂ ದೇಶವನ್ನು ಕೊಳ್ಳೆ ಹೊಡೆದ. ಕೊಳ್ಳೆಯ ಹಣದಿಂದ ಇಂಗ್ಲೆಂಡಿನಲ್ಲಿ ಮಹಾಸೌಧಗಳು ಗಗನಚುಂಬಿಯಾಗಿ ವಿರಾಜಿಸಿದುವು, ಕಾರ್ಖಾನೆಗಳು ಕೊಬ್ಬಿದುವು, ಶ್ರೀಮಂತರು ಹಿಗ್ಗಿದರು, ವಿಜ್ಞಾನ ವಿಜೃಂಭಿಸಿತು. "ಆಂಗ್ಲರು ತಾವು ತಿಂದು ನಮ್ಮೆಡೆಗೆ ಎರಚಿದ ಎಂಜಲದಿಂದ ನಮ್ಮ ಹೊಟ್ಟೆ ತುಂಬಿ ಸಂತೋಷವಾಗಬೇಕು" (೩೯). ಹಾಗೆ ಎಂಜಲೆರಚುವುದು ಮಾತ್ರವಲ್ಲ,—ಅಷ್ಟರಿಂದಲೆ ಅವರಿಗೆ ತೃಪ್ತಿಯೂ ಇಲ್ಲ—ಒಂದೆರಡು ವರ್ಷದ ಕೂಸಿನ ಮನಸ್ಸಿನಲ್ಲಿಯೇ ಭಾರತೀಯರ ಬಗ್ಗೆ ತಾತ್ಸಾರಭಾವನೆಯನ್ನು ಬಿತ್ತಿ ಬೆಳೆಸುತ್ತಾರೆ. ಗೋಕಾಕರೊಂದು ದಿನ ಗೆಳೆಯರೊಡನೆ ಹೋಟಲಿನಲ್ಲಿ ಚಹ ಕುಡಿಯುತ್ತ ಕುಳಿತಿದ್ದರಂತೆ. ಅಲ್ಲಿದ್ದ ಆಂಗ್ಲ ಮಗುವೊಂದು ಅವರನ್ನೇ ನೋಡುತ್ತಿತ್ತಂತೆ. ಅವರ ತಂದೆತಾಯಿಯರು ಆ ಮಗುವಿನ ಕುತೂಹಲವನ್ನು ಮತ್ತಷ್ಟು ಕೆಣಕುವಂತೆ ಮುಂದಿದ್ದವರು 'Nigger' ಎಂದು ಕಿವಿಯಲ್ಲೂದಿ, ಹಾಗೆಯೇ ಕರೆಯುವಂತೆ ಪ್ರೇರಿಸಿದರು. ಮಗು ಇವರನ್ನು 'Nigger' ಎಂದು ಮೇಲಿಂದ ಮೇಲೆ ಒದರುತ್ತಿತ್ತು. ಈ ಪ್ರಸಂಗವನ್ನು ಕುರಿತ ಗೋಕಾಕರ ವ್ಯಾಖ್ಯಾನ ಚಾಟಿಯಂತಿದೆ. ನಮ್ಮವರ ಕಣ್ಣು ತೆರೆಯಿಸುವಂತಿದೆ: "ಹೀಗಿದೆ ಇಲ್ಲಿಯ ಸ್ಥಿತಿ. ತಂದೆ ಮಗುವಿಗೆ ಕೊಡುವ ಶಿಕ್ಷಣವಿದು. ಶಿಕ್ಷಕರು ಶಾಲೆಯಲ್ಲಿ ಹುಡುಗರಿಗೆ ಕೊಡುವ ಶಿಕ್ಷಣವಿದು. ಸರಕಾರವು ಜನತೆಗೆ ಕೊಡುವ ಶಿಕ್ಷಣವಿದು. ಆಂಗ್ಲವಾಙ್ಮಯ ಪ್ರೇಮಿಗಳು-ಶೇಕ್ಸಪಿಯರಿನ ಭಕ್ತರು—ಇದನ್ನು ನೆನಪಿನಲ್ಲಿಡಬೇಕು. ಶೇಕ್ಸಪಿಯರಿನ ದೇಶದಲ್ಲಿ ಬರಿಕಾವ್ಯವಿಲ್ಲ.ಸುಶ್ರಾವ್ಯವಾದ 'Nigger' ಎಂಬ ಶಬ್ದವು ಕೇರಿಕೇರಿಗಳಲ್ಲಿ ನಿನದಿಸುತ್ತದೆ"(೧೫೦).

ಸಾಮ್ರಾಜ್ಯದ ರೀತಿಯೇ ಇಂಥದು. ಆಳರಸರ ಎಂಜಲನ್ನು ಪ್ರಸಾದವೆಂದು ಜೋಡಿ ಕೈಯಲ್ಲಿ ಸ್ವೀಕರಿಸುವ ಆಂಗ್ಲ ದಾಸರಿಗೆ ಈ ಮಾತು ಪಥ್ಯವಾಗದು. ಅವರು ದೇಶದಿಂದ ತೊಲಗಿದರೂ ಅವರ ಭೂತ ಅವರ ಏಜೆಂಟರ ನೆರಳಿನ ಹಿಂದೆ ಮರೆಯಾಗಿ ನಿಂತು ಸಾಂಸ್ಕೃತಿಕ ಗುಲಾಮಗಿರಿಯನ್ನು ಮುಂದುವರಿಸುತ್ತಿದೆ. ಆತ್ಮಾಭಿಮಾನವುಳ್ಳ ಯಾವ ಭಾರತೀಯನ ರಕ್ತವಾದರೂ ಈ ಮಾತು ಕೇಳಿದಾಗ ಕುದಿಯದಿರಲಾರದು.

ಈ ರೀತಿಯ ಶಿಕ್ಷಣ ಇಷ್ಟಕ್ಕೇ ನಿಲ್ಲಲಿಲ್ಲ. ಹುಡುಗರಿಗಾಗಿ ನೀಗ್ರೋ ಗೊಂಬೆಗಳನ್ನು ತಯಾರಿಸಿ, ಸಂತೆ ಜಾತ್ರೆಗಳಲ್ಲಿ ಅಂಗಡಿಮುಂಗಟ್ಟುಗಳಲ್ಲಿ ಮಾರುತ್ತಾರಂತೆ. ಆಯರ್ಲೆಂಡಿನ ಸಾಮಾನ್ಯ ಜನರಿಗೆ ಹಿಂದೂಸ್ಥಾನ ಕರಿಯ ಜನರ ನಾಡಂತೆ. ಅವರು ಚಹ ಸಹ ಕುಡಿಯದೆ ದುಡ್ಡು ಮಿಗಿಸಿ, ಇಲ್ಲಿಯ ಅಸ್ಪೃಶ್ಯರನ್ನು ಮತಾಂತರಗೊಳಿಸುವ ಸಂಸ್ಥೆಗೆ ಕಳಿಸಿಕೊಡುತ್ತಾರಂತೆ. ಲಂಡನ್ನಿನ ಬಂದರಿನಲ್ಲಿ ಭಾರತೀಯ ನೌಕರರಿಗಾಗಿ ಪ್ರತ್ಯೇಕ ಪಾಯಖಾನೆಯಿದೆಯಂತೆ. "ಅಲ್ಲಿ 'for Laskars only' ಎಂದು ಒಂದು ದೊಡ್ಡ ಬೋರ್ಡಿದೆ...(ಆಂಗ್ಲರ) ಒಂದು ನಾಯಿ ಸಹ ಅಲ್ಲಿ ಸುಳಿಯುವ ಹಾಗಿಲ್ಲ. ಆಂಗ್ಲರ ಪ್ರತಿಭೆಯ ಮೂಲವಿದು! ಅಪಮಾನಗೊಳಿಸುವುದಿದ್ದರು ಸಹ ಹಾಗೆ ಮಾನ ಪೂರ್ವಕವಾಗಿ ಮಾಡಬೇಕು!" (೨೫೩). ಇಲ್ಲಿಯ ಸ್ಪೃಶ್ಯರೂ ಅಲ್ಲಿ ಅಸ್ಪೃಶ್ಯರಾಗುತ್ತಾರೆ; ಇಲ್ಲಿಯ ಉತ್ತಮ ವರ್ಗದವರು ಅಲ್ಲಿ ಅಧಮವರ್ಗದವರಾಗುತ್ತಾರೆ.

ಸಾಹಿತಿಯ ಲೇಖನಿ ರಾಜಕೀಯಾಸ್ತ್ರಗಳಿಗಿಂತ ಪ್ರಖರವಾದದ್ದೆಂಬುದಕ್ಕೆ ಮೇಲಿನ ಮಾತು ಸಾಕ್ಷಿಯಾಗಿದೆ. ರಾಜಕೀಯ ವಾಣಿಗೆ ಮಣಿಯದ ಜನಮನಸ್ಸು ಕವಿವಾಣಿಯ ಗಾರುಡಿಗೆ ಶರಣಾಗುತ್ತದೆ. ಅಸ್ವತಂತ್ರರಾದ ದಲಿತವರ್ಗದ ಜನ ಈ ವಾಣಿಯಿಂದ ಸಿಡಿದೆದ್ದು ತಮ್ಮತನದ ಬಾವುಟವನ್ನು ಮೆರೆಸದಿರಲಾರರು. ಆಂಗ್ಲ ಸಾಮ್ರಾಜ್ಯದ ಕರಿಯ ಪ್ರಜೆಯೊಬ್ಬ ಆಳರಸರ ನೆಲದ ಮೇಲೆ ನಿಂತು ಇಷ್ಟು ದಿಟ್ಟತನದಿಂದ ಅವರ ವರ್ತನೆಯನ್ನು ಕುರಿತು ಟೀಕಿಸಬೇಕಾದರೆ ಎದೆಗಾರಿಕೆ ಅಪಾರವಾಗಿರಬೇಕು. ಈ ಭಾಗ ವನ್ನೋದಿದಾಗ ಇಂದಿನ ಗೋಕಾಕರಿಗೂ ಅಂದಿನ ಗೋಕಾಕರಿಗೂ ಅನೂಹ್ಯವಾದ ಅಂತರವಿರುವಂತೆ ತೋರುತ್ತದೆ. ಆ ಸೀಮೆಯ ಜನ ಆಗಾಗ್ಗೆ ಇಲ್ಲಿಗೆ ಬಂದು ಇಲ್ಲಿಯ ಒಳಿತೆಲ್ಲವನ್ನು ಮರೆಸಿ, ವಿಕಾರತೆಗಳನ್ನೆಲ್ಲ ಬರಹಗಳ ಮೂಲಕ ಚಿತ್ರಗಳ ಮೂಲಕ ದೊಡ್ಡದು ಮಾಡಿ, ಭಾರತೀಯರ ಮೌಢ್ಯವನ್ನು ಡಂಗುರಿಸಿ ನಗೆಯಾಡುವುದುಂಟು. ಹಿಂದೂ-ಮುಸ್ಲಿಂ ದಂಗೆಯ ದೃಶ್ಯವನ್ನು ಸಿನಿಮಾಮಂದಿರಗಳಲ್ಲಿ ಪ್ರದರ್ಶಿಸುತ್ತಾರೆ: ಅವರ ಸ್ನೇಹಪ್ರಸಂಗಗಳನ್ನು ಅವಿಸುತ್ತಾರೆ. ಆ ಜನರ ಆಚಾರ ಪದ್ಧತಿಗಳು ಇಲ್ಲಿಯವರಿಗೆ ಅಸಹ್ಯಕರವಾಗಿ ತೋರುತ್ತವೆಂಬುದನ್ನು ಅವರು ಮರೆತುಬಿಡುತ್ತಾರೆ. ದಾಸ್ಯ ಮನೋಭಾವದ, ನಾಟಜನರ ಗುಳಿಗಣ್ಣಿಗೆ ಅದೆಲ್ಲ ಅದ್ಭುತವಾಗಿ ಕಾಣಬಹುದು; ಆದರೆ ಆತ್ಮಗೌರವವುಳ್ಳ ಪ್ರತಿಭಾಶಾಲಿಯ ನಿಚ್ಚಳಗಣ್ಣಿಗೆ ಅವರ ಹುಳುಕುಗಳು

ಸ್ಪಷ್ಟವಾಗಿ ಗೋಚರವಾಗುತ್ತವೆ. "ಅಲ್ಲಿ ಅವರು ಬತ್ತಲೆ ಕುಣಿಯುತ್ತಾರೆ. ಬಂದು ಹೋದವರೆದುರಿಗೆ ಸಂಕೋಚವೇ ಇಲ್ಲ. ಭಾರತದ ಹಳ್ಳಿಗಳಲ್ಲಿ ಹೀಗೆ ಮಾಡಿದರೆ, ಅದು ಅನಾಗರಿಕತೆಯ ಕುರುಹೆಂದು ಬಯಲಿಗೆ ಬರುವದು. ಇದು ವಿಲಾಯಿತಿಯ ಸಂಸ್ಕೃತಿ ಯೆಂದು ಮನ್ನಣೆ ಹೊಂದುವದು" (೬). ಇದಕ್ಕೆ ಬೇರೆ ವ್ಯಾಖ್ಯಾನ ಅನಗತ್ಯ. ಲೈಂಗಿಕ ವಿಷಯದಲ್ಲಂತು ಆ ಜನಕ್ಕೆ ಕಟ್ಟುನಿಟ್ಟಲ್ಲ; ನಾಚಿಕೆ ಹೇಸಿಕೆಗಳಿಲ್ಲ; ನೆರೆಹೊರೆಯವರ ಪರಿವೆಯಿಲ್ಲ; ಕಾಲದೇಶಗಳ ತೊಡಕಿಲ್ಲ. "ಹೈಡ್‌ಪಾರ್ಕ್ ಎಂದರೆ ಹೋಳಿ ಹುಣ್ಣಿಮೆಯ ವರ್ಷದಲ್ಲಿ ಹನ್ನೆರಡು ತಿಂಗಳು ನಡೆಯುವ ಸ್ಥಳ" (೧೮೩). ಇಷ್ಟಕ್ಕೇ ಮುಗಿಯಲಿಲ್ಲ ಅವರ ಕತೆ. ಚಿತ್ತದ ತೂಕಸಮತೆಗಳು ತಪ್ಪಿಹೋಗುವತನಕ ಹೆಂಗಸರು ಗಂಡಸರು ಬಾಟಲಿಗಳನ್ನು ಹೇರುತ್ತಾರೆ. "ಹಾಗೆ ಪ್ರಜ್ಞೆತಪ್ಪಿದ ಹುಡುಗಿಯರನ್ನು ಸಿಪಾಯಿಗಳು ಹೊತ್ತುಕೊಂಡು ಹೋಗುತ್ತಾರೆ." (೧೨೨). ಇದು ಅಲ್ಲಿ ದಿನನಿತ್ಯದ ದೃಶ್ಯ.

ಆಂಗ್ಲರ ಅಥವಾ ಆಂಗ್ಲ ಸಂಸ್ಕೃತಿಯ ಬಗ್ಗೆ ಗೋಕಾಕರಿಗೆ ಸ್ವಲ್ಪವೂ ತಿರಸ್ಕಾರವಿಲ್ಲ. ಅವರು ಬದುಕಿನ ಕತ್ತಲೆಯ ಭಾಗವನ್ನು ವರ್ಣಿಸುವಷ್ಟೆ ಶ್ರದ್ಧೆಯಿಂದ ಬೆಳಕಿನ ಭಾಗ ವನ್ನು ನಿರೂಪಿಸುತ್ತಾರೆ. ಅಲ್ಲಿ ಎಲ್ಲವೂ ಕೆಟ್ಟದೆನ್ನುವ ದುರ್ಬುದ್ಧಿ ಅವರಿಗಿಲ್ಲ. ಸೊಗಸು ಹೊಲಸುಗಳೆರಡನ್ನೂ ನಿಷ್ಪಕ್ಷಪಾತ ದೃಷ್ಟಿಯಿಂದ, ನಿರ್ಭೀತಿಯಿಂದ, ಪ್ರಾಮಾಣಿ ಕತೆಯಿಂದ ಸಂಯಮದಿಂದ ವಿವರಿಸುತ್ತಾರೆ. ಒಬ್ಬರಿಗೆ ಹೊಲ್ಲವಾದದ್ದು ಮತ್ತೊಬ್ಬ ರಿಗೆ ಸಲ್ಲುತ್ತದೆ, ಮತ್ತೊಬ್ಬರಿಗೆ ಸಲ್ಲಃವಂಥದು ಮಗುದೊಬ್ಬರಿಗೆ ಹೊಲ್ಲವಾಗುತ್ತದೆಂಬ ಚಿರಸತ್ಯ ಅವರಿಗೆ ತಿಳಿದೇ ಇದೆ. ಈ ಸತ್ಯ ಆ ಜನಕ್ಕೆ ತಿಳಿಯಲಿಲ್ಲವೆಂಬುದೇ ಅವರ ಬೇಸರಕ್ಕೆ ಕಾರಣವಾಗಿದೆ. ಅಲ್ಲಿಯ ಲೇಸನ್ನೆಲ್ಲ ಮುಕ್ತಕಂಠದಿಂದ ಹೊಗಳುತ್ತಾರೆ. "ಆಂಗ್ಲರ ರಾಜನೀತಿಯು ಅಮಾವಾಸ್ಯೆಯಷ್ಟು ಕಗ್ಗತ್ತಲು. ಆದರೆ ಅವರ ಕಾವ್ಯ ಸಂಗೀತ ನಾಟಕ ಅವರ್ಣನೀಯ ಸೌಂದರ್ಯವದು!" (೩೯). ಟರ್ನರ್ ದಂಪತಿಗಳು ಕರ್ಮ ಯೋಗಿಗಳೆಂಬುದಾಗಿ ಚಿತ್ರಿತರಾಗಿದ್ದಾರೆ. "ಉದ್ಯೋಗಪ್ರಿಯತೆಯಂತೆ ರಸಿಕತೆಯೂ ಇವರಲ್ಲಿ ಮನೆಮಾಡಿಕೊಂಡಿದೆ" (೪೮) ಎನ್ನುವಾಗ ಇಡೀ ಜನಾಂಗವನ್ನು ಅತ್ಯಂತ ಗೌರವದಿಂದ ಕಂಡಂತಾಗಿದೆ. "ಹಿಂಸೆಯ ಹಿರಿಯನಾದ ಆಂಗ್ಲನು ಇಲ್ಲಿ (ಹೈಡ್ ಪಾರ್ಕ್) ಪ್ರೇಮದ ತಪೋವನವನ್ನು ಕಟ್ಟಲು ಬಯಸಿದ್ದಾನೆ" (೧೧೩) ಎಂಬ ವಾಕ್ಯ ವನ್ನೋದಿದಾಗ ಅವರ ಬಗೆಗೆ ಕನಿಕರ ಮೂಡುತ್ತದೆ. ಮ್ಯಾಡಮ್ ಟ್ಯುಸೋಜ್ ಮೇಣದ ಬಸ್ತಿಯಂತು ದಿನಚರಿಕಾರರ ಸೌಂದರ್ಯ ತೃಷೆಯನ್ನು ಹಿಂಗಿಸಿದೆ. ಇಷ್ಟಾ ನಿಷ್ಟಗಳ ಗುಣಾವಗುಣಗಳ ದ್ವಂದ್ವವೇ ಬದುಕಿನ ರಹಸ್ಯವೆನ್ನುವ, ಅವುಗಳ ಕಲ ಬೆರಕೆಯೆ ಮನುಷ್ಯತ್ವವೆನ್ನುವ ತತ್ತ್ವದ ಅಭಿವ್ಯಕ್ತಿಯನ್ನು ಉದ್ದಕ್ಕೂ ಕಾಣಬಹುದು.

ಅಲ್ಲಿಯ ನಿಸರ್ಗಸೌಂದರ್ಯದ ಹೊನಲಿನಲ್ಲಿ ಕವಿಹೃದಯ ಸ್ನಾನಗೈದು ತಣಿದಿದೆ. ವರ್ಡ್ಸ್‌ವರ್ತ್ ಕವಿಯ ದೃಷ್ಟಿಗೆ ಕಾರಣವಾದ ಸೌಂದರ್ಯ ನಿಜಕ್ಕೂ ಚೈತನ್ಯದಾಯಿ,

ಅತ್ಯುದ್ದೀಪನಕಾರಿ. ಆ ಚೆಲುವು ಕನ್ನಡದ ಗದ್ಯಮಾಧ್ಯಮದಲ್ಲಿ ಘನಿಸಿದೆ, ಪ್ರಜ್ವಲಿಸಿದೆ. ಕವಿಚೇತನ ಸೌಂದರ್ಯಪಾನದಿಂದ ಮತ್ತೇರಿದಾಗ ಗದ್ಯ ಪದ್ಯಗಳ ದ್ವಂದ್ವತೆ ಮರೆಯಾಗುತ್ತದೆ. ಚೆಲುವಿನ ಚೆಲುವೆಯಲ್ಲಿ ಮುಳುಗೆದ್ದ ಭಾಷೆ ಗದ್ಯಪದ್ಯಗಳ ಉಪಾಧಿಯಿಂದ ಪಾರಾಗುತ್ತದೆ. "ಸೌಂದರ್ಯವನ್ನು ಸುಡಲು ಬಂದ ಉರಿಯ ಹೊಗೆಯಂತೆ ಕೆಳಗೆ ಮೇಲೆ ಎಲ್ಲೆಡೆಗೆ ಸುತ್ತಿ ಮಂಜು ಕಣ್ಣಲ್ಲಿ ಮೂಗಿನಲ್ಲಿ ಹೋಗುತ್ತದೆ" (೮೯). "ಇಡೀ ಬಿಡಾರದಲ್ಲಿ ಈಕೆ ಸುಳಿದರೆ ಎಲ್ಲರ ಹೃದಯವೂ ಕಂಪಿಸುತ್ತದೆ" (೨೧೧). ಸೌಂದರ್ಯಧ್ವನಿತಗೊಂಡಾಗಲೇ ಅದರ ಸೊಗಸು. "ಇಲ್ಲಿಯೇ ಈ ತೋಟಗಳಲ್ಲಿ ಒಂದು ಮರದಡಿಯಲ್ಲಿ ಮಲಗಿ ಆಯುಷ್ಯದ ಅವಧಿಯು ತೀರಿಹೋದ ಮೇಲೆ ಎದ್ದೇಳಬೇಕೆಂದು ಮನಸ್ಸು ಕನಿಸಿತು!" (೨೨೦). ವಾರ್‌ವಿಕ್ ಪಟ್ಟಣದ ಗತವೈಭವದ ಹಿರಿಮೆ ಈ ಒಂದು ವಾಕ್ಯದಲ್ಲಿ ಪಡಿಮೂಡಿದೆ. ಗತಇತಿಹಾಸವನ್ನೆಲ್ಲ ಕಲ್ಪನಾನೇತ್ರಗಳ ಕುಡಿನೋಟದಲ್ಲಿ ತಬ್ಬಿ ಹಿಡಿದುಕೊಳ್ಳುವ ಅಸಾಧಾರಣ ಸಾಮರ್ಥ್ಯವಿದ್ದಾಗ ಮಾತ್ರ ಭಾಷೆಗೆ ತ್ರಿವಿಕ್ರಮಶಕ್ತಿ ದೊರೆಕೊಳ್ಳುತ್ತದೆ. ಮೇಲಿನ ವಾಕ್ಯಗಳೇ ಈ ಮಾತಿಗೆ ಸಾಕ್ಷಿ.

ದಿನಚರಿ ಕತೆಯಲ್ಲ, ಕಾವ್ಯವಲ್ಲ, ಕಾದಂಬರಿಯಲ್ಲ, ಚರಿತ್ರೆಯೂ ಅಲ್ಲ. ಆದ್ದರಿಂದ ಅಲ್ಲಿ ಬರುವ ವ್ಯಕ್ತಿಗಳು ಕ್ಷಣಕಾಲ ಮುಖತೋರಿಸಿ ಮರೆಯಾಗುತ್ತಾರೆ. ಅವರು ಓದುಗರ ನೆನಪಿನಲ್ಲುಳಿಯುವಂತೆ ಚಿತ್ರಿಸುವುದು ಕಷ್ಟಸಾಧ್ಯವಾದ ಕೆಲಸ. ಸೂಕ್ಷ್ಮಗ್ರಹಣ ಸಾಮರ್ಥ್ಯದ ಮಾನವಸ್ವಭಾವಜ್ಞಾನಿಗೆ ಮಾತ್ರ ಅದು ಸಾಧ್ಯ. ಒಂದೆರಡು ಮಾತಿನಲ್ಲಿಯೇ ವ್ಯಕ್ತಿಚಿತ್ರ ವಾಚಕನ ಕಣ್ಣಿಗೆ ಕಟ್ಟುವಂತಿರಬೇಕು. ಟರ್ನರ್ ದಂಪತಿಗಳನ್ನಾಗಲೀ ಶರ್ವುಡ್‌ನನ್ನಾಗಲೀ ಯಾರೂ ಮರೆಯುವಂತಿಲ್ಲ. ಹೆಡ್‌ಸ್ಟ್ಯೂಅರ್ಡನ ಮೂರ್ತಿಶಿಲ್ಪವಂತು ಅನನ್ಯವಾದದ್ದು: "ಎಲ್ಲ ಸ್ಟ್ಯೂಅರ್ಡ್ ಜನರ ತಲೆಯ ಮೇಲೆ ಮಣಸರೆಯುತ್ತ ಊಟಮಾಡುವ ಭಾರತೀಯ ಪ್ರವಾಸಿಗರೊಡನೆ ಗುರುಗುಟ್ಟಿ ಮಾತಾಡುತ್ತ, ಆಂಗ್ಲ ಸ್ತ್ರೀಯರೊಡನೆ ಮಧುರವಾಗಿ ಹರಟೆ ಕೊಚ್ಚುತ್ತ ಮೆರೆಯುವ ಭೂಪತಿ" (೯೦). ಕೇವಲ ನಾಲ್ಕಾರು ಶಬ್ದಗಳಲ್ಲಿಯೇ ಅವರ ಚಿತ್ರ ಜೀವಂತವಾಗಿ ಮೂಡಿದೆ.

ವಿಲಾಯಿತಿಯ ಗಾಳಿನೀರು ಕುಡಿದ ಭಾರತೀಯ ವಿದ್ಯಾರ್ಥಿಗಳ ಅವಹೇಳನಕರವಾದ ನಿರ್ಲಜ್ಜವಾದ ವರ್ತನೆಯನ್ನು ಧರ್ಮಕ್ರೋಧದಿಂದ ಅತೀವ ಸಂಕಟದಿಂದ ವಿವರಿಸಿದ್ದಾರೆ. ಭರತಖಂಡದ ನೆಲದಿಂದ ಜಿಗಿದೊಡನೆ ಅವರು ವಿಲಕ್ಷಣವ್ಯಕ್ತಿಗಳಾಗುತ್ತಾರೆ. ಅಲ್ಲಿಯ ತೇಲುಬಾಳಿಗೆ ಮರುಳಾಗಿ, ಸ್ಥೈರ್ಯವಿಲ್ಲದ ಮೋಹದೌರ್ಬಲ್ಯಗಳಿಗೆ ವಶರಾಗಿ, ಸಂಪೂರ್ಣವಾಗಿ ತಮ್ಮತನವನ್ನು ಮರೆತು, ತಂದೆತಾಯಿಯರನ್ನು ತಾಯ್ನಾಡನ್ನು ತಾತ್ಸಾರದಿಂದ ಕಾಣುತ್ತಾರೆ. ತಮ್ಮೊಬ್ಬರ ಸುಖ ಅವರಿಗೆ ಮುಖ್ಯವೇ ಹೊರತು, ನೋಡುವರ ಸುಖ ಅವರಿಗೆ ಬೇಡವಾಗುತ್ತದೆ. ಭೋಗತನವೆ ಪರಮಸುಖವಾಗಿ ತೋರು

ತ್ತದೆ. ಅಲ್ಲಿಯ ಊಳಿಗದ ಹೆಣ್ಣುಗಳ ಬಿಳಿಮೈಯನ್ನು ಮೋಹದ ರಸನೆ ಸಿಡುಚಾಚಿ
ನೆಕ್ಕುತ್ತದೆ. ತಂದೆಯಿಂದ ನೂಪಸಿಂದ ತರಿಸಿಕೊಂಡ ದುಡ್ಡನ್ನು ಹೊಳೆನೀರಿನಂತೆ
ಖರ್ಚುಮಾಡುತ್ತಾರೆ; ಹೆಣ್ಣುಗಳಿಗಾಗಿ ಸುರಿಯುತ್ತಾರೆ. ಒಮ್ಮೆ ಆಂಗ್ಲ ಕೆಲಸಗಿತ್ತಿ
ಯೊಬ್ಬಳು ಗೋಕಾಕರ ಸ್ನೇಹಿತರನ್ನು ಕುರಿತು "Excuse me. Are all the Indian
students who come here, very rich?" (೧೦೫) ಎಂದು ಪ್ರಶ್ನಿಸಿದಳಂತೆ.
ಲಂಡನ್ನಿನ ಯಾವ ಭಾಗದಲ್ಲಿಯೂ ಯಾವುದೊಂದು ಮನೆತನಸ್ಥ ಕುಟುಂಬದಲ್ಲಿಯೂ
ಭಾರತೀಯನಿಗೆ ಸ್ಥಾನವು ದೊರೆಯಲಾರದಂತೆ (೧೦೬). ಕೆಲವರಂತು ತಾಸಿಗೆ ಎರಡೂ
ವರೆ ಶಿಲಿಂಗ್ ಕೊಟ್ಟು ಆಂಗ್ಲ ತರುಣಿಯರ ಕಡೆಯಿಂದ ರೀತಿನೀತಿಗಳನ್ನು ಕಲಿಯುತ್ತಾ
ರಂತೆ. "ಎಷ್ಟು ಜನ ಯಶಸ್ವಿಯಾಗಿ ಮಾತೃಭೂಮಿಗೆ ಹೋಗುತ್ತಾರೆ. ಹೋದಮೇಲೆ
ದೇಶದ ಹಿತ ಸಾಧಿಸುವವರೆಷ್ಟು ಮಂದಿ?" (೧೯೯)—ಇದು ದೇಶಾಭಿಮಾನಿಯ
ನೊಂದ ಮನಸ್ಸಿನ ಪ್ರಶ್ನೆ. ಅವರು ಇಂಡಿಯಾದೇಶದ ನೆಲದಲ್ಲಿ ಕಾಲಿಡುತ್ತಿರುವಾಗಲೆ
ಅಲ್ಲಿಯ ಭೋಗಸಾಧನ ಸೌಲಭ್ಯಗಳಿಗಾಗಿ ಬಾಯ್ಬಾಯ್ ಬಿಡುತ್ತಾರೆ; ಸಿಕ್ಕದಿದ್ದಾಗ
ನಾಡನ್ನು ಹಳಿಯುತ್ತಾರೆ; ನಿರಾಶೆಯ ಭೂತ ಅವರನ್ನು ಹಿಡಿದುಕೊಳ್ಳುತ್ತದೆ.

ಗೋಕಾಕರು ಆಂಗ್ಲರನ್ನು ದೂರಲಿ, ಭಾರತೀಯ ತರುಣರನ್ನು ದೂರಲಿ, ಅಥವಾ
ಆ ನಾಡನ್ನು ಹೊಗಳಲಿ, ಆ ದೂರು ಹೊಗಳಿಕೆಗಳ ಹಿಂದೆ ನೋವಿದೆ, ಅಭಿಮಾನವಿದೆ,
ದೇಶಾಭಿಮಾನ ಭಾಷಾಭಿಮಾನಗಳಿವೆ. ಆಂಗ್ಲಭಾಷೆ ಅಂತರರಾಷ್ಟ್ರೀಯ ಭಾಷೆಯೆಂದು
ಇಂಗ್ಲೆಂಡ್ ಮುಖಕಾಣದ, ಕಂಡಿದ್ದರೂ ಆಂಗ್ಲ ಮೋಹವನ್ನು ಬೆಳೆಸಿಕೊಂಡ ಜನ
ಏನೂ ಕಾಣದವರ ಮುಂದೆ ಬೂರಿಬಿಡುತ್ತಾರೆ. ಫ್ರೆಂಚ್ ಭಾಷೆ ತಿಳಿಯದಿದ್ದುದರಿಂದ
ಮಾರ್ಸೆಲಸ್‌ನಲ್ಲಿ ಇಡೀ ದಿನ ಅವರಿಗೆ ಊಟ ಸಿಗಲಿಲ್ಲ. "ನಮ್ಮ ದೇಶಕ್ಕೆ ರಾಷ್ಟ್ರೀಯ
ಭಾಷೆಯಿಲ್ಲ, ಭೋಜನವಿಲ್ಲ" ಎಂದು ಕೊರಗಿದ್ದಾರೆ. ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ
ವನ್ನು ನೋಡಿದಾಗ ಭರತಖಂಡದ ಪ್ರಾಚೀನ ವಿದ್ಯಾಲಯಗಳ ನೆನಪು ಮರುಕೊಳಿಸಿ
ಮರೆಯಾಯಿತಂತೆ. ಎಲ್ಲಿ ಹೋದರೂ ತನ್ನ ನಾಡಿನ ನೆಲನೀರುಗಳನ್ನು ಬೆಟ್ಟಗುಡ್ಡ
ಗಳನ್ನು ಪೈರು ಪಚ್ಚೆಗಳನ್ನು ಕಾಣುವ ಚೇತನ ಅಸಾಧಾರಣವಾದದ್ದು. ಅವನೆಲ್ಲಿಯೇ
ಹೋಗಲಿ, ಅವನ ಪಾಲಿಗೆ ಏರುವ ಮಲೆ ಸಹ್ಯಾದ್ರಿಯಾಗಿ ಕುಡಿಯುವ ನೀರು ಕಾವೇರಿ
ಯಾದರೆ ಅವರು ತಾನೇ ತಾನಾಗುಳಿಯುತ್ತಾನೆ, ನಾಡಿನ ಕಲ್ಯಾಣಕ್ಕೆ ಹೆಗಲುಕೊಡು
ತ್ತಾನೆ, ಅವನ ಬಾಳು ಸಾರ್ಥಕವಾಗುತ್ತದೆ. ಇಂಗ್ಲೆಂಡಿನಲ್ಲಿದ್ದಾಗಲೂ ಅವರ ಮನಸ್ಸು
ತಾಯ್ನಾಡಿನ ಕ್ಷೇಮಕ್ಕಾಗಿ ತುಡಿಯುತ್ತಿರುತ್ತದೆ; ತುಡಿದಾಗ ಮಾತು ಚುರುಕಾಗು
ತ್ತದೆ, ಈಟಿಯಾಗುತ್ತದೆ! "ನಾಡಿನಲ್ಲಿ ಸಂಪತ್ತಿದ್ದಾಗ ಊಟವು ಒಂದು ಕಲೆಯಾಗು
ವುದು; ಇಲ್ಲದಾಗ ನೆಲೆಯಿಲ್ಲದ ಗಂಡಾಂತರವಾಗುವುದು" (೧೧). "ಸಾಮ್ರಾಜ್ಯಶಾಲಿಗಳ
ರಸಿಕತೆಯು ಊಟದಲ್ಲಿ ಸಹ ಹೇಗೆ ತೋರಿಬರುತ್ತದೆಂಬುದನ್ನು ಇಲ್ಲಿ ಕಣ್ಣಾರೆ ಕಾಣ

...ಸುದು" (೩೨). ಇಲ್ಲಿ ಇಂಗ್ಲೆಂಡ್ ಪರವಾದ ಪ್ರಶಸ್ತಿಯಿದ್ದರೂ ಭರತಖಂಡದ ...ದುರ್ದೈವದ ಬಗೆಗೆ ಸಂಕಟವಿದೆ.

೨

ಪ್ರವಾಸ ಸಾಹಿತ್ಯದ ಗುಂಪಿಗೆ ಸೇರಿಸಬಹುದಾದ ಗೋಕಾಕರ ಮತ್ತೊಂದು ಕೃತಿ ...ಸಮುದ್ರದೀಚೆಯಿಂದ' ೧೯೭೭ ರಲ್ಲಿ ಪೆನ್ ಕಾಂಗ್ರೆಸ್ಸಿಗೆಂದು ಟೋಕಿಯೋಗೆ ಹೋಗಿ ...ದ್ದಾಗ ಬರೆದ ನಾಲ್ಕೈದು ದಿನಗಳ ದಿನಚರಿಯೆ ಈ ಕೃತಿ. ಕಾಲದೇಶಗಳ ಮಿತಿ ...ಯಿಂದಾಗಿ ಇದು ಹಿಂದಿನ ಕೃತಿಯಷ್ಟು ವೈವಿಧ್ಯಮಯವಾಗಿಲ್ಲ; ವೈವಿಧ್ಯತೆಯ ಅಭಾವ ...ದಿಂದಾಗಿ ಕಂಪು ಕಡಮೆ. ಇಲ್ಲಿಯೂ ಅವರ ನಿಷ್ಪಕ್ಷಪಾತ ಮನೋಭಾವನೆ ಸ್ಪಷ್ಟವಾಗಿ ...ಲೆದೋರಿದೆ. ಜಪಾನೀಯರ ಸ್ವಾತಂತ್ರ್ಯ ಪ್ರಿಯತೆಯನ್ನು, ಅವರ ಧೀಮಂತಿಕೆ ...ಯನ್ನು, ಅವರ ಕಾರ್ಯೋತ್ಸಾಹವನ್ನು, ಅವರ ಸಾಹಸೋನ್ಮತ್ತತೆಯನ್ನೂ ಅವರ ...ಜೀವನ ದರ್ಶನವನ್ನೂ ಮನಸಾರೆ ಪ್ರಶಂಸಿಸಿದ್ದಾರೆ; ಆ ನಾಡಿನ ಬಗ್ಗೆ ಹೇವಾರು ...ಮೆಚ್ಚುಗೆ ನುಡಿ ಆಡಿದ್ದಾರೆ. ಇಂಡಿಯಾದ 'ಏರ್ ಇಂಡಿಯಾ' ಕಚೇರಿಗೂ ಟೋಕಿ...ಯೋದ 'ಏರ್ ಇಂಡಿಯಾ' ಕಚೇರಿಗೂ ನೆಲಬಾನುಗಳ ಅಂತರ. ಕೆಲಸದ ಒತ್ತಡವು ...ಹೆಚ್ಚಾಗಿದ್ದರೂ ಪ್ರವಾಸಿಗಳು ಕೇಳಿದ ಮಾಹಿತಿಯನ್ನು ಪೂರೈಸಲು ಅವರು ಮರೆಯು...ತ್ತಿರಲಿಲ್ಲ. ಒಮ್ಮೊಮ್ಮೆ ಆ ಕಚೇರಿಗೆ ಸಂಬಂಧಿಸಿದ ಮಾಹಿತಿಯನ್ನು ಸಹ ಅವರು ಮನಃ...ಪೂರ್ವಕವಾಗಿ ದೊರಕಿಸಿಕೊಡುತ್ತಿದ್ದರು. ಇಂಥ ಮಾಹಿತಿಯನ್ನು ಪೂರೈಸುವದೂ ...ನಮ್ಮ ಕರ್ತವ್ಯವೆಂದೂ, ಮಾಹಿತಿಯನ್ನು ತಪ್ಪದೆ ಕೊಡುವೆನೆಂದೂ ಹೇಳಿದಳು. ಹಾಗೆ ...ಪೂರೈಸಿದ್ದೂ ಉಂಟು" (೩). ಇದು ಅವರ ರಾಷ್ಟ್ರೀಯ ಶೀಲ. ನಮ್ಮಲ್ಲಿ ರಾಷ್ಟ್ರೀಯ ...ಶೀಲವೂ ಇಲ್ಲ, ರಾಷ್ಟ್ರ ಹಿತಾಸಕ್ತಿಯೂ ಇಲ್ಲ. ನಮ್ಮಲ್ಲಿ ರಾಷ್ಟ್ರೀಯ ವಸ್ತ್ರವಿಲ್ಲ, ...ಭೋಜನವಿಲ್ಲ, ಮರ್ಯಾದೆಯಿಲ್ಲ; ಹೋಗಲಿ, ಭಾಷೆಯೂ ಇಲ್ಲ.

ಜಪಾನೀ ಶೀಲವನ್ನು ಪ್ರಸ್ತಾಪಿಸುತ್ತ, ಮಗುವಿನ ಮೊಲೆಯುಣಿಸುತ್ತಿದ್ದ ತರುಣ ...ಮಾತೆಯ ಚಿತ್ರವನ್ನು ಉದಾಹರಿಸುತ್ತಾರೆ. ರೈಲಿನಲ್ಲಿ ಪಯಣಿಸುತ್ತಿದ್ದಾಗ ಆ ತರುಣ ...ಮಾತೆ ತನ್ನ ಗೌನಿನ ಗುಂಡಿ ಬಿಚ್ಚಿ ಮಗುವಿಗೆ ಮೊಲೆಕೊಟ್ಟಳಂತೆ. ತೆರೆದ ಎದೆ ತೆರೆ...ದಂತೆಯೇ ಇತ್ತಂತೆ. ಅವಳಿಗೂ ಸಂಕೋಚವಿಲ್ಲ, ಸುತ್ತಲಿನ ಶಿಷ್ಟರಿಗೂ ಸಂಕೋಚ...ವಿಲ್ಲ. ಆ ತಾಯಿ ಕರುವಿಗೆ ಮೊಲೆ ಕುಡಿಸುವ ಆಕಳಿನಂತಿದ್ದಳು. ಭಾರತದಲ್ಲೋ ?....

...ಮನೆಯಿದ್ದಲ್ಲಿ ತಿಪ್ಪೆಯಿರುವಂತೆ ಅಲ್ಲಿಯೂ ಹೊಲಸುಂಟು. ಆದರೆ ಅದಕ್ಕೆ ಮಿತಿ...ಯುಂಟು. ಒಂದು ದೇವಾಲಯದ ಮುಂದೆ ಭಕ್ತಿ ಪೂಜೆಗಳನ್ನು ಬಿಟ್ಟು ಉಳಿದ ...ವ್ಯಾಪಾರ ನಡೆಯುತ್ತಿತ್ತಂತೆ. ಆ ವ್ಯಾಪಾರ ನಮ್ಮ ದೇವಾಲಯಗಳಲ್ಲಿಯೂ ಯಥೇಚ್ಛ...ವಾಗಿ ನಡೆದಿದೆ. "ಈ ದೇವಾಲಯಗಳಲ್ಲಿ ದೇವನೇ ಲಯವಾಗಿ ಲೋಕಾಯತ ವ್ಯಕ್ತಿಯು

ಪ್ರಮುಖನಾಗಿದ್ದಾನೆ. ಗುಡಿಯೆಂಪರೆ ಶಾಂತಿಯು ತವರಾಗಬೇಕು ; ಸ್ವಸ್ವರೂಪದರ್ಶನಾ
ಏಕಾಂತವಾಗಬೇಕು....ಇಂಥ ಪುಣ್ಯಸ್ಥಳಗಳಲ್ಲಿಯೂ ಅರ್ಥಕಾಮಗಳ ಸಂತೆ ನೆರೆದ
ಮಾನವೀಯ ಸಂಸ್ಕೃತಿಯು ಬದುಕುವುದು ಹೇಗೆ?" (೯೨).

ಅತ್ಯಂತ ಸಾಮಾನ್ಯರಲ್ಲಿಯೂ ಕರ್ತವ್ಯಪ್ರಜ್ಞೆ ಎಚ್ಚರವಾಗಿರುವುದನ್ನು, ಸೌಜನ್
ರಕ್ತಗತವಾಗಿರುವುದನ್ನು, ಬಸ್ ಕಂಡಕ್ಟರ್ ಆದ ಹುಡುಗಿಯೊಬ್ಬಳ ನಿದರ್ಶನದಿಂದ
ತಿಳಿಯಬಹುದು. ಯಾರು ಏನು ಕೇಳಿದರೂ ಮಾಹಿತಿ ಅವಳ ತುದಿನಾಲಗೆಯಲ್ಲಿ ಸಿದ್ಧ
ವಾಗಿರುತ್ತಿತ್ತು; ತಾನೊಂದು ಜಂಗಮ ವಿಶ್ವಕೋಶವೆಂಬಂತೆ ಕೇಳಿದ ಪ್ರಶ್ನೆಗಳಿಗೆ
ಚುರುಕಾಗಿ ಜಟ್ಟನೆ ಉತ್ತರಕೊಡುತ್ತಿದ್ದಳು. ಮೇಲಾಗಿ ಅವಳು ನುರಿತ ಹಾಸ್ಯಗಾತಿ
"ಲೋಕಸಭೆಯ ಕಟ್ಟಡದೆದುರು ಬಂದಾಗ ಇವರ ಹೆಸರು Diet ಎಂದಿದೆ; ಆದರೆ ಇದರ
ಅರ್ಥ 'ಆಹಾರ'ವಲ್ಲವೆಂದು ಆಕೆ ನಗೆಯಾಡಿದ್ದಳು. Good-morning ಎಂಬುದಕ್ಕೆ
ಜಪಾನೀ ಭಾಷೆಯಲ್ಲಿ 'Ohio' ಎಂದು ಹೇಳುತ್ತಾರೆಂದು ತಿಳಿಸಿ,—ಇದು ನೆನಪಿಡಲು
ಸುಲಭ, ಅಮೇರಿಕೆಯಲ್ಲಿಯ ಒಂದು 'State'ನ ಹೆಸರಿದು ಎಂದು ಆಕೆ ಸೂಚಿಸಿದ್ದಳು"
(೯೯). ಹೀಗೆಯೇ ಇನ್ನೆಷ್ಟೋ. ತಾಯ್ನಾಡಿನಲ್ಲಿ ಮಡದಿ ಮಕ್ಕಳನ್ನು ಬಿಟ್ಟು ಬಂದ
ಪ್ರವಾಸಿಗಳ ವಿರಹವೇದನೆಗೆ ಅದೊಂದು ರಾಮಲೇಪವಾಗಿರಬೇಕು.

ಈ ದಿನಚರಿಯ ಸುಮಾರು ಕಾಲುಭಾಗ ಡಾ. ಒಖಾವಾ, ಮತ್ತು ಶ್ರೀಮತಿ
ಷೋಬಾಯಾಶಿಯರ ಸಂದರ್ಶನ ಸಂದರ್ಭವನ್ನು ಕುರಿತದ್ದಾಗಿದೆ. ಅವರಿಬ್ಬರೂ
ಅರವಿಂದಾಶ್ರಮದ ಮಾತೆಯನ್ನು ಬಲ್ಲವರು. ದೊಡ್ಡವರೆಷ್ಟು ಪೂಜ್ಯರೋ ಅವರನ್ನು
ಕಂಡವರೂ ಪೂಜ್ಯರೇ! ಶ್ರೀ ಅರವಿಂದರ ಭಕ್ತರೂ ಸ್ವಯಂಸಾಧಕರೂ ಆದ ಗೋಕಾಕ
ರಿಗೆ ಆ ಭೇಟಿ ಮಹತ್ವದ್ದಾಗಿತ್ತು. ಆ ಇಬ್ಬರು ವ್ಯಕ್ತಪಡಿಸಿದ ಭಾವನೆಗಳನ್ನು ಲೇಖಿಸು
ವಾಗ ಗದ್ಯವೂ ಕಾವ್ಯಮಯವಾಗುತ್ತದೆ.

ಗೋಕಾಕರು ಯಾವ ಊರಿಗೇ ಹೋಗಲಿ, ಅಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯ
ಕ್ರಮಗಳನ್ನು ನೋಡದೆ ಹಿಂದಿರುಗುವುದಿಲ್ಲ. ಇಂಗ್ಲೆಂಡಿನಲ್ಲಿದ್ದಾಗ ಅವರು ನೋಡಿದ
ನಾಟಕಗಳ ಸಂಖ್ಯೆಗೆ ಮಿತಿಯಿಲ್ಲ. ಜಪಾನಿನ 'ನೋ' ಮತ್ತು 'ಕಾಬೂಕಿ' ನಾಟಕ
ಗಳನ್ನು ನೋಡಿ ಅವುಗಳಲ್ಲಿರುವ ಒಳ್ಳೆಯ ಅಂಶಗಳನ್ನು ಪ್ರಶಂಸಿಸಿದ್ದಾರೆ; ಜಪಾನಿ
ಕಾವ್ಯಗಳನ್ನು ಓದಿಸಿಯಾದರೂ, ಭಾಷಾಂತರಗಳ ಮೂಲಕ ಓದಿಯಾದರೂ ಆಸ್ವಾದಿ
ಸುತ್ತಾರೆ.

ಜ್ಞಾನವಿಜ್ಞಾನ ಕ್ಷೇತ್ರಗಳಲ್ಲಿ ಜಪಾನು ಜಗತ್ತಿನ ಮುಂದುವರಿದ ರಾಷ್ಟ್ರಗಳಲ್ಲೊಂದಾ
ಗಿದೆ. ಅದಕ್ಕೆ ಪ್ರಬಲಕಾರಣ ಸ್ವಂತ ಭಾಷೆಯ ಮಾಧ್ಯಮ. ಅಲ್ಲಿಯ ಮಹಾಪ್ರಾಧ್ಯಾ
ಪಕರಿಗೆ ಇಂಗ್ಲಿಷ್ ಸ್ವಲ್ಪ ಸ್ವಲ್ಪ ಬರುವುದಾದರೂ, ಅವರ ವ್ಯವಹಾರಗಳೆಲ್ಲ ತಮ್ಮ
ಭಾಷೆಗಳಲ್ಲಿಯೇ ಜರುಗುತ್ತವೆ. ಅನಾವಶ್ಯಕವಾಗಿ ಬೇರೊಂದು ಭಾಷೆ ಕಲಿಯುವ

ಹೊಂಬಾಟಕ್ಕೆ ಅವರು ಶರಣಾಗಿಲ್ಲ. ಜ್ಞಾನಾರ್ಜನೆ ಅವರ ಬದುಕಿನ ಗುರಿ. ಆ ಗುರಿ ಸಾಧನೆಗೆ ಯಾವುದು ಸುಲಭ ಮಾರ್ಗವೋ ಅದು ಅವರಿಗೆ ಹಿತ. ಆವರೆ ಪ್ರಪಂಚದ ಬೇರೆ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಶೋಧನೆಗಳನ್ನು ತರುಣದಲ್ಲಿಯೇ ಭಾಷಾಂತರಗಳ ಮೂಲಕ ತಿಳಿದುಕೊಳ್ಳುತ್ತಾರೆ. ಪ್ರಮುಖ ಯೂರೋಪಿನ ಭಾಷೆಗಳಲ್ಲಿ ಪ್ರಕಟವಾಗುವ ಎಲ್ಲ ಪ್ರಮಾಣ ಗ್ರಂಥಗಳೂ ಅತಿ ಶೀಘ್ರವಾಗಿ ಜಪಾನೀಕರಣಗೊಳ್ಳುತ್ತವೆ. ನೂರಾರು ಸಾವಿರಾರು ಭಾಷಾಂತರಕಾರರ ಸೇನೆ ಈ ಕಾರ್ಯಕ್ಕಾಗಿ ಸದಾ ಸಿದ್ಧವಾಗಿದೆ. ಈ ಕೆಲಸಕ್ಕಾಗಿ ಭಾಷಾಂತರಕಾರರಿಗೆ ಕೈತುಂಬ ಸಂಭಾವನೆಯೂ ಸಿಗುತ್ತದೆ. ಗೋಕಾಕರ ಮೂಲಕ ಈ ವಿಷಯವನ್ನರಿತಾಗ ಭಾರತೀಯ ಜ್ಞಾನವಿಜ್ಞಾನಗಳ ಪ್ರಗತಿಯ ದೃಷ್ಟಿಯಿಂದ ಭಾಷಾಂತರಕಾರರ ಅಗತ್ಯತೆ ಎಷ್ಟೆಂಬುದು ಇಲ್ಲಿಯ ಶಿಕ್ಷಣ ತಜ್ಞರಿಗೆ ವೇದ್ಯವಾಗದಿರದು.

ಪ್ರವಾಸ ಅಥವಾ ದಿನಚರಿಯ ಸಾಹಿತ್ಯ ಕನ್ನಡದಲ್ಲಿ ತುಂಬ ಕಡಿಮೆ. ಪ್ರವಾಸ ಸಾಹಿತ್ಯ ನಿಜಕ್ಕೂ ಜ್ಞಾನಸಾಹಿತ್ಯ; ಎರಡು ಜನಾಂಗಗಳ ಹೃದಯವನ್ನು ಬೆಸೆಯುವ ಶಕ್ತಿಸಾಹಿತ್ಯ; ಅದು ಅಂಗೈಮೇಲಣ ಜಗತ್ತು. ಹಣವಿಲ್ಲದವರ ಚಿಂತಾಮಣಿ. ಅದರ ನೆರವಿಂದ ಅವರು ಕುಳಿತಲ್ಲಿಂದಲೆ ವಿಶ್ವಪರ್ಯಟನೆ ಮಾಡಬಹುದು. ಲೇಖಕನ ಗ್ರಹಣ ಶಕ್ತಿ ಪ್ರಖರವಾಗಿಲ್ಲವಾದರೆ, ಸಹಾನುಭೂತಿ ಬತ್ತಿಹೋಗಿದ್ದರೆ, ರಸಿಕತೆ ಕಾಣೆಯಾಗಿದ್ದರೆ, ಅಂತರ್ದೃಷ್ಟಿ ಕುರುಡಾಗಿದ್ದರೆ ಅವನ ಸಾಹಿತ್ಯ ಬರಡಾಗುತ್ತದೆ, ಸಪ್ಪೆಯಾಗುತ್ತದೆ. ಆದರೆ ಈ ಎರಡು ಕೃತಿಗಳು, ಅದರಲ್ಲಿಯೂ 'ಸಮುದ್ರದಾಚೆಯಿಂದ' ವಿಷಯವೈವಿಧ್ಯಕ್ಕೆ, ನಿರೂಪಣ ಸಾಮರ್ಥ್ಯಕ್ಕೆ, ವಿಚಾರ ಸಂಪತ್ತಿಗೆ, ಸೂಕ್ಷ್ಮಗ್ರಹಣಶಕ್ತಿಗೆ, ಭಾಷಾ ಲಾಲಿತ್ಯಕ್ಕೆ, ಪ್ರಾಮಾಣಿಕತೆಗೆ, ಅಭಿಪ್ರಾಯದ ಸಮತೋಲನಕ್ಕೆ, ನಿರ್ಭೀತಿಗೆ ಸಾಕ್ಷಿಯಾಗಿವೆ. ಆದರಿಂದ ಇವು ಜನಪ್ರಿಯವಾಗಿವೆ, ಆ ಜಾತಿಯ ಸಾಹಿತ್ಯಕ್ಕೆ ಮಾದರಿಯಾಗಿವೆ, ಬಹುಕಾಲ ಬಾಳುವಂಥವಾಗಿವೆ.

ಪ್ರಬಂಧಗಳು

ಎಂ. ವಿ. ಸೀತಾರಾಮಯ್ಯ

೧

ಪದ್ಮಶ್ರೀ ಡಾ. ವಿ. ಕೃ. ಗೋಕಾಕರಿಗೆ ಅರುವತ್ತು ವರ್ಷ ತುಂಬಿದ ಶುಭ ಸಂದರ್ಭದ ಸವಿನೆನಪಿಗಾಗಿ 'ಸುರುಚಿ ಪ್ರಕಾಶನ'ದವರು ತಾವು ಹೊರತರುತ್ತಿರುವ ಈ ಸಂಭಾವನಾ ಗ್ರಂಥದಲ್ಲಿ ಗೋಕಾಕರ ಎರಡು ಕೃತಿಗಳನ್ನು* ಸಮೀಕ್ಷಿಸಿ, ಪರಿಚಯಾತ್ಮಕ ಲೇಖನ ಬರೆದುಕೊಡಬೇಕೆಂದು ಕೇಳಿಕೊಂಡಕೂಡಲೆ ನಾನು ಅತ್ಯಂತ ಸಂತೋಷದಿಂದ ಒಪ್ಪಿಕೊಂಡೆ. ಬಹುಶಃ ಅವರ ಎಲ್ಲ ಕೃತಿಗಳನ್ನೂ—ಏಸೊಮ್ಮೆಯೇ ಆಗಲಿ, ಅಂತೂ—ಒಮ್ಮೆಯೊ ಇಮ್ಮೆಯೊ ಓದಿಕೊಂಡಿದ್ದ ನನಗೆ ಪ್ರಸ್ತುತ ಗ್ರಂಥಗಳ ಹೆಸರು ಕೂಡ ಗೊತ್ತಿಲ್ಲದೆ ಹೋದದ್ದು ನನಗೆ ಅಚ್ಚರಿಯೆನಿಸಿತು. ಈ ಲೇಖನ ಕಾರ್ಯನಿಮಿತ್ತದಿಂದ ಈ ಎರಡು ಕೃತಿಗಳ ಪರಿಚಯ ಲಾಭದ ಸದವಕಾಶವನ್ನು ಒದಗಿಸಿಕೊಟ್ಟ 'ಸುರುಚಿ ಪ್ರಕಾಶನ'ದವರಿಗೆ ನಾನು ಕೃತಜ್ಞ. ಕೃತಿಗಳ ಪರಿಚಯ ಎಂದರೆ ಕೃತಿಕಾರನ ವ್ಯಕ್ತಿತ್ವದ ಪರಿಚಯವೆ: ಅದೊಂದು ಹೃದಯ–ಸಂವಾದ. ಯಾವ ಸದ್ಗ್ರಂಥ ವಾಚನದಿಂದ ಯಾವ ಗಳಿಗೆಯಲ್ಲಿ ವ್ಯಕ್ತಿಯ ಬದುಕಿನಲ್ಲಿ ದಿವ್ಯಪ್ರಭೆ ಚೆಲ್ಲಿದಂತಾಗಿ ಬದುಕು ಹೊಸ ತಿರುವನ್ನೂ ಹೊಸ ತೇಜವನ್ನೂ ಪಡೆಯಲಾಗುವುದೋ ಹೇಳಲು ಸಾಧ್ಯವಿಲ್ಲ. ಅಂಥ ಪ್ರಭಾಕಿರಣಗಳನ್ನು ಹೊರಸೂಸುವ ಸದ್ಗ್ರಂಥಗಳಿವು ಎಂಬುದಿದು ಲೇಖನದ ಮುಮ್ಮಾತು.

ಈ ಮುಮ್ಮಾತನ್ನೇ ಮುಂದುವರಿಸಿ ಹೇಳಬೇಕಾದದ್ದು ಎರಡು ಮಾತಿದೆ: ನನಗೆ ಎಂದಿನಿಂದಲೂ ನಿಕಟವಾಗಿ, ಆತ್ಮೀಯವಾಗಿ ಚಿರಪರಿಚಿತರಾಗಿದ್ದವರು ಎಂದರೆ ಕೃತಿಕಾರ

* ೧. 'ಚೆಲುವಿನ ನಿಲುವು': ಇದು ಮೊದಲ ಸಲ ೧೯೪೪ರ ನೊವೆಂಬರಿನಲ್ಲಿ (ಲೇಖಕರು ಉತ್ತರ ಗುಜರಾಥದ ವೀಸನಗರದಲ್ಲಿದ್ದಾಗ) ಪ್ರಕಟವಾಗಿದೆ. ಈ 'ರಸನಿಮಿಷಮಾಲೆ'ಯ ಬರಹಗಳು ಇದಕ್ಕೂ ಮೊದಲು ಎಂಟು ವರುಷಗಳ ಹಿಂದೆಯೇ ರಚಿತವಾಗಿದ್ದುವೆಂದು ಅವರ ಮೊದಲ ಮಾತಿನಿಂದ ತಿಳಿಯುತ್ತದೆ. ಈ ಗ್ರಂಥದ ದ್ವಿತೀಯ ಮುದ್ರಣದ ತಾರೀಖು, ೧೫ ಆಗಸ್ಟ್ ೧೯೬೧. "ಕಾಗದದ ಅಭಾವದಿಂದಾಗಿ ಇದರ ಕೆಲವೇ ಪ್ರತಿಗಳನ್ನು ಪ್ರಕಟಿಸಿದ್ದರಿಂದ ಎಲ್ಲರ ಕೈಗೆ ಇದು ನಿಲುಕಿರಲಿಲ್ಲ" ಎಂಬ ಪ್ರಕಾಶಕರ ಮಾತು ನಿಜ. ೨. 'ಜೀವನ ಪಾಠಗಳು': ಮೊದಲು ಪ್ರಕಟವಾದದ್ದು ಅಕ್ಟೋಬರ್ ೧೯೪೯. ಎರಡನೆಯ ಮುದ್ರಣ, ಜನವರಿ ೧೯೬೧. ಅಂತೂ, ಈ ಎರಡೂ ಕೃತಿಗಳು ಲೇಖಕರ ತುಂಬು ಹರೆಯದ ಕೊನೆಯಲ್ಲಿ ರಚಿತವಾದವು.

ಗೋಕಾಕರೆ ಹೊರತು ವ್ಯಕ್ತಿ ಗೋಕಾಕರಲ್ಲ. ಆದರೂ ಅವರ ವ್ಯಕ್ತಿತ್ವದ ಬಗೆಗೆ ಸಾಕಷ್ಟು ಕೇಳಿ ತಿಳಿದಿದ್ದೆ. ಕನ್ನಡ ನಾಡಿನವರು ಮಾತ್ರವಲ್ಲ, ವಿಶ್ವದ ಅನೇಕ ಲೇಖಕರ ಬಗೆಗೆ ಹೇಳುವುದಾದರೆ, 'ಜೀವಿತ ವ್ಯಕ್ತಿ'ಯೆ ಬೇರೆ 'ಲೇಖಕ ವ್ಯಕ್ತಿ'ಯೆ ಬೇರೆ ಎಂದು ತೋರಿ ಬರುತ್ತದೆ. ಇಂಥವರ 'ಕಾವ್ಯಜೀವನ'ವನ್ನು 'ನಿಜಜೀವನ'ದೊಂದಿಗೆ ಸಮನ್ವಯ ಮಾಡು ವುದು ತೊಡಕಿನ ಕೆಲಸ; ಬದುಕುವುದೊಂದು ಬರೆಯುವುದೊಂದು ಆಗಿರುತ್ತದೆ ಇವರಲ್ಲಿ. ಸದ್ಗ್ರಂಥ ವ್ಯಾಸಂಗ, ಸಜ್ಜನ ಸಹವಾಸ, ವಿಭೂತಿಪುರುಷರ ಆದರ್ಶದ ಅನುಷ್ಠಾನ, ಸತ್ಯಸೌಂದರ್ಯನಿಷ್ಠೆ, ಸಮನ್ವಯಬುದ್ಧಿ—ಇವೇ ಮುಂತಾದ ಶ್ರೇಷ್ಠ ಜೀವನ ಮೌಲ್ಯ ಗಳನ್ನು ಮೈಗೂಡಿಸಿಕೊಂಡು ತಮ್ಮದೇ ಆದ ಜೀವನದರ್ಶನವನ್ನು ಹೊಂದಿರುವ ಲೇಖಕರ ಸಂಖ್ಯೆ ವಿರಳ: ಬೆಳಕು ಶಾಖವಾಗಿ ಮಾರ್ಪಡುವಂತೆ, ಶಾಖ ಬೆಳಕಾಗಿ ಬೆಳಗುವಂತೆ, ಇಂಥವರ 'ಬಾಳ್ನೋಟ'ದ ಬೆಳಕೇ ಸಾಹಿತ್ಯ ಕೃತಿ ರೂಪದಲ್ಲಿ ಮೈದಳೆದಿರುತ್ತದೆ; ಎಂದೆ ಇಂಥವರ ಮಾತು— ಇಂಥವರ ಮಾತೆ—ಜ್ಯೋತಿರ್ಲಿಂಗ. ಇಂಥ ವಿರಳರಾದ ಲೇಖಕರ ಪಂಕ್ತಿಯಲ್ಲಿ ಸೇರಿರತಕ್ಕವರು ಮಾನ್ಯ ಗೋಕಾಕರು.

ಈಗ್ಗೆ ಒಂದು ದಶಕದ ಹಿಂದೆ ಸಮ್ಮೇಳನಾಧ್ಯಕ್ಷರಾಗಿದ್ದ ಪ್ರೊ. ಗೋಕಾಕರನ್ನು ನಾನು ಕಂಡುಕೊಂಡದ್ದು ಹೀಗೆ:

"ವಿ(ಮರ್ಶಕ) ಕೃ(ತಿಕಾರ) ಗೋಕಾಕರ ಪರಿಚಯ ನನಗಾಗಿದೆಯೆ ಹೊರತು ವಿ(ನಾಯಕ) ಕೃ(ಷ್ಣ) ಗೋಕಾಕರ ಪರಿಚಯ ನನಗಾಗಿಲ್ಲ ಎಂದು ಸಂಕೋಚದಿಂದಲೆ ಹೇಳಬೇಕು. ಅವರ ವ್ಯಕ್ತಿತ್ವದ ಪರಿಚಯನೆಂದರೆ, ಅವರ ಧೀರಗಂಭೀರ ಆಕೃತಿ—ಅಷ್ಟೆ ನನಗಾಗಿರುವುದು....ವಿಮರ್ಶಕ ಗೋಕಾಕ ಹೆಚ್ಚಿನವರೋ ಕೃತಿಕಾರ ಗೋಕಾಕ ಹೆಚ್ಚಿ ನವರೋ ತೂಕಮಾಡಿ ಹೇಳುವುದು ಕಷ್ಟ. ಪರವಿಮರ್ಶೆಗಿಂತ ಆತ್ಮವಿಮರ್ಶೆ ಅವರಲ್ಲಿ ಹೆಚ್ಚಾಗಿದೆ, ಎಂದೇ ಅವರು ಹಂತ ಹಂತವಾಗಿ ಪ್ರಗತಿಪಥದಲ್ಲಿ ಮುಂದೆ ಸಾಗುತ್ತ ಬಂದಿದ್ದಾರೆ. ನಿಂತ ಕಡೆ ನಿಂತಿರಲಾರರು ಅವರು; ಮಾಡಿದ್ದನ್ನೆ ಮಾಡುತ್ತಿರಲಾರರು ಎಂದೆನಿಸುತ್ತದೆ ನನಗೆ. ಹೀಗಾಗಿ, ಪ್ರಯೋಗಪಟುಗಳವರು. ಸ್ವಚ್ಛಂದ ಛಂದವೇ, ವಚನಗೀತವೇ, ಹೊಸಗನ್ನಡ ಚಂಪುವೇ, ಆಧುನಿಕ ಮಹಾಕಾವ್ಯಪ್ರಕಾರವೇ, ನವ್ಯ ಕಾವ್ಯವೇ, ನಿಶ್ಶಬ್ದ ಕಾವ್ಯವೇ—ಅವರ ಪ್ರಯೋಗಶೀಲದ ಪ್ರಾಚುರ್ಯ ಇಷ್ಟು ವಿವಿಧ, ಇಷ್ಟು ವಿಸ್ತಾರ.

ದಿವಂಗತ ಬಿ. ಎಂ. ಶ್ರೀಕಂಠಯ್ಯನವರಂತೆಯೇ ಇಂಗ್ಲಿಷ್ ಪ್ರೊಫೆಸರಾದ ಗೋಕಾಕರೂ ವ್ಯಕ್ತಿ ಮಾತ್ರವಲ್ಲ, ಶಕ್ತಿಯೂ ಹೌದು; ಅವರು ಹೊಸ ಕನ್ನಡ ಕಾವ್ಯ ಪ್ರಪಂಚದಲ್ಲಿ ಕ್ರಾಂತಿಯುಂಟುಮಾಡಿದಂತೆ ಇವರೂ ನವ್ಯಕಾವ್ಯದ ಕ್ರಾಂತಿಗೆ ಪ್ರವರ್ತಕರಾಗಿದ್ದಾರೆ. 'ಶ್ರೀ'ಯವರೂ ಹಾಕಿದ ಪಂಥಕ್ಕೂ ನವ್ಯಕಾವ್ಯ ಪಂಥಕ್ಕೂ

ನಡುವೆ ನಿಜವೋ ಕಾಲ್ಪನಿಕವೋ ಆದ ಒಂದು ವೈಷಮ್ಯ, ಒಂದು ವಿರಸಭಾವ, ಎದ್ದು ಕುಳಿತಿರುವುದು ದಿಟ. ಇವೆರಡರ ನಡುವೆ ಒಂದು ಸೇತುಬಂಧವಾಗಬೇಕೆಂದು ನನಗೆನ್ನಿಸುತ್ತದೆ; ಅದು ಆದಾಗಲೇ ನವ್ಯಪಂಥ ನಮ್ಮ ನೆಲದಲ್ಲಿ ಬೇರುಬಿಡುವುದು ಸಾಧ್ಯ; ಆ ನಂಟುಗೂಡಿಸುವ ಶಕ್ತಿಯಿರುವುದು ಶ್ರೀ ಗೋಕಾಕರೊಬ್ಬರಿಗೇ ಎಂದೂ ನನಗೆನ್ನಿಸುತ್ತದೆ. ಹೀಗೆನ್ನಿಸುವುದು ನಿಜವಾಗಲಿ."*

ಅಂದಿನ ನನ್ನ ಹಾರೈಕೆ ಬಹುಮಟ್ಟಿಗೆ ನಿಜವಾಗುವ ಸ್ಪಷ್ಟ ಸೂಚನೆಗಳು ಇಂದು ಕಂಡುಬಂದಿವೆ. ಆ 'ನಂಟುಗೂಡಿಸುವ ಶಕ್ತಿ'ಯ ಪ್ರತೀಕವಾಗಿದ್ದಾರೆ, 'ಸಮನ್ವಯ ಪುರುಷ'ರಾಗಿದ್ದಾರೆ, ಶ್ರೀ ಗೋಕಾಕರು. ಅವರ ಸ್ಫೂರ್ತಿಯಿಂದ ಜನ್ಮತಾಳಿ, ಅವರ ದೃಗ್ದರ್ಶನದಲ್ಲಿ ಬೆಳಕಿನ ಹೆಜ್ಜೆಯಿಡುತ್ತಿರುವ (ತ್ರೈಮಾಸಿಕ) 'ಸಮನ್ವಯ'ವೆ ಇದಕ್ಕೆ ಸಾಕ್ಷಿ. ಅವರ ಸಮನ್ವಯದರ್ಶನ ಸಾಹಿತ್ಯ ಕ್ಷೇತ್ರಕ್ಕೆ ಮಾತ್ರ ಸೀಮಿತವಾದ ತತ್ತ್ವವಾಗಿರದೆ, ಜೀವನದ ಎಲ್ಲ ಚಟುವಟಿಕೆಗಳಿಗೂ ಅನ್ವಯಿಸುವ—ಅನ್ವಯಿಸಬೇಕಾದ ಸಿದ್ಧಾಂತವಾಗಿದೆ. ಭಾರತೀಯ ಸಂಸ್ಕೃತಿಗಾಗಲಿ ಕನ್ನಡಿಗರ ಸಾಂಸ್ಕೃತಿಕ ಪರಂಪರೆಗಾಗಲಿ ಇದು ಹೊಸದಲ್ಲ. ಇದಕ್ಕೆ ಕವಿ ಬೇಂದ್ರೆ—'ರಸವೆ ಜನನ, ವಿರಸಮರಣ, ಸಮರಸವೆ ಜೀವನ' ಎಂದು ಸುಂದರ ಕಾವ್ಯಾಭಿವ್ಯಕ್ತಿಯನ್ನು ನೀಡಿದ್ದಾರೆ. ಆ ಆದರ್ಶವನ್ನು ತಾವು ಮೈಗೂಡಿಸಿಕೊಂಡು, ಇತರರಿಗೂ ಮೈಗೂಡಿಸುವ, ಗೋಕಾಕರ 'ಕಾವ್ಯಕಾಯಕ'ದ ಸ್ವರೂಪ ಅವರ ಅನೇಕ ಕೃತಿಗಳ ಹೆಸರುಗಳು ದ್ಯೋತಿಸುವ ಮೌಲ್ಯಗಳಲ್ಲಿ ಅಡಕವಾಗಿದೆ. ಜೀವನದಲ್ಲಿ ಸಾಮರಸ್ಯವನ್ನು ಕಾಣಬಲ್ಲವನಿಗೆ ಜೀವನ ಸತ್ಯವೂ ಹೌದು, ಸುಂದರವೂ ಹೌದು. ಅವನ ಪಾಲಿಗೆ ಜೀವನವೇ ಒಂದು ಕಲೆ. ಕಲಾಪ್ರಪಂಚದಲ್ಲಿ ಸೌಂದರ್ಯೋಪಾಸನೆ ಸತ್ಯದರ್ಶನಕ್ಕೆ ಹಾದಿ; ಜೀವನದಲ್ಲಿ ಸತ್ಯನಿಷ್ಠೆ ಜೀವನ ಸೌಂದರ್ಯದರ್ಶನ ಮಾಡಿಸಿ, ಜೀವನವನ್ನೆ ಕಲೆಯಾಗಿಸುತ್ತದೆ. ಹೀಗಿದ್ದೂ, ಸೌಂದರ್ಯನಿಷ್ಠವಾದ ಕಲೆಗಿಂತ ಸತ್ಯನಿಷ್ಠವಾದ ಜೀವನಕಲೆ ದೊಡ್ಡದು. ಮಹಾತ್ಮ ಗಾಂಧೀಜಿ ಅವರದ್ದು ಈ ದೃಷ್ಟಿ. ಇದನ್ನೆ ಗೋಕಾಕರು ಹೀಗೆ ಹೇಳಿದ್ದಾರೆ:

"ಕಲೋಪಾಸಕನು ತನ್ನ ಪ್ರತಿಭೆಯನ್ನೆಲ್ಲ ಕಲ್ಲಿನಲ್ಲರಳಿಸುತ್ತಾನೆ, ಸ್ವರದಲ್ಲಿ ತೇಲಿಸುತ್ತಾನೆ, ಶಬ್ದದಲ್ಲಿ ತುಂಬುತ್ತಾನೆ, ಬಣ್ಣಬಣ್ಣಗಳಲ್ಲಿ ಕಣ್ಣುಬಿಡುವಂತೆ ತೂರುತ್ತಾನೆ. ಆದರೆ ಜೀವನವು ಇವೆಲ್ಲವುಗಳಿಗಿಂತ ಸೂಕ್ಷ್ಮತರವಾದ ವಾಹಕವಾಗಿದೆ. ಜೀವನ ಕಲೆಯು ಇವೆಲ್ಲವುಗಳಿಗಿಂತ ಘನತರವಾದ ಕಲೆಯಾಗಿದೆ. ಈ ಕಲೆಯ ಉಪಾಸಕರಾದ ನಾವು ನಮ್ಮ ಆದರ್ಶದ ಬೆಳಕನ್ನೆಲ್ಲ ಬಾಳುವೆಯಲ್ಲಿ ಬಿಂಬಿಸುವಂತೆ ಮಾಡಬೇಕು.

* 'ಬಳ್ಳಾರಿಯ ಸಮ್ಮೇಳನ, ಅದರ ಅಧ್ಯಕ್ಷರು' : ಕನ್ನಡ ನುಡಿ, ಮೇ ೧೯೫೮; ಪು. ೧೬೬.

ಹೀಗೆ ಮಾಡುವುದೇ ಕರ್ಮಯೋಗವೆಂದು ಹೇಳಬಹುದು." (ಕರ್ಮಕುಶಲತೆ: ಜೀವನ ಪಾಠಗಳು, ಪು. ೪೪)

ಸತ್ಯದ ಹಾದಿಯ ಮೂಲಕ ಜೀವನ ಸಿದ್ಧಿಯನ್ನು ಸಾಧಿಸುವುದು ಜೀವನ ಕಲೆ; ಇದೆ ಕರ್ಮಯೋಗ. ಸೌಂದರ್ಯೋಪಾಸನೆಯ ದ್ವಾರಾ ಜೀವನಾನುಭವಪ್ರಕಾಶನ 'ಶುದ್ಧಕಲೆ': ಇದು ರಸಯೋಗ, ಅಥವಾ ಸೌಂದರ್ಯಯೋಗ. 'ಸೌಂದರ್ಯವೇ ಸತ್ಯ, ಸತ್ಯವೇ ಸೌಂದರ್ಯ' ಎಂಬ ಕವಿವಾಕ್ಯ ಭಿನ್ನವಾಗಿ ಭಾಸವಾಗುವ ಸತ್ಯಸೌಂದರ್ಯ ಮಹೌಲ್ಯಗಳನ್ನು ಸಮನ್ವಯ ಮಾಡುವ ದರ್ಶಕದೀಪ. ಈ ಸಮನ್ವಯ ದೃಷ್ಟಿಯೆ ಗೋಕಾಕರ ವ್ಯಕ್ತಿತ್ವದ, ಎಲ್ಲ ಕೃತಿಗಳ, ರೂಪಣಶಕ್ತಿ. ಆದರೆ ಸಮನ್ವಯ ಸಾಧನೆಗೆ ಮೊದಲು ಬದುಕಿನಲ್ಲಿ ಸೌಂದರ್ಯದ ಸ್ವರೂಪವೇನು, ಸತ್ಯದ ಸ್ವರೂಪವೇನು ಎಂಬುದನ್ನು ತಿಳಿಯುವ ಅಗತ್ಯವಿದೆ; ಈ ಅಗತ್ಯತೆಯನ್ನು ಕಂಡುಕೊಂಡ ಗೋಕಾಕರು, ತಮ್ಮ ಅಂತರಂಗದ ಎರಡು ಕದಗಳನ್ನು ತೆರೆದು, ತಾವು ಕಂಡ 'ಚೆಲುವಿನ ನಿಲುವು' ಹಾಗೂ ಸತ್ಯ-ಸೌಂದರ್ಯಗಳ ಸಮನ್ವಯದ ನೆಲೆಯಿಂದ ತಾವು ಅರಿತ 'ಜೀವನ ಪಾಠ'ಗಳು—ಇವನ್ನು ನಮ್ಮ ಮುಂದೆ ಪ್ರತಿಷ್ಠಾಪಿಸಿದ್ದಾರೆ. ಇವುಗಳ ಈಷತ್—ದರ್ಶನವೆ ಈ ಗ್ರಂಥ ಪರಿಚಯದ ಉದ್ದೇಶ; ಸಾಕಲ್ಯ ದರ್ಶನಕ್ಕಾಗಿ ಓದುಗರು ಗ್ರಂಥಗಳನ್ನೆ ಅವಲೋಕಿಸ ಬೇಕು.

೨

ಸೌಂದರ್ಯ ತತ್ವನಿರೂಪಣೆ ಪಾಶ್ಚಾತ್ಯದೇಶಗಳಲ್ಲಿ ದರ್ಶನಶಾಸ್ತ್ರದ ಒಂದು ಶಾಖೆಯಾಗಿಯೆ ಬೆಳೆದು ಬಂದಿದೆ. ಅದೇ ಸೌಂದರ್ಯಮೀಮಾಂಸೆ ಅಥವಾ ಸೌಂದರ್ಯಶಾಸ್ತ್ರ (Aesthetics) ಸೌಂದರ್ಯಶಾಸ್ತ್ರದ ಆಧಾರದ ಮೇಲೆ ಜೀವನಕ್ಕೂ ಸೌಂದರ್ಯಕ್ಕೂ ಇರುವ ಸಂಬಂಧವನ್ನು ವಿವರಿಸಬೇಕೆಂಬ ಶ್ರೀ ಗೋಕಾಕರ ಅಭೀಪ್ಸೆ ನೆರವೇರಿದ್ದರೆ ರಸಿಕ ಲೋಕಕ್ಕೊಂದು ಅಮೂಲ್ಯ ಶಾಸ್ತ್ರಗ್ರಂಥ ದೊರಕುತ್ತಿತ್ತು; ಅದರ 'ಪೂರ್ವ ಚಿಹ್ನೆ' ಎಂಬಂತೆ, "ಸೌಂದರ್ಯ ಶಾಸ್ತ್ರದ ಗೊಡವೆಗೆ ಹೋಗುವ ಮನಸ್ಸು ಇಲ್ಲದ" ಸಾಮಾನ್ಯ ಓದುಗರಿಗೆ 'ಚೆಲುವಿನ ನಿಲುವು' ಎಂಬ 'ಕಥನಾತ್ಮಕ ನಿಬಂಧಮಾಲೆ' ಲಭ್ಯವಾಗಿದೆ. ಶ್ರೀಯುತರ ಸೌಂದರ್ಯಶಾಸ್ತ್ರದ ಅಭಿಜ್ಞತೆ ಹಾಗೂ ಜೀವನ ಸೌಂದರ್ಯ ಪ್ರಜ್ಞೆ ಇವೆರಡರ ಸಂಯೋಗಸಿದ್ಧಿಯ ಫಲವೆ ಈ ಗ್ರಂಥ—'ಚೆಲುವಿನ ನಿಲುವು'.

ಸೌಂದರ್ಯಾನುಭವ ಎಂದರೆ, ಪ್ರಕೃತಿ ಪ್ರಪಂಚದ ಇಲ್ಲವೆ ಮಾನವ ಲೋಕದ ಕಣ್ಣಿಗೆ ಕಾಣುವ ಅಂದಚೆಂದ—ಎಂಬ ಸಂಕುಚಿತ ದೃಷ್ಟಿಯಲ್ಲ. "ಚೆಲುವು ಅನಂತವಾಗಿದೆ, ಅವುಗಳನ್ನು ಕಣ್ಣಿಟ್ಟು ನೋಡುವ ನೋಟಗಳಿಗೂ ಲೆಕ್ಕವಿಲ್ಲ"....ಪ್ರತಿ ಜೀವಿಯ ಪ್ರಜ್ಞೆಯೂ ವೈವಿಧ್ಯಮಯವಾದ ಸೃಷ್ಟಿಯ ವಸ್ತುಗಳಲ್ಲಿ ಸಾಮರಸ್ಯವನ್ನು ಕಂಡು

ಕೊಂಡು ಅದನ್ನು ಅನುಭವಿಸಿದಾಗ ಆ ಜೀವಿಯ "ಅಂತರಂಗದ ಕದವು ತೆರೆಯುವುದು. ಆಗ ಚೆಲುವು ಸಂಚರಿಸುವ ನಾಲ್ಕು ಲೋಕಗಳಲ್ಲಿಯೂ ಚೆಲುವಿಗಾಗಿ ಶೋಧವು ನಡೆಯುವುದು. ಪ್ರೀತಿ, ಸ್ನೇಹ, ಪ್ರಕೃತಿ ಪ್ರೇಮ, ಧ್ಯಾನ -ಇವೆಲ್ಲ ಚೆಲುವನ್ನು ಪಡೆಯುವ ಸಾಧನಗಳೂ ಅಹುದು; ಕ್ಷೇತ್ರಗಳೂ ಅಹುದು." 'ಚೆಲುವಿನ ನಿಲುವು' : ಮೊದಲ ಮಾತು, ಪು ೩)

ಗೋಕಾಕರು ಉಚ್ಚವ್ಯಾಸಂಗಕ್ಕೆಂದು ಆಕ್ಸ್‌ಫರ್ಡಿಗೆ ಹೋಗಿದ್ದ ಕಾಲ (೧೯೩೭). ಅಲ್ಲಿ ಅವರು ಏಕಾಂಗಿ. ತಾಯ್ನಾಡಿನಲ್ಲಿ ಗೆಳೆಯರೊಡನೆ ಸವಿದ 'ರಸನಿಮಿಷ'ಗಳು. ಪ್ರಕೃತಿಸೌಂದರ್ಯ ಪರಿಭಾವನೆಯಲ್ಲಿ ಪಡೆದ ವಿಶಾಲದೃಷ್ಟಿ, ಧ್ಯಾನಗಮ್ಯವಾದ ಅಂತ ರಾತ್ಮದರ್ಶನ ಪ್ರಯತ್ನ, ಸಾಹಿತ್ಯೋಪಾಸನೆ, ಕರ್ಣಾಟಕದ ಹಾಗೂ ಭಾರತದ ಮೇಲ್ಮೆಗಾಗಿ ಅಲ್ಪ ಸ್ವಲ್ಪ ತ್ಯಾಗ—ಈ ಸುಂದರ ಸೋಪಾನ ಮಾರ್ಗದಲ್ಲಿ ತಾವು ಅಲ್ಲಿಯ ವರೆಗೆ ಪಡೆದಿದ್ದ ಜೀವನದ ಆನಂದದ ನೆನಪಿನ ಬುತ್ತಿಯನ್ನು ಬಿಚ್ಚಿ — ಸವಿಯುವುದೊಂದೇ ಅವರ ಪಾಲಿಗೆ ಉಳಿದಿದ್ದ ಏಗಾಂಗಿತನದ ಆನಂದ. ಏಕೆಂದರೆ, ಅಲ್ಲಿ "ಮಾತನಾಡಿಸು ವವರಿಲ್ಲ; ಪ್ರೀತಿಸುವವರಿಲ್ಲ; ಮುಗುಳ್ನಗೆ ನಕ್ಕು ಗುರುತು ಹಿಡಿಯುವವರಿಲ್ಲ; ಒಮ್ಮಿಂದೊಮ್ಮೆ ಹದ್ದು ಪಾರಾದಂತೆ ನನ್ನ ಬಾಳು ಶೂನ್ಯವಾಯಿತು." (ಜೆ. ನಿ. ಪು. ೪) ಈ ದುಸ್ಸಹ ಏಕಾಂತದ ಶೂನ್ಯತೆಯ ಅನುಭವಕಾಲದಲ್ಲಿ— ಇಲ್ಲಿ ಇರಲೂ ಆರೆ, ಸ್ವದೇಶಕ್ಕೆ ಮರಳಲೂ ಆರೆ ಎಂಬಂತಹ ಇಕ್ಕಟ್ಟಿನ ಸ್ಥಿತಿಯಲ್ಲಿ ("ಇಂಥ ಮಾನಸಿಕ ತಿಯುಸ್ಥಿ ಬಂದಾಗ....ಭಾರತೀಯ ವಿದ್ಯಾರ್ಥಿಗಳು....ಸೆರೆ ಕುಡಿದು ಮರೆಯಲು ಪ್ರಯತ್ನಿ ಸುತ್ತಾರೆ; ಮನಬಂದಂತೆ ವಿಹರಿಸುತ್ತಾರೆ.")—ಅದೇ ತೆಪ್ಪಕ್ಕೆ ತೇಲಿಬಂದ ಇನ್ನೊಬ್ಬ ಭಾರತೀಯನ ಪರಿಚಯವಾಗಿ, ಅವನ ದುಃಖಶಮನಮಾಡುವಲ್ಲಿ ತಮ್ಮ ದುಃಖವನ್ನು ಮರೆಯುತ್ತಾರೆ. ಈ ಸನ್ನಿವೇಶದಲ್ಲಿ ಅವರು ಅಗೋಚರ ದೈವೀಶಕ್ತಿಯ ಕೈವಾಡವನ್ನು ಗುರುತಿಸಿದ್ದಾರೆ. ('ದೈವದ ಅದ್ಭುತ ರೀತಿ' ಹೇಗೆ ಅನಿರೀಕ್ಷಿತವಾಗಿ ಪರಿಪರಿಯಲ್ಲಿ ಪ್ರಕಟಗೊಳ್ಳುತ್ತದೆ, ಅನನ್ಯ ಶರಣದಾಗಿ ದೈವದಲ್ಲಿ ಮೊರೆಯಿಟ್ಟರೆ ದೈವಜೀಗೆ ಸಂರಕ್ಷಿಸು ತ್ತದೆ ಎಂಬುದರ, ಹೃದಯಸ್ಪರ್ಶಿ ನಿರೂಪಣೆಯುಳ್ಳ 'ಆತ್ಮಕಥೆಯ ಅಧ್ಯಾಯ' ಎನ್ನಬಹುದಾದ ಪ್ರಕರಣವೆ 'ದೈವ' ಎಂಬ ಸಂಕಲನಾಂತ್ಯದ ನಿಬಂಧ). 'ಜೀವನ ದಲ್ಲಿಯ ಆನಂದ' ಎಂಬ ಈ ಪ್ರಥಮ ನಿಬಂಧದಲ್ಲಿ (ಇದು ಕೂಡ 'ಆತ್ಮಕಥೆ'ಯ ಅಧ್ಯಾಯದಂತಿದೆ), ನಿಜವಾದ ಜೀವನಾನಂದಕ್ಕೆ ಗೆಳೆತನ ಹೇಗೆ ಅಮೃತಸೇಚನ ಮಾಡಬಲ್ಲದೆಂಬುದರ ಸೂಚನೆಯಿದೆ; ಜೀವನ ಸೌಂದರ್ಯದೇವತೆಯ ಸ್ನೇಹಮುಖದ ದರ್ಶನವಾಗುತ್ತದೆ ಇಲ್ಲಿ.

'ಅಂತರಂಗದ ಕದ' (ಇದು ಲೇಖಕರಿಗೆ ತುಂಬ ಪ್ರಿಯವಾದ ಮಾತು) ತೆರೆದು, ಪ್ರತಿವ್ಯಕ್ತಿಯೂ ತನ್ನ ತನ್ನ ಹೃನ್ಮಂದಿರದ ಪ್ರವೇಶ ಮಾಡಿದರೆ "ತಮ್ಮ ತಮ್ಮ ದೈವ

ವನ್ನು ಕಾಣಬಹುದೆಂದು" ಲೇಖಕರ ತಿಳಿವಳಿಕೆ; ನಂಬಿಕೆ. ಆ ಕದ ತೆರೆಯಲು ಪೂರ್ಣಾನುಭೂತಿಯೆ ಕೀಲಿಕೈ. ಈ ಪೂರ್ಣಾನುಭೂತಿಯನ್ನು ಪಡೆಯಲು "ಒಂದು ದೈವಿಕ ಜೀವನದ ಬೆನ್ನು ಹತ್ತಿ ಹೋಗಬೇಕಾಗಿಲ್ಲ. ದೈನದಿಂದ ಜೀವನದ ವೈವಿಧ್ಯದಲ್ಲಿ ಅದನ್ನು ದೊರಕಿಸಿ ಕೊಳ್ಳಬೇಕು: ಇದಕ್ಕಾಗಿ ಹಿಡಿಯಬೇಕಾದದ್ದು, "ರಸಿಕನ, ಕಲೋಪಾಸಕನ, ಸೌಂದರ್ಯೋಪಾಸಕನ ಹಾದಿ." ಈ ಹಾದಿ ಹಿಡಿದಾಗ—

"ಬಾಳುವೆಯ ವೈವಿಧ್ಯವೇ ಅದರ ಮೋಹಕತೆಯನ್ನು ಹೆಚ್ಚಿಸಿದೆ. ಅದರಿಂದ ದೊರಕುವ ವಿಧವಿಧವ ರಸಾನುಭವವೇ ಅದರ ಸೌಂದರ್ಯಕ್ಕೆ ರೂಪವನ್ನು ಕೊಟ್ಟಿದೆ. ಶೋಕ, ವಿನೋದ, ಪ್ರೀತಿ, ಕ್ರೋಧ—ಇವೇ ಮುಂತಾದ ಭಾವನೆಗಳಿಗೂ ಅನುಭವದಲ್ಲಿ ಸ್ಥಾನವಿದೆ. ಮಹತ್ತರವಾದ ಕೆಲವು ಶೋಕಮಯ ಸನ್ನಿವೇಶಗಳು ಬಾಳುವೆಗೆ ಹೊಸತೊಂದು ಅರ್ಥವನ್ನು ಸಲ್ಲಿಸುವವು. ಮುನಿಸು ಕೀಳಾದ ಭಾವನೆಯೆಂದು ಎಲ್ಲರಿಗೂ ಗೊತ್ತಿದೆ. ಆದರೆ ಹೊತ್ತು ಬಂದಾಗ ಮುನಿಸೂ ಕೂಡ ದೈವಿಕವಾಗುವುದುಂಟು." (ಜೆ. ನಿ. ಪು. ೯)

—ಎಂಬ ಜೀವನಸೌಂದರ್ಯದ ರಹಸ್ಯವು ಒಡೆದು ಕಾಣುವುದು. 'ಬಂದದ್ದೆಲ್ಲ ಬರಲಿ ಗೋವಿಂದನ ದಯವೊಂದಿರಲಿ' ಎಂಬ ದಾಸವಾಣಿಯಲ್ಲಿಯೂ, ಬಾಳನ್ನು ಬಾಚಿ ತಬ್ಬಿ ಕೊಳ್ಳಬೇಕೆಂಬ ಕರೆ ಇದೆ. ಜೀವನದ ಪೂರ್ಣವೌಲ್ಯವನ್ನು—ಅದರ ಮುಖಬೆಲೆ ಹಾಗೂ ನಿಜಬೆಲೆ (Face value and intrinsic value)—ಅರಿತು ಒಪ್ಪಿಕೊಂಡು, ಅಪ್ಪಿಕೊಳ್ಳುವ 'ಜೀವನ ಸ್ವೀಕರಣ' ಸಿದ್ಧಾಂತವಿದು; 'ನಿರಾಕರಣಸಿದ್ಧಾಂತ' ಅಲ್ಲ. ಸಾರ್ಥಕ ಪ್ರವೃತ್ತಿಮಾರ್ಗ; ನಿರರ್ಥಕ ನಿವೃತ್ತಿಮಾರ್ಗ ಅಲ್ಲ.

'ಸೃಷ್ಟಿ ದೃಷ್ಟಿಗಳ ಸಂಮಿಲನ' ಎಂಬ ನಿಬಂಧದಲ್ಲಿ ಸೃಷ್ಟಿ ದೃಷ್ಟಿ ಸಾಮರಸ್ಯ ಸಿದ್ಧಾಂತದ ಪ್ರತಿಪಾದನೆಯಿದೆ. ದೈವಸೃಷ್ಟಿ ಒಂದು, ಆ ಕಡೆ; ಸಾಕ್ಷೀಭೂತ ಜೀವ ಇನ್ನೊಂದು, ಈ ಕಡೆ. ಸೃಷ್ಟಿಯ ವಸ್ತುವನ್ನು (ಅದು ಬಹಿರಂಗಕ್ಕೆ ಸಂಬಂಧಪಟ್ಟಿದ್ದಾಗ) ಹೊರಗಣ್ಣಿನಿಂದಲೂ, (ಅಂತರಂಗಕ್ಕೆ ಸಂಬಂಧಪಟ್ಟದ್ದಾಗ) ಒಳಗಣ್ಣಿನಿಂದಲೂ ಒಂದು ಜೀವ ತನ್ಮಯವಾಗಿ ನೋಡಿದಾಗ ಅದರಲ್ಲಿ ಬೆರೆಯುತ್ತದೆ. ಈ ಬೆರೆಯುವಿಕೆಯೆ ಸಾಮರಸ್ಯ: ಸಾಮರಸ್ಯದ ಅನುಭವವೇ ರಸಾನುಭವ.

"ಜೀವಿಗೆ ರಸಾನುಭವವನ್ನು ಪಡೆಯಲು ನೂರಾರು ಹಾದಿಗಳಿವೆ. ಅದನ್ನು ದೊರಕಿಸಿಕೊಡಲು ನೂರಾರು ತರಹದ ವಸ್ತುಗಳಿವೆ. ಜಾಗೃತಿ, ಸ್ವಪ್ನ, ಸುಷುಪ್ತಿ, ಸಮಾಧಿ ಇವು ಅವನ ಅನುಭವಲೋಕಗಳು. ಈ ಲೋಕಗಳಲ್ಲಿರುವಂಥವೆಲ್ಲ ಅವನ ಅನುಭವದ ವಸ್ತುಗಳು. ಆಯಾ ಲೋಕದ ವಸ್ತುಗಳಲ್ಲಿ ರಸಾನುಭವವನ್ನು ಪಡೆಯಲು ಅವನಿಗೆ ಅಂಥ ದೃಷ್ಟಿ ಬೇಕು....ಒಂದೊಂದು ತರಹದ ದೃಷ್ಟಿಯು ಒಂದೊಂದು

ತರಹದ ವಸ್ತುವನ್ನೆ ದೃಷ್ಟಿಸುವುದು. ವಸ್ತು—ದೃಷ್ಟಿಗಳ ಸಾಮರಸ್ಯದಲ್ಲಿಯೇ ಈ ರಸದ ಜನನವಿದೆ. ರಸಾನುಭವದಲ್ಲಿಯೇ ಆನಂದದ ಸ್ಥಾನವಿದೆ....ಯಾವ ಸ್ಥಿತಿಯುಲ್ಲಾದರೇನು? ಯಾವ ಲೋಕದಲ್ಲಾದರೇನು? ಜೀವದೇವರ ಉಭಯರಾಗವಾಗಬೇಕು. ದೃಷ್ಟಿ ಸೃಷ್ಟಿಗಳ ಸಂಮಿಲನವಾಗಬೇಕು. ಪುರುಷನು ಪ್ರಕೃತಿಯೊಡನೆ ಬೆರೆಯಬೇಕು. ಇಲ್ಲದಿದ್ದರೆ ರಸಾನುಭವವಿಲ್ಲ. ರಸಾನುಭವವಿರದೆ ಆನಂದವಿಲ್ಲ. ಆನಂದವಿರದಿದ್ದರೆ ಜೀವನವಿಲ್ಲ. ಇದು ಸೌಂದರ್ಯಶಾಸ್ತ್ರದ ಮೂಲಸಿದ್ಧಾಂತವಾಗಿದೆ." (ಚೆ. ನಿ., ಪು. ೧೪-೧೫; ೧೯).

ತನ್ನ ಬಾಲ್ಯದ ಸೌಂದರ್ಯದರ್ಶನಾನುಭವಗಳ ನೆನಪಿನ ದೃಷ್ಟಾಂತಗಳಿಂದ ಈ ಸಿದ್ಧಾಂತವನ್ನು ಸಮರ್ಥಿಸಿದ್ದಾರೆ ಲೇಖಕರು. ಜೀವನದಲ್ಲಿ ಅತೃಪ್ತನಾದ ಗಂಗಾಪ್ರಸಾದನೆಂಬ ಭಾವುಕ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡ ಪ್ರಕರಣವನ್ನು ನೆನೆದು ಲೇಖಕರು ಹೀಗೆ ವ್ಯಾಖ್ಯಾಸಿನಿದ್ದಾರೆ: "ಆತ್ಮಹತ್ಯೆಗೆ ಅವನು ಮಾಡಿದ ಪ್ರಯತ್ನಗಳಾದರೂ ಜೀವನದಲ್ಲಿ ಸಾಮರಸ್ಯವಿರದ ಮೂಲಕ ಬಂದ ಅಸಮಾಧಾನದ ಕ್ರೂರಲೀಲೆಯೆಂದೇ ನಾನು ಭಾವಿಸುತ್ತೇನೆ. ಅವನ ಜೀವದ ದೃಷ್ಟಿಯಲ್ಲಿಯೇ ಒಂದು ದೋಷವಿದ್ದಿರಬೇಕು." (ಚೆ. ನಿ., ಪು. ೨೦). ಪ್ರಸಾದನಂಥವರಿಗೆ, "ವಸ್ತುವಿನಲ್ಲಿ ಚೆಲುವನ್ನು ಕಾಣುವುದು ಬೇಡ; ವಸ್ತು ತಾನಾಗಿಯೇ ಚೆಲುವಾಗಿ ಬರಬೇಕು." (ಪು. ೨೨).

ಇದು ಸೃಷ್ಟಿಸೌಂದರ್ಯವನ್ನು ಕಾಣಲಾಗದ ದೃಷ್ಟಿ ದೋಷದ ಮಾತು. ಕಾವ್ಯ ಸೌಂದರ್ಯವನ್ನು ಗುರುತಿಸುವುದಕ್ಕೂ ರಸಿಕ ದೃಷ್ಟಿಬೇಕು. ಕವಿ ಹೃದಯದೊಂದಿಗೆ ಓದುಗನ ಹೃದಯ ಸಮತಾನದಲ್ಲಿ ಮಿಡಿಯಬೇಕು. ಈ ಸಮಾನ ಹೃದಯಸ್ಪಂದನವುಳ್ಳವನೇ ಸಹೃದಯ. ಕಾವ್ಯವನ್ನು ಸಹೃದಯತೆಯಿಂದ ಬರಮಾಡಿಕೊಂಡರೆ ಅದರ ಸೌಂದರ್ಯದರ್ಶನ, ರಸಾನಂದಪ್ರಾಪ್ತಿ. ಒಂದು ಮಾಸಪತ್ರಿಕೆಯ ಸಂಪಾದಕನಾಗಿದ್ದ 'ರಸಿಕನು' ತನ್ನ ಗೆಳೆಯ ಶಿವರಾಮನ ಕವಿತೆಯ ಚೆಲುವನ್ನು ಮೊದಲು ಗುರುತಿಸಲಾರದೆ, ಅದನ್ನು ಕಸದಬುಟ್ಟಿಯ ಪಾಲುಮಾಡಿರುತ್ತಾನೆ; ಎಷ್ಟೋ ಕಾಲವಾದ ಮೇಲೆ ಬೇರೆಯ ಸನ್ನಿವೇಶದಲ್ಲಿ ಕವಿತೆಯ ಚೆಲುವನ್ನು ಕಂಡುಕೊಳ್ಳುತ್ತಾನೆ. ಈ 'ಸ್ಥಿತ್ಯಂತರ'ಕ್ಕೆ ಕಾರಣವೇನು?

"ಶಿವರಾಮನ ಕವಿತೆಯನ್ನು ಮೊದಲಿನ ಸಲ ಓದುವಾಗ ರಸಿಕನು ಅವಸರದಲ್ಲಿದ್ದ. ಅನೇಕ ಅನುದಾತ್ತ ಪ್ರೇಮಗೀತೆಗಳನ್ನೋದಿ ಅವನ ಮನಸ್ಸು ಬೇಸರಗೊಂಡಿತ್ತು. ಅಲ್ಲದೆ ನದಿಯ ಹೆಸರನ್ನು ಇಟ್ಟುಕೊಂಡ ಮಾತ್ರಕ್ಕೆ ನಲ್ಲೆಯನ್ನು ಆ ನದಿಗೇ ಹೋಲಿಸಿಬಿಡುವುದು ರಸಿಕನಿಗೆ ತುಸು ಗೌಣವೆನಿಸಿತ್ತು, ಈಗ ರಸಿಕ ಪ್ರಫುಲ್ಲಮಾನಸನಾಗಿದ್ದ. ಅಲ್ಲದೆ ತಾನೂ ಅಂಥಸೊಂದು ಕವಿತೆಯನ್ನು ಬರೆದು ಅದೇ ಹೆಸರಿನಲ್ಲಿ ಶ್ಲೇಷಾರ್ಥವನ್ನು

ಸೇರಿಸಿ ಆ ಬಗೆಯ ಸಂಸ್ಕಾರವನ್ನು ಹೊಂದಿದ್ದ. ಹೆಸರಿನ ಮಾಯೆ—ಮೋಡಿಯೆಲ್ಲ ಅವನಿಗೆ ಗೊತ್ತಿತ್ತು. ಅಂತೇ ಶಿವರಾಮನ ಕವಿತೆಯ ಸೊಬಗನ್ನು ತಿಳಿಯಲು ಸಮರ್ಥನಾದ. ವಸ್ತುವು ಮೊದಲಿನದೆ. ಅದೊಂದು ಒಳ್ಳೆ ಕವಿತೆ. ಆದರೆ ಆ ಕವಿತೆಯ ಚೆಲುವನ್ನು ತಿಳಿಯುವ ಪ್ರಯತ್ನಕ್ಕೆ ಅಡ್ಡಬಂದ ದೃಷ್ಟಿದೋಷವು ಹೋಗಿ ರಸಿಕನ ಹೃದಯವು ಕವಿತೆಯಲ್ಲಿ ರೂಪಗೊಂಡ ಕವಿಹೃದಯದೊಡನೆ ಸಮರಸವಾಗಿ ಬೆರೆಯಲು ಅವನಿಗೆ ನಿಜವಾದ ರಸಾನುಭವವಾಯಿತು." (ಚೆ. ನಿ. ಪು. ೩೭).

ಸಾಮಾನ್ಯರಿಗೆ ಪ್ರತ್ಯಕ್ಷ ಮೂಲಕವಾದುದೊಂದೇ ಅನುಭವ ಮಾರ್ಗ. ಅವರ ಪಾಲಿಗೆ, Seeing is believing, ನೋಡುವುದೇ ನಂಬತಕ್ಕದ್ದು. ಕವಿಗಳು, ದಾರ್ಶನಿಕರು, ತತ್ವಶಾಸ್ತ್ರಜ್ಞರು, ಅನುಭಾವಿಗಳು ಇವರ ಅನುಭವ ದ್ವಾರಗಳೇ ಬೇರೆ. ಇವರಿಗೆ, "ದ್ವಾರಾಣಿ ಭವಂತಿ ಸರ್ವತ್ರ":

"ನಮ್ಮ ವಿಚಾರಗಳಷ್ಟೇ ಅಲ್ಲ. ನಮ್ಮ ಕನಸುಗಳು ಕೂಡ ಒಂದು ಹೊಸ ಲೋಕದ ಹಾದಿಯನ್ನೇ ತೆರೆಯಿಸುವುವು. ಕಣಸುಗಳು, ಶ್ರುತಿಗಳು, ದರ್ಶನಗಳು—ಇವೆಲ್ಲ ಕವಿ ಸ್ರೇಷ್ಠರ ಕೈಗೆ ಸಿಲುಕುವ ದಾರಿ ಹೂಗಳಾಗಿವೆ....ಅಂತೇ ಜಾಗೃತಿ, ಸ್ವಪ್ನ, ಸುಷುಪ್ತಿ, ಸಮಾಧಿ ಎಂಬ ನಾಲ್ಕು ಸ್ಥಿತ್ಯಂತರಗಳು ಪೂರ್ವಿಕರು ಹೇಳಿದಂತೆ ಅನುಭವ ಸೋಪಾನದ ನಾಲ್ಕು ಮೆಟ್ಟಲುಗಳಾಗಿವೆ. ಅನೇಕ ಕವಿಗಳು ನಮ್ಮ ಜಾಗೃತ ಸ್ಥಿತಿಯ ಒಂದೊಂದು ಎಸಳನ್ನು ಬಣ್ಣಿಸಿ ತೋರಿಸುತ್ತಾರೆ. ಶೃಂಗಾರ, ಹಾಸ್ಯ, ವಿಡಂಬನೆ,—ಇವೆಲ್ಲ ಅಂತರಂಗ, ಬಹಿರಂಗ ಸೃಷ್ಟಿಗಳು ಸಂಗಮಿಸುವಲ್ಲಿ ಉದ್ಭವಿಸಿದ ಭಾವನೆಗಳಲ್ಲಿ ಕೆಲವು." (ಚೆ. ನಿ. ಪು. ೪೫).

ಈ ನಾಲ್ಕು ಬಗೆಯ ಅನುಭವ ಪ್ರಪಂಚಗಳು 'ಚೆಲುವಿನ ನಾಲ್ಕು ಲೋಕಗಳು.' "ಇವೆಲ್ಲವುಗಳ ಆಳವನ್ನು ಅಳೆಯದೆ ನಮ್ಮ ಕಾವ್ಯವಾಗಲಿ ತತ್ವಜ್ಞಾನವಾಗಲಿ ಪೂರ್ಣವಾಗದು" ಎಂಬುದು ಗೋಕಾಕರ ದೃಷ್ಟಿ. ಈ ದೃಷ್ಟಿಯನ್ನು ಸಮರ್ಥಿಸಲು, ನಾಗವರ್ಮನ ಕಾದಂಬರಿಯ ಮಹಾಶ್ವೇತೆಯ ಪ್ರಕರಣವನ್ನು ಓದಿದ ಮೇಲೆ ಅದರ ಪರಿಣಾಮವಾಗಿ ತಾವು ಭಾವನಾಲೋಕವಿಹಾರವನ್ನು ಕೈಗೊಂಡ ಸಂದರ್ಭವನ್ನೂ, ಆಗ ಕಾದಂಬರಿ ಮಹಾಶ್ವೇತೆಯರ ಸಂಬಂಧವಾಗಿ ಒಂದು ಹೊಸ 'ರೂಪಕ' ಹೊಳೆದು 'ಮಹಾಶ್ವೇತೆ' ಎಂಬ ದೃಶ್ಯವನ್ನು ರಚಿಸಿದ ಪ್ರಸಂಗವನ್ನೂ, ಕೈಲಾಸಂ ಅವರಿಗೆ 'ಸ್ಫೂರ್ತಿಯ ಕರೆ' ಎಂದು ('The Call path Come' ಎಂದು ಅವರ ಹರೀಂದ್ರನಾಥ ಚಟ್ಟೋಪಾಧ್ಯಾಯರಿಗೆ ಫೋನಿಸಿ ತಿಳಿಸಿದರಂತೆ) 'The lake' ಎಂಬ ಕವಿತೆಯನ್ನು ರಚಿಸಿದ ಪ್ರಸಂಗವನ್ನೂ, ಇನ್ನೊಂದೆರಡು ಇಂಥವೇ 'ಇಂದ್ರಿಯಾತೀತ' ಅನುಭವಗಳ ಪ್ರಕರಣಗಳನ್ನೂ ನಿದರ್ಶನಗಳಾಗಿ ನಿರೂಪಿಸಿದ್ದಾರೆ. ಕವಿ ಕೋಲರಿಜ್ ಸುಪ್ರಸಿದ್ಧ Kubla Khan

ಎಂಬ ಕವಿತೆಯನ್ನು ರಚಿಸಿದ್ದೂ ಇಂಥದೇ ಒಂದು ಸಂದರ್ಭ. ಕಲೆಗಾರನ ಸೃಷ್ಟಿಕರ್ಮ ದಲ್ಲಿ ಜಾಗೃತ ಪ್ರಜ್ಞೆ (The Conscious), ಅಜ್ಞಾತಪ್ರಜ್ಞೆ (The un-Conscious) ಸುಪ್ತಪ್ರಜ್ಞೆ (The Sub-Conscious)—ಈ ಬೇರೆ ಬೇರೆ ಮಾನಸ ಸ್ತರಗಳು ಹೇಗೆ ಕಾರ್ಯಶೀಲವಾಗುತ್ತವೆ ಎಂಬುದು ಆಧುನಿಕ ಮನಶ್ಶಾಸ್ತ್ರದ ಸಂಶೋಧನೆಯ ವಿಷಯ ವಾಗಿದ್ದು, ಸಾಹಿತ್ಯಸೃಷ್ಟಿಯ ಮೇಲೆ ಈಗಾಗಲೇ ಗಮನಾರ್ಹ ಪ್ರಭಾವ ಬೀರಿರುವು ದನ್ನು ನಾವು ಈ ಸಂದರ್ಭದಲ್ಲಿ ನೆನೆಯಬಹುದು.

'ಕಾವ್ಯವೆಂದರೆ ಒಂದು ದೊಡ್ಡ ಪ್ರಮಾದ, ಇನ್ನೂ ಜನತೆಯು ಅಜ್ಞಾನದ ಅಂಧಕಾರ ದಲ್ಲಿರುವುದರಿಂದ ಕವನಗಳನ್ನು ಜನರು ಓದುವರು' ಎಂಬ ಆಧುನಿಕ ವಿಜ್ಞಾನಿಯ ಟೀಕೆ ಯಿಂದ ಪ್ರಭಾವಿತನಾಗಿ ಕವಿ ಕಾವ್ಯವನ್ನು ವೈಜ್ಞಾನಿಕವಾಗಿಸತೊಡಗಿದರೆ ಎಂಥ ಆಭಾಸವಾಗುವುದು ಎಂಬುದನ್ನು ಸ್ವವಿರಚಿತ 'ವೈಜ್ಞಾನಿಕ ಕವಿತೆ'ಗಳ ದೃಷ್ಟಾಂತದ ಮೂಲಕ ವಿಡಂಬನೆಮಾಡುವುದು 'ಸಾಹಿತ್ಯದಲ್ಲಿ ಸೌಂದರ್ಯ' ಎಂಬ ನಿಬಂಧದ ಗುರಿ. ಕಾವ್ಯದ ವಸ್ತುವಿಗೂ ಕಾವ್ಯ ಸೌಂದರ್ಯಕ್ಕೂ ಇರುವ ಸಂಬಂಧ ಪರಿಶೀಲನೆ ಕಾವ್ಯ ಮೀಮಾಂಸೆಯಲ್ಲಿ ವಿವಾದಾಸ್ಪದವಾದ ವಿಚಾರ. ಈ ವಿಚಾರದ ಮೇಲೆ ಈ ನಿಬಂಧ ಸ್ವಲ್ಪ ಬೆಳಕು ಚೆಲ್ಲುತ್ತದೆ.

ಪರಂಪರಾಗತ ಸೌಂದರ್ಯ ವರ್ಣನೆಯನ್ನು ತಿರಸ್ಕರಿಸುವ ಮುನ್ನ ಅದರ ಹಿಂದಿನ ಅನುಭವದ ಸತ್ಯವನ್ನು ಗುರುತಿಸುವುದನ್ನು ಕಲಿತರೆ, ಅದೇ ಅನುಭವ ತನಗಾದಾಗ ಅದಕ್ಕೆ ಹೊಸ ರೂಪವನ್ನು ಕೊಡಲು ಸಾಧ್ಯವಾಗಬಹುದು ಎಂಬುದೇ 'ಚೆಲುವಿನ ಪರಂಪರೆ' ಎಂಬ ನಿಬಂಧದ ವಿಷಯ. ಕವಿಗಳಿಗೋಸ್ಕರ ಚೆಲುವು ತನ್ನ ನಿಲುವನ್ನು ಮಾರ್ಪಡಿಸಿಕೊಳ್ಳುವುದಿಲ್ಲ. ಕವಿಯ ಒಲವು ಇದ್ದಂತೆ ಚೆಲುವಿನ ನಿಲವು "ಕೋಗಿಲೆಯ ಕೂಗು ಒಂದೇ. ಅದರ ಕೂಗು ಬೇರೆ ಬೇರೆಯವರಿಗೆ ಬೇರೆ ಬೇರೆಯಾಗಿ ಕೇಳಿಸುತ್ತದೆ" ಎಂಬ ಸತ್ಯವನ್ನು ಸ್ವಂತ ಅನುಭವದಿಂದ ಕಂಡುಕೊಂಡ ಸಂಗತಿಯನ್ನು ಲೇಖಕರು ಉದಾಹರಿಸಿ, "ಅಂದಿನಿಂದ ನಾನು ಪರಂಪರೆಯೆಂದರೆ ಕೀಳು, ಹಾಗೂ ಪ್ರಯೋಗವೆಂದರೆ ಮೇಲೆಂಬ ತಿಳುವಳಿಕೆಯನ್ನು ಬಿಟ್ಟುಬಿಟ್ಟಿದ್ದೇನೆ. ನಿರ್ಣಯ ಬುದ್ಧಿಯೆಂಬ ಕುದುರೆಗೆ ಇಂತಿಷ್ಟು ನಿಯಮಗಳೆಂಬ ಕಣ್ಣು ಕುಲಾಯಿಗಳನ್ನು ಹಾಕಿದರೆ ಸಾಲದು. ಸದಾ ಜಾಗೃತವಾಗಿರುವ ವಿವೇಕವೆಂಬ ಕಡಿವಾಣವು ಅದಕ್ಕೆ ಅವಶ್ಯವಾಗಿ ಬೇಕು" ಎಂಬ ಎಚ್ಚರಿಕೆಯನ್ನು ನೀಡಿದ್ದಾರೆ. ಈ ಎಚ್ಚರಿಕೆಯ ಬೆಳಕಿನಲ್ಲಿ ಪ್ರಾಚೀನ ಕಾವ್ಯಮಾರ್ಗದ ಅಲಂಕಾರಗಳು, ಅಷ್ಟಾದಶವರ್ಣನೆ, ಕವಿಸಮಯ ಮುಂತಾದ ಕಾವ್ಯಾಂಗಗಳಲ್ಲಿ ಕವಿ ಗಳ ಸೌಂದರ್ಯ ದರ್ಶನ ಹೇಗೆ ಪ್ರಕಟಗೊಂಡಿವೆ ಎಂಬುದನ್ನು ಆಧುನಿಕ ದೃಷ್ಟಿ ಯಿಂದಲೇ ಪುನಃಪರಿಶೀಲನೆ ಮಾಡಿದರೆ, ಕಾವ್ಯಪ್ರಪಂಚದ ಚೆಲುವಿಗೂ ಒಂದು ಅರ್ಥ ಪೂರ್ಣ ಪರಂಪರೆ ಇರುವುದು ವ್ಯಕ್ತಪಡುವುದು. ಈ ದೃಷ್ಟಿಯಿಂದ ವಿಚಾರ ಮಾಡಿದಾಗ,

ರಂಪರೆಗೂ ಪ್ರಯೋಗಶೀಲತೆಯಿಂದ ಆವಿರ್ಭವಿಸುವ ನವ್ಯತೆಗೂ ಸಮನ್ವಯವನ್ನು ಾಧಿಸಬೇಕೆಂಬುದೇ ಗೋಕಾಕರ ಆಶಯ ಎಂಬುದು ಸ್ಪಷ್ಟವಾಗುತ್ತದೆ.

'ಪ್ರಕೃತಿಯ ರೂಪಕಾತಿ' ಎಂಬುದು ಸೃಷ್ಟಿ ತತ್ತ್ವದ ಸೌಂದರ್ಯವನ್ನು ಒಂದು ನೈಸರ್ಗಿಕ ಘಟನೆಯ (Phenomenon) ದೃಷ್ಟಾಂತದ ಮೂಲಕ ವಿಶದಪಡಿಸುವ ಗದ್ಯ-ಪದ್ಯಾ ತ್ಮಕ ರಚನೆ. ಗೋಕಾಕರು ಇಂಗ್ಲೆಂಡಿನಲ್ಲಿದ್ದಾಗ ಚಡರ್‌ಗವಿಗಳಲ್ಲಿ ಆ ಅದ್ಭುತ ಘಟನೆ ಯನ್ನು ಸಂದರ್ಶಿಸಿದರು. ಆ ಘಟನೆಯಲ್ಲಿ ಸೃಷ್ಟಿಮುಖವಾದ 'ಲಿಂಗಾಂಗ ಸಾಮರಸ್ಯ' ವನ್ನು ಗುರುತಿಸಿದ್ದು ಅವರ ದರ್ಶನವಿಶೇಷ. ಅವರ ದರ್ಶನ ಸ್ವರೂಪವನ್ನು ಕೆಲವು ಮಾತುಗಳಲ್ಲಿ ತಿಳಿಯ ಹೇಳುವುದು ಅಸಾಧ್ಯವಾದ್ದರಿಂದ, ಅದರ ಹೊಳಹನ್ನು ಬೀರುವ ಆ ಘಟನೆಯ ವರ್ಣನೆಯನ್ನು ಅವರ ಮಾತುಗಳಲ್ಲಿಯೇ ತಿಳಿಸಿಕೊಡುವುದು ಒಳ್ಳಿತು :

"ಗವಿಗಳ ಒಳಕ್ಕೆ ಹೋದಾಗ ನನ್ನ ಕುತೂಹಲವು ದ್ವಿಗುಣಿತವಾಗುತ್ತದೆ. ಗವಿಯ ಬಾಗಿಲಕ್ಕಿದ್ದ ವಸ್ತುಸಂಗ್ರಹಾಲಯವೇ ಸಾಕಷ್ಟು ಚಿತ್ತಾಕರ್ಷಕವಿದೆ. ಕಾರ್ಬನ್‌ಮಯವಾದ ಸುಣ್ಣದ ಬಂಡೆಗಲ್ಲುಗಳೊಳಗಿಂದ ಜಾಳಿಸಿ ಬರುವ ನೀರಿನ ಹನಿಗಳಿಂದ ಇಲ್ಲಿಯ ಚೂರ್ಣಘನಲಿಂಗ (Stalagmite) ಚೂರ್ಣಘನಾಂಗ (Stalaetite) ಗಳಾಗಿವೆ. ಸೋಸಿಬಂದ ಹನಿಗಳು ಬರಿ ಮೇಲ್ಭಾಗಕ್ಕೆ ಬಂದು ನಿಂತಲ್ಲಿ ಅಲ್ಲಿ ಜಂತೆಯಿಂದ ತೂಗುಬಿಟ್ಟ ದೀಪದಂತೆ ಲಿಂಗಾಕಾರವಾಗಿ ಚೂರ್ಣಘನಾಂಗವು ನಿಂತಿತು. ಅವು ನೆಲದ ಮೇಲೆ ಬಿದ್ದಲ್ಲಿ ಚೂರ್ಣಘನಲಿಂಗವೊಂದು ಮೆಲ್ಲನೆ ರೂಪು ಗೊಂಡು ಮೇಲೆದ್ದಿತು. ಒಂದೊಂದು ಕಡೆಗೆ ಎರಡು ತರಹದ ಕ್ರಿಯೆಗಳು ಸಂಭವಿ ಸಿದ್ದು ಲಿಂಗಗಳು ಹಾಗೆಯೇ ಬೆಳೆದರೆ ಒಂದೇ ಸರಳ ರೇಖೆಯಲ್ಲಿ ಅವುಗಳ ಸಮ್ಮಿಲನ ವಾಗುವುದು ಸ್ಪಷ್ಟವಾಗಿ ಕಾಣುವುದು. ಚೂರ್ಣಘನಾಂಗದೊಡನೆ ಒಂದಾಗಲೆಂದೇ ಚೂರ್ಣಘನಲಿಂಗವು ಬೆಳೆಯುತ್ತ ನಡೆದಂತೆ ತೋರುವುದು. ಮೇಲೆ ಹೇಳಿದ ಸುಣ್ಣ ಗಲ್ಲಿನ ಹನಿಗಳು ಬೇರೆ ಬೇರೆ ಧಾತುಗಳೊಳಗಿಂದ ಹಾಯ್ದು ಬಂದರಿಂದ ಅಂಗ-ಲಿಂಗಗಳು ಮುಳಿಬಿಲ್ಲಿನ ಸಪ್ತವರ್ಣಗಳನ್ನೊಳಗೂಡಿ ಹೊಳೆಯುತ್ತವೆ." (ಚೆ. ನಿ. ಪು. ೭೫-೭೬).*

"ಸ್ತ್ರೀರೂಪಮೆ ರೂಪಂ, ಶೃಂಗಾರಮೆ ರಸಂ"—ಇದು ಪ್ರಾಚೀನ ಕನ್ನಡ ಕವಿಯೊಬ್ಬನ (ನೇಮಿಚಂದ್ರ : 'ಲೀಲಾವತಿ', ೧೨-೮) ಮಾತು. ಸ್ತ್ರೀರೂಪಕ್ಕೆ ಸೋಲದವರು ವಿರಳ. 'ಸ್ತ್ರೀರೂಪದ ಶಕ್ತಿ'ಯನ್ನು ಕುರಿತು ಎರಡು ಬರಹಗಳಿವೆ. ಇವೆರಡೂ ಕಥೆಗಳ ಮಾದರಿ

* ಲಿಂಗದಿಂದ (ಮೂಲಪ್ರಕೃತಿ) ಅಂಗವು (ಅಂಶಪ್ರಕೃತಿ) ಒಡೆದು ಮೂಡುವ ಘಟನೆ ಯಿದು. ವೀರಶೈವ ಸಿದ್ಧಾಂತದಲ್ಲಿ ಬರುವ ಲಿಂಗಾಂಗ ಸಾಮರಸ್ಯ ತತ್ತ್ವವೇ ಬೇರೆ.

ಯಲ್ಲಿವೆ. ಅಭ್ಯಾಸಕ್ಕೆಂದು ವಿಲಾಯಿತಿಗೆ ಹೋಗಿದ್ದ ಪ್ರೊಫೆಸರೊಬ್ಬರ ಅನುಭವ
(ಬಹುಶಃ ಸ್ವಾನುಭವ?) ಇಂದಿನ ತರುಣ ಪೀಳಿಗೆಗೆ ಮಾರ್ಗದರ್ಶಕವಾಗಿ ಮೂಡಿದೆ
ಮೊದಲ ಕಥೆಯಲ್ಲಿ. ಅವರು ತಮ್ಮ ಆತ್ಮಸಂಯಮವನ್ನು ಕಳೆದುಕೊಂಡಿದ್ದರೆ, ಅವರು
ಬಿಡಾರ ಮಾಡಿದ್ದ ಮನೆಯ ಕೆಲಸಗಿತ್ತಿಯ—'ಶ್ವೇತಕುಮಾರಿ'ಯ—ಕಾಮ ಪ್ರದೀಪದ
ಪತಂಗವಾಗಿಬಿಡುತ್ತಿದ್ದರು: "ಇವರು ಮುಗುಳುನಗೆ ನಕ್ಕರೆ ಸಾಕು; ಶ್ವೇತಕುಮಾರಿಯು
ಪ್ರೊಫೆಸರನ್ನು ಮುದ್ದಿನಿಂದ ಮುಚ್ಚಿಬಿಡುತ್ತಿದ್ದಳು." ಅಂಥ ಸೂಕ್ಷ್ಮ ಸನ್ನಿವೇಶ. "ಹೆಣ್ಣು
ಗಂಡಿನ ವಿಷಯದಲ್ಲಿ ಸನಾತನಿ"ಗಳಾಗಿದ್ದ ಅವರ ಸಾಂಸ್ಕೃತಿಕ ಹಿನ್ನೆಲೆ, ತಾಯ್ನಾಡಿ
ನಲ್ಲಿ ಬಿಟ್ಟು ಬಂದಿದ್ದ ಪ್ರಿಯಪತ್ನಿಯ ನೆನಪು, "ಇಲ್ಲಿ ಕಾಲು ಜಾರಿದರೆ ಪ್ರೀತಿಯು
ಪ್ರೇತವಾಗಿಬಿಡಬಹುದು. ಪ್ರೀತಿಯೆಂದರೆ ಜೀವನ" ಎಂಬ ಎಚ್ಚರಿಕೆ—ಇವು ಅವ
ರನ್ನು ಕಾಪಾಡಿದವು. ಇದು ಸ್ತ್ರೀರೂಪದ 'ಶೃಂಗಾರ ಮುಖ'ವಾದರೆ, ಗುಜರಾಥ
ದಲ್ಲಿಯ ಅಬೂಪಹಾಡದ 'ಲಕ್ಷ್ಮಿ ಶಿಖರ'ದ ಐತಿಹ್ಯದ ಕಥೆ ಅದರ 'ವೀರಮುಖ'ವನ್ನು
ಕಾಣಿಸಿಕೊಟ್ಟಿದೆ. ಭಾರತ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಸ್ವಾತಂತ್ರ್ಯದ ಸಂದೇಶ
ವನ್ನು ದೇಶಾದ್ಯಂತ ಪ್ರಸಾರ ಮಾಡಿದ ಗೋಸಾವಿಗಳು ಈ ಆಶ್ರಮದಲ್ಲಿ ಶಿಕ್ಷಣ ಪಡೆದವರು
ಲಕ್ಷ್ಮಿಬಾಯಿಯೇ ಅಲ್ಲಿನ ಸ್ಫೂರ್ತಿ ಕೇಂದ್ರ. ಅದರ ಸಂಸ್ಥಾಪಕ—ನಿರ್ವಾಹಕರು ಬಿಜಯ
ಕುಮಾರ—ರುಕ್ಮಿಣೀದೇವಿಯರು. ರುಕ್ಮಿಣೀದೇವಿ ವೀರಮಾತೆ ಲಕ್ಷ್ಮೀದೇವಿಗೆ ತಕ್ಕ
ವೀರಪುತ್ರಿ. ಲಕ್ಷ್ಮೀದೇವಿ ದೇಶೀಯ ಸಂಸ್ಥಾನವೊಂದರಲ್ಲಿ ಬ್ರಿಟಿಷರ ವಿರುದ್ಧ ಬಂಡಾಯ
ವೆಬ್ಬಿಸಿದ ಆರೋಪಕ್ಕೆ ಗುರಿಯಾಗಿ ತನ್ನ ಪ್ರಿಯಪತಿಯೊಂದಿಗೆ ಮರಣಶಿಕ್ಷೆಗೆ ಗುರಿ
ಯಾಗಿದ್ದಳು. ರಾಜಭಕ್ತನೇ ಆಗಿದ್ದ ವಿಜಯಕುಮಾರ ಒಂದು ದಿನ ದರಬಾರದಲ್ಲಿ—
"ರಾಜಕಾರಣದಲ್ಲಿ ರಾಕ್ಷಸಿಯರಂತೆ ಕಾಲಿಡುವ ಚೆಲುವೆಯರಾದ ಸ್ತ್ರೀಯರು" ಎಂದು
ಲಕ್ಷ್ಮೀದೇವಿಯನ್ನು ಹೀನೈಸಿದ ಉನ್ನತಾಧಿಕಾರಿ ಶಂಕರಸಿಂಗನನ್ನು ಸಾತ್ವಿಕಕ್ರೋಧದ
ಆವೇಶದಲ್ಲಿ ಕೊಲೆಮಾಡಿ, ತಾನು ಕಾರಾಗೃಹವಾಸಕ್ಕೆ ಗುರಿಯಾಗುತ್ತಾನೆ. ಸೆರೆಮನೆ
ಯಲ್ಲಿ ಲಕ್ಷ್ಮೀದೇವಿಯ ದರ್ಶನ—ಅದು ಕನಸೋ ನನಸೋ ಅವನು ಕಾಣ—ಸಂಘಟಿಸಿ
ಅವಳು ನಿರ್ದೇಶನ ನೀಡುತ್ತಾಳೆ; ತದನುಸಾರವಾಗಿ ವಿಜಯಕುಮಾರ ಅಬೂಪಹಾಡಕ್ಕೆ
ಹೋಗಿ, ಆಕೆಯ ಮಗಳು ರುಕ್ಮಿಣೀದೇವಿಯನ್ನು ಮದುವೆಯಾಗಿ, ಆಶ್ರಮಸ್ಥಾಪನೆ
ಯಾಗುತ್ತದೆ: ಲಕ್ಷ್ಮೀದೇವಿಯ ಸ್ಮಾರಕವಾಗಿ; ಉತ್ಸಾಹೀ ತರುಣರಲ್ಲಿ ದೇಶಪ್ರೇಮ
ವನ್ನೂ ಸ್ವಾತಂತ್ರ್ಯ ಪ್ರೇಮವನ್ನೂ ಬೆಳಸುವ ಧ್ಯೇಯದಿಂದ. ಈ ಧ್ಯೇಯಸಾಧನೆಯಲ್ಲಿ
ಸತಿಪತಿಗಳು ಇಪ್ಪತ್ತು ವರ್ಷಕಾಲ ದುಡಿಯುತ್ತಾರೆ. ರುಕ್ಮಿಣೀದೇವಿ ಗತಿಸಿದ ಬಳಿಕ
"ನನ್ನ ಸುತರೂ ಆಶ್ರಮನಿವಾಸಿಗಳೂ ನೆನೆಯಲೆಂದು" ವಿಜಯಕುಮಾರ ಈ ಐತಿಹ್ಯ
ವನ್ನು ಬರೆದಿಡುತ್ತಾನೆ. ಲಕ್ಷ್ಮೀ ಶಿಖರದ ಈ ಐತಿಹ್ಯವು ಲೇಖಕರ ಗಮನಕ್ಕೆ ಬಂದು
ಅದರ ಆಧಾರದ ಮೇಲೆ, "ಸ್ತ್ರೀರೂಪ ಹೇಗೆ ಉದಾತ್ತಕಾರ್ಯಕ್ಕೆ ಪ್ರೇರಕಶಕ್ತಿಯಾಗ

ಬಲ್ಲದು" ಎಂಬ ಆದರ್ಶವನ್ನು ಮುಂದಿಡುವ ಸಲುವಾಗಿ ಈ 'ಕಲ್ಪಿತರಮ್ಯಕಥೆ'ಯನ್ನು ರಚಿಸಿರುವಂತೆ ಕಾಣುತ್ತದೆ.

'ಪ್ರೀತಿ-ಕಾಂತಿ' ಇದು ಒರ್ವ ನಲ್ಲೆಯ ಬಯಕೆ-ಗನಸು (Wish-fulfilling dream) "ನನ್ನ ನಲ್ಲನು ನನ್ನ ಕೈಹಿಡಿದು ನನ್ನನ್ನು ಬೆಳಕಿನ ಸೀಮೆಗೆ ಕರೆದೊಯ್ಯುವನೆಂದು ದೃಢವಾಗಿ ನಂಬಿದ್ದ" ನಲ್ಲೆ—ಪತಿಯನ್ನು ಒಂದು ಕ್ಷಣವೂ ಅಗಲಿರಲಾರದವಳು—ವಾಸ್ತವ ಪ್ರಪಂಚದಲ್ಲಿ ಪತಿವಿರಹದ ಅಂಜಿಕೆ ಕಾಡಿದಾಗ ಬಯಕೆ-ಗನಸಿನ ಬೆನ್ನೇರಿ ಒಂಟಿಯಾಗಿ ಬನದಲ್ಲಿ ಸೌಂದರ್ಯಶಾಂತಿಗಳ ಏಕಾಂತ ಸುಖಾನುಭವದಲ್ಲಿ ವಿಹರಿಸುತ್ತಾಳೆ. ಈ ಮಾನಸಿಕ ಅನುಭವ ಲೋಕದಲ್ಲಿ ಭವದ ಪತಿಯ ಹಂಗು ಎಷ್ಟು ಮಾತ್ರಕ್ಕೂ ಅವಳಿಗೆ ಬೇಡ; ಏಕಾಂಗಿನಿಯಾಗಿರಬೇಕು. ಕಾರಣ, ಇಲ್ಲಿಯೂ ಅಗಲಿಕೆಯ ಅಂಜಿಕೆ ಕಾಡಿದರೆ? ಈ ಬಯಕೆ-ಗನಸನ್ನು ಪ್ರೇರಿಸಿದ್ದೂ ಪತಿಪ್ರೇಮವೇ!

'ಸೌಂದರ್ಯವೇ ಸತ್ಯ'—ಎಂಬ ವಾಕ್ಯವನ್ನು ಉಚ್ಚರಿಸಿದರೆ ಸಾಕು, ಆಂಗ್ಲ ಸಾಹಿತ್ಯದ ಪರಿಚಯವುಳ್ಳವರಿಗೆ ಕೀಟ್ಸ್ ಕವಿಯ ನೆನಪಾಗುತ್ತದೆ. ಬಾಳಿನಲ್ಲಿ ನಂಜನ್ನೇ ಉಂಡರೂ ಅದನ್ನವನು ಅರಗಿಸಿಕೊಂಡವನಾದ್ದರಿಂದಲೇ ಬದುಕು ಅವನಿಗೆ 'ಶಿವ'ವಾಗಿತ್ತು, 'ಸುಂದರ'ವಾಗಿತ್ತು; ಎಂದೇ ಅವನು 'ಸೌಂದರ್ಯವೇ ಸತ್ಯ, ಸತ್ಯವೇ ಸೌಂದರ್ಯ' ಎಂಬ 'ದರ್ಶನ'ವನ್ನು ಪಡೆಯಲು ಸಮರ್ಥನಾದ. ಕವಿಯ ಕಾವ್ಯಜೀವನವನ್ನು ಪರಿಚಯಮಾಡಿಕೊಡುವುದರ ಮೂಲಕ ಗೋಕಾಕರು ಈ 'ದರ್ಶನರಹಸ್ಯ'ವನ್ನು ಪ್ರಕಾಶಗೊಳಿಸಿದ್ದಾರೆ.

ಒಟ್ಟಿನಲ್ಲಿ, ನವೀನ ರೀತಿಯಲ್ಲಿ 'ಲಕ್ಷಣಲಕ್ಷ್ಯ ಸಮನ್ವಯ' ಮಾಡುತ್ತ, ಸೌಂದರ್ಯಮೀಮಾಂಸೆಯನ್ನು ಶುಷ್ಕವಾದ ವಿಚಾರಮಾರ್ಗದಿಂದ ಮನೋಜ್ಞವಾದ ವಿಹಾರಮಾರ್ಗಕ್ಕೆ ಒಯ್ಯುವ ಶ್ಲಾಘ್ಯವೂ, ಯಶಸ್ವಿಯೂ ಆದ ಪ್ರಯತ್ನಗಳನ್ನು ಒಳಗೊಂಡ ಅಪೂರ್ವಗ್ರಂಥ 'ಚೆಲುವಿನ ನಿಲುವು.' ವಿಚಾರವಂತರಿಗೆ ವಿಚಾರದ ಬೆಳೆ ಇದೆ ಇಲ್ಲಿ; ರಸಿಕರಿಗೆ ಸಾಹಿತ್ಯ ಧರ್ಮದ ನೆಲೆಯೂ ಇದೆ.

೩

ಸಾಹಿತ್ಯ ವಿಮರ್ಶಕರು ಪಾಶ್ಚಾತ್ಯ ಸಾಹಿತ್ಯದಲ್ಲಿ 'ಪತ್ರಸಾಹಿತ್ಯ' Epistle ಎಂಬ ಪ್ರಕಾರವೊಂದನ್ನು ಗುರುತಿಸುತ್ತಾರೆ. ಸಾಹಿತ್ಯದ ಮಾತಿರಲಿ. ನಿತ್ಯಜೀವನ ರಂಗದಲ್ಲಿ ಕೂಡ, ಆಂಗ್ಲರೂ ಇತರ ಪಾಶ್ಚಾತ್ಯ ಜನಾಂಗಗಳವರೂ ಪತ್ರಲೇಖನವನ್ನು ಎಂದಿನಿಂದಲೂ ಒಂದು ಕಲೆಯಾಗಿ ಬೆಳಸಿಕೊಂಡು ಬಂದಿದ್ದಾರೆ. ಭಾರತೀಯ ಕಾವ್ಯಗಳಲ್ಲಿ ಪದ್ಯರೂಪದ ಪತ್ರಗಳೂ ಪತ್ರಪ್ರಸಂಗಗಳೂ ಅಲ್ಲಿ ಇಲ್ಲಿ ಹುದುಗಿಕೊಂಡಿವೆ. ಗದ್ಯದಲ್ಲಿ ಪತ್ರಲೇಖನ ಈಚಿನ ಬೆಳವಣಿಗೆ ಎನ್ನಬೇಕು. ನಮ್ಮ ದೇಶದಲ್ಲಿ ವಿವೇಕಾನಂದ,

ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ್, ಜವಹರಲಾಲ್ ನೆಹರೂ ಮುಂತಾದವರು ಬರೆದು ಪ್ರಕಟವಾಗಿರುವ ಪತ್ರಗಳಿಗೆ ಸಾಹಿತ್ಯಿಕ ಮೌಲ್ಯದ ಜೊತೆಗೆ ಐತಿಹಾಸಿಕ ಮಹತ್ತ್ವವೂ ಲಭಿಸಿವೆ. ಆಧುನಿಕ ಕನ್ನಡ ವಾಙ್ಮಯದಲ್ಲಿ 'ಪತ್ರಸಾಹಿತ್ಯ' ಇನ್ನೂ ಅಂಕುರಾವಸ್ಥೆಯಲ್ಲಿದ್ದು, ಅವಶ್ಯವಾಗಿ ಬೆಳೆಯಬೇಕಾಗಿದೆ.

"ಪತ್ರ ಎರಡು ಹೃದಯಗಳ, ಮನಗಳ ನಡುವೆ ನಿರ್ಮಿಸಿದ ಭಾವಸೇತು ; ಒಂದು ಹೃದಯದಿಂದ ಇನ್ನೊಂದು ಹೃದಯಕ್ಕೆ ಬಿಟ್ಟ ಹೂಬಾಣ ಆಗಬಲ್ಲದು ಅದು ; ಉಕ್ಕಿನ ಬಾಣವೂ ಆಗಬಲ್ಲದು. ಹೃದಯದ ಕೆರೆಯ ತೂಬು ಅದು ; ಮನೋಮಂದಿರದ ತೆರೆದ ಕಿಟಕಿ. ಆತ್ಮೀಯತೆ ಅದರ ಪ್ರಧಾನ ಲಕ್ಷಣ. ಎಂಥ ಸರ್ವಸಾಮಾನ್ಯರ ಯೋಗಕ್ಷೇಮದ ಪತ್ರಗಳಲ್ಲಿ ಕೂಡ ಇನ್ನಾವ ಗುಣವಿರದಿದ್ದರೂ ಆತ್ಮೀಯತೆಯ ಅನುರಣನವಿರುತ್ತದೆ. ಪತ್ರ ಪ್ರಮುಖವಾಗಿ ಸಂಬೋಧನ ಸ್ವರೂಪದ್ದಾದ್ದರಿಂದ ಅದರಲ್ಲಿ ಹೃದಯದ ಕರೆ ಮೊರೆ, ರೇಗು ಕೂಗು, ಆದೇಶ ಸಂದೇಶ, ಆವೇದನ ನಿವೇದನ ಮುಂತಾಗಿ ಎಲ್ಲ ಸ್ಥಾಯಿಭಾವಗಳ ಪ್ರಕಾಶನಕ್ಕೆ ಅವಕಾಶವಿದ್ದು, ರಸಪರ್ಯವಸಾಯಿಗಳಾಗುವುದರಿಂದ ಅವು ಕಾವ್ಯದ ಮಟ್ಟಕ್ಕೂ ಏರಬಹುದು. ಸ್ವಾನುಭವದ ಮನೋಜ್ಞ ನಿರೂಪಣೆ, ಕಂಡ ನೋಟಗಳ ರಮಣೀಯ ವರ್ಣನೆ ಇವೆಲ್ಲ ಪತ್ರಸಾಹಿತ್ಯಕ್ಕೆ ವಿಷಯಗಳು. ವಾಙ್ಮಯದಲ್ಲಿ ಪತ್ರಸಾಹಿತ್ಯದ ಸ್ಥಾನ ಇಂತಿರುವಲ್ಲಿ, ಸಾಹಿತಿಗಳ, ದಾರ್ಶನಿಕರ, ತತ್ತ್ವಜ್ಞಾನಿಗಳ, ಮಹಾರಾಜಕಾರಣಿಗಳ ಕೈಯಲ್ಲಿ ಪತ್ರಲೇಖನ ಸಾಹಿತ್ಯದ ಮಟ್ಟಕ್ಕೇರಿದರೆ ಅದರಲ್ಲಿ ಅಚ್ಚರಿಯೇನು ?"*

ಇಂಥ ಪತ್ರಲೇಖನ ಪ್ರಣಯಿಗಳ ನಡುವೆ, ಗಂಡಹೆಂಡಿರ ನಡುವೆ, ತಂದೆ ಮಕ್ಕಳ ನಡುವೆ, ಸೋದರರ ನಡುವೆ, ಆಪ್ತಮಿತ್ರರ ನಡುವೆ, ರಾಜಕಾರಣಿಗಳ ನಡುವೆ ಮುಂತಾಗಿ ಯಾರಿಬ್ಬರ ನಡುವೆ ಬೇಕಾದರೂ ನಡೆಯಬಹುದು. ಪತ್ರದ ವಿಷಯ ಯಾವುದೇ ಇರಲಿ (ಮಗನಿಗೆ ತಂದೆಯ ಉಪದೇಶವಾಗಿರಬಹುದು, ನಲ್ಲನು ನಲ್ಲೆಗೆ ಒಲವನ್ನು ಸೂರೆಗೊಟ್ಟಿರಬಹುದು, ಒಬ್ಬ ತನ್ನ ಮಿತ್ರನಿಗೆ ತನ್ನ ಪ್ರವಾಸದ ಕಥನ ಮಾಡಿರಬಹುದು), ಪತ್ರ ಏಕಮುಖವಾಗಿರಲಿ ದ್ವಿಮುಖವಾಗಿರಲಿ, ಹೃದಯ ಸಂವಾದದ ಧ್ವನಿ ಅದರಲ್ಲಿ ಸ್ಪಷ್ಟವಾಗಿ ಕೇಳುತ್ತಿರಬೇಕು ; ಎಷ್ಟೇ ಉಪದೇಶಾತ್ಮಕವಾಗಿದ್ದರೂ ಪತ್ರದ ಭಾಷೆ ಹೃದಯದ್ದಾಗಿರಬೇಕು ; ಸಂಬೋಧನೆ ಸಂವೇದನಾತ್ಮಕವಾಗಿರಬೇಕು ; 'ವ್ಯವಹಾರ'ವನ್ನು ಕೂಡ 'ವಿಹಾರ' ವಾಗಿಸುವ ಕಲೆ ಕೈಸೂರೆಯಾಗಿರಬೇಕು. ಹೀಗಿದ್ದರೇಯೆ ಪತ್ರಲೇಖನ ಸಾಹಿತ್ಯಿಕ ಮೌಲ್ಯವನ್ನು ಪಡೆಯುವುದು.

* ಶ್ರೀ ಜ. ಚ. ನಿ. ಸ್ವಾಮಿಗಳ 'ಕಾರುಣ್ಯಕಿರಣ'ಕ್ಕೆ (೧೯೬೪) ಲೇಖಕನು ಬರೆದಿರುವ ಮುನ್ನುಡಿ : ಪು. ೧೦

ಪತ್ರಗಳಲ್ಲಿ ಎರಡು ಬಗೆ : (೧) ವಾಸ್ತವಿಕ—ಎಂದರೆ, ಜೀವಂತ ವ್ಯಕ್ತಿಗಳ ನಡುವೆ ನಡೆಯತಕ್ಕವು. ಇವೇ ನಿಜವಾದ ಪತ್ರಸಾಹಿತ್ಯ. (೨) ಕಾಲ್ಪನಿಕ— ಎಂದರೆ, ಸಾಹಿತಿ ಅದನ್ನೊಂದು ಸಾಹಿತ್ಯ ಪ್ರಕಾರವಾಗಿ ಬಳಸಿಕೊಂಡವು. ಮೇಲೆ ಒಕ್ಕಣಿಸಿದ ಪತ್ರ ಸಾಹಿತ್ಯ ಗುಣಗಳು 'ವಾಸ್ತವಿಕ' ಪತ್ರಗಳಲ್ಲಿ ಇದ್ದೇ ತೀರಬೇಕೆಂಬ ನಿಯಮವಿಲ್ಲ; ಇದ್ದಾಗ ಮಾತ್ರ ಅವು ಸಾಹಿತ್ಯದ ಮಟ್ಟಕ್ಕೆ ಏರುತ್ತವೆ. 'ಕಾಲ್ಪನಿಕ' ಪತ್ರಗಳು ಸಾಹಿತ್ಯದ ಕುಟುಂಬಕ್ಕೇ ಸೇರಿದವಾದ್ದರಿಂದ, ಆ ಸಾಹಿತ್ಯಗುಣಗಳು ಅವುಗಳ ಒಡಲಲ್ಲಿ ಆವಿರ್ಭೂತವಾಗುವಂತೆ ಬರಹಗಾರ ಎಚ್ಚರಿಕೆವಹಿಸಿರುತ್ತಾನೆ; ವಹಿಸಬೇಕು. ಕಥೆಯ ಇಲ್ಲವೆ ಕಾದಂಬರಿಯ ಅಂಗವಾಗಿ ಬರುವ ಒಂದೋ ಎರಡೋ ಪ್ರಾಸಂಗಿಕ ಪತ್ರಗಳಲ್ಲಿ ಆ ಗುಣ ಅಷ್ಟಾಗಿ ಕಾಣದಿರಬಹುದು; ವ್ಯಾವಹಾರಿಕ ಪತ್ರಗಳಂತೆ ಸಪ್ಪೆಯೂ ಆಗಿರಬಹುದು. ಪತ್ರಗುಚ್ಛ ಗಣನೀಯ ಪ್ರಮಾಣದಲ್ಲಿ ಸಾಹಿತ್ಯಕೃತಿಯ ಅಂಗವಾಗಿ ಬಂದು ಅದು ಸಾಹಿತ್ಯ ದೃಷ್ಟಿಯಿಂದ ಗಮನಾರ್ಹ ಎನಿಸಬಹುದು. (ಈ ಸಂದರ್ಭದಲ್ಲಿ, ಸಂಪೂರ್ಣವಾಗಿ 'ಪತ್ರ ವಿನಿಮಯ ತಂತ್ರ'ದ ಮೂಲಕ ನಿರ್ವಾಹವಾಗುವ 'ಪತ್ರಕಥೆ' ಎಂಬ ಕಥಾ ಜಾತಿಯನ್ನು ನೆನೆಯಬಹುದು). ಶ್ರೀ ಗೋಕಾಕರ 'ಜೀವನ ಪಾಠ'ಗಳ 'ವನಮಾಲಿ'ಯ ಓಲೆಗಳಂತೆ ಅವು ಅಭಿವ್ಯಕ್ತಿಗೆ ಅನ್ಯ ಸಾಹಿತ್ಯ ಪ್ರಕಾರವನ್ನು ಆಶ್ರಯಿಸದೆ ಸ್ವತಂತ್ರವಾಗಿ— ಏಕಸೂತ್ರ ಬದ್ಧವಾಗಿ—ರಚನೆಗೊಂಡಾಗ, 'ಪತ್ರಸಾಹಿತ್ಯ' ವೌಲ್ಯವನ್ನು ಪಡೆಯುತ್ತವೆ.

'ಜೀವನ ಪಾಠಗಳಲ್ಲಿ ಕೆಲವು ಓಲೆಗಳೂ ಕೆಲವು ಪ್ರಬಂಧಗಳೂ ಇವೆ" ಎಂಬುದು ಪ್ರಕಾಶಕರ ಮಾತು; ಮುನ್ನುಡಿಯಲ್ಲಿ ಗೋಕಾಕರೂ ಇದೇ ಮಾತನ್ನು ಪುಷ್ಟೀಕರಿಸಿದ್ದಾರೆ. ಹಾಗಿದ್ದಲ್ಲಿ, ಇವೆರಡು ಬಗೆಯ ಲೇಖನಗಳನ್ನೂ ಏಕತ್ರ ಒಟ್ಟುಗೂಡಿಸಿರುವುದರ ಔಚಿತ್ಯವೇನು? ಮೊದಲನೆಯದಾಗಿ, ಎರಡರ ಲೇಖಕನೂ ಒಬ್ಬಾತ ವನಮಾಲಿ ಎನ್ನಬಹುದು. ಇದು ಬಹು ಸರಳವಾದ ವಿವರಣೆ. ಪತ್ರಗಳು ವಾಸ್ತವಿಕ ಎಂಬ ಭ್ರಮೆಗೆ ಓದುಗರು ಗುರಿಯಾಗದಿರಲಿ ಎಂದು 'ವನಮಾಲಿ' ಎಂಬ ಪಾತ್ರವನ್ನು ಸೃಷ್ಟಿಸಿ, ಓಲೆಗಳನ್ನೂ ಪ್ರಬಂಧಗಳನ್ನೂ ಅವನ ತಲೆಗೇ ಕಟ್ಟಿದ್ದಾರೆ, 'ಮುನ್ನುಡಿ'ಯಲ್ಲಿ ಜಾಣ ಗೋಕಾಕರು! ಇದೂ ಒಂದು ಕಲೆಗಾರಿಕೆಯ ತಂತ್ರವೇ. ಎರಡನೆಯದಾಗಿ, "ಆತ್ಮೋದ್ಧಾರ ಹಾಗೂ ಸಮಾಜೋದ್ಧಾರ— ಈ ಎರಡು ಸೂತ್ರಗಳನ್ನು ಹಿಡಿದು ವನಮಾಲಿಯ ಜೀವಣಿಗೆ ಸಾಗಿದ್ದಿತು. ಓಲೆಗಳನ್ನು ವನಮಾಲಿಯ ಯೌವನದ ಹೊಸ ಹುರುಪಿನಲ್ಲಿ ಬರೆದಿದ್ದ. ಪ್ರಬಂಧಗಳನ್ನು ಬರೆದದ್ದು ಬಹುಶಃ ಅವನು ಒಂದು ಕೆಲಸವನ್ನು ಹಿಡಿದು ನಿಂತಮೇಲೆ. ಆತ್ಮಪರೀಕ್ಷಣದ ಮನಃಸ್ಥಿತಿಯಲ್ಲಿಯೇ ವನಮಾಲಿ ಆ ಪ್ರಬಂಧಗಳನ್ನು ಬರೆದಿಟ್ಟಿರಬೇಕು." (ಮುನ್ನುಡಿ, ಪು. ೫) ವನಮಾಲಿ ತನ್ನ ಒಲವಿನೋಲೆಗಳನ್ನು ಯೌವನದ ಹೊಸ ಹುರುಪಿನಲ್ಲೇ ಬರೆದಿದ್ದರೂ, ಒಲವಿನ ಉತ್ಕಂಠ ಚಕ್ಕಂದಗಳ

ಗಿಂತ ಅವುಗಳಲ್ಲಿ "ಲಲಿತೆಗೆ ಉಚ್ಚ ತರಗತಿಯ ಶಿಕ್ಷಣದ ಹೊಳಪನ್ನು ಕೊಡುತ್ತಲಿದ್ದವು....ಈ ಒಲವಿನೋಲೆಗಳಲ್ಲಿ ಲಲಿತೆಯ ಮನಸ್ಸು ಆಕರ್ಷಿಸಿದ ಧ್ಯೇಯಪೂರ್ಣತೆಯಿದೆ" ಎಂದ ಮೇಲೆ ಇವು ಉಪದೇಶಾತ್ಮಕ ಎಂಬುದು ಸ್ಪಷ್ಟ: ಇದರಿಂದ, ಲಲಿತೆ ಅಶಿಕ್ಷಿತಳು ಎಂದಲ್ಲ. "ತನ್ನ ಸಂಸಾರ ರಥವನ್ನು ಹೂಡಬೇಕೆಂದಿದ್ದ ವನಮಾಲಿಯು ಲಲಿತೆಗೆ ಅವಳ ತವರುಮನೆಯಲ್ಲೇ ಅವಳ ಶಿಕ್ಷಣವನ್ನು ಮುಂದೆ ಸಾಗಿಸುವ ಅನುಕೂಲತೆಯನ್ನು ಕಲ್ಪಿಸಿಕೊಟ್ಟಿದ್ದ." ಆದ್ದರಿಂದ, ಈ ಓಲೆಗಳಲ್ಲಿ ಕಂಡು ಬರುವುದು Correspondence College ನ ಲೌಕಿಕ ಶಿಕ್ಷಣವಲ್ಲ; ಅವಳು ಕಲಿತಿದ್ದಷ್ಟು ಶಿಕ್ಷಣಕ್ಕೆ "ಉಚ್ಚ ತರಗತಿಯ ಶಿಕ್ಷಣದ ಹೊಳಪು": 'ದೇವ-ಜೀವ ಸಂಬಂಧ,' 'ಮಾನವನ ಕರ್ತವ್ಯಗಳು,' 'ಭಕ್ತಿ,' 'ಮೂರ್ತಿಪೂಜೆ,' 'ಪ್ರೇಮ,' 'ಜ್ಞಾನ,' 'ಕರ್ಮಕುಶಲತೆ'—ಮುಂತಾದ ಆಧ್ಯಾತ್ಮಿಕ ಪ್ರವಣತೆಯುಳ್ಳ ಜೀವನ ಮೌಲ್ಯಗಳ ಪಾಠ. ಕಾಂತೆಗೆ ಕಲಿಸಲೆಂದೇ ಬರೆದ ಪತ್ರಗಳಾದ್ದರಿಂದ ಇವು ಒಂದು ಅರ್ಥದಲ್ಲಿ 'ಕಾಂತಾಸಂಮಿತಿ'ಯಲ್ಲಿರುವ 'ಜೀವನ ಪಾಠ'ಗಳು. "ಇವುಗಳನ್ನೋದಿದ ಎಳೆಯರಿಗೆ ಜೀವನದ ಹೊಂಗನಸನ್ನು ಕಟ್ಟಲು ಅನುಕೂಲವಾಗುವುದು" ಎಂಬ ಹಾರೈಕೆ ಹುಸಿಯಾಗದು. ಇನ್ನುಳಿದ ಲೇಖನಗಳು ಪ್ರಬಂಧಗಳೇ ಆದರೂ, ಕೆಲವು ಸ್ಪಷ್ಟವಾಗಿಯೆ 'ಗೆಳೆಯನನ್ನು ಸಂಬೋಧಿಸಿ ಬರೆದಿರುವುದರಿಂದ, ಅವು 'ಮಿತ್ರಸಂಮಿತಿ'ಯಲ್ಲಿ ಬರೆದ 'ಜೀವನಪಾಠಗಳು' ಎಂದು ಪರಿಗಣಿಸಬಹುದು. 'ದಾಂಪತ್ಯ,' 'ರೋಗಿಷ್ಠ ಸಮಾಜದಲ್ಲಿ ದೇಹಾರೋಗ್ಯ', 'ಹೃದಯವಂತಿಕೆಯ ಸಮಸ್ಯೆಗಳು,' 'ಮನಸ್ಸು,' 'ಮನೆ,' 'ಉದರನಿರ್ವಾಹ,' 'ಸಮಾಜಸೇವೆ,' 'ರಾಜಸಿಕ ಸಮಾಜದಲ್ಲಿ ಸಾತ್ತ್ವಿಕ ವ್ಯಕ್ತಿ,' 'ಪೂರ್ಣಜೀವನ,' 'ಸುಖ-ದುಃಖಗಳ ದ್ವಂದ್ವ,' 'ಸಮಾಜದಲ್ಲಿ ಆಂತರಿಕಜೀವಿಯ ಬಾಳು,' 'ಜೀವನದ ಅಳತೆಗೋಲು'—ಈ ಪ್ರಬಂಧಗಳಲ್ಲಿ 'ವನಮಾಲಿ'ಯ ಆತ್ಮಪರೀಕ್ಷಣದ ಮನಸ್ಥಿತಿಯಿಂದ ಹೊಮ್ಮಿರುವ ಜೀವನಪ್ರಭೆಯ ಕಿರಣಗಳಿರುವುದರಿಂದ, ಓದುಗರ ಆತ್ಮಪರೀಕ್ಷಣಕ್ಕೂ ತನ್ಮೂಲಕ ಆತ್ಮಸಂಸ್ಕಾರಕ್ಕೂ ನೆರವಾಗತಕ್ಕವಾಗಿವೆ. ಪತ್ರಗಳೆನ್ನಿ, ಪ್ರಬಂಧಗಳೆನ್ನಿ, ಇವುಗಳಲ್ಲಿ ಭಾವದ ಕಾವಿಗಿಂತ ವಿಚಾರದ ಬೆಳಕು ಹೆಚ್ಚು ಎಂಬುದು ಸ್ವಯಂ ಸ್ಪಷ್ಟ.

ಪ್ರತಿಯೊಂದು ಲೇಖನವೂ ಸಾರವತ್ತಾಗಿ ಸಂಕ್ಷೇಪವಾಗಿಯೆ ಇರುವುದರಿಂದ, ಅವುಗಳ ಸಾರಾಂಶವನ್ನು ಪರಿಚಯಮಾಡಿಕೊಡುವ ಎಗ್ಗತನಕ್ಕೆ ಹೋಗದೆ, ಅವುಗಳಲ್ಲಿ, ಅಲಂಕಾರಪ್ರಾಯವಾಗಿ ಪವಣಿಕೆಗೊಂಡಿರುವ, ಚಿಂತನ ಮನನ ಯೋಗ್ಯಗಳಾಗಿರುವ, ಕೆಲವು 'ಸುಭಾಷಿತ'ಗಳ ಮಾದರಿಗಳನ್ನು ಆಯ್ದುಕೊಟ್ಟರೆ ಪ್ರಬಂಧಗಳ ವಿಚಾರ ಗೌರವವನ್ನು ಗ್ರಹಿಸಲು ಅನುಕೂಲವಾಗುವುದು:

> "ಪತ್ನಿಯಿಂದಲೇ ಪತಿಯ ಜೀವನದ ಉದ್ಧಾರವಾಗುವುದು. ಅವಳಿಂದಲೇ ಅವನ ಎಲ್ಲ ಇಚ್ಛೆಗಳೂ ಪೂರ್ಣವಾಗುವವು."

"ಆತ್ಮನ ಸಲುವಾಗಿ 'ನಾನು' ಎಂಬ ವಸ್ತುವಿರುವನೇ ಹೊರತು 'ನಾನು' ಎಂಬುವರ ಸಲುವಾಗಿ ಆತ್ಮವಿರುವುದಿಲ್ಲ."

"ಆತ್ಮದೇವನ ಗುಡಿಯೆಂದು ನಾವು ದೇಹವನ್ನು ಸಂರಕ್ಷಿಸಬೇಕು."

"ನಮ್ಮ ನಾಡು-ನುಡಿಗಳ ಮೇಲೆ ಮೋಹವಿದ್ದು ಉಳಿದವರ ನಾಡು-ನುಡಿಗಳನ್ನು ತಿರಸ್ಕರಿಸುವ ವ್ಯಾಮೋಹ ಬೇಡ."

"ಮುದ್ದು ಮುದ್ದು ಎಂದು ಪತ್ರದ ತುಂಬೆಲ್ಲ ಮುದ್ದು ಮುದ್ದಾಗಿ ಬರೆದರೆ ಒಲವು ಎದ್ದು ಕಂಡೀತೆ!"

"ದೇವದೂತರು ಹಿಡಿದುಕೊಂಡು ಬಂದ ದೀವಟಿಗೆಗಳಂತೆ ಕನಸುಗಳು ನಮಗೆ ದಾರಿ ತೋರುವವು."

"ಸೆಗಣಿಹುಳಗಳಂತಿದ್ದ ಮಾನವರಿಗೆ ತಗಣಿಯ ಲೆಕ್ಕವೇ ಹೊರತು ಮತ್ತಾವುದೂ ಬಾರದು."

"ನಮ್ಮ ಅಸಹಾಯತೆಯನ್ನು ನಮ್ಮ ಶಕ್ತಿಯಾಗಿಸಿಕೊಂಡು ದೇವನಲ್ಲಿ ಅನನ್ಯವಾಗಿ ಭಕ್ತಿಯಿಡುವುದೇ ಭಕ್ತಿಯೋಗ."

"ದೇವರನ್ನು ನಾವು ನಮ್ಮ ಆಸೆಗಳ ಬಾಜಾರು ಬುಣುಗಿನ ಅಂಗಡಿಕಾರನನ್ನಾಗಿ ಮಾಡಬಾರದು. ಅವನ ಮೇಲೆ ಕರಾರಿನ ಹೊರೆಯನ್ನು ಹೇರಬಾರದು."

"ದೇವನೊಡನೆ ಪ್ರೇಮವನ್ನು ಬೆಳಸುವುದಕ್ಕಿಂತ ಮೊದಲು ನಾವು ಅವನ ಒಂದು ಅಂಶವನ್ನು ಪ್ರೀತಿಸಲು ಕಲಿಯಬೇಕು."

"ಆತ್ಮಗಳಂತೆ ಪ್ರೀತಿಯೂ ಮರಣರಹಿತವಾದುದು. ಪರಮಾತ್ಮನೆಡೆಗೆ ನಮ್ಮನ್ನು ಕರೆದೊಯ್ಯುವ ಸೋಪಾನವೇ ಪ್ರೀತಿ."

"ಓದಿ ಮರುಳಾಗಬಾರದು. ಓದದೆಯೂ ಮರುಳಾಗಬಾರದು."

"ಭಕ್ತಿ-ಪ್ರೀತಿಗಳ ಸಂಗೀತಕ್ಕೆ ಜ್ಞಾನದ ಹಿಮ್ಮೇಳವು ಬೇಕು."

"ಜೀವನವೆಂದರೆ ಪ್ರತಿಯೊಬ್ಬ ಮಾನವನ ಕೈಯಲ್ಲಿ ದೇವರು ಕೊಟ್ಟ ಮಾಣಿಕ."

"ವಾರದಲ್ಲಿಯ ಆರು ದಿನಗಳು 'ಮನೆ' ತುಂಬಿಸಿಕೊಳ್ಳುವ ದಿನಗಳಾದರೆ, ರವಿವಾರವು 'ಮನ' ತುಂಬಿಸಿಕೊಳ್ಳುವ ದಿನ."

"ದೇವದೂತನಾದ ಮಾರುತನು ಗಂಡಿನಿಂದ ಕುಂಕುಮವನ್ನೊಯ್ದು ಹೆಣ್ಣಿನ ಹಣೆಗೆ ಹಚ್ಚುತ್ತಾನೆ."

"ಮಾವಿನ ಚಿಗುರೆಲೆಯ ಹೊಗರು ಪ್ರೇಮ; ಸ್ವತಃ ಕಾಮವೇ ಆ ಚಿಗುರೆಲೆ."

"ಸಂಯಮವು ಉತ್ತಮವಾದರೂ ಆರ್ಥಿಕಸ್ಥಿತಿಯಂತೆ ಸಂತಾನನಿರೋಧದಿಂದ ಕುಟುಂಬವನ್ನು ನಿಯಂತ್ರಿಸುವುದರಲ್ಲಿ ಕೀಳಾದುದೇನು ಕಾಣುವುದಿಲ್ಲ."

"ಅಸೂಯೆಯು ವ್ಯಕ್ತಿತ್ವದ ಘಟಕ್ಕೆ ಇದ್ದ ತೂತು."

"ಮಡವು ಪರೆ ಬಂದ ಕಣ್ಣು, ಸೊಕ್ಕಿದ ಆನೆ."

"ವಿಶಾಲ ಘಟನೆ ಇಲ್ಲವೆ ಕ್ರಾಂತಿ ದೈವೀಸಂಕಲ್ಪದ ಫಲ."

"ಮತ ಮುಖ್ಯವಲ್ಲ; ಕೃತಿ ಮುಖ್ಯ. ಲೋಕಕಲ್ಯಾಣದ ಚಿಂತನೆಯಲ್ಲಿ ಎಲ್ಲ ಮತಗಳೂ ಒಮ್ಮತವಾಗುತ್ತವೆ."

"ಮಾತು—ಮೌನಗಳ ಸ್ಥಿತಿಗಳೆರಡನ್ನೂ ಸವಿದಾಗ ಶಬ್ದದಾಚೆಯ ಶಬ್ದವು ಕೇಳಿಸೀತು."

"ಸಮರಸವೇ ಸಹಜೀವನ."

'ಸರ್ವಜ್ಞ ವಚನಗಳು,' 'ಮಂಕುತಿಮ್ಮನ ಕಗ್ಗ' 'ರಂಗಬಿನ್ನಪ'—ಈ ಪರಂಪರೆಯಲ್ಲಿ ಜೀವನದ ತಾತ್ತ್ವಿಕ ಸೌಂದರ್ಯವನ್ನು ಪರಿಚಯಮಾಡಿಕೊಡುವ ಈ ಓಲೆ-ಬರಹಗಳಲ್ಲಿ ಅವುಗಳ ವಿಸ್ತಾರ ವೈವಿಧ್ಯಗಳಿಲ್ಲದಿದ್ದರೂ, ಜೀವನವನ್ನು ಒಳಹೊಕ್ಕು ನೋಡುವ ಅದೇ ಪರಾಮರ್ಶ ದೃಷ್ಟಿಯಿದೆ. ಎಂದೇ, ಇವುಗಳ ಮೌಲ್ಯ ಪ್ರಧಾನವಾಗಿ ಉಪದೇಶಾತ್ಮಕ, ನೈತಿಕ, ಕೆಲವೊಮ್ಮೆ ಆಧ್ಯಾತ್ಮಿಕ; ಕಾವ್ಯಮೌಲ್ಯ ಇಲ್ಲನೆಂದಲ್ಲ. ನನ್ನ ಅಭಿಪ್ರಾಯಕ್ಕೆ ಲೇಖಕರ ಮುನ್ನುಡಿಯ ಮಾತು ಕನ್ನಡಿ:

> "ಈ ಪಾಠಗಳು ಪದ್ಯ ಕಾವ್ಯವಲ್ಲ. ಕಾವ್ಯಮಯತೆಯು ಅಲ್ಲಲ್ಲಿ ತಾನಾಗಿ ಪ್ರಕಟವಾಗಿದೆ. ಇವುಗಳಲ್ಲಿ ಶಾಸ್ತ್ರೀಯ ತತ್ತ್ವಮಂಡನೆಯೂ ಇಲ್ಲ. ಅಂಥ ಕಟ್ಟು ಹಾಗೂ ನುಡಿಯಲ್ಲಿ ಈ ಪಾಠಗಳು ಬಂದಿದ್ದರೆ ಅವು ಲಲಿತಕ್ಕನಿಗೆ ತಿಳಿಯದೆ ಹೋಗುತ್ತಿದ್ದವು. ಕಾವ್ಯ—ತತ್ವಮಂಡನೆಯ 'ಬೇಸಿ'ಯನ್ನು ಅಲ್ಲಿ ಇಲ್ಲಿ ಕಾಣಬಹುದು. ಲಲಿತಕ್ಕನು ತಿಳಿಯುವಂತಹದನ್ನು ನಾಡ ಎಳೆಯರೂ ತಿಳಿದುಕೊಂಡಾರು."

ನಾಡಿನ ಎಳೆಯರು ಎಲ್ಲ ಕಾಲಕ್ಕೂ ಕಲಿಯಬೇಕಾದ ಜೀವನ ಪಾಠ 'ಜೀವನಪಾಠಗಳು' ಎಂಬ ಈ ಪುಸ್ತಕದಲ್ಲಿ ಪ್ರೋಜ್ಜ್ವಲವಾಗಿದೆ. ಎಳೆಯರು ಎಂದರೆ ವಯೋಮಾನದಿಂದ ಮಾತ್ರ ಅಲ್ಲ; ಮಾನಸಿಕವಾಗಿ, ಬೌದ್ಧಿಕವಾಗಿ ಕೂಡ.

ಬರಹಗಳಲ್ಲಿ ಪದ್ಯದ ಮೈ ಇಲ್ಲದಿದ್ದರೂ, ಕಾವ್ಯದ ಉಸಿರು ಆಡುತ್ತಿದೆ; ಅದನ್ನು ಆಲಿಸಲು ಸಹೃದಯತೆಯ ಒಳಗಿವಿ ಬೇಕು.

ಶೈಕ್ಷಣಿಕ ವಿಚಾರಗಳು

ಎನ್. ಡಿ. ಕುಲಕರ್ಣಿ

ಪದ್ಮಶ್ರೀ ಗೋಕಾಕ್‌ರವರು ನಮ್ಮ ರಾಷ್ಟ್ರದ ಹಿರಿಯ ಶಿಕ್ಷಣತಜ್ಞರಲ್ಲೊಬ್ಬರಾಗಿದ್ದಾರೆ. ಆದರ್ಶ ವಿದ್ಯಾರ್ಥಿಯಾಗಿ ಕಾಲೇಜು ಶಿಕ್ಷಣದಲ್ಲಿ ಪರಮ ಶ್ರೇಯಸ್ಸನ್ನು ಪಡೆದಿದ್ದಾರೆ. ವಿದೇಶದವರು ಕೂಡ ಇವರ ಹಿರಿಮೆಯನ್ನು ಮೆಚ್ಚಿ ಕೊಂಡಾಡಿದ್ದಾರೆ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಮೊದಲಶ್ರೇಣಿಯಲ್ಲಿ ಉತ್ತೀರ್ಣರಾಗಿ ಭಾರತ ದೇಶಕ್ಕೇ ಕೀರ್ತಿಯನ್ನು ತಂದಿದ್ದಾರೆ. ತರುಣ ಪೀಳಿಗೆಯ ಶಿಕ್ಷಣವು ಅವರ ಮೆಚ್ಚುಗೆಯ ವಿಷಯವಾಗಿದೆ. ಶಿಕ್ಷಣದ ವಿವಿಧ ಕ್ಷೇತ್ರಗಳಲ್ಲಿ ಅವರ ಸೇವೆಯು ಅದ್ವಿತೀಯವಾಗಿದೆ. ವಿದ್ಯಾರ್ಥಿ ಪ್ರಪಂಚವನ್ನು ಅತ್ಯಂತ ಅಂತಃಕರಣಪೂರ್ವಕವಾಗಿಯೂ, ಸಹಾನುಭೂತಿಯಿಂದಲೂ ಕಾಣುವವರಲ್ಲಿ ಇವರೊಬ್ಬರಾಗಿದ್ದಾರೆ. ಇವರು ವಿದ್ಯಾರ್ಥಿಗಳ ಪಕ್ಷಪಾತಿಗಳು, ವಿದ್ಯಾರ್ಥಿಗಳು ಬೇಡಿದ್ದನ್ನೆಲ್ಲ ಕೊಡುವವರು ಎಂಬ ಆರೋಪವನ್ನು ಸಿನೇಟ್ ಸಭೆಯಲ್ಲಿ ಹೊರಿಸಿದಾಗ ಇವರು "ವಿದ್ಯಾರ್ಥಿಗಳ ಸೇವೆ ನನ್ನ ಜೀವಾಳ. ನ್ಯಾಯವಾದ, ಯೋಗ್ಯವಾದ ಬೇಡಿಕೆಗಳನ್ನು ಈಡೇರಿಸುವುದು ಹಿರಿಯರ ಕರ್ತವ್ಯ" ಎಂದು ಧೈರ್ಯವಾಗಿ, ನಿರ್ದಾಕ್ಷಿಣ್ಯವಾಗಿ ಹೇಳಿದ್ದಾರೆ. ರಾಷ್ಟ್ರದ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯಬೇಕೆಂದು ಹೆಣಗಾಡುವವರಲ್ಲಿ ಶ್ರೀ ಗೋಕಾಕರು ಅಗ್ರಗಣ್ಯರು.

ಇವರು ಪ್ರಿನ್ಸಿಪಾಲ್ ಪದವಿಗಾಗಿಯೇ ಜನಿಸಿದರೋ ಏನೋ ಎನ್ನುವಂತೆ ಅನೇಕ ವರ್ಷಗಳ ಕಾಲ ಪ್ರಿನ್ಸಿಪಾಲ್‌ರಾಗಿಯೇ ಸೇವೆ ಸಲ್ಲಿಸಿದ್ದಾರೆ. ಇವರು ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ದುಡಿದು ಅಂತರಭಾರತೀಯ ದರ್ಶನವನ್ನು ಪಡೆದಿದ್ದಾರೆ. ಮಹಾರಾಷ್ಟ್ರದ ಫರ್ಗ್ಯುಸನ್, ವಿಲಿಂಗ್ಡನ್, ರಾಜಾರಾಂ ಕಾಲೇಜುಗಳಲ್ಲಿ, ಗುಜರಾತದ ಬಡೋದೆ, ವೀಸನಗರಗಳಲ್ಲಿ, ರಾಜಾಸ್ಥಾನದ ಜೈಪೂರ್‌ದಲ್ಲಿ, ಆಂಧ್ರಪ್ರದೇಶದ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ, ಮೈಸೂರು ರಾಜ್ಯದ ಕರ್ನಾಟಕ ಕಾಲೇಜಿನಲ್ಲಿ ವಿವಿಧ ರೂಪದಲ್ಲಿ ಶಿಕ್ಷಣದ ಪ್ರಸಾರಕ್ಕಾಗಿ, ಅಭಿವೃದ್ಧಿಗಾಗಿ ಅವಿರತ ಸೇವೆ ಗೈದಿರುವರು.

ಕ್ರಿ. ಶ. ೧೯೪೨ರಲ್ಲಿ ಧಾರವಾಡದಲ್ಲಿ ನೆರೆದ ಉತ್ತರಕರ್ನಾಟಕದ ಶಿಕ್ಷಣಸಮ್ಮೇಳನದಲ್ಲಿ ಅಧ್ಯಕ್ಷರಾಗಿ ಖಾಸಗಿಸಂಸ್ಥೆಗಳಿಗೂ ಶಿಕ್ಷಕರಿಗೂ ಅಮೌಲ್ಯವಾದ ಸಲಹೆ-ಸೂಚನೆಗಳನ್ನಿತ್ತಿರುವರು. ಕ್ರಿ.ಶ. ೧೯೪೭ರಲ್ಲಿ ಬಡೋದೆಯ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದಕ್ಕಾಗಿ ವರದಿಯನ್ನೊಪ್ಪಿಸುವ ಕಮಿಷನ್ನಿನ ಸಹ-ಕಾರ್ಯದರ್ಶಿಯಾಗಿದ್ದರು. ಅದೇ ರೀತಿ ಕರ್ನಾಟಕ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದರಲ್ಲಿಯೂ ಸಮಿತಿಯ ಸದಸ್ಯರಾಗಿದ್ದು ಸಲಹೆಗಳನ್ನು ಕೊಟ್ಟಿದ್ದಾರೆ.

ಮದ್ರಾಸಿನಲ್ಲಿ ಅಖಿಲಭಾರತ ಶೈಕ್ಷಣಿಕ ಸಮ್ಮೇಳನವು ಕ್ರಿ. ಶ. ೧೯೫೭ರಲ್ಲಿ ನೆರವೇರಿತ್ತು. ಶ್ರೀ ಗೋಕಾಕ್‌ರು ವಿಶ್ವವಿದ್ಯಾಲಯ ವಿಭಾಗದ ಅಧ್ಯಕ್ಷರಾಗಿದ್ದರು. ಅದೇ ವರ್ಷ ಜಪಾನಿನ ಟೋಕಿಯೋದಲ್ಲಿ ನಡೆದ ಅಂತರರಾಷ್ಟ್ರೀಯ ಪಿ. ಇ. ಎನ್. ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಕ್ರಿ. ಶ. ೧೯೫೮ರಲ್ಲಿ ಭಾರತಸರ್ಕಾರವು "ಪರೀಕ್ಷಾಪದ್ಧತಿಯ ಸುಧಾರಣ ಆಯೋಗ"ವೊಂದನ್ನು ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಿಗೆ ಕಳುಹಿಸಿದ್ದಿತು. ಶ್ರೀ ಗೋಕಾಕ್‌ರು ಈ ಆಯೋಗದ ಮುಖ್ಯಸ್ಥರಾಗಿ ಒಪ್ಪಿಸಿದ ವರದಿಯು ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವವರಿಗೆ ಮಾರ್ಗದರ್ಶಕವಾಗಿದೆ. ಕ್ರಿ.ಶ. ೧೯೬೦ರಲ್ಲಿ ಡೆಕ್ಕನ್ ಎಜ್ಯುಕೇಶನ್ ಸೊಸೈಟಿ ಪೂನಾ ಅವರು ಪ್ರಕಟಿಸಿದ 'Problems in Education' ಎಂಬ ಹೊತ್ತಗೆಯಲ್ಲಿ ನಮ್ಮ ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳಲ್ಲಿ ಬಳಕೆಯಲ್ಲಿದ್ದ ಪರೀಕ್ಷಾಪದ್ಧತಿಗಳ ಬಗೆಗೆ ಉದ್ಬೋಧಕವಾದ ಲೇಖನವನ್ನು ಬರೆದಿದ್ದಾರೆ. ಈ ದಿಶೆಯಲ್ಲಿ ಆಗಬೇಕಾದ ಮಾರ್ಪಾಟು ಮತ್ತು ಸುಧಾರಣೆಗಳನ್ನು ಕೂಲಂಕಷವಾಗಿ ತಿಳಿಸಿದ್ದಾರೆ. ಪರೀಕ್ಷಾಪದ್ಧತಿಯಲ್ಲಿಯ ಲೋಪದೋಷಗಳು ಶಿಕ್ಷಣಕ್ರಮವನ್ನೂ, ಕಾರ್ಯವನ್ನೂ ಕಲುಷಿತಗೊಳಿಸಿ, ರಾಷ್ಟ್ರದ ಪ್ರಗತಿಯನ್ನು ಕುಂಠಿತಗೊಳಿಸಬಹುದೆಂಬುವನ್ನು ಹೇಳಿ, ಶಿಕ್ಷಣಕ್ಷೇತ್ರದಲ್ಲಿ ದುಡಿಯುವವರ ಕಣ್ಣಿಗೆ ಅಂಜನವನ್ನು ಲೇಪಿಸಿದ್ದಾರೆ. ಇದೇ ವರ್ಷ ದೆಹಲಿಯಲ್ಲಿ ಅಖಿಲಭಾರತ ಆಂಗ್ಲಭಾಷಾ ಶಿಕ್ಷಕರ ಸಮ್ಮೇಳನ ನೆರೆದಿದ್ದಿತು. ನಮ್ಮ ದೇಶದಲ್ಲಿ ಇಂಗ್ಲಿಷ್ ವಿಷಯದ ಅಭ್ಯಾಸದ ಮಹತ್ವವನ್ನು ಕುರಿತು ಶ್ರೀ ಗೋಕಾಕರು ಅಧ್ಯಕ್ಷಸ್ಥಾನದಿಂದ ಮಾಡಿದ ಸೂಚನೆಗಳು ಅವರ ದೂರದೃಷ್ಟಿಯನ್ನು ವ್ಯಕ್ತಪಡಿಸುತ್ತವೆ. ಕೇವಲ ಭಾಷಾಭಿಮಾನದಿಂದ ಭಾವನಾಪರವಶರಾಗಿ ನಾವು ವರ್ತಿಸಕೂಡದೆಂದೂ, ನಮ್ಮ ರಾಷ್ಟ್ರದ ಭಾವೀ ಪೀಳಿಗೆಯು ಜಗತ್ತಿನ ವಿವಿಧರಾಷ್ಟ್ರಗಳಂತೆ ಪ್ರಗತಿಯ ಮಾರ್ಗದಲ್ಲಿ ಮುನ್ನಡೆಯುವಂತೆ ಅನುವು ಮಾಡಿಕೊಡಬೇಕೆಂದು ತಮ್ಮ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆಂಗ್ಲಭಾಷಾ ಶಿಕ್ಷಣದ ವಿಷಯವಾಗಿ ಕಾಮನ್‌ವೆಲ್ತ್ ರಾಷ್ಟ್ರಗಳ ಸಮ್ಮೇಳನವು ಉಗಾಂಡಾದ ಕಂಪಲಾದಲ್ಲಿ ನೆರವೇರಿತ್ತು. ಶ್ರೀ ಗೋಕಾಕರು ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದರು.

ಶ್ರೀ ಗೋಕಾಕರು ಹೈದರಾಬಾದಿನಲ್ಲಿ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್ ಎಂಬ ಅಖಿಲಭಾರತ ಸಂಸ್ಥೆಯ ಡೈರೆಕ್ಟರ್‌ರೆಂದು ನೇಮಕಹೊಂದಿದ್ದರು. ಕ್ರಿ.ಶ. ೧೯೬೧ ರಿಂದ ೧೯೬೬ ರವರೆಗೆ 'Bulletin of the Central Institute of English' ಎಂಬ ಪತ್ರಿಕೆಯ ಸಂಪಾದಕರಾಗಿದ್ದರು. ಅವರ ಸಂಪಾದಕತ್ವದಲ್ಲಿ ಪ್ರಕಟಿಸಲಾದ ವಿವಿಧ ಕೊನೆಯ ಸಂಚಿಕೆಯು ಪಿ.ಯು.ಸಿ. ತರಗತಿಯಲ್ಲಿ ಇಂಗ್ಲಿಷ್ ವಿಷಯವನ್ನು ಕಲಿಸುವ ಸಮಸ್ಯೆಗಳಿಗೆ ಮೀಸಲಾಗಿದೆ.

ಆಂಗ್ಲ ಸಾಹಿತ್ಯ ಶಿಕ್ಷಣವನ್ನು ಕುರಿತು ಕಾಮನ್‌ವೆಲ್ತ್ ರಾಷ್ಟ್ರಗಳ ಸಮ್ಮೇಳನವು ಬ್ರಿಟನ್ನಿನ ಕೇಂಬ್ರಿಜ್ ವಿಶ್ವವಿದ್ಯಾನಿಲಯದಲ್ಲಿ ನೆರವೇರಿದ್ದಿತು. ಶ್ರೀ ಗೋಕಾಕರು ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಕ್ರಿ.ಶ. ೧೯೬೫ರಲ್ಲಿ "ಭಾರತದಲ್ಲಿ ಆಂಗ್ಲ ಭಾಷೆಯ ಅಭ್ಯಾಸ" ಎಂಬ ವಿಷಯವನ್ನು ಕುರಿತು ವರದಿಯೊಂದನ್ನು ಒಪ್ಪಿಸಿದ ಅಭ್ಯಾಸಮಂಡಳದ ಚೇರ್‌ಮನ್‌ರಾಗಿದ್ದರು. ಈ ವರದಿಯಲ್ಲಿ ಇಂಗ್ಲಿಷ್ ವಿಷಯದ ಅಭ್ಯಾಸದ ಸ್ಥಾನಮಾನಗಳನ್ನು ಕೂಲಂಕಷವಾಗಿ ಚರ್ಚಿಸಲಾಗಿದೆ. ವಿದೇಶಗಳಲ್ಲಿ ಆಂಗ್ಲಭಾಷೆಗೆ ಕೊಡಲಾದ ಪ್ರಾಮುಖ್ಯತೆಯ ಬಗೆಗೆ ಹೇಳಲಾಗಿದೆ.

ಭಾರತ ಸರ್ಕಾರದ ಕೇಂದ್ರ ಶಿಕ್ಷಣ ಸಲಹಾ ಮಂಡಲಿಯ ಸದಸ್ಯರಾಗಿರುವರು. ಪ್ರಕೃತದಲ್ಲಿ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ಸದಸ್ಯರಾಗಿರುವರು.

ಪಾಂಡಿಚೇರಿಯ ಅರವಿಂದಾಶ್ರಮದಲ್ಲಿ Education for one World ಎಂಬ ವಿಷಯವಾಗಿ ನಡೆದ ಸಮ್ಮೇಳನದ ಸದಸ್ಯರಾಗಿದ್ದರು.

ಹೀಗೆ ಒಬ್ಬ ವ್ಯಕ್ತಿಯು ವಿವಿಧ ರಂಗಗಳಲ್ಲಿ ಅಮೋಘ ಸೇವೆಯನ್ನು ಸಲ್ಲಿಸುವುದು ಸುಲಭವಾದುದಲ್ಲ. ಶ್ರೀ ಗೋಕಾಕರ ವ್ಯಕ್ತಿತ್ವವು ಎಷ್ಟು ಶಕ್ತಿಯುತವೂ ತೇಜಸ್ವಿಯೂ ಆಗಿರುವುದೆಂಬುದನ್ನು ನಾವು ಇದರಿಂದ ಅರಿತುಕೊಳ್ಳಬಹುದು.

ಶ್ರೀ ಗೋಕಾಕರವರು ಆದರ್ಶವಾದಿಗಳೂ ಅಹುದು, ವಾಸ್ತವವಾದಿಗಳೂ ಅಹುದು. ಅವರು ಶ್ರೇಷ್ಠ ಕವಿಯಾದುದರಿಂದ ಅವರ ಆದರ್ಶವು ತಾರಾಮಂಡಲದೊಡನೆ ಸವಣಿಸಿಕೊಂಡಿದ್ದರೂ, ಅವರ ಪಾದಗಳು ಭೂಮಿಯಮೇಲೆಯೇ ಇರುವುವೆಂಬುದಕ್ಕೆ ಮೇಲ್ಕಾಣಿಸಿದ ನಿದರ್ಶನಗಳೇ ಸಾಕು. ಹೀಗೆ ಶಿಕ್ಷಣಕ್ಷೇತ್ರದಲ್ಲಿ ವಿವಿಧ ರೀತಿಯಲ್ಲಿ ಸೇವೆ ಸಲ್ಲಿಸಿದ ಶ್ರೀ ಗೋಕಾಕರ ವ್ಯಕ್ತಿತ್ವದ ಪೂರ್ಣ ಕಲ್ಪನೆಯನ್ನುಂಟು ಮಾಡಿಕೊಡುವುದಾಗಲಿ, ಅವರ ಶೈಕ್ಷಣಿಕ ವಿಚಾರಗಳನ್ನು ವಿವೇಚಿಸುವುದಾಗಲಿ ಸುಲಭಸಾಧ್ಯವಲ್ಲ. ಇಂಥ ಚಿಕ್ಕ ಲೇಖನದಲ್ಲಿ ಅವರ ಸಮಗ್ರ ವಿಚಾರಗಳನ್ನು ಸಂಗ್ರಹಿಸಲು ಶಕ್ಯವಿಲ್ಲ. ಬೇರೆ ಬೇರೆ ಸಂದರ್ಭಗಳಲ್ಲಿ ಅವರೇ ವ್ಯಕ್ತಪಡಿಸಿರುವ ಕೆಲವು ವಿಚಾರಗಳನ್ನು ಇಲ್ಲಿ ಸಂಗ್ರಹಿಸುವ ಯತ್ನವನ್ನು ಮಾಡಿದ್ದೇನೆ.

* * *

ಅಭ್ಯಾಸಕ್ರಮ

ಶತಮಾನಗಳಿಂದಲೂ ನಮ್ಮ ವಿದ್ಯಾರ್ಥಿಗಳಿಗೆ ಎಂದೋ ತಯಾರಿಸಿದ ತಂಗೂಳಿ ನಂತಿದ್ದ ಅಭ್ಯಾಸಕ್ರಮವನ್ನೇ ಆಹಾರವಾಗಿ ಕೊಡಲಾಗುತ್ತಿದೆ. ಈ ವಿಷಯದಲ್ಲಿ ಪ್ರಗತಿಪರವಾದ ಯಾವ ಬದಲಾವಣೆಯೂ ಕಂಡುಬರುತ್ತಿಲ್ಲ. ಹಿಂದೊಮ್ಮೆ ಸಾಮ್ರಾಜ್ಯವಾದಿಗಳು ತಮ್ಮ ಪ್ರಜೆಗಳಿಗಾಗಿ, ಗುಲಾಮರಿಗಾಗಿ ಸಿದ್ಧಗೊಳಿಸಲಾದ ಈ ಅಭ್ಯಾಸಕ್ರಮದಲ್ಲಿ ಅನೇಕ ಲೋಪದೋಷಗಳಿವೆ. ಭಾರತೀಯ ಜ್ಞಾನ ಭಂಡಾರದಿಂದ ಆಯ್ದುಕೊಂಡ ಆಣಿಮುತ್ತುಗಳನ್ನು ಆಧಾರವಾಗಿಟ್ಟುಕೊಂಡು, ಬೌದ್ಧಿಕ ಅನ್ವೇಷಣೆಯನ್ನು ಗುರಿಯಾಗಿಟ್ಟುಕೊಂಡ ಅಭ್ಯಾಸಕ್ರಮವು ಈಗ ಅತ್ಯಂತ ಆವಶ್ಯಕವಿಷಯವಾಗಿದೆ. ಭಾರತದಲ್ಲಿ ಶಿಕ್ಷಣವು ಅತ್ಯಂತ ವೇಗದಿಂದ ಮುಂದುವರಿಯುತ್ತಲಿದೆ. ಪ್ರಮಾಣ ಮತ್ತು ಸಂಖ್ಯೆಯನ್ನೇ ಆಧರಿಸಿ ಮುಂದುವರಿದ ಈ ಮುನ್ನಡೆ ಗುಣಾಭಿವೃದ್ಧಿಯನ್ನು ಕಡೆಗಣಿಸಿ ಮುಂದೆ ಸಾಗಿದ್ದು ವಿಷಾದಕರ ವಾಗಿದೆ. ಇತ್ತೀಚೆಗೆ ದೊಡ್ಡ ಪ್ರಮಾಣದಲ್ಲಿ ಸಾಗಿದ ಈ ವಿಸ್ತಾರದೊಂದಿಗೆ ಬೃಹದಾ ಕಾರದ ಸಮಸ್ಯೆಗಳೂ ಹುಟ್ಟಿಕೊಂಡಿವೆ. ಶಿಕ್ಷಣಕ್ಷೇತ್ರದಲ್ಲಿ ಉಂಟಾದ ಈ ವಿಸ್ತಾರವು ಸ್ವಾಭಾವಿಕವಾಗಿದೆ. ಯಾಕೆಂದರೆ ಪ್ರಜಾಸತ್ತಾತ್ಮಕ ಪದ್ಧತಿಯ ಸರಕಾರದ ಮುಖ್ಯ ವಾದ ಹೊಣೆಗಳಲ್ಲಿ ಶಿಕ್ಷಣಪ್ರಸಾರವು ಮಹತ್ವದ ವಿಷಯವಾಗಿದೆ. ಆದರೆ ಈ ತ್ವರಿತ ಗತಿಯ ಪ್ರಸಾರದೊಂದಿಗೆ ಇನ್ನೂ ಕೆಲವು ಸುಧಾರಣೆಗಳನ್ನು ಕೈಕೊಳ್ಳುವುದು ಅಷ್ಟೇ ಮಹತ್ವದ ವಿಷಯವಾಗಿದೆ. ನಮ್ಮ ದೇಶದಲ್ಲಿ ಪ್ರಚಲಿತ ಶಿಕ್ಷಣಕ್ರಮವು ಕೃತ್ರಿಮವಾಗಿ ಪಕ್ವಗೊಳಿಸಿದ ಹಣ್ಣಿನಂತಿದೆ; ಅದು ಸ್ವಾಭಾವಿಕವಾಗಿಲ್ಲ.

ನಮ್ಮ ಸಮಾಜ

ಇಂದಿನ ಸಮಾಜ ತೊಡಕಿನದಾಗಿದೆ. ಶಿಕ್ಷಣದ ವಿಷಯದಲ್ಲಿ ಸಮತೋಲನ ಕಂಡುಬರುವುದಿಲ್ಲ. ಸಾಮಾಜಿಕ, ಆರ್ಥಿಕ, ರಾಜಕೀಯ ಕಾರಣಗಳಿಂದಾಗಿ ೧೯ನೆಯ ಶತಮಾನದ ಆದಿಯಿಂದಲೇ ಮಾನವನ ಸಮಗ್ರ ವ್ಯಕ್ತಿತ್ವವು ವಿಚ್ಛಿನ್ನ ವಾಗತೊಡಗಿದೆ. ಶಿಕ್ಷಣಕ್ಷೇತ್ರದಲ್ಲಿ ಕೆಲವೊಂದು ವಿಷಯಗಳಲ್ಲಿಯೇ ವಿಶೇಷ ಪರಿಣತಿಯನ್ನು (Specialization) ಪಡೆಯುವ ಹವ್ಯಾಸ ಹೆಚ್ಚಾಗಿದೆ. ವಿವಿಧ ವಿಷಯಗಳಲ್ಲಿ ತಜ್ಞರೆನಿಸಿಕೊಂಡವರು (Specialists) ತಮ್ಮ ವಿಷಯಜ್ಞಾನವು ತಮ್ಮನ್ನು ಸರ್ವಜ್ಞರನ್ನಾಗಿ ಮಾಡಿದೆಯೆಂಬ ಭ್ರಮೆಯಿಂದ ಬಳಲುತ್ತಿದ್ದಾರೆ. ವೈವಿಧ್ಯ ದಿಂದ ಕೂಡಿದ ಏಕತೆಯೇ ಜೀವನದ ಜೀವಾಳವಾಗಿದೆ. ಸೃಷ್ಟಿಯಲ್ಲಿಯ ಪ್ರತಿಯೊಂದು ವಸ್ತುವೂ ತನ್ನ ವಿಶೇಷತೆ, ವೈವಿಧ್ಯದಿಂದ ಕೂಡಿದ್ದಾಗಿದೆ. ಆದಾಗ್ಯೂ ಅನೇಕ ವಿಷಯಗಳ ಐಕ್ಯತೆಯು ಅಲ್ಲಿ ಕಂಡುಬರುತ್ತದೆ. ಈ ಪ್ರಕಾರದ ವಿವಿಧತೆಯನ್ನು

ನಮ್ಮ ನಿತ್ಯಜೀವನದಲ್ಲಿಯೂ ಕಾಣಬಹುದು. ಆದುದರಿಂದ ವಿವಿಧತೆಯು ಸತ್ಯದ ಒಂದು ಅಂಶವಾಗಿದೆ. ವಿವಿಧರೂಪಿಯಾದ ಈ ಸತ್ಯದ ಸ್ವರೂಪವನ್ನು ಅನುಭವಿಸಿ, ಅದರ ತಳಹದಿಯ ಮೇಲೆ ಜ್ಞಾನಮಂದಿರವನ್ನು ಕಟ್ಟಬೇಕಾದುದು ನಮ್ಮ ಮೊದಲ ಕರ್ತವ್ಯವಾಗಿದೆ.

ಆಧುನಿಕ ಕಾಲ

ನಮ್ಮ ರಾಷ್ಟ್ರವು ಈಗ ತನ್ನ ವೈಶಿಷ್ಟ್ಯವನ್ನು ಮರೆತಂತಿದೆ. ತನ್ನ ವ್ಯಕ್ತಿತ್ವವನ್ನು ಅರಿತುಕೊಂಡು, ಅದರ ವಿಶೇಷತೆಯ ಮುದ್ರೆಯನ್ನು ಪ್ರತಿಯೊಬ್ಬ ನಾಗರಿಕನ ಮನಸ್ಸಿನ ಮೇಲೆ ಅಚ್ಚಳಿಯದೆ ಉಳಿಯುವಂತೆ ಒತ್ತಬೇಕಾಗಿದೆ. ನಿಜವಾಗಿ ಹೇಳಬೇಕಾದರೆ ನಮ್ಮ ದೇಶವು ಅತ್ಯಂತ ಅವ್ಯವಸ್ಥೆಯನ್ನು ಎದುರಿಸುವ ಸಂಧಿಕಾಲದಲ್ಲಿ ಸಿಲುಕಿದೆ. ಇಡೀ ಪ್ರಪಂಚವೇ ವಿನಾಶದ ಕಡೆಗೆ ಭರದಿಂದ ಓಡುತ್ತಿದೆ. ಇಡೀ ಮಾನವ ಜನಾಂಗವು ಒಂದು ಗಂಡಾಂತರದ ಪರಿಸ್ಥಿತಿಯ ಇಕ್ಕಟ್ಟಿನಲ್ಲಿ ಸಿಲುಕಿಕೊಂಡಿದೆ. ಒಂದು ಶ್ರೇಷ್ಠವಾದ ಆದರ್ಶದ ಸಂಜೀವಿನಿಯನ್ನು ಪಡೆದು ಹೃದಯ ಪರಿವರ್ತನೆಯನ್ನು ಸಾಧಿಸಿಕೊಳ್ಳದಿದ್ದರೆ ವಿನಾಶವು ತಪ್ಪಿದ್ದಲ್ಲ. ಈ ಸಂದರ್ಭದಲ್ಲಿ ನಮ್ಮ ದೇಶದ ಶ್ರೇಷ್ಠ ದಾರ್ಶನಿಕರು ಕಂಡು, ವರ್ಣಿಸಿದ ನವಜಗತ್ತಿನ ಕಲ್ಪನೆಯನ್ನು ಮರೆಯಕೂಡದು. ನಮ್ಮ ಶಿಕ್ಷಣಕ್ರಮವು ಈ ಗುರಿಯನ್ನು ಸಾಧಿಸುವಂಥದಾಗಿರಬೇಕು.

ಸಮತೋಲನದ ಆವಶ್ಯಕತೆ

ನಮ್ಮ ಶಿಕ್ಷಣಕ್ರಮದಲ್ಲಿ ಸಮತೋಲನದ ಅಭಾವವು ಕಂಡುಬರುತ್ತಿದೆ. ಶಾಲೆ-ಕಾಲೇಜುಗಳಲ್ಲಿ ಸೌಹಾರ್ದ-ಸಂಬಂಧವು ಕಾಣುವುದಿಲ್ಲ. ಮಿಡಲ್‌ಸ್ಕೂಲ್ ಮಟ್ಟವು ಹೈಸ್ಕೂಲು ಮಟ್ಟದಷ್ಟೇ ಮಹತ್ವದ್ದೆಂಬುದನ್ನು ನಾವು ಮರೆಯುತ್ತಿದ್ದೇವೆ. ಮಿಡಲ್ ಸ್ಕೂಲ್ ಮಟ್ಟದಲ್ಲಿಯೇ ವಿದ್ಯಾರ್ಜನೆಯ ತಳಪಾಯವನ್ನು ಹಾಕಬೇಕಾಗುವುದು. ವಿದ್ಯಾರ್ಥಿಯ ಶೀಲವು ಇಲ್ಲಿಯೇ ರೂಪುಗೊಳ್ಳುವುದು. ಅಭ್ಯಾಸವನ್ನು ಮಾಡುವ ರೂಢಿಯು ಇಲ್ಲಿ ಅಂಕುರಿಸುವುದು. ಭಾಷಾಜ್ಞಾನ, ವಿಷಯದ ತಿಳಿವಳಿಕೆ— ಇವುಗಳು ಈ ಮಟ್ಟದಲ್ಲಿಯೇ ಜಾಗ್ರತಿಹೊಂದಿ, ಅಭಿವೃದ್ಧಿಗೊಳ್ಳುತ್ತವೆ. ಮಿಡಲ್‌ಸ್ಕೂಲುಗಳಲ್ಲಿ ಶಿಕ್ಷಕರಾಗಿರುವುದು ಕಡಮೆದರ್ಜೆಯದೆಂಬ ಭಾವನೆಯು ನಮ್ಮ ಶಿಕ್ಷಕರ ಮನಸ್ಸಿನಿಂದ ಅಳಿಸಿಹೋಗಬೇಕು. ಇದಲ್ಲದೆ ಶಿಕ್ಷಣ ಕ್ಷೇತ್ರದಲ್ಲಿ ಎಂದಿಗಿಂತಲೂ ಈಗ ಶಿಕ್ಷಕ ವೃತ್ತಿಯಲ್ಲಿ ಆಸಕ್ತಿ ಇಲ್ಲದ ಜನರ ಪ್ರವೇಶವಾಗುತ್ತಿರುವುದನ್ನು ಕಾಣಬಹುದು. ಶಿಕ್ಷಣದ ವಿಷಯದಲ್ಲಾಗಲೀ, ವಿದ್ಯಾರ್ಥಿಗಳ ವಿಕಾಸದಲ್ಲಾಗಲೀ ಲವಲೇಶವೂ ಆಸ್ಥೆಯಿಲ್ಲದವರು

ಕೂಡ ಶಿಕ್ಷಕರಾಗಿ ಸೇರಿಕೊಳ್ಳುತ್ತಿದ್ದಾರೆ. ಶಿಕ್ಷಕರ ಆಯ್ಕೆ ಮಾಡುವವರು ಈ ಸಂಬಂಧ ವಾಗಿ ದಕ್ಷತೆ ವಹಿಸದಿದ್ದರೆ ಹೆಚ್ಚಿನ ಪ್ರಗತಿಯನ್ನು ಅಪೇಕ್ಷಿಸುವಂತಿಲ್ಲ.

ಹೊಂದಾಣಿಕೆಯ ಆವಶ್ಯಕತೆ

ಆಧುನಿಕ ಶಿಕ್ಷಣದಲ್ಲಿ ವಾಸ್ತವಿಕತೆಯು ಕಡಮೆ. ಶಿಕ್ಷಣದ ವಿವಿಧ ಮಟ್ಟಗಳಲ್ಲಿ ಸರಿಯಾದ ಹೊಂದಾಣಿಕೆಯಿಲ್ಲವಾದ್ದರಿಂದ ಶಿಕ್ಷಣವು ಅವಾಸ್ತವಿಕವಾಗಿದ್ದುದು ಕಂಡು ಬರುತ್ತದೆ. ಇದಲ್ಲದೆ ನಮ್ಮ ರಾಷ್ಟ್ರದ ಇತಿಹಾಸದ ಅಂಶಗಳನ್ನು, ಸದ್ಯದ ಪರಿಸ್ಥಿತಿಗಳಿಗೆ ಹೊಂದಿಸಿಕೊಂಡು, ಭವ್ಯ ಭವಿಷ್ಯದ ನಿರ್ಮಾಣವನ್ನು ಲಕ್ಷ್ಯದಲ್ಲಿಟ್ಟುಕೊಂಡರೆ ಹಿತವಾದ ಹೊಂದಾಣಿಕೆ ಕಂಡುಬರಬಹುದಾಗಿದೆ.

ನಮ್ಮ ದೇಶದಲ್ಲಿ ಸದ್ಯ ಕೊಡಲಾಗುತ್ತಿರುವ ತಾಂತ್ರಿಕ ಶಿಕ್ಷಣಕ್ರಮವು ಕೂಡ ಸಮಾಜದ ಬೇಕು—ಬೇಡಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ರಚನೆಹೊಂದಿದರೆ ಮಾತ್ರ ಉದ್ದಿಮೆಗಳ ಅಭಿವೃದ್ಧಿಯಾಗಿ ಶಿಕ್ಷಣವು ಫಲಪ್ರದವಾಗುವುದು. ಶಿಕ್ಷಣಕ್ರಮದಲ್ಲಿ “ತಿಳಿವಳಿಕೆ” (ಜ್ಞಾನಾರ್ಜನೆ) ಮತ್ತು “ಕೈಕುಶಲತೆ” (ನಿರ್ವಹಣೆ) ಇವುಗಳಲ್ಲಿ ಪರಸ್ಪರ ಸಂಬಂಧವಿರಬೇಕು. ಇಲ್ಲದಿದ್ದರೆ ನಿರುದ್ಯೋಗದ ಸಮಸ್ಯೆಯು ಭೂತಾಕಾರದಲ್ಲಿಯೇ ಉಳಿಯುವುದರಲ್ಲಿ ಸಂದೇಹವಿಲ್ಲ. ಜ್ಞಾನಾರ್ಜನೆ ಮತ್ತು ಜ್ಞಾನದಾನ ಇವುಗಳು ಬಳಕೆಯಿಂದಲೇ ಹೆಚ್ಚುಹೆಚ್ಚಾಗಿ ಬೆಳವಣಿಗೆಯನ್ನು ಹೊಂದುತ್ತವೆ.

ನಮ್ಮ ಹೊಣೆಗಾರಿಕೆ

ಶಿಕ್ಷಣಕ್ಷೇತ್ರದಲ್ಲಿ ದುಡಿಯುವವರ ಮೇಲೆ ದೊಡ್ಡದಾದ ಹೊಣೆಗಾರಿಕೆಯಿದೆ. ನವಸಮಾಜದ ರಚನೆಯು ಅವರನ್ನೇ ಅವಲಂಬಿಸಿದೆ. ಈ ನವಸಮಾಜವು ಆರ್ಥಿಕ ದೃಷ್ಟಿಯಿಂದ ಸ್ವಾವಲಂಬಿಯಾಗಿರಬೇಕು. ವೈಯಕ್ತಿಕ ಮತ್ತು ಸಾಮಾಜಿಕ ಸುಧಾರಣೆ ಯಾಗಬೇಕು. ಸಮಾಜಜೀವಿಯು ಸಹಬಾಳ್ವೆಯನ್ನು ಸಾಗಿಸಿ, ತನ್ನ ವೈಯಕ್ತಿಕ ತೃಪ್ತಿಯನ್ನೂ, ಸಮಾಜದ ಸಂತೋಷವನ್ನೂ, ಹಿತವನ್ನೂ ಸಾಧಿಸಬೇಕು. ಈ ಪ್ರಕಾರದ ಸಹಕಾರದ ಮತ್ತು ಸೌಹಾರ್ದಮಯ ಜೀವನವನ್ನು ಸಾಧಿಸುವಂತೆ ನಾಗರಿಕರನ್ನು ಅಣಿಗೊಳಿಸುವುದು ಶಿಕ್ಷಕರ ಹೊಣೆಯಾಗಿದೆ.

ಈಗಿನಕಾಲದಲ್ಲಿ ಉದ್ದಿಮೆಯಿಂದ ಹಣವನ್ನು ಶೇಖರಿಸಿದ ಸಿರಿವಂತರು ಸ್ವಾರ್ಥ ಪರಾಯಣರಾಗಿ, ಸಮಾಜವನ್ನೇ ಕಡೆಗಣಿಸಿ, ಕ್ರೂರವಾದ ರೀತಿಯಲ್ಲಿ ವರ್ತಿಸು ತ್ತಿದ್ದಾರೆ. ಇಂಥವರಿಗೆ ಸಾಂಸ್ಕೃತಿಕ ಮೌಲ್ಯಗಳ ಅರಿವನ್ನುಂಟುಮಾಡಿಕೊಟ್ಟು, ಅವರು ಸುಸಂಸ್ಕೃತರಾಗುವಂತೆ ಮಾಡುವ ಮಹತ್ತರವಾದ ಕಾರ್ಯವು ನಮ್ಮೆದುರು ನಿಂತಿದೆ. ನಮ್ಮ ದೇಶದ ಮಹಾನಗರಗಳಲ್ಲಿ ವಾಸಿಸುವ ಮಧ್ಯಮವರ್ಗದ ಮತ್ತು ಬಡಜನರಿಗೆ

ತನ್ನ ಹೊಟ್ಟೆಯುಪಾಡಿಗಾಗಿ ನಿತ್ಯಜೀವನದಲ್ಲಿ ನಡೆಸಿದ ಹೋರಾಟದಲ್ಲಿ ಬೌದ್ಧಿಕ ಮತ್ತು ಸಾಂಸ್ಕೃತಿಕ ಜೀವನದ ಅರಿವು ಕೂಡ ಆಗುವಂತಿಲ್ಲ. ನಗರಗಳಲ್ಲಿಯ ಅವಸರದ ಜೀವನಕ್ರಮದಲ್ಲಿ ಸಾಂಪ್ರದಾಯಿಕವಾದ ಧಾರ್ಮಿಕ ಕರ್ಮಾಚರಣೆಗಳಿಗೆ ಕೂಡ ಸಮಯವೇ ಸಿಕ್ಕುವುದಿಲ್ಲ. ಅದರಿಂದಾಗಿ ಅವರಿಗೆ ಧರ್ಮಾಚರಣೆಯು ಅಶಕ್ಯವೂ, ಅಸಾಧ್ಯವೂ ಆಗತೊಡಗಿದೆ.

ಸ್ತ್ರೀ ಶಿಕ್ಷಣ

ಹಿಂದೊಮ್ಮೆ ನಮ್ಮ ದೇಶದಲ್ಲಿ ಸ್ತ್ರೀ ಶಿಕ್ಷಣಕ್ಕೆ ಪ್ರೋತ್ಸಾಹವಿರಲಿಲ್ಲ. ಇದರಿಂದ ಸಮಾಜದ ಅರ್ಧಾಂಗವು ಪಾರ್ಶ್ವವಾಯುವಿನಿಂದ ಬಳಲುತ್ತಿದ್ದಿತು. ಆರ್ಥಿಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಸ್ತ್ರೀಯರು ಕೇವಲ ಪರಾವಲಂಬಿಗಳಾಗಿ ಬಾಳ ಬೇಕಾಗಿದ್ದಿತು. ಆದರೆ ಈಗ ಸ್ತ್ರೀ ಶಿಕ್ಷಣದ ವಿಷಯದಲ್ಲಿ ಒಂದು ದೊಡ್ಡ ಕ್ರಾಂತಿಯೇ ಉಂಟಾಗುತ್ತಲಿದೆ. ಸ್ತ್ರೀಯರು ಹೆಚ್ಚುಹೆಚ್ಚಾಗಿ ಸ್ವಾವಲಂಬಿಗಳಾಗು ತ್ತಿರುವರು. ಆದರೆ ಗ್ರಾಮಾಂತರ ಪ್ರದೇಶದಲ್ಲಿಯ ಸ್ತ್ರೀಯರಿಗೆ ಆಧುನಿಕ ಭಾರತದ ವಿಚಾರಸರಣಿ ಮತ್ತು ಸಂಸ್ಕೃತಿಯ ಸ್ವರೂಪದ ಕಲ್ಪನೆಯನ್ನು ಮಾಡಿಕೊಡಬೇಕು. ಅಲ್ಲದೆ ಪರರಾಷ್ಟ್ರಗಳ ಅಂಧಾನುಕರಣೆಯನ್ನು ಮಾಡದಂತೆಯೂ, ನಮ್ಮ ಸಂಸ್ಕೃತಿಯ ಮೌಲ್ಯಗಳನ್ನು ಮರೆಯದಂತೆಯೂ ಭಾರತೀಯ ಮಹಿಳೆಯರು ಮುನ್ನಡೆಯಬೇಕು.

ಉಚ್ಚ ಮಟ್ಟದ ಶಿಕ್ಷಣಕ್ರಮ

ಜೀವನದ ಬೇರೆ ಬೇರೆ ಕ್ಷೇತ್ರಗಳಲ್ಲಿ ಹೇಗೋ ಅದೇ ರೀತಿ ಉಚ್ಚಮಟ್ಟದ ಶಿಕ್ಷಣವು ನಮ್ಮ ದೇಶದಲ್ಲಿ ಸ್ವಾತಂತ್ರ್ಯದ ಗಳಿಕೆ ಮತ್ತು ಬಳಕೆಗಳ ಸಂಧಿಕಾಲದ ಪರಿಣಾಮದಲ್ಲಿ ಸಿಲುಕಿಕೊಂಡಿದೆ. ಜ್ಞಾನ ಭಾಂಡಾರವು ದಿನ ದಿನಕ್ಕೂ ವಿಸ್ತಾರಗೊಳ್ಳುತ್ತಿದೆ. ಇತ್ತೀಚೆಗೆ ಕಲೆ ಮತ್ತು ವಿಜ್ಞಾನ ವಿಷಯಗಳಲ್ಲಿ ಒಂದು ಕೃತ್ರಿಮವಾದ ವಿಭಜನೆಯನ್ನು ಮಾಡ ಲಾಗುತ್ತಿದೆ. ಈ ಪ್ರವೃತ್ತಿಯು ಅಳಿಯಬೇಕು.

ವಿಶ್ವವಿದ್ಯಾಲಯಗಳೆಂದರೆ ವಿಶ್ವಜ್ಞಾನವನ್ನು ನೀಡುವ ಕೇಂದ್ರಗಳು. ಆದರೆ ನಮ್ಮ ವಿಶ್ವವಿದ್ಯಾಲಯಗಳಲ್ಲಿ ಜ್ಞಾನವನ್ನು ತುಂಡುತುಂಡಾಗಿ ವಿಚ್ಛಿನ್ನಗೊಳಿಸಲಾಗಿದೆ. ಈ ರೀತಿ ಜ್ಞಾನವನ್ನು ಸಂದಿಗ್ಧಗೊಳಿಸುವಂತೆ ವಿರೂಪಗೊಳಿಸಿದರೆ ಮಾನವ ನಾಗರಿಕತೆ ಬದುಕಿ, ಬೆಳೆಯಲು ಸಾಧ್ಯವಿಲ್ಲ. ವಿಜ್ಞಾನ ಮತ್ತು ಕಲೆಗಳು ಜೊತೆಗೂಡಿಕೊಂಡು ಜೀವನದ ಅಭಿವೃದ್ಧಿಯನ್ನೂ, ಸೌಖ್ಯವನ್ನೂ ಸಾಧಿಸಬೇಕು.

ಜ್ಞಾನವನ್ನು ಮತ್ತೊಂದು ವಿಧವಾಗಿ—ಕಲೆ, ವಿಜ್ಞಾನ ಮತ್ತು ವೃತ್ತಿವಿಷಯ ಗಳೆಂದು ವಿಭಜಿಸಲಾಗುತ್ತಿದೆ. ಕಲೆಯು ಸೌಂದರ್ಯವನ್ನೂ, ವಿಜ್ಞಾನವು ಸತ್ಯವನ್ನೂ,

ವೃತ್ತಿವಿಷಯಗಳು 'ಒಳ್ಳೆಯತನ'ವನ್ನೂ ಸೂಚಿಸುವುದಾಗಿ ಹೇಳಲಾಗುತ್ತಿದೆ. ಈ ವಿಭಜನೆಯು ಕೂಡ ತೃಪ್ತಿಕಾರಕವಾಗಿಲ್ಲನೆಂದೇ ಹೇಳಬೇಕು.

ನಿಜವಾದ ಶಿಕ್ಷಣವಾವುದು ?

ಶಿಕ್ಷಣವು ಮಾನವನ ಸಂಪೂರ್ಣ ವ್ಯಕ್ತಿತ್ವವನ್ನು ರೂಪಿಸಬೇಕು. ಮಾನವನ ದೈಹಿಕ, ಮಾನಸಿಕ, ಬೌದ್ಧಿಕ ಮತ್ತು ಸಾಮಾಜಿಕ ಜೀವನವು ಸುಗಮವಾಗುವಂತೆ ಶಿಕ್ಷಣವು ಅವನನ್ನು ಅಣಿಗೊಳಿಸಬೇಕು. ಶಿಕ್ಷಣ ಕಾರ್ಯವು ಈ ದಿಶೆಯಲ್ಲಿ ಸಾಗಿ, ವಿಶ್ವವಿದ್ಯಾಲಯದ ಶಿಕ್ಷಣದಲ್ಲಿ ಕೊನೆಗೊಳ್ಳಬೇಕು. ವಿಶ್ವವಿದ್ಯಾಲಯದ ಶಿಕ್ಷಣವು ಮುಮ್ಮುಖವಾಗಿದೆ.

೧. ಸಂಸ್ಕೃತಿಯ ವಿತರಣೆ (ಪ್ರಸಾರ)
೨. ವೃತ್ತಿಪರವಾದ ಶಿಕ್ಷಣ.
೩. ವೈಜ್ಞಾನಿಕ ಸಂಶೋಧನೆ ಮತ್ತು ನವವಿಜ್ಞಾನಿಗಳ ತರಬೇತು.

ಯಾವುದೊಂದು ವಿಷಯದ ವ್ಯಾಪ್ತಿಯನ್ನು ವಿಸ್ತರಿಸಲು ವಿದ್ಯಾರ್ಥಿಯು ಆ ವಿಷಯದ ಅಂತರಂಗವನ್ನು ಪ್ರವೇಶಿಸಬೇಕು. ವಿದ್ಯಾರ್ಥಿಗೆ ಸರಿಯಾದ ತಳಪಾಯವನ್ನು ಹಾಕಿಕೊಡಬೇಕು. ಅವನ ಜ್ಞಾನಾರ್ಜನೆಯ ದಾಹವು ಅವ್ಯಾಹತವಾಗಿರಬೇಕು. ಅವನಲ್ಲಿ ತಾಳ್ಮೆ ಮತ್ತು ಅವಿರತ ಪರಿಶ್ರಮಗಳು ನೆಲೆಸಿರಬೇಕು. ತನ್ನ ವಿಷಯವನ್ನು ಆವರಿಸಿದ ಗೂಢವಾದ ಸಮಸ್ಯೆಗಳನ್ನು ಹಂತಹಂತವಾಗಿ ಬಿಡಿಸುವ ಮಹತ್ವಾಕಾಂಕ್ಷೆಯುಳ್ಳವನಾಗಿರಬೇಕು. ಇಲ್ಲದಿದ್ದರೆ ಸಂಶೋಧನೆಯು ಕೆಲವೊಂದು ವಿಚಾರಗಳ ಯಾಂತ್ರಿಕಮಾಟವಾಗಿ ಪರಿಣಮಿಸುತ್ತದೆ; ಜ್ಞಾನದ ಚಿಕ್ಕಪುಟ್ಟ ತುಂಡುಗಳನ್ನು ಜೋಡಿಸಿ ತಯಾರಿಸಲಾದ ನಿರ್ಜೀವ ಆಕೃತಿಯಾಗುವುದು.

ನಾವು ನೀಡುತ್ತಿರುವ ಶಿಕ್ಷಣವು ಜೀವಂತವಾಗಿರಬೇಕು. ವಿದ್ಯಾರ್ಥಿಯ ವ್ಯಕ್ತಿತ್ವದ ಪೂರ್ಣವಿಕಾಸವನ್ನುಂಟುಮಾಡುವಂತಹದಾಗಿರತಕ್ಕದು. ಹಾಗಾದಪಕ್ಷದಲ್ಲಿ ವಿದ್ಯಾರ್ಥಿಯು ಒಳ್ಳೇ ನಾಗರಿಕನಾಗಿ ರಾಷ್ಟ್ರದ ಪುನರುಜ್ಜೀವನ ಕಾರ್ಯದಲ್ಲಿ ಮಹತ್ವದ ಪಾತ್ರವನ್ನು ವಹಿಸುವನು ಮತ್ತು ಅನಾದಿಕಾಲದಿಂದ ನಡೆದುಬಂದ ಸತ್ಯಾನ್ವೇಷಣೆಯ ಕಾರ್ಯವನ್ನು ಮುಂದುವರಿಸಲು ಸಮರ್ಥನಾಗುವನು. ವಿಶ್ವವಿದ್ಯಾಲಯದಲ್ಲಿಯ ಉಚ್ಚ ಶಿಕ್ಷಣದ ಘನವಾದ ಉದ್ದೇಶವೆಂದರೆ ರಚನಾತ್ಮಕವಾದ ಆತ್ಮಪರಿಷ್ಕರಣೆ, ಆತ್ಮೋನ್ನತಿ ಮತ್ತು ಆತ್ಮೋದ್ಧಾರವು. ವಿದ್ಯಾರ್ಥಿಯು ತನ್ನ ವ್ಯಕ್ತಿತ್ವದ ಘನತೆಯ ಅರಿವನ್ನು ಮಾಡಿಕೊಳ್ಳುವಂತಾಗದಿದ್ದರೆ ವಿಶ್ವವಿದ್ಯಾಲಯವು ತನ್ನ ಶಿಕ್ಷಣಕಾರ್ಯವನ್ನು ಸರಿಯಾಗಿ ಮಾಡಿದಂತಾಗುವುದಿಲ್ಲ. ಮಾನವನು ಬಾಹ್ಯಾಕಾಶದ ವಿಷಯಕವಾದ ಜ್ಞಾನವನ್ನು

ಪಡೆಯುತ್ತಿರುವುದಾಗಿದ್ದಾನೆ; ಆದ್ದರಿಂದ ಈ ಬಾಹ್ಯಜ್ಞಾನವನ್ನೂ ತನ್ನ ಮೆದುಳಿನಲ್ಲಿಯ ಅಂತ ಜ್ಞಾನವನ್ನೂ ಸಮತೋಲನಗೊಳಿಸಬೇಕು. ಒಟ್ಟಿನಲ್ಲಿ ಹೇಳುವುದಾದರೆ ಶಿಕ್ಷಣವು ಮಾನವನ ಸ್ವಭಾವವನ್ನೇ ಪರಿವರ್ತನೆಗೊಳಿಸಬೇಕು. ಮಾನವನು ಕೇವಲ ಪ್ರಾಣಿಗಳಲ್ಲಿ ಶ್ರೇಷ್ಠನೆಂದು ಹೆಮ್ಮೆಪಡದೆ, ಅತಿಮಾನವನಾಗುವ ಆದರ್ಶವನ್ನಿಟ್ಟುಕೊಳ್ಳಬೇಕು.

ಸಮಗ್ರ ಜ್ಞಾನ (Integral Knowledge)

ತಾದಾತ್ಮ್ಯಭಾವದಿಂದ ಜ್ಞಾನಗಳಿಸುವುದು ಜ್ಞಾನಾರ್ಜನೆಯ ನಿಜವಾದವಿಧಾನವು. ಅಂದರೆ ಒಳಗಣ್ಣಿನಿಂದ ಜ್ಞಾನಜ್ಯೋತಿಯನ್ನು ಕಾಣಬೇಕು. ಆದುದರಿಂದಲೇ ಡೈ. ಬಿ. ಏಟ್ಸ್ ಎಂಬ ಕವಿಯು ಮಾತಿನಲ್ಲಿ ಹೇಳಬೇಕಾದರೆ, “ಕೇಂದ್ರಶಕ್ತಿಯು ಕಣಗಳನ್ನು ಕೂಡಿಸಿ ಹಿಡಿಯದಿದ್ದರೆ ಅವೆಲ್ಲ ಕಳಚಿ, ಕುಪ್ಪಳಿಸಿ ಬೀಳುತ್ತವೆ.” ಈ ಕೇಂದ್ರ ಶಕ್ತಿಯೇ ಆತ್ಮಜ್ಞಾನದ ಅರಿವು. ಪರಿಪೂರ್ಣಜೀವನದಿಂದಲೇ ಸಮಗ್ರ ಶಿಕ್ಷಣವು ಹೊರಬೀಳುವುದು. ನಮ್ಮ ದೃಷ್ಟಿಯ ಮುಂದೆ ಸತ್ಯದ ಸಮಗ್ರಸ್ವರೂಪದ ದರ್ಶನವಾಗಬೇಕಾದರೆ ಆತ್ಮವು ಜಾಗ್ರತಗೊಳ್ಳಬೇಕು.

ಸತ್ಯವು ಐದು ವಿಧವಲ್ಲಿ ಪ್ರಾಮುಖ್ಯತೆಯನ್ನು ಪಡೆದಿದೆ. ಪ್ರಪಂಚದ ಯಾವದೊಂದು ವಸ್ತುವಿನಲ್ಲಿಯೂ ಈ ಅನುಭವವನ್ನು ಪಡೆಯಬಹುದು. ಶಿಕ್ಷಣಕ್ರಮವು ಸಮಗ್ರಸತ್ಯದ ಒಂದು ಕಿಂಚಿತ್ ಅಂಶಮಾತ್ರವನ್ನರಿಯುವ ಒಂದು ವಿಧಾನವಾಗಿದೆ. ಸತ್ಯದ ನಿಜವಾದ ಅರಿವನ್ನುಂಟುಮಾಡಿಕೊಡಬೇಕಾದರೆ ವಿದ್ಯಾರ್ಥಿಗೆ ಈ ಸಂಗತಿಯನ್ನು ಅರುಹಬೇಕು. ಈ ಐದು ಸ್ವರೂಪಗಳಲ್ಲಿಯೂ ಸತ್ಯವನ್ನು ಸಂಧಿಸುವ ಅವಕಾಶವನ್ನು ಕಲ್ಪಿಸಿಕೊಡುವುದೇ ನಿಜವಾದ ಶಿಕ್ಷಣ. ಈ ಸತ್ಯಾಂಶದ ಅರಿವಿಲ್ಲದುದರಿಂದಲೇ ಇಂದಿನ ಉಚ್ಚಶಿಕ್ಷಣವು ನೀರಸವೆನಿಸುತ್ತಿದೆ. ವಿದ್ಯಾರ್ಥಿಯು ತನ್ನ ಒಲವಿನಂತೆ ಆರಿಸಿಕೊಂಡಿರುವ ವಿಷಯದ ಮೂಲಕ ಸತ್ಯಾನ್ವೇಷಣೆಯನ್ನು ಸಾಧ್ಯಗೊಳಿಸದಿರುವ ಅಭ್ಯಾಸಕ್ರಮದ ಅಭಾವವೇ ಇಂದಿನ ಶಿಕ್ಷಣದ ಅಯಶಸ್ಸಿಗೆ ಕಾರಣವಾಗಿದೆ. ಈಗ ದೊರಕುತ್ತಿರುವುದು ಬೌದ್ಧಿಕ ಅಂಧಾನುಕರಣೆ ಮತ್ತು ಕೇವಲ ವಿಷಯಜ್ಞಾನ. ಈ ನೀರಸವಾದ ವಿಧಾನದ ಮೂಲಕ ಶಿಕ್ಷಕನೂ ವಿದ್ಯಾರ್ಥಿಯೂ ನಿಸ್ತೇಜರಾಗಿದ್ದಾರೆ.

ಜ್ಞಾನ, ಸೌಂದರ್ಯ, ಶಕ್ತಿ, ಇಲ್ಲವೆ ಸತ್ವ; ಪ್ರಯೋಜನ (utility) ಮತ್ತು ಅಂತ ಸ್ಫೂರ್ತಿ ಇವುಗಳೇ ಸತ್ಯದ ಪಂಚಾನನಗಳು. ಶಿಕ್ಷಣವು ಮನುಷ್ಯನನ್ನು ರಾಕ್ಷಸನನ್ನಾಗಿ ಪರಿವರ್ತನೆಗೊಳಿಸಕೂಡದೆಂಬುದು ಸರ್ವಸಮ್ಮತವಾಗಿದೆ. ಮಾನವನಿಗೆ ಬಲವೂ ಸತ್ವವೂ ದೊರಕಬೇಕು; ಆದರೆ ಆ ಶಕ್ತಿ ಮತ್ತು ಸತ್ವದ ದುರುಪಯೋಗವಾಗದಂತೆ ಮಾನವನನ್ನು ರೂಪಿಸುವ ಹೊಣೆಯು ಶಿಕ್ಷಣದ್ದು, ಶಿಕ್ಷಕನದು. ಯಾವುದೇ ಶಿಕ್ಷಣದಲ್ಲಿಯೂ ಒಳನೋಟಕ್ಕೆ ಮಹತ್ವವಿದೆ. ಶಬ್ದಗಳಲ್ಲಿ, ಚಿತ್ರಗಳಲ್ಲಿ, ಶ್ರವಣಸಾಧನಗಳಲ್ಲಿ

ಎಷ್ಟು ವಿಧವಾಗಿ ವಿವರಿಸಿದರೂ ಕೂಡ, ವಿದ್ಯಾರ್ಥಿಯು ಒಳನೋಟದಿಂದ ವಿಷಯ ಗ್ರಹಣವನ್ನು ಮಾಡದಿದ್ದರೆ ಶಿಕ್ಷಣದ ಎಲ್ಲ ವಿಧಾನಗಳೂ ವ್ಯರ್ಥವಾಗುವುವು. ಇಂಥ ಆಂತರಿಕದೃಷ್ಟಿಯನ್ನುಂಟುಮಾಡಿಕೊಡಬೇಕಾದರೆ ಶಿಕ್ಷಕ ಮತ್ತು ವಿದ್ಯಾರ್ಥಿಗಳ ಸಾನ್ನಿಧ್ಯ-ಸಂಪರ್ಕಗಳು ಹೆಚ್ಚು ಹೆಚ್ಚಾಗಬೇಕು. ಯಾವದೊಂದು ವಸ್ತುವನ್ನು ನಾವು ಅಂತಃಕರಣಪೂರ್ವಕವಾಗಿ ಪ್ರೀತಿಸದಿದ್ದರೆ, ಅದರ ಬಗೆಗೆ ಆತ್ಮೀಯತೆಯುಂಟಾಗ ಲಾರದು. ಆತ್ಮೀಯತೆಯಿಲ್ಲದೆ ತಾದಾತ್ಮ್ಯಗೊಳ್ಳುವುದೆಂತು? ಆದುದರಿಂದ ವಿದ್ಯಾರ್ಥಿಯು ವಿದ್ಯಾರ್ಜನೆಯ ಕಾರ್ಯದಲ್ಲಿ, ಶಿಕ್ಷಕನು ಜ್ಞಾನದಾನಕಾರ್ಯದಲ್ಲಿ ತಾದಾತ್ಮ್ಯ ಹೊಂದಿದರೆ ಮಾತ್ರ ಅಂತರ್ದೃಷ್ಟಿಯುಂಟಾಗಿ ಆತ್ಮಜ್ಞಾನ ಉಂಟಾಗು ವುದು. ಈ ದಿವ್ಯದೃಷ್ಟಿಯನ್ನುಂಟುಮಾಡಿಕೊಡುವುದಕ್ಕಾಗಿ ವಿದ್ಯಾರ್ಥಿಯನ್ನು ತನ್ನೆಡೆಗೆ ಆಕರ್ಷಿಸುವ ಗುರುತ್ವಾಕರ್ಷಣ ಶಕ್ತಿಯನ್ನು ಗುರುವು ಪಡೆದಿರಬೇಕು. ಈ ರೀತಿ ಅರಿವನ್ನೇ ಗುರುವಾಗಿಸಿ, ಶಿಕ್ಷಕನು ವಿದ್ಯಾರ್ಥಿಗೆ ಮಾರ್ಗದರ್ಶಕನಾಗು ವನು.

ಧಾರ್ಮಿಕ ಶಿಕ್ಷಣ ಮತ್ತು ಸಮಗ್ರಜ್ಞಾನ

ನಮ್ಮ ದೇಶದಲ್ಲಿ ಅನೇಕ ಧಾರ್ಮಿಕ ಪಂಥಗಳಿವೆ. ವಿವಿಧ ಧರ್ಮಗಳನ್ನೊಳಗೊಂಡ ಸಮಾಜವನ್ನು ಅಖಂಡವಾಗಿರುವಂತೆ ಮಾಡುವ ಉದ್ದೇಶದಿಂದಲೇ ನಮ್ಮ ರಾಷ್ಟ್ರವು ಧರ್ಮಾತೀತ (Secular) ರಾಷ್ಟ್ರವೆಂದು ಸಾರಲ್ಪಟ್ಟಿದೆ. ಇದರಿಂದ ಸಹಿಷ್ಣುತೆ ಮತ್ತು ಪರಸ್ಪರ ತಿಳಿವಳಿಕೆಯುಂಟಾಗಲು ಆಸ್ಪದವಿದೆ. ಆದರೆ ನಿತ್ಯನೈಮಿತ್ತಿಕ ವ್ಯವಹಾರ ವನ್ನವಲೋಕಿಸಿದರೆ ಈ ತತ್ವಾಚರಣೆಯು ತೃಪ್ತಿಕಾರಕವಾಗಿಲ್ಲವೆಂಬುದು ಕಂಡುಬರು ತ್ತದೆ. ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಬೆಳವಣಿಗೆಯನ್ನು ಮಾಡುವ ಕಾರ್ಯ ವನ್ನು ಪ್ರಾಚೀನಕಾಲದಲ್ಲಿ ಧರ್ಮವು ಕೈಕೊಳ್ಳುತ್ತಿತ್ತು. ಈಗ ಈ ಮೌಲ್ಯಗಳನ್ನು ಅಲಕ್ಷಿಸಲಾಗುತ್ತಿದೆ. ಸದ್ಯದಲ್ಲಿ ಕಂಡುಬರುವ ಧರ್ಮಾಚರಣೆಯು ಮಾನವಜನಾಂಗವನ್ನು ಛಿನ್ನವಿಚ್ಛಿನ್ನಗೊಳಿಸುತ್ತಲಿದೆ. ಹೀಗೆ ತಪ್ಪುದಾರಿಯಲ್ಲಿದ್ದ ಧರ್ಮಾಚರಣೆಯನ್ನು ನಾವು ಯೋಗ್ಯವಾದ ಶಿಕ್ಷಣದ ಮೂಲಕ ಸರಿಪಡಿಸಬೇಕು. ಹೀಗೆ ಮಾಡುವುದನ್ನು ಬಿಟ್ಟು ನಾವು ಧರ್ಮವನ್ನೇ ಬಿಟ್ಟುಕೊಟ್ಟರೆ, ನಾಗರಿಕ ಜೀವನದ ತಳಹದಿಯಾದ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಕಡೆಗಣಿಸಿದಂತಾಗುತ್ತದೆ.

ಶಿಕ್ಷಣ ಕ್ರಮದಂತೆ ಧರ್ಮವೂ ಒಂದು ಪ್ರಕಾರದ ಕ್ರಮಬದ್ಧಯೋಜನೆಯಾಗಿದೆ. ಪ್ರತಿಯೊಂದು ಧರ್ಮದಲ್ಲಿಯೂ ಮನೋವಿಜ್ಞಾನ ಮತ್ತು ಸಾಮಾಜಿಕ ತತ್ವಗಳುಂಟು. ಧಾರ್ಮಿಕ ಮನೋವಿಜ್ಞಾನವು ವ್ಯಕ್ತಿಯ ಬಹುಮುಖವಾದ ವಿಕಾಸಕ್ಕೆ ಸಂಬಂಧಿಸಿದ ವಿಷಯಗಳನ್ನು ತಿಳಿಸುವುದು. ಪ್ರೊ. ಮ್ಯಾಕ್ಸ್‌ಮುಲ್ಲರ್ ಅವರು ಹೇಳುವಂತೆ "ವೇದಾಂತವು

ವಸ್ತುಜ್ಞಾನಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟಿಲ್ಲ. ಮಾನವನ ಹೃದಯಪರಿವರ್ತನೆಯ ಆವಶ್ಯಕತೆಯನ್ನೇ ಅದು ಒತ್ತಿ ಹೇಳುತ್ತಿದೆ."

ಸಮಗ್ರ ಶಿಕ್ಷಣವು ಮಾನವನ ದೈಹಿಕ, ಮಾನಸಿಕ ಸತ್ವಕ್ಕೆ ಸಂಬಂಧಿಸಿದ ಮತ್ತು ಆತ್ಮಿಕ ವಿಕಾಸವನ್ನುಂಟುಮಾಡುವುದು. ಮಾನವನ ವ್ಯಕ್ತಿತ್ವವು ಸೇವೆ, ಜ್ಞಾನ, ಕೃತಿ (ಕಾರ್ಯ) ಮತ್ತು ಪ್ರೀತಿ ಈ ದಿಶೆಗಳಲ್ಲಿ ಪರಿಪೂರ್ಣತೆಯನ್ನು ಹೊಂದಬೇಕು. ಇದೇ ಸಮಗ್ರ ಶಿಕ್ಷಣದ ನಿಜ ಸ್ವರೂಪವಾಗಿದೆ. ಜೀವನವನ್ನು ಉದಾಸೀನ ಭಾವನೆಯಿಂದ ಕಾಣಕೂಡದು. ನಿಸರ್ಗದತ್ತವಾದ ಪ್ರಕೃತಿಯಿಂದ ಕೂಡಿದ ಮಾನವನನ್ನು ಶಿಕ್ಷಣ ಸಂಸ್ಕಾರದಿಂದ ಪರಿವರ್ತನೆಗೊಳಿಸಿ ವ್ಯಕ್ತಿತ್ವದ ವಿಕಾಸಕ್ಕೆ ಅನುವುಮಾಡಿಕೊಡಬೇಕು. ಮಾನವ ಜನಾಂಗವು ಅನಾದಿಕಾಲದಿಂದಲೂ ಸರ್ವೋದಯ ಸಮಾಜರಚನೆಯನ್ನು ಆದರ್ಶವಾಗಿಟ್ಟುಕೊಂಡಿದೆ. ಈ ಹೊಸ ಸಮಾಜರಚನಾಕಾರ್ಯದಲ್ಲಿ ಮುಖ್ಯವಾದ ಪಾತ್ರವನ್ನು ವಹಿಸಲು ಅರ್ಹನಾಗುವಂತಹ ಶಿಕ್ಷಣವನ್ನು ಮಾನವನಿಗೆ ನೀಡಬೇಕು. ಸಮಗ್ರ ಶಿಕ್ಷಣದ ತತ್ವದಂತೆ ವ್ಯಕ್ತಿಗೆ ಹೇಗೋ ಹಾಗೆ ರಾಷ್ಟ್ರಕ್ಕೂ ಒಂದು ಶಿಕ್ಷಣ ಕ್ರಮದ ಆವಶ್ಯಕತೆ ಕಂಡುಬರುತ್ತದೆ. ಇದರಿಂದ "ವಸುಧೈವ ಕುಟುಂಬಕಂ" ಎಂಬ ಧ್ಯೇಯವನ್ನೂ ಸಾಧಿಸಬಹುದು. ಯಾಕೆಂದರೆ ವ್ಯಕ್ತಿಗೆ ಆತ್ಮವಿರುವಂತೆ ರಾಷ್ಟ್ರಕ್ಕೂ ಒಂದು ಆತ್ಮವಿದೆ; ಪ್ರಪಂಚಕ್ಕೂ ಒಂದು ವಿಶ್ವಾತ್ಮವಿದೆ.

ತನ್ನ ವ್ಯಕ್ತಿತ್ವದ ವೈಶಿಷ್ಟ್ಯದಿಂದ, ವಿಶ್ವಾತ್ಮನೊಡನೆ ತಾದಾತ್ಮ್ಯಹೊಂದಿ ಅತಿಮಾನವರಾಗಿ ಪರಿವರ್ತನೆಹೊಂದಿದ ವ್ಯಕ್ತಿಗಳು ರೂಪುಗೊಳ್ಳುವ ಕನಸನ್ನು ಮಹರ್ಷಿ ಅರವಿಂದರು ಕಂಡಿದ್ದಾರೆ. ಭಾರತೀಯ ಸಂಸ್ಕೃತಿಯಂತೆ ಐಹಿಕರೂಪಿಯಾದ ಮಾನವನು ತನ್ನ ವ್ಯಕ್ತಿತ್ವವನ್ನು ಆಧ್ಯಾತ್ಮಿಕ ಮತ್ತು ಆತ್ಮಿಕ ಸ್ವರೂಪದಲ್ಲಿ ಪರಿವರ್ತಿಸಿಕೊಳ್ಳಲು ಯತ್ನಿಸುವನು. ಎಲ್ಲ ಪ್ರಕಾರದ ಶಿಕ್ಷಣಕ್ರಮದಲ್ಲಿಯೂ ಆಧ್ಯಾತ್ಮಿಕ ಸತ್ಯವೇ ಕೇಂದ್ರಬಿಂದುವಾಗಿರಬೇಕೆಂಬುದೇ ಪ್ರಾಚೀನ ಭಾರತೀಯ ಶಿಕ್ಷಣ ತತ್ವವಾಗಿದೆ. ಅಹಂಕಾರವು ಪ್ರಪಂಚವನ್ನೆಲ್ಲ ಭ್ರಮೆಗೊಳಿಸಿ, ನಿಜವಾದ ಜ್ಞಾನಚಕ್ಷುವಿಗೆ ಪರದೆಯನ್ನು ತಂದೊಡ್ಡುತ್ತದೆ. ಆದ್ದರಿಂದ ಈ ಅಹಂಭಾವವನ್ನು ಹೋಗಲಾಡಿಸುವುದೇ ಆತ್ಮವನ್ನು ಸ್ವತಂತ್ರಗೊಳಿಸಿದಂತೆ. ಈ ಪ್ರಕಾರವಾಗಿ ಮಾಯೆಯಿಂದ ಮುಕ್ತವಾದ ಆತ್ಮವು ಪರಿಪೂರ್ಣತೆಯನ್ನು ಹೊಂದುವುದು. ಅತಿಮಾನವರನ್ನು ರೂಪಿಸುವುದೇ ನಿಜವಾದ ಶಿಕ್ಷಣದ ಉದ್ದೇಶವಾಗಿದೆ. ಇದನ್ನು ಸಾಧಿಸಲು ಶಿಕ್ಷಕರೂ, ಪಾಲಕರೂ, ವಿದ್ಯಾರ್ಥಿಗಳೂ ಸತತವಾಗಿ ಯತ್ನಿಸಬೇಕು.

* * *

ಕರ್ನಾಟಕ ವಿಶ್ವವಿದ್ಯಾಲಯವು ಪದ್ಮಶ್ರೀ ಗೋಕಾಕರಿಗೆ ಡಾಕ್ಟರ್ ಆಫ್ ಲೆಟರ್ಸ್ ಪದವಿಯನ್ನು ದಯಪಾಲಿಸಿ ಗೌರವಿಸಿದೆ. ಆ ಸಂದರ್ಭದಲ್ಲಿ ಶ್ರೀ ಗೋಕಾಕರ ಬಗ್ಗೆ

ಹೇಳಲಾದ ಈ ಮಾತುಗಳು ಚಿರಸ್ಮರಣೀಯವಾಗಿವೆ: "ಅಭಿವೃದ್ಧಿ ಹೊಂದುತ್ತಿರು
ಈ ನಮ್ಮ ರಾಷ್ಟ್ರದಲ್ಲಿ ಶ್ರೀ ಗೋಕಾಕರದು ವಿಕಾಸಹೊಂದುತ್ತಿರುವ ವ್ಯಕ್ತಿತ್ವವಾಗಿದೆ
ಅವರು ಹೊಸ ವಿಚಾರಗಳನ್ನು ಸ್ವಾಗತಿಸುವ ವಿಶಾಲ ಮನೋಭಾವವನ್ನು ಹೊಂದಿ
ದವರಾಗಿದ್ದಾರೆ. ಇದಲ್ಲದೆ ಯೋಗ್ಯವಾದ, ಪ್ರಗತಿಪರ ವಿಚಾರಗಳನ್ನು ಒತ್ತಿ ಹೇಳಿ
ಅವುಗಳನ್ನು ಆಚರಣೆಯಲ್ಲಿ ತರುವ ದೃಢಮನಸ್ಸಿನವರೂ, ನಿರ್ಭೀತರೂ ಆಗಿದ್ದಾರೆ.
ಉಪಕುಲಪತಿಯ ಸ್ಥಾನದಲ್ಲಿದ್ದು ಅವರು ಈ ತರಹದ ಪ್ರಯೋಗ ಮತ್ತು ಸುಧಾರಣೆ
ಗಳನ್ನು ಮಾಡುವರೆಂದು ನಾವು ನಂಬಿದ್ದೇವೆ."

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಇತ್ತೀಚೆಗೆ ಶಿಕ್ಷಣಕ್ರಮದಲ್ಲಿ ಉಂಟಾದ ಕ್ರಾಂತಿ
ಕಾರಕ ಬದಲಾವಣೆಗಳು ಈ ಅಪೇಕ್ಷೆಯನ್ನು ಸಾರ್ಥಕಗೊಳಿಸಿವೆ. ಹೀಗೆ ಅನೇಕ
ಮುಖಗಳಲ್ಲಿ ಶಿಕ್ಷಣದ ಸೇವೆ ಸಲ್ಲಿಸಿದ "ವಿನಾಯಕ"ರು ಗುರುವಿನಲ್ಲಿರಬೇಕಾದ
ಗುರುತ್ವಾಕರ್ಷಣ ಶಕ್ತಿಯಿಂದ ಕೂಡಿದ ಮಹಾನ್‌ವ್ಯಕ್ತಿಯಾಗಿದ್ದಾರೆ. ಅವರಿಂದ
ಶಿಕ್ಷಣಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಸೇವೆಯನ್ನು ಪಡೆಯುವ ಸುಯೋಗವನ್ನು ನಮ್ಮ
ರಾಷ್ಟ್ರವು ಕಲ್ಪಿಸಿಕೊಡಬೇಕು. ಅಂತರರಾಷ್ಟ್ರೀಯ ಖ್ಯಾತಿವೆತ್ತ ಅವರ ಅನುಭವ
ಮತ್ತು ಜ್ಞಾನಗಳ ಭಾಂಡಾರವನ್ನು ಮಾನವಕುಲದ ಉದ್ಧಾರಕ್ಕಾಗಿ ಉಪಯೋಗಿಸಿ
ಕೊಳ್ಳಬೇಕೆಂದು ಹಾರೈಸುತ್ತೇನೆ.

ಮುನ್ನುಡಿಗಳು

ಜಿ. ವಿ. ಕುಲಕರ್ಣಿ

ಕನ್ನಡ ಸಾಹಿತ್ಯವನ್ನು ಶ್ರೀಮಂತವಾಗಿಸುವ ಆಣತಿಯ– ವೀಳ್ಯವನ್ನು ಎತ್ತಿಕೊಂಡು ಕಳೆದ ನಾಲ್ಕು ದಶಕಗಳಿಂದ ವಿವಿಧ ಮುಖವಾದ ಸೇವೆಯನ್ನು ಸಲ್ಲಿಸಿ, ಕನ್ನಡ ನುಡಿಯ ನಂದಾದೀಪವನ್ನು ಅಖಂಡವಾಗಿ ಬೆಳಗಿಸುತ್ತ ಬಂದ ಕನ್ನಡನಾಡಿನ ಕೆಲವೇ ವಿದ್ವಾಂಸಿಗಳಲ್ಲಿ ಶ್ರೀ ವಿನಾಯಕರು ಒಬ್ಬರು. ವಿಮರ್ಶಕರಾಗಿ, ಕವಿಗಳಾಗಿ, ನಾಟಕಕಾರರಾಗಿ, ಕಾದಂಬರಿಕಾರರಾಗಿ, ಶಿಕ್ಷಣತಜ್ಞರಾಗಿ, ಪ್ರಾಧ್ಯಾಪಕರಾಗಿ, ಕನಸಿಗರಾಗಿ, ಆದರ್ಶಜೀವಿಗಳಾಗಿ ತಮ್ಮ ಅಷ್ಟ–ಪೈಲು ವ್ಯಕ್ತಿತ್ವವನ್ನು ತೋರಿದ್ದಾರೆ. ಇವರ 'ಷಷ್ಟಿಪೂರ್ತಿ' ಸಂಭ್ರಮವನ್ನು ಇಡೀ ಕನ್ನಡನಾಡೇ ಹೆಮ್ಮೆಯಿಂದ ಆಚರಿಸುತ್ತಿದೆ. ಈ ಸಂದರ್ಭದಲ್ಲಿ ಯೋಜಿತವಾದ ಗೌರವಗ್ರಂಥದಲ್ಲಿ– "ಶ್ರೀ ಗೋಕಾಕರ ಮುನ್ನುಡಿಗಳು" ಎಂಬ ವಿಷಯವಾಗಿ ಒಂದು ಲೇಖನವನ್ನು ಬರೆಯಬೇಕೆಂದು ಹಿರಿಯರ ಆದೇಶ ಬಂದಾಗ ಒಪ್ಪಿಕೊಂಡೆನೇನೋ ನಿಜ; ಆದರೆ ತಿಳಿದಷ್ಟು **ಈ ಕೆಲಸ** ಸುಲಭದ್ದಾಗಲಿಲ್ಲ. ಶ್ರೀ ಗೋಕಾಕರು ನೂರಾರು ಮುನ್ನುಡಿಗಳನ್ನು ಬರೆದಿದ್ದಾರೆ. ಅವರು ಆಂಗ್ಲ ಭಾಷೆಯಲ್ಲಿ ಬರೆದ ಮುನ್ನುಡಿ ಬಿಟ್ಟು ಕನ್ನಡದಲ್ಲಿ ಬರೆವ ಮುನ್ನುಡಿಗಳ ಬಗ್ಗೆ ಮಾತ್ರ ನಮ್ಮ ದೃಷ್ಟಿ ಕೇಂದ್ರೀಕರಿಸಿದರೂ ಎಲ್ಲ ಮುನ್ನುಡಿಗಳನ್ನೂ ಓದಲಿಕ್ಕಾಗದೇ ಇದ್ದುದು ನನ್ನ ವೈಯಕ್ತಿಕ ದುರ್ಬಲತೆಯಾಗಿದೆ. ಕೆಲ ಹಳೆಯ ಪುಸ್ತಕಗಳು ಹಿರಿಯ ಗ್ರಂಥ ಭಂಡಾರಗಳಲ್ಲಿ, ಪ್ರಕಾಶಕರಲ್ಲಿ ಕೂಡ ದೊರೆಯದೆ ಇದ್ದುದರಿಂದ ಅವುಗಳ ಬಗ್ಗೆ ಬಂದ ವಿವರಣೆ ಓದಿ ತೃಪ್ತನಾಗುವ ಪ್ರಸಂಗ ಬಂತು. ಗೋಕಾಕರ ಮುನ್ನುಡಿಗಳಲ್ಲಿರುವ ವಿಮರ್ಶಾ ಸಾಹಿತ್ಯವು ಅವರ ಇತರ ವಿಮರ್ಶೆಯ ಕೃತಿಗಳಿಗೆ ಪೂರಕವಾದ ಪ್ರಾಯೋಗಿಕ ವಿವೇಚನೆಯನ್ನು ನೀಡುತ್ತದೆ, ಆದ್ದರಿಂದ ಇದರ ಸಂಶೋಧನಾತ್ಮಕ ಅಭ್ಯಾಸವು ಫಲಪ್ರದವಾಗುವದರಲ್ಲಿ ಸಂದೇಹವಿಲ್ಲ.

ಉತ್ತಮ ಕವಿಯು ಒಳ್ಳೆಯ ವಿಮರ್ಶಕನೂ ಆಗಿರುತ್ತಾನೆಂಬುದನ್ನು ತೋರಿಸಿದ ಕೆಲವೇ ಕನ್ನಡ ಸಾಹಿತಿಗಳಲ್ಲಿ ಶ್ರೀ ವಿನಾಯಕರೊಬ್ಬರು. ಕವಿಯೆಂದು ಯಶಸ್ವಿಯಾಗದವ ಉತ್ತಮ ವಿಮರ್ಶಕನಾಗುತ್ತಾನೆಂಬ ಉಕ್ತಿಯೂ ಪ್ರಚಲಿತವಾಗಿದೆ. ಆದರೆ ಮೋಸಫೀಲ್ಡ್, ಡಬ್ಲ್ಯು. ಬಿ. ಯೇಟ್ಸ್, ಟಿ. ಎಸ್. ಎಲಿಯಟ್ ಮುಂತಾದ ಕವಿಗಳು

ತಾವು ಉತ್ತಮ ಮಟ್ಟದ ವಿಮರ್ಶಕರೆಂಬುದನ್ನೂ ತೋರಿಸಿಕೊಟ್ಟಿದ್ದಾರೆ. ಶ್ರೀ ಗೋಕಾಕರ ವಿಮರ್ಶಾ ಗ್ರಂಥಗಳಾದ 'ಕವಿ ಕಾವ್ಯ ಮಹೋನ್ನತಿ', 'ಸಾಹಿತ್ಯದಲ್ಲಿ ಪ್ರಗತಿ,' 'ಇಂದಿನ ಕನ್ನಡ ಕಾವ್ಯದ ಗೊತ್ತು ಗುರಿಗಳು', 'ನವ್ಯತೆ ಹಾಗೂ ಕಾವ್ಯ ಜೀವನ' ಇವು ಕನ್ನಡದಲ್ಲಿ ಅಪೂರ್ವವಾಗಿವೆ. ಈ ಗ್ರಂಥಗಳಲ್ಲದೇ ಶ್ರೀ ಗೋಕಾಕರು ಬರೆದ ಅಸಂಖ್ಯ ಲೇಖನಗಳು, ಇತ್ತೀಚೆಗೆ ಅವರು ಬರೆಯುತ್ತಿರುವ 'ಸಮನ್ವಯ ಭಾಷ್ಯ' ಕನ್ನಡದಲ್ಲಿಯ ವಿಮರ್ಶಾ ಸಾಹಿತ್ಯವನ್ನು ಶ್ರೀಮಂತಗೊಳಿಸುತ್ತಿವೆ.

ಮುನ್ನುಡಿಗಳು

ತರುಣ ಲೇಖಕರು ಸಾಹಿತ್ಯ ರಂಗದಲ್ಲಿ ಕಾಲಿರಿಸುವಾಗ ಒಬ್ಬ ಹಿರಿಯ ಲೇಖಕನ ಮುನ್ನುಡಿಯನ್ನೋ, ಪ್ರಸ್ತಾಪನೆಯನ್ನೊ, ಪೀಠಿಕೆಯನ್ನೊ ಪಡೆಯುವ ಸಂಪ್ರದಾಯ ಇತರ ಭಾಷೆಗಳಲ್ಲಿ ಸಾಮಾನ್ಯವಾಗಿರುವಂತೆ ಕನ್ನಡ ಭಾಷೆಯಲ್ಲಿಯೂ ಇದೆ. ಮುನ್ನುಡಿಗಳಲ್ಲಿ ಕೆಲವು ಕೇವಲ ಹೊಗಳಿಕೆಗಾಗಿ ಬರೆದಿದ್ದರೆ, ಕೆಲವು ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಬರೆದವುಗಳಾಗಿರುತ್ತವೆ, ಇನ್ನು ಕೆಲವು ಕೃತಿಯ ಮೌಲ್ಯ ಮಾಪನಕ್ಕೆ ಕೈಹಾಕಿದರೆ, ಮತ್ತೆ ಕೆಲ ಮುನ್ನುಡಿಗಳು ಆಯಾ ಸಾಹಿತ್ಯದ ಪ್ರಕಾರದ ಬಗ್ಗೆಯೇ ವಿಮರ್ಶಾತ್ಮಕ ಟಿಪ್ಪಣಿಗಳಾಗಿರುತ್ತವೆ; (ಶ್ರೀ ತ. ಸು. ಶಾಮರಾಯರು ಆನಂದರ 'ಬೇವು-ಬೆಲ್ಲ'ಕ್ಕೆ ಬರೆದ ಮುನ್ನುಡಿ ಈ ರೀತಿಯದು). ಶ್ರೀ ಗೋಕಾಕರೆಡೆ ಮುನ್ನುಡಿಗಾಗಿ ಬರುವವರಲ್ಲಿ ಹೆಚ್ಚಿನವರು ತಮ್ಮ ಕೃತಿಯ ವಿಶ್ಲೇಷಣೆ ದೊರೆಯುವದೆಂದೆ ನಂಬಿದವರಾಗಿರುತ್ತಾರೆ. ಶ್ರೀ ಗೋಕಾಕರು ತಮ್ಮ ಮುನ್ನುಡಿಗಳ ಮೂಲಕ ಉದಯೋನ್ಮುಖ ಲೇಖಕರ ಅಭಿಜಾತ ಪ್ರತಿಭೆಯನ್ನು ಗುರುತಿಸಿದ್ದಾರೆ, ಕೆಲವು ಸಲ ದೋಷಗಳೆಡೆಗೆ ಎಚ್ಚರಿಸಿದ್ದಾರೆ, ಸಾಹಿತ್ಯ ಪ್ರಕಾರಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ಸೂಚಿಸಿದ್ದಾರೆ, ತಾವು ಬರೆದ ವಿಮರ್ಶೆಯ ಸಿದ್ಧಾಂತಗಳಿಗೆ ವಿವರಣೆಗಳನ್ನು ನೀಡಿದ್ದಾರೆ.

ಶ್ರೀ ಗೋಕಾಕರು ಮೊದಲಿನಿಂದಲೂ ಸಮನ್ವಯಾಚಾರ್ಯರು. ಈ ಸಮನ್ವಯ ದೃಷ್ಟಿ ಅವರು ಗೆಳೆಯರ ಗುಂಪಿನಲ್ಲಿರುವಾಗಲೇ ಬೀಜರೂಪವಾಗಿದ್ದು ಇಂದು ಫಲವನ್ನು ಇತ್ತಿದೆ. ಕನ್ನಡಿಗನು ವಿಶ್ವಮಾನವನಾಗಬೇಕೆಂಬ ಹಂಬಲ ಪಡೆದವರಿವರು. ಯೋಗ-ಭೋಗಗಳಲ್ಲಿ ರತ್ನಾಕರವರ್ಣಿ ಸಮನ್ವಯ ಪಡೆದಂತೆ ಮಾನವತಾವಾದದ ಜಡತೆ ಹಾಗೂ ಆಧ್ಯಾತ್ಮಿಕತೆಯ ದುರೂಹತೆಯಲ್ಲಿ ಸಮನ್ವಯವನ್ನು ಕಾಣಬಯಸಿದ್ದಾರೆ. "ಅವರ 'ಸಮನ್ವಯ' ದೃಷ್ಟಿ ಕ್ರಿಯಾಶೀಲ ಅಂದೋಲನವಾಗದಷ್ಟು ಸರ್ವಗ್ರಾಹಿಯಾಗಿದೆ." ಶ್ರೀ ಗೋಕಾಕರ ಪ್ರಕಾರ—"ಮೂಲತಃ 'ಸಮನ್ವಯ' ಸಾಹಿತ್ಯ ನಿರ್ಮಾಣದ ಅಂದೋಲನವಲ್ಲ. ಇದೊಂದು ವಿಮರ್ಶೆಯ ಅಂದೋಲನ. ಸಮನ್ವಯ ಸಮಿತಿಯಲ್ಲಿ ಆಧುನಿಕರಿದ್ದಾರೆ, ಪ್ರಗತಿಶೀಲರಿದ್ದಾರೆ, ನವ್ಯರಿದ್ದಾರೆ. ಮಾರ್ಗ, ತಂತ್ರ,

ಜೀವನ ದೃಷ್ಟಿ ಮೊದಲಾದ ಎಲ್ಲ ವಿಷಯಗಳಲ್ಲಿಯೂ ಕವಿಗಾಗಲಿ ಸಾಹಿತಿಗಾಗಲಿ ಪೂರ್ಣ ಸ್ವಾತಂತ್ರ್ಯವಿದೆ. ಅಂತೇ ಯಾವುದಾದರೊಂದು ಸಾಹಿತ್ಯ ಮಾರ್ಗ ಇಲ್ಲವೆ ಜೀವನ ದೃಷ್ಟಿಯ ಪುರಸ್ಕಾರಕ್ಕಾಗಿ 'ಸಮನ್ವಯ' ಹುಟ್ಟಿಲ್ಲ. ಎಲ್ಲ ಮಾರ್ಗಗಳಲ್ಲಿಯ ಸಾಹಿತ್ಯವನ್ನೂ ಅದು ಸ್ವಾಗತಿಸಿದೆ" ಎಂದು ತಮ್ಮ ಸಮನ್ವಯ ಭಾಷ್ಯದ ವಿಚಾರ ವನ್ನು ಎತ್ತಿ ಹಿಡಿದು ಸಮರ್ಥನೆ ನೀಡಿದ್ದಾರೆ. ಶ್ರೀ ಗೋಕಾಕರ 'ಸಮನ್ವಯ' ಸಾಹಿತ್ಯ ಪತ್ರಿಕೆಯು ಅವರ ಸಮನ್ವಯ ದೃಷ್ಟಿಯನ್ನು ಪ್ರತಿನಿಧಿಸುವ ಸಫಲ ಸಾಧನವಾಗಿದೆ.

ಕಾವ್ಯ

ಶ್ರೀ ಗೋಕಾಕರು ಬರೆದ ಮುನ್ನುಡಿಗಳಲ್ಲಿ ಕಾವ್ಯಸಂಗ್ರಹಗಳಿಗೆ ಬರೆದವುಗಳೇ ಬಹು ಸಂಖ್ಯೆಯಲ್ಲಿವೆ. ಕನ್ನಡ ಸಾಹಿತ್ಯದಲ್ಲಿ ೧೯೨೦ ರ ಸುಮಾರಿಗೆ ನವೋದಯ ಕಾಲವು ಪ್ರಾರಂಭವಾಯಿತು. ೧೯ನೆಯ ಶತಮಾನದಲ್ಲಿ ಪ್ರಸಿದ್ಧರಾಗಿದ್ದ ಆಂಗ್ಲ ಭಾಷೆಯ ರೊಮ್ಯಾಂಟಿಕ್ ಕವಿಗಳಿಂದ ಸ್ಫೂರ್ತಿ ಪಡೆದು ಕನ್ನಡದಲ್ಲಿಯ ರಸ ಸಂಪ್ರದಾಯ ಪ್ರಾರಂಭವಾಯಿತು. ಬಿ. ಎಂ. ಶ್ರೀ, ಗೋವಿಂದಪೈ, ಬೇಂದ್ರೆ, ಡಿ.ವಿ.ಜಿ, ಶ್ರೀನಿವಾಸ, ಪುಟ್ಟಪ್ಪ ಮುಂತಾದ ಕವಿಗಳು ರಮ್ಯಕಾವ್ಯವನ್ನು ಸೃಷ್ಟಿಸಿದಾಗ ಗೋಕಾಕರೂ ರಮ್ಯಕಾವ್ಯ ಬರೆದರು. ಅವರು ಬರೆದ 'ಸಮುದ್ರಗೀತಗಳ'ಲ್ಲಿಯ ಮುಕ್ತ ಛಂದವು (೧೯೩೭-೩೮) ನವ್ಯಕಾವ್ಯಕ್ಕೆ ಪೂರ್ವಪೀಠಿಕೆಯಾಗಿ ಬಂದಿತು. ೧೯೫೦ ರಲ್ಲಿ ಮುಂಬೈಯಲ್ಲಿ ನಡೆದ ಸಾಹಿತ್ಯ ಸಮ್ಮೇಲನದ ಕವಿಗೋಷ್ಠಿಯ ಅಧ್ಯಕ್ಷಸ್ಥಾನದಿಂದ ನವ್ಯಕಾವ್ಯದ ನಾಂದಿಯನ್ನು ಹಾಡಿದರು. 'ನವ್ಯಕವಿತೆಗಳು' ಎಂಬ ತಮ್ಮ ಕವನ ಸಂಗ್ರಹಕ್ಕೆ ಬರೆದ ಮುನ್ನುಡಿಯಲ್ಲಿ ನವ್ಯತೆಯ ಲಕ್ಷಣಗಳ ಬಗ್ಗೆ ಬರೆದರು. ಈ ನವ್ಯ ಸಂಪ್ರದಾಯಕ್ಕೂ ಐರೋಪ್ಯ ನವ್ಯಕಾವ್ಯವೇ ಸ್ಫೂರ್ತಿಯ ಸೆಲೆಯಾಗಿತ್ತು. ೧೯೫೭ರಲ್ಲಿ ನವ್ಯಕಾವ್ಯ ಬರೆಯುವ ಕವಿಗಳ ಪ್ರಾತಿನಿಧಿಕ ಕವನಗಳನ್ನು ಸಂಪಾದಿಸಿ, 'ನವ್ಯಧ್ವನಿ' ಎಂಬ ಸಂಗ್ರಹವನ್ನು ಪ್ರಕಟಿಸಿದರು. ಈ ಸಂಗ್ರಹಕ್ಕೆ ಬರೆದ ಸುದೀರ್ಘ ಮುನ್ನುಡಿ ಯಲ್ಲಿ ನವ್ಯಕಾವ್ಯದ ಹಿನ್ನೆಲೆಯನ್ನು ವಿಶ್ಲೇಷಿಸಿ ಕನ್ನಡದಲ್ಲಿ ಅದು ಪಡೆದ ರೂಪದ ಬಗ್ಗೆ ವಿವರಿಸಿದ್ದಾರೆ. ಇವರ ಪ್ರಕಾರ "ಅನೇಕ ತಂತ್ರಗಳಂತೆ ನವ್ಯತೆಯೂ ಒಂದು ತಂತ್ರ, ಒಂದು ವಿಧಾನ. ಯಾವ ಕವಿಯೂ ಅದನ್ನು ಬಳಸಿಕೊಳ್ಳಬಹುದು." ಆದರೆ ಈ ಮಾತನ್ನು ಇನ್ನು ಕೆಲ ನವ್ಯ ಕವಿಗಳು ಒಪ್ಪುವದಿಲ್ಲ. ಅಡಿಗ, ಬಿ. ಸಿ. ರಾಮಚಂದ್ರಶರ್ಮ ಮೊದಲಾದ ನವ್ಯ ಕವಿಗಳು ಗೋಕಾಕ ಮತ್ತು ಇತರ ಕವಿ ಗಳನ್ನೂ ನವ್ಯಕವಿಗಳೆಂದು ಒಪ್ಪುವದಿಲ್ಲ. ಹೀಗಾಗಿ ನವ್ಯರಲ್ಲಿಯೇ ಎರಡು ಗುಂಪುಗಳಾ ಗಿವೆ. ವಿನಾಯಕ, ಜಿ. ಎಸ್. ಶಿವರುದ್ರಪ್ಪ, ಚೆನ್ನವೀರ ಕಣವಿ ಮುಂತಾದವರು ನವ್ಯರು; ಅಡಿಗ, ಶರ್ಮ, ಲಂಕೇಶ ಮುಂತಾದವರು ಅತಿನವ್ಯರು.

ಅತಿನವ್ಯರ ಪ್ರಕಾರ ಸ್ವಾತಂತ್ರ್ಯ ಪೂರ್ವದ ಕಾಲದಲ್ಲಿ ಆಧ್ಯಾತ್ಮಿಕತೆ ಸಾಹಿತ್ಯದಲ್ಲಿ ಅಪ್ರಮಾಣಿಕವಾಗಿ ವ್ಯಕ್ತವಾಗುತ್ತಿತ್ತು. ಕಾವ್ಯವು ನೆಲದ್ದಾಗಬೇಕೆಂಬ ಒತ್ತಡ ಆಗ ಪ್ರಾರಂಭವಾಯಿತು. ಅನುಭವದ ನೈಜತೆ ಅಂದಿನ ಕವಿಗಳ ಕಾವ್ಯದಲ್ಲಿ ಇರಲಿಲ್ಲವಾದ್ದರಿಂದ ಕವಿಗಳು ಅಪ್ರಾಮಾಣಿಕತೆಗೆ, ಆತ್ಮವಂಚನೆಗೆ ಗುರಿಯಾಗುತ್ತಿದ್ದರೆಂದು ಹೇಳಲಾಗುತ್ತಿದೆ. ಸ್ವಾತಂತ್ರ್ಯ ದೊರೆತ ಮೇಲೆ ಮೊದಲಿದ್ದ ಆದರ್ಶದ ಭ್ರಮೆ ನಿರಸನಗೊಂಡಾಗ ಶೂನ್ಯತೆ-ನಿರಾಸೆ ಆವರಿಸಿತು. ಮೊದಲನೆಯ ಮಹಾಯುದ್ಧದ ತರುವಾಯದ ಇಂಗ್ಲಂಡದ ಸ್ಥಿತಿಯೇ ಭಾರತದಲ್ಲೂ ಬಂತು. ಇಲ್ಲಿಯ ನವ್ಯಕವಿಗಳೂ ಆಂಗ್ಲ ಕವಿಗಳಾದ ಟಿ. ಎಸ್. ಎಲಿಯಟ್, ಸಿ. ಡೇ. ಲೂಯಿಸ್, ಆಡೆನ್ ಮುಂತಾದ ಕವಿಗಳ ಮಾರ್ಗವನ್ನು ಅನುಸರಿಸತೊಡಗಿದರು. ಸ್ವಾತಂತ್ರ್ಯೋತ್ತರ ನಿರಾಶೆ ಬರಿ ಅತಿನವ್ಯರಿಗೆ ಮೀಸಲಾದ ಅನುಭವವಾಗಿರಲಿಲ್ಲ ಎಂದು ಗೋಕಾಕರು ಪ್ರತಿಪಾದಿಸುತ್ತಾರೆ. "ಸಮತಾವಾದಿ, ಮಾನವತಾವಾದಿ, ಅಧ್ಯಾತ್ಮವಾದಿ ಎಲ್ಲರೂ ತಮ್ಮ ತಮ್ಮ ರೀತಿಯಲ್ಲಿ ಈ ನಿರಾಶೆ ಆಕ್ರೋಶಗಳ ದಶಕದೊಳಗಿಂದ ಹಾಯ್ದು ಹೋದರು. ತಮ್ಮ ತಮ್ಮ ರೀತಿಯಲ್ಲಿ ಪ್ರತಿಸ್ಪಂದನಗಳನ್ನು ಅಭಿವ್ಯಕ್ತಗೊಳಿಸಿದರು." ಈ ಕಾರಣದಿಂದ ಶ್ರೀ ಗೋಕಾಕರು ಹೇಳುತ್ತಾರೆ—"ವಾಸ್ತವಿಕ ಇಲ್ಲವೆ ಅವಾಸ್ತವಿಕ ಪ್ರಜ್ಞೆಯು 'ನವ್ಯ'ವೆಂದು ನಾವು ಗೆರೆಯೆಳೆಯಲಾರೆವು. ಪ್ರಜ್ಞೆಯು ಪರಂಪರಾನುಗತಿಕವಾಗಬಹುದು; ಇಲ್ಲವೆ ನವ್ಯ ಅಥವಾ ನವೀನವಾಗಬಹುದು. ಇಲ್ಲಿ ನಾನು 'ನವ್ಯ' ಶಬ್ದಕ್ಕೆ ಕಲ್ಪಿಸಿದ ಎರಡು ಅರ್ಥಗಳನ್ನು ೧೯೫೦ ರ ಕಾವ್ಯಗೋಷ್ಠಿಯ ಭಾಷಣದಲ್ಲಿ ಬಳಸಿಕೊಂಡಿದ್ದೆ. ಬಹಳವಾದರೆ ನಾವಿಷ್ಟು ಹೇಳಬಹುದು: ಪರಂಪರಾನುಗತಿಕ ಪ್ರಜ್ಞೆಗಿಂತ ನವೀನ ಪ್ರಜ್ಞೆಯೇ ನವ್ಯಕಾವ್ಯದಲ್ಲಿ ವಾಡಿಕೆಯಾಗಿ ಮೂಡಬಲ್ಲದು. ಇಂದಿನ ಭಾರತೀಯ ಪ್ರಜ್ಞೆ ಹೊಸತು ನಿಜ; ಆದರೆ ಅದು ಬರಿ ನವ್ಯಕಾವ್ಯದಲ್ಲಿ ಮೂಡಬೇಕಾಗಿಲ್ಲ." ('ನವ್ಯಧ್ವನಿ' ಮುನ್ನುಡಿ). "ನವ್ಯ ಕಾವ್ಯವು ಒಂದು ವಿಧಾನ, ಒಂದು ತಂತ್ರ. ಯಾವ ಯುಗದಲ್ಲಿಯೂ ಅದು ಬಳಕೆಗೆ ಬರಬಲ್ಲದು. ನಿರಾಶೆ ತಳೆದಿದ್ದ ನವ್ಯ ಕವಿಯೇ ಮುಂದೆ ಟಿ. ಎಸ್. ಎಲಿಯಟ್‌ನಂತೆ ಆಶಾವಾದಿಯಾಗಬಲ್ಲ" ಎನ್ನುತ್ತಾರೆ.

ಒಬ್ಬ ವಿಮರ್ಶಕರು ಕನ್ನಡದಲ್ಲಿಯ ನವ್ಯಕಾವ್ಯದ ಬಗ್ಗೆ ಬರೆಯುತ್ತ, ಗೋಕಾಕರ ಪ್ರಯೋಗಪ್ರಿಯತೆ ಹಾಗೂ ಅಡಿಗರ ವೈಯಕ್ತಿಕ ಆಂತರಿಕ ಅವಶ್ಯಕತೆಯ ಫಲವಾಗಿ ಅದು ಕನ್ನಡದಲ್ಲಿ ಪ್ರಾರಂಭವಾಗಿದೆ ಎನ್ನುತ್ತಾರೆ. ಆದರೆ ಗೋಕಾಕರ ಕವನ ಸಂಗ್ರಹಗಳಾದ 'ಹಿಗ್ಗು', 'ಅಭ್ಯುದಯ', 'ಬಾಳದೇಗುಲದಲ್ಲಿ' ಮುಂತಾದ ಕೃತಿಗಳಲ್ಲಿ ಹೊಸ ಬಗೆಯ ಅಭಿವ್ಯಕ್ತಿಗಾಗಿ ಇದ್ದ ಹವಣಿಕೆ ಕಾಣುತ್ತದೆ. ಬರಿ ಪ್ರಾಯೋಗಿಕತೆಯಿಂದ ಹೊಸ ಘೋಷಣೆ ಮಾಡುವದು ಸಾಧ್ಯವಾಗುವದಿಲ್ಲ. ಆಂತರಿಕ ಆವಶ್ಯಕತೆಯೂ ಬೇಕಾಗುತ್ತದೆ. ಗೋಕಾಕರು ನವ್ಯಮಾರ್ಗಕ್ಕಷ್ಟೇ ಅಂಟಿಕೊಂಡಿಲ್ಲ. ಇದರ ಬಗ್ಗೆ ಗೋಕಾಕರೇ

ಬರೆದಿದ್ದಾರೆ: "ನನ್ನ ಮಾರ್ಗವೊಂದಕ್ಕೇ ಅಂಟಿಕೊಳ್ಳುವುದು ಸಂಕುಚಿತ ರೀತಿಯೆಂದು ನನ್ನ ಅನುಭವ ಹೇಳುತ್ತದೆ. ಕೆಲವು ವರ್ಷಗಳ ಹಿಂದೆ ಕಾಶ್ಮೀರಕ್ಕೆ ಹೋದಾಗ 'ಓಡಿ ಬಾ ಕಾಶ್ಮೀರಕೆ' ಎಂಬ ಭಾವಗೀತ ಕಾರಂಜಿ ಪುಟಿದಂತೆ ಪುಟಿದು ಬಂತು. 'ಇಂದಿಲ್ಲ ನಾಳೆ'ಯ ಸಂಗ್ರಹದಲ್ಲಿ ಕೆಲವು ಭಾವಗೀತಗಳಿವೆ. ಸೂಕ್ಷ್ಮ-ಜಟಿಲವಾದ ಅನುಭವ, ಸಾಮಾಜಿಕ ಜೀವನದ ಝುರಡಿಯೊಳಗಿಂದ ಹಾಯ್ದುಬಂದ ಅನುಭವ, ಬುದ್ಧಿಯೊಡನೆ ಗುದ್ದಾಡಿ ತನ್ನ ಸಮರ್ಥನೆಯನ್ನು ಕಾಯ್ದುಕೊಂಡ ಅನುಭವ: ಇದೆಲ್ಲ ಸಾಮಾನ್ಯವಾಗಿ ನವ್ಯರಚನೆಯಲ್ಲಿ ಅಭಿವ್ಯಕ್ತಿಯನ್ನು ಪಡೆಯುತ್ತದೆ. ಆದರೆ ಹಕ್ಕಿಯಂತೆ ನೆಗೆದಾಡುತ್ತ ಬರುವ ಭಾವನಾ ಲಹರಿ, ಕಾರಂಜಿಯಂತೆ ಪುಟಿದು ಬರುವ ಹೃದಯದ ಉದ್ರೇಕ—ಇವು ಒಮ್ಮೊಮ್ಮೆ ನವ್ಯವಾಗಬಹುದು; ಒಮ್ಮೊಮ್ಮೆ ಭಾವಗೀತ ಇಲ್ಲವೆ ಉಳಿದ ಯಾವುದಾದರೊಂದು ಕಾವ್ಯಪ್ರಕಾರದ ದ್ವಾರಾ ಬರಬಹುದು. ಎಲ್ಲ ವೈವಿಧ್ಯವೂ ಅಭಿವ್ಯಕ್ತಿಗಾಗಿ ತೆರೆದಿದೆ. ಮುಖ್ಯವಾದದ್ದು ಅನುಭವ, ಕಾವ್ಯಾಭಿವ್ಯಕ್ತಿ. ಮಾರ್ಗ ಇಲ್ಲವೆ ಪಂಥ ಆನುಷಂಗಿಕವಾಗುತ್ತದೆ." ಇಲ್ಲಿ ಕೂಡ ಶ್ರೀ ಗೋಕಾಕರ ಸಮನ್ವಯ ದೃಷ್ಟಿ ಎದ್ದು ಕಾಣುತ್ತದೆ.

ಶ್ರೀ ಗೋಕಾಕರು ಹಿರಿಯ ಹಾಗೂ ಕಿರಿಯ ಕವಿಗಳ ಕೃತಿಗಳಿಗೆ ಮುನ್ನುಡಿ ಬರೆದಿದ್ದಾರೆ. ಪ್ರತಿಯೊಂದು ಮುನ್ನುಡಿಯಲ್ಲಿಯೂ ಲೇಖಕನ ಬಗ್ಗೆ ಕೆಲ ಆತ್ಮೀಯ ನುಡಿಗಳನ್ನು ಬರೆಯುತ್ತಾರೆ. ರಸಋಷಿ ಬೇಂದ್ರೆಯವರ 'ಅರಳು-ಮರಳು'ಗೆ ಮುನ್ನುಡಿ ಬರೆಯುತ್ತ "ಬೇಂದ್ರೆಯವರು ಸೂತ್ರಧಾರನಾದ ಬಾಲಕ. ಅಂಬಿಕಾತನಯದತ್ತ ಅಂತರಿಕ್ಷದಲ್ಲಿ ತೂಗಾಡುವ ಗಾಳಿಪಟ" ಎಂದಿದ್ದಾರೆ. ಶ್ರೀ ಕೊಟ್ಟಲಿಗಿಯವರ ('ಪಿಸಾಸೆ') ಬಗ್ಗೆ ಬರೆಯುತ್ತ "ಎಂಜಿನಿಯರಿಂಗ ಖಾತೆಯ ದೈನಂದಿನ ಜೀವನವು ಸಹ ಅವರ ಆದರ್ಶಪ್ರಿಯತೆ, ಭಾವಸೂಕ್ಷ್ಮತೆಯನ್ನು ತಗ್ಗಿಸಿಲ್ಲ. ಗರ್ಭಗುಡಿಯಲ್ಲಿಯ ನಂದಾದೀಪದಂತೆ ರಾಮಚಂದ್ರರಾಯರು ಕಾವ್ಯ-ಜೀವನಗಳಲ್ಲಿ ಈ ಗುಣವನ್ನು ಕಾಯ್ದುಕೊಂಡು ಬಂದಿದ್ದಾರೆ" ಎನ್ನುತ್ತಾರೆ. ಶ್ರೀ ಗಂಗಾಧರ ಚಿತ್ತಾಳರ ಬಗ್ಗೆ ('ಮನುಕುಲದ ಹಾಡು') ಬರೆಯುತ್ತ "ನಾನು ವಿಲಿಂಗಡನ್ ಕಾಲೇಜಿನಲ್ಲಿದ್ದಾಗ ಅನೇಕ ಸಾಹಿತಿ ತರುಣರ ಸಹವಾಸದ ಸೌಭಾಗ್ಯ ನನಗೊದಗಿತ್ತು. ಅದು 'ವರುಣ ಕುಂಜ'ದ ರೂಪತಾಳಿತು. ವ್ಹಿ. ಜಿ. ಭಟ್ಟ, ಸು. ರಂ. ಎಕ್ಕುಂಡಿ, ಆರ್. ವ್ಹಿ. ಕುಲಕರ್ಣಿ (ರಾ. ಕು.), ವರದರಾಜ ಹುಯಿಲಗೋಳ ಇವರೇ ಮೊದಲಾದ ಸ್ನೇಹಿತರು ಕೂಡಿದ್ದರು. ಗಂಗಾಧರ ಚಿತ್ತಾಳರೂ ವರುಣ ಕುಂಜದೊಡನೆ ಒಂದು ವರ್ಷ ಕಳೆದರು" ಎಂದಿದ್ದಾರೆ. ಕರ್ನಾಟಕ ಕಾಲೇಜಿನಲ್ಲಿದ್ದಾಗ 'ಕಮಲ ಮಂಡಲ'ವೆಂಬ ವಿದ್ಯಾರ್ಥಿಗಳ ಗುಂಪಿನಲ್ಲಿದ್ದ ಸಾಹಿತಿಗಳಾದ ಜಿನದತ್ತ ದೇಸಾಯಿ, ಚಂದ್ರಶೇಖರ ಪಾಟೀಲ, ಗಿರಡ್ಡಿ ಗೋವಿಂದರಾಜ, ಆರ್. ವ್ಹಿ. ಹೊರಡಿ ಮುಂತಾದ ತರುಣ ಕವಿಗಳ ಕೃತಿಗಳಿಗೆ ('ನೀಲಾಂಜನ', 'ಬಾನುಲಿ', 'ರಸವಂತಿ',

'ನಕ್ಷತ್ರ') ಮುನ್ನುಡಿ ಬರೆವಾಗ ಇದೇ ಆತ್ಮೀಯತೆ ಇದೆ. ಹೊತ್ತಿಗೆ ಬಳಗದ ಕವಿಗಳಾದ 'ಸಾಕ್ಷಿ' ('ಮಂತ್ರ ಪುಷ್ಪ'), ಹಾಗೂ 'ಜೀವಿ' ('ಮಧುಸಂಚಯ')ಗಳ ಬಗ್ಗೆಯೂ ಆತ್ಮೀಯತೆ ವ್ಯಕ್ತಪಡಿಸಿದ್ದಾರೆ.

ಕವಿಗಳು ರಸ ಸಂಪ್ರದಾಯಕ್ಕೆ ಸೇರಿರಲಿ ಅಥವಾ ನವ್ಯರ ಗುಂಪಿಗೇ ಸೇರಿರಲಿ, ಇಲ್ಲವೆ ಎರಡರ ಮಧ್ಯ ಸಂಕ್ರಮಣ ಅವಸ್ಥೆಯನ್ನೇ ತಾಳಿರಲಿ ಗೋಕಾಕರು ಅವರ ಕಾವ್ಯದಲ್ಲಿಯ ಗುಣಾವಗುಣಗಳನ್ನು ಗುರುತಿಸುತ್ತಾರೆ, ತೂಗುತ್ತಾರೆ. ಬೇಂದ್ರೆಯವರ ಕಾವ್ಯದ ಆಳ ಹಾಗೂ ಎತ್ತರ ತಮಗಿನ್ನೂ ನಿಲುಕಿಲ್ಲವೆಂಬ ಪ್ರಾಮಾಣಿಕ ನುಡಿಯೂ ಅವರಿಂದ ಬರುತ್ತದೆ—"ಈಗ ಮೂವತ್ತು ವರ್ಷಗಳಿಗೆ ಮೇಲ್ಪಟ್ಟು ಅವರ ಕಾವ್ಯದ ಆಳದಲ್ಲಿ ಮಿಂದಿದ್ದರೂ ಅದರ ಗಭೀರತೆ ಇನ್ನೂ ಹೆಚ್ಚುತ್ತಿದೆ. ಅದರ ಆಳವನ್ನೆಲ್ಲ ನಾನು ಅಳೆದಿದ್ದೇನೆಂದು ಹೇಳಲಾಗುವುದಿಲ್ಲ. ಅದರ ವಿಸ್ತಾರಗಳನ್ನೆಲ್ಲ ವಿಚಿಕಿತ್ಸಿದ್ದೇನೆಂದು ನಾನು ತಿಳಿಯಲಾರೆ. ಏಕೆಂದರೆ ಆಳದ ಅರಿವು ನನ್ನಲ್ಲಿ ಹೆಚ್ಚಾದಂತೆ ಅವರ ಕಾವ್ಯದ ಆಳ ಇನ್ನಿಷ್ಟು ಆಳವಾಗತೊಡಗಿದೆ, ವಿಸ್ತಾರ ಇನ್ನೂ ವಿಸ್ತೃತವಾಗ ಹತ್ತಿದೆ"—ಎನ್ನುತ್ತಾರೆ. ಪ್ರತಿಭಾವಂತನಾದ ಕವಿ ಯಾವಾಗಲೂ ಪ್ರಯೋಗಪ್ರಿಯ, ಪ್ರಗತಿಪರ. ಮೊದಲು ಕಾಣದಿದ್ದ ಸೊಬಗಿನ ಸಾಹಸಕ್ಕೆ ಅವನು ಕೈಹಾಕುತ್ತಾನೆ. ಅನೇಕ ನವೀನ ಕಾವ್ಯಮುಖಗಳಲ್ಲಿ ಈ ಪ್ರಗತಿಯು ಕಾಣಿಸಿಕೊಳ್ಳುತ್ತದೆ. ಬೇಂದ್ರೆಯವರ 'ಅರಳು-ಮರಳಿ'ನಲ್ಲಿ ಮರಳುವಿಕೆಯನ್ನು ಮೀರಿನಿಂತ ಅರಳುಗಳ ಚೆಂದವನ್ನು ನಾವೀಗ ನೋಡಬೇಕಾಗಿದೆ....'ಮಧುವಾತಾ ಋತಾಯತೇ' ಮೊದಲಾದ ಕವಿತೆಗಳನ್ನು ಓದುವದೆಂದರೆ ಒಂದು ಆಳದಿಂದ ಅದರ ಕೆಳಗಿನಾಳಕ್ಕೆ ಹೋಗುವಂತೆ ನಮಗೆ ಆಭಾಸವಾಗುತ್ತದೆ. ಶಬ್ದಗಳು ಚಿನ್ನದ ಇಟ್ಟಿಗೆಗಳಾಗುವಂತೆ ರಚನಾ ಕ್ರಮ ಅದ್ಭುತ ವಾಸ್ತುಶಿಲ್ಪದ ಒಂದು ಮಂದಿರವಾಗುತ್ತದೆ. ಇದು ಹೊಳೆಯದೆ ಕಾವ್ಯದ ಪೂರ್ಣರಸವಂತಿಕೆ ನಮ್ಮದಾಗಲಾರದು. 'ಮಧುವಾತಾ'ದ ಮೊದಲನೆಯ ಭಾಗದಲ್ಲಿ ಕಾವ್ಯದ ಆದರ್ಶವನ್ನು ಕುರಿತು ಅವರು ಮಾತಾಡುತ್ತಾರೆ—"ಅದ್ಭುತದ ಉದ್ಭವ, ಅದನ್ನು ಭಾಷಾಂತರಿಸುವ ಭಾವ, ಹೊಸ ಒಸಗೆಗನುವಾಗಿ ವೇಷಾಂತರಿಸುವ ಶೈಲಿ, ಕರ್ಮನಟಿಯ ಪದಹತಿಗೇಳುವ ಛಂದದ ಬಳ್ಳಿ—ಹೀಗಿದೆ ಕಾವ್ಯದ ಉಗಮ ಹಾಗೂ ವಿಕಾಸ."

ಕಾವ್ಯಾನಂದರ 'ಮೊದಲು ಮಾನವನಾಗು' ಸಂಗ್ರಹಕ್ಕೆ ಮುನ್ನುಡಿ ಬರೆಯುತ್ತ, "ರಸವಂತಿಕೆಯಿಂದ ಕವನಗಳು ಹೃದಯಸ್ಪರ್ಶಿಯಾಗುತ್ತವೆ. ಈ ಕವನಗಳಲ್ಲಿ ರಸವಂತಿಕೆ ಇದೆ. ಅವುಗಳ ಉಡಿಗೆ-ತೊಡಿಗೆ ಆಧುನಿಕ, ನವ್ಯವಲ್ಲ. ಆದರೆ ಎಲ್ಲರ ವೇಷಭೂಷಣ ನವ್ಯವೇ ಇರಬೇಕೆಂದಿಲ್ಲ" ಎಂದಿದ್ದಾರೆ. ಹೇಮಂತರ 'ಗೋಪುರ'ದ ಬಗ್ಗೆ ಬರೆಯುತ್ತ, "ಇದು ಉದಾತ್ತ ಕಾವ್ಯ. ಅದರ ವಸ್ತುವಿನಲ್ಲಿ ಒಂದು ಸಾರ್ವತ್ರಿಕತೆ ಇದೆ. ಅದರ ಅಭಿವ್ಯಕ್ತಿಯಲ್ಲಿ ಇಂದಿನ ಸುಸಂಸ್ಕೃತ—ಸತ್ಯಶೋಧಕ ಜೀವದ ಅನುಕಂಪ

ದಿದೆ. ಸರಳಸರಳ ರೀತಿಯಲ್ಲಿ ಮೂಡಣ ಪದಪಣಗಳಿಂದ ತಂದ ಪ್ರತಿಮಾಲಂಕಾರದ ಜೆಡಗಿವೆ"—ಎಂದಿದ್ದಾರೆ. ಚಿತ್ತಾಲರ ಕಾವ್ಯದ ಬಗ್ಗೆ ಬರೆಯುತ್ತ, ('ಮನುಕುಲದ ಹಾಡು') "ಇವರ ಕಾವ್ಯ ಶೈಲಿಯಲ್ಲಿ ಒಂದು ವಿಶೇಷಗುಣವಿದೆ. ಬಳಕೆಗನ್ನಡದಲ್ಲಿ ಬರೆ ದರೂ ಶಬ್ದಗಳನ್ನು ಇವರು ದ್ರಾಕ್ಷಿಯಂತೆ ಸವಿಯಬಲ್ಲರು, ಪೆಪ್ಪರಮೆಂಟನಂತೆ ಎಲ್ಲ ಸವಿ ತೀರುವತನಕ ಬಾಯಿಯಲ್ಲಿ ಆಡಿಸಬಲ್ಲರು....ಅನುಭವದ ನಿರೂಪಣೆಯಲ್ಲಿ ಚಿತ್ತಾ ಲರು ಪ್ರಾಮಾಣಿಕತೆ, ಉತ್ಕಟತೆ ಹಾಗೂ ವಿವರಪೂರ್ಣತೆಯನ್ನು ಕೂಡಿಯೇ ಸಾಧಿಸಿ ದ್ದಾರೆ. ಅನುಭವವನ್ನು ದಾಟಿ ಒಂದು ಹೆಜ್ಜೆಯನ್ನು ಕೂಡಾ ಅವರು ಇಡುವದಿಲ್ಲ." ಎನ್ನುತ್ತಾರೆ. ಎಕ್ಕುಂಡಿಯವರ 'ಸಂತಾನ'ದ ಬಗ್ಗೆ ಬರೆಯುತ್ತ, "ಭಾವಗೀತದ ವ್ಯಂಜನ ಮಾಯೆ ಈ ಕವನಗಳನ್ನೆಲ್ಲ ಮೋಹಕವಾಗಿಸುತ್ತದೆ. ನಾಲ್ಕು ಚರಣಗಳನ್ನೋ, ಆರು ಕವಡೆಗಳನ್ನೋ ಒಗೆದು ಆಟದಲ್ಲಿ ತಲ್ಲೀನತೆ ತರುವಂತೆ, ನಾಲ್ಕೆಂಟು ಪ್ರತಿಮೆಗಳನ್ನು ಬಳಸಿ ಕಾವ್ಯ ಸಮಾಧಿಯನ್ನು ಕವಿಯು ಪ್ರೇರಿಸುತ್ತಾನೆ. ಇದೂ ಒಂದು ರೊಮ್ಯಾಂಟಿಕ್ ಕಾವ್ಯದ ಕಲಾವಿಧಾನ" ಎನ್ನುತ್ತಾರೆ. ಶ್ರೀ ಕೊಟ್ಟಲಗಿಯವರ 'ಪಿಪಾಸೆ'ಯಲ್ಲಿ, "ಸುಸಂಸ್ಕೃತ ಮನಸ್ಸಿನ ಒಂದು ಪ್ರಧಾನ ಲಕ್ಷಣವೆಂದರೆ ಈ ಅಸಮಾಧಾನ....ಆದರೆ ಕೃಷ್ಣಪಕ್ಷದ ಗರ್ಭದಲ್ಲಿಯೇ ಶುಕ್ಲಪಕ್ಷವು ಬೀಜರೂಪದಲ್ಲಿರುವಂತೆ ಈ ವಿರಸದಲ್ಲಿಯೇ ರಸದ ಜನನವಿದೆ" ಎನ್ನುತ್ತಾರೆ. ಚಂದ್ರಶೇಖರ ಪಾಟೀಲರ ಶೈಲಿಯನ್ನು ಕಂಡು ವಿನಾಯಕರಿಗೆ ಕಣವಿಯವರ ಕಾವ್ಯ ನೆನಪಾಗುತ್ತದೆ. ಜಿನದತ್ತರ ಕಾವ್ಯದಲ್ಲಿಯ 'ಒಂದೊಂದೇ ಸಾಲನ್ನು ಒಂದೊಂದು ಬಾಣದಂತೆ ತೂರಬಲ್ಲ' ಶಕ್ತಿಯನ್ನು ಕಂಡು ಎಕ್ಕುಂಡಿಯವರ ಕಾವ್ಯ ನೆನೆಯುತ್ತಾರೆ. ಹೊರಡಿಯವರ 'ನಕ್ಷತ್ರ'ಕ್ಕೆ ಅಕ್ಷತೆ ಹಾಕುತ್ತ "ಇಲ್ಲಿಯ ಉಕ್ತಿಗಳಲ್ಲಿ ವ್ಯಂಜನಕ್ಕಿಂತ ಸ್ವಭಾವೋಕ್ತಿ ಹೆಚ್ಚು....ಸಂಯಮಕ್ಕಿಂತ ಉತ್ಸಾಹಕ್ಕೆ ಇಲ್ಲಿಯ ರೀತಿಯಲ್ಲಿ ಆಸ್ಪದ ಸಿಕ್ಕಿದೆ"—ಎನ್ನುತ್ತಾರೆ. ವ್ಹಿ. ಜಿ. ಭಟ್ಟರ 'ತುಂಟನ ಪದಗಳ' ಬಗ್ಗೆ ಬರೆಯುತ್ತ "ಎಳೆತನದ ಬೆರಗು, ಬಿನ್ನಾಣ, ವಿನೋದ ಪ್ರಿಯತೆ, ಕಲ್ಪನಾ ವೈಚಿತ್ರ್ಯ—ಇವು ಭಟ್ಟರ ಸಹಜ ಸಿದ್ಧ ಗುಣಗಳಾಗಿವೆ." ಎನ್ನು ತ್ತಾರೆ. ಅರವಿಂದ ನಾಡಕರ್ಣಿಯವರ 'ಕಾವ್ಯಾರ್ಪಣ'ದ ಬಗ್ಗೆ ಬರೆಯುತ್ತ "ಇವರ ಕವಿತೆಗಳಲ್ಲಿ ರೊಮ್ಯಾಂಟಿಕ್ ಶೈಲಿಯ ಹಾಗೂ ನವ್ಯ ಶೈಲಿಯ ವಿಶಿಷ್ಟ ಬೆರಿಕೆ ಕಂಡು ಬರುತ್ತದೆ" ಎನ್ನುತ್ತಾರೆ.

ಬಿ. ಎ. ಸನದಿಯವರ 'ಧ್ರುವ ಬಿಂದು'ವಿನ ಮುನ್ನುಡಿಯಲ್ಲಿ ನವ್ಯಕಾವ್ಯದ ಬಗ್ಗೆ ಚರ್ಚೆಯಿದ್ದರೆ ಶ್ರೀ ಕಣವಿಯವರ 'ಭಾವಜೀವಿ'ಯ ಮುನ್ನುಡಿಯಲ್ಲಿ ಪಂಚಮಾತೆ ಯರ ಬಗ್ಗೆ ಚರ್ಚೆಯೂ ಅಧಿಮನಸ ಹಾಗೂ ಅಧಿಪ್ರಜ್ಞೆಯ ಬಗ್ಗೆ ವಿವರಣೆಗಳೂ ಇವೆ. ನವ್ಯ ಕವಿಗಳಲ್ಲಿ ನವ್ಯಾಧುನಿಕರು, ಆಧುನಿಕ ನವ್ಯರು, ನವೋದಯ ನವ್ಯರು, ನವ್ಯ ನವೋದಯರು ಮುಂತಾದ ಪ್ರಭೇದಗಳನ್ನು ಗುರುತಿಸುತ್ತ 'ಧ್ರುವಬಿಂದು'ವಿನ ಮುನ್ನುಡಿ

ಯಲ್ಲಿ ನವ್ಯಕಾವ್ಯದ ಬಗ್ಗೆ ಮಹತ್ವ ಪೂರ್ಣವಾದ ಮಾತುಗಳನ್ನು ಬರೆದಿದ್ದಾರೆ. "ನವ್ಯ ರೆಂದು ಸಂಕಲ್ಪಿಸಿದವರಿಗೆ ಆಧುನಿಕತೆಯು ಬಾಲಾಗಸಿಯಿದೆ....ಆದರೂ ಹೊಸ ಪೀಳಿಗೆಯ ಕಾವ್ಯವೆಲ್ಲ 'ನವ್ಯ' ಸಂಪ್ರದಾಯದಲ್ಲಿ ಬೆಳೆದು ಬಂದಿರುವದೆಂಬ ಗ್ರಹಿಕೆ ಇದೆ. ನವ್ಯತೆ ಬರಿ ತಂತ್ರವಲ್ಲ, ಅದೊಂದು ವಿಶೇಷ ಪ್ರಜ್ಞಾಪ್ರಕಾರವೆಂಬ ಗ್ರಹಿಕೆಯೂ ಇದೆ. ಹೀಗೆಂದರೇನು ? ಇದಕ್ಕೆ ಕಾರಣ ಕಂಡು ಹಿಡಿಯುವದು ಕಠಿಣ. ಕಾಮ, ಐಂದ್ರಿಯಕ ಅನುಭವದ ಚಿತ್ರಣದಲ್ಲಿ ನವ್ಯತೆ ಇದೆ ಎನ್ನಬಹುದೇ ? ಮಾನವತಾವಾದ ಇಲ್ಲವೆ ನಾಸ್ತಿಕ ವಾದ ನವ್ಯತೆಯೇ ? ನಗರ ಜೀವನದ ಪ್ರಜ್ಞೆ ನವ್ಯವೇ ? ನಿರಾಶೆ ನವ್ಯವೇ ? ನವ್ಯ ಪ್ರಜ್ಞೆಯೆಂದರೇನು ? ಟಿ. ಎಸ್. ಎಲಿಯಟ್‌ನ ಕಾವ್ಯದಲ್ಲಿ ನಿರಾಶೆಯ ನವ್ಯತೆ ಅನುಭಾವದ ನವ್ಯತೆಯಲ್ಲಿ ಕೊನೆಗೊಂಡಿತು. ಬೇಂದ್ರೆಯವರ ಇತ್ತೀಚೆಗಿನ ಅನೇಕ ಕವಿತೆಗಳಲ್ಲಿ ನವ್ಯತೆಯ 'ಪ್ರತಿಮಾ ವ್ಯಾಕರಣ'ವನ್ನು ಕಾಣಬಹುದಾಗಿದೆ. ನವ್ಯತೆಯು ಯಾವುದೊಂದು ವಿಶಿಷ್ಟ ಜೀವದ ದೃಷ್ಟಿಯ ಸೊತ್ತಾಗಲಾರದು; ಆದರೆ ಎಲ್ಲ ಜೀವನ ದೃಷ್ಟಿಗಳ ಕಲಾಸಿದ್ಧಿಯ ಒಂದು ಪ್ರಕಾರವಹುದು....ಆದರೆ ನವ್ಯ ಪ್ರಜ್ಞೆಯಿರದಿದ್ದರೂ ನವ್ಯ ಕಾವ್ಯವಿದೆ. ಈ ಪ್ರಜ್ಞೆಗೆ 'ಪ್ರತಿಮಾ ವ್ಯಾಕರಣ,' ಗುಪ್ತಸ್ಫೂರ್ತಾರ್ಥ, ಕಿರುನುಡಿಯ ಮಿಂಚು, ಸ್ವಪ್ನರಚನಾ ವಿಧಾನ ಹಾಗೂ ನವನವೋನ್ಮೇಷಶಾಲಿನಿಯಾದ ಛಂದಸ್ಸು ಸೇರಿದ ಕಾವ್ಯವು ನವ್ಯವಾಗುತ್ತದೆ. ಇವುಗಳಲ್ಲಿ ಒಂದೆರಡೇ ಲಕ್ಷಣಗಳು ಕಾಣಿಸಿಕೊಂಡರೆ ಅದು ಅಷ್ಟರಮಟ್ಟಿಗೆ ನವ್ಯ....ಕಾವ್ಯದಲ್ಲಿ ನವ್ಯತೆಯ ಅನೇಕ ಯುಗಗಳು ಆಗಿಹೋಗುತ್ತವೆ. ಆಂಗ್ಲ ಕಾವ್ಯದಲ್ಲಿ ಡನ್ ಕವಿಯ ಯುಗವಾದ ಮೇಲೆ ಅಂತಹದೇ ಆದ ಎಲಿಯಟ್ ಕವಿಯ ಯುಗವು (ಐತಿಹಾಸಿಕ ಭೇದಗಳಿರಬಹುದು) ಅನೇಕ ಶತಮಾನಗಳ ನಂತರ ಬಂತು. ಅಂತೇ ನವ್ಯತೆಯು ಕಾವ್ಯದ ಚಿರಂತನ ತಂತ್ರಗಳಲ್ಲಿ ಒಂದು. ದೇಸಿ, ಮಾರ್ಗ, ನವ್ಯತೆ ಇವು ಮೂರೂ ಕಾವ್ಯದ ಮೂರು ಮಾರ್ಗಗಳಾಗಿವೆ." ಎಂದಿದ್ದಾರೆ.

ನವ್ಯತೆಯೊಂದಿಗೇ ಶ್ರೀ ಅರವಿಂದರ ಕಾವ್ಯದೃಷ್ಟಿ ಹಾಗೂ ಅನುಭಾವಪರತೆಯೂ ಶ್ರೀ ಗೋಕಾಕರನ್ನು ಆಕರ್ಷಿಸಿದೆ. 'ಭಾವಜೀವಿ'ಗೆ ಬರೆದ ಮುನ್ನುಡಿಯಲ್ಲಿ ಹೀಗೆ ಬರೆಯುತ್ತಾರೆ: "ಸತ್ಯ, ಸೌಂದರ್ಯ, ಪ್ರೇಮ ಕಲ್ಯಾಣ, ಭಕ್ತಿ ಈ ಪಂಚ ದೈವತಗಳನ್ನು ಸಾಕ್ಷಾತ್ಕರಿಸಿಕೊಂಡು ಅವುಗಳ ಉಸಿರನ್ನು ತನ್ನ ಉಸಿರಾಗಿ ಮಾಡುವ ಜೀವವೇ ಪರಿಪೂರ್ಣ ಜೀವ. ಆ ಸಿದ್ಧಿಯೇ ಸಿದ್ಧಿ. ವಿವೇಕ, ಕಲ್ಪಕತೆ, ಸಹೃದಯತೆ, ಸಬಲ ಸಾತ್ವಿಕತೆ, ಸಮಷ್ಟಿಯಲ್ಲಿ ಇವು ನೆಲಸುವಂತೆ ಮಾಡುವ ಯೋಗ್ಯತೆಯನ್ನು ಪಡೆದ ನಿಷ್ಕಾಮ ಕಾರ್ಯಕ್ಷಮತೆ, ಇವೇ ಈ ದೈವತಗಳ ಅಧಿಷ್ಠಾನವನ್ನು ಶಕ್ಯವಾಗಿಸುವ ವೇದಿಕೆಗಳು. ಒಬ್ಬನು ಶಕ್ತಿಯ ಆರಾಧಕನಾಗಿದ್ದರೆ ಇನ್ನೊಬ್ಬನು ಸೌಂದರ್ಯದ ಉಪಾಸಕನಾಗಿರುತ್ತಾನೆ ...ಒಂದೊಂದು ಜೀವನದಲ್ಲಿ ಒಂದೊಂದು ಸ್ಫೂರ್ತಿಯು ಅಂಕು

ರಿಸುತ್ತದೆ. ಎರಡು ಮೂರು ದೈವತಗಳ ಕೃಪೆಯನ್ನು ಒಂದೊಂದು ಜೀವನವು ಪಡೆದಿರುತ್ತದೆ. ಐದೂ ಪಕಳೆಗಳು ಅರಳಿದಾಗ ಜೀವವು ಪ್ರಫುಲ್ಲಿತವಾಗುತ್ತದೆ.

"ವ್ಯಕ್ತಿತ್ವವನ್ನು ಬರಿ ಸಾಕ್ಷಿತ್ವವನ್ನಾಗಿ ಮಾಡಿದ ಭಾವಜೀವಿಯು ಹೃದಯಾಂತರಾಳದಲ್ಲಿರುವ ಚೈತ್ಯಪುರುಷನಿಂದ ಹಾಗೂ ಅಧಿಪ್ರಜ್ಞೆಯ (Super Conscience) ಲೋಕಗಳಾದ ಅಧಿಮನಸ್ಸು (Higher Mind), ಪ್ರಕಾಶಿತ ಮನಸ್ಸು (Illuminated Mind), ಪ್ರೇರಣೆ (Intuition) ಮೊದಲಾದ ನಿಟ್ಟನಿಂದ ಸ್ಫೂರ್ತಿಪಡೆಯುತ್ತಾನೆ. ಈ ಸ್ಫೂರ್ತಿಯ ಉಗಮವನ್ನು ನಿಚ್ಚಳವಾಗಿ ಅರಿಯತೊಡಗಿದಂತೆ, ಈ ಲೋಕಗಳಲ್ಲಿ ಅವನ ಪ್ರಜ್ಞೆಯು ಹೆಚ್ಚು ಹೆಚ್ಚಾಗಿ ಜಾಗೃತವಾದಂತೆ ಭಾವಜೀವಿಯು ನೂತನವಾದ ವ್ಯಕ್ತಿತ್ವವೊಂದನ್ನು ಧಾರಣಮಾಡುತ್ತಾನೆ. ಈ ವ್ಯಕ್ತಿತ್ವಕ್ಕೆ ಆಳ-ಬಿತ್ತರಗಳಲ್ಲದೆ ಎತ್ತರವೂ ಉಂಟು. ಸಾಮಾನ್ಯ ವ್ಯಕ್ತಿಯ ವ್ಯಕ್ತಿತ್ವಕ್ಕೆ ಅಂತಹ ಆಳವಾಗಲಿ, ವಿಸ್ತಾರವಾಗಲಿ, ಎತ್ತರವಾಗಲಿ ಇರುವದಿಲ್ಲ. ಈ ಮೂರನ್ನು ವ್ಯಕ್ತಿಯು ಪಡೆದಾಗ 'ವ್ಯಕ್ತಿ'ಯಾಗಿ ನಿಂತಿಪ್ಪ ಅಹಂಕಾರದ ಗಂಟು ಸಡಿಲಾಗಿ ಪುರುಷನು ಮತ್ತೆ 'ಆಧಾರ'ದ ಇಲ್ಲವೆ ವ್ಯಕ್ತಿತ್ವದ ರಾಜನಾಗುತ್ತಾನೆ. ಇಂತಹ ವ್ಯಕ್ತಿತ್ವವು ಒಂದು ಬಿಂದುವಾದರೂ ಆ ಬಿಂದುವು ವಿಶ್ವಶಕ್ತಿಗಳ ಕೇಂದ್ರವಾಗುತ್ತದೆ."

'ವಿನಾಯಕ'ರು ರಚಿಸಿದ ಕವನಗಳು ಹದಿನಾರು ಕಾವ್ಯ ಸಂಗ್ರಹದಲ್ಲಿ ಪ್ರಕಟವಾಗಿವೆ. 'ಕಲೋಪಾಸಕ'ದಿಂದ ಹಿಡಿದು 'ಪುಣ್ಯಭೂಮಿ'ಯ ವರೆಗೆ ಅನೇಕ ಸಂಗ್ರಹಗಳಿಗೆ ಮುನ್ನುಡಿ ಬರೆದಿದ್ದಾರೆ. ಇವುಗಳ ಸಹಾಯದಿಂದ ಅವರ ಕಾವ್ಯದ ಸ್ವರೂಪದ ಬಗ್ಗೆ ತಿಳಿವಳಿಕೆಯುಂಟಾಗುತ್ತದೆ. ಇವರ 'ಸಮುದ್ರಗೀತಗಳು,' 'ಆಕಾಶಗಂಗೆ,' 'ನವ್ಯಕವಿತೆಗಳು,' 'ಬಾಳದೇಗುಲದಲ್ಲಿ,' 'ಕಾಶ್ಮೀರ,' 'ತ್ರಿಶಂಕುವಿನ ಪ್ರಜ್ಞಾಪ್ರಭಾತ,' 'ಇಂದಿಲ್ಲ ನಾಳೆ'—ಈ ಕವನ ಸಂಗ್ರಹಗಳಿಗೆ ಇದ್ದ ಮುನ್ನುಡಿಗಳು ಕವಿಗಳು ತುಳಿದ ಹೊಸ ಹಾದಿಗಳನ್ನು ಪ್ರತಿಬಿಂಬಿಸುತ್ತವೆ.

ರೋಮ್ಯಾಂಟಿಕ ಸಂಪ್ರದಾಯದಿಂದ ಸಿಡಿದು ನಿಂತು 'ಶರಧಿಗೆ ಷಟ್ಪದಿಯ ದೀಕ್ಷೆಯನ್ನು' ಕೊಡಲಾಗದೆ ಸಾಗರ-ಛಂದವಾದ ಮುಕ್ತಛಂದದಲ್ಲಿ ಬರೆದ ವಿಷಯ ಪ್ರಸ್ತಾಪಿಸಿ, "ಸಮುದ್ರಗೀತಗಳಲ್ಲಿ ರೂಪಗೊಂಡ ಸ್ವಚ್ಛಂದ ಛಂದದ ನವೀನತೆ ಆಗಿನ ಕಾಲದಲ್ಲಿ ಅನೇಕ ರಸಿಕ ಮಿತ್ರರಿಗೆ ಅರ್ಥವಾಗಲಿಲ್ಲ. ಇದು ಗದ್ಯವೂ ಅಲ್ಲ ಪದ್ಯವೂ ಅಲ್ಲವೆಂಬ ವಿಸ್ಮಯವನ್ನು ಅವರು ವ್ಯಕ್ತಪಡಿಸಿದರು. ಆದರೆ ಕ್ರಮೇಣ ಸ್ವಚ್ಛಂದ ಛಂದ ಇಂದಿನ ಕಾವ್ಯದಲ್ಲಿ ತನ್ನ ಸ್ಥಾನವನ್ನು ಪಡೆದುಕೊಂಡಿದೆ. ಇದು ಸಂತೋಷದ ವಿಷಯ" ಎನ್ನುತ್ತಾರೆ. ಡಾ. ಹೇಮಂತ ಕುಲಕರ್ಣಿಯವರು ಈ ಹೊಸತನದ ಬಗ್ಗೆ ಬರೆಯುತ್ತ, "ಗಾಂಧೀಜಿಯವರು ಆಫ್ರಿಕೆಯಲ್ಲಿ ಅಹಿಂಸೆ ಅಸಹಕಾರಗಳ ಪ್ರಯೋಗ ಮಾಡಿ ಆಮೇಲೆ ಭಾರತದಲ್ಲಿ ಅದರ ಚಳವಳಿಯನ್ನು ಹೂಡಿದಂತೆ, ವಿನಾಯಕರು ಹಡಗದ ವಿಚಿತ್ರ

ಪರಿಸರದಲ್ಲಿ ಮುಂದೆ ಬರುವ ನವ್ಯಕಾವ್ಯದ ಪ್ರಯೋಗಕ್ಕೆ ಆವಶ್ಯಕವಾದ ಸಾಧನ ಸಾಮಗ್ರಿಯನ್ನು ಕಂಡುಕೊಂಡರು. ನವ್ಯಕಾವ್ಯದ ತಂತ್ರ-ಮಂತ್ರಗಳ ಪೂರ್ವಸಿದ್ಧತೆಯನ್ನು ಮಾಡಿಕೊಂಡರು. ಅಂತೆಯೇ 'ಸಮುದ್ರಗೀತಗಳು' ನವ್ಯಕಾವ್ಯದ ನಾಂದಿಯೆಂದು ನಾನು ಭಾವಿಸಿದ್ದೇನೆ"—ಎನ್ನುತ್ತಾರೆ.

ಇಂದಿನ ಕನ್ನಡ ಕಾವ್ಯದಲ್ಲಿ ಚಂಪೂಕಾವ್ಯಗಳು ತೀರ ವಿರಳವಾಗಿ ಇದರ ಕೊರತೆ ತಪ್ಪಿಸಲು 'ತ್ರಿವಿಕ್ರಮರ ಆಕಾಶಗಂಗೆ' ಬರೆಯುತ್ತ ಅದರ ಮುನ್ನುಡಿಯಲ್ಲಿ ವಿನಾಯಕರು ಹೇಳುತ್ತಾರೆ: "ಆಧುನಿಕ ಮಹಾಕಾವ್ಯದಲ್ಲಿ ಮಾರ್ಗವಲ್ಲ ದೇಸಿಯಿರಬೇಕು, ಇತಿಹಾಸಪ್ರಸಿದ್ಧ ಚರಿತ್ರೆಯಲ್ಲ ಆತ್ಮಚರಿತ್ರೆಯಿರಬೇಕು, ನಾಟಕ ನಿರ್ಮಾಣದ ರೀತಿಯಲ್ಲ ಭಾವಗೀತಾಸ್ವಾದವಿರಬೇಕೆಂದು ತಿಳಿದು ಬರೆಯಲೆಸಗಿದ ವರ್ಡ್ಸ್‌ವರ್ಥ ಕವಿಯು ಅಂಥ ಮಹಾಕಾವ್ಯದ ಪೂರ್ವಪೀಠಿಕೆ (Prelude)ಯನ್ನು ಮಾತ್ರ ಯಶಸ್ವಿಯಾಗಿ ಬರೆದಂತೆ, 'ತ್ರಿವಿಕ್ರಮರು' ನಕ್ಷತ್ರಮಂಡಲದ ಭವ್ಯ ಮಂದಿರಕ್ಕೆ ಮಹಾದ್ವಾರದ ಕಮಾನಿನಂತಿದ್ದ 'ಆಕಾಶಗಂಗೆ'ಯನ್ನು ಮಾತ್ರ ಬರೆದಿದ್ದಾರೆ."

ವಿನಾಯಕರ 'ನವ್ಯಕವಿತೆಗಳು' ಒಂದು ಹೊಸ ದಾರಿಯನ್ನೇ ತುಳಿದವು. ನವ್ಯಪ್ರಜ್ಞೆಯೊಂದಿಗೆ ನವ್ಯಕಾವ್ಯ ಕೈದೋರಿತು. ಈ ಕವನಗಳ ರೂಪದ ಬಗ್ಗೆ ವಿವರವಾದ ಚಿತ್ರವು ಮುಂಬೈಯಲ್ಲಿ ನಡೆದ ಸಾಹಿತ್ಯಗೋಷ್ಠಿಯ ಅಧ್ಯಕ್ಷ ಭಾಷಣದಲ್ಲಿ ದೊರೆಯುತ್ತದೆ.

೧೯೪೭ರಲ್ಲಿ ಬರೆದ 'ಬಾಳದೇಗುಲದಲ್ಲಿ' ೧೯೫೩ ರಲ್ಲಿ ಪ್ರಕಟಗೊಂಡಿತು. "ಆಧುನಿಕ ಯುಗದಲ್ಲಿ ಮಹಾಕಾವ್ಯದ ಪರಂಪರೆ ಹಿಂದಿನಂತೆಯೇ ಉಳಿಯಲು ಸಾಧ್ಯವಿಲ್ಲ. ಕಾದಂಬರಿಯು ಅರ್ವಾಚೀನ ಕಾಲದ ಮಹಾಕಾವ್ಯದ ಕಾರ್ಯವನ್ನು ಮಾಡುತ್ತಿದೆ. ಜೀವನದ ಸಂಕೀರ್ಣತೆಯನ್ನು ಸಮರ್ಥವಾಗಿ ಕಾದಂಬರಿಯು ಚಿತ್ರಿಸಬಲ್ಲದು. 'ಯುದ್ಧ ಮತ್ತು ಶಾಂತಿ' ಎಂಬ ಟಾಲಸ್ಟಾಯರ ಕಾದಂಬರಿಯು ಈ ಮಾದರಿಯದು. "ಇಂದಿನ ಕನ್ನಡ ಕಾವ್ಯದಲ್ಲಿಯೂ ಮಹಾಕಾವ್ಯದ ಈ ನವೀನ ರೂಪಗಳು ತಲೆಯೆತ್ತಿವೆ. ಅವುಗಳ ವಿಮರ್ಶೆ ಮಾತ್ರ ಇನ್ನೂ ಬರಬೇಕಾಗಿದೆ. 'ಯೆಂಡ್ಕುಡ್ಕ ರತ್ನ,' 'ನಂದಾದೀಪ,' 'ಚಿತ್ರಾಂಗದಾ,' 'ರಾಮಾಯಣ,' 'ಮಂಕುತಿಮ್ಮನ ಕಗ್ಗ,' 'ನವರಾತ್ರಿ,' 'ಆಕಾಶಗಂಗೆ,' ಕಾದಂಬರಿ ಕ್ಷೇತ್ರದ ಹೊರಗೆ ಮಹಾಕಾವ್ಯದ ಹಾದಿಯಲ್ಲಾದ ಪ್ರಯತ್ನಗಳಿವು. ಇದೀಗ 'ಬಾಳದೇಗುಲದಲ್ಲಿ' ಒಂದು" ಎನ್ನುತ್ತಾರೆ ವಿನಾಯಕರು. "ಇಲ್ಲಿ ಅಳೆಯಲು ಪ್ರಯತ್ನಿಸಿರುವದು ಬಾಳನ್ನು ನೋಡುವ ದೃಷ್ಟಿಯನ್ನು. ಮಗುವಿನಲ್ಲಿ ಅಂಕುರಿಸಿದ ಈ ದೃಷ್ಟಿ, ಮುಕ್ತಜೀವಿಯ ಪೂರ್ಣದೃಷ್ಟಿಯ ವರೆಗೆ ವಿಕಾಸವಾಗುವ ಬಗೆ ಯಾವುದು? ಈ ವಿಕಾಸಕ್ಕೆ ಅದನ್ನು ಮುಟ್ಟಿಸುವದು ಯಾವ ಸೋಪಾನ? ಈ ವಿಧಾನ ನಡೆದಿರುವಾಗ ಮಧ್ಯದಲ್ಲಿ ಬರುವ ಬೇರೆ ಬೇರೆ ಅವಸ್ಥೆಗಳು ಯಾವವು? ಬೇರೆ ಬೇರೆ ರಂಗದಲ್ಲಿ

ಈ ದೃಷ್ಟಿಯು ಹೇಗೆ ಪ್ರಕಟಗೊಳ್ಳುತ್ತದೆ? ಒಂದೊಂದು ವ್ಯಕ್ತಿತ್ವ ವಿಶೇಷದಲ್ಲಿ ಈ ದೃಷ್ಟಿಯು ಯಾವ ಮಟ್ಟಕ್ಕೆ ಬಂದು ಮುಟ್ಟಿರುತ್ತದೆ? ಹೀಗೆ ಮುಗ್ಧತೆಯಿಂದ ಪೂರ್ಣತೆಯ ವರೆಗಿನ ವ್ಯಕ್ತಿತ್ವದ ಪರಿಗಳನ್ನು ಇಲ್ಲಿ ತೆರೆದು ತೋರಿಸುವ ಪ್ರಯತ್ನವಾಗಿದೆ" ಎನ್ನುತ್ತಾರೆ.

ಚಂಪೂ ಕಾವ್ಯವನ್ನು 'ಆಕಾಶಗಂಗೆ' ಹಾಗೂ 'ಇಂದಿಲ್ಲ ನಾಳೆ'ಯಲ್ಲಿ ಸಾಧಿಸಿದ ವಿನಾಯಕರು ಕಾಶ್ಮೀರದಲ್ಲಿ 'ಕಾವ್ಯ-ಪ್ರಬಂಧ'ವೆಂಬ ಹೊಸ ರೀತಿಯನ್ನು ಅಳವಡಿಸಿದ್ದಾರೆ. 'ಉಗಮ' ಕವನ ಸಂಗ್ರಹದಲ್ಲಿಯ ನವ್ಯಕವನಗಳು ಮಹಾಬಳೇಶ್ವರದ ವಾಸ್ತವ್ಯದಲ್ಲಿ ರೂಪಗೊಂಡವು. 'ಕಾಶ್ಮಿರ'ದ ಬಗ್ಗೆ ಹಿನ್ನುಡಿಯಲ್ಲಿ ಹೀಗೆ ಬರೆಯುತ್ತಾರೆ: "ಒಂದು ಸ್ಥಾನಕ್ಕೆ ಆರೋಪಿಸಿದ ರಚನಾಕ್ರಮವನ್ನು ಒಂದು ರಾಜ್ಯಕ್ಕೂ ಅನ್ವಯಿಸಬಹುದು. ಸ್ವಚ್ಛಂದ ಛಂದ ಗದ್ಯ ಪದ್ಯಕ್ಕೂ ಮಧ್ಯವರ್ತಿಯಾಗಿದೆ. ಭಾವನೆ ಇಲ್ಲವೆ ಕಲ್ಪಕತೆ ಪ್ರಧಾನವಾದಾಗ ಅದು ಗೀತಕಾವ್ಯವಾಗವದು. ಕಥನ ಇಲ್ಲವೆ ಚಿಂತನ ಪ್ರಧಾನವಾದಾಗ ಅದು ಗದ್ಯ ಕಾವ್ಯವಾಗುವದು. ಈ ಮಿಶ್ರ ರಚನಾಕ್ರಮಕ್ಕೆ ನಾನು 'ಕಾವ್ಯ-ಪ್ರಬಂಧ'ವೆಂಬ ಪ್ರಯೋಗ-ನಾಮದಿಂದ ಕರೆದಿದ್ದೇನೆ. ಈ ಮಿಶ್ರರೀತಿ ಅವಶ್ಯಕವಾದ ಒಂದು ರಚನಾಕ್ರಮವಾಗಿದೆ. ಅದಿಲ್ಲದಿದ್ದರೆ ಒಂದೇ ಒಂದು ಕಲಾಕೃತಿಯಲ್ಲಿ ಕಾವ್ಯವಸ್ತುವಿನ ಅನೇಕಮುಖತೆ ಒಡಮೂಡುವದು ಸುಲಭವಲ್ಲ" ಎನ್ನುತ್ತಾರೆ.

'ತ್ರಿಶಂಕುವಿನ ಪ್ರಜ್ಞಾಪ್ರಭಾತ'ವನ್ನು ಮಹಾಕಾವ್ಯದ ಒಂದು ಮಿಡಿ (Epic in miniature) ಎಂದು ಕರೆದಿದ್ದಾರೆ. "ಸ್ಮೃತಿ, ಮೀಮಾಂಸೆ ಹಾಗೂ ಕಲ್ಪಕತೆಯ ಲೋಕಗಳಲ್ಲಿಯೇ ತಿರುಗಾಡುವ ವ್ಯಕ್ತಿಯಾದುದರಿಂದ ಅವನನ್ನು ತ್ರಿಶಂಕು ಎಂದು ಕರೆದಿದೆ. ಮೂಲದಲ್ಲಿಯಂತೆ ಈ ಕಾವ್ಯದಲ್ಲಿಯ ತ್ರಿಶಂಕು ಹರಿಶ್ಚಂದ್ರನ ತಂದೆಯಾಗಿದ್ದಾನೆ. ಆದರೆ ಸಮ್ಯಸಾಗರಿಕತೆಯ ಪ್ರತಿನಿಧಿಯಾದ ಮಾನವನ ಪ್ರತೀಕವೂ ಹೌದು" ಎನ್ನುತ್ತಾರೆ.

'ಇಂದಿಲ್ಲ ನಾಳೆ' ಎಂಬ ಕೃತಿ ವಿನಾಯಕರ ಅಮೆರಿಕೆಯ ಪ್ರವಾಸಾನುಭವವನ್ನು ಒಳಗೊಂಡದ್ದು. ಅದಕ್ಕೆ ಬರೆದ ದೀರ್ಘ ಮುನ್ನುಡಿಯಲ್ಲಿ ಅಮೇರಿಕನ್ ಜೀವನದ ಹಿರಿಮೆ ಹಾಗೂ ಕಿರಿಮೆಗಳ ಬಗ್ಗೆ, ಉತ್ಸಾಹ ಹಾಗೂ ಉಚ್ಛೃಂಖಲತೆಯ ಬಗ್ಗೆ ಬರೆಯುತ್ತ ಈ ಕಾವ್ಯದ ರೀತಿಯ ಬಗ್ಗೆ ಒಂದೆರಡು ಮಾತು ಬರೆಯುತ್ತಾರೆ. "ಇದೂ ಒಂದು ಚಂಪೂ ಕೃತಿ. ಆದರೆ 'ಆಕಾಶಗಂಗೆ'ಯಂತೆ ಇದು ಬರಿ ನಭೋಮಂಡಲದಲ್ಲಿ ಕಾಣಿಸಿಕೊಂಡಿಲ್ಲ. ನೆಲದಲ್ಲಿ ಜಿಗಿತು ಮುಗಿಲಿನೆಡೆಗೆ ಈ ಕೃತಿ ಪವಣಿಸಿದೆ. ಪದ್ಯವು ಜೀರ್ಣಿಸಬಲ್ಲ ವಿವರಗಳಿದ್ದಲ್ಲಿ ಇದು ಪದ್ಯಕಾವ್ಯವಾಗಿದೆ. ಉಳಿದೆಡೆ ಇದು ಗದ್ಯಕಾವ್ಯ. ಪದ್ಯದಲ್ಲಿಯೂ ಅಲ್ಲಲ್ಲಿ ಗದ್ಯವು ತಲೆದೋರಿತ್ತಿದ್ದರೆ ಅದು ಬಳಕೆ ಮಾತಿನ ಗತಿಯನ್ನು ಅನುಸರಿಸಿ ಮಾತ್ರ ಹಾಗೆ ಮಾಡಿದೆ. ನವ್ಯಕಾವ್ಯದಲ್ಲಿ ಇದೊಂದು ಸಂದರ್ಭೋಚಿತವಾಗಿ ಅಪೇಕ್ಷಣೀಯ ವಿಧಾನ" ಎನ್ನುತ್ತಾರೆ.

ಕವಿ ವಿನಾಯಕರ ಕಾವ್ಯದ ಅಭ್ಯಾಸವು ರಸಸಂಪ್ರದಾಯದ ರೀತಿಯಿಂದ ನವ್ಯಕಾವ್ಯದ ರೀತಿಯವರೆಗೆ ಅನೇಕ ಅವಸ್ಥಾಂತರಗಳನ್ನು ಪಡೆಯುತ್ತ ಬೆಳೆದು ಬಂದಿದೆ. ಅವರ ಕಾವ್ಯದ ಅಭ್ಯಾಸವು ಕನ್ನಡ ಕಾವ್ಯದ ಚರಿತ್ರೆಯನ್ನೇ ಪ್ರತಿಬಿಂಬಿಸುವಂತಿದೆ. ಇವರ ಮುನ್ನುಡಿಗಳಲ್ಲಿ ಕೇವಲ ಆಯಾ ಕವಿಗಳ ಕೃತಿಯ ವಿವೇಚನೆ ಅಷ್ಟೇ ಇಲ್ಲದೆ, ವಿಮರ್ಶನ ಉಪಕರಣಗಳನ್ನೂ ನಾವು ಪಡೆಯುತ್ತೇವೆ. ಇವರ ವಿಶ್ಲೇಷಣೆಯಿಂದ ವಿಮರ್ಶೆಯ ಚರಿತ್ರೆಯ ದರ್ಶನವೂ ನಮಗಾಗುತ್ತದೆ. ಕವಿ ವಿನಾಯಕರು ತಮ್ಮ ಕೃತಿಗಳ ಬಗ್ಗೆ ಬರೆದಿರುವ ಮುನ್ನುಡಿಗಳ ಮೂಲಕ ಅವರ ಸಮನ್ವಯ ದೃಷ್ಟಿ ಹಾಗೂ ಸ್ವವಿಮರ್ಶೆಯ ಪ್ರಜ್ಞೆ ಕಾಣುತ್ತೇವೆ.

ಕಾದಂಬರಿ

ಶ್ರೀ ಗೋಕಾಕರು ಅನೇಕ ಕಾದಂಬರಿಗಳಿಗೆ ಮುನ್ನುಡಿ ಬರೆದಿದ್ದಾರೆ. ಅವುಗಳಲ್ಲಿ ಮಹತ್ವಪೂರ್ಣವಾದವುಗಳೆಂದರೆ, ಆನಂದಕಂದರ 'ಸುದರ್ಶನ', ಡಾ. ರಾಜಾರಾಮ ರಾಯರ 'ಮಾಘಮಾಸ' ಹಾಗೂ ವಿನಾಯಕರ 'ಸಮರಸವೇ ಜೀವನ'.

ಧಾರವಾಡದ ಮನೋಹರ ಗ್ರಂಥ ಮಾಲೆಯ ಪ್ರಥಮ ಪ್ರಕಾಶಿತ ಪುಷ್ಪವಾದ ಆನಂದಕಂದರ 'ಸುದರ್ಶನ' ಎಂಬ ಸಾಮಾಜಿಕ ಕಾದಂಬರಿಗೆ (೧೯೩೩) ಮುನ್ನುಡಿ ಯನ್ನು ಬರೆಯುತ್ತ ಕಾದಂಬರಿಯ ಎರಡು ಜಾತಿಗಳ ಬಗ್ಗೆ ವಿವೇಚಿಸಿದ್ದಾರೆ. "ಕಾದಂ ಬರಿಗಳಲ್ಲಿ ಮುಖ್ಯತಃ ಎರಡು ಜಾತಿಗಳನ್ನು ಕಾಣಬಹುದು. ಒಂದರಲ್ಲಿ ಸಾಹಿತಿಯು ಮುಗಿಲಿಗೆ ತೆಕ್ಕೆಬಿದ್ದು, ಧ್ಯೇಯಗಳ ವಿಶಾಲತೆಯನ್ನು ವ್ಯಕ್ತಪಡಿಸಲು ಅವುಗಳಷ್ಟೇ ವಿಶಾಲವಾದ ಒಂದು ಭೂಮಿಕೆಯನ್ನು ಸಿದ್ಧಗೊಳಿಸುವನು. ಸಮಾಜದ ವಿಶಾಲ ಜೀವನ, ಐತಿಹಾಸಿಕ ಪುರುಷರ ಆವೇಶ, ಆದರ್ಶಪ್ರಾಯರಾದ ಪುರುಷ-ವನಿತೆಯರ ಬೆಡಗು, ದುರ್ಜನರ ದೊಂದಣೆ, ರಾಜ್ಯಗಳ ಏರಿಳಿತ, ದೈವದ ತಾಕಲಾಟ, ಇವೇ ಮೊದಲಾದ ಚಿತ್ರಗಳು ಆ ಭೂಮಿಕೆಯಲ್ಲಿ ಒಂದರ ಮೇಲೊಂದು ಉದಯಿಸುವವು. ಆದರೆ ವ್ಯತ್ಯಯ ರಹಿತವಾದ ಆ ತತ್ವಗಳನ್ನೇ ಒಂದು ಸಣ್ಣ ಕಥಾವಸ್ತುವಿನಲ್ಲಿ ಅಷ್ಟೇ ಪರಿಣಾಮಕಾರಕ ವಾಗಿ ಬಿಂಬಿಸಿ ತೋರಿಸಬಹುದು. ಮೊದಲನೆಯ ಕೃತಿಯು ನಮ್ಮನ್ನು ಅಗಾಧಗೊಳಿ ಸಿದರೆ ಎರಡನೆಯದು ನಮ್ಮನ್ನು ಸುಪ್ರಸನ್ನರಾಗಿ ಮಾಡುವದು. ಯಾವ ರೀತಿಯನ್ನು ಅನುಸರಿಸಬೇಕೆಂಬುದು ಸಾಹಿತಿಯ ಮಾನಸಿಕ ವೃತ್ತಿಯನ್ನು ಅವಲಂಬಿಸಿದ ಮಾತಾ ಗಿದೆ." ಎನ್ನುತ್ತ "ಬೆಟಗೇರಿಯವರ ಗ್ರಂಥವು ಎರಡನೆಯ ಜಾತಿಗೆ ಸೇರಿರುವದೆಂಬುದು ಸಹಜವಾಗಿ ಗೊತ್ತಾಗುವದು" ಎಂದಿದ್ದಾರೆ.

ಸಾಹಿತ್ಯ ಸೇವೆಯನ್ನು ಒಂದು ಆರಾಧನೆಯೆಂದು ಬಗೆದು ಅತ್ಯಂತ ಶ್ರದ್ಧೆಯಿಂದ ಬರೆಯುವ ಲೇಖಕರಲ್ಲಿ ಶ್ರೀ ವಿನಾಯಕರು ಒಬ್ಬರು. ಜುಲೈ ೧೯೬೨ರಲ್ಲಿ, 'ಕಾಮನ್

ಪೆಲ್ತ್ ರಾಷ್ಟ್ರಗಳಲ್ಲಿ ಇಂಗ್ಲಿಷ್ ಸಾಹಿತ್ಯವನ್ನು ಹೇಗೆ ಕಲಿಸಬೇಕು' ಎಂಬ ವಿಷಯದ ಬಗ್ಗೆ ಇನ್ನ ಸಮ್ಮೇಲನದ ಉದ್ಘಾಟನಾ ಭಾಷಣವನ್ನು ಮಾಡಲು ಗೋಕಾಕರು ಇಂಗ್ಲಂಡಿಗೆ ತೆರಳಿದಾಗ 'ಮಾಘಮಾಸ'ದ ಪ್ರತಿಯನ್ನು ಪ್ರಕಾಶಕರು ಅವರಿಗೆ ವಿಮಾನ ದಿಂದ ರವಾನಿಸಿದ್ದರು. ವಿಮಾನ ಮಾರ್ಗವಾಗಿ ಮರಳುವಾಗ, ಮಾರ್ಗದಲ್ಲಿ ಓದಿ ಕೈರೋದಲ್ಲಿ ಮುನ್ನುಡಿ ಬರೆದರು. "ಲಂಡನ್ನಿನಿಂದ ಇಟಲಿಯವರೆಗೆ ವಿಮಾನ ದೃಷ್ಟಿ ಯಿಂದ ನಿಸರ್ಗವನ್ನು ನೋಡುವದರಲ್ಲಿ ಮಗ್ನನಾದೆ. ಇಟಲಿ ದಾಟ ಕೈರೋದೆಡೆಗೆ ಭೂಮಧ್ಯಸಮುದ್ರದ ಮೇಲಿಂದ ವಿಮಾನ ಸಾಗಿದಾಗ ಮಂಜು-ಮುಗಿಲಿನ ವಿನಾ ಏನೂ ಕಾಣುವಹಾಗಿರಲಿಲ್ಲ. ಆಗ 'ಮಾಘಮಾಸ' ಓದಿ ಇಲ್ಲಿ ಕೈರೋ ವಿಮಾನ ಬಂದರ ದಲ್ಲಿ ಈ ಮುನ್ನುಡಿಯನ್ನು ಬರೆಯುತ್ತಿದ್ದೇನೆ." ಎನ್ನುತ್ತಾರೆ. ಮಾಘಮಾಸ ಕಾದಂ ಬರಿಯ ಅನೇಕ ಪರಿಗಳನ್ನು ವಿಶ್ಲೇಷಿಸುತ್ತ,...."ಮಾಘಮಾಸ ಒಂದು ಕಾದಂಬರಿ ಎನ್ನುವುದಕ್ಕಿಂತ ಅದು ಅನೇಕ ಕಾದಂಬರಿಗಳ ಪ್ರಯೋಗಶಾಲೆಯೆಂದರೆ ತಪ್ಪಾಗ ಲಿಕ್ಕಿಲ್ಲ. ಕಾರಣ ಹೀಗಿವೆ. ಒಂದೇ ಒಂದು ಕಥೆ ಇಲ್ಲಿ ಸುಸಂಬದ್ಧವಾಗಿ ಬೆಳೆದುಕೊಂಡು ಬಂದಿಲ್ಲ. ಅದರ ರಚನೆಯ ಮೀಮಾಂಸೆ ವಿವಾದಾಸ್ಪದವಾಗದೆ ಇಲ್ಲ. ನಮ್ಮ ಅಂತಃ ಕರಣವನ್ನು ಅಲಗಿಸುವ ಅನೇಕ ದೃಶ್ಯಗಳು ಇಲ್ಲಿದ್ದರೂ ಅವು ಕಲಾಪರಿಪೂರ್ಣತೆಯನ್ನು ಪಡೆದಿಲ್ಲ. ಪಾತ್ರಗಳ ವಿಕಾಸ ಸಹಜವಾಗಿ ಸ್ಪಷ್ಟವಾಗಿ ಮೂಡಿ ಬಂದಿಲ್ಲ. ಹೀಗಿದ್ದರೂ ಮೊತ್ತದಲ್ಲಿ ಈ ಕಾದಂಬರಿ ಒಂದು ಓಜಸ್ಸನ್ನು ಪಡೆದಿದೆ." ಹೀಗೆ ಅಂದಮೇಲೆ ಕೂಡ ಈ ಕಾದಂಬರಿಯ ಹೊಸ ವಿಧಾನವನ್ನು ಮೆಚ್ಚಿದ್ದಾರೆ. "ಸಂಪ್ರದಾಯದ ಕಟ್ಟಿಗೆ ಸಿಲುಕಿ ಬಿದ್ದು ಉಸಿರುಗಟ್ಟುವದಕ್ಕಿಂತ ಸ್ವಚ್ಛಂದ ಅಭಿವ್ಯಕ್ತಿ ಅಕ್ಷೇಪಣೀಯ" ಎಂದಿದ್ದಾರೆ.

ಉತ್ತರ ಕರ್ನಾಟಕದ ಜನಜೀವನದ ಸರ್ವತೋಮುಖವಾದ ಬೆಳವಣಿಗೆಯನ್ನು ಸಮಗ್ರವಾಗಿ ಚಿತ್ರಿಸುವ ಏಕಮೇವ ಬೃಹತ್‌ಕಾದಂಬರಿಯಾದ (೧೧೫೬ ಪುಟಗಳ) ವಿನಾಯಕರ 'ಸಮರಸವೇ ಜೀವನ' ಮಹಾಕಾವ್ಯದ ವಿಸ್ತಾರವನ್ನು ಪಡೆದಿದೆ. ಮಹತ್ವ ದಲ್ಲಿಯೂ ಭಾವದಲ್ಲಿಯೂ ಹಿರಿಯದಾದ ಈ ಕೃತಿ ಕನ್ನಡ ನಾಡಿನ ಸಿದ್ಧಿಗಳಲ್ಲಿ ಒಂದಾ ಗಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಈ ಕಾದಂಬರಿಗೆ ಲೇಖಕರು ಬರೆದ ಪೀಠಿಕೆ ಯಲ್ಲಿ (೪೦ ಪುಟಗಳ) ವಿನಾಯಕರು ತಮ್ಮ ಕಲಾಕೃತಿಯ ಹೊರಗೆ ನಿಂತು ನಿಷ್ಪಕ್ಷ ಪಾತವಾದ ವಿಮರ್ಶೆಯನ್ನು ಮಾಡಿದ್ದಾರೆ. ಇಂಥ ವಿಸ್ತೃತವಾದ, ವಿಶ್ಲೇಷಣಾತ್ಮಕವಾದ, ಅಪರೂಪವಾದ ಮುನ್ನುಡಿ ಕನ್ನಡದಲ್ಲಿ ಬೇರೊಂದಿಲ್ಲ. ಅವರು ಮುನ್ನುಡಿಯಲ್ಲಿ, "ಕಾದಂಬರಿಯ ಸಾಧನೆಗಳಲ್ಲಿ ಎರಡು ಮುಖ್ಯವಾಗಿವೆ ಎಂದು ನನಗೆನಿಸುತ್ತದೆ. ಪಾತ್ರ ಸೃಷ್ಟಿ ನಿರ್ಮಾಣ ಅವುಗಳಲ್ಲಿ ಒಂದಾಗಿದೆ. ಇಲ್ಲಿಯ ವಸ್ತುವು ಅಷ್ಟೊಂದು ಮಹತ್ವ ದ್ದಲ್ಲ." ಎಂದು ಹೇಳಿ ಪಾತ್ರಸೃಷ್ಟಿಯ ಮಹತ್ವವನ್ನು ಎತ್ತಿ ತೋರಿಸಿ ಕಾದಂಬರಿಯಲ್ಲಿ ಒಡಮೂಡಿ ಬರಬೇಕಾಗಿರುವ ಅಂಶಗಳನ್ನು ವಿಸ್ತಾರವಾಗಿ ಉಲ್ಲೇಖಿಸುತ್ತಾರೆ.

"ನವರಸಭರಿತ ಎಂದು ಹಿಂದಿನ ಕೃತಿಗಳ ವರ್ಣನೆ ಇರುತ್ತಿತ್ತು. ಈಗ ಸರ್ವಾಂಗ ಪೂರಿತ ಎಂಬ ಮಾತನ್ನೂ ಕಾದಂಬರಿಗಳ ವಿಷಯದಲ್ಲಿ ಜೋಡಿಸಬೇಕಾಗಬಹುದು. ಶೈಲಿ, ಕಥಾವಸ್ತು, ಕಾಲಮಾನ, ಹಿನ್ನೆಲೆ, ಜನಜೀವನ, ಪಾತ್ರ ನಿರ್ಮಾಣ, ಕಲ್ಪನಾತ್ಮಕ ಆವರಣ, ತತ್ವ, ರಸಾನುಭವ, ಮೂಲದರ್ಶನ—ಇವೇ ಆ ಒಂಭತ್ತು ಪರಿಗಳು. ಕಥಾವಸ್ತುವಿನಲ್ಲಿ ಭೌಗೋಲಿಕ ಹಿನ್ನೆಲೆ, ಪೀಳಿಗೆ, ತಂತ್ರ, ಮನೋವಿಶ್ಲೇಷಣವೆಂಬ ಸೂಕ್ಷ್ಮಭೇದಗಳನ್ನೂ ನಾವು ಕಾಣಬಹುದು. ಇವುಗಳಲ್ಲಿ ಶೈಲಿಯು ಸ್ಥೂಲತಮವಾದರೆ ಮೂಲದರ್ಶನವು ಸೂಕ್ಷ್ಮತರವಾದ ಪರಿಯಾಗಿದೆ. ಹಾಗೆ ನೋಡಿದರೆ ಮೂಲದರ್ಶನವೇಬೀಜ; ಉಳಿದ ಅಷ್ಟಾಂಗಗಳು ಅದನ್ನು ಹೊಂದಿ ಅದನ್ನು ಅಭಿವ್ಯಕ್ತಗೊಳಿಸಲು ಹವಣಿಸುವ ಪರಿಗಳಾಗಿವೆ." ಎಂದು ಹೇಳಿ ಒಂಭತ್ತು ಪರಿಗಳನ್ನು ತಮ್ಮ ಕಾದಂಬರಿಯಲ್ಲಿ ಕಂಡು ವಿಸ್ತರಿಸಿ ವಿಶ್ಲೇಷಿಸಿ ವಿಮರ್ಶಿಸಿದ್ದಾರೆ.

ಈ ಪೀಠಿಕೆಗೆ ಉಪಸಂಹಾರವನ್ನು ಬರೆಯುತ್ತ, "ಒಂದು ಮೋಟಾರು ಕಾರನ್ನು ಬಿಚ್ಚಿ ಅದರ ಯಂತ್ರ ರಚನೆಯನ್ನು ಪರೀಕ್ಷಿಸಿದಂತೆ ಕಾದಂಬರಿಯ ವಿವಿಧ ಅಂಗಗಳನ್ನು ಇಲ್ಲಿ ವಿಂಗಡಿಸಿ ತೋರಿಸಿದೆ. ಆದರೆ ಕಲಾಕೃತಿಯ ಜೀವ ಈ ಎಲ್ಲ ಅಂಗಗಳ ಸಮನ್ವಯಿತ ಚಲನೆಯಲ್ಲಿ ಇರುತ್ತದೆ"—ಇಲ್ಲಿಯೂ ನಾವು ವಿನಾಯಕರ ಸಮನ್ವಯ ದೃಷ್ಟಿಯನ್ನು ಕಾಣುತ್ತೇವೆ.

ಈ ಪೀಠಿಕೆಯ ವೈಶಿಷ್ಟ್ಯವೆಂದರೆ ಅದರಲ್ಲಿಯ ಸ್ವವಿಮರ್ಶೆ ಹಾಗೂ ಮೌಲ್ಯಮಾಪನೆ. "ಈ ಕಾದಂಬರಿಯ ಪ್ರಕಾರವನ್ನು ಏನೆಂದು ಉಲ್ಲೇಖಿಸಬೇಕು ? 'ಮಹಾ' ಎಂದು ಕರೆದರೆ ಆ ಶಬ್ದವನ್ನು ಕೇಳಿದೊಡನೆಯೇ ಆ ಶಬ್ದದ ಆವರಣಕ್ಕೆ ಆಕ್ಷೇಪಣೆಯೇಳ ಬಹುದು. 'ಬೃಹತ್' ಎಂದರೆ ಬರಿ ಗಾತ್ರವನ್ನು ಅನುಲಕ್ಷಿಸಿ ಮಾತನಾಡಿದಹಾಗಾದೀತು. ಮುಖ್ಯವಾಗಿ ಇದು ಯಾವ ಅಂಗದಲ್ಲಿಯೂ ಊನವಾಗದ ಕಾದಂಬರಿ. 'ಸರ್ವಾಂಗ ಸುಂದರ' ಅಹುದೋ ಅಲ್ಲವೋ ಗೊತ್ತಿಲ್ಲ. ಆದರೆ 'ಸರ್ವಾಂಗಪೂರಿತ'—ಎಂದು ಹೇಳ ಬಹುದು." ಈ ಮಾತುಗಳಲ್ಲಿ ನಾವು ವಿನಾಯಕರ ವಿನಮ್ರತೆಯನ್ನು ಕಾಣ ಬಹುದು.

ನಾಟಕ

'ಎನ್ಕೆ'ಯವರ 'ಬೆಳ್ಳಿಹಬ್ಬ', ಲ. ಜಿ. ಜೇಂದ್ರೆಯವರ 'ಪಡೆದು ಬಂದಿರಬೇಕು' ತಾವೇ ಬರೆದ 'ಜನನಾಯಕ', 'ಯುಗಾಂತರ' ಹಾಗೂ 'ವಿಮರ್ಶಕ ವೈದ್ಯ' ಈ ನಾಟಕಗಳಿಗೆ ಮುನ್ನುಡಿ ಬರೆದಿದ್ದಾರೆ. "ಸಾಹಿತ್ಯಿಕ ಹಾಸ್ಯವನ್ನೊಳಗೊಂಡ ರೂಪಕಗಳು ನಮ್ಮಲ್ಲಿ ಕಡಿಮೆ. ಸಾಹಿತ್ಯವನ್ನೇ ವಸ್ತುವನ್ನಾಗಿರಿಸಿಕೊಂಡ ಸುಕುಮಾರ ಪ್ರಯೋಗ ವಿದು. ವಿಮರ್ಶೆ ವಿಡಂಬನೆಗಳು ಜಗತ್ತಿಗೆ ಉತ್ತರ-ದಕ್ಷಿಣ ಧ್ರುವಗಳಿದ್ದಂತೆ ಎಂದು

ಹೇಳಬಹುದು. ಇವುಗಳ ನಡುವೆ ಅಣಕ, ವಿದಗ್ಧತೆ, ವ್ಯಂಗ್ಯೋಕ್ತಿ, ವಿನೋದ, ಕೊಂಕು ನುಡಿ ಇವೇ ಮೊದಲಾದ ಬೇರೆ ಬೇರೆ ವೃತ್ತಿಗಳು ಸುಳಿದುಹೋಗುತ್ತವೆ." ಎಂದು 'ವಿಮರ್ಶಕವೈದ್ಯ' ನಾಟಕದ ಮುನ್ನುಡಿಯಲ್ಲಿ ಹೇಳುತ್ತ ಹಾಸ್ಯದ ಯೋಜನೆಯಿಂದ ಭಾವವೈಪರೀತ್ಯವನ್ನು ಇಲ್ಲದಾಗಿಸುವ ರೀತಿಯ ಬಗ್ಗೆ ಹೇಳಿದ್ದಾರೆ. "ಈ ನಾಟಕವು ಹಾಸ್ಯ ವಿಡಂಬನೆಗಳ ದ್ವಾರವಾಗಿ ಸತ್ಯ ಹಾಗೂ ಔಚಿತ್ಯ ಪಕ್ಷವನ್ನು ಸಮರ್ಥಿಸುತ್ತದೆ.'— ಎಂದಿದ್ದಾರೆ. 'ಯುಗಾಂತರ' ನಾಟಕದಲ್ಲಿ ಮಾರ್ಕ್ಸವಾದ ಹಾಗೂ ಅಧ್ಯಾತ್ಮವಾದದ ಸಮನ್ವಯವನ್ನು ಸಾಧಿಸಿದ್ದಾರೆ..."ಕವಿಯು ಇಂದು ಮಾರ್ಕ್ಸವಾದದ ಹಾಗೂ ಅನುಭಾವಗಳ ನಡುವೆ ಒಂದು ಸೇತುವೆ ಕಟ್ಟಿ ಪೂರ್ಣಜೀವನದ ದರ್ಶನವನ್ನು ನಿಚ್ಚಳವಾಗಿಸಬೇಕಾಗಿದೆ" ಎನ್ನುತ್ತಾರೆ.

ಶ್ರೀ ವಿನಾಯಕರು ಬರೆದ ನಾಟಕಗಳಲ್ಲಿ ಅತ್ಯಂತ ಮಹತ್ವಪೂರ್ಣವಾದದ್ದು ಅವರ 'ಜನನಾಯಕ'. ಬರುವ ಪೀಳಿಗೆಯಲ್ಲಿ ಕನ್ನಡ ನಾಟಕದ ಐತಿಹಾಸಿಕ ಬೆಳವಣಿಗೆಯನ್ನು ಅಭ್ಯಾಸಮಾಡಲು ಹೊರಟ ವಿದ್ಯಾರ್ಥಿಗೆ ಜನನಾಯಕನನ್ನು ತಪ್ಪಿಸಿ ಮುಂದೆ ಹೋಗುವದು ತೀರ ಕಠಿಣ ಒಂದೆಡೆ ಕೇವಲ ಸಾಹಿತ್ಯಿಕ ಕಲಾವಿಲಾಸಿಗಳ ನಾಟಕಗಳು ಇದ್ದರೆ ಇನ್ನೊಂದೆಡೆ ಕೇವಲ ವೃತ್ತಿನಾಟಕಗಳು ಇವೆ. ಈ ಎರಡರ ಮಧ್ಯವರ್ತಿಯಾದ ಸಂಪ್ರದಾಯವು ಕನ್ನಡದಲ್ಲಿ ಇಲ್ಲದಿದ್ದ ಕಾಲದಲ್ಲಿ ವಿನಾಯಕರ ಜನನಾಯಕವು ಕೆಲ ಮಟ್ಟಿಗೆ ಸಮಾಧಾನವನ್ನು ತಂದುಕೊಟ್ಟಿದೆ. ನಾವು, ಜನನಾಯಕ ಒಂದು 'ಹೊಸ ಮಾರ್ಗ', ವೃತ್ತಿ-ನಾಟಕಗಳ ಹಾಗೂ ಕಲಾವಿಲಾಸಿ ನಾಟಕಗಳ ನಡುವಿನ ಸೇತುವೆಯೆಂದು ಹೇಳಬಹುದು. ಶ್ರೀ ವಿನಾಯಕರು ಈ ನಾಟಕಕ್ಕೆ ಬರೆದ ಮುನ್ನುಡಿಯಲ್ಲಿ "ಕಂಪೆನಿ ಸಂಪ್ರದಾಯವನ್ನೂ ಸಾಹಿತ್ಯಿಕ ಸಂಪ್ರದಾಯವನ್ನೂ ಒಂದುಗೂಡಿಸಿ ಸಾಮಾಜಿಕ ಆವಿದ್ಧ ಪ್ರಯೋಗವನ್ನು ರಚಿಸಿದ್ದೇನೆ" ಎಂದಿದ್ದಾರೆ. ಅವರು ವಿನಯದಿಂದ ತಾವು ಸಮ್ಮಕಾಲೀನ ಕಂಪೆನಿ ನಾಟಕ ಸಂಪ್ರದಾಯದಲ್ಲಿ ಸಾಹಿತ್ಯಿಕತೆಯನ್ನು ತುಂಬಲು ಪ್ರಯತ್ನಿಸಿರುವ ಅರ್ಥದಲ್ಲಿ ತಮ್ಮ ರೀತಿ ಷೇಕ್ಸಪಿಯರನ ರೀತಿ ಎಂದು ಹೇಳಿಕೊಂಡಿದ್ದಾರೆ. ವಿನಾಯಕರು ಷೇಕ್ಸಪಿಯರನನ್ನು ವಿಶೇಷವಾಗಿ ಅಭ್ಯಾಸಮಾಡಿದವರು. ತಮ್ಮ ಅಭ್ಯಾಸದ ಪರಿಪಾಕವನ್ನು ಈ ನಾಟಕದಲ್ಲಿ ಕನ್ನಡಕ್ಕೆ ತರಲು ಪ್ರಯತ್ನಿಸಿದ್ದಾರೆ. ಗೋಕಾಕರು ಮತ್ತೆ ನಾಟಕ ಬರೆಯದೇ ಇದ್ದುದು, ಇತರ ತರುಣ ಲೇಖಕರು ಅವರ ಈ ಮಧ್ಯ ಮಾರ್ಗವನ್ನು ಅವಲಂಬಿಸದೇ ಇದ್ದುದು ಕನ್ನಡದ ದುರ್ದೈವ—ಎಂದು ಹೇಳಬಹುದು.

ವಿಮರ್ಶೆ

"ವಿಮರ್ಶೆ ಶಾಸ್ತ್ರವಿದ್ದಂತೆ ಕಲೆಯೂ ಅಹುದು. ಸಾಹಿತ್ಯ ಕೃತಿಯನ್ನು ತೂಗಿ

ನೋಡುವಾಗ ಬೇಕಾಗುವ ನ್ಯಾಯಬುದ್ಧಿಯ ಜೊತೆಗೆ ಕಲ್ಪಕತೆಯೂ, ಸಹಾನುಭೂತಿಯೂ ಬೆರೆತುಕೊಂಡಿದ್ದರೆ ವಿಮರ್ಶೆಯು ಅಭಿಪ್ರಾಯದ ಸಂತೆಯಾಗುತ್ತದೆ. ಕಲ್ಪಕತೆಗೆ ಮೀಮಾಂಸೆಯ ತಾಳಮೇಳವಿಲ್ಲದಿದ್ದರೆ ವಿಮರ್ಶೆಯು ಅರ್ಧಾಂಗವಾಯು ಹಿಡಿದ ದೇಹದಂತೆ ಅಸಮರ್ಥವಾಗುತ್ತದೆ. ಈ ಸಮನ್ವಯವನ್ನು ಸಾಧಿಸಿದ್ದ ವಿಮರ್ಶಕರು ಕವಿಗಳಾಗಬಲ್ಲರು; ಕವಿಗಳು ವಿಮರ್ಶಕರಾಗಬಲ್ಲರು. ಇಂದಿನ ಉತ್ತಮ ಸಾಹಿತ್ಯದಲ್ಲಿ ಕಂಡುಬರುವ ಈ ಕವಿ ವಿಮರ್ಶಕ ಪರಂಪರೆ ಕನ್ನಡದಲ್ಲಿ ಇನ್ನೂ ಹೆಚ್ಚಾಗಿ ಬೆಳಗಬೇಕಾಗಿದೆ" ಎನ್ನುತ್ತ ವಿಮರ್ಶೆಯಲ್ಲಿಯೂ ಸಮನ್ವಯದೃಷ್ಟಿಯ ಅವಶ್ಯಕತೆಯನ್ನು ವಿನಾಯಕರು ಕಂಡಿದ್ದಾರೆ. 'ಸಾಹಿತ್ಯದಲ್ಲಿ ಪ್ರಗತಿ' ಎಂಬ ಗ್ರಂಥಕ್ಕೆ ಮುನ್ನುಡಿ ಬರೆಯುತ್ತಾ ವಿನಾಯಕರು, "ಹಳತು-ಹೊಸತನ್ನು ಮೂಡಣ-ಪಡುವಣದ ದರ್ಶನಗಳನ್ನೂ ಬೆರಸಿ ಮಾತ್ರ ನವೀನ ಸಂಸ್ಕೃತಿಯೊಂದನ್ನು ನಾವು ಕಟ್ಟುವದು ಸಾಧ್ಯವಿದೆ. ಈ ನಾವೀನ್ಯವು ನಮ್ಮ ಅರ್ಥ-ರಾಜಕಾರಣ-ಸಾಹಿತ್ಯ-ಕಾಮ-ಧರ್ಮ ಮೊದಲಾದ ಎಲ್ಲ ಜೀವನ ರಂಗಗಳಲ್ಲಿ ಬರಬೇಕಾಗಿದೆ" ಎಂದಿದ್ದಾರೆ.

ಮೂಡಣ ಹಾಗೂ ಪಡುವಣ ಸಾಹಿತ್ಯ ಹಾಗೂ ಸಂಸ್ಕೃತಿಯ ಆಳವಾದ ಅಭ್ಯಾಸವಿದ್ದ ವಿನಾಯಕರು ವಿಮರ್ಶಾಶಾಸ್ತ್ರದ ಅನೇಕ ಮೂಲಭೂತ ಪ್ರಶ್ನೆಗಳನ್ನು ತಮ್ಮ ವಿಮರ್ಶಾಗ್ರಂಥಗಳಲ್ಲಿ ಚರ್ಚಿಸಿದ್ದಾರೆ. ಕಾವ್ಯವೆಂದರೇನು? ಮೂಡಣ ಹಾಗೂ ಪಡುವಣ ಕಾವ್ಯದೃಷ್ಟಿಗಳಲ್ಲಿರುವ ಸಾಮ್ಯ ವೈಷಮ್ಯಗಳಾವವು? ಸೌಂದರ್ಯವೆಂದರೇನು? ಗದ್ಯ-ಪದ್ಯಗಳ ಸಂಬಂಧವೇನು? ಕಾವ್ಯ ಹಾಗೂ ಛಂದಸ್ಸಿನ ಹೊಂದಿಕೆಯಾಗುವದು ಹೇಗೆ? ನವ್ಯಕಾವ್ಯವೆಂದರೇನು? ಮೊದಲಾದ ಪ್ರಶ್ನೆಗಳಿಗೆ ಸಮರ್ಥವಾಗಿ ಉತ್ತರಿಸಿದ್ದಾರೆ. "ವಿಮರ್ಶೆಗೂ ಅಸ್ಖಲಿತವಾದ, ಅನನ್ಯವಾದ ಒಂದು ವಾಣಿ ಇದೆ. ಅದು ಮೀಟುವ ತಂತಿಯನ್ನು ಇನ್ನುಳಿದ ಯಾವ ಸಾಹಿತಿಯೂ ಮೀಟಲಾರರು. ಮೋಹದ ಮಾಯೆಯನ್ನು ಕಿತ್ತೊಗೆದು ನಿಷ್ಪಕ್ಷಪಾತಿಯಾಗಿ ಸಾರುವ ಕೃಷ್ಣನ ಪಾಂಚಜನ್ಯವು ವಿಮರ್ಶೆಗೆ ಸಲ್ಲುವದು" ಎನ್ನುತ್ತಾರೆ.

ಎಸ್. ಅನಂತನಾರಾಯಣರು ಬರೆದ 'ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ' ಎಂಬ ಸುದೀರ್ಘ ವಿಮರ್ಶಾಕೃತಿ ಇಂದಿನ ಕನ್ನಡ ಕಾವ್ಯದ ಇತಿಹಾಸದಲ್ಲಿ ಒಂದು ಮೈಲುಗಲ್ಲು ಎಂದು ಪ್ರಸ್ತಾವನಾ ರೂಪದಲ್ಲಿ ಬರೆದ ಗ್ರಂಥಪರಿಚಯದಲ್ಲಿ ಹೇಳುತ್ತಾರೆ. "ಆಧುನಿಕ ಕನ್ನಡ ಕಾವ್ಯವನ್ನು ಕುರಿತು ಇಷ್ಟೊಂದು ಸಹೃದಯತೆ ಪಾಂಡಿತ್ಯ, ಪರಿಶ್ರಮದಿಂದ ರಚಿತವಾದ ಪ್ರಥಮ ವಿಮರ್ಶಾಕೃತಿ" ಎಂದಿದ್ದಾರೆ. ಇಂದಿನ ಕಾವ್ಯದಲ್ಲಿ ಕಾಣಿಸಿಕೊಂಡ ನವೀನ ಕಾವ್ಯ ಪ್ರಕಾರಗಳನ್ನು ಚರ್ಚಿಸಿ ಅವುಗಳ ಲಕ್ಷಣಗಳನ್ನು ವಿಶದಪಡಿಸಿದ್ದಾರೆ. "ಆಧುನಿಕ ಕನ್ನಡ ಕಾವ್ಯ ಮಿಶ್ರ ವಿವಾಹದ ಸಂತತಿ. ಕನ್ನಡ ಚೇತನ ಅದರ ತಂದೆಯಾದರೂ ಆಂಗ್ಲ ಕಾವ್ಯ ಅದರ ತಾಯಿ. ಈ ಕಾವ್ಯದ

ಇತಿಹಾಸವನ್ನು ಬರೆಯುವಾಗ ಕೆಲವರು ತಂದೆಯ ಪುಣ್ಯವನ್ನು ಅತಿಶಯೀಕರಿಸಿದರೆ ಹಲವರು ತಾಯಿಯ ಋಣವನ್ನು ಒತ್ತಿ ಹೇಳುವ ಸಂಭವವಿದೆ. ಈ ಪುಣ್ಯ-ಋಣಗಳನ್ನು ಸರಿಯಾಗಿ ತೂಗಿ ನೋಡುವದು ವಿಮರ್ಶಕನ ಕರ್ತವ್ಯವಾಗಿದೆ. ಪ್ರಸ್ತುತ ಲೇಖಕರು ಹಾಗೆ ಮಾಡುವಾಗ ಇಂದಿನ ಪ್ರತಿಯೊಂದು ಕಾವ್ಯ ಪ್ರಕಾರದ ಪೂರ್ಣಪರಿಚಯ ಓದುಗನಿಗೆ ಆಗುವಂತೆ ಮಾಡಿದ್ದಾರೆ. ಭಾವಗೀತ, ಸಾನೆಟ್, ಪ್ರಗಾಥ, ಸರಳ ರಗಳೆ, ಕಥನ ಕವನ, ಮಹಾಕಾವ್ಯ, ಅಣಕವಾಡು, ನವ್ಯಕಾವ್ಯ, ವಿಮರ್ಶೆ—ಈ ಎಲ್ಲ ಹೊಸ ಹುಟ್ಟುಗಳಹಿನ್ನೆಲೆ ಇಲ್ಲಿ ವಿಶದವಾಗಿ ಚಿತ್ರಿತವಾಗಿದೆ. ಎಲಿಜಿ, ದೃಶ್ಯಕಾವ್ಯಾತ್ಮಕ ಗೀತ, ಏಕೋಕ್ತಿಗೀತ,—ಇವೇ ಮೊದಲಾದ ಪ್ರಕಾರಗಳ ವಿಷಯವೂ ಮುಖ್ಯ. ಆದರೆ ಇಲ್ಲಿ ಬಂದುದು ಕಡಿಮೆಯಲ್ಲ...ಶ್ರೀ ಅನಂತನಾರಾಯಣ ಅವರು ಮೀಮಾಂಸೆ ಅವಲೋಕನ, ವಿವೇಚನೆಯ ದಾರಿಯನ್ನೇ ಹೆಚ್ಚಾಗಿ ನಡೆದಿದ್ದಾರೆ. ಅಲ್ಲಲ್ಲಿ ಬೆಲೆ ಕಟ್ಟುವದು ಅನಿವಾರ್ಯವೆಂದೆನಿಸಿದಾಗ ಆದಷ್ಟು ನಿರ್ವಿಕಾರವಾಗಿ ಶಾಸ್ತ್ರೀಯ ಶೈಲಿಯಲ್ಲಿ—ಹಾಗೆ ಮಾಡಿದ್ದಾರೆ, ಒಂದೆರಡು ಕಡೆ ಎಡವಿದರೂ ಒಟ್ಟಿನಲ್ಲಿ ಅವರು ಕಾಯ್ದುಕೊಂಡು ಬಂದಿದ್ದಾರೆ” ಎಂದು ವಿನಾಯಕರು ಹೇಳಿದ್ದಾರೆ.

‘ಕವಿ-ಕಾವ್ಯ-ಕಲ್ಪನೆ’ ಎಂಬ ಪಂಚಾಕ್ಷರಿ ಹಿರೇಮಠರ ಪುಸ್ತಕದ ಮುನ್ನುಡಿಯಲ್ಲಿ, “ನಮ್ಮ ಶಿಕ್ಷಣದ ಕ್ರಮ ವಿಚಿತ್ರವಾಗಿದೆ. ನಮಗೆ ಇಂಗ್ಲೆಂಡಿನ ಶೆಲ್ಲಿ, ಫ್ರಾನ್ಸಿನ ಮೆಲಾರ್ಮೆ, ಸ್ಕಾಟಲಂಡಿನ ಬರ್ನ್ಸ್, ಇವರ ಕಾವ್ಯದ ಬಗ್ಗೆ ಚೆನ್ನಾಗಿ ಗೊತ್ತಿದೆ. ಆದರೆ ನಮ್ಮ ನೆರೆಹೊರೆಯ ಪ್ರಾಂತಗಳ ಸಾಹಿತ್ಯದ ಪರಿಚಯವೇ ನಮಗಿರುವದಿಲ್ಲ.” ಎನ್ನುತ್ತ ಲೇಖಕರು ಬಂಗಾಳದ ಚಂಡಿದಾಸ, ಕಾಶ್ಮೀರದ ಶೇಖನೂರುದ್ದೀನ ನೂರಾನಿ, ಕೇರಳದ ವಳ್ಳತ್ತೋಳ್ ನಾರಾಯಣ ಮೇನೋನ್ ಹಾಗೂ ಜಿ. ಶಂಕರಕುರುಪ್‌ರ ಕೃತಿಪರಿಚಯ ಮಾಡಿಸಿಕೊಟ್ಟ ಬಗ್ಗೆ ಮೆಚ್ಚಿಕೆ ವ್ಯಕ್ತಪಡಿಸಿದ್ದಾರೆ.

ಇತರ ಕೃತಿಗಳು

ಕಾಪಸೆ ರೇವಪ್ಪನವರ ‘ಬಿಲ್ವದಳ’ ಎಂಬ ಕಥಾ ಸಂಗ್ರಹಕ್ಕೆ ಬರೆದ ಮುನ್ನುಡಿಯಲ್ಲಿ “ಹಳ್ಳಿಯ ಬಯಲಿನಲ್ಲಿ ಬೆಳೆದ ಸ್ವಚ್ಛಂದ ಕಲ್ಪನಾಶಕ್ತಿ, ಅವನ್ನು ರೂಪಿಸುವ ಚಿತ್ರಶಿಲ್ಪದ ಬಗೆ, ಗದ್ಯ ಕಾವ್ಯದ ಶೈಲಿಯ ಹೊಸಮಾದರಿ” ಇವು ಲೇಖಕರ ಶೈಲಿಯ ಹೆಗ್ಗುರುತುಗಳು ಎಂದಿದ್ದಾರೆ. ಎಸ್. ಎಸ್. ಗದಗಕರರ ‘ವಾಗ್‌ಲಹರಿ’ ಎಂಬ ನಾಟ್ಯಘಟಗಳ ಸಂಗ್ರಹದ ಬಗ್ಗೆ ಬರೆಯುತ್ತ, “ಮಹಾಕಾವ್ಯಕ್ಕೆ ಭಾವಗೀತವಂತೆ, ಕಾದಂಬರಿಗೆ ಸಣ್ಣ ಕತೆಯಂತೆ ನಾಟಕದೊಡನೆ ಹೋಲಿಸಲು ಏಕಾಂಕ ಇಲ್ಲವೆ ಈ ಏಕೋಕ್ತಿ ದೃಶ್ಯ (Dramatic monologue) ಇದೆ” ಎಂದಿದ್ದಾರೆ. ಮಿಂಚಿನಬಳ್ಳಿಯವರು ಪ್ರಕಟಿಸಿದ ‘ಕನ್ನಡದ ಕಾಲುಶತಮಾನ’ (೧೯೬೫) ಎಂಬ

ಬೃಹತ್ ಗ್ರಂಥಕ್ಕೆ ಪೀಠಿಕೆ ಬರೆಯುತ್ತ, "ಮಿಂಚಿನಬಳ್ಳಿ ತನ್ನ ರಜತೋತ್ಸವವನ್ನು ಆಚರಿಸುವ ರೀತಿಯೂ ವೈಶಿಷ್ಟ್ಯಪೂರ್ಣವಾಗಿದೆ. ಬಳ್ಳಿಯ ದೃಷ್ಟಿಯಲ್ಲಿ ಜೀವನವು ಅಷ್ಟ-ಪೈಲಲ್ಲ; ಒಂಭತ್ತು ಪೈಲು. ರಾಜಕಾರಣ, ಸಾಹಿತ್ಯ, ಸಂಶೋಧನೆ, ಲಲಿತಕಲೆ, ಅರ್ಥ, ಪತ್ರಿಕಾ ವ್ಯವಸಾಯ, ಧರ್ಮ ಹಾಗೂ ಕೃತಿ, ಔದ್ಯೋಗೀಕರಣ ಇವೇ ಆ ಒಂಬತ್ತು ಪೈಲುಗಳು" ಎಂದಿದ್ದಾರೆ. 'ಸುಳುವು ಹೊಳವು' ಎಂಬ ಪ್ರಬಂಧ ಸಂಕಲನಕ್ಕೆ ದೀರ್ಘವಾದ ಮುನ್ನುಡಿ ಬರೆದು ಅದರಲ್ಲಿ ಲಘು ಪ್ರಬಂಧದ ಬಗ್ಗೆ ಬರೆದಿದ್ದಾರೆ. ಶ್ರೀ ಬಿ. ಆರ್. ವಾಡಪ್ಪಿಯವರ 'ಗಾಳಿಗುದುರೆ'ಯಲ್ಲಿಯ ಪ್ರಬಂಧಗಳ ಗುಣಾವಗುಣ ಗಳನ್ನು ವಿಮರ್ಶಿಸಿದ್ದಾರೆ. ತಾವೇ ಸಂಪಾದಿಸಿದ 'ಇಂದಿನ ಕರ್ನಾಟಕ' ಎಂಬ ಪ್ರಬಂಧ ಸಂಕಲನಕ್ಕೆ ಮುನ್ನುಡಿ ಬರೆಯುತ್ತ, "ಜಗತ್ತಿನ ಸಂಸ್ಕೃತಿಗಳ ಇತಿಹಾಸವನ್ನು ಪರಿಶೀಲಿಸಿದಾಗ—ಒಂದೊಂದು ನಗರವು ಒಂದೊಂದು ಸಂಸ್ಕೃತಿಯ ಪ್ರತೀಕವಾಗಿ ನಿಂತಿರುವದು ಕಂಡುಬರುತ್ತದೆ. ನಳಂದಾ, ತಕ್ಷಶಿಲೆ, ಅಥೆನ್ಸ, ಪ್ಯಾರಿಸ್, ಲಂಡನ್, ನ್ಯೂಯಾರ್ಕ— ಇವೆಲ್ಲ ಒಂದೊಂದು ಸಂಸ್ಕೃತಿಯ ಕೇಂದ್ರಗಳಾಗಿದ್ದವು. ವ್ಯಕ್ತಿಗೆ ಒಂದು ವ್ಯಕ್ತಿತ್ವವಿರುವಂತೆ ವ್ಯಕ್ತಿಸಮುದಾಯಗಳಾದ ಪಟ್ಟಣ ಹಳ್ಳಿಗಳಿಗೂ ಒಂದೊಂದು ವ್ಯಕ್ತಿತ್ವವಿರುತ್ತದೆ. ಮೂಡಲಿದ್ದ ಈ ವ್ಯಕ್ತಿತ್ವವನ್ನು ಬಣ್ಣಿಸಿ ಜಾಗೃತವಾಗಲಿದ್ದ ಕನ್ನಡ ನಾಡಿನ ಆತ್ಮಪುರುಷನ ಮೂರುತಿಯನ್ನು ಒಡಮೂಡಿಸಲು ಇಲ್ಲಿ ಹವಣಿಸಲಾಗಿದೆ" ಎನ್ನುತ್ತಾರೆ. ಪ್ರವಾಸ ಸಾಹಿತ್ಯದಲ್ಲಿ ಅತಿ ಮಹತ್ವದ ಕೃತಿಗಳಾದ 'ಸಮುದ್ರದಾಚೆಯಿಂದ' ಹಾಗೂ 'ಸಮುದ್ರದೀಚೆಯಿಂದ' ಎಂಬ ತಮ್ಮ ಗ್ರಂಥಗಳಿಗೆ ಮುನ್ನುಡಿ ಬರೆದು ತಮ್ಮ ಉದ್ದೇಶ ತಿಳಿಸಿದ್ದಾರೆ.

ಇಂಗ್ಲಿಷ ಭಾಷೆಯಲ್ಲಿ ಪ್ರಕಟವಾದ ಸುಮಾರು ೨೫ ಗ್ರಂಥಗಳಿಗೆ ಮುನ್ನುಡಿಯನ್ನು ಬರೆದಿದ್ದಾರೆ. ಇದರಲ್ಲಿ ಸಾಹಿತ್ಯ, ಭಾಷಾಶಾಸ್ತ್ರ, ವಿಮರ್ಶೆ, ಇಂಗ್ಲಿಷ್ ಶಿಕ್ಷಣ, ಸೌಂದರ್ಯಶಾಸ್ತ್ರ, ಮುಂತಾದ ವಿಷಯಗಳ ಬಗ್ಗೆ ಅಧಿಕಾರವಾಣಿಯಿಂದ ಬರೆದಿದ್ದಾರೆ.

ಶ್ರೀ ವಿನಾಯಕರ ಮುನ್ನುಡಿಗಳನ್ನೆಲ್ಲ ವಿಷಯಾನುಕ್ರಮವಾಗಿ ಸಂಪಾದಿಸಿ ಸಂಗ್ರಹಿಸಿ ಪ್ರಸಿದ್ಧಿಪಡಿಸಿದರೆ, ಈ ಸಂಗ್ರಹವು ಸಾಹಿತ್ಯಚರಿತ್ರೆಯ ಹಾಗೂ ವಿಮರ್ಶೆಯ ಬೆಳವಣಿಗೆಯ ಸ್ಥಿತ್ಯಂತರಗಳನ್ನು ಪ್ರತಿಬಿಂಬಿಸುವ ಒಂದು ಗ್ರಂಥವಾಗುವದರಲ್ಲಿ ಸಂದೇಹವಿಲ್ಲ. ಮುನ್ನುಡಿಗಳಲ್ಲಿ ಅವರ ವ್ಯಕ್ತಿತ್ವ, ಪಾಂಡಿತ್ಯ, ವಿಮರ್ಶನ ವಿಚಕ್ಷಣತೆ ಹಾಗೂ ಎಲ್ಲಕ್ಕೂ ಸೂತ್ರಪ್ರಾಯವಾಗಿ ಅವರ ಸಮನ್ವಯ ದೃಷ್ಟಿ ಕಂಡುಬರುತ್ತದೆ.

ಇಂಗ್ಲಿಷ್ ಲೇಖನಗಳು

ಎಚ್. ಜಿ. ಸೂರ್ಯನಾರಾಯಣರಾವ್

ಶ್ರೀ ಗೋಕಾಕರು ಕನ್ನಡ ಸಾಹಿತ್ಯವನ್ನು ತಮ್ಮ ಸೃಷ್ಟಿವೈವಿಧ್ಯದಿಂದ ಶ್ರೀಮಂತಗೊಳಿಸಿರುವುದು ಸರಿಯಷ್ಟೆ. ಇಂಗ್ಲಿಷ್‌ನಲ್ಲಿಯೂ ಅವರದು ಪಳಗಿದ ಕೈ. ಅವರ ಮೊದಲ ಗಮ್ಯ ಸಾಹಿತ್ಯತ್ಯೋಪಾಸನೆ. ಅವರ ಉದ್ದೇಶ ಎಲ್ಲದರ ಹಿಂದಿರುವ ವಿಶಾಲಜೀವನದ ದಾರಿಯ ಶೋಧನ. ಅದರ ಮನನ, ಅಭ್ಯಾಸ ಉನ್ನತ ಮಟ್ಟದಲ್ಲಿ ಮಾಡಿ ಅವರ ವಿಚಾರಗಳನ್ನು ಕನ್ನಡದಲ್ಲಿ ಹೇಗೋ, ಹಾಗೆ ಇಂಗ್ಲಿಷಿನಲ್ಲಿಯೂ ಹರಿಯಬಿಟ್ಟಿದ್ದಾರೆ. ಎರಡು ಭಾಷೆಗಳಲ್ಲಿಯೂ ಅವರಂತೆ ಸೊಗಸಾಗಿ ಬರೆಯುವವರು ಬಹು ಅಪರೂಪ. ಅವರ ಕಾರ್ಯವ್ಯಾಪ್ತಿ ವಿಶಾಲ ಭಾರತಕ್ಕೆ ಹರಡಿದ್ದರಿಂದ ಇಂಗ್ಲಿಷ್ ಭಾಷೆಯನ್ನೇ ಹೆಚ್ಚಾಗಿ ಬಳಸಬೇಕಾಗಿ ಬಂತು. ಅವರು ಬೇರೆ ಬೇರೆ ಸಂದರ್ಭಗಳಲ್ಲಿ ಬರೆದಿರುವ ಲೇಖನಗಳು, ಬಾಳನ್ನು ಹಸನಗೊಳಿಸುವ ಎಲ್ಲಾ ವಿಷಯಗಳಿಗೂ ಸಂಬಂಧಿಸಿವೆ. ಅವರೇ ಹೇಳಿರುವಂತೆ, "ನನಗೆ ಮುಖ್ಯವಾದ ಪ್ರಚೋದನಶಕ್ತಿ ಇದು. ಬಾಳನ್ನು ತಿಳಿಯಬೇಕೆಂಬ ಜಿಜ್ಞಾಸೆ, ಹಂಬಲ." ಇದು ಅವರ ಇಂಗ್ಲಿಷ್ ಬರವಣಿಗೆಗಳಲ್ಲೂ ಕಂಡುಬರುವ ಮೂಲ ಪ್ರೇರಣೆ.

'ತ್ರಿವೇಣಿ,' 'ಲಿಟರರಿ ಕ್ರೈಟೀರಿಯನ್,' 'ಬ್ರಹ್ಮವಾದಿನ್' ಮುಂತಾದ ಹೆಸರಾಂತ ಇಂಗ್ಲಿಷ್ ಪತ್ರಿಕೆಗಳಲ್ಲಿ ಇವರ ಲೇಖನಗಳು ಪ್ರಕಟವಾಗಿವೆ. ಅವುಗಳ ಪೈಕಿ ಕೆಲವು ಷೇಕ್ಸ್‌ಪಿಯರ್, ಟಾಲ್‌ಸ್ಟಾಯ್ ಮುಂತಾದ ಸಾಹಿತಿಗಳನ್ನು ಕುರಿತು ಬರೆದವು. ಕೆಲವು ಭಾರತ ಸಂಸ್ಕೃತಿ ಮತ್ತು ಸೌಂದರ್ಯಶಾಸ್ತ್ರದ ಬಗ್ಗೆ ಮಾಡಿರುವ ಚಿಂತನೆ. ಕೆಲವು ಕನ್ನಡ ಸಾಹಿತ್ಯಚರಿತ್ರೆಯನ್ನು ಪರಿಚಯ ಮಾಡಿಕೊಡುವ ಲೇಖನಗಳು. ಮತ್ತೆ ಕೆಲವು ಸರ್ವಜ್ಞ ಮುಂತಾದ ಕ್ರಾಂತಿಕಾರ ಕವಿಗಳ ಬಗ್ಗೆ ಹಾಗೂ ಬೇಂದ್ರೆಯವರಂಥ ನವೋದಯ ಕಾಲದ ಧೀಮಂತ ಕವಿಗಳ ಬಗ್ಗೆ ಬರೆದ ವಿಮರ್ಶಾತ್ಮಕ ಲೇಖನಗಳು.

ಇವುಗಳನ್ನೆಲ್ಲಾ ಸಮಗ್ರವಾಗಿ ನೋಡಿದರೆ ನಮಗೆ ಕಂಡುಬರುವ ಅಂಶಗಳು— ಸಾಹಿತ್ಯ ಮತ್ತು ಕಲೆಗೆ ಸಂಬಂಧಪಟ್ಟಂತೆ ಅವರು ಮಾಡಿರುವ ಆಳವಾದ ಚಿಂತನೆ, ಉಜ್ವಲ ದೇಶಾಭಿಮಾನದಿಂದ ಹೊರಹೊಮ್ಮಿರುವ ಸುಂದರವಾದ ಭಾವನೆಗಳು, ನಮ್ಮ ಆರ್ಷೇಯ ಸಂಸ್ಕೃತಿಯಲ್ಲಿ ಅವರಿಗಿರುವ ಗಾಢಪ್ರೇಮ, ಭಾರತದ ನಾನಾ ಭಾಷೆಗಳಲ್ಲಿ

ರುವ ಸಾಹಿತ್ಯದ ಪರಿಚಯ, ಸಾಹಿತ್ಯಕ್ಕಿಂತಲೂ ಅಮೂಲ್ಯವಾದ ಜೀವನದ ವಿಕಾಸ ಮತ್ತು ಔನ್ನತ್ಯ ಸಾಧನೆ, ನಾನಾ ಅನುಭವಗಳನ್ನು ಹಿರಿದಾದ ಕಲ್ಪನೆಯಿಂದ ಸಮರಸಗೊಳಿಸುವ ಪ್ರವೃತ್ತಿ.

ಟಾಲ್‌ಸ್ಟಾಯಿಯ ಕಲಾದೃಷ್ಟಿ

ಟಾಲ್‌ಸ್ಟಾಯಿಯ ಕಲಾದೃಷ್ಟಿಯ ಬಗ್ಗೆ ಬರೆದ ಲೇಖನ 'ಲಿಟರರಿ ಕ್ರೈಟೀರಿಯನ್ನಿ'ನ ಹತ್ತನೇ ವರ್ಷದ ವಿಶೇಷ ಸಂಚಿಕೆಯಲ್ಲಿ ಪ್ರಕಟವಾಯಿತು. ಈ ಲೇಖನ ಡೆಲ್ಲಿಯಲ್ಲಿ ಭಾರತ ಸಾಂಸ್ಕೃತಿಕ ಪರಿಷತ್ತು ಟಾಲ್‌ಸ್ಟಾಯ್ ತೀರಿಕೊಂಡು ಐವತ್ತು ವರ್ಷಗಳಾದ ಸಂದರ್ಭದಲ್ಲಿ ಏರ್ಪಡಿಸಿದ್ದ ವಿಚಾರಗೋಷ್ಠಿಗೆ ಸಿದ್ಧಮಾಡಿದ್ದು. ಕಲೆಯ ಮತ್ತು ನೀತಿಗೆ ಸಂಬಂಧಪಟ್ಟಹಾಗೆ ಟಾಲ್‌ಸ್ಟಾಯ್ ಮತ್ತು ಗಾಂಧೀಜಿ ಅಭಿಪ್ರಾಯಗಳು ಒಂದೇ ದೃಷ್ಟಿಯಿಂದ ಕೂಡಿವೆ. ಇವರಿಬ್ಬರ ಅಭಿಪ್ರಾಯಗಳನ್ನು ಹೋಲಿಸಿರುವುದು ಈ ಲೇಖನದ ಸ್ವಾರಸ್ಯ. ಕಲೆಯ ಉದ್ದೇಶವೇನು ಎಂಬುದನ್ನು ಕುರಿತು ಸೂಕ್ಷ್ಮವಾಗಿ ವಿಮರ್ಶಿಸಿದ್ದಾರೆ. ಕಲೆ ಮತ್ತು ಸ್ಫೂರ್ತಿ, ಕಲೆಯ ಕ್ರಿಯೆ, ಜನತೆಯ ಮೇಲೆ ಕಲೆ ಬೀರುವ ಪ್ರಭಾವ, ಉನ್ನತವಾದ ಕಲೆ ಎಂದರೇನು?—ಇವನ್ನೂ ಗೋಕಾಕರು ವಿಸ್ತಾರವಾಗಿ ವಿವೇಚಿಸಿದ್ದಾರೆ. ಕಲೆಯ ಪ್ರಸಾರಗುಣಕ್ಕೆ ಟಾಲ್‌ಸ್ಟಾಯ್ ಬಹಳ ಬೆಲೆ ಕೊಡುತ್ತಾನೆ. ಅವನ ಕಲಾದೃಷ್ಟಿಯನ್ನು ಗೋಕಾಕರು ಮೆಚ್ಚಿದರೂ ಅದರ ಇತಿಮಿತಿಗಳನ್ನು ಇಲ್ಲಿ ಬಹಳ ಚೆನ್ನಾಗಿ ಪ್ರಸ್ತಾಪಿಸಿದ್ದಾರೆ. ಕಲೆಯ ನಾನಾ ಮುಖಗಳ ಬಗ್ಗೆ ಆಳವಾದ ಚಿಂತನೆ ಇಲ್ಲಿ ಕಂಡುಬರುತ್ತದೆ. ಅವರ ವಿಮರ್ಶಾಶಕ್ತಿಗೆ ಇದು ದ್ಯೋತಕವಾಗಿದೆ.

ಟಾಲ್‌ಸ್ಟಾಯ್ ರಷ್ಯಾದ ಕ್ರಾಂತಿ ಪೂರ್ವಕಾಲದ ಅತ್ಯಂತ ಪ್ರತಿಭಾನ್ವಿತ ಲೇಖಕನಾಗಿ ತನ್ನ ಉಜ್ವಲ ಸಾಹಿತ್ಯದಿಂದ ದೊಡ್ಡ ಸ್ಥಾನವನ್ನು ಪಡೆದಂಥ ಮಹನೀಯ. ಗಾಂಧೀಜಿ ಒಂದು ರೀತಿಯಲ್ಲಿ ಟಾಲ್‌ಸ್ಟಾಯ್‌ನ ಅನುಯಾಯಿಯೆಂದು ಹೇಳಬಹುದು. ಕಲೆ ಸತ್ಯ ಸಾಕ್ಷಾತ್ಕಾರವನ್ನು ಮಾಡಿಕೊಡಬೇಕು; ಸೌಂದರ್ಯವೂ, ಉಪಯುಕ್ತತೆಯೂ ಕಲೆಯ ಮುಖ್ಯ ಅಂಗಗಳೆನ್ನುವುದು ಅವರಿಬ್ಬರ ಮತ. ಇದೇ ರೀತಿ ಆಲೋಚಿಸುವವನು ಇಂಗ್ಲೆಂಡಿನ ಬರಹಗಾರ ರಸ್ಕಿನ್. ಈ ಮೂವರ ಪೈಕಿ ಟಾಲ್‌ಸ್ಟಾಯ್ ಬಹುದೊಡ್ಡವನೆಂದು ಹೇಳಬಹುದು—ಸ್ವಂತ ಕಲಾವಿದನಾಗಿ ಮತ್ತು ಕಲೆಯ ಜಿಜ್ಞಾಸಕನಾಗಿ. 'ಕಲೆ ಎಂದರೇನು?' ಎನ್ನುವ ಗ್ರಂಥದಲ್ಲಿ ಕಲೆ ಎಂಥ ಚಟುವಟಿಕೆ, ಅದರ ಉಗಮ, ಸ್ವಭಾವ ಮತ್ತು ಸಾರ್ಥಕತೆಯನ್ನು ಕುರಿತು ಆಳವಾಗಿ ಚಿಂತನೆ ಮಾಡಿದ್ದಾನೆ. ಮೊದಲಾಗಿ ಕಲೆ ಎಂಥದು? ಟಾಲ್‌ಸ್ಟಾಯ್ ಅಭಿಪ್ರಾಯದಲ್ಲಿ ಕಲೆಗಾರ ಒಂದು ಸಾರಿ ತಾನು ಅನುಭವಿಸಿದ ಭಾವನೆಗಳನ್ನು ಮತ್ತೊಮ್ಮೆ ತನ್ನಲ್ಲಿ ಉತ್ಪನ್ನ

ಮಾಡಿಕೊಂಡು ಅವನ್ನು ಭಂಗಿ, ಬಣ್ಣ, ಧ್ವನಿ ಅಥವಾ ಪದಗಳ ಮೂಲಕ ಅಭಿವ್ಯಕ್ತಿಗೊಂಡ ರೂಪಗಳ ಮೂಲಕ ಆ ಭಾವನೆಗಳನ್ನು ವ್ಯಕ್ತಪಡಿಸುವುದು—ಇತರರಲ್ಲೂ ಅದೇ ಅನುಭವವನ್ನುಂಟುಮಾಡುವುದು—ಇವೇ ಕಲೆಯ ಕ್ರಿಯೆ.

ವಿವಾದಾತ್ಮಕವಾದ ಈ ವಿಚಾರದ ಬಗ್ಗೆ ಆತನ ಅಭಿಪ್ರಾಯ ಖಚಿತವಾಗಿರುವುದನ್ನು ನಾವು ಗಮನಿಸಬೇಕು. ಕಲೆ ಸ್ಫೂರ್ತಿಯಿಂದ ಬರುವುದೆಂಬ ವಿಚಾರ ಎಲ್ಲೂ ಹೇಳಿಲ್ಲ. ಕಲೆಗಾರ ತನ್ನ ಭಾವನೆಗಳನ್ನು ಇತರರೊಡನೆ ಹಂಚಿಕೊಳ್ಳಬೇಕೆಂಬ ಆಸೆಯೇ ಅದರ ಮೂಲ. ಟಾಲ್‌ಸ್ಟಾಯ್ ಸ್ಫೂರ್ತಿಯುತವಾಗಿ ಕೆಲಸ ಮಾಡಿದ ಕಲೆಗಾರರಲ್ಲಿ ಒಬ್ಬನು. ಆದರೂ ಸ್ಫೂರ್ತಿಯಿಂದ ಕಲೆ ಹುಟ್ಟುವುದೆಂಬ ಅಭಿಪ್ರಾಯವನ್ನು ಹೇಳದಿರುವುದು ಸೋಜಿಗವಾಗಿದೆ. ಕಲೆಯಲ್ಲಿ ಸ್ಫೂರ್ತಿಯ ಅಂಶವಿಲ್ಲವೆಂದಲ್ಲ. ಅದಕ್ಕಿಂತಲೂ ಮುಖ್ಯವಾದ ವಿಷಯಗಳನ್ನು ಹೇಳುವ ಆತುರ. ಕಲೆ ಒಂದು ಅನುಕರಣೆ ಎನ್ನುವ ಮತದಲ್ಲೂ ಅವನಿಗೆ ಅಷ್ಟು ಆಸಕ್ತಿ ಇಲ್ಲ. ಹಾಗಾದರೆ ಕಲೆ ಒಂದು ಅಭಿವ್ಯಕ್ತಿ (Expression) ಎನ್ನಬಹುದೇ ? ಕಲೆಯ ಮುಖ್ಯ ಚಟುವಟಿಕೆ ನಡೆಯುವುದು ಕಲೆಗಾರನ ಜಾಗೃತ ಚೇತನದಲ್ಲಿ—ಇದೇ ಕ್ರೋಚೆಯ ಅಭಿಪ್ರಾಯ. ಅದರ ಪ್ರಸಾರ ಎರಡನೆಯ ಕೆಲಸ. ಆದರೆ ಟಾಲ್‌ಸ್ಟಾಯ್ ಈ ಮತವನ್ನು ಒಪ್ಪಲಿಲ್ಲ.

ತನ್ನ ಭಾವನೆಯನ್ನೇ ಇತರರಲ್ಲೂ ಉಂಟುಮಾಡುವ ಶಕ್ತಿಯುಳ್ಳವನೇ ನಿಜವಾದ ಕಲೆಗಾರ. ಎಷ್ಟೆಷ್ಟು ಮಟ್ಟಿಗೆ ಈ ಶಕ್ತಿ ಹೆಚ್ಚಾಗಿರುತ್ತದೆಯೋ ಅಷ್ಟಷ್ಟು ಮಟ್ಟಿಗೆ ಕಲೆ ಹಿರಿದು. ಆದರೆ ಅದಕ್ಕೆ ರೂಪವನ್ನು ಕೊಡುವುದು ಅಗತ್ಯ. ರೂಪವನ್ನೇ ಆರಾಧಿಸುವ ಮನೋಧರ್ಮ ಆತನಿಗೆ ಸಮ್ಮತವಿರಲಿಲ್ಲ. ಅದರ ಸಾರ್ಥಕತೆ ಇರುವುದು ಕಲೆಗಾರನ ಭಾವನೆಗಳನ್ನು ಸಮರ್ಪಕವಾಗಿ ಅಭಿವ್ಯಕ್ತಿಗೊಳಿಸುವುದರಲ್ಲಿ. ಇಲ್ಲಿ ಹುಟ್ಟುವ ಇನ್ನೊಂದು ಪ್ರಶ್ನೆಯೆಂದರೆ—ಎಂಥ ಭಾವನೆಗಳನ್ನು ಕಲೆಗಾರ ನಮ್ಮಲ್ಲಿ ಉಂಟುಮಾಡಬೇಕು? ಇದಕ್ಕೆ ಟಾಲ್‌ಸ್ಟಾಯ್ ಕೊಡುವ ಉತ್ತರ ವಿವಾದಕ್ಕೆ ಎಡೆಕೊಟ್ಟಿದೆಯೆಂದು ಸೂಚಿಸಿ ಗೋಕಾಕರು ಕಲೆಯ ವಿಷಯ ಭಾವನೆಗಳಿಗೆ ಸಂಬಂಧಪಟ್ಟಿರುವುದರಿಂದ ಮತ್ತು ಅವು ನಮ್ಮ ಜೀವನದ ಮೇಲೆ ಪ್ರಭಾವ ಬೀರುವುದರಿಂದ ಜನತೆಗೆ ಯಾವುದು ಒಳ್ಳೆಯದು, ಯಾವುದು ಅಪಾಯಕಾರಿ ಎನ್ನುವುದನ್ನು ನಿರ್ಣಯಿಸುವುದು ಮುಖ್ಯ. ಟಾಲ್‌ಸ್ಟಾಯ್ ದೃಷ್ಟಿಯಲ್ಲಿ ಧಾರ್ಮಿಕ ದೃಷ್ಟಿಯ ಭಾವನೆಗಳು ಶ್ರೇಯಸ್ಕರವಾದವು. ನಮ್ಮ ಲೌಕಿಕ ಮತ್ತು ಪಾರಮಾರ್ಥಿಕ ಅಭಿವೃದ್ಧಿಯಿರುವುದು ಜನತೆಯ ಪರಸ್ಪರ ಸಹೋದರ ಭಾವನೆಯಲ್ಲಿ; ಒಬ್ಬರಿಗೊಬ್ಬರು ಪ್ರೀತಿಯಿಂದ ಬಾಳುವ, ಸಮರಸವಾಗಿ ಜೀವಿಸುವಂಥ ಭಾವನೆಯಲ್ಲಿ. ಆದ್ದರಿಂದ ಕಲೆಗೂ ಜೀವನಕ್ಕೂ ನಿಕಟವಾದ ಸಂಪರ್ಕವಿದೆ. ಕಲೆಗಾಗಿ ಕಲೆ ಎನ್ನುವುದು ಮಹಾ ಅಪರಾಧವಾದೀತು. ಸಮಾಜಕ್ಕೆ ಕಲೆಯ ಮಹತ್ವವಿರುವುದೇ ಕಲೆಯ ಈ ಶಕ್ತಿಯಲ್ಲಿ -ಭಾವವನ್ನು ಕೆರಳಿಸುವ ಈ ಸತ್ವದಲ್ಲಿ.

ಟಾಲ್‌ಸ್ಟಾಯ್ ಧರ್ಮದ ಗೊಡ್ಡುಆಚರಣೆಗಳನ್ನು ವಿರೋಧಿಸಿದನು. ಎಲ್ಲೆಲ್ಲಿ ಭಾವನೆಯನ್ನು ಉದ್ದೀಪನಗೊಳಿಸುವ ಕಾರ್ಯ ನಡೆಯುವುದೋ ಅದೆಲ್ಲ ಅವನಿಗೆ ಪವಿತ್ರ. ಬರ್ನಾರ್ಡ್ ಷಾ ಹೇಳಿರುವಂತೆ ನಾಟಕರಂಗಕ್ಕೂ, ಸಂಗೀತಶಾಲೆಗೂ, ಪುಸ್ತಕ ಅಂಗಡಿಗೂ ಟಾಲ್‌ಸ್ಟಾಯ್ ಮಹತ್ವ ಕೊಟ್ಟಿದ್ದು ಈ ಕಾರಣದಿಂದ. ಜನತಾ ಪ್ರಗತಿಗೂ ಒಳ್ಳೆಯ ಬದುಕಿಗೂ ವಿಜ್ಞಾನದಷ್ಟೇ ಮುಖ್ಯವಾದ ಸಾಧನ ಕಲೆಯೆಂದು ಟಾಲ್‌ಸ್ಟಾಯ್ ಸಾರುತ್ತಾನೆ. ಯಾವ ಭಾವನೆಗಳು ಒಳ್ಳೆಯವು ಎಂಬುದನ್ನು ತೀರ್ಮಾನಿಸುವವರು ಯಾರು? ಈ ಪ್ರಶ್ನೆಗೂ ಅವನು ಕೊಡುವ ಉತ್ತರ ವಿಶಿಷ್ಟವಾದದ್ದು. ಹಳ್ಳಿಯ ಜನವೇ ಎಲ್ಲಾ ಕಲೆಯ ಒರಿನೆಗೂ ಒರೆಗಲ್ಲು. ಟಾಲ್‌ಸ್ಟಾಯ್ ಶ್ರೀಮಂತಮನೆತನದಲ್ಲಿ ಹುಟ್ಟಿ ಬೆಳೆದು ಶ್ರೀಮಂತ ವರ್ಗದ ಅಭಿರುಚಿ ಕೀಳೆಂದು ಹೇಳಿದ! ಇದು ಸಂಕುಚಿತ ನೈತಿಕ ದೃಷ್ಟಿಯಲ್ಲ. ಕಲೆಯ ಮೂಲ ನೆಲೆಗೆ ನಮ್ಮನ್ನು ಕರೆದೊಯ್ಯುವ ದೃಷ್ಟಿ. ಕವಿ ಶೆಲ್ಲಿ ಹೇಳಿದಂತೆ ಬಹುಶಃ ಟಾಲ್‌ಸ್ಟಾಯ್ ಹೇಳುವನು: ಪ್ರೇಮವೇ ನೀತಿಯ ಗುಟ್ಟು. ಸರಳವಾದ ಸಾಮಾನ್ಯ ಮನುಷ್ಯನ ಅಭಿರುಚಿ ಕೆಡಲು ಆಸ್ಪದವಿಲ್ಲ. ಅವನಿಗೆ ಪ್ರೇಮ, ಸಹಾನುಭೂತಿಗಳು ಸಹಜವಾಗಿ ಬರುತ್ತವೆ. ಒಳ್ಳೆಯದು, ಕೆಟ್ಟದ್ದು ಎನ್ನುವ ತಾರತಮ್ಯಜ್ಞಾನ ಹುಟ್ಟಿನಿಂದಲೇ ಬರುವುದು. ಇಲ್ಲಿ ಯಾವ ವರ್ಗದ ಮನುಷ್ಯನೆಂಬುದು ಮುಖ್ಯವಲ್ಲ. ಕೀಳು ಅಭಿರುಚಿಯ ರೈತರು ಶ್ರೀಮಂತ ವರ್ಗದ ಟಾಲ್‌ಸ್ಟಾಯ್‌ನಂತೆಯೇ ತಮ್ಮ ಹೃದಯದ ಪವಿತ್ರ ಜ್ಯೋತಿಯನ್ನು ಬೆಳಗಿಸಿಕೊಂಡು ಬಂದವರೂ ಇರಬಹುದು. ಆದ್ದರಿಂದ ನಾವು ಮೆಚ್ಚುವ ಕಲೆ ಎಂದು ಹೇಳಿದಾಗ "ನಾವು" ಎಂಬುದರ ಅರ್ಥ ಜನತೆಯ ಆತ್ಮಸಾಕ್ಷಿ. ಅದು ಎಲ್ಲಿ ಪ್ರಕಟವಾದರೂ ಸರಿಯೇ. ನಮ್ಮ ಧರ್ಮದೃಷ್ಟಿಗೆ ಅಪಚಾರವಾಗದಂತಹ ಎಲ್ಲ ಸಾಮಾನ್ಯ ಭಾವನೆಗಳೂ ಶ್ರೇಯಸ್ಕರವೇ. 'ಅನ್ನಾಕೆರಿನೀನ' ಕಾದಂಬರಿಯ ಕತೆ ದಾಂಪತ್ಯಜೀವನಕ್ಕೆ ಕಳಂಕತರುವ ಅನೀತಿಯುತ ನಡೆವಳಿಕೆಯಾದರೂ, ಅದನ್ನೇ ಕುರಿತು ಬರೆದದ್ದು. ಅವನ ವಿಚಾರ ನೈತಿಕದೃಷ್ಟಿಯಿಂದ ಕೂಡಿದ್ದಾದರೂ, ಆತನ ಕಲೆಯ ಕುರಿತ ವಿಚಾರಗಳು ವಿಶಾಲ ದೃಷ್ಟಿಯವು. ಬಹುಶಃ ಗಾಂಧೀಜಿ ಹೇಳಿದ ಮಾತು ಈ ಅಭಿಪ್ರಾಯವನ್ನೇ ಪೋಷಿಸುತ್ತದೆ. ಹೃದಯದ ಪರಿಶುದ್ಧತೆಯಲ್ಲಿ ನಿಜವಾದ ಸೌಂದರ್ಯವಿರುವುದು.

ಇನ್ನು ಉನ್ನತವಾದ ಕಲೆಯ ಬಗ್ಗೆ ಟಾಲ್‌ಸ್ಟಾಯ್ ಅಭಿಪ್ರಾಯಗಳು ಕುತೂಹಲಕರವಾಗಿವೆ. ಸಾಮಾನ್ಯ ಜನತೆಯ ಮೇಲೆ ಪರಿಣಾಮವನ್ನು ಬೀರುವಂತಹ ಕಲೆಯೇ ದೊಡ್ಡದು. ಕಲೆ ಉನ್ನತವಾದ ಹಾಗೆಲ್ಲಾ ಸಾಮಾನ್ಯ ಜನತೆಯ ಹೃದಯವನ್ನು ಸೂರೆಗೊಳ್ಳುವ ಅದರ ಶಕ್ತಿಯು ಹೆಚ್ಚಿರಬೇಕು. ಈ ತರಹದ ಸರ್ವಾದರಣೀಯವಾದ ಕಲೆಯನ್ನು ಸೃಷ್ಟಿಸುವುದು ನಿಜಕ್ಕೂ ಬಹಳ ಅಪರೂಪವಾದ ಸಾಧನೆ. ಈ ಸತ್ವ ಒಂದು

ಕಲಾಕೃತಿಗೆ ಬರುವುದಾದರೂ ಹೇಗೆ? ಅದರ ಗುಣಗಳು ಯಾವುವು? ಟಾಲ್‌ಸ್ಟಾಯ್‌ನ ಉತ್ತರ—ಸಂಕ್ಷಿಪ್ತತೆ, ಸರಳತೆ, ಪ್ರಾಮಾಣಿಕತೆ. ಸಂಕ್ಷೇಪವಾಗಿರುವುದು ಎಂದರೆ ಕೃತಿ ಭಾವಗೀತೆಯ ಹಾಗಾಗಲಿ, ಸಣ್ಣಕತೆಯ ಹಾಗಾಗಲಿ ಚಿಕ್ಕದಾಗಿರಬೇಕೆಂದಲ್ಲ. ಆದರೆ ಪದಪ್ರಯೋಗದಲ್ಲಿ, ತಂತ್ರರಚನೆಯಲ್ಲಿ ತುಂಬ ಮಿತಿಯಿರಬೇಕು—ವಿಷಯಪ್ರೋಷಣೆಗೆ ಎಷ್ಟು ಬೇಕೋ ಅಷ್ಟು. ಸರಳತೆ ಎಂದರೆ ಪ್ರದರ್ಶನಕ್ಕೆಂದೇ ಬುದ್ಧಿಚಾತುರ್ಯವನ್ನು ತೋರಿಸದಿರುವುದು. ಪ್ರಾಮಾಣಿಕತೆ ಎಂದರೆ ಆತ್ಮಸಾಕ್ಷಿಯಾಗಿ ಜನತಾ ಹೃದಯವಾಣಿಗೆ ವಿರೋಧವಾಗದಂತೆ ವಿಚಾರವನ್ನು ನಿರೂಪಿಸುವುದು.

ಹಳ್ಳಿಯ ಜನಕ್ಕೆ ಅತ್ಯುತ್ತಮವಾದ ಕಲಾಕೃತಿಯಿಂದ ಪ್ರಭಾವಿತಗೊಳ್ಳುವ ಶಕ್ತಿಯಿದೆ ಎಂದು ಟಾಲ್‌ಸ್ಟಾಯ್ ನಂಬಿಕೆ. ಈ ಚರ್ಚಾಸ್ಪದವಾದ ಸಮಸ್ಯೆಯನ್ನು ಕುರಿತು ಗೋಕಾಕರ ವಿಚಾರ ಹೀಗಿದೆ: ನಮ್ಮ ದೇಶದಲ್ಲಿ ರಾಮಾಯಣ, ಮಹಾಭಾರತ ಕಾವ್ಯಗಳು ಹಳ್ಳಿಯ ಜನರ ಮೇಲೆ ಶತಮಾನಗಳ ಕಾಲ ಪ್ರಭಾವ ಬೀರಿರುವುದನ್ನೂ, ಸರ್ವಜ್ಞ, ತುಳಸೀದಾಸ್, ಕಬೀರ್ ಮತ್ತು ಬರ್ನ್ಸ್ ಮುಂತಾದವರು ಕಾವ್ಯವನ್ನು ಬರೆದಿದ್ದನ್ನೂ ನೆನೆಯಬಹುದು. ಈ ವಿಷಯದಲ್ಲಿ ಟಾಲ್‌ಸ್ಟಾಯ್‌ನ ಅಭಿಪ್ರಾಯಕ್ಕೆ ಕಾರಣ ಅವನ ಕ್ರಾಂತಿಕರವಾದ ಉತ್ಸಾಹ. ವರ್ಡ್ಸ್‌ವರ್ತ್ ಕವಿಯೂ ಇದೇ ತರಹದ ಉತ್ಸಾಹದಿಂದ ಕಾವ್ಯದ ಭಾಷೆಯ ಬಗ್ಗೆ ತನ್ನ ಧೋರಣೆಯನ್ನು ತಳೆದ—ಜನ ಮಾತನಾಡುವ ನಿಜವಾದ ಭಾಷೆಯೇ ಕಾವ್ಯದಲ್ಲಿ ಪ್ರಯೋಗವಾಗಬೇಕೆಂದು. ಈ ಧೋರಣೆಯ ಲೋಪವನ್ನು ಬರ್ನಾರ್ಡ್ ಷಾ ಚೆನ್ನಾಗಿ ಹೊರಗೆಡಹಿದ. ಅದ್ವಿತೀಯ ಸಂಗೀತಗಾರನಾದ ಬೀಥೋವನ್ನನ ಒಂಬತ್ತನೆಯ ಸ್ವರಮೇಳನ (Symphony) ರಷ್ಯಾದ ಹಳ್ಳಿಗಾಡಿನ ಜನಕ್ಕೆ ಹಿಡಿಸಲಿಲ್ಲವಾದ್ದರಿಂದ ಅದು ನಿಜವಾದ ಕಲಾಕೃತಿಯಲ್ಲವೇ? ಇದರಲ್ಲಿ ಅಡಕವಾಗಿರುವ ಮುಖ್ಯ ಸಮಸ್ಯೆ ಎಂದರೆ—ಸರ್ವಸಮ್ಮತಿಯ ಮೇಲೆ ನಾವು ವಿಮರ್ಶೆಯ ಮೌಲ್ಯಗಳನ್ನು ನಿರ್ಧರಿಸಬಹುದೇ? ಸರ್ವಕಾಲಿಕ ಅಂಶ ಕಲೆಯಲ್ಲಿರಲಾರದೇ? ಈ ವಿಚಾರವನ್ನು ಗೋಕಾಕರು ವಿಶದೀಕರಿಸುತ್ತಾ ಹೀಗೆ ಅಭಿಪ್ರಾಯಪಟ್ಟಿದ್ದಾರೆ—ಹಳ್ಳಿಯ ಜನಕ್ಕೂ, ಉತ್ತಮ ಕಲೆಗೂ ಸಂಪರ್ಕ ಏರ್ಪಡುವುದು ಎರಡು ರೀತಿಯಲ್ಲಿ: ಮೊದಲನೆಯದಾಗಿ ಕಲೆಯೇ ಸರಳವಾದ ಭಾಷೆಯಲ್ಲಿ ಹೊರಹೊಮ್ಮುವುದು. ಆದರೆ ಇದು ಯಾವಾಗಲೂ ಸಾಧ್ಯವಲ್ಲ. ಮಿಲ್ಟನ್‌ನಂತೆ ಸಮೃತೆಯನ್ನೂ, ಫ್ರಾನ್ಸಿಸ್ ಥಾಮ್ಸನ್ನಿನಂತೆ ವೈಭವವನ್ನೂ, ಹಾಪ್‌ಕಿನ್ಸ್‌ನಂತೆ ಅಪೂರ್ವತೆಯನ್ನೂ, ಎಲಿಯಟ್‌ನಂತೆ ಸೂಚನಾತ್ಮಕ ಕಾವ್ಯವನ್ನೂ ಪ್ರೀತಿಸುವ ಬರಹಗಾರರಿದ್ದಾರೆ. ಬರ್ನ್ಸ್‌ನಂತೆ ಇವರೆಲ್ಲರು ಬರೆಯುವುದು ಸಾಧ್ಯವೂ ಅಲ್ಲ, ಯುಕ್ತವೂ ಅಲ್ಲ. ಎರಡನೆಯದಾಗಿ ದಿವ್ಯಕಲೆಯನ್ನು ಮೆಚ್ಚುವಂತಹ ತಿಳುವಳಿಕೆಯನ್ನು ಹಳ್ಳಿಯ ಜನತೆಗೆ ಕೊಡುವಂತಹುದು. ಈ ಮೂಲಕ ಕಾಡಿನಲ್ಲಿ ಗಿಡಗಳು ಎತ್ತರವಾಗಿ ಬೆಳೆಯುವಂತೆ

ಸಾಮಾನ್ಯ ಜನತೆಯಲ್ಲಿ ಉತ್ತಮ ಅಭಿರುಚಿ ಬೆಳೆಯಬಹುದು; ಒಂದು ಸಮಾಜದಲ್ಲಿ ಉತ್ತಮ ಸಂಸ್ಕೃತಿ ಪ್ರಚಾರವಾಗಬಹುದು. ಈ ತರಹ ಕಲೆಯನ್ನೇ ಬಹುಶಃ ಟಾಲ್‌ಸ್ಟಾಯ್ ಎತ್ತಿಹಿಡಿದಿರಬಹುದು.

ಸರಳತೆಯ ಗುಣವನ್ನೇ ಮುಖ್ಯವಾಗಿ ಪಡೆದಿರುವ ಕಲೆ ಮಾತ್ರ ಉನ್ನತವೆಂಬ ಟಾಲ್‌ಸ್ಟಾಯ್ ಅಭಿಪ್ರಾಯ ಗೋಕಾಕರಿಗೆ ಸಮ್ಮತವಿಲ್ಲ. ಅವರ ವಾದ ಹೀಗಿದೆ: ನಿಸರ್ಗ ಕೊಡಲಾಗದುದನ್ನು ಕಲೆ ಕೊಡಬಲ್ಲುದು. ಈ ಪಕ್ಷಪಾತ ವ್ಯಕ್ತಿಯ ಸ್ವಭಾವಕ್ಕೆ ಸಂಬಂಧಪಟ್ಟುದು. ಇದು ಸಾಹಿತ್ಯವನ್ನು ಅಳೆಯುವ ಮಾನದಂಡವಾಗಲಾರದು. ಗಾಂಧೀಜಿ ಹೇಳಿದ ಹಾಗೆ "ನಾನು ಕಲೆಯ ವಿಚಾರದಲ್ಲಿಯೂ ಕೋಟ್ಯಂತರ ಸಾಮಾನ್ಯ ಜನಗಳ ದೃಷ್ಟಿಯಿಂದಲೇ ವಿಚಾರವನ್ನು ನೋಡುತ್ತೇನೆ. ಮೊದಲು ಸತ್ಯವನ್ನು ಅವರಿಗೆ ತೋರಿಸಿ. ಆಮೇಲೆ ಅವರು ಸೌಂದರ್ಯವನ್ನು ಕಾಣುವರು." ಈ ಮಾತು ವಿದ್ಯಾಭ್ಯಾಸಕ್ಕೆ ಒಂದು ಒಳ್ಳೆಯ ತತ್ವವಾಗಬಹುದು, ಕಲೆಗೆ ಅನ್ವಯಿಸುವುದಿಲ್ಲ. ಔನ್ನತ್ಯ ಸತ್ಯದಲ್ಲೂ ಉಂಟು, ಸೌಂದರ್ಯದಲ್ಲಿಯೂ ಉಂಟು. ಟಾಲ್‌ಸ್ಟಾಯ್, ಗಾಂಧಿಯಂತಹವರಿಗೆ ಸತ್ಯಶೋಧಕನ ಕಡೆಗೆ ಒಲವು. ಬಹುಶಃ ಸಾಮಾನ್ಯ ಜನಕ್ಕೂ ಕಲೋಪಾಸಕನಿಗಿಂತ ಸತ್ಯಾನ್ವೇಷಕನನ್ನು ಗುರುತಿಸುವುದು ಸುಲಭ. ಐರಿಷ್ ಕವಿ ಯೇಟ್ಸ್ ಟಾಗೋರರ 'ಗೀತಾಂಜಲಿ' ಬಗ್ಗೆ ಹೇಳಿರುವಂತೆ ಅದರ ಭಾವಗೀತೆಗಳು ಹುಲ್ಲಿನ ಗರಿಗಳಂತೆ ಸರಳವಾಗಿದ್ದರೂ ಅತ್ಯುನ್ನತ ಸಂಸ್ಕೃತಿಯ ಕುಸುಮಗಳು. ಕಹ ಲೀಲ್ ಗಿಬ್ರಾನಿನ ಕೃತಿಗಳ ಬಗ್ಗೆಯೂ ಈ ಮಾತು ಹೇಳಬಹುದು. ಉಪನಿಷತ್ತಿನ ಕತೆ ಗಳಿಗೂ, ಬುದ್ಧಸಂಪ್ರದಾಯದ ಜಾತಕಗಳಿಗೂ, ಜೀಸಸ್ಸಿನ ಪ್ಯಾರಬಲ್‌ಗಳಿಗೂ ಈ ಮಾತು ಅನ್ವಯಿಸುತ್ತದೆ. ಅವು ಅತ್ಯುತ್ತಮ ಸಾಹಿತ್ಯ ಗುಣವನ್ನು ಹೊಂದಿದ್ದರೂ ಎಲ್ಲರಿಗೂ ತಿಳಿಯುವಂತಹವು. ಟಾಲ್‌ಸ್ಟಾಯನ ಸಣ್ಣ ಕತೆಗಳು ಇದಕ್ಕೆ ನಿದರ್ಶನ. ಇಲಿಯಡ್ ಮತ್ತು ಓಡಿಸ್ಸಿ ಕೂಡ ಎಲ್ಲ ಜನಕ್ಕೂ ಪ್ರಿಯವಾಗಬಲ್ಲ ಗ್ರಂಥಗಳು. ಉತ್ತಮ ಸಾಹಿತ್ಯಕ್ಕೆಲ್ಲಾ ಒಂದು ಉದಾತ್ತವಾದ ಸರಳತೆ ಮತ್ತು ಪದಲಾಲಿತ್ಯ ಸುಃ ಇರುತ್ತವೆ.

ಗೋಕಾಕರು ಈ ಮಾತನ್ನು ಷೇಕ್ಸ್‌ಪಿಯರ್ ಮುಂತಾದ ಅನೇಕ ಕವಿಗಳಿಂ ಉದಹರಿಸಿ ಸೌಂದರ್ಯವು ಉನ್ನತ ಮಟ್ಟಕ್ಕೇರಿದಾಗ ತಾನೇ ಸತ್ಯವಾಗುವುದೆಂಬ ದನ್ನು ತೋರಿಸುತ್ತಾರೆ. ಮೇಲಿನ ಚರ್ಚೆಯಲ್ಲಿ ಅಡಗಿರುವ ಗಹನವಾದ ತತ್ವಗಳನ್ನು ಗೋಕಾಕರು ಸುಂದರವಾದ ರೀತಿಯಲ್ಲಿ ತೋರಿಸಿದ್ದಾರೆ. ಕಲೆಯ ಮುಖ್ಯ ದರ್ಶ ಅಂತಃದೃಷ್ಟಿ. ಈ ದರ್ಶನದ ವಸ್ತುವಿನ ಬಗ್ಗೆಯೇ ಹೆಚ್ಚಿನ ಗಮನವಿದ್ದ ಟಾಲ್‌ಸ್ಟಾಯ್‌ಗೆ ಪ್ರಿಯವಾದಂಥ ಕಲೆಯಾಗುತ್ತದೆ. ಅದರ ಬದಲಾಗಿ, ಕಲೆಗಾರನ 'ಜೀವನಕಲಶದ' (Dome of Life) ನಾನಾ ವರ್ಣದ ಮೆರಗು ವೈಭವದಿಂದ ಚಕಿ

ನಾಗಿ ಅದರ ಸೌಂದರ್ಯವನ್ನೇ ಬಣ್ಣಿಸುತ್ತಾ ಹೋದರೆ ಆ ಕಲೆ ಸೌಂದರ್ಯಾರಾಧಕ ನಾದ ಕೀಟ್ಸ್ ರೀತಿಯದಾಗುತ್ತದೆ. ಈ ಎರಡೂ ರೀತಿಗಳು ಒಂದೇ ಕಲಾಕೃತಿಯಲ್ಲೂ ಸಿಗಬಹುದು. ಕಲೆಗಾರನು ಶೈಲಿ ಮತ್ತು ತಂತ್ರ ಪ್ರಯೋಗದಲ್ಲಿಯೂ ತನ್ನ ಒಲವನ್ನು ತೋರಿಸಬಹುದು. ಎಲಿಯಟ್ ಕವಿಯಂತೆ ಪ್ರಯೋಗಶೀಲನಾಗಿರಬಹುದು. ಕಡೆಗೆ ಇಲ್ಲಿ ಗನುಸಿಸಬೇಕಾದ ವಿಷಯವೆಂದರೆ ವ್ಯಕಿಯ ಒಲವು ನಿಲವುಗಳು ಹೇಗಾದರೂ ಇರಲಿ, ಸೌಂದರ್ಯ ಮತ್ತು ಸತ್ಯಗಳೆರಡೂ ತಮ್ಮ ಅತ್ಯುತ್ತಮ ಅಭಿವ್ಯಕ್ತಿಯನ್ನು ಕಲಾತ್ಮಕ ವಾಗಿ ಪಡೆಯಬಹುದು.

ಟಾಲ್‌ಸ್ಟಾಯ್‌ಗೆ ಶ್ರೀಮಂತವರ್ಗದ ಜೀವನದಲ್ಲಿ ಕಂಡುಬರುವ ಕೃತ್ರಿಮತೆಯಿಂದ ಬೇಸರ ಹುಟ್ಟಿ ಹಳ್ಳಿಗಾಡಿನ ನೈಜ ಸುಂದರ ರೀತಿಯನ್ನು ಮೆಚ್ಚುವಂತಾಯಿತು. ಪ್ರಪಂಚವನ್ನು ತಿದ್ದುವ ಆವೇಶದಲ್ಲಿ ಕಲೆಯ ಪ್ರಸಾರದ ಅಂಶಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತಾನೆಂದು ಗೋಕಾಕರ ಅಭಿಪ್ರಾಯ. ಹಳ್ಳಿ ಜನರ ಮೇಲಿದ್ದ ಅವನ ಪ್ರೀತಿ ಅಂತಹ ಜನಗಳ ಮೇಲೆ ಪ್ರಭಾವ ಬೀರುವ ಕಲಾಕೃತಿಗಳನ್ನೇ ಹೆಚ್ಚು ಶ್ಲಾಘಿಸುವಂತೆ ಮಾಡಿತು. ಅವನ ಅಭಿಪ್ರಾಯಗಳು ಮಾರ್ಕ್ಸ್ ತತ್ವಕ್ಕೆ ಹೊಂದಿಕೊಂಡಿರುವ ಅಭಿಪ್ರಾಯಗಳಿಗೆ ತೀರ ವಿರೋಧ. ಅವನಿಗಿದ್ದ ಮಹೋದ್ದೇಶವೆಂದರೆ— ದೇವರು. ಮಾರ್ಕ್ಸ್‌ವಾದಿಗಳಿಗೆ ತಮ್ಮ ಹೊಸ ಸಮಾಜ ರಚನೆಯೇ ಮುಖ್ಯೋದ್ದೇಶ. ಅದಕ್ಕೆ ಅನುಗುಣವಾಗಿ ಬರೆಯುವುದೇ ಒಳ್ಳೆಯ ಕೃತಿ. ಆದರೆ ಟಾಲ್‌ಸ್ಟಾಯ್‌ನ ಗುರಿ ಭಗವಂತ. ಮಾರ್ಕ್ಸ್‌ವಾದಿಗಳ ತತ್ವದ ಚೌಕಟ್ಟಿನಲ್ಲಿ ಟಾಲ್‌ಸ್ಟಾಯ್ ಅಂತಹವರಿಗೆ ಜಾಗವಿಲ್ಲ. ಆದರೆ ನಾನಾ ದೇಶದ ಜನಕ್ಕೆ ತನ್ನ ಉತ್ತಮ ಕೃತಿಗಳಿಂದ, ಆದರ್ಶ ದರ್ಶನ ದಿಂದ ಒಂದು ಹೊಸ ದಾರಿಯನ್ನು ತೋರಿಸಿದ; ಟಾಲ್‌ಸ್ಟಾಯ್ ಶಾಶ್ವತವಾಗಿ ನಿಲ್ಲುವ ಸತ್ವವನ್ನುಳ್ಳ ಸಾಹಿತ್ಯವನ್ನು ನಿರ್ಮಿಸಿದ—ಹೀಗೆ ಗೋಕಾಕರು ಟಾಲ್‌ಸ್ಟಾಯಿನ ಕಲಾ ಸೃಷ್ಟಿಯನ್ನು ಸಮಗ್ರವಾಗಿ ಚರ್ಚಿಸಿ ವಿವರಣಾತ್ಮಕ ವಿಮರ್ಶೆಯ ಮಾದರಿಯನ್ನೇ ತೋರಿಸಿಕೊಟ್ಟಿದ್ದಾರೆ.

ಶ್ರೀ ಅರವಿಂದ ಮತ್ತು ಸೌಂದರ್ಯಶಾಸ್ತ್ರ

ಶ್ರೀ ಅರವಿಂದರು ನಮ್ಮ ಅಧ್ಯಾತ್ಮ ಪರಂಪರೆಯನ್ನು ತಮ್ಮ ದಿವ್ಯ ತಪಸ್ಸಿನಿಂದಲೂ, ಅನುಭಾವದಿಂದಲೂ, ಅಪಾರ ಜ್ಞಾನದಿಂದಲೂ ಬೆಳಗಿಸಿದ ಮಹಾಯೋಗಿ. ಕಲೆಯ ಮತ್ತು ಕಾವ್ಯದ ಬಗ್ಗೆಯೂ ಅವರು ಮಾಡಿರುವ ಚಿಂತನೆಗಳು ಹೊಸ ದಾರಿಯನ್ನೇ ಮಾಡಿಕೊಟ್ಟಿವೆ. ಶ್ರೀಅರವಿಂದರು ಈ ವಿಷಯದ ಬಗ್ಗೆ ನಡೆಸಿರುವ ಅಮೋಘ ಜಿಜ್ಞಾಸೆ, ಅವರ ಯೋಗಾನುಭವದ ಬೆಳಕಿನಿಂದಲೂ, ಸ್ವಯಂ ಪ್ರತಿಭೆಯಿಂದಲೂ ಕಂಗೊಳಿಸುತ್ತಿದೆ. ಬಹುಶಃ ಸೌಂದರ್ಯಶಾಸ್ತ್ರದ ಇತಿಹಾಸದಲ್ಲಿ ಒಂದು ಹೊಸ ಪಂಥ

ವನ್ನು ತೋರಿಸಿಕೊಟ್ಟಿದ್ದಾರೆಂದು ಹೇಳಬಹುದು. ಈ ಬಗ್ಗೆ ಶ್ರೀ ಅರವಿಂದರ ತತ್ವಗಳನ್ನು ವಿವರಣಾತ್ಮಕವಾಗಿ ಗೋಕಾಕರು ವಿಮರ್ಶೆ ಮಾಡಿರುವುದು ಒಂದು ನಿಜವಾದ ಸೇವೆಯೇ. "ಶ್ರೀ ಅರವಿಂದರ ವಿಶಾಲ ರಾಜ್ಯದಲ್ಲಿ ತಮಗೆ ದೊರೆತ ಅಮೂಲ್ಯವಾದ ಅಮೃತಶಿಲೆಗಳನ್ನು ಅಲ್ಲಲ್ಲಿ ಒಡೆದು ತೆಗೆದು ಅವನ್ನು ಪುಟ್ಟ ಶಿಶುವಿನಂತೆ ಒಂದೆಡೆ ಜೋಡಿಸಿ ಅದರ ಸ್ವಾಮಿಯ ಆರಾಧನೆಗೆ ಕಟ್ಟಿದ ಒಂದು ಪೂಜಾ ಕಟ್ಟಡದಂತೆ" ತಮ್ಮ ಲೇಖನವಿದೆಯೆಂದು ಗೋಕಾಕರು ತಿಳಿಸುತ್ತಾರೆ. ಶ್ರೀ ಅರವಿಂದರು 'ಲೈಫ್ ಡಿವೈನ್' ಎಂಬ ಉದ್ಗ್ರಂಥದಲ್ಲಿ ತಮ್ಮ ದಿವ್ಯ ಜೀವನದ ದರ್ಶನವನ್ನು ಮಾಡಿಕೊಟ್ಟಿದ್ದಾರೆ. ಅವರು ಬರೀ ಆಧ್ಯಾತ್ಮಿಕ ವಿಚಾರಗಳಿಗೆ ತಮ್ಮ ಲೇಖನಿಯನ್ನು ಮೀಸಲಾಗಿಡಲಿಲ್ಲ. ಸಮಗ್ರಜೀವನವನ್ನು ದಿವ್ಯಗೊಳಿಸುವ ಭವ್ಯಮಾರ್ಗದಲ್ಲಿ ಜೀವನದ ಸರ್ವತೋಮುಖವಾದ ವಿಕಾಸಕ್ಕೆ ಬೇಕಾದ ಎಲ್ಲ ಅಂಶಗಳನ್ನು ಸಮನ್ವಯ ಮಾಡಿದ್ದಾರೆ.

ದೇಹ, ಬುದ್ಧಿ, ಮನಸ್ಸು, ಆತ್ಮ ಎಲ್ಲವೂ ದಿವ್ಯಭವ್ಯವಾಗಿ ವಿಕಾಸಗೊಳ್ಳುವುದೇ ಅವರ ತಪಸ್ಸಿನ ಮಹೋದ್ದೇಶ. ಇದೇ ಸಮನ್ವಯದೃಷ್ಟಿ ಅವರ ಕಾವ್ಯಮೀಮಾಂಸೆಯಲ್ಲಿಯೂ ಒಂದು ವಿಶಿಷ್ಟ ರೀತಿಯಲ್ಲಿ ಕಂಡುಬರುತ್ತದೆ. ಕಾವ್ಯ ಮತ್ತು ಕಲೆಯ ಬಗ್ಗೆ ಅವರು ಮಾಡಿರುವ ಜಿಜ್ಞಾಸೆ ಎಷ್ಟು ವ್ಯಾಪಕವೆಂದು ನಾವು ಮನಗಂಡಾಗ ಎಂತಹವರೂ ಅಚ್ಚರಿಗೊಳ್ಳಬೇಕು. ಬರೀ ಅಧ್ಯಾತ್ಮದ ಪೂಜೆಯೇ ಅಲ್ಲಿಲ್ಲ. ಪ್ರಕೃತಿ ಮತ್ತು ಮಾನವನ ಮನಸ್ಸು ಮತ್ತು ಜೀವನಕ್ಕೆ ಸಂಬಂಧಿಸಿದ ಸರ್ವವಿಚಾರಗಳನ್ನು ಒಳಗೊಳ್ಳುವಂತಹ ದೃಷ್ಟಿ ಅವರದು. ಶ್ರೀ ಅರವಿಂದರು ಕವಿಗಳ ಬಗ್ಗೆ ಈ ಮಾತನ್ನಾಡಿದ್ದಾರೆ: "ಉನ್ನತ ಮಟ್ಟದ ಸ್ಫೂರ್ತಿಯ ಸಹಾಯದಿಂದ ಒಬ್ಬ ಸಾಮಾನ್ಯ ಕವಿಯು ಬರೆಯುವ ಕೃತಿಗಿಂತಲೂ, ಹೆಚ್ಚು ಭವ್ಯವಾಗಿ ಒಬ್ಬ ಮಹಾಕವಿ ಕೆಳಗಿನ ಮಟ್ಟದ ಸ್ಫೂರ್ತಿಯಿಂದ ಮಾಡಬಹುದು." ತಮ್ಮ ಪ್ರತಿಭಾಸಂಪನ್ನತೆಯಿಂದ ಅವರಿಗೆ ಯಾವ ಯಾವ ಅಂಶಗಳಿಗೆ ಎಷ್ಟೆಷ್ಟು ಬೆಲೆ ಕೊಡಬೇಕೆಂಬ ಸಮತೂಕದ ದೃಷ್ಟಿಯು ಸಹಜವಾಗಿ ಅರಿವಾಗಿದೆ. ಸೌಂದರ್ಯದ ಬಗ್ಗೆ ಅವರು ಮಾಡಿರುವ ಮೀಮಾಂಸೆ ಸಮನ್ವಯ ದೃಷ್ಟಿಯಿಂದ ಕೂಡಿರುವುದು ಹಾಗೂ ಎಲ್ಲ ವಿಚಾರಗಳನ್ನೂ ಒಳಗೊಂಡಿರುವುದು.

ಕಾವ್ಯದಲ್ಲಿ ಬೇರೆ ಬೇರೆ ವಿಧಗಳಿವೆ ಎಂಬುದನ್ನು ಅವರು ಯಾವಾಗಲೂ ಮರೆಯಲಿಲ್ಲ. ಅದೇ ರೀತಿ ಕಲ್ಪನಾಶಕ್ತಿಗಳಲ್ಲೂ ಬೇರೆ ಬೇರೆ ರೀತಿಗಳುಂಟು. ಜೀವನದ ಬಹಿರಂಗ ಅಂಶಗಳನ್ನು ಪ್ರಕಟಪಡಿಸುವ ವಸ್ತುನಿಷ್ಠ ಕಲ್ಪನಾಶಕ್ತಿ; ಮನಸ್ಸು ಮತ್ತು ಭಾವನೆಗಳನ್ನು ಉದ್ದೀಪನಗೊಳಿಸುವಂಥ ಆತ್ಮನಿಷ್ಠ ಕಲ್ಪನೆ; ಬುದ್ಧಿ ವಿಲಾಸವನ್ನೇ ಪ್ರಚೋದನಗೊಳಿಸುವ ಕಲ್ಪನಾಶಕ್ತಿ; ಪದಗಳು, ಪ್ರತಿಮೆಗಳನ್ನು ಸೃಷ್ಟಿಸಿ ಅವುಗಳ ಸೌಂದರ್ಯದಲ್ಲೇ ತಲ್ಲೀನವಾಗುವ ಕಲ್ಪನಾಶಕ್ತಿ. ಇದೇ ರೀತಿ ಕಾವ್ಯದಲ್ಲಿಯೂ ನಾಲ್ಕು ರೀತಿಗಳನ್ನು ತಿಳಿಸುತ್ತಾರೆ: ಇಂದ್ರಿಯಗಳನ್ನು ತಣಿಸುವ ಕಾವ್ಯ, ಭಾವನೆಗಳನ್ನು

ಪ್ರಚೋದಿಸುವ ಕಾವ್ಯ, ಬುದ್ಧಿ ಕುತೂಹಲವನ್ನು ಕೆರಳಿಸುವ ಕಾವ್ಯ. ಇವೆಲ್ಲ ರಸ ಯಾತ್ರೆಯ ಬೇರೆ ಬೇರೆ ಹಂತಗಳು ಮಾತ್ರ. ನಮ್ಮ ದೃಷ್ಟಿ ಮೇಲೇರುತ್ತಿರಬೇಕು. ಇವು ಗಳಿಂದಲೇ ತೃಪ್ತಿಪಟ್ಟರೆ ಕಲಾದೇವತೆಗಳ ನಿವಾಸವಾದ ಬೆಟ್ಟವನ್ನು ನಾವು ಎಂದೂ ಹತ್ತಲಾರೆವು. ಗೋಕಾಕರು ಇದನ್ನು ಶ್ರೀ ಅರವಿಂದರ ವಿಶಿಷ್ಟ ಕಾಣಿಕೆಯೆಂದು ಭಾವಿಸು ತ್ತಾರೆ—ಜೀವನವನ್ನು ಸಮಗ್ರವಾಗಿ ನೋಡುವ ನಿರಂತರ ಪ್ರಯತ್ನ. ಶ್ರೀ ಅರವಿಂದರೇ ಹೇಳಿರುವಂತೆ ಅವರ ಹೊಸ ದರ್ಶನದಲ್ಲಿ ಹಿಂದಿನ ಕಾಲದಂತೆ ಎಲ್ಲರಿಂದಲೂ ದೂರವಿರು ವಂತಹ ಬರೀ ಅಧ್ಯಾತ್ಮ, ಅಂತರಂಗ ಜೀವನಕ್ಕೆ ಮಾತ್ರ ಸಂಬಂಧಪಟ್ಟಂಥ ಲೌಕಿಕ ಪ್ರಪಂಚದಿಂದ ದೂರವಾಗಿರುವಂತಹುದಲ್ಲ.

ಕಲೆ ಮತ್ತು ಚಿಂತನೆಯಲ್ಲಿಯೇ ಮೇಲಾಕಾಶದಲ್ಲಿ ಹಾರಾಡುವುದಲ್ಲ ಅವರ ದೃಷ್ಟಿ. ಸಾಧ್ಯವಾದಷ್ಟು ಮನುಷ್ಯನ ಸಾಮಾನ್ಯ ಜೀವನ ಮತ್ತು ಕೃತಿಯಲ್ಲಿಯೂ ಪ್ರಕಟವಾಗ ಬೇಕು. ಕಾವ್ಯದ ಪಂಚ ದೀಪಗಳು ಸೌಂದರ್ಯ ದೇವಸ್ಥಾನದಲ್ಲಿ ಉರಿಯುವ ದೀಪ ಗಳಲ್ಲ: ನಮ್ಮ ಉನ್ನತೋನ್ನತ ಮನಸ್ಸಿನ ಸ್ವರ್ಗಗಳಲ್ಲಿ ಬೆಳಗುತ್ತಿರುವ ಸೂರ್ಯರು. ಇವು ನಮ್ಮ ಅತ್ಯಂತ ಆಂತರಿಕ ಮತ್ತು ವಿಶಾಲ ಜೀವನವನ್ನು ಪ್ರಕಾಶಿಸುವಂತಹ ಜ್ಯೋತಿಗಳು. ಭವಿಷ್ಯದ ಕಲೆಯು ಜೀವನದ ಎಲ್ಲ ಮಟ್ಟಗಳಿಗೂ ತನ್ನ ರಾಜ್ಯದಲ್ಲಿ ಆಸ್ಪದ ಕೊಡುತ್ತದೆ. ಈ ಕಲೆ ಕೆಲಸ ಮಾಡುವುದು ಅಂತಃದೃಷ್ಟಿಯ ಇಂದ್ರಿಯಗಳಿಂದ, ಅಂತಃದೃಷ್ಟಿಯ ಆನಂದಾತ್ಮದಿಂದ. ಇವುಗಳಿಂದ ನಮಗೆ ದೊರಕುವುದು ಉದಾತ್ತವಾದ ಸ್ಫೂರ್ತಿ, ದಿವ್ಯ ಉತ್ಸಾಹ ಮತ್ತು ಆನಂದ. ಕಾವ್ಯದ ತಿರುಳು ಚಿರಂತನವಾಗಿ ಒಂದೇ ಸತ್ವದಿಂದ ಕೂಡಿದ್ದು. ಅದರ ಶಕ್ತಿಯು ಯಾವಾಗಲೂ ಒಂದೇ. ಐದು ಚಿರಂತನ ಶಕ್ತಿ ಗಳಾದ ಸತ್ಯ, ಸೌಂದರ್ಯ, ಆನಂದ, ಜೀವನ ಮತ್ತು ಚೇತನಗಳ ಶ್ರೀಮಂತ ಸಾಮರಸ್ಯ ದಲ್ಲಿ ಕಾವ್ಯ ತನ್ನ ದಿವ್ಯ ಶಕ್ತಿಯನ್ನು ಪಡೆಯುತ್ತದೆ. ನೆನ್ನೆಯ ಅಪೂರ್ಣ ಸತ್ಯದಿಂದ ನಮಗೆ ತೃಪ್ತಿ ದೊರಕಲಾರದು. ಆತ್ಮದ ಮಹಾಜಾಗೃತಿಯತ್ತ ಮತ್ತು ಮನುಷ್ಯನ ಅಧ್ಯಾತ್ಮ ಸಾಧನೆಯಿಂದ ಬರುವ ಅಗೋಚರ ಸತ್ಯದ ಕಡೆಗೆ ಹೋಗುತ್ತಿದ್ದೇವೆ. ಅರವಿಂದರ ದೃಷ್ಟಿಯಲ್ಲಿ ಚೇತನಕ್ಕೂ ಜೀವನಕ್ಕೂ ವಿರೋಧವಿಲ್ಲ. ಚೇತನ ಹೆಚ್ಚು ಹೆಚ್ಚು ವೃದ್ಧಿಸಿದಂತೆ ಜೀವಶಕ್ತಿಯು ಹೆಚ್ಚು ವಿಕಾಸವಾಗುತ್ತದೆ. ಈ ಸತ್ಯವನ್ನು ನಮ್ಮ ಮನಸ್ಸಿಗೆ ಮುಟ್ಟಿಸುವುದು ಕಾವ್ಯ ಮತ್ತು ಕಲೆ. ಸೂಕ್ಷ್ಮ ಮತ್ತು ಸ್ಥೂಲಗಳಿಗೂ, ಚೇತನಕ್ಕೂ ಜೀವನಕ್ಕೂ ಸಂಪರ್ಕವನ್ನೇರ್ಪಡಿಸುವುದೇ ಇವುಗಳ ಕೆಲಸ.

ಸೌಂದರ್ಯ ಮತ್ತು ಆನಂದವನ್ನು ಶ್ರೀಅರವಿಂದರು ಆದರ್ಶದ ಬಣ್ಣದ ಸೂರ್ಯರು ಗಳೆಂದು ಕರೆಯುತ್ತಾರೆ. ಅವು ಸತ್ಯ, ಜೀವನ ಮತ್ತು ಚೇತನಗಳ ಹೃದಯದಲ್ಲಿ ಅಡಗಿ ರುವ ಮಾಧುರ್ಯವನ್ನು, ಬಣ್ಣವನ್ನು, ಜ್ಯೋತಿಯನ್ನು ಹೊರಗೆಡಹುವಂತಹವು. ಆದರೆ ಸೌಂದರ್ಯ ಮತ್ತು ಹಿಗ್ಗು ಕಲೆ ಮತ್ತು ಕಾವ್ಯಗಳ ಮೂಲ. ಮನುಷ್ಯನನ್ನು ಶುದ್ಧ

ಆನಂದದ ಕಡೆ ಕರೆದೊಯ್ಯುವುದು, ಅವನ ಜೀವನಕ್ಕೆ ಸೌಂದರ್ಯವನ್ನು ತರುವುದ
ಅವುಗಳ ಅಧ್ಯಾತ್ಮಕ್ರಿಯೆ. ಆದರೆ ಇವುಗಳ ಮಟ್ಟಗಳು ಮಾತ್ರ ಬೇರೆ ಬೇರೆಯಾಗಿರ
ಬಹುದು. ಈ ದೃಷ್ಟಿಯಿಂದ ಶ್ರೀಅರವಿಂದರು ಬೇರೆ ಬೇರೆ ದೇಶಗಳ ಕಾವ್ಯ ಪ್ರತಿಭೆಯ
ವಿಕಾಸವನ್ನು ವಿಶ್ಲೇಷಿಸಿದ್ದಾರೆ. ಇಂಗ್ಲಿಷ್ ಕಾವ್ಯ ಚರಿತ್ರೆಯನ್ನು ಹೇಳುತ್ತಾ ಅದ
ಮೊದಲು ಬಹಿರಂಗ ಲೋಕದಿಂದ ಅಂತರಂಗ ಪ್ರಪಂಚಕ್ಕೂ ಅಲ್ಲಿಂದ ಅಧ್ಯಾತ್ಮಕ್ಕೂ
ಹೇಗೆ ಬೆಳೆದಿದೆ ಎಂಬುದನ್ನು ಗಮನಿಸಿದ್ದಾರೆ. ಜಡ, ಚೇತನವಾಗಿ ವಿಕಾಸ ಪಡೆಯುವ
ಉಜ್ವಲವಾದ ಕಾರ್ಯದಲ್ಲಿ ಕಾವ್ಯ, ಕಲೆಗಳು ತಮ್ಮ ಪಾತ್ರವನ್ನು ವಹಿಸುತ್ತವೆ.
ಆದ್ದರಿಂದ ಕಾವ್ಯ ಮತ್ತು ಕಲೆ ಮಾನವನ ಆತ್ಮದ ಒಂದು ಯಾತ್ರೆ. ಅದರ ಗುರಿ ಪಂಚ
ತೇಜೋಮಯಿ ಸೂರ್ಯರ ಬೆಳಕನ್ನು ಸಂಪೂರ್ಣವಾಗಿ ಸೂರೆಗೊಳ್ಳುವುದು. ಇವಕ್ಕೆ
ಅವರು ಕೊಟ್ಟಿರುವ ಹೆಸರುಗಳು ಅರ್ಥಪೂರಿತವಾಗಿವೆ: ಕಾವ್ಯ ಸತ್ಯದ **ಸೂರ್ಯ,**
ಸೌಂದರ್ಯ ಮತ್ತು ಆನಂದದ **ಚಂದ್ರ,** ಜೀವನದ ಉಸಿರಾದ **ವಾಯು** ಮತ್ತು
ಚೈತನ್ಯ **ಶಕ್ತಿ.** ಇವುಗಳ ಪೂರ್ಣ ಸಾಮರಸ್ಯದಿಂದಲೇ ಕಾವ್ಯ ಮಹೋನ್ನತವಾಗುವುದು
ಕಲೆಯು ಪರಾಕಾಷ್ಠತೆಯನ್ನು ಮುಟ್ಟುವುದು.

ಈ ಐದು ದಿವ್ಯ ತತ್ವಗಳು ಕಾವ್ಯಮೀಮಾಂಸೆಗೆ ಶ್ರೀ ಅರವಿಂದರ ವಿಶಿಷ್ಟಕಾಣಿಕೆ.
ಇವು ಐದು ನದಿಗಳಂತೆ ಪರ್ವತದ ಮೇಲಿನಿಂದ ಹರಿದುಬಂದು ಕಾವ್ಯ ಮತ್ತು ಜೀವನದ
ಕಣಿವೆಯನ್ನೆಲ್ಲಾ ಫಲವತ್ತಾಗಿ ಮಾಡುತ್ತವೆ. ಈ ಅಪರೋಕ್ಷಜ್ಞಾನದಿಂದ ನಮಗ
ದೊರಕುವ ಸೂತ್ರಗಳನ್ನು ಗೋಕಾಕರು ಮುಂದೆ ವಿವರಿಸಿ ಅವರ ದೃಷ್ಟಿಯ ಸಮನ್ವಯ
ವ್ಯಾಪ್ತಿಯನ್ನು ತೋರಿಸುತ್ತಾರೆ. ಒಂದು ವಸ್ತುವಿನ ಸ್ಥೂಲ ರೂಪದಲ್ಲಿ ಜ್ಞಾನ ಪಡೆಯು
ವುದು ಸಾಮಾನ್ಯ ಮನುಷ್ಯನ ರೀತಿ. ಆದರೆ ಒಳ್ಳೆಯ ಕಲೆಗಾರ ತನ್ನ ಸೂಕ್ಷ್ಮ
ಸಂವೇದನಾಶಕ್ತಿಯಿಂದ ಮೂಲರೂಪವಾದ ಸೌಂದರ್ಯವನ್ನು ಕಂಡು ಅದರಿಂದ
ಆನಂದ ಪಡುತ್ತಾನೆ. ಇದಕ್ಕೆ ಸಹಾಯ ಮಾಡುವುದು ಜ್ಞಾನಬುದ್ಧಿ. ವಸ್ತುವಿನ
ತಿರುಳನ್ನು ತಿಳಿದುಕೊಳ್ಳಲು ಇದು ಸಹಾಯ ಮಾಡುವುದು. ಆದರೆ ಇದಕ್ಕೂ
ಮೇಲ್ಮಟ್ಟದ ಒಂದು ದರ್ಶನವುಂಟು. ಆದರೆ ಅದು ಇಂದ್ರಿಯಾತೀತವಾದದ್ದು. ಈ
ವಸ್ತುವಿನ ಹೊದಿಕೆಯನ್ನು ಭೇದಿಸಿ ಅದರ ಮೂಲ ಚೈತನ್ಯವನ್ನೇ ಅನುಭವಿಸುವುದ
ಸಾಧ್ಯ. ಅಂತಹ ಕಲಾವಿದ ಮಾತ್ರ ತನ್ನ ಅಂಗೈಯ್ಯಲ್ಲಿ ಅನಂತತೆಯನ್ನು ಹಿಡಿಯಬಲ್ಲ
ಇದೇ ಕಲಾವಿದನ ಚಟುವಟಿಕೆ ಕ್ರಿಯಾತ್ಮಕವಾದಾಗ ಈ ಕೆಳಗೆ ಕಂಡ ಐದ
ಭಾಗಗಳಾಗಿ ನೋಡಬಹುದು: ಸ್ಫೂರ್ತಿ, ಅನುಕರಣೆ, ಅಭಿವ್ಯಕ್ತಿ, ಸಂಪರ್ಕ ಮತ್ತು
ಒಲಿಸಿಕೊಳ್ಳುವಿಕೆ. ಈ ಮಾರ್ಗವಾಗಿ ಕಲೆಗಾರನ ಅನುಭವವು ಕಾವ್ಯವಾಗಿ ಮಾರ್ಪಾ
ಟಾಗುತ್ತವೆ. ಮೇಲೆ ನೋಡಿದಾಗ ಕಲಾಕೃತಿಯಲ್ಲಿ ಈ ಐದು ಶಕ್ತಿಗಳ ಪರಿಣಾಮ
ಗಳನ್ನು ನಾವು ಕಾಣುತ್ತೇವೆ—ಧ್ವನಿ, ರಸ, ಭಾವ, ಅಲಂಕಾರ ಮತ್ತು ಔಚಿತ್ಯ.

ಇನ್ನೊಂದು ದೃಷ್ಟಿಯಿಂದ ಒಂದು ಕಲಾಕೃತಿಯನ್ನು ಸತ್ಯವಸ್ತುವಿನ ಕನಸೆಂದು ಕರೆಯಬಹುದು. ಅದು ಸೂಕ್ಷ್ಮವಾದಷ್ಟೂ ಕನಸಿನ ರೂಪ ಅದೃಶ್ಯವಾಗಿ ಅಂತಿಮ ಸತ್ಯವೇ ನಮ್ಮ ಎದುರು ನಿಲ್ಲುತ್ತದೆ. ಕೃತಿಯ ರೂಪ ಮತ್ತು ತಿರುಳಿನಲ್ಲಿರುವ ಪ್ರಿಯವಾದ ಸಕಾರಣತೆಯಿಂದ ನಮ್ಮನ್ನು ತೃಪ್ತಿಪಡಿಸುತ್ತದೆ. ತನ್ನ ದರ್ಶನವನ್ನು ಕಲೆಗಾರ, ವಿಚಿತ್ರಪೂರ್ಣವಾಗಿಯೂ, ನಮ್ಮ ಮನ ಒಲಿಯುವಂತೆಯೂ ಮಾಡಿದಷ್ಟೂ ನಮಗೆ ಅದರ ಆಕರ್ಷಣ ಹೆಚ್ಚುತ್ತದೆ. ಹೀಗೆ ಅದರ ಗುಣ, ಉಕ್ತಿ ಮತ್ತು ರೀತಿಯ ಸೊಗಸಿನಿಂದ ಸಂತೋಷವನ್ನೂ—ಭಾವ ಮತ್ತು ರಸದಿಂದ ಚಿತ್ತಶುದ್ಧಿಯನ್ನೂ ಪಡೆಯುತ್ತೇವೆ.

ಶ್ರೀಅರವಿಂದರ ದೃಷ್ಟಿಯಲ್ಲಿ ರಸವೂ ಒಂದು ಪ್ರತಿಧ್ವನಿ; ಅದು ಮೂಲ ಸ್ಫೂರ್ತಿಯನ್ನು ಪ್ರತಿಧ್ವನಿಸುತ್ತದೆ. ಆದ್ದರಿಂದ ಅದರ ಅಂತಿಮ ಫಲ ನಮಗೆ ಅದು ಕೊಡುವ ಆನಂದ ಮತ್ತು ಪ್ರಸನ್ನತೆ. ಇದು ಕಾವ್ಯಕ್ಕೂ ಅನ್ವಯಿಸುವ ಮಾತು. ವಸ್ತುವಿನ ಹೃದಯದಲ್ಲಿ ಅಡಗಿರುವ ಚೇತನದ ಅರಿವನ್ನುಂಟುಮಾಡುವುದರ ಮೂಲಕ ನಮಗೆ ಆನಂದವನ್ನುಂಟು ಮಾಡುವುದೇ ಕಾವ್ಯದ ಸಾಫಲ್ಯ. ಶ್ರೀ ಅರವಿಂದರು ಪ್ರತಿಪಾದಿಸುವ ಈ ಐದು ಶಕ್ತಿಗಳನ್ನು ಭೌತಿಕವಾದಿಗಳು ಒಪ್ಪದಿರಬಹುದು. ಮಾರ್ಕ್ಸ್‌ವಾದಿಗಳೂ ಮಾನವತಾವಾದಿಗಳೂ ಸಹ ಇದಕ್ಕೆ ಮನ್ನಣೆ ಕೊಡಲಾರರು. ಇದಕ್ಕೆ ಶ್ರೀ ಗೋಕಾಕರ ಉತ್ತರ ಇಷ್ಟೇ: ಶ್ರೀ ಅರವಿಂದರು ತಮ್ಮ ತತ್ವದರ್ಶನವನ್ನು ನಮ್ಮ ಪುರಾತನ ಭಾರತೀಯ ವಿಚಾರ ಹಾಗೂ ತಮ್ಮ ಸ್ವಂತ ಅನುಭವದ ಬೆಳಕಿನಲ್ಲಿ ಪುನಶ್ಚೇತನಗೊಳಿಸಿದ್ದಾರೆ. ಜೀವನ ಮತ್ತು ಕಲೆಯ ಬಗ್ಗೆ ಅವರು ಹೇಳಿರುವ ಮಾತುಗಳ ಸಮಗ್ರತೆ ಬಹುಬೇಗ ಮಾನವನ ಅತ್ಯಮೂಲ್ಯವಾದ ಆಸ್ತಿಯೆಂದು ಪರಿಗಣಿಸಲ್ಪಡುವುದೆಂಬ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ.

ಕಲೆಗಾರನ ಕೃತಿಗೂ ಅವನ ವ್ಯಕ್ತಿತ್ವಕ್ಕೂ ಇರುವ ಸಂಬಂಧದ ಬಗ್ಗೆ ಶ್ರೀಅರವಿಂದರು ಹೇಳಿರುವ ವಿಚಾರಗಳನ್ನು ಗೋಕಾಕರು ಮುಂದೆ ಪ್ರಸ್ತಾಪ ಮಾಡುತ್ತಾರೆ. "ಮಿದುಳಿನ ಮನಸ್ಸಿನಿಂದ, ಬರೀ ಬುದ್ಧಿಯ ನಿಟ್ಟಿನಿಂದ ನಿನ್ನ ಕಾವ್ಯವನ್ನು ರಚನೆ ಮಾಡಬೇಡ—ಅದು ನಿಜವಾದ ಸ್ಫೂರ್ತಿಯ ಮೂಲವಲ್ಲ. ನಿನ್ನ ದರ್ಶನದ ಮತ್ತು ಭಾವನೆಯ ಆಂತರಿಕ ಹೃದಯದಿಂದ ಯಾವಾಗಲೂ ಬರಿ." ಶ್ರೀಅರವಿಂದರ ಈ ನುಡಿಗಳು ಕಲೆಗಾರನ ಮನೋಧರ್ಮದ ಬಗ್ಗೆ ಬೆಳಕು ಬೀರುವುವೆಂದು ಗೋಕಾಕರು ಹೇಳುತ್ತಾರೆ. ಪ್ರತಿಭೆಯ ಲಕ್ಷಣವನ್ನೂ, ಸ್ಫೂರ್ತಿಯ ಸ್ವರೂಪವನ್ನೂ ಕುರಿತ ಶ್ರೀಅರವಿಂದರ ವಿಚಾರಗಳು ಬಹಳ ಗಮನಾರ್ಹವಾದವು. ಕವಿಯ ಪ್ರಜ್ಞೆಯ ಹೊರವಲಯದ ಮೂಲಕ ಬರುವ ಚೇತನಸ್ಫೂರ್ತಿಗೆ ಇಂದ್ರಿಯಮುಟ್ಟಿದ ಸಂವೇದನೆಗಳು ಅಡಚಣೆ ತರಬಾರದು. ಕವಿ ತನ್ನ ಉನ್ನತ ದರ್ಶನದ ಮಟ್ಟದಲ್ಲಿ ಅಥವಾ ತನ್ನ ಸ್ವತಂತ್ರವಾದ ಗಳಿಗೆಗಳಲ್ಲಿ ದೈವವಾಣಿಯೇ ಆಗುತ್ತಾನೆ. ಆ ವಾಣಿಯು ಅತಿಮಾನುಷ ಮಜಲಿನಿಂದ ಹರಿದುಬರುವ ಸ್ಫೂರ್ತಿಗೆ

ಕೆಳಮಟ್ಟದ ಬುದ್ಧಿಯ ಎಡೆತಡೆಗಳೊಂದೂ ಬರಬಾರದು. ಹೀಗೆ ನಾವು ಬೇರೆ ಬೇ
ಕವಿಗಳ ಚೇತನವನ್ನೂ, ಸತ್ವವನ್ನೂ ಅಳೆಯಬಹುದು. ಕಾವ್ಯದ ರೀತಿಯ ಬಗ್ಗೆಯೂ
ಶ್ರೀ ಅರವಿಂದರ ಮಾತು ಅಮೂಲ್ಯವಾಗಿದೆ. ರೀತಿಯ (technique) ಬಗ್ಗೆಯೇ ಕುರಿತ
ಆಲೋಚನೆ ಮಾಡುವುದು ಕವಿಯ ಸ್ಫೂರ್ತಿಗೆ ಅಡ್ಡ ಬರುತ್ತದೆಂದು ಕೆಲವ
ಅಭಿಪ್ರಾಯ. ಕಾವ್ಯದಲ್ಲಿ ತಿರುಳಿದ್ದರೆ ರೀತಿಗೆ ಕವಿ ಕೊಡುವ ಗಮನ ಕಾವ್ಯವನ್ನು
ಹೆಚ್ಚು ಸುಂದರವನ್ನಾಗಿ ಮಾಡಬಹುದು.

ಸ್ಫೂರ್ತಿ ಯಾವ ಆಳದ ಅಥವಾ ಎತ್ತರ ಮಟ್ಟದ ಪ್ರಜ್ಞೆಯಿಂದ ಹೊ
ಹೊಮ್ಮುವುದು, ಅದರ ವಿಶೇಷ ಗುಣಗಳನ್ನು ಕಾವ್ಯದಲ್ಲಿ, ಕಲೆಯಲ್ಲಿ ಗುರುತಿಸಲ
ಸಾಧ್ಯವೇ? ಈ ಪ್ರಶ್ನೆಗಳಿಗೆ ಶ್ರೀ ಅರವಿಂದರು ಕೊಡುವ ಉತ್ತರಗಳು ಕಲೆಯ
ತಾತ್ವಿಕ ಸಮೀಕ್ಷೆಗೆ ಮತ್ತು ಮನೋವಿಶ್ಲೇಷಣೆಗೆ ಅಪೂರ್ವವಾದ ಕಾಣಿಕೆ. ಬುದ್ಧಿಯ
ಮಟ್ಟದಿಂದ ಅತಿ ಮಾನಸದವರೆಗೂ ಬೇರೆ ಬೇರೆ ಮಟ್ಟಗಳಲ್ಲಿ ಸ್ಫೂರ್ತಿ ಹೊರಹೊಮ್ಮ
ಬಹುದು. ಆಯಾ ಮಟ್ಟಕ್ಕೆ ತಕ್ಕ ಬೇರೆಬೇರೆ ರೀತಿಯ ಕಾವ್ಯವು ಹುಟ್ಟುವುದು. ಈ
ಭಾಗದ ಚರ್ಚೆಯಲ್ಲಿ ಅತಿಮಾನಸ ಮಜಲಿನ ಕಾವ್ಯ ಲಕ್ಷಣಗಳನ್ನು ಕವಿಗಳ ದೃಷ್ಟಾಂತ
ದಿಂದ ವಿವರಿಸುತ್ತಾರೆ. ಶ್ರೀ ಅರವಿಂದರು ತಮ್ಮ ದರ್ಶನದ ಬೆಳಕಿನಲ್ಲಿ ಮಾಡುವ ಕಾವ್ಯ
ಜಿಜ್ಞಾಸೆಯ ಸೂಕ್ಷ್ಮಭಾವಗಳು ಸಾಮಾನ್ಯ ಓದುಗನಿಗೆ ಅರ್ಥವಾಗುವುವೇ? ಇದಕ್ಕೆ
ಗೋಕಾಕರ ಉತ್ತರವೇನೆಂದರೆ, ನಾವು ಅರವಿಂದರ ಕಾವ್ಯ ಮತ್ತು ಕಲೆಯ
ವಿಚಾರಗಳನ್ನು ಮನನಮಾಡಿದಷ್ಟೂ ಶ್ರೀಅರವಿಂದರ ಮನೋರಾಜ್ಯದ ಭವ್ಯ
ಪ್ರಾಸಾದಗಳಲ್ಲಿ ಒಂದು ಮಂದಿರದ ಪರಿಚಯ ಉಂಟಾಗುತ್ತದೆ.

ಸರ್ವವ್ಯಾಪಕವಾದ ಆನಂದ ಮೂರು ಮುಖ್ಯ ರೀತಿಗಳಲ್ಲಿ ಪ್ರಕಟವಾಗುವುದು
ಸೌಂದರ್ಯ, ಪ್ರೇಮ ಮತ್ತು ಹಿಗ್ಗು. ಕೆಳಮಟ್ಟದ ಪ್ರಜ್ಞೆಯಲ್ಲಿ ರೂಪ, ವಿರೂಪ
ಗಳಿಂದ ಹುಟ್ಟುವ ಪ್ರೀತಿ, ಆಕರ್ಷಣೆ, ದ್ವೇಷ, ತಿರಸ್ಕಾರ ಭಾವನೆಗಳೆಂಬ ಪರಸ್ಪರ
ವಿರೋಧಭಾವನೆಗಳಿರುವುದುಂಟು. ಇದು ಸಾಮಾನ್ಯಜನರ ಅನುಭವ. ಆದರೆ ಮನಸ್ಸು
ಮೀರಿ ನಾವು ಏರಿದಷ್ಟೂ, ಸಂಕುಚಿತ ಮನಸ್ಸಿನ ಕಟ್ಟುಗಳು ಕಿತ್ತು ಉನ್ನತ ಮೌಲ್ಯ
ಗಳ ಅರಿವುಂಟಾಗುತ್ತದೆ. ಸಾಧಕನಾದ ಕಲೆಗಾರನು ಅತಿಮಾನಸ ಪ್ರಜ್ಞೆಯಲ್ಲಿ
ಬೆಳೆದಷ್ಟೂ ಅವನ ದೃಷ್ಟಿಯು ಹೆಚ್ಚು ಪೂರ್ಣವಾಗಿ, ಕಡೆಗೆ ಅಂತಿಮ ಮಟ್ಟದಲ್ಲಿ
ಸತ್ಯದಲ್ಲಿ ಲೀನವಾಗುತ್ತದೆ. ಆಗ ಅವನಿಚ್ಛೆಯಂತೆ ಸುಲಭವಾಗಿ ಉನ್ನತ ಮಟ್ಟಗಳ
ಗೇರಬಹುದು ಮತ್ತು ಕೆಳಮಟ್ಟಕ್ಕೆ ಈ ಹೊಸ ದೃಷ್ಟಿಯಿಂದ ಬಂದು ಜಗತ್ತನ್ನು ನೋಡ
ಬಹುದು. ಅತಿಮಾನಸದಲ್ಲಿ ವಿಶ್ವವ್ಯಾಪಕ ಸೌಂದರ್ಯ, ಪ್ರೇಮ, ಹಿಗ್ಗಿನ ಅನುಭವ
ವಿರುತ್ತದೆ. ಆ ಮಟ್ಟದಲ್ಲಿ ಎಲ್ಲೆಲ್ಲೂ ಕಾಣುವುದು ಸೌಂದರ್ಯದ ಪ್ರಕಾಶವೇ. ಎಲ್ಲಾ
ವಸ್ತುಗಳಿಗೂ ಅವನ ಹೃದಯದಿಂದ ವಿಶ್ವಾತ್ಮಕ ಪ್ರೇಮವು ಚಿಮ್ಮುವುದು. ಈ ಲೋಕ

ಗಳನ್ನೆಲ್ಲಾ ಸೃಷ್ಟಿಸಿ ಅವನ್ನು ಎತ್ತಿ ಹಿಡಿದಿರುವ ಆನಂದದಿಂದಲೇ ತುಂಬಿ ತುಳುಕಾಡುತ್ತಾನೆ. ಆಗ ಪ್ರತಿಯೊಂದು ವಸ್ತುವೂ ಸೌಂದರ್ಯದಿಂದ ಕಂಗೊಳಿಸುತ್ತದೆ.

ಅತಿಮಾನಸ ಪ್ರಜ್ಞೆಗೂ ಸೌಂದರ್ಯಶಾಸ್ತ್ರಕ್ಕೂ ಇರುವ ಸಂಬಂಧವನ್ನು ವಿವರಿಸುತ್ತಾ ಸೌಂದರ್ಯ ಶಾಸ್ತ್ರದ ವ್ಯಾಪ್ತಿಯನ್ನು ಶ್ರೀ ಅರವಿಂದರು ಎಷ್ಟು ವಿಶಾಲವಾಗಿ ಮಾಡಿದ್ದಾರೆಂಬುದನ್ನು ಹೇಳುತ್ತಾರೆ. ಅದು ಮೂರು ರೀತಿಯದು : ವಸ್ತುವಿನ ಸಾರವನ್ನೇ ಹೀರಲು ಬೇಕಾದ ಮನಸ್ಸಿನ ತಟಸ್ಥ ರೀತಿ. ಈ ರುಚಿಯನ್ನು ಭೋಗಿಸುವುದು ಅಥವಾ ವಸ್ತುವಿನ ಸಾರದ ಮೋಹಕ್ಕೆ ಸಂಪೂರ್ಣವಾಗಿ ಪರವಶವಾಗುವುದು, ಧ್ಯಾನದ ಮೂಲಕ ಆತ್ಮದಲ್ಲಿ ಈ ಆನಂದವನ್ನು ಪೂರ್ತಿಯಾಗಿ ತುಂಬಿಕೊಳ್ಳುವುದು. ಈ ಮೂಲಕವೇ ಕವಿಪಡೆಯುವ ದರ್ಶನವನ್ನು ತನ್ನ ಕಾವ್ಯದಲ್ಲಿ ಅಭಿವ್ಯಕ್ತಿಗೊಳಿಸುತ್ತಾನೆ ಈ ರೀತಿಯಲ್ಲಿಯೇ ಸಹೃದಯನೂ ಕೂಡ ಪದ ಮತ್ತು ಧ್ವನಿಯ ರಸವನ್ನೂ ಭಾವದ ರಸವನ್ನೂ ಅನುಭವಿಸುತ್ತಾನೆ. ಸೌಂದರ್ಯಶಾಸ್ತ್ರವನ್ನು ರಸಶಾಸ್ತ್ರವೆಂದೇ ಕರೆಯಬಹುದೆಂದು ಶ್ರೀ ಅರವಿಂದರ ಅಭಿಪ್ರಾಯ. ನಾವು ಮನಸ್ಸನ್ನು ಮೀರಿ ಮೇಲಿನ ಮಜಲನ್ನು ಹತ್ತಿದಷ್ಟೂ ನಮ್ಮ ರಸಶಕ್ತಿಯೂ ವೃದ್ಧಿಯಾಗಿ ಕಡೆಗೆ ಶುದ್ಧ ಆನಂದವಾಗಿ ಪರಿಣಮಿಸುತ್ತದೆ. 'ಅತಿಮಾನಸಗುರಿ' ಸತ್ಯವೇ ಆಗಿದೆ. ಪ್ರತಿಯೊಂದು ವಸ್ತುವಿನ ನಿಜವಾದ ಸ್ವರೂಪವನ್ನು ಹೊರಗೆಡಹುವುದು ಅದರ ಕೆಲಸ. ಸತ್ಯವೇ ಉನ್ನತ ಕಾವ್ಯವಾಗಿ ಪರಿಣಮಿಸುತ್ತದೆ. ಅಂತಹ ಸತ್ಯದಲ್ಲೇ ನಾವು ಸೌಂದರ್ಯವನ್ನು ಕಾಣುವುದು ಸಾಧ್ಯ.

ಕಾವ್ಯ ಮತ್ತು ಕಲೆಯಲ್ಲಿ ನಾಲ್ಕು ರೀತಿಯ ಸೌಂದರ್ಯ ಹೇಳಿ ಅವುಗಳ ಪಾತ್ರವನ್ನು ವಿವರಿಸುತ್ತಾರೆ—ಕವಿಯ ಸೃಷ್ಟ್ಯಾತ್ಮಕ ಪ್ರಜ್ಞೆ ಭೌತಿಕ ಮಟ್ಟದಲ್ಲಿ ಸೌಂದರ್ಯ ನಿರ್ಮಾಣ ಮಾಡಿದಾಗ ಅದು ಇಂದ್ರಿಯ ಸೌಂದರ್ಯವಾಗುತ್ತದೆ. ಇನ್ನೊಂದು ಕಲ್ಪನಾಮಯ ಸೌಂದರ್ಯ ; ತನ್ನ ಕಲ್ಪನೆಯ ಮೆರುಗನ್ನು ಜೀವನದ ಅನುಭವಗಳಿಗೆ ಕೊಟ್ಟು ಹೊಸ ಮೌಲ್ಯವನ್ನು ಸೃಷ್ಟಿಸುವ ಬೌದ್ಧಿಕ ಸೌಂದರ್ಯ ; ಪ್ರಜ್ಞೆ ತನ್ನ ಪೂರ್ಣ ವಿಲಾಸದಲ್ಲಿ ತೊಡಗಿದಾಗ ಶಾಶ್ವತ ಆನಂದ ಮತ್ತು ಸೌಂದರ್ಯದ ನೆಲಗಳಿಗೆ ಕೊಂಡೊಯ್ಯುವುವು. ಈ ಮಟ್ಟದ ದರ್ಶನ ಕಾವ್ಯದಲ್ಲಿ ಆಧ್ಯಾತ್ಮ ಸೌಂದರ್ಯದಿಂದ ಕಂಗೊಳಿಸುವುವೆಂದೂ ಅದು ಅತ್ಯುತ್ತಮ ಕಾವ್ಯವೆಂದೂ ಹೇಳಬಹುದು. ಈ ಅಭಿಪ್ರಾಯಗಳು ಸೌಂದರ್ಯಶಾಸ್ತ್ರಕ್ಕೆ ಶ್ರೀ ಅರವಿಂದರು ನೀಡಿರುವ ಮಹತ್ವಪೂರ್ವಕ ಕಾಣಿಕೆಯೆಂದು ಗೋಕಾಕರು ತಿಳಿಸುತ್ತಾರೆ.

ಒಟ್ಟಿನಲ್ಲಿ ಶ್ರೀ ಅರವಿಂದರ ವಿಮರ್ಶಾಶಕ್ತಿಯು ಅವರ ಸೃಷ್ಟ್ಯಾತ್ಮಕ ಶಕ್ತಿಯಷ್ಟೇ ಪ್ರತಿಭಾಸಂಪನ್ನವಾಗಿದೆ. ಅವರು ಕವಿಗಳೂ ವಿಮರ್ಶಕರೂ ಜ್ಞಾನಿಗಳೂ ಅನುಭಾವಿಗಳೂ ಆಗಿದ್ದರು. ಅವರ ಈ ಸಮನ್ವಯ ದೃಷ್ಟಿ, ವಿವಿಧಮುಖ ವ್ಯಕ್ತಿತ್ವದಿಂದ ನೇರವಾಗಿ ಬಂದದ್ದು. ಅವರ ವಿಮರ್ಶಾರೀತಿ ಸಾರಭೂತವಾದದ್ದು—ಬೇರಿನಿಂದ

ರೆಂಬೆಗೂ, ರೆಂಬೆಯಿಂದ ಬೇರಿಗೂ ಹೊಕ್ಕು ನೋಡುವಂತಹುದು. ಅವರ 'ಭವಿಷ್ಯಕಾವ್ಯ' ಓದುವವರ ಹೃದಯವನ್ನು ಸೂರೆಗೊಳ್ಳುವುದು, ಬುದ್ಧಿಯನ್ನು ವಿಸ್ಮಯಗೊಳಿಸುವುದು. ಈ ಜ್ಯೋತಿರ್ಮಯ ಅಂತಃದೃಷ್ಟಿಯಿಂದ ಕಲೆ ಮತ್ತು ಕಾವ್ಯದ ಯಾವ ವಿಷಯದ ಬಗ್ಗೆ ಅವರು ಹೇಳುವ ಮಾತು ಒಂದು ದಿವ್ಯ ಆಧ್ಯಾತ್ಮ ತೇಜಸ್ಸಿನಿಂದ ಹೊಳೆಯುತ್ತಿದೆ. ಅಂತೆಯೇ ಗೋಕಾಕರು ಶ್ರೀಅರವಿಂದವಾಣಿ ಹೊಸ ಕಾವ್ಯವನ್ನು ಘೋಷಿಸುತ್ತದೆ ಯೆಂದೂ ಹೊಸ ಸೌಂದರ್ಯ ಶಾಸ್ತ್ರವನ್ನು ಬೋಧಿಸುತ್ತಿದೆಯೆಂದೂ ಹೇಳುತ್ತಾರೆ. ನಾವು ಅವರಲ್ಲಿ ನೋಡುವುದು—ವಿಸ್ಮಯಕಾರಕಶಕ್ತಿ, ಅದ್ವಿತೀಯವಾದ ಆಳವಾದ ಒಳನೋಟ, ವಿಶಾಲವಾದ ದೃಷ್ಟಿ ಮತ್ತು ಉನ್ನತ ದರ್ಶನದಿಂದ ಕೂಡಿದ ಸಾಹಿತ್ಯ ವಿಮರ್ಶಕ; ಆಳವಾದ ಜ್ಞಾನದಿಂದಲೂ ಸಮನ್ವಯ ದೃಷ್ಟಿಯಿಂದಲೂ ಮಾತನಾಡುವ ಪ್ರವಾದಿ. ಇವರ ವಾಣಿ ಹೊಸ ಜಗತ್ತಿನ ಮಂತ್ರಘೋಷವಾಗುವುದರಲ್ಲಿ ಸಂದೇಹ ವಿಲ್ಲವೆಂದು ಹೇಳಿ ಶ್ರೀ ಗೋಕಾಕರು ಈ ಸುದೀರ್ಘ ಲೇಖನವನ್ನು ಮುಗಿಸುತ್ತಾರೆ.

ರಸಋಷಿ ಬೇಂದ್ರೆ

ಪ್ರಸಿದ್ಧ ತ್ರೈಮಾಸಿಕ 'ತ್ರಿವೇಣಿ'ಯಲ್ಲಿ ಶ್ರೀ ಗೋಕಾಕರು ಕನ್ನಡ ಸಾಹಿತ್ಯದ ಬಗ್ಗೆ ಅನೇಕ ಲೇಖನಗಳನ್ನೂ, ಹಲವಾರು ವಿಮರ್ಶೆಗಳನ್ನೂ ಬರೆದಿದ್ದಾರೆ. ವರಕವಿ ಬೇಂದ್ರೆ ಯವರನ್ನು ಕುರಿತು, ಅವರೇ ಕಟ್ಟಿದ 'ಗೆಳೆಯರ ಗುಂಪಿನ' ಸಾಧನೆ, ಆದರ್ಶಗಳ ಬಗ್ಗೆಯೂ, ಕನ್ನಡದ ಕ್ರಾಂತಿಕಾರಿ ಕವಿಯಾದ ಸರ್ವಜ್ಞನ ಬಗ್ಗೆಯೂ, ವಿಚಾರ ಪೂರಿತ ಲೇಖನಗಳನ್ನು ಬರೆದಿದ್ದಲ್ಲದೆ, ಪ್ರಗತಿಶೀಲ ಬರಹಗಾರರ ಪುಸ್ತಕಗಳ ಬಗ್ಗೆ ಆಗಿಂದಾಗ್ಗೆ ವಿಮರ್ಶೆಗಳನ್ನೂ ಬರೆದರು. ಬೇಂದ್ರೆಯವರನ್ನು ಕುರಿತ ಲೇಖನ ಪ್ರಕಟ ವಾದದ್ದು ೧೯೩೩ರಲ್ಲಿ. ಅವರನ್ನು ಕಾವ್ಯಗುರುವೆಂದು ಶ್ರೀಗೋಕಾಕರು ಕರೆದರು. ಇಷ್ಟು ಪೂಜ್ಯಭಾವನೆಯನ್ನಿಟ್ಟುಕೊಂಡಿರುವ ಹಿರಿಯ ಕವಿಯ ಬಗ್ಗೆ ವಿಮರ್ಶೆಮಾಡಿರುವುದು ಸಾಹಸದ ಕೆಲಸವೇ ಆದರೂ ಅತ್ಯಂತ ನಿಕಟ ಸ್ನೇಹಿತರಾಗಿ ಅವರ ಚೇತನವೆಂತಹುದು ಎಂದು ತಿಳಿದಿರುವುದು ಸಹೃದಯತೆಯಿಂದ ಬರೆದ ಒಳ್ಳೆ ವಿಮರ್ಶಾ ಪ್ರಯತ್ನ.

ಲೀಮೇಟರ್ ಎಂಬ ಪಾಶ್ಚಿಮಾತ್ಯ ವಿಮರ್ಶಕನ ಮಾತನ್ನು ಉದಹರಿಸುತ್ತಾ ಸಮ ಕಾಲೀನ ಸಾಹಿತ್ಯವನ್ನು ಹೇಗೆ ತೂಗಿನೋಡಬೇಕೆಂಬ ಅಂಶವನ್ನು ಮೊದಲು ಪ್ರಸ್ತಾಪಿ ಸುತ್ತಾರೆ: "ದೋಷಗಳನ್ನು ಕುರಿತು ಹೇಳುವ ವಿಮರ್ಶೆಯಿಂದ ಪ್ರಾರಂಭ ಮಾಡುವುದು ಉಚಿತವಲ್ಲ. ತತ್ವಗಳ ಸಾಮಾನ್ಯಸೌಂದರ್ಯ ಶಾಸ್ತ್ರದ ನಿರ್ಣಯ ಕಾರ್ಯ ಕುತೂಹಲ ಕಾರಕವಾಗಿದ್ದರೂ, ಪುಸ್ತಕಗಳ ವಿಷಯವಾಗಿ ಅವು ನಮಗೆ ಸ್ವಲ್ಪ ತಿಳಿಸುವುದರಿಂದ ಅದು ನಮಗೆ ಅಷ್ಟು ಪ್ರಯೋಜನಕಾರಿಯಲ್ಲ. ಸಾಹಿತ್ಯ ಚರಿತ್ರೆಯಲ್ಲಿ ಹೊಸ ಹೊಸ ಪುಸ್ತಕಗಳಿಗೆ ಸ್ಥಾನವನ್ನು ಗೊತ್ತು ಮಾಡುವ ಕಾರ್ಯ ಬಹು ವೇಳೆ ಅಕಾಲಿಕವಾಗು

ತ್ತವೆ. ಅವುಗಳನ್ನು ಬೇರೆ ಬೇರೆ ವರ್ಗವಾಗಿ ವಿಂಗಡಿಸುವ ಕಾರ್ಯವೂ ಅಹಂಕಾರದ ತೋರಿಕೆಯಾಗುವುದು ...ಹೊಸ ಪುಸ್ತಕಗಳನ್ನು ಸಹಾನುಭೂತಿಯಿಂದ ಓದುವುದು ಒಳ್ಳೆಯದು. ಅವುಗಳ ಹೊಸ ಅಂಶವೇನು? ಬರಹಗಾರನ ಸತ್ವವೆಂತಹುದು? ಎಂಬುವನ್ನು ಕಂಡುಹಿಡಿಯುವುದು ನ್ಯಾಯವಾದುದಲ್ಲವೇ?" ಈಗ್ಗೆ ಮೂವತ್ತೈದು ವರ್ಷಗಳ ಹಿಂದೆಯೇ ಬೇಂದ್ರೆಯವರನ್ನು ಮಾಸ್ತಿಯವರು 'ಗಾರುಡಿಗ'ನೆಂದು ಕರೆದರು. ಅವರ ಕಲ್ಪನಾ ವಿಲಾಸದ ಮೋಹಕತ್ವವನ್ನು ಮೆಚ್ಚಿದರು. ಇಂತಹ ಕವಿಯ ಕೃತಿಯನ್ನು ಅಳೆದು ನೋಡುವ ಕೆಲಸ ಸುಲಭವಲ್ಲವೆಂದು ಗೋಕಾಕರು ಸ್ಪಷ್ಟಪಡಿಸು ತ್ತಾರೆ. ಕವಿ ಗುಲಾಬಿಯನ್ನು ಎಲ್ಲ ಕಡೆ ಎರಚಿದ್ದರೂ, ಅದರ ಸುವಾಸನೆ ನಾಡಿನಲ್ಲೆಲ್ಲಾ ಹರಡಿದ್ದರೂ, ಅದರ ಮುಳ್ಳು ವಿಮರ್ಶಕನ ಕೈ ಚುಚ್ಚಬಹುದು! ಹೊಸ ಕಾವ್ಯದ ಸತ್ವವನ್ನು ಗುರುತಿಸುವುದು ವಿಮರ್ಶಕನ ಸೂಕ್ಷ್ಮಗ್ರಾಹಿತನದ ಪರೀಕ್ಷೆ.

ಶ್ರೀ ಬೇಂದ್ರೆ ಕನ್ನಡ ನವೋದಯ ಕಾಲದಲ್ಲಿ ಬಂದ ಕವಿ. ಹೊಸ ಕಾಲದ ಜಾಗೃತಿ ಅವರ ಕಾವ್ಯದಲ್ಲಿ ಮೂಡಿ ಬಂದಿದೆ. ಅವರ ಮಹತ್ವವನ್ನು ವರ್ಣಿಸುತ್ತಾ, ಬೇಂದ್ರೆ ಯವರು ಕನ್ನಡದ ಪುನರುತ್ಥಾನ ಕಾಲದ ಒಂದು 'ಘಟನೆ' ಎಂದು ಹೇಳುತ್ತಾರೆ. ಅವರ ಅತಿ ಸಮೀಪದ ಗೆಳೆಯರಾದ ಗೋಕಾಕರು "He lives and talks poetry; he writes it less often" ಎಂದು ಹೇಳುತ್ತಾರೆ. ಅವರ ಜಾನಪದ ರೀತಿಯ ಗೀತೆಗಳು, ಹಳ್ಳಿಯ ಧಾಟಿಗಳು ಜನತೆಯ ಮನಸ್ಸನ್ನು ಮಂತ್ರಮುಗ್ಧರನ್ನಾಗಿ ಮಾಡಿವೆ. ಗೋಕಾಕರು ಅವರ ಅನೇಕ ಕವನಗಳಿಂದ ಉದಹರಿಸಿ ಅವರ ಉಪಮಾ ಶಕ್ತಿಯನ್ನೂ, ಪ್ರತಿಮಾಶಕ್ತಿಯನ್ನೂ ಬಣ್ಣಿಸಿದ್ದಾರೆ. ಅವರ ಕಾವ್ಯಮನೋಧರ್ಮವೂ ವಿಶಿಷ್ಟವಾದದ್ದೇ. ಅವರಿಗೆ ಕಾವ್ಯ ಒಂದು ಕಲ್ಪನಾವಿಲಾಸವಲ್ಲ, ಜೀವನ ಝಂಜಾಟದಿಂದ ತಪ್ಪಿಸಿಕೊಳ್ಳುವ ಮಾರ್ಗವಲ್ಲ, ಶ್ರಮಪಟ್ಟು ಬರೆಯುವ ಕಸುಬಲ್ಲ. ಬಾಳಿನ ಇತರ ಸಮಸ್ಯೆಗಳಿಗೂ ಇವರು ಕಾವ್ಯದಷ್ಟೇ ಬೆಲೆ ಕೊಡುತ್ತಾರೆ. ಈ ಮಾತುಗಳೇ ಅವರ ಜೀವನ ಸಂದೇಶ—"ರಸವೆ ಜನನ, ವಿರಸ ಮರಣ; ಸಮರಸವೇ ಜೀವನ". ಈ ಮಾತುಗಳೇ ಬೇಂದ್ರೆಯವರ ಜೀವನದರ್ಶನದ ತಿರುಳು. ಅವರಿಗೆ ಬಾಳುವೆಯೇ ಎಲ್ಲಕ್ಕಿಂತ ಮಿಗಿಲಾದುದು. ಜೀವನದ ನೋವು ನಲ್ಮೆಗಳು, ಕನಸು ಮನಸುಗಳು, ಜೀವನವನ್ನು ತಿಳಿದುಕೊಳ್ಳುವ ಸಾಹಸ ಉನ್ನತ ಮಟ್ಟದ ಪ್ರಜ್ಞೆಯನ್ನು ಹುಟ್ಟಿಸುವುದು. ಹೀಗೆಯೇ ಶ್ರೇಯಸ್ಸಿಗಾಗಿ ಹಂಬಲಿಸುತ್ತಾ ಬಾಳನ್ನು ಸಾಗಿಸುವುದೇ ಅವರ ಮಹತ್ವಾಕಾಂಕ್ಷೆ.

ಜೀವನವನ್ನು ಸಂಭ್ರಮ, ಸಾಹಸವಾಗಿ ಮಾಡಿಕೊಳ್ಳುತ್ತಾರೆ. ಹೇಗೆ? ಹಾಡಿ ಕೊಂಡು. 'ಗೆಳೆಯರ ಗುಂಪ'ನ್ನ ಕಟ್ಟಿದ್ದು, ಅನೇಕ ಆದರ್ಶ ತರುಣರನ್ನು ಆಕರ್ಷಿಸಿ ಒಂದು ದೊಡ್ಡ ಬಾಳಿಗೆ, ಜೀವನವನ್ನು ಅರ್ಪಿಸಿಕೊಳ್ಳುವ ಸ್ಫೂರ್ತಿ ಕೊಟ್ಟಿದ್ದು,

ನಾಡಿನ ಕಾವ್ಯ ಪರಂಪರೆಯನ್ನು ಕಾವ್ಯೋತ್ಸವಗಳ ಮೂಲಕ ಪರಿಚಯ ಮಾಡಿಸಿದುದ
ಅವರ ಹಲವಾರು ಚಟುವಟಿಕೆಗಳು. ಅವರು ತಮ್ಮ ಕಾವ್ಯವಾಚನದಿಂದ ನಾಡಿ
ಜನವನ್ನು ಆನಂದಗೊಳಿಸಿದ್ದಾರೆ. ಅವರ, 'ಮಕ್ಕಳಿವರೇ ನಮ್ಮ ಮೂವತ್ತು ಮೂರ
ಕೋಟಿ', 'ನಿರುದ್ಯೋಗಿ' ಮುಂತಾದ ಕವನಗಳಿಂದ ಕವಿಯ ಹೃದಯ ಅಂದಿನ ಸ್ಥಿತಿ
ಹೇಗೆ ಮರುಗಿತೆಂಬುದನ್ನೂ, ಕಾವ್ಯಕ್ಕೂ ಸಮಾಜಕ್ಕೂ ಇರುವ ಸಂಬಂಧವನ್ನೂ
ಕಾಣಬಹುದು. ಅವರು ಕಲೆಯು ವಸ್ತುನಿಷ್ಠವಾಗಿರಬೇಕೆಂದು ನಂಬಿ ಹೊರಟಂ
ಕವಿ. ಸುಖದುಃಖಗಳು ತನಗಿರಲಿ, ಅವುಗಳನ್ನೇ ಕಾವ್ಯವನ್ನಾಗಿ ಮಾಡುತ್ತೇನೆಂದೂ
ಅದನ್ನು ಓದಿದಾಗ ಓದುಗನ ಹೃದಯ ಸಕ್ಕರೆಯ ಹರಳು ಕರಗುವಂತೆ ಕರಗಿದಾಗ
ಅದರ ಸವಿಯನ್ನು ಕವಿಯೂ ಸವಿಯುವನೆಂದು ಹೇಳುತ್ತಾರೆ.

ಗೋಕಾಕರು ಮುಂದೆ ಬೇಂದ್ರೆಯವರ ಕಾವ್ಯತಂತ್ರವನ್ನು ಕುರಿತು ಮತ್ತು ಅದ
ತಿರುಳು ಮತ್ತು ಮಹತ್ವವನ್ನು ಕುರಿತು ವಿವರಿಸಿದ್ದಾರೆ. ಅವರ ಕಾವ್ಯ ಶೈಲಿ ವೈವಿಧ್ಯವೂ
ಶ್ರೀಮಂತವೂ ಆಗಿದೆ. ಪ್ರೇಮ ಕವನಗಳಲ್ಲಿಯ ಕಲ್ಪನಾ ಸಂಪತ್ತು, ಅಧ್ಯಾತ
ಭಾವಗೀತೆಗಳ ಸಂಪ್ರದಾಯದ ನುಡಿಗಟ್ಟು, ಸಾನೆಟ್ಟುಗಳಲ್ಲಿನ ಭವ್ಯ ಶೈಲಿ
ಜಾನಪದ ಗೀತೆಗಳ ಹಳ್ಳಿಯ ಧಾಟಿ—ಈ ವೈವಿಧ್ಯತೆಯ ಸೊಗಸನ್ನು ಬಣ್ಣಿಸಿದ್ದಾರೆ
'ನಿತ್ಯನೃತ್ಯ' (Dance Eternal)ವೆಂಬ ಭಾವಗೀತೆಯಲ್ಲಿ ಇದೆಲ್ಲದರ ಸಮ್ಮಿಳನವ
ಇದೆಯೆಂದು ಅಭಿಪ್ರಾಯಪಡುತ್ತಾರೆ. ಅವರ ಪ್ರತಿಯೊಂದು ಕವನದಲ್ಲೂ ಬೇರೆ ಬೇ
ಮಟ್ಟಗಳ ಭಾಷೆ ಮತ್ತು ಗಹನವಾದ ಅರ್ಥದಿಂದ ಕೂಡಿರುವ ವೈಶಿಷ್ಟತೆ ಇದೆ. ಇದ
ಕನ್ನಡ ಕಾವ್ಯಕ್ಕೆ ಹೊಸ ಕಳೆ ತಂದಿದೆ. ಛಂದಸ್ಸು ಮತ್ತು ಪದಜೋಡಣೆಗಳಲ್ಲ
ಪ್ರಯೋಗದಲ್ಲೂ ಹೊಸ ಹೊಸ ಪ್ರಯೋಗಗಳನ್ನು ಮಾಡಿದ್ದಾರೆ. ಗೋಕಾಕರ
ಹೇಳುವಂತೆ ಬೇಂದ್ರೆಯವರ ಕಾವ್ಯದೇವತೆ ಕಾಮನಬಿಲ್ಲಿನ ಸೌಂದರ್ಯವೈಭವದಿಂ
ಅಲಂಕರಿಸಲ್ಪಟ್ಟಿದ್ದಾಳೆ. ನಿಸರ್ಗ ಮತ್ತು ಪ್ರೇಮವನ್ನು ಅವರು ಬಹಳಮಟ್ಟ
ಸಾಂಕೇತಿಕವಾಗಿ ಹೇಳುವ ವಿಧಾನದಲ್ಲಿ ಉಪಯೋಗಿಸಿಕೊಂಡಿದ್ದಾರೆ.

ಬೇಂದ್ರೆಯವರು ಚಿತ್ರಿಸಿರುವ ನಾಯಿಕೆಯರು ಬಹಳ ಮೌನವಾಗಿ ಕಷ್ಟವನ
ಸಹಿಸುವಂತಹವರು. ಈ ಚಿತ್ರವನ್ನು ಕೋಟ್ಯಂತರ ಮಕ್ಕಳನ್ನು ಹಡೆದಿರುವ 'ಭಾರತಿ
ಭೂಮಿತಾಯಿಯ ಪಾದಗಳಲ್ಲಿ ತಾಳ್ಮೆಯ ಪಾಠವನ್ನು ಕಲಿಯುತ್ತಾಳೆ. ಕರ್ನಾಟ
ಮಾತೆಯೂ ಮಕ್ಕಳಿಂದ ಕೇಳುವುದು ತ್ಯಾಗವನ್ನೇ. ಇನ್ನು ಸಾಂಸಾರಿಕ ಚಿತ್ರಗಳ
ಕಂಡುಬರುವ ತಾಯಂದಿರ ಹೃದಯವೂ ನೋವಿನಿಂದ ಬೆಂದುಹೋಗಿದ್ದರೂ ತ್ಯಾ
ದಿಂದ ಧನ್ಯವಾಗಿದೆ. 'ಕೃಷ್ಣಕುಮಾರಿ' ಎಂಬ ರಜಪೂತ ಕನ್ಯೆಯು, ಸಾಕ್ರಟೀಸನಂ
ವಿಷಪಾನವನ್ನೇ ಮಾಡುತ್ತಾಳೆ—ಸೌಂದರ್ಯಕ್ಕೋಸ್ಕರ. ಬೇಂದ್ರೆಯವರ ನಾಯಕರ
ಗಳಾದರೋ ಸಾಧಕರು, ಹಂಬಲದ ಜೀವಿಗಳು, ನಿರಂತರ ಸಾಧನೆಯಲ್ಲಿ ಶ್ರದ್ಧೆಯುಳ

ನು—ಮೇನಕೆಯ ಪ್ರಣಯಪ್ರಸಂಗದಲ್ಲಿ ತಪ್ರೋಭ್ರಷ್ಟನಾದ ವಿಶ್ವಾಮಿತ್ರ ಪುನಃ ಸ್ಸಿಗಾಗಿ ಕೊಡುವ ಚಿತ್ರ, ಆಕಾಶದಲ್ಲಿ ಒಂದೇಸಮನೆ ಹಾರಾಡುವ ಗಿಳಿ ಕುಳಿತು ೂಳ್ಳುವ ಜಾಗವನ್ನು ಹುಡುಕುತ್ತಾ ತನ್ನ ರೆಕ್ಕೆ ಬಡಿಪಾಡುವ ಚಿತ್ರ—ಇವರೆಲ್ಲಾ ಮಾತ್ರಿಕರು ಮತ್ತು ಸಾಧಕರು. ಎಲ್ಲಕ್ಕಿಂತಲೂ ಸುಂದರವಾದ ಮತ್ತು ಗೋಕಾಕರು ಹೆ ಮೆಚ್ಚಿಕೊಂಡಿರುವ ಬೇಂದ್ರೆಯವರ ಸಂಕೇತವೆಂದರೆ 'ಬುದ್ಧನ ಮಂದಹಾಸ.' ೀಗೆ ಅವರ ಕಾವ್ಯದ ಸೊಬಗನ್ನು ಅನೇಕ ಉದಾಹರಣೆಗಳಿಂದ ವಿವರಿಸಿದ್ದಾರೆ. ನೂರು ಮೂವತ್ತೈದು ವರ್ಷಗಳ ಹಿಂದೆಯೇ ಬೇಂದ್ರೆಯವರ ಕಾವ್ಯಸತ್ವ ಬಹಳ ೊಡ್ಡದೆಂಬುದನ್ನು ಗುರುತಿಸಿದ ಕೀರ್ತಿ ಗೋಕಾಕರಿಗೆ ಸಲ್ಲಬೇಕು. ಗೋಕಾಕರು ಈ ವಿಮರ್ಶೆಯ ಮೂಲಕ ಕವಿಯ ಬಗ್ಗೆ ನಮ್ಮಲ್ಲುಂಟುಮಾಡುವ ಆಶಯಗಳೆಲ್ಲಾ ಫಲವಾಗಿವೆ. ಇಂಥ ಕವಿಯನ್ನು ಪಡೆದಿರುವುದು ಕನ್ನಡಿಗರ ಭಾಗ್ಯ.

ಗೆಳೆಯರ ಗುಂಪಿನ ಕನಸು

'ಗೆಳೆಯರ ಗುಂಪಿನ ಕನಸು' ಎಂಬ ಲೇಖನ ೧೯೩೩ ರಲ್ಲಿ ಬರೆದದ್ದು. ಭಾರತದ ನರುಜ್ಜೀವನ ಚಳುವಳಿ, ದೇಶದಲ್ಲಿ ಅನೇಕ ಸಾಹಿತ್ಯ ಸಂಸ್ಥೆಗಳು ಉಜ್ವಲ ದೇಶಾಭಿ ಮಾನದಿಂದ ಹುಟ್ಟುವುದಕ್ಕೆ ಕಾರಣವಾಯಿತು. ಗೆಳೆಯರ 'ಗುಂಪು' ಅಂಥ ನಿರ್ಣಾಯಕ ಾಲದಲ್ಲಿ ಪ್ರಾರಂಭವಾದುದು. ೧೯೨೧ ರಲ್ಲಿ ಧಾರವಾಡದ ವಿಕ್ಟೋರಿಯಾ ಪ್ರೌಢ ಾಲೆಯಲ್ಲಿ ಬೇಂದ್ರೆಯವರು ಉಪಾಧ್ಯಾಯರಾಗಿದ್ದಾಗ ಒಂದು ದೊಡ್ಡ ಮೈತ್ರಿಯ ನಸಿನಿಂದ ಪ್ರಾರಂಭ ಮಾಡಿದ ಗುಂಪು. ಅವರ ಸಂಭಾಷಣೆ ಮತ್ತು ಜೀವನ ಇದಕ್ಕೆ ಸ್ಫೂರ್ತಿಯಾಯಿತು. ಗೋಕಾಕರು ಹೇಳುವಂತೆ, "ಬೇಂದ್ರೆಯವರ ಕೈಯಲ್ಲಿ ಚುಕ್ಕಾಣಿ ೊಟ್ಟು, ಸಂಭಾಷಣೆಯ ಸಾಗರದಲ್ಲಿ ಪ್ರವಾಸ ಬೆಳೆಸುವುದೇ" ಗುಂಪಿನವರ ಅಭಿಲಾಷೆ ಯಾಗಿತ್ತು. ಈ ಗುಂಪಿನ ಚರಿತ್ರೆ ಮತ್ತು ಕಾರ್ಯಸಾಧನೆಯನ್ನು ಗೋಕಾಕರು ರೆದಿರುವುದು ಉಚಿತವಾಗಿದೆ. ಅವರು ಈ ಗುಂಪನ್ನು ತರುಣರಾಗಿ ಸೇರಿದ ಕತೆಯನ್ನು ಪ್ರಸ್ತಾಪ ಮಾಡಿದ್ದಾರೆ. ೧೯೨೫ ರಲ್ಲಿ ಮೆಟ್ರಿಕ್ ತರಗತಿಯಲ್ಲಿ ಓದುತ್ತಿದ್ದಾಗ ಅವರಿಗೆ ಂಗ್ಲಿಷಿನಲ್ಲಿ ಕವಿತೆ ಬರೆಯುವ ಹವ್ಯಾಸವಿತ್ತು. ಬೇಂದ್ರೆ ಅವರ ಕವಿತೆಗಳನ್ನು ಓದಿಸಿ, ೇಳಿ, ಇಂಗ್ಲಿಷ್ ಭ್ರಮೆಯನ್ನು ತಪ್ಪಿಸಿ ಕನ್ನಡದಲ್ಲಿ ಬರೆಯುವ ಪ್ರೇರಣೆಯನ್ನು ಕೊಟ್ಟ ಲ್ಲದೆ, ಅವರ ಜೀವನವನ್ನು ರೂಪಿಸಿದರು.

"ನಾನು ಜೀವನ ಧುರಿಯಂತೆಯೇ ಹರಿದು ಹೋಗುವವನಾಗದೆ ಅದರ ರಹಸ್ಯ ಳನ್ನು ಕುರಿತು ಧ್ಯಾನಿಸುವಂಥವನಾದೆ. ನನ್ನ ಆತ್ಮವನ್ನು ಒಂದು ಸಾರಿಯಾದರೂ ಡಿಸುವಂತೆ ಕಾವ್ಯ ಬರೆಯಲು ಹತ್ತಿದೆ....ಸಾಹಿತ್ಯ ರಂಗದಲ್ಲಿ ವಿಶಿಷ್ಟವಾದ ಯೋಗ್ಯತೆ ನ್ನು ಪಡೆಯಲು ಅವಶ್ಯಕವಾದಂಥ ಸಾಹಿತ್ಯ ವಿಮರ್ಶೆಯ ಮೇಲೆ ಹಿಡಿತವನ್ನು

ಸಂಪಾದಿಸಿದೆ. ಬಹಳ ತಡವಾದರೂ ಅಂತೂ....ಕಡೆಗೆ ಇಂಗ್ಲಿಷ್‌ನಲ್ಲಿ ಕವಿತೆ ಬರೆಯ ಬೇಕೆಂಬ ಮೋಹವನ್ನು ನಿವಾರಿಸ-ಪುದರಲ್ಲಿ ಶ್ರೀ ಬೇಂದ್ರೆಯವರು ಯಶಸ್ವಿಯಾದರು. ಅವರು ನನ್ನನ್ನು ಮಾತೃಭಾಷೆಯ ಸಾಹಿತ್ಯಾಭ್ಯಾಸ ಮಾಡುವಂತೆಯೂ ಪ್ರೇರೇಪಿ ಸಿದರು. ಅವರು ಈ ರೀತಿ ನನ್ನ ಮಾರ್ಗದರ್ಶಕರಾಗಿರದಿದ್ದರೆ ನನ್ನ ಕಾವ್ಯಪ್ರತಿಭೆ ಇಂಡೊ-ಇಂಗ್ಲಿಷ್ ಕವಿತೆಯ ಮರಳುಗಾಡಿನಲ್ಲೇ ಬತ್ತಿ ಹೋಗುತ್ತಿತ್ತು." ಎಂದು ಗೋಕಾಕರೇ ಹೇಳಿಕೊಂಡಿದ್ದಾರೆ. ಅವರ ಸಾಹಿತ್ಯೋಪಾಸನೆಗೂ, ಅಧ್ಯಾತ್ಮ ಸಾಧನೆಗೂ 'ಗೆಳೆಯರ ಗುಂಪು' ಒಳ್ಳೆಯ ರಂಗವಾಯಿತು. ಆಗಲೇ ಇವರು 'ತಳಿರು' ಎಂಬ ಕಾವ್ಯ ಸಂಕಲನದ ಬಗ್ಗೆ ಮೊದಲ ವಿಮರ್ಶೆಯನ್ನು ಬೇಂದ್ರೆಯವರ ಸೂಚನೆಯ ಮೇರೆಗೆ ಬರೆದುದು. ಅಲ್ಲಿಂದ ಈ ಕೆಲಸವನ್ನು ಕನ್ನಡದಲ್ಲೂ, ಇಂಗ್ಲಿಷಿನಲ್ಲೂ ಯಶಸ್ವಿಯಾಗಿ ಮಾಡಿಕೊಂಡು ಬಂದಿದ್ದಾರೆ.

ಗುಂಪಿನ ವೈಶಿಷ್ಟ್ಯವೆಂದರೆ ಒಂದು ಆದರ್ಶದ ಬೆಳಕಿನಲ್ಲಿ ಮುಂದುವರಿಯುವಂಥ, ಸಂವಿಧಾನವಿಲ್ಲದ, ವ್ಯವಸ್ಥಾರಹಿತ ಸಂಘ. ಸಾಹಿತ್ಯಚರಿತ್ರೆಯಲ್ಲಿ ಇಂಥ ಗುಂಪುಗಳು ಅತ್ಯಂತ ಪ್ರತಿಭಾಶಾಲಿಯಾಗಿ ಕೆಲಸಮಾಡಿರುವುದನ್ನು ನಾವು ಕಾಣುತ್ತೇವೆ. ಸಾಕ್ರಟೀಸನ 'ಸತ್ಯಶೋಧಕರ ಗುಂಪು', ಹನ್ನೆರಡನೇ ಶತಮಾನದಲ್ಲಿ ಬಂದು ಹೋದ ಬಸವಣ್ಣ, ಅಲ್ಲಮಪ್ರಭುಗಳಂಥವರಿದ್ದ 'ಅನುಭವಮಂಟಪ', ಇಂಗ್ಲೆಂಡಿನಲ್ಲಿ 'ಲೇಕ್ ಸ್ಕೂಲ್' ಪಂಥ, 'ಪ್ರೀ ರಾಫೆಲೈಟ್' ಗುಂಪು, 'ಐರಿಷ್ ಪುನರುಜ್ಜೀವನ'ದ ಗುಂಪು ಪ್ರಸಿದ್ಧವಾಗಿವೆ.

'ಗೆಳೆಯರ ಗುಂಪು' ಮಾಡಿದ ಕೆಲಸ ಎರಡು ರೀತಿಯದು—ಕರ್ನಾಟಕದ ತುಂಬ ಹುಟ್ಟಿದ ಸಾಹಿತ್ಯಸಂಘಗಳಿಗೆ ಗೆಳೆಯರ ಗುಂಪು ಸ್ಫೂರ್ತಿಕೊಟ್ಟಿತು. ಯಾವ ಸಂಪ್ರದಾಯದ ಕಟ್ಟಿಗೂ ಒಳಗಾಗದೆ ಮಿತ್ರ ಭಾವನೆಯಿಂದ ಸಾಹಿತ್ಯ ಮತ್ತು ಅಧ್ಯಾತ್ಮ ಸಾಧನೆ ಮಾಡಿತು. ಗುಂಪಿನ ಸದಸ್ಯರು ಮುಂದೆ ತಮ್ಮದೇ ವ್ಯಕ್ತಿತ್ವವನ್ನು ಬೆಳೆಸಿಕೊಂಡು ದೇಶದಲ್ಲಿ ವಿಧಾಯಕ ಚಟುವಟಿಕೆಗಳನ್ನ ನಡೆಸಿದರು. 'ಜಯ ಕರ್ನಾಟಕ' 'ಸ್ವಧರ್ಮ' ಪತ್ರಿಕೆಗಳನ್ನ ನಡೆಸಿದ್ದು, ಮನೋಹರ ಗ್ರಂಥಮಾಲೆಯ ಪ್ರಕಟಣೆಯ ಜವಾಬ್ದಾರಿಯನ್ನ ಹೊತ್ತಿದ್ದು ಈ ಗುಂಪಿನವರೇ. ದೊಡ್ಡ ದೊಡ್ಡ ಕಾವ್ಯೋತ್ಸವಗಳನ್ನು ಆಚರಿಸಲು ಪ್ರಾರಂಭಿಸಿದರು. ಆಧುನಿಕ ಸಾಹಿತ್ಯದ ಬೇರೆ ಬೇರೆ ರೀತಿಗಳಲ್ಲಿ ಗೆಳೆಯರು ಪರಿಶ್ರಮಮಾಡಿದ್ದಾರೆ. ಅವರಲ್ಲಿ ಮೊದಲಿಗರು ಅತ್ಯಂತ ಪ್ರತಿಭಾಸಂಪನ್ನರಾದ ಶ್ರೀ ಬೇಂದ್ರೆಯವರು, ಅವರ 'ಜಾನಪದ ಗೀತೆಗಳು,' ಹಳ್ಳಿಯ ಧಾಟಿಗಳು, ಕನ್ನಡ ಜನತೆಯನ್ನು 'ಮಾಂತ್ರಿಕ'ನಂತೆ ಸಂಮೋಹನಗೊಳಿಸಿರುವುದು ಸರಿಯಷ್ಟೆ. ಅಂತೆಯೇ ಆನಂದಕಂದರ 'ಶಿಶುಗೀತೆಗಳು' ರಮಣೀಯವಾಗಿವೆ. ಚೆನ್ನ ಮಲ್ಲರಂಥ ಸಾಧಕರು, ಮುಗುಳಿ, ಗೋಕಾಕರಂಥ ಸಾಹಿತ್ಯೋಪಾಸಕರು ನಾಡಿಗೆ ಸಲ್ಲಿಸಿರುವ ಸೇವೆಯನ್ನು ನಾವು ಕೃತಜ್ಞತೆಯಿಂದ ನೆನೆಯಬೇಕಾಗಿದೆ.

ಕನ್ನಡ ಸಾಹಿತ್ಯ ಸಮೀಕ್ಷೆ

೧೯೫೭ರಲ್ಲಿ ಕೇಂದ್ರಸಾಹಿತ್ಯ ಅಕಾದಮಿ, 'ಸಮಕಾಲೀನ ಭಾರತ ಸಾಹಿತ್ಯ' ಎಂಬ ಹೆಸರಿನಲ್ಲಿ ನಮ್ಮ ದೇಶದ ನಾನಾ ಭಾಷೆಗಳ ಸಾಹಿತ್ಯದ ಸಂಕ್ಷಿಪ್ತ ಚರಿತ್ರೆಯನ್ನು ಹೊರತಂದಿತು. ಶ್ರೀ ಗೋಕಾಕರು ಕನ್ನಡ ಸಾಹಿತ್ಯ ಚರಿತ್ರೆಯನ್ನು ಕುರಿತು ಒಂದು ಸೂಕ್ಷ್ಮವಾದ ವಿವೇಚನೆಯನ್ನು ಮಾಡಿದ್ದಾರೆ. ಸುಮಾರು ೧೫೦೦ ವರ್ಷದ ನಮ್ಮ ಉಜ್ವಲ ಪರಂಪರೆಯನ್ನು ಮೊದಲ ಎರಡು ಮಾತಿನಲ್ಲಿ ತಿಳಿಸಿ, ಆಧುನಿಕ ಕಾಲದ ಸಾಹಿತ್ಯದ ಗೊತ್ತು ಗುರಿಯನ್ನು ಕುರಿತೇ ಹೆಚ್ಚಾಗಿ ಪ್ರಸ್ತಾಪ ಮಾಡಿದ್ದಾರೆ. ಇವರ ದೃಷ್ಟಿಯಲ್ಲಿ ಪಾಶ್ಚಿಮಾತ್ಯ ಪ್ರಭಾವದಿಂದ ನಮ್ಮ ಸಾಹಿತ್ಯ ದೃಷ್ಟಿಗೆ ಒಂದು ಸ್ಫೂರ್ತಿಯೂ ಹೊಸ ಕಳೆಯೂ ಬಂದು ನಮ್ಮ ಸಾಹಿತ್ಯ ಸಮೃದ್ಧವಾಯಿತು. ಅದರ ಪರಿಣಾಮವಾಗಿ ನಮ್ಮ ಆರ್ಷೇಯ ಸಂಸ್ಕೃತಿಯ ಆಧಾರವಾದ ಪುರಾಣ ಗ್ರಂಥಗಳಿಂದಲೂ, ಸಾಹಿತ್ಯ ಕೃತಿಗಳಿಂದಲೂ ಭಾಷಾಂತರ ನಡೆಯಿತು. ಜಾನಪದ ಸಾಹಿತ್ಯದ ಪುನರುಜ್ಜೀವನವು ಈ ಚರಿತ್ರೆಯ ಒಂದು ಮುಖ್ಯಾಂಶ. ಆ ದಿಕ್ಕಿನಲ್ಲಿ ಬೇಂದ್ರೆ ಮತ್ತು ಮಧುರ ಚೆನ್ನ ಮುಂತಾದವರು ವಹಿಸಿದ ಮುಖ್ಯ ಪಾತ್ರವನ್ನು ಕುರಿತು ಉಲ್ಲೇಖಿಸಿದ್ದಾರೆ. ಕಳೆದ ಹಲವತ್ತು ವರ್ಷಗಳಲ್ಲಿ ಸಮೃದ್ಧಿಯಾಗಿ ಸೃಷ್ಟಿಯಾಗಿರುವ ಸಾಹಿತ್ಯವೆಂತಹುದೆಂಬು ದನ್ನು ಕಾವ್ಯ, ನಾಟಕ, ಕಾದಂಬರಿ, ಸಣ್ಣಕತೆ, ಜೀವನ ಚರಿತ್ರೆ, ವಿಮರ್ಶೆ ಮುಂತಾದುವು ಗಳಲ್ಲಿ ಬಂದಿರುವ ಉತ್ತಮ ಕೃತಿಗಳು ಮತ್ತು ಪ್ರಯೋಗಗಳ ಪರಿಚಯವನ್ನು ಮಾಡಿ ಕೊಟ್ಟಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯವನ್ನು ಎಂಟು ಉಪನದಿಗಳ ಸಂಗಮವೆಂದು ಗೋಕಾಕರು ಕರೆಯುವರು. ಈ ಮಾತು ಆಧುನಿಕ ಭಾರತದ ಎಲ್ಲಾ ಸಾಹಿತ್ಯಕ್ಕೂ ಅನ್ವಯಿಸುತ್ತದೆ. ಎಂದು ಹೇಳಿ ನಮ್ಮ ದೇಶದ ಪುನರುಜ್ಜೀವನದ ಸಮಗ್ರಸ್ವರೂಪವನ್ನು ಎತ್ತಿ ತೋರಿಸುತ್ತಾರೆ.

ವಿಡಂಬನಗಾರರು ಅಥವಾ ವಾಸ್ತವವಾದಿಗಳು ಮೊದಲ ಗುಂಪು. ಇವರ ದೃಷ್ಟಿ ಮಾನವನ ಲೋಪದೋಷಗಳನ್ನು ಕುರಿತು ಅಪಹಾಸ್ಯ ಮಾಡುವುದು. ಪ್ರಗತಿಶೀಲ ಲೇಖಕರು—ಎರಡನೇ ಗುಂಪಿಗೆ ಸೇರಿದವರು. ಇವರು ಸಮಾಜವನ್ನು ಹೊಸದಾಗಿ ನಿರ್ಮಾಣ ಮಾಡುವ ದೃಷ್ಟಿಯುಳ್ಳವರು. ಸಂಪ್ರದಾಯ ವಾದಿಗಳು—ಮೂರನೇ ಗುಂಪಿಗೆ ಸೇರಿದವರು' ಧರ್ಮಶ್ರದ್ಧೆಯುಳ್ಳ ಕವಿಮನೋಧರ್ಮದವರು ಐದನೇ ಗುಂಪಿಗೆ ಸೇರಿದವರು. ಸೌಂದರ್ಯಸಾಧನೆಯಲ್ಲೇ ಸರ್ವಸ್ವವನ್ನು ಕಾಣುವ ಕವಿಗಳು ಆರನೇ ಗುಂಪಿನವರು. ಸಮಾಜದ ಬುದ್ಧಿ ಮತ್ತು ನೀತಿಯನ್ನು ತಿದ್ದುವಂಥ ಬರಹಗಾರರ ಗುಂಪು ಏಳನೆಯದು. ಇವರು ವೇದಾಂತಪ್ರಿಯರೂ ಹೌದು. ಅಧ್ಯಾತ್ಮ ಪ್ರಿಯರ ಗುಂಪೆಂದು ಎಂಟನೆಯ ಗುಂಪಿನ ಬರಹಗಾರರನ್ನು ಕರೆಯುತ್ತಾರೆ. ಇವರ ಮೇಲೆ ಮುಖ್ಯ ಪ್ರಭಾವ

ಶ್ರೀ ಅರವಿಂದರನು. ಈ ಎಂಟು ಗುಂಪಿನ ಉಪನದಿಗಳು ಭಾರತದ ಪುನರುಜ್ಜೀವನದ ಸಾಹಿತ್ಯ ಗಂಗೆಯಲ್ಲಿ ಮಿಳನಗೊಂಡು ನಮ್ಮ ಸಂಸ್ಕೃತಿಯನ್ನು ಒಂದಾಗಿ, ಜೀವಂತ ವಾಗಿ ಮಾಡಿವೆ. ಈ ಸಮನ್ವಯದೃಷ್ಟಿ ಶ್ರೀ ಗೋಕಾಕರ ವಿಮರ್ಶೆಗೆ ಅಪೂರ್ವ ಕಾಣಿಕೆ.

ಗೋಕಾಕರ ಲೇಖನಗಳಲ್ಲಿ ಕಾಣುವ ಮುಖ್ಯ ಲಕ್ಷಣಗಳು--ವಿಚಾರ ಔನ್ನತ್ಯ, ಸೊಗಸಾದ ನಿರೂಪಣೆ, ವಿಶ್ಲೇಷಣ ಮನೋಭಾವ ಮತ್ತು ಸತ್ವಯುತ ಶೈಲಿ. ಸ್ವಯಂ ಪ್ರತಿಭಾನ್ವಿತ ಕವಿಗಳಾಗಿ, ಹೃದಯದ ಸೂಕ್ಷ್ಮ ಭಾವನೆಗಳನ್ನು ತಮ್ಮ ಕಾವ್ಯದಲ್ಲಿ ಅಭಿವ್ಯಕ್ತಪಡಿಸಿದ್ದಾರೆ. ಅವರು, "ಕಬ್ಬಿಗರ ಕನಸುಗಳು ನಾಡಿನಾ ಸಿರಿ" ಎಂದು ಹೇಳಿದ್ದರೂ ಕನಸು ಕಾಣುತ್ತಲೇ ದಂತಗೋಪುರದಲ್ಲಿ ಕೂತವರಲ್ಲ. ವ್ಯಾವಹಾರಿಕ ಪ್ರಪಂಚದ ಗೊತ್ತುಗುರಿಗಳನ್ನು ಕುರಿತು ನಾಡಿನ ನಾನಾ ಮುಖದ ಶ್ರೇಯಸ್ಸಾಧನೆ ಯನ್ನು ಕುರಿತು ಆಳವಾಗಿ ಆಲೋಚನೆ ಮಾಡಿದ್ದಾರೆ. ಅವರು ಹೃದಯಭಾಷೆಯಾಗಿ ಕನ್ನಡವನ್ನು ಉಪಯೋಗಿಸಿದರೂ, ವಿಶಾಲ ಪ್ರಪಂಚದ ಪ್ರಚಲಿತ ಸಮಸ್ಯೆಗಳನ್ನು ಆಲೋಚಿಸಿದ ತಮ್ಮ ವಿಚಾರವನ್ನು ಅನ್ಯಭಾಷಾ ಜನರ ಪ್ರಯೋಜನಕ್ಕೋಸ್ಕರ ಇಂಗ್ಲಿಷಿನಲ್ಲಿಯೂ ಲೇಖನಗಳನ್ನು ಬರೆದಿದ್ದಾರೆ. ಇವೆಲ್ಲದರ ಹಿಂದೆ ನಾಳಿನ ದಿವ್ಯ ಹಂಬಲ, ಅದರ ಮೌಲ್ಯಗಳ ವಿಮರ್ಶೆ ಹಾಗೂ ಕಾರ್ಯಸಾಧನೆಯ ಮಾರ್ಗವನ್ನು ನಾವು ಕಾಣಬಹುದು.

ಇಂಗ್ಲಿಷ್ ಕವನಗಳು

ಶಂಕರ ಮೊಕಾಶಿ ಪುಣೇಕರ

೧

ಶ್ರೀ ವಿನಾಯಕರು ಇಂಗ್ಲಿಷಿನಲ್ಲಿ ಎರಡು ಕಾವ್ಯಸಂಗ್ರಹಗಳನ್ನು ಪ್ರಕಟಿಸಿರುವರು. 'The Song of Life' ('ಜೀವನ ಗೀತ') ೧೯೪೭ರಲ್ಲಿ ಹಿಂದ ಕಿತಾಬ ಅಂಕಿತದ ಕೆಳಗೆ ಪ್ರಕಟವಾಯಿತು. 'In Life's Temple' ('ಬಾಳದೇಗುಲದಲ್ಲಿ') ಎಂಬುದು ಇತ್ತೀಚೆಗಿನ ಬೃಹತ್ ಸಂಕಲನ. ಬ್ಲ್ಯಾಕಿ ಎಂಡ ಸನ್ ಅಂಕಿತದ ಕೆಳಗೆ ೧೯೬೫ರಲ್ಲಿ ಪ್ರಕಟವಾಯಿತು. ವಿನಾಯಕರು ಕಾವ್ಯ ರಚಿಸಲು ಪ್ರಾರಂಭಿಸಿದ್ದು ಇಂಗ್ಲಿಷಿನಲ್ಲಿಯೇ. ಧಾರವಾಡಕ್ಕೆ ಕರ್ನಾಟಕ ಕಾಲೇಜಿನಲ್ಲಿ ಕಲಿಯಲಿಕ್ಕೆ ಬಂದಾಗ ಶ್ರೀ ದ. ರಾ. ಬೇಂದ್ರೆಯವರ ಸಂಪರ್ಕದಿಂದ ಕನ್ನಡ ಭಾಷೆ, ಸ್ಫೂರ್ತಿ, ಅಭಿವ್ಯಕ್ತಿಗಳಲ್ಲಿ ಉತ್ಸಾಹವುಂಟಾಯಿತು. ಅಂದಿನಿಂದ ತಮ್ಮ ಸ್ಫೂರ್ತಿಯ ಮೂಲಸೆಲೆಯ ಕನ್ನಡತನವನ್ನು ವಿನಾಯಕರು ಅರಿತುಕೊಂಡರು. ಕನ್ನಡ ಕಾವ್ಯಸ್ರೋತಸ್ಸಿಗೆ ಅನುಪಮ ಕೊಡುಗೆಗಳನ್ನು ನೀಡಿದರು. ನವೋದಯ ಸಂಪ್ರದಾಯದಲ್ಲಿ ಸಾಧಿಸುವದನ್ನೆಲ್ಲ ತುಸು ಸಮಯದಲ್ಲಿಯೆ ಸಾಧಿಸಿಕೊಂಡು, ಅದಕ್ಕೂ ಮುಂದೆ ಹೋಗಿ ನವ್ಯಕಾವ್ಯದ ಜನಕತ್ವವನ್ನೂ ಪಡೆದರು. ಮೂಲ ಪ್ರವಾಹಕ್ಕೆ ಅವಿರೋಧವಾಗದಂತೆ ಯಮುನೆಯನ್ನು ಗಂಗೆಗೆ ಕೂಡಿಸಿದ ಪ್ರಯಾಗಸ್ಥಲ ಗೋಕಾಕರ ಕವಿತೆ.

ಇಂತು ಸ್ಫೂರ್ತಿಯ ಸೆಲೆ-ಸೆಲೆಗಳ ಮೇಲೆ ಕನ್ನಡತನದ ಪಡಿನೆಳಲನ್ನು ಸ್ವೀಕರಿಸಿ ತೃಪ್ತಿಪಡಿಸಿಕೊಂಡ ವಿನಾಯಕರು ಆಗಾಗ್ಗೆ ಇಂಗ್ಲಿಷಿನಲ್ಲಿ ಕವಿತೆ ರಚಿಸುವ ತಮ್ಮ ಸಾಮರ್ಥ್ಯವನ್ನೂ ಕನ್ನಡಕ್ಕಾಗಿಯೇ ಮೀಸಲಾಗಿಟ್ಟುದುದು ವಿಶೇಷ.

'The Song of Life'ದ ಮುನ್ನುಡಿಯಲ್ಲಿ ಅವರು ಹೇಳಿದುದು :

"I have come to belive that English is better used as a creative medium for interpreting the work done in Indian languages, rather than for pure self experession, by us in India. The poems originally in English which are included in this collection may, therefore, be regarded as the by-products of an effort to attain the discipline needed for such an undertaking."

ಇಂಗ್ಲಿಷ ಕಾವ್ಯರಚನೆಗೆ ಕೈಹಾಕಿ ಅನುಭವವಿದ್ದ ನನ್ನಂತಹವನಿಗೆ ಈ ಮಾತುಗಳು ಉತ್ತುಂಗ ಸ್ವಾರ್ಥತ್ಯಾಗದ ಸಂಕೇತಗಳಾಗಿ ಕಾಣುತ್ತವೆ. ಇಂಗ್ಲಿಷ ಕಾವ್ಯರಚನೆಯ ಮೇಲೆ ಪ್ರಭುತ್ವವಿದ್ದೂ ಕನ್ನಡದ ವ್ಯಕ್ತಿತ್ವ-ಅಭಿವ್ಯಕ್ತಿಗಳನ್ನು ಸ್ವೀಕಾರಮಾಡಿ, ತಮ್ಮ ಇಂಗ್ಲಿಷನ್ನು ಕನ್ನಡ ಕಾವ್ಯದ ವಿವರಣೆಗೆ ಯೋಜಿಸಿದ್ದು ಸಣ್ಣಪುಟ್ಟ ತ್ಯಾಗವಲ್ಲ.

ಆದರೆ ಇದೇ ವಿಶ್ವಾಸವನ್ನು ಮೂರುದಶಕಗಳವರೆಗೆ ಕಾಯ್ದುಕೊಳ್ಳುವದು ಸಾಮಾನ್ಯವಲ್ಲ. ಸುಮಾರು ಇಪ್ಪತ್ತು ವರ್ಷಗಳಿಂದ ಬಿಡಿಯಾದ ಎರಡು ಸಂಗ್ರಹಗಳಲ್ಲಿ ಕನ್ನಡದಿಂದ ಅನುವಾದಿಸಿದ ಕವನಗಳೇ ಹೆಚ್ಚು. ಪುಣೆಯ ಯೂನಿವರ್ಸಿಟಿಯಲ್ಲಿ ರೀಡರ್ ಆಗಿದ್ದ ಡಾ. ಸುಜೀತ ಮುಖರ್ಜಿಯವರು ಇತ್ತೀಚೆಗಿನ Indian wrting in English ಗ್ರಂಥದಲ್ಲಿ ಬರೆದ ಪ್ರಬಂಧದಲ್ಲಿ, ಕವಿ ತಾನೇ ತನ್ನ ಕವಿತೆಗಳನ್ನು ಬೇರೆ ಭಾಷೆಗೆ ಅನುವಾದಿಸಿದ ಸಾಹಿತ್ಯಕ್ಕೆ ವಿಶಿಷ್ಟ ಸ್ಥಾನವನ್ನು ಕಲ್ಪಿಸಿದ್ದಾರೆ. ವಿನಾಯಕರೇ ಇಂಥ ಸಾಹಿತ್ಯಕ್ಕೆ Indo-English ಎಂದು ಹೆಸರಿಟ್ಟು ಇದನ್ನು Indo-Anglian (ಭಾರತೀಯರು ಆಂಗ್ಲ ಭಾಷೆಯಲ್ಲಿ ಸ್ವತಂತ್ರವಾಗಿ ಬರೆದ) ಸಾಹಿತ್ಯದಿಂದ ಬೇರ್ಪಡಿಸಿದ್ದಾರೆ.* ಒಂದು ಹೆಜ್ಜೆ ಮುಂದೆ ಹೋಗಿ ವಿನಾಯಕರು ಕನ್ನಡದ ಜನಜೀವಾಳವನ್ನು ಪರಕೀಯರಿಗೆ ತಿಳಿಪಡಿಸುವ ಮುಖ್ಯ ಉದ್ದೇಶಕ್ಕೆ ಈ ಎರಡೂ ರೀತಿಗಳನ್ನು ಪೋಷಕ ದ್ರವ್ಯವಾಗಿ ಬಳಸಿದ್ದಾರೆ. ಆದ ಕಾರಣ ವಿನಾಯಕರ ಕನ್ನಡ ಕಾವ್ಯದ ಸ್ಫೂರ್ತಿಯ ಕೆಲವು ಅಂಶಗಳನ್ನು ತಿಳಿದುಕೊಳ್ಳುವದು ಅವಶ್ಯಕ.

೧೯೬೫ರಲ್ಲಿ In Life's Templeದ ಪ್ರಕಟನೆಯಾದ ತುಸು ದಿನಗಳಲ್ಲಿ ಹೈದರಾಬಾದದಲ್ಲಿ ಶ್ರೀ ವಿನಾಯಕರನ್ನು ಕಂಡಿದ್ದೆ. "ಬಹುದಿನಗಳಿಂದ ಕನ್ನಡ ಕವನಗಳನ್ನು ಇಂಗ್ಲಿಷಿಗೆ ಅನುವಾದಿಸುತ್ತಿದ್ದಿರಾ?" ಎಂದು ಕೇಳಿದೆ. "ಕೆಲವು ಕವನಗಳನ್ನು ಮೊದಲೇ ಅನುವಾದಿಸಿದ್ದೆ; ಬಹಳಷ್ಟು ಕವನಗಳನ್ನು ಕಳೆದ ಒಂದೆರಡು ತಿಂಗಳಲ್ಲಿ ಅನುವಾದಿಸಿದ್ದೇನೆ" ಎಂದು ವಿನಾಯಕರು ಹೇಳಿದರು. ಒಂದೆರಡೇ ತಿಂಗಳಲ್ಲಿ ಪದ್ಯರೂಪದಲ್ಲೇ ಅನೇಕ ಕವಿತೆಗಳನ್ನು ಸಮರ್ಥವಾಗಿ ಅನುವಾದಿಸಿದುದರ ಬಗ್ಗೆ ಅವರ ಇಂಗ್ಲಿಷ ಕಾವ್ಯಶಕ್ತಿಗೆ ಪರಿಚಿತನಾದ ನನಗೆ ಅಚ್ಚರಿಯಾಗುವ ಕಾರಣವಿರಲಿಲ್ಲ. ಆದರೆ ಕಾವ್ಯಶಕ್ತಿಯ ಉಭಯಭಾಷತ್ವದ ಬಗೆಗೆ ಒಂದೆರಡು ವಿಚಾರ ತಿಳಿಪಡಿಸಬಯಸುತ್ತೇನೆ.

---

*"By 'Indo-English' I mean writing in English which is translated from work originally done in a modren Indian language." (ಮುನ್ನುಡಿ : In *Life's Temple*) ಈ ವಾಕ್ಯಕ್ಕೆ by the author himself, ಎಂಬ ಮಾತನ್ನು ಜೋಡಿಸಿದರೆ, ಡಾ. ಸುಜೀತ ಮುಖರ್ಜಿಯವರ ಅಭಿಪ್ರಾಯ ಹೇಳಿದಂತಾಗುವದು. ಶ್ರೀ ಗೋಕಾಕರಿಂದಲೇ ವಿಚಾರವನ್ನು ಉದ್ಧರಿಸಿ ತುಸು ಬದಲಿಸಿಕೊಳ್ಳುವಾಗ ಡಾ. ಮುಖರ್ಜಿ ಆದೇಕೆ ಅಷ್ಟು ಕಾಮಿಸಿಂದ ಬರೆದಿದ್ದಾರೋ ತಿಳಿಯದು.

ಡಾ. ಕೆ. ಆರ್. ಶ್ರೀನಿವಾಸ ಅಯ್ಯಂಗಾರರು ಬರೆದ Indian writing in English ಎಂಬ ಬೃಹದ್ಗ್ರಂಥದಲ್ಲಿ ಗೋಕಾಕರನ್ನು "Efficiently bilingual" ಎಂದು ವರ್ಣಿಸಿದ ಆರೆಂಟು ಕವಿಗಳಲ್ಲಿ ಸೇರಿಸಿದ್ದಾರೆ. ಆದರೆ ಇಷ್ಟರಿಂದ ಒಂದೆರಡೇ ತಿಂಗಳಲ್ಲಿ ಹಲವಾರು ಕವನಗಳನ್ನು ಇಂಗ್ಲಿಷಿಗೆ ಅನುವಾದಿಸಲು ಬೇಕಾಗುವ ಸ್ಫೂರ್ತಿ ವಿಶೇಷದ ಅರಿಕೆ ಯಾಗದು. ಈ ಪ್ರಬಂಧದಲ್ಲಿ ಇನ್ನೊಂದೆಡೆಗೆ ಈ ವಿಷಯವು ತಾನಾಗಿಯೇ ಸ್ಫುಟವಾಗುವ ದೆಂದು ಬಗೆದಿದ್ದೇನೆ. ಕೆಳಗಿನ ವಿವೇಚನೆ ಸದ್ಯಕ್ಕೆ ಸಾಕು.

ಕಾವ್ಯಗುಣಗಳನ್ನು ಅನೇಕ ದ್ವಂದ್ವಗಳಲ್ಲಿ (dualities) ವಿಂಗಡಿಸಲಾಗಿದೆ. ಉದಾ: ಕ್ಲಾಸಿಕ್-ರೊಮ್ಯಾಂಟಿಕ್, ರೊಮ್ಯಾಂಟಿಕ್-ರಿಯಲಿಸ್ಟಿಕ್, ಕಾವ್ಯದ್ರವ್ಯ-ಕಾವ್ಯರೂಪ, ಹೊಸ-ಹಳೆ, ಇತ್ಯಾದಿ....ಇದರ ಜೊತೆಗೆ ಇನ್ನೊಂದು ವಿಂಗಡಣೆಯೂ ಅನುಕೂಲ ವಾಗುವದು, ಶಿಲ್ಪಕ ಕಾವ್ಯ ಮತ್ತು ಕಲ್ಪಕ ಕಾವ್ಯ. ಈ ಯಾವ ದ್ವಂದ್ವವೂ ವಿಂಗಡಣೆಯೂ ಶಾಸ್ತ್ರೀಯವಾದುದಲ್ಲ. ಆದರೆ ತಿಳುವಳಿಕೆಗೆ ಈ ದ್ವಂದ್ವಗಳು ಸಹಾಯವಾ ಗುತ್ತವೆ. ಶಿಲ್ಪದ ಮೇಲೆ ಹೆಚ್ಚು ಆಧಾರಿತ ಕಾವ್ಯವನ್ನು ಅನುವಾದ ಮಾಡುವಾಗ ಕಾವ್ಯಗುಣಗಳಲ್ಲಿ ವಜಾ ಆಗುವದುಂಟು. ಕೆಲವು ಶಿಲ್ಪಕ ಕವಿಗಳಂತೂ ಅನುವಾದ ರೂಪದಲ್ಲಿ ಸಪ್ಪೆಯಾಗಿ ಹೋಗುತ್ತಾರೆ. ಏಕೆಂದರೆ ಮೂಲ ಭಾಷೆಯಲ್ಲಿ ಅವರ ಕಾವ್ಯ ಪಡೆಯಬಲ್ಲ ರೂವಾರಿತನ—ಚಿತ್ತಾರಿತನವೇ ಅವರ ಕಾವ್ಯ. ಇಂಥವರ ಅನುವಾದ ಮಾಡುವದೆಂದರೆ, ಮೂಲ ಶಿಲ್ಪದ ಉಪರಾಟ ಪಡಿಯಚ್ಚು ಮಾಡಿಕೊಂಡು, ಅದೇ ಮಿದ್ದುಗೆತನವಿಲ್ಲದ ಇನ್ನೊಂದು ಭಾಷೆಯ ಎರಕವನ್ನು ಹೊಯ್ದು, ತೆಗೆದ ಸೊಟ್ಟಪಟ್ಟ ಮೂರ್ತಿಯನ್ನು ಪಡೆದಂತೆ. ಎರಕ ಹೊಯ್ಯಲು ಪಡಿಯಚ್ಚು ಗಟ್ಟಿಬೇಕು. ಇಲ್ಲವಾದರೆ ಕಾವ ರಸವನ್ನೆರೆದಂತೆ ಪಡಿಯಚ್ಚೆ ಬದಲಾಯಿಸಬಹುದು: ಅಂಕುಡೊಂಕವಾಗಬಹುದು. ಆದರೆ ಕಲ್ಪಕ ಕವಿಯ ಮೂಲ ಪಡಿಯಚ್ಚೇ ಗಟ್ಟಿಯಾಗಿರುತ್ತದೆ. ಅವನ ಕಾವ್ಯವು ಕೇವಲ ಭಾಷಾ ಕುಸುರಿನ ಮೇಲೆ ಅವಲಂಬಿಸಿರುವದಿಲ್ಲ. ಅವನ ವಿಚಾರದ ಹಂದರವೇ ಕಾವ್ಯ ಮಯವಾಗಿರುತ್ತವೆ. ಈ ಮಾತನ್ನು Pure Poetry School ಎಂದು ಹೇಳಿಕೊಳ್ಳು ತ್ತಿದ್ದ ಶಿಲ್ಪವಾದಿಗಳು (Formalists) ಒಪ್ಪುವದು ಸಾಧ್ಯವಿಲ್ಲ. ಆದರೆ ವಿಮರ್ಶಾ ರಂಗದಲ್ಲಿ ಬಲಾಢ್ಯರಕ್ಕಸರಂತೆ ಈ ವರೆಗೆ ಹಲ್ಲುಮಸೆಯುತ್ತ ವಿಹರಿಸುತ್ತಿದ್ದ ಶಿಲ್ಪವಾದಿ ಗಳು ಮೆಲ್ಲನೆ ನಿರ್ಬಲರಾಗುತ್ತಿದ್ದಾರೆ; ಪಲಾಯನ ಹೇಳುತ್ತಿದ್ದಾರೆ. ಮೊನ್ನೆ ಮೊನ್ನೆಯ ವರೆಗೆ ಶಿಲ್ಪವಾದದ ಬೃಹಸ್ಪತಿಗಳಾದ ಅನೇಕ ವಿಮರ್ಶಕರು ತಮ್ಮ ಹಿಂದಿನ ವಿಚಾರ ಗಳನ್ನು ಹರಿಯದ ಕಸುಕೆಂದು ಒಪ್ಪಿಕೊಳ್ಳುತ್ತಿದ್ದಾರೆ. ಇದೇನೇ ಇದ್ದರೂ, ಬೆನ್ನೆಲುವು ಗಟ್ಟಿಯಿದ್ದ ಕಲ್ಪಕ ಕಾವ್ಯದ ರೂಪವು ಅನುವಾದಗೊಂಡಾಗ ತುಸು ಬದಲಾದರೂ ಕೂಡ ತನ್ನ ಮೂಲಸೂತ್ರದ ಇನ್ನೊಂದು ಭಾಷ್ಯವನ್ನು ಬೇರೆ ಭಾಷೆಯಲ್ಲಿ ಪಡೆಯುತ್ತದೆಂಬ ಮಾತು ಸತ್ಯ. ಇದಕ್ಕೆ ವಿನಾಯಕರ ಇಂಗ್ಲಿಷ ಕಾವ್ಯ,—ಅದರ ಅನುವಾದದಲ್ಲಿ ಅವರು

ತೋರಿದ ಸುವಹತೆ, ಇವೆಲ್ಲ ನಿದರ್ಶನ. ವಿನಾಯಕರ ಇಂಗ್ಲಿಷ ಅನುವಾದಗಳು ಕೇವಲ ಅವರ ರೂಪಾರಿತನ (Technical accomplishment)ದ ಲಕ್ಷಣವಲ್ಲ. ಅವರ ಕಾವ್ಯ ಜಾತಿಯೇ ಗಟ್ಟಿ ಬೆನ್ನೆಲವಿನ ಜಾತಿ. ಕನ್ನಡ ಕಾವ್ಯದಲ್ಲೂ ಅಷ್ಟೆ. ಗೋಕಾಕರ ಎಲ್ಲ ಸೊಗಸುಗಾರಿಕೆಯನ್ನು ತೆಗೆದುಹಾಕಿದರೂ ಕೂಡ, ಕೊನೆಗೆ ಉಳಿಯುವ ಮೋಟಿನಲ್ಲೂ ಕಾವ್ಯರಸವೇ ಸಿಕ್ಕುತ್ತದೆ. ರೂಹಿನ ಸೊಗಸುಗಾರಿಕೆಯನ್ನು ಕಿತ್ತೊಗೆದಾಗಲೂ ಉಳಿದ ಮೂಲದ್ರವ್ಯ ಕಾವ್ಯಗುಣವನ್ನೊಳಗೊಂಡಿದ್ದಾದರೆ, ಅದರ ಅನುವಾದವೂ ಕಾವ್ಯಮಯ ವಾಗುವ ಸಂಭವ ಹೆಚ್ಚು. ಗೋಕಾಕರ ಅನುವಾದಗಳ ಕಾವ್ಯಮಯತೆಯ ಗುಟ್ಟು ನಮಗೆ ಇಲ್ಲಿ ಸಿಕ್ಕುತ್ತದೆ.

ಇದರ ಬಗ್ಗೆ ಯಾರಿಗಾದರೂ ಸಂದೇಹವಿದ್ದರೆ, ಉದಾಹರಣೆಗಾಗಿ The Song of Life ದಲ್ಲಿ ಬರುವ The Roses of youth ಎಂಬ ಕವನವನ್ನು 'ಪಯಣ' ಸಂಗ್ರಹ ದಲ್ಲಿದ್ದ ಅವರ ಮೂಲ ಕನ್ನಡ ರೂಪವನ್ನೂ ಹೋಲಿಸಿ ನೋಡಬೇಕು. ಕನ್ನಡದಲ್ಲಿ ಬರುವ ಉತ್ಕಟ ರೂಪ "ಎಲೆಲೆ ಉತ್ಪಲಲೋಚನೆ" ಎಂದ ಬೆಡಗುಗಾರಿಕೆಯ ಅಲಂಕಾರ ಗಳನ್ನು ಧರಿಸಿಕೊಂಡೂ ತನ್ನ ಭಾವರಚನೆಯ ಸೊಗಸಿನಿಂದಲೇ ಕನ್ನಡದ ಅತ್ಯುತ್ಕೃಷ್ಟ ಭಾವಗೀತೆಗಳಲ್ಲಿ ಒಂದೆನಿಸಿಕೊಂಡಿದೆ. ಇಂಗ್ಲಿಷಿನಲ್ಲಿ ಆ ಬೆಡಗು ಬೇಡಿಗೆಗಳನ್ನು ಕಳ ಚಿಟ್ಟುಕೊಂಡೂ, O my love, ದಂಥ ಸಹಜ ಸೌಂದರ್ಯದಲ್ಲಿಯೇ ಇಂಗ್ಲಿಷ ಕವನ ಗಳ Lyric ಮಾದರಿಯಲ್ಲಿ ಅತ್ಯಂತ ಶ್ರೇಷ್ಠ ಕವನವಾಗಿದೆ. ಕೊನೆಯ ಒಂದು ನುಡಿಯನ್ನು ಇಲ್ಲಿ ಉದ್ಧರಿಸುತ್ತೇನೆ:

> Well, not of our own begetting
> Was this love of ours.
> It came on us when spring was setting
> Its mark on winds and flowers.
> All the thousand stars did rise
> Our love to consecrate
> And He that made the starry skies
> Will answer for our fate!

ಈ ಸಾಲುಗಳ ಮೋಹಕತ್ವ, ಮಾಧುರ್ಯ, ಸಫಲತೆಗಳು ಕೇವಲ ಶಿಲ್ಪಕತೆಯಿಂದ ಹುಟ್ಟಿ ದವುಗಳಲ್ಲ. ಅವುಗಳ ಶಿಲ್ಪವು ಸಫಲವಾಗಿದೆಯೆಂಬ ಮಾತು ಸತ್ಯ. ಆದರೆ ಇದೇ ಸಾಲು ಗಳಿಗೆ ಸರಳರೂಪಕೊಟ್ಟು ವಿದ್ಯಾರ್ಥಿಗಳ ಬರ್ಸುರಾರಗೈ ಡಿಗಾಗಿ ಗದ್ಯರೂಪಕ್ಕೆ ಇಳಿಸಿದರೂ ಕೂಡ ಅದು ತನ್ನ ಕಾವ್ಯಮಯತೆಯನ್ನು ಪೂರ್ಣ ಕಳೆದುಕೊಳ್ಳುವದಿಲ್ಲ. ಏಕೆಂದರೆ ಅದರ ಮೂಲ ಸೌಂದರ್ಯ ಅದರ ಕಲ್ಪಕತೆಯ ಸೌಷ್ಠವದಲ್ಲಿಯೇ ಇದೆ. ಶಿಲ್ಪಕತೆ ಚಂದವಾಗಿದ್ದರೂ ಅದರ ಮೇಲೆಯೆ ಅದರ ಸೌಂದರ್ಯ ಅವಲಂಬಿಸಿಲ್ಲ. ಮೂಲ

ಕಲ್ಪನೆಯ ಪ್ರಾಮಾಣಿಕತೆ, ನೈಜತೆ, ಉತ್ಕಟತೆ, ಉದಾರತೆಗಳು ಅದರ ಮೂಲ ಸೌಷ್ಠವದ ಗುಣಗಳು. ಶಿಲ್ಪಕತೆ ಸೌಂದರ್ಯದ ಒಪ್ಪವನ್ನು ಮೂಲಸೌಷ್ಠವದ ಆಧಾರದ ಮೇಲೆ ಎರಚಿದೆ, ಅಷ್ಟೆ.

ನನ್ನ ಸ್ವಂತದ ಅನುಭವವನ್ನು ಹೇಳಬೇಕೆಂದರೆ, ನನ್ನ ಕೆಲವೇ ಸಫಲ ಅನುವಾದಗಳಲ್ಲಿ ಗೋಕಾಕರ '—ಗೆ' ಎಂಬ 'ಪಯಣ' ಸಂಗ್ರಹದಲ್ಲಿಯ ಇದೇ ವಿಷಯದ ಮೇಲೆ ರಚಿಸಿದ ಕವನದ ಅನುವಾದ.* ಅದರ ಬಗ್ಗೆ ನನಗೆ ಆದಷ್ಟು ಸಮಾಧಾನ ಇನ್ನಾವ ಅನುವಾದದಿಂದಲೂ ಆಗಲಿಲ್ಲ. ಆದರೆ ಅದರ ಸಫಲತೆಯ ಬಹ್ವಂಶವು ಮೂಲ ಕವಿತೆಯ ಗಟ್ಟಿ ಅಂಗ ಸೌಷ್ಠವದ ಮೂಲಕವೇ, ನನ್ನ ಅನುವಾದಕೌಶಲ್ಯದ ಮೂಲಕವಲ್ಲ, ಎಂದು ನಾನಂತೂ ನಂಬಿದ್ದೇನೆ.

ಈ ಮೂಲಭೂತ ಚರ್ಚಾಸ್ಪದ ವಿಷಯವನ್ನು ಇಲ್ಲಿಯೇ ಬಿಟ್ಟುಕೊಡುತ್ತೇನೆ. ಇಂಗ್ಲಿಷ ರೂಹುವಡೆದ ಅನೇಕ ಕನ್ನಡ ಕವಿತೆಗಳ ಹಲವಾರು ಲಕ್ಷಣಗಳನ್ನು ಮುಂದಿನ ಭಾಗದಲ್ಲಿ ಚರ್ಚಿಸಿ, ಅವು ಇಂಗ್ಲಿಷುಗೊಂಡಾಗ ಹುಟ್ಟಿದ ಧ್ವನಿ-ಪ್ರತಿಧ್ವನಿಗಳನ್ನು ಮುಂದಿನ ಭಾಗದಲ್ಲಿ ಚರ್ಚಿಸುತ್ತೇನೆ.

೨

ವಿನಾಯಕರ ಬಹುಮುಖ ಪ್ರತಿಭೆಯಲ್ಲಿ ಒಂದು ಮುಖಕ್ಕೆ ಸಾಕಷ್ಟು ಪ್ರಶಸ್ತಿ ಕನ್ನಡ ವಿಮರ್ಶಕರಿಂದಲೂ ದೊರತಿಲ್ಲವೆಂದು ತೋರುತ್ತದೆ. ಅವರ ಕೆಚ್ಚು—ಆವೇಶಗಳನ್ನು ಸವಿಯುವ ಕಲೆಯನ್ನು ವಿ. ಸೀ. ಯವರು ಕನ್ನಡಕ್ಕೆ ಮೊದಲು ಬಾರಿ ಒದಗಿಸಿದರು. 'ಸಮುದ್ರಗೀತಗಳು' ಸಂಗ್ರಹದಲ್ಲಿ ಸ್ಫುಟಗೊಂಡ ನವ್ಯತಾಳಲಯಗಳನ್ನು ಸವಿಯಲು ಕನ್ನಡ ರಸಿಕರು ಇನ್ನೂ ಸಿದ್ಧಿಪಡೆಯದಿದ್ದಾಗ ಈ ಕೆಚ್ಚು—ಅಭಿಮಾನ ಆವೇಶಗಳನ್ನು ಆತರಿಸಿ, ಅವುಗಳಿಗೆ ತಕ್ಕಂತೆ ತಾನಾಗಿ ಸ್ಫುರಣಗೊಂಡ ತಾಳಲಯಗಳನ್ನು ಸವಿದುಕೊಳ್ಳಲು ಕಲಿತಾಗ ಆಗಿನ ತರುಣ ಪೀಳಿಗೆಯು ಅನುಭವಿಸಿದ ಹೊಸ ಆತ್ಮವಿಶ್ವಾಸದ, ಹೊಸ ಸ್ವಾತಂತ್ರ್ಯದ, ಹೊಸ ಉಚ್ಛೃಂಖಲತೆಯ ನೆನಪು ನನಗೆ ಇನ್ನೂ ಉಂಟು. ವಿನಾಯಕರ 'ಪಯಣ'ದಲ್ಲಿ ಲಿರಿಕ್ ಸಂಪ್ರದಾಯದ ಅತ್ಯಂತ ಮಧುರವಾದ ಗೀತ ಗೀತಿಕೆಗಳು ಹಲವಾರು ಉಂಟು. ಆದರೆ ಹಲವಾರು ಕಾರಣಗಳ ಮೂಲಕ 'ಪಯಣ'ವು ತನ್ನ ಕಲೆಗೆ ಸಾಟಿಯಾದ ಪ್ರಶಸ್ತಿಯನ್ನು ಪಡೆಯದೆ ಹೋಯಿತು. ಆ ನಂತರ ಬಂದ 'ನವ್ಯಕವಿತೆಗಳು' ಮುಂತಾದ ಪ್ರಯೋಗಶೀಲ ಸಂಗ್ರಹಗಳು 'ವ್ಯಂಗ್ಯನವ್ಯ' ಸಂಪ್ರದಾಯಕ್ಕೆ ಹಾದಿಮಾಡಿಕೊಟ್ಟವು. ಈ ಸಂಗ್ರಹದಲ್ಲಿ ಮೊದಲಬಾರಿ (೧೯೫೦) ಶುದ್ಧ ಶಿಲ್ಪಕತೆಯನ್ನೊಳಗೊಂಡ 'ತೋಳಬಂತೆಲೆ ತೋಳ'ದಂಥ ಹೊಸ

* ಇದನ್ನು Hyphen ಎಂಬ ಮುಂಬೈಯ ಮಾಸಪತ್ರಿಕೆಯಲ್ಲಿ ೧೯೬೪-೬೫ರಲ್ಲಿ ಪ್ರಕಟಿಸಿದ್ದೆನು.

ರೀತಿಯ ಕವನಗಳು ಬಂದವು. ವಿನಾಯಕರು ಇಂಥ ಬಹಳ ಕವನಗಳನ್ನು ಅನುವಾದಿಸಲು ಯತ್ನಿಸಿಲ್ಲ. ಏಕೆಂದರೆ ಈ ಕವನಗಳು ತಮ್ಮ ಶಿಲ್ಪದಮೇಲೆ ಹೆಚ್ಚು ಅವಲಂಬನಗೊಂಡಿವೆ. ಏತನ್ಮಧ್ಯೆ ಪ್ರಕಟವಾದ 'ಬಾಳದೇಗುಲದಲ್ಲಿ' ಕವನಸಂಗ್ರಹ, ಎಲ್ಲಕ್ಕೂ ಮೊದಲು ಪ್ರಕಟ ವಾದ 'ಪಯಣ', ತುಸುಮಟ್ಟಿಗೆ 'ಸಮುದ್ರ ಗೀತಗಳು', ಇವೇ ಹೆಚ್ಚಾಗಿ ವಿನಾಯಕರ ಇಂಗ್ಲಿಷ ಅನುವಾದಗಳಿಗೆ ಸಾಮಗ್ರಿ ಒದಗಿಸಿವೆ. ಅದರಲ್ಲಿಯೂ 'ಬಾಳದೇಗುಲದಲ್ಲಿ' ಸಂಗ್ರಹಕ್ಕೆ ಅನೇಕ ಕಾರಣಗಳಿಗಾಗಿ ವಿಶಿಷ್ಟ ಸ್ಥಾನವಿದೆ. ವಿನಾಯಕರು ನಂತರ ತಮ್ಮ ಮುಕ್ತಛಂದಸ್ಸಿನ ಲಹರಿಯನ್ನು ಚಿಂತನಪರತೆಯ ಕಡೆಗೆ ಎಳೆದು 'ದ್ಯಾವಾಪೃಥಿವಿ', 'ಋಗ್ವನು'ಗಳನ್ನು ರಚಿಸಿದರು. 'ಊರ್ಣನಾಭ' ಸಂಗ್ರಹದ ಕೆಲವು ಕವನಗಳು, 'ತ್ರಿಶಂಕುವಿನ ಪ್ರಜ್ಞಾಪ್ರಭಾತ', ಹಾಗೂ ಇತ್ತೀಚೆಗೆ 'ಸಮನ್ವಯ'ದಲ್ಲಿ ಪ್ರಕಟವಾದ 'ಪಂಚವರ್ಣದಗಿಳಿ' ಹಾಗೂ 'ತರಂಗಾಂತರಂಗ' ಇವು ಅತ್ಯಂತ ಅನುವಾದಯೋಗ್ಯ ಕವನಗಳಾಗಿವೆ. ಇವಲ್ಲದೆ 'ಕಲೋಪಾಸಕ'ದಲ್ಲಿ ಬಂದ ಗೀತನಾಟಕಗಳಂತೂ ವಿನಾಯಕರ ಇಂಗ್ಲಿಷ ಸರಳ ಛಂದ (Blank Verse) ರಚನಾ ವಿಧಾನಕ್ಕೆ ಆಹ್ವಾನ ಗಳಾಗಿವೆ. ವಿನಾಯಕರು ಮುಕ್ತಛಂದಸ್ಸಿನಲ್ಲಿ ರಚಿಸಿದ ಚಿಂತನಪರ ಕವನಗಳ ಅನು ವಾದದ ಬಗ್ಗೆ ನನಗೆ ಅಷ್ಟೊಂದು ಉತ್ಸಾಹವಿಲ್ಲ. ಏಕೆಂದರೆ ಅನುವಾದ ಕಲೆಗೆ ಅವು ಆಹ್ವಾನವಾಗಿ ಬರುವದಿಲ್ಲ. ಆದರೆ ನಾನು ಮೇಲೆ ಸೂಚಿಸಿದ ಛಂದೋಬದ್ಧ ಕವನಗಳನ್ನು ಇಂಗ್ಲಿಷಿನ ಭಟ್ಟಿಗಿಳಿಸಿ ರಸಿಕರನ್ನು ಇಂದಿಲ್ಲ ನಾಳೆ ವಿನಾಯಕರು ತಣಿಸುವರೆಂದು ನಂಬಿದ್ದೇನೆ.

೩

ಬೇಂದ್ರೆಯವರ ಜೊತೆಗಾರರಾಗಿದ್ದುಕೊಂಡು ತನ್ನತನವನ್ನುಳಿಸಿಕೊಳ್ಳುವದು ಸುಲಭ ಮಾತೇನೂ ಅಲ್ಲ. ಗೋಕಾಕರು ತಮ್ಮ ಬುದ್ಧಿಯ ಆಳ-ವಿಸ್ತಾರಗಳ ಮೂಲಕ ವಿಸ್ತೃತ (Panoramic) ದರ್ಶನವನ್ನು ಕನ್ನಡ ಭಾಷೆಗೆ ಒದಗಿಸಿದುದು ಅವರದೇ ಆದ ಕೊಡುಗೆ. 'ಬಾಳದೇಗುಲದಲ್ಲಿ' ಎಂಬ ಸಂಗ್ರಹವನ್ನು ಅವರು Epic (ಮಹಾಕಾವ್ಯ) ಎಂದು ಕರೆ ದದ್ದಕ್ಕೆ ಹಲವರು ನೊಂದುಕೊಂಡದ್ದುಂಟು. ಯಾವ ಅರ್ಥದಲ್ಲಿ ವಿನಾಯಕರು ಅವನ್ನು Epic ಎಂದು ಕರೆದರೆಂಬುದರ ಸರಿಯಾದ ಅರಿಕೆ ಇಲ್ಲದುದೇ ಅದಕ್ಕೆ ಮುಖ್ಯ ಕಾರಣ. ಕರ್ನಾಟಕದ ಸಾಹಿತ್ಯ ನವೋದಯದ ದಿನಗಳು, ಅದರಲ್ಲಿ ಪಾತ್ರವಹಿಸಿದ ಆಡುತ್ತಿದ್ದ ಕೈಲಾಸಂ, ಬೇಂದ್ರೆ, ಮಧುರಚೆನ್ನ, ಆಲೂರ, ಪೆಜಾವರ, ಕಾರಂತ, ವಿ. ಸೀ. ಮುಂತಾದ ಸಮೀಪವರ್ತಿಗಳು ಜೀವನದೇಗುಲದ ಪೂಜಾರಿಗಳಂತೆ ವಿನಾಯಕರಿಗೆ ಕಂಡರು. ಆಯಾ ಕೆಲಸಗಾರರ ಕೆಲಸಗಳು ಪೂಜೆಯಂತೆ ಕಂಡವು. ಅವರವರ ಸೇವೆಯ ವೈಯಕ್ತಿಕ ವಿಶಿಷ್ಟತೆಗಳು--ಮಂತ್ರ ಹೇಳುವವನೊಬ್ಬ, ಗಂಧ ತೀಡುವವನೊಬ್ಬ, ಹೂವು ಕೀಳು

ಪವನೊಬ್ಬ, ನೀರು ತರುವವನೊಬ್ಬ—ಇಂಥ ಸಮಗ್ರ ವಿಸ್ತಾರೀಕರಣದ ಅಂಶಗಳಾಗಿ ಕಂಡವು. ಹೇಗೆ 'ಇಂದಿನ ಕರ್ನಾಟಕ' ಗ್ರಂಥವಲ್ಲಿ ಸ್ಥಾನ ಮಹಾತ್ಮ್ಯದ ದರ್ಶನ ಬಂದಿತೋ ಹಾಗೆ 'ಬಾಳದೇಗುಲದ'ಲ್ಲಿ ವಿಶಿಷ್ಟ ವ್ಯಕ್ತಿಗಳ ಒಟ್ಟಂದದ ಸಮಷ್ಟಿ ಕಥಾನಕದ ದರ್ಶನ (Legend), ಒಂದೇ ಕೃಷಿ, ಒಂದೇ ಪೂಜೆಯ ವಿವಿಧ ಮುಖಗಳಾಗಿ ವ್ಯಕ್ತ ಗೊಂಡವು. ಇದು ಆಯಾ ವ್ಯಕ್ತಿಗಳ ಘನತೆಯಲಕ್ಷಣವಲ್ಲದೆ, ಆಯಾ ವ್ಯಕ್ತಿಗಳನ್ನು ಒಂದು ಸ್ವಪ್ನಲೋಕದ ಏಕರಂಗತ್ವದಲ್ಲಿ ಸಮೀಕರಿಸುವ ಕವಿಯ ರಸಿಕತೆಯ ಲಕ್ಷಣವೂ ಹೌದು. ಇದಲ್ಲದೆ, ಕನ್ನಡ ನವೋದಯದ ಕಾವ್ಯ ಲಕ್ಷಣವೂ ಹೌದು. ಹೇಗೆ ಯೇಟ್ಸ್ ಕವಿ ತನ್ನ ದೈನಂದಿನ ಪರಿಚಯದ ಜನರನ್ನೂ Legendary men ಎಂದು ಕರೆದು, ಇಂಥ Legendಗಳನ್ನು ಹುಟ್ಟಿಸಬಲ್ಲ ಕಾವ್ಯದೃಷ್ಟಿಯ ಲಕ್ಷಣವನ್ನು ವ್ಯಕ್ತಪಡಿಸಿ ಆ ಕಾವ್ಯ ರೀತಿಯನ್ನು ಕಾವ್ಯಪ್ರಜ್ಞೆಯನ್ನು ಸ್ಫುಟಗೊಳಿಸಿದನೋ, ಹಾಗೆಯೇ ವಿನಾಯಕರು ತಮ್ಮ ಸಮೀಪವರ್ತಿಗಳ ಜೀವನವನ್ನು ಒಂದು ಭಾಗವತ ನಾಟಕದ ವಿವಿಧಾಂಗಗಳನ್ನಾಗಿ ಮಾಡಿ ತೋರಿಸಿದರು.

Epic (ಮಹಾಕಾವ್ಯ) ಹುಟ್ಟುವದು ಈ ಜಾತಿಯ ಪ್ರಜ್ಞೆಯೊಳಗಿಂದ. ಜಯದ್ರಥ ನಿಗಿಂತ ಎತ್ತರ, ಭೀಮಸೇನನಿಗಿಂತ ಬಲಿಷ್ಠ, ದುಶ್ಯಾಸನನಿಗಿಂತ ದುಷ್ಟ, ಆ್ಯಕಿಲೀಸನಿ ಗಿಂತ ಶೂರ, ಹೆಲನ್ನಳಿಗಿಂತ ಸುಂದರ ವ್ಯಕ್ತಿಗಳು ನಂತರ ಹುಟ್ಟಲಿಲ್ಲವೆಂಬುದು ಸರಿಯಾದ ಮಾತಲ್ಲ. ಆದರೆ ಅವರೆಲ್ಲ ಪಾತ್ರವಾಡಿದ ಜೀವನವನ್ನು ಒಂದು ನಾಟಕೀಯ ಕಥಾನಕ ವನ್ನಾಗಿ ಮಾಡಿ ನೋಡಬಲ್ಲ ಶಕ್ತಿ-ದರ್ಶನಗಳು ಅವರ ಜೊತೆಗೇ ಬದುಕಿದ ಮಹರ್ಷಿ ವ್ಯಾಸರಿಗೂ, ಅದನ್ನು ಕೇಳಬಲ್ಲ ಹಾಗು ಸವಿಯಬಲ್ಲ ಕೇಳುಗರಿಗೂ ಇದ್ದದ್ದು Heroic Age (ಪುರಾಣಯುಗ)ದ ಮುಖ್ಯ ಲಕ್ಷಣ. ಇವರ ಜೊತೆಗೇ ತಮ್ಮ ಜೀವನ ವನ್ನೂ ಅದೇ ಕಥಾನಕದ ಭಾಗವನ್ನಾಗಿ ಮಾಡಬಲ್ಲವನಂತೂ ಹಿರಿಯ ಕವಿಯೇ ಸರಿ. ವಿನಾಯಕರ 'ಸಮುದ್ರಗೀತಗಳು' ಎಂಬ ಕವನ ಸಂಗ್ರಹದ ನವ್ಯತೆ—ನಾವಿನ್ಯತೆಗಳ ಬಗ್ಗೆ ಅನೇಕರು ಬರೆದಿದ್ದಾರೆ. ಆದರೆ ವಿನಾಯಕರ ಸಹಜಸ್ಫೂರ್ತಿಯೊಡನೆ 'ಸಮುದ್ರ ಗೀತ'ಗಳ ಮೂಲಭೂತ ಏಕತ್ವದ ಬಗ್ಗೆ ಅರಿತುಕೊಳ್ಳುವದು ಅವಶ್ಯಕ. ಗೋಕಾಕರು ಯಾವ ಊರಿಗೆ ಹೋದರು, ಯಾವ ಐತಿಹಾಸಿಕ ಕೊತ್ತಲನ್ನು ನೋಡಿದರು, ಇವೆಲ್ಲ ಅದೇ ಒಟ್ಟಂದದ ಕಥಾನಕದ ಐಕ್ಯಪಡೆದು ಒಂದೇ Epic Vision (ಪುರಾಣದರ್ಶನ)ದ ಭಾಗವಾಗಿವೆ.

ಬೇಂದ್ರೆಯವರಲ್ಲಿಯೂ ಈ ಅಂಶಗಳುಂಟು. 'ಶಾಂತಕವಿಗಳ ವಿಶ್ರಾಂತಿ', 'ಮಾತಾಡೊ ಲಿಂಗವೆ', 'ಸಖೀಗೀತ'ಗಳಲ್ಲಿ ಭಾವಗೀತ (Lyric)ದ ಆವೇಶಮಯ ಖಂಡರೂಪವಾಗಿ ಇದು ಬಂದಿದೆ. 'ಈ ಸೃಷ್ಟಿ ಭಗವತ್ ದೃಷ್ಟಿ' ಎಂದು ಬೇಂದ್ರೆ ಹಾಡಿ, ಅದರ ಮೂಲ ತತ್ವವನ್ನೂ ಹೇಳಿದರು. ಆದರೆ ಗೋಕಾಕರಲ್ಲಿ ಇದು ಅಖಂಡವಾಗಿ ಬಂದಿದೆ. "ಸಮುದ್ರ

ನಾಗು, ಕವಿಯು" ಎಂಬ 'ಸಮುದ್ರ ಗೀತಗಳ' ಆರಂಭದ ಶೀರ್ಷಕ ಕವನದಲ್ಲಿ ಹೇಳಿದುದು ಈ ಅಖಂಡಿತ ವಿಸ್ತಾರದರ್ಶನದ ಲಕ್ಷಣ. ಆಯಾ ಪ್ರಸಂಗದ ಉದ್ವೇಗವನ್ನು ಭಾವಗೀತವನ್ನಾಗಿ ಮಾಡುವ ಮಾತು ಬೇರೆ. ಅಖಂಡ ಜೀವನವನ್ನೇ ಒಂದು ವಿಸ್ತಾರ ದೃಷ್ಟಿಯಲ್ಲಿ ಕತೆಯನ್ನಾಗಿ ಮಾಡುವ ದೃಷ್ಟಿ ಬೇರೆ. ಗೋಕಾಕರ ಹಿಂಬಳಿಸುವ ವೃತ್ತಿ ಇದಕ್ಕೆ ಕಾರಣವಾಗಿರಬಹುದು. ಸಂಗಡಿಗರೊಡನೆ ಒಂದೆ ಸಾಲಾಗಿ ಸಂಜೆಗತ್ತಲಲ್ಲಿ (Twilight) ನಡೆವಾಗ, ಗೋಕಾಕರು ಆಗಾಗ್ಗೆ ಎರಡು ಹೆಜ್ಜೆ ಹಿಂದೆ ಹೋಗಿ, ಸಂಗಡಿಗರ ಪಡಿನೆಳಲು Silhoute ನೋಡಿ, ಹಿಗ್ಗುತ್ತಾರೆ. ಆಯಾ ಸಂಗಡಿಗರ ಅಂತರ್ದರ್ಶನವನ್ನು ಆ ಪಡಿನೆಳಲಿನ ಮೇಲಿಂದ ಊಹಿಸಿಕೊಳ್ಳುತ್ತಾರೆ; ಮತ್ತೆ ಜೊತೆಗಾರರಾಗುತ್ತಾರೆ. ಗೋಕಾಕರ Epic Vision (ಪುರಾಣದರ್ಶನ) ಸಾಮೀಪ್ಯ-ದೂರತ್ವಗಳ ಇಬ್ಬಗೆಯ ಇಂತು ದೃಷ್ಟ್ಯಗ್ರ (Focus)ದ ಪರಿಪಾಕ. ಇದರಿಂದಲೇ ಸಮೀಪದ ವ್ಯಕ್ತಿಗಳನ್ನೂ ಅವರು ಪುರಾಣವನ್ನಾಗಿ ಮಾಡುವ ಶಕ್ತಿಯನ್ನು ಪಡೆದಿದ್ದಾರೆ.

ಇದಕ್ಕೆ ಒಮ್ಮೊಮ್ಮೆ Mythopoeic Imagination ಅನ್ನುವದುಂಟು. ವ್ಯಾಸರ ಸಂಗ್ರಾಹಕ ಆರ್ಷದೃಷ್ಟಿಯ ಮೂಲಕ ಹುಟ್ಟುವ ಪುರಾಣದ ರೀತಿ ಬೇರೆ. ಅದು ಆರ್ಷ ಘನತೆ ಅವಿಚಲ ಸಮತೋಲ, ಇವುಗಳಿಂದ ಹುಟ್ಟದೆ. ವ್ಯಕ್ತಿ ವ್ಯಕ್ತಿಗಳನ್ನು ಭಾವುಕತೆಯ ಸಂಜೆಗತ್ತಲಿನಲ್ಲಿ ನೆಳಲುಗಳನ್ನಾಗಿ ಮಾಡಿ ಒಂದು ಹಿರಿಗನಸಿನ ಪಾತ್ರಗಳನ್ನಾಗಿ ಮಾಡುವ ವಿನಾಯಕರ ಆಧುನಿಕ ಪುರಾಣದ ರೀತಿ ಬೇರೆ. ಇದರ ಬಗ್ಗೆ ವಾದ ಮಾಡುವುದರಲ್ಲಿ ಅರ್ಥವಿಲ್ಲ. ಆದರೆ ಗೋಕಾಕರ ಕಾವ್ಯಗುಣದ ವಿಶಿಷ್ಟತೆಯನ್ನು ಅರಿಯಬೇಕಾದರೆ, ಈ ಗುಣವನ್ನು ನಾವು ಅರಿಯಲೇಬೇಕು. ಮೇಲೆ ಸೂಚಿಸಿದ "ಹಿಂಬಳಿಸಿ ತಣ್ಣಿಸುವ" ಗೋಕಾಕರ ದೃಷ್ಟಿ ವಿಮರ್ಶಕ ದೃಷ್ಟಿಯಲ್ಲ; ಕಥಾನಕ ದೃಷ್ಟಿ; Not Critical but mythical; ಎಂಬುದನ್ನು ಅರಿತುಕೊಳ್ಳುವದು ಅವಶ್ಯಕ. ಇದರ ಜೊತೆಗೇ, ವಿಮರ್ಶಾ ಶಾಸ್ತ್ರವನ್ನು ಚೆನ್ನಾಗಿ ಅರಿತೂ ಕೂಡ, ಕವಿಯಾದಾಗ ಆ ವಿಮರ್ಶಕ ದೃಷ್ಟಿಯನ್ನು ವ್ಯಕ್ತಿ-ಸಂಗತಿಗಳ ಮೇಲೆ ಹಾಕದೆ, ಅವುಗಳನ್ನು ಕಥಾನಕದ ಕನಸುಗಾರಿಕೆಯಲ್ಲಿ ಹೀರಿ, ಒಪ್ಪಗೊಟ್ಟು, ಮಿರುಗುಕೊಟ್ಟು, ಜೀವಂತಮಾನವರನ್ನು ಅತಿಮಾನವರನ್ನಾಗಿ ಮಾಡುವ ಘನಚೇತನಕ್ಕೆ ಓದುಗ ತಲೆವಾಗಬೇಕಾಗುತ್ತದೆ. ಕೆಲ ಕವಿಗಳು ಕಾವ್ಯ ಬರೆಯುವಾಗಲೂ ವಿಮರ್ಶಕರಾಗಿಯೇ ಉಳಿಯುತ್ತಾರೆ. ಗೋಕಾಕರು ತಮ್ಮ ವಿಮರ್ಶಕ ವಿಧಾನವನ್ನು ಎಷ್ಟು ಪರಿಪೂರ್ಣವಾಗಿ ತಮ್ಮ ಕವಿತೆಯಿಂದ ದೂರ ಇಡಬಲ್ಲರೆಂಬುದೇ ಮೊದಲನೆಯ ಅದ್ಭುತ. ತಮ್ಮ ಸುಶಿಕ್ಷಿತತೆ, ತಮ್ಮ ವಿಮರ್ಶಕತೆ, ತಮ್ಮ ಬೌದ್ಧಿಕ ವಿಕಾಸ ಇವುಗಳನ್ನು ಹತೋಟಿಯಲ್ಲಿಟ್ಟುಕೊಂಡು ಭಾವುಕತ್ವಕ್ಕೆ ಹೇಗೆ ಹೆಚ್ಚಿನ ಬೆಲೆ ಕೊಟ್ಟಿದ್ದಾರೆಂಬುದು ಕೇವಲ ವಿನಯದ ಲಕ್ಷಣವಲ್ಲ; ಅವರ ಕಾವ್ಯದ ಇನ್ನೊಂದು ಅದ್ಭುತ ಲಕ್ಷಣ. ಜ್ಞಾನಲವದುರ್ವಿದಗ್ಧರು ತಮ್ಮ ಕಾವ್ಯವನ್ನು ತಮ್ಮ

ಜ್ಞಾನಲವನ ಮೂಲಕವೇ ಹೇಗೆ ಹೊಲೆಗೆಡಿಸಿಕೊಂಡಿದ್ದಾರೆಂಬ ಉದಾಹರಣೆಗಳನ್ನು ನೋಡಿದರೆ ಗೋಕಾಕರ ಕಾವ್ಯದ ಪ್ರಾಯೋಗಿಕ ಬೆಲೆಯ (Experimental Value)ಯು ಮನವರಿಕೆಯಾಗುವದು.

೪

ಎಲ್ಲ ಕಡೆಗೂ ವಿನಾಯಕರು ಯಥಾತಥ್ಯ ಅನುವಾದ ಮಾಡುವದರಲ್ಲಿ ಯಶಸ್ವಿಯಾಗಿದ್ದಾರೆಂದು ಹೇಳುವದು ಅನವಶ್ಯಕ. ಅದರಂತೆಯೆ ಸ್ವತಂತ್ರವಾಗಿ ಬರೆದ Indo-Anglian ಗೀತೆಗಳಲ್ಲಿಯೂ ಒಂದೇ ಸಮನಾಗಿ ಯಶಸ್ಸನ್ನು ಪಡೆದಾರೆಂದು ಹೇಳುವದೂ ಅನವಶ್ಯಕ. ಅವರ ಯಶಸ್ಸು-ಅಪಯಶಸ್ಸುಗಳೆರಡೂ ಕೆಲವು ಮಹತ್ವದ ಪ್ರಶ್ನೆಗಳಿಗೆ ಉತ್ತರಕೊಡುತ್ತವೆ. ಯಶಸ್ಸು ಗಳಿಸಿದಲ್ಲಿ ಯಾವ ಆಳ-ಎತ್ತರಕ್ಕೆ ಮುಟ್ಟಬಲ್ಲರು, ಯಾವ ಸಮರ್ಥತೆ-ಸಾಮರ್ಥ್ಯಗಳನ್ನು ವ್ಯಕ್ತಗೊಳಿಸಬಲ್ಲರು, ಎಂಬುವಕ್ಕೆ ಹೇರಳ ಉದಾಹರಣೆಗಳು The Song of Lifeದಲ್ಲಿ ದೊರಕುತ್ತವೆ.

Whose rapt eyes do you kiss now, vision gone ?
(*Ode to Beauty*)

ತಾರುಣ್ಯದ ಕಸುಕು ಏಕಾಗ್ರತೆಯನ್ನು ಬೆಳೆದ ನಂತರ ಉಳಿಸಿಕೊಳ್ಳುವದು ಶಕ್ಯವಾಗಲಿಲ್ಲ. ಕನಸುಗಾರಿಕೆ ಮುಗಿದ ಮೇಲೆ ಕನಸಿನ ನೆನಪು ತನ್ನ ಚೆಲುವನ್ನು ಭೋಗವಸ್ತುಗಳ ಮೇಲೆ ಆರೋಪಮಾಡಲು ಹಚ್ಚಿದೆ. ತನ್ನ ಕೊನೆಯ ಪರಿಪಕ್ವತೆಯನ್ನು ಕೊಡುವ ಮೊದಲು ಭಾವದೇವಿ ಕೆಲವು ದಿನಗಳ ಮಟ್ಟಿಗೆ ಮರೆಯಾಗುವಳು. ಸ್ವತಂತ್ರ ಬೆಳವಣಿಗೆಗೆ ಆಸ್ಪದ ಕೊಟ್ಟು, ಸುಖಗಳನ್ನು ಸವಿಯು ಹಚ್ಚಿ, ಅವುಗಳ ಪರಿಪಾಕದೊಳಗಿಂದಲೆ ಕೊನೆಯ ಅನುಭಾವ ಉದಯಗೊಳ್ಳಬೇಕು. ಆ ಮೂರೂ ಅನುಭವಗಳು ಒಂದೇ ಭಾವ ಪ್ರವಾಹದ ಮೂರು ರೂಪಗಳು.

Vision to come, what heart was thy abode
Before mine will be thine ? All, all is one,
Mind and its exultation and the mode
Of love and living ; for these ecstasies,
These great scene—changers, royal waiters—on,
. . . .
We know not them or their primeval way.
Let not the eye of heaven that remembers
Each insect, unremember me alone.
(*Ode to Beauty* p. 22)

ಮೊದಲು ನಾನು ಉದ್ಧರಿಸಿದ ಒಂದೇ ಅಮೋಘ ಸಾಲು ಬಂದನಂತರ ಕವಿ ಮುಂದೇನ
ಬರೆಯಬಲ್ಲ ?—ಅದರ ಕಾವ್ಯಮಯತೆಗೆ ಹಾಸಿಯಾಗದಂತೆ ಇನ್ನೇನಾದರೂ ಬರೆಯ
ಬಲ್ಲನೆ? ಎಂದು ಕೇಳಿದರೆ, ಅದಕ್ಕೆ ಉತ್ತರವಾಗಿ ಮುಂದಿನ ಸಾಲುಗಳನ್ನು ಉದ್ಧ
ಸಿದ್ದೇನೆ. ವಿಚಾರದ ಬೆನ್ನೆಲವು ಗಟ್ಟಿಯಿದ್ದ ಕವಿ ಕೇವಲ Lyrical effect ಗಾಗಿ ತನ್ನ
ಕವಿತೆಯನ್ನು ಒಂದು ಚೆಂದ ಸಾಲಿಗೆ ನಿಲ್ಲಿಸಿಬಿಡುವದಿಲ್ಲ. ತನ್ನ ವಿಚಾರದ ಹಂದರವನ್ನು
ಮುಗಿಸುವವರೆಗೆ ಅವನಿಗೆ ಸಮಾಧಾನವಿಲ್ಲ. ಆ ಸಾಲು ಹೇಳಿದ ವಿಚಾರವನ್ನೇ ಎತ್ತಿ
ಕೊಂಡು ತನ್ನ ಜೀವನದ ಪರಿಣತಿಯನ್ನು ಸುಂದರವಾಗಿ ವಿವರಿಸಿ, ಕವಿ ಆ ಪರಿಣತಿ
ತಕ್ಕ ಉದಾತ್ತ ಪ್ರಾರ್ಥನೆಗೈದಿದ್ದಾನೆ. ಗೋಕಾಕರ ಉತ್ತುಂಗ ಕಾವ್ಯಕ್ಕೆ ಈ ಸಾಲ
ಗಳೇ ಉದಾಹರಣೆ.

೧೯೫೭ರಲ್ಲಿ ಗೋಕಾಕರು All India Radio ದ ಪ್ರತಿನಿಧಿಗೆ (ಶ್ರೀ ಎಸ್. ಆರ್
ಕುಲಕರ್ಣಿ) ತಮ್ಮ ಆಂತರಿಕ ಜೀವನದ ಬೆಳವಣಿಗೆಯ ಬಗ್ಗೆ ಒಂದು ಸಂದರ್ಶನ
ವಿತ್ತಿದ್ದರು. (ಬಾನುಲಿಸಿದಾಗ ಅದರಲ್ಲಿ ಮುಖ್ಯಾಂಶಗಳೆಲ್ಲ ಅಡಗಿ ಹೋದವು.) ಆ
ನಾನು ಮಾಡಿಕೊಂಡ ಡೈರಿ ನೋಟ್ಸ ದುರ್ದೈವದಿಂದ ಕಳೆದುಹೋಗಿವೆ. ತಮ್ಮ
ಹದಿನೇಳು-ಹದಿನೆಂಟನೆಯ ವಯಸ್ಸಿನಲ್ಲಿ ಸಾಕ್ಷಾತ್ಕಾರದ ಹಟವನ್ನೇ ತೊಟ್ಟು ಮೂರ
ದಿವಸ ಒಂದು ಗುಡ್ಡದಲ್ಲಿ ಏಕಾಂತದಲ್ಲಿ ಕಳೆದರೆಂದು ಆಗ ಹೇಳಿದುದು ನೆನಪುಂಟು
ಸಾಕ್ಷಾತ್ಕಾರವಾಗದಿದ್ದರೂ, ಒಂದು ಒಳದನಿ : "ಪರಿಪಕ್ವತೆಯನ್ನು ತರಲು ಅನೇಕ ಜನ
ಬೇಕು. ಹೀಚನ್ನು ಹಿಚುಕಿ ಹಣ್ಣು ಮಾಡುವದು ಒಳಿತೆ?" ಎಂಬರ್ಥದ ಮಾತುಗಳನ್ನು
ಆಡಿದಂತಾಗಲು, ಅದನ್ನೇ ಆದೇಶವೆಂದು ನಂಬಿ ತಾವು ಮನೆಗೆ ಹಿಂತಿರುಗಿದರೆಂದು ಆ
ಹೇಳಿದ್ದರು. ಈ ವಿಷಯವು The Real Vision ಎಂಬ ಇನ್ನೊಂದು ಕವನದಲ್ಲಿ
ಸುಂದರವಾಗಿ ವ್ಯಕ್ತವಾಗಿದೆ :

The goal in distance fades away.
Life whispers its own secret : 'wait'
The panting self is brought to bay
By its own weakness, called its fate.

ಇದು ದೈವವಾದಿತ್ವವಲ್ಲ. ವ್ಯಕ್ತಿತ್ವದ ಪರಿಧಿಗಳನ್ನು ಅರಿತುಕೊಂಡು ಅದರ ಪರಿಪಕ್ವತೆ
ಯನ್ನು ಸಾಧಿಸುವ ಪುನರ್ಯೋಗಾರೂಢತ್ವ. ಗೋಕಾಕರು ಸ್ವೀಕರಿಸಿದ ಜೀವನ
ಯೋಗವು ಪೂರ್ಣತ್ವದ ಕನಸುಗಾರಿಕೆಯನ್ನು ನಿರಾಕರಿಸದೆ ತಮ್ಮ ವ್ಯಕ್ತಿತ್ವದ ಪರಿಮಿತಿ
ಗಳನ್ನು ಸ್ವೀಕರಿಸಿದ ಸಾಹಸ. ಇದರ ಮುಂದೆ ತಮ್ಮ ಜೀವನ ಹೇಗೆ ಹರಿಯುವದೆಂಬ
ದನ್ನು The Quest ಎಂಬ ಕವನದಲ್ಲಿ ಒಡಂಬಡಿಕೆಯಾಗಿ ಪ್ರತಿಜ್ಞೆಯಾಗಿ ಹೇಳಿದ್ದಾರೆ
ಅದರ ಪ್ರಚಂಡತೆಯನ್ನು ಅವರ ಮಾತೇ ಚೆನ್ನಾಗಿ ವಿವರಿಸಬಲ್ಲದು :

It is an endless pilgrimage,
yet one that ends at every step.
Each day will yield me something new—
I'll worship it and love.

ಡದು ತೊಡರುಗಳಿಂದ ಕೂಡಿದ ಗೋಕಾಕರ ಸಾಹಸ ಜೀವನವನ್ನು ಒಂದು ಸೂತ್ರ ರಾಗಿ ನೋಡಬಲ್ಲ, ಒಂದು ರಸಾಯನವನ್ನಾಗಿ ಮಾಡಬಲ್ಲ ಅವರ ಚಿಂತನಪರತೆಯ ಗೂಢಸತ್ಯವು ನಮಗೆ ಇದೇ ಅನುಭವದಲ್ಲಿ ಸಿಕ್ಕುತ್ತದೆ. ಬಾಳನ್ನೇ ದೇಗುಲವನ್ನಾಗಿ ಮಾಡಬಹುದೆ?—ಮಾಡಬಹುದು. ಆದರೆ ಅದರ ಸಿಹಿ-ಕಹಿಗಳನ್ನು ಒಂದು ರಸಾಯನ ವನ್ನಾಗಿ ಮಾಡಿ ಪ್ರತಿ ಅನುಭವಕ್ಕೂ ಒಂದು ಹಂದರದ ಭಾಗವನ್ನಾಗಿ ಮಾಡಬಲ್ಲ ಲ್ಪಕತೆ (ಕೇವಲ ತಾತ್ವಿಕವಾಗಿ ಅಲ್ಲ, ಭಾವುಕವಾಗಿ) ಬೇಕು. ಅನುಭವಗಳ ಅನನ್ಯತೆ ಗನ್ನು ಸವಿದು, ಒಂದೆ ರಸಾಯನವನ್ನಾಗಿ ಮಾಡಬಲ್ಲ ಜೀವನ ಗ್ರಂಥಿ ಗೋಕಾಕ ಲ್ಲಿ ಜಾಗೃತವಾಗಿದೆ. ಅವರ ಜೀವನದ ಒಂದು ಉತ್ಕಟ ಅನುಭವ (crisis of experience) ಮೌಲ್ಯ (value) ವನ್ನು ಅವರ ಕಾವ್ಯ ಮೇಲಿಂದ ಮೇಲೆ ಎತ್ತಿಹಿಡಿಯು ತ್ತದೆ. ಅಂತೆಯೇ ಗೋಕಾಕರ ಕಾವ್ಯವು ಅವರ ಜೀವನದ ಮೂಲದ್ರವ್ಯಗಳಾಗಿ ಬಂದ ಲವಾರು ಒಡಂಬಡಿಕೆಗಳನ್ನು ಅಖಂಡವಾಗಿ ಪೋಷಿಸುತ್ತದೆ.

ಗೋಕಾಕರು ತಮ್ಮ ಪ್ರತಿಭೆಗೆ ಕಲಿಸಿದ ಮೂಲ ಒಡಂಬಡಿಕೆಯನ್ನು ಓದಿದಂತಾ ಯಿತು. ಇದರ ಪರಿಣಾಮವೇನು?

Oh! Not to me the ancient glory
Of a life in all the spheres
To me the unassuming story
That in your inform light inheres
Is world enow! Glad will I hearken
To your glorious tales that are
Filled with a splendour that will darken
Other lustrous stars, my star!

ಆಹಾ! ಎಂಥ ಸೂಕ್ಷ್ಮವೇದ್ಯತೆ! ತಮ್ಮ ವ್ಯಕ್ತಿತ್ವಪರಿಧಿಗಳನ್ನು ನಿರ್ಣಯಿಸಿಕೊಂಡ ಮೇಲೆ ಹೊಣೆಗಾರ ಕವಿ ತನ್ನ ಪ್ರತಿಭೆಗೆ ಈ ಪರಿಧಿಗಳಲ್ಲಿ ವಿಹರಿಸಲು ಕಲಿಸಬೇಕಲ್ಲವೆ?— ಮೇಲಿನ ಸಾಲುಗಳ ಸಂಪೂರ್ಣ ಅರ್ಥಮಾಡಿಕೊಳ್ಳಲೆಂದೇ ನಾನು ಈ ಪ್ರಬಂಧದ ಸೆಯ ಭಾಗದ ಪ್ರಥಮ ವಾಕ್ಯದಲ್ಲಿ ಬೇಂದ್ರೆಯವರ ಹೆಸರು ತೆಗೆದುಕೊಂಡಿದ್ದೇನೆ. ಸಂಪ್ರದಾಯ ಜೀವನದ ಸಮೀಪವಿದ್ದೂ ತಮ್ಮ ಕುಶಾಗ್ರಬುದ್ಧಿಯ ಮೂಲಕ ಬೇಂದ್ರೆ ತಮ್ಮ ಏಕಮುಖೀ ವ್ಯಕ್ತಿತ್ವವನ್ನು ಬಹು ವಿಷಯಗಳಲ್ಲಿ ಸುವಹತೆಯಿಂದ ಸಂಚಾರಿಸ ಬಲ್ಲರು. ಆದರೆ ಅನುಭವಗಳ ಸಿಹಿ-ಕಹಿ ವಿವಿಧತೆ—ಅನನ್ಯತೆಗಳ ಬಿಡಿಬಿಡಿ ಚೆಲುವನ್ನು

ಉಣ್ಣುವ ಪ್ರತಿಜ್ಞೆಯನ್ನು ಸ್ವೀಕರಿಸಿದ ಗೋಕಾಕರ ಬಾಳು ಒಂದು ದಂಡಿನಂತೆ, ಒಂ
ಪಾಳ್ಯದಂತೆ ಬಹುಮುಖ. ಅದರಲ್ಲೆ ಏಕಾಗ್ರತೆ, ಏಕರಸಾಯನಗಳನ್ನು ಹೆಜ್ಜೆ ಹೆಜ್ಜೆ
ಹುಟ್ಟಿಸಿಕೊಳ್ಳಬೇಕಾಗುತ್ತದೆ.

It is an endless pilgrimage,
yet one that ends at every step

ಎಂದು ಈ ಮೊದಲೆ ಉದ್ಧರಿಸಿದಂತೆ, ಗೋಕಾಕರು ಜೀವನಕ್ಕೆ ಒಡಂಬಡಿಕೆ ಕೊಟ್ಟ
Atomistic experience ತತ್ವಕ್ಕಾಗಿ ಅಲ್ಲ. ಆಯಾ ಅನುಭವಗಳ ರಸಾಯನವನ್ನು
ಹೀರಿ ಒಂದುಗೊಳಿಸುವ ಭಾವುಕ ರಸಿಕತೆಯ ಪ್ರತಿಜ್ಞೆಯ ಮೂಲಪೀಠಿಕೆಯೇ ಅನುಭ
ಗಳ ಅನನ್ಯತೆ. ಈ ಏಕೀಕರಣದ ರಾಸಾಯನಿಕಕ್ರಿಯೆಗಾಗಿ ಗೋಕಾಕರು ವೈವಿಧ್ಯ
ಯನ್ನು ಬಿಡಬೇಕಾಗುತ್ತದೆ. ಆ ತ್ಯಾಗದಿಂದಲೇ ತಮ್ಮ ಅನುಭವಪಾಳ್ಯವನ್ನು ಅವರ
ಏಕಮುಖತ್ವದ ಕಡೆಗೆ ಒಯ್ಯಬಲ್ಲರು. ಅದಕ್ಕೆಂದೇ ತಮ್ಮ ಪ್ರತಿಭೆಗೆ "ನಿನ್ನದೇ ಆ
ಒಂದು ನಕ್ಷತ್ರವನ್ನು ನಿನ್ನ ಕಣ್ಣುಬೊಂಬೆಯನ್ನಾಗಿ ಮಾಡಿಕೋ! ನಿನ್ನ ಏಕಾಗ್ರ
ಹೆಚ್ಚಾದಂತೆ ಅದರ ಪುಟ್ಟ ಬೆಳಕೇ ಪ್ರಖರವಾಗಿ ನಿನಗೆ ಹಗಲಾಗುವದು; ಆಕಾಶ
ಸಹಸ್ರ ನಕ್ಷತ್ರಗಳೂ ಆಗ ತಮ್ಮ ಬೆಳಕನ್ನು ಕಳೆದುಕೊಂಡು ನಿನ್ನ ಬೆಳಕೊಂದರಲ್ಲಿಯೆ
ಒಂದಾಗುವವು!" ಎಂದು ಆದೇಶ ಕೊಟ್ಟಿದ್ದಾರೆ. (ಈ ನನ್ನ ಚರ್ಚೆಯಲ್ಲಿ ಬೇಂದ್ರೆಯವ
ಹೆಸರು contrasting image ಎಂದು ಅರ್ಥವಿವರಣೆಗಾಗಿ ಉಪಯೋಗಿಸಲ್ಪಟ್ಟಿದೆಯೆ
ಹೊರತು ಇಬ್ಬರ ಪ್ರತಿಭೆಯನ್ನು ಹೋಲಿಸಿ ನೋಡುವ ಉದ್ದೇಶದಿಂದಲ್ಲವೆಂಬುದನ್ನು
ತಿಳಿಯಪಡಿಸುತ್ತೇನೆ.)

ಆಳವಾಗಿ ವಿಚಾರಮಾಡಿದ ಕವಿಗಳು ತಮ್ಮ ತಮ್ಮ ವ್ಯಕ್ತಿತ್ವದ ಹಾಗು ಪ್ರತಿಭೆಯ
ಸಮೀಕರಣಗಳನ್ನು ಹುಡುಕಬೇಕಾಗುತ್ತದೆ. ಗೋಕಾಕರು ಶೆಲ್ಲಿ ಇಲ್ಲವೆ ಯೇಟ್ಸ ಕವಿಗ
ಸಮೀಕರಣವನ್ನು ಹೆಚ್ಚು ಹೋಲುತ್ತಾರೆ. ಯೇಟ್ಸ ಕವಿಯಂತೂ ತನ್ನ ಒಂದೊಂ
ವಿಚಾರವನ್ನೂ ಒಂದು ವ್ಯಕ್ತಿಯೆಂದಾಗಿ ತಿಳಿದುಕೊಂಡು ತನ್ನ ಅಂತರಂಗದಲ್ಲಿ ಆ
ವಾಡುತ್ತಿರುವ ವಿವಿಧ "ವ್ಯಕ್ತಿ"ಗಳನ್ನು ಒಂದುಗೊಳಿಸಲು ತನ್ನ ಆಯುಷ್ಯದ ತುಂಬ
ಹೆಣಗಾಡಿದನು. ಯೇಟ್ಸ ಕವಿ ತನ್ನ ಪ್ರತಿಭೆಗೆ Mask—ಮುಖವಾಡವೆನ್ನುತ್ತಿದ್ದನು
ಇಂಥ ವಿವಿಧಾಂಗಗಳಿಗೆ False mask ಎಂದು ಕರೆದು ಅವುಗಳಿಗೆ ಒಂದೆಡೆ
Temptation ಎಂದು ಕರೆದಿದ್ದಾನೆ. ಅವನ The fascination of what i
difficult ಎಂಬ ಪ್ರಸಿದ್ಧ ಕವಿತೆಯು ಈ ವಿವಿಧಾಂಗಗಳು ಕೊಡುವ ಖೊಟ್ಟಿ ಆಮಿಷ
ಬಗ್ಗೆ ಯೇಟ್ಸನಲ್ಲಿ ಹುಟ್ಟಿದ ದುರ್ಬಲ ಪರಾಧೀನತೆಯ ಅಭಿವ್ಯಕ್ತಿ. ಇದರ ಸರಿಯಾ
ಅರ್ಥವನ್ನು ತಿಳಿದುಕೊಳ್ಳದೆ ಅನೇಕ ಹುಂಬ ಪಾಶ್ಚಾತ್ಯ ವಿಮರ್ಶಕರು ಈ ಕವಿ
ಯನ್ನು ಯೇಟ್ಸನ ಸೋಲಿನ ವರ್ಣನೆಯೆಂದು ಬರೆದಿದ್ದಾರೆ. ಪ್ರತಿಯೊಬ್ಬ ಕವಿ ತನ

ಪ್ರತಿಭೆಗೂ ತಕ್ಕ ದಿಕ್ಕು ತೋರುವ ಹೊಣೆಗಾರ ಕೆಲಸ ಮಾಡಬೇಕಾಗುತ್ತದೆಯೆಂಬ ವಿಚಾರಕ್ಕೆ ಪಾಶ್ಚಾತ್ಯ ವಿಮರ್ಶಾಶಾಸ್ತ್ರದಲ್ಲಿ ತಕ್ಕ ಸ್ಥಾನ ದೊರಕಿಲ್ಲವೆಂದು ದುಃಖದಿಂದ ಹೇಳಬೇಕಾಗುತ್ತದೆ.

ತಪಾಚಿತ್ 'ಗೆಳೆಯರ ಗುಂಪಿ'ನ ಮುರುಗಡೆಯ ಕಾಲಕ್ಕೆ ಉಂಟಾದ ನೋವಿನ ಒತ್ತಡವನ್ನು ಇಳಿಸಿಕೊಳ್ಳಲಿಕ್ಕೇನೋ ಎಂಬಂತೆ ಬರೆದ ಎರಡು ಕವನಗಳು: To a poet Friend ಹಾಗೂ Ariel in Bondage. ಎರಡನೆಯದರಲ್ಲಿ ಈ ಸಾಲುಗಳು ಬರುತ್ತವೆ:

> A thousand fancies came and hummed
> Into your ears....

ಈ ಸಾಲುಗಳು ನಾನು ಮೇಲೆ ವಿವರಿಸಿದ ಅರ್ಥವಿನ್ಯಾಸಕ್ಕೆ ಪೋಷಕವಾಗಿವೆ. To a Poet Friend ಕವನದಲ್ಲಿ ಬೇಂದ್ರೆಯವರ ಗುರುತ್ವವನ್ನು ಅಂಗೀಕಾರ ಮಾಡಿದ್ದಲ್ಲದೆ, ಆ ಕಾಲಕ್ಕೆ ಬೇಂದ್ರೆಯವರೇ ಸಾರಿದ ಫಲಶ್ರುತಿಯ ಬಗ್ಗೆ ವಿನಯದಿಂದ ಹೀಗೆ ನುಡಿದಿದ್ದಾರೆ:

> Like a lone red flower blossoming by the ocean marge,
> You stood unshrinking beneath the burning sun
> And gazed back at him as effulgeat as he.
> I know not whether I am the fruit of that flower.
> The sun will ripen the fruit that the flower yields.
> But where would be the fruit without the agony of the flower?

ಈ ಸಾಲುಗಳಿಗೆ ಐತಿಹಾಸಿಕ ಮಹತ್ವವುಂಟು. 'ಗೆಳೆಯರ ಗುಂಪಿನ' ವಿಸ್ಖಲನೆಯಿಂದ ಬೇಂದ್ರೆಯವರಿಗೆ ಆದ ನೋವನ್ನು ಮಾಜಲು ಅವರು ಹಲವಾರು ಭವಿಷ್ಯಗಳನ್ನು ರಚಿಸಿದ್ದುಂಟು. ತಮ್ಮ ಪ್ರಯತ್ನ ಹೂವಿನ ಪ್ರಯತ್ನವೆಂದೂ, ಹಣ್ಣು ಹುಟ್ಟಿಸಿ, ಬೀಜ ಮಾಗಿಸಿ ತಾನು ಮರೆಯಾಗುವದೇ ತಮ್ಮ ದೈವವೆಂದೂ ಬೇಂದ್ರೆ ಬಗೆದರು. ಈ ರೂಪಕದಲ್ಲಿ ಹಣ್ಣಿನ ಉತ್ಪ್ರೇಕ್ಷೆ ಗೋಕಾಕರಿಗೆ ಸಂದಿತ್ತು. ಇದನ್ನು ಗೋಕಾಕರು ಅಲ್ಲಗಳೆದು ಬೇಂದ್ರೆಯವರ ಸಾರ್ಥಕ್ಯಕ್ಕೆ ಕೊಡಲಿ ಹಾಕುವದು ಶಕ್ಯವಿರಲಿಲ್ಲ. "ಕಾಯಿ ಹೌದು: ಅದೇ ಸೂರ್ಯನೇ ಹಣ್ಣು ಮಾಡಲಿ," ಎಂದು ಸಾರ್ಥಕವಾಗಿ ಸಮರ್ಪಕವಾಗಿ ಇವರಲ್ಲಿ ಅರ್ಥಸೂಚಿತವಾಗಿದೆ. ಆದರೆ ದರಿದ್ರ ಇಂಗ್ಲಿಷ ಭಾಷೆಯಲ್ಲಿ "ಕಾಯಿ" ಮತ್ತು "ಹಣ್ಣು" ಎರಡಕ್ಕೂ Fruit ಎಂಬ ಒಂದೇ ಶಬ್ದವಿದ್ದಮೂಲಕ ಅನುವಾದದಲ್ಲಿಯು ಸೊಗಸೆತ ಕಡಿಮೆಯಾಗಿದೆ.

'The Roses of youth' ಎಂಬ ಕವನದ ಮೂಲದ ಸೌಂದರ್ಯವನ್ನೂ ಅದರ ಅಮೋಘ ಅನುವಾದವನ್ನೂ ಈಗಾಗಲೇ ಉಲ್ಲೇಖಿಸಿದ್ದೇನೆ. ಈ ಕವನವು ಗೋಕಾಕರ

ಕಾವ್ಯಶಕ್ತಿಯ ಅಖಂಡಶಿಖರವಾಗಿ ಸಾಕ್ಷಿಯಾಗಿ ಅವರ ಸಮಗ್ರ ಅಂತರಾಳದ
ಯಥಾರ್ಥ ಅರಿವನ್ನು ಮಾಡಿಕೊಡುತ್ತದೆ. ಅದನ್ನು ಓದುಗರೇ ಓದಿ ಸವಿಯಬೇಕೆಂದು
ಪ್ರಾರ್ಥಿಸುತ್ತೇನೆ. ಭಾರತೀಯ ವೈವಾಹಿಕ ಜೀವನ ಹಾಗು ಪಾಶ್ಚಾತ್ಯರಿಂದ ಕಲಿತ
ಪ್ರಣಯದ ಕಲ್ಪನೆ, ಇವೆರಡನ್ನು ಸಮನ್ವಯಗೊಳಿಸಿ ಕಾವ್ಯಗೊಳಿಸಿದ ಇನ್ನೊಂದು ಉದಾ
ಹರಣೆ ಗೋಕಾಕರ ಕವನಗಳಲ್ಲಿಯೇ ದೊರಕಬೇಕೆ ಹೊರತು ಬೇರೆ Indo-Anglian
ರಲ್ಲಿ ಸಿಕ್ಕಲಾರದೆಂದು ನನ್ನ ಚಿಕ್ಕ ಅನುಭವದ ಮೇಲಿಂದ ಹೇಳುತ್ತೇನೆ. ಬಹಳಷ್ಟು
ಇಂಡೋ-ಆಂಗ್ಲಿಯನರು ಅತೀವ ರೋಮ್ಯಾಂಟಿಕ್ ರೀತಿಯಲ್ಲಾಗಲಿ, ಗೃಹಸ್ಥ ಜೀವನದ
ಶಾಂತಪರತೆಯ ಬಗ್ಗೆಯಾಗಲೀ ಬರೆದಿದ್ದಾರೆ. ಆದರೆ ಪ್ರಾಮಾಣಿಕ ಅನುಭವ
ತತ್ವಜ್ಞಾನಗಳನ್ನು ಸಮೀಕರಿಸಿದ ಉನ್ನತ ಉದಾಹರಣೆ ಈ ಉತ್ಕಟ ಕವನದಲ್ಲಿ ನನಗೆ
ಕಂಡಂತೆ ಇನ್ನಾವ ಕವನದಲ್ಲಿಯೂ ಕಂಡಿಲ್ಲ.

ಆದರೆ ಇದೇ ಜಾತಿಯ ಎರಡು ಕವನಗಳ ಉನ್ನತ ಸೋಲಿನ (Glorious defeat)
ಬಗ್ಗೆ ಬರೆಯಬೇಕು. ಏಕೆಂದರೆ ಅವು ಉದ್ಬೋಧಕವಾಗಿವೆ. ಅವುಗಳ ಸೋಲು
ಗೋಕಾಕರ ಕಾವ್ಯಶಕ್ತಿಯ ಕುಂದಿನ ಮೂಲಕ ಬಂದದ್ದಲ್ಲ; ಅಥವಾ ಭಾವದ ವಿದಿ
ತದ ಕಡಿಮೆತನ, ಅನುಭವವನ್ನು ಆತ್ಮಸ್ವತ್ತಾಗಿ ಮಾಡಿಕೊಳ್ಳದ ಮೂಲಕ, ಹೀಗೂ
ಹೇಳಲಾರೆವು. ಏಕೆಂದರೆ ಮೂಲ ಕನ್ನಡ ಕವನಗಳು ಅವರವೇ ಆಗಿದ್ದು ಕನ್ನಡದಲ್ಲಿ
ಅತೀವ ಯಶಸ್ವಿಯಾಗಿವೆ. Togetherness ಎಂಬ ಕವನದ ಮೂಲ ಕನ್ನಡದಲ್ಲಿ ಸತಿ
ಪತಿ ಭೃಂಗಗಳ ಸೊಗಸುಗಾರಿಕೆಯ ಹಾಸ್ಯ, ಪ್ರಣಯ, ಪ್ರತ್ಯುತ್ತರ (Repartee) ಗಳು
ಇಂಗ್ಲಿಷ ರೂಪದಲ್ಲಿ ಬಂದಿಲ್ಲ. ರಾಜಭೃಂಗವು ಸಾಗರಗಳನ್ನು ದಾಟಿ ತನ್ನ ಗುರಿಯ
ಬಗ್ಗೆ ನಿರಾಶನಾಗಿ ಮರಳಿ ರಾಣಿಯ ಕಡೆಗೆ ಬಂದಾಗ ನಡೆದ ಸೊಗಸುಗಾರಿಕೆಯ
ಚಾಟೂಕ್ತಿಗಳನ್ನು ಇಂಗ್ಲಿಷಿನಲ್ಲಿ ತರ್ಜುಮೆ ಮಾಡಿದಾಗ, ಚತುರೋಕ್ತಿಗಳು ನಿರಾಶೆಯ
ಭಾರವಾದ ನಿಟ್ಟುಸಿರುಗಳಾಗಿಬಿಡುತ್ತವೆ. ಅದರಂತೆಯೆ ಕನ್ನಡದಲ್ಲಿ ಬಹಳ ಪ್ರಸಿದ್ಧ
ವಾದ "ಇಲ್ಲೆ ಇರು, ಅಲ್ಲಿ ಹೋಗಿ ಮಲ್ಲಿಗೆಯನು ತರುವೆನು?" ಎಂಬ ಕವನದ
ಇಂಗ್ಲಿಷ ರೂಪ 'The song of Life.' ಮೂಲದ ಸಾಹಸಮಯ ಲಾಲಿತ್ಯವು
ಇಂಗ್ಲಿಷಿನಲ್ಲಿ ಅರ್ಥಗೌರವದಿಂದ ಭಾರವಾಗಿಬಿಡುತ್ತದೆ. 'ಸಾಧಿಸುತ್ತ ಜಯಿಸುವುದೆ
ಬಾಳುವುದರ ಸಾರವು' ಎಂಬ ಸಾಲು:

> ....Victory that crowns the flux eternal
> And is life's kernal.

ಆಗುತ್ತದೆ. ಆ ದೇಸಿಯ ಸೊಗಸು ಹೋಗಿ ಈ ಮಾರ್ಗದ ಭಾರವೆಲ್ಲಿಂದ ಬಂತು?

ತಮ್ಮ English In India ಎಂಬ ಮಹತ್ವದ ಗ್ರಂಥದಲ್ಲಿ ಗೋಕಾಕರು ಈ ಸಮಸ್ಯೆ
ಯನ್ನು ಕೂಲಂಕಷವಾಗಿ ವಿಚಾರಮಾಡಿದ್ದಾರೆ. ಅನೇಕ ಕಾರಣಗಳನ್ನು ಕೊಟ್ಟು

Indo-English ಲೇಖಕನ ಸಮಸ್ಯೆಗಳನ್ನು ವರ್ಣಿಸಿದ್ದಾರೆ. ನನಗೆ ಇನ್ನೊಂದು ಮಾತನ್ನು ಸೂಚಿಸಲು ಈ ಸಂದರ್ಭ ಸಹಾಯ ಮಾಡುತ್ತದೆ. ಇಂಗ್ಲಿಷಿನಲ್ಲಿ ಕನ್ನಡ ಅಥವಾ ಭಾರತೀಯ ರೀತಿಯ ರಸಿಕ ಪ್ರಣಯವಿಲ್ಲವಾದ್ದರಿಂದ ಈ ಸರಸ ಚಾಟೂಕ್ತಿಗಳನ್ನು ಸಕ್ಕರೆ ಮಾತುಗಳನ್ನು ಅನುವಾದಿಸಲು ಇಂಗ್ಲಿಷ ಭಾಷೆಯ ಪರಿಮಿತಿಗಳೇ ಕಾರಣವಾಗಿರಲಿಕ್ಕಿಲ್ಲವೇ? ಇಂಗ್ಲಿಷ ಭಾಷೆಗೆ ತನ್ನವೇ ಆದ ದೇಸಿ ಇತ್ತು. ಆದರೆ ಇಪ್ಪತ್ತನೆ ಶತಮಾನದ Mass communication ದಿವಸಗಳಲ್ಲಿ ಅದು ಸತ್ತೇ ಹೋಗಿದೆ. ಕನ್ನಡ ದಂಪತಿಗಳು ತಮ್ಮ ಹಗಲಿನ ಪರಿಮಿತ ಕಾಮವನ್ನು ಬಾಯಿಚಪಲವಾಗಿಸಿ ಚಾಟೂಕ್ತಿಗಳನ್ನು ಹುಟ್ಟಿಸಿಕೊಳ್ಳಬಲ್ಲರು. ರಸಿಕ ವ್ಯಾಜೋಕ್ತಿ ಹುಸಿನಿಂದೆಗಳಲ್ಲಿ ತಿರುಗಿಸಬಲ್ಲರು. ನಿಂದೆಯು ಅಭಾಜ್ಯ ದಾಂಪತ್ಯದ ಧೈರ್ಯಮಯ ತಳಹದಿಯ ಮೇಲೆ ನಿಂತ ಮೂಲಕ ಆಯಾ ಕಾಲದ ಕೋಪವೂ ಅದೇ ರಸಿಕತೆಯ ಅಂಗವಾಗಿ ಬದಲಾಗಬಲ್ಲದು. ಆದರೆ ಇಂಗ್ಲಿಷರ ಹುಂಬ ಪ್ರಣಯವು ಇಲ್ಲ ಖೊಟ್ಟಿ ಹೊಗಳಿಕೆಯಲ್ಲಾಗಲೀ ಹಿಗ್ಗಾಮುಗ್ಗಾ ಜಗಳಾಟದಲ್ಲಾಗಲೀ ವ್ಯಕ್ತವಾಗಬೇಕು. ಇಂಗ್ಲಿಷರು Reportee ಯೆಂಬ ಪ್ರತ್ಯುತ್ತರವನ್ನು ಸಭೆ—ಪಾರ್ಟಿಗಳಿಗಾಗಿ ಮೀಸಲಿಟ್ಟುಬಿಟ್ಟರುತ್ತಾರೆ. ಅವರಲ್ಲಿ ದಾಂಪತ್ಯದ ರಸಿಕಹಾಸ್ಯವು ಕಡಿಮೆಯೆಂದೇ ಹೇಳಬೇಕು. ಇಂಗ್ಲಿಷ ಭಾಷೆ—ಅನುಭವಗಳ ಈ ಪರಿಮಿತಿಗಳೂ ಅನುವಾದಗಳ ಯಶಸ್ಸಿಗೆ ಕುಂದಾಗಿರಲಿಕ್ಕಿಲ್ಲವೇ ?—ವಿಚಾರಮಾಡತಕ್ಕ ಮಾತಾಗಿದೆ. ನಮ್ಮ ನವೀನ ವಿಮರ್ಶಕರು ರಿಚರ್ಡ ಮುಂತಾದ ವಿಮರ್ಶಕರ ಪರಪ್ರತ್ಯಯನೇಮತ್ವದಿಂದ ಕೆಳಗಿನ ತತ್ವಗಳನ್ನು ದಿನಬೆಳಗಾದರೂ ಬಡಬಡಿಸುತ್ತಲೇ ಇರುತ್ತಾರೆ :

೧. ಕಾವ್ಯ ಹುಟ್ಟುವದು ಭಾಷೆಯಲ್ಲಿ. ಕಾವ್ಯಸಾಮಗ್ರಿಯಾದ ಭಾವ ಮಹತ್ವದಲ್ಲ.
೨. ಭಾಷೆಯ ಉಪಯೋಗವೇ ಕಾವ್ಯದ ಸಾರ್ಥಕ್ಯದ ಮೂಲ ಸತ್ಯ.
೩. ಎಲ್ಲ ಭಾಷೆಗಳೂ ಎಲ್ಲ ಭಾವಗಳನ್ನು ವ್ಯಕ್ತಗೊಳಿಸಬಲ್ಲವು.
೪. ಕಾರಣ ಎಲ್ಲ ದ್ವಿಭಾಷಿತ ಅಪಯಶಸ್ಸುಗಳೂ ಆಯಾ ಲೇಖಕನ ಕಲೆಯ ಅಪಯಶಸ್ಸು.
೫. ಅದೇನೇ ಇದ್ದರೂ, ಕಾವ್ಯ ಭಾಷೆಯಲ್ಲಿಯೇ ಮಾಡಬೇಕಾದ ವಿಷಯವಾದ್ದರಿಂದ ಭಾಷೆಯ ಮೇಲೆ ಸೂಕ್ಷ್ಮ ಪ್ರಭುತ್ವವಿದ್ದರೆ ಎಲ್ಲ ಆಗುತ್ತದೆ.
೬. ಮಾತೃಭಾಷೆಯ ಮೇಲೆ ಸೂಕ್ಷ್ಮ ಪ್ರಭುತ್ವ ಇರುವದು ಸ್ವಾಭಾವಿಕವಾದ್ದರಿಂದ ಮಾತೃಭಾಷೆ ಬಿಟ್ಟು ಬೇರೆ ಭಾಷೆಯಲ್ಲಿ ಕವಿ ಬರೆದದ್ದನ್ನು ತುಸು ಸಾಶಂಕವಾಗಿ ನೋಡಬೇಕು.
೭. ಅದೇ ಕಾರಣದಿಂದ ಅನುವಾದ ಮಾಡಲೇಬಾರದು. ಮಾಡಿದರೆ ನಮ್ಮಂತಹರ ಛಿದ್ರಾನ್ವೇಷಣಕ್ಕೆ ಗುರಿಯಾಗಬೇಕು.

ಇಂಥ ಬಾಯ್ಬಡಕ ವಿಚಾರಗಳಿಗೆ ಉತ್ತರಕೊಡಲು ಇದು ಸಂದರ್ಭವಲ್ಲ. ಸಮಸ್ಯೆ ಕೇವಲ ಭಾಷೆಯದೇ ಇರುವದಿಲ್ಲ, Cultural patterns of behaviour ಇವು ಕಾವ್ಯದ ಮೂಲಭಾಷೆ; ಶಬ್ದಸಂಗ್ರಹವಲ್ಲ. ಇದನ್ನೇ ಎಡ್ವರ್ಡ ಹಾಲ್ ಎಂಬ ಭಾಷಾ ಶಾಸ್ತ್ರಜ್ಞನು "The Secret Language" ಎಂದು ಕರೆದಿದ್ದಾನೆ. ಈ ಸಾಂಸ್ಕಾರಿಕ ಹೊಳಹುಗಳು ಸಮೀಕರಣವಾಗದೇ ಇದ್ದ ಸಂದರ್ಭದಲ್ಲಿ ಅನುವಾದಕ ಕವಿ ಭಾವದ ಧ್ವನಿತವನ್ನು ಬದಲಾಯಿಸಬೇಕಾಗಿ ಬರಬಹುದು. ಇಲ್ಲವೆ ಬೇರೆ ಭಾಷೆಗೆ ಹೊಂದಿಕೆ ಯಾಗುವಂತೆ ಭಾವವನ್ನು ಕತ್ತರಿಸಿ, ಇಲ್ಲವೆ ಬೆಳೆಸಿ ಬರೆಯಬೇಕಾಗಬಹುದು. ಇಲ್ಲವೇ ಆ ಭಾಷೆಗೆ ಹೊಂದಾಣಿಕೆಯಾಗುವ ಚಿಲ್ಲರೆ ಕವಿತೆಗಳನ್ನೇ ಆರಿಸುವ ಪುಕ್ಕತನವನ್ನು ಸ್ವೀಕರಿಸಬಹುದು. ಅಥವಾ ಧೈರ್ಯಮಾಡಿ, ಸೋಲನ್ನು ಎದುರಿಸಲೂ ಸಿದ್ಧವಾಗಿ, ಯಾವ ಕವನ ತನಗೆ ಮಹತ್ವದ್ದೆನಿಸುತ್ತವೆಯೋ ಅವನ್ನೇ ಅನುವಾದಿಸಬಹುದು. ಗೋಕಾಕರು ಈ ಎರಡು ಕವನಗಳಲ್ಲಿ ಕೊನೆಯ ಹಾದಿಯನ್ನು ಸ್ವೀಕರಿಸಿದ್ದಾರೆಂದು ನನ್ನ ಅಭಿಪ್ರಾಯ. ರಾಷ್ಟ್ರೀಯ ಕಾವ್ಯ ಹುಟ್ಟುವದು ಇಂಥ ಸಾಹಸಗಳ ಮೂಲಕವೇ.

ಹುಟ್ಟ್ಯಾಯನಾ ನಗೀಕ್ಯಾದಿಗೀ ಮುಡಿಸಿಕೊಂಡಾವಾ.
ಕಂಡ ಹೆಣ್ಣಿಲೇ ಪ್ರೀತಿವಿಳ್ಯಾ ಮಡಿಚಿಕೊಂಡಾವಾ.

ಈ ಸಾಲುಗಳನ್ನು ಅನುವಾದಿಸಲು ಪರಬ್ರಹ್ಮನೇ ಬರಬೇಕು. "ಇಲ್ಲೆ ಇರು, ಅಲ್ಲಿ ಹೋಗಿ ಮಲ್ಲಿಗೆಯನು ತರುವೆನು!" ಎಂಬ ಸಾಲಿನ ಮೃದುಲತೆ ಇಂಗ್ಲಿಷಿನಲ್ಲಿ ಹುಟ್ಟಿ ಸುವದು ಕಷ್ಟ.

ಇದಕ್ಕೆ ವಿರುದ್ಧ ಉದ್ಬೋಧಕ ಉದಾಹರಣೆಯೆಂದರೆ 'The Song of Evacuees' ಎಂಬ ಬಂಗಾಲ ಬರಗಾಲದ ಮೇಲೆ ಬರೆದ ಭೀಕರ ಚಿತ್ರಕವನ. ಇದರ ಮೂಲವನ್ನು ಓದಿದವರಿಗೆ ಇದರ ಅನುವಾದ ಅಸಾಧ್ಯವೆಂದೇ ಸತ್ಯದ್ದರ್ಶನಕ್ಕೆ ತೋರಬಹುದು.

ಎಲುವಿನಾ ಹಂದರು, ಎಲುವಿನಾ ಹಂದರು....
ತಣ್ಣೀರೀನ ಬಂದರು, ನೋಡೆ ನೀ ವಸುಂಧರಾ....

ಆದರೆ ಹೀಗೆ ತೋರುಗಾಣಿಕೆಗೆ ಅನನುವಾದ್ಯವೆನಿಸಬಹುದಾದ ಕವನವು ಇಂಗ್ಲಿಷ ತರ್ಜುಮೆಯಲ್ಲಿ ಯಶಸ್ವಿಯಾಗಿದೆ!

In a soulless sea of tears,
Near a skeletoned harbour of bones,
Pillared and arched with fears
And groans insted of stones—

ಸುಂದರವಾದ ನಿರ್ವಹಣೆ! ಈ ಪ್ರದೀರ್ಘವಾದ ಅನುವಾದದಲ್ಲಿ ಅಲ್ಲಲ್ಲಿ ದುರ್ಬಲ ಸಾಲು

ಗಳು ಇಲ್ಲವಿಲ್ಲ. ಆದರೆ, ಹೀಗೆ ಸುಂದರವಾಗಿ ಪ್ರಾರಂಭವಾದ ಗೀತವು ಅಷ್ಟೇ ಸುಂದರ ವಾಗಿ ಕೊನೆಗಾಣುತ್ತದೆ.

The tyrants and dictators
Who wade through blood to glory
The caverned meditators
With unused wisdom hoary,....
Ungrateful sons of earth—
On them the world's fate hangs.

ಇನ್ನು The Song of Life ಸಂಗ್ರಹದಲ್ಲಿ ಮೂಲತಃ ಇಂಗ್ಲಿಷಿನಲ್ಲಿ ಬರೆದ ಮೂರು ಕವನಗಳ ಬಗ್ಗೆ ಎರಡು ಮಾತು. The Mon-man ಎಂಬ ಸುದೀರ್ಘ ಕವನವು ಪ್ರತೀಕಮಯವೂ, ಸಂಕೀರ್ಣವೂ ಪ್ರಖರ-ಬುದ್ಧಿ ಭಾವನೆಗಳ ಸಾಂದ್ರ ಅಭಿವ್ಯಕ್ತಿಯೂ ಆದ ಯಶಸ್ವಿಕವನ. ಆಕ್ಸ್‌ಫ಼ೋರ್ಡಿನಲ್ಲಿ ಈ ಕವನಕ್ಕೆ ಮೇಲ್ಮಟ್ಟದ ಪ್ರಶಸ್ತಿ ದೊರಕಿತು. ಈ ಕವನದ ಮೇಲಿಂದ ಗೋಕಾಕರು ಇಂಗ್ಲಿಷಿನಲ್ಲಿಯೇ ಕಾವ್ಯ ರಚಿಸಿದ್ದರೆ ಎಷ್ಟು ಮುಂದೆ ಹೋಗುವ ಶಕ್ಯತಿಯಿತ್ತೆಂದೂ, ಇದೇ ಕಾರಣದಿಂದ ಕನ್ನಡಕ್ಕಾಗಿ ಮಾಡಿದ ಅವರ ಸ್ವಾರ್ಥತ್ಯಾಗದ ಘನತೆ ಎಂಥದೆಂಬುದೂ ತಿಳಿಯುತ್ತದೆ. ಚಂದ್ರನ ವಿಧವಿಧ ಸಂಕೇತಗಳ ಆಧಾರದಿಂದ ಕವಿಕಲ್ಪಕತೆ ಮತ್ತು ಸತ್ಯದರ್ಶನಗಳ ನಡುವಿನ ತಿಕ್ಕಾಟ ವನ್ನು ತೀರಿಸಲು ಮಾಡಿದ ಧೀರ ಪ್ರಯೋಗವಿದು. ಸಾಲುಗಳಲ್ಲಿ, ಶಬ್ದಶಬ್ದಗಳ ರಸಘನ ವಾಗಿ ಸೌಂದರ್ಯ ಉಕ್ಕಿ ಹರಿದ ಕವನವಿದು. ಶೆಲ್ಲಿಯ Epipsychidion, ಕೀಟ್ಸನ Endymionಕ್ಕೆ ಸಾಟಿಯಾಗಿ ನಿಲ್ಲತಕ್ಕ ಆಳ ಕವನವಿದು. ಇದರ ಆಳ ಅನ್ಯೋಕ್ತಿ-ಅಭಿವ್ಯಕ್ತಿ ಅರ್ಥವಿವರಣೆಯನ್ನು ಇಲ್ಲಿ ಮಾಡಲಾರೆ. ಆದರೆ ಕೇವಲ ಇಂಗ್ಲಿಷ ಅಭಿ ವ್ಯಕ್ತಿಯನ್ನೇ ಗಮನಿಸಿದರೂ ಗೋಕಾಕರು ಮನಸ್ಸು ಮಾಡಿದರೆ ಯಾಬಗೆಯ ಸಮರ್ಥ Blank Verse ಬರೆಯಬಹುದು ಎಂಬುದು ಮನವರಿಕೆಯಾಗುತ್ತದೆ. ಅವರ 'ಮಹಾ ಶ್ವೇತೆ'ಯಂಥ ಕನ್ನಡ ಸರಳಛಂದದ ನಾಟಕದ ಅನುವಾದದ ಬಗ್ಗೆ ಮೊದಲೇ ವ್ಯಕ್ತ ಗೊಳಿಸಿದ ಆಸೆಯನ್ನು ನವೀಕರಿಸುತ್ತೇನೆ: (ಚಂದ್ರಮಾನವ ನೆಲಕ್ಕಿಳಿದು ಕವಿಗೆ ಸತ್ಯ ವನ್ನು ವಿವರಿಸಲು ಬಂದಾಗಿನ ಸಾಲುಗಳಿವು) :

I saw the Moon-Man floating on a cloud
Last night. He came down in a haze of glory.
The cloud stopped on the summit where I stood
And looking on the valleys, dim with dreams
And slumbering in their loveliness, he came
His dark wings a waving, ...

ಆ ಸಾಲುಗಳ ಮಾಂತ್ರಿಕತೆ, ಮಾದಕತೆಗಳು, ಅವರ ಸರಳತೆಯ ಜೊತೆಗೇ ಪರಸ್ಪರ ಪೋಷಕವಾಗಿ ಬರುತ್ತವೆ. ಬ್ಲಾಂಕ ವ್ಹರ್ಸ (ಕನ್ನಡದಲ್ಲಿಯೇ ಆಗಲಿ, ಇಂಗ್ಲಿಷದಲ್ಲಿಯೇ ಆಗಲಿ,) ಬರೆದು ಅನುಭವವಿದ್ದವರಿಗೆ ಗೋಕಾಕರ ಕಲೆಯ ಅದ್ಭುತ ಶಿಲ್ಪದ ಅನುಭವವು ಇದರಲ್ಲಿಯ ಸೆಶ್ಯೂರಾ (ಶ್ವಾಸಕ್ಕಾಗಿ ಇರುವ ವಿರಾಮ)ಗಳ ವಿಕಿರಣದ ಮೇಲಿಂದಲೇ ಪ್ರತ್ಯಯವಾಗಬಲ್ಲದು !

Jaipur ಎಂಬುದು ಇನ್ನೊಂದು ಯಶಸ್ವಿಯಾದ ಕವನ. ಯಾವ ಕವಿಯೂ ಸತ್ಯವಿಲ್ಲದೆ ಸೌಂದರ್ಯವನ್ನು ಹುಟ್ಟಿಸಲಾರ. ಜೈಪುರ ನಗರ ನೋಡಿದವರು ಭಾರತದ ಇತಿಹಾಸದಲ್ಲಿ ರೋಮಾಂಚಕಾರಕ ಸನ್ನಿವೇಶವನ್ನು ನೆನೆಯದೆ ಇರಲಾರರು. ಆದರೆ ಜೈಪುರದ ರಾಜಸ್ಥಾನಿ ಸ್ತ್ರೀಯರ ಪಡದೆಯ ಹಿಂದೆ ನಿರ್ಬದ್ಧ ಜೀವನಕ್ಕೂ ಅವರು ಗೈದ ಸ್ವಾರ್ಥತ್ಯಾಗಕ್ಕೂ ನಡುವೆ ಇರುವ ಅಂತರವನ್ನು ಗಮನಿಸದೆ ಇದ್ದವನು ಅವರಿಗೆ ನೈಜ ಪ್ರಶಸ್ತಿಯನ್ನು ನೀಡಲಾರ. Jaipur ಕವನವು ಚಿತ್ರಿತವಾಗಿ ಬರುತ್ತದೆ. ದರಬಾರು, ಆನೆಗಳ ಸಾಲು, ಪಲ್ಲಕ್ಕಿ, ಸರೋವರಗಳು, ತೋಟಗಳು ಇವುಗಳ ಚಿತ್ರಕ ವರ್ಣನೆಯಿದೆ. ಆದರೆ, ಗೋಕಾಕರು ಈ ವಿದಾರಕ ನುಡಿಗಳನ್ನು ಬರೆದಾರೆಂದು ತರ್ಕ ಮಾಡುವದು ಅಸಾಧ್ಯ :

They lived like caged birds and heard
The war-din and through sky-holes, blurred,
They saw the sky and the flag unfurled—
Jaipur !

They did not see nor could they trace
The mad rush or the bood—red race
For power or for a woman's face—
Jaipur !

But they bore sons whose valour filled
The valleys with the foes they killed,
Whose, deeds a million hearts have thrilled—
Jaipur !

And also when it was their turn,
They lay down on a pyre to burn
And become ashes in an urn—
Jaipur !

ಚಿತ್ರಕವಾದ ಕವನ ಒಮ್ಮೆಲೇ ಭಾವನಾಶೀಲವಾಗುತ್ತದೆ ; ದುರಂತವಾಗುತ್ತದೆ.

ಮೊದಲನೆಯ ನುಡಿಯಲ್ಲಿ ಚಿತ್ರಕರ್ತೆಯೂ ಆ ರಕ್ಷಿತ ಜೀವನದ ದುಃಖದ ಚಿತ್ರಣಕ್ಕೆ ಪ್ರೇಷಕವಾಗುತ್ತದೆ. ಈ ಸಾಲುಗಳ ಯಥಾರ್ಥತೆಯೇ ಅವುಗಳ ದಾರುಣತೆಯ ಬೀಜ. ಇಂಗ್ಲಿಷ ಭಾಷೆಯಲ್ಲಿ ಇಷ್ಟು ಸುಸಹವಾಗಿದ್ದೂ ಇಷ್ಟು ಭಾವನಾಶೀಲತೆಯನ್ನು ಹುಟ್ಟಿಸುವದು ಬಹಳ ಅಪರೂಪವೆಂದೇ ಹೇಳಬೇಕು.

'ಬಾಳದೇಗುಲದಲ್ಲಿ' (In Life's Temple) ಕವನ ಸಂಕಲನದ ಬಗ್ಗೆ ಚರ್ಚಿಸುವಾಗ ದೈನಂದಿನ ಜೀವನ ಹೇಗೆ ಕಥಾನಕವಾಗಬಲ್ಲದೆಂಬುದನ್ನು ವಿವರಿಸಿದ್ದೆ. ಗೋಕಾಕರ ಈ ಹಿರಿಯ ಗುಣವು ಇನ್ನೊಂದು ಸ್ವತಂತ್ರ ಕವನದಲ್ಲಿ ವ್ಯಕ್ತವಾಗಿದೆ. ಇದು ಕದಾಚಿತ್ ಇಂಗ್ಲಂಡಿಗೆ ಹೋಗುವಾಗ ಮಿತ್ರರಿಗಾಗಿ ಬರೆದ ಬೀಳ್ಕೊಡುವ ಕವನವಾಗಿರಬಹುದು. "ಗೆಳೆಯರ ಗುಂಪಿನ" ಸ್ನೇಹಯೋಗದ ಗರಡಿಯಲ್ಲಿ ಸ್ನೇಹಕ್ಕೆ ಉತ್ಕಟತೆಯ ಮೆರುಗನ್ನು ಕೊಟ್ಟ ವಿನಾಯಕರು ಅಗಲಿಕೆಯನ್ನು ಒಂದು ಉದಾತ್ತ ಸಮಾರಂಭವಾಗಿ ಪ್ರತಿಜ್ಞಾಧಾರಣವಿಧಿಯಾಗಿ ಕಾಣುತ್ತಾರೆ:

Here by the sky-line
That unites the earth and the sky
And divides the sky and the sea—
Let me part from you, my friends !

ಜಲಾಶಯದ ಬಳಿ ಅಗಲಿಕೆಯಾಗುವ ಪ್ರಾಚೀನ ಭಾರತದ ಸಂಪ್ರದಾಯವರಿತವರಿಗೆ ಈ ಕವನದ ಅನುಭವ ಸುಕರವಾದೀತು. ಆದರೆ ಇಂಗ್ಲಿಷಿನಲ್ಲಿ ಬರೆದಾಗಲೂ ಭಾರತೀಯತ್ವವನ್ನು ಉಳಿಸಿಕೊಂಡು ಅದರ ಕಾವ್ಯರಸಾಯನವನ್ನು ಹುಟ್ಟಿಸುವದು ಎದೆಗಾರ ಸಮರ್ಥ ಕವಿಗೆ ಶಕ್ಯ ಎಂಬುದೇ ಇಲ್ಲಿ ನೋಡತಕ್ಕ ವಿಷಯವಾಗಿದೆ.

In life's Temple ಎಂಬ ಸಂಕಲನದ ಬಗ್ಗೆ ಕೆಲವು ಸಾಮಾನ್ಯ ತತ್ವಗಳನ್ನು ಈ ಮೊದಲೇ ಚರ್ಚಿಸಿಯಾಗಿದೆ. ಬಿಡಿಕವನಗಳನ್ನು ಆರಿಸಿ ಚರ್ಚಿಸುವ ಯತ್ನವನ್ನು ಸ್ಥಳಾಭಾವದಿಂದ ಬಿಡಲಾಗಿದೆ. ಈ ಎರಡನೆಯ ಸಂಕಲನದಲ್ಲಿ ವಿನಾಯಕರು ಬಾಳಿನ ವಿವಿಧ ವ್ಯಕ್ತಿಗಳನ್ನು ಒಂದೇ ದರ್ಶನದ ಅಂಗಗಳನ್ನಾಗಿ ವಿರಚಿಸಿ ನೋಡಲು ಹಂದರ ಹೂಡಿದ್ದಾರೆಂಬ ಮಾತನ್ನು ಇನ್ನೊಮ್ಮೆ ಸೂಚಿಸುತ್ತೇನೆ.

ಆಂಗ್ಲಭಾಷೆಯ ಇಂದು ಮುಂದು*

ಎಚ್ಚೆಸ್ಕೆ

ಭಾರತದಲ್ಲಿ ಇಂಗ್ಲಿಷಿಗೆ ಇಂದು ಯಾವ ಸ್ಥಾನವಿದೆ? ಮುಂದೆ ಯಾವ ಸ್ಥಾನವಿರಬೇಕು? ಇದು ಬಹು ದೊಡ್ಡ ಪ್ರಶ್ನೆ, ವಿವಾದಾಸ್ಪದವಾದ ಪ್ರಶ್ನೆ.

ಸುಮಾರು ಎರಡು ಶತಮಾನಗಳ ಕಾಲದಲ್ಲಿ ಭಾರತದಲ್ಲಿ ಬೇರು ಬಿಟ್ಟು ಬೆಳೆದಿರುವ ಈ ಭಾಷೆಯನ್ನು ಉಳಿಸಿಕೊಳ್ಳುವುದೂ ಕಷ್ಟ; ತಳ್ಳಿಹಾಕುವುದೂ ಕಷ್ಟ. ಇದರ ಆವಶ್ಯಕತೆಯರಿತು, ನಮ್ಮ ಆತ್ಮಗೌರವಕ್ಕೆ ಧಕ್ಕೆ ಬಾರದ ಹಾಗೆ, ಇದರ ವಿಷದ ಹಲ್ಲುಗಳನ್ನು ಕಳಚಿ, ಈ ಭಾಷೆಯನ್ನು ಬಳಸಿಕೊಳ್ಳುವುದು ಹೇಗೆಂಬುದು ಬಹಳ ಸೂಕ್ಷ್ಮವಾದ ವಿಚಾರ. ರಾಜಕೀಯವನ್ನು ದೂರದಲ್ಲಿಟ್ಟು ವೈಜ್ಞಾನಿಕವಾಗಿ ವಿವೇಚಿಸಬೇಕಾದ ವಿಷಯ.

'ದಿನ ದಿನವೂ ಪರಿವರ್ತನೆಗೊಳ್ಳುತ್ತಿರುವ ನಮ್ಮ ದೇಶದಲ್ಲಿ ಇಂಗ್ಲಿಷಿನ ಸ್ಥಾನವನ್ನು ಕುರಿತು ಬರೆಯುವುದು ಸುಲಭವಲ್ಲ'ವೆಂಬುದು ಗೋಕಾಕರ ಅಭಿಪ್ರಾಯ. 'ಬದಲಾಗುತ್ತಿರುವ ಭಾರತದಲ್ಲಿ ಇಂಗ್ಲಿಷ್ ಭಾಷೆಯ ಸ್ಥಾನವೂ ಕೂಡ ಪ್ರತಿದಿನವೂ ಬದಲಾಗುತ್ತಿರುವು'ದೆಂಬುದೂ ಗೋಕಾಕರಿಗೆ ಗೊತ್ತಿಲ್ಲದಿಲ್ಲ. 'ಭಾರತೀಯ ಆಚಾರವಿಚಾರಗಳ ಮಹಾ ಪ್ರವಾಹದಲ್ಲಿ ಇಂಗ್ಲಿಷೂ ಸಿಕ್ಕಿದೆಯಾದ್ದರಿಂದ' ಇದನ್ನು ಕುರಿತು ಚರ್ಚಿಸುವುದು ಕಷ್ಟ.

'ಈ ಪರಿವರ್ತನೆಯ ನಡುವಿನಲ್ಲೂ ಬೌದ್ಧಿಕ ನೆಲೆಯೊಂದನ್ನು ಹಿಡಿದು ನಿಂತು, ವಿಚಾರಕನ ನಿರ್ಲಿಪ್ತತೆಯಿಂದ ಇಂದಿನ ದೃಶ್ಯವನ್ನು ಅವಲೋಕಿಸಬೇಕು. ಈ ಬಗೆಯ ಅವಲೋಕನದಿಂದ ನಮ್ಮ ತಕ್ಷಣದ ಸಮಸ್ಯೆಗಳನ್ನು ಇನ್ನೂ ಚೆನ್ನಾಗಿ ಅರಿತುಕೊಳ್ಳಲು ಸಹಾಯವಾದೀತು; ಭವಿಷ್ಯದ ದೃಷ್ಟಿಯಿಂದಲೂ ಇದು ಬೋಧಪ್ರದವಾದೀತು.

ಈ ಬಗೆಯ ಅನಾಸಕ್ತಿಯೋಗದಿಂದ ಭಾರತದಲ್ಲಿ ಆಂಗ್ಲ ಭಾಷೆಯ ಇಂದು-ಮುಂದುಗಳನ್ನು ಗೊತ್ತು ಹಚ್ಚಲು ಯತ್ನಿಸಿರುವ ಗೋಕಾಕರು ಇಂಥ ಕೆಲಸಕ್ಕೆ ತಕ್ಕ ಸಾಮರ್ಥ್ಯವುಳ್ಳವರೆಂಬುದು ನಿರ್ವಿವಾದ. ಈ ವಿಷಯವನ್ನು ಕುರಿತು ಇವರು

* *English in India: Its Present and Futur e.*

ಇಂಗ್ಲಿಷಿನಲ್ಲಿ ಬರೆದಿರುವ ಪುಸ್ತಕದ ಪುಟಪುಟದಲ್ಲೂ ಈ ವೈಜ್ಞಾನಿಕ ದೃಷ್ಟಿ ಧಾರಾಳ ವಾಗಿ ಗೋಚರ. ಉದ್ದಾಮರಾದ ಲೇಖಕ ಬೋಧಕರೊಬ್ಬರ ಮೂರು ದಶಕಗಳಿಗೂ ಹೆಚ್ಚಿನ ಪಕ್ವವಾದ ಅನುಭವದ ಫಲವೇ ಈ ಪುಸ್ತಕ.

'ಒಂದಾನೊಂದು ಕಾಲದಲ್ಲಿ ಇಂಗ್ಲಿಷಿನಿಂದ ಭಾರತಕ್ಕೆ ಬಹಳ ಪ್ರಯೋಜನವಾಯಿತು. ಆಗಿನ ಕಾಲದಲ್ಲಿ ಭಾರತದ ಆಂಗ್ಲಭಾಷಾ ಅಧ್ಯಾಪಕನಾದವನು ನಾನಾಬಗೆಯ ಇತಿಮಿತಿಗಳಿಗೆ ಒಳಗಾಗಬೇಕಾಗಿತ್ತು. ಆಗಿನ ಕಾಲದ ಆಂಗ್ಲಾಧ್ಯಾಪಕನಿಗೆ ತನ್ನ ಸುತ್ತಲೂ ಜೀವನವೇ ಗೋಚರಿಸುತ್ತಿರಲಿಲ್ಲ. ಅವನ ದೃಷ್ಟಿಯಲ್ಲಿ ಅವನ ಸುತ್ತಮುತ್ತಲೂ ಬರಿಯ ಮರುಭೂಮಿ. ಮರುಳುಕಾಡಿನ ನಡುವಣ ಹಡಗಿನಂತೆ ಅವನು ಸಂಚರಿಸುತ್ತಿದ್ದ. ಆಕ್ಸ್‌ಫರ್ಡ್, ಕೇಂಬ್ರಿಜ್, ಲಂಡನ್ನುಗಳಂಥ ಪವಿತ್ರ ಕ್ಷೇತ್ರಗಳಿಂದ ತಂದು ತನ್ನೊಳಗೇ ಶೇಖರಿಸಿಟ್ಟುಕೊಂಡಿದ್ದ ತೀರ್ಥಪಾನದಿಂದ ಮಾತ್ರವೇ ಅವನ ದಾಹದ ಪರಿಹಾರ. ಆಂಗ್ಲಭಾಷೆಯ ಮಹಾಕೃತಿಗಳೇ ಅವನ ಅಳತೆಗೋಲು. ಭಾರತದ ನೆಲದಲ್ಲಿ ಆಂಗ್ಲ ಸಾಹಿತ್ಯವನ್ನು ನಟ್ಟು ಬೆಳಸಬೇಕು ; ಇಲ್ಲದಿದ್ದರೆ ಆಂಗ್ಲಸಾಹಿತ್ಯದ ಬೆಳವಣಿಗೆ ಸಾಧ್ಯವಾಗುವಂತೆ ಭಾರತದ ನೆಲವನ್ನೇ ಬದಲಾಯಿಸಬೇಕು. ಇಂಥ ಅಸಾಧ್ಯ ಕಾರ್ಯ ದಲ್ಲಿ ಅವನು ನಿರತನಾಗಿದ್ದ.'

ಆದರೆ ಆ ಕಾಲದಲ್ಲೂ ರಾಷ್ಟ್ರೀಯ ದೃಷ್ಟಿಯುಳ್ಳ ಆಂಗ್ಲಭಾಷಾಧ್ಯಾಪಕರು ಭಾರತ ದಲ್ಲಿದ್ದರು. ಅವರು ಭಾರತೀಯ ಭಾಷೆಗಳ ಶತ್ರುಗಳಾಗಿರುವ ಬದಲು ಆ ಭಾಷಾಸಾಹಿತ್ಯ ಗಳ ಪುನರುಜ್ಜೀವನ ಕಾರ್ಯದಲ್ಲಿ ನಿರತರಾಗಿದ್ದರು. ಅವು ಸಮೃದ್ಧವಾಗಿ ಬೆಳೆಯಲು ಆಂಗ್ಲ ಸಾಹಿತ್ಯದ ಮೂಲಕವಾಗಿ ನೆರವಾದರು. 'ಅವಳ ತೊಡಿಗೆ ಇವಳಿಗಿಟ್ಟು ಹಾಡ ಬಯಸಿದರು.'

ಆದರೆ ಆಂಗ್ಲಾಧ್ಯಾಪಕರ ಕಾರ್ಯಭಾರದ ಆ ಘಟ್ಟ ಇಂದು ಹೆಚ್ಚುಕಡಮೆ ಮುಗಿದಿದೆ. ಸೃಷ್ಟ್ಯಾತ್ಮಕ ಸಾಹಿತ್ಯಗಳನ್ನು ಸಾಕಷ್ಟು ಬೆಳೆಸಿಕೊಂಡಿರುವ ನಮ್ಮ ಭಾಷೆಗಳು ಇಂದು ಬೌದ್ಧಿಕ ಸಾಹಿತ್ಯವನ್ನು ಬೆಳಸಿಕೊಳ್ಳಬೇಕಾಗಿದೆ. ಇದನ್ನು ಬೆಳಸಿಕೊಳ್ಳದ ಭಾಷೆಗೆ ನಡು ಭದ್ರವಿರುವುದಿಲ್ಲ. ಆದ್ದರಿಂದ ಆಂಗ್ಲ ಭಾಷೆಯ ಅಧ್ಯಾಪಕರು ಇಂದು ಈ ಕೆಲಸ ದಲ್ಲಿ ನೆರವು ನೀಡಬೇಕಾಗಿದೆ. ವಿಜ್ಞಾನ, ವಿಶ್ವಕೋಶ, ನಿಘಂಟು ಮುಂತಾದವುಗಳ ರಚನೆ ಆಗಬೇಕಾಗಿದೆ. ಕೇವಲ ಭಾಷಾಂತರಗಳಿಂದಲೇ ಈ ಕಾರ್ಯ ಸಾಧ್ಯವಾಗುವುದಿಲ್ಲ. ವಿಜ್ಞಾನ ವಿಷಯಗಳನ್ನು ಕುರಿತ ಅನ್ಯಭಾಷಾ ಗ್ರಂಥಗಳನ್ನು ಓದಿ, ಜೀರ್ಣಿಸಿಕೊಂಡು, ಸ್ವತಂತ್ರವಾಗಿ ಆಲೋಚಿಸಿ, ಕೃತಿರಚನೆ ಮಾಡಬಲ್ಲ ಯೋಗ್ಯತೆಯನ್ನು ಇಂದು ನಮ್ಮವರು ಬೆಳಸಿಕೊಳ್ಳಬೇಕಾಗಿದೆ. ಇದು ಸಾಧ್ಯವಾಗಲು ಆಂಗ್ಲ ಭಾಷೆಯ ಅಧ್ಯಾಪ ಕನ ನೆರವು ಅತ್ಯವಶ್ಯ.

ಇಂಗ್ಲಿಷ್ ಅಧ್ಯಾಪಕನೇ ನೇರವಾಗಿ ಈ ಕೆಲಸ ಮಾಡುವುದು ಸಾಧ್ಯವಿಲ್ಲ, ನಿಜ.

ಏಕೆಂದರೆ ಅವನು ನಾನಾ ಶಾಸ್ತ್ರ ವಿಷಯಗಳನ್ನು ಅಭ್ಯಾಸ ಮಾಡಿರುವುದಿಲ್ಲ. ಆದರೆ ಈ ಬಗೆಯ ಕೆಲಸ ನಿರ್ವಹಿಸಲು ತಕ್ಕ ಭಾಷಾಯೋಗ್ಯತೆಯನ್ನು ಅವನು ನಮ್ಮ ವಿದ್ಯಾರ್ಥಿಗಳಿಗೆ ದೊರಕಿಸಿ ಕೊಡಬೇಕಾಗಿದೆ. ಇಂಗ್ಲಿಷು ಈ ದೃಷ್ಟಿಯಿಂದ ಭಾರತದಲ್ಲಿ ದ್ವಿತೀಯ ಭಾಷೆಯಾಗಿ ಸದ್ಯಕ್ಕಂತೂ ಉಳಿಯಬೇಕಾಗುತ್ತದೆ. ಈ ಉದ್ದೇಶದ ಸಾಧನೆಗಾಗಿ ಇಂಗ್ಲಿಷನ್ನು ನಮ್ಮ ವಿದ್ಯಾರ್ಥಿಗಳಿಗೆ ಯಾವ ಮಟ್ಟದಿಂದ ಎಷ್ಟರಮಟ್ಟಿಗೆ ಯಾವ ರೂಪದಲ್ಲಿ ಯಾವ ರೀತಿಯಾಗಿ ಬೋಧಿಸಬೇಕೆಂಬುದು ಈ ಪುಸ್ತಕದ ಮುಖ್ಯ ವಸ್ತು.

ಭಾರತದಲ್ಲಿ ಇಂಗ್ಲಿಷಿನ ಸ್ಥಾನವನ್ನು ಕುರಿತು ಬರೆಯುವಾಗ ನಮ್ಮ ದೇಶದ ಭಾಷಾ ಸೂತ್ರವನ್ನು ಕುರಿತು ಬರೆಯುವುದೂ ಅನಿವಾರ್ಯ. ಹಲವು ಭಾಷೆಗಳ ತವರಾದ ಭಾರತದಲ್ಲಿ ಇಡಿಯ ದೇಶಕ್ಕೆ ಅನ್ವಯವಾಗುವ ಅಧಿಕೃತ ಭಾಷೆ ಯಾವುದಿರಬೇಕು ? ಉಚ್ಚ ಶಿಕ್ಷಣದಲ್ಲಿ ಯಾವ ಭಾಷಾಮಾಧ್ಯಮವಿರಬೇಕು ?—ಎಂಬುದು ಬಹಳ ಕ್ಲಿಷ್ಟವಾದ ವಿಚಾರ. ಹಿಂದಿಯೇ ಅಖಿಲ ಭಾರತದ ಅಧಿಕೃತ ಭಾಷೆಯಾಗಿ ಮಾನ್ಯತೆ ಪಡೆಯಬೇಕಾದರೆ ಆ ಭಾಷೆಯನ್ನು ಸರಳಗೊಳಿಸಿ, ಅದು ಎಲ್ಲ ಪ್ರದೇಶ ಭಾಷೆಗಳಿಗೂ ಹತ್ತಿರವಾಗುವಂತೆ ಪರಿವರ್ತಿಸುವುದು ಅವಶ್ಯ. ಆದರೆ ಹಿಂದಿಯನ್ನೇ ಅಖಿಲ ಭಾರತದ ಉಚ್ಚ ಶಿಕ್ಷಣ ಮಾಧ್ಯಮವನ್ನಾಗಿ ಮಾಡುವುದು ಅಸಾಧ್ಯ. ಈ ಹಾದಿಯಲ್ಲಿ ಪ್ರದೇಶ ಭಾಷೆಗಳನ್ನು ಕಡೆಗಣಿಸುವುದು ಸರಿಯಾಗಲಾರದು. ವಿಶ್ವವಿದ್ಯಾನಿಲಯ ಶಿಕ್ಷಣದ ಎಲ್ಲ ಹಂತಗಳಲ್ಲೂ ಆಯಾ ಪ್ರದೇಶ ಭಾಷೆಗಳನ್ನೇ ಮಾಧ್ಯಮವಾಗಿ ಮಾಡುವುದರಿಂದ ವಿವಿಧ ಪ್ರದೇಶಗಳ ನಡುವಣ ಜ್ಞಾನವಿನಿಮಯದ ದೃಷ್ಟಿಯಿಂದ ತೊಂದರೆಯಾದೀತೆಂಬ ಅಳುಕೂ ಕೆಲವರಲ್ಲಿ ಉಂಟು. ಈ ವಿಚಾರದಲ್ಲಿ ಗೋಕಾಕರ ಖಚಿತವಾದ ಅಭಿಪ್ರಾಯವೇನೆಂಬುದು ಈ ಪುಸ್ತಕದಲ್ಲಿ ವ್ಯಕ್ತವಾಗುವುದಿಲ್ಲ. ಅವರು ಪುಸ್ತಕದ ಪ್ರಾರಂಭದಲ್ಲೇ ಹೇಳಿರುವ ಹಾಗೆ ದಿನದಿನವೂ ಬದಲಾಗುತ್ತಿರುವ ಪರಿಸ್ಥಿತಿಯಲ್ಲಿ ಎಲ್ಲ ಕಾಲಕ್ಕೂ ಅನ್ವಯವಾಗುವ ಸೂತ್ರಗಳನ್ನು ರೂಪಿಸುವುದು ಸಾಧ್ಯವಿಲ್ಲದಿರಬಹುದು. ಆದರೆ ವಿಶ್ವವಿದ್ಯಾನಿಲಯ ಶಿಕ್ಷಣದಲ್ಲಿ ಇರಬೇಕಾದ ಮಾಧ್ಯಮದ ಪ್ರಶ್ನೆಯನ್ನು ಸಂಶಯವಿಲ್ಲದ ರೀತಿಯಲ್ಲಿ ವ್ಯಕ್ತಪಡಿಸಲೇಬೇಕಾದ ಕಾಲ ಸನ್ನಿಹಿತವಾಗಿದೆಯೆಂಬುದಂತೂ ಖಂಡಿತ. ಹತ್ತು ವರ್ಷಗಳ ಹಿಂದೆ ಈ ಪುಸ್ತಕವನ್ನು ರಚಿಸಿದ ಕಾಲದಲ್ಲಿ ಈ ವಿಚಾರವಾಗಿ ಸಂಶಯ ವ್ಯಕ್ತಪಡಿಸಿದ ಗೋಕಾಕರೇ ಇಂದು ಈ ವಿಚಾರವಾಗಿ ಖಚಿತವಾದ ನಿಲವು ತಳೆದಿರುವರೆಂದು ಊಹಿಸಬಹುದಾಗಿದೆ.

ಸದ್ಯದ ಪರಿಸ್ಥಿತಿಯಲ್ಲಿ ಇಂಗ್ಲಿಷನ್ನು ದ್ವಿತೀಯ ಭಾಷೆಯಾಗಿ ಭಾರತದಲ್ಲಿ ಉಳಿಸಿಕೊಳ್ಳಬೇಕೆಂಬುದು ಗೋಕಾಕರ ಅಭಿಪ್ರಾಯವಾದುದರಿಂದ ಈ ಭಾಷೆಯನ್ನು ಹೇಗೆ ಬೋಧಿಸಬೇಕೆಂಬುದನ್ನೂ ಅವರು ಇಲ್ಲಿ ವಿವರಿಸಿದ್ದಾರೆ. ಇಂಗ್ಲಿಷು ಯಾವುದೋ ಒಂದು

ದೇಶಭಾಷೆಯೆಂದು ನಾವು ಇಂದು ಅದನ್ನು ಕಲಿಯಬೇಕಾದುದಿಲ್ಲ. ಅದು ಪ್ರಪಂಚ ಭಾಷೆ. ಮಾತನಾಡುವವರ ಸಂಖ್ಯೆಯ ದೃಷ್ಟಿಯಿಂದ ಚೀನೀಭಾಷೆಗೆ ಪ್ರಥಮ ಸ್ಥಾನ. ಇಂಗ್ಲಿಷಿಗೆ ಎರಡನೆಯ ಸ್ಥಾನ. ಆದರೂ ಚೀನೀ ಭಾಷೆಯನ್ನು ಪ್ರಪಂಚ ಭಾಷೆಯೆಂದು ಕರೆಯುವುದು ಸಾಧ್ಯವಿಲ್ಲ. ಏಕೆಂದರೆ ಆ ಭಾಷೆಯನ್ನಾಡುವವರು ಪ್ರಪಂಚದ ಒಂದೇ ಭಾಗದಲ್ಲಿ ವಾಸಿಸುತ್ತಾರೆ. ಆದರೆ ಇಂಗ್ಲಿಷ್ ಆಡುವವರು ಹರಡಿದ್ದಾರೆ. ಈ ವ್ಯಾಪಕ ಭಾಷೆಗೆ ಹೆಚ್ಚಿನ ಅಭಿವ್ಯಕ್ತಿಯ ಶಕ್ತಿಯಿದೆ. ಎಲ್ಲ ಜ್ಞಾನಗಳನ್ನೂ, ಎಲ್ಲ ಸಂಸ್ಕೃತಿಗಳನ್ನೂ, ಎಲ್ಲ ಅನುಭವ ಅನುಭಾವಗಳನ್ನೂ, ಎಲ್ಲ ವಿಚಾರಧಾರೆಗಳನ್ನೂ ಈ ಭಾಷೆಯಲ್ಲಿ ಅಭಿವ್ಯಕ್ತಿಗೊಳಿಸಬಹುದಾಗಿದೆ. ಅರವಿಂದರ 'ಸಾವಿತ್ರಿ'ಯಂಥ ಇಂದ್ರಿಯಾತೀತವಾದ ಮಹಾಕೃತಿಯೂ, ಭೌತಶಾಸ್ತ್ರದ ಅತ್ಯಾಧುನಿಕ ಪ್ರಮೇಯವೂ ಇಂಗ್ಲಿಷಿನಲ್ಲಿ ವ್ಯಕ್ತವಾಗುವುದು ಸಾಧ್ಯವಾಗಿದೆ. ಈ ದೃಷ್ಟಿಯಲ್ಲಿ ಇದು ವಿಶ್ವಭಾಷೆ. ಇದನ್ನು ಈ ದೃಷ್ಟಿಯಿಂದ ಭಾರತದಲ್ಲಿ ಕಲಿಸಬೇಕಾಗಿದೆ. ಈ ದೃಷ್ಟಿಯಲ್ಲಿ ಇದನ್ನು ಸುಲಭವಾಗಿ ಕಲಿಸುವ ವಿಧಾನಗಳನ್ನು ಅಳವಡಿಸಬೇಕಾಗಿದೆ. ಮುಂದೆ ಇಂಗ್ಲಿಷನ್ನು ಬಿಡುವುದಕ್ಕಾಗಿಯೂ ಇಂದು ಇಂಗ್ಲಿಷನ್ನು ಕಲಿಯಬೇಕಾಗಿದೆ. ಇಂಗ್ಲಿಷಿನಲ್ಲಿ ಆಗಿಹೋದ ಯಾವುದೋ ಕಾಲದ ಮಹಾ ಸಾಹಿತ್ಯ ಕೃತಿಗಳನ್ನು ಇಂದಿನ ಕಾಲದ ವಿದ್ಯಾರ್ಥಿಗಳಿಗೆ ಬೋಧಿಸಿ ಪ್ರಯೋಜನವಿಲ್ಲ. ಅದರಿಂದ ಈ ಭಾಷೆಯ ಪಾತ್ರದಲ್ಲಿ ಹರಿಯುವ ಈ ಯುಗದ ಜ್ಞಾನಪ್ರವಾಹವನ್ನು ಅರಿಯುವುದು ಅಸಾಧ್ಯವಾಗುತ್ತದೆ. ಆಗ ಈ ಭಾಷೆ ಉಪಯುಕ್ತವಾಗುವ ಬದಲು ಅರ್ಥವಿಲ್ಲದ ಹೊರೆಯಾಗುತ್ತದೆ. ಹಲವು ವರ್ಷಗಳ ಅಭ್ಯಾಸದ ಅನಂತರವೂ ಈ ಭಾಷೆ ನಮಗೆ ದಕ್ಕದೆ ಹೋಗುತ್ತಿರುವುದಕ್ಕೆ ಇದೇ ಕಾರಣ. ಈ ವಿಧಾನವನ್ನು ತೊರೆಯಬೇಕು. ಈ ಶತಮಾನದ ಆಂಗ್ಲ ಗದ್ಯವನ್ನು ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಕೊಡಬೇಕು. ಆಡುಭಾಷೆಯ ನಾಡಿಯ ಮಿಡಿತವನ್ನು ತೋರಿಸಿಕೊಡಬೇಕು. ಅದರ ಉಚ್ಚಾರಕ್ರಮವನ್ನು ಅಭ್ಯಾಸಮಾಡಿಸಬೇಕು. ಈ ಉದ್ದೇಶದಿಂದ ಗೋಕಾಕರು ವಿಶ್ವದ ನಾನಾ ದೇಶಗಳಲ್ಲಿ ನಡೆದಿರುವ ಪ್ರಯೋಗಗಳ ಹಿನ್ನೆಲೆಯಲ್ಲಿ ಭಾರತದಲ್ಲಿ ಅನುಸರಿಸಬಹುದಾದ ವಿಧಾನಗಳನ್ನು ನಿರೂಪಿಸಿದ್ದಾರೆ. ಇಂಗ್ಲಿಷನ್ನು ನಮ್ಮ ವಿದ್ಯಾರ್ಥಿಗಳಿಗೆ ಯಾವ ವಯಸ್ಸಿನಿಂದ ಕಲಿಸಬೇಕೆಂಬ ವಿಚಾರವಾಗಿಯೂ ಇಲ್ಲಿ ವಿವೇಚನೆ ನಡಸಿದ್ದಾರೆ.

ಸಾಹಿತ್ಯಕೃತಿಗಳ ಮೂಲಕವಾಗಿ ಕಲಿಸುವ ನಮ್ಮ ಅಧ್ಯಾಪಕರ ಹಳೆಯ ವಿಧಾನಗಳನ್ನು ಗೋಕಾಕರು ಇಲ್ಲಿ ಅಲ್ಲಗಳೆದಿದ್ದಾರಾದರೂ ಅವರು ಆಂಗ್ಲ ಸಾಹಿತ್ಯದ ಹಿರಿಮೆಯನ್ನು ಅಲ್ಲಗಳೆದಿಲ್ಲ. ಆಂಗ್ಲ ಸಾಹಿತ್ಯವನ್ನೇ ಮುಖ್ಯವಿಷಯವಾಗಿ ಅಭ್ಯಾಸ ಮಾಡಬಯಸುವ ವಿದ್ಯಾರ್ಥಿಗಳಿಗೆ ಅದನ್ನು ಯಾವ ರೀತಿಯಲ್ಲಿ ಬೋಧಿಸಬೇಕೆಂಬುದನ್ನೂ ಒಂದು ಅಧ್ಯಾಯದಲ್ಲಿ ಅವರು ವಿವರಿಸಿದ್ದಾರೆ. ಬ್ರಿಟಿಷ್ ಪ್ರಜೆಯಲ್ಲದ ವಿದ್ಯಾರ್ಥಿ

ಈ ಭಾಷೆಯ ಅಂತರ್ದೃಷ್ಟಿಯನ್ನರಿಯುವುದು ಅಷ್ಟೇನೂ ಸುಲಭವಲ್ಲ, ನಿಜ. ಆದರ ಅವನು ಈ ಸಾಹಿತ್ಯದಲ್ಲಿ ನಡೆದಿರುವ ಬಗೆಬಗೆಯ ಪ್ರಯೋಗಗಳನ್ನೂ, ವಿಕಾಸ ಗೊಂಡಿರುವ ನಾನಾ ಪ್ರಕಾರಗಳನ್ನೂ ಅರಿಯಬಹುದು. ಅಲ್ಲಿ ಅಪ್ರಯೋಜಕವೆಂದು ಕೈ ಬಿಟ್ಟ ಪ್ರಯೋಗಗಳನ್ನು ನಮ್ಮ ಭಾಷೆಯಲ್ಲೂ ಬಿಡಬಹುದು. ಅಲ್ಲಿನ ಅನುಭವಗಳ ದೃಷ್ಟಿಯಿಂದ ಇಲ್ಲಿ ಮುನ್ನಡೆಯಬಹುದು. ಆ ದೇಶದಲ್ಲಿನ ಸಾಮಾಜಿಕ ಪರಿವರ್ತನೆಯ ಸ್ವರೂಪವನ್ನರಿಯಬಹುದು. ಪರಮಾಣು ಯುಗವನ್ನೂ, ಅಂತರಿಕ್ಷಯಾನ ಯುಗವನ್ನೂ ಪ್ರವೇಶಿಸುತ್ತಿರುವ ಪಾಶ್ಚಾತ್ಯ ಕೈಗಾರಿಕೆಯ ಸಮಾಜದಲ್ಲಿ ಕಂಡುಬಂದಿರುವ ಒತ್ತಡ ಗಳನ್ನೂ ಸಮಸ್ಯೆಗಳನ್ನೂ ತಿಳಿದುಕೊಳ್ಳಬಹುದು. ಇವೆಲ್ಲವೂ ಇಂಗ್ಲಿಷ್ ಸಾಹಿತ್ಯ ಕೃತಿ ಗಳಲ್ಲಿ ಹೇಗೆ ಅಭಿವ್ಯಕ್ತಗೊಂಡಿವೆಯೆಂಬುದನ್ನು ಅಭ್ಯಾಸಮಾಡುವುದು ಭಾರತದಲ್ಲಿರುವ ಆಂಗ್ಲಸಾಹಿತ್ಯ ವಿದ್ಯಾರ್ಥಿಗೆ ತುಂಬಾ ಉಪಯುಕ್ತವಾದದ್ದು.

ಭಾರತದಲ್ಲಿ ಇಂಗ್ಲಿಷಿನ ಸ್ಥಾನವನ್ನು ಕುರಿತ ಸಮಸ್ಯೆಯ ಎಲ್ಲ ಮುಖಗಳನ್ನೂ ಇಲ್ಲಿ ಪರಿಶೀಲಿಸಿರುವ ಗೋಕಾಕರು ಭಾರತೀಯರು ಸೃಷ್ಟಿಸುತ್ತಿರುವ ಇಂಗ್ಲಿಷ್ ಸಾಹಿತ್ಯದಮೇಲೂ ಹೊಸ ಬೆಳಕು ಚೆಲ್ಲಿದ್ದಾರೆ; ಇಂದು ಅನೇಕ ಭಾರತೀಯರು ಇಂಗ್ಲಿಷಿನಲ್ಲಿ ಸಾಹಿತ್ಯ ಸೃಷ್ಟಿಸುತ್ತಿದ್ದಾರೆ; ಇಂಗ್ಲಿಷಿನಲ್ಲಿ ಸ್ವತಂತ್ರ ಕೃತಿ ರಚನೆ ಮಾಡು ತ್ತಿದ್ದಾರೆ. ಇವರು ಆಂಗ್ಲಭಾಷೆಯ ಮೇಲೆ ತಕ್ಕಮಟ್ಟಿನ ಪ್ರಭುತ್ವ ಹೊಂದಿರುವವರು. ಇವರೇ ಅಲ್ಲದೆ, ಭಾರತೀಯ ಭಾಷಾ ಸಾಹಿತ್ಯಗಳನ್ನು ಇಂಗ್ಲಿಷಿಗೆ ಭಾಷಾಂತರಿಸುವ ಕಾರ್ಯದಲ್ಲಿ ನಿರತರಾದವರೂ ಇದ್ದಾರೆ. ಇದು ಇಂದು ಹೆಚ್ಚಾಗಿ ಆಗಬೇಕಾದ ಕೆಲಸ. ಭಾರತೀಯ ಜ್ಞಾನದ ಒಳಗು ಹೊರಗುಗಳನ್ನು ಪ್ರಪಂಚದ ಇತರ ಭಾಗಗಳ ಜನರಿಗೆ ಪರಿಚಯ ಮಾಡಿಕೊಡುವುದು ಅವಶ್ಯವಾಗಿದೆ. ಈ ಭಾಷಾಂತರ ಕಾರ್ಯದಲ್ಲಿ ನಿರತ ರಾದವರಿಗೂ ಇಂಗ್ಲಿಷಿನ ಮೇಲೆ ತಕ್ಕಮಟ್ಟಿನ ಪ್ರಭುತ್ವವಿರುವುದು ಅವಶ್ಯ. ಇಂಥ ವಿಷಯವನ್ನೆಲ್ಲ ವಾಸ್ತವಿಕ ದೃಷ್ಟಿಯಿಂದ ಗೋಕಾಕರು ವಿವೇಚಿಸಿದ್ದಾರೆ.

ಆಂಗ್ಲಕನ್ನಡವೆರಡರಲ್ಲೂ ಸಮರಸವಾಗಿ ನಡೆದುಕೊಂಡು, ಸಮುದ್ರದಾಚೆಯಿಂದ ಸಮೃದ್ಧ ಕಲಶವನ್ನು ಕನ್ನಡಕ್ಕೆ ತಂದಿರುವ ಗೋಕಾಕರು ಭಾರತದಲ್ಲಿ ಇಂಗ್ಲಿಷಿನ ಸ್ಥಾನವೇನಿರಬೇಕೆಂಬ ವಿವಾದಾತ್ಮಕವಾದ ಪ್ರಚಲಿತ ಸಮಸ್ಯೆಯೊಂದನ್ನು ನಿರ್ವಿಕಾರ ದೃಷ್ಟಿಯಿಂದ ಇಲ್ಲಿ ವಿಶ್ಲೇಷಿಸಿದ್ದಾರೆ. ಇಂಗ್ಲಿಷಿಗೂ ಭಾರತೀಯ ಭಾಷೆಗಳಿಗೂ ನಡುವೆ ಕೊಡು-ಕೊಳ್ಳುವ ಸಂಬಂಧ ಇನ್ನು ಮುಂದೆಯೂ ಬೆಳೆದುಬರಬೇಕೆಂದುದು ಗೋಕಾಕರ ಅಭಿಪ್ರಾಯ. ಭಾರತದಲ್ಲಿ ಇಂಗ್ಲಿಷಿನ ಸ್ಥಾನವೇನೆಂಬುದರ ವಿಚಾರವಾಗಿ ಗೋಕಾಕರು ವ್ಯಕ್ತಪಡಿಸಿರುವ ಎಲ್ಲ ಅಭಿಪ್ರಾಯಗಳನ್ನೂ ಎಲ್ಲರೂ ಎಲ್ಲ ಕಾಲದಲ್ಲೂ ಮಾನ್ಯಮಾಡದಿರಬಹುದು. ಸುಮಾರು ಹತ್ತು ವರ್ಷಗಳ ಹಿಂದೆ ಗೋಕಾಕರು ಹೈದರಾ ಬಾದಿನ ಕೇಂದ್ರೀಯ ಇಂಗ್ಲಿಷ್ ಸಂಸ್ಥೆಯ ನಿರ್ದೇಶಕರಾಗಿದ್ದಾಗ ತಳೆದಿದ್ದ ಅಭಿಪ್ರಾಯ

ಗಳಲ್ಲಿ ಕೆಲವನ್ನು ಅವರೇ ಈಗ ಬದಲಾಯಿಸಿಕೊಂಡಿರಬಹುದು. ಆದರೆ ಗೋಕಾಕರ ವಿದ್ವತ್ತೂ ಅನುಭವವೂ ಕಾವ್ಯಗುಣವೂ ಹಿತಮಿತವಾಗಿ ಬೆರೆತು ಬಂದಿರುವ ಈ ಪುಸ್ತಕದಲ್ಲಿ ಗೋಕಾಕರ ಉದಾರ ದೃಷ್ಟಿಯನ್ನು ಕಾಣಬಹುದಾಗಿದೆ.

ಭಾಷೆಯ ಕಾವ್ಯಾತ್ಮಕ ಸ್ವರೂಪ*

ಹಾ. ಮಾ. ನಾಯಕ

೧

'ಬಾಗಿಲು' ಎಂಬುದು ನಮ್ಮ ಭಾಷೆಯ ಸಾಮಾನ್ಯವಾದ ಒಂದು ಪದ. ಕನ್ನಡ
ಬಲ್ಲವರಿಗೆಲ್ಲ ಪರಿಚಿತವಾಗಿದೆ. ಅದಕ್ಕೆ ಈಗ ವಿಶೇಷವಾದ ಅರ್ಥವೇನೂ ಇಲ್ಲ. ಆದ
ಆ ಪದ ಮೂಲತಃ 'ಮನೆಯ ಬಾಯಿ.' ಬಾಗಿಲು ಮನೆಯ ಬಾಯಿ ಎನ್ನುವುದು ಎಷ್ಟ
ಸೊಗಸಾದ ಕಲ್ಪನೆ. ಹಾಗೆಯೇ ಇಂಗ್ಲಿಷಿನ daisy ಎನ್ನುವ ಪದ ಯೂರೋಪಿನ
ಒಂದು ಪುಟ್ಟ ಹೂವಿನ ಹೆಸರು. ಬೆಳಗಾಗುತ್ತಲೆ ಅರಳಿ ನಿಲ್ಲುವ ಅದರ ಹೆಸರಿನ ಮೂಲ
day's eye—'ದಿನದ ಕಣ್ಣು.' ಎಂಥ ಕಾವ್ಯಮಯವಾದ ಹೆಸರು. ಭಾಷೆಯ ಇತಿಹಾಸ
ಬೆನ್ನು ಹತ್ತಿ ಹೋದಾಗ ನಮಗೆ ಅದರ ಈ ಕಾವ್ಯಾತ್ಮಕ ಸೌಂದರ್ಯದ ಅರಿವಾಗುತ್ತದೆ
ಇಲ್ಲಿ ಪರಿಚಯಿಸಲು ತೆಗೆದುಕೊಂಡಿರುವ ಪ್ರೊ. ಗೋಕಾಕರ ಪುಸ್ತಕ 'The Poeti
Approach to Language' ಎನ್ನುವುದು ಇಂಗ್ಲಿಷ್ ಭಾಷೆಯ ಇತಿಹಾಸವನ್ನ
ಆಧಾರವಾಗಿಟ್ಟುಕೊಂಡು "ಭಾಷೆ ಮಾಸಿದ ರೂಪಕಗಳ ಮಾಲೆ" ಎಂಬ ಪ್ರಸಿದ್ಧವಾದ
ಹೇಳಿಕೆಯನ್ನು ಸಮರ್ಥಿಸುವ ಒಂದು ಪ್ರಯತ್ನ.

ಈ ಪುಸ್ತಕ ಪ್ರಕಟವಾದದ್ದು ೧೯೫೨ರಲ್ಲಾದರೂ ಅದು ಸಿದ್ಧವಾದದ್ದು ಅದಕ್ಕ
ಒಂದು ದಶಕದ ಹಿಂದೆ. ಮುಂಬೈ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ, ೧೯೪೨ರಲ್ಲಿ
ವಿಲ್ಸನ್ ಫಿಲಲಾಜಿಕಲ್ ಉಪನ್ಯಾಸ ಮಾಲೆಯಲ್ಲಿ ಗೋಕಾಕರು ಕೊಟ್ಟ ಮೂರ
ಭಾಷಣಗಳು ಈ ಪುಸ್ತಕಕ್ಕೆ ಆಧಾರ. ಅವರು ಕೊಟ್ಟ ಭಾಷಣದ ವಿಷಯ: 'Th
Poetic Approach to Language and the Linguistic Approach t
Poetry'—With special reference to the history of English. ಪುಸ್ತ
ರೂಪದಲ್ಲಿ ಬಂದಿರುವ ಸಾಮಗ್ರಿ ಭಾಷಣ ವಿಷಯದ ಮೊದಲ ಭಾಗ ಮಾತ್ರ
The Linguistic Approach to poetry ಎಂಬ ಇನ್ನೊಂದು ಸಂಪುಟವನ್ನ
ಪ್ರಕಟಿಸಲಿರುವುದಾಗಿ ಗೋಕಾಕರು ಹೇಳಿಕೊಂಡಿದ್ದರು.

ತಮ್ಮ ಭಾಷಣದ ಉದ್ದೇಶವನ್ನು ಕುರಿತು ಗೋಕಾಕರು ಮುನ್ನುಡಿಯಲ್ಲಿ ಒಂದ
ಮಾತು ಹೀಗೆ ಹೇಳಿದ್ದಾರೆ:

---

* *The Poetic Approach to Language*

"These lectures were delivered with a view to bringing linguistic study into close relation with the study of literature than obtains at present in our universities." (ಪು. v).

ಭಾಷಾವಿಜ್ಞಾನದ ದೃಷ್ಟಿ ಸಾಹಿತ್ಯದ ಅಭ್ಯಾಸಿಗಳಿಗೆ ಒಂದು ಉಜ್ವಲ ನೆರವೆಂಬುದನ್ನು ಅವರು ಅಲ್ಲಿಯೇ ಸೂಚಿಸಿದ್ದಾರೆ. ಗೋಕಾಕರು ಈ ಮಾತುಗಳನ್ನಾಡಿ ದಶಕಗಳು ಕಳೆದವು. ಈ ನಿಟ್ಟಿನಲ್ಲಿ ಈಚಿನ ವರ್ಷಗಳ ಭಾಷಾವಿಜ್ಞಾನದ ಪ್ರಗತಿ ಬೆರಗುಗೊಳಿಸುವಂಥದಾಗಿದೆ. ಆದರೂ ನಮ್ಮ ವಿಶ್ವವಿದ್ಯಾನಿಲಯಗಳ ಅನೇಕ ಭಾಷಾವಿಭಾಗಗಳಲ್ಲಿ ಆಗಬೇಕಾಗಿರುವ ಜಾಗ್ರತಿ ಆಗಿಲ್ಲ. ಸಾಹಿತ್ಯ ಮತ್ತು ಭಾಷೆಗಳನ್ನು ಅನ್ವಿತ ದೃಷ್ಟಿಯಿಂದ ನೋಡುವುದಕ್ಕೆ ಎಷ್ಟೋ ಜನ ಪ್ರಾಧ್ಯಾಪಕರು ಸಿದ್ಧರಾಗಿಲ್ಲ. ಕೆಲವು ಸಂದರ್ಭಗಳಲ್ಲಿ ಇವುಗಳನ್ನು ಉದ್ದೇಶಪೂರ್ವಕವಾಗಿಯೇ ದೂರ ದೂರವಾಗಿ ಇರಿಸಲಾಗುತ್ತಿದೆ. ಸಾಹಿತ್ಯಕೃತಿ ಭಾಷೆಯಲ್ಲಿ ಸಿದ್ಧವಾದ ಕಲಾಕೃತಿ ಎಂಬುದನ್ನು ಗಮನಕ್ಕೇ ತೆಗೆದುಕೊಳ್ಳುವುದಿಲ್ಲ. ಭಾಷೆ-ಸಾಹಿತ್ಯಗಳ ವಿಷಯವಾಗಿ ಗೋಕಾಕರ ಅನ್ವಿತ ದೃಷ್ಟಿ ಅನೇಕ ಸಂದರ್ಭಗಳಲ್ಲಿ ವ್ಯಕ್ತವಾಗಿದೆ. ನಮ್ಮ ದೇಶದಲ್ಲಿ ಇಂಗ್ಲಿಷ್ ಭಾಷೆಯನ್ನು ಬೋಧಿಸುವ ವ್ಯವಸ್ಥೆ ಹೇಗಿರಬೇಕೆಂಬುದನ್ನು ವಿಚಾರಿಸುವುದರಿಂದ ಹಿಡಿದು ಒಂದು ಸಾಹಿತ್ಯ ಕೃತಿಯ ವಿಮರ್ಶೆಯ ವರೆಗೆ ಈ ಸಮನ್ವಯ ವಿಚಾರಧಾರೆ ಹರಡಿದೆ. 'The Poetic Approach to Language' ಈ ದೃಷ್ಟಿಯ ಒಂದು ಫಲ.

ಭಾಷಾವಿಜ್ಞಾನ ಮತ್ತು ಸಾಹಿತ್ಯ ಹಾಗೂ ಸಾಹಿತ್ಯಿಕ ಚರಿತ್ರೆ ಇವುಗಳ ನಡುವೆ ಗಡಿಸೀಮೆಯ ನಂಟು. ಸಾಹಿತ್ಯದ ಇತಿಹಾಸ ಭಾಷಾವಿಜ್ಞಾನದ ನೆರವಿಲ್ಲದೆ ಅಪೂರ್ಣವಾಗುತ್ತದೆ ಎಂಬುದು ಒಂದು ಅಭಿಪ್ರಾಯ; ಭಾಷೆಯ ಸೌಂದರ್ಯ ಮುಖದತ್ತ ಗಮನ ಹಾಯಿಸದಿರುವುದು ಭಾಷಾವಿಜ್ಞಾನದ ಒಂದು ಕೊರತೆ ಎನ್ನುವುದು ಮತ್ತೊಂದು ಅಭಿಪ್ರಾಯ. ಒಂದು ಸ್ತರದಲ್ಲಿ ಇವು ಒಂದಕ್ಕೊಂದು ಪೂರಕ. ಇದಕ್ಕೆ ಕಾರಣ ಎರಡರ ಮೂಲದ್ರವ್ಯವೂ ಭಾಷೆ. ಭಾಷೆಯನ್ನು ಕುರಿತಂತೆ ಕವಿಯ ವಿಚಾರಗಳು ವೈಜ್ಞಾನಿಕ ಚೌಕಟ್ಟಿಗೆ ಸಿಕ್ಕದೆ ಹೋಗಬಹುದು. ಆದರೆ ಈ ವಿಚಾರಗಳು ಭಾಷಾವಿಜ್ಞಾನಿಯ ವಿಚಾರಗಳಿಗೆ ಧಕ್ಕೆಯೊದಗದಂತೆ ಭಾಷೆಯ ಸ್ವರೂಪಕ್ಕೆ ಒಂದು ಹೊಸ ದನಿಯನ್ನೂ, ಬಣ್ಣವನ್ನೂ ನೀಡುತ್ತವೆ. ಸಹಜವಾಗಿ ಭಾಷೆಯು ಅನೇಕ ಕಾವ್ಯಾತ್ಮಕ ಅಂಶಗಳನ್ನು ಗರ್ಭೀಕರಿಸಿಕೊಂಡಿರುತ್ತದೆ. ನಾವು ಅದರ ಕಾವ್ಯಾತ್ಮಕ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದಾಗ ಭಾಷೆಯೇ ಕಾವ್ಯವಾಗಿರುವುದನ್ನು ನೋಡಬಹುದು ಎಂಬುದು ಈ ಗ್ರಂಥರಚನೆಯ ಮೂಲದೃಷ್ಟಿ. ಅದು ಭಾಷೆಯ ಬೆಳವಣಿಗೆಯಲ್ಲಿ ಕಾವ್ಯಾತ್ಮಕ ಚಿತ್ರದ ಕೊಡುಗೆಯೇನೆಂಬುದನ್ನು ವಿವರಿಸುತ್ತದೆ. ಲೇಖಕರ ಮಾತಿನಲ್ಲಿ ಹೇಳುವುದಾದರೆ ಈ ದೃಷ್ಟಿ—

"....serve to demonstrate the value of linguistic study for students of literature. It may also bring home to the authorities of some of our universities the desirability of making our 'Honours' students of English literature learn a little more of the history of the language which they do know and little less of the comparative philology of the languges they do not know." (ಪು. xii).

೨

ಈ ಗ್ರಂಥವನ್ನು ಮೂರು ಭಾಗಗಳನ್ನಾಗಿ ವಿಂಗಡಿಸಲಾಗಿದೆ. ಮೊದಲನೆಯ ಭಾಗ, ಭಾಷೆಯ ಕಾವ್ಯ (the poetry of language); ಎರಡನೆಯದು, ಭಾಷೆಗಳ ಬಗೆ ಮತ್ತು ಅವುಗಳ ಕಾವ್ಯ (the kinds of language and their poetry); ಕೊನೆಯದು, ಭಾಷೆಯ ಕಾವ್ಯವನ್ನು ಚಿತ್ರಿಸುವ ಕಾವ್ಯಭಾಷೆ (the language of poetry as illustrative of the poetry of language) ಪ್ರತಿಯೊಂದು ಭಾಗದಲ್ಲಿಯೂ ಬೇರೆಬೇರೆ ಅಧ್ಯಾಯಗಳು ಒಟ್ಟು ಹತ್ತೊಂಬತ್ತು ಇವೆ. ಕೊನೆಯಲ್ಲಿ ಒಂದು ಅನುಬಂಧ ಅಧ್ಯಾಯವಿದ್ದು ಅದರಲ್ಲಿ ವೋಸ್ಲರ್ ಎಂಬ ವಿದ್ವಾಂಸನ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ.

ಇಂಗ್ಲಿಷ್ ಭಾಷೆಯ ಇತಿಹಾಸವನ್ನು ಆಧರಿಸಿ ಗ್ರಂಥವನ್ನು ರಚಿಸಿರುವುದರಿಂದ, ಆ ಭಾಷೆಯ ಬೆಳವಣಿಗೆಯ ಹಲವು ಅಂಶಗಳು ಇಲ್ಲಿ ಸಹಜವಾಗಿಯೆ ಪ್ರಧಾನವಾಗಿವೆ. ಅನೇಕ ಇಂಗ್ಲಿಷ್ ಪದಗಳ ಚೂಲ ಬಾಲಗಳನ್ನು ಕೂಲಂಕಷವಾಗಿ ಪರೀಕ್ಷಿಸಲಾಗಿದೆ. ಹೀಗೆ ಮಾಡುವಾಗ ಆ ಪದಗಳ ಜೀವನಚರಿತ್ರೆಯನ್ನು ನಿರೂಪಿಸದೆ ಗತ್ಯಂತರವಿಲ್ಲ. ಪ್ರತಿಯೊಂದು ಪದವೂ ತನ್ನದೇ ಆದ ಇತಿಹಾಸವನ್ನು ಹೊಂದಿರುತ್ತದೆ. ಹುಟ್ಟು ಸಾವುಗಳ ನಡುವೆ ಅದಕ್ಕೊಂದು ಬದುಕಿರುತ್ತದೆ. ಆ ಬದುಕಿನ ಆದ್ಯಂತವೂ ಬಗೆ ಬಗೆಯ ಘರ್ಷಣೆಗಳಿರುತ್ತವೆ. ಅರ್ಥದ ಬಡತನ ಸಿರಿತನಗಳ ಉಯ್ಯಾಲೆಯಲ್ಲಿ ಅದು ಆಡುತ್ತಿರುತ್ತದೆ. ನಾಣ್ಯತೆಯನ್ನುಳಿಸಿಕೊಳ್ಳಲು, ಮೌಲ್ಯವನ್ನು ಬೆಳೆಸಿಕೊಳ್ಳಲು ಅವುಗಳ ಹೋರಾಟ ನಡೆವೇ ಇರುತ್ತದೆ. ಜನಾಂಗದ ಬದುಕೂ, ಭಾಷೆಯ ಬದುಕೂ ಬೆಸೆದುಕೊಂಡಿರುವುದರಿಂದ ಜನಾಂಗದ ಬದುಕಿನ ಏರಿಳಿತಗಳೆಲ್ಲ ಭಾಷೆಯ ಬದುಕಿನಲ್ಲಿ ಸ್ಪಂದಿಸುತ್ತವೆ.

ಪದಗಳು ತಮ್ಮ ಅರ್ಥವನ್ನು ಬದಲಾಯಿಸುವಾಗ, ಹೊಸ ಪದಗಳ ಸೃಷ್ಟಿಯಾಗುವಾಗ ಗೀತಗುಣ ಯಾವ ರೀತಿಯಲ್ಲಿ ಕೆಲಸ ಮಾಡುತ್ತದೆ; ಚಿತ್ತವೃತ್ತಿ, ಅಂತರ್ಬೋಧೆ, ಊಹನೆಗಳು ಹೇಗೆ ಕೂಡಿಕೊಳ್ಳುತ್ತವೆ ಎಂಬ ವಿಚಾರಗಳನ್ನು ಮೊದಲನೆಯ ಭಾಗದಲ್ಲಿ ಪ್ರಸ್ತಾಪಿಸಲಾಗಿದೆ. ಭಾಷೆಯ ಕಾವ್ಯಗುಣದ ಬಹುಪಾಲು ನಾದಾರ್ಥಗಳಿಗಿರುವ

ನಿಕಟ ಸಂಬಂಧವನ್ನು ಅವಲಂಬಿಸಿರುತ್ತದೆ. ಅನುಕರಣ, ಪ್ರಾಸ, ಒಳಪ್ರಾಸವೊದಲಾದ ಅಂಶಗಳಿಂದ ಭಾಷೆಯ ಗೇಯಗುಣ ವೃದ್ಧಿಸುತ್ತದೆ. ಪದಗಳು ಬಹು ಬಳಕೆಯ ಫಲವಾಗಿ ತಮ್ಮ ನಿಜವಾದ ಅರ್ಥಸಂಪತ್ತಿಯಿಂದ ವಂಚಿತವಾಗುತ್ತವೆ. ಅವುಗಳ ರಾಗಭಾವಗಳು ಸಡಿಲಗೊಳ್ಳುತ್ತವೆ. ಹಾಗಾದಾಗ ಕ್ರಿಯಾ ವಿಶೇಷಣಗಳೊ, ಗುಣವಾಚಕಗಳೋ ಪದಗಳಿಗೆ ಊರೆಯಾಗಿ ನಿಲ್ಲುತ್ತವೆ. ಅಷ್ಟಾದರೂ ಪದದ ಮೂಲಾರ್ಥ ಮೊದಲ ತೀವ್ರತೆಯಲ್ಲಿಯೇ ಪ್ರಕಟವಾದೀತೆಂದು ಹೇಳಲು ಬರುವುದಿಲ್ಲ. ಭಾಷೆಯಲ್ಲಿ ಕಾವ್ಯಶೇಷ ಕಾಣುವುದು ಕಲ್ಪನೆಯ ಬಲದಿಂದ: ಪ್ರತಿಭೆಯ ಫಲದಿಂದ. ಅತಿ ಸಾಮಾನ್ಯವಾದ ಇಂದಿನ ಎಷ್ಟೋ ಪದಗಳು ಕೂಡ ಮೂಲತಃ ವಿಶೇಷ ಅರ್ಥವನ್ನು ತುಂಬಿಕೊಂಡಿದ್ದವು.

ಎರಡನೆಯ ಭಾಗದಲ್ಲಿ ಭಾಷೆಯ ವಿವಿಧ ಬಗೆಗಳನ್ನು ವಿವೇಚಿಸಲಾಗಿದೆ. ಪ್ರಾಕ್ತನ ಭಾಷೆ, ಧಾರ್ಮಿಕ ವಿಧಿಗಳ ಭಾಷೆ, ಮಕ್ಕಳ ಭಾಷೆ, ಮಿಶ್ರಭಾಷೆ, ಸಾಂಸ್ಕೃತಿಕ ಸ್ವೀಕರಣಗಳ ಭಾಷೆ, ಸ್ಥಳಾಂತರಗೊಂಡ ಭಾಷೆ, ಉಪಭಾಷೆ, ಗ್ರಾಮ್ಯ ಭಾಷೆ ಮತ್ತು ಶಿಷ್ಟಭಾಷೆ ಎಂಬಿವೇ ಇಲ್ಲಿ ವರ್ಣಿತವಾಗಿರುವ ಬಗೆಗಳು.

ಭಾಷೆ ಹುಟ್ಟಿದ್ದು ಹೇಗೆ ಅದರ ಬೆಳವಣಿಗೆಯ ಮೊದಲ ಘಟ್ಟಗಳ ಸ್ವರೂಪ ಏನು ಎನ್ನುವುದು ಒಂದು ಕುತೂಹಲಕಾರಿಯಾದ ಸಮಸ್ಯೆಯಾಗಿದೆ. ಆದಿಮಾನವನ ಮಾತುಗಳನ್ನು ಅರಿಯಲು ನಡೆಸಿರುವ ಪ್ರಯತ್ನಗಳೆಲ್ಲ ವಿಫಲಗೊಂಡಿವೆ. ಭಾಷೆಯು ಆರಂಭದಲ್ಲಿ ನಾದಾಂಶಯುಕ್ತವಾಗಿ ಉದ್ಬುದ್ಧನೆಯ ಪದಗಳಿಂದ ಕೂಡಿ ಭಾವಭರಿತವಾಗಿದ್ದಿರಬೇಕೆಂಬುದು ಒಂದು ತೀರ್ಮಾನ. ಇದರ ಸತ್ಯಾಸತ್ಯತೆಗಳು ಏನೇ ಇರಲಿ ಈ ಸ್ವರೂಪದಲ್ಲಿ ಸಮೃದ್ಧವಾಗಿ ಕಾವ್ಯಾಂಶಗಳನ್ನು ನಿರೀಕ್ಷಿಸಬಹುದು. ಧಾರ್ಮಿಕ ವಿಧಿಗಳನ್ನು ಸಂಬಂಧಿಸಿದಂತೆ ಭಾಷೆ ಮಂತ್ರವಾಗುತ್ತದೆ. ಅದಕ್ಕೆ ಒಂದು ಆಧ್ಯಾತ್ಮಿಕ ಸ್ವರೂಪ ಬರುತ್ತದೆ. ಒಂದು ತಪ್ಪು ಉಚ್ಚಾರಣೆ ಕೂಡ ಪಾಪವಾಗಿ, ಶಾಪವಾಗಿ ಪರಿಣಮಿಸುತ್ತದೆ. ಮಕ್ಕಳು ಭಾಷೆಯನ್ನು ಕಲಿಯುವಾಗ ಸಾದೃಶ್ಯಮೂಲವಾಗಿ ಎಷ್ಟೋ ಹೊಸರೂಪಗಳನ್ನು ಸೃಷ್ಟಿಸುತ್ತವೆ. ಭಾಷೆಯನ್ನು ಆಟವಾಗಿ ಬಳಸುವುದೂ ಅವಕ್ಕೆ ಹೊಸದಲ್ಲ. ಈ ಆಟದಲ್ಲಿ ಹಲವೊಮ್ಮೆ ರಹಸ್ಯಗಳೂ ಇರುವುದುಂಟು. ಎರಡು ಭಿನ್ನ ಭಾಷೆಗಳ ಜನ ಸೇರಿ ವ್ಯವಹಾರ ನಡೆಸಬೇಕಾಗಿ ಬಂದಾಗ ಒಬ್ಬರ ಭಾಷೆಯನ್ನು ಇನ್ನೊಬ್ಬರು ಕಲಿಯಬೇಕಾಗುತ್ತದೆ ಇಲ್ಲವೆ ಎರಡೂ ಮಿಶ್ರಗೊಂಡು ಮೂರನೆಯ ಭಾಷೆಯೊಂದು ಸಿದ್ಧವಾಗುತ್ತದೆ. ಪಿಡ್ಗಿನ್, ಬೀಚ್‌ಲಮಾರ್— ಇಂಥ ಭಾಷೆಗಳು ಹೀಗೆ ಕಸಿಯಾದ ಭಾಷೆಗಳು. ಈ ಭಾಷೆಗಳಲ್ಲಿ ಪ್ರತಿಭೆಯ ತಪ್ಪು ಬಳಕೆಯಿರಬಹುದು. ಆದರೆ ಅವು ಸ್ವಾರಸ್ಯವನ್ನೊದಗಿಸುತ್ತವೆ. ಒಂದು ಭಾಷೆ ಅನೇಕ ಕಾರಣಗಳಿಂದ ಇನ್ನೊಂದು ಭಾಷೆಯನ್ನಾಡುವ ಜನರ ಬಳಕೆಯಲ್ಲಿ ಬರಬಹುದು. ಅದರ ಫಲವಾಗಿ ಭಾಷೆಗೆ ಹೊಸತೇಜಸ್ಸು ಸೇರುತ್ತದೆ. ಮಾಯ, ಕರ್ಮ, ರಸ ಮುಂತಾದ ಪದಗಳು ಇಂಗ್ಲಿಷಿಗೆ ಹೋಗುವುದರಿಂದ ಹೊಸ

ದಿಗಂತಗಳೇ ತೆರೆಯುತ್ತನೆ, ಆ ಭಾಷೆಯಲ್ಲಿ. ಇಂಗ್ಲಿಷ್ ಲೋಕವ್ಯಾಪಕವಾದ ಭಾಷೆ ಯಾದುದರಿಂದ ಅದರ ವೈವಿಧ್ಯ ವಿಪುಲವಾಗಿದೆ. ಅಮೆರಿಕಾ, ಆಸ್ಟ್ರೇಲಿಯಗಳಲ್ಲಿ ಅದು ಒಂದು ತೆರನಾದರೆ ಭಾರತದಲ್ಲಿ ಮತ್ತೊಂದು ತೆರ. ಇದು ಇಂಗ್ಲಿಷಿನ ಸಂಪತ್ತನ್ನು ಸಮೃದ್ಧಗೊಳಿಸುತ್ತದೆ. ಆ ಭಾಷೆ ಸಶಕ್ತಗೊಂಡಿರಲು ಈ ಮುಕ್ತ ಸ್ವಾಗತ ಪದ್ಧತಿ ಹಾಗೂ ವ್ಯಾಪಕತೆಗಳೇ ಕಾರಣ. ಅಮೆರಿಕೆಯಿಂದ ಬಂದು ಇಂಗ್ಲಿಷ್ ಕೋಶದಲ್ಲಿ ಸೇರಿ ಕೊಂಡಿರುವ ಕೆಲವು ಪದಗಳನ್ನು ಕುರಿತು ಹೇಳುವಾಗ “ಇವು ಇಲ್ಲದೆ ನಾವು ಇಷ್ಟು ದಿನ ನಮ್ಮ ಭಾಷೆಯನ್ನು ಹೇಗೆ ನಿರ್ವಹಿಸಿದೆವು ?” ಎಂದು ಒಬ್ಬ ವಿದ್ವಾಂಸ ಆಶ್ಚರ್ಯ ಪಡು ತ್ತಾನೆ. ಉಪಭಾಷೆಗಳಂತೂ ಭಾಷೆಯ ಅತಿ ಸಹಜವಾದ ವೈವಿಧ್ಯವನ್ನು ಸೂಚಿಸುತ್ತವೆ. ಗ್ರಂಥಸ್ಥವಾದ ಶಿಷ್ಟಭಾಷೆಗಳಲ್ಲಿ ಕಾಣದ ಹಲವು ವಿಶೇಷಗಳನ್ನು ಉಪಭಾಷೆಗಳು ಕಾಯ್ದುಕೊಂಡಿರುತ್ತವೆ. ಗ್ರಾಮ್ಯ ಬಳಕೆ ಈ ನಿಟ್ಟಿನಲ್ಲಿ ಹೆಚ್ಚಿನ ಸ್ವಾರಸ್ಯವನ್ನೊದಗಿಸು ತ್ತದೆ. ಸಾಹಿತ್ಯಿಕವಾದ ಭಾಷೆ ಆಡುನುಡಿಗಿಂತ ಯಾವಾಗಲೂ ಭಿನ್ನ ; ಅವು ಬೇರೆ ಬೇರೆ ಶಿಷ್ಟರೂಪಗಳನ್ನು ಕಾಯ್ದುಕೊಂಡಿರುತ್ತವೆ.

—ಮೇಲಿನ ಕೆಲವು ಅಂಶಗಳು ಭಾಷೆಯ ಬೆಳವಣಿಗೆ-ಬದಲಾವಣೆಗಳ ಸ್ವರೂಪ ದರ್ಶನದ ಹೊರರೇಖೆಗಳು. ಗೋಕಾಕರ ಪುಸ್ತಕದಲ್ಲಿ ಇಲ್ಲಿನ ಪ್ರತಿಯೊಂದು ಅಂಶವೂ ಇಂಗ್ಲಿಷ್ ಭಾಷೆ ಸಾಹಿತ್ಯ ಸಂಸ್ಕೃತಿಗಳ ಚರಿತ್ರೆಯ ಹಿನ್ನೆಲೆಯಲ್ಲಿ ಸಾಕಷ್ಟು ವಿವರವಾಗಿ ರೂಪುಗೊಂಡಿದೆ. ಹಾಗೆ ರೂಪುಗೊಳ್ಳುವಾಗ ಅದು ಮೂಲ ಉದ್ದೇಶದಂತೆ, ಕಾವ್ಯಾತ್ಮಕ ಸ್ವರೂಪವನ್ನು ಸ್ಪಷ್ಟಪಡಿಸಲು ಮರೆಯುವುದಿಲ್ಲ. ನೂರಾರು ಉದಾಹರಣೆಗಳಿಂದ, ಭಾಷೆಯನ್ನು ಬಳಸುವ ಜನ ಅದರ ಕಾವ್ಯ ಗುಣವನ್ನು ವೃದ್ಧಿಸುವಲ್ಲಿ ಅರಿತೊ ಅರಿಯದೆಯೋ ತಮ್ಮ ಕಾಣಿಕೆಯನ್ನು ಹೆಜ್ಜೆ ಹೆಜ್ಜೆಗೆ ಹೇಗೆ ಸಲ್ಲಿಸುತ್ತಿರುತ್ತಾರೆಂಬುದನ್ನು ವಿಶದಪಡಿಸಲಾಗಿದೆ.

ಮೂರನೆಯ ಭಾಗದ ಆರು ಅಧ್ಯಾಯಗಳಲ್ಲಿನ ಮುಖ್ಯ ವಿಷಯ ಕಾವ್ಯ ಭಾಷೆ. ಈ ಭಾಗದಲ್ಲಿ ಲೇಖಕರ ಸಂಶೋಧನ ದೃಷ್ಟಿಯ ಹರವನ್ನು ಮಿಕ್ಕ ಭಾಗಗಳಿಗಿಂತ ಮಿಗಿಲಾಗಿ ನೋಡಬಹುದು. “ಭಾಷೆಯು ಕಾವ್ಯ ಅತ್ಯುತ್ತಮವಾಗಿ ಮೈದೋರುವುದು ಕಾವ ದಲ್ಲಿಯೇ” ಎಂದು ಈ ಭಾಗದ ಮೊದಲ ವಾಕ್ಯದಲ್ಲಿ ಹೇಳಲಾಗಿದೆ. ಕಾವ್ಯ ಭಾಷೆಯನ್ನು ಬಳಸುತ್ತದೆ. ಆದರೂ ಅದು ಸಾಮಾನ್ಯಭಾಷೆಯಿಂದ ಪಡೆಯಲಾಗದ ವಿಶಿಷ್ಟ ಪರಿಣಾಮ ವನ್ನುಂಟುಮಾಡುತ್ತದೆ. ಕಾವ್ಯದ ಭಾಷೆ ಬೇರೆ ರೀತಿಯಲ್ಲಿ ಕ್ರಮಗೊಂಡಿರುತ್ತದೆ ಎಂಬುದು ಇದರರ್ಥ. ಒಂದು ರೀತಿಯಲ್ಲಿ ಕಾವ್ಯ ಅಹಲ್ಯೋದ್ಧರಣದ ಹಾಗೆ. ಯಾವುದೋ ಪದ ಎಲ್ಲಿಯೋ ಇರುತ್ತದೆ. ಕವಿಯ ಪ್ರತಿಭಾಸ್ಪರ್ಶದಿಂದ ಅದು ಅರ್ಥಲೋಕಗಳನ್ನೇ ನಿರ್ಮಿಸಿಬಿಡುತ್ತದೆ. ಹೊಸ ಶಕ್ತಿ ಸೌಂದರ್ಯಗಳನ್ನು ಪಡೆದ ಈ ಕಾವ್ಯಭಾಷೆ ಭಾಷೆಯ ವೈಭವವನ್ನೇ ಹೆಚ್ಚಿಸುತ್ತದೆ.

ಆಂಕಿತನಾಮಗಳು ಪಾರಿಭಾಷಿಕ ಪದಗಳು ತಮ್ಮಲ್ಲಿ ಯಾವ ಬಗೆಯ ಸೊಗಸನ್ನು ಅಡಗಿಸಿಟ್ಟುಕೊಂಡಿವೆ ಎಂಬುದು ಇಲ್ಲಿನ ಒಂದು ಅಧ್ಯಾಯದ ವಿಷಯ. ಪ್ರಾಕ್ತನ ರೂಪಗಳ ಸೌಂದರ್ಯ ಸಾತತ್ಯ ಇನ್ನೊಂದು ಅಧ್ಯಾಯದಲ್ಲಿ ಚರ್ಚಿತವಾಗಿದೆ, ಮುಂದಿನ ಮೂರು ಅಧ್ಯಾಯಗಳಲ್ಲಿ. ಅನೇಕ ಪದಗಳ ಇತಿಹಾಸವನ್ನು ಸಾಹಿತ್ಯಿಕ ಆಧಾರದ ಮೇಲೆ ಚರ್ಚಿಸಲಾಗಿದ್ದು ಇಂಗ್ಲಿಷ್ ಭಾಷೆಗೆ ಕವಿಗಳ ಶ್ರೀಮಂತ ಕೊಡುಗೆಯ ವೈಭವವನ್ನು ನಿರೂಪಿಸಲಾಗಿದೆ. 'ಸಾರಭೂತವಾದ ಪದಗಳು' ಎಂಬ ಅಧ್ಯಾಯದಲ್ಲಿ ನಾಲ್ಕು ಪದಗಳನ್ನು ಪ್ರಧಾನವಾಗಿ ವಿವೇಚಿಸಿದ್ದಾರೆ. ಸಾರಭೂತವಾದ ಪದಗಳು ಯಾವುವು ಎಂಬುದನ್ನು ಗೋಕಾಕರು ವಿವರಿಸಿದ್ದಾರೆ:

> "Perhaps the best part of the vocabulary of poetic language consists of words which sum up the significance of the poems in which they occur in their entirety, and sometimes even of the personality of poets and their epochs. They seem to be quintessential words—the poems are but an expansion of the idea, the emotion and the image which they convey." (ಪು. 177)

ಷೇಕ್ಸ್‌ಪಿಯರ್, ಮಿಲ್ಟನ್, ಕೀಟ್ಸ್ ಮೊದಲಾದ ಕವಿಗಳು ಪದಗಳ ಅರ್ಥಭಂಡಾರವನ್ನು ವಿಸ್ತರಿಸುವ ಉದಾಹರಣೆಗಳಾಗಿ ಈ ಸಂದರ್ಭದಲ್ಲಿ ಎತ್ತಿಕೊಂಡ ಪದಗಳೆಂದರೆ: Conscience, Duty, Melancholy, Indolence ಕಾಲದಿಂದಕಾಲಕ್ಕೆ ಕವಿಯಿಂದ ಕವಿಗೆ ಪದದ ಅರ್ಥ ಬೆಳವಣಿಗೆಯನ್ನು ಈ ಪದಗಳ ಚರಿತ್ರೆಯಿಂದ ಅರಿತುಕೊಳ್ಳಬಹುದು. Surely spirit ನಿಂದ Lazy frost ಮೂಲಕವಾಗಿ Wakeful anguish of the Soul ಆಗುವ Melancholy ಪದದ ಅರ್ಥ ಅನ್ವರ್ಥವಾಗಿದೆ. ಹೀಗೆಯೇ ಪ್ರತಿಯೊಂದು ಪದದ ಬದುಕೂ ಒಂದು ರಂಜಕ ಕಥೆ; ಸಾಹಸ ಯಾತ್ರೆ.

೩

'The Poetic Approach to Language'—ಗೋಕಾಕರ ಭಾಷಾ ಸಾಹಿತ್ಯಗಳ ತಿಳಿವಳಿಕೆಯ ವಿಸ್ತಾರವನ್ನೂ ಆಳವನ್ನೂ, ನಿರೂಪಣೆಯ ಸರಳತೆಯನ್ನೂ ಯಥೇಷ್ಟವಾಗಿ ತೋರುತ್ತದೆ. ಇದು ಮಾಲೆಗಾರನ ಕೆಲಸ. ವಾಸ್ತವವಾಗಿ ಇಲ್ಲಿ ಅವರ ಸ್ವಂತಿಕೆ ಎನ್ನುವುದು ಇಲ್ಲಿನ ಸಂಗತಿಗಳನ್ನೆಲ್ಲ ಈ ರೀತಿಯಾಗಿ ಅಳವಡಿಸಿರುವುದೇ ಆಗಿದೆ. ಇಲ್ಲಿನ ವಿಚಾರಧಾರೆ ಮುಖ್ಯವಾಗಿ ಮ್ಯಾಕ್ಸ್‌ಮುಲ್ಲರ್, ಯೆಸ್‌ಪರ್‌ಸನ್, ವೋಸ್ಲರ್ ಮೊದಲಾದವರದು. ಸರಳ ಸಾಮಾನ್ಯವಾದ ಭಾಷಾವಿಜ್ಞಾನದ ಸಂಗತಿಗಳನ್ನು ಅನ್ವಯಿಸುವುದರಿಂದಲೇ ಭಾಷೆಯ ಕಾವ್ಯಗುಣ ಹೇಗೆ ಪ್ರಕಟಗೊಳ್ಳುವುದೆಂಬುದನ್ನು ಹಲವಾರು ಉದಾಹರಣೆಗಳಿಂದ ಲೇಖಕರು ಉದ್ದಕ್ಕೂ ಸ್ಪಷ್ಟಪಡಿಸಿದ್ದಾರೆ.

ಭಾಷೆಯ ಬೆಳವಣಿಗೆಯ ಮೇಲೆ ಪ್ರತಿಭೆಯ ಆಟದ ಪ್ರಭಾವವನ್ನು ವಿವರಿಸುವುದು ಈ ಗ್ರಂಥದ ಪರಮ ಉದ್ದೇಶ. ಈ ಪ್ರತಿಭೆ ವ್ಯಕ್ತಿಗತವಾಗಿರಬಹುದು ; ಸಾಮೂಹಿಕವಾಗಿರಬಹುದು. ಅದರ ಫಲ ಮಾತ್ರ ಈ ದೃಷ್ಟಿಯಿಂದ ಕಾವ್ಯಾಂಶ ವಿಸ್ತರಣೆಯೇ ಆಗಿರುತ್ತದೆ. ಪದಗಳು ಸೃಷ್ಟಿಯಾಗುವ ವಿಧಾನ, ಅದರ ಹಿಂದಿರುವ ಮನಸ್ಸು, ಅರ್ಥಪ್ರಪಂಚದ ಏರಿಳಿತಗಳು—ಇಲ್ಲಿ ಹೆಜ್ಜೆ ಹೆಜ್ಜೆಗೂ ಭಾಷೆಯ ಬದುಕಿನ ಸ್ವಾರಸ್ಯವನ್ನು ತೋರಿಸಿ ಕೊಡುತ್ತವೆ.

ಈ ಗ್ರಂಥ ಇಂಗ್ಲಿಷ್ ಭಾಷೆಯ ಚರಿತ್ರೆಯನ್ನು ಆಧರಿಸಿರುವುದರಿಂದ ಆ ಭಾಷೆಯ ಸಂಪತ್ತಿಗೆ ವ್ಯಂಜನಶಕ್ತಿಗೆ ಇಲ್ಲಿ ಬೇಕಾದಷ್ಟು ಸಾಕ್ಷ್ಯವಿದೆ. ಆ ಭಾಷೆಯ ವಿಷಯವಾಗಿ ವಿಪುಲವಾದ ಭಾಷಾಶಾಸ್ತ್ರ ಸಾಮಗ್ರಿ ಸಿದ್ಧವಾಗಿರುವುದರಿಂದ ಆರಿಸಿದ ಒಂದು ಸಿದ್ಧಾಂತಕ್ಕೆ ವಿಷಯಗಳನ್ನೆಲ್ಲ ಸಂಗ್ರಹಿಸಿ ಅಳವಡಿಸುವುದು ಸುಲಭ. ಆದರೆ ಈ ಬಗೆಯ ಕೆಲಸ ಏನೂ ನಡೆಯದಿರುವಂಥ ನಮ್ಮ ಭಾಷೆಗಳನ್ನು ಕುರಿತು ಇಂಥದೊಂದು ಗ್ರಂಥವನ್ನು ರಚಿಸುವುದು ಕಷ್ಟ. ಕಷ್ಟದ ಕೆಲಸವನ್ನು ಕೈಗೊಳ್ಳುವವರಿಗೆ ಗೋಕಾಕರ ಗ್ರಂಥ ಒಂದು ಮಾದರಿಯನ್ನೊದಗಿಸುತ್ತದೆ.

'ಭಾಷೆಯೆಲ್ಲ ಕವಿತೆ'ಯೆಂಬುದು ಕ್ರೋಚೆಯ ಮಾತು. ಈ ಗ್ರಂಥ ಕ್ರೋಚೆಯ ಮಾತಿಗೆ ಒಂದು ಸಮರ್ಥ ವ್ಯಾಖ್ಯಾನ. ಗೋಕಾಕರು ಭಾಷಾವಿದರಾಗಿರುವುದರಿಂದ ಮಾತಿನ ನಾಣ್ಯದ ತುಕ್ಕನ್ನು ಸುಲಭವಾಗಿ ಉಜ್ಜುತ್ತಾರೆ; ಸ್ವಯಂ ಕವಿಗಳಾಗಿರುವುದರಿಂದ ಅಲ್ಲಿ ಕಾವ್ಯವನ್ನು ಮಿಂಚಿಸುತ್ತಾರೆ.

ಅನುಬಂಧ

ವಿನಾಯಕರ ಜೀವನದ ಹೆಜ್ಜೆಗಳು

೧೯೦೯ ಜನನ (ಆಗಸ್ಟ್, ೯)
೧೯೨೯ ಬಿ. ಎ. ಪದವಿ
೧೯೩೦ ಮದುವೆ
೧೯೩೧ ಎಂ. ಎ. ಪದವಿ
ಅಧ್ಯಾಪಕ ವೃತ್ತಿಯ ಆರಂಭ
೧೯೩೪ 'ಸಮರಸವೇ ಜೀವನ' ದ ಮೊದಲ ಭಾಗ 'ಇಜ್ಜೋಡು' ಪ್ರಕಟನೆ
ರಾಯಚೂರು ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿ ಅಧ್ಯಕ್ಷರು
೧೯೩೬ ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಇಂಗ್ಲೆಂಡಿಗೆ ಪ್ರಯಾಣ
೧೯೩೮ 'ಸಮುದ್ರದಾಚೆಯಿಂದ' ಪ್ರಕಟನೆ
೧೯೪೦ ಸಾಂಗ್ಲಿ ವಿಲಿಂಗ್‌ಡನ್ ಕಾಲೇಜಿನಲ್ಲಿ ಪ್ರಿನ್ಸಿಪಾಲ್
'ಸಮುದ್ರಗೀತಗಳು' ಪ್ರಕಟನೆ
೧೯೪೫ ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರು
೧೯೪೬ ವೀಸನಗರ ಕಾಲೇಜಿನಲ್ಲಿ ಪ್ರಿನ್ಸಿಪಾಲ್
೧೯೪೯ ಕೊಲ್ಹಾಪುರ ರಾಜಾರಾಂ ಕಾಲೇಜಿನಲ್ಲಿ ಪ್ರಿನ್ಸಿಪಾಲ್
೧೯೫೦ ಮುಂಬೈ ಸಾಹಿತ್ಯಸಮ್ಮೇಳನದ ಕವಿಗೋಷ್ಠಿ ಅಧ್ಯಕ್ಷರು
೧೯೫೨ ಧಾರವಾಡ ಕರ್ನಾಟಕ ಕಾಲೇಜಿನ ಪ್ರಿನ್ಸಿಪಾಲ್
೧೯೫೭ 'ದ್ಯಾವಾ ಪೃಥಿವೀ' ಪ್ರಕಟನೆ
ಜಪಾನಿಗೆ ಭೇಟಿ: ಪಿ. ಇ. ಎನ್. ಅಧಿವೇಶನ
೧೯೫೮ ಬಳ್ಳಾರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ಅಮೆರಿಕಾ ಸಂಯುಕ್ತ ಸಂಸ್ಥಾನಗಳಿಗೆ ಭೇಟಿ
೧೯೫೯ ಬೆಲ್ಜಿಯಂಗೆ ಭೇಟಿ: ಅಂತರರಾಷ್ಟ್ರೀಯ ಕವಿಮೇಳ
ಹೈದರಾಬಾದಿನ ಸೆಂಟ್ರಲ್ ಇನ್ಸ್‌ಟಿಟ್ಯೂಟ್ ಆಫ್ ಇಂಗ್ಲಿಷ್‌ನ ಡೈರೆಕ್ಟರ್
೧೯೬೦ ಸಾಹಿತ್ಯ ಅಕಾದೆಮಿ ಬಹುಮಾನ
ಪೂರ್ವ ಆಫ್ರಿಕಕ್ಕೆ ಭೇಟಿ
ಪದ್ಮಶ್ರೀ ಪ್ರಶಸ್ತಿ
ಅಖಿಲಭಾರತ ಇಂಗ್ಲಿಷ್ ಅಧ್ಯಾಪಕರ ಸಮ್ಮೇಳನದ ಅಧ್ಯಕ್ಷರು
೧೯೬೧ ಇಂಗ್ಲೆಂಡಿಗೆ ಭೇಟಿ
೧೯೬೫ ಪುನಃ ಇಂಗ್ಲೆಂಡಿಗೆ ಭೇಟಿ
೧೯೬೬ ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿ
೧೯೬೭ 'ಸಮನ್ವಯ' ಪತ್ರಿಕೆಯ ಆರಂಭ
ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ
೧೯೬೯ 'ವಿನಾಯಕ ವಾಙ್ಮಯ' ಪ್ರಕಟನೆ (ಆಗಸ್ಟ್, ೯)

ವಿನಾಯಕ ವಾಙ್ಮಯ*

ಅಭ್ಯುದಯ (ಕವನ ಸಂಗ್ರಹ), ಕರ್ನಾಟಕ ಸಂಘ, ಕೊಪ್ಪಳ. ೧೯೪೬. ಪುಟಗಳು : ೧೬ + ೧೦೧

ಇಂದಲ್ಲ ನಾಳೆ (ಚಂಪೂಕಾವ್ಯ), ಓರಿಯಂಟ್ ಲಾಂಗ್‌ಮನ್ಸ್, ಮುಂಬಯಿ. ೧೯೬೫. ಪುಟಗಳು : xvi + ೨೭೫

ಉಗಮ (ಕವನ ಸಂಗ್ರಹ), ಕಾವ್ಯ ಪ್ರಕಾಶನ ಸಮಿತಿ, ಸಾಂಗ್ಲಿ. ೧೯೫೫. ಪುಟಗಳು : ೮ + ೫೨

ಊರ್ಣನಾಭ (ಕವನ ಸಂಗ್ರಹ), ಶಾರದಾ ಪ್ರಕಟನಾಲಯ, ಬೆಂಗಳೂರು ೧೯೬೧. ಪುಟಗಳು : ೧೨೮

ಇಂದಿನ ಕನ್ನಡ ಕಾವ್ಯದ ಗೊತ್ತು ಗುರಿಗಳು (ವಿಮರ್ಶೆ), ಪದ್ಮಾ ಪ್ರಕಟನಾಲಯ, ಹೈದರಾಬಾದು. ೧೯೪೬. ಪುಟಗಳು : ೧೨ + ೧೮೭

ಕಲೋಪಾಸಕ (ಕವನ ಸಂಗ್ರಹ), ಸಾಹಿತ್ಯ ಪ್ರಕಟನ ಮಂದಿರ, ಧಾರವಾಡ. ೧೯೩೪. ಪುಟಗಳು : ೧೨೬

ಕವಿಕಾವ್ಯ ಮಹೋನ್ನತಿ (ವಿಮರ್ಶೆ), ಗೆಳೆಯರ ಗುಂಪು, ಹೈದರಾಬಾದು. ೧೯೩೫. ಪುಟಗಳು : ೫೬

ಕಾಶ್ಮೀರ (ಕವನ ಸಂಗ್ರಹ), ಉಷಾ ಸಾಹಿತ್ಯಮಾಲೆ, ಮೈಸೂರು. ೧೯೬೨. ಪುಟಗಳು : ೭೪

ಚಿಂತನ (ಕವನ ಸಂಗ್ರಹ), ಸುರುಚಿ ಪ್ರಕಾಶನ, ಮೈಸೂರು. ೧೯೬೪. ಪುಟಗಳು : ೧೦೦

ಚೆಲುವಿನ ನಿಲುವು (ಪ್ರಬಂಧಗಳು), ಪ್ರತಿಭಾ ಗ್ರಂಥಮಾಲೆ, ಧಾರವಾಡ. ೧೯೬೧. ಪುಟಗಳು : ೮ + ೧೪೭

ಜನನಾಯಕ (ನಾಟಕ), ಮನೋಹರ ಗ್ರಂಥಮಾಲೆ, ಧಾರವಾಡ. ೧೯೩೯. ಪುಟಗಳು : ೨೪ + ೧೩೫

ಜೀವನ ಪಾಠಗಳು (ಪ್ರಬಂಧಗಳು), ಲಲಿತ ಸಾಹಿತ್ಯಮಾಲೆ, ಧಾರವಾಡ. ೧೯೪೯. ಪುಟಗಳು : ೯೨

ತ್ರಿವಿಕ್ರಮರ ಆಕಾಶಗಂಗೆ (ಕವನ ಸಂಗ್ರಹ), ಸಾಧನ ಮುದ್ರಣಾಲಯ, ಧಾರವಾಡ. ೧೯೪೫. ಪುಟಗಳು : ೪ + ೧೧೮

ತ್ರಿಶಂಕುವಿನ ಪ್ರಜ್ಞಾಪ್ರಭಾತ (ಕಾವ್ಯ), ಸುದರ್ಶನ ಪ್ರಕಾಶನ, ತಿಪಟೂರು. ೧೯೬೫. ಪುಟಗಳು : ೮೪

ದ್ಯಾವಾ ಪೃಥಿವೀ (ಕವನ ಸಂಗ್ರಹ), ಪರಾಗ ಪ್ರಕಾಶನ, ಧಾರವಾಡ. ೧೯೫೭. ಪುಟಗಳು: vi + ೮೪

ನವ್ಯ ಕವಿತೆಗಳು (ಕವನ ಸಂಗ್ರಹ), ಕಾವ್ಯ ಪ್ರಕಾಶನ ಸಮಿತಿ, ಸಾಂಗ್ಲಿ. ೧೯೫೦. ಪುಟಗಳು : ೪೯

---

* ಸಂಪಾದಿತ ಕೃತಿಗಳನ್ನು ಈ ಪಟ್ಟಿಯಲ್ಲಿ ಸೇರಿಸಿಲ್ಲ.

ನವ್ಯತೆ ಹಾಗೂ ಕಾವ್ಯಜೀವನ (ವಿಮರ್ಶೆ), ಸುರುಚಿ ಪ್ರಕಾಶನ, ಮೈಸೂರು. ೧೯೫೫. ಪುಟಗಳು : ೧೩೨

ಪಯಣ (ಕವನ ಸಂಗ್ರಹ), ಮನೋಹರ ಗ್ರಂಥಮಾಲೆ, ಧಾರವಾಡ. ೧೯೩೭. ಪುಟಗಳು ೧೦ + ೧೧೬

ಪುಣ್ಯಭೂಮಿ (ಕವನಸಂಗ್ರಹ), ಸುರುಚಿ ಪ್ರಕಾಶನ, ಮೈಸೂರು. ೧೯೬೬. ಪುಟಗಳು : ೮+ ೬೨

ಬಾಳದೇಗುಲದಲ್ಲಿ (ಕಾವ್ಯ), ಮನೋಹರ ಗ್ರಂಥಮಾಲೆ, ಧಾರವಾಡ. ೧೯೫೫. ಪುಟಗಳು: ೨೨ + ೨೯೨

ಭಾವರಾಗ (ಕವನ ಸಂಗ್ರಹ), ಸುರುಚಿ ಪ್ರಕಾಶನ, ಮೈಸೂರು. ೧೯೬೯ ಪುಟಗಳು : viii + ೪೮

ಯುಗಾಂತರ (ನಾಟಕ), ಮನೋಹರ ಗ್ರಂಥಮಾಲೆ, ಧಾರವಾಡ. ೧೯೪೭. ಪುಟಗಳು : ೮+ ೮೭

ವಿಮರ್ಶಕ ವೈದ್ಯ (ನಾಟಕ), ಮನೋಹರ ಗ್ರಂಥಮಾಲೆ, ಧಾರವಾಡ. ೧೯೪೭. ಪುಟಗಳು : ೫೩

ಸಮುದ್ರದಾಚೆಯಿಂದ (ಪ್ರವಾಸ ಸಾಹಿತ್ಯ), ಮನೋಹರ ಗ್ರಂಥಮಾಲೆ, ಧಾರವಾಡ. ೧೯೩೮. ಪುಟಗಳು : ೩೩೧

ಸಮುದ್ರ ಗೀತಗಳು (ಕವನ ಸಂಗ್ರಹ), ಮನೋಹರ ಗ್ರಂಥಮಾಲೆ, ಧಾರವಾಡ. ೧೯೪೦. ಪುಟಗಳು : ೬ + ೧೦೮

ಸಮುದ್ರದೀಚೆಯಿಂದ (ಪ್ರವಾಸ ಸಾಹಿತ್ಯ), ಕರ್ನಾಟಕ ಸಹಕಾರೀ ಸಾಹಿತ್ಯಸಂಘ, ಧಾರವಾಡ. ೧೯೬೦. ಪುಟಗಳು : ೧೬೭

ಸಮರಸವೇ ಜೀವನ (ಕಾದಂಬರಿ, ಒಂದೇ ಸಂಪುಟದಲ್ಲಿ), ಉಷಾ ಸಾಹಿತ್ಯಮಾಲೆ, ಮೈಸೂರು. ೧೯೬೭. ಪುಟಗಳು : xii + ೧೨೨೬

ಸಾಹಿತ್ಯದಲ್ಲಿ ಪ್ರಗತಿ (ವಿಮರ್ಶೆ), ಸಾಧನ ಮುದ್ರಣಾಲಯ, ಧಾರವಾಡ. ೧೯೪೪. ಪುಟಗಳು : ೬ + ೧೦೨

ಹಿಗ್ಗು (ಕವನ ಸಂಗ್ರಹ), ಕಾವ್ಯಪ್ರಕಾಶನ ಸಮಿತಿ, ಸಾಂಗ್ಲಿ. ೧೯೫೦. ಪುಟಗಳು : ೯೦

English in India : Its Present and Future, Asia Publishing House, Bomay. 1964. pp viii + 180

In Life's Temple (Collection of Poems), Blackie & Son Ltd, London. 1965. pp. viii + 88

The Song of Life and other Poems, Hind Kitabs Ltd, Bombay. 1947. pp. 86

The Poetic Approach to Language, Oxford University Press, London. 1952. pp. xii + 247

. . . ವಾಙ್ಮಯ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ' ಸಮುದ್ರವ ಸೆರೆ ಹಿಡಿದವರುಂಟೆ ? ' ಎಂಬ ಪ್ರಶ್ನೆಗೆ; ಉತ್ತರ, ' ಉಂಟು ' ಎಂದು. ಹಾಗೆ ಸಮುದ್ರ ವನ್ನು ಸೆರೆಹಿಡಿದವರಲ್ಲಿ ಒಬ್ಬರು ಕಾರಂತರು, ಮತ್ತೊಬ್ಬರು ವಿನಾಯಕರು.

* * *

' ಬಾಳ ದೇಗುಲದಲ್ಲಿ ' ಎಂಬ ಶೀರ್ಷಿಕೆ ಯನ್ನು ಹೊತ್ತು ಪ್ರಕಟಗೊಂಡಿರುವ ' ವಿನಾ ಯಕ ಕಾವ್ಯ ' ಕನ್ನಡದ ಸಮಕಾಲೀನ ಸಾಹಿ ತ್ಯದ ಒಂದು ಅಪೂರ್ವ ಅದ್ವಿತೀಯ ' ನಾಯಕ ಕಾವ್ಯ '. ಗೋಕಾಕರು ಕವಿಯಾಗಿ ಕಂಡುಂಡ ಅನುಭವ ವಿಶೇಷಗಳ ರಸರಸಾಯನದ ಸಮ್ಯಕ್ ಪಾಕ ವಿಶೇಷವಾಗಿ ' ಬಾಳದೇಗುಲ ' ರೂಪ ಗೊಂಡಿದೆ.

* * *

ಕನ್ನಡ ಸಾಹಿತ್ಯದಲ್ಲಿ ವಿಮರ್ಶೆಯೇ ಸರಿ ಯಾಗಿ ಬಂದಿಲ್ಲನೆಂದು ಅನೇಕರು ಭಾಷಣ ಮಾಡುವುದುಂಟು. ಇರುವ ವಿನಾಯಕರ ವಿಚಾ ರಗಳನ್ನಾದರೂ ಅವರು ಓದಿನೋಡಿದ್ದಾರೆಯೆ, ಎಂದು ಮುಂದಿನವರು ನಮ್ಮನ್ನು ಕೇಳಿಯಾರು.

* * *

' ಸಮರಸವೇ ಜೀವನ ' ಧಾರವಾಡ ಸೀಮೆಯ ಪ್ರಾದೇಶಿಕ ಸಮಾಜ ಮತ್ತು ಜೀವನ ಗಳ ತಳಹದಿಯ ಅಧಾರದಮೇಲೆ ನಿರ್ಮಿತ ವಾದ ಸೌಧ . . . ಮಹತ್ಕೃತಿಗಳಲ್ಲಿ ಮಹ ತ್ತರವಾದ ಸ್ಥಾನವನ್ನು ಗಳಿಸಿರುವ ಸಾಧನೆ . . . ಅದು ' ಅಗ್ನಿ ' ಕನ್ನಡ ಕಾದಂಬರಿ.

* * *

ವಿನಾಯಕ ಮಾನವದರ್ಶನ ' ಮಗು ' ವಿನಿಂದ ' ಮುಕ್ತಜೀವಿ 'ಯವರೆಗೂ ವ್ಯಾಪಿಸಿದೆ.

* * *

' ದ್ಯಾವಾ ಪೃಥಿವೀ ' ಎಂದು ತಮ್ಮ ಕೃತಿಗೆ ನಾಮಕರಣ ಮಾಡುವಲ್ಲಿಯೇ ಗೋಕಾಕರು ತಮ್ಮ ಭಾರತೀಯ ಪರಂಪರಾ ಪ್ರಜ್ಞೆಯನ್ನು ವ್ಯಕ್ತಪಡಿಸಿದ್ದಾರೆ.

ವಿನಾಯಕ ವಾಙ್ಮಯ

ಸಂಪಾದಕರು

ಹಾ. ಮಾ. ನಾಯಕ

ಸಿಂಧುವಳ್ಳಿ ಅನಂತಮೂರ್ತಿ

'ವಿನಾಯಕ' ಎಂಬ ಸಂಕ್ಷಿಪ್ತನಾಮದಿಂದ ಖ್ಯಾತರಾಗಿರುವ ಡಾ. ವಿನಾಯಕ ಕೃಷ್ಣ ಗೋಕಾಕರು ನಮ್ಮ ಸಾಂಸ್ಕೃತಿಕ ಕ್ಷೇತ್ರವನ್ನು ರಾಷ್ಟ್ರೀಯ ಮಟ್ಟಕ್ಕೇರಿಸಿದ ಕೀರ್ತಿವಂತರಲ್ಲಿ ಒಬ್ಬರು; ಆಧುನಿಕ ಕನ್ನಡ ಸಾಹಿತ್ಯ ಶಿಲ್ಪಿಗಳಲ್ಲಿ ಗಣ್ಯರು. ಸಾಹಿತ್ಯ, ಸಂಸ್ಕೃತಿ, ಶಿಕ್ಷಣರಂಗಗಳಲ್ಲಿ ಅವರ ಸಾಧನೆ ಸಿದ್ಧಿಗಳು ಅನ್ಯಾದೃಶವಾಗಿವೆ. ಅವರ ಸಾಹಿತ್ಯದ ವೈವಿಧ್ಯ ವಿಪುಲತೆಗಳಿಂದ ಕನ್ನಡದ ಶ್ರೀಮಂತಿಕೆ ಹೆಚ್ಚಿದೆ. ಅವರು ನವ್ಯಮಾರ್ಗ ಪ್ರವರ್ತಕರೆಂಬ ಖ್ಯಾತಿಗೆ ಭಾಜನರಾದರೂ ಯಾವುದೇ 'ಅತಿ' ಗೆ ಹೋಗದೆ 'ಸಮನ್ವಯ' ಸಿದ್ಧಾಂತವನ್ನು ಪ್ರತಿಪಾದಿಸಿಕೊಂಡು ಬಂದಿದ್ದಾರೆ. ಪೂರ್ವ ಪಶ್ಚಿಮಗಳ ವಿಚಾರಧಾರೆಯ ಒಳಿತೆಲ್ಲವನ್ನೂ ತುಂಬಿಕೊಂಡ ಗೋಕಾಕರು ಪ್ರಾಚೀನ ಅರ್ವಾಚೀನಗಳ ಸಂಗಮವೂ ಹೌದು. ಅವರು ಸೃಷ್ಟಿಸಿದ್ದು ಕನ್ನಡ ಸಾಹಿತ್ಯವನ್ನು; ಬೋಧಿಸಿದ್ದು ಇಂಗ್ಲಿಷ್ ಸಾಹಿತ್ಯವನ್ನು. ಈ ಕಾಯಕಗಳು ಕೊಟ್ಟ ಫಲ ಒಂದೇ -- ಕನ್ನಡದ ಅಭ್ಯುದಯ.

ಗೋಕಾಕರ ಜೀವನ ಹಾಗು ಸಾಹಿತ್ಯಗಳನ್ನು ಈ ಗ್ರಂಥ ಪರಿಚಯ ಮಾಡಿಕೊಡುತ್ತದೆ.

ಇದನ್ನು ಸಂಪಾದಿಸಿದ ಡಾ. ಹಾ. ಮಾ. ನಾಯಕ ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಮತ್ತು ಭಾಷಾವಿಜ್ಞಾನದ ಪ್ರಾಧ್ಯಾಪಕರು; ಸಿಂಧುವಳ್ಳಿ ಅನಂತಮೂರ್ತಿ ಅವರು ಮೈಸೂರಿನ ಡಿ. ಬನುಮಯ್ಯನವರ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು.

ಬೆಲೆ : ಮೂವತ್ತು ರೂಪಾಯಿಗಳು

ಸುರುಚಿ ಪ್ರಕಾಶನ : ಸರಸ್ವತೀಪುರಂ : ಮೈಸೂರು-೫